Registered No. M. 3618.

5-1-193

NAVA YUGA

ನಿರೀಕ್ಷಿಸಿರಿ! ನಿರೀಕ್ಷಿಸಿರಿ!

ತಾ. 12-1-1939ನೆ ನವಯುಗ ಸಂಚಿಕೆಯು

ಮಕರ ಸಂಕ್ರಾಂತಿ

ವಿಶೇಷಸಂಚಿಕೆಯಾಗಿ

ಹೊರಡುವುದು.

ಇನ್ನೂರರಷ್ಟು ಪುಟಗಳು! ಏಕವರ್ಣ ಮತ್ತು ಬಣ್ಣಬಣ್ಣದ ಚಿತ್ರಗಳು

ಕನ್ನಡ ಪತ್ರಿಕಾಪ್ರಪಂಚದಲ್ಲಿ ಅತ್ಯಂತ ಸಂಗ್ರಹಯೋಗ್ಯವಾದುದು.

ಬೆಲೆ 4 ಆಣೆ

ನೀವು ಅತ್ಯಾತುರದಿಂದ
ಓದಬಯಸುವ
ಮನೋಹರ ಕತೆಗಳೇ
ಐದಾರು ಇರುವವು.

ನಿಮ್ಮ ಅಚ್ಚುಮೆಚ್ಚಿನ
ಲೇಖಕ-ಲೇಖಕಿಯರ
ಬೋಧಪರ ಬರಹಗಳೇ
ಬರುವವು.



ನಾಲ್ಕಾಣೆ ಕೊಟ್ಟು, ಸಂಚಿಕೆ ಪಡೆಯಿರಿ!

ಓದಿ ಸೈ, ಸೈ ಎನ್ನಿರಿ!

The Canara Industrial & Banking Syndicate, Limited.

(INCORPORATED IN BRITISH INDIA)
[ESTD. 1925]

HEAD OFFICE:—MUKUND NIVAS, **UDIPI,** S INDIA.

MEMBER:

RESERVE BANK OF INDIA

BANKERS' CLEARING HOUSE, BOMBAY.

DEPOSIT RATES.

3 to 5 MONTHS	....	2½% p. a.
6 to 11 „	....	3% „
12 to 23 „	....	3½% „
24 „	....	4% „
SHORT TERM	....	2% „

BANKING BUSINESS OF
EVERY DESCRIPTION TRANSACTED.

Please Note

The Subscribers, Agents & Advertisers *in*

NAVAYUGA

PLEASE NOTE THAT PAYMENTS DUE TO **NAVAYUGA** MAY BE MADE TO THE CREDIT OF NAVAYUGA ACCOUNT IN ANY BRANCH OF

THE CANARA INDUSTRIAL & BANKING SYNDICATE, LIMITED, UDIPI

Without being liable to pay any amount by way of Commission.

WHERE THE SYNDICATE HAS BRANCHES

Bombay, Bangalore, Belgaum, Byadgi, Bellary, Adoni, Hospet, Nandyal, Prodattur, Tadpatri, Taliparamba, Hubli, Gadag, Mangalore, Cannanore, Payyanur, Kanhangad, Kasargode, Karkal, Udipi, Uppinangady, Karwar, Kumta, Ankola, Honavar, Bhatkal, Sirsi, Sagar, Coondapoor, Brahmavar, Hungarcutta, Nippani, Tumkur & Hindupur,

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವೀಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅನ್ಯೂತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘ್ನಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: **MANGALORE**

BRANCHES: **Udipi, Coondapoor, Kaup & Karkal.**

Fixed deposits are now received at all the offices of the Bank at the following terms:—

3 Months Fixed Deposits at 3 p. c. per annum
6 Months / 9 months Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.
Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] **H. O. UDIPI.** [1920

BRANCHES
MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at 3½ p. c per annum.
Two years' Fixed Deposits at 4 p. c. per annum.
Savings Bank Deposits .... 3 p. c per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD. 1921
FOUNDER
Sri. A B SHETTY, M L A,
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟಿ, ಎಂ ಎಲ್ ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮
ಸಂಚಿಕೆ ೧೯
ಉಡುಪಿ, ಗುರುವಾರ ೫-೧-೧೯೩೯
Udipi, Thursday 5—1—1939
Vol XVIII
No. 19

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ

ಸಮಾಚಾರಸಂಗ್ರಹ

ವಿದೇಶೀಯ ಉಪದೇಶಿಗಳೊಡನೆ ಗಾಂಧಿಗಳ ಸಂಭಾಷಣೆ.

ಇಂಡಿಯದ ಮಟ್ಟಿಗೆ ಅದು ಅಹಿಂಸಾ ತತ್ವವನ್ನೇ ಅವಲಂಬಿಸೀತೆಂಬ ನಿಮ್ಮ ನಿರೀಕ್ಷಣೆಗೆ ಆಧಾರವಾಗಿ ಲಕ್ಷಣಗಳೇನು ಕಾಣುತ್ತಿವೆ? ಎಂಬುದೊಂದು ಪ್ರಶ್ನೆ ಆ ವಿಚಾರಣಗಳದು. ಬಾಹ್ಯಕುರುಹುಗಳನ್ನು ತೋರಿಸಿಕೊಡಿರೆಂದರೆ ಅದು ನನ್ನಿಂದಾಗದು. ಆದರೆ ನನ್ನ ಹೃದಯದ ಕೂಗು ಇಂಡಿಯವು ಬೇರೆಯಾವ ಹಾದಿಯನ್ನೂ ಹಿಡಿಯುವುದಿಲ್ಲವೆಂದು ಹೇಳುತ್ತೆ. ವಾಯುವ್ಯ ಗಡಿನಾಡಿನಲ್ಲಿ ನಾನು ಕಂಡುದ್ದಲ್ಲ ನನ್ನ ಹೃದಯದಲ್ಲಿ ಆ ಕೂಗನ್ನು ಕೊಟ್ಟದೆ. ಅಲ್ಲಿ ನೋಡಿದುದು ನನಗೇ ಆಶ್ಚರ್ಯವನ್ನುಂಟುಮಾಡಿದೆ ಎಂದು ಪ್ರಶ್ನೆಗೆ ಪ್ರತ್ಯುತ್ತರ ಗಾಂಧಿಜೀಯವರದು.

ಅಹಿಂಸಾತತ್ವದ ಆಚರಣೆಯಲ್ಲಿ ಅವರಿಗೀಗ ನಿಜವಾದ ಆಸಕ್ತಿಯುಂಟಾಗಿದೆ. ಅದು ಅವರ ಹೃದಯದಲ್ಲಿ ಧೈರ್ಯ ವಿಶ್ವಾಸಗಳನ್ನು ನೆಲೆಗೊಳಿಸಿದೆ. ಮೊದಲು ಅಲ್ಲಿ ರಕ್ತಪಾತದ ಕಲಹ ಕಾದಾಟವಿಲ್ಲದ ಕುಟುಂಬವೊಂದೂ ಇದ್ದಿಲ್ಲ. ಹುಲಿಗಳಂತೆ ರೇಗಿ ಬೀಳುತ್ತಿದ್ದ ಜನಗಳು. ಕತ್ತಿ ಕೋವಿ ಕಠಾರಿಗಳು ಸದಾ ಅವರ ಕೈಯಲ್ಲಿ. ನೌಕರರೂ ಅಂತಹ ಬಿರುಸು ಸ್ವಭಾವದವರಿದ್ದರೂ ತಮ್ಮ ನೌಕರಿಯೆಲ್ಲಾದರೂ ಹೋಗಿ ಬಿಡುವುದೋ ಎಂದು ಮೇಲಧಿಕಾರಿಗಳೆದುರು ನಾಯಿಯಂತಿರುತ್ತಿದ್ದರು.

ಈಗೆಲ್ಲ ಬದಲಾವಣೆ ಖಾನ್ ಸಾಹೇಬರ ವರ್ಚಸ್ಸಿನ ನೆರಳಿಗೆ ಬಂದ ಸಾವಿರಾರು ಮಂದಿಗಳಲ್ಲಿ ಹೃದಯಪರಿವರ್ತನೆಯಾಗಿದೆ. ರಕ್ತಪಾತದ ಕಲಹಕಾದಾಟವೆಂಬುದು ವಿಸ್ಮೃತಿಯ ತೆರೆಯ ಹಿಂದೆ ಸರಿಯುತ್ತಿದೆ. ಚಿಕ್ಕ ನೌಕರಿಗಾಗಿ ಬ್ರಿಟಿಷರ ಬಡಪಾಯಿಗಳ ಕುತ್ತಿಗೆ ಕತ್ತರಿಸುವವರೂ ಮೇಲಧಿಕಾರಿಗಳ ಎದುರು ಕೈಕಟ್ಟಿ ನಡುಗುತ್ತ ನಿಲ್ಲುವವರೂ ಆ ನೌಕರಿಗಳನ್ನು ಬಿಟ್ಟು ಕೃಷಿಯ ಕಡೆಗೆ ತಿರುಗಿದ್ದಾರೆ. ಅಹಿಂಸಾಪ್ರತಿಜ್ಞೆಯನ್ನು ಕೈಗೊಂಡಿದ್ದಾರೆ. ಆ ಪ್ರತಿಜ್ಞೆಯನ್ನು ಅವರು ಪರಿಪಾಲಿಸುವುದಾದರೆ ಶ್ರೀಘ್ರದಲ್ಲೇ ಆ ಭಾಗದಲ್ಲೆಲ್ಲ ಕೃಷಿ ಕೈಗಾರಿಕೆಗಳಿಗೆ ಪ್ರಾಧಾನ್ಯ ಬರುತ್ತೆ ಎಂದು ತನ್ನ ಗಡಿನಾಡಿನ ಸಂಚಾರದ ಅನುಭವವನ್ನು ವಿವರಿಸಿದರು.

ನಿಮಗೆ ಪ್ರೇರಕ ಶಕ್ತಿಯು ಧ್ಯೇಯ ಪ್ರೇಮವೋ ಜನತಾ ಪ್ರೀತಿಯೋ? ಎಂದು ಮತ್ತೊಂದು ಪ್ರಶ್ನೆ. ಜನತೆಯ ಹಿತಚಿಂತನೆಯಿಲ್ಲದೆ ಧ್ಯೇಯವು ನಿರ್ಜೀವ, ಜನತೆಯ ಪ್ರೇಮವಿಲ್ಲದ ಧ್ಯೇಯಕ್ಕೆ ಪ್ರಾಣವೆಲ್ಲಿದೆ? ಆದುದರಿಂದ ಜನತಾವಾತ್ಸಲ್ಯವೇ ನನ್ನ ಸರ್ವಕಾರ್ಯ ಪ್ರೇರಕ ಶಕ್ತಿ ಎಂದು ಪ್ರತ್ಯುತ್ತರ.

ಒಂದೇ ಒಂದ ಮಾತಿನಲ್ಲಿ ವೈಸರಾಯರ ಭಾಷಣಗಳ ಬೆಲೆ ಹೇಳಿಬಿಟ್ಟರು ಜವಾಹರಲಾಲ ನೆಹರುಗಳು

ವೈಸರಾಯರ ಇತ್ತೀಚಿನ ಭಾಷಣಗಳನ್ನೆಲ್ಲ ಓದಿರುವಿರಾ? ಎಂದು ನೆಹರುಗಳಿಗೆ ಪತ್ರಿಕಾ ಪ್ರತಿನಿಧಿಯೊಬ್ಬನ ಪ್ರಶ್ನೆ. ಈ ಕಾಲದಲ್ಲಿ ವೈಸರಾಯರ ಭಾಷಣಗಳಿಗೆ ಯಾರಾದರೂ ಬೆಲೆಗೊಡುತ್ತಾರೆಂದು ನೀವು ತಿಳಿಯುತ್ತೀರಾ? ಎಂದು ಮರು ಪ್ರಶ್ನೆ.

ಗಾಂಧಿತತ್ವವೇ ಜಗದೋದ್ಧಾರಕಾರಿ! ಅಮೇರಿಕನ್ ಡಾಕ್ಟರರ ಹೇಳಿಕೆ.

ಯಾರೂ ಎಣಿಸಿರದಷ್ಟು ತೀವ್ರಗತಿಯಿಂದ ನಿಮ್ಮ ವಾದಗಳೆಲ್ಲ ಸಿದ್ಧಾಂತವಾಗಿ ಪರಿಣಮಿಸುತ್ತಾ ಬರುತ್ತಿವೆ! ನಿಮ್ಮ ಸತ್ಯಾಗ್ರಹ, ಖಾದಿ, ಹರಿಜನೋದ್ಧಾರ, ಹಿಂದೂ ಮಹಮ್ಮದೀಯೈಕ್ಯತೆ, ಗುಡಿ ಕೈಗಾರಿಕೆಗಳು ಕೈಗೆಲಸದ ಮೂಲಕ ವಿದ್ಯೆ, ಇವುಗಳ ನಿಮ್ಮ ಕಾರ್ಯಕ್ರಮವು ಪರಿಪೂರ್ಣ ತಿರುಳುಳ್ಳವುಗಳು ಹಿಂದೂ ದೇಶೋದ್ಧಾರಕ್ಕೆ ಈ ಕಾರ್ಯಕ್ರಮವೊಂದೇ ಒಂದು ಸಾಧನ. ಜಗತ್ತಿಗೂ ಅದೇ. ಏಕೆ ಅಂದರೆ, ಪಾಶ್ಚಾತ್ಯ ದೇಶಗಳಲ್ಲಿ ಆರ್ಥಿಕ ಪರಿಸ್ಥಿತಿಯು ದಿನಗೋಲು ಮುರಿದು ಬೀಳುವ ಗಂಡಾಂತರದಲ್ಲಿದೆ ಅಲ್ಲಿಯೂ ಇಂಡಿಯದಂತೆಯೇ ಖಾದಿಯು ಅತ್ಯವಶ್ಯವಾಗುವ ಕಾಲ ಬಂದೀತು? ಎಂದು ಅಮೇರಿಕದ ಡಾಕ್ಟರ್ ರಿಚಾರ್ಡ್ ಗ್ರೆಗ್ ಎಂಬವರು ಗಾಂಧಿಜಿಗಳಿಗೆ ಬರೆದ ಪತ್ರದಲ್ಲಿದೆ. ಗ್ರೆಗರಿಗೆ ಗಾಂಧೀವಾದದಲ್ಲಿ ಎಷ್ಟೊಂದು ಶ್ರದ್ಧೆವಿಶ್ವಾಸಗಳವೆಯೆಂದರೆ ಗಾಂಧಿಜಿಯವರ ಅಹಿಂಸಾತತ್ವವನ್ನು ಪಾಶ್ಚಾತ್ಯ ರಾಷ್ಟ್ರಗಳಿಗ ಬಗೆಗಾಣುವಂತೆ ಬೋಧಿಸುವ ಪುಸ್ತಕವನ್ನು ಬರೆಯುತ್ತಿದ್ದಾರೆ.

ಖಾದಿ ಮತ್ತು ಸ್ವದೇಶೀ ಪ್ರದರ್ಶನಕ್ಕೆ ಎಸ್ ಶ್ರೀನಿವಾಸ ಅಯ್ಯಂಗಾರರ ಸಂದರ್ಶನ

ಎಸ್. ಶ್ರೀನಿವಾಸ ಐಯ್ಯಂಗಾರರು ಖಾದಿ ಮತ್ತು ಸ್ವದೇಶಿ ಪ್ರದರ್ಶನಾಲಯಕ್ಕೆ ಬಂದು ಎರಡು ಮೂರು ತಾಸು, ವಿವಿಧ ವಿಭಾಗಗಳನ್ನು ನೋಡಿದರು. ಅನಂತರ ಅವರು ಪ್ರದರ್ಶನದ ಕಾರ್ಯದರ್ಶಿಯರ ಕೂಡೆ ಹೀಗೆಂದರು. ಈ ಸುಂದರವಾದ ಪ್ರದರ್ಶನವನ್ನು ನೋಡುವ ಸಂದರ್ಭವನ್ನು ನನಗಿತ್ತು ನನ್ನನ್ನು ಋಣಪೂರ್ಣನನ್ನಾಗಿ ಮಾಡಿರಿ ಎಂದರು. ನಂತರ ಅವರು ಸಂದರ್ಶನೆಯ ಪುಸ್ತಕದಲ್ಲಿ ಹೀಗೆಂದು ರಿಮಾರ್ಕು ಬರೆದರು. 'ಇದೊಂದು ಬಹು ಸೌಂದರ್ಯ ಯುಕ್ತ ಪ್ರದರ್ಶನವು ಇದು ಮಹತ್ವವು ವಿದ್ಯಾವಿಚಾರದಲ್ಲಿ ಮಾತ್ರವಲ್ಲ ವ್ಯವಹಾರ ಚಾತುರ್ಯದಲ್ಲಿಯೂ ಬಹು ಮಹತ್ವವಿದೆ. ನಾನು ಬಹು ಮೆಚ್ಚಿರುವನು ಮಾತ್ರವಲ್ಲ ನಾನೀ ಪ್ರದರ್ಶನದ ವ್ಯವಸ್ಥೆ, ಶ್ರದ್ಧೆ ಮತ್ತು ಜಾಣ್ಮೆಯ ಕಾರ್ಯಯೋಜನೆ, ಮತ್ತು ಪ್ರಚಾರದ ರೀತಿನೀತಿಗಳನ್ನು ತಿಳಿದು ತುಂಬಾ ಆಭಾರಿಯಾಗಿದ್ದೇನೆ'

ಮಲಬಾರು ಆಯುರ್ವೇದ ಸಮ್ಮೇಳನ

ಮಲಬಾರಿನ ಪ್ರಥಮ ಆಯುರ್ವೇದ ಸಮ್ಮೇಳನವು ಜನವರಿ ತಾ. 15ರಲ್ಲು ಕಲ್ಲಿಕೋಟೆಯಲ್ಲಿ ಜರಗುವುದು. ಕೊಟ್ಟಕ್ಕಲಿನ ವೈದ್ಯರತ್ನಮು ಬಿ. ಯಸ್. ವಾರಿಯರ್— ಇವರು ಈ ಸಮ್ಮೇಳನದ ಅಧ್ಯಕ್ಷರಾಗುವರು ಕೊಚ್ಚಿ ಸಂಸ್ಥಾನದ ಸಾರ್ವಜನಿಕ ಆರೋಗ್ಯಖಾತೆಯ ಡೈರೆಕ್ಟರ್ ಡಾಕ್ಟರ್. ಎ ಆರ್. ಪುದುವಾಳರು ಈ ಸಮಾರಂಭವನ್ನು ತೆರೆಯುವರು.

ಹಿಂದೂದೇಶದ ಮೇಲೆ ಜರ್ಮನ ವಿಮಾನ

ದಶಂಬರ ತಾ. ३०ರಲ್ಲು ಜರ್ಮನಿಯಿಂದ ಹೊರಟ ವಿಮಾನವೊಂದು ತಾ. 31ರಲ್ಲು ಬೆಳಿಗ್ಗೆ ಜೋಧಪುರ ಮೇಲಿಂದ ಹಾದುಹೋಯಿತು. ಈ ವಿಮಾನವು ಗಂಟೆಗೆ 120 ಮೈಲಿನ ವೇಗದಲ್ಲಿ ಹಾರು

THE UDIPI BANK LTD.

ನಿರಖು ಠೇವಣಾತಿ (ಡಿಪೋಜಿಟು)ಗಳು
ಸಾ. ಶೇ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ
ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100/-ರ ತನಕವೂ ವಾರಕ್ಕೆರಡಾವರ್ತಿಯೂ ಚಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ
ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ವಾರ್ತಾವಾಹಿನಿ

ವ್ಯಾಪಾರ ವೃದ್ಧಿಯಲ್ಲಿ ಲೋರ್ಡ್ ನುಫೀಲ್ಡರ ವಿಶ್ವಾಸ

ಡಿಸೆಂಬರ ತಾ. 30ರಲ್ಲು ಲೋರ್ಡ್ ನುಫೀಲ್ಡರು ತಾನು ಆಫ್ರಿಕ ನ್ಯೂಜೀಲೆಂಡ ಮತ್ತು ಆಸ್ಟ್ರೇಲಿಯ ಮೊದಲಾದ ದೇಶಗಳ ಸಂದರ್ಶನೆಯ ಸಂಚಾರಕ್ಕೆ ಹೊರಡುವ ಕಾಲದಲ್ಲಿ ಹೀಗೆಂದು ಸಂದೇಶವಿತ್ತರು. ಬರುವ ವರ್ಷ ವ್ಯಾಪಾರ ಅಭಿವೃದ್ಧಿಹೊಂದುವುದೆಂಬುದು ನಿಜ. ಆದುದರಿಂದ ಸಾಕಷ್ಟು ನಿರುದ್ಯೋಗ ನಿವಾರಣೆಯೂ ಆಗುವುದು. ಬ್ರಿಟಿಷ ಪ್ರಧಾನ ನೆವಿಲ್ಲೆ ಚೇಂಬರ್ಲೇನರು ಯೂರೋಪಿನ ಶಾಂತತೆಗಾಗಿ ತುಂಬಾ ಪ್ರಯತ್ನಿಸುತ್ತಿರುವರು. ಅವರು ತಮ್ಮೀ ಕಾರ್ಯದಲ್ಲಿ ಯಶಸ್ವಿಯಾಗುವರೆಂದು ನನ್ನ ನಂಬಿಕೆ. ಅವರು ಈ ಸದುದ್ದ್ಯೋಗಕ್ಕಾಗಿ ಸಾಧಿಸುತ್ತಿರುವಾಗ ನಾವು ಅವರ ಮುಂದಾಳುತನದಲ್ಲಿ ವಿಶ್ವಾಸವಿರಿಸಿ, ಅವರನ್ನು ಈ ಕಾರ್ಯದಲ್ಲಿ ಪ್ರೋತ್ಸಾಹಿಸುವುದು ನಮ್ಮ ಪ್ರತಿಯೊಬ್ಬರ ಕರ್ತವ್ಯ. ನಾವು ಹಣವನ್ನು ವ್ಯಾಪಾರ ವಹಿವಾಟುಗಳಲ್ಲಿ ಹೆಚ್ಚಾಗಿ ವಿನಿಯೋಗಿಸುವುದು ಅಗತ್ಯ. ಜನರು ತಮ್ಮ ನಿಸ್ತೇಜ ನಿರಾಶೆಯನ್ನು ದೂರೀಕರಿಸಿ ಉತ್ಸಾಹದಿಂದ ವ್ಯಾಪಾರ ವಹಿವಾಟುಗಳನ್ನು ನಡೆಸಿದರೆ ಬ್ರಿಟಿಷರ ವ್ಯಾಪಾರವು ಪುನರ್ವೃದ್ಧಿಹೊಂದುವುದೆಂಬುದರಲ್ಲಿ ನನ್ನ ನಂಬುಗೆಯಿದೆ.

ರಾಜಪುತ್ರರಿಗೆ ಸೈನಿಕ ಶಿಕ್ಷಣ

ಕಲ್ಕತ್ತದಲ್ಲಿ ನಡೆದ ಕ್ಷತ್ರಿಯಮಹಾಸಭೆಯಲ್ಲಿ ರಾಜಪುತ್ರ ತರುಣರಿಗೆ ಸೈನಿಕ ಶಿಕ್ಷಣೆಯ ಕುರಿತು ಠರಾವು ಮಂಜೂರಾಗಿರುವುದು. ಈ ಸಭೆಯಲ್ಲಿ ಈ ಶಿಕ್ಷಣದ ಕುರಿತಾದ ವ್ಯವಸ್ಥೆಯ ವಿಚಾರಗಳನ್ನು ನಿರ್ಣಯಿಸುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸುವುದು ಅಗತ್ಯವೆಂದು ನಿರ್ಣಯಿಸಲಾಯಿತು. ಇನ್ನೊಂದು ನಿರ್ಣಯದ ಮೇರೆಗೆ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳಲ್ಲಿ ರಾಜಪುತ್ರರಿಗೆ ಉದ್ಯೋಗ ದೊರೆಯುವ ವ್ಯವಸ್ಥೆಮಾಡಬೇಕೆಂಬ ಅಭಿಪ್ರಾಯವಾಗಿದೆ. ಈ ಸಭೆಯು ನಿರ್ಗತಿಕ ಬಡ ವಿದ್ಯಾರ್ಥಿಗಳ ಸಲುವಾಗಿ ಕಲ್ಕತ್ತದಲ್ಲಿ ರಾಜಪುತ್ರ ಭವನ ನಿರ್ಮಾಣದ ಆವಶ್ಯಕತೆಯನ್ನು ಪರಿಗಣಿಸಿತು. ಬಂಗಾಳ ಪ್ರಾಂತೀಯ ಕ್ಷತ್ರಿಯ ಸಭೆಯು ಈ ಕುರಿತು ತಕ್ಕ ನಿಗಾ ತೆಗೆದುಕೊಳ್ಳಬೇಕೆಂದು ನಿರ್ಣಯಿಸಲಾಯಿತು.

ಆಂಗ್ಲ ಅಮೇರಿಕನರ ಸಹಕಾರ

"ಬ್ರಿಟನಿನ ಮತ್ತು ಯುನೈಟೆಡ್ ಸ್ಟೇಟ್ಸಿನೊಳಗಣ ಪರಸ್ಪರ ಸಹಕಾರದ ಮಹತ್ವಿಕೆಯೆಷ್ಟಿದೆಯೆಂಬುದನ್ನು ವಿವರಿಸಿ ಹೇಳಿದರೆ ನಿಮಗೆ ಆಶ್ಚರ್ಯವಾಗುವುದು. ಆದರೆ ನನಗೆ ಈ ಕುರಿತು ತಿಳಿಸುವ ಸ್ವತಂತ್ರವಿಲ್ಲವೆಂದು ಡಾಕ್ಟರ್ ವಾಲ್ಟರ್ ಪೂಜಿ ಎಂಬ ಮೆಲ್ಬೋರ್ನದಲ್ಲಿಯ ಅಮೇರಿಕ ಪ್ರತಿನಿಧಿಯು ಯೂನಿವರ್ಸಿಟಿ ಪದವೀಧರರ ಸತ್ಕಾರಕೂಟದಲ್ಲಿ ಹೇಳಿದರು. ಜಗತ್ತಿನ ಶಾಂತಿರಕ್ಷಣೆಗೆ ಅಮೇರಿಕಾ ಇಂಗ್ಲಾಂಡುಗಳೊಳಗಣ ಸಹಕಾರವು ಪ್ರಾಮುಖ್ಯವೆಂದು ಅವರು ಅಭಿಪ್ರಾಯವಿತ್ತರು.

ವಿಯನ್ನದಲ್ಲಿ ಪಾದ್ರಿಯೊಬ್ಬನನ್ನು ಕೈದುಮಾಡಲಾಯಿತು

ವಿಯನ್ನದ ಸಮೀಪದಲ್ಲಿ ಅಲೆಸ ಹಾಸಿಂಗನೆಂಬೊಬ್ಬ ಕೆಥೊಲಿಕ ಪಾದ್ರಿಯನ್ನು ಮೂವತ್ತನಾಲ್ಕು ಯಹೋದ್ಯರಿಗೆ ಅನ್ಯಾಯವಾಗಿ ಸ್ನಾನದೀಕ್ಷೆ ಕೊಟ್ಟನೆಂಬ ಆರೋಪದ ಮೇಲೆ ಕೈದುಮಾಡಲಾಗಿಯದೆ. ಈ ಸಂದರ್ಭದಲ್ಲಿ ಆವನು ಹಣವನ್ನು ಸಹಾ ಪಡೆಯುತ್ತಿದ್ದಾನೆಂಬ ಅಪವಾದನೆಯು ಅವನ ಮೇಲೆ ಹೊರಿಸಲ್ಪಟ್ಟಿರುವುದು.

ಸುಭಾಸಚಂದ್ರಭೋಸರ ಅಸ್ವಸ್ಥತೆ

ಅಧ್ಯಕ್ಷ ಭೋಸರ ಆರೋಗ್ಯದ ಕುರಿತಾದ ವಾರ್ತೆಯು ಹೀಗಿದೆ.

"ಸುಭಾಸರ ಸದ್ಯದ ವಿಚಾರವೆಂದರೆ ವಾರ್ಧದಿಂದ ಕಲ್ಕತ್ತಕ್ಕೆ ಮರಳಿ, ಅಲ್ಲಿ ಕೆಲದಿನ ವಿಶ್ರಾಂತಿ ತೆಗೆದುಕೊಂಡು ಆನಂತರ ಬಾರ್ಡೋಲಿ ವರ್ಕಿಂಗ್ ಕಮಿಟಿ ಮೀಟಿಂಗಿಗೆ ಹಾಜರಾಗುವುದಾಗಿದೆ. ಅವರ ಗಂಟಲುನೋವಿಗೆ ಮುಂಬಾಯಿಯಲ್ಲಿ ಚಿಕಿತ್ಸೆ ನಡೆಸಿ, ಅವರು ಮುಂಬಾಯಿಯಿಂದ ಹೊರಡುವಾಗ ಅಷ್ಟು ಹೆಚ್ಚೇನೂ ವಿಶೇಷವಿರಲಿಲ್ಲ. ಆದರೆ, ದುರ್ದೈವದಿಂದ ಅವರಿಗೆ ರೈಲು ಗಾಡಿಯಲ್ಲಿ ಸಂಚಾರ ಮಾಡುತ್ತಿರುವಾಗ ಅಸ್ವಸ್ಥ ಹೆಚ್ಚಾಯಿತು. ವಾರ್ಧಕ್ಕೆ ತಲುಪಿ, ಗಾಂಧಿಯವರನ್ನು ಸಂದರ್ಶಿಸಿದ ನಂತರ ಅವರ ಸಂಕಟವು ಇನ್ನೂ ಹೆಚ್ಚಾಯಿತು. ಹೀಗಾಗಿ ಅವರು ತನ್ನ ಮದ್ರಾಸು ಸಂಚಾರ ನಿಲ್ಲಿಸಬೇಕಾಯಿತು. ಈಗ ತಾ. 31ರಲ್ಲು ಅವರ ಜ್ವರದ ತಾಪವು ತಗ್ಗುತ್ತಾ ಬಂದಿದೆ. ಸಿವಿಲ್ ಸರ್ಜನ್ ಡಾಕ್ಟರ್ ನರ್ಮದ ಪ್ರಸಾದರು ಅವರ ಆರೈಕೆ ಮಾಡುತ್ತಿದ್ದಾರೆ- ಗಂಟಲ ವ ಮುಖದ ನೋವು ಕಡಿಮೆಯಾಗುತ್ತ ಬಂದದೆ. ವ್ಯಾಕುಲ ಪಡಲು ಕಾರಣವಿಲ್ಲ. ಡಾಕ್ಟರರು ಕೆಲದಿನ ಅವರನ್ನು ವಿಶ್ರಾಂತಿ ತೆಗೆದುಕೊಳ್ಳಲು ಸೂಚಿಸಿರುವರು.

ಜರ್ಮನಿಯ ಅದೃಷ್ಟನಾಯಕ ಹಿಟ್ಲರ್

ಜರ್ಮನಿಯಲ್ಲಿ ಡಾಕ್ಟರ್ ಗೋಬೆಲ್ಲರು ಹೊಸ ವರ್ಷದ ಸಂದೇಶವನ್ನೀಯುವಾಗ ಹಿಟ್ಲರನ ಮಹತ್ವಿಕೆಯನ್ನು ವರ್ಣಿಸುತ್ತಾ, 'ಹಿಟ್ಲರನು ಅದೃಷ್ಟ ನಾಯಕನು ಜರ್ಮನರು ದೇಶದ ಉಜ್ವಲ ವಿಷಯಕ್ಕಾಗಿ ಹಿಟ್ಲರನನ್ನು ಅನುಸರಿಸುವರು. ಜರ್ಮನಿಯು 1938ರಲ್ಲಿ ಐಕ್ಯತೆಯನ್ನು ಹೊಂದಿ ತನ್ನ ಸಾವಿರ ವರ್ಷಗಳ ಆಶೆಯನ್ನು ಪೂರ್ತಿಗೊಳಿಸಿತು. ಹೊಸ ವರ್ಷದಲ್ಲಿ ನಮಗೆ ಜಯ ಮತ್ತು ಯಶಸ್ಸು ದೊರೆಯುವಂತಾಗಲೆಂದು ಹಾರೈಸುತ್ತೇನೆ" ಎಂಬ ಸಾರಾಂಶವುಳ್ಳ ಭಾಷಣವಿತ್ತರು.

ಮೆಹರ್ ಬಾಬನ ನವಸಂದೇಶ

ಈ ಜಗತ್ತು ಈಗ ಅವತಾರದ ಮೊದಲಣ ಸಂದಿಗ್ಧ ಪರಿಸ್ಥಿತಿಯಲ್ಲಿದೆ; ಜಾಗ್ರತ ಸ್ತ್ರೀಪುರುಷರ ಅಳುವಿಗೆ ಈ ವಿಚಾರ ಗೋಚರವಾಗುತ್ತಿದೆ. ಅವರಿಂದು ಕಗ್ಗತ್ತಲೆಯಿಂದ ಬೆಳಕನ್ನು ಬಯಸುವರು. ದುಃಖದಿಂದ ಸುಖಕ್ಕೆಳೆಸುವರು.

"ಇಂಥವರು ಪ್ರಕೃತ ತಾಳ್ಮೆಗೆಡಬಾರದು ನಾಶಕಾರಕವಾದ ಅಲೆಗಳು ಇನ್ನಷ್ಟು ವಿಸ್ತಾರವಾಗಬೇಕು. ಆದರೆ, ಮಾನವನು ತನ್ನ ಹೃದಯಾಂತರಾಳದಿಂದ ಸಂಪತ್ತಿಗಿಂತಲೂ ಮಿಗಿಲಾದುದನ್ನು ಬಯಸುವುದಾದರೆ, ಪ್ರಾಪಂಚಿಕ ಶಕ್ತಿಗಿಂತ ಮೇಲಾದ ನಿಜತ್ವವನ್ನು ಹಂಬಲಿಸುವುದಾದರೆ, ಈ ಅಲೆಗಳು ಹಿಂದಕ್ಕೆ ಸರಿಯುವುವು. ಆಗ ಶಾಂತತೆಯು ಬರುವುದು, ಆನಂದವು ಸಮೀಪಕ್ಕೆ ಬರುವುದು, ಬೆಳಕು ದೊರೆಯುವುದು."

ಎಲ್ಲಾ ತರದ
ಶುದ್ಧ ಖಾದಿ
ಮಂಗಳೂರು
ಸ್ವದೇಶಿ ಸ್ಟೋರ್ಸ್,
ರಥಬೀದಿ -- ಮಂಗಳೂರು
ಅಖಿಲ ಭಾರತ ಚರಕಾ ಸಂಘದಿಂದ ಸರ್ಟಿಫೈ ಮಾಡಲ್ಪಟ್ಟಿದೆ.

THE Bombay Life ASSURANCE CO., LTD.
ಸ್ಥಾಪನೆ] [1908
ದಿ ಬೋಂಬೆ ಲೈಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:
(1) ರಥಬೀದಿ, ಮಂಗಳೂರು.
(2) ಪುತಿಯಾರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 337, ಮೌಂಟ ರೋದು, ಮದ್ರಾಸು. (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, ಬೊಂಬೈ (ಫೋ. ನಂ. 26314)
ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು.
(6) ಪಟ್ಟಿಪಾಳಂ, ದ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂತೂರು.

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)
ರಿಜಿಸ್ಟ್ರಿಯಾದ ಆಫೀಸು: ಉಡುಪಿ.
ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.
ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	ರೂ.	1,40,08,725
ಪ್ರೀಮಿಯಂ ಆದಾಯ ಮಿಕ್ಕಿದುದು	,,	30,00,000
ಒಟ್ಟು ಮೂಲ ಮಿಕ್ಕಿದುದು	,,	1,00,00,000
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	50,00,000

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ. ಅತ್ಯಧಿಕ ಪ್ರತಿಫಲ.
ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ
ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ್, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು
ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ಮೋಸಗೊಳಿಸುವ ಔಷಧವೆಂದು ಖಾತ್ರಿಪಡಿಸುವವರಿಗೆ ರೂಪಾ 100 ಬಹುಮಾನ.
ಸ್ತಂಭಕ ವಟಿ- ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.
ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—
Vaidraj Akhilkishore Ram
No. 553 P. O. Katrisarai, (GAYA)

ರಷ್ಯಾದ ಕ್ರಾಂತಿಕಾರರು

ವ್ಲಾಡಿಮಿರ್ ಲೆನಿನ್

'ಆರಾಧ್ಯ' ತುಮಕೂರು.

ಆಳು ಜಿಸ್ಟು ಎತ್ತರನಾದವನಲ್ಲ ಕೆಂಪಗಿರುವ ಮುಖ ಮತ್ತು ಕೂದಲು ಬೆಳೆಯದೆ, ನುಣುಪಾಗಿ ಮಿಂಚುತ್ತಿರುವ ತಲೆ, ಅಚ್ಚ ರಷ್ಯನನಂತೆ ಕಾಣುವ ವದನ. ಆವನ ಕಣ್ಣುಗಳು ಮಂಗೋಲಿಯನ್ನರ ಬುಡಕಟ್ಟಿಗೆ ಸೇರಿದವರ ಕಣ್ಣೆರಂತೆ. ದೃಷ್ಟಿಮಾತ್ರ ಅತಿ ಸೂಕ್ಷ್ಮ. ಆವನ ನೋಟದಿಂದಲೇ ಎಲ್ಲರೂ ಬೆರಗಾಗುತ್ತಿದ್ದರು. ಆವನನ್ನು ಕಂಡವರೆಲ್ಲರೂ ಅವನ ದೃಷ್ಟಿಯನ್ನು ಮರೆಯಲಾರರು ಅಂತಹ ಚತುರನಾದ ವಾಗ್ಮಿಯೂ ಅಲ್ಲ. ಆದರೂ ಬಹಳ ಮಾತನಾಡಬಲ್ಲನು. 'ಪ'ವರ್ಗವನ್ನು ಸರಿಯಾಗಿ ಉಚ್ಚರಿಸಲು ಸಹ ಆವನಿಗೆ ಬರುತ್ತಿರಲಿಲ್ಲ. ವ್ಯಕ್ತಿ ಪ್ರತಿಷ್ಠೆಯಿಂದ ಜನರ ಮನಸ್ಸನ್ನು ಸೆಳೆಯುತ್ತಿರಲಿಲ್ಲ ಹಾವಭಾವಗಳನ್ನು ನೋಡಿದರೆ ಪಾಕುರಿಂಕಿನ ಮನುಷ್ಯನಂತೆ ಕಾಣದೆ ಸಾಮಾನ್ಯ ಕೂಲಿಗಾರನಂತಿದ್ದನು. ಆವನು ಎಲ್ಲಿಯಾದರೂ ಇರಲಿ, ಪರಿಶುದ್ಧನಾಗಿಯೂ, ನಿರ್ಮಲ ಮನಸ್ಕನಾಗಿಯೂ ಇರಬೇಕೆಂಬ ಆಶೆ.

ಇವನು ಹಿಂದೆ ಬಾಲಕನಾಗಿದ್ದಾಗ ತನ್ನ ತಾಯಿಯೊಡನೆ ಹಲವು ಕೆಲವು ಪ್ರಶ್ನೆಗಳನ್ನು ಹಾಕಿ ತನ್ನ ಮನಸ್ಸಿನ ಅನುಮಾನಗಳನ್ನು ಪರಿಹರಿಸಿಕೊಳ್ಳುತ್ತಿದ್ದನು. ಒಮ್ಮೆ ಆವನು ತಾಯಿಯೊಡನೆ "ಮೊನ್ನೆ ನಮ್ಮ ಮನೆಗೆ ಊಟಕ್ಕೆ ಬಂದಿದ್ದ ಪಾದ್ರಿಯು ಹೇಳಲಿಲ್ಲವೆ? ನಮ್ಮ ದೊರೆಯನ್ನು ಕೊಲ್ಲುವುದಕ್ಕೆ ಪ್ರಯತ್ನಪಡುತ್ತಿರುವ ಪಾಪಿ ಕ್ರಾಂತಿಕಾರರನ್ನು ಜಗದೀಶನು ಶಿಕ್ಷಿಸುತ್ತಾನೆ ಎಂದು. ಆದರೆ ಬಡಜನರನ್ನು ಗೋಳಿಗೀಡುಮಾಡುವ ಆ ರಾಜನು ಪಾಪಿಯೋ ಅಥವಾ ಕ್ರಾಂತಿಕಾರರು ಪಾಪಿಗಳೋ? ಇದರಲ್ಲಿ ಯಾರನ್ನು ನಿಜವಾಗಿಯೂ ದೇವರು ಶಿಕ್ಷಿಸುತ್ತಾನೆ ಹೇಳಮ್ಮ" ಎಂದು ಕೇಳಿದನು.

ತಾಯಿಯು ಮಗನ ಮಾತುಗಳನ್ನು ಕೇಳಿ ಬೆಚ್ಚಿಬಿದ್ದಳು "ಅವೆಲ್ಲಾ ನಿನ್ನಂತಹ ಚಿಕ್ಕ ಹುಡುಗನು ಯೋಚಿಸಬಾರದು, ನೀನು ದೊಡ್ಡವನಾದ ಮೇಲೆ ತಿಳಿಯುತ್ತದೆ ಈಗ ಸುಮ್ಮನಿರು" ಎಂದು ಹೇಳಿ ಸಮಾಧಾನಪಡಿಸಿದಳು.

ಆದರೆ ಅದೇ ಹುಡುಗ ಮುಂದೆ ಲೆನಿನ್ ಎಂಬ ಹೆಸರಿನಲ್ಲಿ ರಷ್ಯದ ಚಕ್ರವರ್ತಿಗಳ ವಂಶವನ್ನು ನಿರ್ಮೂಲಮಾಡಿ ರಷ್ಯದ ನಾಯಕನಾಗಿ ಜಗತ್ತಿನ ಕೋಟ್ಯಾನುಕೋಟಿ ಜನಗಳಿಗೆ ಆದರ್ಶಪ್ರಾಯನಾಗುತ್ತಾನೆಂಬುದು ಆವನ ತಾಯಿಗೇನು ಗೊತ್ತು! ಬಾಲ್ಯದಲ್ಲಿ ಅವನಿಗೆ 'ಲೆನಿನ್'ಎಂಬ ಹೆಸರಿರಲಿಲ್ಲ. 'ವ್ಲಾಡಿಮರ್' ಎಂದು ಇವನನ್ನರಿತವರೆಲ್ಲರೂ ಕರೆಯುತ್ತಿದ್ದರು. ಆವನ ಬಾಲ್ಯವೆಲ್ಲವೂ ಸದ್ಗುಣಶೀಲೆಯಾದ ತಾಯಿಬಳಿಯಲ್ಲಿ ಕಳೆಯಲ್ಪಟ್ಟಿತು.

ಕಾಲೇಜಿಗೆ ಸೇರಿದ ಮೇಲೆ ಲೆನಿನ್ನನು ಬಹುವಾಗಿ ಮುಂದುವರಿದನು. ಅರ್ಥಶಾಸ್ತ್ರ, ನ್ಯಾಯಶಾಸ್ತ್ರ ಮುಂತಾದುವನ್ನು ಚೆನ್ನಾಗಿ ಅಭ್ಯಾಸಿಸಿದನು. ಅನಂತರ ಪತ್ರಿಕೋದ್ಯಮದಲ್ಲಿ ಪೂರ್ಣತೆಯನ್ನು ಪಡೆದು ಕೆಲವು ದಿವಸಗಳು ಕೈಗಾರಿಕಾಪ್ರಪಂಚದಲ್ಲಿ ಓಡಾಡಿದನು. ಇದಾವುದೂ ಇವನ ಮನಸ್ಸಿಗೆ ಒಪ್ಪಲಿಲ್ಲ. ರಾಜಕೀಯ ರಂಗಕ್ಕಿಳಿದು ಕಾರ್ಲ್‌ಮಾರ್ಕ್ಸ್‌ನ ಬರವಣಿಗೆಗಳನ್ನು ಓದಿ ಸರ್ವ ಸಮತಾವಾದವನ್ನು ಜನಗಳಿಗೆ ಸುಲಭವಾಗಿ ಅರ್ಥವಾಗುವಂತೆ ತಿಳಿಸಲು ಮೊದಲುಮಾಡಿದನು. ಈ ಬಗ್ಗೆ ಹಸ್ತಪತ್ರಿಕೆಗಳನ್ನು ತಾನೇ ಮುದ್ರಿಸಿ ಪ್ರಕಟಿಸಿದನು. ಸಮತಾವಾದದ ಹುಚ್ಚು ಬಲವಾಗುತ್ತಾ ಬಂದಿತು. ಬಡವರೂ ಕೂಲಿಗಾರರೂ ಇವನ ಶಿಷ್ಯರಾದರು ಎಲ್ಲರಲ್ಲಿಯೂ ನವಚೇತನತೆಯು ಉಂಟಾಗತೊಡಗಿತು.

ಲೆನಿನ್ನನ ವಿಷಯವಾಗಿ ಅರಿತುಕೊಳ್ಳುವ ಮುಂಚೆ ಆವನ ಜನನಕ್ಕೆ ಮೊದಲು ರಷ್ಯದ ಪರಿಸ್ಥಿತಿಯು ಹೇಗಿದ್ದಿತೆಂಬುದನ್ನು ಪರಿಶೀಲಿಸುವುದು ಆವಶ್ಯಕ. ರಷ್ಯಾದೇಶವು ಇವನ ಜನನಕ್ಕೆ ಮುನ್ನ ಅಲ್ಲೋಲಕಲ್ಲೋಲವಾಗಿದ್ದಿತು. ಶಾಂತತೆಯೆಂಬುದಿರಲಿಲ್ಲ ಒಂದೆಡೆ ಜನರು ತಿಂದುತೇಗುತ್ತಿದ್ದರು. ಮತ್ತೊಂದು ಕಡೆ ತಿನ್ನಲಿಕ್ಕೆ ತಿಂಡಿಯಿಲ್ಲದೆ ಜನರು ಸಾಯುತ್ತಿದ್ದರು. ಈ ದುಃಸ್ಥಿತಿಯಲ್ಲಿ ತಮ್ಮ ಭವಿಷ್ಯಮಾರ್ಗವನ್ನು ಸರಿಪಡಿಸಲು ದಾರಿತೋರದಿರುವ ವೇಳೆ ಪೀಟರ್ ಮಹಾಶಯನು ಮುಂದೆ ಬಂದನು. ಫ್ರಾನ್ಸ್ ದೇಶದಲ್ಲಿ ಉಂಟಾದ ಕ್ರಾಂತಿಯನ್ನೂ, ಅದರಿಂದಾದ ಪರಿಣಾಮವನ್ನೂ ಕಂಡು ತನ್ನ ದೇಶವನ್ನು ಅದೇ ರೀತಿ ಮಾಡಬೇಕೆಂದು ಆಶಿಸುತ್ತಿದ್ದನು

ಈ ಸಮಯದಲ್ಲಿ ರಷ್ಯಾ ದೇಶವು ಬಹಳ ನಾಜೂಕಾಗಿ ತನ್ನ ಕಾರ್ಯವನ್ನು ನಡೆಯಿಸಿತೆಂದು ಹೇಳಬಹುದು. ಸಾಮಾಜಿಕ ಕ್ರಾಂತಿಯನ್ನು ನಡೆಯಿಸಲೋಸುಗ ದೇಶವು ಎರಡು ದಳವಾಗಿ ವಿಭಾಗಗೊಂಡು ಒಂದು ದಳವು ಪೂರ್ವಕ್ಕೂ ಮತ್ತೊಂದು ಪಶ್ಚಿಮಕ್ಕೂ ನಿಂತಿತು ಎರಡು ದಳಗಳಲ್ಲಿಯೂ ಈ ಮಧ್ಯೆ ಗುದ್ದಾಟಕ್ಕೆ ಪ್ರಾರಂಭವಾಯಿತು. ಒಂದೇ ಒರೆಯಲ್ಲಿ ಎರಡು ಕತ್ತಿಗಳು ಹಿಡಿಸಲಾರವೆಂಬುದನ್ನು ಇಲ್ಲಿ ನಾವು ಮರೆಯಬಾರದು. ಅಷ್ಟರಿಂದ ಈ ಮನಸ್ತಾಪ ಕಡಿಮೆಯಾಗುವ ಸಂಭವ ಕಾಣಲಿಲ್ಲ ಸಂಘಾರಣೆಯ ಆವಶ್ಯಕತೆಯು ಎರಡು ದಳಕ್ಕೂ ಕಂಡು ಬಂದರೂ ಆ ಕಾರ್ಯವನ್ನು ಕೈಗೊಳ್ಳಲಿಕ್ಕೆ ಯಾವ ದೇಶವೂ ಮುಂದೆ ಬರಲಿಲ್ಲ ಇದೇ ಸಮಯದಲ್ಲಿ ಯಾವುದೋ ಒಂದು ದೈವಿಕ ಶಕ್ತಿಯು ಈ ಸಮಸ್ಯೆಯನ್ನು ಸರಿಪಡಿಸಲೋಸುಗ 'ಲೆನಿನ್' ರೂಪದಲ್ಲಿ ಅವತಾರವೆತ್ತಿ ದೇಶವನ್ನುದ್ಧರಿಸಿತೆಂದು ಹೇಳಬಹುದು

ಉತ್ತಮ ಮತ್ತು ಮಧ್ಯಮ ವರ್ಗದವರನ್ನು ದೂರ ಸರಿಸಿ ಕೇವಲ ಒಂದು ಜನತೆಯ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂಬುದೇ ಇವನ ಇಚ್ಛೆ. ರಷ್ಯಾದ ಅಂದಿನ ಪರಿಸ್ಥಿತಿಯನ್ನು, ಆ ದಿನ ಮುಖಂಡರ ಮನೋವೃತ್ತಿಯನ್ನು ನೋಡಿ ಹೇಳುವುದಾದರೆ ಲೆನಿನ್ನನ ಪ್ರಯತ್ನವು ಫಲದಾಯಕವಾಗುವುದೆಂದು ಹೇಳುವುದಕ್ಕೆ ಆಗುತ್ತಿರಲಿಲ್ಲ. ಆದರೂ ಹಿಂತೆಗೆಯದೆ ಮುಂದೆ ನುಗ್ಗಿ ಚಳುವಳಿಗೆ ಆರಂಭಮಾಡಿದನು. ಇವನ ಚಳುವಳಿಯಿಂದ ಕೂಲಿಯವರಲ್ಲಿ ಕ್ರಮೇಣ ಉಂಟಾಗುತ್ತಿದ್ದ ಜಾಗ್ರತಿಯನ್ನು ಕಂಡು ಸರ್ಕಾರದವರು ಹೆದರಿದರು. ಕಾರ್ಖಾನೆಗಳ ಮಾಲೀಕರು ಬೆದರಿದರು ಕೊನೆಗೆ ಈ ಪ್ರಚಂಡ ಜಾಗ್ರತಿಗೆ ಇವನೇ ಕಾರಣನೆಂದು ತಿಳಿದು ರಷ್ಯಾದಿಂದ ಪ್ರಭುತ್ವವು ಇವನನ್ನು ಹೊರಗೆ ಓಡಿಸಿತು. ಮೂರು ವರ್ಷಗಳ ಕಾಲ ರಾಷ್ಟ್ರದ ಎಲ್ಲೆಯೊಳಕ್ಕೆ ಕಾಲಿಡಕೂಡದೆಂದು ಕಟ್ಟಪ್ಪಣೆ ಮಾಡಿತು ಈ ಕಾಲದಲ್ಲಿ ಲೆನಿನ್ನನು ಸೈಬೀರಿಯಾ ದೇಶವನ್ನೂ ಲಂಡನ್, ಮ್ಯೂನಿಚ್, ಪ್ಯಾರಿಸ್, ಜಿನೀವ ಮುಂತಾದ ಮುಖ್ಯ ನಗರಗಳನ್ನೂ ನೋಡಿಕೊಂಡು ಬಂದನು. ಈ ಪ್ರವಾಸದಿಂದ ಪ್ರಪಂಚದ ಪರಿಸ್ಥಿತಿಯು ಚೆನ್ನಾಗಿ ಮನವರಿಕೆಯಾಯಿತು ಆವನೆಲ್ಲಿದ್ದರೂ ಅಲ್ಲಿಂದಲೇ ಕ್ರಾಂತಿಕಾರಕ ವಿಷಯಗಳನ್ನು ಮುದ್ರಿಸಿ, ರಷ್ಯಕ್ಕೆ ಕಳುಹಿಸುತ್ತಿದ್ದನು. 'ಇಸ್ಕ್ರಾ' 'ಟ್ರೂತ್' 'ಫಾರ್‌ವರ್ಡ್' ಮುಂತಾದ ಪತ್ರಿಕೆಗಳ ಸಂಪಾದಕನಾಗಿಯೂ ಇದ್ದನು. ಇವನ ಬರಹವೆಂದರೆ ಜನರಿಗೆ ಓದಲೂ ಬಹಳ ಕುತೂಹಲ. ಇವನ ಬೋಧನೆಯೆಂದರೆ ಕೇಳಲು ಅಷ್ಟೇ ಆಶೆ.

'ಒಬ್ಬನು ಭೋಗಿ, ಇನ್ನೊಬ್ಬನು ರೋಗಿ'ಯಾಗಿರಬಾರದೆಂಬುದೇ ಇವನ ಬೋಧನೆಯ ಮೂಲತತ್ವ. ಮಂತ್ರಿ ಪದವಿಯಲ್ಲಿರುವವನಿಗೂ ಒಂದೇ ಸಂಬಳ, ಕಾರ್ಖಾನೆಯಲ್ಲಿ ಕೆಲಸ ಮಾಡುವ ಕೂಲಿಕಾರನಿಗೂ ಒಂದೇ ಸಂಬಳವಿರಬೇಕೆಂಬುದೇ ಇವನ ವಾದ. ಪೂರ್ಣ ಸಾಮ್ಯವಾದ ತಳಹದಿಯ ಮೇಲೆ ಒಂದು ರಷ್ಯಾದ ಹೊಸ ಕಟ್ಟಡವನ್ನು ಕಟ್ಟಬೇಕೆಂಬುದೇ ಇವನ ಅಪೇಕ್ಷೆ. ಕ್ರಾಂತಿಯೇ ಅವನ ಧರ್ಮ. ಸ್ವಾತಂತ್ರ್ಯವೇ ಅವನ ಇಚ್ಛೆ. ರಷ್ಯಾವನ್ನು ಚಕ್ರವರ್ತಿಗಳ ನಿರಂಕುಶ ಪ್ರಭುತ್ವದಿಂದ ಬಿಡಿಸಬೇಕೆಂಬುದೇ ತನ್ನ ಮುಖ್ಯ ಕರ್ತವ್ಯವೆಂದು ಭಾವಿಸಿದ್ದನು. ಕ್ರಾಂತಿ ಜ್ವಾಲೆಯನ್ನುರಿಸಿದ ಹೊರತು, ಭಯಾನಕ ಅಲ್ಲೋಲಕಲ್ಲೋಲವನ್ನುಂಟುಮಾಡಿದ ಹೊರತು ರಷ್ಯಾ ದೇಶವು ಸಾಮ್ರಾಜ್ಯವಾದ ಬಂಧನದಿಂದ ಬಿಡುಗಡೆ ಹೊಂದಲಾರದೆಂಬುದೇ ಆವನ ಅಭಿಪ್ರಾಯ. ಲೆನಿನ್ನನು ಕಾರ್ಯದಕ್ಷನೇ ಹೊರತು ಬರೀ ಮಾತಿನವನಲ್ಲ

ಲೆನಿನ್ನನಿಗೆ ದೊಡ್ಡ ದೊಡ್ಡ ಭಾಷಣಗಳನ್ನು ಮಾಡುವುದಕ್ಕೆ ಬರುತ್ತಿರಲಿಲ್ಲ. ಅಲಂಕಾರಪೂರ್ಣ ಶೈಲಿಯಲ್ಲಿ ಲೇಖಗಳನ್ನು ಬರೆಯಲಾರ ಆವನ ಉಡಿಗತೊಡಿಗೆಗಳಲ್ಲಿ ಥಳುಕುಮಿಣುಕುಗಳಿರಲಿಲ್ಲ ನೋಡಿ ಮೋಹಗೊಳ್ಳಲು ಯೋಗ್ಯವಾದ ಸುಂದರ ಮುಖವೂ ಸಹ ಇರಲಿಲ್ಲ. ಅವನು ನಿಷ್ಕಪಟ ದೃಢ ಮನಸ್ಸಿನವನು. ಶಾಂತಿ, ಸ್ಥೈರ್ಯಗಳ ಮೂರ್ತಿಯಂತೆ ಕಾಣುತ್ತಿದ್ದನು. ಕೂಲಿಕಾರರ ಉನ್ನತಿಗಾಗಿ ಅವನು ಇತರರಿಗಿಂತಲೂ ಅಧಿಕ ಪರಿಶ್ರಮ ಪಡುತ್ತಿದ್ದನು; ಇತರರಿಗಿಂತ ಬಹಳ ನಿಃಸ್ವಾರ್ಥಿ. ದೇಶ, ಕಾಲ ಮತ್ತು ಪಾತ್ರಗಳನ್ನರಿತು



"ಶೆಂಕ್ಸ"
SHANKS
(ಇಂಗ್ಲಿಷ್ ಮೇಕ್)
ಕ್ರೂಡ್ ಆಯಿಲ್ ಎಞ್ಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶೆಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬೈಂಡ ಪ್ಲಾಂಟ), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಯಿರಿ—

ಪೆರಮ್ಯೆಂಟ್ ಇಂಜಿನೀಯರಿಂಗ್ ಕೊರ್ಪರೇಶನ್
೮೨, ಎಪೊಲೊ ಸ್ಟ್ರೀಟ್, ಫೋರ್ಟ್ . . . ಮುಂಬಯಿ.

ಹೊಸ ನಿರ್ಮಾಣದ ಸಿನೆಮಾಯಂತ್ರಗಳು ಈಗತಾನೆ ಬಂದಿವೆ.



ಆಬಾಲವೃದ್ಧರಿಗೆ ಮನೆಯಲ್ಲೇ ಬಾಯಸ್ಕೋಪುಗಳನ್ನು ನೋಡುವ ಸಮಯ. ಜಾಹೀರಾತಿನಲ್ಲಿ ಚಿತ್ರಿಸಿದ ರೀತಿಯಾಗದಿದ್ದರೆ ಹಣ ವಾಪಾಸು. ಇಲೆಕ್ಟ್ರಿಕ್ ಬೆಟರಿಗಳಿಂದಲೂ ಶಕ್ತಿಯುಕ್ತವಾದ ಬಲ್ಬುಗಳಿಂದಲೂ ಕೂಡಿರುವ ಈ ಮೆಶೀನುಗಳಿಂದ ಸಿನೆಮಾ ಕಂಪನಿಗಳ ದೃಶ್ಯಗಳನ್ನು ಕೂತಲ್ಲೇ ಕಾಣಬಹುದು ಸರ್ಕಸ್ ಆಟಗಳು, ಜಂಗಲ್ ಕಾಡುಗಳ ದೃಶ್ಯಗಳು, ಸಮುದ್ರದಲ್ಲಿಯ ಸ್ಟೀಮರ್ ಯುದ್ಧಗಳು; ಮನಮೋಹಿಸುವ ಕೋಮಲಾಂಗಿಯ ನೃತ್ಯವಿನೋದಾದಿ ಆಶ್ಚರ್ಯಕರ ರೀತಿಗಳು ಸಮಾನಂದವನ್ನುಂಟುಮಾಡತಕ್ಕ ಸೀನರಿಗಳು. ಹಣ ಸಂಪಾದನೆ ಮಾಡುವವರಿಗೂ ಈ ಯಂತ್ರವು ತುಂಬಾ ಸಹಕಾರಿಯಾಗುವುದು.

ನಂಬ್ರ 1 ದಾಡ್ಡ ಸೈಜ್ ಮೆಶೀನು ಮತ್ತು 15 ಅಡಿ ಉದ್ದದ ಫಿಲ್ಮ್ ಸಮೇತ ಕ್ರಯ ರೂ. 7

ನಂಬ್ರ 2 ಮಾಧ್ಯಮ ಸೈಜ್ ಮೆಶೀನ 10 ಫೀಟು ಫಿಲ್ಮ್ ಸಹಿತ ಕ್ರಯ ರೂ. 5

ಹೆಚ್ಚಿನ ಪ್ರತಿ 25 ಫೀಟು ಫಿಲ್ಮುಗಳಿಗೆ ಬೆಲೆ ರೂ 1 ಮಾತ್ರ.

ಪ್ಯಾಕಿಂಗ್ ಮತ್ತು ಪೋಸ್ಟೇಜು ನಂಬ್ರ 1ಕ್ಕೆ ರೂ 1—8—0, ಪ್ಯಾಕಿಂಗ್ ಮತ್ತು ಪೋಸ್ಟೇಜು ನಂಬ್ರ 2ಕ್ಕೆ ರೂ. 1—4—0; ಆರ್ಡರಿನೊಂದಿಗೆ ರೂ. 2ನ್ನು ಮುಂಗಡವಾಗಿ ಕಳುಹಿಸಿದ ಕಾಗದ ಪತ್ರಗಳಿಗೆ ಮಾತ್ರ ಗಮನಕೊಡಲಾಗುವುದು.

ವಿಳಾಸ - - Wedlock & Co., *Park Town, MADRAS.*

...ಲಸ ಮಾಡುವ ಬುದ್ಧಿ ಇತರರಿಗಿಂತಲೂ ...ವನಲ್ಲಿ ಅಧಿಕವಾಗಿದ್ದಿತು. ಈ ಗುಣಗಳ ...ಹಾಯದಿಂದ ಕೂಲಿಕಾರರ ರಾಷ್ಟ್ರವಾದ ...ಷ್ಯಾ ದೇಶವನ್ನು ಜಗತ್ತಿನ ಇತರ ದೊಡ್ಡ ದೊಡ್ಡ ರಾಷ್ಟ್ರಗಳ ಸಾಲಿಗೇರಿಸಿದ್ದಾನೆ.

ಯಾವವು ಫಲದಾಯಕವಾಗಲಾರವೆಂದು ತಿಳಿದಿದ್ದರೋ ಆ ಕಾರ್ಯಗಳು ಇಂದು ರಷ್ಯಾದಲ್ಲಿ ಫಲದಾಯಕವಾಗಿವೆ. ಲೆನಿನ್ನನು ರಷ್ಯಾದಲ್ಲಿ ಬಡವರ ರಾಜ್ಯವನ್ನು ಸ್ಥಾಪಿಸಿ ಕೃತಕಾರ್ಯನಾಗುವನೆಂದು ಯಾರೂ ನಂಬಿಂಲಿಲ್ಲ. ಆದರೆ ಲೆನಿನ್ನನು ತನ್ನ ದಾಸಿಗೆ ಮೊದಲೇ ರಷ್ಯಾದಲ್ಲಿ ಪಾಶ್ಚಾತ್ಯ ಔದ್ಯೋಗಿಕ ತಳಹದಿಯನ್ನು ಹಾಕಿದ್ದನು. ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿದ್ದವು. ಹಳ್ಳಿಗಳಲ್ಲಿಯೂ ಸಹ ವಿದ್ಯುದ್ದೀಪಗಳು ಬೆಳಗಿ ತೊಡಗಿದ್ದವು. ಕೃಷಿ ಸಂಬಂಧವಾದ ಪಾಶ್ಚಾತ್ಯ ನವೀನ ವಿಧದ ವ್ಯವಸಾಯವೂ, ಅನೇಕ ಸಂಶೋಧನೆಗಳೂ ಬಳಕೆ ತೊಡಗಿದ್ದವು. ಅಷ್ಟೇ ಅಲ್ಲ; ಲೆನಿನ್ನನು ಸುಪ್ರಸಿದ್ಧ ಇಂಜನಿಯರು ಮತ್ತು ಶಿಲ್ಪಿಕಾರರನ್ನು ಪರದೇಶದಿಂದ ಕರೆಯಿಸಿ ಅವರಿಂದ ರಷ್ಯಾಕ್ಕೆ ಬಹಳ ಪ್ರಯೋಜನವಾಗುವಂತೆ ಮಾಡಿದನು. ಇದರಿಂದ ರಷ್ಯಾ ದೇಶವು ಇಂದು ಔದ್ಯೋಗಿಕ ಉನ್ನತಿಯಲ್ಲಿ ಯುರೋಪಿನ ಯಾವ ದೇಶಗಳಿಗೂ ಹಿಂದುಳಿದಿಲ್ಲ. ಲೆನಿನ್ನನು ರಷ್ಯವನ್ನು ಪೂರ್ಣ ಕೂಲಿಕಾರರ ರಷ್ಯಾವನ್ನಾಗಿ ಮಾಡಿದ್ದಾನೆ. ಲೆನಿನ್ನನು ಹಿಂದೆ ಹಾಕಿದ ಬೀಜವು ಇರುವ ರೀತಿ ಬೆಳೆದು ಮರವಾಗಿದೆಯೆಂಬುದನ್ನು ಇಂದು ನೋಡಬಹುದು.

1914ರಲ್ಲಿ ಲೆನಿನ್ನನು ಸತ್ತನೆಂಬ ಸುದ್ದಿಯನ್ನು ಕೇಳಿ ಜಗತ್ತು ಮಹಾವ್ಯಕ್ತಿಯೊಂದನ್ನು ಕಳೆದುಕೊಂಡಿತೆಂದು ಚಿಂತಿಸಿತು. ಈ ಸುದ್ದಿ ರಷ್ಯಾದಲ್ಲಿ ಹರಡಿದೊಡನೆ ಲಕ್ಷಾಂತರ ಜನರು ಗೋಳಿಟ್ಟರು. ದಾಸ್ಯದಲ್ಲಿದ್ದ ತಮ್ಮನ್ನು ಸ್ವಾತಂತ್ರ್ಯದ ಗದ್ದುಗೆಗೆ ಏರಿಸಿದ ಮತ್ತು ದೇಶವಾತ್ಸಲ್ಯವನ್ನು ಕಲಿಸಿಕೊಟ್ಟ ಈ ಗುರುವಿನ ಕೊನೆಯ ದರ್ಶನವನ್ನು ತೆಗೆದುಕೊಳ್ಳಲು ಲಕ್ಷಾಂತರ ಜನರು ಮೊಸ್ಕೋ ನಗರಕ್ಕೆ ಹೋದರು. 4-5 ದಿನಗಳಾದರೂ ಜನಸಂದಣಿಯು ಕಡಿಮೆಯಾಗಲಿಲ್ಲ. ದರ್ಶನಾಭಿಮಾನಿಗಳೂ ಹೆಚ್ಚುತ್ತ ಬಂದುದನ್ನು ನೋಡಿ ಸೋವಿಯಟ್ ನಾಯಕರು ಇವನ ಶರೀರಕ್ಕೆ ಸಂಗೋಪನ ಚಿಕಿತ್ಸೆ ಮಾಡಿ ಒಂದು ಗಾಜು ಪೆಟ್ಟಿಗೆಯಲ್ಲಿಡಿಸಿ ಈಗಲೂ ಸಾರ್ವಜನಿಕರ ಉಪಯೋಗಕ್ಕೆ ಇರಿಸಿರುವರು.

ಲೆನಿನ್ನನು ಸತ್ತು 14 ವರ್ಷಗಳಾಗಿದ್ದರೂ ಅವನ ವ್ಯಕ್ತಿತ್ವ ಹಾಳಾಗಿಲ್ಲ. ಅದು ಅಸಮಾನ್ಯವಾದುದೆಂದು ಎಲ್ಲರೂ ಬಲ್ಲರು. ರಷ್ಯಾದಲ್ಲಿ ಇಂದೂ ಕೂಡ ಅವನ ಹೆಸರನ್ನು ಕೇಳಿದರೆ ಎಲ್ಲರೂ ತಲೆಬಾಗುವರು. ಈ ಸಂಗೋಪನ ಚಿಕಿತ್ಸೆಗೊಳಗಾದ ಲೆನಿನ್ನನ ಶವವನ್ನು ಮೊಸ್ಕೋ ನಗರದಲ್ಲಿರಿಸಿದ್ದಾರೆ. ಅವನ ಶವವನ್ನು ಪ್ರತಿ ದಿನವೂ ಸಾವಿರಾರು ಜನರು ಹೋಗಿ ನೋಡಿಕೊಂಡು ಬರುತ್ತಿದ್ದಾರೆ. ಇದುವರೆವಿಗೆ ಸುಮಾರು ಒಂದುವರೆ ಕೋಟಿ ಜನರು ಇವನ ಸಮಾಧಿಯನ್ನು ಸಂದರ್ಶಿಸಿ ಬಂದಿರುವರೆಂದ ಮೇಲೆ ರಷ್ಯನರಿಗೆ ಇವನ ಮೇಲೆ ಇರುವ ಅಭಿಮಾನವು ತಿಳಿಯದಿರದು.

ರಷ್ಯ ದೇಶವು ತನ್ನ ಪ್ರಾಚೀನ ಇತಿಹಾಸದಿಂದ ಕಲಿತುಕೊಳ್ಳಬೇಕಾದುದೇನೂ ಇರಲಿಲ್ಲ. ಅಲ್ಲದೆ ಅದನ್ನು ಮಾದರಿಯನ್ನಾಗಿಟ್ಟುಕೊಂಡು ಅದರ ತಳಹದಿಯ ಮೇಲೆ ರಷ್ಯದ ಕಟ್ಟಡವನ್ನು ಸಹ ಕಟ್ಟುವಷ್ಟು ಮಹತ್ವ ಪೂರ್ಣವಾದುದಾಗಿಯೂ ಇರಲಿಲ್ಲ. ಹಿಂದ ಎಂದೂ ಬಿತ್ತದೆ ಇದ್ದಂತಹ ಒಂದಾನೊಂದು ಹೊಸ ಕ್ಷೇತ್ರವನ್ನು ಉತ್ತು ಫಲವತ್ತಾಗಿ ಮಾಡಿ ಆಲ್ಲ ಕ್ರಾಂತಿ ಬೀಜವನ್ನು ಬಿತ್ತಿದನು. ರಷ್ಯಾದ ಕ್ರಾಂತಿಕಾರರ ಶ್ರೇಣಿಗೆ ಇಲ್ಲ ಪ್ರಧಾನ ಸ್ಥಾನವನ್ನು ಕೊಡಬೇಕಾದರೆ ಅದು ಲೆನಿನ್ನನಿಗೆ ಸಲ್ಲತಕ್ಕದೆಂದು ಧಾರಾಳವಾಗಿ ಹೇಳಬಹುದು.

ಬರುವ ವಾರ:—ಲಿಯೋ ಟ್ರಾಟ್‌ಸ್ಕಿ.

Degrees: Books: Medicines.

Free H. L. M. S; R. M. B. H. M. D etc. Free Homeo-Ayur-Unani-Naturo degrees by post also—Practitioners also get soon. Homeo Materiamedica, Rs. 5, Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd)

P. O. MAHUVA. (Kathiawar Dt. India)

ಒಂದು ದೃಶ್ಯ

ಹೀಗೇಕೆ?

ಬರೆದವ:

ಶ್ರೀ. ರಾಮಕೃಷ್ಣ ಶೆಟ್ಟಿ, ಕಾಸರಗೋಡು.

●

'ಅಮ್ಮಾ! ....ಏನಮ್ಮಾ ಇದೆಲ್ಲ ವೇಷ! ....?'

'ಇದೆಲ್ಲ ದಸರೆಯ ವಿನೋದ ನೋಡು! '

'ಅಂದರೆ!....ಅವರೇಕೆ ಎಲ್ಲಾ....ಬಣ್ಣ ಹಚ್ಚಿಕೋತ್ತಾರೆ!....?'

'ಏನೋಪ್ಪ.. .ಚಂದಕ್ಕೆ! ...'

"ಅಮ್ಮ!....ಅವರೇಕೆ ಇಲ್ಲಿಗೆ ಬರೋಲ್ಲಽ!....?"

"ನಂಗೊತ್ತಿಲ್ಲ!........ನೀನುಮ್ಮಿರು....ಅಂದ್ರೆ ..."

ತಾಯಿ ಮತ್ತು ಎಳೆಗೂಸು ಕಿರುಮನೆಯೊಂದರೆದುರು ಕುಳಿತಿದ್ದು, ದಸರೆಯ ವಿನೋದ ವೇಷಗಳನ್ನು ನೋಡುತ್ತಲಿದ್ದರು. ಒಮ್ಮೆ ಸಿರಿತನದಲ್ಲಿಯೇ ಮೆರೆದವರು ಇಂದು ಬಡತನದ ಕೋಟೆಲೆಗೆ ಸಿಲುಕಿ ಬಳಲುತ್ತಿರುವರು ಪಾಪ ದಸರೆಯ ವೇಷಗಳಿಂದಲೂ ತಿರಸ್ಕರಿಸಲ್ಪಟ್ಟರು. ಇವರೆಲ್ಲಿಂದ ಕಾಸುಕೊಡಬಲ್ಲರವರಿಗೆ? ಅವರಿಂದ ಈಗ ಬರುತ್ತಲಿರುವ ವೇಷಗಳು ಮನಸ್ಸಾಕ್ಷಿಗೆ ವಿರೋಧವಾದವುಗಳು, ವೇಷಹಾಕಿಕೊಂಡವನೇ ತಾನು ಮಾಡುವ ಕೆಲಸವು "ಯೋಗ್ಯ" ಅಥವಾ "ಅಯೋಗ್ಯ" ಎಂಬುದನ್ನು ನೆನೆಯನು. ಬರಿಯ ಧನದಾಶೆಗಾಗಿಯಲ್ಲವೇ ಇವುಗಳು? ಬಡವರಿಗೆ ಇವುಗಳು—ಹೇಗೆ ವಿರಹಿಗೆ ಚಂದ್ರಮನು ಬೆಳಗಲು ಮನಸ್ಸು ತಳಮಳಗೊಳ್ಳುತ್ತದೋ ಹಾಗೇ—ದುಃಖಮಯವಾಗಿದೆ. ಹೃದಯವು ಒಡೆಯದೇ ಇರದು. ಕೆಲವೇಳೆ—ಹಿಂದಿನ ನೆನಪು ಹುಟ್ಟಿಸುತ್ತವೆ. ಅಂತೇ ಆ ಬಾಲನ ತಾಯಿಯು ಅಳುತ್ತ ಕುಳಿತುಕೊಂಡುದಾಯಿತು ....

"ಅಮ್ಮ!........"ಬಾಲಕನೂ ಅನುತ್ತ, ಮತ್ತೊಮ್ಮೆ ಸಂತೋಷದಿಂದ, "........ನನಗೊಂದು ವೇಷ ಹಾಕತೀಯಾ ಅಮ್ಮಾ! ...? ನಾನೂ ಹಾಗೇ ಕುಣೀತೀನೆ...."

"ಇದೇ ಒಂದು ವೇಷ ನೋಡು!....." ಎಂದು ಬಾಲಕನ ಹರಕು ಚಿಂದಿ ಬಟ್ಟೆಯನ್ನು ತೋರುತ್ತ,...."ಉದರದ ಪಾಡಿಗಾಗಿ ....ನಮ್ಮ ಕುಣಿತ........" ಎಂದು ಅತ್ತಳು, ಮತ್ತೂ ಜೋರಾಗಿ.

"ಏಕಮ್ಮಾ!....ಅಳುತೀಯಾ ಽ.. ಒಂದಿಗೆ ತಾನೂ ಅಳಲು ಷುರುಮಾಡಿದನು. ಏಕೆಂದವನಿಗರಿಯದು.

"ಇಲ್ಲ, ಅಳುವುದಿಲ್ಲ........" ಕಣ್ಣೀರೊರಸಿಕೊಳ್ಳುತ್ತ, "ಕಂದ!...." ಎಂದು ಒಮ್ಮೆ ಬಾಲಕನನ್ನು ಮುದ್ದಿಟ್ಟು, ಮತ್ತೆ—"ನೀನು....ತುಸು ಹೊತ್ತು ಹೊರಗೆ ಆಡ್ತಾ ಇರಪ್ಪಾ! ನಿನಗೆ....ನಾನು ಮತ್ತೆ.... ತಿಂಡಿಕೊಡುತ್ತೇನೆ...." ಎಂದು ಮುಂದುವರಿಸಿದಳು.

ಸಂತೋಷದಿಂದ ನಗುತ್ತ ಬಾಲಕನು ಹೊರಹೋದನು.

)( )( )( )(

ಓಡುತ್ತೋಡುತ್ತ, ಬಾಲಕನು ಮರಳಿ ಅಮ್ಮನಿದ್ದೆಡೆಗೆ ಬಂದನು—'ಅಮ್ಮಾ ನನ್ನ ಹೊಸ ಅಂಗಿಯೆಲ್ಲಿ. ..?'—ಎನ್ನುತ್ತಾ....

'ಏಕಪ್ಪಾ!?'

'ಅಗೋ ನೋಡು! ಜಟಜಕ್ಕನ ಮಗ ರಾಮುನೂ....ಹೊಸ ಉಡುಪುಗಳನ್ನು ತೊಟ್ಟುಕೊಂಡು ಬಂದಿದ್ದಾನೆ ಆಟಕ್ಕೆ! ಅಮ್ಮ! ಎಷ್ಟು ಚಂದ ಕಾಣ್ತಾನೆ ನೋಡು!....ನನಗೂ ಕೊಡಮ್ಮ!....ಯಾರು ಚಂದ ನೋಡುವ!........?

ಬಾಲಕನ ತಾಯಿ ಒಮ್ಮೆ ಧಾರಾಕಾರವಾಗಿ ಕಣ್ಣೀರು ಸುರಿಸಿದಳು. ದುಃಖೋದ್ರೇಕದಲ್ಲಿ ಹೃದಯದ ಬೇಗೆಯ ಬಿಸುಸುಯ್ಯಲರು, 'ವಿಧೀ!' ಎಂಬ ಉದ್ಗಾರದಿಂದ ಹೊರಸೂಸಿತು, ಮಾತ್ರ; ನೀರವ, ಮಾತಿಲ್ಲದೇ ಉಳಿದಿದ್ದ ತಾಯಿಯನ್ನು ಕಂಡು ಆಚ್ಚರಿಯಿಂದ ಒಮ್ಮೆ ಅವಳ ಮೊಗವನ್ನೇ ಮಿಣಮಿಣನೆ ನೋಡುತ್ತ ನಿಂತುಬಿಟ್ಟನು—ಇನ್ನು ತನ್ನಿಂದ ಬೇಸರವಾಗಬಾರದೆಂದೋ........?....'ಅಮ್ಮಾ, ಆಡಿಕೊಂಡು ಬಂದೆನಲ್ಲಾ—ತಿಂಡಿ!........?' ಎಂದನು ಕಿರುದನಿಯಿಂದ.

ಬದಲು ಉತ್ತರವಿಲ್ಲ.—ಮೊದಲಿನಂತೆಯೇ ದುಃಖೋದ್ಗಾರಗಳು!........ಹೀಗೇಕೆ? ....

ಅಂತೂ ಇದೊಂದು ದೃಶ್ಯ!..........

General Assurance Society Ltd.

ಹಿಂದೂದೇಶದ ಪ್ರಮುಖ ವಿಮಾ ಕಂಪೆನಿ:

ಜನರಲ್ ಎಶ್ಯೂರೆನ್ಸ್ ಸೊಸೈಟಿ

ಲಿಮಿಟೆಡ್.

ಪ್ರಧಾನ ಆಫೀಸು:— ಅಜ್ಮೀರ್ ಸ್ಥಾಪನೆ **1907**

- ಸಂತೃಪ್ತಿ ಹೊಂದಿರುವ **50,000** ಪೊಲಿಸಿದಾರರೇ ನಮ್ಮ ಉತ್ಕೃಷ್ಟ ಪ್ರಶಸ್ತಿ ಪತ್ರ
- ಎಲ್ಲಾ ವರ್ಗದವರ ಪ್ರತಿಯೊಂದು ಆವಶ್ಯಕತೆಗೂ ಅನುಕೂಲವಾದ ಪೊಲಿಸಿಗಳು.
- ಏಜನ್ಸಿ ಶರ್ತಗಳು: ಉದಾರ ಮತ್ತು ಲಾಭಕರ

ಹೆಚ್ಚಿನ ವಿವರವನ್ನು ಈ ಕೆಳಗಿನವರಿಂದ ಪಡೆಯಬಹುದು:

ಜನರಲ್ ಮೆನೇಜರ್, ಅಜ್ಮೀರ್,

ಅಥವಾ, ಶಾಖಾ ಮೇನೇಜರ್:—ಮದ್ರಾಸ್, ಹುಬ್ಬಳ್ಳಿ, ಬೆಂಗಳೂರು,

ಅಥವಾ, ಚೀಫ್ ಏಜಂಟ್:—ಮಧುರೆ, ರಾಜಮಹೇಂದ್ರಿ, ಸಿಕಂದರಾಬಾದ್, ತಿರುಚಿನಾಪಳ್ಳಿ.

ಅಥವಾ ಒರ್ಗನೈಸರ್: ಔರಂಗಬಾದ್, ಬಳ್ಳಾರಿ, ನೆಲ್ಲೂರು.

Established] [1906

THE

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	**Rs. 486 Lakhs**
Annual income Exceeds	**Rs. 28 Lakhs**
Total Assets Exceed	**Rs. 100 Lakhs**
Total claims paid over	**Rs. 36 Lakhs.**

The oldest and largest Life Assurance Company of South India, having 31 years of record service.

A POLICY IN THE **UNITED INDIA** *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to:—

THE BRANCH MANAGER,
The United India,
Life Assurance Company Ltd.
BLOCK No 2, Felix Pai Bazaar,
BRANCH, MANGALORE, S. K.

OR

K. Keshava Shenoy, M. A.
Organiser, Shantiniketan,
PENTLANDPET,
MANGALORE.

೨೪ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನ

ಶ್ರೀ. ದಿವಾಕರ ರಂಗನಾಥರಾಯರ ಅಧ್ಯಕ್ಷಭಾಷಣದ ಮುಖ್ಯಾಂಶ.

ಈ ಬಾರಿಯ ಕ. ಸಾ ಸಮ್ಮೇಲನವು ಬಳ್ಳಾರಿಯಲ್ಲಿ ಜರಗಿತು. ರಾ. ದಿವಾಕರರು ತನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದುದಕ್ಕೆ ಆಭಾರ ಸೂಚಿಸಿ, ಸಮ್ಮೇಲನದ ಉದ್ಘಾಟನ ಮಾಡಿದ ಸೊಂಡೂರ ಅರಸರಾದ ಶ್ರೀಮಂತ ರಾಜೇಯಶವಂತರಾವ ಘೋರ್ಪಡೆಯವರ ಕೆಲಸವನ್ನು ಪ್ರಶಂಸಿಸಿ ಹೀಗೆಂದರು:—

ಈ ನಮ್ಮ ಸಮ್ಮೇಲನದ ಉದ್ಘಾಟನ ಮಾಡಲಿಕ್ಕೆ ಸೊಂಡೂರ ಅರಸರಾದ ಶ್ರೀಮಂತ ರಾಜೇಯಶವಂತರಾವಘೋರ್ಪಡೆಯವರು ಒಪ್ಪಿ ಆ ಕೆಲಸವನ್ನು ಆತ್ಮೀಯಭಾವದಿಂದ ನಿರ್ವಹಿಸಿದ್ದು ನಮ್ಮೆಲ್ಲರ ಸುದೈವವು. ಹೋದ ವರ್ಷ ಜಮಖಂಡಿಯಲ್ಲಿ ಸಮ್ಮೇಲನ ನಡೆದಾಗ ಅಲ್ಲಿಯ ಮಹಾರಾಜರ ಆಶೀರ್ವಾದವು ದೂರದಿಂದಲೇ ದೊರೆತಿತ್ತು. ಮೈಸೂರ ಮಹಾರಾಜರನ್ನು ಬಿಟ್ಟರೆ, ಈ ವರೆಗೆ ಕನ್ನಡ ಪ್ರಜೆಗಳನ್ನಾಳುತ್ತಿರುವ ಇನ್ನುಳಿದ ರಾಜ ಮಹಾರಾಜರು ಯಾರೂ ಕನ್ನಡದ ಕಡೆಗೆ ವಿಶೇಷವಾಗಿ ಕಣ್ಣೆತ್ತಿ ನೋಡುತ್ತಿರಲಿಲ್ಲ. ಆ ಲೋಪವು ದೂರವಾಗಿ ಈಗ ಪ್ರಜೆಗಳ ನುಡಿಗೆ ಮನ್ನಣೆ ಕೊಡುವ ಕರ್ತವ್ಯವನ್ನು ಸಂಸ್ಥಾನಿಕರು ಮಾಡಲಾರಂಭಿಸಿರುವರು. ಪ್ರಜೆಗಳಿಂದ ತಾವು—ತಮ್ಮಿಂದ ಪ್ರಜೆಗಳಲ್ಲ, ಪ್ರಜೆಗಳಿಗಾಗಿ ತಾವು—ತಮಗಾಗಿ ಪ್ರಜೆಗಳಲ್ಲ—ಎಂಬ ಶಾಶ್ವತ ಸತ್ಯವು ಈಗ ರಾಜರಿಗೆ ಹೆಚ್ಚೆಚ್ಚು ಹೊಳೆಯಲಾರಂಭಿಸಿರುವದು ಸ್ಪಷ್ಟವು. ಇದು ಒಳ್ಳೆಯ ಶುಭಲಕ್ಷಣ. ಈ ಬಗ್ಗೆ ನಾನು ಅವರನ್ನು ಅಂತಃಕರಣಪೂರ್ವಕವಾಗಿ ಅಭಿನಂದಿಸದೆ ಇರಲಾರೆನು. ಈ ಸೌಹಾರ್ದವು ಹೆಚ್ಚು ಬೆಳೆಯುತ್ತ ಹೋದಲ್ಲಿ ಆಯಾ ರಾಜರಿಗೂ ಕನ್ನಡ ಪ್ರಜೆಗಳಿಗೂ ಹೆಚ್ಚಿನ ಪ್ರೇಮ ಹುಟ್ಟಾಗುವದು ಮತ್ತು ಕನ್ನಡದ ಅಡಿ ಮುಂದೆ ಬೀಳುವುದರಲ್ಲಿ ಸಂಶಯವಿಲ್ಲ.

)( )( )( )(

ನುಡಿಯ ಮಹತ್ವ

ಮನುಷ್ಯನ ಪ್ರಗತಿಗೆ ಭಾಷೆಯಂಥ ಸಾಧನವು ಇನ್ನೊಂದು ಯಾವುದೂ ಇಲ್ಲ. ಭಾಷೆ ಬೆಳೆಯದೆ ಹೋಗಿದ್ದರೆ ಮನುಷ್ಯನ ವಿಕಾಸವೇ ಆಗುತ್ತಿರಲಿಲ್ಲ ಎಂದು ಒಬ್ಬ ದೊಡ್ಡ ಪಂಡಿತನು ಹೇಳಿರುವನು. ಮನುಷ್ಯನ ಮಿದುಳಿನ ವಿಕಾಸವು, ಅವನ ಭಾವನೆಗಳ ಬೆಳವಣಿಗೆಯು ಆಯಾ ನುಡಿಯ ಬೆಳವಣಿಗೆಯನ್ನೇ ಅವಲಂಬಿಸಿವೆ. ನುಡಿ ಅಥವಾ ಭಾಷೆ ಇಲ್ಲದೆ ವಿಚಾರ ಮಾಡಿರಿ ಎಂದು ನಮಗೆ ಹೇಳಿದರೆ ನಮ್ಮ ಗತಿಯೇನು? ಅದೇ ರೀತಿ ಭಾಷೆಯ ಸಹಾಯವಿಲ್ಲದೆ ಅಥವಾ ನಮಗೆ ಬರದಿರುವ ಭಾಷೆಯಿಂದ ನಮ್ಮ ವಿಚಾರ ಹಾಗೂ ಭಾವಗಳನ್ನು ವ್ಯಕ್ತಪಡಿಸಬೇಕು ಎಂದು ಯಾರಾದರೂ ಹೇಳಿದರೆ, ಕಾಲಿಲ್ಲದೆ ನಡೆಯಿರಿ, ಕಣ್ಣಿಲ್ಲದೆ ನೋಡಿರಿ ಎಂದು ಹೇಳಿದಷ್ಟೇ ಅದು ಹಾಸ್ಯಾಸ್ಪದವಾಗುವದು. ಇದಲ್ಲದ ಭಾಷೆಯೆಂಬುದು ಮೇಲಂಗಿಯಂತೆ ಬೇಕಾದಾಗ ಹಾಕಿ ಬೇಕಾದಾಗ ತೆಗೆದೊಗಯಲು ಬರುತ್ತಿದ್ದರ ಅಥವಾ ಬೇಕಾದ ವಿಧದ ಅಂಗಿಗಳನ್ನು ಕೊಂಡುಕೊಳ್ಳಲು ಬರುವಂತೆ ವಿವಿಧ ಭಾಷೆಗಳನ್ನು ಬೇಕಾದ ಹಾಗೆ ಪೇಟೆಯಲ್ಲಿ ಕೊಂಡು ಉಪಯೋಗಿಸಲು ಬರುವಂತಿದ್ದರೆ ಭಾಷೆಗೆ ಮಹತ್ವ ಕೊಡುವ ಕಾರಣವಿದ್ದಿಲ್ಲ. ಭಾಷೆಯ ಸ್ಥಿತಿಯು ಹಾಗಿಲ್ಲ. ನಮ್ಮ ನಮ್ಮ ಭಾಷೆಯೆಂಬುದು ನಮ್ಮ ಮೈದೊಗಲಿನಂತೆ ನಮ್ಮ ಶರೀರದೊಡನೆಯೇ ಬೆಳೆದಿದೆ. ಅದನ್ನು ಸಿಕ್ಕಹಾಗೆ ಅದಲು ಬದಲು ಮಾಡಲು ಬರುವಂತಿಲ್ಲ. ಅದರ ಮೇಲೆ ಇನ್ನೊಂದು ಅಥವಾ ಅನೇಕ ಅಂಗಿಗಳನ್ನು ಹಾಕಿಕೊಳ್ಳಬಹುದು. ಆದರೆ ಮೂಲ ಮೈಯೊಂದು ಇದ್ದೇ ಇರುವದು. ಹಾಗೆ ನಮ್ಮ ನುಡಿಯೆಂಬುದೊಂದು ಇದ್ದೇ ಇರುವದು. ಅದನ್ನುಪಯೋಗಿಸಿದಂತೆ ನಾವು ಇನ್ನಿತರ ಯಾವ ಭಾಷೆಗಳನ್ನೂ ಉಪಯೋಗಿಸಲಾರೆವು.

ಇದಲ್ಲದೆ ಸಂಸ್ಕೃತಿಯೆಂಬುದೆಲ್ಲ ನಮ್ಮ ನಮ್ಮ ಭಾಷೆಯ ಮುಖಾಂತರವೇ ತತ್ಸಾಧನದಿಂದಲೇ ಬೆಳೆದಿರುತ್ತದೆ. ಸಂಸ್ಕಾರದ ಮೂಲಕ ಮೂಲದಲ್ಲಿ ಆದ ಮಾರ್ಪಾಟುಗಳೇ ಸಂಸ್ಕೃತಿಯೆನಿಸುವುದು. ಆ ಸಂಸ್ಕೃತಿಯೆಲ್ಲ ಭಾಷಾ ಮೂಲಕವು ಭಾಷೆಯ ಆಧಾರದಿಂದ ಆದುದು. ಶಿಲ್ಪಕಲೆ, ಚಿತ್ರಕಲೆ, ಧರ್ಮಶಾಸ್ತ್ರ, ನೀತಿಶಾಸ್ತ್ರ ಮುಂತಾದುವುಗಳಲ್ಲಿ ನಮ್ಮ ಸಂಸ್ಕೃತಿಯು ಕಂಡು ಬರುವದು. ಆದರ ಅದೆಲ್ಲ ಮೈದೋರುವದು ಹೇಗೆ? ನಮಗೆ ತಿಳಿಯುವದು ಹೇಗೆ? ಎಂಬುದನ್ನು ವಿಚಾರಿಸಿದರೆ ಭಾಷಾ ಮೂಲಕವಾಗಿ ಎಂದೇ ಕಂಡು ಬರುವದು. ನಮ್ಮ ಅತ್ಯುಚ್ಚವಾದ ವೇದಾಂತ ತತ್ವವಿಚಾರವು ಭಾಷಾ ಮೂಲಕವಿರುವದು. ನಮ್ಮ ಧರ್ಮಶಾಸ್ತ್ರವೂ ಅದೇ ರೀತಿ. ಕಲಾಕಸಬುಗಳ ಜ್ಞಾನ ಪ್ರಸಾರವು ಅದೇ ರೀತಿ, ಒಟ್ಟಿಗೆ ಎಲ್ಲವೂ ಅದೇ ರೀತಿ. ಭಾಷೆಯೆಂಬುದು ಅನ್ಯರಿಗೆ ನಮ್ಮ ವಿಚಾರಗಳನ್ನು ತಿಳಿಸುವಾಗ ಮಾತ್ರ ಬೇಕು. ನಮ್ಮಷ್ಟಕ್ಕೆ ನಾವೇ ವಿಚಾರ ಮಾಡಬೇಕಾದರೆ ಇಲ್ಲವೇ ಯಾವದೊಂದು ಅನುಭವ ಪಡೆಯಬೇಕಾದರೆ ಅದು ಅನವಶ್ಯಕವೆಂದು ಕೆಲವರ ಕಲ್ಪನೆಯಿರಬಹುದು. ಆದರೆ ಹಾಗೆ ಇಲ್ಲ. ನಮ್ಮಷ್ಟಕ್ಕೆ ನಾವೇ ವಿಚಾರ ಮಾಡಬೇಕಾದರೂ ಯಾವದೊಂದು ವಿಷಯವನ್ನು ಅನುಭವಿಸಿ ತಿಳಿದುಕೊಳ್ಳಬೇಕಾದರೂ ಭಾಷೆಯೆಂಬುದು ಬೇಕೇ ಬೇಕು.

ಇನ್ನು ಭಾಷೆ ಮತ್ತು ಭಾವ, ಭಾಷೆ ಮತ್ತು ವಿಚಾರ, ಇವುಗಳ ಸಂಬಂಧವನ್ನು ಇನ್ನಷ್ಟು ಸೂಕ್ಷ್ಮದ ... ಪರೀಕ್ಷಿಸುವ. ಭಾವವ್ಯಕ್ತಿಗೆ ವಿಚಾರವ್ಯಕ್ತಿಗೆ ಭಾಷೆಯು ಪೂರೈಸುವುದಿಲ್ಲ, ಸಾಕಾಗುವದಿಲ್ಲ ಎಂದು ಹೇಳಬಹುದು. ವಿಚಾರ, ಅನುಭವ, ಭಾವ ಇವು ಚಿದಾಕಾಶದಲ್ಲಿ ಮೋಡಗಳಂತೆ ವಿವಿಧಾಕಾರಗಳನ್ನು ತಾಳುತ್ತ ಮುಂದೋಡುತ್ತಿವೆ. ಭಾಷೆಯು ಅವುಗಳಿಗೆ ಕಟ್ಟುನಿಟ್ಟಾದ ರೂಪವನ್ನು ಕೊಡಬಯಸಿ ಅವುಗಳನ್ನು ತಿಳಿದುಕೊಳ್ಳಲು ಹಾಗೂ ತಿಳಿಸಲು ಹವಣಿಸುತ್ತದೆ. ಭಾವ ಭಾಷೆಗಳಲ್ಲಿ ನಡೆದ, ವಿಚಾರ ಮತ್ತು ಭಾಷೆ ಇವುಗಳಲ್ಲಿ ನಡೆವ ಈ ಮೇಲೋಟದ ಚಿತ್ರವೇ ಈ ನಮ್ಮ ಜೀವನವನ್ನು ತಿಳಿದುಕೊಳ್ಳುವ ಪ್ರಯತ್ನದ ಪ್ರತಿಬಿಂಬವೆಂದು ಹೇಳಬಹುದು. ಎಷ್ಟರ ಮಟ್ಟಿಗೆ ನಮ್ಮ ಭಾಷೆಯಿಂದ ನಾವು ನಮ್ಮ ವಿಚಾರ ಮತ್ತು ...ವಾಂತರಗಳಿಗೆ ರೂಪುಗೊಡಬಲ್ಲೆವೋ, ಅಷ್ಟರ ಮಟ್ಟಿಗೆ ಮಾತ್ರ ನಮಗೆ ಆ ವಿಷಯಗಳು ಸ್ಪಷ್ಟವಾಗಿ ಬುದ್ಧಿಗಮ್ಯವಾಗಿರುವವೆಂದು ಹೇಳಬಹುದು. ಯಾವುದಕ್ಕೆ ನಾವು ಶಬ್ದದಿಂದ ರೂಪುಗೊಡಲಾರೆವೋ ಅದು ನಮಗೆ ಚೆನ್ನಾಗಿ ಬುದ್ಧಿಗಮ್ಯವಾಗಿಲ್ಲವೆಂದು ಹೇಳಿದರೆ ತಪ್ಪಾಗದು. ಈ ರೀತಿ ಬುದ್ಧಿಯ ವಿಕಾಸಕ್ಕೆ ಭಾಷೆಯೇ ಮುಖ್ಯ ಆಧಾರ, ಭಾವವ್ಯಕ್ತಿಗೆ ಭಾಷೆಯೇ ಮುಖ್ಯ ಸಾಧನ.

ನಾವು ಸ್ವತಃ ವಿಚಾರ ಮಾಡಲು ಭಾಷೆಯ ಅವಶ್ಯಕತೆಯಿದ್ದಂತೆಯೇ ಇಬ್ಬರ ನಡುವೆ ಪರಸ್ಪರ ವ್ಯವಹಾರ, ವಿಚಾರ, ಚರ್ಚೆ ವಿಚಾರ ವಿನಿಮಯ ಇತ್ಯಾದಿ ನಡೆಯಬೇಕಾದರೆ ಇಬ್ಬರಿಗೂ ಸಾಮಾನ್ಯವಾದ ಭಾಷೆಯು ಅತ್ಯವಶ್ಯ. ಭಾಷೆಯೆಂಬುದು ಎರಡು ಮನಸ್ಸುಗಳ ನಡುವಿನ ಸೇತುವೆ. ಅದು ವಿಚಾರ ಹಾಗೂ ಭಾವಗಳ ವಾಹನವು. ಇದಲ್ಲದೆ ಶಬ್ದದಲ್ಲಿ, ಭಾಷೆಯಲ್ಲಿ ಪ್ರಚಂಡವಾದ ಸಾಮರ್ಥ್ಯವಿದೆ; ನಿರ್ಮಾಣ ಶಕ್ತಿಯಿದೆ. ಆದುದರಿಂದ ಉಪನಿಷತ್ತುಗಳಲ್ಲಿ ಒಂದೆಡೆ ಶಬ್ದವೇ ಬ್ರಹ್ಮವೆಂದು ವರ್ಣನೆಯಿದೆ. ಯೋಗ್ಯವಾದ ಶಬ್ದಗಳನ್ನುಪಯೋಗಿಸಿದರೆ ಮಾನವ ಹೃದಯವನ್ನು ಬೇಕಾದ ಹಾಗೆ ಕುಣಿಸಬಹುದು, ಮಾನವ ಭಾವ ವೀಣೆಯನ್ನು ಬೇಕಾದ ಹಾಗೆ ನುಡಿಸಬಹುದು, ಮಾನವ ಬುದ್ಧಿಯನ್ನು ಬೇಕಾದಷ್ಟು ಬೆಳಕಿನಿಂದ ತುಂಬಿ ಬಿಡಬಹುದು

)( )( )( )(

ನುಡಿಯ ತಾಕಲಾಟ

ನುಡಿಯ ಮಹತ್ವವನ್ನು ಹೇಳಿದಂತಾಯಿತು. ಆದರೆ ದುರ್ದೈವದಿಂದ ಈ ನಮ್ಮ ಭಾರತ ರಾಷ್ಟ್ರದಲ್ಲಿ ಒಂದೇ ನುಡಿಯು ಪ್ರಚಲಿತವಿಲ್ಲ. ಬಹುಭಾಷೆಗಳು ಪ್ರಚಾರದಲ್ಲಿವೆ. ಮನುಷ್ಯನಿಗೆ ನಾಲಿಗೆ ಒಂದಾದರೂ ನುಡಿಗಳು ಬಹಳ ಇವೆ! ಈ ಭಾಷಾ ಸಮಸ್ಯೆಯನ್ನು ನಾವು ತಾತ್ವಿಕ ರೀತಿಯಿಂದ ಬಿಡಿಸಿ ಆ ಕ್ರಮವನ್ನು ವ್ಯವಹಾರದಲ್ಲಿ ತರಲಿಕ್ಕೇ ಬೇಕು

ಹಿಂದುಸ್ಥಾನವು ಒಂದೇ ಒಂದು ರಾಷ್ಟ್ರವಿದ್ದರೂ ಅದು ಬಹಳ ದೊಡ್ಡದಿರುವದರಿಂದ ಆಡಳಿತದ ಅನುಕೂಲತೆಗಾಗಿ, ಅದನ್ನು ... ಪ್ರಾಂತ ಭಾಗಗಳಲ್ಲಿ ವಿಭಾಗಿಸುವದು ಅತ್ಯವಶ್ಯಕವಾದುದು. ಈಗಲೂ ಅದು ೧೧ ಮುಖ್ಯ ಪ್ರಾಂತಗಳಲ್ಲಿ ವಿಭಾಗಿಸಲ್ಪಟ್ಟಿದೆ. ಅವುಗಳಲ್ಲಿ ಹಲವು ಯೋಗ್ಯ ವಿಭಾಗಗಳಾಗಿವೆ. ಆದರೆ ಉಳಿದ ವಿಭಾಗಗಳೆಲ್ಲ ಕೇವಲ ಐತಿಹಾಸಿಕ ಕಾರಣಗಳ ಮೂಲಕ ಇಲ್ಲವೆ ಯದೃಚ್ಛೆಯಿಂದ ಆದವುಗಳೆಂದು ಹೇಳಬಹುದು. ಒಂದು ತತ್ವವನ್ನನುಸರಿಸಿ ಪ್ರಜಾಪ್ರಭುತ್ವದ ಪದ್ಧತಿಗೆ ಅನುಕೂಲವಾಗುವಂತೆ ಈ ಪ್ರಾಂತಗಳನ್ನು ಮಾಡುವದಾದರೆ ಭಾಷಾನುಗುಣ ಪ್ರಾಂತರಚನೆಯಾಗಬೇಕೆಂದು ರಾಷ್ಟ್ರೀಯ ಮಹಾಸಭೆಯವರು ಈಗ ೧೮ ವರ್ಷಗಳಾಚೆ ನಿಶ್ಚಯಿಸಿ ತದನುಸಾರವಾಗಿ ಅವರು ತಮ್ಮ ಆಡಳಿತವನ್ನು ನಡೆಸಿಬಿಟ್ಟಿರುವರು. ತಮಗೆ ಅಧಿಕಾರ ದೊರೆತ ಮುಂಚೆ ಮದರಾಸ ಪ್ರಾಂತಗಳ ವಿಧಿ ಮಂಡಲಗಳಲ್ಲಿ, ಆ ತತ್ವಕ್ಕೆ ಬೆಂಬಲ ಕೊಡುವ ಗೊತ್ತುವಳಿಗಳನ್ನು ಸ್ವೀಕರಿಸಿ ಆಯಾ ಮಂತ್ರಿ ಮಂಡಲದವರು ಬ್ರಿಟಿಷ್ ಸರಕಾರಕ್ಕೆ ಕಳಿಸಿಕೊಟ್ಟಿರುವರು. ಈ ತತ್ವವನ್ನು ಬ್ರಿಟಿಷ ಸರಕಾರದವರಾದರೂ ಮನ್ನಿಸಿರುವರು. ಆದರೆ ಅದನ್ನು ಆಚರಣೆಯಲ್ಲಿ ತರಲು ಇನ್ನೂ ಹಿಂತೆಗೆಯುತ್ತಿರುವರು!

To All Patrons, Friends and Well-wishers.

The Directors, Officers and Staff of the CANARA BANK join in sending you their hearty Greetings for the New Year. We thank you for your co operation and help which has enabled the Bank to build up a record of steady progress. On our part we assure you of the same standard of courteous, satisfactory and personal service and trust that we shall continue to deserve your good will and patronage

ESTD 1906

CANARA BANK
LIMITED

ಇನ್ನು ಭಾಷಾನುಗುಣವಾಗಿ ಪ್ರಾಂತಗಳನ್ನು ಮಾಡಿದರೆ ಅವು ಬಹಳವಾಗಬಹುದು ಎಂದು ಮುಂತಾಗಿ ಹಲವರು ವಾದಿಸುವರು. ಯಾಕಂದರೆ ಹಿಂದುಸ್ಥಾನದಲ್ಲಿ ೨೨೩ ಭಾಷೆಗಳಿರುವವೆಂದು ಹೇಳುವರು! ಆದರೆ ಇವನ್ನು ಕೇಳಿ ನಾವು ಗಾಬರಿಗೊಳ್ಳುವ ಕಾರಣವಿಲ್ಲ. ಇಲ್ಲಿ ಟಾಯ್ನುಡಿ, ತಾಯ್ನುಡಿ, ತೊಡಲ್ನುಡಿ, ಕಾಡ್ನುಡಿ ಮುಂತಾದುವೆಲ್ಲ ಕೂಡಿ ೨೨೩ ಇರುವವು! ಆದರೆ ಲಿಪಿ ಸಾಹಿತ್ಯಾದಿಗಳಿಂದೊಡಗೂಡಿದ ಒಂದು ಪ್ರಾಂತದಷ್ಟು ವಿಸ್ತಾರದಲ್ಲಿ ಪ್ರಚಲಿತವಿದ್ದ ಭಾಷೆಗಳು ೧೫ಕ್ಕಿಂತ ಹೆಚ್ಚು ಹೊರಡುವದಿಲ್ಲ. ಆದುದರಿಂದ ಕರ್ನಾಟಕ, ಮಹಾರಾಷ್ಟ್ರ, ಗುಜರಾಥ, ತಮಿಳು, ಆಂಧ್ರ, ಮಲಯಾಳ, ಮಧ್ಯಪ್ರಾಂತ, ಉತ್ಕಲ, ಸಿಂಧ, ಬಂಗಾಲ, ಆಸಾಮು, ಬಿಹಾರ, ಯುಕ್ತಪ್ರಾಂತ, ಪಂಜಾಬ ಮತ್ತು ವಾಯವ್ಯ ಪ್ರಾಂತ ಈ ರೀತಿ ಪ್ರಾಂತಗಳನ್ನು ಮಾಡುವದು ಅಶಕ್ಯವೂ ಇಲ್ಲ; ಕಠಿಣವೂ ಇಲ್ಲ. ರಾಷ್ಟ್ರೀಯ ಮಹಾಸಭೆಯು ಸಂಪೂರ್ಣ ಅಧಿಕಾರವನ್ನು ಪಡೆದೊಡನೆ ಆ ರೀತಿ ಪ್ರಾಂತ ರಚನೆಯೂ ಆಗುವದು ಹಾಗೆ ಆದ ಬಳಿಕ ಈ ಪ್ರಶ್ನೆಯನ್ನು ಬಿಡಿಸುವದು ಹೆಚ್ಚು ಸುಲಭವಾಗಬಹುದು. ಆದರೆ ಅದನ್ನು ಹೇಗೆ ಬಿಡಿಸಬೇಕೆಂಬದನ್ನು ನಾವು ಈಗಲೇ ವಿಚಾರಿಸಿ ರಾಷ್ಟ್ರೀಯ ಸಭೆಯವರು ಯಾವ ಭಾಷಾ ಪ್ರಾಂತಗಳನ್ನು ರಚಿಸಿರುವರೋ ಆ ಪ್ರಾಂತಗಳಲ್ಲಿ ಆ ರೀತಿ ನಮ್ಮ ಪುಟ್ಟಿಗೆ ನಡೆಯ ತೊಡಗಿದರೆ ಮುಂದೆ ಎಷ್ಟೋ ಹಗುರಾಗುವದು.

)( )( )(

ಇನ್ನು ಇಂಗ್ಲೀಷಿನ ವಿಷಯ. ನಾವು ಇತರ ರಾಷ್ಟ್ರಗಳಿಗೆ ಹೋಗಬೇಕಾದರೆ ಇಲ್ಲವೆ ಯಾವದೊಂದು ವಿಷಯದ ವಿಶೇಷ ಅಭ್ಯಾಸ ಮಾಡಬೇಕಾಗಿದ್ದರೆ ಸದ್ಯಕ್ಕೆ ಇಂಗ್ಲೀಷಿನ ಆವಶ್ಯಕತೆಯಿರುವದು. ಕೊನೆಯ ವರೆಗೂ ಇಂಗ್ಲೀಷು ಇದೇ ರೀತಿ ಈಗಿನಷ್ಟೇ ಅವಶ್ಯವೆಂದು ತಿಳಿಯುವವನು ನಾನಲ್ಲ. ಕಾಲವಶಾತ್ ಇಂಗ್ಲೀಷರು ಇಲ್ಲಿ ಬಂದು ಇಲ್ಲಿ ರಾಜ್ಯವಾಳಲಾರಂಭಿಸಿದರೆಂದು ನಾವೆಲ್ಲರೂ ಇಂಗ್ಲೀಷಿನ ಬೆನ್ನು ಬಿದ್ದೆವು. ಜಪಾನಿನಂತೆ ನಾವೂ ಸ್ವತಂತ್ರ ಇಳಿದಿದ್ದರೆ ನಮ್ಮಲ್ಲಿಯ ಚಿಲ ಕೆಲವರು ಮಾತ್ರ ಇಂಗ್ಲೀಷ, ಜರ್ಮನ, ಫ್ರೆಂಚ ಇತ್ಯಾದಿ ಪಾಶ್ಚಾತ್ಯ ಭಾಷೆಗಳನ್ನು ಕಲಿತು ಅವುಗಳಲ್ಲಿಯ ಜ್ಞಾನವನ್ನೆಲ್ಲ ಸೂರೆಗೊಂಡು ಪ್ರಾಂತ ಭಾಷೆಗಳಲ್ಲಿ ಅದನ್ನು ತಂದಿಕ್ಕುತ್ತಿದ್ದರು. 'ಇಂಗ್ಲೀಷ ಕಲಿಯದೆ ಇದ್ದರೆ ನಮ್ಮ ರಾಷ್ಟ್ರವು ಸುಧಾರಿಸುತ್ತಿರಲಿಲ್ಲ, ಈ ಹೊಸ ಕಲ್ಪನೆಗಳು ನಮಗೆ ಬರುತ್ತಿರಲಿಲ್ಲ' ಎಂಬ ಮಾತಿನಲ್ಲಿ ನನ್ನ ವಿಶ್ವಾಸವಿಲ್ಲ. ಸ್ವಾತಂತ್ರ್ಯಾದಿ ಕಲ್ಪನೆಗಳು ಈಗಿನ ಯುಗಲಕ್ಷಣಗಳಾಗಿವೆ ಅವು ಭಾಷೆಯನ್ನವಲಂಬಿಸದೆ ಕಾಲವನ್ನವಲಂಬಿಸಿವೆ. ನಮಗೇನೋ ಅವು ಇಂಗ್ಲೀಷಿನ ಮುಖಾಂತರ ಬಂದಿವೆ. ತುರ್ಕಸ್ಥಾನ, ಇರಾಣ, ಚೀನ, ಜಪಾನ ಮುಂತಾದ ರಾಷ್ಟ್ರಗಳಿಗೆ ಆವವರ ಭಾಷೆಯ ಮುಖಾಂತರವೇ ನವಚೈತನ್ಯವು ಬಂದಿದೆ. ಆದುದರಿಂದ ನವಯುಗದವರಾದ ನಾವು ಇಂಗ್ಲೀಷೇ ನಮ್ಮ ಅಧಿದೇವತೆಯೆಂದು ತಿಳಿಯ ಕೂಡದು.

ಇಂಗ್ಲೀಷು ನಮಗೆ ಎಷ್ಟೋ ಉಪಕಾರ ಮಾಡಿದೆ. ಇಲ್ಲವೆಂತಲ್ಲ. ನಾನೇನೂ ಇಂಗ್ಲೀಷಿನ ಬಗ್ಗೆ ಕೃತಘ್ನನಾಗಬೆಯ್ಸುವದಿಲ್ಲ. ಆದರೆ ಅದು ಯಾವ ಪದ್ಧತಿಯಿಂದ ಕಲಿಸಲ್ಪಡುತ್ತದೆಯೋ ಹಾಗೂ ಅದಕ್ಕೆ ನಾವು ಯಾವ ಶ್ರೇಷ್ಠ ಸ್ಥಾನವನ್ನು ಕೊಟ್ಟಿರುವೆವೋ ಆ ಮೂಲಕ ನಮಗೆ ಅದರಿಂದ ಅಪಕಾರವೂ ಸಾಕಷ್ಟಾಗಿದೆ ಎಂದು ನಾನು ಹೇಳಬಲ್ಲೆ. ಇಂಗ್ಲೀಷ ಶಿಕ್ಷಿತರದೊಂದು ಬೇರೆ ಜಾತಿಯೇ ನಿರ್ಮಾಣವಾಗಿತ್ತು. ಮೊದಲು ನಮಗೆ ಕನ್ನಡವೆಂದರೆ ತಲೆಚಿಟ್ಟು, ಹಳ್ಳಿಗಳಲ್ಲಿಯ ನಮ್ಮ ಬಂಧುಗಳೆಂದರೆ ತಲೆಶೂಲಿ. ಕನ್ನಡದ ಬಗ್ಗೆ ಇಂಗ್ಲೀಷ ಶಿಕ್ಷಿತರು ಉದಾಸೀನರಿದ್ದಷ್ಟು ಇನ್ನಾರೂ ಇರಲಿಲ್ಲ. ನಮ್ಮ ವಿಚಾರಗಳೆಲ್ಲ ಇಂಗ್ಲೀಷಿನಲ್ಲಿಯೇ ನಡೆಯುವ ಪರಿಪಾಠವಿತ್ತು. ಹೀಗಾಗಿ ಯಾವಾಗಲೂ ಕನ್ನಡದಲ್ಲಿ ಮಾಸಿದ (ಸೆಕೆಂಡ ಹ್ಯಾಂಡ) ವಿಚಾರಗಳನ್ನೇ ನಾವು ವ್ಯಕ್ತಮಾಡುವ ಪ್ರಸಂಗವು ಬರುತ್ತಿತ್ತು. ಹೀಗೆ ಇಂಗ್ಲೀಷರ ಮಾನಸಪುತ್ರರಾದ ನಮ್ಮಂಥವರ ಕಡೆಯಿಂದ ಕನ್ನಡದ ಶೈಲಿ ಸಾಮರ್ಥ್ಯಗಳಿಗೆ ಹೇಗೆ ಸಹಾಯವಾಗಬೇಕು? ಆದರೆ ಆ ಕಾಲವು ಹೋಗುತ್ತ ಬಂದಿದೆ. ಕಳಕೊಂಡ ಕರುವಿನ ಕಡೆಗೆ ಆವು ಧಾವಿಸಿ ಹೋಗುವಂತೆ ಈಗ ನಾವು ಕನ್ನಡದ ಕಡೆಗೆ ಸಾಗುತ್ತಿದ್ದೇವೆ. ಕುಗ್ಗಿದ, ಮುಗ್ಗಿದ, ಮೂಲೆಗುಂಪಾದ ಕನ್ನಡವನ್ನು ಈಗ ಅಭಿಮಾನದಿಂದ ಮುಂದಕ್ಕೆ ತರುವ ಯತ್ನದಲ್ಲಿದ್ದೇವೆ. ಇದು ಈಗ ಕನ್ನಡದ ನವಯುಗಾರಂಭವಾಗಿದೆ. ಇನ್ನು ಕನ್ನಡಕ್ಕೆ ಇಂಗ್ಲೀಷಿನಿಂದ ಭಯವಿಲ್ಲ. ಒಂದು ರೀತಿ ಕನ್ನಡಕ್ಕೆ ಎಂದೂ ಭಯವಿರಲಿಲ್ಲ. ಎಷ್ಟೋ ಪ್ರತಿಕೂಲ ಪರಿಸ್ಥಿತಿಯಲ್ಲಿದ್ದರೂ ಕನ್ನಡವು ತನ್ನ ಸ್ಥಳವನ್ನು ಕಟ್ಟಿಕೊಂಡು ಸ್ಥಿರವಾಗಿ ನಿಂತಿದೆಯೆಂದು ಸೆನ್ಸಸ್ ರಿಪೋರ್ಟು ಸಾಕ್ಷಿಕೊಟ್ಟಿದೆ. ಆದರೆ ಕನ್ನಡದ ಪ್ರಗತಿ ಕುಂಠಿತವಾಗಿತ್ತು. ಸುಶಿಕ್ಷಿತ ಕನ್ನಡಿಗರೇ ಅದನ್ನು ದುರ್ಲಕ್ಷಿಸಿದ್ದರು ಇನ್ನು ಆ ಕಾಲವು ಹೋಗಿದೆ. ಚೆಲುವ ಕನ್ನಡನಾಡು ಉದಯವಾಗಿದೆ, 'ಉದಯವಾಗಲಿ' ಎಂಬ ಪದವು ಈಗ ಹಳೆಯ ಮಾತಾಗಿದೆ.

)( )( )(

(ಮುಂದರಿಯುವದು)

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತವೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತವೆ. ಕ್ರಮ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವದಕ್ಕೆ ಪೂರ್ವದಲ್ಲಿ ಭೋಗಮಾಡುವದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳಿಸುವೆವು ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಬೊಂಬಾಯಿ ಸಮಾಚಾರ

(ಸ್ವಂತ ಬಾತ್ಮಿದಾರರಿಂದ)

ತಾ. 30-12-1938

ಅಧಿವೇಶನ—ದಿ. ನೇಶನಲ್ ಪ್ಲೇನಿಂಗ್ ಕಮಿಟಿಯ ಪ್ರಥಮ ಅಧಿವೇಶನವು ಶ್ರೀ ಜವಾಹರಲಾಲ್ ನೆಹರುರವರ ಅಧ್ಯಕ್ಷತೆಯಲ್ಲಿ ಡಿಶಂಬರ 17ನೇ ತಾರೀಕಿಗೆ ನೆರೆದು, ಜನತೆಯ ಆರ್ಥಿಕ ಜೀವನವನ್ನು ಸದುಪಾಯಗಳಿಂದ 5ಅಥವಾ 10ವರ್ಷಗಳೊಳಗೆ ಒಂದು ಉತ್ತಮ ರೀತಿಗೆ ತರಬೇಕೆಂದು ನಿಶ್ಚಯಮಾಡಿತು.

ಬೆಂಕಿ—ಪರೇಲನಲ್ಲಿರುವ ಚೈನಾ ಸಿಲ್ಕ್ ಮಿಲ್ಲಿಗೆ ಕಳೆದ ರವಿವಾರ ಬೆಂಕಿ ತಗಲಿ ಬಟ್ಟೆ ಮತ್ತು ಮಶಿನರಿಯ ಮೂಲಕ ಒಂದು ಲಕ್ಷ ರೂಪಾಯಿಯಷ್ಟು ನಷ್ಟವಾಗಿದೆಂದು ತಿಳಿದುಬಂದಿದೆ.

ಸಹಜಾನಂದರು:—ಕಾಮಗಾರರ ಮಿತ್ರ ಕಿಸಾನರ ಧ್ಯೇಯವು ಯಾವ ರೀತಿಯಲ್ಲಿ ಒಂದೇಯಾಗಿದೆಯೆಂದೂ, ಇವರೆಲ್ಲರೂ ಜೊತೆಗೂಡಿದ್ದಲ್ಲಿ ಸಾಮ್ರಾಜ್ಯಶಾಹಿಯನ್ನು ಹೊಡೆದೋಡಿಸಲು ಎಷ್ಟು ಸುಲಭವಾಗುವದೆಂದೂ, ಕೋಂಗ್ರೆಸ್ಸು ಇಂದು ಇಂಥ ಉಚ್ಚ ಪದವಿಯನ್ನೇರಲು ಕಾಮಗಾರರು ಮೂಲ ಕಾರಣರಾದರೂ, ಈಗ ಕೋಂಗ್ರೆಸು ಇವರನ್ನು ಲಕ್ಷಿಸದೆ ಜಮೀನ್ದಾರರ ಆಶ್ರಯವನ್ನು ಕೋರುತ್ತಿದೆಂದೂ, ಆಲ್ ಇಂಡಿಯಾ ಕಿಸಾನ್ ಸಭೆಯ ಅಧ್ಯಕ್ಷರಾದಂಥ ಸ್ವಾಮಿ ಸಹಜಾನಂದರವರು ತಾವು ಮುಂಬಯಿಯಲ್ಲಿ ಬಂದಿಳಿದಾಗ ಕಾಮಗಾರರು ತಮಗಿತ್ತ ಸಾರ್ವಜನಿಕ ಸ್ವಾಗತದ ಮಧ್ಯೆ ಹೇಳಿದರು, ಕಾಂಗ್ರೆಸು ಇಂದು ಆಂಗ್ಲಸಾಮ್ರಾಜ್ಯಶಾಹಿಗೆದುರಾಗಿ ಯುದ್ಧ ಹೂಡಲಿ. ಕಿಸಾನರು ಮತ್ತು ಕಾಮಗಾರರು ಯುದ್ಧದ ಮುಂದಾಳುಗಳಾಗಿರುವುದನ್ನು ನೀವು ಆಗಲೇ ಕಾಣುವಿರಿ.

ಡಾ. ಆಂಬೇಡ್ಕರರು—ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯ ಮೂಲಪುರುಷರಾದಂಥಾ ಡಾ| ಆಂಬೇಡ್ಕರರ ಅಮರಘೋಷವು ಹೀಗಿದೆ. ಕೋಂಗ್ರೆಸು ಫೆಡರೇಶನಿಗೆ ವಿರುದ್ಧವಾಗಿ ಆಂದೋಲನ ಹೂಡಿದ್ದಲ್ಲಿ, ನಾವೂ ಆಗಕ್ಕಾಗಿ ಕೋಂಗ್ರೆಸಿಗೆ ಸೇರುವೆವು, ಮಂತ್ರಿಗಳು ರಾಜಿನಾಮೆಕೊಟ್ಟಲ್ಲಿ ಉಂಟಾದ ಮಾಲಿಸ್ಥಿತಿಯಲ್ಲಿ ನಾವು ಸೇರದೆ, ಇತರರನ್ನೂ ಸೇರದ ಹಾಗೆ ಮಾಡುವೆವು. ಕೋಂಗ್ರೆಸು ನಿಜವಾಗಿಯೂ ಆಂಗ್ಲ ಸಾಮ್ರಾಜ್ಯಶಾಹಿಗೆ ವಿರುದ್ಧವಾಗಿ ಹೋದಿದ್ದಲ್ಲಿ, ಈ ಹೊತ್ತಿನಿಂದಲೇ ಅದಕ್ಕೆ ಸೇರಲು ನಾನು ತಯಾರಿದ್ದೇನೆ.

ನಮ್ಮನಮ್ಮೊಳಗಿನ ಅಂತಃಕಲಹಕ್ಕೆ ಮೂಲಕಾರಣ ಕೋಂಗ್ರೆಸ್ಸಾಗಿದೆ. ಕೋಂಗ್ರೆಸು ಎಂದು ತನ್ನ ಧ್ಯೇಯವನ್ನು ಹಿಡಿದುಕೊಂಡ, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾದುತ್ತದೋ ಅಂದೇ ಭಾರತಕ್ಕೆ ಸ್ವಾತಂತ್ರ್ಯವು ದೊರೆಯುವುದು.

ಆಲ್ ಮಹಾರಾಷ್ಟ್ರ ಫಿಸಿಕಲ್ ಕಲ್ಚರ್ ಕಾನ್ಫರೆನ್ಸ್—ಸೆಂಟ್ ಝೇವಿಯರ್ಸ್ ಕಾಲೇಜಿನ ಆಟದ ಬಯಲಲ್ಲಿ, ಶನಿವಾರ, ರವಿವಾರ, ಸೋಮವಾರ ದಿವಸಗಳಲ್ಲಿ ವಿಜೃಂಭಣೆಯಿಂದ ಜರಗಿತು. ಮುಂಬಯಿಯ ಮುಖ್ಯ ಮಂತ್ರಿಯವರಾದ ಶ್ರೀ. ಬಿ. ಜಿ. ಖೇರರವರು ತಮ್ಮ ಅಧ್ಯಕ್ಷ ಭಾಷಣದ ಮಧ್ಯೆ, ವ್ಯಾಯಾಮದ ಕುರಿತು ನವಯುವಕ ಯುವತಿಯರಿಗೆ ಸಾಮುದಾಯಿಕ ಬುದ್ಧಿಮಾಪಗಳನ್ನಿತ್ತು, ಶಾಲೆಗಳಲ್ಲೆಲ್ಲಾ ಸೈನಿಕ ಶಿಕ್ಷಣವನ್ನು ಕಡ್ಡಾಯವನ್ನಾಗಿ ಮಾಡಲು ಪ್ರಯತ್ನಿಸಬೇಕೆಂದರು.

ಹದಿನಾಲ್ಕನೆಯ ಸರ್ವ ಭಾರತೀಯ ವಿದ್ಯಾಭ್ಯಾಸ ಪರಿಷತ್ತು—ಸರ್. ಟಿ. ವಿಜಯರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಮಂಗಳವಾರ ಸೆಂಟ್ ಝೇವಿಯರ್ಸ್ ಕಾಲೇಜಿನಲ್ಲಿ ಜರಗಿತು. ಶ್ರೀ. ಬಿ. ಜಿ. ಖೇರರವರು ಪ್ರಾರಂಭಿಕ ಭಾಷಣದಲ್ಲಿ ಕೋಂಗ್ರೆಸ್ ಸರಕಾರವು ವಿದ್ಯಾಭ್ಯಾಸದ ಕುರಿತು ಏನೆಲ್ಲ ಮಾಡಿದೆಂಬುದನ್ನು ಸಂಕ್ಷೇಪವಾಗಿ ವಿವರಿಸಿದರು.

ನೀವು ಈ ಪುರಾತನ ರಸಾಯನ ಶಾಸ್ತ್ರವನ್ನು ಇನ್ನೂ ಜೀವಕಳೆಯುಳ್ಳದ್ದಿರುವಂತೆ ಮಾಡಿದುದಕ್ಕಾಗಿ ಬರೀ ಭಾರತವು ಮಾತ್ರವಲ್ಲ ಇಡೀ ಲೋಕವೇ ನಿಮಗೆ ಆಭಾರಿಯಾಗಿದೆ' ಎಂದು ಶ್ರೀ. ಬಿ. ಜಿ. ಖೇರರವರು, ತಾವು 28ನೆಯ ಸರ್ವಭಾರತೀಯ ವೈದ್ಯ ಸಮ್ಮೇಳನದಲ್ಲಿ ಮಾಡಿದ ಪ್ರಾರಂಭಿಕ ಭಾಷಣದಲ್ಲಿ ಹೇಳಿದರು. ಪಂಡಿತ ಶಿವಶರ್ಮ ಆಯುರ್ವೇದಾಚಾರ್ಯರವರು ಅಧ್ಯಕ್ಷಪದವಿಯನ್ನು ವಹಿಸಿದ್ದರು. ಇವರು, ಈಗಿನ ಸರ್ಜರಿಗೆ, ಸುಶ್ರುತ ಸಂಹಿತೆಯನ್ನು ಹೋಲಿಸಿದರು. ತ್ರಿದೋಷ ಪ್ರಕರಣವನ್ನು ವಿವರಿಸಿದರು. ಆಯುರ್ವೇದಕ್ಕೆ ಸರಕಾರದ ಮತ್ತು ಸಂಸ್ಥಾನಗಳ ಸಹಾಯವಿಲ್ಲದ್ದರಿಂದ ಅದು ಇಂಥ ಹೀನಸ್ಥಿತಿಯಲ್ಲಿದೆಂದು ಹೇಳಿ ಸರ್ವರೂ ಇದಕ್ಕೆ ಪ್ರೋತ್ಸಾಹವೀಯಬೇಕೆಂದರು.

ತಿದ್ದುಪಡಿ

ಬೋವಿ ಸಮಾಜದಲ್ಲಿ ಕುಹಕಗಳೇ? ಎಂಬ ಶಿರೋನಾಮೆಯಿಂದ ಶ್ರೀ ಸಿ. ಪಿ. ಶರ್ಕೇರ ಎಂಬವರಿಂದ ಉಜ್ಜಿಲ ಬೋವಿ ಸಮಾಜದ ಪಂಚಾಯತ ಸಮಿತಿಯ ಕುರಿತೊಂದು ಬಾತ್ಮಿ ನಮ್ಮೆಡೆಗೆ ಬಂದಿದೆ. ಶ್ರೀ. ಯು. ರಾಮಪ್ಪನವರು ಕುಹಕ ವ್ಯಾಪಾರವನ್ನು ತಡೆಗಟ್ಟಿ ಸನ್ಮಾರ್ಗದಲ್ಲೇ ಕಾರ್ಯಕ್ರಮವನ್ನು ಸಾಗಿಸಬೇಕೆಂದೂ ಎಲ್ಲರೂ ಸಮಾಜೋನ್ನತಿಗಾಗಿ ಪ್ರಯತ್ನಿಸಬೇಕೆಂದೂ ಆದರಲ್ಲಿ ಅಡಕವಾಗಿದೆ.

ಚಲೋ ರಿಸ್ಟ್ ವಾಚಿಗೆ

ರೂಪಾಯಿ 1-15-0 ಮಾತ್ರ



ಸರಿಯಾದ ಸಮಯವನ್ನು ಸೂಚಿಸತಕ್ಕ ಅತ್ಯಾಧುನಿಕ ಲಿವರ್ ರಿಸ್ಟ್‌ವಾಚಿಗೆ ಉರುಟಾದ ಚಚ್ಚೌಕ ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ. 2-8-0, ಅತ್ಯುತ್ತಮದಕ್ಕೆ ರೂ. 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ 4-8-0, ರೋಲ್ಡ್‌ಗೋಲ್ಡಿಗೆ ರೂ.6-8-0, ಚಿತ್ರದಲ್ಲಿ ತೋರುವಂತಹದಕ್ಕೆ ರೂ. 8-8-0. ಅಂಚೆ ವೆಚ್ಚ 0-10-0 ಪ್ರತ್ಯೇಕ.

Empress Trading Co.,

P.O. Box No. 6744, **Calcutta(G)**

ನೂರಾರು ರಮ್ಯ ಚಿತ್ರ ! **ಲಲಿತ ಮಾಸಪತ್ರ !!**

ವಸಂತ

ಸಂಪಾದಕರು— ಶ್ರೀ. ಎಸ್. ಕೆ. ಕುಲಕರ್ಣಿ, ಎಂ.ಎ.

ಜಾನೇವರಿಯಿಂದ ಪ್ರಾರಂಭ !

ಬಿಡಿ ಪ್ರತಿ ಎರಡೇ ಆಣೆ.

ವಿಷಯಗಳು— ಶಿಕ್ಷಣ, ಕರ್ನಾಟಕ ಸಂಸ್ಕೃತಿ, ಲಲಿತಸಾಹಿತ್ಯ, ಕಲಾವಿಮರ್ಶೆ.

ಲೇಖಕರು— ಪ್ರೊ ಜಾಗೀರದಾರ, ಗೋಕಾಕ, ಮುಗಳಿ, ಮಹಿಷಿ, ಶ್ರೀ. ಶಿವರಾಮ ಕಾರಂತ, ವಿ. ಸೀತಾರಾಮಯ್ಯ, ರಂಗರಾವ ದಿವಾಕರ, ಬೇಂದ್ರೆ, ಅ. ನ. ಕೃಷ್ಣರಾಯ ಇತ್ಯಾದಿ.

ವಸಂತ ಆಫೀಸ್, ಗದಗ.

THE
Canara Banking Corporation, Udipi, Ltd.
SENDS GREETINGS TO ALL
ITS CONSTITUENTS AND
WISHES THEM A HAPPY
&
PROSPEROUS
NEW YEAR

ಉಡುಪಿ, ಗುರುವಾರ, ತಾ. ೫-೧-೩೯

ಹೊಸ ವರ್ಷದ ಸಮಸ್ಯೆ

ನವಯುಗದ ನವವರ್ಷವು ನವಲೀಲೆಯಿಂದ ವಿಶ್ವರಂಗದಲ್ಲಿ ಕಾಲಿಟ್ಟು ವಿವಿಧ ರೂಪರೇಖೆಗಳ ಭೀಕರ ದೃಶ್ಯದ ವಿಚಿತ್ರ ಚಿತ್ರವಾಗಿ ಅನಂತ ಕಾಲಚಕ್ರದಲ್ಲಿ ಮಿಂಚತೊಡಗಿರುವುದು. ಇಂದು ಜಗತ್ತಿನ ಎಲ್ಲೆಡೆಯಲ್ಲಿ ಆವರಿಸಿಕೊಂಡಿರುವ ದ್ವೇಷ, ಅಸೂಯೆ, ಅತ್ಯಾಚಾರದಿಂದ ಕೂಡಿದ ಲೋಕಯುದ್ಧದ ವಿನಾಶ ವಿಷಗಾಳಿಯನ್ನು ಈ ನವವರ್ಷವು ಹೊತ್ತುಕೊಂಡು ಹೊರಬಂದಿರುವುದು 1939ನೇ ವರ್ಷವಲ್ಲೇ ಜಗತ್ತು ಕಾಲಲೀಲೆಯ ಪ್ರಳಯಾಗ್ನಿಗೆ ಆಹುತಿಯಾಗಿ, ಅವಸಾನಗೊಳ್ಳುವುದೇ, ಇಲ್ಲವೆ ವಿಶ್ವದಲ್ಲಡಗಿರುವ ಅಪಾರಶಕ್ತಿಯು ಈ ವಿನಾಶವನ್ನು ತಪ್ಪಿಸಿ, ಜಗತ್ತನ್ನು ಸುಖಶಾಂತಿಯ ನೆಲೆವೀಡಾಗಿ ಮುನ್ನಡೆಯುವಂತೆ ಮಾಡಲಿದೆಯೋ ಹೇಗೆ? ಎಂಬ ವಿಚಾರವು ಈ ಹೊಸವರ್ಷದ ಆದಿಯಿಂದಲೇ ಆರಂಭಗೊಂಡು ಜಗತ್ತಿನ ಮುಂದೆ ನಿಂತಿರುವ ದೊಡ್ಡ ಸಮಸ್ಯೆಯಾಗಿದೆ.

ಲೋಕಯುದ್ಧದ ಭಯಾನಕ ದೃಶ್ಯವು ಎಲ್ಲೆಲ್ಲಿಯೂ ಕಾಣಬರುತ್ತದೆ. ಲೋಕವು ಶಾಂತಿ ಶಾಂತಿಯೆಂದು ಬಾಯಿಬಿಡುತ್ತಿರುವಾಗ ಲೋಕನಾಯಕರು ಲೋಕ ಪ್ರಳಯದ ಸಮಗ್ರ ಸಿದ್ಧತೆಯಿಂದ ಲೋಕಕಂಟಕದ ಹಾದಿಯಲ್ಲಿ ಬಹು ರಭಸವಾಗಿ ಓಡುತ್ತಿದ್ದಾರೆ. ಗತಕಾಲವೇನೋ ಲೋಕವಿನಾಶದ ಬೆದರಿಕೆಯ ಮೋಡಗಳಿಂದ ದಿಗಂತದಲ್ಲಿ ತಲೆದೋರಿ, ಸುದೈವದಿಂದ, ತಾನಾಗಿ ಜಗತ್ತನ್ನು ಪ್ರಳಯಾಗ್ನಿಗೆ ಆಹುತಿಗೊಡದೆ, ಕಾಲಚಕ್ರದಲ್ಲಿ ಲೀನವಾಗಿಹೋಯಿತು; ಆದರೆ ಈ ಹೊಸವರ್ಷವು ಮಾತ್ರ ಇನ್ನಷ್ಟು ಭಯಂಕರವಾಗಿ ಜಗತ್ತನ್ನು ಭಸ್ಮಗೊಳಿಸುವ ಬೆದರಿಕೆ ಹಾಕಿ ನಿಂತಿದೆ. ಯಾವಾಗ ಎಲ್ಲಿ ಏನಾಗಿ ಲೋಕದಲ್ಲಿ ಲೋಕವಿನಾಶದ ಸಿಡಿಲೆರಗುವುದೆನ್ನಲು ಬರುವುದಿಲ್ಲ. ಜಗತ್ತೀಗ ಲೋಕಯುದ್ಧದ ಸಾಮೀಪ್ಯವನ್ನು ಹೊಂದುತಿದೆಯೆಂಬಂತೆ ಭಾಸವಾಗುವುದು. ಈ ಯುದ್ಧದ ಪರಿಣಾಮವಾಗಿ ಜಗತ್ತಿನ ಸಾವಿರಾರು ವರ್ಷಗಳ ಸಂಸ್ಕೃತಿಯು ಅಳಿದು ಹೋಗಬಹುದೆಂಬಂತೆ ತೋರುತ್ತದೆ.

ಜಗತ್ತಿಗೆ ಸುಖ ಶಾಂತಿಯ ದಾರಿಯು ಅತೀವ ಇಕ್ಕಟ್ಟಾಗಿ ನಿಂತಿದೆ; ದುಃಖ ದಾರಿದ್ರ್ಯದಶಾಪವು ಮೇರೆವರಿದಿದೆ. ಮ್ಯೂನಿಚ್ ಒಡಂಬಡಿಕೆಯ ನಂತರ ಯೂರೋಪಿಯಾನ ರಾಷ್ಟ್ರಗಳು ಶಸ್ತ್ರಸನ್ನಾಹವನ್ನು ಭರದಿಂದ ಹೆಚ್ಚಿಸಿದುವು. ೧೯೩೮ರ ಯುದ್ಧದ ಬೆದರಿಕೆಗಿಂತಲೂ ೧೯೩೯ರಲ್ಲೇ ಅಧಿಕವಾಗಿ ತೋರುವುದು. ಯೂರೋಪಿನಲ್ಲಿ ಈ ಜ್ವಾಲಾಮುಖಿಯು ಯಾವಾಗ ಒಡೆಯಬಹುದೆನ್ನಲು ಬರುವುದಿಲ್ಲ. ಈ ವರ್ಷ ಯೂರೋಪು ಎಂಥಾ ಅವಸ್ಥೆಗೆ ಬಲಿಬೀಳುವುದೆಂಬುದನ್ನು ಈಗಲೇ ಹೇಳಿಬಿಡುವುದು ಸಾಧ್ಯವಲ್ಲ. ಪಾಶ್ಚಿಮಾತ್ಯ ದೇಶಗಳ ಪರಿಸ್ಥಿತಿ ಹೀಗಿರುವಾಗ ಪೂರ್ವಭಾಗದ ರಾಷ್ಟ್ರಗಳೇನು ಶಾಂತಿಮಯವಾಗಿ ಸುಖದ ದಾರಿಯಲ್ಲಿವೆಯೋ? ಚೀನಾ-ಜಪಾನರ ಇಂದಿನ ಅವಸ್ಥೆಯೇನು? ಚೀನಿಯರ ಮೇಲೆ ಜಪಾನರ ಇಂದಿನ ಅವಸ್ಥೆಯೇನು? ಚೀನಿಯರ ಮೇಲೆ ಜಪಾನರು ನಡಸಿದ ಆಕ್ರಮಣದ ಪರಿಣಾಮವು ಹೇಗಾಗುವುದೆನ್ನಲು ಬರುವುದಿಲ್ಲ. ಯುದ್ಧವು ಇನ್ನಷ್ಟು ಸಮಯ ಮುಂಬರಿಯುವಾಗ ಜಪಾನರಂತೂ ತಮ್ಮ ದುಷ್ಟ ಇರಾದೆಯ ದುಷ್ಪರಿಣಾಮ ಹೊಂದದಿರರು; ಆದರೆ, ಏನಿಲ್ಲದಿದ್ದರೂ ಗಟ್ಟಳೆ ನಿರಪರಾಧಿ ಚೀನೀಯರ ದುಃಸ್ಥಿತಿಯನ್ನು ಬಣ್ಣಿಸುವುದು ಅಸಾಧ್ಯ. ಹೀಗಾಗಿ ೧೯೩೯ರಲ್ಲಿ ಪೂರ್ವದ ಸಮಸ್ಯೆಯೆಂತಾಗುವುದೆಂಬುದು ನಿಶ್ಚಿತ ಹೇಳಲಸಾಧ್ಯ.

ಇನ್ನೀಗ ನಮ್ಮ ರಾಷ್ಟ್ರದ ರೂಪರೇಷೆಯು ಈ ವರ್ಷ ಹೀಗೆಯೇ ನಿಂತೀತೆಂದು ಈಗೀಗಲೇ ನಿರ್ಧರಿಸಿ ಹೇಳಿಬಿಡುವುದು ಮೇರೆ ವಿಾರಿದ ಮಾತು. 1938ರಲ್ಲಿ ಆಶ್ರಿತ ಸಂಸ್ಥಾನಗಳಲ್ಲಿ ಹೊಸ ಯುಗವೇ ಆರಂಭವಾಯಿತೆನ್ನಬಹುದು. ಸದ್ಯದ ಪರಿಸ್ಥಿತಿಯ ಆಧಾರದಿಂದ ಹೇಳುವುದಿದ್ದರೆ, ಈ ನವವರ್ಷದಲ್ಲಿ ದೇಶೀಯ ಸಂಸ್ಥಾನಿಕರ ಚಳವಳಿವು ನರೇಂದ್ರರ ಆಳ್ವಿಕೆಯಿರುವ ಎಲ್ಲಾ ಸಂಸ್ಥಾನಗಳಿಗೂ ಹರಡುವುದೆಂಬುದು ನಿಶ್ಚಯವಾಗುತ್ತಿದೆ. ಈ ಹೊಸ ವರ್ಷದಲ್ಲಿ ಪ್ರಜಾ ಜವಾಬ್ದಾರಿ ಸರಕಾರದ ಚಳವಳಿವು ಇನ್ನಷ್ಟು ಹೆಚ್ಚುವುದೆಂಬುದು ನಿಸ್ಸಂದೇಹ. ಬ್ರಿಟಿಷರ ಮತ್ತು ಭಾರತೀಯರ ವೈಷಮ್ಯವು ಈ ವರ್ಷ ಇನ್ನಷ್ಟು ಹೆಚ್ಚಾಗಲಿದೆಯೋ ಎಂಬ ಊಹೆಗೆ ತುಂಬಾ ಆಸ್ಪದವಿದೆ. 1939ನೇ ಇಸವಿಯಲ್ಲಿ ಫೆಡರೇಶನು ಸ್ವೀಕೃತವಾಗುವುದೇ ಎಂಬ ಪ್ರಶ್ನೆ. ಫೆಡರೇಶನನ್ನು ಭಾರತೀಯರ ಮೇಲೆ ಹೇರಿಸಲು ಆಗಲಾರದು. ಈ ವರ್ಷವಂತೂ ಸಾಧ್ಯವೇ ಇಲ್ಲವೆಂಬುದು ನಿಸ್ಸಂದೇಹದಿಂದ ಹೇಳಬಹುದಾಗಿದೆ. ನರೇಂದ್ರ ಮಂಡಲದ ಐಕ್ಯತೆಯ ಸಮಸ್ಯೆ, ಭಾರತೀಯರ ಮತ್ತು ಆಂಗ್ಲೇಯರ ವಿರುದ್ಧ ಭಾವನೆ, ಹಿಂದೂ-ಮುಸಲ್ಮಾನರೊಳಗಣ ಐಕ್ಯಭಾವ, ಇವೆಲ್ಲಾ ಹಲಕಾಲದ ಸಮಸ್ಯೆಗಳು 1939ರೊಳಗೆ ನಿವೃತ್ತಿ ಹೊಂದಿ ಇದೇ ವರ್ಷ ಫೆಡರೇಶನು ಸ್ವೀಕೃತವಾಗುವುದೆಂದರೆ ಅದು ಕೈಮೀರಿದ ಮಾತು. ಆದುದರಿಂದ ಭಾರತ ವರ್ಷದ ಹೊಸ ವರ್ಷದ ಪರಿಸ್ಥಿತಿ ಹೇಗಾಗಲಿಯುವುದೆಂಬುವನ್ನು ಈಗಿನ ವಿದ್ಯಮಾನಗಳ ಮೇಲೆ ನಿರ್ಧರಿಸಿ ಹೇಳುವುದು ಸುಲಭಸಾಧ್ಯವಲ್ಲ.

ಹೀಗೆ ಪ್ರತಿಯೊಂದು ರಾಷ್ಟ್ರದ ಪರಿಸ್ಥಿತಿಯು ಅವ್ಯವಸ್ಥೆಯಲ್ಲಿದೆ. ಅಖಂಡ ಜಗತ್ತು ತೀವ್ರ ಅಶಾಂತಿಯ ಕಾರ್ಮುಗಿಲಲ್ಲಿ ಆವೃತವಾಗಿರುವುದು. ಜನಾಂಗಗಳು ತಮ್ಮೊಳಗಣ ದ್ವೇಷ, ಅಸೂಯೆ, ಅಸಹನೆಯಿಂದಾಗಿ ಪರಸ್ಪರ ವಿನಾಶದ ಪ್ರೇರಣೆಯಿಂದ ವಿನಾಶಕ್ಕಾಗಿ ಕತ್ತಿ ಮಸೆಯುತ್ತ ನಿಂತು, ಸಂಘರ್ಷ ನಿರೀಕ್ಷಣೆಯಲ್ಲಿವೆ. ಎಂದಿನ ವರೆಗೆ ಪ್ರಬಲ ರಾಷ್ಟ್ರವು ದುರ್ಬಲ ರಾಷ್ಟ್ರದ ಮೇಲೆ ಧಾಳಿಯಿಡಲು ಬಯಸುವುದೋ, ಎಂದಿನ ವರೆಗೆ ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರವು ಒತ್ತಾಟ ನಡಿಸುವುದೋ ಅಂದಿನ ವರೆಗೆ ಲೋಕದ ಶಾಂತಿಯೆಂಬುದು ಬರಿಯ ಭ್ರಾಂತಿಯೇ ಸರಿ. ತಾವೆ ಸುಧಾರಿತರು, ಸಂಸ್ಕೃತರು ಎಂದು ಹಿಗ್ಗುವ, ರಾಷ್ಟ್ರಗಳಿಂದು, ತಮ್ಮ ಸಮಸ್ಯೆಯನ್ನು ಬಿಡಿಸಲೆಂದು, ಬೋಂಬುಗಳನ್ನು ವಿಷಗಾಳಿಯನ್ನು, ಆಕಾಶ ಪಡೆಯನ್ನು, ಹೆಚ್ಚಿಸುತ್ತಿರುವಾಗ ಇಂದೀಗ ಹಿಂದೂದೇಶವು ಯುಗಪುರುಷ ಮಹಾತ್ಮ ಗಾಂಧಿಯವರ ಮುಂದಾಳುತನದಿಂದ ಸತ್ಯ ಮತ್ತು ಅಹಿಂಸೆಯೆಂಬ ರಕ್ಷಾಕವಚದಿಂದ ತನ್ನ ಸ್ವಾತಂತ್ರ್ಯ ಸಮರದಲ್ಲಿ ಮುಂದಾಗಬೇಕಾಗಿದೆ. ಹಿಂದೂದೇಶದ ಸುಖಶಾಂತಿಯು ಪರಸ್ಪರ ಐಕ್ಯತೆ, ಪ್ರೇಮ ಮತ್ತು ಅಹಿಂಸೆಯ ತತ್ವ ರಚನೆಯ ಮೇಲೆ ನಿಂತಿದೆ. ಪೈಶಾಚಿಕ ಶಕ್ತಿಯಿಂದ ಮದೋನ್ಮತ್ತರಾಗಿ ಲೋಕಶಾಂತಿಯ ನಾಶಕ್ಕಾಗಿ, ಶಸ್ತ್ರ ಸಿದ್ಧತೆಯಿಂದ ವಿನಾಶ ಪಥದಲ್ಲಿ ಮುನ್ನಡೆಯುವ ಬರ್ಬರ ಸಂಸ್ಕೃತಿಯ ರಾಷ್ಟ್ರಗಳು ಇನ್ನೊಂದು ಕಾಲದಲ್ಲಿ [illegible] ಹಿಂದೂದೇಶದ ಆಶ್ರಯವನ್ನು ಕೋರುವಂತಾಗಬೇಕಾದರೆ, ಅದು ತನ್ನ ಸತ್ಯ ಮತ್ತು ಅಹಿಂಸೆಯ ಶುದ್ಧಮಾರ್ಗವನ್ನನುಸರಿಸಬೇಕಾಗಿರುವುದು. ಆದುದರಿಂದ ಇಂದೀಗ ಹಿಂದೂದೇಶವು ತನ್ನ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದರೊಂದಿಗೆ, ಜಗತ್ತಿನ ಶಾಂತಿಗೂ ದಾರಿ ತೋರಿಸಬೇಕಾಗಿರುವುದು. ಹೀಗಾಗಿ ನವಯುಗದ ನವವರ್ಷದ ಸಮಸ್ಯೆಯಲ್ಲಿ ಹಿಂದೂದೇಶದ ಭಾಗವು ಅತ್ಯಂತ ಪಾವನವಾದುದೂ, ಮಹತ್ವದ್ದೂ ಆಗಿರುವುದು.

ಅಖಿಲ ಭಾರತ ವಿದ್ಯಾಪರಿಷತ್ತು

ಮುಂಬಾಯಿಯಲ್ಲಿ ಅಖಿಲ ಭಾರತ ವಿದ್ಯಾಪರಿಷತ್ತು ಜರುಗಿ ಹಲವು ಅಮೂಲ್ಯ ವಿಷಯಗಳು ಚರ್ಚಿಸಲ್ಪಟ್ಟುವು. ಮುಂಬಾಯಿ ಸರಕಾರದ ಪ್ರಧಾನರಾದ ಮಾನ್ಯ ಡಾ॥ ಬಿ. ಜಿ. ಖೇರರು ಈ ಪರಿಷತ್ತಿನ ಆರಂಭಭಾಷಣದಲ್ಲಿ ದೇಶದ ಹೆಚ್ಚಿನ ಪ್ರಾಂತ್ಯಗಳಲ್ಲಿ ಕಾಂಗ್ರೆಸು ಸರಕಾರವು ಸ್ಥಾಪನೆ ಹೊಂದಿರುವ ಕಾರಣ, ವಿದ್ಯಾ ವಿಷಯಗಳಲ್ಲಿ ದೇಶದೇಳಿಗೆಗೆ ಅನುಕೂಲಿಸುವಂತೆ ಸಾಧ್ಯವಾದ ಎಚ್ಚರ ತೆಗೆದುಕೊಳ್ಳಲು ಅನುಕೂಲವಾಗಿರುವುದು ಎಂದರು ಮತ್ತು ಪರಿಷತ್ತಿನ ಮುಂದೆ ಚರ್ಚಿಸಲ್ಪಡುವ ಹಲವು ವಿಷಯಗಳನ್ನು ವಿವರಿಸಿ ತಿಳಿಸಿದರು. ಈ ವಿದ್ಯಾಪರಿಷತ್ತು ಹಲವು ವಿಷಯದಲ್ಲಿ ಬಹು ಅಮೂಲ್ಯ ವಿಷಯಗಳನ್ನು ದೇಶಹಿತ ದೃಷ್ಟಿಯಿಂದ ನಿರ್ಣಯಿಸಿತು. ಇಂದಿನ ವಿದ್ಯಾಭ್ಯಾಸದ ಪ್ರಮುಖ ಕೊರತೆಗಳನ್ನು ಈ ಪರಿಷತ್ತು ಹೊರಗೆಡಹಿರುವುದು; ದೇಶದೇಳಿಗೆಯ ದೃಷ್ಟಿಯಿಂದ, ಜೀವನದೇಳಿಗೆಯನ್ನು ಸಾಧಿಸಬಹುದಾದ, ಒಳ್ಳೆಯ ನಾಗರಿಕನಾಗಿ ಬಾಳುವ ಯೋಜನೆಯಿಂದ ಶಿಕ್ಷಣವು ದೊರೆಯುವಂತಾಗಬೇಕೆಂಬ ಈ ಪರಿಷತ್ತಿನ ಅಭಿಪ್ರಾಯವು ಅತ್ಯಂತ ಮಹತ್ವದ್ದಿದೆ. ನಿಜವಾಗಿ ಇಂದಿನ ಶಿಕ್ಷಣಪದ್ಧತಿಯಿಂದ ವಿದ್ಯಾರ್ಥಿಗಳು ಶಿಕ್ಷಣಮಂದಿರದಿಂದ ಹೊರಬರುವಾಗ ತಮ್ಮ ಜೀವನದ ಹೋರಾಟವನ್ನು ಯಶಸ್ವಿಯಾಗಿ ಇದಿರಿಸಿ, ದೇಶೋನ್ನತಿಯ ಕಾರ್ಯಕ್ಕೆ ತನ್ನನ್ನರ್ಪಿಸುವ ಸ್ಥಿತಿಯಲ್ಲಿರುವುದಿಲ್ಲ. ದೊರೆತ ಶಿಕ್ಷಣದಿಂದ ವ್ಯವಹಾರದಲ್ಲಿ ಹೆಚ್ಚಿನ ಯಾವ ಪ್ರಯೋಜನವೂ ದೊರೆಯದಿರುತ್ತದೆ ಎಂಬ ವಿಚಾರವೀಗ ಸಾಮಾನ್ಯವಾಗಿ ತಿಳಿದ ಸಂಗತಿಯಾಗಿದೆ. ಹಲವು ವಿದ್ಯಾರ್ಥಿಗಳು ತಮ್ಮ ಅಭ್ಯಾಸಮುಗಿಸುವ ಕಾಲಕ್ಕೆ ದೇಶದ ವಿಚಾರ ಹೇಗಿದೆ, ದೇಶವು ಯಾವ ರೀತಿಯಲ್ಲಿ ನಡೆಯುತ್ತದೆ, ಸರಕಾರದ ಕಾರ್ಯವಿಚಾರಗಳೇನು, ಪ್ರಜೆಗಳ ಹಕ್ಕುಬಾಧ್ಯತೆಗಳಾವುವು, ತಮ್ಮ ಜೀವನವನ್ನು ದೇಶಕಾರ್ಯಕ್ಕೆ ಹೇಗೆ ಅನ್ವಯಿಸತಕ್ಕದು ಎಂಬ ವಿಚಾರದಲ್ಲಿ ಅಜ್ಞಾನಾಂಧಕಾರಿಗಳಿರುವರು; ಆದುದರಿಂದ ಈ ಪರಿಷತ್ತಿನ ಅಭಿಪ್ರಾಯದ ಮೇರೆಗೆ ಇಂದಿನ ಶಿಕ್ಷಣಪದ್ಧತಿಯಲ್ಲಿ ಆವಶ್ಯವೆನಿಸುವ ಮಾರ್ಪಾಟುಗಳಾಗುವುದು ಅಗತ್ಯ; ಮಾತ್ರವಲ್ಲದೆ ದೇಶದೇಳಿಗೆಯು ವಿದ್ಯೆಯ ಪ್ರಭಾವವನ್ನು ಹೊಂದಿರುವುದರಿಂದ ಸರಕಾರವು ಎಚ್ಚರವು ವಿದ್ಯಾ ಇಲಾಖೆಯ ಕಡೆಗೆ ಹೆಚ್ಚಾಗಿ ಸಲ್ಲತಕ್ಕದಾಗಿದೆ; ಶಾಲೆ ಕಾಲೇಜುಗಳಲ್ಲಿ ಆರೋಗ್ಯ, ವ್ಯಾಯಾಮಗಳಿಗೆ ಹೆಚ್ಚಿನ ಗಮನ ಸಲ್ಲತಕ್ಕದ್ದೆಂಬ ಈ ಪರಿಷತ್ತಿನ ಅಭಿಪ್ರಾಯವು ಬಹು ಅಮೂಲ್ಯವಾದುದು. ದೇಶದ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಕಡೆಗೆ ಸಂಬಂಧಪಟ್ಟ ಸರಕಾರಗಳ ಲಕ್ಷ್ಯವು ಸಲ್ಲಬೇಕಾಗಿರುವುದು. ನಿರಕ್ಷರತೆಯು ದೂರವಾಗುವಂತೆ ತಕ್ಕ ಯೋಜನೆ ನಡೆಯಬೇಕಾಗಿದೆ ಆವಶ್ಯವೆನಿಸುವ ಮಾರ್ಪಾಟುಗಳಿಂದ ಶಿಕ್ಷಣವು ಪುನರ್ವ್ಯವಸ್ಥೆ ಹೊಂದಿ, ಉತ್ತಮ ಶಿಕ್ಷಣದೊರೆತು, ವಿದ್ಯೆಯ ಪ್ರಭಾವದಿಂದ, ಹಿಂದೂದೇಶವು ಉನ್ನತಿಯನ್ನು ಹೊಂದಬೇಕಾಗಿದೆ.

ನವಯುಗ
ನೋಟೀಸು.

ಬರುವ ವಾರ ಅಂದರೆ ಜನವರಿ ತಾ. 12ನೇ ಸಂಚಿಕೆಯು ವಿಶೇಷ ಸಂಚಿಕೆಯಾಗಿ ಹೊರಡುವ ನಿಮಿತ್ತ ಎಡೆಬಿಡದೆ ಕ್ರಮವಹಿಸಿ ಕೆಲಸವಾದಿದ ಪ್ರೆಸ್ ಮತ್ತು ನಮ್ಮ ಸ್ಟಾಪಿನವರ ವಿಶ್ರಾಂತಿಗಾಗಿ ಜನವರಿ ತಾ.19-1-39ನೇ ಸಂಚಿಕೆಯು ನಿಲ್ಲಿಸಲ್ಪಟ್ಟಿದೆ, ತಾ. 26ಕ್ಕೆ ಎಂದಿನಂತೆ ಸಂಚಿಕೆಯು ಹೊರಡುವುದು.

—ಮೆನೇಜರ್

ಕಲ್ಕತ್ತದಲ್ಲಿ ಸತ್ಯಮೂರ್ತಿಯವರ ಭಾಷಣ — ಹಕೀಮ

ಅಲಹಾಬಾದು ಯೂನಿವರ್ಸಿಟಿಗೆ ಮುಸಲೋನಿಯ ಧನಸಹಾಯ

ಅಲಹಾಬಾದು ಯೂನಿವರ್ಸಿಟಿಯಲ್ಲಿ ಇಟಲಿ ಭಾಷೆ ಕಲಿಸುವ ಕುರಿತಾಗಿ ಆ ಶಿಕ್ಷಣ ಮಂಡಲವು ಇಟಲಿ ಸರಕಾರದೊಂದಿಗೆ ಅದರ ನೆರವನ್ನು ಪಡೆಯುವ ವಿಚಾರವಲ್ಲಿ ಪತ್ರವ್ಯವಹಾರ ನಡೆಯುತ್ತಿರುವುದು ಇಟಲಿ ಸರಕಾರವು ಈ ಸಂಬಂಧವಲ್ಲಿ ಕುಂಬಾ ಉತ್ಸುಕತೆಯುಳ್ಳದಾಗಿ ತಿಳಿಯುತ್ತದೆ ಇದರ ವೆಚ್ಚವೆಲ್ಲಾ ಕೊಡುವ ನಿರ್ಧಾರಕ್ಕೆ ಬಂದಿರುವುದಂತ ತಿಳಿಯುತ್ತನೆ. ಆರಂಭದಲ್ಲೇ ಇಟಲಿ ಲೆಕ್ಚರರೊಬ್ಬನ ನೇಮಕದ ವೆಚ್ಚ ಕೊಡುವುದಕ್ಕೆ ಒಪ್ಪಿರುವುದು.

ಪ್ರಥಮ ಐರೋಪ್ಯ ಹಿಂದು

ಹದಿನೆಂಟನೆಯ ಶತಮಾನದಲ್ಲಿ ಪ್ರಥಮ ಹಿಂದುವೆನಿಸಿದ ಯುರೋಪಿಯನನು ಮೇಜರ್ ಜನರಲ್ ಚಾರ್ಲ್ಸ್ ಸ್ಟುವರ್ಟನು ಇವನು ಕಲ್ಕತ್ತೆಯ ಚೌರಿಂಗಿಯಲ್ಲಿ ೧೮೦೦ರಿಂದ ೧೮೨೮ರವರೆಗೆ ವಾಸಿಸಿಕೊಂಡಿದ್ದನು. ಇವನು ೧೭೫೮ರಲ್ಲಿ ಡಬ್ಲಿನ ನಗರದಲ್ಲಿ ಜನಿಸಿದನು ಅವನು ಯುದ್ಧಶಿಕ್ಷಣಕ್ಕೆ ಬಂಗಾಳ ಸೈನ್ಯಕ್ಕೆ ಸೇರಿ ಅನಂತರ ೧೮೧೪ರಲ್ಲಿ ಮೇಜರ ಜನರಲ ಪದವಿಯಲ್ಲಿ ನಿವೃತ್ತನಾದನು ಅವನು ತನ್ನ ಉದ್ಯೋಗದಿಂದ ನಿವೃತ್ತನಾದನಂತರ ಶುದ್ಧ ಹಿಂದುವಿನ ಜೀವನವನ್ನು ಅನುಸರಿಸಿಕೊಂಡು ಜೀವಿಸತೊಡಗಿದನು. ೧೮೨೮ರವರೆಗೆ ಅವನು ಕಲಕತ್ತೆಯಲ್ಲಿ ತನ್ನ ಮರಣಪರಿಯಂತ ಜೀವಿಸಿಕೊಂಡಿದ್ದನು.

ಸರಕಾರದ ದಾನ

ಪಿ ಎ ಸುಂದರಮ್ ಇವರು ಬೆನಾರಿಸ್ ಯೂನಿವರ್ಸಿಟಿಯ ಸಹಾಯಕ್ಕಾಗಿ ಹೈದರಾಬಾದು ಸರಕಾರದ ಆಶ್ರಯ ಕೋರಲು ಬಂದಿದ್ದರು. ಹೈದರಬಾದು ಸರಕಾರವು ತನ್ನ ದಾನದ ಕುರಿತು ತಾ. ೮ರಲ್ಲು ಬಿಕಾನೇರಿನ ಮಹಾರಾಜರ ಸಂದರ್ಶನಕಾಲದಲ್ಲ ಪ್ರಕಟಿಸುವುದಾಗಿ ತಿಳಿದುಬರುತ್ತದ.

ಅಹಂಭಾವವು ನಾಶವಾಗಬೇಕು

ಕರ್ಮಯೋಗದಲ್ಲಿಯ ಪ್ರಧಾನವಿಷಯವೆಂಬುದು ಕ್ರಿಯೆಯ ಅಹಂಭಾವವನ್ನು ತ್ಯಜಿಸುವುದಾಗಿದೆ. ನಮ್ಮ ಕರ್ಮವನ್ನೆಲ್ಲಾ ದೇವರಿಗೆ ಅರ್ಪಿಸಬಹುದು ಪ್ರಯತ್ನ ಪ್ರಯತ್ನದಿಂದ, ತಾಳ್ಮೆಯ ಸಂಯಮನದಿಂದ ಸರ್ವಜೀವಿಗಳಲ್ಲಿ ಸರ್ವವಸ್ತುಗಳಲ್ಲಿ, ಸಂಘಟನೆಗಳಲ್ಲಿ, ಸಮಭಾವವನ್ನು ಧರಿಸುವುದು ಸಾಧ್ಯವಾಗಬಹುದು. ಹಿಂದಿರೆ ಕರ್ಮಾನುವರ್ತಿಯ ಅಹಂಭಾವವು ಉಳಿಯುವುದು-ಇನ್ನು 'ನಾನು' ಎಂಬ ವೈಯಕ್ತಿಕದೃಷ್ಟಿಯ ಭಾವನೆಗೆ ಅಳಿಯಿಲ್ಲ. ಇದರಿಂದ ಪ್ರತ್ಯೇಕವಾದ ಅಹಂ ಪ್ರಜ್ಞೆಯು ಇರುವಷ್ಟರ ವರೆಗ ಯೋಗದ ತೊಡಕು ದೂರವಾಗಲಾರವು, ಇದನ್ನು ಸರ್ವಪ್ರಯತ್ನದಿಂದ ದೂರೀಕರಿಸಬೇಕು. ಕರ್ಮಯೋಗಿಯು ತನ್ನ ಕರ್ಮಕ್ಕೆ ತಾನು ಸಾಕ್ಷಿರೂಪನಿರಬೇಕು. ತನ್ನಲ್ಲಿ ಪ್ರಕೃತಿಯು ಕ್ರಿಯೆಗೈಯುವುದನ್ನು ಲಕ್ಷಿಸಬೇಕು. ಕರ್ಮವು ತನ್ನದಲ್ಲ, ಸರ್ವಶಕ್ತಿಯ ಪ್ರಭಾವದಿಂದ ತನ್ನ ವ್ಯಕ್ತಿತ್ವದ ಮೂಲಕ ನಡೆಯುತ್ತದೆಂದು ತಿಳಿಯಬೇಕು" ಎಂದು

ಯುರೋಪಿನಲ್ಲಿ ರಾಜಕೀಯ ದ್ಯೂತವನ್ನಾಡುವ ಮಹಾ ವ್ಯಕ್ತಿಗಳು ನಾಲ್ವರು

ಮುಸಲೋನಿ, ಹಿಟ್ಲರ, ಚೆಂಬರ್ಲೇನ್ ಮತ್ತು ಡಾಲಡಿಯರ್-ಇವರು ನಾಲ್ವರೀಗ ಯುರೋಪಿನಲ್ಲಿ ರಾಜಕೀಯ ದ್ಯೂತವನ್ನಾಡುವ ಮಹಾಪಟುಗಳು. ಇವರ ಈ ಆಟದ ಪರಿಣಾಮವೇನಾಗುವುದೆಂದು ಭವಿಷ್ಯ ಹೇಳುವುದು ಕಷ್ಟ. ಆಟವು ಮ್ಯೂನಿಚಿನಲ್ಲಾರಂಭವಾಯಿತು. ಅದರ ಅವಸಾನವು ನಿಶ್ಚಿತವಲ್ಲ. ಯುರೋಪಿನ ಅದೃಷ್ಟವು ಈ ನಾಲ್ವರ ಕೈಯೊಳಗಿವೆ. ಇವರ ವ್ಯಕ್ತಿತ್ವದ ವಿಚಾರವನ್ನರಿಯುವುದು ಬಹು ಸ್ವಾರಸ್ಯವಾಗಿದೆ.

ಮುಸಲೋನಿ ಮತ್ತು ಹಿಟ್ಲರ್

ಈ ಎರಡು ಪಾರ್ಟಿಯವರಿಗೂ ಆಟವು ಬಹು ಕಠಿಣವಾದುದು. ಇವರಿಬ್ಬರೂ ರಾಜಕೀಯ ಆಟದಲ್ಲಿ ಪ್ರವೀಣರು. ಮುಸಲೋನಿಯು ಪ್ರಜ್ಞಾಶಾಲಿಯು, ಶಕ್ತಿಯುತ ಸ್ನಾಯುವುಳ್ಳವನು. ವಿವೇಕ, ವಿಚಾರವುಳ್ಳವನು ನಿಶ್ಚಿತ ಧೋರಣೆಯವನು, ರಾಜಕೀಯಪಟುವು. ಅವನೊಂದಿಗೆ ನಿಂ



ತಿರುವ ಹಿಟ್ಲರನು ಕನಸುಗಾರನು, ತನ್ನದೇ ಸರಿಯೆನ್ನುವ ಭ್ರಾಂತನು. ತನ್ನ ಪ್ರೇರಣೆಯೆಲ್ಲಾ ದೈವದತ್ತವಾಗಿ ಬರುವುದೆಂಬ ಭ್ರಮೆಯಿಂದ ಕೂಡಿದವನು, ತನ್ನ ಮನಸಿನಲ್ಲಿ ತೋರುವ ರೂಪರೇಖೆಯನ್ನು ಕಾರ್ಯದಲ್ಲಿ ಶೀಘ್ರವಾಗಿ ನಿರ್ಧಾರ ಪೂರ್ವಕವಾಗಿ ಸ್ಥೈರ್ಯದಿಂದ ನಡೆಸುವಶಿಲ್ಪಿಯು. ಮುಸಲೋನಿಯು ಆವೇಶಗೊಂಡರೂ ಹದತಪ್ಪಿ ನಡೆಯದ ವಿವೇಕಿಯು. ಆದರೆ ಹಿಟ್ಲರನು ಹಾಗಲ್ಲ ತನ್ನ ಹಠಬಿಡಲಾರ. ಅವನ ಧೈರ್ಯವೆಂಬುದು ನಿಗೂಢ ಸಮಸ್ಯೆಯ ಮೇಲೆ ನಿಂತುದಾಗಿದೆ. 'ನಾನು ಎಂದೂ ಹೇಡಿಯಾಗಿರಲಿಲ್ಲ. ಇನ್ನು ನಾನದನ್ನು ತೊಡಗಲಾರೆ' ಎಂದೊಮ್ಮೆ ಅವನು ಉದ್ಗಾರತೆಗೆದಿರುವನು.

ಆಡು ಮರಣಪರಿಯಂತ ಉಪವಾಸ ಮಾಡಿತು

ಬೇಹರಪುರದಲ್ಲಿ ಒಬ್ಬ ಮನುಷ್ಯನ ಮರಣಕ್ಕೆ ತನ್ನಿಂದ ಕಾರಣವಾಯಿತೆಂದು ಆಡೊಂದು ತಾನು ಮರಣಪರ್ಯಂತ ಉಪವಾಸದೀಕ್ಷೆ ಹಿಡಿಯಿತು. ಈ ಆಡು ಒಬ್ಬಮನುಷ್ಯನನ್ನು ಹಾಯಿತು. ಅವನು ಬಿದ್ದನು. ಬಿದ್ದವನು ಏಳಲೇ ಇಲ್ಲ. ಇದರಿಂದಾಗಿ ಆಡು ಮತ್ತೆ ಮೇವು ತಿನ್ನುವುದನ್ನೇ ಬಿಟ್ಟಿತು. ಅನೇಕ ದಿನಗಳ ನಂತರ ಅದು ನಿರಾಹಾರ ವ್ರತದಿಂದ ಮಡಿಯಿತು. ಇದೊಂದು ಪ್ರಾಣಿವರ್ಗದಲ್ಲಿ ವಿಶೇಷ.

ಗಾಂಧಿಯವರಿಗೆ ಅಮೇರಿಕ ಮಿತ್ರನೊಬ್ಬನ ಪತ್ರ

ಗಾಂಧಿಯವರಿಗೆ ಡಾಕ್ಟರ ರಿಚರ್ಡ ಗ್ರಿಗ್ಗರು ಈ ರೀತಿ ಪತ್ರ ಬರೆದಿರುವರು. ನನಗೆ ಪಾಶ್ಚಿಮಾತ್ಯ ನಾಗರಿಕತೆಯಲ್ಲಿ ನಂಬಿಕೆಯಿಲ್ಲ. ನಿಮ್ಮ ವಿಶ್ವಾಸವು ಇಲ್ಲ ಜನರೆನಿಸುವುದಕ್ಕಿಂತಲೂ ಬೇಗನೆ ಇಲ್ಲ ಬೆಳೆಯುತ್ತಿರುವುದು, ನಿಮ್ಮ ಸತ್ಯಾಗ್ರಹ ಕಾರ್ಯಕ್ರಮ, ಖಾದಿ, ಹರಿಜನ ಉದ್ಧಾರಣೆ ಹಿಂದುಮುಸಲ್ಮಾನ ಸಖ್ಯ, ಗ್ರಾಮೋದ್ಯೋಗಾದಿಕರ ಪುನರುತ್ಥಾನ, ಶಿಕ್ಷಣವಿಚಾರ, ಇವೆಲ್ಲವೂ ಬಹುಯೋಗ್ಯವಾದುದು ಮಾತ್ರವಲ್ಲ ಇದು ಹಿಂದೂದೇಶದ ಉದ್ಧಾರದ ದಾರಿ, ಜಗತ್ತಿನ ರಕ್ಷಣೆಯ ಮಾರ್ಗ. ಪಶ್ಚಿಮದೇಶದಲ್ಲ ಆರ್ಥಿಕದುಃಸ್ಥಿತಿಯು ಬಲಿದಿದೆ. ಆಗ ಹಿಂದೂದೇಶದಂತೆ, ಇಲ್ಲಿಯೂ ಖಾದಿಯ ಆವಶ್ಯಕತೆಇದೆ ಎಂದಿರುವರು. ಗ್ರಿಗ್ಗರೀಗ ಪಾಶ್ಚಿಮಾತ್ಯ ದೇಶಗಳು ಅಹಿಂಸಾವಿಧಾನವನ್ನನುಸರಿಸಲು ಬೇಕಾದ ಸಲಹೆ ಸೂಚನೆಯ ಪುಸ್ತಕವೊಂದನ್ನು ಬರೆಯುವ ಕಾರ್ಯವನ್ನು ಕೈಗೊಂಡಿರುವರು.

ಅವರು ತಮ್ಮ ಪತ್ರದಲ್ಲಿ ಮತ್ತೂ ಹೀಗೆನ್ನುವರು. "ನನ್ನಿಂದೇನಾದರೂ ಸೇವೆಯಾಗುವಂತೆ ನೋಡಲು ನನಗೆ ಹಿಂದೂದೇಶಕ್ಕೆ ಬರಲು ಅಪೇಕ್ಷೆಯಿದೆ. ನನಗೆ ಹಿಂದೂದೇಶದ ವಿಚಾರವನ್ನು ಬಿಟ್ಟುಬಿಡಲಾಗುವುದಿಲ್ಲ. ನಾನು ಈ ವಿಚಾರದಿಂದ ದೂರವಿರುವುದೂ ಇಲ್ಲ. ನಾನು ನಿಮ್ಮ ವಿಧಾನಗಳನ್ನು ಜಗತ್ತಿನ ಉದ್ಧಾರದ ದಾರಿಗಳೆಂದು ನಂಬುವೆನು.-ನಾನು ನನ್ನ ಪುಸ್ತಕವನ್ನು ಬರೆದು ಮುಗಿಸಿ ಹಿಂದೂದೇಶಕ್ಕೆ ನೆರವಾಗಲನುವಾದರೆ, ಇದರಿಂದ ನಾನು ನನ್ನ ದೇಶಕ್ಕೆ ನೆರವಾದಂತಾಗುವುದು. ಎಂದಿರುವರು.

ಅವರು ಯುರೋಪಿನ ಇಂದಿನ ಪರಿಸ್ಥಿತಿಗಳನ್ನು ವಿವರಿಸುತ್ತಾ, ಯುರೋಪಿನ ಇಂದಿನ ಸಂಘಟನೆಯ ದೃಶ್ಯವು ನನ್ನಲ್ಲಿ ಬಲವಾಗಿ ಬೇರೂರಿದ ಅಹಿಂಸಾವಿಚಾರವನ್ನು ಬೇರ್ಪಡಿಸಲಾರದು. ಕಳೆದ ಇಪ್ಪತ್ತು ವರ್ಷಗಳಲ್ಲಿ ನಡೆದ ವಿದ್ಯಮಾನಗಳಿಂದ ತಿಳಿಯುವುದೇನೆಂದರೆ, ಹಿಂಸೆಯು ಎಷ್ಟುಪ್ರಯೋಜನಕ್ಕೆ ಬಾರದು, ಮತ್ತು ಅದರಿಂದ ಏನಾದರೂ ಪರಿಣಾಮ

ಜವಾಹರರು ವೈಸರಾಯರ ಭಾಷಣದ ಕುರಿತು.

ಪತ್ರಿಕಾಪ್ರತಿನಿಧಿಯೊಬ್ಬನು ಪಂಡಿತರ ಕೂಡೆ ಇತ್ತೀಚಿಯ ವೈಸರಾಯರ ಭಾಷಣದ ಕುರಿತು ಅಭಿಪ್ರಾಯವೇನೆಂದು ಕೇಳಿದಾಗ ಅವರು ತಾನು ವೈಸರಾಯರ ಭಾಷಣವನ್ನೋದಲಿಲ್ಲೆಂದರು ಆಗ ಸಮೀಪದಲ್ಲಿ ನಿಂತುಕೊಂಡಿದ್ದ ತನ್ನೊಬ್ಬ ಮಿತ್ರನ ಕೂಡೆ ಹೀಗೆಂದರು. ಏನು ಈಗ ಜನರು ವೈಸರಾಯರು ಹೇಳುವ ಮಾತುಗಳ ಕಡೆಗೆ ಹೆಚ್ಚು ಲಕ್ಷಿಸುವರೇ?

ಹಕೀಮರೊಬ್ಬರ ಆನೆ ಸವಾರಿ

ಲಕ್ನೋದ ಬಸ್ತಿಯೆಂಬ ಊರಿನಲ್ಲಿ ಒಬ್ಬ ಹಕೀಮನು ಆನೆಯ ಮೇಲೆ ಸವಾರಿ ಮಾಡಿಕೊಂಡು ಹೋಗುತಿದ್ದನು ಅವನು ದಾರಿಯಲ್ಲಿ ಹೋಗುವಾಗ ಕೆಲ ಜನರು ಬಗ್ಗಿ ವಂದಿಸಿದರು. ಆನೆಯು ಈ ಜನರು ಬಗ್ಗಿದ ರೀತಿಯನ್ನು ಕಂಡು ತನ್ನ ಸೊಂಡಿಲ ಚಲನೆಯ ಕುರಿತು ನಕಲಿ ಮಾಡುವರೆಂದು ಎಣಿಸಿ, ಸಿಟ್ಟುಗೊಂಡು ಹುಚ್ಚುಗಟ್ಟಿತು. ಮಾವುತನನ್ನು ಬಲವಾಗಿ ಎಳೆದು ಕೆಳಗುರುಳಿಸಿತು. ಹಕೀಮನು ತನ್ನ ಪೀಠದ ಮೇಲೆ ಬಲವಾಗಿ ಕೂತುಕೊಂಡನು. ಆನೆಯು ಸಿಕ್ಕಾಬಟ್ಟೆ ಓಡಿತು ಹಕೀಮನು ಅನ್ನನೀರಿಲ್ಲದೆ ೪೮ತಾಸು ಆನೆಯ ಬೆನ್ನ ಮೇಲಿದ್ದನು. ಕೊನೆಗೆ ಅಕಸ್ಮಾತ್ತಾಗಿ ಒಂದು ಮನೆಯ ಬಳಿ ಇರುವಾಗ, ಆನೆಯ ಮೇಲಿಂದ ಮನೆಯ ಮಾಡಿನ ಮೇಲಕ್ಕೆ ನೆಗೆದು ಪಾರಾದನು.

ಅಖಿಲಭಾರತ ವಿದ್ಯಾರ್ಥಿ ಪರಿಷತ್ತಿನಲ್ಲಿ ಪಂಡಿತ ನೆಹರುಗಳು

'ಬ್ರಿಟಿಷ ಸಾಮ್ರಾಜ್ಯಶಾಹಿಯು ನಮ್ಮನ್ನು ನಮ್ಮ ಸ್ವಾತಂತ್ರ್ಯ ಗಳಿಸದಂತೆ ತಡೆಯಲು ಸಮರ್ಥವಾಗಿಲ್ಲವೆಂಬುದರಲ್ಲಿ ನನಗೆ ಎಳ್ಳಷ್ಟು ಅನುಮಾನವಿಲ್ಲ" ವೆಂದು ಪಂಡಿತ ನೆಹರುಗಳು ಕಲ್ಕತ್ತದಲ್ಲಿ ಜರಗಿದ ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನದಲ್ಲಿ ಉದ್ಗಾರ ತೆಗೆದರು. ಪಂಡಿತರು ಸುಮಾರು ಒಂದು ಗಂಟೆಯ ತನಕ ಇಂದಿನ ಅಂತರರಾಷ್ಟ್ರೀಯ ಸಮಸ್ಯೆ,ವಿದ್ಯಾರ್ಥಿಗಳು ಮತ್ತು ಹಿಂದೂದೇಶದ ಸ್ವಾತಂತ್ರ್ಯ ಚಳವಳ ಇವೇ ಮೊದಲಾದ ವಿಷಯಗಳಲ್ಲಿ ಮಾತಾಡಿದರು. ಅಂತರರಾಷ್ಟ್ರೀಯ ಪರಿಸ್ಥಿತಿ, ದೇಶದ ವಿಚಾರ ಇವೇ ಮೊದಲಾದ ವಿಷಯಗಳಲ್ಲಿ ಚರ್ಚೆ ನಡೆಯಿತು. ಈ ಸಮ್ಮೇಳನವು ಚೈನಾ, ಸ್ಪೈಯಿನ ಮತ್ತು ಪೆಲಸ್ತೈನು ಮೊದಲಾದ ದೇಶಗಳಲ್ಲಿ ಸಾಮ್ರಾಜ್ಯಶಾಹಿತ್ವಕ್ಕೆ ವಿರುದ್ಧ ನಡೆಯುವ ಚಳವಳದಲ್ಲಿ ಅಲ್ಲಿಯ ವಿದ್ಯಾರ್ಥಿಗಳ ಮತ್ತು ಜನತೆಯ ಕಡೆಗಿರುವ ತಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಿತು ಅಲ್ಲದೆ ನರೇಂದ್ರರ ವಿರುದ್ಧ ಹೋರಾಟ ನಡೆಸುವ ಆಶ್ರಿತ ಸಂಸ್ಥಾನಗಳ ಕಡೆಗೆ ತನಗಿರುವ ಸಹಾನುಭೂತಿಯನ್ನೂ ಪ್ರಕಟಿಸಿತು. ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಮಹತ್ವ ಮತ್ತು ಕೋಲೇಜಿನಲ್ಲಿ ಮಿಲಿಟರಿ ಶಿಕ್ಷಣದ ಆವಶ್ಯಕತೆಯ ಕುರಿತು ತಮ್ಮ ಅಭಿಪ್ರಾಯವನ್ನು ಸಮರ್ಥಿಸಿತು. ಆದರೆ ಸಾಮ್ರಾಜ್ಯಶಾಹಿ ಯುದ್ಧಕ್ಕಾಗಿ ಜನಧನ

ಕ್ಕೆ ಬಂದಿ
ಗಳು ವಿದ್ಯಾ
ತಂತ್ರ್ಯವನ
ಲಾಯಿತು,
ಮಟ್ಟಿಗೆ
ಹಾಕಬಾರ
ನಲ್ಲಿ ಕಡಿ
ತ್ತು ವ್ಯಾಯ
ದಾರಿಯಲ್ಲಿ
ಬೇಕೆಂದು

ಚೇ

, ನೆವಿಲೇ
ಷ ರಾಜನೀ
ಸ್ವಭಾವಿಯ
ವನ್ನು ಪ
ಯಾವ ಕ
ನು. ಅವ
ಒಳ್ಳೆ ನು
ಪ್ರತಿಯೊಂ
ಕೊಂಡೇ

ಇನ್ನು
ಮಂತ್ರಿ
ಬ್ಬ ದಕ್ಷಿಣ
ಸೂಕ್ಷ್ಮ
ಇವನು ಪ
ವಾಗಿಯೋ
ಫ್ರೆಂಚರಂತೆ
ವವನಲ್ಲ.
ಆಗಿರುವನ
ಕೊಂಡು

ಈ ನಾಲ್
ಮಂದಿರವಲ್ಲಿ
ವ ರಾಜಕೀ
ಗಡವು ಗೆಲ್ಲ
ಆದರೆ ಇ
ಲ್ಲವೂ
ಚತುರ
ರೊನ್ನಬ್ಬ
ಲಾರರ

ಜ
ಕಲ್ಕತ್ತೆ

ಶ್ರೀ ಎಸ
ಲ್ಕತ್ತದ
'ಜಾತಿ ಪಾ
ಅವೋಘ

ಆನೆಸವಾರಿ – ಅಹಂಭಾವವು ನಾಶವಾಗಬೇಕು

ನಿಲಯದ ವೈಸ್‌ಛಾನ್ಸೆಲ್ಲರೂ ಆದ ಖಾನ ಬಹದೂರು ಅಬ್ದುಲ್ ಹಕ್ಕರು ಅಗ್ರಾಸನ ವಹಿಸಿದ್ದರು ಸಭಾಭವನವು ಸಭಿಕರಿಂದ ಕಿಕ್ಕಿರಿದಿದ್ದಿತು. ಸತ್ಯಮೂರ್ತಿಯವರು ತಮ್ಮ ಭಾಷಣದಲ್ಲಿ ಹೀಗೆಂದರು.

'ಎಲ್ಲಾ ಮತಗಳೂ ಸಹನೆಯ ಕುರಿತ ಬೋಧೆಯನ್ನೀಯುವುವು. ನಾನೂ ಒಬ್ಬ ಧರ್ಮದಲ್ಲಿ ಸಂಪೂರ್ಣ ನಂಬುಗೆ ಹಿಡಿದ ನಿದ್ದೇನೆ. ಧರ್ಮ ಶ್ರದ್ಧೆಯುಳ್ಳವನು ಅನ್ಯ ಧರ್ಮವು ತನ್ನ ಧರ್ಮದಷ್ಟೇ ಯಥಾರ್ಥತೆಯುಳ್ಳದ್ದು, ಪ್ರಾಮಾಣಿಕತೆಯಿಂದ ಕೂಡಿದುದು ಎಂದು ಭಾವಿಸತಕ್ಕದ್ದು. ಅನಂತ ಆನಂದದ ಕುರಿತು ಬೋಧಿಸುವ ಪ್ರತಿಯೊಂದು ಮತ ವಿಚಾರದ ಮುಂದೆ, ಹಗೆತನ, ತಪ್ಪುಭಾವನೆ ಹೊಡೆದಾಟಗಳೆಲ್ಲಾ ನಿರರ್ಥಕವು. ಈಗಣ ರಾಜ್ಯಾಧಿಕಾರವು ಪ್ರಜಾಸತ್ತವಾದುದು, ಪ್ರಜೆಗಳಿಗಾಗಿ ಪ್ರಜೆಗಳಿಂದ ಪ್ರಜಾಪರಿಪಾಲನೆಯನ್ನು ಹೊಂದುವ ಪ್ರಜಾ ಸ್ವಾತಂತ್ರ್ಯ ಯುಗದಲ್ಲಿ ಪರಸ್ಪರ ಭಿನ್ನತೆಗೆ ದಾರಿಯಿಲ್ಲವು. ಪ್ರತಿಯೊಬ್ಬನೂ ತಾನು ಭಾರತೀಯನೆಂಬುದನ್ನು ಆರಂಭದಿಂದ ಅಂತ್ಯದವರೆಗೂ ನೆನಪಿಡತಕ್ಕದ್ದು. ಹಿಂದೂದೇಶದಂತೆ, ಹಿಂದೂ ಮುಸಲ್ಮಾನ ಅಥವಾ ಬಂಗಾಳಿ, ಮದ್ರಾಸಿಗಳು ಎಂಬ ಈ ರೀತಿಯ ವಿಭಾಗಗಳ ಮನೋವೃತ್ತಿಯು ಜಗತ್ತಿನ ಬೇರಾವ ದೇಶದಲ್ಲಿಯೂ ಇರುವುದಿಲ್ಲ. ಪ್ರಾಂತೀಯತೆಯ ಮನೋಭಿಪ್ರಾಯವು ರಾಜಕೀಯ ಶರೀರದಲ್ಲಿ ಹರಡಿರುವ ಕರಾಳ ವಿಷವು. ಇದು ಜಾತೀಯತೆಗಿಂತಲೂ ಕೆಡುಕಾದುದು. ನಾವು ಅಭಿವೃದ್ಧಿ ಹೊಂದಬೇಕಾದರೆ ಈ ವಿಷವನ್ನು ತ್ಯಜಿಸತಕ್ಕದ್ದು. ಇಂಥಾ ವಿಚಾರವು ಬಹುಬೇಗನೆ ಯಶಸ್ವಿಯಾಗುವುದು ಕಷ್ಟವೆಂಬುದು ನಾನು ಬಲ್ಲೆ. ನಾನು ದೇವರೊಡನೆ ನಮಗೆ ಇದರಲ್ಲಿ ಕೃತಾರ್ಥರನ್ನಾಗಿ ಮಾಡೆಂದು ಬೇಡುವೆನು.

ನಾವು ಭಾರತೀಯರು, ನಮ್ಮದು ಭರತಭೂಮಿಯೆಂದು ಭಾಷಿಸುವುದು ಮಾತ್ರವಲ್ಲದೆ, ನಮ್ಮ ಮಕ್ಕಳು, ನಮ್ಮ ಭಾವೀ ಜನಾಂಗವು ಇಂಥಾ ಅಪಾಯಕ್ಕೆ ತುತ್ತಾಗದಂತೆ ನಾವು ತಕ್ಕ ಎಚ್ಚರ ತೆಗೆದುಕೊಳ್ಳತಕ್ಕದ್ದು. ಮುಂದಕ್ಕೆ ವಿದ್ಯಾರ್ಥಿಗಳನ್ನು ದಾಖಲುಮಾಡುವಾಗ ಹಿಂದೀಯರೆಂದು ಮಾತ್ರ ಕಾಣಿಸಿಕೊಳ್ಳಬೇಕು. ಯಾವ ಜಾತಿಯವನೆಂಬ ವಿಭಾಗವನ್ನು ಬಿಟ್ಟುಬಿಡಬೇಕು'ಎಂದು ನಿಬಂಧನೆಯನ್ನು ಪ್ರತಿಯೊಂದು ಪ್ರಾಂತೀಯ ಸರಕಾರವು ರಚಿಸಬೇಕೆಂದು ನನ್ನ ಸಲಹೆಯಿದೆ. ಇನ್ನು ಕೋಮುವಾರು ಇಲೆಕ್ಷನಿನ ವಿಚಾರ. ಆಧುನಿಕ ಯುಗದ ಪ್ರಜಾನುರಾಗ, ಪ್ರಜಾಪ್ರಭುತ್ವದ ಸರಕಾರ ವ್ಯವಸ್ಥೆಯಲ್ಲಿ ಕೋಮುವಾರು ಇಲೆಕ್ಷನಿನ ಕ್ರಮವು ಸರಿಯಲ್ಲ. ಸಮಾಜಸೇವೆ, ಆರ್ಥಿಕ ಸಮಸ್ಯೆಯಲ್ಲಿ ಜಾತೀಯತೆಯ ಪ್ರಶ್ನೆಯು ಇರಲಾರದು. ತೆರಿಗೆ ಎತ್ತುವ ಕ್ರಮದಲ್ಲಿ ಕೋಮುವಾರು ವಿಚಾರವನ್ನು ಪ್ರಯೋಗಿಸಿದರೆ ಯಾವ ಸರಕಾರವೂ ನಾಶವಾಗದೆ ಉಳಿಯಲಾರದು. ಕೋಲೆರಾ, ಪ್ಲೇಗು, ಸಿಡುಬು ಮೊದಲಾದ ಸಾಂಕ್ರಾಮಿಕ ರೋಗಗಳು ಹಿಂದೂಮುಸಲ್ಮಾನರೆಂಬ ಭೇದವನ್ನು ಗಣಿಸಲಾರವು. ಕ್ಷಾಮವು ಜಾತೀಯತೆಯ ಪಕ್ಷಪಾತವನ್ನು ಮಾಡುವುದಿಲ್ಲ. ಸರಕಾರದ ಪ್ರಾಮುಖ್ಯ ಸಮಸ್ಯೆಯು ಜನತೆಯ ದಾರಿದ್ರ. ಮತ್ತು

ಕೋಮುವಾರು ವಿಭಾಗದ ಮೇರೆ ಮೀರಿ, ಮಾನನೀಯತೆಯ ಉಪಕಾರಕ್ಕಾಗಿ ಸಾಮಾಜಿಕ, ರಾಜಕೀಯ ಸುಧಾರಣೆಗಾಗಿ ಗೇಯುವ ದೊಡ್ಡ ಜಾತಿಗಳಲ್ಲಿ ನನಗೆ ತುಂಬಾ ವಿಶ್ವಾಸವಿದೆ. ಹಿಂದೂ ಧನಿಕ ಮತ್ತು ಮುಸಲ್ಮಾನ ಧನಿಕನ ಹಲವು ವಿಚಾರಗಳು ಒಂದೇ; ಹಿಂದೂ ಕೂಲಿಯ ಅಥವಾ ಮಹಮ್ಮದೀಯ ಆಳಿನ ಸಮಸ್ಯೆಯಲ್ಲಿ ಹೆಚ್ಚಿನ ಭೇದವಿಲ್ಲ

ರಾಜಕೀಯ ಗೊಂದಲ, ಅಥವಾ ಸಮಾಜವಿನಾಶಕ್ಕೆಡೆಯಾಗದಂತೆ ನಾವು ಮುಖ್ಯವಾಗಿ, ಆರ್ಥಿಕ ವಿಚಾರದ ಮೇಲೆ ರಾಜಕೀಯ ಪಂಗಡಗಳನ್ನು ನಿರ್ಮಾಣಗೊಳಿಸಬೇಕಾಗುವುದು. ಆಧುನಿಕ ಟರ್ಕಿಯ ಪಿತ ಕೆಮಾಲ ಅಟ ಟರ್ಕನ ಮರಣಕ್ಕಾಗಿ ಎಲ್ಲಾ ಜಾತಿಯವರೂ ದುಃಖಿಸಿದರು. ಎಲ್ಲಾ ಯುವಕರೂ, ಅಟಟರ್ಕನ ಜೀವನ ಪ್ರತಿಭೆಯನ್ನು ಮನಗಾಣಬೇಕು; ಟರ್ಕಿಗೆ ಪುನರ್ಜನ್ಮವನ್ನಿತ್ತ ಕೆಮಾಲನ ಜೀವನ ರಹಸ್ಯವನ್ನು ಎಲ್ಲರೂ ಅರಿತುಕೊಳ್ಳಬೇಕೆಂದು ನಾನು ಕೋರುವೆನು. ಕೋಮುವಾರು ವಿಚಾರವು ಇರಬೇಕೆಂದಿದ್ದರೆ ಇರಲಿ; ಆದರೆ, ಅವರವರ ಉತ್ಪತ್ತಿ, ಅವರವರ ಪರಿಸ್ಥಿತಿಗನುಸಾರವಾದ ಪ್ರಶ್ನೆಯನ್ನವಲಂಬಿಸಿಕೊಂಡಿರುವುದು ಸರಿ. ಜನತೆಯೊಳಗಣ ಪರಸ್ಪರ ಭಿನ್ನಭಾವವು ತಲೆದೋರುವಾಗ, ತಮ್ಮ ಮುಂದಿರುವ ಸಮಸ್ಯೆಯ ಯಥಾರ್ಥ ವಿಚಾರದ ಪರಿಚಯವಿರಬೇಕು. ಪರಸ್ಪರ ಸಹಿಷ್ಣುತೆ, ಹಿತಭಾವನೆ, ವಿಶ್ವಾಸವು ಇಂಥಾ ಸಮಸ್ಯೆಯನ್ನು ಬಿಡಿಸುವಾಗ ಇರಬೇಕಾಗುತ್ತದೆ. ಜನರು ತಮ್ಮ ಸಾರ್ವಜನಿಕ ಜೀವನವನ್ನು ವಿಶಾಲಗೊಳಿಸಬೇಕು. ತಮ್ಮ ಅಭಿಪ್ರಾಯದಂತೆ ಬೇರೆಯವರ ಅಭಿಪ್ರಾಯವನ್ನು ಗೌರವಿಸಲಿಕ್ಕೂ, ಗ್ರಹಿಸಲಿಕ್ಕೂ ಕಲಿತುಕೊಳ್ಳಬೇಕು. ಇಲ್ಲವಾದರೆ, ಜಾತಿಜಾತಿಗಳೊಳಗೆ ಪರಸ್ಪರ ಹೊಡೆದಾಟ ನಡೆಸುವ ಇದೊಂದು ಪ್ರದರ್ಶನ ಶಾಲೆಯಂತಾಗುವುದು. ದೊಡ್ಡ ಹುದ್ದೆಯ ಸಂಬಳವು 500 ರೂ. ಗಿಂತ ಮಿಕ್ಕಕೂಡದೆಂಬ ನಿರ್ಣಯವು ವ್ಯವಹಾರ್ಯವಾದಲ್ಲಿ ಹುದ್ದೆಗಳ ಆಡಂಬರವು ತಗ್ಗುವುದು, ಆಗ ಶಿಕ್ಷಿತ ತರುಣರಿಗೆ ಉದ್ಯೋಗ ಗಳಿಸುವ ಹಲವು ದಾರಿಗಳು ಗೋಚರವಾಗುವವು."

ರಾಜಕೀಯ ಸಂಕಷ್ಟ ನಿವಾರಣೆಯ ಕುರಿತಾಗಿ ಸತ್ಯಮೂರ್ತಿಯವರು ಪ್ರಸ್ತಾಪಿಸುತ್ತಾ ಹೀಗೆಂದರು. 'ರಾಜಕೀಯ ಚಳವಳವನು ಮಹಾತ್ಮ ಗಾಂಧಿಯವರು ಬ್ರಿಗಿ, ಹಿಂದೂದೇಶದ ಸ್ವಾತಂತ್ರ್ಯಸಾಧನೆಯ ಮಹಾ ಉದ್ದೇಶದ ಧ್ಯೇಯದಿಂದ ವ್ಯವಹಾರಕ್ಕೆ ತಂದರು. ಪ್ರಜೆಗಳಿಂದಲೇ ನೇಮಕಹೊಂದಿದ ಸಂಸ್ಥೆಗಳ ವಿರುದ್ಧವಾಗಿ ಈ ರೀತಿಯ ಚಳವಳವನ್ನು ಮುಂದೊಡ್ಡುವುದು ಪ್ರಜಾಪ್ರಭುತ್ವದ ಧ್ಯೇಯ, ಹಿತಸಾಧನೆಯೆನಿಸಲಾರದು, ಸರಿಯಾಗಲಾರದು. ಇಂಥಾ ವಿಚಾರಗಳ ನಿವೃತ್ತಿಯು ಯೋಗ್ಯ ದಾರಿಯೂ ಮತದಾನದ ಸಮಸ್ಯೆಯಲ್ಲಿ ಪ್ರಯುಕ್ತಿಸುವುದರಲ್ಲಿ ನಿವೃತ್ತಿಹೊಂದುವಂತೆ ನೋಡಬೇಕು. ಬ್ರಿಟಿಷ ಸಾಮ್ರಾಜ್ಯಶಾಹಿಯ ವಿರುದ್ಧವಾಗಿ ಪ್ರಯೋಗಿಸಿದ ಸಾಧನವನ್ನೇ ನಾವೇ ನೇಮಕಮಾಡಿದ ಸರಕಾರದ ವಿರುದ್ಧ ಪ್ರಯೋಗಮಾಡುವುದು ಪ್ರಜಾಸತ್ತೆಗೆ ವಿರುದ್ಧ." ಅನಂತರ ಸತ್ಯಮೂರ್ತಿಯವರು ದಿನವಹಿ ಸಮಸ್ಯೆಗಳನ್ನು ಸರಿ ನೋಟದಿಂದ ಕಂಡು, ಸರಿ ರೀತಿಯಲ್ಲಿ ಸರಿಯಾಗಿ ಬಿಡಿಸುವ ನಿರ್ಧಾರಮಾಡುವಂತೆ ಕೇಳಿಕೊಂಡರು. ಬಹುಪಕ್ಷದವರು ಅಲ್ಪ ಸಂಖ್ಯಾಕರ ವಿಶ್ವಾಸ ಪ್ರೇಮಕ್ಕೆ ಪಾತ್ರರಿರುವಂತೆ ನೋಡತಕ್ಕದ್ದೆಂದರು. ಜನರು ಪರಸ್ಪರ ಪ್ರೇಮ, ಹಿತ, ಮತ್ತು ಗೌರವವನ್ನು ಹೆಚ್ಚಿಸಿಕೊಳ್ಳುವರೆ ಕಲಿಯಬೇಕೆಂದು ವಿನಂತಿಸಿದರು.

ವಂದೇ ಮಾತರಂ

ಹೈದರಾಬಾದಿನಲ್ಲಿ ವಿದ್ಯಾರ್ಥಿಗಳ ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳೊಳಗೆ ನಡೆದ ಸಂಧಾನ ಪ್ರಯತ್ನವು ಬಿದ್ದುಹೋದುದಾಗಿ ತಿಳಿದುಬರುತ್ತದೆ. ಚಾನ್ಸೆಲ್ಲರ ಮತ್ತು ವಿದ್ಯಾರ್ಥಿಗಳೊಳಗೆ ಯಾವ ಸಂಘಟನೆಯುಂಟಾಯಿತೆಂಬುದು ತಿಳಿದುಬಂದಿಲ್ಲ. ಸರ್. ಅಕ್ಬರ್ ಹೈದರಿಯವರು ವಂದೇ ಮಾತರಮ್ ದೇಶಗೀತೆಯನ್ನು ಹಾಡುವುದರಲ್ಲಿ ಯೂನಿವರ್ಸಿಟಿಯ ಆಕ್ಷೇಪವನ್ನು ರದ್ದುಗೊಳಿಸಬೇಕೆಂಬ ವಿದ್ಯಾರ್ಥಿಗಳ ಶರ್ತದ ಕುರಿತು ಈ ರೀತಿ ಅಭಿಪ್ರಾಯಕೊಟ್ಟಿರುವರಾಗಿ ತಿಳಿಯುತ್ತದೆ. ವಿದ್ಯಾರ್ಥಿಗಳು ವಂದೇಮಾತರಮ್ ಗೀತೆಯನ್ನು ವೈಯಕ್ತಿಕವಾಗಿ ಹಾಡುವುದರಲ್ಲೇನೂ ತಡೆಯಿಲ್ಲ. ಆದರೆ, ಪ್ರಾರ್ಥನೆಯ ಹಾಡನ್ನಾಗಿ ಎಲ್ಲರೂ ಸೇರಿ ಹಾಡುವುದರಲ್ಲಿ ಮಾತ್ರ ಅಧಿಕಾರಿಗಳ ತಡೆಯಿದೆ. ಇಂಥಾ ಹಾಡಿನಿಂದ ಮುಸಲ್ಮಾನ ವಿದ್ಯಾರ್ಥಿಗಳ ಮನನೋಯುವ ಸಂದರ್ಭವಿರಬಹುದಾದುದರಿಂದ ಈ ರೀತಿಯ ಆಕ್ಷೇಪ ವಿರಗೊಡಿಸಬೇಕಾಗುತ್ತದೆ. ಬಂಕಿಮಚಂದ್ರಬಾಬುಗಳ ವಿಷಯದಲ್ಲಿ ನನಗೆ ತುಂಬಾ ಅಭಿಮಾನವಿದೆ. ಅವರ ಬರಹಗಳೆಂದರೆ ನನಗೆ ಮೆಚ್ಚುಗೆ. ಆದರೆ ಯೂನಿವರ್ಸಿಟಿ ಅಧಿಕಾರಿಗಳು ಇಂಥಾ ವಿಷಯಗಳಲ್ಲಿ ಭಿನ್ನಭಿನ್ನ ಮತಗಳ ವಿದ್ಯಾರ್ಥಿಗಳೊಳಗೆ ಕಲಹಕ್ಕಾಸ್ಪದವಾಗದಂತೆ ನೋಡುವುದು ಅಗತ್ಯವೆಂದರು. ವಿದ್ಯಾರ್ಥಿಗಳು ನಿಶ್ಚಿತವಾದ ಅಭಿಪ್ರಾಯವೇನನ್ನೂ ಕೊಡಲಿಲ್ಲ. ಮತ್ತು ತಮ್ಮ ಸಹೋದ್ಯೋಗಿಗಳಂತೆ ಈ ವಿಷಯ ಆಲೋಚಿಸಿ ಚಾನ್ಸೆಲ್ಲರ ಅಭಿಮತವನ್ನು ಸ್ವೀಕರಿಸಕೂಡದೆಂಬ ನಿರ್ಧಾರಕ್ಕೆ ಬಂದಿದ್ದರಾಗಿ ತಿಳಿಯುತ್ತದೆ.

ಸರ್. ಅಕ್ಬರ್ ಹೈದರಿಯಂಥವರು ವಂದೇ ಮಾತರಮ್ ಗೀತೆಯಲ್ಲಿ ಮುಸಲ್ಮಾನ ಮತಕ್ಕೆ ವಿರುದ್ಧವಾದ ವಿಷಯಗಳಾವುದೂ ಇರುವುದಿಲ್ಲವೆಂಬುದನ್ನು ತಿಳಿದಿದ್ದೂ, ಅದು ಮುಸಲ್ಮಾನ ವಿದ್ಯಾರ್ಥಿಗ ನ್ಯಾಯದಲ್ಲಿ ಹೆಚ್ಚಿನ ಸಾರವಿಲ್ಲ. 'ವಂದೇ ಮಾತರಮ್' ದೇಶಗೀತೆಯಂತೆ ಸ್ಫುರಣಾತ್ಮಕವಾದ ಹಿಂದೀಯರಲ್ಲಿ ರಾಷ್ಟ್ರಭಾವನೆಯನ್ನುಂಟುಮಾಡುವ ಭೇದ-ಭೇದವಿಲ್ಲದ ಸರ್ವರೂ ಹಾಡಬಹುದಾದ ಬೇರೆ ಗೀತೆಯಿದೆಯೆನ್ನಲು ಬರುವುದಿಲ್ಲ. ಬಂಕಿಮಚಂದ್ರಚಟರ್ಜಿಯವರು, ಹಿಂದುವಾಗಿರಬಹುದು; ಆದರೆ ಅವರ ಉದಾತ್ತ ವಿಚಾರವು ಜಾತಿ–ಮತಗಳಿಂದ ಮೇಲಾದುದು. ಈ ರಾಷ್ಟ್ರಗೀತೆಯನ್ನು ಅತ್ಯಾದರದಿಂದ ಹಾಡುವ ಹಲವು ಮುಸಲ್ಮಾನರಿದ್ದಾರೆ. ಮಾತ್ರವಲ್ಲ ಇಂಥಾ ಸ್ಫೂರ್ತಿದಾಯಕವಾದ ಐಕ್ಯ ಭಾವನೆಯ ಗೀತೆಯ ನಿಜ ವಿಚಾರವನ್ನು ಬಾಲಕರಿಗೆ ಬೋಧಿಸಿ, ಅವರ ತಪ್ಪು ಭಾವನೆಯನ್ನು ದೂರಮಾಡುವಂತೆ ತಿಳಿದ ಮುಸಲ್ಮಾನ ಬಂಧುಗಳು ಸಾಧಿಸುವುದು ದೇಶಹಿತದೃಷ್ಟಿಯಿಂದ ಅಗತ್ಯ.

ವೇಣೂರು—ಶ್ರೀ ಪಾರ್ಶ್ವನಾಥ ಸ್ವಾಮಿ ಪಂಚಕಲ್ಯಾಣ ಪೂಜಾಮಹೋತ್ಸವವು ಇದೇ ತಾರೀಕು 25-1-39 ರಿಂದ 6-2-39ರ ತನಕ ಶ್ರೀ ಗೋಮಟೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಗಂಧಕುಂಭಾಭಿಷೇಕ ಮಹೋತ್ಸವ ಜರಗುವದು. ವೇಣೂರು, ಮೂಡಬಿದ್ರೆಯಿಂದ 12 ಮೈಲು ದೂರವಿರುವ ಇತಿಹಾಸ ಪ್ರಸಿದ್ಧವಾದ ಈ ಸ್ಥಳವು ಪ್ರಕೃತಿಸೌಂದರ್ಯದಿಂದ ಮನೋಹರವಾಗಿದೆ. ಇಲ್ಲಿ 36 ಫೀಟು ಉನ್ನತವಾಗಿರುವ ಶ್ರೀ ಗೋಮಟೇಶ್ವರ ಸ್ವಾಮಿಯ ಮಹಾಮೂರ್ತಿಯು ವಿರಾಜಿಸಲ್ಪಟ್ಟಿದೆ. ಇಲ್ಲಿಯ ಶ್ರೀ ಪಾರ್ಶ್ವನಾಥಸ್ವಾಮಿಯ ಬಸದಿಯನ್ನು, ಮೂಡಬಿದ್ರೆಯ ಸ್ವಸ್ತಿ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಯವರು ಸಹಸ್ರಾರು ರೂಪಾಯಿ ಖರ್ಚುಮಾಡಿ ಜೀರ್ಣೋದ್ಧಾರಮಾಡಿಸಿ ಪಂಚಕಲ್ಯಾಣ ಪೂಜಾಮಹೋತ್ಸವವನ್ನು ಜರಗಿಸುವುದಾಗಿದೆ. ಈ ಸಮಾರಂಭಕ್ಕೆ ಸಲುವಾಗಿ ಬರುವ ಯಾತ್ರಿಕರಿಗೆ ಉತ್ತಮ ವ್ಯವಸ್ಥೆಗೊಳಿಸಲಾಗಿದೆ ಎಂದು ಸದರಿ ಮಹೋತ್ಸವದ ಕಮಿಟಿಯವರು ತಿಳಿಸುತ್ತಾರೆ.

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

R.E.P. 665/1938 R.E.A. 101/1938

O.S. 341/1935

ಅನಂತಯ್ಯ-ವೆಂಕಪ್ಪಯ್ಯನವರ ಮಗ. ಮಂಗಳೂರು ತಾಲೂಕು ಕಾವಳ ಮೂಡೂರು ಗ್ರಾಮ — **ವಾದಿ ಅರ್ಜಿದಾರ**

ಕೃಷ್ಣ ವಿಟ್ಟಲತ್ತಾಯ, ಶ್ರೀನಿವಾಸ ವಿಟ್ಟಲತ್ತಾಯರ ಮಗ ಮಂಗಳೂರು ಟೌನ್, ಕೋರ್ಟು ರಸ್ತೆಯಲ್ಲಿ — **ಪ್ರತಿವಾದಿ ಎದ್ರಿ**

ಮೇಲ್ಕಂಡ ಅಮಲ್ಜಾರಿ ವ್ಯವಹರಣೆಯಲ್ಲಿ ಅರ್ಜಿದಾರನ, ಎದ್ರಿಯ ಹಕ್ಕಿನ ಸ್ಥಿರಾಸ್ತಿಯ ವಿಕ್ರಯದ ಬಗ್ಗೆ ಮತ್ತು ಸದ್ರಿ ಏಲಂ ಸಮಯ ಎಲ್ಲರಂತೆ ಅರ್ಜಿದಾರನು ದರ್ಖಾಸ್ತಿಗೆ ನಿಲ್ಲುವರೆ ಪರ್ಮಿಶನ್ ಕೊಡಬೇಕಾಗಿ ಕೂಡಾ ಅರ್ಜಿಕೊಟ್ಟಿರುವುದರಿಂದ ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1939ನೇ ಇಸ್ವಿ ಜನವರಿ ತಾರೀಕು 16ಕ್ಕೆ ವಾಯಿದೆ ಇರುತ್ತದೆ. ನಿಮಗೆ ಆಕ್ಷೇಪಣೆಗಳು ಇದ್ದ ಪಕ್ಷಕ್ಕೆ ಸದ್ರಿ ವಾಯಿದೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದೆಂದು ಈ ಮೂಲಕ ನಿಮಗೆ ತಿಳಿಸಲಾಗಿಯದೆ.

ಕೋರ್ಟು ಹುಕುಂ ಪ್ರಕಾರ

ಪುತ್ತೂರು. ತಾ. 3-1-1939 | S Soorappaya, Vakil

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)
ತಾ. 2-1-'39

ದ. ಕ. ರಜಕಕುಲೋದ್ಧಾರಕ ಸಂಘ— ಈ ಸಂಘದ ಪ್ರಥಮ ವಾರ್ಷಿಕ ಸಭೆಯು ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಕಳೆದ ತಾ. ೨೭ನೇ ಅಪರಾಹ್ನ 3ಘಂಟೆಗೆ ಸರಿಯಾಗಿ ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆ ಯಂ. ಎಲ್. ಎ. (ಕೇಂದ್ರ) ಇವರ ಅಧ್ಯಕ್ಷತೆಯಲ್ಲಿ ಜರಗಿತು ರಜಕ ವರ್ಗಕ್ಕೆ ಸೇರಿದ ಮಹಾಜನರು ಎಲ್ಲಾ ತಾಲೂಕಿನಿಂದಲೂ ಹೆಚ್ಚು ಸಂಖ್ಯೆಯಲ್ಲಿ ಬಂದಿದ್ದರು. ಅಧ್ಯಕ್ಷರ ಚುನಾವಣೆ, ಸ್ವಾಗತ ಭಾಷಣಗಳಾದ ಮೇಲೆ ಪ್ರಾರ್ಥನೆ, ವರದಿ ವಾಚನ, ಸಮಾಜದ ಸಂಕಷ್ಟಗಳ ನಿರೂಪಣ, ಸರಕಾರದ ದಾಖಲೆಗಳನ್ನು ಓದಿ ಅರ್ಥ ಪ್ರತಿಪಾದನೆ ಮಾಡಿದ ಮೇಲೆ ಸಭಿಕರ ಪರವಾಗಿ ಶ್ರೀಗಳಾದ ಕೆ ಕೃಷ್ಣರಾಯರೂ, ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿಗಳೂ, ಯು. ಗೋಪಾಲ ನಾಯಕರೂ ಭಾಷಣಮಾಡಿ ಸಮಾಜದವರು ಉತ್ತಮ ವರ್ಗಕ್ಕೆ ಸೇರಿದವರೆಂದೂ, ಅವರ ಆರ್ಥಿಕ ಸ್ಥಿತಿಯು ಕೆಟ್ಟು ಈಗ ವಿದ್ಯೆಯಲ್ಲಿ ಹಿಂದುಳಿದಿರುವರೆಂದೂ, ಆರ್ಥಿಕ ಅಭಿವೃದ್ಧಿಗೆ ಪ್ರಯತ್ನಿಸಿ ಸಮಾಜವನ್ನು ಮುಂದಕ್ಕೆ ತರಬೇಕೆಂದೂ ವಿದ್ಯಾಭ್ಯಾಸಕ್ಕೆ ಸರಕಾರದವರು ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿಕೊಡುವಂತೆ ಮಾಡಬೇಕೆಂದೂ ಸಮಾಜದ ಜನರಲ್ಲಿರಬಹುದಾದ ಕೆಟ್ಟ ಅಭ್ಯಾಸ ಕುಡಿತ, ದ್ಯೂತ ಮೊದಲಾದ ಚಾಳಿಗಳನ್ನು ತ್ಯಜಿಸಿ ಹಿಂದೆ ಸಮಾಜವು ಪಡೆದಿದ್ದ ಉನ್ನತ ಪದವಿಗೆ ಅದು ಹೋಗುವಂತೆ ಮಾಡುವುದು ಅಗತ್ಯವೆಂದೂ, ಅದಕ್ಕಾಗಿ ಸಮಾಜದವರೆಲ್ಲರೂ ಈ ಸಂಘಕ್ಕೆ ಸದಸ್ಯರಾಗಿ ಸೇರಿ ಅದನ್ನು ಬಲಪಡಿಸಿ, ಮತ್ತು ಪ್ರತಿ ಹಳ್ಳಿಯಲ್ಲಿಯೂ ಈ ಸಂಘದ ಶಾಖೆಗಳನ್ನು ಸ್ಥಾಪಿಸಿ ಸಮಾಜವನ್ನು ಉದ್ಧರಿಸಬೇಕಾದುದು ಕರ್ತವ್ಯವೆಂದೂ ಹೇಳಿದರು ಅಧ್ಯಕ್ಷರು ಮೇಲಿನ ಅಭಿಪ್ರಾಯಗಳನ್ನು ಪುಷ್ಟೀಕರಿಸಿ ತಮ್ಮಿಂದಾಗಬಹುದಾದ ಸಹಾಯವನ್ನು ಕೊಡುವುದಾಗಿಯೂ ಹೇಳಿದರು, ಅನಂತರ ಶ್ರೀ. ಬಾಲ ಶೇಷಯ್ಯನವರು ಕೆಲವು ನಕಲಿಗಳನ್ನು ಮಾಡಿ ತೋರಿಸಿದರು ಬರೀ ಕೈಯಿಂದ ವಾದ್ಯ. ಐವತ್ತು ಜನರು ಒಟ್ಟಿಗೆ ಸಂಭಾಷಣೆ ಮಾಡುವಂತೆ ಮಾತಾಡಿದುದು, ನಾಯಿಗಳ ಜಗಳ, ಇತ್ಯಾದಿಗಳು ಚೆನ್ನಾಗಿದ್ದುವು. ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಗಿ ಅತಿಥಿಗಳಿಗೆ ಸತ್ಕಾರವೂ ನಡೆಯಿತು. ಅದೇ ರಾತ್ರಿ ಕಾಳಮದ್ದಳೆ ಸಮಾರಂಭವೂ ಯಶಸ್ವಿಯಾಗಿ ಜರಗಿತು.

ಯುಖರಿಸ್ಟಿಕ್ ಕಾಂಗ್ರೆಸ್—ಮಂಗಳೂರಲ್ಲಿ ಕಳೆದ ತಾ. ೨೭, ೨೮ ಮತ್ತು 29ರಲ್ಲಿ ಡಯೊಸಿಸನ್ ಯುಖರಿಸ್ಟಿಕ್, ಕಾಂಗ್ರೆಸ್ ನಡೆಯಿತು, ಇದಕ್ಕೆ ಜಿಲ್ಲೆಯ ಎಲ್ಲೆಡೆಗಳಿಂದಲೂ ಕಥೋಲಿಕ ಬಂಧುಗಳು ಹೆಚ್ಚು ಸಂಖ್ಯೆಯಲ್ಲಿ ಬಂದಿದ್ದರು. ಕಲ್ಲಿಕೋಟೆ, ತಿರುಚಿನಾಪಳ್ಳಿಯ ಬಿಶೋಪರುಗಳು ಸಹ ಬಂದಿದ್ದರು, ಮೈದಾನದಲ್ಲಿ ಸೊಗಸಾದ ಚಪ್ಪರ ಹಾಕಿದ್ದರು, ಅದರಲ್ಲಿ ಸಮಾರಂಭವು ಜರಗಿತು, ಮೊದಲನೆಯ ದಿನ ಬೆಳಗ್ಗೆ ಮೆರವಣಿಗೆಯಾಗಿ ಸಭಾಸ್ಥಾನಕ್ಕೆ ಹೋದರು. ಅಲ್ಲಿ ಕ್ರಿಸ್ತ ಜಗದ್ಗುರುಗಳಾದ ಪೋಪ್ ಸಾಹೇಬರ ಶುಭ ಸಂದೇಶಗಳ ವಾಚನವಾಯಿತು, ಅನಂತರದಲ್ಲಿ ಮಂಗಳೂರಿನ ಪೂಜ್ಯ ಬಿಶೋಪರು ಯುಖರಿಸ್ಟಿಕ್ ಕಾಂಗ್ರೆಸಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ ಇದರ ಅರ್ಥವೇನು? ಏತಕ್ಕಾಗಿ ಆಚರಿಸುವುದು ಎಂಬಿತ್ಯಾದಿ ಸಂಗತಿಗಳನ್ನು ಹೇಳಿ ಮುಂದಕ್ಕೆ ಕ್ರಿಸ್ತರು ಹೇಗೆ ನಡೆದುಕೊಳ್ಳಬೇಕು ಎಂಬಿತ್ಯಾದಿ ಸಂಗತಿಗಳನ್ನು ಹೇಳಿದರು. ಅನಂತರ ಧರ್ಮಬೋಧೆ ಇತ್ಯಾದಿಗಳು ನಡೆದು ಸಭಾಂತ್ಯವಾಯಿತು. ಸಾಯಂಕಾಲವೂ ಸಭೆ ಸೇರಿ ಧರ್ಮಬೋಧೆ, (ಮಾಸ್) ಸಮೂಹ ಪ್ರಾರ್ಥನೆಗಳು ನಡೆದುವು. ಇದೇ ರೀತಿಯ ಕಾರ್ಯಕ್ರಮಗಳು ಎರಡನೇ ಮತ್ತು ಮೂರನೇ ದಿನಗಳಲ್ಲಿ ನಡೆದುವು, ಮೂರನೆಯ ದಿನ ಸಾಯಂಕಾಲ ಕ್ರಿಸ್ತರ ಒಂದು ಪ್ರಚಂಡ ಮೆರವಣಿಗೆಯೂ ನಡೆಯಿತು. ಎಲ್ಲಾ ಕ್ರಿಸ್ತ ಆರ್ಚಬಿಶಪರೂ ಅದರಲ್ಲಿ ಭಾಗವಹಿಸಿದ್ದರು. ಮೂರು ಮಂದಿ ಬಿಶೋಪರುಗಳು ವಿದ್ಯುದ್ದೀಪಗಳಿಂದಲಂಕೃತವಾದ ಮೋಟಾರ್ ವಾಹನದಲ್ಲಿ ಕುಳಿತು ಹೋಗುವ ದೃಶ್ಯವು ಬಹಳ ಚೆನ್ನಾಗಿತ್ತು. ಇದನ್ನು ನೋಡಲು ಅನೇಕ ಸಾವಿರ ಹಿಂದೂಗಳು ಬಂದಿದ್ದರು. ಮೆರವಣಿಗೆ ಮುಗಿದು ಪ್ರಾರ್ಥನೆ, ಆಶೀರ್ವಾದಗಳಾಗಿ ಕಾಂಗ್ರೆಸು ಸಮಾಪ್ತಿಯಾಯಿತು.

ಕಥೋಲಿಕ್ ಕಾಂಗ್ರೆಸ್—ಇದೇ ಚಪ್ಪರದಲ್ಲಿ ಅಖಿಲಭಾರತ ಕಥೋಲಿಕ್ ಕಾಂಗ್ರೆಸ್ ಮಹಾಧಿವೇಶನವು ಮುಂಬಯಿಯ ವಿದ್ಯಾಭಿಮಾನಿಗಳಾದ ಮಿ। ಎ. ಸೋರೆಸ್‌ರವರ ಅಧ್ಯಕ್ಷತೆಯಲ್ಲಿ ನಡೆದು ಕಥೋಲಿಕರ ವಿದ್ಯಾಭ್ಯಾಸವೇ ಮೊದಲಾದ ಮತ್ತು ಸಮಾಜಕ್ಕೆ ಹಿತಕರವಾದ ಅನೇಕ ವಿಷಯಗಳು ಚರ್ಚಿಸಲ್ಪಟ್ಟು ನಿರ್ಧಾರಗಳಾದುವು. ಈ ಪರಿಷತ್ತಿಗೆ ಮಿ। ಜರೋಮ್ ಎ. ಸಾಲ್ಡಾನರು ಸ್ವಾಗತಾಧ್ಯಕ್ಷರಾಗಿದ್ದರು.

ವಸ್ತು ಪ್ರದರ್ಶನ—ಅ. ಭಾರತ ಕಥೊಲಿಕ್ ಕ್ರಿಸ್ತರ ಪರಿಷತ್ತಿನ ಸಂಬಂಧ ಒಂದು ವಸ್ತು ಪ್ರದರ್ಶನವು ಸೈಂಟ್ ಎಸ್ಸ್ ಕಾನ್ವೆಂಟ್ ಶಾಲೆಯಲ್ಲಿ ತೆರೆಯಲ್ಪಟ್ಟಿತು. ರೈ. ರೆ. ಪಾ। ಪ್ರೊಸಪರ್ ಯೋರವರು ಪ್ರದರ್ಶನದ ಉದ್ಘಾಟನ ಮಾಡಿದರು.

ಕದ್ರಿ ಉತ್ಸವ—ಬರುವ ತಾ. 14ರಿಂದ 22ನೇ ತಾರೀಕುಗಳ ವರೆಗೆ ಕದ್ರಿ ಶ್ರೀ. ಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಉತ್ಸವವು ಜರಗುವುದು.

ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆ—ನಿನ್ನೆ (ತಾ. 1 ಭಾನುವಾರ) ದ. ಕ. ಜಿ. ಕಾಂಗ್ರೆಸ್ ಸಮಿತಿಯ ಜನರಲ್ ಬಾಡಿ ಸಭೆ ಸೇರಿತು. ಈ ಸಭೆಯಲ್ಲಿ ಶ್ರೀ. ಎಚ್. ಆರ್. ಮಲ್ಯರು ಜಿ. ಕಾ. ಕಮಿಟಿಯ ಅಧ್ಯಕ್ಷರ ಮೇಲೆ ಅವಿಶ್ವಾಸದ ಠರಾವನ್ನು ಸೂಚಿಸಿದರು. ಶ್ರೀ. ನಾರಾಯಣ ಶೆಣೈಯವರು ಅದನ್ನನುಮೋದಿಸಿದರು. ಅನೇಕ ಸದಸ್ಯರು ಠರಾವನ್ನು ಸಮರ್ಥಿಸಿ ಭಾಷಣ ಮಾಡಿದರು, ಠರಾವಿಗ ವಿರೋಧವಾಗಿ ಹಲವರು ಮಾತಾಡಿದರು. ಠರಾವನ್ನು ತಂದವರ ಆಕ್ಷೇಪಣೆಗಳಿಗೆ ಶ್ರೀ. ಶ್ರೀನಿವಾಸ ಮಲ್ಯರು ಉತ್ತರ ಕೊಟ್ಟರು.

ಮತ ತೆಗೆಯುವ ವಿಚಾರದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀ। ಯಂ. ಶಿವರಾಯರು ಯಾವ ರೀತಿಯನ್ನನುಸರಿಸಬೇಕೆಂದು ಕೇಳಿದರು. ಗುಪ್ತ ಮತದಾನದ ರೀತಿಯಲ್ಲಿ ಕೊಡಬೇಕೆಂದು 1/3ಕ್ಕಿಂತ ಹೆಚ್ಚು ಮಂದಿ ಕೇಳಿದರು, ಆಗ ಒಬ್ಬರು ಡಿವಿಜನ್ ಆಗಬೇಕೆಂದರು. ಅದಕ್ಕೆಷ್ಟು ಮಂದಿ ಬೆಂಬಲ ಕೊಡುವರೆಂದು ಕೇಳಲಾಗ 45ಮಂದಿ ಕೈ ಎತ್ತಿದರು, ಅಧ್ಯಕ್ಷರು ಆ ಪ್ರಕಾರ ಡಿವಿಜನ್ ಮೂಲಕ ಮತ ಗಣನೆಯಾಗಬೇಕೆಂದರು. ಸ್ವತಂತ್ರವಾಗಿ, ನಿರ್ಭೀತಿಯಿಂದ ಓಟು ಕೊಡಲು ಗುಪ್ತ ಮತದಾನವಾಗಬೇಕು, ಕೈಯೆತ್ತಿ ಓಟು ಕೊಡುವುದಕ್ಕೂ ಡಿವಿಜನಿಗೂ ಹೆಚ್ಚು ವ್ಯತ್ಯಾಸವಿಲ್ಲ. ಆದ್ದರಿಂದ ಗುಪ್ತ ರೀತಿಯ ಮತದಾನವೇ ನಡೆಯಬೇಕೆಂದು ಹಲವರು ಪ್ರಾರ್ಥಿಸಿದರು. ಅಧ್ಯಕ್ಷರು ರಚನೆಯಲ್ಲಿರುವ ನಿಯಮ ಪ್ರಕಾರ ಅಭಿಪ್ರಾಯವನ್ನು ಸೂಚಿಸಿದ್ದಾಗಿಯೂ, ಇನ್ನು ಅದರಲ್ಲಿ ಪುನರಾಲೋಚನೆಯಿಲ್ಲವೆಂದೂ ಹೇಳಿದರು. ಠರಾವು ತಂದವರೂ ಅವರ ಅಭಿಪ್ರಾಯದವರೂ ಸುಮಾರು 30ಮಂದಿ ಸಭಾತ್ಯಾಗ ಮಾಡಿದರು. ಮಿಕ್ಕವರು ಡಿವಿಜನ್ ಮೂಲಕ ಮತ ಗಣನೆಮಾಡಿದರು. ಠರಾವಿಗೆ ವಿರುದ್ಧ 53ಮಂದಿ; ತಟಸ್ಥರು ಮತದಾನ ಮಾಡದವರು, ಹೀಗಾಗಿ ಅವಿಶ್ವಾಸದ ಠರಾವು ಬಿದ್ದುಹೋಯಿತು!

ತಿದ್ದುಪಡಿ.

7ನೇ ಪುಟದಲ್ಲಿ ಶ್ರೀ. ರಂಗನಾಥ ದಿವಾಕರರ ಬದಲಿಗೆ ಡಾ। ಹರ್ಡೀಕರರ ಬ್ಲಾಕು ತಪ್ಪಾಗಿ ಬಿದ್ದಿರುತ್ತದೆ. ಸಂ. ನ]

ಉಡುಪಿ

ನಮಗೆ ಬಂದ ಬಾತ್ಮಿ—'ಶ್ರೀ. ಪಿ.ಎನ್. ಬನ್ನಂಜೆ ರಾಮಾಚಾರ್ಯರೂ ಅವರ ಕತೆಗಳೂ' ಎಂಬ ಶಿರೋನಾಮೆಯಿಂದ ಬಾತ್ಮಿಯೊಂದು ನಮ್ಮೆಡೆಗೆ ಬಂದಿದೆ. ಅದರಲ್ಲಿ ಗತ 'ನವಶಕ್ತಿ'ಯ ನಿವೃತ್ತ ಸಂಪಾದಕರಾದ ಶ್ರೀ ಪಿ. ಎನ್. ಬನ್ನಂಜೆ ರಾಮಾಚಾರ್ಯರು ಉಡುಪಿಯಲ್ಲಿ ನಡೆಸಿರುವ ಕೆಲವು ಕತೆಗಳು, ಈಗ ಅವರು ಊರು ಬಿಟ್ಟು ಹೋದ ಮೇಲೆ ಕೆಲವು ವ್ಯಕ್ತಿಗಳನ್ನು ಉದ್ದೇಶಿಸಿ ಬರೆಯುತ್ತಿರುವ ಕತೆಗಳು ಇದರಿಂದ ಸಮಾಜಕ್ಕಾಗುವ ಹಾನಿ, ಮೊದಲಾದುವನ್ನು ವಿವರಿಸಲಾಗಿದೆ ಶ್ರೀಯುತರು ಇಂತಹ ವ್ಯಕ್ತಿದ್ವೇಷವನ್ನು ಸಾಧಿಸುವ ಕತೆಗಳನ್ನು ಬರೆದು ತನ್ನ ಲೇಖನಿಯನ್ನು ದುರುಪಯೋಗಗೊಳಿಸಬಾರದೆಂದೂ ಅಂತಹ ಕತೆಗಳಿಂದ ಯಾರೂ ತಪ್ಪು ಅಭಿಪ್ರಾಯವನ್ನು ಮಾಡಿಕೊಳ್ಳಬಾರದೆಂದೂ ವಿವರಿಸಲ್ಪಟ್ಟಿದೆ.

ಸಂ ನ.

ಸಿಟಿ ಸ್ಕೂಲ್ ಒಫ್ ಕೊಮರ್ಸ್—ಉಡುಪಿಯ ಸಿಟಿ ಸ್ಕೂಲ್ ಒಫ್ ಕೊಮರ್ಸ್ ಈ ಸಂಸ್ಥೆಯ 'ಸ್ಕೂಲ್ ಡೇ' ಸಮಾರಂಭವು ಕಳೆದ ತಾ. 30ರಲ್ಲು ಜಯಶೀಲವಾಗಿ ಆಚರಿಸಲ್ಪಟ್ಟಿತು. ಮುನಿಸಿಪಲ್ ಚೆಯರ್‌ಮೇನ್ ಶ್ರೀ. ಅತ್ತೂರು ಲಕ್ಷ್ಮೀನಾರಾಯಣರಾಯರು ಸಭಾಧಿಪತ್ಯವನ್ನು ವಹಿಸಿದ್ದರು, ಗತವರುಷದ ಶಾಲಾ ವರದಿಯನ್ನು ಮುಖ್ಯಾಧ್ಯಾಪಕರಾದ ಮಿ। W. A. ಸುಚಿತರವರು ಓದಿದರು. ವರದಿ ವರುಷವು ಹಣದ ಅಡಚಣೆಯ ಆಗುಹೋಗುಗಳಿಗೊಳಗಾಗಿದ್ದರೂ ಅದರಿಂದಾಗಿ ಶಾಲೆಗೇನೂ ಬಾಧಕವಟ್ಟಿಲ್ಲ; ಹೆಣ್ಣು ಮಕ್ಕಳು ಸಹ ಈ ಶಾಲೆಯ ಪ್ರಯೋಜನ ಪಡೆಯುತ್ತಿರುವುದು ಇತ್ಯಾದಿ ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿದ್ದವು, ಶಾಲಾಭ್ಯುದಯ ಸೂಚಕ ಮಾತುಗಳನ್ನು ಮಿ। J. R. ಪಿಂಟೋರವರು ಆಡಿದರು. ಶಾಲಾ ಪ್ರೊಪ್ರೈಟರ್ ಶ್ರೀ. ವೆಂಕಟ್ರಮಣಾಚಾರ್ಯರೂ ಇನ್ನಿತರರೂ ಸಂದರ್ಭೋಚಿತವಾದ ಮಾತುಗಳನ್ನಾಡಿದರು, ಈಗಿನ ದಿನಗಳಲ್ಲಿ ಪ್ರೌಢ ವಿದ್ಯಾಭ್ಯಾಸದಿಂದ ಸ್ವತಂತ್ರ ಜೀವನೋಪಾಯ ನಡೆಸಲು ತಕ್ಕಷ್ಟು ಆಶ್ರಯ ಪ್ರೋತ್ಸಾಹಗಳು ಸಿಗದಿರುವ ವೇಳೆ ಇಂತಹ ಕಲಾ ಕೈಗಾರಿಕೆ ಹಾಗೂ ಔದ್ಯೋಗಿಕ ಶಿಕ್ಷಣ ಸಂಸ್ಥೆಗಳೇ ಅತ್ಯಾವಶ್ಯಕವೆಂದೂ ನಮ್ಮ ಉಡುಪಿ ಶಾಲೆಯು ಸರ್ವಾದರಣೀಯವಾಗಿ ಮೆರೆಯಬೇಕೆಂದೂ ಹರಸಿ ಅಧ್ಯಕ್ಷರ ಭಾಷಣವಾಯಿತು, ಟೀಪಾರ್ಟಿ, ಗ್ರೂಫ್ ಫೋಟೋ ಕಾರ್ಯಕ್ರಮಗಳಿಂದ ಸ್ಕೂಲ್ ಡೇ ಸಮಾರಂಭವು ಕೊನೆಗೊಂಡಿತು.

ಮುನಿಸಿಪಲ್ ಕಮಿಶನರಿಗೆ ವಿದಾಯ ಸತ್ಕಾರ— ಸ್ಥಳೀಯ ಮುನಿಸಿಪಲ್ ಆಫೀಸು ನೌಕರರು ಇದೇ ತಾ. 1ರಲ್ಲು ಸಂಜೆ ನೋರ್ತ್ ಸ್ಕೂಲ್ ಹಾಲಿನಲ್ಲಿ ಟೀಪಾರ್ಟಿ ಸತ್ಕಾರಕೂಟವನ್ನೇರ್ಪಡಿಸಿ ಕಮಿಶನರ್ ಶ್ರೀ ನಾರಾಯಣ ಶೆಣೈಯವರಿಗೆ ವಿದಾಯವನ್ನಿತ್ತರು, ಈ ಸಂದರ್ಭದಲ್ಲಿ ಸೆನಿಟರಿ ಇನ್ಸ್‌ಪೆಕ್ಟರ್ ಶ್ರೀ ಕೆ. ಕೃಷ್ಣರಾಯರು ಕಮಿಶನರ ಕಾರ್ಯದಕ್ಷತೆಯನ್ನು ಕೊಂಡಾಡಿದರು, ವಾರಂಟ್ ಆಫೀಸರ ಶ್ರೀ. ಗೋಪಾಲಕೃಷ್ಣ ಬಲ್ಲಾಳರು ಆಫೀಸರರ ಉದಾರತೆ, ಸಹನ ಶೀಲತೆ, ಕಾರ್ಯಕುಶಲತೆ ಇತ್ಯಾದಿಗಳನ್ನೆತ್ತಿ ಚಿಕ್ಕ ಭಾಷಣವಿತ್ತರು, ಸರಾಫ್ ಅಹಮ್ಮದ್ ಸಾಹೇಬರೂ ಪ್ರತ್ಯಕ್ಷಾನುಭವದ ಎರಡು ಮಾತುಗಳನ್ನಾಡಿದರು. ಕಮಿಶನರ ಕೆಲಸವಾಗಲೀ ಹುದ್ದೆಯಾಗಲೀ ಮನಸ್ಸೋಲಿಸುವ ಗುಲಾಬಿ ಹೂಗಳಿಂದ ಮಾಡಿದುದಲ್ಲ. ನಿಮ್ಮೆಲ್ಲರ ಒಮ್ಮತದ ಸಹಕಾರದಿಂದಲೇ ನಾನು ನನ್ನ ಕಾರ್ಯವನ್ನು ನ್ಯಾಯನೀತಿಗನುಸಾರವಾಗಿ ನಡೆಸಲು ಕಾರಣವಾಯಿತು. ನನಗೀ ರೀತಿಯ ಮಾನ ಮರ್ಯಾದೆಯನ್ನು ಮಾಡಿದುದರ ಸಲುವಾಗಿ ತಮ್ಮೆಲ್ಲರಿಗೂ ಆಭಾರಿಯಾಗಿರುವೆನಲ್ಲದೆ ನಿಮ್ಮೆಲ್ಲರಿಗೂ ಕಲ್ಯಾಣವುಂಟಾಗಲೆಂದು ಹೊಸ ವರುಷದ ಶುಭವನ್ನು ಬಯಸಿ ಶ್ರೀ. ಶೆಣೈಯವರು ತನ್ನ ಭಾಷಣವನ್ನು ಕೊನೆಗೊಳಿಸಿದರು. ಗ್ರೂಫ್ ಫೋಟೋ ಸಹ ತೆಗೆಯಲಾಯ್ತು.

ಸತ್ಕಾರ—ತಾ. 30-12-38ರಲ್ಲಿ ಮಾಜಿ ಮುನ್ಸಿಪಲ್ ಕೌನ್ಸಿಲರಾದ ಶ್ರೀ. ಎಂ. ವಾಮನ ಭಟ್ಟರು ವರ್ಗವಾಗಿ ಹೋಗಲಿರುವ ಮುನ್ಸಿಪಲ್ ಕಮಿಶನರ್ ಶ್ರೀ. ಎಂ. ನಾರಾಯಣ ಶೆಣೈಯವರಿಗೆ ತಮ್ಮ ಮನೆಯಲ್ಲಿ ಉಪಹಾರ ಸತ್ಕಾರವನ್ನಿತ್ತು ಸನ್ಮಾನಿಸಿದರು

ಕಟಪಾಡಿ—ಇಲ್ಲಿಯ ನಿತ್ಯಾನಂದ ಸಂಯುಕ್ತ ಯುವಕಸಂಘದ 2ನೇ ವಾರ್ಷಿಕ ಮಹಾಸಭೆಯು ಇದೇ ತಾ. 8-1-1939ನೇ ರವಿವಾರ ಅಪರಾಹ್ಣ ಘಂಟೆ2ಕ್ಕೆ ಶ್ರೀಮಾನ್ ಅರೂರು ಲಕ್ಷ್ಮೀನಾರಾಯಣ ರಾವ್, ಎಡ್ವೋಕೇಟ್. ವೈಸ್ ಪ್ರೆಸಿಡೆಂಟ್ ಡಿ ಬೋರ್ಡು ಇವರ ಅಧ್ಯಕ್ಷತೆಯಲ್ಲಿ ಪಾಂಗಾಳ ಹಿಂದೂ ಎಲಿಮೆಂಟರಿ ಶಾಲಾಕಟ್ಟಡದಲ್ಲಿ ಜರಗಲಿಕ್ಕಿರುವುದು ಎಲ್ಲರಿಗೂ ಸ್ವಾಗತವಿದೆ.

ಮಾರಣಕಟ್ಟೆ—ಇದೇ 1939ನೇ ಇಸವಿ ಜನವರಿ ತಿಂಗಳು ತಾ. 14ಕ್ಕೆ ಕುಂದಾಪುರ ತಾಲೂಕು ಚಿತ್ತೂರು ಗ್ರಾಮದ ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆದು ಬರುವಂತ ಹಾಲ ಹಬ್ಬವು ಕೆಂಡ ವಗೈರೆ ಮೊದಲ್ಗೊಂಡ ತಾರೀಕಿಗೆ ನಡೆದುಬರುತ್ತದ್ದಾಗಿ ಸರ್ವರಿಗೆ ತಿಳಿಸಲಾಗುತ್ತದೆ.

ಹೆಚ್ಚು ಪಕ್ಷ ಸದ್ರಿ ಹಬ್ಬವು ಪ್ರತಿವರ್ಷ ಜನವರಿ ತಿಂಗಳು ತಾ 13ಕ್ಕೆ ನಡೆಯುವದಾದರೂ ಮಕರ ಸಂಕ್ರಾಂತಿ ಲೆಕ್ಕದ ಮೇರೆಗೆ ಅದು ಬರುವದಾದ್ದರಿಂದ ಈ ವರ್ಷ 1939ನೇ ಇಸವಿ ಜನವರಿ ತಿಂಗಳು ತಾ. 14ಕ್ಕೆ ನಡೆಯುತ್ತದೆ, ಮಹಾಜನರು ಸದ್ರಿ ಜಾತ್ರೆಗೆ ಬಂದು ಶ್ರೀ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ದೇವಸ್ಥಾನದ ಮೆನೇಜರ್ ಶ್ರೀ ಸೂರಪ್ಪ ಶೆಟ್ಟರು ತಿಳಿಸುತ್ತಾರೆ.

ಕಾಸರಗೋಡು—ಗ್ರಾಮ ಉದ್ಯೋಗಸ್ತರಿಗೊದಗಿರುವ ದುರವಸ್ಥೆಗಳನ್ನು ದೂರೀಕರಿಸುವ ಬಗ್ಗೆ ತಕ್ಕುದಾದ ಏರ್ಪಾಡನ್ನು ಕೈಕೊಳ್ಳುವುದರ ಕುರಿತು ಆಲೋಚಿಸುವರೆ 1939ನೇ ಇಸವಿಯ ಜನವರಿ ತಾ. 8ನೇ ಆದಿತ್ಯವಾರ ಗಂಟೆ 1ಕ್ಕೆ ಕಾಸರಗೋಡು ಕಸಬಾ ಸುಳ್ಯಪ್ಪಾಡಿ ಎಲಿಮೆಂಟರಿ ಶಾಲೆಯಲ್ಲಿ ಸೇರುವದೆಂತ ನಿಶ್ಚೈಸಿರುವುದರಿಂದ ತಾವುಗಳೆಲ್ಲರೂ ತಪ್ಪದೆ ಬರಬೇಕಾಗಿ ವಿನಂತಿ, ಬಿ. ಜಗನ್ನಾಥ ರೈ ಬಾಡೂರು ಪಟೇಲ, ಪಿ. ವಿ. ಕಡಂಬಳಿತ್ತಾಯ ಪದ್ರೆ ಪಟೇಲ (ಕನ್ವೀನರ್ಸ್)

ಶ್ರೀಕೃಷ್ಣಾ ಒಪ್ಟಿಕಲ್ ಮಾರ್ಟ್



ಸಂತೆಕಟ್ಟೆ, ಉಡುಪಿ, ದ. ಕ.

ಕಣ್ಣಿನ ಪರೀಕ್ಷೆ ಧರ್ಮಾರ್ಥ!

ದೃಷ್ಟಿಗೆ ತಕ್ಕ ಕನ್ನಡಕ! **ಅತ್ಯಲ್ಪ ಬೆಲೆ!**

ನಾವು ಎಲ್ಲಾ ವಿಧದ ಉತ್ತಮ ಪೆಬ್ಬಲ್, ಕ್ರಿಸ್ಟಲ್, ಸ್ಪಿರಿಕಲ್ ಮತ್ತು ಕಣ್ಣುಗಳಿಗೆ ಬಿಸಿಲಬೇನೆಯನ್ನು ತಡೆಯುವ ಬಣ್ಣದ ಕನ್ನಡಕಗಳನ್ನೂ ಇನ್ನೂ ರೋಲ್ಡ್ ಗೋಲ್ಡ್ ಶೆಲ್ ವ ನಿಕ್ಕಲ್, ಸಿಲ್ವರ್, ಫ್ರೇಮುಗಳನ್ನೂ ತರತರದ ಕನ್ನಡಕದ ಗೂಡುಗಳನ್ನೂ, ಇವಲ್ಲದೆ ಕನ್ನಡಕದ ಯಾವುದೇ ಭಾಗಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಗ್ರಾಹಕರ ಯೋಗ್ಯತೆಗನುಸಾರವಾಗಿ ತರಿಸಿಟ್ಟಿರುವೆವು. ಹೆಚ್ಚು ಕ್ರಯದ ಫೌಂಟನ್ ಪೆನ್ನುಗಳನ್ನು ಚಲೋ ರೀತಿಯಲ್ಲಿ ರಿಪೇರಿಮಾಡಿಕೊಡುತ್ತೇವೆ. ಸ್ಟೋರಿನಲ್ಲಿ ಸ್ಟೋಕ್‌ಯಿಲ್ಲದ ಸಾಮಾನುಗಳನ್ನು ಕದಿವಸಗಳಲ್ಲಿ ತರಿಸಿಕೊಡುವೆವು.

ಪ್ರೊಪ್ರೈಟರ್: ಯಂ ಕೃಷ್ಣರಾವ್

ಚಕ್ರವರ್ತಿ ರಾಜಗೋಪಾಲಾಚಾರ್ಯರ ಭಾಷಣ

ಕಾಂಗ್ರೆಸಿನಲ್ಲಿ ಜಾತಿಭೇದವಿಲ್ಲ; ಕಾಂಗ್ರೆಸು ಬ್ರಾಹ್ಮಣರ ಸಂಸ್ಥೆಯಲ್ಲ. ಜಾತೀಯತೆಯ ವಿಷವನ್ನು ಹರಡಿ, ಕಾಂಗ್ರೆಸಿನ ಶಕ್ತಿಯನ್ನು ಕುಂದಿಸಬೇಕೆನ್ನುವ ವೈರಿಗಳ ಯತ್ನ ನಿರರ್ಥಕ. ವೈರಿಗಳು ಬೇಕಾದರೆ ನಮ್ಮಂಥಾ ಮುಂದಾಳುಗಳನ್ನು ನಾಶಗೊಳಿಸಲಿ. ಆದರೆ ಜನತೆಯಲ್ಲಿ ಜಾತೀಯತೆಯ ದ್ವೇಷ ಅಸೂಯೆಯನ್ನು ಬೆಳೆಸುವ ಪಾಪಕಾರ್ಯದಿಂದ ದೂರವಿರಲಿ ಕಾಂಗ್ರೆಸಿನ ವಿಶ್ವರೂಪವನ್ನು ಕಂಡು ಆಂಗ್ಲೇಯರು ಬೆದರಿದ್ದಾರೆ ಕ್ಷುದ್ರ ವಿಷಯಗಳಿಗಾಗಿ ನಾವು ಜಗಳ ಮಾಡಿಕೊಳ್ಳದೆ, ತ್ಯಾಗ ಮತ್ತು ಸೇವೆಯಿಂದ ಮಹತ್ತಾದ ಕಾರ್ಯವನ್ನು ಸಾಧಿಸಬೇಕು.

ತಮಿಳುನಾಡಿನ ನಾಲ್ವತ್ತನೇ ಪರಿಷತ್ತಿನ ಉದ್ಘಾಟನಾ ಸಮಾರಂಭವನ್ನು ನರವೇರಿಸುವ ಕಾಲದಲ್ಲಿ ಸನ್ಮಾನ್ಯ ಚಕ್ರವರ್ತಿ ರಾಜಗೋಪಾಲಾಚಾರ್ಯರು ಬಹುಸಾರವತ್ತಾದ ಉಜ್ವಲಭಾಷಣವನ್ನಿತ್ತರು. ಈ ಸಂದರ್ಭದಲ್ಲಿ ಮಂತ್ರಿಮಂಡಲದ ಡಾ ರಾಜನ್, ಪ್ರಕಾಶಂ, ಗೋಪಾಲ ರಡ್ಡಿ, ಮುನಿಸ್ವಾಮಿಪಿಳ್ಳೆ ಮತ್ತು ರಮಾನಾಥನ್, ಇವರೂ ಭಾಗವಹಿಸಿದ್ದರು. ಸಭಿಕರ ಸಂಖ್ಯೆಯು ಇಪ್ಪತ್ತ ಐದು ಸಾವಿರಕ್ಕೂ ಮಿಕ್ಕಿದ್ದಿತು. ರಾಜಾಜಿಯವರು ತಮ್ಮ ಭಾಷಣದಲ್ಲಿ ಹೀಗೆಂದರು ಇರುವೆಗಳು ನೆಲವನ್ನು ಕೊರೆದು, ಅಹೋರಾತ್ರಿ ಗೇದು ಭವ್ಯಮಂದಿರವನ್ನು ನಿರ್ಮಾಣಮಾಡುವಂತೆ, ಕಾಂಗ್ರೆಸ್ ಕೆಲಸಗಾರರು ಕಾಂಗ್ರೆಸ್ ಉನ್ನತಿಗಾಗಿ ಹೇರಳ ದುಡಿದಿರುವರು. ಈ ಕೆಲಸಗಾರರು ತಮ್ಮಲ್ಲಿರುವ ದೇಶಭಕ್ತಿಯ ಪ್ರೇರಣೆಯಿಂದ ಉದ್ಯೋಗಿಸುತ್ತ ಬಂದಿರುವರು ಕಾಂಗ್ರೆಸಿನ ವಿರೋಧಿಗಳು ಕಾಂಗ್ರೆಸ್ ಅಧಿಕಾರ ಸ್ವೀಕರಿಸಲಿಕ್ಕಿಲ್ಲವೆಂದು ನಂಬಿದ್ದರು, ಆದರೆ ಅವರ ಆಶೆಯು ನಿರಾಶೆಯಾಯಿತು. ಆಶಾಭಗ್ನತೆಯಿಂದ ಸಿಟ್ಟುಗೊಳಪಟ್ಟರು ಅನಂತರ ಅವರು ಕಾಂಗ್ರೆಸಿನೊಳಗೆ ಅಂತಃಕಲಹಗಳುಂಟಾಗುವಂತೆ ಸಾಧಿಸತೊಡಗಿದರು ಇಲ್ಲಿಯೂ ಅವರ ಆಶೆಯು ಈಡೇರಲಿಲ್ಲ ಅವರ ದ್ವೇಷಾಸೂಯೆಯು ಇನ್ನಷ್ಟು ಬೆಳೆಯಿತು ಅವರು ಕೊನೆಯದಾಗಿ ನಿರರ್ಥಕವಾದ ಜಾತೀಯತೆಯ ದ್ವೇಷ ಮತ್ಸರದ ವಿಷವನ್ನು ತೊಡಲು ಹವಣಿಸುತ್ತಿದ್ದಾರೆ

ಕಾಂಗ್ರೆಸಿನಲ್ಲಿ ಜಾತಿಭೇದವಿಲ್ಲ. ನಾನು ಜಾತಿ ಬಿಟ್ಟಿರಲಿ ಅಥವಾ ಇಲ್ಲದಿರಲಿ— ನಾನೊಂದು ಜಾತಿಯಲ್ಲಿ ಜನನಮಾಡಿರುವೆನು ಹೀಗಾಗಿ ವೈರಿಗಳು ಕಾಂಗ್ರೆಸ್ಸೆಂಬುದು ಬ್ರಾಹ್ಮಣರ ಸಂಸ್ಥೆಯೆಂದು ಅಪವಾದ ಹೊರಿಸತೊಡಗಿರುವರು ಜನಪ್ರೀತವಾದ ಪಾರ್ಟಿಯ ಅಧಿಕಾರಕಾಲದಲ್ಲಿ, ಈ ವೈರಿತಂಡದವರು ತಮ್ಮ ಸ್ವೇಚ್ಛೆಯಂತೆ ಒದರಲು ತಮಗೆ ತೋರಿದಂತೆ ವರ್ತಿಸಲು ಹಿಂಜರಿಯಲಿಲ್ಲ. ಕಾಂಗ್ರೆಸು ಸರಕಾರವು ಕೆಲಸಮಾಡಲರ್ಹತೆಯುಳ್ಳದಲ್ಲ, ಪ್ರಾಂತೀಯ ಆಳ್ವಿಕೆಯು ಕಾಂಗ್ರೆಸಿನಿಂದ ಅಸಾಧ್ಯವೆಂಬುದನ್ನು ತೋರಿಸಬೇಕೆಂದು ಅವರ ಇರಾಧೆ ಜಾತಿಯ ಮತ್ಸರವನ್ನು ಹರಡಿ ಕಾಂಗ್ರೆಸಿನ ಅಂತರ್ಗತ ಯಂತ್ರವನ್ನೊಡೆಯ ಬಹುದೆಂದು ಅವರು ಬಗೆದರು.

ಮೊದಲು ಜಸ್ಟೀಸ್ ಪಾರ್ಟಿಯು ಬ್ರಾಹ್ಮಣರನ್ನು ತಮ್ಮ ಪಾರ್ಟಿಗ ಸೇರಿಸುತಿದ್ದಿತು ಈಗ ಬ್ರಾಹ್ಮಣರಿಗೆ ಹಿಂದೂಸ್ಥಾನದಲ್ಲೇ ಸ್ಥಳವಿಲ್ಲವೆಂದರು. ತಮಿಳುನಾಡು ಹಿಂದೂಸ್ಥಾನಕ್ಕೆ ಸಂಬಂಧಪಟ್ಟದ್ದಲ್ಲವೆಂದೂ ಹೇಳಲು ನಾಚುಗೆಪಡಲಿಲ್ಲ. ಹುಚ್ಚರ ಆಸ್ಪತ್ರೆಯಲ್ಲಿದ್ದ ಜನರಾದರೂ ಇಂದಾ ಮಾತನ್ನಾಡಲಾರರು. ಆರ್ಯದ್ರಾವಿಡರೆಂಬ ಭೇದದ ಕೂಗು ಎದ್ದಿತು ಪುರಾಣ ಪ್ರಸಿದ್ಧವಾದ ಸಮುದ್ರ ಮಥನಕಾಲದಲ್ಲಿ ವಿಷವು ಮೊದಲು ಹುಟ್ಟಿತು. ಅವರು ಜಾತೀಯ ವಿಷವನ್ನೊಡ್ಡಿ ಕಾಂಗ್ರೆಸನ್ನು ನಾಶಮಾಡಬಹುದೆಂದು ಬಗೆದರು ಅವರು ಹೇಳುವಂತೆ ಆರ್ಯರು ಬೆಳ್ಳಗಿರುವವರು, ದ್ರಾವಿಡರೆಂದರೆ ಕಪ್ಪುಬಣ್ಣದವರು. ನನ್ನ ಸಂಬಂಧಿಗಳಲ್ಲಿ ಅನೇಕರು ಇದ್ದಲಿನಂತ ಕಪ್ಪುಬಣ್ಣದವರಿದ್ದಾರೆ; ಹಲವರು ಸೌಂದರ್ಯವುಳ್ಳವರಿದ್ದಾರೆ ನಾನು ಅಕಸ್ಮತ್ತಾಗಿ, ಅಷ್ಟು ಕಪ್ಪಾಗಿಯೂ ಇಲ್ಲ ಅಥವಾ ಬೆಳ್ಳಗೂ ಇಲ್ಲ ಅವರ ಕೆಲ ಪ್ರಕಾರದ ಮಾತು ತಾಜಾ ಸುಳ್ಳು ಅವರೆನ್ನುವರು, ಮುಸಲ್ಮಾನರು ತಮ್ಮ ಸಹಾಯಿಗಳೆಂದು ಮುಸಲ್ಮಾನರು ಆರ್ಯರೋ? ಅಥವಾ ದ್ರಾವಿಡರೋ? ತಮ್ಮ ಪ್ರಾಚೀನ ಸಂಸ್ಕೃತಿಗೆ ಸೇರಿದ ಜನರಿಗೆ ಇಲ್ಲಿ ಜಾಗವಿಲ್ಲವಂತೆ ಆದರೆ ಬೇರೆ ದೇಶಕ್ಕೆ ಸೇರಿದವರು ತಮ್ಮೊಂದಿಗಿರುವುದಾಗಬಹುದಂತೆ ನೀವು ನಿಮ್ಮ ವೈರಿಗಳನ್ನು ನಿವಿಕ್ಕಿಷ್ಟದಂತೆ ನಾಶಗೊಳಿಸಬಹುದಂದರೂ ಅಖಂಡವಂರವನ್ನು ಅಥವಾ ದೇಶವನ್ನು ನಿರ್ನಾಮಗೊಳಿಸಲು ಸಾಧ್ಯವೇ ಇರಲಾರದು. ವೈರಿಗಳು ನಮ್ಮಂಥಾ ಮುಖಂಡರನ್ನು ಬೇಕಾದರೆ ನಾಶಗೊಳಿಸಲಿ, ಚಿಂತಿಲ್ಲ ಆದರೆ, ಜನತೆಯಲ್ಲಿ ದ್ವೇಷ ಬೆಳೆಸುವ ಪಾಪಕಾರ್ಯದಿಂದ ದೂರವಿರಲಿ. ಜನತೆಯು ಇಂಥಾ ದ್ವೇಷ ಅಸೂಯೆಯು ಪ್ರಚಾರವಾಗದಂತೆ ನೋಡಬೇಕು. ಕಾಂಗ್ರೆಸು ವೈರಿಗಳು ಸರಕಾರವು ಹರಿಜನರಿಗೆ ಹುದ್ದೆಗಳನ್ನು ಕೊಡಲಿಲ್ಲವೆಂದು ಅಪವಾದ ಹೇಳುವರು ಸರಕಾರವು ಸರ್ವಿಸ್ ಕಮಿಷನಿನ ಮೂಲಕ ಏವತ್ತು ಹರಿಜನರಿಗೆ ಉದ್ಯೋಗಕೊಟ್ಟಿತು. ಅಬ್ರಾಹ್ಮಣರ ಕುರಿತಾಗಿ ನಾನೇನೂ ಹೇಳಬೇಕಾಗಿಲ್ಲ ಈ ಬಡದೇಶದಲ್ಲಿ ಎಷ್ಟು ಜನರಿಗೆ ಕೆಲಸದೊರಕಿಸಿಕೊಡಬಹುದು [illegible] ಜನರು ಸುಲಭವಾಗಿ ಇಂಥಾಮಾತನ್ನು ನಂಬುತ್ತಾರ

ನಾವೀಗ ನಮಗೆ ಬೇಕಾದುದನ್ನು ಹೊಂದಿರುವುದಿಲ್ಲ ನಮ್ಮ ಸ್ವಾತಂತ್ರ್ಯ ಧ್ಯೇಯವನ್ನು ಮರೆತುಬಿಡದೆ, ಗಳಿಸಬೇಕಾಗಿದೆ ಆಂಗ್ಲೇಯರು, ದುರ್ಯೋಧನನು ಶ್ರೀಕೃಷ್ಣ ಪ್ರಭುವಿನ ವಿಶ್ವರೂಪವನ್ನು ಕಂಡಂತೆ, ಕಾಂಗ್ರೆಸನ್ನು ಕಾಣುತ್ತಿದ್ದಾರೆ ಅವರಿಗೆ ಎಲ್ಲೆಲ್ಲಿಯೂ ಕಾಂಗ್ರೆಸ್ಸೇ ಕಂಡು ಬರುತ್ತದೆ ಇದರಿಂದ ಅವರು ಹೆದರಿದ್ದಾರೆ ಈಗ ಕಾಂಗ್ರೆಸು ಬಲಯುತವಾಗುತ್ತಾ ಬಂದಿದೆ. ಇಂಗ್ಲಿಷು ಪಂದಿಗೆ ಈಗ ಕಾಂಗ್ರೆಸಿನೊಳಗಣ ಜಾತೀಯತೆಯ ದ್ವೇಷ ವಿಚಾರವು ಬೆಳೆಯುತ್ತಾ ಬಂದಿದೆ, ಜಾತಿ, ಜನಾಂಗವೆಂಬ ಹಗೆತನದ ವಿಚಾರವು ಹಿಟ್ಲರನ ಕ್ರಮದಂತೆ ಬೆಳೆಯ ತೊಡಗಿದರೆ, ಆಗ ಆಂಗ್ಲೇಯರ ಇಚ್ಛೆಯು ನೆರವೇರಲು ದಾರಿ ದೊರೆಯುತ್ತದ. ಆದುದರಿಂದ ಕಾಂಗ್ರೆಸು ತನ್ನ ವಿಶ್ವರೂಪವನ್ನು ತಿರುಗೊಮ್ಮೆ ಪ್ರಕಟಿಸಬೇಕಾಗಿದೆ ಹೀಗಾದರೆ ಮಾತ್ರ ಕಾಂಗ್ರೆಸು ತನ್ನ ಶಕ್ತಿಯನ್ನು ಮರಳಿ ಗಳಿಸುವುದು. ಅವರ ವೈರಿಗಳು ಸಂಪೂರ್ಣ ಬೆದರುವರು

ಸಣ್ಣ ಸಣ್ಣ ವಿಷಯಗಳಲ್ಲಿ ನಾವೀಗ ಜಗಳಮಾಡಿಕೊಳ್ಳಲಾಗದು. ಕೆಲವರು ಇಲೆಕ್ಷನಿನ ಮುಂಚೆ ಜಗಳಮಾಡಿದರೂ, ನಂತರ ಒಕ್ಕಟ್ಟಿನಲ್ಲಿರಬಹುದೆಂದು ಬಗೆದರು ಇದು ಮಾನವನ ಸ್ವಭಾವಜ್ಞಾನ ಅಭಾವವನ್ನು ಪ್ರಕಟಿಸಿತು ಈ ಭೇದವು ಸ್ಥಿರವಾಗಿ ಉಳಿಯುವದು ಕ್ಷುದ್ರ ವಿಷಯಗಳಿಗಾಗಿ ಜಗಳಮಾಡಿಕೊಳ್ಳಲಾಗದು ಹೀಗಾದರೆ ಸೇವೆ ಮತ್ತು ತ್ಯಾಗದಲ್ಲಿ ದೊಡ್ಡ ವಿಚಾರದಲ್ಲೂ ಐಕ್ಯತೆ ಬರಲು ಸಾಧ್ಯ ಇಲ್ಲಿ ನೆರದ ಸಾವಿರಾರು ಜನರೇ ಕಾಂಗ್ರೆಸು ದಿನಕ್ಕೆ ಶಕ್ತಿಯನ್ನು ಗಳಿಸುತ್ತಾ ಬಂದಿರುವುದೆಂಬುದಕ್ಕೆ ನಿದರ್ಶನ. ಅಧ್ಯಕ್ಷ ಸುಭಾಸಬಾಬುಗಳು ಇಂದೀ ಸಮಾರಂಭಕ್ಕೆ ಚಿತ್ತೈಸಿದ್ದರೆ ಬಹು ಸಂತೋಷ ಪಡುತಿದ್ದರು. ನನಗೀಗ ಸುದೈವದಿಂದ ಸುಭಾಸಬಾಬುಗಳ ಆರೋಗ್ಯ ಚಿಂತನಕ್ಕಾಗಿ ಪ್ರಾರ್ಥಿಸುವ ಸಂದರ್ಭವು ದೊರೆತಿದೆ" ಎಂದರು. ಅನಂತರ ಅವರು ಕೊನೆಯದಾಗಿ ಪರಿಷತ್ತಿನ ಅಧ್ಯಕ್ಷ ರಾಮಸ್ವಾಮಿ ರೆಡ್ಡಿಯರಿಗೆ ಆಭಾರ ಸೂಚಿಸಿ, ತಮ್ಮ ಭಾಷಣ ಮುಕ್ತಾಯಗೊಳಿಸಿದರು.

ವೈರಿಗಳು

ಬೇಕಾದವರ—

ನವಭಾರತ ಪುಸ್తಕ ಭಂಡಾರ [illegible]

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ.

"ಗೊನೊಕಿಲರ್" ರಜಿಸ್ಟರ್ಡ್

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧೋಪಚಾರ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದು ವರ್ತಿಯಾದರೂ ಈ ನಮ್ಮ **ಗೊನೊಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೊಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಚಿತ ಗುಣಕಾರಿ ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ ೫ ವಿ ಪಿ ಖರ್ಚು ೦ ೬ ೦ ಪ್ರತ್ಯೇಕ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer Dr. D N JASANI, Vitalbhai Patel Road, BOMBAY 4

GONO KILLER

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡೆಯುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲ್ಲರ್' ಹೆಸರನ್ನೂ ಗಮನಿಸಿರಿ

ಈ ವಾರದ ನಿಮ್ಮ ಭವಿಷ್ಯ

ತಾ 5—1—39ರಿಂದ 12—1—39ರ ವರೆಗೆ

[ಜ್ಯೋತಿಷ್ಯ ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಿಸ್ತು. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಿನ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ ನ.]

...ಲಾ, ಮಕರ ರಾಶಿಯವರ ಭವಿಷ್ಯವು ಉತ್ತಮವಿರುವುದು. ವೃಷಭ, ಕರ್ಕಾಟಕ, ಸಿಂಹ, ಮೀನ ರಾಶಿಗಳವರ ಭವಿಷ್ಯವು ಮಧ್ಯ ಸ್ಥಿತಿಯಲ್ಲಿರುವುದು. ಮೇಷ, ಕನ್ಯಾ, ವೃಶ್ಚಿಕ, ಧನು, ಕುಂಭ ರಾಶಿಯವರ ಗ್ರಹಸ್ಥಿತಿಯು ಸ್ವಲ್ಪ ಮಟ್ಟಿಗೆ ಕೆಟ್ಟಿರುವುದು. ಮಿಥುನ ರಾಶಿಯವರ ಗ್ರಹಚಾರವು ಹೆಚ್ಚಿನಂಶ ಕೆಟ್ಟುಹೋಗಿದೆ.

ಮೇಷರಾಶಿ—

ಈ ವಾರದಲ್ಲಿ ನಿಮ್ಮ ಸಾಂಪತ್ತಿಕ ಸ್ಥಿತಿಯು ಬಹಳ ... ವುದು. ಉದ್ಯೋಗದಲ್ಲಿ ಪ್ರವೃತ್ತರಾದ ನಿಮಗೆ ... ಲಾಭವಾಗುವ ಯೋಗವಿದೆ. ಇತ್ತೀಚೆಗೆ ಹೊಸ ವ್ಯವಹಾರದಲ್ಲಿ ಮಗ್ನರಾಗಿರುವ ನಿಮಗೆ ಒಟ್ಟುಗೆಯಿಂದಾಗಿ ಹಣ ಸಿಗುವ ಸಂಭವವು ಕಂಡು ಬರುತ್ತದೆ. ಆದರೂ ನೀವು ದುಡಿಯಲು ಮಾತ್ರ ಶಕ್ತರಾಗಿರುವಿರೇ ಹೊರತು ಅದನ್ನು ವಿನಿಯೋಗಿಸುವುದರಲ್ಲಿ ಸಾಕಷ್ಟು ಅನುಭವ ಹೊಂದಿಲ್ಲ. ಪಾತ್ರಾಪಾತ್ರ ವಿಚಾರವಿಲ್ಲದೆ ಧನವನ್ನು ಕೊಡುವ ನಿಮ್ಮ ಪ್ರವೃತ್ತಿ ಬಹಳ ಶ್ರಮಪಡಬೇಕಾಗುವುದು. ಯಾವುದಾದರೊಂದು ರೋಗವು ನಿಮ್ಮನ್ನು ಆರೋಗ್ಯದಲ್ಲಿರಲು ಬಿಡಲಾರದು. ಸ್ತ್ರೀಯು ಕೆಲವೊಂದು ಕಾರಣದಿಂದಾಗಿ ಜಗಳಗಂಟಿಯಾಗುವಳು. ಆಕೆಯ ... ಕೂಡ ... ಮಾಡಿಂದಿರಲಾರಳು. ತಾ. 7ರಿಂದ 10ರ ತನಕದ ದಿನಗಳು ನಿಮ್ಮ ಭಾಗಕ್ಕೆ ಅನಿಷ್ಟದಾಯಕಗಳಾಗಿವೆ. ಅಪೇಕ್ಷೆಯೊಡನೆ ಮನಸ್ತಾಪ, ಕಾರ್ಯಗಳಿಗೆ ಅನೇಕ ರೀತಿಯಿಂದ ವಿಘ್ನಗಳು, ಪ್ರವಾಸದಲ್ಲಿ ತೊಂದರೆಗಳೂ ಕೂಡ ಸಂಭವಿಸಲಿವೆ.

ವೃಷಭರಾಶಿ—

ಆಗರ್ಭಶ್ರೀಮಂತರಿಗೆ ಹಣದ ಬೆಲೆಯು ಅರಿವು ಸ್ವಲ್ಪವೂ ಇಲ್ಲವೆಂದೇ ಹೇಳಬಹುದು. ಅದರ ಬೆಲೆಯನ್ನು ಗೊತ್ತು ಹಚ್ಚಬೇಕಾದರೆ ಸ್ವಯಂ ಪರಿಶ್ರಮಿಸಿ ಗಳಿಸಿಯೇ ಅರಿಯಬೇಕು. ಈ ವಿಷಯದಲ್ಲಿ ಒಬ್ಬ ಕವಿವಚನವು ಹೀಗೆಂದಿರುವುದು. "ಕ್ಲೇಶಲಬ್ಧ ಮನಿಕ ಪರಮಂ ಕ" ಕಷ್ಟಪಟ್ಟು ದುಡಿದ ಧನದಲ್ಲಿ ಜನರಿಗೆ ತುಂಬಾ ಆದರವಿರುತ್ತದೆ. ಅದರ ಬೆಲೆಯನ್ನು ಚೆನ್ನಾಗಿ ಅರಿತಿರುವುದರಿಂದ ನೀವು ಕಾಯಕಷ್ಟದಿಂದಾರ್ಜಿಸಿದ ಹಣವನ್ನು ಅತ್ಯಾದರದಿಂದ ಕಾಪಾಡುತ್ತಿದ್ದರೂ ಅಕಸ್ಮಾತ್ ಕೆಲವು ಭಾಗಗಳಲ್ಲಿ ವ್ಯರ್ಥ ವ್ಯಯವಾಗುವುದರಿಂದ ನಿಮಗೆ ಬಹಳ ... ವು ಕೇಳಲಾರದು. ಈವಾರ ವ್ಯವಹಾರದ ... ಆದ ತಕ್ಕ ತೋರಿದರೂ ... ಸ್ಥಾನದಲ್ಲಿ ಸೇರಿರುವುದು. ಅದರಿಂದ ಇನ್ನೊಂದು ಸಂತೋಷದ ವಿಷಯ. ಶತ್ರುಗಳನ್ನೂ ಕೂಡ ನೀವು ಒಳತಕ್ಕೊಂಡು ನಿಮ್ಮ ... ವನ್ನು ಸಾಧಿಸುವಿರಿ. ಪ್ರ ... ವು ಅನುಕೂಲವಿದೆ. ಖರ್ಚಿನ ... ಕ್ಕಿಂತಲೂ ಹೆಚ್ಚಿಗೆ ಸಂಪಾದಿಸುವಿರಿ. ತಾ 7, 8 ಈ ದಿನಗಳಲ್ಲಿ ಧನಲಾಭ, ಕಾರ್ಯಜಯ, ವಸ್ತ್ರಲಾಭ, ಸ್ತ್ರೀಸುಖಗಳು ಸಿಗಲಿವೆ.

ಮಿಥುನರಾಶಿ—

ಸರ್ವ ಗ್ರಹರು ಪ್ರತಿಕೂಲರಾಗಿದ್ದರೂ ಗುರ್ವನುಗ್ರಹವಿರುವುದರಿಂದ ಕೃಷಿಕರಿಗೆ ಬೇಕಾದ ದವಸಧಾನ್ಯಗಳು ತುಂಬಾ ಲಭಿಸುವವು. ಇತರ ಸ್ವಬುದ್ಧಿಬಲದಿಂದ ಧನವನ್ನು ಸಂಪಾದಿಸಲು ಶಕ್ಯರಿರುವರು. ಆದರೂ ಖರ್ಚಿನ ಭಾಗಗಳು ಯಾವತ್ತೂ ಹೆಚ್ಚಿರುವುದರಿಂದ ದಟ್ಟಿದ ಅಡಚಣೆಯಿಂದಾಗಿ ಮಾನವನ್ನು ಕಾಪಾಡಿಕೊಳ್ಳುವುದು ಬಹಳ ಕಷ್ಟಕ್ಕೆ ಬರುವುದು. ನಿಮ್ಮಂತರಂಗವು ಕಲುಷಿತವಾಗಿರುವುದರಿಂದ ಎಲ್ಲರೂ ನಿಮ್ಮ ಭಾಗಕ್ಕೆ ಶತ್ರುಗಳಾಗಿ ಪರಿಣಮಿಸುವರು. ವಿದ್ಯಾರ್ಥಿಗಳಿಗೂ ವಿದ್ಯಾಭಿಲಾಷಿಗಳಿಗೂ ಈ ಸಮಯ ಹಿತಕರವಿಲ್ಲ. ... ಕಲಹವು ಹೆಚ್ಚುವುದು. ಸ್ವೀಕೃತ ಕಾರ್ಯಗಳು ಶತ್ರುಗಳ ವಂಚನೆಯಿಂದಾಗಿ ಒಂದೂ ಫಲಕಾರಿಯಾಗದು. ಶರೀರ ಆರೋಗ್ಯವೂ ಕೂಡ ಕೆಟ್ಟುಗೊಳ್ಳುವುದು. ತಾ 7ರಿಂದ 10ರ ವರೆಗಿನ ದಿನಗಳಲ್ಲಿ ಭಯಾನಿಷ್ಟಗಳೇ ... ವಿಶೇಷ ಕ್ಲೇಶಕ್ಕೊಳಗಾಗುವಿರಿ.

ಕರ್ಕಾಟಕರಾಶಿ—

ಎಷ್ಟೇ ಜಾಗರೂಕರಾಗಿದ್ದರೂ ಕೂಡ ನಿಮಗೆ ಪ್ರಸ್ತುತ ಪರಿಸ್ಥಿತಿಯಲ್ಲಿ ಆರೋಗ್ಯವು ಸಿಗಲಾರದು. ಉದರ ರೋಗ, ಶಿರೋವೇದನೆ, ಅಂಗ ಶ್ರಮಗಳು ಅಸ್ವಸ್ಥರನ್ನಾಗಿ ಪೀಡಿಸುವವು. ಮಿತ್ರಜನರಿಂದಾಗಲೀ ಅಥವಾ ಸಂಬಂಧಿಕರಿಂದ ಧನಾಪಹಾರ ... ರಾಶಿಯವರಿಗೆ ಧನವ್ಯಯವು ಅತ್ಯಧಿಕವಾಗುವುದು. ಅಕಸ್ಮಾತ್ ಸಂಭವಿಸತಕ್ಕ ಪ್ರಯಾಣದಲ್ಲಿ ಹೆಚ್ಚಿನ ಕಷ್ಟವನ್ನನುಭವಿಸಬೇಕಾಗುವುದು. ಆದರೂ ಕೆಲವು ಗ್ರಹರು ಕೃಪಾದೃಷ್ಟಿಯನ್ನು ನಿಮ್ಮ ಮೇಲೆ ಬೀರಿರುವುದರಿಂದ ಸ್ವೀಕೃತ ಕಾರ್ಯದಲ್ಲಿ ಶ್ರಮವಹಿಸಿ ಕಾರ್ಯವನ್ನು ಕೊನೆಗೈಯುವಿರಿ. ವಿರೋಧಿಗಳೆಂಬವರ ಕೈಲಾದಷ್ಟು ಎನಲನಂತೆ ವರ್ತಿಸುವಿರಿ. ದುಡಿತದಲ್ಲಿ ಚೆನ್ನಾಗಿ ಧನಲಾಭವಿರುವುದರಿಂದ ಖರ್ಚಿನ ಬಗ್ಗೆ ಏನೂ ಚಿಂತಿಸಬೇಕಾಗಿಲ್ಲವು. ಉದ್ಯೋಗದಲ್ಲಿ ಉನ್ನತ ಸ್ಥಾನವನ್ನು ಪಡೆಯುವಿರಿ. ಗೃಹಪರಿವಾರವು ನಿರೋಗಿಯಾಗಿ ಸುಖದಿಂದಿರುವುದು. ತಾ. 7, 8ವತ್ತು 11, 12 ಈ ದಿನಗಳು ಅತ್ಯನುಕೂಲಗಳಾಗಿವೆ.

ಸಿಂಹರಾಶಿ—

ಸಂಸಾರದಲ್ಲಿ ಒಡಕುಗಳು ಹೆಚ್ಚುತ್ತಿವೆ. ನೋದರರ ಮನಸ್ಸು ಒಳಗಿಂದೊಳಗೇ ಹೊಟ್ಟೆಯೊಳಗಿನ ಅಗ್ನಿಯಂತೆ ಕುದಿಯಲಾರಂಭಿಸಿವೆ. ಅಷ್ಟೇಕೆ, ಗಂಡ ಹೆಂಡರಿಗೂ, ತಂದೆ ಮಕ್ಕಳಿಗೂ ಕಲಹವಾಗುವ ಪ್ರಸಕ್ತಿ ಬಂದಿಹುದು. ಶರೀರವು ಪೂರ್ಣ ನಿರೋಗಿಯಾಗಿದೆ, ಆದರೆ ವ್ಯಾಪಾರ ವ್ಯವಹಾರಾದಿಗಳಲ್ಲಿ ಪ್ರವೃತ್ತರಾದವರಿಗೆ ಯೋಗ್ಯವಾದ ಪ್ರತಿಫಲವು ದೊರೆಯುವುದು. ಕೆಳ್ಗಿನವರೇ ಮೊದಲಾದ ಜನರಿಂದ ನೀತಿಶಾಸ್ತ್ರಜ್ಞರಿಗೆ ಧನಲಾಭವಾಗುವ ಸಂಭವವಿದೆ. ಒಳ್ಳೆಯ ನೈಪುಣ್ಯವೂ ಅದಕ್ಕೆ ತಕ್ಕ ಮಾತ್ರ ಕಾರ್ಯವೂ ನಿಮಗಿರುವುದರಿಂದ ಸಂಘದ ಮುಂದಾಳಾಗಿದ್ದು ಜನರ ಗೌರವ ಆದರಗಳಿಗೆ ಪಾತ್ರರಾಗುವಿರಿ. ರತಿಭೋಗವು ಚೆನ್ನಾಗಿರುವುದು. ಮಿತ್ರವೃಂದವು ಬೆಂಗಾವಲಿನಂತಿರುವುದರಿಂದ ಒಳ್ಳೇ ಹುದ್ದೆಗಳು ಸಿಗುವುವು. ಕಾರ್ಯನಿರ್ವಾಹಕ ಶಕ್ತಿ ಸಾಮರ್ಥ್ಯವು ನಿಮ್ಮಲ್ಲಿ ತುಂಬಿ ತುಳುಕುತ್ತಿದೆ. ತಾ. 5, 6 ಮತ್ತು 9, 10 ಈ ದಿನಗಳು ಅತ್ಯುತ್ತಮಗಳಾಗಿವೆ.

ಕನ್ಯಾರಾಶಿ—

ನೀವು ಕೈಗೊಂಡಿರುವ ಉದ್ಯೋಗಕ್ಕೆ ತಕ್ಕ ಪ್ರತಿಫಲ ದೊರೆಯದು. ಆತ್ಮೀಯರೂ ಕುಟುಂಬದವರೂ ... ದು ನಿಮ್ಮ ಮಾತಿಗೆ ಯೋಗ್ಯವಾದ ಬೆಲೆ ಸಿಗದು. ಆದರೇನು? ರಾಜಕೀಯ ಭಾಗದಲ್ಲಿ ಅಂದರೆ ಕೋರ್ಟು ಕಛೇರಿ ವ್ಯವಹಾರದಲ್ಲಿ ನಿಮಗೆ ಪ್ರತಿಕೂಲವಾಗಿಯೇ ಕಾರ್ಯವು ಕೊನೆಗಾಣುವುದು. ಧನವ್ಯಯವು ಆಯಕ್ಕಿಂತಲೂ ಇಮ್ಮಡಿಯಾಗುವುದು. ಮನೋವ್ಯಥೆಯಿಂದ ಆವೃತರಾದ ನಿಮಗೆ ಆರೋಗ್ಯವು ಎಂದೂ ಉಳಿಯಲಾರದು. ಉಷ್ಣಪಿತ್ತ ವಿಕಾರದಿಂದ ಶರೀರವು ಬಹಳ ಪೀಡೆಗೊಳಗಾಗುವುದು. ಅನಪೇಕ್ಷಿತವಾದ ಆಪತ್ತುಗಳು ಮೇಲೆ ಬಂದು ಬೀಳುವವು. ಇಷ್ಟಾರ್ಥಗಳಿಗೆ ತುಂಬಾ ತೊಡಕುಂಟಾಗುವುದು. ಅನೇಕ ಸಂದರ್ಭಗಳಲ್ಲಿ ಮಾನಹಾನಿಯಾಗುವ ಪ್ರಕರಣವು ಬಂದೀತು. ತಾ 9, 10 ಈ ದಿನಗಳಲ್ಲಿ ರೋಗಭೀತಿ, ಧನವ್ಯಯವು ಮೇರೆ ಮೀರಿ ಅತಿಕ್ರಮಿಸುವುದು.

ತುಲಾರಾಶಿ—

ಶರೀರದಲ್ಲಿ ಬಾಹ್ಯರೋಗಗಳು ಕಂಡುಬರುವವು. ಅಕಸ್ಮಾತ್ತಾಗಿ ಅಪಘಾತಕ್ಕೆ ತುತ್ತಾಗುವ ಸಂಭವವಿದೆ. ಆದಕಾರಣ ವಿಶೇಷ ಜನಸಂದಣಿ ಸ್ಥಳಗಳಲ್ಲೂ ವಾಹನಾದಿ ಯಾನಗಳಲ್ಲೂ ಅವಶ್ಯ ಜಾಗ್ರತೆ ವಹಿಸಿರಿ. ಅಧಿಕಾರಿಗಳ ಪ್ರಕೋಪಕ್ಕೆ ಕಾರಣವಾದ ಒಂದೆರಡು ಕಾರ್ಯಗಳು ತಮ್ಮಿಂದ ತಿಳಿದಾಗಲೀ ತಿಳಿಯದೆಯಾಗಲೀ ಮಾಡಲ್ಪಡುವವು. ನಾನಾವಿಧವಾದ ಉದ್ಯೋಗಗಳಿಂದಾಗಲಿ ಕರ್ಮಗಳಿಂದಾಗಲಿ ಮನೋಭೀಷ್ಟವು ಪೂರ್ತಿಯಾಗುವುದು. ಸಾಂಪತ್ತಿಕ ಭಾಗವು ಬಹಳ ಚೆನ್ನಾಗಿರುವುದು. ಶತ್ರುಗಳ ದೃಷ್ಟಿಯು ನಿಮ್ಮ ಧನದ ಮೇಲೆ ಬಿದ್ದಿರುವುದು. ಆದರೂ ಅವರಿಂದೇನೂ ಕಾರ್ಯಸಾಗದು. ಸಕಲ ಭೋಗಭಾಗ್ಯಗಳಿಂದ ಕೂಡಿರುವಿರಿ. ಮಿತ್ರಜನರು ಬಂಧುಗಳು ಸಕಲ ಭಾಗಗಳಲ್ಲಿಯೂ ನಿಮಗನುಕೂಲರಾಗಿರುವುದರಿಂದ ದಿನಗಳನ್ನು ಸಂತೋಷದಿಂದ ಕಳೆಯುವಿರಿ. ತಾ. 7ರಿಂದ 10ರ ವರೆಗಿನ ದಿನಗಳು ಸರ್ವವಿಧದಿಂದಲೂ ಅನುಕೂಲಗಳಾಗಿವೆ.

ವೃಶ್ಚಿಕರಾಶಿ—

ಪ್ರಕೃತದ ಸಂದರ್ಭದಲ್ಲಿ ಹಣ ಸಿಗುವುದೆಂದಾದರೆ ಯಾವ ತರದ (ಹೀನ) ವೃತ್ತಿಯನ್ನವಲಂಬಿಸಲೂ ಹಿಂಜರಿಯಲಾರಿರಿ. ಆದರೇನು? ನಿಮಗೆ ಖರ್ಚಿನ ಭಾಗವು ವಿಪರೀತವಾಗಿದ್ದು ಏನು ಮಾಡಿದರೂ ಅದನ್ನು ತುಂಬಿಸಲು ಸಾಧ್ಯವಾಗುವಂತಿಲ್ಲ. ಭಯದಿಂದ ವಿಹ್ವಲಗೊಂಡ ಮನಸ್ಸು ಕಾರ್ಯವನ್ನು ಮುಂದರಿಸಲು ಅಸಮರ್ಥವಾಗುವುದು. ಆಪ್ತ ಬಂಧುಗಳು ನಿಮ್ಮನ್ನು ವಂಚಿಸುವ ಸಲುವಾಗಿ ಹೂಡುವ ತಂತ್ರವು ನಿಮ್ಮ ತಿಳುವಳಿಕೆಗೆ ಬಂದು ಆ ಭಾಗದಲ್ಲಿ ತುಂಬಾ ವ್ಯಥೆಗೊಳ್ಳುವಿರಿ. ಭೃತ್ಯರ ಮತ್ತು ಸ್ತ್ರೀಯರ ಪ್ರಕೋಪಕ್ಕೆ ಕಾರಣರಾಗಿ ನಾನಾ ಅನರ್ಥಗಳನ್ನನುಭವಿಸುವ ಸಂಭವ ಬಂದೀತು. ಮನಸ್ಸನ್ನು ಅವಶ್ಯ ದೃಢಮಾಡಿಕೊಂಡು ನಿಮ್ಮ ನಿಮ್ಮ ಕಾರ್ಯಗಳಲ್ಲಿ ಮುಂದರಿದರೆ ಕೆಲವಂಶವಾದರೂ ಪ್ರಯೋಜನವಾಗಬಹುದು. ಈ ವಾರದ ಆರ್ಥಿಕ ಭಾಗವು ಬಹಳ ಅನಿಷ್ಟಕಾರಿಯಾಗಿದೆ.

ಧನುರಾಶಿ—

ದೇಹದಲ್ಲಿ ವಿಶೇಷತೆರನಾದ ಆಯಾಸವು ತೋರಿಬರಬಹುದು. ಶರೀರದಲ್ಲಿ ತಾಪಾಧಿಕ್ಯವೂ ಕೈಕಾಲು ಸಂದುಗೊಂದುಗಳಲ್ಲಿ ನೋವೂ ಆಗಾಗ ಕಂಡುಬರುವುದು. ಕೈಗೊಂಡ ಕಾರ್ಯಗಳಿಗೆ ವಿಘ್ನಭಯವು ಅತ್ಯಧಿಕವಾಗುವುದು. ಕೆಲವೊಂದು ಭಾಗ್ಯಗಳು ಕ್ಷೀಣದೆಸೆಯನ್ನೈದುವವು. ಮನಸ್ಸೂ ಕೂಡ ಕುಮಾರ್ಗಗಾಮಿಯಾಗುವುದರಿಂದ ಪುತ್ರ ಮಿತ್ರ ಕಳತ್ರರಿಗೂ ಕೂಡ ನಿಮ್ಮಲ್ಲಿ ತಾತ್ಸಾರ ಬುದ್ಧಿ ಹುಟ್ಟುವುದು. ಮಾತಿನಲ್ಲಿ ದೌರ್ಜನ್ಯವು ಮತ್ತು ಕಾಠಿಣ್ಯವು ಒಡೆದು ತೋರುವುದು. ಎಷ್ಟೊಂದು ವಿಘ್ನಗಳು ಬಂದರೂ ನಿಮ್ಮ ದೈವಬಲದಿಂದ ಅವನ್ನು ಪಾರಾಗಿ ಕಾರ್ಯಗಳಲ್ಲಿ ಜಯಶೀಲರಾಗುವಿರಿ. ಮಾತ್ರವಲ್ಲ ನಿಮ್ಮ ಅನುದಿನದ ಖರ್ಚಿಗೆ ಬೇಕಾಗುವ ಧನವನ್ನು ಸ್ವಯಂ ಸಂಪಾದಿಸುವಿರಿ. ಅವರೂ ಮರುದಿನಕ್ಕೆ ಉಳಿಯಲಾರದು. ತಾ. 5, 6, ಮತ್ತು 11, 12, ಈ ದಿನಗಳು ಇದ್ದುದರಲ್ಲಿ ಉತ್ತಮಗಳಾಗಿವೆ.

ಮಕರರಾಶಿ—

ಅನ್ಯಾಯಕ್ಕೆ ಪ್ರವರ್ತಿಸದೆ ನ್ಯಾಯಮಾರ್ಗದಲ್ಲೇ ಮುಂದಡಿಯಿಡಿರಿ. ದೈವಾನುಗ್ರಹವು ಚೆನ್ನಾಗಿದೆ. ಆದಕಾರಣ ದೈವ ದೇವತೆಗಳಲ್ಲಿ ನೆಟ್ಟ ಮನಸ್ಸುಳ್ಳವರಾಗಿ ಕಾರ್ಯ ಪ್ರವರ್ತಕರಾಗಿರಿ. ಪ್ರಾಪಂಚಿಕ ಸುಖಗಳು ಮತ್ತು ಮಾನಸಿಕ ಸುಖವೂ ಕೂಡ ದೊರೆಯುವುದು. ಅಷ್ಟೇ ಅಲ್ಲದೆ ನಿಮಗೆ ಸರ್ವ ಕಾರ್ಯಗಳ ಮುಂದಾಳುಗಳಾಗಿದ್ದು ಸಕಲ ವಿಧದಿಂದಲೂ ನಿಮ್ಮ ಹಿತೇಚ್ಛುಗಳಾಗಿ ವರ್ತಿಸುವರು. ವಾದ ವಿವಾದ ವಿಷಯದಲ್ಲೂ, ಕೋರ್ಟು ಕಛೇರಿಯ ಕಾರ್ಯಗಳಲ್ಲಿಯೂ ನಿಮ್ಮ ಪಂಥವೇ ಮೇಲಾಗುವುದು. ಬಲಾಢ್ಯರಾದ ಶತ್ರುಗಳನ್ನು ಕೂಡ ಮರ್ದಿಸಲು ಸಾಕಷ್ಟು ಶಕ್ತಿ ಯುಕ್ತಿಗಳು ನಿಮಗೆ ಬರುವವು. ತಾ. 9ರಿಂದ 12ರ ವರೆಗಿನ ದಿನಗಳಲ್ಲಿ ಖರ್ಚು ಸ್ವಲ್ಪ ಅಧಿಕವಾಗುವುದು ಮತ್ತು ಕೆಲವು ಕಾರ್ಯಗಳು ಸ್ವಲ್ಪ ಅಸ್ತವ್ಯಸ್ತವಾಗಲೂ ಬಹುದು.

ಕುಂಭರಾಶಿ—

ಗೃಹಕೃತ್ಯಕ್ಕೆ ಸಂಬಂಧಪಟ್ಟ ಸಕಲ ವಸ್ತುಗಳೂ ಸಂಪೂರ್ಣವಾಗಿರುವವು. ಪುತ್ರ ಮಿತ್ರ ಕಳತ್ರರೂ ಸರ್ವರೂ ಅನುಕೂಲರಾಗಿರುವರು. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆಯುವಿರಿ. ಇಷ್ಟಿದ್ದರೂ ನಿಮ್ಮ ಮನಸ್ಸು ಸದಾ ಚಿಂತಾಮಗ್ನವಾಗಿರುವುದು. ಅದೇಕೆನ್ನುವಿರಾ? ಸರ್ವ ಸುಖದುಃಖಗಳನ್ನನುಭವಿಸುವ ನಿಮ್ಮ ಶರೀರವು ಬಹಳ ದುರ್ಬಲವಾಗಿದ್ದುದು ಮಾತ್ರವಲ್ಲ ಸದಾ ಪೀಡೆಯಿಂದ ಬಿಟ್ಟಿದ್ದಿಲ್ಲ. ಆ ದಕಾರಣದಿಂದಲೇ ನಿಮ್ಮ ಭಾಗಕ್ಕೆ ಹಿಂದೆ ಹೇಳಿದ ಶುಭ ಫಲಗಳು ಇದ್ದರೂ ಇಲ್ಲದಂತೆಯೇ ಎನ್ನಬೇಕು. ನಾಲಿಗೆಯನ್ನು ಹಿಡಿತದಲ್ಲಿಟ್ಟುಕೊಂಡಿದ್ದು ಬಹಳ ಮಿತಭಾಷಿಯಾಗಿದ್ದರೂ ಕೂಡ ಕಲಹವು ತಪ್ಪುವಂತಿಲ್ಲ. ತಾ. 7ರಿಂದ 10ರ ವರೆಗೆ ಗ್ರಹಾನುಕೂಲವು ಕಿಂಚಿದಧಿಕವಿರುವುದರಿಂದ ಇಷ್ಟಸಿದ್ಧಿ ಮತ್ತು ಸಾಕಷ್ಟು ಧನವೂ ಕೂಡ ಸಿಗುವುದು.

ಮೀನರಾಶಿ—

ಈ ವಾರವು ನಿಮ್ಮ ಭಾಗಕ್ಕೆ ಕೆಡುಕನ್ನೂ ಮಾಡದು, ಹಿತವನ್ನೂ ವಿಶೇಷವಾಗಿ ಮಾಡಲಾರದೆಂದು ಹೇಳಬೇಕಾಗಿದೆ. ಯಾಕೆಂದರೆ ಇಷ್ಟಾನಿಷ್ಟ ಗ್ರಹರಿಗೆ ಬಲಸಾಮ್ಯವಿರುವುದರಿಂದ ಕೆಲವು ಭಾಗಗಳಲ್ಲಿ ಒಳ್ಳೆಯ ಚಿಹ್ನೆಗಳು ತೋರಿದರೆ ಇನ್ನು ಕೆಲವು ಭಾಗಗಳಲ್ಲಿ ಕೆಡುಕುಗಳೂ ಸಂಭವಿಸಬಹುದು. ಸ್ವೀಕೃತ ಕಾರ್ಯಗಳು ಸಿದ್ಧಿಸುವವು. ತೃಪ್ತಿಕರವಾಗಿ ಧನಪ್ರಾಪ್ತಿಯೂ ಆಗುವದು. ವನಿತಾ ಸುಖವೂ ಕಡಿಮೆಯಾಗದು. ಮತ್ತು ಶತ್ರುಗಳು ನಾನಾ ರೀತಿಯಿಂದ ನಿಮ್ಮ ಧನಮಾನಗಳನ್ನಪಹರಿಸಲು ಯತ್ನಿಸುವರು. ಮಾರ್ಗದಲ್ಲಿ ವಿಶೇಷ ದುಃಖಪ್ರಾಪ್ತವಾಗಿ ಮನೋವ್ಯಥೆಯನ್ನುಂಟು ಮಾಡುವುದು. ವಾರಾದಿಯ ನಾಲ್ಕು ದಿನಗಳಲ್ಲಿ ಆಪ್ತಜನ ವಿರೋಧ, ಕಾರ್ಯಹಾನಿ ತೊಡಕುಗಳು ಅಧಿಕವಾಗಿ ಕಂಡುಬಂದರೂ ಮುಂದಿನ ದಿನಗಳಲ್ಲಿ ಅವು ಪರಿಹಾರವಾಗಿ ಇಷ್ಟಾರ್ಥ ಪ್ರಾಪ್ತಿಯಾಗುವುದು.

ಎಲ್ಲೆಲ್ಲೂ ಪ್ರಸಿದ್ಧಿ ಪಡೆದಿರುವ ಉಡುಪಿಯ ಚರಿತ್ರೆಯನ್ನು ತಿಳಿಯಬೇಕೇ?
ಹಾಗಿದ್ದರೆ

ನಮ್ಮ ಉಡುಪಿ

ಎಂಬ ಚಿತ್ರಮಯ ಪುಸ್ತಕವನ್ನು ಓದಿರಿ!

ಉಡುಪಿ ಕ್ಷೇತ್ರಕ್ಕೆ ಯಾತ್ರಾದೃಷ್ಟಿಯಿಂದಾಗಲೀ ಐತಿಹಾಸಿಕ ಮಹತ್ವದ ದೃಷ್ಟಿಯಿಂದಾಗಲೀ ಸಂದರ್ಶನಾರ್ಥವಾಗಿ ಬಂದವರೂ ಬರುವವರೂ ಮೊದಲಾಗಿ ತಿಳಿದುಕೊಳ್ಳಬೇಕಾದದು ಈ ಕ್ಷೇತ್ರದ ಹಿಂದಿನ ಮತ್ತು ಇಂದಿನ ಸಚಿತ್ರ ವಿವರ. ಸಮಾಜ ಸೇವಕರಿಗೆ ಬೇಕಾದುದು ವೈಯಕ್ತಿಕ ಜೀವಜ್ಯೋತಿಗಳ ಜೀವನಚರಿತ್ರೆ. ಅವೆಲ್ಲವೂ ಈ ಪುಸ್ತಕದಲ್ಲಿವೆ.

ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಹೊಸ ದೃಷ್ಟಿಯಿಂದ ಬರೆದ ಪುಸ್ತಕ.

ಉಡುಪಿಗೆ ಬಂದವರೂ ಸರಿಯೆ, ಬಾರದಿದ್ದರೂ ಸರಿಯೇ 'ನಮ್ಮ ಉಡುಪಿ'ಯನ್ನು ಓದಲೇ ಬೇಕು.

ಬೆಲೆ ಐದಾಣೆ

ಆರಾಣೆ ಸ್ಟಾಂಪು ಕಳಿಸಿದ್ದಲ್ಲಿ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳ:— **ನವಭಾರತ ಪುಸ್ತಕ ಭಂಡಾರ, ಉಡುಪಿ.**

WANTED—District Organisers and Taluka Superintendents in Districts of Belgaum, Bijapur, Dharwar, Canara and Coorg on salary and commission basis. Special facilities for the initial business of Rs 10,000/-. Only influential gentlemen who can guarantee Rs. 50,000/- and Rs 25,000/- per year need apply, Messrs.

PADUBIDRI BROS., BOMBAY 4.

ನಿಮಗೇನು ಹೇಳೀಂದೆ!

(ಇರೆಗ್ ದಾನೆ ಪಣ್ಪೆಗೆ!)

"Tickle me Toby, and I'll tickle thee."

(ಲೇಖಕರು—ಶ್ರೀ ಬಿ. ಅಪ್ಪಯ್ಯ ಶೆಟ್ಟಿ, ಬಿ. ಎ. ಎಲ್. ಟಿ., ಉಡುಪಿ.)

It has become formal among our people, whenever they meet, to compliment one another by the terms, "Oh, you are an aristocrat of Wealth—Indigence cannot assail you". Wise men keep quiet and take it for what it is worth; but such people are only very few. The majority of people however are greenhorns in worldly affairs who fish for such compliments and think that they really deserve them. People who pay such compliments are very often insincere fellows who try to exploit our weaknesses. They know where we are itching and try to scratch us at that point and thus delude us and make us take false steps in life and when we come to grief, they do not weep with us but jettison us. One literary figure said, "The world is a looking glass. Laugh at it, it will laugh at you. Frown at it, it will frown at you". Yes, frowning at the world is dangerous for it will frown at us, but the writer is of the opinion that the world can be corrected by frowning at it. Why provoke a laugh and mislead the world? The child may aspire for sweet things but the wise mother gives bitter medicines and saves the child. Let us shun and discourage such compliments. Let us not do a disservice to our children by exaggerating our financial position under a magnifying glass. Let us rather underrate it. Then our childern and sons in law will become practical and will be real assets to our society rather than the liabilities that they are to-day from a sound economic point of view. Let every man and woman speculate on this!

[ನೋಟ್ಮನೆಯ ಅಂತು ಶೆಟ್ರ ಹತ್ತರ ಅವರ ಭಾವ ಶೆಳ್ಮನೆಯ ಶೇಶು ಶೆಟ್ರ ಸಂಭಾಷಣೆ. ಅಂತು ಶೆಟ್ರು ಹಿರಿಯರು, ಪ್ರಾಯ 51. ಶೇಶು ಶೆಟ್ರು ಕಿರಿಯರು, ಪ್ರಾಯ 23.]

ಶೇಶು ಶೆಟ್ರು—ಏನು ಭಾವ, ನೀವು ಬರೀ ಪಿಟ್ಟಾಸು ಮಾಡುವುದೇಕೆ? ನಿಮಗೆ ಸಾಧಾರಣ ಒಂದು ಸಾವಿರ ಚಿಲ್ಲರೆ ಹುಟ್ಟುವಳಿ ಉಂಟು. ಕುಟುಂಬವೇನು ದೊಡ್ಡದಿಲ್ಲ. ಮಕ್ಕಳೂ ಸಹ ಕಡಿಮೆ. ಇರುವುದು ಎರಡು ಗಂಡು, ಎರಡು ಹೆಣ್ಣು—ಸ್ವಲ್ಪವಾದರೂ ಈ ನವನಾಗರೀಕತೆಯ ಗಾಳಿ ಬೀಸದ, ಸುಖ-ಸಂತೋಷದ ಲವಲೇಶವೂ ಇಲ್ಲದ, ಈಹಳ್ಳಿ ಮೂಲೆ ಹಿಡ್ಕೊಂಡು ದರಿದ್ರ ಜೀವನದಲ್ಲಿ ನರಳೋದಾ ನೀವು?

ಅಂತು ಶೆಟ್ರು—ಭಾವ, ನೀವೆಲ್ಲ ಕಿರಿಯರು, ವ್ಯಾವಹಾರಿಕ ಜ್ಞಾನವಿಲ್ಲದವರು. ಆದರೆ ಹಾಗೆಂದಾಗ ನಿಮಗೆ ಬೆಂಕಿ ಉರಿದಂತೆ ಸಿಟ್ಟು ಏರುತ್ತೆ. ನೋಡು, ನೀನೇನೋ ಇಂಗ್ಲೀಷ್ ಗಿಂಗ್ಲೀಷ್ ಕಲ್ತಿದ್ದಿ—ನಿನ್ನಷ್ಟು ನಾನು ಓದಿ-ಗೀದಿ ತಿಳಿಯದಿದ್ದರೂ ಅನುಭವದಿಂದ ತಕ್ಕಷ್ಟು ಲೋಕವನ್ನು ತಿಳಿದುಕೊಂಡಿದ್ದೇನೆ—ನೋಡು, ಸಂಸಾರ ವಿಶೇಷವಿಲ್ಲದಿದ್ದರೂ ನಡೆಯಬೇಕಾದ ಖರ್ಚು ವೆಚ್ಚ ನಿಲ್ಲುತ್ತದಾ? ಮಕ್ಕಳೆಲ್ಲಾ ಪ್ರಾಯಕ್ಕೆ ಬಂದರು. ನನಗೆ ಅನುದಿನವೂ ಚಿಂತೆ, ಭಾವಾ!-ಹ್ಯಾಗೆ ಸಾಗೀತು ದಿವಸಾಂತ. ಅಲ್ಲಾ, ನೀವೆಲ್ಲ ಹೇಳುತ್ತೀರ ಪ್ಪಾ-ದಿವಸ ತನ್ನಷ್ಟಕ್ಕೆ ಹೋಗುತ್ತದೆಂತ. ಆದರೆ ದಿನ ಹೋದಂತೆ ಕಾಲ ಕಷ್ಟವಾಗುತ್ತಾ ಬರುತ್ತದೆ. ಸೊಗಸುಗಾರಿಕೆಯ ಮಾತಿರಲಿ, ಬರೇ ಗಂಜಿ ಕುಡಿದು ಬದುಕೋಣವೆಂದರೂ ದಿನ ಸಾಗುವುದು ಕಠಿಣ!

ಶೇಶು ಶೆಟ್ರು—ನಿಮಗೆ ದಾಡಿ! ನಿಮಗೇನು ಹೇಳೀಂದೆ! ನಿಮಗೆಂಥಾ ತಾಪತ್ರಯ, ನಿಮಗೆ ಭ್ರಾಂತಿ! ನಿಮ್ಮ ಸ್ಥಿತಿಯಲ್ಲಿದ್ದರೆನಾನು ಒಂದಲ್ಲ ಎರಡು ಕಾರ್ ಇಡುತ್ತಿದ್ದೆ. ಅರಸರ ಹಾಗೆ ಮೆರೆಯುತ್ತಿದ್ದೆ. ನಿಮ್ಮಂಥವರೆಲ್ಲಾ ಜಗತ್ತು ದುಃಖಮಯವೆಂಬ ಮತದವರು, ಇಲ್ಲದ್ದನ್ನು ಕನವರಿಸುವವರು; ಮುಂದನ್ನು ಚಿಂತಿಸಿ, ಚಿಂತಿಸಿ ಇಂದನ್ನು ಹಾಳುಮಾಡಿಕೊಳ್ಳುವವರು. ನೋಡಿ, ಅಕ್ಕ ಹೇಳುತ್ತಾರೆ-ಕೆಲಸದ ಜನ ಒಂದೂ ಇಲ್ಲಂತೆ. ಗೃಹಕೃತ್ಯದ ಕೀಳು ಕೆಲಸಕ್ಕೆಲ್ಲಾ ಅಕ್ಕ ಮತ್ತು ಮಕ್ಕಳೇ ಕೈ ಕೊಡುವುದಾ! ಏನು ಆಶೆ! ನಿಮಗೆ ನಾಚಿಕೆ ಆಗುವುದಿಲ್ಲವಾ, ಭಾವ! ಅಡಿಕೆ ಮನೆ ಬಾಗಿಲಶೆಟ್ರನ್ನು ನೋಡಿ. ಅವರ ಗಂಡ ತೋಮರ ಶೆಟ್ರಿಗೆ ನಿಮ್ಮದರ ಅರೆವಾಸಿ ಹುಟ್ಟುವಳಿ ಇಲ್ಲವಲ್ಲಾ! ಮೇಲಾಗಿ ಒಂದು ಡಜನ್ ಮಕ್ಕಳಿದ್ದಾವೆ. ಅದರಲ್ಲಿಯೂ ಅರ್ಧ ಡಜನ್ ಹೆಣ್ಣು ಮಕ್ಕಳು. ಅವರ ದರ್ಬಾರು ನೋಡಿ-ಕಾರ್ಬಾರು ಕೇಳಿ! ರಾಜಮರ್ಜಿ ಅಂದರೆ ತೋಮರ ಶೆಟ್ರದ್ದು! ತಿಂಗಳು ತಿಂಗಳು ಹೆಂಡತಿ ಮಕ್ಕಳಿಗೆಲ್ಲ ಹೊಸ ಹೊಸ ಬಟ್ಟೆಬರೆ, ಪೇಟೆಗೆ ಹೋದ ಹೋದ ಹಾಗೆಲ್ಲ, ಮೂಟೆ ಮೂಟೆ ತರುತ್ತಾರೆ-ಚಿನ್ನಾಭರಣ-ಕೈಗೊಂದು ಬ್ಯಾಗೊಂದು ಕೆಲಸದವರು, ಎಂಥಾ ಗೌಜಿ ಗಮ್ಮತಿನಲ್ಲಿದ್ದಾರೆ 'ಕೇರ್' ಮಾಡುತ್ತಾರಾ, ಅವರು? ಹೆಂಡ್ತಿ ಹುಲಿಹಾಲು ಬೇಕೆಂದರೂ ಕ್ಷಣದೊಳಗೆ ತಯಾರಲ್ಲಾ! ನಾನು ಮೆಚ್ಚಿದ ಸಂಸಾರಾದ್ರೆ ಅದೇ ಒಂದು! ನೀವು ಏನೂ ಪ್ರಯೋಜನವಿಲ್ಲಾ ಭಾವ-ಬರೀ ಬೂಸ್, ನೀವು-ನಿಮ್ಮ ಸ್ಥಾನದಲ್ಲಿ ನಾನಿರುತ್ತಿದ್ದರೆ-ಈ ಮನೆಯೆಂಬೋದು ಇಂದ್ರನ ಒಡ್ಡೋಲಗದ ಚಾವಡಿಯಂತೆ ಝಗಝಗಿಸುತ್ತಿತ್ತು. ನಿಮಗೇನು ದಾಡಿ, ನಿಮಗೇನು ತಾಪತ್ರಯ ಉಂಟಾ? ನಿಮಗೇನು ಹೇಳ್ಳೀಂದೆ (ಇರೆಗ್ ದಾನಿ ಪಣ್ಪೆಗೆ!)

ಅಂತು ಶೆಟ್ರು—ಭಾವಾ, ಬೇಜಾರ ಮಾಡಬೇಡ ನಾನು ಹೇಳುವುದನ್ನು ಸಾವಧಾನದಿಂದ ಕೇಳು—ಅದರ ಸಾರವನ್ನು ಹೀರು. ನೋಡು, ನೀನೀಗ ಹೇಳಿದಿಯಲ್ಲ "ನಿಮಗೇನು ಧಾಡಿ ಭಾವ! ತಾಪತ್ರಯ ಇಲ್ಲದವರು-(ಇರೆಗ್ ದಾನಿಪಣಯರಾ!)" ಎಂಬಮಾತು ಇನ್ನುಮುಂದೆ ನೀನು ನನಗೆ ಹೇಳಬಾರದು, ಭಾವ—ನೀನು ನಿಜವಾಗಿಯೂ ನನ್ನ ಹಿತಚಿಂತಕನಾದರೆ ಎಷ್ಟು ಮಾತ್ರಕ್ಕೂ ಹೇಳಕೂಡದು—ಈ ಮಾತೇ ಒಂದು ದೊಡ್ಡ ವಿಷ ನಮ್ಮನ್ನು ಕೊಲ್ಲಲಿಕ್ಕೆ ಬೇರೆಯವರು ಹೂಡುವ ಶಸ್ತ್ರ ಇದು! ಈ ಮಾತು ಬಂತೆಂದು ನಾವು ಹಿಗ್ಗಬಾರದು-ಬರಲಿಲ್ಲವೆಂದು ಕುಗ್ಗಬಾರದು. ನಮ್ಮ ದೌರ್ಬಲ್ಯವು ಎಲ್ಲಿ ಉಂಟೆಂಬುದನ್ನು ಕಂಡುಹಿಡಿದು ಅಲ್ಲಿಗೆ ಹೊಡೆದು ನಮ್ಮನ್ನು ಕೆಡಹಿ ಹಾಕಿ ಲಗಾಡಿತೆಗೆಯಲಿಕ್ಕೆ ಬದ್ಧಿವಂತ ಸ್ವಾರ್ಥಿಗಳು ತೊಡುವ ಬಾಣವೇ ಆ ಮಾತು ನಮಗೆ ಸ್ವಲ್ಪ ಅಬ್ಬರಜಾಸ್ತಿಯೆಂದು ತಿಳಿದು ಈ (ಇರೆಗ್ ದಾನಿ ಶೆಟ್ರೆ! ಇರೆಗ್ ದಾನೆ ಹೆಗ್ಗಡ್ರೆ!) "ನಿಮಗೇನು ಹೇಳಿ!" ಎಂಬ ಸ್ತೋತ್ರಮಂತ್ರದ ಬಲಿಬೀಳುತ್ತಾರೆ. ನಾವು ಅದರಲ್ಲಿ ಸಿಕ್ಕಿಬೀಳುತ್ತೇವೆ—ಬಿದ್ದಬಿದ್ದಂತೆ ನಮ್ಮನ್ನು ಸುಲಿಗೆ ಮಾಡುತ್ತಾರೆ. ನಾವೇನಾದರೂ ಮದುವೆ, ಶೀಮಂತ, ಮುಂತಾದ ಶುಭಶೋಭನಾದಿಗಳಿಗೆ ಕೂಡಿದಾಗ ಒಬ್ಬರು ಮತ್ತೊಬ್ಬರನ್ನು ಅಮಲೇರಿಸುವ ಆಕಲು ಗೆಡಿಸುವ ವಾಡ್ಡನವೇ ಇದು—"ಇರೆಗ್ ದಾನಿ ಪಣಯರ-ತಾಪತ್ರಯ ದಾಂತಿ ಜನ!"-ನೀವು ಇಂದ್ರ, ಚಂದ್ರ, ಕುಬೇರ ಎಂದುಹೇಳಿ ಅವರಿಂದ ಪ್ರತಿಹೇಳಿಸಿಕೊಂಡು ಕನಸಿನ ರಾಜ್ಯದಲ್ಲಿ ಓಲಾಡುವ ಹುಚ್ಚರಾಗುತ್ತೇವೆ- ಹೇದಾ ಭಾವ, ಈ ಪದವನ್ನು ಕೇಳಿದರೆ ಬ್ಯಾಂಕಿನಲ್ಲಿ "ಕ್ರೆಡಿಟ್" ಕೊಡುತ್ತಾರಾ? ಅಥವಾ ನಮ್ಮ ಹತ್ತಿರ ಎಷ್ಟು ಚಿನ್ನ ಉಂಟೆಂದು ತೂಕಕ್ಕೆ ತೋರುತ್ತಾರಾ? ನಾವು ಎಷ್ಟುದೊಡ್ಡ ಮುಂಡಾಸು ಇಟ್ಟರೂ—ಎಷ್ಟು ದೊಡ್ಡ ಜರಿಶಾಲು ಹಾಕಿಕೊಂಡು ಹೋದರೂ, ತಿಳಿದಷ್ಟು ಶೀಘ್ರದಲ್ಲಿ, ಕುಡಿದಷ್ಟು ಅಬ್ಬರದಲ್ಲಿ ಕುರ್ಚಿಯ ಮೇಲ್ ಕೂತುಕೊಂಡರೂ, ನಮ್ಮನ್ನೊಳಗೆ (ಇರೆಗ್ ದಾನಿ ಪಣಯರಾ? ಈರ್ ಕುಭೇರೆ)"ನಿಮಗೇನು ಹೇಳಿ ನೀವು ಕುಭೇರರು", ಎಂದು ರಾಗ ಎಳೆಯುತ್ತಿದ್ದರೂ ಅವರು ಆ ರಾಗಕ್ಕೆಮರುಳಾಗದೆ, "ಸ್ವಾಮಿ, 'ಪ್ರೊಪರ್ಟಿ ಸ್ಟೇಟ್‌ಮೆಂಟ್'(ಆಸ್ತಿ ತಸ್ತೀಲು ಪಟ್ಟಿ)ತಂದಿದ್ದೀರಾ—'ಎಸ್ಟ್ ಕಂಬರೆನ್ಸ್ ಸರ್ಟಿಫಿಕೇಟ್', (ಸಾಲದ ಮಂಜೂರು ಪತ್ರ) ತಂದಿದ್ದೀರಾ?" ಅನ್ನುತ್ತಾರೆ ನೋಡಿ, ನಿಜವಾದ ಮೌಲ್ಯ ಕಂಡುಹಿಡಿಯುವ ತ್ರಾಸು ಅಲ್ಲಿ ಉಂಟು! ವೇಶ್ಯೆಯ ಮನೆಯಲ್ಲಿ ಇಲ್ಲ— ಕಾಫಿ ಹೋಟೇಲಲ್ಲಿ ಇಲ್ಲ, ಸಿನಿಮಾ ಥಿಯೇಟ್ರಿನಲ್ಲಿ ತೋರೋದಿಲ್ಲ. ಗಾರ್ಡನ್ ಪಾರ್ಟಿಗಳಲ್ಲಿ ಊಹೂಂ—ಅಲ್ಲಿ ಕೋಟು ಗೀಟು ನೀಟಾಗಿದ್ದವರು ಯಾರೂ ಹೋಗಿ ಮೂರು ದಿನ ಕುರ್ಚಿಯಲ್ಲಿ ಕೂತುಕೊಳ್ಳಬಹುದು. ದುಡುವವರು ಇಲ್ಲ-ಕ್ಷೌರ ಮಾಡುವ ಸೆಲೂನಿನಲ್ಲಿ ಉಂಟೋಂತೀರಾ? ಪಳಪಳ ಪಾಲಿಷ್ ಮಾಡುವುದರಲ್ಲಿ ಕಾಣುತ್ತದಾ? ಅಲ್ಲದ ಸಲ್ಲದ ವಾದದಲ್ಲಿ ಸಿಕ್ಕಿ ಒಬ್ಬನಿಗೊಬ್ಬನು ಬೈದುಕೊಂಡು ರೌನ್ ತೋರಿಸುವುದರಲ್ಲಿ ಉಂಟಾ?—ಬ್ಯಾಂಕಿನಲ್ಲಿ ಒಂದು ರೂಪಾಯಿ "ಕ್ರೆಡಿಟ್"ಗೆ ಹೋಗುವಾಗ ಅಲ್ಲಿ ಒಂದು ತ್ರಾಸ್ ಎತ್ತಿ ಹಿಡಿಯುತ್ತಾರೆ. ಆ ತಕ್ಕಡಿಗೆ ಈ ಟೊಳ್ಳು ಕಲ್ಲುಗಳು ಯಾವುದೂ ತಾಗುವುದಿಲ್ಲ-ಬರೇ ಬಿಯೇ., ಎಲ್ ಟಿ, ಬಿ ಎ., ಬಿ ಎಲ್., ಮೆಂಟ್ಲಾನ್, ಬೂಟಿಸ್, ರಿಸ್ಟ್‌ವಾಚ್, ಸಿಗರೇಟು, ಆರ್ಸ್ ಸ್ಪರ್ಡ್ ಶ್ರಾಪ್, ಕೆಂಟೆಬ್ ಕೋಟ್, ಫ್ರೇಂಚ್‌ಕಟ್ ಮೀಸೆ, ಲಟ್‌ಪಟ್ ಇಂಗ್ಲೀಷ್, ತೋರ ತೋರ ಮರ್ಜಿ—(ಇರೆಗ್ ದಾನೆ ಪಣ್ಪೆಗೆ! ಈರ್ ಕುಭೇರೆ!) ಇದ್ಯಾವುದೂ ಪ್ರಯೋಜನವಿಲ್ಲ ಅಲ್ಲಿ ಬೇಕಾದ್ದು ಹೊರಗಿನ ಗಿಲೀಟಲ್ಲ—ಒಳಗಿನಟೊಳ್ಳಲ್ಲ. ಒಳಗೂ ಹೊರಗೂ ಎಲ್ಲಾಗಟ್ಟಿ ಗಟ್ಟಿ ಇರುವಂಥದ್ದೇ! ಬೇಕಾಗಿದೆ ಅಲ್ಲಿ! ತಿಳಿಯಿತೇ?—ನೀನು ಈಗ ಹೇಳಿದ ಮಾತು—"ನಿಮಗೇನು ದಾಡಿ—ನೀವು ರಾಜರು" ಎಂಬದು ನಮ್ಮಲ್ಲಿ ಆರ್ಥಿಕ ವ್ಯವಹಾರದ ತಿಳಿಯಿಲ್ಲವೆಂದು ಗೊತ್ತಿದ್ದ ವೇಶ್ಯೆಯರು—ವ್ಯಾಪಾರಿಗಳು, ಜುಗಾರಿಕೋರರು, ಎಷ್ಟೋ ಬಗೆಯ ಪರೋಪಜೀವಿಗಳು ನಮ್ಮನ್ನು ಸುಲಿಯುವಾಗ ನಮಗೆ ನೋವು ಗೊತ್ತಾಗದಂತೆ ಮೊದಲಾಗಿ ನಮ್ಮ ಮೂಗಿಗೆ ಹಿಡಿಯುವ

ರೂ. 1—8—0ಕ್ಕೆ 3 ವಾಚುಗಳು ಮತ್ತು 495 ಮನೋಹರ ವಸ್ತುಗಳು.



ನಮ್ಮ ರೂ 1—8—0 ಕ್ರಯದ 16 ಸಣ್ಣ ಸೀಸ "ಒಟೋರೋಸ"ನ್ನು ಕೊಂಡು ಕೊಳ್ಳುವವರಿಗೆ ಒಂದು ಬಂಗಾರದ ಡಮ್ಮಿ ರಿಸ್ಟ್‌ವಾಚು, ಒಂದು ಪೌಡರ್ ಪೇಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿ ಕಡ್ಡಿಯ ಕೇಸು, ಒಂದು ಸಿಗರೇಟುಲೈಟು, ಒಂದುಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ್ ಸ್ಕ್ರೂ, 555 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರೆಂಟಿಯಿರುವ ಭವ್ಯ ಮೆಶಿನರಿಯುಳ್ಳ ಗಡಿಯಾರ, ಒಂದು ಫೌಂಟೆನ್ ಪೇನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ ಮತ್ತು ಟಪ್ಪಾಲು ಖರ್ಚು 14ಆಣೆ ಹೆಚ್ಚಿಗೆ.

Oriental Fancy Stores, S. C. E. 90.

Post Box. No. 1220-I, **CALCUTTA.**

TRANSPORT & CAR OWNERS

ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES

MANGALORE.

ಕ್ಲೋರೋಫಾರ್ಮ್ (chloroform), ಮಾತು. ಆದುದರಿಂದ ನಾವು ಪರಸ್ಪರ ಹಿತಚಿಂತಕರಾಗಿ ಶ್ರೇಯೋಕಾಂಕ್ಷಿಗಳಾಗಿ ದ್ದವರು ಅಂತಹ ಮಾತುಗಳನ್ನು ಎಂದೂ ಉಪಯೋಗಿಸಿಕೊಳ್ಳಬಾರದು. ಇದರಿಂದ ಅನರ್ಥ ಪರಿಣಾಮವಾಗುತ್ತೆ. ನೋಡು, ಸ್ವಲ್ಪ ಸಮಯದ ಹಿಂದೆ ನಮ್ಮೂರಿನಲ್ಲಿ ವೀರಪ್ಪ ಶೆಟ್ರು ಎಂಬವರೊಬ್ಬರಿದ್ದರು- ಅವರ ಹೆಂಡತಿ ಭಾಗಿ ಶೆಡ್ತಿಯೆಂತ. ಪಾಪಾ, ಅವರಿಗೆ ಆರುಸಾವಿರ ಮಂಡಿ ಶಕ್ತಿ ಹುಟ್ಟುವಳ್ಳಿ! ಅವರ ಹೆಂಡ್ತೀದು ಕಾಣಿ ಮರ್ಜಿ! ಪ್ರಾಯದ ಬೆಡಗಿನಲ್ಲಿ ದ್ದಾಗ ಅವಳ ಊಳಿಗಕ್ಕೆ ಆರೇಳು ಜನ ಹೆಂಗಸರು. ಮನೆಗೆಲಸಕ್ಕೆಲ್ಲ ಎಷ್ಟು ಗಂಡು ಗಳೆಂಬುದರ ಲೆಕ್ಕವಿದ್ದಿಲ್ಲಾ! ಮುಖಸ್ತುತಿ ಪ್ರಿಯರಾಗಿದ್ದ ಆ ಶೆಟ್ರಿಗೆ ಕಪಟಿ ಗೆಳೆಯರು ಗಂಟುಬಿದ್ದರು. ಶೆಟ್ರನ್ನು ಎಬ್ಬಿಸಿದರು "ನಿಮಗೇನು ಹೇಳಿ", ಎಂಬ ಒಂದೇ ಪದ ಎಲ್ಲರೂ ಹಾಡಿದರು ಶೆಟ್ರು ಕುತ್ತಿಗೆ ವರೆಗೆ ಮುಳುಗುವ ವರೆಗೂ ಹಾಡಿದ್ದೇ 'ನಿಮಗೇನು ದಾಡಿ!" ಅಂತ, ಕಣ್ಣು ಮುಟ್ಟ ನೀರುಬಂದಾಗ ಮಾತ್ರ ಈ ಹಾ ... ಬಟ್ಟರಲ್ಲಿ ಒಬ್ಬರೂ ಅಲ್ಲಲ್ಲ!-ನೀನು ಆರುಗೀರು ಅನ್ನುತ್ತೀಯಲ್ಲ! ಕಾರು ಇಟ್ಟರೆ ಮನೆಗೆ ಭಾರ, ದುಡ್ಡಿಗೆ ಸಂಚಕಾರ, ನಮ್ಮ ಜೀವನ ನಿಸ್ಸಾರ, ಆಡೆಗೆ ಶೆಟ್ರು ಕಾರಿ ಇಟ್ಟ ಹಾಗೆ" ಎಂತ ಎಲ್ಲರಿಗೂ ಸಸಾರ. ಅವರು ಹಾಗಾಗಿ ಸತ್ತರು, ಅವರ ಹೆಂಡ್ತಿ ಭಾಗಿ ಈಗ ಹಕ್ಷಭಾಗಿ! ಅವಳು ಮುಂಬೆ ನಮ್ಮ ಮನೆಗೆ ಬರುತ್ತಿದ್ದ ದೇವಿಯೇನು! ಈಗ ಹಿಂದುಗಡೆಯಿಂದಲೇ ಬಂದು ಹಿಂದುಗಡೆಯಿಂದಲೇ ಸರಿಯುತ್ತಾಳೆ. ಆದುದರಿಂದ ನಾವು ಬೇರೆಯವರ ಆರ್ಥಿಕ ಪರಿಸ್ಥಿತಿ ಗೊತ್ತಿಲ್ಲದೆ ಸುಮ್ಮ ಸುಮ್ಮನೆ ಉಪಚಾರದ ಮಾತೆಂದು, ಬಹುಮಾನ ತೋರಿಸುವುದೆಂದು, "ನಿಮಗೇನು ಹೇಳಿ!- ತಾಪತ್ರಯ ಇಲ್ಲದವರು," ಎಂಬ ಮಿಥ್ಯ ಸ್ತುತಿಯಿಂದ ಅವರ ಕಾಲಡಿಯ ನೆಲ ಕತ್ತರಿಸಿಬಿಡುತ್ತೇವೆ. ಹಾಗೆಯೇ ಎಷ್ಟೋ ಸಣ್ಣ ಮಕ್ಕಳು ತೊಟ್ಟಿಲಲ್ಲಿರುವಾಗಲೇ, "ಈ ಮಗುವಿಗೆ ಏನು ಕಡಿಮೆ!" ಎಂಬ ರಾಗದ ಜೋಗುಳ ಕೇಳಿ ನಂಬಿ ಬೆಳೆದು ಹಾಳಾಗಿ ಹೋದುದರ ಲೆಕ್ಕ ಸಂಖ್ಯೆ ಉಂಟೇ? ನಿಮ್ಮಂತಹ ಹಿರಿಯದ ಕುರುಪಿನವರಿಗೂ ಈ ರಾಗ ಕೇಳಿದರೆ ರಾಗಕ್ಕೆ ತಕ್ಕ ಕುಣಿಯೋಣವೆಂತ ತೋರುತ್ತೆ. ಕುಣಿಕುಣಿದು ಕೊನೆಗೆ ಬಿದ್ದು ಮಲಗುವ ಎಸುಡು ಒಡಕೊಂಡ ಮೇಲೆ ಬುದ್ಧಿ ಬರುತ್ತೆ. ನೀವು ಇಂಗ್ಲಿಷ' ಕಲಿತವರಲ್ಲಿ ಕೇಳಿ ಕೇಳಿದಕ್ಕೆ (Nonsense) ಎಂತೀರಲ್ಲಾ ಆ ಮಾತನ್ನು ಈ ರಾಗಕೇಳು ವಾಗಲೆಲ್ಲ ಮೂರು ಮೂರಾವರ್ತಿ ಹೇಳಿದರೆ ಮಹಾಪುಣ್ಯವುಂಟು, ಭಾವ! ಆದುದರಿಂದ ಭಾವ, ನಿನ್ನ ಒಳ್ಳೆಯದಕ್ಕಾಗಿ, ನನ್ನ ಕ್ಷೇಮಕ್ಕಾಗಿ, ಸಮಾಜದ ಮೇಲ್ಮೆಗಾಗಿ, ದೃಢ ಪ್ರತಿಜ್ಞೆಮಾಡು, ಬದ್ಧ ಕಂಕಣನಾಗು-ಇನ್ನು ಮುಂದೆ ಯಾರಿಗೂ, "ನಿಮಗೇನು ಹೇಳಿ-"(ಇರೆಗ್ ದಾನೆ ಪಣ್ಪೆಗೆ! ತಾಪತ್ರಯದಾಂತಿನಾರ್!) ಎಂಬ ವಿಷದ ಮಾತ್ರೆಯನ್ನು ಕೊಡುವುದಿಲ್ಲಾ-ಎಂದು. ಹಾಗೆ ಹೇಳುವವರು ಸಮಾಜದ ಶತ್ರುಗಳೆಂದು ನಿರ್ಭಯವಾಗಿ ಹೇಳಿ ಬಾಯಿಮುಚ್ಚಿಸು. ಇದೊಂದು ದೊಡ್ಡ ಸಮಾಜಸೇವೆಯೆಂದು ತಿಳಿ. ಇದು **ಈ ವರ್ಷದ ಶುಭ ಸಂದೇಶವಾಗಲಿ!**

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ.

ಕಾರ್ಯಕಾರಿ ಮಂಡಳದ ಸಭೆ—

ತಾ 18-12-38ರಲ್ಲಿ ಶ್ರೀ ಗಂಗಾಧರ ರಾವ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಬೆಳಗಾಂವದಲ್ಲಿ ಜರಗಿತು. ಇದರಲ್ಲಿ ಪಾಸಾದ 14 ನಿರ್ಣಯಗಳಲ್ಲಿ ನಮ್ಮ ಜಿಲ್ಲೆಗೆ ಸಂಬಂಧಿಸಿದವುಗಳನ್ನು ಈ ಕೆಳಗೆ ಕೊಡಲಾಗಿದೆ.

ಮಂಗಳೂರು ಪ್ರಾಥಮಿಕ ಸದಸ್ಯತ್ವದ ತಕರಾರು:— ಪ್ರಾ. ಕ. ಕ. ಯ ಸರ್ಕ್ಯುಲರ್, ಮತ್ತು ತಂತಿಯ ಮೇರೆಗೆ ಮಂಗಳೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯು, ತಾರೀಕು ... ಆಥವಾ ... ಸದಸ್ಯರ ಯಾದಿಯನ್ನು ತಿರಸ್ಕರಿಸಿದ್ದು ಅಯೋಗ್ಯವಾಗಿದ್ದರೂ ಈಗ ಪ್ರಾ. ಕಾ. ಕ. ಯ ಕಚೇರಿಯಲ್ಲಿ ನೇರವಾಗಿ ಮಂಗಳೂರಿನ ... ಸದಸ್ಯರ ಪೂರ್ಣ ಹಣ ಮತ್ತು ಉಡುಪಿ ಕಾರ್ಕಳ ತಾಲೂಕುಗಳ ... ಸದಸ್ಯರ ... ಹಣ ಜಮೆಯಾಗಿರುವುದರಿಂದ ಈ ಸದಸ್ಯರ ಸಂಖ್ಯೆಯನ್ನು ಜಿಲ್ಲಾ ಸಂಖ್ಯೆಯಲ್ಲಿ ಕೂಡಿಸಬೇಕೆಂದು ಈ ಸಭೆಯು ನಿಶ್ಚಯಿಸುತ್ತದೆ. ಆದರೆ ಉಡುಪಿ ಮತ್ತು ಕಾರ್ಕಳದ ಸದಸ್ಯತ್ವದ ಬಾಕಿ ಉಳಿದ ಮೊಬಲಗಿನ ಹಣದಲ್ಲಿ ಒಂದುಆಣೆ ಹಣವನ್ನು ಜಿ. ಕಾ. ಕ. ಗೆ ತಾ. ... ಒಳಗಾಗಿ ಜಮೆಯಾಗದಿದ್ದರೆ ಈ ಮೇಲಿನ ನಿಯಮವು ಆ ಸಂಖ್ಯೆಗಳಿಗೆ ಅನ್ವಯಿಸಲಾಗದು.

ಮಂಗಳೂರು ಜಿಲ್ಲಾ ಕಮಿಟಿಯ ವಿಶೇಷ ಸಭೆಗೆ ಬೇಡಿಕೆ:— ಮಂಗಳೂರು ಜಿ. ಕಾ. ಕ. ವಿಶೇಷ ಸಭೆಗೆ ಬೇಡಿಕೆ ಬಂದಿದ್ದರೂ, ಅದಕ್ಕನುಸಾರವಾಗಿ ಜಿಲ್ಲಾ ಅಧ್ಯಕ್ಷರು ವಿಶೇಷ ಸಭೆಯನ್ನು ಕರೆಯದೇ ಇದ್ದದು ನ್ಯಾಯಬದ್ಧವಲ್ಲೆಂದು ಈ ಸಭೆಯು ಒಪ್ಪುತ್ತದೆ. ಸಭೆಯಲ್ಲಿ ಈ ಸಂಬಂಧ ಚರ್ಚೆನಡೆದಾಗ ಮಂಗಳೂರು ಜಿ. ಕಾ. ಕ. ಅಧ್ಯಕ್ಷರಿಂದ ತಾವೇ ಸ್ವಪ್ರೇರಣೆಯಿಂದ ತೀವ್ರದಲ್ಲಿಯೇ ಸಭೆಕರೆಯುವರೆಂಬ ಭಾವವು ವ್ಯಕ್ತವಾಯಿತು. ಈ ವಿಷಯದಲ್ಲಿ ಮುಂದೆ ಮಾಡತಕ್ಕದ್ದನ್ನು ತಮಗೆ ಯೋಗ್ಯಕಂಡಂತೆ ತೀರ್ಮಾನಿಸಲು ಈ ಸಭೆಯು ಈ ವಿಷಯವನ್ನು ಪ್ರಾಂತಿಕ ಅಧ್ಯಕ್ಷರ ಕಡೆಗೆ ಒಪ್ಪಿಸುತ್ತದೆ.

ಕೆ. ಕೆ. ಶೆಟ್ಟರ ವರ್ತನೆ:— ಕೆ. ಕೆ. ಶೆಟ್ಟರು ಮಂಗಳೂರು ಡಿ. ಎಲ್. ಬಿ. ಎಮ್ಯುಕೇಶನ್ ಕಮಿಟಿಗೆ ಕಾಂಗ್ರೆಸ ಉಮೇದುವಾರನ ವಿರುದ್ಧ ಹುರಿಯಾಗಿ ನಿಂತುದು ಹಾಗೂ ತದನಂತರ ವೃತ್ತಪತ್ರಗಳಲ್ಲಿ ಈ ಸಂಬಂಧ ನಡೆಸಿದ ವಾದವಿವಾದ ಈ ಸಭೆಗೆ ಅಷ್ಟೊಂದು ಸೂಕ್ಷ್ಮವಾಗಿ ಕಾಣುವದಿಲ್ಲ. ಮತ್ತು ಅವರು ಅವಿಚಾರದಿಂದ ವರ್ತಿಸಿರುವರೆಂದು ಕಂಡುಬರುತ್ತದೆ. ಆದರೆ ಈಗಾಗಲೇ ಜಿ. ಕಾ. ಕ. ಯವರು ಈ ಕಾರಣದ ಮೇಲೆ ಅವರನ್ನು ಪ್ರಧಾನ ಕಾರ್ಯದರ್ಶಿಗಳ (ಜಿ. ಕಾ. ಕ.) ಸ್ಥಾನದಿಂದ ಚ್ಯುತಪಡಿಸಿರುವದು ಸಾಕಷ್ಟು ದಂಡವಾಗಿರುವದೆಂದೂ ಇದಕ್ಕೂ ಹೆಚ್ಚಿನ ಕ್ರಮದ ಆವಶ್ಯಕತೆ ಇಲ್ಲವೆಂದೂ ಈ ಸಭೆಯು ಅಭಿಪ್ರಾಯಪಡುತ್ತದೆ. ಮತ್ತು ಇನ್ನು ಮುಂದೆ ಕೆ. ಕೆ. ಶೆಟ್ಟಿಯವರು ಕಾಂಗ್ರೆಸಿನ ಗೌರವಕ್ಕೆ ಧಕ್ಕೆಬಾರದಂತೆ ವರ್ತಿಸುವರೆಂದು ಈ ಸಭೆಯು ಆಶಿಸುತ್ತದೆ.

ಗುದ್ಲೆಪ್ಪ ಹಳ್ಳಿಕೇರಿ, ಕಾರ್ಯದರ್ಶಿ.

MATIRIMONAL

Wanted a beautiful Educated Muslim girl aged not more than 18 years, to marry a cultured Muslim youth of 26, well settled in life

Apply with Photo

'X'

C/o Navayuga, Udipi

ಬರುವ ಲೇಖನ:—

"ಎಲ್ಲಿಂದ ಎಲ್ಲಿಗೆ!" 'ಮಕರ ಸಂಕ್ರಾಂತಿಯ ವಿಶೇಷ ಸಂಚಿಕೆ'ಯಲ್ಲಿ ನೋಡಿರಿ.

ಆ ಮೇಲಿನ ಲೇಖನ:—

26-1-39ನೇ ಸಂಚಿಕೆಯಲ್ಲಿ 'ವಿಮರ್ಶೆ'

ನಿಮಗೆ ಇಚ್ಛೆ ಇರುವುದಾದರೆ

ನಿಮ್ಮಲ್ಲಿ ಯಾ ನಿಮ್ಮ ಕುಟುಂಬದಲ್ಲಿ ಗರ್ಭಿಣಿಯರಿದ್ದರೆ ಸುಖವಾಗಿ ಹೆರಿಗೆ (ಪ್ರಸವ) ಯಾಗಬೇಕೆಂದು ನಿಮಗಿಚ್ಛೆ ಇದ್ದರೆ, ಈ ದಿನದಿಂದಲೇ ತಕ್ಕ ಉಪಾಯ ಮಾಡಿರಿ. ಹೆರಿಗೆಯ ವೇದನೆ ಪ್ರಾರಂಭವಾದೊಡನೆ ನಮ್ಮ **ಪ್ರಸೂತಿ ಕಲ್ಯಾಣವಟಿ**ಗಳನ್ನು ಸೇವಿಸಿದರೆ ಸುಖಪ್ರಸವ (ಹೆರಿಗೆ) ವಾಗುವುದರಲ್ಲ ಸಂದೇಹವಿಲ್ಲವೆಂಬುದಾಗಿ ಆಧುನಿಕ ವೈದ್ಯರ ಅನುಭವದ ಮಾತಾಗಿದೆ ಹಾಗೂ ಗರ್ಭಿಣಿಯರಿಗೆ ನಮ್ಮ **ಪ್ರಸೂತಿ ಕಲ್ಯಾಣವಟಿಗಳು** ಅಮೃತಸಮಾನವಾಗಿವೆ. ಪ್ರತಿಸಲಕ್ಕೆ ಒಂದೆರಡು ವಟಿಕೆಗಳನ್ನು ಒಂದೆರಡುಸಾರಿ ಸೇವಿಸಿದೊಡನೆಯೇ ಸುಖವಾದ (ಹೆರಿಗೆ) ಪ್ರಸವವಾಗುವುದರಲ್ಲಿ ಅನುಮಾನವಿಲ್ಲ ಹೆತ್ತ ತರುವಾಯ ಒಂದೆರಡು ವಟಿಕೆಗಳ ಸೇವನೆಯಿಂದ ಒಳಗೆ ಸಂಚಿತವಾದ ರಕ್ತಲಸೀಕಾ (Placenta) ಕಸವ ಶೇಷಸಹಾ ಹೊರಗೆತಳ್ಳಿ ಗರ್ಭಾಶಯಕ್ಕೆ ಬಲಕೊಡುವುದಲ್ಲದೆ ನಂಜುವಿರೋಣವೆಂಬ **ಸೂತಿಕಾ** ರೋಗ ಇತ್ಯಾದಿ ಬಾರದಂತೆ ತಡೆಗಟ್ಟುವದು. ವಿಶೇಷ ಗುಣ ಧರ್ಮ ಮತ್ತು ಅನುಪಾನ ವಟಿಕೆಗಳೊಂದಿಗೆ ಕಳುಹಿಸಲ್ಪಡುತ್ತದೆ ಅತೀ ಬಡವರೂ ಸಹ ಉಪಯೋಗಿಸುವಂತೆ ಡಜನು 1ಕ್ಕೆ 0-12-0. ಏಳಾಣೆ ಸ್ಟಾಂಪು ಕಳುಹಿಸಿದ್ದಲ್ಲ 6ವಟಿಕೆಗಳನ್ನು ಕಳುಹಿಸುತ್ತದೆ

ಪ್ರಸವದ ಮುಂದೇನು?

13ದಿನಗಳ ತನಕ ನಮ್ಮ **ಬಾಣಂತಿ ಕ್ವಾಥ**ವನ್ನು ಉಪಯೋಗಿಸಿ ಉತ್ತಮವಾದ ಗುಣಗಳ ಲಾಭವನ್ನು ಪಡೆಯಿರಿ. ಇದರ ಸೇವನೆಯಿಂದ, ಜ್ವರ, ಉದರ ಶೂಲೆ, ತಲೆನೋವು, ನಿದ್ರಾಭಂಗ, ನಡುಕು, ನಂಜುವಿರೋಣ ಇತ್ಯಾದಿ ಬಾಣಂತಿಯ ಸರ್ವರೋಗಗಳೂ ಗುಣವಾಗುತ್ತದೆ. ಹಾಗೂ **ಈ ತರದ** ದುಷ್ಪರಿಣಾಮಗಳು ಬಾರದಂತೆ ತಡೆಗಟ್ಟುವದಲ್ಲದೆ ಬಾಣಂತಿಯು **ಕಳಕೊಂಡ** ಶಕ್ತಿಯನ್ನು ತುಂಬಿ ದಷ್ಟಪುಷ್ಟಳಾಗಿ ಶಿಶುವಿಗೆ ಯಥೇಷ್ಟ ಶುದ್ಧಹಾಲು ಸಹಾ ಸಿಗುವಂತೆ ಮಾಡುತ್ತದೆ. ಕ್ರಯ ಬಾಟ್ಲಿ 1ರ 1-0-0. ಇದರೊಂದಿಗೆ ಪ್ರಸೂತಿ ಕಲ್ಯಾಣವಟಿ 6ವಟಿಗಳನ್ನು ಉಚಿತವಾಗಿ ಕಳುಹಿಸುವೆವು. ವಿ. ಪಿ. ಚಾರ್ಜು ಪ್ರತ್ಯೇಕ.

ಆಮಲಕೀ ತೈಲ

(ಪುಷ್ಪಗಂಧಾಮೋದಿತ ಬಹುಗುಣಯುಕ್ತ)

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ, ಪ್ರೌಢಸ್ತ್ರೀ-ಪುರುಷರಿಗೂ ನಿತ್ಯ ಕೇಶಪ್ರಸಾದನಾರ್ಥ ಉತ್ತಮವಾದ ಚಿತ್ತಾಕರ್ಷಕತೈಲ.

4ಔನ್ಸಿನ ಸೀಸೆ ೧ರ 0-11-0
2ಔನ್ಸಿನ ಸೀಸೆ ೧ರ 0-6-0

ಧನ್ವಂತರಿ ಗುಟಿಕಾ

ಕಸ್ತೂರಿಯುಕ್ತ **ವಾಯುಮಾತ್ರೆ**

ಆಬಾಲವೃದ್ಧ ಸ್ತ್ರೀ-ಪುರುಷರಿಗೆ ಅಕಸ್ಮಾತ್ತಾಗಿ ಬರುವ ರೋಗಗಳಲ್ಲಿ ತಕ್ಷಣ ಒಂದೆರಡು ಮಾತ್ರೆಗಳನ್ನು ಸೇವಿಸಿದ್ದಲ್ಲಿ ದೋಷಗಳು ನಿವೃತ್ತಿಯಾಗುವ ಸಂಗ್ರಾಹ್ಯ ಔಷಧಿಯಾಗಿದೆ, ಹಾಗೂ ಗರ್ಭಿಣಿಯರ ರೋಗಗಳಲ್ಲಿ ಅತ್ಯುತ್ತಮವಾಗಿದೆ. ಕ್ರಯ 100 ಮಾತ್ರೆಗಳಿಗೆ 1-6-0, 600ಕ್ಕೆ 6-0-0. ಐದಾಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆಗಳನ್ನು ಕಳುಹಿಸುತ್ತದೆ;

ನಮ್ಮ ಔಷಧಿಗಳು ಈ ಕೆಳಗಿನವರಲ್ಲಿ ಸಿಗುತ್ತವೆ:—

ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ, ಎಮ್. ಮಂಜುನಾಥಯ್ಯ. ಕಲ್ಯಾಣಪುರ ಪೋಸ್ಟ್, ದ. ಕ.

ಯಾವತ್ತೂ ಔಷಧಗಳಿಗೂ ಏಜನ್ಸಿ ಶರ್ತಗಳಿಗೂ ಬರೆಯಿರಿ—

ಸ್ವದೇಶೀ ಔಷಧೀ ಭಂಡಾರ.

ಕುಂಜಾಲು, ದ. ಭಾರತ, ಬ್ರಹ್ಮಾವರ ಪೋಸ್ಟ್.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ**, 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ ಬೋರ್ಡು, ಪೇಪರುಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುವದು.

CROWN RUBBER STAMP CO,
Balmat Road, MANGALORE.

Included by the Mysore Govt Stores Purchase Committee in the list of approved Firms.

ಮಕರಸಂಕ್ರಾಂತಿ ವಿಶೇಷ ಸಂಚಿಕೆ ಬೆಲೆ ೪ ಆಣೆ

ಸಂಯುಕ್ತ ಪ್ರಾಂತ್ಯದ

ರಾಜಕೀಯ ಪರಿಷತ್ತು

ಕಾಂಗ್ರೆಸು ಟೀಕಾಕಾರರಿಗೆ ನೆಹರುಗಳ ಉತ್ತರ.

ಸಂಯುಕ್ತಪ್ರಾಂತ್ಯದ ಮೂವತ್ತೊಂದನೇ ರಾಜಕೀಯ ಪರಿಷತ್ತು ದಶಂಬರ ತಾ. 30ರಲ್ಲಿ ಆರಂಭವಾಯಿತು. ಸುಮಾರು 50,000 ಕಿಸಾನರು ಸಣ್ಣ ಸಣ್ಣ ಧ್ವಜಗಳನ್ನು ಧರಿಸಿ, ವೇದಿಕೆಯ ಸುತ್ತಲೂ ನೆರೆದಿದ್ದರು. ಯುನೈಟೆಡ್ ಪ್ರಾಂತ್ಯದ ನಾಲ್ವರು ಮಂತ್ರಿಗಳು ಅಸೆಂಬ್ಲಿ ಸ್ಪೀಕರರು ಮತ್ತು ಉಳಿದ ಹಲವು ಮುಖಂಡರು ನೆರೆದಿದ್ದರು ಪಂಡಿತ ಜವಾಹರಲಾಲ ನೆಹರುಗಳು ಅಂದಿನ ಅಧ್ಯಕ್ಷರು. ಪಂಡಿತ ನೆಹರುಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ಜಗತ್ತಿನ ಪರಿಸ್ಥಿತಿಯ ಕಡೆಗೆ ಹಿಂದೂದೇಶವು ದೃಷ್ಟಿಯಿಡಬೇಕೆಂದರು ನಮಗೀಗ ಕೃಷಿಕರ ಪ್ರಶ್ನೆಯು ಹೆಚ್ಚು ಮಹತ್ವದ್ದಿದೆ. ಮಾತ್ರವಲ್ಲ, ಅಪ್ರತ್ಯಕ್ಷವಾಗಿ ಜಗತ್ತಿನ ಪ್ರಶ್ನೆಯೂ ಅನ್ವಯಿಸುವುದು ಎಂದರು. ಅನಂತರ ಅವರು ಇಂದೀಗ ಸ್ಪೈಯಿನು, ಪೆಲಸ್ಟೈನು ಮತ್ತು ಚೈನಾ ಮೊದಲಾದ ದೇಶಗಳಲ್ಲಿ ನಡೆಯುವ ಗಲಭೆಯ ಕುರಿತು ಸುದೀರ್ಘವಾಗಿ ವಿವರಿಸಿ, ಈ ದೇಶಗಳಲ್ಲಿ ಸಾಮ್ರಾಜ್ಯ ಶಾಹಿತ್ವದ ವಿರುದ್ಧ ನಡೆಯುವ ಹೋರಾಟದ ಪರಿಣಾಮವೇನಾಗುವುದೆಂಬುದನ್ನು ನೋಡಲಿಕ್ಕಿದೆಯೆಂದರು

“ಮುಸ್ಲಿಮ್ ಲೀಗಿನವರು ಕಾಂಗ್ರೆಸಿನ ಮೇಲೆ ಹೊರಿಸುವ ದೂರು ಆಧಾರ ರಹಿತವಾದುದು ಮತ್ತು ಅರ್ಥ ರಹಿತವಾದುದು. ಹಿಂದೂದೇಶವು ಸ್ವಾತಂತ್ರ್ಯ ಹೋರಾಟದ ಪ್ರಶ್ನೆಯಲ್ಲಿರುವಾಗ ಇಂಥಾ ವಿಷಯಗಳನ್ನು ಮುಂದೆ ತರುವುದು ಬಹು ನಾಚಿಕೆ. ಮುಸ್ಲೀಮ್ ಲೀಗಿನವರು ಮತ್ತು ಹಿಂದೂ ಮಹಾಸಭೆಯವರು ಹಿಂದೂಸ್ಥಾನವನ್ನು ಹಿಂದು-ಮುಸಲ್ಮಾನರ ವರ್ಗವಾಗಿ ವಿಭಾಗಿಸುವ ಪ್ರಯತ್ನ ನಡೆಸುವರು. ಬಹು ಸಂಖ್ಯಾಕರಾದವರು ಅಲ್ಪ ಸಂಖ್ಯಾಕರ ಕುರಿತು ಉದಾರತೆಯಿಂದ ನಡೆವುದು ಕರ್ತವ್ಯ. ಮಂತ್ರಿಗಳಾದರೂ ಈ ರೀತಿಯ ವರ್ತನೆಯುಳ್ಳವರೆಂದು ನನಗೆ ದೃಢ ವಿಶ್ವಾಸವಿದೆ. ಕಾಂಗ್ರೆಸು ಯಾವಾಗಲೂ ಮುಸ್ಲಿಮ್ ಲೀಗಿನೊಂದಿಗೆ ಅವರ ಸಂಕಷ್ಟದ ಕುರಿತು ವಿಚಾರಿಸಲು ಸಿದ್ಧವಾಗಿಯೇ ಇದೆ. ತ್ರಿವರ್ಣಧ್ವಜದ ಕುರಿತಾದ ಟೀಕೆಯು ವಿಷಾದಕರ. ಹಿಂದೂದೇಶವು ಮಹತ್ವಾದ ವಿಷಯದಲ್ಲಿ ಹೋರಾಟ ನಡೆಸುತ್ತಿರುವಾಗ ಇಂಥಾ ಸಣ್ಣ ಸಣ್ಣ ಜಗಳಕ್ಕೆ ಆಸ್ಪದ ಕೊಡುವುದು ನ್ಯಾಯವಲ್ಲ ಈ ತ್ರಿವರ್ಣಧ್ವಜವು ಹಲವು ವರ್ಷಗಳಿಂದ ಜಾತಿ, ಮತ, ಭೇದವಿಲ್ಲದೆ ಎಲ್ಲರ ಪ್ರಾತಿನಿಧ್ಯವುಳ್ಳದಾಗಿರುತ್ತದೆ. ಹಲವರು ಇದರ ರಕ್ಷಣೆಗಾಗಿ ಬಹಳ ತ್ಯಾಗ ಮಾಡಿರುವರು ಎಂದರು.

ಕಿಸಾನ ಚಳವಳದ ಕುರಿತಾಗಿ ಅವರು ಹೀಗೆಂದರು. ಕಿಸಾನರು ತಮ್ಮ ಕಾರ್ಯಕ್ರಮವನ್ನು ಕಾಂಗ್ರೆಸಿನ ರೂಪರೇಷೆಯೊಳಗಡೆ ಅನ್ವಯಿಸತಕ್ಕದ್ದು. ಆರ್ಥಿಕ ಸಮಸ್ಯೆ ಮತ್ತು ರಾಜಕೀಯ ವಿಚಾರಶಕ್ತಿಯು ಭಿನ್ನವಿರಬಹುದು. ಆದರೆ, ಹಿಂದೂಸ್ಥಾನದ ಮುಕ್ತಿಗೆ ಸ್ವರಾಜ್ಯ ಸಂಪಾದನೆಯ ಉದ್ದೇಶಕ್ಕಾಗಿ ಎಲ್ಲರೂ ಕಾಂಗ್ರೆಸನ್ನು ಸೇರಬೇಕು. ಈ ಸಂದರ್ಭದಲ್ಲಿ ಕಿಸಾನರು ಕೆಲವು ಧ್ವಜವನ್ನು ಉಪಯೋಗಿಸುವುದು ಆಗತ್ಯವಿಲ್ಲ. ಇದರಿಂದ ಅನಾವಶ್ಯಕ ಗಲಭೆ. ಒಂದೂವರೆ ವರ್ಷದಾಟುತ್ತಾ ಬಂದರೂ ಒಕ್ಕಲಿಗರ ಮಸೂದೆಯನ್ನು ಕಾಂಗ್ರೆಸು ಸರಕಾರವು ಮಂಜೂರುಮಾಡಿಲ್ಲವೆಂಬುದು ವಿಷಾದಕರ. ಒಂದು ವೇಳೆ ಅಪ್ಪರ್ ಛ್ಯಾಂಬರಿನಲ್ಲಿ ಈ ಬಿಲ್ಲಿಗೆ ವಿರುದ್ಧ ದೊರೆತೀತು. ಈ ಸಂದರ್ಭದಲ್ಲಿ ಕಿಸಾನರು ಇದನ್ನು ಪ್ರತಿಭಟಿಸಬೇಕು. ಈ ಮಸೂದೆಯಿಂದ ಜಮೀನ್ದಾರನಿಗೆ ತೊಂದರೆಯಿದೆಯೆಂಬ ಆಪಾದನೆಯನ್ನು ನಾನು ಸ್ವೀಕರಿಸಲಾರೆನು.” ಎಂದರು. ಕೊನೆಯದಾಗಿ ಕಾಂಗ್ರೆಸಿನ ಸದಸ್ಯರ ದಾಖಲಾತಿಯ ಕುರಿತು ಪಂಡಿತ ನೆಹರುಗಳು ಹೀಗೆಂದರು. ಓಟಿನ ಸಮಯದಲ್ಲಿ ಮೆಂಬರರನ್ನು ಸೇರಿಸುವ ದುರುದ್ದೇಶವು ವ್ಯಸನಾಸ್ಪದವಾದುದು ಕಾಂಗ್ರೆಸು ಸಂಸ್ಥೆಯು ಶುದ್ಧಿಯಾಗಬೇಕಾಗಿದೆ. ಎಂದು ಮುಂತಾಗಿ ತಮ್ಮ ಉಜ್ವಲಭಾಷಣದಲ್ಲಿ ಹೇಳಿದರು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ

ಇವರಲ್ಲಿಗೆ ಬನ್ನಿರಿ.



ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಟಿ ಬರುತ್ತವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ

The Commonwelth Assu. Co. Ltd

ಕೋಮನ್ ವೆಲ್ತ್

ಎಸ್ಸೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.

ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:-

ಎಸ್. ಪಿ ಆರ್. ನಾಯಕ್	**ಗವಾನಕರ್ ಎಂಡ್ ಸನ್ಸ್**
ಎಂಡ್ ಸನ್ಸ್,	ಚೀಫ್ ಏಜಂಟ್ಸ್,
ಸ್ಪೆಶಲ್ ಏಜಂಟ್,	ಆನಂದರಾವ್ ಸರ್ಕಲ್
ಕಾರ್ ಸ್ಟ್ರೀಟ್ ಮಂಗಳೂರು	ಬೆಂಗಳೂರು

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳ ಸಹಿತ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳ ಮೋಹಿಸುವ ರಹಸ್ಯಗಳು, ಮಲಗುವ ಸಮಯ ವಿಲಾಸಗಳು ಸ್ತ್ರೀ-ಪುರುಷರ ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮಾತುಗಳು, ಮಲಗುವ ವಸ್ತ್ರ ಶೃಂಗಾರ ರಹಸ್ಯ ಫೋಟೋಗಳು ಅದರಲ್ಲಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸು ಬಾರದು.

ಫೋಟೋಗಳ ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು

T. V. Devkar & Co, *Nambulier Street*, G. T. MADRAS.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧	ದೊಡ್ಡ ವರಿಗೆ ೧ ಬ್ಯಾಕೇಟುಗಳ	ಬೆಲೆ: 0—1—0
೨	ಹೊಸ ಮಾದರಿ ,,	,, 0—1—3
೩	ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ	,, 0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ, ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅಮೃತ. ಬೆಲೆ 0-1-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-1-0

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸದಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ ಬೆಲೆ: 0-8-0 ಮತ್ತು ರೂ 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:—ಕುಂದಾಪುರ-ಕಾಮತ್ಸ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ-ಪಿ ಕೃಷ್ಣ ಕಾರಂತರು, ಆಯುರ್ವೇದೀಯ ಔಷಧಗಳ ಏಜೆಂಟರು, ಕಾರ್ಕಳ ವಿ. ಪಿ ಶೆಣೈ-ಕೆಮಿಸ್ಟ್, ಕಾಸರಗೋಡು ಫಿಶ್ಟ್ ಬ್ರದರ್ಸ್ ಮತ್ತು ಶ್ರೀರಾಮ ಸ್ಟೇಶನರಿ ಮಾರ್ಟ್, ಪುತ್ತೂರು-ಬಿ. ಪಾಂಡುರಂಗ ಗೋವಿಂದ ಭಂಡಾರಿ ಪುತ್ತೂರು ಡಿಸ್ಪೆನ್ಸರಿ, ಮೂಲ್ಕಿ-ಬಿ. ಎಸ್. ನಾರಾಯಣ ಶಾಸ್ತ್ರಿ ಸುಖೋದಯ, ಬಸರೂರು ಮರ್ಚೆಂಟ್ಸ್, ಮೂಡಬಿದ್ರೆ ನಂಜುಂಡ ಕೇಶರಿ ಪ್ರಭು ಬ್ರದರ್ಸ್, ಬಂಟ್ವಾಳ-ಪ್ರಭು ಅಂಡ್ ಕೋ. ಉಡುಪಿ-ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.

ಮೈಸೂರು ಸಮಾಚಾರ

(ನವಯುಗದ ಬಾತ್ಮೀದಾರರಿಂದ)

ಜ. ೧.

ಹೆಸರನ್ನಳಿಸಿರಿ— ರಾಜಧಾನಿಯ ದೊಡ್ಡ ಪೇಟೆಯಲ್ಲಿ ಹೊಸದಾಗಿ ಕಟ್ಟಿರುವ ಪೋಲೀಸ್ ಸ್ಟೇಶನ್ ಕಟ್ಟಡಕ್ಕೆ ಇಂದು ಮೈಸೂರು ಸಂಸ್ಥಾನದ ಐ. ಜಿ. ಪಿ. ಆಗಿರುವ ಮಿ|| ಹೆಮಿಲ್ಟನ್‌ರವರ ಹೆಸರನ್ನಿಡಲಾಗಿದೆಯೆಂದು ಹಿಂದೆಯೇ 'ನವಯುಗ'ದಲ್ಲಿ ವರದಿ ಬಂದಿದೆ. ಈಗ ರಾಜಧಾನಿಯ ಕೆಲವು ಪ್ರಮುಖರು, ಇದರ ಮೇಲೆ ಆಲೋಚನವನ್ನು ಸೂಚಿಸಿ, ಸರ್ಕಾರಿ ಕೆಲಸ ನಡೆಸುವ ಕಟ್ಟಡಕ್ಕೆ ಈ ಹೆಸರು ಸರಿಯಾದುದಲ್ಲವೆಂದೂ, ಅದನ್ನು (ಹೆಮಿಲ್ಟನ್ ಬಿಲ್ಡಿಂಗ್ಸ್ ಎನ್ನುವುದನ್ನು) ಅಳಿಸಿ ಬಿಡಬೇಕೆಂದೂ, ಶ್ರೀಘ್ರ ಕಾರ್ಯದರ್ಶಿಗಳಿಗೆ ಒಂದು ಪತ್ರ ಗುಜರಾಯಿಸಿದ್ದಾರೆ.

ಮುಂದೂಹಾಕಬಹುದು— ಏಪ್ರಿಲ್ ರಾಷ್ಟ್ರದಲ್ಲಿ ನಡೆಯುವ ಮೈಸೂರು ಕಾಂಗ್ರೆಸನ್ನು ವಿದ್ಯಾರ್ಥಿಗಳ ಸೌಖ್ಯಕ್ಕಾಗಿ,ಮುಂದಿನ ಏಪ್ರಿಲ್ ತಿಂಗಳಲ್ಲಿ ನಡೆಸಬಹುದೆಂದು ತಿಳಿದು ಬಂದಿದೆ.

ಮೈಸೂರು ರೆಸಿಡೆಂಟ್— ಇನ್ನು ಮುಂದೆ, ಇಂದು ಮದ್ರಾಸ್ ಸ್ಟೇಟ್ ರೆಸಿಡೆಂಟರ ಕೈಕೆಳಗಿರುವ ಸೊಂಡೂರು ಮತ್ತು ಬಂಗನಪಲ್ಲಿಯ ಆಡಳಿತದ ಅಧಿಕಾರವನ್ನು ಕೊಡುವರೆಂದು ಗೊತ್ತಾಗಿದೆ.

ಸೇವಾದಳ— ಉಮ್ಮಡಿ ಹಳ್ಳಿಯಲ್ಲಿ ಯುವಕರನ್ನು ತರಬೇತು ಮಾಡಲು, ಸೇವಾದಳವೊಂದು ಸ್ಥಾಪಿತವಾಗಿದೆ.

ವಿದ್ಯುತ್ ದೀಪ— ದಾವಣಗೆರೆಯಲ್ಲಿ, ಮೊನ್ನೆಯಿಂದ ವಿದ್ಯುತ್ ದೀಪವನ್ನು ಕೊಟ್ಟರು.

ಕಂಟ್ರಾಕ್ಟರ್‌ಗಳ ಸಂಘ— ಹೊಸಕೋಟೆಯಲ್ಲಿ, ಶ್ರೀ ಹೊಸಕೋಟೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದು, ಮೇಲ್ಕಂಡ ಸಂಘವೊಂದನ್ನು ಸ್ಥಾಪಿಸಿ, ಅವರ ಕುಂದು ಕೊರತೆಗಳನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಠರಾವಾಯಿತು.

ಮರಣ— ರಾ|| ಬ|| ಶ್ರೀ ನಾರಾಯಣ ರಾಯರು ಬೆಂಗಳೂರಿನಲ್ಲಿ ಮೃತರಾದರೆಂದು ತಿಳಿಸಲು ವ್ಯಸನವಾಗುತ್ತೆ. ಇವರು ದಿವಂಗತ, ದಿವಾನ್ ಪಿ. ಎನ್. ಮಾಧವರಾಯರ ಸೋದರಳಿಯಂದಿರು.

ಜೋಗ್ ಜಲಪಾತ— ಮೇಲ್ಕಂಡ ಜಲಪಾತದಲ್ಲಿ ನಡೆಯುವ ವಿದ್ಯುಚ್ಛಕ್ತಿ ಕಾರ್ಯಾಲಯದ ಭವನದ ಶಂಕು ಸ್ಥಾಪನೆಯನ್ನು ನಮ್ಮ ಮಹಾ ಪ್ರಭುಗಳಾದ, ಶ್ರೀಮಾನ್ ಮಹಾರಾಜರು ನೆರವೇರಿಸುತ್ತಾರೆಂದು ತಿಳಿದು ಬಂದಿದೆ.

ಅಸ್ತಿಭಾರ ಶಿಲೆ:— ಜೋಗ್ ಜಲಪಾತದಲ್ಲಿ ನಡೆಯುತ್ತಿರುವ ವಿದ್ಯುಚ್ಛಕ್ತಿ ಕಾರ್ಯಾಲಯಕ್ಕೆ ಉಪಯೋಗಿಸುವ ಅಸ್ತಿಭಾರ ಶಿಲೆಯನ್ನು ಚಾಮುಂಡಿ ಬೆಟ್ಟದಿಂದ ಸಾಗಿಸಿದರೆಂದು ಹಿಂದೆಯೇ ನವಯುಗದಲ್ಲಿ ತಿಳಿಸಲಾಗಿತ್ತಷ್ಟೆ. ಇದರ ವಿಶೇಷವಾಗಿ ಇನ್ನೂ ಹೆಚ್ಚು ವಿವರ ಬಂದಿದೆ. ಈ ಶಿಲೆಯನ್ನು ಒಂಭತ್ತು ಮಾದರಿಯಾಗಿ ಕತ್ತರಿಸುವರು. ಇದು ಪ್ರತಿಯೊಂದು ಮಾದರಿಯೂ ಪ್ರತಿ ಜಿಲ್ಲೆಯ ಪ್ರತಿನಿಧಿಯಾಗಿ ಸೂಚಿಸುತ್ತದೆ. ಇಂದು ಬೆಂಗಳೂರಿನ ಒಂದು ಕಾರ್ಖಾನೆಯಲ್ಲಿ ತಯಾರಾಗುತ್ತಿದೆ ಇದು ನಿಜವಾಗಿಯೂ ಮಾದರಿಯಾಗಿದೆಯಲ್ಲದೆ ನೋಡುವುದಕ್ಕೆ ಬಹಳ ಅಂದವಾಗಿದೆ.

ಆಗಮನ— ಬೊಂಬಾಯಿಯ ಪಬ್ಲಿಕ್ ಡಾಕ್ಟರಿಯ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ. ನೆಸ್ಲಿಯವರೂ ಏವೆನ್ನು ಮಂತ್ರಿಗಳ ಕಾರ್ಯದರ್ಶಿಗಳಾದ ಶ್ರೀ. ಯಸ್. ಪಿ. ಪಾಟಿಲ್‌ರವರೂ, ಕೆ. ಪಿ. ಸಿ. ಸಿ. ಯ ಕಾರ್ಯದರ್ಶಿಗಳಾದ ಶ್ರೀ. ಎಚ್. ಗುಡ್ಡಪ್ಪನವರೂ ಮೈಸೂರು ಸಂಸ್ಥಾನದ ಕೆಲವು ಭಾಗಗಳಲ್ಲಿ ಸಂಚಾರ ಮಾಡಲು ಬೆಂಗಳೂರಿಗೆ ಮೊನ್ನೆ ಆಗಮಿಸಿದರು.

ದಿವಾನ್ ಸಾಹೇಬ್— ದಿವಾನರಾದ ಸರ್ ಮಿರ್ಜಾರವರು ಈ ವಾರಾಂತ್ಯದಲ್ಲಿ ಹೊಸಕೋಟೆ, ದೇವನಹಳ್ಳಿ, ಕೆಂಗೇರಿ ಮುಂತಾದ ಪ್ರದೇಶಗಳಿಗೆ ಭೇಟಿ ಕೊಟ್ಟು ಅಲ್ಲಿಯ ಜನಗಳ ಅಹವಾಲನ್ನು ಕೇಳಿ, ಕೆಲವು ಕಟ್ಟಡ ಮುಂತಾದ ಇತರ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಎಸ್. ಐ. ರೈಲ್ವೆ:— ಚಾಮರಾಜ ನಗರದಿಂದ ಮೆಟ್ಟುಪಾಳ್ಯಂ ಮೇಲೆ ಸತ್ಯಮಂಗಲಕ್ಕೆ ರೈಲ್ವೆ ಲೈನನ್ನು ಬಿಡಾಯಿಸಿ ಮೈಸೂರು ರೈಲ್ವೆಯನ್ನು ಮೇಲ್ಕಂಡ ರೈಲ್ವೆಗೆ ಸೇರಿಸುತ್ತಾರೆಂದೂ, ಇದಕ್ಕೋಸ್ಕರ ಇಂಜಿನಿಯರಿಂಗ್ ಸರ್ವೆ ನಡೆಸುತ್ತಾರೆಂದೂ ತಿಳಿದುಬಂದಿದೆ.

ಕಾಂಗ್ರೆಸ್ ಸದಸ್ಯರುಗಳು:— ಮೈಸೂರು ಕಾಂಗ್ರೆಸ್‌ನ ಅನೇಕ ಸದಸ್ಯರುಗಳು ತಮ್ಮ ಕಾಂಗ್ರೆಸ್ ಕೆಲಸಕ್ಕೆ ರಾಜಿನಾಮೆ ಕೊಟ್ಟಿದ್ದಾರೆಂದೂ, ಇನ್ನು ಮುಂದೆ ಗ್ರಾಮೋದ್ಧಾರ ಕಾರ್ಯಗಳಲ್ಲಿ ತೊಡಗಲು ಅನುಕೂಲವಾಗಲು ಹೀಗೆ ಮಾಡಿದರೆಂದೂ ಹೇಳಲಾಗಿದೆ. ಇದರ ಮೇಲೆ ಓರ್ವ ಕಾಂಗ್ರೆಸ್ ಸದಸ್ಯರು, ದಿವಾನರನ್ನು ಭೇಟಿಮಾಡಿ, ಈ ವಿಷಯ ತಿಳಿಸಲು, ದಿವಾನರು ಇದನ್ನು ಮೆಚ್ಚಿ, ಈಗಿನ ಕಾಲಕ್ಕೆ ಇದೇ ಮುಖ್ಯವಾದದ್ದೆಂದೂ, ಅವರು ಅದನ್ನು ಸಹಾಯ ಮಾಡುವರೆಂದು ತಿಳಿಸಿದರೆಂದೂ ಗೊತ್ತಾಗಿದೆ.

ತ್ವರೆ ಮಾಡಿರಿ! ತ್ವರೆ ಮಾಡಿರಿ!

ಗ್ರಾಮಫೋನ್ ಸಿಂಗರ್

ಎಂಬ

ಕನ್ನಡ, ಹಿಂದಿ, ಮರಾಠಿ ಭಾಷೆಯ ಗ್ರಾಮಫೋನ್ ಹಾಡುಗಳ ಮತ್ತು ಸಿನೇಮ ಹಾಡುಗಳ ಸಂಗೀತ ಪುಸ್ತಕವು ಬೇಗನೇ ಪ್ರಕಟವಾಗಲಿದೆ.

- **ಆಧುನಿಕ ರುಚಿಗೊಪ್ಪುವ ಸಂಗೀತ ಪುಸ್ತಕವಿದು.**
- **ಪ್ರತಿಯೊಬ್ಬರೂ ಓದಿ ಆನಂದಿಸತಕ್ಕ ಪುಸ್ತಕವಿದು.**

ನಿಮ್ಮ ಆರ್ಡರುಗಳನ್ನು ಇಂದೇ ಕೊಡಿರಿ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಚಂಕ್ಕಿಂತ ಹೆಚ್ಚು ಪ್ರತಿ ತೆಗೆದುಕೊಳ್ಳುವವರ ವಿಳಾಸವನ್ನು ಪುಸ್ತಕದಲ್ಲಿ ಮುದ್ರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ—

THE KANARA BOOKS & NEWS AGENCY,

Batatawala Mansion Lalbag,

BOMBAY 12

ಸಂದೇಶ

ಬೆಳಗಾವಿ ಜಿಲ್ಲೆಯಲ್ಲಿಯ ಒಂದೇ ಒಂದಾದ ರಾಷ್ಟ್ರೀಯ

ಕನ್ನಡ ವಾರಪತ್ರಿಕೆ

ವಿವಿಧ ಲೇಖನಗಳಿಂದಲೂ, ಕರ್ನಾಟಕದ, ಹಿಂದುಸ್ಥಾನದ ಮತ್ತು ಪರದೇಶದ ಚಿತ್ರವಿಚಿತ್ರ ಸುದ್ದಿಗಳಿಂದಲೂ, ಸಂಗತಿಗಳಿಂದಲೂ ಕೂಡಿದ ಪತ್ರಿಕೆ ಇರುವುದು. ಕಾರಣ ಕರ್ನಾಟಕದ ಎಲ್ಲ ಕಡೆಯ ಕನ್ನಡಿಗರೇ ಇಂದೇ ಚಂದಾದಾರರಾಗಿರಿ.

ಸ್ಥಳದವರಿಗೆ ೧—೮—೦.

ಪರಸ್ಥಳದವರಿಗೆ ೨—೮—೦.

ಏಜಂಟರು, ಜಾಹೀರಾತುದಾರರು ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ,

ಸಂದೇಶ ಕಾರ್ಯಾಲಯ,

ಹನುಮಾನ ಬೀದಿ, ಬೆಳಗಾವಿ.

ಫ್ಯಾನ್ಸಿ ಲಿವರ್ ರಿಸ್ಟ್‌ವಾಚ್

ರೂ. 2—4—0.

ಸಣ್ಣ ಸುಂದರ, ಆಕಾರ ಗಟ್ಟಿಮುಟ್ಟಾದ ಮೆಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರಂಟಿ ಉಂಡಾ ಕೃತಿಯ, ದೀರ್ಘಚತುರಸ್ರಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ಕರದ್ದಕ್ಕೆ 2-10-0. ಅತ್ಯುತ್ತಮವಾದುದಕ್ಕೆ 3-4-0. ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0. ಚಿತ್ರದಲ್ಲಿ ತೋರುವ ಬೇಡಿ ರಿಸ್ಟ್‌ವಾಚಿಗೆ ರೂ. 6-0-0. ಜುಬಿಲಿರುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸ್ಪೋರ್ಟ್ಸ್‌ವಾದುದಕ್ಕೆ ರೂ. 10-0-0 ಟ. ಖ. ಪ್ರತ್ಯೇಕ.

ಎಚ್. ದಾವಿದ್ ಅಂಡ್ ಕೊ.

ಪೊ. ಬಾಕ್ಸ 11424 ಕಲ್ಕತ್ತ.

H. David & Co.

Post Box No. 11424. Calcutta

ಕೂದಲು

ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ಡಬ್ಬಲ್ ವಾಪಾಸು. ಕೂದಲು ಗ್ಯಾರಂಟಿ ಎಂಬುದಕ್ಕೆ ದೊರೆತ ನೂರಾರು ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ. 5-0-0. ಕಾಲಂಶಕ್ಕೂ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ. 7-0-0 ಬೆಲೆಯ ಎಣ್ಣೆ ಬೇಕಾಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

HAZRA & Co.,

P. O. **Bihar Nursery** (DARBHANGA)

ಏನೆಂದಿರಿ!

ಕನ್ನಡದಲ್ಲಿ ಒಳ್ಳೇ ಪುಸ್ತಕಗಳಿಲ್ಲವೆಂದೆ!

ಅದೇಕೆ?

ಅತ್ಯುತ್ತಮ ಐತಿಹಾಸಿಕ ಕಾದಂಬರಿಗಳೂ, ಚರಿತ್ರೆಗಳೂ, ರಸವತ್ತಾದ ಸಾಮಾಜಿಕ-ಪೌರಾಣಿಕ ಕಥೆ-ಕಾದಂಬರಿಗಳೂ, ಶ್ರೇಷ್ಠತರಗತಿಯ ಹಾಗೂ ಹೆಸರುವಾಸಿಗಳಾದ ಪತ್ತೇದಾರೀ ಕಥೆಗಳೂ ಶ್ರೀ ಶೇಷಾಚಲ ಗ್ರಂಥಮಾಲೆಯಲ್ಲಿ ಕಳೆದು೦ವರ್ಷಗಳಿಂದಲೂ ಕ್ರಮಶಃ ಪ್ರಕಟವಾಗುತ್ತಲಿದ್ದು ಅಂಥ ೧೦೦-೧೫೦ ಮನೋಹರ ಪುಸ್ತಕಗಳು ಈಗಾಗಲೇ ಹೊರಟು ಕನ್ನಡ ವಾಚಕರನ್ನು ತೃಪ್ತಿಗೊಳಿಸುತ್ತವೆ, ಹಾಗು ಪ್ರತಿವರ್ಷವೂ ಈ ಗ್ರಂಥಮಾಲೆಯ ದ್ವಾರ ೩-೪ಮಾಟನೀಯ ಹೊಸ ಪುಸ್ತಕಗಳು ತಪ್ಪದೆ ಪ್ರಕಟವಾಗುತ್ತಲಿವೆ. ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ **ಬೆಲೆ ಕಡಿಮೆ**

ಅಪೇಕ್ಷಿತರು: **ಶ್ರೀ ಶೇಷಾಚಲ ಪ್ರೆಸ್,**

ಪೋ. ಅನಂದವನ (ಹಾವೇರಿ) ಜಿ. ಧಾರವಾಡ ಈ ಅಡ್ರೆಸ್ಸಿಗೆ ಬರೆಯಬೇಕು. ಕ್ಯಾಟಲಾಗ್ ಪುಕ್ಕಟೆ. ದೇ. ಭ. ಬ್ಯಾರಿಸ್ಟರ್ ಸಾವರಕರರಿಂದ ಬರೆಯಲ್ಪಟ್ಟ ರಮ್ಯ ಭೀಷಣ **"ಕಾಳೆಪಾಣಿ ಪುಸ್ತಕವು ಕರಿನೀರು"** ಎಂದು ಕನ್ನಡದಲ್ಲಿ ನಮ್ಮಿಂದ ಬೇಗನೇ ಪ್ರಕಟವಾಗುವುದು.

ಕ್ರಿಸ್‌ಮಸ್ ಕಾಣಿಕೆ

ಲಿವರ್ ಚಲನವಲನಗಳುಳ್ಳ ಉತ್ತಮ ತರಗತಿಯ ಸ್ವಿಸ್ ಸ್ಪೋರ್ಟ್ಸ್ ರೋಲ್ಡ್‌ಗೋಲ್ಡ್ ಮುಚ್ಚಳಗಳುಳ್ಳ ರಿಸ್ಟ್ ವಾಚುಗಳು ಚೌಕಾಕೃತಿ ಮತ್ತು ಅಷ್ಟಕೋಣಾಕೃತಿಯಲ್ಲಿದ್ದು ಕ್ರಿಸ್‌ಮಸ್ ಹಬ್ಬದ ನಿಮಿತ್ತ ಒಂಭತ್ತು ರೂಪಾಯಿ ಬೆಲೆಬಾಳುವಂತಹವು ರೂಪಾಯಿ 5-15-0ಕ್ಕೇನೇ ಮಾರಲ್ಪಡುವವು.

ಟಪ್ಪಾಲು ಖರ್ಚು ಪ್ರತ್ಯೇಕ.

ಇಂದೇ ಬರೆಯಿರಿ—

Nelson Watch Co.,

Wall Tax Road, P. O. MADRAS.

ಮದ್ರಾಸು

ಹಿಂದೀ ಪ್ರಚಾರಕರ ವರ್ಷಾವಧಿ ಸಮ್ಮೇಳನ— ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ ಒಂಭತ್ತನೆಯ ಸಮ್ಮೇಳನವು ಕಳೆದ ತಾ. ೨೯ರಲ್ಲು ಮದ್ರಾಸಿನ ತ್ಯಾಗರಾಯ ನಗರದ ಕಚೇರಿಯಲ್ಲಿ ಜರಗಿತು. ಡಾ|| ಪಟ್ಟಾಭಿ ಸೀತಾರಾಮಯ್ಯನವರು ಅಧ್ಯಕ್ಷರಾಗಿದ್ದರು. ಶ್ರೀ. ಎಮ್. ಸತ್ಯನಾರಾಯಣರವರು ಮಾಸ್ಕೋ ಅಧ್ಯಕ್ಷ ಮತ್ತಿತರ ಪ್ರತಿನಿಧಿಗಳನ್ನು ಸ್ವಾಗತೀಕರಿಸಿದರು. ಹಿಂದೀ ಭಾಷೆಯನ್ನು ಕಲಿಯುತ್ತಿರುವರ ಸಂಖ್ಯೆಯು ಆಂಧ್ರ ದೇಶದಲ್ಲಿ ಜಾಸ್ತಿಯಾಗಿರುವದೆಂದು ಶ್ರೀ. ಪಿ. ವಿ. ಸುಬ್ಬರಾಯರು ಹೇಳಿದರು. ಅಖಿಲಭಾರತದಲ್ಲಿ ಹೆಸರು ಪಡೆದ ಮುಖಂಡರೊಬ್ಬರು ದಕ್ಷಿಣ ಹಿಂದೂಸ್ಥಾನದಲ್ಲಿ ಹಿಂದೀ ಪ್ರಚಾರ ಕಾರ್ಯವನ್ನು ಕೈಕೊಳ್ಳುವ ಅವಶ್ಯಕತೆಯನ್ನು ಕರ್ನಾಟಕದ ಶ್ರೀ. ಸಿದ್ಧನಾಥ ಪಂತರು ಸೂಚಿಸಿದರು.

ಹಿಂದೀ ಭಾಷಾಭಿವೃದ್ಧಿಯ ಹಾಗೂ ಪ್ರಚಾರದ ಕುರಿತು ಯಾವ ಮುಖಂಡರನ್ನೂ ಹೊಂದಿಕೊಂಡಿರಬೇಕಾದುದಿಲ್ಲ. ಹಿಂದೀ ಪ್ರಚಾರಕರೆಲ್ಲರೂ ಸಹಕಾರ ಮತ್ತು ಸಂಘಟನಾ ಶಕ್ತಿಯಿಂದ ತಾವು ತಾವೇ ಕಾರ್ಯನಿರತರಾದರೆ ಹಿಂದೀ ಭಾಷಾ ಪ್ರಚಾರವು ತನ್ನಷ್ಟಕ್ಕೇನೇ ಆಗುವುದೆಂದು ಶ್ರೀ. ಪಟ್ಟಾಭಿ ಸೀತಾರಾಮಯ್ಯನವರ ಉಪದೇಶವಾಯಿತು.

ಮರುದಿನ ಕೂಡಿದ ಸಮ್ಮೇಳನದ ನಾಯಕತ್ವವನ್ನು ಆಚಾರ್ಯ ಕಾಕಾ ಕಾಲೇಲ್ಕರರು ವಹಿಸಿದ್ದರು. ಹಿಂದೀ ಭಾಷೆಯನ್ನು ಖಡ್ಡಾಯವಾಗಿ ಕಲಿಯುವಂತೆ ಮದ್ರಾಸು ಸಂಸ್ಥಾನದಲ್ಲಿ ಪ್ರತಿಯೊಂದು ಶಾಲೆಯಲ್ಲೂ ಏರ್ಪಾಡಾಗಬೇಕೆಂದೂ ಈ ತರಹ ಹಿಂದೀ ವಿದ್ಯೆಗೆ ಪ್ರೋತ್ಸಾಹವನ್ನಿತ್ತ ಮದ್ರಾಸ್ ಸರಕಾರವನ್ನು ಅಭಿನಂದಿಸಿಯೂ ಠರಾವಾಯಿತು.

ಮೈಸೂರು, ತ್ರಿವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳಲ್ಲಿಯ ಶಾಲೆಗಳಲ್ಲೂ ಹಿಂದೀ ಭಾಷೆಯನ್ನು ಕಲಿಸುವಂತಾಗಬೇಕೆಂದೂ ಆ ಭಾಗದಲ್ಲಿ ಅನುಕೂಲ ವಾತಾವರಣವನ್ನು ಕಲ್ಪಿಸುವಂತೆ ಅಲ್ಲಲ್ಲಿಯ ಸರಕಾರಗಳನ್ನು ವಿನಂತಿ ಮಾಡಿಕೊಳ್ಳಬೇಕೆಂದಾಯಿತು.

"ಮೋಡರ್ನ್ ಕೇಫೆ"ಯಲ್ಲಿ ಮೈಸೂರಿನ ಶ್ರೀಮನ್ಮಹಾರಾಜರಿಗೆ ಸತ್ಕಾರಕೂಟ— 26-12-38ರಲ್ಲಿ ಸಂಜೆ ೬||ಘಂಟೆಗೆ ಮೋಡರ್ನ್ ಕೇಫೆಯ ಮ್ಯಾನೇಜರಾದ ಶ್ರೀ. ಕೆ. ಸೀತಾರಾಮರಾಯರು ಮೈಸೂರಿನ ಶ್ರೀಮನ್ಮಹಾರಾಜರಿಗೆ ತಂಬುಚೆಟ್ಟಿ ರಸ್ತೆಯಲ್ಲಿರುವ ತಮ್ಮ ಸ್ವಂತ ಮೋಡರ್ನ್ ಕೇಫೆಯ ವಸತಿಗೃಹದಲ್ಲಿ ಸತ್ಕಾರ ಕೊಟ್ಟಿದ್ದರು. ಹೊರಗಡೆ ಸಾವಿರಾರು ಮಂದಿ ಪ್ರೇಕ್ಷಕರು ನೆರೆದಿದ್ದರು. ಮೈಸೂರು ಅರಮನೆಯ ಆರ್ಕೆಸ್ಟ್ರಾದವರ ಇಂಪಾದ ಗಾನವು ನೆರೆದವರೆಲ್ಲರಿಗೂ ಕೇಳಿಸುತ್ತಿತ್ತು. ಇದಕ್ಕಾಗಿಯೇ ಲೌಡ್‌ಸ್ಪೀಕರಿನ ಏರ್ಪಾಡುಮಾಡಲ್ಪಟ್ಟಿತ್ತು. ಸ್ಕೌಟುಗಳೂ ಪೋಲೀಸಿನವರೂ ಅತಿಥಿಗಳ ಆಗಮನ ನಿರ್ಗಮನಕ್ಕೆ ಅನುಕೂಲವಾಗಿ ಕೊಡುತ್ತಿದ್ದರು.

ನಿಶ್ಚಿತ ಸಮಯಕ್ಕೆ ಸರಿಯಾಗಿ ಶ್ರೀಮನ್ಮಹಾರಾಜರು ವಿದ್ಯುದ್ದೀಪಗಳಿಂದಲೂ ಕಳಾಕೆಲಸಗಳಿಂದಲೂ ಸಿಂಗರಿಸಲ್ಪಟ್ಟ ಕೆಫೆಗೆ ಚಿತ್ತೈಸಿದರು. ಶ್ರೀ. ಕೆ. ಸೀತಾರಾಮರಾಯರು ಒಡೆಯರಿಗೆ ಪುಷ್ಪಹಾರವನ್ನು ಹಾಕಿ ಆದರದಿಂದ ಸ್ವಾಗತೀಕರಿಸಿ ಕೆಫೆಯ ವಾಚನಾಲಯಕ್ಕೆ ಕರೆದುಕೊಂಡು ಹೋಗಿ ಕುಳ್ಳಿರಿಸಿದರು. ಅಲ್ಲಿ ಭಾವಚಿತ್ರ ತೆಗೆಯಲಾಯಿತು.

ಕೆಫೆಯ ವಿಶಾಲವಾದ ಟೆರೆಸಿನ ಮೇಲೆ ಉಪಾಹಾರಕ್ಕೆಂದು ಸನ್ನಾಹವಾಗಿತ್ತು. ಶ್ರೀಮನ್ಮಹಾರಾಜರೂ ಬಂದ ಅತಿಥಿಗಳೂ ಉಪಾಹಾರವನ್ನು ಸ್ವೀಕರಿಸಿದ ಮೇಲೆ ಶ್ರೀ ಕೆ. ಸೀತಾರಾಮರಾಯರು ಶ್ರೀಮನ್ಮಹಾರಾಜರನ್ನೂ ಬಂದ ಅತಿಥಿಗಳನ್ನೂ ಬೀಳ್ಕೊಟ್ಟರು.

ನವಯುಗದ ವಿಶೇಷ ಸಂಚಿಕೆಯನ್ನೋದಿರಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುತ್ತದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ವ್ಯವಸಾಯ ಸ್ಥಾನಿಕ ಏಜಂಟರು:- ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, — ಯಂ. ಆರ್. ಪೂಂಜ,
President & Manager. — ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಹಳಾಗಿಯೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪ್ ಒಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸ್ವರ್ಣ, ಶಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರರೋಗ, ಶಿರರೋಗ, ವಿಕ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಬಿಳಿಜ್ವರ, ಅಶಕ್ತಿ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ಸಂಗ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವದು. ಬಾಟ್ಲಿ ೧ರ ರೂ 2-8-0.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಪುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ರಾ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ

Manager,
Kanara Printing Works,
Hampankatte, **MANGALORE**

ಕಸಿಗಿಡಗಳು.

ಸಪ್ಪೋಟಿಲ್ಲ (ಚಿಕ್ಕು):— ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವದು ಒಕ್ರಬಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು.

ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-೬-೦ ಮಾತ್ರ.
ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ.
ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವದು

ಕೆ. ಎಮ್. ಸೆಟ್ಟಿ, ಕೆನರಾ ನರ್ಸರಿ,
ಪ್ರೊಪ್ರೈಟರ್:— ಕಾಪು, ದ. ಕ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್	**ಭೈರವ ಮಾತ್ರೆಗಳು**
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್‌ಸೀನರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತವೆ [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕೆಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,

ಸೋದೆ ಮಠದ ಲೇನು — ಉಡುಪಿ, ದ. ಕ.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೈಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

ಶ್ರೀ ಪಾರ್ಶ್ವನಾಥ ಸ್ವಾಮಿ

ಪಂಚಕಲ್ಯಾಣ ಪೂಜಾ ಮಹೋತ್ಸವ

ವೇಣೂರು, 1939.

ತೋರಣ ಮುಹೂರ್ತ	ಸಹಸ್ರಾಷ್ಟಕ ಕುಂಭಾಭಿಷೇಕ	ತೋರಣ ವಿಸರ್ಜನ
25—1—1939	4 2—1939 ಮಾಘ ಶು ೧೫ ಶನಿವಾರ.	6—2—1939

೩೦-೧-೩೯ ಗರ್ಭಾವತರಣ ಕಲ್ಯಾಣ ೧೦೦೮ ಕುಂಭಾಭಿಷೇಕ ಮಹೋತ್ಸವ. ೩೧-೧-೩೯ ಜನ್ಮಾಭಿಷೇಕ ಕಲ್ಯಾಣ ೨೧೬ ಕುಂಭಾಭಿಷೇಕಮಹೋತ್ಸವ.
೧-೨-೩೯ ಪರಿನಿಷ್ಕ್ರಮಣ ಕಲ್ಯಾಣ ೩೨೪ ಕುಂಭಾಭಿಷೇಕ ಮಹೋತ್ಸವ. ೨-೨-೩೯ ಕೇವಲ ಜ್ಞಾನ ಕಲ್ಯಾಣ ೮೩೨ ಕುಂಭಾಭಿಷೇಕ ಮಹೋತ್ಸವ.
೩-೨-೩೯ ನಿರ್ವಾಣ ಕಲ್ಯಾಣ ೫೦೪ ಕುಂಭಾಭಿಷೇಕ ಮಹೋತ್ಸವ.

ಶ್ರೀ ಗೋಮಟೇಶ್ವರ ಸ್ವಾಮಿ ಸನ್ನಿಧಿಯಲ್ಲಿ
೧೦೮ ಕುಂಭಾಭಿಷೇಕ ಮಹೋತ್ಸವ.

ವೇಣೂರು ಮೂಡಬಿದ್ರೆಯಿಂದ 12 ಮೈಲು ದೂರವಿರುವ ಇತಿಹಾಸ ಪ್ರಸಿದ್ಧವಾದ ಈ ಸ್ಥಳವು ಪ್ರಕೃತಿಸೌಂದರ್ಯದಿಂದ ಮನೋಹರವಾಗಿದೆ. ಇಲ್ಲಿ 36 ಫೀಟ್ ಉನ್ನತವಾಗಿರುವ ಶ್ರೀಗೋಮಟೇಶ್ವರ ಸ್ವಾಮಿಯ ಮಹಾಮೂರ್ತಿಯು ವಿರಾಜಿಸಲ್ಪಟ್ಟಿದೆ. ಇಲ್ಲಿಯ ಶ್ರೀಪಾರ್ಶ್ವನಾಥಸ್ವಾಮಿ ಬಸದಿಯನ್ನು ಮೂಡಬಿದ್ರೆಯ ಸ್ವಸ್ತಿ! ಶ್ರೀ. ಚಾರುಕೀರ್ತಿ ತೀರ್ಥ ಪಂಡಿತಾಚಾರ್ಯವರ್ಯಸ್ವಾಮಿಯವರು ಸಹಸ್ರಾರು ರೂಪಾಯಿ ಖರ್ಚುಮಾಡಿ ಜೀರ್ಣೋದ್ಧಾರ ಮಾಡಿಸಿ ಪಂಚಕಲ್ಯಾಣ ಪೂಜಾ ಮಹೋತ್ಸವವನ್ನು ಜರಗಿಸಿದ್ದಾಗಿದೆ. ಈ ಸಮಾರಂಭದ ಸಲುವಾಗಿ ಬರುವ ಯಾತ್ರಿಕರಿಗೆ ಉತ್ತಮ ವ್ಯವಸ್ಥೆಗೊಳಿಸಲಾಗಿದೆ.

ಯಾತ್ರಿಕರಿಗೆ ಅನುಕೂಲವಾಗುವಂತೆ ಅಗತ್ಯವಿದ್ದಲ್ಲಿ ಸ್ಪೆಶಲು ಸರ್ವೀಸು ಚಾಲೂ ಮಾಡುವ ಯೋಗ್ಯ ವ್ಯವಸ್ಥೆ ಮಾಡಲಾಗುವುದು.

JOINT MANAGERS,

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ ದೊರೆಯುವುದು.

ವಾರ್ಷಿಕ ಚಂದಾ ರೂ 3 0 0 ಬಿಡಿ ಪ್ರತಿ 0 1 0

ಮೆನೇಜರ್— ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

●

೧, ೨, ೩, ಭಾಗಗಳು.

●

ಪ್ರತಿಯೊಂದು ಭಾಗಕ್ಕೆ ೦—೪—೦

●

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital	Rs. 1,00000
Subscribed & Paid up „	Rs. 30,760
Reserves	Rs. 1,078

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

3ರಿಂದ	6	ತಿಂಗಳ ವರೆಗೆ	4 ಸಲೆ
7 „	11	„	5 „
12 „	18	„	6 „

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯಿತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?

ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ವ್ಯಾಸಭವನಂ
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S. S. KARANTH, for & on behalf of SUPPLY AGENCY LTD., at THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ



26-1-1939

The Canara Industrial & Banking Syndicate, Limited.

(INCORPORATED IN BRITISH INDIA)

ESTD. 1925

(PREMIER COSMOPOLITAN BANK OF ALL-KARNATAK.)

Head Office:- UDIPI, S. India.

MEMBER:

RESERVE BANK OF INDIA,
BANKERS' CLEARING HOUSE, BOMBAY.

BRANCHES.

1 Bombay,	13 Honavar	25 Byadgi
2 Belgaum,	14 Ankola	26 Gadag
3 Nippani	15 Sirsi	27 Hubli
4 Taliparamba	16 Kumta	28 Felix Pai Bazar, Mangalore
5 Payyanur	17 Karwar	
6 Kanhangad	18 Nandyal	29 Car Street, Mangalore
7 Sagar	19 Bellary	
8 Tumkur	20 Adoni	30 Kasargod
9 Cannanore	21 Hospet	31 Uppinangady
10 Bangalore	22 Bhatkal	32 Karkala
11 Hindupur	23 Brahmavar	33 Coondapoor
12 Tadapatri	24 Hangarcutta	34 Prodatur
		35 Upipi

Safest place for investment since over 77 percent of the investments of the Bank are fully secured by Gold and other valuable securities and the remaining 23 percent is also secured by good personal and other securities. Current Account, Savings Bank Account and Fixed Deposits received. Terms on Application. Loans arranged on gold jewels, G P Notes, approved shares, goods and other produce at favourable terms. Bills and cheques negotiated on favourable terms. Drafts will be issued on all principal stations Pigmy Deposit Scheme is a fountain of happiness for the rich and poor alike.

For further particulars apply to:

THE CANARA INDUSTRIAL & BANKING SYNDICATE, LIMITED, UDIPI

Or to any of its Branches.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು
ತೈಲ ಮತ್ತು ಆರಿಷ್ಟಾಸವಗಳು

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಸ್ಪೃತ
ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ವಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲೊಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಕಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: MANGALORE

BRANCHES: Udipi, Coondapoor, Kaup & Karkal.

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.
Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] H. O. UDIPI. [1920

BRANCHES:
MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at 3½ p. c. per annum.
Two years' Fixed Deposits at 4 p. c. per annum.
Savings Bank Deposits .... 3 p. c. per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD 1921
FOUNDER
Sri A B SHETTY M L A
Parliamentary Secretary Govt of Madras
ಸಂಸ್ಥಾಪಕರು
ಶ್ರೀ ಎ. ಬಿ. ಶೆಟ್ಟಿ, ಎಮ್. ಎಲ್. ಎ.
ಸಂಪಾದಕ
ಕೆ. ಕೆ. ಶೆಟ್ಟಿ

ನವಯುಗ
NAVAYUGA WEEKLY UDIPI

ಸಂಪುಟ ೧೮
ಸಂಚಿಕೆ ೨೧
ಉಡುಪಿ, ಗುರುವಾರ ೨೬-೧-೧೯೩೯
Udipi, Thursday 26—1—1939
Vol XVIII
No 21

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ ೧—೧೨—೦
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು
ವಿ. ಪಿ. ಕ್ರಮವನ್ನು ನಿಲ್ಲಿಸಲಾಗಿದೆ

ಸಮಾಚಾರ ಸಂಗ್ರಹ

ಒರಿಸ್ಸದಲ್ಲಿ ಬಿಕ್ಕಟ್ಟಿನ ಸಂಭವ

ಒರಿಸ್ಸ ಪ್ರಾಂತದ ದೇಶೀಯ ಸಂಸ್ಥಾನಗಳಲ್ಲುಂಟಾಗಿರುವ ವಿಷಮ ಪರಿಸ್ಥಿತಿಯ ಕುರಿತು, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರಾದ ಶ್ರೀ ಹರೇಕೃಷ್ಣ ಮಹತಾಬರು, ಸದ್ರಿ ಸಂಸ್ಥಾನಗಳ ರಸಿಡೆಂಟರೊಡನೆ ಮಾತಾಡಿ ರಾಜಿಯಿಂದ ಇತ್ಯರ್ಥವಾಗುವ

ಒರಿಸ್ಸದ ಪ್ರಧಾನ ಮಂತ್ರಿ ವಿಶ್ವನಾಥ ದಾಸರು

ಆಶೋದಯವುಂಟಾಗಿದೆ ಆದರೆ ದೇಶೀಯ ರಾಜರುಗಳ ಸಂರಕ್ಷಣಾ ಶಾಸನದ ಕೆಲವು ಪ್ರಕರಣಗಳನ್ನು ಒರಿಸ್ಸದಲ್ಲಿ ಜಾರಿಗೆ ತರುವ ಸಂಬಂಧವಾಗಿ ಒರಿಸ್ಸದ ಗವರ್ನರ್ ಮತ್ತು ಮಂತ್ರಿಗಳೊಳಗೆ ಬಿನ್ನಾಭಿಪ್ರಾಯವೆದ್ದು ಬಿಕ್ಕಟ್ಟುಂಟಾಗುವ ಸಂಭವವಿದೆ. ಧಂಕನಾಲ್ ಮತ್ತು ತಾಲ್ಚೇರ್ ಸಂಸ್ಥಾನದಿಂದ ಬ್ರಿಟಿಷ್ ಒರಿಸ್ಸಕ್ಕೆ ಬಂದವರನ್ನು ಕೈದುಮಾಡಿ ಸದ್ರಿ ಸಂಸ್ಥಾನಾಧಿಕಾರಿಗಳಿಗೆ ಒಪ್ಪಿಸುವ ವಿಷಯದಲ್ಲಿಯೂ ಭಿನ್ನಾಭಿಪ್ರಾಯವುಂಟಾಗಿದೆಯೆಂದು ತಿಳಿದುಬರುತ್ತದೆ ಇದೇ ತಾ. 20ರಲ್ಲಿ ಒರಿಸ್ಸ ಮಂತ್ರಿಮಂಡಲದ ಸಭೆ ನಡೆಯುತ್ತವಲ್ಲದೆ ಪ್ರಧಾನ ಮಂತ್ರಿಗಳೂ ಇತರ ಮಂತ್ರಿಗಳೂ ಒಟ್ಟಾಗಿ ಗವರ್ನರರನ್ನು ಮಾತಾಡಿಸಿರುವರು ಡಂಕನಾಲ್, ತಾಲ್ಚೇರ್, ರಣಪುರವೇ ಮೊದಲಾದ ಸಂಸ್ಥಾನಗಳಲ್ಲಿ ಉಗ್ರ ದಬ್ಬಾಳಿಕೆಗೊಳಗಾಗಿ ಬ್ರಿಟಿಷ್ ಒರಿಸ್ಸದ ಆಶ್ರಯಪಡೆದಿರುವ ನಿರಾಶ್ರಿತ ಜನರಿಗೆ ಒರಿಸ್ಸ ಸರಕಾರವು ಸಹಾಯವಿತ್ತಿರುವುದು. ರಣಪುರದ ಬ್ರಿಟಿಷ್ ಏಜಂಟರಾದ ಬಿಜಲ್‌ಗೇಟ್ ಎಂಬವರು ಕೊಲ್ಲಲ್ಪಟ್ಟುದರಿಂದ ಕಾದು ಪ್ರಾಣಗಳಂತ ಅಲ್ಲಿಯ ಪ್ರಜೆಗಳ ಬೇಟೆ ನಡೆದಿದೆ ಜನರೆಲ್ಲಾ ಮನೆಬಿಟ್ಟು ಓಡಿಹೋಗಿರುತ್ತಾರೆ

ಇಸ್ಲಾಮಿನ ಹೊಸ ಖಲೀಫರು

ಮೊದಲು ಟರ್ಕಿಯ ಸುಲ್ತಾನರು ಲೋಕದ ಮುಸಲ್ಮಾನರೆಲ್ಲರ ಧಾರ್ಮಿಕ ಜಗದ್ಗುರು (ಖಲೀಫ)ವಾಗಿದ್ದರು. ಆದರೆ ಟರ್ಕಿಯಲ್ಲಿ ರಾಜಕೀಯ ಕ್ರಾಂತಿಯುಂಟಾಗಿ ಸುಲ್ತಾನರು ಪದಚ್ಯುತಿ ಹೊಂದಿದ ಮೇಲೆ ಅಲ್ಲಿ ಸರ್ವಾಧಿಕಾರಿ ಸ್ಥಾನಕ್ಕೇರಿದ ಮುಸ್ತಫ ಕಮಾಲ್ ಪಾಷಾರವರು ಖಲೀಫ ತನವನ್ನು ತೆಗೆದುಹಾಕಿಬಿಟ್ಟರು. ಅಂದಿನಿಂದ ಮುಸಲ್ಮಾನರಿಗೆ ಜಗದ್ಗುರು ಇಲ್ಲದಂತಾಗಿದೆ ಯಾರಾದರೊಬ್ಬ ಪ್ರಬಲ ಮುಸಲ್ಮಾನ ಅರಸರನ್ನು ಖಲೀಫರನ್ನಾಗಿ ಮಾಡಬೇಕೆಂದು ಇತ್ತೀಚೆಗೆ ಕೆಲ ಸಮಯದಿಂದ ನಡೆದಿರುವ ಪ್ರಯತ್ನವು ಫಲಕಾರಿಯಾಗಿ ಇದೇ ತಾ. ೩ರಲ್ಲಿ ಐಗುಪ್ತದ ಅರಸರಾದ ಫರೂಕರು ಕೈರೋ ಪಟ್ಟಣದ ಕೋಗಸ್ ಮಸೀದಿಯಲ್ಲಿ ಇಸ್ಲಾಮ್ ಧರ್ಮದ ಜಗದ್ಗುರುವಾಗಿ ಸಾರಲ್ಪಟ್ಟಿರುವರು. ಈ ಸಂದರ್ಭದಲ್ಲಿ ಅರೇಬಿಯಾದ ಯುವರಾಜ ಅಮೀರರೂ, ಅಮೀರ ಫೈಸಲ್ ಮತ್ತು ಅವರ ಸಹೋದರರೂ, ಅಮೀರ್ ಖಾಲಿದರೂ ಇತರ ೩೦೦ ಮಂದಿ ಐಗುಪ್ತದ ಅಧಿಕಾರಿಗಳೂ ಹಾಜರಿದ್ದರು. ಪ್ರಧಾನ ಮಸೀದಿಯ ಇಮಾಮರು ಸ್ಥಾನವನ್ನೇರಿ ಪ್ರಾರ್ಥನ ನಡಿಸಿದರು ಟರ್ಕಿಯು ಖಲೀಫತನವು ತೆಗೆದು ಹಾಕಲ್ಪಟ್ಟ ನಂತರ ಯಾವ ಅರಸನೂ ಹೀಗೆ ಮಾಡುವ ದಿಕ್ಕಿನಲ್ಲಿ ಪ್ರಯತ್ನಿಸದೆ ಮುಸಲ್ಮಾನ ಸಾಮ್ರಾಜ್ಯಗಳಲ್ಲಿ ಮುಸಲ್ಮಾನರನ್ನೆಲ್ಲಾ ಒಂದುಗೂಡಿಸಿ ಸಂಘಟಿಸುವ ನಾಯಕನೊಬ್ಬನ ಅವಶ್ಯಕತೆಯನ್ನು ಮನಗಂಡು ಎಲ್ಲರ ಪ್ರೀತಿಗೂ ಪಾತ್ರರಾಗಿರುವ ಐಗುಪ್ತದ ಅರಸರಾದ ಫರೂಕರು ಆ ಸ್ಥಾನವನ್ನು ಸ್ವೀಕರಿಸಿದುದರಿಂದ ಬಹಳ ಆನಂದಗೊಂಡಿರುವರು.

ಶ್ರೀ ಬಜಾಜರು ಜಯಪುರಕ್ಕೆ ಪ್ರವೇಶಿಸದಂತೆ ನಿಷೇಧ

ಶ್ರೀ ಜಮುನಾಲಾಲ ಬಜಾಜರ ಜಯಪುರ ಸಂಸ್ಥಾನದ ಪ್ರಜೆಯಾಗಿರುವರು. ಜಯಪುರದ ಅಧೀನ ರಾಜ್ಯವಾದ ಸಿಕಾರಿನಲ್ಲಿ ಮಹಾರಾಜರಿಗೂ [illegible] ರಾಜಿಯಿಂದ ತೀರ್ಮಾನಿಸುವುದರಲ್ಲಿ ಬಜಾಜರು ಅಗ್ರಭಾಗ ವಹಿಸಿದ್ದರು ಮತ್ತು ತನ್ನ ಹುಟ್ಟೂರಾದ ಜಯಪುರ ಸಂಸ್ಥಾನದಲ್ಲಿ ಅನೇಕ ಜನೋಪಕಾರಿ ಕೆಲಸಗಳನ್ನು ನಡಿಸಿ ಜನಪ್ರಿಯರಾಗಿರುವರು ಜಯಪುರ ಪ್ರಜಾಮಂಡಲದ ಅಧ್ಯಕ್ಷರಾಗಿರುವರು. ಈಗ ಜಯಪುರ ಸಂಸ್ಥಾನಾಧಿಕಾರಿಗಳು ಶ್ರೀ ಜಮುನಾಲಾಲ ಬಜಾಜರು ಜಯಪುರಕ್ಕೆ ಪ್ರವೇಶಿಸಬಾರದೆಂದು ನಿಷೇಧಾಜ್ಞೆ ಕೊಟ್ಟಿರುವರು ಇದು ಅನ್ಯಾಯವಾದುದೆಂದೂ, ಅದನ್ನು ಹಿಂತೆಗೆಯದಿದ್ದರೆ ಶಾಸನವನ್ನು ಮೀರುವೆವು ನಿಶ್ಚಯವೆಂದೂ ಶ್ರೀ ಬಜಾಜರು ಜಯಪುರ ಸ್ಟೇಟ್ ಕೌನ್ಸಿಲಿನ ಪ್ರೆಸಿಡೆಂಟರಿಗೆ ಬರೆದಿರುವರು ಆದರೆ ಈ ವರೆಗ ನಿಷೇಧಾಜ್ಞೆಯು ಹಿಂದೆಗೆಯಲ್ಪಟ್ಟಿರುವುದಿಲ್ಲ ಇದಕ್ಕೆ ಜಯಪುರದ ಆಂಗ್ಲೇಯ ದಿವಾನರು ಕಾರಣರಲ್ಲದೆ ಮಹಾರಾಜರಲ್ಲ ದಿವಾನರೇ ಸರ್ವತಂತ್ರ ಸ್ವತಂತ್ರರಿದ್ದಾರೆ, ದಿವಾನರ ಈ ಧೋರಣೆಗೆ ಕೇಂದ್ರ ಸರಕಾರದ ಸಮ್ಮತಿ ಇರಬಹುದೇ? ಕೇಂದ್ರ ಸರಕಾರವೂ, ದೇಶೀಯ ಸಂಸ್ಥಾನಾಧಿಕಾರಿಗಳೂ ತಾವು ಅನುಸರಿಸಬೇಕಾದ ಸರ್ವಸಾಮಾನ್ಯ ಧೋರಣೆಯನ್ನು ಬೇಗನೆ ನಿಶ್ಚೈಸುವುದೊಳ್ಳೆಯದು. ಜಯಪುರ ಸಂಸ್ಥಾನಾಧಿಕಾರಿಗಳು ಶ್ರೀ ಜಮುನಾಲಾಲ ಬಜಾಜರ ಮೇಲಿನ ನಿಷೇಧವನ್ನು ತೆಗೆದುಹಾಕದಿದ್ದರೆ ಮತ್ತು ಅದನ್ನು ಕೇಂದ್ರ ಸರಕಾರವು ಸಮರ್ಥಿಸಿದರೆ ಜಯಪುರವು ದೇಶವ್ಯಾಪಕ ಬಿಕ್ಕಟ್ಟೊಂದನ್ನು ಬೇಗನೆ ಕಾರಣವಾಗುವುದೆಂದು ಗಾಂಧೀಜಿಯವರು ಎಚ್ಚರಿಸಿರುವರು

ರಾಜಕೋಟೆಯಲ್ಲಿ ಪುನಃ ಸತ್ಯಾಗ್ರಹ

ಗತ ಡಿಸೆಂಬರ ರಾಜಕೋಟೆ ಸಂಸ್ಥಾನದ ಪ್ರಜೆಗಳು ಸರ್ದಾರ್ ವಲ್ಲಭಾಯಿ ಪಟೇಲರ ನಾಯಕತ್ವದಲ್ಲಿ ತಮ್ಮ ಹಕ್ಕಿನ ಬಾಧ್ಯತೆಗಳಿಗಾಗಿ ಜಯಪ್ರದ ಹೋರಾಟನಡಿಸಿ ಕಡೆಗೆ ಜಯಶಾಲಿಯಾಗಿ ತಷ್ಟು ಈಗ ಅಲ್ಲಿಯ ರಾಜರು ಈ ರಾಜಿಯ ಶರ್ತಗಳಂತೆ ನಡೆಯಲು ನಿರಾಕರಿಸಿರುವರು. ಪ್ರಜೆಗಳಿಗೆ ಯಾವರೀತಿಯ ಸುಧಾರಣೆಯನ್ನೀಯಬೇಕೆಂದು ವಿಚಾರಿಸಲು ನೇಮಿಸಲ್ಪಡುವ ಕಮಿಟಿಗೆ ಸರ್ದಾರ ಪಟೇಲರು ಸೂಚಿಸಿದ ಹೆಸರುಗಳನ್ನು ರಾಜರು ಸ್ವೀಕರಿಸಲೊಪ್ಪದೆ ಪಟೇಲರ ಪಟ್ಟಿಯಿಂದ 1ಮಂದಿಯನ್ನು ಮಾತ್ರ ಸ್ವೀಕರಿಸಿ ಇತರ 6ಮಂದಿಯನ್ನು ತಾವೇ ನೇಮಿಸಿರುವರು. ಇದರಿಂದ ರಾಜರು ಕಳೆದ ತಿಂಗಳಲ್ಲಾದ ಒಡಂಬಡಿಕೆಯನ್ನು ಮೀರಿದಂತಾಗಿದೆ. ಆದುದರಿಂದ ರಾಜಕೋಟೆಯ ಪ್ರಜಾ ಪರಿಷತ್ತಿನವರು ಬರುವ ವಾರದಲ್ಲೇ ಪುನಃ ಸತ್ಯಾಗ್ರಹ ಚಳವಳಿ ಹೂಡಲಿರುವರು. ಈ ಮೊದಲು ಪ್ರಜಾಪರಿಷತ್ತಿನವರು ತಮಗೂ ರಾಜರಿಗೂ ನಡದಿರುವ ಪತ್ರವ್ಯವಹಾರವನ್ನು ಪ್ರಕಟಪಡಿಸಲಿರುವರು. ಇದನ್ನು ಗಾಂಧೀಜಿಯವರು ಪರಿಶೀಲಿಸಿ ಪ್ರಕಟಿಸು

THE UDIPI BANK LTD.
ನಿರಖು ಠೇವಣಾತಿ (ಡಿಪೋಜಿಟು)ಗಳು
ಸಾ ಲೇ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು
ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ
ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100 -ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.
ಹೆಚ್ಚಿನ ಸೂಚಿತಿಗೆ ವಿಚಾರಿಸಿರಿ
ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ವುದು ಅವಶ್ಯಕವೆಂದು ಅಭಿಪ್ರಾಯವಿತ್ತಿರುವರು

ತಿರುವಾಂಕೂರಿನ ಪರಿಸ್ಥಿತಿ

ತಿರುವಾಂಕೂರು ಸ್ಟೇಟ್ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯವರು ಇದೇ ತಾ. ೨೧ರಲ್ಲಿ ಸಭೆಸೇರಿ, ತಮ್ಮ ಸಂಸ್ಥಾನದ ಪ್ರಕೃತದ ಪರಿಸ್ಥಿತಿಯನ್ನು ಪರಿಶೀಲಿಸಿ, ಸರಕಾರದ ಮುಂದೆ ತಮ್ಮ ಕೆಲವು ಕೇಳಿಕೆಗಳನ್ನಿಟ್ಟಿರುವರು. ಆ ಕುರಿತು ಸರಕಾರವು ತೃಪ್ತಿಕರವಾದ ಉತ್ತರವನ್ನೀಯದಿದ್ದಲ್ಲಿ ತಾ ೨೧ರಿಂದ ೬ ಹಪ್ತೆಗಳೊಳಗೆ ತಿರುವಾಂಕೂರಿನಲ್ಲಿ ಪುನಃ ಸತ್ಯಾಗ್ರಹವಮಾಡಲ್ಪಡುವುದು. ಈಗಣ ಪ್ರಜಾಪ್ರತಿನಿಧಿಗಳು ಚುನಾವಣೆಯ ಮತದಾನ ಕ್ರಮವನ್ನು ಪ್ರಾಯಸ್ಥರಿಗೆಲ್ಲಾ ಓಟಿನ ಹಕ್ಕು ಕೊಡಲ್ಪಡುವ ಸಂಪೂರ್ಣ ಜವಾಬ್ದಾರಿ ಸರಕಾರವು ಸ್ಥಾಪಿಸಲ್ಪಡುವನಕ ಬದಲಾಯಿಸಬಾರದು. ಅದನ್ನು ಬದಲಾಯಿಸಲು ಕೆಲವರು ನಡೆಸುವ ಯತ್ನವು ನಿಷೇಧಸೀಯವಿದೆ. ಹಾಗೆ ಮಾಡಲ್ಪಟ್ಟಲ್ಲಿ ತಿರುವಾಂಕೂರಿನಲ್ಲಿ ಪುನಃ ಜಾತೀಯ ವೈಷಮ್ಯವೇಳುವುದು ನಿಶ್ಚಯ. ಆದುದರಿಂದ ಸ್ಟೇಟ್ ಕಾಂಗ್ರೆಸಿನವರು ಸತ್ಯಾಗ್ರಹ ಹೂಡಿಯಾದರೂ ಅಂತಹ ಪ್ರಯತ್ನವನ್ನು ವಿರೋಧಿಸಲಿರುವರು. ಸರಕಾರವು ಜವಾಬ್ದಾರೀ ರಾಜ್ಯವನ್ನೀಯುವ ವಿಷಯದಲ್ಲಿ ಈ ವರೆಗೂ ಮೌನ ತಾಳಿದೆ, ಮಾತ್ರವಲ್ಲ. ಸ್ಟೇಟ್ ಕಾಂಗ್ರೆಸಿನ ಸ್ವಯಂ ಸೇವಕರು ಮತ್ತು ಇತರ ಕೆಲಸಗಾರರೇ ಮೊದಲಾದ ಸುಮಾರು ೩೦೦ ಮಂದಿಯನ್ನೂ ಕೈದು ಮಾಡಿ ದಂಡಿಸಿರುತ್ತದೆ. ಸಂಸ್ಥಾನದ ರಾಜಕೀಯ ಪರಿಸ್ಥಿತಿಯು ದಿನೇ ದಿನೇ ಕೆಡುತ್ತಾ ಹೋಗುತ್ತಿದೆ. ಆದುದರಿಂದ ಸ್ಟೇಟ್ ಕಾಂಗ್ರೆಸಿನವರು ಬೇಗನೆ ಸತ್ಯಾಗ್ರಹ ಹೂಡುವ ಅವಶ್ಯಕತೆ ಬಂದಿದೆ. ಹಾಗೆ ಹೂಡಲ್ಪಡುವ ಸತ್ಯಾಗ್ರಹವು ಮದ್ಯಪಾನ ಮತ್ತು ತಂಬಾಕು ನಿಷೇಧ, ಕೈಮಗ್ಗ ಕೈಗಾರಿಕೆಯ ಪ್ರೋತ್ಸಾಹ, ಉಪ್ಪಿನ ಮತ್ತು ಫೋರೆಸ್ಟ್ ಕಾನೂನು ಉಲ್ಲಂಘನ ಟೋಲ್‌ಗೇಟು, ಮಾರ್ಕೆಟು ಮತ್ತು ಭೂಕಂದಾಯ ನಿರಾಕರಣೆಯ ಸ್ವರೂಪ ತಾಳಲಿರುವುದು. ಸರಕಾರವು ಜವಾಬ್ದಾರಿ ರಾಜ್ಯಭಾರವನ್ನೀಯುವ ಏರ್ಪಾಡನ್ನು ಕೂಡಲೆ ಮಾಡಿ, ರಾಜಕೀಯ ಕೈದಿಗಳನ್ನೆಲ್ಲಾ ಬಿಟ್ಟು, ಸ್ಟೇಟ್ ಕಾಂಗ್ರೆಸನ್ನು ಅಂಗೀಕರಿಸಿ, ಗೋಳಿಬಾರು ಮೊದಲಾದ ಪೋಲೀಸ್ ಮತ್ತು ಸೈನಿಕರ ಅತ್ಯಾಚಾರಕ್ಕಂತ ವಿಚಾರಣೆ ನಡೆಸಿ, ಮಜೂರ ಮತ್ತು ವಿದ್ಯಾರ್ಥಿ ಮುಷ್ಕರಗಾರರ ಮೇಲೆ ನಡೆಸಲ್ಪಟ್ಟಿರುವ ಖಟ್ಲೆಗಳನ್ನು ಹಿಂತೆಗೆದ ಪಕ್ಷದಲ್ಲಿ ಸ್ಟೇಟ್ ಕಾಂಗ್ರೆಸಿನವರು ಸರಕಾರದೊಡನೆ ಸಹಕರಿಸಲು ಸಿದ್ಧರಿದ್ದಾರೆಂದು ಹೇಳಿಕೆಯನ್ನು ಹೊರಡಿಸಿರುವರು.

ತ್ರಿಪುರಿ ಕಾಂಗ್ರೆಸಿನ ಅಧ್ಯಕ್ಷ ಚುನಾವಣೆ

ತ್ರಿಪುರಿ ಕಾಂಗ್ರೆಸಿನ ಅಧ್ಯಕ್ಷತನಕ್ಕೆ ಮೊದಲಾಗಿ ಖಾನ್ ಅಬ್ದುಲ್ ಗಫರ್ ಖಾನ್‌ರ ಹೆಸರು ಸೂಚಿಸಲ್ಪಟ್ಟಿದ್ದಿತು. ಆದರೆ ಈ ಸಲವೂ ಅವರು ಅಧ್ಯಕ್ಷರಾಗಲೊಪ್ಪಲಿಲ್ಲ. ಆ ಮೇಲೆ ಮೌಲನಾ ಅಬ್ದುಲ್ ಕಲಂ ಅಜಾದರ ಹೆಸರು ಸೂಚಿಸಲ್ಪಟ್ಟಿತು. ಪಾರ್ಲಿಮೆಂಟರಿ ಸಬ್ ಕಮಿಟಿಯ ಸಂಬಂಧವಾದ ಹೆಚ್ಚಿನ ಕೆಲಸದ ನಿಮಿತ್ತ ತನ್ನ ಆರೋಗ್ಯವು ನೆಟ್ಟಗಿಲ್ಲೆಂದೂ, ಆದುದರಿಂದ ಕಾಂಗ್ರೆಸಿನ ಅಧ್ಯಕ್ಷತನದಂತಹ ಮಹತ್ತಾದ ಜವಾಬ್ದಾರಿಯನ್ನು ವಹಿಸಲು ತನಗೆ ಸಾಧ್ಯವಿಲ್ಲೆಂದೂ ಅವರು ತನ್ನ ಹೆಸರನ್ನು ಹಿಂತೆಗೆದು ಅದಕ್ಕೆ ಆಂಧ್ರ ಮುಖಂಡರಾದ ಶ್ರೀ. ಪಟ್ಟಾಭಿಸೀತಾರಾಮಯ್ಯನವರನ್ನು ಆರಿಸುವುದೊಳ್ಳೇದೆಂದು ಅಭಿಪ್ರಾಯವಿತ್ತಿರುವರು. ಶ್ರೀ. ಸುಭಾಸಚಂದ್ರಭೋಸರ ಹೆಸರು ಕೂಡ ಪುನಃ ಸೂಚಿಸಲ್ಪಟ್ಟಿದೆ. ಅದು ಹೊಂತು ದೇಶದ ಮೇಲೆ ಫೆಡರೇಶನ್ ಹೊರಿಸಲ್ಪಡುವ ಸಂದಿಗ್ಧ ಪರಿಸ್ಥಿತಿಯಲ್ಲಿ ಅದನ್ನು ಸಂಪೂರ್ಣವಾಗಿ ಮುಂದೂಗೆಯುವ ನಿಶ್ಚಿತ ಧೋರಣೆ ವಹಿಸಿರುವ ಮತ್ತು ಕಾಂಗ್ರೆಸಿನೊಳಗೆ ತೀವ್ರಗಾಮಿ ಪಂಥದ ಪ್ರತಿನಿಧಿಯಾಗಿ ಕೆಲಸಮಾಡುತಿರುವ ತಾನೀಗ ಪುನಃ ಅಧ್ಯಕ್ಷನಾಗಿ ಆರಿಸಲ್ಪಡುವ ವಿಷಯದಲ್ಲಿ ತನ್ನ ಹೆಸರನ್ನು ಹಿಂತೆಗೆಯುವುದು ಯುಕ್ತವಲ್ಲ. ತಾನು ತನ್ನ ಉಮೇ-



ಶ್ರೀ। ಪಟ್ಟಾಭಿ ಸೀತಾರಾಮಯ್ಯನವರು.

ದ್ವಾರಿಕೆಯನ್ನು ಹಿಂತೆಗೆಯಬೇಕೆಂದು ಕಾಂಗ್ರೆಸಿನ ಪ್ರತಿನಿಧಿಯಾರೂ ನನ್ನನ್ನು ಕೇಳಿಕೊಂಡಿಲ್ಲ. ಇನ್ನೊಬ್ಬ ಉಮೇದ್ವಾರಿಯಾಗಿ ನಿಲ್ಲಬೇಕೆಂದು ತನ್ನನ್ನು ಆಗ್ರಹದಿಂದ ಕೇಳಿಕೊಂಡವರಿದ್ದಾರೆ. ಆದದರಿಂದ ಈ ವಿಷಯದಲ್ಲಿ ತಾನು ಮಾಡತಕ್ಕದೇನೂ ಇಲ್ಲ. ಜನವರಿ ತಾ ೨೯ರಲ್ಲಿ ನೆರವೇರಲಿರುವ ಬೇರೆ ಬೇರೆ ಪ್ರಾಂತ್ಯಗಳ ಕಾಂಗ್ರೆಸ್ ಪ್ರತಿನಿಧಿಗಳು ವಿಷಯವನ್ನು ನಿರ್ಧರಿಸಬೇಕಾಗಿದೆ. ಆ ನಿರ್ಧಾರವನ್ನೂ ತಾನು ಶಿರಸಾವಹಿಸುವೆನೆಂದು ಶ್ರೀ. ಭೋಸರು ಅಭಿಪ್ರಾಯವಿತ್ತಿರುತ್ತಾರೆ.

ಬರೋಡದಲ್ಲಿ ಗಲಾಟೆ

ಸರ್ದಾರ್ ವಲ್ಲಭಾಯಿ ಪಟೇಲರು ಬರೋಡ ಸಂಸ್ಥಾನದ ಪ್ರಜಾಮಂಡಲದ ಅಧ್ಯಕ್ಷರಿರುವರು. ಅವರು ಇದೇ ತಾ. ೨೧ರಲ್ಲಿ ಬರೋಡಕ್ಕೆ ಹೋದಾಗ ಅವರಿಗೆ ಸ್ವಾಗತವೀಯಲು ಸಾರ್ವಜನಿಕ ಸಭೆಯೊಂದರ ಏರ್ಪಾಟು ನಡೆದಿತ್ತು. ಸರ್ದಾರರು ರೈಲ್ವೆ ಸ್ಟೇಶನಿನಲ್ಲಿ ಬಂದಿಳಿದೊಡನೆಯೇ ಅವರಿಗೆ ಸಂಭ್ರಮದ ಸ್ವಾಗತವೀಯಲ್ಪಟ್ಟು ಅವರನ್ನು ಮೆರವಣಿಗೆಯಿಂದ ಒಯ್ಯಲಾಯಿತು. ಆಗೇನೂ ಗಲಾಟೆ ನಡೆಯಲಿಲ್ಲ. ಆ ಮೇಲೆ ದೊಡ್ಡ ಸಾರ್ವಜನಿಕ ಸಭೆ ನಡೆಯುವ ಅರ್ಧ ತಾಸಿನ ಮೊದಲು, ಮಹಾರಾಷ್ಟ್ರೀಯರಾದ ಡಾಕ್ಟರ್ ಖಾರೆಯವರನ್ನು ಮುಖ್ಯ ಮಂತ್ರಿತ್ವದಿಂದ ತಳ್ಳಿಹಾಕಿದ, ಶ್ರೀ ನರಿಮನರಿಗೆ ನಾಯಕತ್ವ ಸಿಗದಂತೆ ಮಾಡಿದ ಆರೋಪಗಳನ್ನು ಸರ್ದಾರ್ ಪಟೇಲರ ಮೇಲೆ ಹಾಕಿ ಕರಪತ್ರಗಳು ಹಂಚಲ್ಪಟ್ಟವು. ಗಲಾಟೆಮಾಡಿ ಸಭೆ ನಡೆಯದಂತೆ ಮಾಡಬೇಕೆಂದು ಸೂಚಿಸಿ ಕೂಡಾ ಕರಪತ್ರಗಳು ಹಂಚಲ್ಪಟ್ಟಿದ್ದವು. ಆ ಮೇಲೆ ಸಭಾಪೀಠದ ಮೇಲೆ ಎಲ್ಲಾ ಕಡೆಗಳಿಂದಲೂ ಕಲ್ಲೆಸೆಯಲ್ಪಟ್ಟಿತು. ಸ್ವಯಂಸೇವಕರು ಹೊಡೆಯಲ್ಪಟ್ಟರು. ಸಭೆ ನಡೆಸಲು ನಡೆದ ಪ್ರಯತ್ನವೆಲ್ಲಾ ನಿರರ್ಥಕವಾಯಿತು. ಸಭಾಪೀಠದ ಮೇಲೆ ಆಗಾಗ ಕಲ್ಲಿನ ಮಳೆಗರೆಯಲ್ಪಟ್ಟಿತು. ಹೆಚ್ಚೆಚ್ಚಾಗಿ ಸ್ವಯಂಸೇವಕರು ಹೊಡೆಯಲ್ಪಟ್ಟರು. ಸರ್ದಾರ್ ಪಟೇಲರ ಭಾಷಣ ಕೇಳಲು ನೆರೆದ ಸಾವಿರಾರು ಜನರು ಶಾಂತವಾಗಿದ್ದರು. ಕಡೆಗೆ ಸಭೆಯನ್ನು ಮರುದಿನಕ್ಕೆ ಮುಂದುವರಿಸಲಾಯಿತು.

ವರದಕ್ಷಿಣೆ ತೆಗೆದುಹಾಕಲು ಮಸೂದೆ

ಇದೇ ತಾ. ೨೧ರಲ್ಲಿ ಬಿಹಾರ್ ಎಸೆಂಬ್ಲಿ ಸಭೆ ಸೇರಿದಾಗ ಶ್ರೀ ಸುಖಲಾಲ ಸಿಂಘರೆಂಬವರು ಸಮಾಜಘಾತುಕವಾದ ವರದಕ್ಷಿಣಾ ಪದ್ಧತಿಯನ್ನು ತಡೆಗಟ್ಟುವ ಮಸೂದೆಯೊಂದನ್ನು ತಂದು ಅದನ್ನು ಸಿಲೆಕ್ಟ ಕಮಿಟಿಯ ವಿಚಾರಣೆಗೊಪ್ಪಿಸಬೇಕೆಂದರು. ಬಿಹಾರಿನಲ್ಲೆಲ್ಲಾ ಈ ಮಸೂದೆಯ ಕುರಿತು ಅನುಕೂಲಾಭಿಪ್ರಾಯವುಂಟಾಗಿರುವುದು. ಈ ಸಂದರ್ಭದಲ್ಲಿ ಶ್ರೀಮತಿ ಸರಸ್ವತಿದೇವಿ ಶ್ರೀಮತಿ ಶಾರದಾದೇವಿ ಎಂಬ ಕಾಂಗ್ರೆಸ್ ಪಕ್ಷದ ಸ್ತ್ರೀ ಮೆಂಬರರು, ವರದಕ್ಷಿಣಾ ಪದ್ಧತಿಯು ಹಿಂದು ಸಮಾಜಕ್ಕೆ ಕಳಂಕಪ್ರಾಯವಾಗಿದೆ. ಅನೇಕ ತರುಣಿಯರು ಅದಕ್ಕಾಗಿ ಪ್ರಾಣ ಬಲಿದಾನವಿತ್ತಿದ್ದಾರೆ. ಪ್ರೇಮ ವಿವಾಹಕ್ಕೆ ಅದು ದೊಡ್ಡ ಆತಂಕವಾಗಿದೆಯೆಂದು ನಿವೇದಿಸಿದರು.

THE Bombay Life ASSURANCE CO., LTD.

ಸ್ಥಾಪನೆ] [1908

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:

(1) ರಥಬೀದಿ, ಮಂಗಳೂರು.
(2) ಪುತಿಯಾರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 337. ಮೌಂಟ ರೋಡು, ಮದ್ರಾಸು (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ, (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, ಬೊಂಬೈ (ಫೋ. ನಂ. 26314)

ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು.

(6) ವಟ್ಟಿಪಾಳಂ, ದ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂಕೂರು

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)

ರಿಜಿಸ್ಟ್ರಿಯಾದ ಆಫೀಸು: ಉಡುಪಿ.

ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.

ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	ರೂ.	1,40,08,725
ಪ್ರೀಮಿಯಂ ಆದಾಯ ಮಿಕ್ಕಿದುದು	,,	30,00,000
ಒಟ್ಟು ಮೂಲ ಮಿಕ್ಕಿದುದು	,,	1,00,00,000
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	50,00,000

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ ಅತ್ಯಧಿಕ ಪ್ರತಿಫಲ.

ಹೆಚ್ಚಿನ ವಿವರಗಳಿಗಾಗಿ ... ನಮ್ಮ ರಿಜಿಸ್ಟ್ರ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಮದಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ವಿರ್ವೃತ್ತ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮೊಫಿಯಾಗಿ ಕಳುಹಿಸುವೆವು. ಒಂದು ಆರ್ಡರ್ ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ.

ಹೊಸ ವರುಷದ ವಿಚಿತ್ರ ಉತ್ಸವಗಳು

ಜಗತ್ತಿನ ವಿವಿಧ ಭಾಗಗಳಲ್ಲಿಯ ಆಚರಣೆಗಳು.

(ಎಸ್. ಎಲ್. ಸುಬ್ರಹ್ಮಣ್ಯಂ, ಹರಿಹರ.)

ಪ್ರಪಂಚದ ಎಲ್ಲಾ ಜಾತಿಗಳೂ ವರ್ಷಾರಂಭದ ದಿನವನ್ನು ಆಚರಿಸುತ್ತವೆ. ಮಾನವನು ತನ್ನ ಅನುಕೂಲಕ್ಕಾಗಿ ವರ್ಷವನ್ನು ತಿಂಗಳು, ವಾರ, ದಿನವೆಂದು ಗೊತ್ತುಮಾಡಿಕೊಂಡಿದ್ದರೂ, 365 ದಿನಗಳ ಈ ವರ್ಷವು ಅವನ ದೃಷ್ಟಿಯಲ್ಲಿ ಪ್ರಕೃತಿ ದೇವಿಯ ಅನಂತತೆಯ ನಿರ್ದೇಶವೇ ಆಗಿದೆ. ಈ ಕಾರಣದಿಂದಲೇ ಮನುಷ್ಯನು ತನ್ನ ಮನಸ್ಸಿನಲ್ಲಿ ನೂತನ ಯುಗದ ಆನಂದವನ್ನು ಅನುಭವಿಸುತ್ತಾನೆ. ಗತವರ್ಷದ ಕೊನೆ ದಿನದಲ್ಲಿ, ಕಳೆದು ಹೋದ ಸುಖ ದುಃಖ, ಹರ್ಷ, ವಿಷಾದ ಇವುಗಳ ಮೇಲೆ ಮುಸುಕು ಬೀಳುವುದು.

ಹೊಸ ವರ್ಷವು ಎಲ್ಲರಿಗೂ ನವೋಲ್ಲಾಸವನ್ನುಂಟುಮಾಡುವುದು. ಭಾರತದಲ್ಲಿ ನಾವು ಈ ಉತ್ಸವವು ಬೇರೆಬೇರೆಯವರಿಂದ ಬೇರೆ ಬೇರೆ ರೀತಿ ಆಚರಿಸಲ್ಪಡುತ್ತಿರುವುದನ್ನು ನೋಡುತ್ತೇವೆ. ವರ್ತಕರು ಹೊಸಬಟ್ಟೆಗಳನ್ನುಡುವರು. ಅಂಗಡಿಗಳನ್ನು ಶೃಂಗರಿಸಿ ಪೂಜಿಸುವರು. ಅನೇಕ ಕಡೆ ವಿತರಣಾದಿಗಳೂ, ಗಾನ ನೃತ್ಯವೂ ನಡೆಯುವುದುಂಟು. ಪರ್ಶಿಯನರು ತಮ್ಮ ಅಗ್ನಿಕುಂಡಕ್ಕೆ ಚಂದನದ ಕಟ್ಟಿಗೆಯನ್ನು ಹಾಕುವರು.

ಸಭ್ಯರೆನಿಸಿಕೊಂಡಿರುವ ಪಾಶ್ಚಾತ್ಯರ ದೃಷ್ಟಿಯಲ್ಲಿ ಭಾರತವು ಅಶಿಕ್ಷಿತ ದೇಶ. ಅಂಧ ಶ್ರದ್ಧೆಯ ದೇಶ. ಆದರೆ ಈ ರೀತಿ ತಮ್ಮನ್ನು ತಾವೇ ಸುಶಿಕ್ಷಿತರೂ, ಸಭ್ಯರೂ ಎಂದು ಕರೆದುಕೊಳ್ಳುವ ಈ ಜನರಲ್ಲಿ ನಾವು ನೋಡುವುದಾದರೂ ಏನು? ಉತ್ಸವದಿಂದ ಆನಂದಿತರಾಗುವುದೂ, ಉತ್ಸವದ ರೀತಿ ನೀತಿಗಳೂ ಏನೇ ಇರಲಿ, ಸುರಾಪಾನದ ವ್ಯವಸ್ಥೆಯಂತೂ ಕೇವಲ ಅವಶ್ಯಕವಾದ ವಸ್ತುವಾಗಿರುತ್ತದೆ. ಈ ರೀತಿಯಾಗಿರುವುದೇ ಉತ್ತೇಜಕ ಪೇಯಪದಾರ್ಥವಿಲ್ಲದಿದ್ದರೇ, ನವ ವರ್ಷದ ರುಚಿಯೇ ಇಲ್ಲವಂತೆ. ಕ್ಷೀರ ಸಪ್ಪೆಯಂತೆ. ಲಂಡನ್, ಪ್ಯಾರಿಸ್ ಆದಿ ದೊಡ್ಡ ದೊಡ್ಡ ನಗರಗಳಲ್ಲಿ (New-years Eve) ನವ ವರ್ಷದ ಸಂಧ್ಯಾ ಸಮಯದಲ್ಲಿ ಆಮೋದ ಪ್ರಮೋದಗಳಿಗಾಗಿ ಧನಿಕರು ಸುಪ್ರಸಿದ್ಧ ಭೋಜನಾಲಯಗಳಲ್ಲಿ ಮೊದಲೇ ತಮ್ಮ "ಟೇಬಲ್"ಗಳನ್ನು ನಿಗದಿ ಇರಿಸಿರುತ್ತಾರೆ. ತಮ್ಮ ಬಂಧು ಬಾಂಧವರೊಡನೆ ವಿಸ್ಕಿ ಕುಡಿದು ಹೊಸ ವರ್ಷವನ್ನು ಸ್ವಾಗತಿಸುತ್ತಾರೆ. ಹಣದ ಅಭಾವದಿಂದ ಈ ರೀತಿ ಮಾಡಲಾಗದವರು ತಮ್ಮ ಜೇಬಿನಲ್ಲಿ ಬಟ್ಟಲುಗಳನ್ನು ಇಟ್ಟು ಕೊಂಡು ಲಂಡನ್ನಿನ ಸೆಂಟ್ ಪೌಲ್ ಚರ್ಚಿನಲ್ಲಾಗಲೀ, ಪ್ಯಾರಿಸ್ಸಿನ "ಈಫಲ್ ಟವರ್" ಮುಂಭಾಗದಲ್ಲಾಗಲೀ ಜಾಗ ಮಾಡಿಕೊಳ್ಳಲು ಓಡುತ್ತಿರುವರು. ಮಧ್ಯಾಹ್ನ, ರಾತ್ರಿಯಲ್ಲಿ, ಹೊಸವರ್ಷದ ಘೋಷಣೆಯುಂಡಲೇ ಸಾವಿರಾರು ಸ್ತ್ರೀ ಪುರುಷರು ಸೇರಿ ಪಾನಮಾಡಿ ಗಾನಮಾಡುತ್ತಿರುವರು. ಇದರಲ್ಲಿ ಸೇರಲಾಗದವರು ಮನೆಯಲ್ಲೇ ಸುರಾಪಾನಮಾಡಿ ಹೊಸ ವರ್ಷವನ್ನು ಸ್ವಾಗತಿಸುವರು. ಈ ರೀತಿ ಯಾವುದಾದರೂ ಉತ್ತೇಜಕ ಪೇಯವನ್ನು ಕುಡಿದೇ ತಮ್ಮ ನಡುಗುತ್ತಿರುವ ಶರೀರದಲ್ಲಿ ಸಂಚಾಲನೆಯನ್ನುಂಟುಮಾಡುವ ಈ ಕೃತ್ರಿಮ ರೀತಿಯು ಬಹಳ ಶ್ರೇಷ್ಠವೆಂದು ಅವರ ಭಾವನೆ

ಪಾಶ್ಚಾತ್ಯರು ಗಂಟಲೊಡೆಯುವಂತೆ ಭಾರತೀಯರನ್ನು ಅಲ್ಲಗಳೆಯುವರು. ಆದರೆ ಈ ರೀತಿ ಅಂಧ ವಿಶ್ವಾಸ ಮತ್ತು ಕುಸಂಸ್ಕಾರದ ಮಡುವಿನಲ್ಲಿ ಬಿದ್ದಿರುವರು. ಉದಾಹರಣೆನೋಡಿ, ಯೂರೋಪದಲ್ಲಿ ಹೊಸ ವರ್ಷದದಿನ ಮನೆಗೆ ಯಾರಾದರೂ ಆಗಂತುಕರು ಬಂದರೆ ಆ ವರ್ಷವೆಲ್ಲಾ ಆ ಮನೆಯವರಿಗೆ ಬಹಳ ಶ್ರೇಯಸ್ಸಂತೆ! ಅಷ್ಟೇ ಅಲ್ಲ. ಬಂದ ವ್ಯಕ್ತಿಯು ಕೆಂಪಗಿದ್ದರೆ ಸೌಭಾಗ್ಯವೂ ಕಪ್ಪಗಿದ್ದರೆ ದೌರ್ಭಾಗ್ಯವೂ ಉಂಟಾಗುವುದಂತೆ. ಸ್ತ್ರೀಯರು ನಿಮಂತ್ರಣವಿಲ್ಲದೆ ಆ ದಿನ ಇತರರ ಮನೆಗಳಿಗೆ ಹೋಗುವುದಿಲ್ಲವಂತೆ. ಆ ದಿನ ಎಲ್ಲರಿಗಿಂತ ಮೊದಲು ಬಂದ ವ್ಯಕ್ತಿಯನ್ನು ಬರಿಗೈಯಲ್ಲಿ ಕಳಿಸುವುದಿಲ್ಲ ಏನಾದರೂ ಉಪಹಾರವನ್ನವರು ತೆಗೆದುಕೊಂಡು ಹೋಗಬೇಕಾಗುತ್ತದೆ

ಬಡವರ ಮಕ್ಕಳು ಹೊಸವರ್ಷದ ಗೀತೆಯನ್ನು ಹಾಡುತ್ತ ಮನೆ ಮನೆಗೂ ಹೋಗಿ ರೊಟ್ಟಿ ಮಜ್ಜಿಗೆಗಳನ್ನು ಬೇಡಿ ತೆಗೆದುಕೊಂಡು ಊಟಮಾಡುವರು. ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಪ್ರತ್ಯೇಕ ಶ್ರೇಣಿಯ ಸಭೆಗಳು ನಡೆಯುತ್ತವೆ. ಇವುಗಳೆಲ್ಲವೂ ಪ್ರತ್ಯೇಕ ರೀತಿಯಲ್ಲಿ ಹೊಸ ವರುಷದ ಉತ್ಸಾಹವನ್ನು ಅನುಷ್ಠಾನದಲ್ಲಿ ತಂದಿರುವವು ಅಲ್ಲದೆ ಕೂಲಿಯವರು, ಮೇಸ್ತ್ರಿಗಳು, ಸೈನಿಕರು, ನಾವಿಕರು ಆದಿಯಾಗಿ ಎಲ್ಲರೂ ತಮ್ಮ ಉದ್ಯೋಗದ ಚಿಹ್ನೆಗಳನ್ನು ಹಿಡಿದು ಕೊಂಡು ವಿಚಿತ್ರವೂ ವಿಲಕ್ಷಣವೂ ಆದ ವೇಷಭೂಷಣಗಳಿಂದ ಸಜ್ಜಿತರಾಗಿ ಹೊರ ಹೊರಡುವರು. ಅವರೊಡನೆ ಒಬ್ಬನು ಗಂಟೆಯನ್ನು ಬಾರಿಸುತ್ತ ಹೋಗುವನು.

ದಕ್ಷಿಣ ರಷ್ಯದಲ್ಲಿನ ರೈತನ ಮನೆಯಲ್ಲಿ ಉತ್ಸವದಲ್ಲಿ ಆಶ್ಚರ್ಯಕರವಾದ ಪದ್ಧತಿ ಇದೆ. ಭೋಜನಕ್ಕ ಮುಂಚೆ 'ಡಿನ್ನರ್ ಟೇಬಲ್' ಮೇಲೆ ಪದಾರ್ಥಗಳನ್ನಿಟ್ಟು ಮೇಲೆ ಗೋಧಿಹಿಟ್ಟಿನ ತಲೆಗಳು ಸ್ಕೂಪಗಳ ಆಕಾರದಲ್ಲಿ ಇಡಲ್ಪಡುತ್ತವೆ. ಮನೆಯವರೆಲ್ಲ ಬಂದು ಆಸನಗಳಲ್ಲಿ ಕುಳಿತ ಮೇಲೆ ಯಜಮಾನನು ಎದ್ದು ಒಂದುಕಡೆ ಅವಿತುಕೊಳ್ಳುವನು. ಯಾರಾದರೂ ತನ್ನನ್ನು ನೋಡುವರೋ ಇಲ್ಲವೋ ಎಂದು ಗಟ್ಟಿಯಾಗಿ ಕೂಗಿಕೊಳ್ಳುವನು. ಯಾರಾದರೂ ನೋಡಲಿ, ಬಿಡಲಿ, ಅಂತು ಎಲ್ಲರೂ ಒಟ್ಟಿಗೆ 'ನಾವು ನಿನ್ನನ್ನು ನೋಡಲಾರೆವು' ಎಂದೇ ಕೂಗಿಕೊಳ್ಳುವರು. ಆಗ ಅವನು ಹರ್ಷಿತನಾಗಿ ಹೊರಗೆ ಬಂದು ಆಸನದಲ್ಲಿ ಕುಳಿತು ಊಟಮಾಡುವನು. ಇದರ ನಂಬಿಕೆಯೇನೆಂದರೆ, ಈ ರೀತಿ ಮಾಡುವುದರಿಂದ ಮತ್ತು ಬದಲಾವಣೆಯಲ್ಲಿ ಅವನ ಕೋಟೆ

ನಮ್ಮ ಕರ್ತವ್ಯ.

ಬಡವನಿರಲಿ, ಶ್ರೀಮಂತನಿರಲಿ, ವಿವಾಹಿತನಾಗಿರಲಿ, ಅವಿವಾಹಿತನಾಗಿರಲಿ,
ಆತನನ್ನು ಆಶ್ರಯಿಸಿಕೊಂಡಿರುವವರ್‍ಯಾರಾದರೂ ಇದ್ದೇ ಇರುವರು.
ತನಗೆಲ್ಲಾದರೂ ಮರಣವುಂಟಾದರೆ ಅವರ ಬಾಳು ನಿರಾತಂಕವಾಗಿ ಸಾಗುವಂತೆ ವ್ಯವಸ್ಥೆ ಮಾಡಿಡುವುದು
ಪ್ರತಿಯೊಬ್ಬ ಯೌವನಸ್ಥನ ಕರ್ತವ್ಯ.

ಈ ಕರ್ತವ್ಯವನ್ನು ನೆರವೇರಿಸುವುದರಲ್ಲಿ 'ಓರಿಯಂಟಲ್' ನಿಮಗೆ ನೆರವಾಗಿ ಬರುವುದು.

ಏಕೆಂದರೆ ಕಳೆದ 64 ವರುಷಗಳಿಂದಲೂ ಸಾವಿರಾರು ಸಂಸಾರಗಳ ಸಂಪಾದನೆಯ ಕೈಗಳನ್ನು ಮೃತ್ಯುವು ಮುಕ್ತಗೊಳಿಸಿದಾಗ ಆ ಸಂಸಾರಗಳ ಅಂತಹ ಆಪತ್ಕಾಲದಲ್ಲಿ ಸಹಾಯವನ್ನಿತ್ತುದು
ಓರಿಯಂಟಲ್ ಪೊಲಿಸಿಗಳೇ!

ಶೀಘ್ರದಲ್ಲಾಗಲೀ ವಿಳಂಬವಾಗಿಯಾಗಲೀ ಪ್ರತಿಯೊಬ್ಬನೂ ವಿಮೆ ಮಾಡಲಿಕ್ಕೆ ಅನರ್ಹನಾಗುವ ಅವಸ್ಥೆಗೆ ಬರುತ್ತಾನೆ.
ಆದುದರಿಂದ ವಿಮ್ಮ
ಕರ್ತವ್ಯವನ್ನು ನೆರವೇರಿಸುವುದರಲ್ಲಿ ತಡಮಾಡಬೇಡಿರಿ.

'ಓರಿಯಂಟಲ್'ನಲ್ಲಿ ನಿಮ್ಮ ಜೀವವಿಮೆ ಮಾಡಿ ನಿಮ್ಮ ಆಶ್ರಿತರ ಭವಿಷ್ಯವನ್ನು ನಿಶ್ಚಿತಗೊಳಿಸಿಡಿರಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತ ವರ್ಷ 1874] ಭಾರತದಲ್ಲೆಲ್ಲಾ ನಮ್ಮ ಶಾಖೆಗಳೂ ಮತ್ತು ಪ್ರತಿನಿಧಿಗಳೂ ಇದ್ದಾರೆ. [ಹೆಡ್ ಆಫೀಸು—ಬೊಂಬಾಯಿ.
ಹೆಚ್ಚಿನ ಮಾಹಿತಿ ಬಗ್ಗೆ ಇವರಿಗೆ ಬರೆದು ತಿಳಿದುಕೊಳ್ಳಿ.

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.
ಅಥವಾ
ದಿ ಇನ್ಸ್‌ಪೆಕ್ಟರ್, ಓರಿಯಂಟಲ್ ಲೈಫ್ ಆಫೀಸು, ಮೈನ್‌ರೋಡ್, ಮಡಿಕೇರಿ, (ಕೊಡಗು)

ದಲ್ಲಿ ಒಬ್ಬನು ಹೋದರೂ ಕಾಣಿಸದಷ್ಟು ಬೆಳೆಯಾಗುವದಂತೆ.

ಪಶ್ಚಿಮದ ಗ್ರಾಮಗಳಲ್ಲಿ ಬಾಲಿಕೆಯರು ನೀರುತರಲು ಬಾವಿಗಳಿಗೆ ಹೋದಾಗ ಯುವಕರು ಅವರನ್ನು ನೀರು ತುಂಬಲು ಅವಕಾಶಕೊಡುವುದಿಲ್ಲ. ಆಗ ಯುವತಿಯರು ಅನುನಯ ವಿನಯಮಾಡಿಕೊಳ್ಳುವರು. ಆದರೂ ಅವರು ಬಿಡುವುದಿಲ್ಲ ಏನಾದರೂ ತಿಂಡಿಯನ್ನು ಕೊಟ್ಟವಿನಹ ಅಥವಾ ಚುಂಬಿಸದ ಹೊರತು ಹುಡುಗಿಯರಿಗೆ ಅವಕಾಶವೇ ದೊರೆಯುವದಿಲ್ಲ.

ಹಾಲೆಂಡಿನಲ್ಲಿ ಭಾರತದ ಪದ್ಧತಿಯಂತೆಯೇ ಹೊಸವರುಷದ ಶುಭಾಶಯಗಳನ್ನು ಕೋರುವವರು. ಜರ್ಮನಿಯಲ್ಲಿ ಈ ಸಮಯದಲ್ಲಿ ಮದ್ಯಪಾನಮಾಡಿ ನವಯುಗವು ಶುಭದಾಯಕವಾಗಲಿ ಎಂದು ಘಟ್ಟಿಯಾಗಿ ಉಚ್ಚರಿಸುವರು

ಭೂತ ಪ್ರೇತಗಳನ್ನು ಧೂಪ ದೀಪಗಳಿಂದ ತೃಪ್ತಿಪಡಿಸಿಕೊಳ್ಳುವುದೂ ಸಹ ಪಾಶ್ಚಾತ್ಯ ಸಭ್ಯತೆಯ ವೈಶಿಷ್ಟ್ಯ. ವಾಸದ ಮನೆ, ಗೋಶಾಲೆ, ಮತ್ತು ಸಾಮಾಜಿಕ ಮನೆಯ ಸುತ್ತಲೂ ಪವಿತ್ರ ಜಲ(Holy-water) ಮತ್ತು ಧೂಪವನ್ನು ಕೈಯಲ್ಲಿ ತೆಗೆದುಕೊಂಡು ಪ್ರದಕ್ಷಿಣೆ ಮಾಡುವರು. ಇದರಿಂದ ಎಲ್ಲ ವಿಧವಾದ ಅಶರೀರ ರಹಿತ ಪ್ರಾಣಗಳ ಕೋಪವು ಶಾಂತವಾಗುವುದಂತೆ.

ಚೀನ, ಟಿಬೆಟ್ಟುಗಳಲ್ಲಿ ಹೊಸವರ್ಷವನ್ನು ರಾತ್ರಿಯಲ್ಲಿ ಸ್ವಾಗತಿಸುವರು—ಪಿಶಾಚನೃತ್ಯದ ಮೂಲಕ ನಾನಾ ರೀತಿಯ ವೇಷಗಳನ್ನು ಹಾಕಿಕೊಂಡು ಲಮ್ಮ (ಪುರೋಹಿತರು) ಅಸ್ತ್ರಶಸ್ತ್ರಗಳಿಂದ ಸಜ್ಜಿತರಾಗಿ ಯುದ್ಧವನ್ನು ಅನುಕರಣಮಾಡುವಂತೆ ನೃತ್ಯಮಾಡುವರು. ಇದರಿಂದ ಭೂತಪ್ರೇತಗಳು ಹೆದರಿ ಏನೂ ತೊಂದರೆ ಮಾಡುವುದಿಲ್ಲವಂತೆ ಹೊಸ ವರ್ಷವು ಬರುವುದಕ್ಕೆ ಮೊದಲೇ ಎಲ್ಲರೂ ಪರದೆಗಳನ್ನು ಸಿದ್ಧಪಡಿಸಿಕೊಳ್ಳುವರು. ಉತ್ಕೃಷ್ಟವಾದ ಬಾಣ ಬಿರುಸುಗಳಿಗೆ ಚೀಣವು ಪ್ರಸಿದ್ಧಿಯಾಗಿದೆ ಆದುದರಿಂದ ಎಲ್ಲ ಉತ್ಸವಗಳಲ್ಲಿಯೂ ಇದನ್ನು ಬಿಟ್ಟುಬಿಟ್ಟು, ರಾತ್ರಿಯಲ್ಲಿ ಕಾಗದದ ಲಾಟೀನುಗಳನ್ನು ಉಪಯೋಗಿಸುವರು. ನೃತ್ಯ ನಡೆಯುತ್ತಿರುವಾಗ ಪಾನ ಭೋಜನಗಳ ಪ್ರಬಂಧವಿರುತ್ತದೆ.

ಆದರೆ ಚೀನದಲ್ಲಿ ಹೊಸ ವರುಷ ದಿನದ ವಿಶೇಷವೇನೆಂದರೆ—ಸಾಲವನ್ನೆಲ್ಲಾ ಸಂಪೂರ್ಣವಾಗಿ ತೀರಿಸಿಬಿಡುವುದು. ಆ ದಿನ ಎಲ್ಲ ಋಣಗಳನ್ನೂ ಪರಿಶೋಧಿಸಿ. ಅಸಮರ್ಥರಾದವರನ್ನು ಬಿಟ್ಟುಬಿಡುವರು ಆ ರಾತ್ರಿ ಕಾಗದದ ದೀಪಗಳನ್ನು ಹಿಡಿದು ತಿರುಗುತ್ತಿರುವ ನರನಾರಿಯರ ಶೋಭೆಯು ಇಂದ್ರ ಧನುಸ್ಸಿನ ಸಮಾನವಿರುತ್ತದೆ.

ತೋರಣಗಳನ್ನು ಕಟ್ಟುವುದನ್ನು ಇವರರಿಯರು ಮನೆ ದೇವರುಗಳನ್ನು ಮನೆಯಲ್ಲಿ ಅಲ್ಲಲ್ಲೇ ಇಡುವರು ಕಾಗದದಲ್ಲಿ ವಿಚಿತ್ರವಾದ ಮೂರ್ತಿಗಳನ್ನು ಮಾಡುವರು ಈ ಮೂರ್ತಿಗಳು ಅವರನ್ನು ಎಲ್ಲ ವಿಪತ್ತಿನಿಂದ ದೂರಮಾಡುವುವಂತೆ! ಮೂರ್ತಿಯಲ್ಲಿ ವಿಶ್ವಾಸವಿಲ್ಲದವರು "ಸರ್ವಶಕ್ತವಾದ ದೇವರು ಇಲ್ಲಿರುವರು. ಎಲ್ಲ ಪ್ರೇತಗಳೂ ದೂರವಾಗಲಿ" ಎಂದು ಬರೆದು ನೇತುಹಾಕುವರು.

ಆಧುನಿಕ ಶಿಕ್ಷಣಹೊಂದಿದ ಚೀನೀಯರು ಇಂಗ್ಲೆಂಡಿನಂತಹ ಹೊಸ ವರ್ಷದ ಕಾರ್ಡುಗಳನ್ನು ಬಾಗಿಲಲ್ಲಿ ನೇತುಹಾಕುವರು, ಮಾರನೇ ದಿನ ದೇವರ ಪೂಜೆಯಾಗುವುದು. ನಂತರ ಸ್ಮಶಾನಕ್ಕೆ ಹೋಗಿ ಹಿರಿಯರ ಸ್ಮರಣೆಯನ್ನು ಮಾಡುವರು.

ಜಪಾನಿನ ಮಾತೂ, ಹಳೆ ಪೊರಕೆಗಳೂ, ಹಗ್ಗಗಳೂ ಅಲಂಕರಿಸಲ್ಪಡುವುವು ಇವುಗಳನ್ನು ಅಂಗಡಿಯಲ್ಲಿ ಮಾರುವರಂತೆ. ಜಪಾನಿನವರ ಧರ್ಮಾನುಷ್ಠಾನದ ಸಾಮಗ್ರಿಯಂತೆ ಈ ಹಗ್ಗ. ಈ ಹಗ್ಗವನ್ನು ಹಿಡಿದು, ಮಂದಿರಗಳನ್ನು ಪ್ರದಕ್ಷಿಣೆಮಾಡಿ ಮನೆಗೆ ಹೋಗುವರು. ಪೊರಕೆಗಳನ್ನು ಮನೆಯ ಹೊರಗಿಡುವರು. ಎಲ್ಲ ಬಗೆಯ ದುರಭ್ಯಾಸಗಳನ್ನು ಆ ಪೊರಕೆಯ ಮೂಲಕ ಗುಡಿಸಿ ಓಡಿಸುವುದೇ ಇದರ ಗುಟ್ಟಂತೆ. ಅದರ ನಿದರ್ಶನ ಸ್ವರೂಪವೇ ಈ ಬರಲಂತೆ!

ವಾಚಕರೇ,

ನಮ್ಮ ಉಗಾದಿ ಸಮಯದಲ್ಲಿ ಬೇವು ಬೆಲ್ಲ ತಿಂದು ಜೀವನದ ಸುಖ ದುಃಖಗಳನ್ನು ಒಂದೇ ಸಮನಾಗಿ ಕಾಣುವಂತೆ ಆಚರಿಸಲ್ಪಡುವ ನಮ್ಮ ರೀತಿಯೇ ಇದೆಲ್ಲಕ್ಕಿಂತ ಉತ್ತಮವಲ್ಲವೇ ಹೇಳಿ

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಮಂಗಳೂರು ಡಿ. ಮು. ಕೋರ್ಟು

O. S. 209/1926.

ಕಾರ್ಕಳ ಡಿ. ಮು. ಕೋರ್ಟು

R. E. P. 717/1938.

ಲಿಖಿತದ ಮತಾಯಸ್ ವಾದಿಯ ಟ್ರಾನ್ಸ್‌ಫರಿದಾರ ಅರ್ಜಿದಾರ

ಮತ್ತು

ಪ್ರತಿವಾದಿ ಸಬೆಸ್ತ್ಯನ ರುದ್ರಿಕ್ಸ್ ಫ್ರಾಂಕಿವಾರ್ನ ದಾರ್ನ, ಕೆಲಾರದ-ತಾಮಸ ಬ್ಯಾಸ ಸಹ ಎದ್ರುರು

ಇವರೊಳಗೆ

ಎದ್ರುರು—

4. ಜಿಸಿಡಾ ರುದ್ರಿಕ್ಸ, 5. ಲಿಲ್ಲಿ ರುದ್ರಿಕ್ಸ, 7. ಲೂಸಿ ರುದ್ರಿಕ್ಸ. ಪ್ರತಿವಾದಿ ಸಬೆಸ್ತ್ಯನ್ ರುದ್ರಿಕ್ಸರ ಮಕ್ಕಳು. ಕಾರ್ಕಳ ತಾಲ್ಲೂಕು ಪಳ್ಳಿ ಗ್ರಾಮದ ಮೂಡಬಿದ್ರಿ ಪೇಟೆಯಲ್ಲಿರುವವರು.

ಇವರಿಗೆ

ಸದ್ರಿ ಆರ ವ್ಯವಹಾರದಲ್ಲಿ ನೀವು ಕೂಡಾ ಎದ್ರುರ ಬಾಬ್ತು ಸ್ಥಿರಾಸ್ತಿಗಳನ್ನು ವಿಲಂಗೆ ಅಪೇಕ್ಷಿಸಿ ಆ ಕುರಿತು ವಿಲಂ ಇಸ್ತಿಹಾರು ಡ್ರೇಫ್ಟ್ ಸದ್ರಿ ವಿಲಂ ಸಮಯ ಬಿಡ್ ಮಾಡುವರೆ ಪರ್ಮಿಶನ್ ವ ಬಿಡ್ ಮಾಡಿದ ಹಣವು ಡಿಕ್ರಿ ಬಾಕಿಯಲ್ಲಿ ಮುಜರೆಕೊಡಬೇಕಾಗಿ ಸದ್ರಿ ಕೇಳಿ ಅರ್ಜಿ ಕೊಡಲ್ಪಟ್ಟಿರುವ ಪ್ರಯುಕ್ತ ಸದ್ರಿ ವಿಲಂ ಇಸ್ತಿಹಾರಿನ ಶರತ್ತುಗಳ ನಕ್ಕಲು ಬಿಡ ಪರ್ಮಿಶನ ವ ಸೆಟ್ ಒಫ್ ಕೇಳಿ ಬರಕೊಂಡ ಅರ್ಜಿಯ ಕುರಿತು ನಿಮಗೇನಾದರೂ ಆಕ್ಷೇಪ ಇದ್ದಲ್ಲಿ ನೀವು ಸದ್ರಿ ಕೋರ್ಟಿನ ಮುಂದೆ ಬರುವ ತಾ. 6-2-1939 ನೇ ದಿನ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ಸದ್ರಿ ಸಂಗತಿಗಳು ಏಕಪಕ್ಷವಾಗಿ ತೀರ್ಮಾನಿಸಲ್ಪಡುವವು ಎಂಬುದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿದೆ

P. Ramachandra Rao.
ಅರ್ಜಿದಾರನ ಕಡೆ ವಕೀಲ

ಕಾರ್ಕಳ ತಾ. 9-1 1939.

Degrees. Books Medicines.

Etc. H L. M S. H M. B H. M D etc Free Homeo-Ayur-Unani-Naturo degrees by post also—Practitioners also get soon Homeo Materiamedica, Rs. 5, Homeo-Practice book Rs. 4. Insanity Cure Pills Rs. 10. Enclose 2 annas stamps —

Principal, Indian Homeopathic Institute and Society (Govt Regd)
P O MAHUVA, (Kathiawar Dt. India)

ದಿವಂಗತ ಪಲ್ಲಾರು ಅಪ್ಪು ದೂಮನವರು.

ಇವರು ಮುಂಬೈಯಲ್ಲಿ ಕಲೆದೋರಿದ ಬಿಲ್ಲವರ ಎಸೋಸಿಯೇಶನ್, ಬಾರ್ಕೂರು ಬಿಲ್ಲವರ ಚಾರಿಟಿ ಸಂಘ, ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಮೆಮೋರಿಯಲ್ ಸಂಘ, ಇವುಗಳಲ್ಲಿ ಹೆಚ್ಚಿನ ಭಾಗವಹಿಸಿ ಕೆಲಸವನ್ನು ಮಾಡುತ್ತಿದ್ದರು. ಮಂಗಳೂರು ಶ್ರೀ ಗೋಕರ್ಣನಾಥ ದೇವಸ್ಥಾನಕ್ಕೂ ತುಂಬಾ ಸಹಾಯ ಮಾಡುತ್ತಿದ್ದಾರೆ.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

Sc. No 130/1937 R. E P. No 651/1938
R. E. A 1166/1938

ಶ್ರೀನಿವಾಸ ಪ್ರಭು, ಮಠ, ಅರ್ಜಿದಾರ

ಮಟ್ಟೆ ಪಾಂಡುರಂಗ ಪ್ರಭು, ಪ್ರತಿವಾದಿ, ಎದ್ರಿ,

ಎದ್ರಿ ಮಟ್ಟೆ ಪಾಂಡುರಂಗ ಪ್ರಭು, ಮಟ್ಟೆ ಮಾಧವ ಪ್ರಭುಗಳ ಮಗ, ಉಡುಪಿ ತಾಲ್ಲೂಕು ಪಡುಬಿದ್ರೆ ಮಾಗಣೆ ನಡ್ಸಾಲು ಗ್ರಾಮದಲ್ಲಿರುವವನು—

ಅರ್ಜಿದಾರನು ಎದ್ರಿಯ ಮೇಲೆ Sc No. 130/1937ನೇ ಡಿಕ್ರಿ ಕುರಿತು ಇಟ್ಟಿದ ಎದ್ರಿ ಅಮಲ್‌ಜಾರಿಯಲ್ಲಿ ಎದ್ರಿಯ ಸ್ಥಿರಾಸ್ತಿ ವಿಲಂ ವಿನ ಕುರಿತು ಬರೆಕ್ಕದ ವಿಲಂ ಇಸ್ತಿಹಾರು ಡ್ರೇಫ್ಟ್ ಮಂಜೂರಿ ಬಗ್ಗೆ ನೋಟೀಸ್ ಮಾಡಿದ ಸದ್ರಿ ಆಸ್ತಿ ವಿಲಂ ಸಮಯ ಅರ್ಜಿದಾರನ ಯಾ ಆತನ ಕಡೆ ವಕೀಲರಿಗೆ ಬಿಡ್ ಮಾಡುವದೆ ವ ವಿಲಮಿಗೆ ಸಿತ್ತ ಬಿಡೇಮ ಡಿಕ್ರಿ ಬಾಕಿಯಲ್ಲಿ set off ಮಾಡುವರ ಪರ್ಮಿಶನ ಕೇಳಿ ಬರೆಕೊಟ್ಟ ಅರ್ಜಿಯ ನೋಟೀಸ್ ಮ್ಯಾದ ತಾ. 13 2-1939ಕ್ಕೆ ಇಟ್ಟಿರುವದರಿಂದ ಆ ದಿವಸ ಹಗಲು 10ಗಂಟೆಗೆ ಎದ್ರಿಯು ಈ ಕೋರ್ಟು ಮುಂದ ಸತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಆಕ್ಷೇಪಯಿದ್ದ ಹೇಳತಕ್ಕದ್ದು.

ಕಾರ್ಕಳ ತಾ. 15-1-'39 } M Mukunda Kamath, ಅರ್ಜಿದಾರನ ಕಡೆ ವಕೀಲ್.

ನೋಟೀಸು

ಉಡುಪಿ ತಾಲ್ಲೂಕು ಸಾಂತೂರು ಗ್ರಾಮದ ಅಲಂಬೆ ಎಂಬಲ್ಲಿರುವ ಮಾಡು ಪ್ರಭುಗಳ ಮನೆತನದ ಮಗ ಮ್ಯಾನರ ರಾಘವೇಂದ್ರ ಪ್ರಭುವಿನ ಗಾರ್ಡಿಯಾನ ಜನನಿ ಶೇಷಿ ಹೆಂಗಸು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದ್ರ—

ಮ್ಯಾನರನಾಗಿರುವ ಸದ್ರಿ ರಾಘವೇಂದ್ರ ಪ್ರಭುವನ್ನು ದುರ್ಬೋಧಿಸಿ ಸಾಂತೂರು ಗ್ರಾಮದ ಹೊಸ ಒಕ್ಲು ಕೊರಗನ ಯಾನೆ ಮುತ್ತು ಸೆಟ್ಟಿ ಮಗಳು ಪದ್ದುಸೆಟ್ಟಿ ಹೆಸರಿಗೆ ಅವಳ ಗಂಡ ದಾಸುಸೆಟ್ಟಿ ಕೊಡಿಸಿ ಸದ್ರಿ ರಾಘವೇಂದ್ರ ಪ್ರಭುವಿನಿಂದ ಏನೂ ಪ್ರತಿಫಲಕೊಡದೆ ರೂಪಾಯಿ 100/ ಕ್ಕೆ ಆತನಿಗೆ ಪ್ರಾಯ ಬಂದ ನಂತ್ರ ಬೇಕಾದ ತಾರೀಕು ಹಾಕುವ ಬಗ್ಗೆ ಪ್ರಕೃತ ತಾರೀಕು ಹಾಕದೆ ಒಂದು ಡಿಮಾಂಡನೋಟನ್ನು ಕೆಲವು ದಿನಗಳ ಹಿಂದೆ ಕಲ್ಪಿಸಿಟ್ಟುಕೊಂಡಿರುವದಾಗಿ ನನಗೆ ಈ ಕೆಲವು ದಿನಗಳ ಹಿಂದೆ ತಿಳಿದು ಬಂದಿದೆ, ಸದ್ರಿ ನೋಟು ಏನೊಂದು ಪ್ರತಿಫಲವಿಲ್ಲದ್ದು ಕಾನೂನು ಪ್ರಕಾರ ಸಿಂಧು ಆದದ್ದು ಅಲ್ಲ. ಆದ್ದರಿಂದ ಅದನ್ನು ಯಾರೂ ಟ್ರಾನ್ಸ್‌ಫರಿಗೆ ಪಡಿಯಬಾರದು. ಯಾರೂ ಟ್ರಾನ್ಸ್‌ಫರಿಗೆ ಪಡದಲ್ಲಿ ಅದು ಮ್ಯಾನರನ ಮೇಲಾಗಲೀ ಮ್ಯಾನರನ ಸೊತ್ತುಗಳ ಮೇಲಾಗಲೀ ಬಾಧಿಸತಕ್ಕದ್ದಲ್ಲವೆಂತ ಈ ಮೂಲಕ ತಿಳಿಸಿಯದೆ ಸದ್ರಿ ರಾಘವೇಂದ್ರ ಪ್ರಭುವು ಬೇರೆ ಯಾರಿಗೂ ಯಾವ ದಾಕ್ಲೆಗಳನ್ನೂ ಮಾಡಿ ಕೊಟ್ಟದ್ದಿದ್ದರೂ ಅವು ಕೂಡಾ ಸಿಂಧುವಾದವುಗಳೂ ಅಲ್ಲ ಜಾರಿಗೆ ತರಲ್ಪಡತಕ್ಕವುಗಳೂ ಅಲ್ಲವೆಂತ ಕೂಡಾ ಈ ಮೂಲಕ ಸಮಸ್ತರಿಗೆ ತಿಳಿಸಿಯದೆ.

ಸಾಂತೂರು ತಾ 6 1 39 } ಈ ಗೆರೆ ಮತ್ತು ಎಡ ಕೈ ಹೆಬ್ಬಟ್ಟಿನ ಗುರುತು ಸಹ ಶೇಷಿ ಹೆಂಗಸಿನ ರುಜು

ಶ್ರೀಕೃಷ್ಣ ಒಪ್ಟಿಕಲ್ ಮಾರ್ಟ್

ಸಂತೆಕಟ್ಟೆ, ಉಡುಪಿ, ದ. ಕ.



ಕಣ್ಣಿನ ಪರೀಕ್ಷೆ ಧರ್ಮಾರ್ಥ!

ದೃಷ್ಟಿಗೆ ತಕ್ಕ ಕನ್ನಡಕ! **ಅತ್ಯಲ್ಪ ಬೆಲೆ!**

ನಾವು ಎಲ್ಲಾ ವಿಧದ ಉತ್ತಮ ಪೆಬ್ಬಲ್, ಕ್ರಿಸ್ಟಲ್, ಸ್ಫೆರಿಕಲ್ ಮತ್ತು ಕಣ್ಣುಗಳಿಗೆ ಬೇಕಾಗುವ ಎಲ್ಲಾ ವಿಧದ ಕನ್ನಡಕಗಳನ್ನೂ ಇನ್ನೂ ರೋಲ್ಡ್‌ಗೋಲ್ಡ್ ಕೇಲ್ ವ ನಿಕ್ಕಲ್, ಸಿಲ್ವರ್, ಫ್ರೇಮುಗಳನ್ನೂ ತರತರದ ಕನ್ನಡಕದ ಗೂಡುಗಳನ್ನೂ, ಇವಲ್ಲದೆ ಕನ್ನಡಕದ ಯಾವುದೇ ಭಾಗಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಗ್ರಾಹಕರ ಯೋಗ್ಯತೆಗನುಸಾರವಾಗಿ ಶೇಖರಿಸಿಟ್ಟಿರುವೆವು. ಹೆಚ್ಚು ಕ್ರಯದ ಫೌಂಟನ್ ಪೆನ್ನುಗಳನ್ನು ಚಲೋ ರೀತಿಯಲ್ಲಿ ರಿಪೇರಿಮಾಡಿಕೊಡುತ್ತೇವೆ. ನಮ್ಮಲ್ಲಿ ಸ್ಟೋಕ್ ಯಿಲ್ಲದ ಸಾಮಾನುಗಳನ್ನು ಅಲ್ಪ ದಿವಸಗಳಲ್ಲಿ ತರಿಸಿಕೊಡುವೆವು.

ಪ್ರೊಪ್ರೈಟರ್: **ಯಂ ಕೃಷ್ಣರಾವ್**

ಈ ವಾರದ ಕತೆ

ಮದುವೆಯ ಹುಚ್ಚು

(ಕತೆಗಾರ:—ಕೊರ್ಡಿತ್ಲು ಯು. ಯಸ್. ಭಟ್, ಸ್ಕೋಲರ್.)

- ಜಬ್ಬು ಮುದುಕರಿಗೂ ಹೆಣ್ಣಿನ ಆಸೆ.
- ಏನಯ್ಯಾ! ಹೆಣ್ಣು ಅಂದರೆ ಅಗ್ಗಕ್ಕೆ ಬಿದ್ದಿದೆ ಎಂದು ನೀವು ತಿಳಿದಿರುವಿರಾ? ಅದೇನೂ ಸಂತೆಯಲ್ಲಿ ಕೊಂಡುಕೊಳ್ಳುವ ವಸ್ತುವಲ್ಲ!! ತಿಳಿಯಿತೇ?
- ಕುತ್ತಿಗೆಗೆ ಮಂಗಳಸೂತ್ರ ಬೀಳುವಾಗಲೇ ನಿಮಗೆ ಯಮರಾಯನ ವಾರಂಟು
- ಬಂದರೆ ....!
- ನಿಮ್ಮಂತಹ ಕಣ್ಣಿದ್ದೂ ಕುರುಡರು .. .ಧರ್ಮದ ಹೆಸರನ್ನು ಕೆಡಿಸುವರು .. ಧರ್ಮಬಾಹಿರರೇ ಈ ಬಾಲವಿಧವೆಯರ ಗೋಳಿಗೆ ಕಾರಣರು.
- ಜಾಗ್ರತೆ! ಈಗಲಾದರೂ ನಿಮ್ಮ ನೈತಿಕ ಪತನವಾಗಲು ಬಿಡಬೇಡಿರಿ. ಬಾಲ ವಿಧವೆಯರ ಗೋಳು ... ಪಾಪ! ಅವರ ಪಶ್ಚಾತ್ತಾಪಕ್ಕೂ, ಶಾಪಕ್ಕೂ ಗುರಿಯಾಗಬೇಡಿರಿ ....!

ಗಜಾನನ ಭಟ್ಟರು ಮಂತ್ರ ತಂತ್ರ ಯಂತ್ರ ಎಲ್ಲವನ್ನೂ ಬಲ್ಲವರಾಗಿದ್ದರು. ಅವರ ವಯಸ್ಸು ಸಾಧಾರಣ ಐವತ್ತೈದಾಗಿರಬಹುದು. ಅವರ ಅಣ್ಣ ಭೀಮಪ್ಪ ಭಟ್ಟರು. ಭೀಮಪ್ಪ ಭಟ್ಟರಂತೂ ವಯಸ್ಸಿನಲ್ಲಿ ಹಿರಿಯರೇ. ಇಬ್ಬರಿಗೂ ಮೂರು ಮೂರು ಹೆಂಡಂದಿರಾಗಿ ಮನೆತುಂಬಾ ಮಕ್ಕಳು-ಮರಿಗಳು! ಮನೆಯೆಲ್ಲಾ ಗೋಂಗುಲ್ಲು!! ಈಗ ಇಬ್ಬರೂ ವಿಧುರರೇ. ನಮ್ಮ ಗಜಾನನ ಭಟ್ಟರೆಂದರೆ ಸಾಕ್ಷಾತ್ ಬ್ರಹ್ಮಸ್ವರೂಪಿಯೇ. ಮಸಣ ಶಂಕರನಿಗೂ ಇವರಿಗೂ ತಾರತಮ್ಯವಿಲ್ಲವೇ ಇಲ್ಲ. ಇಡೀ ದಿವಸ ಮಂತ್ರ ಹೇಳಿ ಹೇಳಿ ಕೆಲವು ಹಲ್ಲುಗಳಿಗೂ ಇವರು ಫಾಶಿ ಶಿಕ್ಷೆ ಕೊಟ್ಟಿದ್ದರು. ಮಡಿಯಲ್ಲಂತೂ ಮಲಮೂತ್ರ ವಿಸರ್ಜನಾ ಕಾಲದಲ್ಲೂ ಶುದ್ಧವೇ ಎಂದು ಅವರ ಭಾವ! ಇಂತಹ ತೇಜಸ್ವಿಯಾದ ಬ್ರಾಹ್ಮಣ—ಸ್ವಲ್ಪ ತೊಲೆತೊಲೆಗಟ್ಲೆ ಬಂಗಿ ಸೇದುವುದು ಅವರ ನಿತ್ಯದ ಕೆಲಸ! ಹಾಗೆ ಸೇದಿದಾಗ ಸ್ವಲ್ಪ ಮೌನ—ಮೌನಂ ಪಂಡಿತಲಕ್ಷಣಂ-ವಚನವನ್ನು ಸಿದ್ಧಪಡಿಸಲಿಕ್ಕೋ ಏನೋ ...

ಇಷ್ಟು ಹಳೆಯ ಮುದುಕನಿಗೆ ಮದುವೆ ಎಂದರೆ ಬಾಯಲ್ಲಿ ನೀರು ಒಸರುತ್ತಿತ್ತು. ಪ್ರಾಯಶಃ ಹೆಣ್ಣುಗಳನ್ನು ಸಂತೆಯಲ್ಲಿ ಮಾರಾಟಕ್ಕಿಟ್ಟಿದ್ದರೆ ದಿನಕ್ಕೊಬ್ಬೊಬ್ಬಳನ್ನು ತರುತ್ತಿದ್ದರೋ ಏನೋ! ಅಲ್ಲೇ ಒಂದು ನೆರೆಮನೆ—ಆ ಮನೆಯ ಯಜಮಾನರು ತ್ರಿಯಂಬಕರಾಯರು. ಅವರಿಗೊಬ್ಬಳು ಮಗಳು-ಲಲಿತಾ. ಹುಡುಗಿಯು ಈಗಿನ (ಆಧುನಿಕ) ಪದ್ಧತಿಗನುಸರಿಸಿ, ರೂಪ ಲಾವಣ್ಯದ ಬೆಡಗಿನಿಂದ ಶೋಭಿಸುತ್ತಿದ್ದಳು. ನಮ್ಮ ಭಟ್ಟರು ಅಲ್ಲಿಗೆ ಯಾವಾಗಲೂ ಹೋಗುವ ಪರಿಪಾಠ ಇಟ್ಟುಕೊಂಡಿದ್ದರು

ಲಲಿತೆಯು ಶಾಲೆಯಲ್ಲಿ ಕಲಿಯುವ ಹುಡುಗಿ. ತಾರಾಚಂದ್ರನು ಅವಳ ಪ್ರೀತಿಯ ಗೆಳೆಯ. ಇವರಿಬ್ಬರಿಗೂ ಗಂಟುಹಾಕಬೇಕೆಂದು ಬ್ರಹ್ಮನು ಸಂಕಲ್ಪಿಸಿರುವನೆಂದು ಕಾಣುತ್ತದೆ. ಇತ್ತ ನಮ್ಮ ಭಟ್ಟರಿಗೆ ಲಲಿತೆಯನ್ನು ಮದುವೆಯಾಗಬೇಕೆಂದು ಹೆಬ್ಬಯಕೆ. ಪಾರ್ವತಿಗೂ ಈಶ್ವರನಿಗೂ ಗಂಟುಬಿದ್ದಂತೆ ಈ ಹಲ್ಲಿಲ್ಲದ ಮುದುಕನನ್ನು ಲಲಿತೆಯು ವರಿಸುವಳೆ? ತ್ರಿಯಂಬಕರಾಯರಿಗೂ ಭಟ್ಟರಿಗೂ ಒಂದು ದಿವಸ ಬಹಳ ಹೊತ್ತಿನವರೆಗೆ ಲಲಿತೆಯ ವಿಷಯ ಚರ್ಚೆ. ಲಲಿತೆಯನ್ನು ಭಟ್ಟರು ಮದುವೆ ಮಾಡಿಕೊಳ್ಳಬೇಕೆಂದು ಹಠಹಿಡಿದರು. ನಮ್ಮ ತ್ರಿಯಂಬಕರಾಯರು ಎಲ್ಲರಿಗೂ ತ್ರಿನಾಮ ಹಾಕುವ ಗಿರಾಕಿಯೇ! ಮದುವೆ ಮಾಡಿಕೊಡಬೇಕಾದರೆ ರೂಪಾಯಿ ಐನೂರು ಏಕ ಗಂಟಿನಿಂದ ಕೊಡಬೇಕೆಂದರು. ಭಟ್ಟರು ಬಿಡುವ ಗಿರಾಕಿಯಲ್ಲ! ದಕ್ಷಿಣೆ ಒಟ್ಟುಮಾಡಿ ಇಟ್ಟಿದುದನ್ನು ಒಂದೇ ಸಲ ಖರ್ಚು ಮಾಡುವೆನೆಂದರು. ಕೊಟ್ಟಿದ್ದು ಬಡಾಯಿ! ಆದರೆ ಮನೆಯಲ್ಲಿ ಒಂದು ತೊಲೆ ಬಂಗಿಗೆ ಸಾಕಾಗುವಷ್ಟು ಹಣ ಇದ್ದಿತ್ತು. ಬೆದರಲಿಲ್ಲ ಗಿರಾಕಿ! ವಾಯುವೇಗದಿಂದ ಲಕ್ಷ್ಮೀಚಂದ ಮಾರವಾಡಿ ಇದ್ದಲ್ಲಿ ಹೋಗಿ ನೂರಕ್ಕೆ ಇಪ್ಪತ್ತೈದರಂತೆ ಬಡ್ಡಿ ತೆರುವುದಾಗಿ ವಾಗ್ದಾನಮಾಡಿ, ಐನೂರು ರೂಪಾಯಿ ಸಾಲ ತಂದರು. ಹುಚ್ಚ! ಎಲ್ಲವೂ ಹುಚ್ಚೇ!! ಮಾಯೆಯ ಪ್ರಭಾವವೇ ಹಾಗಿದೆ!!! ಆ ಹಣದ ಗಂಟನ್ನು ತ್ರಿಯಂಬಕರಾಯರ ಕೈಯಲ್ಲಿಟ್ಟು ತುಳಸೀದಳ ಹಾಕಿ ನೀರು ಬಿಟ್ಟರು ಇನ್ನು ಉಳಿದುದು ...ಮದುವೆ!

ಈ ಸಂಗತಿ ಅಣ್ಣ ಭೀಮಪ್ಪ ಭಟ್ಟರಿಗೆ ತಿಳಿದುದೇ ತಡ—ಅವರು ರೌದ್ರಾವತಾರವನ್ನು ತಾಳಿದರು. ಅವರು ತಮ್ಮನ ಹತ್ತಿರ, 'ಏನಯ್ಯಾ ಗಜೂ, ನಾನು ಹಳೆಯವನು. ಸಾಯುವ ಕಾಲ! ಹೆಂಡತಿ ಬೇಕಾದುದು ನನಗೆ—ನಿನಗಲ್ಲ! ನಿನಗೇಕಯ್ಯಾ ಹೆಂಡತಿ—ನಾನೇ ಮದುವೆ ಮಾಡಿಕೊಳ್ಳುತ್ತೇನೆ ನಿನ್ನಂತಹ ಬಂಗಿಬುಕ್ಕ ಹೆಂಡತಿಯನ್ನು ಮಾಡುವುದೇ ಸರಿ'—ಇಂತೆಂದು ತ್ರಿಯಂಬಕ ರಾಯರಲ್ಲಿ ಸಂಧಾನಕ್ಕೆ ಹೊರಟರು. ಸಂಧಾನವೂ ಬಗೆ ಹರಿಯಿತು. ಅತ್ತ ಹಿಡಿ, ಇತ್ತ ಬಿಡಬೇಡ ಎನ್ನುವ ತ್ರಿಯಂಬಕಗೆ ಹಣದ ಗಂಟು ಕೈಗೆ ಸಿಕ್ಕಿದರೆ ಸರಿ! ಭೀಮಪ್ಪ ಭಟ್ಟರು ತ್ರಿಯಂಬಕರಾಯರಿಗೆ ಆರುನೂರು ರೂಪಾಯಿಯನ್ನು ಕೊಟ್ಟು 'ಕೃಷ್ಣಾರ್ಪಣಮಸ್ತು' ಎಂದರು ತ್ರಿಯಂಬಕರಾಯರೂ 'ಶೀಘ್ರಮೇವ ವಿವಾಹಮಸ್ತು' ಎಂದೂ ಹರಸಿದರು. ಭೀಮಪ್ಪ ಭಟ್ಟರು ಮನೆಗೆ ಬಂದುದಾಯಿತು. ಈ ಸಂಗತಿ ಗಜಾನನ ಭಟ್ಟರಿಗೆ ತಿಳಿಯಿತು. ಕೂಡಲೇ ಗಜಪ್ಪನವರು ತ್ರಿಯಂಬಕ ರಾಯರಲ್ಲಿ ಹೋದರು. 'ಏನಯ್ಯಾ! ಮದುವೆ ಯಾವಾಗ?' ಎಂದು ಕೇಳಿದರು. 'ತ್ರಿಯಂಬಕರಾಯರು ನಿಮಗೆ ಹೆಣ್ಣನ್ನು ಕೊಡಲು ಸಾಧ್ಯವಿಲ್ಲವಯ್ಯಾ! ನಿಮಗೆ ದಿನ ಒಂದಕ್ಕೆ ಹತ್ತು ತೊಲೆ ಬಂಗಿ ಬೇಕಂತೆ' ಎಂದು ಹೇಳಿದರು. ಗಜ ಭಟ್ಟರಿಗೆ ಗಜಪಿತ್ತದ ಸಿಟ್ಟು ಬಂದಿತು. ಆ ಅಣ್ಣ ಭೀಮನಿಗೆ ತಲೆ ಒಡೆಯುತ್ತೇನೆಂದು ಒಂದೇ ಹಾರಿಗೆ ಮನೆಗೆ ಬಂದರು. ಭೀಮಪ್ಪನ ಹತ್ತಿರ 'ಏ ಮುದಿ.. ಮಗನೇ! ನೀನು ಎಷ್ಟು ಸಂಭಾವಿತನೆಂದು ತಿಳಿದಿರುವೆ? ನಿನಗೆ ಕ್ಷಯರೋಗ, ಮಲಭೇದಿ, ವಾಂತಿಭೇದಿ ಮುಂತಾದುವು ಇರುವುವು, ಉಬ್ಬಸ ಕೆಮ್ಮು ಮುಂತಾದುವು ನಿನ್ನಲ್ಲಿ ಐಕ್ಯವಾಗಿದೆ. ನಾನು ಬಂಗಿ ಬುಕ್ಕನಂತೆ! ಆ ಹೆಣ್ಣು ನನಗೇ ದೊರೆತು ನಿನಗೆ ಸಿಗದು' ಎಂದರು. ಭೀಮಪ್ಪನೂ ಮುಂಗೋಪಿಯೇ. ಇಬ್ಬರಿಗೂ ಹೊಡೆದಾಟ—ಬಡಿದಾಟಗಳಾದವು ದಾರಿಯಲ್ಲಿ ಹೋಗುತ್ತಿದ್ದ ತಾರಾಚಂದ್ರನು ಅವರ ಬಡಿದಾಟವನ್ನು ತಪ್ಪಿಸಿದನು. ಇತ್ತಲಾಗಿ 'ಭೀಮಪ್ಪ ಗಜೂ ಮೇಲೆ, ಗಜೂ ಭೀಮನ ಮೇಲೆ' ಸೂಟ್ ಫೈಲ್ (Filing the suit) ಮಾಡಿದರು.

ಇತ್ತ ಕೆಲವು ದಿನಗಳಲ್ಲಿ ಲಲಿತೆಗೂ ತಾರಾಚಂದ್ರನಿಗೂ ವಿವಾಹವಾಯಿತು ಈ ಸಂದರ್ಭದಲ್ಲಿ, ನಮ್ಮ ಭೀಮಪ್ಪ ಭಟ್ಟರೂ ಗಜಪ್ಪ ಭಟ್ಟರೂ ಅದೇ ಮದುವೆಗೆ ಹೋಗಿದ್ದರು. ಈಗ ಅವರೊಳಗೆ ರಾಜಿಯಾಗಿದೆ. ಅವರು, ಹೆಣ್ಣು ಸಿಗದೆ ಇದ್ದರೂ ಪರವಾ ಇಲ್ಲ ಹೆಣ್ಣನ್ನು ಕಣ್ಣು ತುಂಬಾ ನೋಡಿಯಾದರೂ ಬರುವಾ ಎಂದು ಹೋಗಿದ್ದರು. ಅಲ್ಲಿಯೂ ಮದುವೆಯ ಚಪ್ಪರದ ತುಂಬಾ ಇವರದೇ ಗುಲ್ಲು. ಒಬ್ಬನು ಬಂಗಿ ಸೇದಿ ಕೆಮ್ಮಿ ಕೆಮ್ಮಿ ಮಾತನಾಡುತ್ತಾನೆ. ಇನ್ನೊಬ್ಬ ಕ್ಷಯರೋಗದಿಂದ ನರಳಿ, ಬರುವ ಉಬ್ಬಸದಿಂದ ಮಾತನಾಡುತ್ತಾನೆ; ಆಗಂತೂ ಕಫ ಧಾರೆಧಾರೆಯಾಗಿ ಸುರಿಯುತ್ತದೆ ಮದುವೆ ಕಾರಣದಿಂದ ಈ ಭಟ್ಟರಿಗೆ ಹೊಟ್ಟೆ ಒಡೆದು ಹೋಗದೆ ಇದ್ದುದೇ ಒಂದು ಪುಣ್ಯ! ಯಥೇಷ್ಟವಾಗಿ ಹೋಳಿಗೆ ಲಾಡು ಹೊಡೆದರು.

ಅವರು ಮನೆಗೆ ಬರುತ್ತಿದ್ದರು, ನಾನು ಸ್ವಲ್ಪ ತಮಾಷೆಯಲ್ಲಿ ಪಂಡಿತ. ಇಬ್ಬರಿಗೂ "ಏನಯ್ಯಾ! ಹೆಂಗಳೆಯರೆಂದರೆ ಸಂತೆಯಲ್ಲಿ ಸಿಗುವ ಅಗ್ಗದ ಸಾಮಾನುಗಳೆಂದು ನೀವು ತಿಳಿದಿರುವಿರಾ? ನಿಮ್ಮಂತಹ ಜಬ್ಬು ಮುದುಕರಿಗೂ ಹೆಣ್ಣಿನ ಆಸೆಯೇ? ಕುತ್ತಿಗೆಗೆ ಮಂಗಳಸೂತ್ರ ಕಟ್ಟುವಾಗಲೇ ನಿಮಗೆ ಯಮರಾಯನ ವಾರಂಟು ಬಂದರೆ... ......! ನಿಮ್ಮಂತಹ ತಿಳಿದೂ ತಿಳಿಯದ ಕಣ್ಣಿದ್ದೂ ಕುರುಡರಾದ ಧರ್ಮಾಂಧರು, ಧರ್ಮ ಬಾಹಿರರೇ, ಈಗಿನ ಸಮಾಜಕ್ಕೆ ಕಂಟಕಪ್ರಾಯರಾಗಿದ್ದಾರೆ. ಪಾಪ ನಿಮ್ಮ ಮೌಢ್ಯತೆಯಿಂದಲೇ—ದುರಭಿಮಾನದಿಂದಲೇ ಸಂಭವಿಸಿದ ಅನರ್ಥವಿದು. ಬಾಲವಿಧವೆಯರು ದಿನ ಹೋಗುತ್ತಾ ಹೆಚ್ಚಾಗುತ್ತಿದ್ದಾರೆ. ಈ ಬಾಲವಿಧವೆಯರೂ ಆರ್ಯಮಾತೆಯ ಪಾದಾರವಿಂದದಲ್ಲಿ ಗೋಳಾಡುತ್ತಾ ತಮ್ಮನ್ನು ಉದ್ಧಾರ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದಾರೆ. ಏ ಹುಚ್ಚರೇ... ..ನಿಮಗೆ ಬುದ್ಧಿ ಇಲ್ಲವೇ? ಜಾಗ್ರತೆ! ಈಗಲಾದರೂ ನಿಮ್ಮ ನೈತಿಕ ಪತನವಾಗದಂತೆ ನೋಡಿರಿ. ಅವರ ಪಶ್ಚಾತ್ತಾಪಕ್ಕೆ ಗುರಿಯಾಗಬೇಡಿರಿ' ಎಂದು ನಾನು ಹಂಗಿಸಿದೆ.

ಭೀಮಪ್ಪಭಟ್ಟರು ಮತ್ತು ಗಜಪ್ಪಭಟ್ಟರು ಮೌನಧಾರಿಗಳಾಗಿ, ತಮ್ಮ ಮನೆಯ ಕಡೆಗೆ ತೆರಳಿದರು. ನಾನೂ, ಬದುಕಿದೆ ಇಂದಿಗೆ! ಸ್ವಲ್ಪವಾದರೂ ಸಮಾಜಸೇವೆ ಮಾಡಿದೆ, ಎಂದು ಹಿಗ್ಗುತ್ತಾ ಮನೆಯ ಕಡೆಗೆ ತೆರಳಿದೆ. ಮದುವೆಯ ಹುಚ್ಚು ಸಾಮಾನ್ಯವಲ್ಲ! ಪ್ರಾಯ ಬಂದ ಯುವಕರಿಗಂತೂ ಇದು ಮಂಗನಿಗೆ ಸುರಾಪಾನ ಮಾಡಿಸಿದಂತೆಯೇ ಸರಿ.

WANTED—District Organisers and Taluka Superintendents in Districts of Belgaum Bijapur, Dharwar, Canara and Coorg on salary and commission basis Special facilities for the initial business of Rs 10,000/-. Only influential gentlemen who can guarantee Rs 50,000/- and Rs. 25,000/- per year need apply. Messers

PADUBIDRI BROS, BOMBAY 8.

ಜಾಹೀರು ವಿನಂತಿ.

ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ-

ಉಡುಪಿ ತಾಲೂಕು ಗುಂಡ್ಮಿ ಗ್ರಾಮದ ಮಂಜುನಾಥ ಸಹಸ್ರ ಯಾನೆ ಕೆ. ಜಿ. ಕೆ. ರಾವ್ ಎಂಬವರು ನಮ್ಮ ಫರ್ಮಿನ ಔಷಧ ಮಾರಾಟದ ಟ್ರಾವೆಲಿಂಗ್ ಏಜಂಟರಾಗಿದ್ದರು. ಈಚೆಗೆ ಅವರ ಏಜನ್ಸಿಯನ್ನು ವಜಾ ಮಾಡಿದೆ. ಅವರಿಗೂ ನಮ್ಮ ಫರ್ಮಿಗೂ ಯಾವ ತರದ ಸಂಬಂಧವೂ ಇರುವುದಿಲ್ಲ. ಅವರು ನಡಿಸುವ ಪತ್ರವ್ಯವಹಾರಗಳು ನಮ್ಮ ಫರ್ಮಿಗೆ ಸಂಬಂಧಪಟ್ಟದ್ದಲ್ಲವೆಂಬುದನ್ನು ಸರ್ವರೂ ತಿಳಿದಿರತಕ್ಕದ್ದು.

ಡಾ| ಎ. ಎಸ್. ಶ್ರೀನಿವಾಸ ರಾವ್,
ಆಯುರ್ವೇದ ವೈದ್ಯ ವಿದ್ವಾನ್,
ಯಂ. ವಿ. ಪ್ರಸಾದಿಕ ಔಷಧಾಲಯ ಶಿವಮೊಗ್ಗ

ಹೊಸ ಪುಸ್ತಕ! ಇದೀಗ ಪ್ರಕಟವಾಗಿದೆ!

ಅಜ್ಞಾನ ತಿಮಿರ ಮಾರ್ತಾಂಡ

ಜನ್ಮತಃ ಅಸ್ಪೃಶ್ಯತೆಯು ಇರಲಿಲ್ಲವೆಂಬುದನ್ನೂ ಅಂಥ ಸಂಪ್ರದಾಯದ ಸನಾತನಿಗಳ ವಾದದಲ್ಲಿ ತಿರುಳಿಲ್ಲವೆಂಬುದನ್ನೂ ವಿವರಿಸಿ ಪುರಾಣ, ಸ್ಮೃತಿಗಳ ಆಧಾರದಿಂದ ಶ್ರೀ. ಬಿ. ಅಂತಯ್ಯ ಶೆಟ್ಟರಿಂದ ನವೀನವಾಗಿ ಬರೆಯಲಾದ ಹೊಸ ಪುಸ್ತಕ.

ಬೆಲೆ: 0-4-0 ಮಾತ್ರ.

ಇದರ ಉತ್ಪತ್ತಿಯು ಹರಿಜನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲ್ಪಡುವುದು. 0-4-6 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪಾಲು ದ್ವಾರಾ ಕಳಿಸಲಾಗುವುದು.

ಉಡುಪಿಯಲ್ಲಿ ಪುಸ್ತಕ ಸಿಗುವ ಸ್ಥಳ.
Navabharat Book Depot,
Udipi.

ಬಿ. ಅಂತಯ್ಯ ಶೆಟ್ಟಿ,
ಹರಿಜನ ಶಿಕ್ಷಣ ಸಹಾಯಕ ಸಂಘ,
ಬ್ರಹ್ಮಾವರ

'ಮಕರ ಸಂಕ್ರಾಂತಿ' ವಿಶೇಷ ಸಂಚಿಕೆಯ ಉದ್ಘಾಟನೆ.

ವಿಜೃಂಭಣೆಯ ಸಮಾರಂಭ, ಪ್ರಸಿದ್ಧ ವ್ಯಕ್ತಿಗಳ ಅಧ್ಯಕ್ಷತೆ, ಉತ್ಕೃಷ್ಟ ಉಪಹಾರ, ಉಜ್ವಲ ಭಾಷಣ, ಪತ್ರಿಕೆಗೆ ವಿಶಾಲ ಕರ್ನಾಟಕದಿಂದ ದೊರೆತಿರುವ ಅಸಾಧಾರಣ ಪ್ರೋತ್ಸಾಹ; ಸಹಕಾರ, ಸದಭಿಪ್ರಾಯ.

ಇದೇ ತಿಂಗಳ ತಾ ೧೦ನೇ ಮಂಗಳವಾರ ಸಾಯಂಕಾಲ ಉಡುಪಿ ತುಳುನಾಡ್ ಮುದ್ರಣಾಲಯದ ಭವ್ಯಮಂದಿರದಲ್ಲಿ 'ನವಯುಗ'ದ 'ಮಕರಸಂಕ್ರಾಂತಿ ವಿಶೇಷ ಸಂಚಿಕೆಯ ಉದ್ಘಾಟನಾ ಸಮಾರಂಭವು ಬ್ಯಾಂಕಿಂಗ್ ಪ್ರಪಂಚದ ಪ್ರಸಿದ್ಧ ವ್ಯಕ್ತಿಗಳಾದ ಡಾ. ಟಿ. ಮಾಧವಪೈಗಳವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ತೊಡಗಿತು. ಉತ್ಕೃಷ್ಟ ಉಪಹಾರಾನಂತರ ಉದ್ಘಾಟನಾ ಕಾರ್ಯಪ್ರಾರಂಭವಾಯಿತು.

ಸಂಚಾಲಕರಾದ ಶ್ರೀ. ಕೆ. ಎಚ್. ಶೆಟ್ಟರ ನಿವೇದನೆ:

"ಅನಿವಾರ್ಯ ಕಾರ್ಯದಿಂದಾಗಿ ನಮ್ಮ ಸಂಪಾದಕರು ಇಂದು ಇಲ್ಲಿರಲಾಗದಿದ್ದುದರಿಂದ 'ನವಯುಗ'ದ ಅಭಿಮಾನಿಗಳಾದ ಸಭಿಕರ ಹಾಗೂ ವಾಚಕಲೋಕದ ಮುಂದೆ ನಿವೇದನಾ ರೂಪವಾಗಿ ನಾನೇ ಎರಡು ಮಾತುಗಳನ್ನು ಹೇಳಬೇಕಾಗಿದೆ. ನಾಡನುಡಿಯಲ್ಲಿ ಪತ್ರಿಕೆಗಳನ್ನು ನಡೆಯಿಸುವುದರ ಕಷ್ಟನಷ್ಟಗಳನ್ನು ನಾನಿಲ್ಲಿ ತಮ್ಮ ಮುಂದೆ ತೋಡಿಕೊಳ್ಳುವುದಿಲ್ಲ. ಅವೆಲ್ಲ ತಮಗೆ ತಿಳಿದೇ ಇವೆ. ಆದರೂ 'ನವಯುಗ'ವು ಕಳೆದ ೧೭ ವರುಷಗಳಿಂದ ಎಡವಿ ತಡವಿ ಬೀಳದೆ, ಬಿದ್ದು ನಿದ್ರಿಸದೆ, ಹೊತ್ತು ಹೊತ್ತಿಗೆ ಸರಿಯಾಗಿ ವಾಚಕರ ಕೈಸೇರುತ್ತ ಬಂದಿದೆ. ವಾರ್ಷಿಕವಾಗಿ ದೊಡ್ಡದೊಂದು ವಿಶೇಷ ಸಂಚಿಕೆಯನ್ನು ಪ್ರಕಟಿಸುವ ದೀಕ್ಷೆಯೊಂದಿಗೆ ಕಳೆದ ಒಂದೆರಡು ವರುಷಗಳಿಂದ ಕೃಷ್ಣಾಷ್ಟಮಿ, ದಸರೆ, ಮುಂತಾದ ಹಬ್ಬ ಹುಣ್ಣಿಮೆಗಳ ಕಾಲಗಳಲ್ಲಿ ಚಿಕ್ಕ ತರದ ವಿಶೇಷ ಸಂಚಿಕೆಗಳನ್ನೂ ಮಾಸಾಂತ್ಯಗಳಲ್ಲಿ 'ತಿಂಗಳ ಕಾಣಿಕೆ'ಗಳನ್ನೂ ವಾಚಕಲೋಕಕ್ಕೆ ಅರ್ಪಿಸುತ್ತ ಶಕ್ತಿಮೀರಿ ನಾಡಿನ ಮತ್ತು ನಾಡನುಡಿಯ ಸೇವೆಯನ್ನು ಮಾಡುತ್ತಿದೆ. ನಮಗೆ ಅಧಿಕಾಧಿಕವಾಗಿ ದೊರೆಯುತ್ತಿರುವ ಪ್ರೋತ್ಸಾಹಗಳ ಮಾನದಿಂದ ತಿಳಿದು ಹೇಳುವುದಾದರೆ ನಮ್ಮ ಸೇವೆಯನ್ನು ನಾಡು ಮನಗಂಡು ಮೆಚ್ಚಿದೆ ಎನ್ನಬೇಕು. ಈ ವಿಶೇಷ ಸಂಚಿಕೆಯೇ ಅದಕ್ಕೊಂದು ದೃಷ್ಟಾಂತ.

ನಾಡಿನಲ್ಲಿ ಎಲ್ಲೆಲ್ಲೂ ತೋರುವ ದುಡ್ಡಿನ ಮುಗ್ಗಟ್ಟಿನ ಕಾಲದಲ್ಲಿ ಈ ಸಂಚಿಕೆಯು ೧೦೦ ಪುಟಗಳಾಗುವಷ್ಟಾದರೂ ಪ್ರೋತ್ಸಾಹವು ದೊರಕೀತೇ ಎಂಬ ಎದೆನಡುಕ ಮೊದಮೊದಲು ನಮಗಿತ್ತು. ಈ ಕಾರ್ಯವನ್ನು ಕೈಗೊಂಡ ಈ ಒಂದೆರಡು ತಿಂಗಳ್ಗಳ ಸುತ್ತಾಡಲು ನಮಗೆ ಬಿಡುವಿದ್ದಿಲ್ಲವಾದರೂ ಪತ್ರಮುಖೇನ ನಾವು ಮಾಡಿಕೊಂಡ ವಿನಂತಿಗಳಿಗೆ ಹೆಸರಾಂತ ಬರೆಹಗಾರರು ಲೇಖನಗಳಿಂದಲೂ ಪ್ರಸಿದ್ಧ ಉದ್ಯಮಗಾರರು ಜಾಹೀರಾತುಗಳಿಂದಲೂ ತೋರಿದ ವಿಶೇಷ ಔದಾರ್ಯದಿಂದ ಇಂದು ನಾವು ೨೦೦ ಪುಟಗಳಿಗಿಂತಲೂ ಮಿಕ್ಕಿದ ಅಲಂಕೃತವಾದ ಈ ವಿಶೇಷ ಸಂಚಿಕೆಯನ್ನು ಪ್ರಕಟಿಸಲು ಶಕ್ತರಾದೆವು. ಹೊತ್ತು ಹೊತ್ತಿಗೆ ಕುಸು ಮುಂಚಿತವಾಗಿಯೇ ಇದನ್ನು ಪ್ರಕಟಿಸಬೇಕೆಂದು ನಾವೂ ಮುದ್ರಣಾಲಯದವರೂ ಹಟತೊಟ್ಟಿದ್ದುದರಿಂದ ನಿನ್ನೆ ಮೊನ್ನೆ ಬಂದಿದ್ದ ಕೆಲವು ಜಾಹೀರಾತುಗಳನ್ನು ಸೇರಿಸಲಾಗಲಿಲ್ಲ. ಸ್ಥಳಾಭಾವದಿಂದ ಕೆಲವು ಲೇಖನಗಳನ್ನೂ ಪ್ರಕಟಿಸದಿರಬೇಕಾಯಿತು. 'ನವಯುಗ'ದ ವಾಚಕಲೋಕವು ದಿನೇ ದಿನೇ ವಿಸ್ತಾರವಾಗುತ್ತ ಬರುತ್ತಿದೆ. ಅದನ್ನು ಕಂಡೇ ನಮಗೆ ಆನಂದೋತ್ಸಾಹಗಳುಂಟಾಗಿ ಈ ವಿಶೇಷಸಂಚಿಕೆಯ ಪ್ರಕಟನೆಯ ಕಾರ್ಯಕ್ಕೆ ಕೈಹಾಕಿದೆವು. ಈ ನಮ್ಮ ಸಾಹಸವು ಯಶಸ್ವಿಯಾಗುವಂತೆ ನಮ್ಮನ್ನು ಪ್ರೋತ್ಸಾಹಿಸಿದ ಬ್ಯಾಂಕುಗಳ, ವಿಮಾಸಂಘಗಳ, ವರ್ತಕರ ಹಾಗೂ ತದಿತರ ವ್ಯಾಪಾರವಹಿವಾಟುಗಾರರ ಉಪಕಾರಸ್ಮರಣೆಯನ್ನಿಂದು ಮಾಡುತ್ತೇವೆ. ನಮ್ಮ ಲೇಖಕಬಳಗವನ್ನು ಅಭಿನಂದಿಸುತ್ತೇವೆ. ಮುದ್ರಕವರ್ಗದ ಉತ್ಸಾಹವನ್ನು ಕೊಂಡಾಡುತ್ತೇವೆ. ಮುಂದಿನ ವರ್ಷ 'ಪರ್ಯಾಯ ಸಂಚಿಕೆ'ಯನ್ನು ಮತ್ತಷ್ಟು ಲಕ್ಷಣವಾಗಿ ನಾವು ಪ್ರಕಟಿಸಲಾಗುವಂತೆ ಸರ್ವರೂ ಇತೋಪ್ಯತಿಶಯವಾಗಿ 'ನವಯುಗ'ಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ನಮ್ಮ ಸವಿನಯ ನಿವೇದನೆ.

ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರ ಭಾಷಣ ಸಂಗ್ರಹ.

ಕನ್ನಡ ಪತ್ರಿಕೆಗಳು ಬದುಕುವುದೇ ಕಷ್ಟವಾಗಿರುವ ಕಾಲವಿದು. 'ಪೇಪರ್ ಮಾಡು ಪಾಪರ್ ಆಗು' ಎಂದು ಪತ್ರಿಕಾವ್ಯವಸಾಯದ ಅನುಭವವಿದ್ದ ನನ್ನ ಮಿತ್ರರೊಬ್ಬರು ಹೇಳಿದ ಮಾತು ಹಲವು ಸಂದರ್ಭಗಳಲ್ಲಿ ಸತ್ಯವೆನಿಸಿದೆ. ಅಂದರೆ ಕನ್ನಡ ಪತ್ರಿಕೆಗಳು ನಿಷ್ಪ್ರಯೋಜನವೆಂದಲ್ಲ. ಪ್ರಜಾಕೋಟಿಯ ಸೇವಾದೃಷ್ಟಿಯಿಂದ ನೋಡಿದರೆ ನಾಡ ನುಡಿಯ ಪತ್ರಿಕೆಗಳಿಂದಾಗುವಷ್ಟು ಜನಜಾಗೃತಿಯು, ಶಿಕ್ಷಣವು, ದೇಶೋದ್ಧಾರದ ವಿಧಾಯಕ ಕಾರ್ಯಕ್ರಮಗಳ ಪ್ರಚಾರವು ಇಂಗ್ಲಿಷ್ ಪತ್ರಿಕೆಗಳಿಂದಾಗುವುದಿಲ್ಲ. ಇಂಗ್ಲಿಷ್ ಪತ್ರಿಕೆಗಳೆಂದರೆ ಬಲ್ಲಿದರ ವಿಚಾರ ವಿನಿಮಯ ಕ್ಷೇತ್ರ. ಅವರ ಸಂಖ್ಯೆ ಕಡಿಮೆ. ಆದರೆ ಹಳ್ಳಿ ಮೂಲೆ ಮೂಲೆಗಳಲ್ಲಿಯೂ ಪ್ರಚಾರವಾಗಿ ಅರಿಯದ ರೈತಾಪಿ ಜನರಿಗೆ ಇಂದಿನ ಯುಗದ ಸ್ಫೂರ್ತಿ ಸಂದೇಶವನ್ನು ಮುಟ್ಟಿಸಿ ದೇಶದ ಬೆಂಗೋಲಾದ ಆ ಜನಸಮುದಾಯಕ್ಕೆ ತಕ್ಕ ನೀತಿರೀತಿಗಳನ್ನರುಹಿ ವಿಶಾಲದೃಷ್ಟಿಯಿಂದ ವಿಶ್ವವನ್ನು ನೋಡಿ ತಮ್ಮ ತಮ್ಮ ಹೆಜ್ಜೆ ತಿದ್ದುಕೊಳ್ಳುವಂತೆ ಮಾಡುವ ಮಹತ್ವದ ಸೇವೆಯು ನಡೆಯುವುದು ನಾಡನುಡಿಯ ಪತ್ರಿಕೆಗಳಿಂದಲೇ. ಆದರೆ ಅಂತಹ ಪತ್ರಿಕೆಗೆ ಇಂಗ್ಲೀಷ್ ಪತ್ರಿಕೆಯಂತೆ ವ್ಯಾಪಕ ಕ್ಷೇತ್ರವಿಲ್ಲ. ಶ್ರೀಮಂತ ವರ್ಗದಲ್ಲಿ ಬೆಡಗಿಂದ ಸುಳಿದಾಡುವ ಭಾಗ್ಯವಿಲ್ಲ. ಪರಿಣಾಮವಾಗಿ ಜಾಹೀರಾತು ಕೊಡುವ ವರ್ತಕ ವೃಂದಕ್ಕೆ ನಾಡ ಪತ್ರಿಕೆಗಳು ಲಾಭದಾಯಕವಾಗಿ ತೋರುವುದಿಲ್ಲ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕನ್ನಡ ಪತ್ರಿಕೆಗಳು ಬಾಳಿ ಬದುಕುವುದೇ ಕಷ್ಟವಾಗಿರುವಲ್ಲಿ ವಿಶೇಷ ಸಂಚಿಕೆಗಳನ್ನು ಪ್ರಕಟಿಸುವುದೆಂದರೆ ಅದು ಹೇಗಿದ್ದರೂ ಅಂತಹ ಸಾಹಸದ ಕಾರ್ಯಕ್ಕೆ ಧುಮುಕಿದವರು

ಶ್ರೀ. ಕೊರಡ್ಕಲ್ಲರು

ಅಭಿನಂದನೀಯರೇ. ಈ ದೃಷ್ಟಿಯಿಂದಲೋ ಏನೋ ಕೇವಲ ಇಂಗ್ಲೀಷ್ ಪತ್ರಿಕೆಗಳ ಮಿರುಮಿರುಗಿನ ವಿಶೇಷ ಸಂಚಿಕೆಗಳನ್ನು ಕಂಡು ಮೋಹಿತರಾದವರು ಭಗೀರಥಪ್ರಯತ್ನದಿಂದ ಹೊರಡಿಸಿದ ಕನ್ನಡದ ವಿಶೇಷ ಸಂಚಿಕೆಗಳನ್ನು ಕಂಡು ಅವುಗಳ ಪುಟ್ಟಿಕ್ಕೆ ಇವು ಎರಲಿಲ್ಲವೆನ್ನುವುದುಂಟು. ತಾತ್ಸಾರಮಾಡುವುದೂ ಉಂಟು. ಅಂದರೆ ಸುಲಭಸಾಧ್ಯವಾದ ಕಾರ್ಯವನ್ನು ಮಾಡಿದವರಿಗೆ ಪುರಸ್ಕಾರ. ಸಾಹಸದ ಕೆಲಸದಲ್ಲಿ ಗೆದ್ದು ಬಂದವರಿಗೆ ತಿರಸ್ಕಾರ. ಕನ್ನಡ ಪತ್ರಿಕಾಪ್ರಪಂಚಕ್ಕಿರುವ ಈ ವಿಷಮ ಪರಿಸ್ಥಿತಿಯೊಡನೆ ಕಳೆದ ೧೭ ವರುಷಗಳಿಂದ ಯಶಸ್ವಿಯಾಗಿ ಹೋರಾಡಿ ಗೆದ್ದು ತನ್ನ ವಿಜಯ ಸಂಕೇತದ ಧ್ವಜಾರೋಹಣವನ್ನು ಮಾಡಿದಂತೆ 'ನವಯುಗ'ವು ವರ್ಷವರ್ಷವೂ ಪ್ರವರ್ಧಮಾನ ಚಂದಿರನಂತಹ ವಿಶೇಷ ಸಂಚಿಕೆಯನ್ನು ಹೊರಡಿಸುತ್ತ ಬಂದಿರುವುದರಿಂದಲೇ ಅದೆಷ್ಟು ಜನಪ್ರೀತವಾಗಿರುವುದೆಂಬುದರ ಗೆರೆ ಮುಟ್ಟಿ ಲಕ್ಕ ಬರುತ್ತಿದೆ. 'ನವಯುಗ'ವು ಜನಸಾಮಾನ್ಯರ ಜ್ಞಾನ ವಿಕಾಸಕ್ಕೆ, ವಿಚಾರ ಪ್ರಚೋದನಕ್ಕೆ, ಅಜ್ಞಾನ ನಿವಾರಣೆಗೆ, ಜೀವನ ನಿರೂಪಣೆಗೆ, ವಿಶ್ವಪರಿಸ್ಥಿತಿ ಪರಿಚಯಕ್ಕೆ, ದೇಶಾಭ್ಯುದಯ ಬುದ್ಧಿಗೆ ಹಿತಕರವಾದ ವಿಷಯಗಳಿಂದ ತನ್ನ ಪುಟಗಳನ್ನು ತುಂಬಿಕೊಂಡು ವಾರವಾರವೂ ಹೊತ್ತುಹೊತ್ತಿಗೆ ತಪ್ಪದೆ ನಾಡಲ್ಲಿ ಸುಳಿಯುತ್ತಿದೆ. ಅದು ಉಡುಪಿಗೆ ಬಂದ ಕಳೆದ ಎರಡು ವರುಷಗಳಿಂದಂತೂ ಮತ್ತಷ್ಟು ಆಕರ್ಷಣೀಯವಾಗಿ ವಿಶಾಲತರ ಕ್ಷೇತ್ರವನ್ನು ವ್ಯಾಪಿಸಿದೆ. ಆ ವ್ಯಾಪ್ತಿಯ ಪರಿಣಾಮದಿಂದಲೇ ಅದು ಅತ್ಯಲ್ಪ ಕಾಲದೊಳಗೆ ಕುಳಿತಲ್ಲಿಂದಲೇ ಪ್ರಸಿದ್ಧ ವಿಮಾ ಸಂಘಗಳಿಂದಲೂ ಬ್ಯಾಂಕುಗಳಿಂದಲೂ ವರ್ತಕ ವರ್ಗದಿಂದಲೂ ಅಭೂತಪೂರ್ವ ಪ್ರೋತ್ಸಾಹವನ್ನು ಹೊಂದಲು ಸಾಧ್ಯವಾಗಿ ಇಂತಹ ಸರ್ವಾಂಗ ಸುಂದರವಾದ ವಿಶೇಷ ಸಂಚಿಕೆಯನ್ನು ಪ್ರಕಟಿಸುವ ಸಾಹಸ ಕಾರ್ಯದಲ್ಲಿ ಯಶಸ್ವಿಯಾಯಿತು. ವಾಚಕ ವರ್ಗದ ಬೆಂಬಲ, ಲೇಖಕ ಬಳಗದ ಸಹಾಯ ಇವೂ ಅಧಿಕಾಧಿಕವಾಗಿ ದೊರೆಯುತ್ತ ಬಂದಿವೆ. ಇಂದು ಪ್ರಕಟವಾಗುವ ಈ ವಿಶೇಷ ಸಂಚಿಕೆಯು ಈ

೧೭ನೇ ಪುಟಕ್ಕೆ

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ ಮದರಾಸು.

T. V. Devkar & Co, *Nambulier Street*, G. T. MADRAS.

ನೂರಾರು ರಮ್ಯ ಚಿತ್ರ ! **ಲಲಿತ ಮಾಸಪತ್ರ !!**

ವಸಂತ

ಸಂಪಾದಕರು—
ಡಾ. ಎಸ್ ಕೆ. ಕುಲಕರ್ಣಿ, ಎಂ ಏ.

ಜಾನೇವರಿಯಿಂದ ಪ್ರಾರಂಭ!

ಬಿಡಿ ಪ್ರತಿ ಎರಡೇ ಆಣೆ.

ವಿಷಯಗಳು— ಶಿಕ್ಷಣ, ಕರ್ನಾಟಕ ಸಂಸ್ಕೃತಿ, ಲಲಿತಸಾಹಿತ್ಯ, ಕಲಾವಿಮರ್ಶೆ.
ಲೇಖಕರು—ಪ್ರೊ ಜಾಗೀರದಾರ, ಗೋಕಾಕ, ಮುಗಳಿ, ಮಹಿಷಿ, ಶ್ರೀ. ಶಿವರಾಮ ಕಾರಂತ, ವಿ ಸೀತಾರಾಮಯ್ಯ, ರಂಗರಾವ ದಿವಾಕರ, ಬೇಂದ್ರೆ, ಅ. ನ ಕೃಷ್ಣರಾಯ ಇತ್ಯಾದಿ

ವಸಂತ ಆಫೀಸ್, ಗದಗ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಉಡುಪಿ.

ಈ ಮಹಾಸಂಸ್ಥೆಯ ನೌಕರರುಗಳಿಂದ ಮ್ಯಾನೇಜಿಂಗ್ ಏಜಂಟರುಗಳಾದ ಶ್ರೀ. ಪಿ. ಎ. ಪೈ ಸಹೋದರರುಗಳಿಗೆ ಮಾನಪತ್ರ ಸಮರ್ಪಣೆ.

ಕಂಪೆನಿಗಳಿಗೆ ಸಂಬಂಧಪಟ್ಟ ಇತ್ತೀಚಿಗೆ ಜ್ಯಾರಿಗೆ ಬಂದ ಹೊಸ ಕಾಯಿದೆಗನುಸಾರವಾಗಿ ಮ್ಯಾನೇಜಿಂಗ್ ಏಜನ್ಸಿಯ ಸ್ಥಾನದಿಂದ ನಿವೃತ್ತರಾಗಬೇಕಾಗಿದ್ದ ಶ್ರೀ. ಪಿ ಎ ಪೈ ಸಹೋದರರುಗಳಿಗೆ ಅವರು ನಿವೃತ್ತರಾಗುವ ಕಳೆದ ತಾರೀಕು ೧೫ರಲ್ಲಿ ಮೂವತ್ತೈದು ಶಾಖೆಗಳಿಂದ ಕೂಡಿದ ಈ ಮಹಾಸಂಸ್ಥೆಯ ೩೦೯ ನೌಕರರುಗಳೂ ಅವರಿಗೆ ಮಾನಪತ್ರವನ್ನರ್ಪಿಸುವ ಸಮಾರಂಭವು ವೈಭವಯುಕ್ತವಾಗಿ ಅಂದು ಜರಗಿತು. ಸಭಾಧ್ಯಕ್ಷತೆಯನ್ನು ಶ್ರೀ. ಆರ್. ಎಮ್. ಎಸ್. ರಾವ್, ಬಿ ಎ. ಬಿ ಎಲ್, ಉಡುಪಿ ಡಿ ಮುನ್ಸಿಫ್ ಕೋರ್ಟಿನ ಮುನ್ಸಿಫ್ ಅವರು ವಹಿಸಿದ್ದರು 'ಮುಕುಂದ ನಿವಾಸ'ದ ವಿಶಾಲ ಭಾಗವನ್ನು ಸುಸಜ್ಜಿತವಾಗಿ ಅಲಂಕರಿಸಿ ಹೊತ್ತಾರೆಯ ಎಳೆನೇಸರ ಸೊಬಗಿನ ಸ್ವರ್ಣರಾಜಿಯು ನೆರಳಲ್ಲಿ ವೃತ್ತಾಸನಗಳನ್ನು ಅಣಿಪಡಿಸಿ ಅತಿಥಿ ಅಭ್ಯಾಗತರನ್ನು ಸ್ವಾಗತೀಕರಿಸಿ ಸತ್ಕರಿಸುವುದರಲ್ಲಿ ನೌಕರವರ್ಗವು ತೋರಿದ ಕಾರ್ಯಕೌಶಲ್ಯ, ಶಿಸ್ತು, ಸುವ್ಯವಸ್ಥೆ, ವಿನಯ, ಆನಂದ, ಉತ್ಸಾಹ ಇವೆಲ್ಲ ಅವರ ಅನುದಿನ ವ್ಯವಹಾರ ಶೀಲ ಸ್ವಭಾವಗಳನ್ನು ಸಭಿಕರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತಿದ್ದವು ವ್ಯಾಪಕ ಪ್ರಾತಿನಿಧ್ಯವುಳ್ಳ ಪುರಪ್ರಮುಖ ಮಹಾಜನರಿಂದಲೂ ಪರವೂರಿನ ಮಹನೀಯರುಗಳಿಂದಲೂ ಸಭಾಮಂದಿರವು ಶೋಭಾಯಮಾನವಾಗಿತ್ತು ಮೃದು ಮಧುರ ವೀಣಾಗಾನ ಶ್ರವಣದಲ್ಲಿ ಸವಿಕಟ್ಟಾದ ಉಪಹಾರವು ತೀರಿದ ನಂತರ ಮಾನಪತ್ರಾರ್ಪಣ ಕಾರ್ಯಾರಂಭವಾಯಿತು. ಬ್ಯಾಂಕಿನ ಶಾಖೆಯ ಮುಖ್ಯ ಪತ್ತೇಗಾರರಾದ ಶ್ರೀ. ಎನ್ ಆನಂದರಾಯರು ಮಾನಪತ್ರವನ್ನೋದಿ ಅಂದ ಚಂದದ ಬೆಳ್ಳಿಯ ಕೇಸ್ಕೆಟಿನಲ್ಲಿಟ್ಟು ಪೈ ಸಹೋದರ ವರ್ಗಕ್ಕೆ ಅರ್ಪಿಸಿದರು. ಮಾನಪತ್ರವು ಪಿ ಎ. ಪೈ ಸಹೋದರರುಗಳ ಹೃದಯ ಬುದ್ಧಿಯಾತ್ಮತ್ರಯಗಳ ಯಥಾರ್ಥನಿರೂಪಣೆಯ ಸಂಕ್ಷಿಪ್ತ ಸಂಪೂರ್ಣಾವಧಿಯಂತಿತ್ತು ಅದರ ಪ್ರತಿಯೊಂದು ಶಬ್ದ ವಾಚಕಗಳಿಗೆ ಸಭಿಕರೆಲ್ಲ ಕೈಗುಟ್ಟುವಂತೆ ಉಲ್ಲೇಖಿತವಾಗಿತ್ತು ಪಿ ಎ ಪೈ ಸಹೋದರರುಗಳು ಸಿಂಡಿಕೇಟಿನ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ, ನಿರಂತರ ಪರಿಶ್ರಮದಿಂದ ಹೃತ್ಪೂರ್ವಕ ಸಾಹಸದಿಂದ ಬ್ಯಾಂಕಿನ ಶಾಖೆಗಳನ್ನು ಮದ್ರಾಸ್, ಬೊಂಬಾಯಿ, ಮೈಸೂರು ಪ್ರಾಂತ್ಯಗಳಲ್ಲಿ ೩೫ ಕಡೆಗಳಿಗೆ ಹರಡಿ ಪ್ರಾಮಾಣಿಕತೆ ಮತ್ತು ಭದ್ರತೆಯ ದೃಷ್ಟಿಯಿಂದ ಬ್ಯಾಂಕಿಂಗ್ ಸೌಕರ್ಯ ಸವಲತ್ತುಗಳನ್ನು ಜನತೆಗೆ ಜಾತಿ ಮತ ಭೇದವಿಲ್ಲದೆ ಒದಗಿಸಿಕೊಟ್ಟು, ಈ ಉದ್ದೇಶವು ಕಣ್ಮರೆಯಾಗದಂತೆ ಸಕಾಲದಲ್ಲಿ ಯುಕ್ತ ಸಲಹೆ ಸೂಚನೆಗಳನ್ನು ನೌಕರರಿಗೆ ಕೊಟ್ಟು, ತಾವಿಟ್ಟುಕೊಂಡಿರುವ ಜೀವನದ ಮಹೋನ್ನತ ಧ್ಯೇಯ ಹಾಗೂ ಜನತಾ ಸೇವೆಯ ಕಲ್ಪನೆಗೆ ಅನುಸಾರವಾಗಿ ಅವರೂ ಅವರ ಕರ್ತವ್ಯ ಕ್ಷೇತ್ರಗಳಲ್ಲಿ ದುಡಿಯುವ ರೀತಿ ನೀತಿಗಳನ್ನು ಹಾಕಿಕೊಟ್ಟು ಅಧಿಕಾರ ನಿರ್ವಾಹದಲ್ಲಿ ಪಿತೃಸದೃಶ ವಾತ್ಸಲ್ಯವನ್ನೂ ಬೆರೆಯಿಸಿ ನಡೆಯಿಸಿಕೊಂಡು ಬಂದುದಕ್ಕಾಗಿ ನೌಕರರು ತಮ್ಮ ಗೌರವಾದರ ಕೃತಜ್ಞತೆಯ ಪೂಜ್ಯತೆಗಳನ್ನು ವ್ಯಕ್ತಪಡಿಸುವ ಸವಿನಯ ಮಾತುಗಳಾದವು. ನವಶಾಸನದ ಅನಿವಾರ್ಯ ವಿಧಿಯಿಂದಾಗಿ ಪಿ ಎ ಪೈ ಸಹೋದರರು ಅಧಿಕಾರ ನಿವೃತ್ತರಾಗಬೇಕಾಗಿ ಬಂದಿದ್ದರೂ ಅತ್ಯಾವಶ್ಯಕವಾದ ಅವರ ಕತೃತ್ವಶಕ್ತಿ, ಸಹಾಯ, ಸಲಹೆ ಸೂಚನೆಗಳು ಶಾಶ್ವತವಾಗಿ ಈ ಸಿಂಡಿಕೇಟಿಗೆ ಮುಂದೆಯೂ ದೊರಕುವಂತೆ ಯುಕ್ತ ಮಾರ್ಗವನ್ನು ಬ್ಯಾಂಕಿನ ವ್ಯವಸ್ಥಾಪಕ ಮಂಡಳಿಯು ಕಂಡುಹಿಡಿದು ಅವರ ಅಮೌಲ್ಯ ಸೇವೆಯನ್ನು ತಿರುಗಿ ಗಳಿಸಿಕೊಂಡೀತೆಂಬ ನೌಕರವರ್ಗದ ಹಾರ್ದಿಕ ಆಕಾಂಕ್ಷೆಯು ಮಾನ ಪತ್ರದಲ್ಲಿ ಅಡಕವಾಗಿತ್ತು. ಸಿಂಡಿಕೇಟು ಬ್ಯಾಂಕಿನ ಪ್ರವರ್ಧಮಾನಕ್ಕೆ ಕಾರಣವಾದ ಈ ಸಹೋದರರು ನಾಲ್ವರ ವೈಯಕ್ತಿಕಗುಣ ವೈಶಿಷ್ಟ್ಯಗಳ ನಿವೇದನೆಯೂ ಇತ್ತು. ಹೀಗೆ ಸರ್ವಾಂಗ ಸುಂದರವೂ ಯಥಾರ್ಥವೂ ಮಿತಸ್ತುತಿ ವಿರಹಿತವೂ ಆಗಿದ್ದ ಮಾನಪತ್ರವನ್ನು ಹೊಂದಿದ ಪಿ.ಎ ಪೈ ಸಹೋದರರು ಸಾರ್ವತ್ರಿಕ ಅಭಿನಂದನೀಯರೇ ಎಂದ ಮೇಲೆ ಸಭಿಕರಲ್ಲಿ ಹಲವರು ಪಿ. ಎ. ಪೈ ಸಹೋದರರನ್ನು ಅಭಿನಂದಿಸಿ ಭಾಷಣವಿತ್ತರು.

ಶ್ರೀ ರೋಕ್ ಫೆರ್ನಾಂಡೀಸ್,
ಬಿ. ಎ, ಎಲ್ ಟಿ.,
ಹೆಡ್ ಮಾಸ್ತರ್, ಉಡುಪಿ ಬೋರ್ಡು ಹೈಸ್ಕೂಲ
ಇವರ ಭಾಷಣ ಸಂಗ್ರಹ

"ದಕ್ಷಿಣ ಹಿಂದೂಸ್ಥಾನದ ಬ್ಯಾಂಕಿಂಗ್ ಸಂಸ್ಥೆಗಳ ಸಾಲಿನಲ್ಲಿ ಈ ಸಿಂಡಿಕೇಟ್ಟು ಹೊಂದಿರುವ ಗೌರವ ಸ್ಥಾನದ ವಿಷಯವನ್ನಾಗಲೀ ಅದನ್ನು ಮುಟ್ಟಲು ಎರಡು ತೊಡರುಗಳನ್ನು ಎಡೆಗೊಟ್ಟು ತಡೆದು ಜಯಿಸಿ ಮುಂದಾದ ವಿವರಗಳನ್ನಾಗಲೀ ಹೇಳುವುದನ್ನು ಮುಂದಿನ ಭಾಷಣಕರ್ತರುಗಳಿಗೆ ಬಿಟ್ಟು ಈ ಬ್ಯಾಂಕಿನ ಒಂದು ವಿಶೇಷ ಗುಣವನ್ನು ಮಾತ್ರ ನಾನಿಲ್ಲಿ ಹೇಳಬಯಸುತ್ತೇನೆ

ಈ ಬ್ಯಾಂಕು ಅಪಪ್ರಚಾರಕ್ಕೆ ಒಳಗಾಗಿ ಒಡೆದುಕಬೇಕಾಗಿತ್ತು, ಆದರೆ ಪ್ರತಿ ಪ್ರಚಾರಕ್ಕೆ ಕೈಯಿಕ್ಕಲಿಲ್ಲ. ದೋಷಾರೋಪಣೆಗಳನ್ನು ಸಹಿಸಬೇಕಾಗಿತ್ತು; ಆದರೆ ಪ್ರತ್ಯಾರೋಪಣೆಗೆ ಮನಮಾಡಿಲ್ಲ. ವಿರೋಧ ಬಂದಲ್ಲೆಲ್ಲ ಪ್ರತಿರೋಧ ಗೈಯದೆ ಗೆದ್ದು ಎದ್ದು ಬಂದಿದೆ ೩೫ ಶಾಖೆಗಳುಳ್ಳ ಈ ಮಹಾ ಸಂಸ್ಥೆಯ ಯಂತ್ರದ ಚಾಲಕಸ್ಥಾನದ ಮೂಲಶಕ್ತಿ, ಚೇತನ ಸ್ವರೂಪಿಗಳಂತಿರುವ ಶ್ರೀ. ಪಿ ಎ. ಪೈ ಸಹೋದರರುಗಳ ನಿರಂತರ ಸಾಹಸ ಪರಿಶ್ರಮಗಳೇ ಈ ಸಂಘವನ್ನಿಷ್ಟು ಉನ್ನತಿಯ ಶಿಖರಕ್ಕೇರಿಸಿವೆ ಒಂದೇ ಒಂದು ನೌಕರನನ್ನಿಟ್ಟುಕೊಂಡು ಅವರು ತೊಡಗಿದ ಈ ಬ್ಯಾಂಕು ಇಂದು ಸುಮಾರು ಎರಡು ಸಾವಿರ ಬಾಯಿಗಳಿರುವ ಮುನ್ನೂರ ಒಂಭತ್ತು ಸಂಸಾರಗಳಿಗೆ ಅನ್ನ ನೀಡುತ್ತದೆ ಹಾರಿಯನ್ನು ನಿರ್ಮಿಸಿದವನೋ ಆಲ್ಪ್ ಪರ್ವತಾರೋಹಣಮಾಡಿದವನೋ ಯಾರು ಮಹಾ ಮನುಷ್ಯನೆಂದು ಪ್ರಸಿದ್ಧ ಆಂಗ್ಲ ಸಾಹಿತಿಯಾದ ಕಾರ್ಲಾಯಿಲನು ಕೇಳಿದ್ದ. ಒಂದು ಸೇನಾ ನಾಯಕನೋ ಎರಡು ಸಾವಿರ ಮಂದಿಯ ಅನ್ನದಾತನೋ ಯಾರು ಮಹಾ ವ್ಯಕ್ತಿಯೆಂದು ನಾನಿಂದು ಪ್ರಶ್ನಿಸುತ್ತೇನೆ ಉತ್ತರವು ಸುಸ್ಪಷ್ಟವಿದೆ. ಈ ಸಹೋದರರ ಮತ್ತೊಂದು ವೈಶಿಷ್ಟ್ಯವೆಂದರೆ ಒಡೂಡಲಿಂದ ಬಂದುದರ ಒಂದುತನದ ಭ್ರಾತೃಪ್ರೇಮಬದ್ಧತೆ ಮತ್ತು ಒಬ್ಬೊಬ್ಬನಲ್ಲಿ ಒಂದೊಂದು ಅಪೂರ್ವ ಗುಣವಿಶೇಷತೆ ಇಂತಹ ಸೋದರ ಕೂಟಗಳು ಅಧಿಕಾಧಿಕವಾಗಿ ನಮ್ಮ ನಾಡಿನಲ್ಲಿ ಮೂಡಿಬರಲೆಂದು ನನ್ನ ಪ್ರಾರ್ಥನೆ ರೋಮನ್ ಮಾತೆಯರು ತಮಗೆ ಹೊರೆಶಿಯನ್‌ನಂತಹ ಮಕ್ಕಳಾಗಲೆಂದು ಜಾನಸ್ ದೇವತೆಯನ್ನು ಪ್ರಾರ್ಥಿಸುತ್ತಿದ್ದರಂತೆ. ಈ ಸಭೆಗೆ ಬಂದಿರುವ ಹಾಗೂ ಬಾರದಿರುವ ಮಾತಾಪಿತರು ಪೈ. ಸಹೋದರರಂತಹ ಪುತ್ರ ರತ್ನಗಳ ಪ್ರಾಪ್ತಿಗಾಗಿ ಪ್ರಾರ್ಥಿಸಲೆಂದು ನನ್ನ ಬಯಕೆ! (ಮೆಚ್ಚಿನ ಕೈಚಪ್ಪಾಳೆ) ತಾವು ಜನ್ಮದಿತ್ತರಾದ ಈ ಸಂಸ್ಥೆಯನ್ನು ಪೋಷಿಸಿ ಮೇಲ್ಮೆಗೆ ತರುವ ದೃಷ್ಟಿಯಿಂದ ಸಾಲಗಾರರ ಮೂಳೆ ಮುರಿಯದೆ ಅವರನ್ನೂ ಸಲಹಿ ಸಂಪತ್ತಿಯನ್ನು ಬೆಳೆಯಿಸಿಕೊಂಡು ಬಂದಿದ್ದಾರೆ ಪೈ ಸಹೋದರರೆಂಬರೆ ಹೃದಯವುಳ್ಳ ಬ್ಯಾಂಕರರುಗಳೆಂದು ನಾನು ಜನರಿಗೆ ಸದಾ ಹೇಳುತ್ತ ಬಂದಿದ್ದೇನೆ ಈ ಮಾತಿನ ಅರ್ಥವನ್ನು ತಾವು ಮನನಗಾಬೇಕಾಗಿ ನನ್ನ ಬಯಕೆ. ಈ ಸಿಂಡಿಕೇಟಿನ ಅಧಿಕಾರಿಗಳ ಚುನಾವಣೆಯಲ್ಲಿ ಕೈಯಿರುವವರೆಲ್ಲರಲ್ಲಿ ನನ್ನ ಆಗ್ರಹಪೂರ್ವಕ ವಿನಂತಿಯೇನೆಂದರೆ—ಪೈ ಸಹೋದರರುಗಳ ಪರವಾಗಿ ನಿಮ್ಮ ವೋಟುಗಳನ್ನೆಲ್ಲ ಹಾಕಿರಿ. ಅವರು ಈ ಸಂಸ್ಥೆಯಿಂದ ಹೊರಗಾಗಿ ಬಾಳ ಮೆರೆಯಬಾರದೆಂದಲ್ಲ. ಅವರ ಮುಂದಾಳುತನವಿಲ್ಲದೆ ಈ ಬ್ಯಾಂಕು ಉಳಿದು ಊರ್ಜಿತವಾಗಲಾರದು ಶ್ರೀ ಪಿ. ಎ. ಪೈ ಸಹೋದರರುಗಳು ಉತ್ತರೋತ್ತರ ವಿಜಯಿಗಳಾಗಲಿ.

ಶ್ರೀ. ಎಸ್ ಯು. ಪಣಿಯಾಡಿ,
ಮ್ಯಾನೇಜಿಂಗ್ ಡೈರೆಕ್ಟರ, ಸಿಕ್ಸ್ಟಿ ಏಜನ್ಸಿ,
ಲಿಮಿಟೆಡ್, ಉಡುಪಿ.
ಇವರ ಭಾಷಣ ಸಂಗ್ರಹ

ಈ ಸಿಂಡಿಕೇಟ್ ಬೇಂಕು ಸ್ಥಾಪನೆಯಾದಂದಿನಿಂದ ಅದರಲ್ಲಿ ವ್ಯವಹಾರಗೈಯುತ್ತ ಅದರ ಅಭಿವೃದ್ಧಿಯ ಪ್ರತಿಯೊಂದು ಹೆಜ್ಜೆಯನ್ನು ಮೆಚ್ಚಿನ ಹಿಗ್ಗಿನಿಂದ ಅಭಿನಂದಿಸುತ್ತಿದ್ದವನು ನಾನು. ಪೈ ಸಹೋದರ ಒಡನಾಟದಲ್ಲಿದ್ದು ಅವರ ಗುಣವಿಶೇಷಗಳನ್ನು ಮನಗಂಡವ ನಾನು. ಪೈ ಸಹೋದರರೆಂದರೆ ಕೈಗೊಂಡ ಕಾರ್ಯವನ್ನು ಕೊನೆ

ತಾ 14-1 1939ರಲ್ಲಿ ಸಿಂಡಿಕೇಟು ಬೇಂಕಿನ ಚೆಯರ್‌ಮೆನರಾಗಿಯೂ ಮೆನೇಜಿಂಗ ಡೈರೆಕ್ಟರರಾಗಿಯೂ ಆರಿಸಲ್ಪಟ್ಟ ಬೇಂಕಿನ ಸಂಚಾಲಕ ಶಕ್ತಿಯಾದ

ಡಾ. ಟಿ. ಮಾಧವ ಪೈಗಳು

ಮುಟ್ಟಿಸುವುದರ ಸಂತತಧ್ಯಾನ ತಪಸ್ಸಿದ್ಧಿಯನ್ನು ಹೊಂದಿದ ಕರ್ಮಯೋಗಿಗಳು ಇವರು. ಇವರ ಆ ವರ್ಚಸ್ಸು ಇವರ ಬಳಿ ಸಾರಿದವರ ಮೇಲೆ ಬೀಳುತ್ತದೆ. ಇವರ ಕರ್ಮನಿಷ್ಠೆ, ಸಾಹಸ ಬುದ್ಧಿ, ಪ್ರಾಮಾಣಿಕತೆ, ಜನಸೇವಾಸಕ್ತಿ, ವ್ಯವಹಾರ ಕೌಶಲ್ಯ, ಇವನ್ನು ನೋಡಿ ಯಾರೂ ಮೆಚ್ಚಿ ವಿಶ್ವಾಸವಿಡಬೇಕು. ಮೇಲಾಗಿ ಒದವಿಗ ಪ್ರತಿಕಾಸನ್ನು ಇಡಿಮಾಡಿಕೊಡಬೇಕೆಂಬ ಛಲ, ಒಂಗಟ್ಟು ಸಾಲಗಾರರನ್ನು ಮಾಳಿ ಮುಂದುವರಿ ಉಳಿಸಬೇಕೆಂಬ ಇವರ ಅಂತಃಕರಣ ಅಂತೂ ಬ್ಯಾಂಕಿನ ನಿಧಿಯು ಭದ್ರತೆ ಶಿಥಿಲವಾಗಕೂಡದೆಂಬ ನಿರ್ಧಾರ, ಇವುಗಳಿಂದಲ್ಲ ಈ ಸಿಂಡಿಕೇಟು ದಕ್ಷಿಣ ಹಿಂದೂಸ್ಥಾನದಲ್ಲಿ ಜನತೆಯ ಮೆಚ್ಚುಗೆ ವಿಶ್ವಾಸಗಳನ್ನು ಹೊಂದಿ ವಿಸ್ತಾರವಾಗಿ ಹರಡಿದ. ಈ ಪೈ ಸಹೋದರರು ತಮ್ಮ ವ್ಯವಹಾರ ಶಕ್ತಿಯನ್ನು ಕೇವಲ ತಮ್ಮ ಅರ್ಥ ಸಂಗ್ರಹಕ್ಕಾಗಿಯೇ ವಿನಿಯೋಗಿಸುತ್ತಿದ್ದರೆ ಅವರಿಂದು ಧನಿಕ ಶ್ರೇಷ್ಠರಾಗುತ್ತಿದ್ದರು. ಜನರ ದುಡ್ಡಿಗೆ ಚಲಾವಣೆ ಕೊಟ್ಟು ಮುಳುಗದಂತೆ ನೋಡಿಕೊಂಡು ಆದರಿಂದ ಜನಸಾಮಾನ್ಯರ ಔದ್ಯೋಗಿಕ ಆರ್ಥಿಕ ವ್ಯಾವಹಾರಿಕ ಸಂಕಷ್ಟಗಳನ್ನು ನಿವಾರಿಸಿ ಜನತಾಸೇವೆಯನ್ನು ಮಾಡಬೇಕೆಂಬ ಪ್ರಾಮಾಣಿಕತೆಯ ಹೊಣೆಗಾರಿಕೆಯ ಸ್ವಾರ್ಥತ್ಯಾಗದ ಮಹಾ ಕಾರ್ಯವನ್ನು ಈ ಸಿಂಡಿಕೇಟಿನ ಮೂಲಕ ನಿರ್ವಹಿಸುವುದರಲ್ಲಿ ಅವರು ಆದಿಯಿಂದ ಇಂದಿನವರೆಗೆ ತೋರಿದ ಅಸಾಮಾನ್ಯ ದಕ್ಷತೆಯು ಮುಂದೆಯೂ ಅವರಿಗೆ ಅನಿವಾರ್ಯವಾಗಿ ಬೇಕಾಗಿದೆ. ಈ ಸಂಸ್ಥೆಯ ಪಾಲುಗಾರರು ಇದನ್ನು ಲಕ್ಷ್ಯದಲ್ಲಿಟ್ಟು ಯುಕ್ತ ಮಾರ್ಗವನ್ನನುಸರಿಸಬೇಕಾಗಿ ನನ್ನ ವಿನಂತಿ.

ಸಿಂಡಿಕೇಟ್ ಬ್ಯಾಂಕಿನ ಡೈರೆಕ್ಟರರಲ್ಲೊಬ್ಬರಾದ

ಡಾ| ಶ್ರೀಪಾದರಾಯರ ಭಾಷಣ ಸಂಗ್ರಹ—

ಶ್ರೀ ಪೈ ಸಹೋದರರು ಈಗ ನಿವೃತ್ತರಾಗುವುದಿದ್ದರೂ ಈ ಸಂಸ್ಥೆಗೆ ಬೇಕಾಗಿಯೇ ಇದ್ದಾರೆ. ಈ ಬ್ಯಾಂಕನ್ನು ಸ್ಥಾಪಿಸಿ ಇಷ್ಟು ಮುಂದು ತಂದ ಅವರೇ ಇನ್ನೂ ಸ್ವಲ್ಪ ಕಾಲದ ತನಕ ಅದರ ಆಡಳಿತೆಯ ಕಡಿವಾಣ ಹಿಡಿದು ಮುನ್ನಡಯಿಸುವುದು ಸರ್ವದೃಷ್ಟ್ಯಾ ಅವಶ್ಯವಿದೆ (ಕೇಳಿರಿ)

ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರ ಭಾಷಣದ ಸಂಗ್ರಹ—

ಈ ಸಿಂಡಿಕೇಟ್ ಬ್ಯಾಂಕಿನ ಪ್ರತ್ಯಕ್ಷ ಸಂಬಂಧವಿಲ್ಲದವನಾಗಿದ್ದರೂ ಅದರ ಪ್ರಗತಿಯನ್ನು ಅತ್ಯಂತ ಕುತೂಹಲದಿಂದ ಪರಿಶೀಲಿಸುತ್ತಿದ್ದವನು ನಾನು. ಬ್ಯಾಂಕಿನ ಅಭ್ಯುದಯಕ್ಕೆ ಜನತೆಯ ವಿಶ್ವಾಸ ಪಾತ್ರತೆಯು ಅದು ಬರೇ ಬ್ಯಾಲೆನ್ಸ್ ಶೀಟಿನಿಂದುಂಟಾಗುವುದಿಲ್ಲ. ಜನಸಾಮಾನ್ಯಕ್ಕೆ ಅದೊಂದು ಬಿಡಿಸಲಾಗದ ಒಗಟು ಮಂದಿಯು ನಂಬುವುದು ವ್ಯವಸ್ಥಾಪಕರನ್ನು. ಆ ನಂಬಿಕೆಗೆ ಬೇಕಾದ ಮೂಲ ಭಂಡವಲ ಮ್ಯಾನೇಜಿಂಗ್ ವ್ಯಕ್ತಿಗಳ ಶೀಲ (Character) ಈ ಭಂಡವಲವು ಪೈ ಸಹೋದರರಲ್ಲಿ ವಿಪುಲವಾಗಿದೆ. ಅವರ ವೈಯಕ್ತಿಕ ಜೀವನವಾಗಲಿ ಸಾರ್ವಜನಿಕ ವ್ಯವಹಾರವಾಗಲಿ ನಿಷ್ಕಳಂಕವಾದುದು. ಪ್ರಶಂಸನೀಯವಾದುದು ಬ್ಯಾಂಕಿಂಗ್ ಕಾರ್ಯ ನಿರ್ವಹಣದಲ್ಲಿ ಹುಸು ದುಸ್ಸಾಹಸದ ಶಕ್ತಿ ಬೇಕು. ಆದರೆ ಭದ್ರತೆಗೆ ಬಾಧಕವಾದ ಮುಂಕಾಣದ ದುಮುಕಾಟ (Risk & Venture)ಶ್ರೀಯುಸ್ಸರವಲ್ಲ ಅಂತಹದಕ್ಕೆ ಮನಗೊಡದಿರುವ ಜಾಣ್ಮೆಯು ಪೈ ಸಹೋದರರುಗಳಲ್ಲಿ ಉಂಟು.



ಸತ್ಕಾರ ಕೂಟದ ನೋಟ ಒಂದು

ಇಂದು ಅವರು ವ್ಯವಹಾರದಲ್ಲಿ ಇಳಿಸುವ ಯೋಜನೆಯು ಅದೆಂದೋ ಶ್ರೀ ಮಾಧವ ಪೈಗಳ ತಲೆಯಲ್ಲಿ ಸುಳಿಯುತ್ತಿದ್ದು ಸಾಧಕ ಬಾಧಕಗಳ ಸೂಕ್ಷ್ಮ ವಿಚಾರಗಳ ಘರ್ಷಣೆಯಲ್ಲಿ ತಿಕ್ಕಲ್ಪಟ್ಟು ಅಂಕ ಸಂಖ್ಯೆಗಳ ಅಂಕೆಗೆ ಒಳಗಾಗಿ ಸಾಧ್ಯ ಸ್ಥಿರವೆಂದು ಮೊದಲೇ ನಿರ್ಧರವಾದುದು. ಇಂತಹ ವ್ಯವಹಾರ ಕೌಶಲ್ಯವಿದ್ದವರು ಸೂತ್ರಬದ್ಧತೆಯಿಂದ ಆಡಳಿತೆಯನ್ನು ನಿರ್ವಹಿಸುವ ದಕ್ಷತೆಯುಳ್ಳವರು ರಭಸದಿಂದ ಶಾಖೆಗಳನ್ನು ತೆರೆಯುತ್ತ ಹೋದರೂ ಗಾಬರಿಗೆ ಕಾರಣವಿಲ್ಲ. ಪೈ ಸಹೋದರರ ಅಸಾಮಾನ್ಯ ರತ್ನ ವಿಶೇಷಗಳನ್ನರಿಯದವರು ಈ ಭಾಗದ ಅವರ ಕಾರ್ಯಕಲಾಪಗಳನ್ನು ಕಂಡು ಬೆರಗಾಗಿರಬಹುದು. ಆದರೆ ಇತ್ತೀಚೆಗೆ ಬ್ಯಾಂಕಿಂಗ್ ವಾತಾವರಣದಲ್ಲೆದ್ದ ಚಂಡಮಾರುತದ ಹತಿಗೆ ಈ ಶಾಖೆಗಳುಳ್ಳ ಮಹಾ ಸಂಸ್ಥಾವೃಕ್ಷವು ಅಚಲವಾಗಿ ನಿಂತಿರುವುದೇ ಈ ಶಾಖೆಗಳ ಹಾಗೂ ಮೂಲಖಂಡದ ಅಸಾಧಾರಣ ಶಕ್ತಿಯನ್ನು ವ್ಯಕ್ತಗೊಳಿಸುತ್ತವೆ. ಮಹತ್ತಾದ ಭವಿಷ್ಯವುಳ್ಳ ಈ ಸಿಂಡಿಕೇಟು ಇನ್ನೂ ಕೌಮಾರ್‍ಯಾವಸ್ಥೆಯಲ್ಲಿದಯಷ್ಟೆ. ಇದರ ಸರ್ವತೋಮುಖವಾದ ಬೆಳವಣಿಗೆಗೆ ಸಹೋದರರ ಮಾರ್ಗದರ್ಶಿತ್ವವು ಮುಂದೆಯೂ ಅನಿವಾರ್ಯವಾಗಿದೆ. ಪೈ ಸಹೋದರರು ಸಿಂಡಿಕೇಟಿಗೂ, ಉಡುಪಿಗೂ, ಅಖಿಲ ಕರ್ನಾಟಕಕ್ಕೂ ಉಜ್ವಲ ರತ್ನ ಚತುಷ್ಟಯಗಳಾಗಿ ಬಾಳಿ ಬೆಳಗಲಿ!

ಶ್ರೀ ಬಿ ವೈಕುಂಠ ಬಾಳಿಗ, ವಕೀಲ್, ಮಂಗಳೂರು ಇವರ ಭಾಷಣ ಸಂಗ್ರಹ

"ಇಂದಿನ ಸಮಾರಂಭವನ್ನು ತಕ್ಕಷ್ಟು ಪೂರ್ವಸನ್ನಾಹದಿಂದ ನೆರವೇರಿಸಿದ್ದರೆ ಇದರ ಶಾಖೆಗಳಿರುವೆಡೆಗಳಲ್ಲೆಲ್ಲ ನಿಮಂತ್ರಣೆ ಮುಟ್ಟುವಷ್ಟು ಮುಂದಾಗಿ ನಿಶ್ಚಿತವಾಗಿ ನಿಶ್ಚಿತವಾಗಿದ್ದರೆ ಇಂದು ಈ ಸಭೆಯು ಇತ್ತೋಽವ್ಯತಿಶಯವಾದ ಸಭಿಕರಿಂದಲೂ ಪ್ರತಿನಿಧಿಗಳಿಂದಲೂ ಶುಭಸಂದೇಶಗಳ ಪತ್ರರಾಶಿಯಿಂದಲೂ ಸುಶೋಭಿಸುತ್ತಿತ್ತು. ಏಕೆಂದರೆ ಪಿ. ಎ. ಪೈ ಸಹೋದರರ ಗುಣ ಶೀಲ ವ್ಯವಹಾರ ಕೌಶಲ್ಯಕ್ಕೆ ಮೆಚ್ಚಿದವರು. ಈ ಸಿಂಡಿಕೇಟು ಬ್ಯಾಂಕಿಗೆ ಮುಂದೆಯೂ ಇವರ ಮಾರ್ಗದರ್ಶಿತ್ವವು ಅನಿವಾರ್ಯವೆಂಬ ಅಭಿಮತವಿದ್ದವರು ನಮ್ಮ ಊರು ಪ್ರಾಂತಗಳಲ್ಲಿಯೂ ವಿಪುಲ ಸಂಖ್ಯೆಯಲ್ಲಿದ್ದಾರೆ. ಅವಸರದಿಂದ ಏರ್ಪಡಿಸಿದ ಈ ಸಮಾರಂಭಕ್ಕೆ ಅವರೆಲ್ಲ ಬರಲಾಗದಿದ್ದರೂ ಇಂದಿನ ಕಾರ್ಯಕಲಾಪಗಳ ವರದಿಯನ್ನೋದಿ ಪೈ ಎನ್ನುವುದರೊಂದಿಗೆ ಇಂತಹ ಸುಸಂದರ್ಭವು ತಮಗೆ ಅಲಭ್ಯವಾದುದಕ್ಕಾಗಿ ವಿಷಾದಿಸಲೂ ಬಹುದು. ತನ್ನ ಜೀವನಾವಧಿಯೊಳಗೆ ತನ್ನ ಊರಲ್ಲಿ ಯಾರೂ ಪ್ರಸಿದ್ಧಿಯನ್ನು ಹೊಂದುವುದಿಲ್ಲವೆಂಬುದು ಸಿದ್ಧಾಂತವಾದರೂ ಪೈ ಸಹೋದರರ ಮಟ್ಟಿಗೆ ಅದು ಅಪವಾದವಾಗಿದೆ. ಅದಕ್ಕೆ ಇಂದಿನ ಈ ಮಹಾಸಭೆಯು ಒಂದು ನಿದರ್ಶನ. ಸುಮಾರು ಹದಿಮೂರು ವರುಷಗಳ ಹಿಂದೆ ಪ್ರಖ್ಯಾತಿ ಕುಳಿತ ಹಲವು ಬ್ಯಾಂಕುಗಳ ನಡುವೆ ಪೈ ಸಹೋದರರು ಈ ಬ್ಯಾಂಕಿನ ಅಲ್ಪಾರಂಭಮಾಡಿ ಇಂದಿಗೆ ಸುಮಾರು ಐವತ್ತು ಲಕ್ಷ ಪ್ರವೃತ್ತಿನಿಧಿಯುಳ್ಳ ಸಂಸ್ಥೆಯನ್ನಾಗಿ ಮಾಡಿರುವರೆಂದ ಮೇಲೆ ಅವರ ಕರ್ತೃತ್ವಶಕ್ತಿ, ವ್ಯವಹಾರ ಕೌಶಲ್ಯ ಶಿಸ್ತಿನ ವ್ಯವಸ್ಥೆ ನಿರಂತರ ಕಾರ್ಯತತ್ಪರತೆ ಇವುಗಳಿಗೆ ಯಾರೂ ಮೆಚ್ಚಲೇಬೇಕು. ಅವರ ಆತ್ಮೀಯ ಸಂಸರ್ಗದಲ್ಲಿದ್ದು ಅವರ ಸುಖಕಷ್ಟಗಳಲ್ಲಿ ಅಲ್ಪವಾದರೂ ಸಹಭಾಗಿಯಾಗಿದ್ದ ನಾನು ಇದಕ್ಕಿಂತಲೂ



ಸತ್ಕಾರಸಮಾರಂಭದ ಇನ್ನೊಂದು ದೃಶ್ಯ

ಹೆಚ್ಚಾಗಿ ಹೇಳಿದರೆ ಅದು ಯಥಾರ್ಥವಾದರೂ ಅತಿಶಯೋಕ್ತಿಯೆಂದು ತೋರಬಹುದು. ಆದುದರಿಂದ ಇಷ್ಟೊಂದು ಮುಂದುತಂದವೆಂದು ಪೈ ಸಹೋದರರು ಸುಸು ವಿಶ್ರಾಂತಿಗೆ ಮನಮಾಡದೆ ಈ ಬ್ಯಾಂಕಿಗ ಸಂಸ್ಥೆಯ ಮೂಲಕ ವಿಶಾಲಕ್ಷೇತ್ರದಲ್ಲಿ ಸಾರ್ವಜನಿಕ ಸೇವೆಯನ್ನು ಕೈಕೊಳ್ಳುತ್ತ ಮುಂದುವರಿವಂತೆ ಅವರನ್ನು ಭಗವಂತನು ಅನುಗ್ರಹಿಸಲಿ.

ಶ್ರೀ ಆರೂರು ಲಕ್ಷ್ಮೀನಾರಾಯಣರಾವ್, ಚೇರ್‌ಮ್ಯಾನ್ ಉಡುಪಿ ಮುನ್ಸಿಪಾಲಿಟಿ, ಇವರ ಭಾಷಣ ಸಂಗ್ರಹ—

'ಇಂದು ಸಿಂಡಿಕೇಟಿನ ನೌಕರರು ಅರ್ಪಿಸಿದ ಮಾನಪತ್ರದ ಒಕ್ಕಣೆಯಲ್ಲಿ ಅವರು 'ತಮ್ಮ ಪರವಾಗಿ' ಎಂದಿರುವ ಮಾತನ್ನು ತೆಗೆದು 'ಸಭಿಕರ ಪರವಾಗಿ' ಎಂದರೂ ಮಾನಪತ್ರವು ಯಥಾವತ್ತಾಗಿ ಒಪ್ಪುವುದೇ. ಪೈ ಸಹೋದರರು ಶಾಖೆಗಳ ಕಾರ್ಯವ್ಯವಹಾರವನ್ನು 'ಮುಕುಂದ ನಿವಾಸ'ದಲ್ಲಿ ಕುಳಿತು ಬೊಟ್ಟೊಂದನ್ನು ಒತ್ತಿ ನಡೆಯಿಸುವುದರ ರಹಸ್ಯವು ಅವರು ನೌಕರರನ್ನು ಚುನಾಯಿಸಿ ನೇಮಿಸಿಕೊಳ್ಳುವುದರಲ್ಲಿದೆ. ಅಲ್ಲಿ ನೌಕರನಾಗಬೇಕಾದರೆ ದೊಡ್ಡವರ ಪ್ರಶಸ್ತಿ ಪತ್ರಬೇಕಾಗಿಲ್ಲ. ವ್ಯಕ್ತಿಯಲ್ಲಿ ಪ್ರಾಮಾಣಿಕತೆ, ಕಾರ್ಯನಿರ್ವಾಹಕ ಶಕ್ತಿ ಇವು ಬೇಕು. ಇವನ್ನು ಕಾರ್ಯತಃ ಪರೀಕ್ಷಿಸಿಯೇ ನೌಕರರ ನೇಮಕದ ವ್ಯವಸ್ಥೆ. ಇಷ್ಟಮಿತ್ರ ಬಂಧುಬಳಗವೆಂಬ ದಾಕ್ಷಿಣ್ಯವು ನೌಕರರ ಪೂರೈಕೆಯಲ್ಲಿ ಬರುವುದಿಲ್ಲ. ಈ ಕಾರ್ಯವು ಮತ್ತಷ್ಟು ವಿಚಕ್ಷಣತೆಯಲ್ಲಿ ನೆರವೇರುವಂತೆ ಇತ್ತೀಚೆಗೆ ಇವರು ಬ್ಯಾಂಕಿಂಗ್ ವ್ಯವಹಾರದಲ್ಲಿ ಶಿಕ್ಷಣ ಕೊಡುವ ಶಾಲೆಯನ್ನೇ ಸ್ಥಾಪಿಸಿ ತಮ್ಮ ನೌಕರರುಗಳನ್ನು ಆಯ್ದು ತಿದ್ದಿ ತೆಗೆದುಕೊಳ್ಳುವ ರೀತಿಯು ಪ್ರಶಂಸನೀಯವಿದೆ. ಸಿಂಡಿಕೇಟಿನ ಚಟುವಟಿಕೆಗಳಲ್ಲಿ ಉದ್ಯಮ ಕಾರ್ಖಾನೆ ಮುಂತಾದುವೂ ಸೇರಿರುವುದರಿಂದ ನೂರಾರು ನೌಕರರಿಗೂ ಕೂಲಿಗಳಿಗೂ ಜೀವನಕ್ಕೊಂದು ಮಾರ್ಗ ಕಲ್ಪಿಸಿಕೊಡುವ ವಿಶೇಷ ಲಕ್ಷಣವಿದೆ. ಇಂತಹ ಹಲವು ಯೋಜನೆಗಳಿಗೆಲ್ಲ ಜನ್ಮದಾತರಾದ ಶ್ರೀ ಮಾಧವಪೈಗಳೂ ಅವರ ಸಹೋದರರೂ ಅಭಿನಂದನೀಯರು."

ಡಾ| ಮಾಧವಪೈಗಳ ಭಾಷಣ ಸಂಗ್ರಹ

"ಈ ಸಿಂಡಿಕೇಟ ಸಂಸ್ಥೆಯ ಸ್ಥಾಪಕರೂ ಚಾಲಕರೂ ಆಗಿ ನಾವು ಮಾಡಿರುವ ನಮ್ಮ ಶಕ್ತ್ಯನುಸಾರ ಸೇವೆಯನ್ನು ನೀವೆಲ್ಲ ಕೊಂಡಾಡಿದುದು ನಮ್ಮ ಭಾಗ್ಯವೇ. ಆದರೆ ಸಿಂಡಿಕೇಟು ಇಂದು ಒಂದು ಲಕ್ಷ ರೂಪಾಯಿಯ ವಾರ್ಷಿಕ ಐನ್ ಮುನಾಫೆಯುಳ್ಳ ಸಂಘವಾಗಿ ಪರಿಣಮಿಸಿದುದು ಕೇವಲ ನಮ್ಮ ನಾಲ್ವರ ಕಾರ್ಯಾಸಕ್ತಿ, ಸಾರ್ವಜನಿಕರ ವಿಶ್ವಾಸ ಸಹಕಾರ, ಸಹಾನುಭೂತಿ ಇವೆಲ್ಲ ಪ್ರಮುಖ್ಯ ಕಾರಣಗಳೇ. ನಾಡಿನಲ್ಲಿ ಚದರಿ ನಿದ್ರಿತವಾಗಿ ಬಿದ್ದಿರುವ ಸಿರಿವಂತರ ನಿಧಿಗಳನ್ನು ಸಂಗ್ರಹಿಸಿ ಅದರ ಭದ್ರತೆಗೆ ಬಾಧಕ ಬಾರದಂತಹ ಪಾಲಕತ್ವವನ್ನು ಕೊಟ್ಟು ನಾಡಿನ ಉದ್ಯಮ ಕೈಗಾರಿಕೆ ವ್ಯಾಪಾರ ವ್ಯವಹಾರಗಳಲ್ಲಿ ಅದನ್ನು ಹರಿಸುಗೊಳಿಸಿ ಜನಜೀವನದಲ್ಲೊಂದು ಚೈತನ್ಯವನ್ನುಂಟುಮಾಡಬೇಕೆಂದು ನಾವು ಸಹೋದರರು ಕಳೆದ ಹದಿಮೂರು ವರುಷಗಳಿಂದ ನಮ್ಮ ದೃಷ್ಟಿಪಥದಲ್ಲಿ ನಿರಂತರ ಇಟ್ಟುಕೊಂಡಿರುವ ಧ್ಯೇಯ, ಆಗುರಿಯನ್ನು ಮುಟ್ಟುವುದಕ್ಕಾಗಿ ನಾವು ದೀರ್ಘ ವಿಚಾರ ವಿಮರ್ಶೆ ಪರಿಶೀಲನೆ ಪ್ರಯೋಗಗಳನ್ನು ಮನಗಂಡು ನಿರ್ಧರಿಸಿದ ಹಲವು ಯೋಜನೆಗಳನ್ನು ಕಾ

ಪಿ. ಎ. ಪೈ ಸಹೋದರರಿಗೆ ಮಾನಪತ್ರ ಸಮರ್ಪಣೆ

ರ್ಯರಂಗಕ್ಕಿಳಿಸಲು ನಾವಿನ್ನೂ ಸಮರ್ಥರಾಗಿಲ್ಲ. ನವ್ಯದಿಮ ಕನ್ನಿಕಾವಸ್ಥೆಯನ್ನು ಈಗ ತಾನೆ ದಾಟುತ್ತಿರುವ ನವವಧು ವಿನಂತಿರುವ ಸಂಸ್ಥೆ. ನಾವೇನೋ ಪಿತೃಸದೃಶ ಎಚ್ಚರಿಕೆಯಿಂದ ಹಿತಚಿಂತನೆಯಿಂದ ವಾತ್ಸಲ್ಯದಿಂದ ಅದನ್ನು ಪಾಲಿಸಿಕೊಂಡು ಬಂದಿದ್ದೇವೆ. ಇದಕ್ಕೆ ಹಳ್ಳಿನಾಡಿನ ಹುಡುಗಿಯ ಶಾರೀರಿಕ ಶಕ್ತಿ ಇದೆ. ನಾಗರಿಕ ವಧುವಿನ ಕೌಶಲ್ಯವೂ ಇದೆ. ಯಾವ ಸ್ವಾತಂತ್ರ್ಯವಶ್ಲಿಟ್ಟರೂ ಪರಿಸ್ಥಿತಿಯನ್ನು ಹೊಂದಿಕೊಂಡು ತನ್ನ ಕಾರ್ಯದಲ್ಲಿ ಜಯಶಾಲಿಯಾಗಿ ಮುಂದರಿವ, ಬಾಳಿಬೆಳಗುವ ಶೀಲಬುದ್ಧಿಗಳನ್ನು ಕಲಿಸಿದ್ದೇವೆ. ಹಳ್ಳಿ ಮೂಲೆಯಲ್ಲಿಯೂ ಅದು ಬಾಳಿನಲ್ಲಿದೀತು. ಲಂಡನಿನಲ್ಲಿಯೂ ಕಳೆಗೊಂಡು ಮೆರೆದೀತು

೧೪ನೇ ಪುಟ ನೋಡಿರಿ

THE
Canara Banking Corpoon Udipi, Limited
WILL NOWECEIVE
SEASON DPOSITS
AT ALL BNCHES
at
3½ per cent r annum
REPAYABLE AFT 6 MONTHS.
For Particulars Call at or Ap to any of its Branches

ಉಡುಪಿ, ಗುರುವಾರ, ತಾ. ೨೬-೧-೩೯

ತ್ರಿಪುರಿ ಕಾಂಗ್ರೆಸಿನ ಅಧ್ಯಕ್ಷತನ

ಬ್ರಿಟಿಷ್ ಸರಕಾರವು ಏಕಕಂಠವಾದ ಹಿಂದೀ ಜನಮತವನ್ನು ಧಿಕ್ಕರಿಸಿ ತನ್ನಿಚ್ಛಾನುಸಾರ ಫೆಡರೇಶನನ್ನು ಹಿಂದೀಯರ ಗಂಟಲೊಳಗೆ ತುರುಕಲೆತ್ನಿಸುವ ಸಂದಿಗ್ಧ ಕಾಲದಲ್ಲಿ ಹಿಂದೀಯರೆಲ್ಲರೂ ಒಕ್ಕಟ್ಟಿನಿಂದ ಅದನ್ನು ವಿರೋಧಿಸುವುದು ಆತ್ಯಗತ್ಯ. ಈ ಒಕ್ಕಟ್ಟಿಗೆ ಹಿಂದು ಮುಸಲ್ಮಾನ ಪ್ರಶ್ನೆಯು ದೊಡ್ಡ ತೊಡಕಾಗಿ ನಿಂತಿದೆ. ಮಿ. ಜಿನ್ನಾರವರ ಉದ್ಧಟ ಧೋರಣೆಯಿಂದಾಗಿ ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸಿನೊಳಗೆ ಐಕ್ಯವನ್ನುಂಟುಮಾಡಲು ನಡೆದಿರುವ ಪ್ರಬಲ ಯತ್ನಗಳು ನಿರರ್ಥಕವಾಗಿವೆ. ಬಾರ್ಡೋಲಿಯಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿ ಮುಸಲ್ಮಾನರನ್ನು ಕೆಲಮಟ್ಟಿಗೆ ತೃಪ್ತಿಗೊಳಿಸುವ ನಿರ್ಣಯಗಳಾಗಿರುವವು. ಅವುಗಳಿಗೆ ಅಗಾ ಖಾನರಂತಹ ಪ್ರತಿಷ್ಠಿತ ಮುಸಲ್ಮಾನ ಮುಖಂಡರ ಬೆಂಬಲ ಕೂಡಾ ದೊರೆತಂತಿದೆ. ಸರ್ವಸಾಧಾರಣ ಮುಸಲ್ಮಾನ ಜನ ಮತವೂ ಈ ನಿರ್ಣಯಗಳಿಂದ ತೃಪ್ತಿಗೊಂಡಂತೆ ತೋರುತ್ತದೆ. ಈ ಸನ್ನಿವೇಶದಲ್ಲಿ ಹಿಂದೂಮುಸಲ್ಮಾನ ಬಾಂಧವ್ಯಕ್ಕಾಗಿ ಅವಿಶ್ರಾಂತವಾಗಿ ದುಡಿಯುತ್ತಾ ಒಂದು, ವಿವೇಕಶಾಲಿ ಮುಸಲ್ಮಾನರೆಲ್ಲರ ಮನ್ನಣೆಗೆ ಪಾತ್ರರಿರುವ ಮೌಲಾನ ಅಬುಲ್ ಕಲಮ್ ಅಜದರು ತ್ರಿಪುರ ಕಾಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಡುವುದು ಯುಕ್ತವಿತ್ತು. ಅಂತಹ ಮಹತ್ವಾದ ಜವಾಬ್ದಾರಿಯನ್ನು ಹೊರಲು ಈಗ ತನ್ನ ಆರೋಗ್ಯ ನೆಟ್ಟಗಿರುವುದಿಲ್ಲೆಂದು ಮೌಲಾನ ಅಜದರು ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದಿರುವರು. ಖಾನ್ ಅಬ್ದುಲ್ ಗಫರ್ ಖಾನರು ಆರಂಭದಲ್ಲೇ ತಾನು ಕಾಂಗ್ರೆಸ್ ಪ್ರೆಸಿಡೆಂಟನಂತಹ ಗೌರವ ಸ್ಥಾನವನ್ನು ಸ್ವೀಕರಿಸಲು ಸಿದ್ಧನಿಲ್ಲೆಂದು ನಿರಾಕರಿಸಿ ಬಿಟ್ಟಿರುವರು. ಇನ್ನುಳಿದ ಇಬ್ಬರು ಉಮೇದ್ವಾರಿಗಳೆಂದರೆ ಆಂಧ್ರದೇಶದ ಪರಿಪಕ್ವ ಅನುಭವಶಾಲಿ ಮುಖಂಡ ಶ್ರೀ ಪಟ್ಟಾಭಿ ಸೀತಾರಾಮಯ್ಯನವರು ಮತ್ತು ಅಧ್ಯಕ್ಷರಾಗಿರುವ ರಾಷ್ಟ್ರಪತಿ ಸುಭಾಷ್ ಚಂದ್ರ ಭೋಸರು. ಇವರಿಬ್ಬರಲ್ಲಿ ದೇಶ ಯಾರಾದರೊಬ್ಬರನ್ನು ಆರಿಸಬೇಕಾ

ಶ್ರೀ ಪಟ್ಟಾಭಿ ಸೀತಾರಾಮಯ್ಯನವರು ...ಂತ ಮೇಧಾವಿಯು. ಕಾಂಗ್ರೆಸಿನ ಸುವರ್ಣ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕಾಂಗ್ರೆಸ್ ಇತಿಹಾಸವನ್ನು ಬರೆದು ಸರ ಮೆಚ್ಚಿಗೆಗೆ ಪಾತ್ರರಾದವರು. ದೇಶೀಯ ಸಂಸ್ಥಾನಿಕ ಪ್ರಜೆಗಳ ಸ್ವಾತಂತ್ರ್ಯ ಧ್ವನಿಯು ಕೇಳಿಸು ಮೊದಲಿಂದಲೂ ಮುಂದುವರಿಸುತ್ತಾ ಬಂದ ಮುಖಂಡರು. ಈ ಸಮಸ್ಯೆಯು ಈಗ ಕಾಂಗ್ರೆಸಿನೊಳಗೂ ಪ್ರಾಮುಖ್ಯತೆಪಡೆದಿರುವುದರಿಂದ ಶ್ರೀ ಪಟ್ಟಾಭಿಯವರ ಅನುಭವ ಮತ್ತು ಸಲಹೆಯು ಬಹಳ ಪ್ರಯೋಜನಕಾರಿಯಾಗಬಹುದು. ...ರಿ ಅಖಿಲ ಭಾರತದ, ವಿಶೇಷವಾಗಿ ತೆಂಕಣ ಭಾರತದ ಎದೆಯನ್ನು ಹುರಿಗೊಳಿಸಿ ...ತ್ಸಾಹಪರ ಬೆಂಬಲ ಪಡೆಯುವಂತಹ ತೇಜಸ್ವೀ ನಾಯಕತ್ವವು ಶ್ರೀ ಪಟ್ಟಾಭಿಯವರಲ್ಲಿ ಇರುವುದೇ ಎಂಬುದು ಸಂದೇಹಕರ. ಇದು ಹೊರತು ಫೆಡರೇಶನಿನ ವಿರೋಧವಾಗಿ ಉಗ್ರಚಳವಳಿ ಹೂಡಬೇಕಾಗುವ ಮತ್ತು ಹೆಚ್ಚಿನ ಜಾಗ್ರತೆಯಾಗಿ ಅಂತರರಾಷ್ಟ್ರೀಯ ರಾಜಕೀಯ ದೃಷ್ಟಿಯಿಂದ ಕಾಂಗ್ರೆಸು ತನ್ನ ಧೋರಣೆಯನ್ನು ರೂಪಿಸಿಕೊಳ್ಳಬೇಕಾದ ಪ್ರಕೃತದ ಸಂದರ್ಭದಲ್ಲಿ ಕಾಂಗ್ರೆಸಿನ ಕಣ-ಧಾರರಾಗುವಷ್ಟು ವ್ಯಕ್ತಿತ್ವವನ್ನು ಶ್ರೀ ಪಟ್ಟಾಭಿಯವರು ಗಳಿಸಿಕೊಂಡಿರುವರೆಂದು ಹೇಳಬರುವುದಿಲ್ಲ. ಆದುದರಿಂದ ತ್ರಿಪುರಿ ಕಾಂಗ್ರೆಸ್ ಪ್ರತಿನಿಧಿಗಳೆಲ್ಲಾ ರಾಷ್ಟ್ರಪತಿಭೋಸರನ್ನೇ ಇನ್ನೊಮ್ಮೆ ಅಧ್ಯಕ್ಷರನ್ನಾಗಿ ಆರಿಸುವುದು ಉಚಿತವೆಂದು ನಮ್ಮ ಅಭಿಪ್ರಾಯವಿದೆ. ಕಳೆದ ಸಲ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲ್ಪಡುವ ಮೊದಲು ಶ್ರೀ ಭೋಸರು ಆರೋಗ್ಯ ಸಂಪಾದನೆಗಾಗಿ ದೀರ್ಘಕಾಲ ದೇಶದ ಹೊರಗಿದ್ದುದರಿಂದ ಕಾಂಗ್ರೆಸಿನ ರೀತಿನೀತಿ ಮತ್ತು ದೇಶದ ನಿಜವಾದ ಪರಿಸ್ಥಿತಿಯ ಹೆಚ್ಚಿನ ಅನುಭವವೇನೂ ಅವರಿಗಿರಲಿಲ್ಲ. ಮತ್ತು ಅಧ್ಯಕ್ಷನ ವಹಿಸಿದ ಮೇಲೂ ಅವರ ಆರೋಗ್ಯವು ಅಷ್ಟೊಂದು ನೆಟ್ಟಗಿರದೆ ಅವರಿಗೆ ತನ್ನಿಚ್ಛೆಯಂತೆ ಇಡೀ ದೇಶದಲ್ಲೆಲ್ಲಾ ತಿರುಗಿ ಕೆಲಸಮಾಡಲು ತೊಂದರೆಯಾಗಿದ್ದಿತು. ಫೆಡರೇಶನನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂಬ ನಿಶ್ಚಯದಿಂದ ಕಟಿಬದ್ಧರಾಗಿರುವವರವರು. ಇಡೀ ದೇಶವಲ್ಲೆಲ್ಲ ದೇಶಭಕ್ತಿಯ ಆವೇಗವನ್ನೆಬ್ಬಿಸುವ ಉಜ್ವಲ ತ್ಯಾಗಶೀಲ ವ್ಯಕ್ತಿತ್ವ ಅವರದು. ಅಂತರರಾಷ್ಟ್ರೀಯ ರಾಜಕೀಯದಲ್ಲಿಯೂ ಅವರು ಸಾಕಷ್ಟು ಹೆಸರು ಮಾಡಿದವರಿದ್ದಾರೆ. ಕಾಂಗ್ರೆಸಿನೊಳಗಣ ಎಡ ಮತ್ತು ಬಲ ಪಕ್ಷಗಳನ್ನು ಒಂದುಗೂಡಿ ನಡೆಸುವ ಧೋರಣೆಯುಳ್ಳವರು. ಆದುದರಿಂದ ರಾಷ್ಟ್ರಪತಿ ಭೋಸರಿಗೇನೇ ಇನ್ನೊಂದು ಸಂದರ್ಭವನ್ನೀಯುವುದು ಯುಕ್ತವಿದೆ.

ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲು

ಮದ್ರಾಸ್ ಎಸೆಂಬ್ಲಿಯ ಈ ಸಲದ ಅಧಿವೇಶನದಲ್ಲಿ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲುಗಳನ್ನು ತೆಗೆದುಹಾಕುವ ಮಸೂದೆಯು ಮಂಜೂರಾಗಿರುವುದು ಆದುದರಿಂದ ಇನ್ನು ಸ್ವಲ್ಪ ಸಮಯದಲ್ಲಿಯೇ ಎಡ್ಯುಕೇಶನಲ್ ಕೌನ್ಸಿಲುಗಳು ತೆಗೆದು ಹಾಕಲ್ಪಡುವವು. ಹೆಚ್ಚಿನ ಈ ಕೌನ್ಸಿಲುಗಳ ಆಡಳಿತವು ತೀರಾ ಅತೃಪ್ತಿಕರವಿದ್ದು ಅವು ಮೋಸ, ವಂಚನೆ, ಪಕ್ಷಪಾತ ಮತ್ತು ಕಲಹಗಳ ಕಳವಾಗಿದ್ದುವು. ಆದುದರಿಂದ ಅವುಗಳನ್ನು ತೆಗೆದು ಹಾಕುವ ವಿಷಯದಲ್ಲಿ ಯಾರೂ ಪಶ್ಚಾತ್ತಾಪ ಪಡಲಾರರು. ಆದರೆ ಅವುಗಳ ಸ್ಥಾನದಲ್ಲಿ ಎಂತಹ ಸಂಸ್ಥೆಯು ರಚಿಸಲ್ಪಡುವುದೆಂಬುದು ಇನ್ನೂ ತಿಳಿದಿಲ್ಲ. ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನ ಕೆಲಸವನ್ನೆಲ್ಲಾ ಎಡ್ಯುಕೇಶನಲ್ ಆಫೀಸರಿಗೊಪ್ಪಿಸಿ ಬಿಡುವುದೆಂಬ ಅಭಿಪ್ರಾಯವು ಸರಕಾರಕ್ಕಿದ್ದಿತು. ಆದರೆ ಇದಕ್ಕೆ ಜನಮತದ ಬೆಂಬಲವಿಲ್ಲ. ಯಾಕೆಂದರೆ ಹಾಗೆ ಮಾಡಿದರೆ ಖಾಸಗಿ ಶಾಲೆಗಳವರ ಅವಸ್ಥೆಯು ಕಾವಲಿಯಿಂದ ಹಾರಿ ಒಲೆಗೆ ಬಿದ್ದಂತಾಗಬಹುದು. ಡಿಪ್ಯುಟಿ ಇನ್‌ಸ್ಪೆಕ್ಟರರೇ ಮೊದಲಾದ ಶಿಕ್ಷಣಾಧಿಕಾರಿಗಳ ಕುರಿತು ಜನತೆಗೆ ವಿಶ್ವಾಸವಿರುವುದಿಲ್ಲ. ಹಿಂದೆ ಪರೀಕ್ಷಿಸಿ ನೋಡಿ, ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿಗಿಂತಲೂ ಹೆಚ್ಚಿನ ಅನ್ಯಾಯ ಮತ್ತು ದುರ್ವ್ಯವಹಾರಕ್ಕೆ ಈ ಅಧಿಕಾರಿಗಳು ಆಸ್ಪದನೀಯುವರೆಂಬುದು ಸಿದ್ಧವಾಗಿದೆ. ಈಗ ಅದೇ ಅಧಿಕಾರಿಗಳಿಗೆ ಪುನಃ ಎಡ್ಯುಕೇಶನಲ್ ಕೌನ್ಸಿಲಿನ ಅಧಿಕಾರವನ್ನೆಲ್ಲಾ ಒಪ್ಪಿಸುವುದು ವಿಹಿತವಲ್ಲೆಂದು ಎಸೆಂಬ್ಲಿಯ ಬಹುಪಕ್ಷದ ಮೆಂಬರರ ಅಭಿಪ್ರಾಯವಿದ್ದುದರಿಂದ ಸರಕಾರವು, ಎಡ್ಯುಕೇಶನಲ್ ಕೌನ್ಸಿಲಿನ ಬದಲಿಗೆ, ತಾಲೂಕುವಾರು ಕಮಿಟಿಗಳನ್ನು ನೇಮಿಸುವ ಆಲೋಚನೆ ಮಾಡಿರುವಂತಿದೆ. ಈ ಕಮಿಟಿಗಳ ರಚನೆ, ವ್ಯಾಪನೆ ಮತ್ತು ಅಧಿಕಾರದ ಕುರಿತು ಯಾವ ವಿಷಯವನ್ನೂ ಶಿಕ್ಷಣ ಮಂತ್ರಿಗಳು ಎಸೆಂಬ್ಲಿಯಲ್ಲಿ ಪ್ರಕಟಿಸಿರುವುದಿಲ್ಲ. ಸರಕಾರವೇ ಈ ಕುರಿತು ನಿಶ್ಚಿತವಾದ ಯಾವುದಾದರೊಂದು ಅಭಿಪ್ರಾಯಕ್ಕೆ ಬಂದಂತೆ ತೋರುವುದಿಲ್ಲ. ಆದಷ್ಟು ಬೇಗನೆ ಮದ್ರಾಸ್ ಮಂತ್ರಿಮಂಡಲವು ಈ ಪ್ರಶ್ನೆಗೆ ಗಮನವಿತ್ತು, ಪ್ರಾಥಮಿಕ ಕ್ಷೇತ್ರವನ್ನು ನವೆಯುವ ಬಡತನ ಅನ್ಯಾಯ ಮತ್ತು ದುರ್ವ್ಯವಹಾರವು ನಿಲ್ಲಿಸಲ್ಪಟ್ಟು, ಶಿಕ್ಷಣದ ನಿಜವಾದ ಅಭಿವೃದ್ಧಿ ಸಾಧಕವಾದ ಸಂಸ್ಥೆಗಳು ಸ್ಥಾಪಿಸಲ್ಪಡುವಂತಾಗುವವೆಂದು ನಿರೀಕ್ಷಿಸುತ್ತೇವೆ.

ಬಂಟರ ಯಾನೆ ನಾಡವರ ಭವನದ ಹಳೇ ವಿದ್ಯಾರ್ಥಿಗಳ ಸಂಘ, ಉಡುಪಿ.

ಉಡುಪಿಯ ಬಂಟ ವಿದ್ಯಾರ್ಥಿ ಭವನ ಸಮಿತಿಯವರ ಆಶ್ರಯದಲ್ಲಿ ಬರುವ ತಾ. 12-2-39ರಲ್ಲಿ ಭವನದ ಪೂರ್ವ ನಿವಾಸಿಗಳ ಸಂಘ (Old Boarders' Association) ಸ್ಥಾಪಿತವಾಗಲಿರುವುದೆಂಬುದನ್ನು ತಿಳಿಯುವರೆ ನಮಗೆ ತುಂಬಾ ಸಂತೋಷವೆನಿಸುವುದು. ಈ ಕುರಿತಾದ ಪ್ರಕಟಣೆಯನ್ನು ಇನ್ನೊಂದೆಡೆ ಕೊಡಲಾಗಿದೆ.

ಸಂಘಶಕ್ತಿಯು ಈ ನವಯುಗದಲ್ಲಿ ಸಮಾಜದ ಹಿರಿಯರು, ಕಿರಿಯರು, ಹಳಬರು, ಹೊಸಬರು, ವಿದ್ಯಾರ್ಥಿಗಳು, ಶಿಕ್ಷಕರು, ರಕ್ಷಿತರು, ರಕ್ಷಕರು,-ಸಮಾಜದ ಎಲ್ಲಾ ಬಂಧುಗಳು ಪರಸ್ಪರ ಪ್ರೇಮ ಅಭಿಮಾನದಿಂದ ಒಂದಾಗಿ, ಸಮಾಜದ ಉನ್ನತಿಗಾಗಿ ಐಕ್ಯತೆಯಿಂದ, ಸಾಧಿಸಿ, ತನ್ಮೂಲಕ ದೇಶದೇಳಿಗೆಯನ್ನು ಬಯಸುವುದು, ಆದ್ಯ ಕರ್ತವ್ಯವಿದೆ. ಆಯಾಯ ಸಮಾಜದ ಐಕ್ಯತೆಯ ಕಾರ್ಯಭಾರವನ್ನು ಎಲ್ಲರಿಗಿಂತಲೂ ಮೇಲಾಗಿ ಸಮಾಜದಲ್ಲಿ ಶಿಕ್ಷಿತರೆನಿಸಿದವರು, ಹೊತ್ತು, ಸಮಾಜದೇಳಿಗೆಯ ಕಾರ್ಯವನ್ನು ಸಾಧಿಸಲು ಮುಂದಾಗಬೇಕೆಂಬುದು ನಿರ್ವಿವಾದ.

ಇದೀಗ ಉಡುಪಿಯ ವಿದ್ಯಾರ್ಥಿ ಭವನ ಸಮಿತಿಯವರು, ಬಂಟರ ಹಿರಿಯ ಬಂಧುಗಳಿಂದ, ಬಹುಕಾಲದ ಮೊದಲೇ ನೆರವೇರಬೇಕಾಗಿದ್ದ ಆದರ್ಶ ಕಾರ್ಯಭಾಗವನ್ನು ಈಗಲಾದರೂ, ಆರಂಭಿಸಲು ಉದ್ಯೋಗಿಸುತ್ತಿರುವರೆಂಬುದು ಅಭಿನಂದನೀಯವು. ಆದುದರಿಂದ ಬಂಟ ಸಮಾಜದ ಆಧಾರದಿಂದ ಪಾಲಿತರಾಗಿ, ಶಿಕ್ಷಣ ಹೊಂದಿ, ಶಿಕ್ಷಿತರಾಗಿ, ಇಂದು ತಮ್ಮ ಜೀವನೋಪಾಯಕ್ಕಾಗಿ ನಾಡಿನ ಬೇರೆ ಬೇರೆ ಕಡೆಗಳಲ್ಲಿ ವಾಸಿಸುವ ಬಂಟರ ವಿದ್ಯಾರ್ಥಿ ಭವನದ ಪೂರ್ವ ನಿವಾಸಿಗಳು, ಅಂತೆಯೇ, ಇನ್ನುಳಿದ ಸಮಾಜಬಂಧುಗಳು, ಇದೀಗ ಬಂಟ ವಿದ್ಯಾರ್ಥಿ ಭವನ ಸಮಿತಿ ಉಡುಪಿ, ಇವರು ಕೈಕೊಂಡ ಆದರ್ಶಕಾರ್ಯವು ಫಲದಾಯಕವಾಗುವಂತೆ, ಸಂಘಟಿತರಾಗಿ, ತಮ್ಮ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿ, ತಮ್ಮ ಮೇಲಿರುವ ಹೊಣೆಗಾರಿಕೆಯನ್ನು ನಿರ್ವಹಿಸಿ, ಸಮಾಜದ ಮುಂದಿನ ಜನತೆಯ ಏಳಿಗೆಯನ್ನು, ಇಂದಿನ ವಿದ್ಯಾರ್ಥಿಗಳ ಶ್ರೇಯಸ್ಸನ್ನು ಹಾಗೂ ಕನ್ನಡ ಜಿಲ್ಲೆಯಲ್ಲೆಲ್ಲಾ ಪ್ರಸಿದ್ಧವಾದ ಬಂಟರ ಸಮಾಜದ ಮೇಲ್ಮೆಯನ್ನು ಕೋರಿ, ಮುನ್ನಡೆಸಬೇಕಾಗಿ ಹಾರೈಸುವೆವು.

ಉಡುಪಿ ಪ್ರಭಾಕರ ಛಾಪಖಾನೆಯಲ್ಲಿ ಮಾನಪತ್ರ ಸಮರ್ಪಣಾ ಸಮಾರಂಭ

ಜಿಲ್ಲೆಯ ಆನಾದಿ ಛಾಪಖಾನೆಗಳಲ್ಲೊಂದಾದ ಸ್ಥಳೀಯ ಪ್ರಭಾಕರ ಮುದ್ರಾಯಂತ್ರವು ಈ ಶತಕ ಶ್ರೀ ಪಿ ನಾರಾಯಣ ಪ್ರಭುಗಳ ಪ್ರಾಧಿಪತ್ಯದಲ್ಲಿ ಬೆಳೆದು ಬಂತಷ್ಟೆ. ಇತ್ತೀಚೆಗೆ ಈ ಪ್ರೆಸ್ಸನ್ನು ವ್ಯಾಪಕ ದೃಷ್ಟಿಯಿಂದ ಶ್ರೀ. ಪ್ರಭುಗಳವರು ಏಕ ಜವಾಬ್ದಾರಿಯ ನೆಲೆಯಲ್ಲಿ ರಜಿಸ್ಟರಾಗುವಂತೆ ಮಾಡಿದರು. ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಾಗಿ ಮಾರ್ಪಾಟು ಹೊಂದಿದ ಈ ಸಂದರ್ಭದಲ್ಲಿ ಪ್ರೆಸ್ ಕೆಲಸಗಾರರೆಲ್ಲರೂ ಏಕಸ್ಥರಾಗಿ ತಮಗೆ ಜೀವನೋಪಾಯಕ್ಕೆ ದಾರಿತೋರಿಸಿದ ಶ್ರೀ ಪ್ರಭುಗಳವರಿಗೆ ಮಾನಪತ್ರವನ್ನಿತ್ತು ಗೌರವಿಸುವರೆ ಕಳೆದ ಆದಿತ್ಯವಾರ ಕೂಟವೊಂದನ್ನು ಏರ್ಪಡಿಸಿದ್ದರು. ಸ್ಥಳೀಯ ಮುನ್ಸೀಫರಾದ ಶ್ರೀ. ಆರ್. ಎಚ್. ಎ. ಎಸ್ ರಾಯರು ಅಗ್ರ ಪೀಠವನ್ನೇರಿದ್ದರು. ಆಮಂತ್ರಿತ ಸದ್ಗೃಹಸ್ಥರಿಗೆ ಉಪಹಾರ ಸತ್ಕಾರವಾದ ಬಳಿಕ ಮಾನಪತ್ರ ಸಮರ್ಪಿಸಲಾಯಿತು. ಶ್ರೀ. ನಾರಾಯಣ ಪ್ರಭುಗಳವರಿಗೆ ಹಾಜರಿದ್ದ ಮಹನೀಯರ ಪೈಕಿ ಡಾ. ಮಾಧವ ಪೈ, ಶ್ರೀಗಳಾದ ಎಸ್. ಯು. ಪಣಿಯಾಡಿ, ಸುಂದರೇಶ ಶಾಸ್ತ್ರಿ, ಸಬ್ ಮೆಜಿಸ್ಟ್ರೇಟ್ ತಿಮ್ಮಪ್ಪಶೆಟ್ಟಿ, ಮಾಸ್ತರ್ ಯು. ವೆಂಕಟ್ರಾವ್, ಅಮ್ಮೂರು ಲಕ್ಷ್ಮೀನಾರಾಯಣ ರಾವ್, ಸದಾನಂದ ಭಟ್ಟರೇ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು.

ಒರಿಸ್ಸದ ಬಿಕ್ಕಟ್ಟು

ಸ್ಪೈನಿನ ಭೀಕರ ಯುದ್ಧದ ಪರಿಣಾಮವೇನು?

ಸ್ಪೈನಿನ ಅಂತಃಕಲಹವು ಆರಂಭವಾಗಿ ಈಗ ೨೦ ತಿಂಗಳುಗಳಾದವು. ಕಳೆದ ಸಪ್ಟಂಬರವರೆಗಿನ ೪೩ ತಿಂಗಳುಗಳ ಯುದ್ಧದಿಂದ ಒಟ್ಟು ಸಮಾರು ರೂ. 500,000 ಜನರು ಹತರಾಗಿ 50 ಸಾವಿರ ಮಿಲ್ಯ ಚಿನ್ನದ ಪೆಸೆಟಾಸ್ (ಸ್ಪೆನಿಶ್ ನಾಣ್ಯ)ಗಳಷ್ಟು ಸೊತ್ತು ನಾಶವಾಗಿರುವುದೆಂದು ಅಂದಾಜು ಮಾಡಲಾಗಿದೆ. ಅನಂತರ 4 ತಿಂಗಳುಗಳಲ್ಲೀಗ ಅತ್ಯಂತ ಭೀಕರ ಯುದ್ಧ ನಡೆದಿರುತ್ತದೆ. ಎಬ್ರೋ ಮತ್ತು ಸೆಗ್ರೆ ರಣರಂಗಗಳಲ್ಲಿ ಘೋರಕದನಗಳು ನಡೆದಿರುತ್ತವೆ. ಈಗ ಬಾರ್ಸಲೋನದ ಒಳನಡೆಯುತ್ತಿರುವ ಸಮರವು ಅತ್ಯಂತಭೀಷಣವಾದುದು. ಇದರ ಪರಿಣಾಮವು ಅನಿಶ್ಚಿತವೆಂದು ಹೇಳಲು ಸಾಧ್ಯವಿಲ್ಲ. ಪ್ರತಿಯೊಂದು ಪ್ರಾಮುಖ್ಯ ಯುದ್ಧದಲ್ಲಿಯೂ ಜನರಲ್ ಫ್ರೆಂಕೋರವರು ಗೆದ್ದಾಗ, ಸ್ಪೆನಿಶ್ ಸರಕಾರದ ಪತನ ಸನ್ನಿಹಿತವೆಂಬಂತೆ ಪ್ರಕಟಿಸಲ್ಪಡುತ್ತಿತ್ತು. ಆದರೆ ಈ ವರೆಗೂ ಸ್ಪೆನಿಶ್ ರಿಪಬ್ಲಿಕನ್ ಸರಕಾರವು ಬಂಡಾಯಗಾರರ ಧಾಳಿಯನ್ನು ಎದುರಿಸಿ ಕೊಂಡುಬಂದಿರುವುದು. ಆದರೆ ಇನ್ನುಮುಂದೆ ಅದಕ್ಕೆ ಹೆಚ್ಚುಕಾಲ ಹೀಗೆ ಮಾಡಲು ಸಾಧ್ಯವಾಗಲಾರದು. ಬಂಡಾಯಗಾರರಿಗೆ ಜರ್ಮನಿ ಮತ್ತು ಇಟಲಿಗಳು ಹೆಚ್ಚಾಗಿ ಯುದ್ಧೋಪಕರಣ ಮತ್ತು ಸೈನಿಕ ಸಹಾಯವೀಯುತ್ತಿವೆ. ದೊಡ್ಡ ವಿಮಾನಪಡೆಯ ಬಲದಿಂದ ಸ್ಪೆನಿಶ್ ಸರಕಾರವನ್ನು ಜನರಲ್ ಫ್ರೇಂಕೋರವರು ಸೋಲಿಸಿದರೆಂದರೆ ಅತಿಶಯೋಕ್ತಿಯಾಗಲಾರದು. ಆದರೆ ಇಂಗ್ಲಂಡ ಮತ್ತು ಫ್ರಾನ್ಸು ಮೊದಲಾದ ರಾಷ್ಟ್ರಗಳ ತಾಟಸ್ಥ್ಯದ ಅರ್ಥರಹಿತ ಧೋರಣೆಯಿಂದಾಗಿ ನ್ಯಾಯವಾಗಿ ಸ್ಥಾಪಿತವಾಗಿರುವ ಸ್ಪೆನಿಶ್ ರಿಪಬ್ಲಿಕನ್ ಸರಕಾರಕ್ಕೆ ಯಾವ ಸಹಾಯವೂ ಹೊರಗಿನಿಂದ ದೊರೆಯದಂತಾಗಿದೆ. ಅವರ ಕಡೆಯವರು ಯುದ್ಧೋಪಕರಣವಂತಿರಲಿ, ಉಣ್ಣಲು ಸಾಕಷ್ಟು ಆಹಾರವಿಲ್ಲದೆ ಹೊಟ್ಟೆಕಟ್ಟಿಕೊಂಡು ಜೀವಿಸಬೇಕಾಗಿದೆ. ಈಗ ಜನರಲ್ ಫ್ರಂಕೋರವರು ಬಾರ್ಸಲೋನವನ್ನು ಸುತ್ತಲಿಂದಲೂ ಮುತ್ತಿರುವರು. ರಿಪಬ್ಲಿಕನ್ ಸರಕಾರವು ಕೊನೆಯ ತನಕವೂ ಬಾರ್ಸಲೋನವನ್ನು ರಕ್ಷಿಸುವ ಭೀಷ್ಮ ನಿರ್ಧಾರದಿಂದ ಅದಕ್ಕೆ ಬೇಕಾದ ಸಿದ್ಧತೆ ಮಾಡುತ್ತಿರುವುದು. ಈ ಯುದ್ಧವು ಎಷ್ಟು ಭೀಕರ ಸ್ವರೂಪ ತಾಳುವುದೆಂದು ಹೇಳಬರುವುದಿಲ್ಲ. ಇಡೀ ಸ್ಪೈನಿನ ಪ್ರಜಾಸತ್ತೆಯ ಕೊನೆಯ ಕಾಳಗವೆಂದು ಬಾರ್ಸಲೋನ. ಇತಿಹಾಸ ಪ್ರಸಿದ್ಧ ಪಟ್ಟಣವು. ಹಿಂದೆ ನೆಪೋಲಿಯನನು ಇದನ್ನು ವಶಪಡಿಸಿಕೊಳ್ಳಲು ಭಗೀರಥ ಪ್ರಯತ್ನಮಾಡಿ ಸಾವಿರಾರು ಸೈನಿಕರನ್ನು ಕಳಕೊಂಡು ರಕ್ತದ ಕಾಲುವೆ ಹರಿಸಿ ಹತಭಾಗ್ಯನಾಗಿ ಹಿಂತಿರುಗಿದ್ದನು. ಇದು ಸಾಭಿಪ್ರಾಯವಾಗಿ ಜನರಲ್ ಫ್ರೆಂಕೋರವರ ನಾಶಕ್ಕೆ ಕಾರಣವಾಗುವುದೆಂದು ಹೇಳಲುಸಾಧ್ಯವಿಲ್ಲ. ಇಷ್ಟರವರೆಗೆ ಎಂದೂ ನಡೆಯದಷ್ಟು ಭಯಂಕರ ಹೋರಾಟವು ಇಲ್ಲಿ ನಡೆಯಲಿರುವುದು. ಸ್ಪೈನಿನ ಇದೇ ರೀತಿನಡದಲ್ಲಿ ಕಟ್ಟಕಡೆಗೆ ಜನರಲ್ ಫ್ರೆಂಕೋರವರಿಗೆ ವಿಜಯವಂತೂ ನಿಶ್ಚಯವೆಂಬಂತೆ ತೋರುವುದು. ಆ ಪಣ ತೊಟ್ಟಿದ್ದಾರೆ ಮುಸಲೋನಿಯವರು. ಹಾಗಾದ ಪಕ್ಷದಲ್ಲಿ ಭೂಮಧ್ಯಸಾಗರದಲ್ಲಿ ಇಟಲಿ ಮತ್ತು ಜರ್ಮನಿಗಳ ಹಿತವು ಬಲವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಜನರಲ್ ಫ್ರೇಂಕೋರವರು ತಾನು ವಿಜಯಿಯಾದ ಮೇಲೆ ಯಾವ ಧೋರಣೆ ವಹಿಸುವರೆಂದು ನೋಡಬೇಕಾಗಿದೆ. ಮುಸಲೋನಿ ಮತ್ತು ಹಿಟ್ಲರರ ಕೈಗೊಂಬೆಯಾಗಿ ಆಡಳಿತ ನಡಿಸಿದರೆ ಸ್ಪೆನಿಶ್ ಜನರು ಅವರನ್ನು ವಿರೋಧಿಸದಿರಲಾರರು. ಆಗ ಪಾಳ್ಯದೊಳಗೇನೇ ಕಲಹ ಬೀಳುವ ಸಂಭವವಿದೆ. ಮುಸಲೋನಿ ಮತ್ತು ಹಿಟ್ಲರರನ್ನೂ ಗಣಿಸದೆ ಸ್ವತಂತ್ರವಾಗಿ ನಡೆವರೂ ಜನರಲ್ ಫ್ರೇಂಕೋರವರಿಗೆ ಕಷ್ಟ ತಪ್ಪಲಾರದು. ಏನಾದರೂ ನೆವನಹಿಡಿದು ಅವರ ನದೆ ಬಡಿಯಲು ಮುಸಲೋನಿಯವರೆತ್ತಿಸದಿರಲಾರರು. ಆದುದರಿಂದ ದುರ್ದೈವೀ ಸ್ಪೈನಿನ ಗತಿಯು ಮುಂದೇನಾಗುದೆಂದು ಹೇಳಬರುವುದಿಲ್ಲ.

ಬಾರ್ಸಲೋನದ ಮೇಲೆ ಬಂಡಾಯಗಾರರ ಮುತ್ತಿಗೆ

ದೊಡ್ಡ ವಿಮಾನಯುದ್ಧ

ಇದೇ ತಾ. ೨೧ರಲ್ಲು ಬಾರ್ಸಲೋನದ ಮೇಲೆ ದೊಡ್ಡ ವಿಮಾನ ಯುದ್ಧ ನಡೆಯಿತು. ಬೋಂಬೆಸೆಯುವ 6 ಬಂಡಾಯಗಾರ ವಿಮಾನ ಮತ್ತು ಇತರ ಹಲವು ಚಿಕ್ಕವಿಮಾನಗಳನ್ನು ೨೦ ರಿಪಬ್ಲಿಕಾನ ವಿಮಾನಗಳು ಎದುರಿಸಿದುವು ಹಲವು ವಿಮಾನಗಳು ನೆಲಕ್ಕೆ ಬಿದ್ದವು. ಇಂದು ಬೆಳಗ್ಗೆ ಒಂದು ಬೋಂಬೆಸೆಯುವ ವಿಮಾನವು 7 ಚಿಕ್ಕ ವಿಮಾನಗಳೊಂದಿಗೆ ಬಾರ್ಸಲೋನದ ಮೇಲೆ ಹಾರಿಬಂದಾಗ ರಿಪಬ್ಲಿಕನ್ ವಿಮಾನಗಳು ಎದುರಿಸಿ ಒಂದನ್ನು ನೆಲಕ್ಕೆ ಕೆಡಹಿರುವವು. ಇದೇ ತಾ. ೨೨ರಲ್ಲು ಬಂಡಾಯಗಾರ ವಿಮಾನಗಳು ಬಾರ್ಸಲೋನದ ಮೇಲೆ 10 ಸಲ ಧಾಳಿನಡಿಸಿದುವು. 40 ಬಂಡಾಯಗಾರ ಮತ್ತು ೨೦ ರಿಪಬ್ಲಿಕಾನ ವಿಮಾನಗಳೊಳಗೆ ಯುದ್ಧ ನಡೆಯಿತು. ಬಾರ್ಸಲೋನ ಪಟ್ಟಣಕ್ಕೆ ಹೊರಗಣಿಂದ ಸಹಾಯವೇನೂ ದೊರೆಯದಂತೆ ಬಂಡಾಯಗಾರರು ವಿಮಾನ ಮುತ್ತಿಗೆ ಹಾಕಲೆತ್ನಿಸುತ್ತಿರುವರು. ಫ್ರಾನ್ಸಿಗೆ ಹೋಗಿ ಸೇರುವ ರಸ್ತೆಯ ಮೇಲೆ ಮುಖ್ಯವಾಗಿ ದೃಷ್ಟಿ ಇಟ್ಟಿರುವರು. ಬಾರ್ಸಲೋನದ ವೈಮಾನಿಕ ಮುತ್ತಿಗೆಯಲ್ಲಿ ಜರ್ಮನ್ ಮತ್ತು ಇಟಲಿಯಾನ ವಿಮಾನಗಳು ಭಾಗವಹಿರುವವು.

ಬಾರ್ಸಲೋನದ ಸಿದ್ಧತೆ

ಬಂಡಾಯಗಾರ ಸೇನೆಯು ಭರದಿಂದ ಮುಂದೊತ್ತಿ ಬಾರ್ಸಲೋನವನ್ನು ಆವರಿಸುತ್ತಿರುವುದು. ರಿಪಬ್ಲಿಕನ್ ಸರಕಾರವು ಬಾರ್ಸಲೋನ ಪಟ್ಟಣವನ್ನು ರಕ್ಷಿಸಲು ಬೇಕಾದ ಭದ್ರತೆಗಳನ್ನು ಭರದಿಂದ ನಡಿಸುತ್ತಿರುವುದು. ಸೇನಾ ಸಂಬಂಧವಲ್ಲದ ಇತರ ಕಾರ್ಖಾನೆ ಮತ್ತು ವ್ಯಾಪಾರ ವಹಿವಾಟುಗಳನ್ನೆಲ್ಲಾ ನಿಲ್ಲಿಸಿ ಅವುಗಳಲ್ಲಿ ಕೆಲಸಮಾಡುತ್ತಿದ್ದ ಜನರನ್ನೆಲ್ಲಾ ಕೋಟೆ ಕೊತ್ತಲಗಳನ್ನು ಕಟ್ಟುವ ಕೆಲಸಮಾಡಹತ್ತಿರುವರು. ೬೦ ವರ್ಷದೊಳಗಣ ಎಲ್ಲಾ ಗಂಡಸರೂ 18 ವರ್ಷದ ಮೇಲಿನ ಮತ್ತು 40 ವರ್ಷದ ಕೆಳಗಿನ ಎಲ್ಲಾ ಸ್ತ್ರೀಯರೂ ಮಿಲಿಟರಿ ಸೇನಾಧಿಕಾರಿಗಳ ಅಧೀನವಾಗಬೇಕೆಂದು ಕಟ್ಟಾಜ್ಞೆ ಕೊಡಲಾಗಿದೆ. ಇದನ್ನುಲ್ಲಂಘಿಸಿದವರು ಕಠಿಣದಂಡನೆಗೊಳಗಾಗುವರು.

ಇದೇ ತಾ. ೨೨ರಲ್ಲು ಬಂಡಾಯಗಾರರ ಅಗ್ರಗಾಮಿ ಸೇನೆಯು (ಬಾರ್ಸಲೋನದಿಂದ ಕೇವಲ 16 ಮೈಲು) ದೂರವಿರುವುದೆಂದು ತಿಳಿದುಬರುತ್ತದೆ. ಬಾರ್ಸಲೋನದ ನೈಋತ್ಯದಲ್ಲಿ 150,000 ಬಂಡಾಯಗಾರ ಸೇನೆಯು ಮುಂದೊತ್ತುತ್ತಿದೆ. ಬಾರ್ಸಲೋನಕ್ಕೂ ಫ್ರಾನ್ಸಿಗೂ ಇರುವ ಸಂಬಂಧವನ್ನು ತಡೆಯುವಂತೆ ಬಂಡಾಯಗಾರ ಸೇನೆಯು ಪ್ರಚಂಡ ಪ್ರಯತ್ನ ನಡಿಸುತ್ತಿದೆ. ಇದೇ ತಾ ೨೨ರಲ್ಲು ಫ್ರಾನ್ಸಿನಿಂದ ೨೨ ಟಾಂಕಿಗಳೇ ಮೊದಲಾದ ಯುದ್ಧೋಪಕರಣಗಳು ಬಾರ್ಸಲೋನಕ್ಕೆ ಬಂದಿರುತ್ತವೆಂದು ಬಂಡಾಯಗಾರರ ಹೇಳಿಕೆ. ಬಾರ್ಸಲೋನಕ್ಕೆ ಬಂದರಕ್ಕೆ ಇದ್ದಲು ಮೊದಲಾದ ಸಾಮಾನುಗಳನ್ನು ತರುವ ಪರದೇಶೀಯ ವಿಮಾನಗಳ ಮೇಲೆ ಬಂಡಾಯಗಾರ ವಿಮಾನಗಳು ಎಡೆಬಿಡದೆ ಬೋಂಬೆಸೆಯುತ್ತಿವೆ ಇದರಿಂದಾಗಿ ಹಲವು ಸ್ಟೀಮರುಗಳು ಜಖಮ್ ಹೊಂದಿವೆ.

ಜನರಲ್ ಫ್ರೇಂಕೋರವರಿಗೆ ಜಯವಾದಲ್ಲಿ ಪರಿಣಾಮವೇನಾಗುವುದೆಂಬುದನ್ನು ಫ್ರೆಂಚ್ ಮತ್ತು ಬ್ರಿಟಿಷ್ ಸರಕಾರಗಳು ಆಲೋಚಿಸಹತ್ತಿರುವವು. ಜನರಲ್ ಫ್ರೇಂಕೋರವರ ಅನುಯಾಯಿಗಳು ನಾಜಿ ಜರ್ಮನಿ ಅಥವಾ ಫೆಸಿಸ್ಟ್ ಇಟಲಿಯ ಸ್ವದೇಶಾಭಿಮಾನ ಪೂರಿತರಿರುವುದರಿಂದ, ಸ್ಪೈನಿನಲ್ಲಿ ಜರ್ಮನಿ ಅಥವಾ ಇಟಲಿಯು ಸಂದುಗಟ್ಟಿನ ಸ್ಥಳಗಳನ್ನಾಗಿ, ಸಾಂಪತ್ತಿಕ ಅನುಕೂಲತೆಗಳನ್ನಾಗಲಿ ಪಡೆಯಲಾರವೆಂದು ನಂಬಲಾಗಿದೆ. ಫ್ರಾನ್ಸು ತನ್ನ ಇಟಲಿ ಮತ್ತು ಜರ್ಮನಿಗಳ ಎಲ್ಲೆಗಳಂತೆಯೇ ಸ್ಪೆನಿಶ್ ಎಲ್ಲೆಯನ್ನೂ ಭದ್ರಗೊಳಿಸಬೇಕಾಗುವುದು. ಇದು ಜರ್ಮನಿಗೆ ಅನುಕೂಲವಾಗುವುದು. ಇಟಲಿಯು ಟ್ಯೂನೀಸಿಯ ಮತ್ತು ಜಿಬೂತಿಗಳನ್ನು ಫ್ರಾನ್ಸಿನಿಂದ ಕಸಕೊಳ್ಳುವ ತನ್ನ ಪ್ರಯತ್ನವನ್ನು ದ್ವಿಗುಣಿತಗೊಳಿಸಬಹುದು. ಭೂಮಧ್ಯ ಸಾಗರದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಸ್ಥಾನವು ದುರ್ಬಲಗೊಂಡು ಮುಸಲೋನಿಯವರ ಕೈಮೇಲಾಗುವುದೆಂದು ನಂಬಲಾಗಿದೆ

ಚೈನದಲ್ಲಿ ಜಾಪಾನರ ಆಕ್ರಮಣ

ಚೈನದಲ್ಲಿ ಇಷ್ಟರ ವರೆಗೆ ಜಾಪಾನರು ಗೆದ್ದು ಆಕ್ರಮಿಸಿದ ಪ್ರದೇಶವು ಇಡೀ ಜಾಪಾನ್ ಸಾಮ್ರಾಜ್ಯಕ್ಕಿಂತ ಎರಡು ಪಾಲು ಹೆಚ್ಚಾಗಿದೆ. ಚೀನೀ ಜಾಪಾನ ಯುದ್ಧವಾರಂಭವಾದಂದಿನಿಂದ ಮೃತಪಟ್ಟ ಮತ್ತು ಗಾಯಗೊಂಡ ಚೀನೀಯರ ಸಂಖ್ಯೆ ೩ ಮಿಲ್ಯವಾಗಿರುತ್ತದೆ. ಸತ್ತವರ ಸಂಖ್ಯೆ 8,30,000 ಆಗಿದೆ. 61,000 ಮಂದಿ ಜಾಪಾನರು ಕೊಲ್ಲಲ್ಪಟ್ಟಿದ್ದಾರೆ. ಯುದ್ಧ ಆರಂಭವಾದಂದಿನಿಂದ ಜಾಪಾನರು 310,000 ಬಂದೂಕು, 11,000 ಮಿಶನ್ ತೋಪು, 2,600 ಫಿರಂಗಿ ಮತ್ತು 550 ಟಾಂಕಿಗಳನ್ನು ಚೀನೀಯರಿಂದ ವಶಪಡಿಸಿಕೊಂಡಿರುವರು. ಒಂದು ಮಿಲ್ಯಕ್ಕಿಂತ ಹೆಚ್ಚು ಚೀನೀ ಸೈನಿಕರು ಇನ್ನೂ ಉತ್ತರ, ಮಧ್ಯ ಮತ್ತು ದಕ್ಷಿಣ ಚೈನದಲ್ಲಿ ಕಾದಾಡುತ್ತಿದ್ದಾರೆ. ಜಾಪಾನರು ಗೆದ್ದಿದ ಪ್ರದೇಶದಲ್ಲಿ 400,000 ಮಂದಿ ಚೀನೀ ಸೈನಿಕರು ಗೊರಿಲ್ಲ ಯುದ್ಧ ನಡಿಸುತ್ತಿದ್ದಾರೆಂದು ಜಾಪಾನ ಯುದ್ಧ ಮಂತ್ರಿಗಳು ಹೇಳಿಕೆಯಿತ್ತಿರುವರು.

ಚೀನದಲ್ಲಿ ಜಪಾನರ ಆಕ್ರ

ಹೈದರಾಬಾದ್ ದಿನಾಚರಣೆಯ ಗಲಾಟೆ

ಇದೇ ತಾ॥ ೨೨ರಲ್ಲು ದೇಶದಲ್ಲೆಲ್ಲಾ ಹೈದರಾಬಾದ್ ದಿನವು ಆಚರಿಸಲ್ಪಟ್ಟಿತು. ಡೆಲ್ಲಿಯಲ್ಲಿ ಹಿಂದುಗಳು ಈ ಸಂಬಂಧವಾಗಿ ಮೆರವಣಿಗೆಯೊಂದನ್ನೊಯ್ದು ಫತೇಪುರಿ ಮಸೀದಿಯ ಬಳಿಗೆ ಬರುವಾಗ ಮುಸಲ್ಮಾನರು ಮೆರವಣಿಗೆಯ ಮೇಲೆ ಬಿದ್ದು ಹೋರಾಟ ನಡೆದು, ೨೨ ಮಂದಿ ಹಿಂದುಗಳು 17 ಮಂದಿ ಮುಸಲ್ಮಾನರು ಗಾಯಗೊಂಡಿರುವರು. ಪೋಲೀಸ್ ಸಬ್ ಇನ್‌ಸ್ಪೆಕ್ಟರನೊಬ್ಬನು ತಿವಿಯಲ್ಪಟ್ಟಿವನು. ಡಿಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಗಳಾದ ಶ್ರೀ. ರಾಮನರೂ, ಕಾಂಗ್ರೆಸ ಕೆಲಸಗಾರರಾದ ಶ್ರೀಮತಿ ಸ್ವದೇಶಿ ದೇವಿಯ ಗಾಯಗೊಂಡಿರುವರು. ಲಾಠಿ ಪೋಲಿಸರೂ, ಸವಾರರೂ ಗಲಾಟೆಯ ಸ್ಥಳಕ್ಕೆ ಧಾವಿಸಿ ಜನತೆಯನ್ನು ಚೆದರಿಸಿದರು. ಈ ಗಲಾಟೆಯ ನಂತರ ಹೈದರಾಬಾದ್ ದಿನಾಚರಣೆಯ ಸಂಬಂಧವಾಗಿ ಸಾರ್ವಜನಿಕ ಸಭೆಯೊಂದು ನಡೆಯಿತು. ಈ ಲಾಟೆಯ ನಿಮಿತ್ತ ಪೋಲೀಸರು ೩೬ ಮಂದಿ ಮುಸಲ್ಮಾನರನ್ನು ಮತ್ತು 19 ಮಂದಿ ಹಿಂದುಗಳನ್ನು ಕೈದು ಮಾಡಿರುವ.

ಲ್ಹಾಹೋರ ಪಟ್ಟಣದಲ್ಲಿ ಆರ್ಯನ್ ಲೀಗಿನವರು ಹೈದರಾಬಾದ್ ದಿನಾಚರಣೆಯ ಕುರಿತು ಪ್ರಚಾರ ಮಾಡುತ್ತಿದ್ದಾಗ ಮುಸ್ಲಿಮ್‌ಲೀಗಿನವರು ವಿರುದ್ಧ ಪ್ರಚಾರ ಮಾಡುತ್ತಿದ್ದರು. ಪ್ರಬಲ ಪೋಲೀಸ್ ಬಂದೋಬಸ್ತಿದ್ದುದರಿಂದ ಗಲಾಟೆಯೇನೂ ಆಗಲಿಲ್ಲ. ತಾ. ೨೨ರಲ್ಲು ಹಿಂದೂ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿದ್ದವು. ಸಂಜೆ ಹ

ಲವು ಮೆ
ಲ ಪಾಕಿ
ನಡೆಯಿತ
ಹಿಂದುವೈ
ಸಂಬಂಧ
ಟ್ಟರುಪದ
ಮೆರವಣಿ
ರು ಎದು
ಗೂ ಹೋ
ಗೊಂಡಿರು
ಕ್ಷೆನ್ ಜ್ಯ
ಲಾಟೆಯು
ಕಲ್ಕತ್ತ, ಅ
ದ ಪಟ್ಟಣ
ನವು ಅಚ
ಬಾದ್ ಮು
ಈ ದಿನವು
ರುತ್ತದೆ.
ಚುತ್ತಿದ್ದ ಸ
ಸಮಾಜಿಸ್ಟ

ಬಾರ್ಸೆ

ಜನರಲ್
ಸರಕಾರದ ಪ
ಗಳಲ್ಲೊಂದಾ
ಲ್ಲಲು ಪ್ರಚ
ವರು. ಅವ
ವನ್ನು ಮು
ಮುಂದುವರಿ
ನರು ಮತ್ತ
ಫ್ರೇಂಕೋರ
ಯ ಮಾಡುತ್ತಿ
ವೆಂದು ಮುಸ
ರವಿರುವುದು.
ತನ್ನ ಪಕ್ಷದಲ್ಲಿ
ಸೈನಿಕರನ್ನೆಲ್ಲಾ
ಬಾರ್ಸಲೋನ
ರರು ಪ್ರಬಲ
ಸ್ಪೆನಿಶ್ ಸರಕಾ
ಸರು 3000
ವಿದಾಯವಿತ್ತ

SAVING MONEY AN

Thousands of prudent and thrivin
men prefer this Bank because attentio
and personal. To most of these bu
their time is very valuable and they ca
to lose a few minutes every now and t
waiting. They have chosen the CANA
because here they never need wait.
a point of giving every customer imm
personal attention.

RESOURCES OF
A CRORE

ESTD
CANAR
LIMI

ಸ್ಪೈನಿನ [illegible]ಕರ ಯುದ್ಧ

ಆದರೆ ಜನರಲ್ ಫ್ರೇಂಕೋರ [illegible]ನ್ನು ಹೆಚ್ಚೆಚ್ಚಾಗಿ ಇಟೆಲಿಯು [illegible] ನೀಡುತ್ತಿರುವುದು. ಜನರಲ್ ಫ್ರೇಂಕೋರವರು ಇತ್ತಲಾಗಿ ಪಡೆಯುತ್ತಿರುವ ವಿಜಯದಿಂದ ಫ್ರಾನ್ಸು ತಲ್ಲಣಗೊಂಡಿರುವುದು.

ಬಾರ್ಸೆಲೋನವು ಬಂಡಾಯಗಾರರನ್ನು ಕೊನೆಯ ತನಕವೂ ವಿರೋಧಿಸುವ ಧೀಪ್ಸನಿರ್ಧಾರದಿಂದ ಸಿದ್ಧತೆ ಮಾಡುತ್ತಿರುವುದು. "ಕೊನೆಯ ಮನುಷ್ಯ ಮತ್ತು ಕೊನೆಯ ಗುಂಡಿರುವತನಕ ಹೋರಾಡಬೇಕು. ಕೆಟಲೋನಿಯ ಪ್ರಾಂತವು ಎಂದಿಗೂ ಇಟೆಲಿಯಾನರದಾಗದು" ಎಂಬುದೇ ಜನತೆಯ ಉದ್ಘೋಷವಿರುವುದು. ಸೇನೆ ಸೇರಲು ಹೋಗಿರುವ ಗಂಡಸರ ಸ್ಥಳಗಳಲ್ಲಿ ಹೆಂಗುಸರು ಕೆಲಸಮಾಡಿ ಕಾರ್ಖಾನೆ ಮೊದಲಾದುವುಗಳನ್ನು ನಡಿಸುತ್ತಿರುವರು. ಜನರಲ್ ಫ್ರೇಂಕೋರವರು ಯುದ್ಧವಿಮಾನಗಳು ಬಾರ್ಸಲೋನದ ಮೇಲೆ ಘೋರಗರ್ಜನೆಗೈದರೂ ಧಿಕ್ಕರಿಸಿ ಸ್ತ್ರೀಯರು ಪಟ್ಟಣವೆಲ್ಲಾ ಮೆರವಣಿಗೆ ನಡಿಸಿ ಜನರೆಲ್ಲಾ ನಿಶ್ಚಲರಾಗಿ ಕೆಟಲೋನಿಯಾವನ್ನು ಭದ್ರಪಡಿಸಿ ಕಡೆಯತನಕ ರಕ್ಷಿಸಬೇಕೆಂದು ಕೂಗುತ್ತಾ ನಡೆದರು. ಸ್ಪೆನಿಶ್ ಸರಕಾರವು ನೆನ್ನೆ ದಿನ ಬಳಿಯ ಎಸ್ಟ್ರಿಮದುರ ರಣರಂಗದಲ್ಲಿ ಬಂಡಾಯಗಾರರನ್ನು ಹಿಂದಕ್ಕಟ್ಟಿ ದೊಡ್ಡ ವಿಜಯ ಪಡೆಯುತ್ತಿರುವುದಾದರೂ ಕೆಟಲನ್ ಪ್ರಾಂತದಲ್ಲಿ ಪ್ರಬಲ ಅಪಜಯವು ಪಡೆದು ಹಿಂದೆ ಸರಿಯುತ್ತಿರುವುದು. ಸರಕಾರದ ಸೈನಿಕರು ಅಸಾಧಾರಣ ವೀರಾವೇಶದಿಂದ ಕಾದಿದರೂ, ಬಂಡಾಯಗಾರರ ಯುದ್ಧವಿಮಾನ, ಟಾಂಕಿ ಮತ್ತು ತೋಪುಗಳ ಪ್ರಚಂಡ ಧಾಳಿಯನ್ನು ಸಹಿಸಲಾರದೆ ಹಿಂದೆ ಸರಿಯಬೇಕಾಗಿರುವುದು. ಬಂಡಾಯಗಾರರು ಈಗ ಬಾರ್ಸೆಲೋನದಿಂದ ಕೇವಲ 30 ಮೈಲು ದೂರದಲ್ಲಿರುವರು. ಸ್ಪೆನಿಶ್ ಸರಕಾರವು ಬಾರ್ಸಲೋನದಲ್ಲಿದ್ದ ಚಿನ್ನ ಮತ್ತು ಬೆಳ್ಳಿ ಸಂಗ್ರಹವನ್ನು ಫ್ರಾನ್ಸಿಗೆ ಕಳುಹಿಸಿರುವುದು. ಕೊನೆಯತನಕವೂ ಬಂಡಾಯಗಾರರನ್ನು ವಿರೋಧಿಸುವ ಸಿದ್ಧತೆಯು ನಡೆಯುತ್ತಿರುವುದು.

ಒರಿಸ್ಸದ ಬಿಕ್ಕಟ್ಟು

ಒರಿಸ್ಸ ಪ್ರಾಂತದ ದೇಶೀಯ ಸಂಸ್ಥಾನಗಳ ಚಳವಳದ ಕುರಿತು ಒರಿಸ್ಸ ಮಂತ್ರಿಮಂಡಲದ ಘೋಷಣೆಯ ವಿಷಯದಲ್ಲಿ ಮಂತ್ರಿಗಳಿಗೂ ಗವರ್ನರರಿಗೂ ಉಂಟಾಗಿರುವ ಮತಭೇದದ ವಿಷಯದಲ್ಲಿ ಇತ್ತಂಡದವರು ತಮ್ಮ ಮೇಲಿನವರ ಅಭಿಪ್ರಾಯ ಕೇಳಿರುವರು. ಬ್ರಿಟಿಷ್ ಒರಿಸ್ಸದಲ್ಲಿ ಕೈದು ಮಾಡಲ್ಪಟ್ಟಿರುವ ದೇಶೀಯ ಸಂಸ್ಥಾನಗಳ ಕೈದಿಗಳನ್ನು ಆಯಾ ಸಂಸ್ಥಾನಾಧಿಕಾರಿಗಳಿಗೆ ಒಪ್ಪಿಸಬೇಕೆಂದು ಗವರ್ನರರ ಅಭಿಪ್ರಾಯ. ಅಂಥವರ ಮೇಲಿನ ಖಟ್ಲೆ ಮತ್ತು ವಾರಂಟು ಮೊದಲಾದುವನ್ನು ರದ್ದುಪಡಿಸಿ ತಾವು ತಮ್ಮಿಚ್ಛೆಯಂತೆ ನಡೆಯಬಹುದೆಂದು ಮಂತ್ರಿಗಳ ಪ್ರತಿಪಾದನೆ. ಒರಿಸ್ಸದ ದೇಶೀಯ ಸಂಸ್ಥಾನಗಳ ವಿರೋಧವಾಗಿ ಬ್ರಿಟಿಷ್ ಒರಿಸ್ಸದಲ್ಲಿ ಪ್ರಚಾರ ಕಾರ್ಯವನ್ನು ತಡೆಗಟ್ಟಬೇಕೆಂದು ಗವರ್ನರರ ಆತುರ. ಅಂತಹ ಘೋಷಣೆಗೆ ಈಗ ಸಂದರ್ಭವುಂಟಾಗಿರುವುದಿಲ್ಲೆಂದು ಮಂತ್ರಿಗಳ ಅಭಿಮತ. ಗವರ್ನರರು ಈ ಬಿಕ್ಕಟ್ಟಿನ ವಿಷಯವನ್ನು ವೈಸರಾಯರಿಗೂ, ಮಂತ್ರಿಗಳಿಗೂ ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಗೂ ತಿಳಿಸಿರುವರು.

ಇಂಗ್ಲೆಂಡಿನಲ್ಲಿ ಬೋಂಬುಗಳ ಸ್ಫೋಟ

ಇದೇ ತಾ. ೧೬ರಲ್ಲು ಲಂಡನಿನಲ್ಲಿ ಎರಡು ಕಡೆ ಬೋಂಬುಗಳ ಸ್ಫೋಟಗಳುಂಟಾದುವು. ಆದರೆ ಪ್ರಾಣಹಾನಿಯೇನೂ ಆಗಿರುವುದಿಲ್ಲ ಇಲೆಕ್ಟ್ರಿಕ ಬೋರ್ಡಿನ ಆಫೀಸೊಂದರ ಅಸಂಖ್ಯಾಕ ಕಿಟಕಿಗಳು ಒಡೆದು ಹೋಗಿವೆ. ಈ ಸ್ಫೋಟದ ಕುರಿತು ಗುಪ್ತ ಪೋಲೀಸರು ಪತ್ತೆನಡಿಸುತ್ತಿದ್ದಾರೆ. ಐರ್ಲೆಂಡಿನ ರಿಪಬ್ಲಿಕನ್ ಸೇನೆಯವರು ರಾಜಕೀಯ ಕಾರಣದಿಂದಾಗಿ ಈ ಅತ್ಯಾಚಾರ ನಡಿಸಿರುವರೆಂದು ನಂಬಲಾಗಿದೆ. ಇಂದೇ ಮೆಂಚೆಸ್ಟರಿನಲ್ಲಿ ಮೂರು ಕಡೆಗಳಲ್ಲಿ ಬೋಂಬುಗಳು ಸ್ಫೋಟವಾಗಿ ಒಬ್ಬನು ಕೊಲ್ಲಲ್ಪಟ್ಟು [illegible] ಜಖಮ್ ಹೊಂದಿರುತಾರೆ. ಬರ್ಮಿಂಗ್‌ಹೇಮಿನ ಇಲೆಕ್ಟ್ರಿಕ್ ಪವರ್ ಸ್ಟೇಶನಿನಲ್ಲಿಯೂ ಒಂದು ಸ್ಫೋಟವಾಗಿರುವುದು. ನೋರ್ತಂಬರ್ಲೆಂಡಿನಲ್ಲಿ ಇನ್ನೊಂದು ಸ್ಫೋಟವಾಗಿರುವುದು. ಒಟ್ಟು ಇಡೀ ಇಂಗ್ಲೆಂಡಿನಲ್ಲಿ ಇಂತಹ 9 ಸ್ಫೋಟಗಳುಂಟಾಗಿಗಿರುವವು. ಇಲೆಕ್ಟ್ರಿಕ ಪವರ್ ಸ್ಟೇಶನುಗಳಿಗೆ ಹಾನಿಯುಂಟು ಮಾಡುವುದೇ ಈಸ್ಫೋಟಗಳ ಉದ್ದೇಶವಿರುವುದು. ಅಲ್ಸ್ಟರನ್ನು ಸೇರಿಸಿ ಇಡೀ ಐರ್ಲೆಂಡನ್ನು ಒಂದು ರಿಪಬ್ಲಿಕಾಗಿ ಮಾಡದಿದ್ದರೆ ಪರಿಣಾಮವು ನೆಟ್ಟಗಾಗದೆಂದು ಎಚ್ಚರಿಸುವುದಕ್ಕಾಗಿ ಈ ಅತ್ಯಾಚಾರಗಳು ನಡಿಸಲ್ಪಟ್ಟಿರುವವೆಂದು ಊಹಿಸಲಾಗಿದೆ.

"ಕುರುಕ್ಷೇತ್ರ"

ಮುಂಬಾಯಿಯಲ್ಲಿ ಕನ್ನಡ ನಾಟಕ

"ಕನ್ನಡ ಸಂಗೀತ ಸಭಾ" (ಎಮೆಚೂರ್ಸ್) ಮುಂಬಾಯಿ, ಇವರು, ಇದೇ ಜನವರಿ ತಾ. ೩೧ಕ್ಕೆ ಇಲ್ಲಿನ ಬಾಂಗವಾಡಿಯ ರಂಗಭೂಮಿಯಲ್ಲಿ "ಕುರುಕ್ಷೇತ್ರ" ಅಥವಾ ಕೃಷ್ಣ ಚಕ್ರ"ವೆಂಬ ನಾಟಕವನ್ನಾಡಲಿರುವರು. ಈ ಸಂಗೀತ ಸಭೆಯು ತನ್ನ ಸಂಸ್ಥಾಪನೆಯ ದಿಂದಿಂದ ಈ ವರೆಗಿನ ೩ವರ್ಷಗಳಲ್ಲೂ ಒಂದರ ಹಿಂದೊಂದು ಹೊಸ ನಾಟಕಗಳನ್ನೇ ನೂತನ ರೀತಿಯಿಂದ ಅಭಿನಯಿಸುವ ಸಾಹಸದಲ್ಲಿ ಕೈಯಿಕ್ಕುತ್ತಾ ಒಂದುದು ಸ್ತುತ್ಯವು. ಇವರ "ಕೋಟಿ ಚೆನ್ನಯ್ಯ" ವೆಂಬ ಹಳ್ಳಿಯ ಹಳೆಯ ಕಥೆಯನ್ನು ಕಂಡು ಮುಂಬಯಿಯ ನಾಗರಿಕರೂ ಆನಂದಹೊಂದಿರುವರು. ಮುಂಬಾಯಿಗೆ ಪ್ರಥಮ ಬಾರಿಗೆ "ಕಾಲಚಕ್ರ"ವೆಂಬ ಕನ್ನಡ ಸಾಮಾಜಿಕ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದವರು ಇವರೇ. ಈ ನಾಟಕವು "ಬೊಂಬೆ ಕ್ರಾನಿಕಲ್"ನಂತಹ ಪ್ರಸಿದ್ಧ ಆಂಗ್ಲ ಪತ್ರಿಕೆಗಳಿಂದಲೇ ಪ್ರಶಂಸೆಯನ್ನು ಪಡೆದಿದೆ. ಈಗ ಇವರು ಮಹಾಭಾರತದ ಕಥಾ ಸಾರವನ್ನು "ಕುರುಕ್ಷೇತ್ರ" ನಾಮಧೇಯದಿಂದ ಅಭಿನಯಿಸಲಿರುವರು.

"ಕುರುಕ್ಷೇತ್ರ"ದ ಕಥೆಯು "ನಾಗರಿಕ ನಾರಿ" "ಕಾಲಚಕ್ರ"ವೇ ಮೊದಲಾದ ವಿಖ್ಯಾತ ನಾಟಕಗಳ ಲೇಖಕರಾದ ಶ್ರೀ. ಯಂ. ನಾರಾಯಣರಾಯರಿಂದ ಬರೆಯಲ್ಪಟ್ಟಿದ್ದು ಭಾರತದೊಳಗಣ ಉದ್ಯೋಗ ಪರ್ವದಿಂದ ಶಾಂತಿಪರ್ವದ ವರೆಗಿನ ಎಲ್ಲಾ ಪ್ರಾಮುಖ್ಯ ವಿಷಯಗಳನ್ನೊಳಗೊಂಡಿದೆ.

ವಾಕ್ಪಟುತ್ವ, ಸಂಗೀತ, ಅಭಿನಯಗಳಲ್ಲಿ ಯೋಗ್ಯರಾದ ನಟರನ್ನೇ ಶೋಧಿಸಿ "ಕುರುಕ್ಷೇತ್ರ"ದ ಭೂಮಿಕೆಗಳನ್ನು ಹಂಚಲಾಗಿದೆ. ಮುಂಬಾಯಿಯ ಕನ್ನಡ ಎಮೆಚೂರ್ಸ್ ಅಭಿನಯಗಳಲ್ಲಿ ಮೊದಲನೆಯ ಪೆರೆನಿಸಿದ ಶ್ರೀ. ಯಂ. ಡಿ. ಸೆಟ್ಟಿ ದುರ್ಯೋಧನನ ಪಾತ್ರವನ್ನೂ ಇಲ್ಲಿನ ಆಂಗಸಾಧಕರಲ್ಲಿ ಬಲಭೀಮನೆನಿಸಿಕೊಂಡ ಪ್ರಖ್ಯಾತ ಪ್ರೊಫೆಸರ್, ಎಸ್. ಶೇಷಪ್ಪನವರ ಶಿಷ್ಯರಾದ ಶ್ರೀ. ಟಿ. ಯಂ. ಸುವರ್ಣರು ಭೀಮಸೇನನ ಪಾತ್ರವನ್ನೂ ವಹಿಸಲಿರುವರು. ತನ್ನ ಜೀವನದ ಹೆಚ್ಚಿನ ಸಮಯವನ್ನು ನಾಟಕ ಕಾರ್ಯದಲ್ಲೇ ಸವೆಯಿಸಿ ಇಲ್ಲಿನ ಕನ್ನಡ ಎಮೆಚೂರ್ಸ್ ಕಾರ್ಯರಂಗದಲ್ಲಿ ಅತೀ ಪುರಾತನರೆನಿಸಿಕೊಂಡ ಶ್ರೀ. ಬಿ. ಜಿ. ನಾಯಕರು "ಕುರುಕ್ಷೇತ್ರ" ರಣರಂಗದ ವೃದ್ಧ ಭೀಷ್ಮನಾಗಲಿರುವರು. 60ಕ್ಕೆ ಮಿಕ್ಕಿದ ಇತರ ಪಾತ್ರಗಳೂ ತಮ್ಮ ಭಾಗವನ್ನು ಚೆನ್ನಾಗಿ ಬಲ್ಲ ಸುಶಿಕ್ಷಿತ ರಸಿಕ ನಟರ ಕೈಗಳಲ್ಲೇ ಇವೆ.

"ಕುರುಕ್ಷೇತ್ರ"ದ ಸಂಗೀತವಾದರೂ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. "ಕುರುಕ್ಷೇತ್ರ"ದ ಸಂಗೀತ ಶಿಕ್ಷಣಕ್ಕಾಗಿ "ಕನ್ನಡ ಸಂಗೀತ ಸಭೆ"ಯು ಮಂಗಳೂರಿನ ಪ್ರಸಿದ್ಧ ಸಂಗೀತಜ್ಞರಾದ ಶ್ರೀ. ಎಂ. ಎ. ದೇವಾಡಿಗಾರರ ಮತ್ತು ಪ್ರೊಫೆಸರ್ ಬಿ. ಎಸ್. ಆನಂದರಾಯರ ಆಶ್ರಯವನ್ನು ಪಡೆದಿದೆ. ಈ ಮಹನೀಯರ ಸುಮಧುರ ಸಂಗೀತವನ್ನು ರಂಗಭೂಮಿಯಲ್ಲೇ ಕೇಳಿ. ತಮ್ಮವರ ಪಾಂಡಿತ್ಯಕ್ಕಾಗಿ ಅಭಿಮಾನಪಡುವ ಸುಸಂದರ್ಭವು ಮುಂಬಾಯಿಯ ಕನ್ನಡಿಗರಿಗೆ "ಕುರುಕ್ಷೇತ್ರ"ದ ಮೂಲಕ ದೊರೆಯಲಿರುವುದು.

ಕಲಾಭಿಮಾನಿಗಳಾದ ಕನ್ನಡಿಗರು "ಕನ್ನಡ ಸಂಗೀತ ಸಭೆ"ಯ ಉತ್ಸಾಹೀ ತರುಣ ಕನ್ನಡಿಗರನ್ನು ಪ್ರೋತ್ಸಾಹಿಸಿ ಅವರ ಈ ಉದ್ಯಮವನ್ನು ಯಶಸ್ವಿಯಾಗಿ ಮಾಡುವರೆಂಬ ಆಶಯವಿದೆ.

ಮುಂಬಯಿ ಬಡ ಜನರ ಪಕ್ಷ

(ಪೂರ್ ಪೀಪಲ್ಸ್ ಪಾರ್ಟಿ)

"ಎ" ವಾರ್ಡಿನ 2ನೇ ಡಿವಿಜನ ಓಟರುಗಳ ಸನ್ನಿಧಿಯಲ್ಲಿ ವಿನಂತಿ

ಮಹಾಶಯರೇ, ಮುಂಬಯಿ ನಗರದ ಪ್ರಸಕ್ತ ಮುನಿಸಿಪಲ್ ಚುನಾವಣೆಗೆ, "ಎ" ವಾರ್ಡಿನ 2ನೇ ಡಿವಿಜನ್‌ನಿಂದ ನಮ್ಮ ಬಡಜನರ ಪಕ್ಷವಾಗಿ ಈ ನಗರದಲ್ಲಿ ಇಪ್ಪತ್ತು ವರ್ಷ ಅನುಭವ ಪಡೆದ ಸುಪ್ರಸಿದ್ಧ ವೈದ್ಯರಾದ ಡಾ. ಯು. ಪಿ. ನಾರಾಯಣರಾಯರವರು ನಿಂತಿರುವರು. ವೈದ್ಯಗಿರಿಯಲ್ಲಿ ಡಾಕ್ಟರರ ಪ್ರಶಸ್ತಿಯನ್ನು ಮುಖ್ಯವಾಗಿ ನಗರದ ಬಡಬಗ್ಗರ ಮತ್ತು ನಿರಾಶ್ರಯರುಗಳಿಗೆ ಅವರಿಂದಾಗುತ್ತಿರುವ ಉಪಕಾರಗಳನ್ನು ಎಲ್ಲರೂ ಬಲ್ಲರು.

ಸ್ವಲ್ಪವೂ ವಿರಾಮವಿಲ್ಲದೆ ವೈದ್ಯವೃತ್ತಿಯಲ್ಲಿದ್ದುಕೊಂಡೇ, ಇಪ್ಪತ್ತು ವರ್ಷಗಳಿಂದ ಅವರು ಒಂದಲ್ಲ ಒಂದು ರೀತಿಯಲ್ಲಿ ಜನೋಪಕಾರಕವಾದ ಕಾರ್ಯಗಳಲ್ಲಿ ತೊಡಗಿ [illegible]ತ್ತಿರುವುದನ್ನು ಯಾರೂ ಮರೆತಿರಲಾರರು. ಅವರು ಪ್ರಕಟಿಸುತ್ತಿರುವ ವೈದ್ಯ ಪತ್ರಿಕೆಗಳ ಮೂಲಕವಾಗಿಯೂ, ಪ್ರತ್ಯಕ್ಷ ಕಾರ್ಯಗಳ ಮೂಲಕವಾಗಿಯೂ ಅವರು ಇಪ್ಪತ್ತು ವರ್ಷಗಳಿಂದಲೂ ಜನಸಾಮಾನ್ಯರ ಹಿತವನ್ನೇ ಸಾಧಿಸುತ್ತಿರುವರು. ನಾಗರಿಕತೆಯಲ್ಲಿ ಬಹಳ ಮುಂದುವರಿದುದು ಎನಿಸಿಕೊಂಡ ಈ ನಗರದಲ್ಲಿಯೂ ಮ್ಯುನಿಸಿಪಾಲಿಟಿಯವರು ಅವಶ್ಯಕವಾಗಿಯೂ ನಡೆಸಬೇಕಾದ ಕರ್ತವ್ಯಗಳು ಅನೇಕವಿವೆ. ಕನ್ನಡಶಾಲೆಗಳ ಸ್ಥಾಪನೆ, ಶಾಲೆಯ ಮಕ್ಕಳ ಆರೋಗ್ಯದ ಸುವ್ಯವಸ್ಥೆಗಾಗಿ ಆಡಿಗಡಿಗೆ ಅವರ ಆರೋಗ್ಯ ಪರೀಕ್ಷೆಗೆ ತಕ್ಕ ಏರ್ಪಾಡುಮಾಡಬೇಕು. ಬಡವರಿಗೂ ಅನಾಥರಿಗೂ ಉಚಿತವಾದ ಔಷಧಿ-ಉಪಚಾರ-ಚಿಕಿತ್ಸೆಗಳ ಏರ್ಪಡಬೇಕು. ನಗರದಲ್ಲಿ ಬಡಜನಗಳು ವಾಸಿಸುವ ಕಡೆಗಳಲ್ಲಿ ಸ್ವಚ್ಛತೆಯನ್ನೂ, ನೈರ್ಮಲ್ಯವನ್ನೂ ತಂದು ಅವರ ವಸತಿಗಳು ಆರೋಗ್ಯದಾಯಕವಾಗುವಂತೆ ಮಾಡಬೇಕು. ಕೇವಲ ಬಡವರೂ ನಿರ್ಗತಿಕರೂ ಆದ ಪ್ರಜೆಗಳ ದೃಷ್ಟಿಯಿಂದ ಮ್ಯುನಿಸಿಪಾಲಿಟಿಯವರು ಮಾಡಬೇಕಾದ ಕರ್ತವ್ಯಗಳೇನೆಂಬುದನ್ನು ಡಾಕ್ಟರ್ ನಾರಾಯಣರಾಯರು ಚೆನ್ನಾಗಿ ಅರಿತು, ಅವುಗಳನ್ನು ನಡೆಸಿ ಪ್ರಜಾಹಿತವನ್ನು ಸಾಧಿಸಬೇಕೆಂದು ಬದ್ಧಕಂಕಣರಾಗಿ ನಿಂತಿದ್ದಾರೆ.

ನಮ್ಮ ಪೂರ್ ಪೀಪಲ್ಸ್ ಪಾರ್ಟಿಯ (ಬಡ ಜನರ ಪಕ್ಷದ) ಧ್ಯೇಯವೂ ಇದೇ ಆದ್ದರಿಂದ ತಮ್ಮ ಪವಿತ್ರವಾದ ಓಟುಗಳನ್ನು ಡಾಕ್ಟರ್ ಯು. ಪಿ. ನಾರಾಯಣರಾಯರಿಗೆ ಕೊಟ್ಟು ಪ್ರಜಾಹಿತದ ಕಾರ್ಯದಲ್ಲಿ ಅವರಿಗೆ ನೆರವಾಗಬೇಕೆಂದು ವಿನಂತಿ.

ಪ್ರತಿಯೊಬ್ಬ ಓಟರರಿಗೂ 6 ಓಟುಗಳಿವೆ.

ಅವರ ಗುರುತು: ಬಂದೂಕು

ನ್ಯೂ ಕೋಮಲ ವಿಲಾಸ ಹಿಂದೂ ಹೋಟೇಲ,
101, ಕಾವಸ್ಜಿ ಪಟೇಲ್ ಸ್ಟ್ರೀಟ,
ಫೋರ್ಟ್, ಮುಂಬಾಯಿ.

ಆರ್. ಎಸ್. ಪೋಯರ್,
ಗೌರವ ಕಾರ್ಯದರ್ಶಿ
ಬಡಜನರ ಪಕ್ಷ,
(ಪೂರ್ ಪೀಪಲ್ಸ್ ಪಾರ್ಟಿ.)

KANTI
Toilet Soap

ಕಟ್ಟಕಡೆಗೆ
ಲಕ್ಷಾಂತರ ಜನರು ಮನಗಂಡಿರುವ ವಿಷಯವಿದು. ಶೀತಲ ಉಲ್ಲಾಸಕರ ಮತ್ತು
ಸಂಭ್ರಮದ ಸ್ನಾನಕ್ಕೆ
ಸ್ವಸ್ತಿಕ
'ಕಾಂತಿ'
ಟ್ಯೊಲೆಟ್ ಸೋಪಿನ ಹೊರತು ಇನ್ನೊಂದು ಉತ್ತಮವಿರಲಾರದು.
ಅಲ್ಪ ಬೆಲೆಗೆ
ಅತಿ ದೊಡ್ಡ ತುಂಡು

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.

ಒಮ್ಮೆ ನೀವು ಸ್ವಸ್ತಿಕ ಕಾಂತಿ ಟ್ಯೊಲೆಟ್ ಸೋಪನ್ನು ಉಪಯೋಗಿಸಿದರೆ ಆ ಮೇಲೆ ಇತರ ಸೋಪನ್ನು ಮೆಚ್ಚಲಾರಿರಿ.

ಪುಟ ೧೦ರಿಂದ

ಇನ್ನು ಈ ವಧುವಿನ ಕೈಹಿಡಿದವರು ಮುನ್ನಡೆಯಿಸಿಕೊಂಡು ಹೋಗಲಿ, ಎಂದರೆ ನಾವು ಕೈಬಿಟ್ಟೆವೆಂದಲ್ಲ. ನಮ್ಮ ತಂದೆತನದ ನೆರವು ಇದ್ದೇ ಇದೆ. ಈ ಹದಿಮೂರು ವರುಷಗಳಿಂದ ನಮ್ಮೊಡನೆ ಡೈರೆಕ್ಟರುಗಳಾಗಿಯೂ ನೌಕರರಾಗಿಯೂ ವ್ಯವಹಾರವುಳ್ಳವರಾಗಿಯೂ ಎಷ್ಟೋ ಜನರು ಈ ಸಿಂಡಿಕೇಟಿನ ಇಂದಿನ ಉನ್ನತಿಗೆ ಕಾರಣರಾಗಿದ್ದಾರೆ. ಅವರೆಲ್ಲರ ಉಪಕಾರ ಸಹಕಾರಗಳನ್ನಿಂದು ನಾವು ಸ್ಮರಿಸುತ್ತೇವೆ. ಇಂದು ಸಮಾಗಿತ್ತಿರುವ ಅಭಿನಂದನೆಗಳಿಗಾಗಿ ನಮ್ಮ ಪ್ರಿಯ ನೌಕರವರ್ಗಕ್ಕೂ ಸಭಿಕ ಲೋಕಕ್ಕೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಸಭಾಧ್ಯಕ್ಷರುಗಳಾದ ಶ್ರೀ. ಆರ್. ಎನ್. ಎಸ್. ರಾವ್ ಬಾರ್. ಎಟ್. ಲಾ, ಅವರ ಮುಕ್ತಾಯ ಭಾಷಣ ಸಂಗ್ರಹ

ಬೆಳಗಿನ ಹೊತ್ತು ಮೀರುತ್ತಿರುವಲ್ಲಿ ಮತ್ತು ಶ್ರೀ. ಪಿ. ಎ. ಪೈ ಸಹೋದರರ ಹಾಗೂ ಸಿಂಡಿಕೇಟಿನ ಜಯಶೀಲ ಜೀವನದ ಕುರಿತು ಹಲವು ಸಮರ್ಥ ಭಾಷಣಕಾರರು ಹೇಳತಕ್ಕುದನ್ನೆಲ್ಲ ಹೇಳಿರುವಲ್ಲಿ, ನಾನು ಹೆಚ್ಚು ಹೇಳಲಿಕ್ಕೆ ಉಳಿದಿರುವುದೂ ಇಲ್ಲ, ಹೇಳುತ್ತಾ ಹೊತ್ತು ಕಳೆಯುವುದೂ ಇಲ್ಲ. ಒಂದು ಸಂಸ್ಥೆಯ ವಿಚಕ್ಷಣತೆಯ ಕಾರ್ಯನಿರ್ವಾಹಕ್ಕೆ ಪ್ರಾಮುಖ್ಯ ಆವಶ್ಯಕತೆಯೆಂದರೆ, ಅದರ ನೌಕರರ ಸಂತೃಪ್ತಿ. ಅದೆಷ್ಟರ ಮಟ್ಟಿಗೆ ಸಿಂಡಿಕೇಟಿನ ನೌಕರರಲ್ಲಿ ನೆಲೆಯಾಗಿದೆಯೆಂಬುದಕ್ಕೆ ಇಂದಿನ ಉತ್ಕೃಷ್ಟ ಸಮಾರಂಭವೇ ಸಾಕ್ಷಿ. ಪೈಸಹೋದರರೆಲ್ಲರಲ್ಲೂ ಪ್ರಶಂಸಾರ್ಹರಾಗಿರುವುದರಿಂದ ಡಾ| ಮಾಧವ ಪೈಗಳನ್ನೆತ್ತಿ ನಾವೆರಡುಮಾತುಗಳನ್ನು ಹೇಳಿದರೆ ಇತರರನ್ನು ಉಪೇಕ್ಷಿಸದಂತಾಗದು. ಡಾ| ಪೈಗಳು ಬರೇ ಡಾಕ್ಟರರೂ ಅಲ್ಲ ಬ್ಯಾಂಕರರೂ ಅಲ್ಲ. ವಿಚಕ್ಷಣತೆಯಿಂದ ಹಿತದಿಂದ ಸಮ್ಮಿಲನವಾದ ಹಲವು ಸಂಸ್ಥೆಗಳ ಚಾಲಕ ನಿರ್ದೇಶಕ ಶಕ್ತಿ ಅವರು. ಇತ್ತೀಚಿನ ಮೂರುವರುಷಗಳಿಂದ ನಾನು ಈ ಸಂಸ್ಥೆಯ ಪರಿಚಯ ಉಳ್ಳವನು. ಅಷ್ಟರಿಂದಲೇ ಇದರ ಪ್ರಗತಿಪರ ಪರಿಸ್ಥಿತಿಗೆ ಈ ಸಹೋದರರು ಮೂಲಶಕ್ತಿಯೆಂದು ನಾನು ಹೇಳಬಲ್ಲೆನು. ಈ ಸಂಘವು ಅಭಿವೃದ್ಧಿಮಾರ್ಗದಲ್ಲಿ ಅವಸ್ಥಾಂತರಗಳನ್ನು ಹೊಂದುತ್ತ ಈಗೊಂದು ಗುತ್ತಿಗೆ ಬಂದಿದೆ. ಹಿಂದಿನಂತೆ ಮುಂದಯೂ ಇದು ಪ್ರವರ್ಧಮಾನವಾಗುತ್ತ ಮುನ್ನಡೆವಂತೆ ದಕ್ಷತೆಯಿಂದ ಇದರ ಕಾರ್ಯಕಲಾಪಗಳು ಸಾಗಲೆಂದು ನನ್ನ ಹಾರೈಕೆ. ಈ ಸಮಾರಂಭದಲ್ಲಿ ನಾನೂ ಭಾಗಿಯಾಗುವಂತೆ ಅವಕಾಶವನ್ನಿತ್ತುದಕ್ಕಾಗಿ ನೌಕರ ವರ್ಗಕ್ಕೆ ನಾನೂ ಆಭಾರಿ. ಈ ಕ್ಷೇತ್ರದ ಅಧಿದೇವತೆಯಾದ ಶ್ರೀಕೃಷ್ಣನು ಪೈ ಸಹೋದರರ ಮೇಲೆ ತನ್ನ ಅನುಗ್ರಹವೃಷ್ಟಿಯನ್ನು ಸುರಿಸಲಿ!

ಬ್ರಹ್ಮಾವರ— ಇಲ್ಲಿಯ ಹಂಜನ ಶಿಕ್ಷಣ ಸಹಾಯಕ ಸಂಘದ ವಿದ್ಯಾರ್ಥಿಗಳಿಗೆ ಶ್ರೀ. ಇನ್ನಾಡಿ ವಿಠಲಶೆಟ್ಟರು ಧರ್ಮಾರ್ಥವಾಗಿ ವಸ್ತ್ರ ಕೊಟ್ಟಿದ್ದರು. ಆ ವಸ್ತ್ರಗಳನ್ನು ಉಡುಪಿ ಶ್ರೀ. "ಭಾರತ ವಸ್ತ್ರ ಮಂದಿರ"ದ ಟೈಲರ್ ಮಾಸ್ಟರ್ ಯೋಗೀಂದ್ರರಾಯರು ಉಚಿತವಾಗಿ ತಾ. 20-1-39ಕ್ಕೆ ಹೊಲಿದುಕೊಟ್ಟುದಕ್ಕೂ ಶ್ರೀ. ಶೆಟ್ಟರಿಗೂ ಶ್ರೀ. ರಾಯರಿಗೂ ಸದ್ರಿ ಸಂಘದ ಪರವಾಗಿ ಕಾರ್ಯದರ್ಶಿ ಶ್ರೀ. ಬಿ. ಅಂತಯ್ಯಶೆಟ್ಟರು ವಂದನೆಗಳನ್ನರ್ಪಿಸುತ್ತಾರೆ.

ಶ್ರೀ. ಎಸ್. ಯು. ಪಣಿಯಾಡಿಗಳಿಗೆ

ಸಪ್ಲೈ ಏಜನ್ಸಿ ಲಿಮಿಟೆಡ್ ಸಂಸ್ಥೆಯ ಕೆಲಸಗಾರರ == == ಮಾನಪತ್ರ

ಕನ್ನಡನಾಡಿನಲ್ಲಿ ಪ್ರಸಿದ್ಧವಾದ ಸಪ್ಲೈ ಏಜನ್ಸಿ ಲಿಮಿಟೆಡ್ ಈ ಸಂಸ್ಥೆಯನ್ನು ರಿಜಿಸ್ಟ್ರಾರರು 1936ನೇ ಇಸವಿಯ, ಕಂಪೆನಿಯ ಹೊಸ ಆಕ್ಟಿನನುಸಾರವಾಗಿ, ಬ್ಯಾಂಕಿಂಗ್ ಕಂಪೆನಿಯಾಗಿ ಪರಿಗಣಿಸಿದ್ದರಿಂದ, ಕಂಪೆನಿಯ ನಿಯಮಾನುಸಾರ ಸಪ್ಲೈ ಏಜನ್ಸಿಯು ಇದೀಗ ಬ್ಯಾಂಕಿಂಗ್ ಸಂಸ್ಥೆಯಾಗಿ ಮಾರ್ಪಟ್ಟಿರುವುದು. ಉಳಿದ ಎಲ್ಲಾ ವ್ಯಾಪಾರ ವಹಿವಾಟುಗಳನ್ನು ಜನರಲ್ ಸಪ್ಲೈಸ್ ಲಿಮಿಟೆಡ್ ಎಂಬ ಸಂಸ್ಥೆಗೆ ವಹಿಸಿಕೊಟ್ಟಿರುವರು. ಈ ಜನರಲ್ ಸಪ್ಲೈಸ್‌ನ ಉದ್ಘಾಟನಾ ಸಮಾರಂಭವು ಕಳೆದ ತಾರೀಕು 22-1-1939ರಲ್ಲಿ ಜರಗಿತು. ಈ ಸಂದರ್ಭದಲ್ಲಿ ಸಪ್ಲೈ ಏಜೆನ್ಸಿಯ ಕೆಲಸಗಾರರು ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಯಸ್. ಯು. ಪಣಿಯಾಡಿಯವರಿಗೂ, ಸಪ್ಲೈ ಏಜೆನ್ಸಿಯ ಆಡಳಿತ ಮಂಡಲಕ್ಕೂ, ಅಲ್ಲದೆ ಹೊಸ ಸಂಸ್ಥೆಯಾದ ಜನರಲ್ ಸಪ್ಲೈಸ್ ಲಿಮಿಟೆಡ್ ಈ ಸಂಸ್ಥೆಯ ಡೈರೆಕ್ಟರ್ ಮಂಡಳಿಗೂ ಮಾನಪತ್ರವನ್ನರ್ಪಿಸಿದರು.

ಉಡುಪಿಯ ಪ್ರಸಿದ್ಧ ದಾಕ್ತರರೂ, ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನಿನ ಚೇರ್ಮೇನರೂ ಆದ ಡಾ. ಎಸ್. ಆರ್. ಕ್ವಾಯವರು ಈ ಮಾನಪತ್ರ ಅರ್ಪಿಸುವ ಸಮಾರಂಭದಲ್ಲಿ ಅಧ್ಯಕ್ಷರಾಗಿದ್ದರು. ಉಡುಪಿಯ ಹಾಗೂ ಜಿಲ್ಲೆಯ ಪ್ರಮುಖ ಜನರು ಆಮಂತ್ರಿಸಲ್ಪಟ್ಟಿದ್ದರು. ಸಭಾಸ್ಥಳವು ಅತ್ಯಂತ ಮಹನೀಯರಿಂದ ತುಂಬಿದ್ದಿತು. ತುಳುನಾಡ ಪ್ರೆಸ್ಸಿನ ಮೆನೇಜರರಾದ ಶ್ರೀ. ಎಸ್. ಎಸ್. ಕುಡಂತರು ಮಾನಪತ್ರಗಳನ್ನು ಓದಿ ಅರ್ಪಿಸಿದ ಮೇಲೆ ಶ್ರೀ. ಪಂಡಿತ ವೆಂಕಟರಮಣಾಚಾರ್ಯರು ಶ್ರೀಯುತ ಪಣಿಯಾಡಿಯವರ ಆದರ್ಶವ್ಯಕ್ತಿತ್ವ, ಸಾಹಸ, ಉದ್ಯಮ ಶೀಲತೆಯನ್ನು ಬಹು ಸರಸವಾಗಿ ವರ್ಣಿಸಿ, ಇಂದಿನ ಪಣಿಯಾಡಿಯವರ ಸ್ಥಾನ, ಈ ಸಂಸ್ಥೆಯ ಹಿರಿಮೆಗೆ ಅವರ ವಿಶಾಲ ವ್ಯಾಪಕದೃಷ್ಟಿ, ಸುಧೀರ ಮನೋವೃತ್ತಿ ಚಟುಪಟಿಕೆ, ಜನಹಿತ ಧೋರಣೆಗಳೇ ಕಾರಣವೆಂದು ತಮ್ಮ ಅರ್ಥಗರ್ಭಿತವಾದ ಸರಳ ದೃಷ್ಟಿಯ ಸರಸ ಭಾಷಣದಲ್ಲಿ ಮನಗಾಣಿಸಿದರು. ಡಾಕ್ಟರ್ ಮಾಧವ ಪೈ, M. B. B. S, ಡಾ. ಶ್ರೀಪಾದರಾವ್, ಶ್ರೀ. ಆರ್. ಆರ್. ಕೊಂಜೂರು ಇವರೇ ಮೊದಲಾದ ಕೆಲವು ಸಭಿಕರು ಈ ಸಂಸ್ಥೆಯ ಕೆಲಸಗಾರರ ಮತ್ತು ಪಣಿಯಾಡಿಯವರ ಮತ್ತು ಈ ಸಂಸ್ಥೆಯ ಉನ್ನತಿಕೆಯ ಕುರಿತಾಗಿ ಪ್ರಸ್ತಾಪಿಸಿ, ಭಾಷಣವಿತ್ತರು. ಕೊನೆಯಾಗಿ ಅಧ್ಯಕ್ಷರು ತಮ್ಮ ಅನುಭವಪೂರಿತ ಭಾಷಣದಲ್ಲಿ ಸಪ್ಲೈ ಏಜೆನ್ಸಿಯ ಸಾಹಸೋದ್ಯಮಗಳನ್ನು ಕೊಂಡಾಡಿ, ಅದರ ಮುಂದೇಳಿಗೆಯನ್ನು ಹಾರೈಸಿ ಭಾಷಣವಿತ್ತರು.

ಆನಂತರ ಜನರಲ್ ಸಪ್ಲೈಸ್ ಲಿಮಿಟೆಡ್‌ನ ಉದ್ಘಾಟನಾ ಸಮಾರಂಭವು ಶ್ರೀ ಅತ್ತೂರು ಲಕ್ಷ್ಮೀನಾರಾಯಣ ರಾವ್, ಬಿ. ಎ. ಬಿ. ಎಲ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಜಿ. ಗೋಪಾಲ ಬಿ. ಎ. ಎಲ್ ಎಲ್. ಬಿ.ಯವರು ಈ ಸಂಸ್ಥೆಯ ಆದರ್ಶ ಉದ್ಯಮ, ಉದ್ದೇಶಗಳನ್ನು ಪ್ರಸ್ತಾಪಿಸಿ, ಕಂಪೆನಿಯ ಪುರೋಭಿವೃದ್ಧಿಯನ್ನು ಬಯಸಿ ಉದ್ಘಾಟನಾ ಸಮಾರಂಭವನ್ನು ಯಶಸ್ವಿಯಾಗಿ ನೆರವೇರಿಸಿದರು. ಅನಂತರ ಸಭಿಕರಲ್ಲಿ ಹಲವರು ಈ ಸಂಸ್ಥೆಯ ಕುರಿತು ಸರಸ ಭಾಷಣವನ್ನಿತ್ತರು. ಶ್ರೀ. ಪಣಿಯಾಡಿಯವರು ಈಸಂಸ್ಥೆಯ ಕುರಿತಾಗಿ ಪ್ರಸ್ತಾಪಿಸುತ್ತಾ ಕಸಬು ಕೈಗಾರಿಕೆಗಳ ಏಳಿಗೆ ದೇಶದೇಳಿಗೆಯ ಸಾಧನವಾಗಿರುವುದೆಂಬುದನ್ನು ವಿವರಿಸಿ ಜನರಲ್ ಸಪ್ಲೈಸ ಸಂಸ್ಥೆಯ ಉದ್ದೇಶವು ಹೀಗೆ ಇಷ್ಟು ಯಶಸ್ವಿಯಾಗಿ ಜರಗಬಹುದೆಂಬುದನ್ನು ವಿವರಿಸಿ, ಈ

ಶ್ರೀ. ಎಸ್. ಯು. ಪಣಿಯಾಡಿ.

ಮೊದಲು ಈ ಸಂಸ್ಥೆಗೆ ಸಹಾನುಭೂತಿಯಿಂದ ನೆರವಿತ್ತ ಬಂಧುಗಳಿಗೂ, ಕೆಲಸಗಾರರಿಗೂ, ತನ್ನ ಕೃತಜ್ಞತೆಯನ್ನರ್ಪಿಸಿ, ಮುಂದೆಯೂ ಇದರ ಸರ್ವತೋಮುಖದ ಏಳಿಗೆಗಾಗಿ ಆಡಳಿತ ಮಂಡಲವೂ, ಕೆಲಸಗಾರರೂ, ಜನತೆಯೂ ಸಾಧಿಸುವಂತೆ ಹಾರೈಸಿ ಭಾಷಣವನ್ನಿತ್ತರು. ಕೊನೆಯದಾಗಿ ಸಭಿಕರಾದ ಅಧ್ಯಕ್ಷ ಮಹಾಶಯರು ಈ ಸಂಸ್ಥೆಯ ಮೇಲ್ಮೆಯನ್ನು ಹಾರೈಸಿ, ಮನೋರಂಜಕ ಭಾಷಣವಿತ್ತು, ಸಭೆಯನ್ನು ಮುಕ್ತಾಯಗೊಳಿಸಿದರು. ಶ್ರೀ. ಎಸ್. ಎಸ್. ಕುಡಂತರು ಧನ್ಯವಾದಗಳನ್ನರ್ಪಿಸಿದರು.

ಅದೇ ದಿನ ರಾತ್ರಿ ಜಿಲ್ಲೆಯ ಕೆಲವು ಪ್ರಸಿದ್ಧ ಅರ್ಥಧಾರಿಗಳಿಂದ ಕೂಡಿದ ಯಕ್ಷಗಾನ ಕೂಟವು ಜರಗಿತ್ತು.

ಹಾಗೂ, ಈ ಸಮಾರಂಭದ ಸಂದರ್ಭದಲ್ಲಿ ಉತ್ತಮ ರೀತಿಯ ಚಹಪಾನಿಯ ವ್ಯವಸ್ಥೆ, ಉತ್ಕೃಷ್ಟ ಸಭಾಸ್ಥಳದ ನಿರ್ಮಾಣ ಇವೆಲ್ಲಾ ಆದರ್ಶಪ್ರಾಯವಾಗಿದ್ದುವು. ಉತ್ಸಾಹ ಪೂರಿತ ಕೆಲಸಗಾರರು ಬಹು ಶ್ರಮ ವಹಿಸಿ, ಈ ಕಾರ್ಯಭಾಗವನ್ನು ಬಹು ವಿಜೃಂಭಣೆಯಿಂದ ಯಶಸ್ವಿಯಾಗಿ ನೆರವೇರುವಂತೆ ಸಾಧಿಸಿರುವರೆಂಬುದು ಅಭಿನಂದನೀಯವು.

ಶ್ರೀ. ಪಣಿಯಾಡಿಗಳು ತನ್ನ ಮಾನಪತ್ರಕ್ಕೂ ಡೈರೆಕ್ಟರರಲ್ಲೊಬ್ಬರಾದ ಶ್ರೀ. ಮಿಯಾರ ನರಸಿಂಹಾಚಾರ್ಯರು ಸಪ್ಲೈ ಏಜೆನ್ಸಿ ಡೈರೆಕ್ಟರರಿಗೆ ಕೊಟ್ಟ ಮಾನಪತ್ರಕ್ಕೂ, ಡೈರೆಕ್ಟರರಲ್ಲೊಬ್ಬರಾದ ಶ್ರೀ ಆರ್. ಎಸ್. ಶೆಣೈಯವರು ಜನರಲ್ ಸಪ್ಲೈಸ್ ಡೈರೆಕ್ಟರರಿಗೆ ಕೊಟ್ಟ ಮಾನಪತ್ರಕ್ಕೂ ಉತ್ತರವಿತ್ತು ಕೆಲಸಗಾರರ ಐಕ್ಯತೆಯನ್ನೂ, ಜನತೆಯ ಪ್ರೋತ್ಸಾಹವನ್ನೂ ಎತ್ತಿ ಹೇಳಿದರು.

ಕಾಸರಗೋಡು ತಾಲೂಕಿನ ಗ್ರಾಮ ಉದ್ಯೋಗಸ್ಥರ ಸಂಘ— ಈ ತಾಲೂಕಿನ ಉದ್ಯೋಗಸ್ಥರ ಸಭೆಯು ತಾ. 8-1-1939ರಲ್ಲಿ ಸುಳ್ಯಪ್ಪಾಡಿ ಎಲಿಮೆಂಟರಿ ಶಾಲೆಯಲ್ಲಿ ವಕೀಲ ಶ್ರೀ. ಯಂ. ಉಮೇಶರಾವ್, B. A. L L B. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ವಿ. ಕಡಂಬಳಿತ್ತಾಯರು ಹಿಂದಿನ ಸಭೆಯ ವರದಿಯನ್ನು ಓದಿದ ತರುವಾಯ ಶ್ರೀ. ಕೂಡ್ಲು ಜಗನ್ನಾಥ ರೈಗಳು ಸಭಿಕರನ್ನು ಸ್ವಾಗತೀಕರಿಸಿದರು.

ಸಭೆಯಲ್ಲಿ ಪಾಸಾದ ಠರಾವುಗಳು

ತಾ. 14-11-38ರಲ್ಲಿ ಮಾಡಿದ ಸಂಘವನ್ನು ಪುನರುಜ್ಜೀವನಗೊಳಿಸುವರೆ ಕಾರ್ಯಕಾರಿ ಮಂಡಳಿಯಲ್ಲಿ 11ಜನ ಸದಸ್ಯರಿರಬೇಕೆನ್ನುವ, ಸದಸ್ಯತನದ ವಂತಿಗೆಯು ವರ್ಷಕ್ಕೆ ರೂ. 1-ಇರಬೇಕೆನ್ನುವ, ಕಾರ್ಯಕಾರಿ ಮಂಡಳಿಯ ಸಭೆಗೆ ಕನಿಷ್ಠ ಹಾಜರಿಯು 5 ಇರತಕ್ಕದ್ದೆನ್ನುವ ಮೊದಲಾದ ಠರಾವುಗಳಾದುವು. ಮೇಲೆ ಅದೂರು IIನೇ ಪಟೇಲರು ಅಧ್ಯಕ್ಷರಾಗಿ ಪಟೇಲ ಪಿ. ವಿಷ್ಣು ಕಡಂಬಳಿತ್ತಾಯರು ಕಾರ್ಯದರ್ಶಿ, ಶಿರಿಬಾಗಿಲು ಪಟೇಲರು ಕೋಶಾಧಿಕಾರಿಗಳಾಗಿರುವ ಕಾರ್ಯಕಾರಿ ಮಂಡಳಿಯನ್ನು ಚುನಾಯಿಸಲಾಯಿತು.

ದಿ ಟ್ರೊಪಿಕಲ್ ಇನ್ಶ್ಯುರೆನ್ಸ್ ಕಂಪೆನಿ

ಇದರ ಮದ್ರಾಸು ಬ್ರಾಂಚು ಸೆಕ್ರೆಟರಿಗಳಾದ ಶ್ರೀ. ಕೆ. ವಿ. ಸಿ. ರಾಮಮೂರ್ತಿ, ಯಂ. ಎ. ಯವರು ಇದೇ ತಾ 21ಕ್ಕೆ ಮಂಗಳೂರಿಗೆ ಬಂದು, ಮಂಗಳೂರು ಬ್ರಾಂಚ್ ಮೆನೇಜರರಾದ ಶ್ರೀ ಯಂ ಸುಂದರರಾವ್ ಶೆಟ್ರವರೊಡಗೂಡಿಕೊಂಡು, ತಾ. 21ಕ್ಕೆ ಉಡುಪಿಗೆ ಬಂದು ತಾ 28ರ ತನಕ ಇದ್ದಿದ್ದು ಬಳಿಕ ಜಿಲ್ಲೆಯ ಬೇರೆ ಬೇರೆ ಪ್ರಧಾನ ಕೇಂದ್ರಗಳ ಕಡೆಗೆ ಹೋಗಲಿರುವರಾಗಿ ತಿಳಿದುಬರುತ್ತದೆ. ಕಂಪೆನಿಯ ಪ್ರತಿನಿಧಿಗಳಾಗಿ ಕೆಲಸಮಾಡಬಿಚ್ಛಿಸುವವರು ಅವರೊಡನೆ ಮುಖತಃ ಮಾತನಾಡಬಹುದು. ಹೆಚ್ಚಿನ ಮಾಹಿತಿಗಳನ್ನು ಕೆ ಜಗನ್ನಾಥ ಶೆಣೈ ಪರ್ಸನಲ್ ಓರ್ಗನೈಜರ್, ಬ್ರಾಂಚ್ ಉಡುಪಿ ಇವರಿಂದ ಪಡೆಯಬಹುದು.

ತ್ವರೆ ಮಾಡಿರಿ! ತ್ವರೆ ಮಾಡಿರಿ!

ಗ್ರಾಮಫೋನ್ ಸಿಂಗರ್

ಎಂಬ

ಕನ್ನಡ, ಹಿಂದಿ, ಮರಾಠಿ ಭಾಷೆಯ
ಗ್ರಾಮಫೋನ್ ಹಾಡುಗಳ ಮತ್ತು
ಸಿನೇಮ ಹಾಡುಗಳ ಸಂಗೀತ ಪುಸ್ತಕವು
ಬೇಗನೇ ಪ್ರಕಟವಾಗಲಿದೆ.

- ಆಧುನಿಕ ರುಚಿಗೊಪ್ಪುವ ಸಂಗೀತ ಪುಸ್ತಕವಿದು
- ಪ್ರತಿಯೊಬ್ಬರೂ ಓದಿ ಆನಂದಿಸತಕ್ಕ ಪುಸ್ತಕವಿದು

ನಿಮ್ಮ ಆರ್ಡರುಗಳನ್ನು ಇಂದೇ ಕೊಡಿರಿ
ವ್ಯಾಪಾರಿಗಳಿಗೆ ಧಾರಾಳ ಕಮಿಶನ್
೫೦ಕ್ಕಿಂತ ಹೆಚ್ಚು ಪ್ರತಿ ತೆಗೆದುಕೊಳ್ಳುವವರ ವಿಳಾಸವನ್ನು ಪುಸ್ತಕದಲ್ಲಿ ಮುದ್ರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ—

THE KANARA BOOKS & NEWS AGENCY,
Batatawala Mansion Lalbag,
BOMBAY 1.

The Commonwealth Assu., Co. Ltd.

ಕೋಮನ್ ವೆಲ್ತ್

ಎಶ್ಯೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.
ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು
ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ,
ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:—

ಎಸ್. ಪಿ ಆರ್. ನಾಯಕ್ ಎಂಡ್ ಸನ್ಸ್,	ಗವಾನಕರ್ ಎಂಡ್ ಸನ್ಸ್,
ಸ್ಪೆಶಲ್ ಏಜಂಟ್.	ಚೀಫ್ ಏಜಂಟ್ಸ್,
ಕಾರ್ ಸ್ಟ್ರೀಟ್, ಮಂಗಳೂರು.	ಆನಂದರಾವ್ ಸರ್ಕಲ್ ಬೆಂಗಳೂರು.

ಗೃಹಸ್ಥರು—ಏನು ಸ್ವಾಮಿ? ನಿಮ್ಮ ಬರವಣಿಗೆಯಲ್ಲೆಲ್ಲ ನಮ್ಮ ಸಮಾಜವನ್ನು ಸಂಹಾರ ಮಾಡುವ ಧೋರಣೆಯೇ ಕಾಣುತ್ತೆ! ಇದು ಪತ್ರಿಕಾ ವ್ಯವಸಾಯಿಗಳ ಧರ್ಮಕ್ಕೆ ವಿರೋಧವಲ್ಲವೇ? ಅದೂ ಅಲ್ಲದೆ ನಮ್ಮ ಸಮಾಜದ ಗುಟ್ಟನ್ನು ಹೊರಗೆ ಹಾಕುವುದು ನ್ಯಾಯವೇ? ಎಲ್ಲರೂ ನಮಗೆ ಹಾಸ್ಯ ಮಾಡುತ್ತಾರಲ್ಲಾ! ನಗಾಡುತ್ತಾರಲ್ಲಾ! ನಕಲಿ ಮಾಡುತ್ತಾರಲ್ಲಾ! ಏನು ದೋಷವಿದ್ದರೂ ಇರಲಿ, ನಮ್ಮಲ್ಲಿ ಒಂದು ಭರಂ ಎಂಬುದು ಉಂಟಲ್ಲ? ನಾವೇ ನಮ್ಮನ್ನು ಗೇಲಿ ಮಾಡಿಕೊಂಡರೆ ಹ್ಯಾಗೆ?

ಬರಹಗಾರರು—ಸ್ವಾಮಿ, ಮಾನ ಮರ್ಯಾದೆ, ನಾಚಿಕೆ, ಘನಸ್ಥಿಕೆ ಇವುಗಳ ವಿಷಯ ನಿಮಗಿರುವಷ್ಟೇ ಅಭಿಮಾನವು ನಮಗೂ ಉಂಟು, ನಾವೂ ಅದೇ ಸಮಾಜಕ್ಕೆ ಸೇರಿದವರು. ಆದರೆ ಅವನ್ನೆಲ್ಲ ನಾವು ಕಾರ್ಯದಲ್ಲಿ ತೋರಿಸಬೇಕು—ಬರೇ ಮಜಲಿಯಲ್ಲಿ ಅಲ್ಲ. ನಮ್ಮ ಪರಾಕ್ರಮ, ನಮ್ಮ ಧೈರ್ಯ, ಸ್ಥೈರ್ಯ, ಘನಸ್ಥಿಕೆ, ಮಾನಮರ್ಯಾದೆ ಇವನ್ನೆಲ್ಲ ಕಾರ್ಯದಲ್ಲಿ ಇಳಿಸಿ ತೋರಬೇಕು. ಒಣ ಜಂಬದಲ್ಲಿ, ಹೊಟ್ಟೆ ಪರಾಕಿಯಲ್ಲಿ ಅಲ್ಲ—ಸಿಕ್ಕಿದವರಿಗೆ 'ಟೋಕರ್' ಇಡುವುದರಲ್ಲಿ ಅಲ್ಲ—ನಾವು ಶುದ್ಧವಾಗಿ ಇದ್ದರೆ ಮಂದಿಗೆ ಯಾಕೆ ಹೆದರಬೇಕು? ಮದ್ದು ಇಲ್ಲದ ಕೋವಿಯನ್ನು ಹಿಡಿದುಕೊಂಡು ಎಷ್ಟರ ತನಕ ಇತರರನ್ನು ಹೆದರಿಸಬಹುದು? ಪೆಟ್ರೋಲ್ ಇಲ್ಲದ ಮೋಟಾರ ಕಾರಿನ 'ಹೋರ್ನ'ನ್ನು—'ಬೂಂ, ಬೂಂ,' ಮಾಡಿ, ಅದು ನಡಿಯುತ್ತದೆಂಬ ಭ್ರಮೆಯನ್ನು ಎಷ್ಟರ ತನಕ ಮಂದಿಯಲ್ಲಿ ಉಂಟುಮಾಡಬಹುದು. ಕೆಲವು ಜನರನ್ನು ಸ್ವಲ್ಪ ಸಮಯದ ತನಕ ಮೋಸಗೊಳಿಸಬಹುದು. ಕೆಲವರನ್ನು ಬಹಳ ಕಾಲವೂ ಬಗಲೊಳಗೆ ಹಾಕಿಕೊಳ್ಳಬಹುದು. ಆದರೆ ಎಲ್ಲರನ್ನೂ ಎಂದೆಂದಿಗೂ ಮೋಸಗೊಳಿಸುವುದು ಅಸಾಧ್ಯ. ನಮ್ಮ ಗುಟ್ಟನ್ನು ನಾವು ಎಷ್ಟು ಅಡಗಿಸಿಟ್ಟರೂ ಅದು ನಮ್ಮ ಹತ್ತರ ಕೇಳದೆ ತನ್ನಷ್ಟಕ್ಕೆ ಹೊರಗೆ ಬಿದ್ದುಬಿಡುತ್ತದೆ. ಹೀಗೆ ನಡೆದರೆ ನಮ್ಮ ಸಮಾಜದಲ್ಲಿ 'ಡೋಂಗಿ'ಯು ಇನ್ನು ಹೆಚ್ಚು ಸಮಯ ಸಾಗಲಾರದು. ಇನ್ನೊಂದು ದೃಷ್ಟಾಂತ ಕೊಟ್ಟು ವಿವರಿಸುವುದಕ್ಕಾಗಿ ನಿಮಗೊಂದು ಪ್ರಶ್ನೆ ಕೇಳಲೇ? ಈಗ ನೀವು ಹಾಕಿಕೊಂಡಂಥಾ ಉಡಿಗೆಗಳನ್ನು ಎಷ್ಟು ದಿವಸಗಳ ತನಕ ಧರಿಸಿಕೊಳ್ಳುತ್ತೀರಿ?

ಗೃಹಸ್ಥ—ಅದು ನಿರ್ಮಲವಿರುವ ತನಕ—

ಬರಹಗಾರ—ಆ ಮೇಲೆ ಏನು ಮಾಡುತ್ತೀರಿ?

ಗೃಹಸ್ಥ—ನೀರಲ್ಲಿ ನೆನೆದು, ಸಾಬೂನು ಹಾಕಿ ಕಲ್ಲಲ್ಲಿ ಬಡಿದು—

ಬರಹಗಾರ—ಅದನ್ನೆಲ್ಲ ಮನೆಯೊಳಗೇ ಗುಟ್ಟಿನಿಂದ ಮಾಡುತ್ತೀರೋ ಅಥವಾ ಹೊರಗೋ?

ಗೃ—ಹೊರಗೆ

ಬರಹಗಾರ—ಆ ಮೇಲೇನು ಮಾಡುತ್ತೀರಿ

ಗೃ—ಹೊರಗೆ ತೂಗಹಾಕುತ್ತೇನೆ.

ಬ—ಯಾಕೆ ಹೀಗೆಲ್ಲ ಮಾಡುವುದು?

ಗೃ—ಯಾಕೆಂದರೆ ಅದು ಸ್ವಚ್ಛವಾಗಿ, ಒಣಗಿ, ಉಡಲಿಕ್ಕೆ ತಕ್ಕದಾಗಬೇಕಲ್ಲ?

ಬ—ಯಾಕೆ ಸ್ವಚ್ಛ ಮಾಡಬೇಕು? ಒಗೆಯದೆ ಉಟ್ಟುಕೊಂಡರೆ ಏನಾಗುತ್ತದೆ? ಹೇಳಿ, ಹೇಳಿ, ನಾಚಿಕೆಮಾಡಬೇಡಿ-ನಾವು ಇಷ್ಟಪ್ಪನ್ನು, ಮರೆಮಾಜದೆ ಮಾತಾಡಿಕೊಳ್ಳುವ.

ಗೃ—ಯಾಕೆಂದರೆ ಮೊದಲಾಗಿ ಕೊಳಕುಬಟ್ಟೆಗಳು ಮನಸ್ಸಿಗೆ ಒಪ್ಪುವುದಿಲ್ಲ-ಎರಡನೇದಾಗಿ ಅವುಗಳಿಂದ ರೋಗಗಳಿಗೆ ಆಸ್ಪದವಾಗುವುದು.

ಬ—ರೋಗಬಂದರೇನು?

ಗೃ—ರೋಗ ಬಂದರೆ ಸಾಯುತ್ತಾರೆ, ಇಲ್ಲವಾದರೆ ನರಳಿ ಬದುಕುತ್ತಾರೆ, ಮತ್ತೇನು!

ಬ—ನೀವು ವಸ್ತ್ರಗಳನ್ನು ನೀರಲ್ಲಿ ಮುಳುಗಿಸಿ, ಸಾಬೂನು ಹಾಕಿ ಕಲ್ಲಿಗೆ ಬಡಿಯುವುದು ಏಕೆ?

ಗೃ—ಹಾಗೆ ಮಾಡದಿದ್ದರೆ ಅದರ ಕೊಳಕು ಚೆನ್ನಾಗಿ ಹೋಗುವುದಿಲ್ಲ—

ಬ—ಹೀಗೆ ಸಾಬೂನು ಹಾಕಿ ಕಲ್ಲಿಗೆ ಬಡಿಯುವದರಿಂದ ಕೊಳಕು ಹೋದರೂ ವಸ್ತ್ರ ಹಾಳಾಗುವುದಿಲ್ಲವೇ?

ಗೃ—ಆಗುತ್ತದೆ.

ಬ—ಹಾಗಾದರೆ ಅದನ್ನು ಬಡಿಯಬಹುದೇ?

ಗೃ—ಅಯ್ಯ ಕೊಳಕು ಹೋಗಬೇಕಲ್ಲಾ!

ಬ—ಹಾಗಾದರೆ ಬಡಿಯದೆ ಇಟ್ಟರೂ ಕೆಡಕು, ಬಡಿದರೂ ಕೆಡಕು, ಅಲ್ಲವೇ? ಆದರೆ ಈ ಎರಡರಲ್ಲಿ ನೈರ್ಮಲ್ಯ ಮತ್ತು ರೋಗನಿವಾರಣೆಯ ಮುಖ್ಯೋದ್ದೇಶಕ್ಕಾಗಿ ಒಂದು ಸಣ್ಣ ಕೇಡನ್ನು ಮಾಡದೆ ನಿರ್ವಾಹವಿಲ್ಲವೆಂದಾಯಿತು, ಅಲ್ಲವೇ? ಹಾಗೆ ಮಾಡುವುದಕ್ಕೆ ನಾಚುವುದುಂಟೇ? ಒಗೆಯುವದನ್ನು ಬೇರೆಯವರು ನೋಡುತ್ತಾರೆಂದು ಬಚ್ಚಿಡುವುದೂ ಇಲ್ಲ, ಕೊಳಕಿದ್ದಂತೆಯೇ ಉಟ್ಟುಕೊಳ್ಳುವುದೂ ಇಲ್ಲ. ಹೊಲಸಾದುದನ್ನು ಮುಚ್ಚಿಯೂ ಇಡದೆ ಮೈಮೇಲೆ ಹಾಕಿಕೊಂಡೂ ಇರದೆ ಒಗೆದು ಉಡುತ್ತಾನೆಂದು ನೋಡಿದ ಜನರು ಹೊಗಳುತ್ತಾರಲ್ಲದೆ ತೆಗಳುತ್ತಾರೆಯೇ? ಗೇಲಿಮಾಡುತ್ತಾರೆಯೇ? ಒಂದೂ ಇಲ್ಲ. ಬದಲಾಗಿ ಮೆಚ್ಚಿ ಕೊಂಡಾಡುತ್ತಾರೆ, ಅಂತೆಯೇ ಈ ನಮ್ಮ ಸಮಾಜದ ಆಚಾರ ವಿಚಾರ ನಡೆನುಡಿ ರೀತಿ ನೀತಿಗಳೆಂಬ ಬಟ್ಟೆಗೆ ಬಹು ವರ್ಷಗಳ ಕೊಳಕು ತಾಗಿಯದೆ, ಅದನ್ನು ಈಗ ಶುದ್ಧ ಮಾಡುವುದು ನಮ್ಮ ಆದ್ಯಕರ್ತವ್ಯ. ಹಾಗೆ ಮಾಡದಿದ್ದರೆ ಅದರಲ್ಲಿ ಎಳೆ ಎಳೆಗಳಲ್ಲಿಯೂ ಅಂಟಿಕೊಂಡಿರುವ ರೋಗಾಣುಗಳು ಅದನ್ನು ಧರಿಸಿರುವ ಸಮಾಜದ ಪ್ರಾಣವನ್ನೇ ತೆಗೆಯಲಿಕ್ಕಿವೆ. ಸಾಂಕ್ರಾಮಿಕ ರೋಗಗಳು ತಲೆದೋರಿದಾಗ ಡಾಕುಟರು ಇಂಜೆಕ್ಷನ್ ಕೊಡುತ್ತಾರೆ. ಆಗ ನೋವಾಗುತ್ತೆ, ಜ್ವರ ಬರುತ್ತೆ. ಕೆಲವು ದಿನ ರಗಳೆಯಾಗಿ ತೋರುತ್ತೆ. ಆದರೆ ರೋಗಕ್ಕೆ ಬಲಿಯಾಗಿ ನರಳಿ ಹೊರಳುವುದಕ್ಕಿಂತ, ಪ್ರಾಣ ಕೊಡುವುದಕ್ಕಿಂತ ನಂಬಿದ ಸಂಸಾರವನ್ನು ನಡುನೀರಲ್ಲಿ ಕೈಬಿಡುವುದಕ್ಕಿಂತ, ಜಾತಿನ ನೋವು ರಗಳೆಗಳನ್ನು ಸಹಿಸುವುದು ಲೇಸಲ್ಲವೆ? ಎರಡರ ಅನಿವಾರ್ಯವಾದ ತೊಡಕುಗಳು ಇರುವಾಗ ಕಡಿಮೆಯಾದ ಒಂದನ್ನು ನಾವು ತಾಳಿ ಬಾಳಲು ಕಲಿಯಬೇಕು. ಅದಕಾರಣ ಸುಮ್ಮನೆ ಕೂತುಕೊಂಡು ಸಮಾಜವು ಹಾಳಾಗಿ ಸಾಯುವುದನ್ನು ನೋಡುವುದಕ್ಕಿಂತ ಅದರ ದೇಹದೊಳಗಿನ ಕೊಳೆಯನ್ನು ಹೊರಗೆಡಹುವುದಕ್ಕಾಗಿ ವಿರೇಚನ ಗುಳಿಗೆ ಕೊಟ್ಟಿವೆ. ಸಮಾಜವು ಧರಿಸಿರುವ ರೀತಿನೀತಿಯು ಬಟ್ಟೆಯು ಕಶ್ಮಲವಾಗಿದೆಯೆಂಬ ಭಾವದಿಂದ ಅದನ್ನು ಒದ್ದೆಮಾಡಿ, ಸಾಬೂನು ಹಾಕಿ, ಕಲ್ಲಿಗೆ ಬಡಿದು ಒಣಗಿಸಬೇಕು. ಹೀಗೆ ಮಾಡುವಾಗ ಹೊಲಸಿನ ಕಡೆಗೆ ಲಕ್ಷ್ಯಕೊಡಬೇಕಾಗುತ್ತೆ. ಕಲೆಗಳಲ್ಲಿವೆಯೆಂದು ನೋಡಿ ಅಲ್ಲಿಗೆ ಸಾಬೂನು ಒರಸಿ ತಿಕ್ಕಬೇಕು. ನೋಡಿ, ನಮ್ಮ ಸಮಾಜದ ಈ ಬಟ್ಟೆಯಲ್ಲಿ ಬಡಿಯೆಂಬ ಒಂದು ಕಲೆಯು ಬಹು ದೊಡ್ಡದಾಗಿ ಗಟ್ಟಿಯಾಗಿಹಿಡಿದುಹೋಗಿದೆ. ಎಷ್ಟು ಸಾಬೂನು ಹಾಕಿದರೂ ಬಿಡುವುದಿಲ್ಲ, ಬಡಿದರೂ ಹೋಗುವುದಿಲ್ಲ. ಖಾರ ಹಾಕಿ ಬೇಯಿಸಬೇಕಾಗುತ್ತೋ ಏನೋ! ಇನ್ನೊಂದು ದೃಷ್ಟಾಂತ ಕೊಟ್ಟು ಹೇಳುತ್ತೇನೆ, ಕೇಳಿ. ಬೆಲ್ಲ ಕೇಳಿದಾಗಲೆಲ್ಲ ತಾಯಿ ಬೆಲ್ಲ ಕೊಡತಕ್ಕದ್ದೋ ಮಗುವಿಗೆ?

ಗೃ—ಬುದ್ಧಿಯಿದ್ದ ತಾಯಿ ಎಂದೂ ಕೊಡುವುದಿಲ್ಲ, ವಿಚಾರವಿಲ್ಲದವರು ಕೊಡುತ್ತಾರೆ.

ಬ—ಹಾಗೆ ಕೊಡುತ್ತಾ ಹೋದರೆ ಏನಾಗುತ್ತೆ?

ಗೃ—ಹುಳ ಹೆಚ್ಚುತ್ತದೆ.

ಬ—ಈ ನಮ್ಮ ಸಮಾಜವು ಬಹು ಹಠಮಾರಿಯಾದ ಮಗು, ಅದನ್ನು ಶಾಂತಪಡಿಸುವುದಕ್ಕಾಗಿ ತಾಯಿ ಬೆಲ್ಲ ಕೊಟ್ಟು ಕೊಟ್ಟು, ಹುಳ ಹೆಚ್ಚಾಗಿ, ಈಗ ಅದರ ಹೊಟ್ಟೆ ದೊಡ್ಡದಾಗಿದೆ. ಈಗ ತಾಯಿ ನೆನಸುತ್ತಾಳೆ-ಅಯ್ಯೋ ನಾನು ಸಿಹಿವಸ್ತುಗಳನ್ನು ಮಗುವಿಗೆಕೊಡಬೇಕಿತ್ತೆ, ಮಗುವು ಹೇಳಿದ ಹಾಗೆ ನಾನು ಕೇಳಬಾರದಿತ್ತು ಎಂದು. ಕೆಟ್ಟಮೇಲೆ ಬುದ್ಧಿ, ಸತ್ತ ಮೇಲೆ ಮದ್ದು, ಈಗ ಸಮಯ ಮೀರಿ ಹೋಯಿತು—ಪ್ರಯೋಜನವಿಲ್ಲ. ಆದಕಾರಣ ಮಗುವು ಡಾಕ್ಟರ್ ಇದ್ದಲ್ಲಿ ಬಂದಿದೆ. ಡಾಕ್ಟರು ಮಗುವನ್ನು ಪರೀಕ್ಷಿಸಿ, ಹೊಟ್ಟೆಯಲ್ಲಿ ಹುಳಗಳು ತುಂಬಿವೆಯೆಂದು ನಿರ್ಧರಿಸಿ ಮಗುವಿಗೆ ಹುಳದ ಮದ್ದು ಕೊಟ್ಟಿದ್ದಾರೆ. ಹುಳಗಳು ಹೋಗುತ್ತಾ ಇವೆ, ಅದರೊಂದಿಗೆ ಹೊಟ್ಟೆಯ ಕೊಳಕೂ ಹೊರ ಬೀಳುತ್ತೆ. ನೋಡುವವರಿಗೆ ಅಸಹ್ಯವಾಗಬಹುದು. ಆದರೆ ಒಮ್ಮೆ ಹುಳವೂ ಕೊಳೆಯೂ ಹೋಯಿತೆಂದರೆ ಮತ್ತೆ 'ಟೋನಿಕ್' ಕೊಟ್ಟು ಮಗುವು ಗಟ್ಟಿಮುಟ್ಟಾಗಿ ಬೆಳೆಯುವಂತೆ ಮಾಡುತ್ತಾರಾಗಿ ವಾಗ್ದಾನ—ನೋಡಿ ಸ್ವಾಮಿ, ದೊಡ್ಡದಾದ ಸಮಾಜದ ಹುಳಗಳು—ಇನ್ನೂ ಹೋಗದೆ—ಕರುಳಿನಲ್ಲಿಯೇ ಇವೆ! ದುಂದುಗಾರಿಕೆಯೆಂಬ ಹುಳ, ಸೋಮಾರಿತನವೆಂಬ ಹುಳ, ನಿರುದ್ಯೋಗದ ಹುಳ, ಕೋಳಿಯಂಕ, ಇಸ್ಪೀಟ್, ಜುಗಾರಿ, ಸಾರಾಯಿ, ಜಂಬದ ಉಡುಗೆ, ಪೇಟೆಯ ಅಲೆದಾಟ ಇಂತಹ ಹುಳಗಳೆಲ್ಲ ಸಮಾಜದ ಹೊಟ್ಟೆಯಲ್ಲಿವೆ. ಇನ್ನು ಕೆಲವು ಮಾದುವವರಿಗೆ ನಿಂದೆ ಮಾಡುವ ಹುಳ, ಹೆಣ್ಣಿನ ಕಡೆ [illegible] ಆಶ್ಚರ್ಯವಾತ್ರವೆಂದರೆ ಸಮಯ [illegible] ಮಾಡುವುದು, ಒಣ ಮರ್ಯಾದೆ [illegible] ಹೆಣ್ಣು ಕೊಟ್ಟು [illegible] ಇನ್ನೂ ಹಾಳು ಕೆಲಸಕ್ಕೆ ಇಳಿಯುವುದು, ಇವು ಒಂದೊಂದು ರೀತಿಯಲ್ಲಿ ಸಮಾಜ ಘಾತಕವಾದ ಹುಳಗಳೇ. ಡಾಕ್ಟರ್ ಹೇಳುತ್ತಾರೆ, ಈ ಭಯಂಕರವಾದ ಬಡಿಯೆಂಬ ಹುಳವನ್ನು ವಿರೇಚನೆಯ ಹರಳೆಣ್ಣೆ ಮಿಕ್ಸ್ಚರ್ ಕೂಡ ಹಾಕಲಾರದು, ಯಾಕೆಂದರೆ ಈ ಹುಳ ಕರುಳಿಗೆ ಅಂಟಿಹೋಗಿದೆ, ಆದಕಾರಣ ಹೊಟ್ಟೆಯನ್ನು 'ಓಪರೇಶನ್' ಮಾಡಿಯೇ ತೆಗೆಯತಕ್ಕದ್ದು ಅಂತ. ಬಹಳ ಕಷ್ಟ ಉಂಟಂತೆ. ಅದೂ ಇಲ್ಲದೆ ಅಕ್ಕಿ ಕ್ರಯ ತಗ್ಗಿದಂತೆಲ್ಲ, ಕಾಲೇಜು ಡಿಗ್ರಿಗಳ ಬೆಲೆ ಇಳಿದಂತೆಲ್ಲ ಈ ಹುಳ ಪ್ರಬಲವಾಗುತ್ತ ಅದು ಕೊಬ್ಬುತ್ತ ಬರುತ್ತದಂತೆ—

ಗೃ—ಇದೇನು! ನಮ್ಮಲ್ಲಿ ಮಾತ್ರ ಈ ವ್ಯಾಧಿಯೋ-ಬೇರೆ ಸಮಾಜಗಳಲ್ಲಿ ಇಲ್ಲವೋ?

ಬ—ಇರಬಹುದು—ಆದರೆ ಮೊದಲಾಗಿ ನಮ್ಮ ದೇಹವನ್ನು ಸ್ವಚ್ಛಮಾಡಿಕೊಳ್ಳುವುದು-ಮನೆಯನ್ನು ನಿರ್ಮಲವಾಗಿಟ್ಟುಕೊಳ್ಳುವುದು ನಮ್ಮ ಕೆಲಸ—ಸ್ವಾಮಿ, 'ಪರ' ಮನೆಯ ನಮ್ಮ ಹಿಂದುಸ್ಥಾನವನ್ನು ಟೀಕೆಮಾಡುವ ಅಧಿಕಾರವಿಲ್ಲ. ಪರದೇಶೀಯರು ನೈಲಿ ಮಾಡಿದರೆ

ವಿಮರ್ಶೆ (Criticism)

(ಲೇಖಕರು—ಶ್ರೀ ಬಿ. ರಾಮಪ್ಪಯ ಶೆಟ್ಟಿ, ಬಿ. ಎ. ಎಲ್. ಟಿ. ಉಡುಪಿ.)

Every language has a wealth of words; much more the English language. Some people know a few words and use them in every situation and hence many times abuse certain words. Cynicism is one such word. Its limitation is known only to a very few of the best scholars. Correct use of language is a great art. Diction crowns this art. Oh! what beauty there is when right words fall in right places. I have heard many people saying we can get on with a smattering of it—we don't want sound knowledge—we don't care for grammar and idiom. This is sour grapism. They may get on as other animals and trees get on; but let them remember that life is wider than individuals and life surely cannot get on without art or scholarship. Hence let every one try to know the correct language—no harm. "In every master-piece of literature there is revealed a knowledge of human nature, but invariably there is something more. **Knowledge alone does not suffice.** The cynic who points out our weaknesses and our follies and jeers at them and at us, undoubtedly possesses knowledge, but no cynic who was merely a cynic ever produced a book of abiding worth. Besides knowledge of men, the great writers invariably reveal a profound sympathy for and with men. They recognize themselves as a part of the world they portray as sharers in the common lot, as partakers of humanity's sorrows and humanity's joys. They look into their own hearts and write." When society trembles on the verge of the grave, criticism rushes to the rescue.

Criticism — sympathy = cynicism.

Firm Conviction

Every agent of the Canara Mutual has the Firm Conviction that his work is a genuine contribution to Society.

The Determination and enthusiasm which leads him to success daily spring from this FIRM CONVICTION.

Have you got that Firm Conviction?

If not, represent the

CANARA MUTUAL

and do real service.

It is purely a Policy-holders, Company managed for their Benifit

THE

CANARA MUTUAL

ASSURANCE CO, LTD.,

UDIPI, S. INDIA.

ಲ್ಲಾ ಎಂದು ನಮಗೆ ಸಿಟ್ಟು ಬರುತ್ತೆ. ಆದರೆ ನಮ್ಮ ಭಾರತರಾಷ್ಟ್ರದ ಸುಪುತ್ರರಾದ ಮಹಾತ್ಮ ಗಾಂಧಿಯವರು ನಮ್ಮ ರೀತಿ ನೀತಿಗಳನ್ನು ಟೀಕೆ ಮಾಡಿದರೆ ನಾವು ಬಗ್ಗುತ್ತೇವೆ. ಅವರಿಗೆ ಅಧಿಕಾರವುಂಟು—ಅವರು ನಮ್ಮ ಪರವಾಗಿ ನಮ್ಮ ಹಿತದೃಷ್ಟಿಯಿಂದ ನೋಡುವುದು. ನಕಲಿ ಮಾಡಿ ನಗುವುದಕ್ಕಲ್ಲ. ತಿಳಿಯಿತೇ? ಹಿತಚಿಂತನೆಯ ದೃಷ್ಟಿಯಿಲ್ಲದೆ ಸಹಾನುಭೂತಿ ತೋರದೆ ಮಾಡುವ ಟೀಕೆಯು ವಿಮರ್ಶೆಯಲ್ಲ. ಅದು ನಿಂದ್ಯ ದೂಷಣೆ. ಎಲ್ಲಿ ಟೀಕೆಯು ಸಹಾನುಭೂತಿಯಿಂದ ಹೃದಯ ನೊಂದು ಹಿತಚಿಂತನೆಯಿಂದ ಆವೇಶಗೊಂಡು ಹೊರಹೊರಡುವುದೋ ಅದೇ ವಿಧಾಯಕ ರೂಪಾತ್ಮಕವಾದ, ಕ್ಷೇಮಕಾರಿಯಾದ, ಕಲ್ಯಾಣದಾಯಕವಾದ ವಿಮರ್ಶೆ, ಅದಕ್ಕೆ ಬೆಲೆಯುಂಟು, ಬಾಗಬೇಕು ನಾವೆಲ್ಲಾ, ಬಾಗಬೇಕು.

ಗೃ—ನೀವೇನು ಗಾಂಧಿಯವರೋ?

ಬ—ಅಲ್ಲ, ಎಷ್ಟು ಮಾತ್ರಕ್ಕೂ ಅಲ್ಲ. ಅವರ ಯೋಗ್ಯತೆಯೇನು! ನಮ್ಮದೇನು! ಆದರೆ ಕಂಡ ಸತ್ಯವನ್ನು ಯಾರೂ ಹೇಳಬಹುದು. ಸತ್ಯಕ್ಕೆ ಮಾಯೆಯಿಲ್ಲದೆ ಕೊಡಬೇಕು—ಸತ್ಯಕ್ಕೆ ಅಂಜಬಾರದು.

ಗೃ—ಬೇರೆಯವರಿಗೆ ಹೇಳುವ ನೀವು ಸ್ವಚ್ಛವಾಗಿ ಇದ್ದೀರಾ?

ಬ—ನಾವು ಸಹ ಇರಲೇಬೇಕು—ಇರಲಿಕ್ಕೆ ಪ್ರಯತ್ನಿಸಲೇಬೇಕು. ಪ್ರಯತ್ನಿಸುತ್ತಾ ಕ್ರಮೇಣ ಉತ್ತಮ ಮಾರ್ಗ ಹಿಡಿಯುತ್ತ ಬೇರೆಯವರಿಗೂ ಬೋಧಿಸಬೇಕು. ಮೊದಲಾಗಿ ತಾನು ತನಗೇ ಹೇಳಿಕೊಳ್ಳಲಿಕ್ಕೆ ತೊಡಗಿ ತನ್ನ ನೀತಿಯನ್ನು ತಾನೇ ಆಚರಿಸಿ ಆ ಮೇಲೆ ಇತರರಿಗೆ ಹೇಳಿ ತೋರಿಸಬೇಕು. ಆದರೆ ನಾವು ಬೇರೆಯವರು ಹೇಗಿರಬೇಕೆಂದು ಹೇಳುತ್ತೇವಲ್ಲದೆ ನಾವು ಹೇಗಿದ್ದೇವೆಂದು ಆತ್ಮಶೋಧನೆ ಮಾಡುವುದೇ ಇಲ್ಲ. ಇದು ನಮ್ಮಲ್ಲೊಂದು ದೊಡ್ಡ ದೋಷ. ಬೇರೆಯವರು ನಮಗೆ ಹಾಗೆ ಮಾಡಬೇಕು ಹೀಗೆ ಮಾಡಬೇಕು ಎನ್ನುತ್ತೇವಲ್ಲದೆ ನಾವು ಅವರಿಗೆ ತ್ಯಾಗ ಮಾಡಬೇಕು, ನಮ್ಮ ವರ್ತನೆ ಅವರ ಕಡೆಗೆ ಹೇಗಿರಬೇಕು ಎಂಬ ವಿಚಾರದಲ್ಲಿ ನಾವಿಲ್ಲ—ನಮ್ಮ ಹೆಂಡಂದಿರು ಸೀತೆಯ ಹಾಗೆ ಇರಬೇಕು ನಮಗಾಗಿ ತ್ಯಾಗ ಮಾಡಬೇಕು—ಎಂದು ಕಾಲಾಕಾಲವೆನ್ನದೆ ಸಾರುವಾಗ ನಾವು ರಾಮನಂತಿದ್ದೇವೋ ಅಥವಾ ರಾವಣನಂತಿರುವೆವೋ ಎಂಬ ವಿಚಾರದ ಗೋಜಿಗೇ ಹೋಗುವದಿಲ್ಲ! ಒಂದು ವೇಳೆ ನಾವೇ ಆ ಹೆಂಡತಿಯಾಗಿದ್ದರೆ—ಹ್ಯಾಗೆ ಆಲೋಚನೆ ಮಾಡುತ್ತಿದ್ದೆವು ಎಂಬುದು ನಮಗೆ ಹೊಳೆಯುವುದೇ ಇಲ್ಲ. ಆದ ಕಾರಣ ಬರುವ ಲೇಖನ 'ಗಂಡನು ಹೆಂಡತಿಯಾಗಿದ್ದರೆ' –

ನಮ್ಮ ಕಿನ್ನಿಗೋಳಿ ಏಜಂಟರು—

ಶ್ರೀ. ಎಂ. ದೊಡ್ಡಣ್ಣ ಶೆಟ್ಟಿ,

ಪ್ರೊ. ಭಕ್ತೋದ್ಧಾರ ಸ್ವದೇಶಿ ಸ್ಟೋರ್ಸ್

ಶೀಘ್ರವಾಗಿಯೇ ಹೊರಬೀಳಲಿರುವ

ಪ್ರಜಾವಾಣಿ

(೩೨ ಪುಟಗಳು—ಪುಟ ಪುಟಕ್ಕೂ ಚಿತ್ರಗಳು)

ಎಂಬ ಪ್ರಗತಿಪರ ರಾಷ್ಟ್ರೀಯ ವಾರ ಪತ್ರಿಕೆಯನ್ನು ಓದಲು ಮರೆಯಬೇಡಿ.

ಎಲ್ಲೆಲ್ಲೂ ಏಜೆಂಟರು ಬೇಕಾಗಿದ್ದಾರೆ ವಿವರಗಳಿಗೆ ಒಡನೆ ಈ ಕೆಳಗಿನ ವಿಳಾಸಕ್ಕೆ ತಪ್ಪದೆ ಬರೆಯಿರಿ.

ಮ್ಯಾನೇಜರ್,

ಪ್ರಜಾವಾಣಿ ಕಾರ್ಯಾಲಯ,

೧೭೪ ಶ್ರೀ ನರಸಿಂಹರಾಜ ರೋಡ್,

ಬೆಂಗಳೂರು-ಸಿಟಿ

ಪುಟ ೨೨ರಿಂದ

ಶ್ರೇಯೋಭಾಗಿಗಳಾಗುವಿರಿ ಸಕಲಕಾರ್ಯಗಳಲ್ಲೂ ನಿಮ್ಮ ಯತ್ನಕ್ಕಿಂತ ಅದೃಷ್ಟದ ಬಲವೇ ಮೇಲಾಗಿರುವುದರಿಂದ ನೀವು ವಿಜಯಿಗಳಾಗುವುದರಲ್ಲಿ ಸಂದೇಹವಿಲ್ಲ. ದೊಡ್ಡ ಮೀನನ್ನು ಹಿಡಿಯಬೇಕಾದರೆ ಸಣ್ಣ ಮಾಂಸದ ಚೂರನ್ನು ಗಾಳದ ತುದಿಯಲ್ಲಿ ಸಿಕ್ಕಿಸುವಂತೆ ಆರಂಭದಲ್ಲಿ ನಿಮಗೆ ಅಲ್ಪ ಸ್ವಲ್ಪ ವ್ಯಯವು ತಗಲೀತು. ಆದರೂ ಅದನ್ನೆಣಿಸದೆ ಕಾರ್ಯತತ್ಪರರಾಗಿ ಜನರಿಂದ ಮಾನನೀಯರಾಗುವಿರಿ. ನಾನಾರೀತಿಯಲ್ಲಿ ಧನಾಗಮವಾಗುವುದು. ಕೆಲವೊಂದು ಗ್ರಹರ ದೋಷದಿಂದಾಗಿ ಶರೀರದಲ್ಲಿ ಆಯಾಸ ವ ಇತ್ರ ಭಯಗಳು ಕಂಡು ಬರುವವು. ಆದರೂ ಹೆದರಬೇಕಾಗಿಲ್ಲವು ವಿರೋಧಿಗಳು ಪ್ರಭಾಕರನನ್ನು ಕಂಡ ತಮೋರಾಶಿಗಳಂತೆ ದಿಕ್ಕಾಪಾಲಾಗುವವು. ತಾ. 26, 27 ಮತ್ತು 1, 2 ಈ ದಿನಗಳು ಇಷ್ಟದಾಯಕಗಳಾಗಿರುವವು.

ಕುಂಭರಾಶಿ—

ಪರಸ್ತ್ರೀ ಪರಸ್ವಾಪಹರಣ ರೂಪವಾದ ನೈಸರ್ಗಿಕ ಗುಣಕ್ಕೆ ಅನುಕೂಲವಾಗಿ ಗ್ರಹರ ಪ್ರೀತಿಕೂಲ್ಯವೂ ಸೇರಿರುವುದರಿಂದ ವರ್ತಮಾನ ಪರಿಸ್ಥಿತಿಯು ಬಹಳ ಭಯಂಕರವಾಗಿರುವುದು. ಪೂರ್ವಸಂಚಿತ ದ್ರವ್ಯವು ಭವಿಷ್ಯದ ಸುಖಗಳ ನಿಮಿತ್ತವಾಗಿ ವ್ಯಯವಾಗುವುದು. ಸುಖಶಾಂತಿಯೆಂಬುದು ಸ್ವಪ್ನದಲ್ಲೂ ಕೂಡ ದುರ್ಲಭವೆಂದು ಹೇಳಬಹುದು. ಶರೀರವೂ ಮಾಂಚಿನ ಶಕ್ತಿ ಕಾಂತಿಗಳನ್ನು ಕಳೆದುಕೊಂಡು ನಿಸ್ತೇಜಸ್ಸು ವಿರ್ಯಹೀನವಾಗಿರುವುದು. ಧನವ್ಯಯದ ಮಾರ್ಗಗಳು ದಿನೇ ದಿನೇ ಅಭಿವೃದ್ಧಿಯನ್ನೈದುವುದರಿಂದ ಸಂಕಷ್ಟ ಉತ್ಪತ್ತಿಯಿಲ್ಲದ ನಿಮಗೆ ಕಾಲ ಹರಣವು ಬಹಳ ಕಷ್ಟಕ್ಕೆ ಬರುವುದು. ನಿತ್ಯದಲ್ಲಿ ದುಡಿದ ದ್ರವ್ಯವು ನಿಮ್ಮ ಖರ್ಚಿನ ಯಾವಭಾಗಕ್ಕೂ ಸಾಲದಾಗುವುದು. ಸತ್ಸಂಗ ಮತ್ತು ಸದಾಚಾರ ಸಂಪನ್ನರಾಗಿದ್ದವರಿಗೆ ತಾ. 28, 29ರ ಮಟ್ಟಿಗೆ ಸ್ವಲ್ಪ ಉತ್ತಮವಿದೆ. ಇತರ ಎಲ್ಲಾ ದಿನಗಳು ಸರ್ವರಿಗೂ ಮಾನಹಾನಿ ಧನನಾಶ ಕಾರಿಗಳೂ ಉದರ ರೋಗ, ಭಯ, ಅಸ್ತ್ರರಕ್ತಿ ಮನಸ್ತಾಪ ಇತ್ಯಾದಿ ಶೋಕದಾಯಕಗಳಾಗಿವೆ.

ಮೀನರಾಶಿ—

ಸದ್ಯದ ಗ್ರಹಸ್ಥಿತಿಯಲ್ಲಿ ನಿಮಗೆ ಯಾವ ಭಾಗದಲ್ಲೂ ಹೆಚ್ಚಿನ ವ್ಯತ್ಯಾಸಗಳು ಕಂಡುಬರಲಾರವು. ಸ್ವೀಕೃತ ಕಾರ್ಯಗಳಲ್ಲಿ ಹಚ್ಚಿನವು ನಿಮ್ಮಂತೆ ಕೊನೆಗಾಣುವುವು. ಅದರಿಂದ ಸಾಕಷ್ಟು ಪ್ರತಿಫಲವೂ ನಿಮಗೆ ದೊರೆಯುವುದು. ಸಮಾಜದಲ್ಲಿ ಗಣನೀಯಸ್ಥಾನವನ್ನು ಹೊಂದಿ ಜನರ ಗೌರವಕ್ಕೆ ಪಾತ್ರರಾಗುವಿರಿ. ಅದರಿಂದ ಸಾಕಷ್ಟು ಪ್ರತಿಫಲವೂ ನಿಮಗೆ ದೊರೆಯುವುದು. ಆದರೆ ಏಕೋನ ಗಚ್ಛೇದಧ್ವಾನಂ ಏಕಸ್ಸುಪ್ತೇಷು ಜಾಗ್ರಯಾತ್'' ಎಂದಂತೆ ಒಬ್ಬನೇ ಎಂದಿಗೂ ಪ್ರಯಾಣಮಾಡಬಾರದು. ಜನಸಮೂಹದಲ್ಲಿ ಎಲ್ಲರೂ ನಿದ್ರಾವಸ್ಥೆಯನ್ನೈದಿದಾಗ ಒಬ್ಬನು ಎಚ್ಚರದಿಂದಿರಕೂಡದು. ನಿಮಗೂ ಕೂಡ ಪ್ರಕೃತದಲ್ಲಿ ಮಾರ್ಗಾತಿಕ್ರಮಣದ ಪ್ರಸಂಗಬಂದೀತು. ಆಗ ನಾನಾತೆರನಾದ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಅಕಸ್ಮಾತ್ ಅಪಘಾತಕ್ಕೆ ಸಿಲುಕುವಿರಿ. ಅದರಿಂದ ಒಬ್ಬಂಟಿಗರಾಗಿ ಎಲ್ಲಿಗೂ ಹೋಗದಿರಿ. ನೇತ್ರೋದರ ಮನೋರೋಗಗಳಿಂದಲೂ ಸಂಸಾರದಲ್ಲಿನ ಕಲಹದಿಂದಲೂ ಮನಸ್ಸಿಗೂ ಶರೀರಕ್ಕೂ ಬಹಳ ತಾಪವುಂಟಾಗುವದು. ಆದ್ದರಿಂದ ವ್ಯಯವು ಬಂದರೆ ಹೆಚ್ಚಾಗಿಯೇ ಇಲ್ಲವಾದೀತು. ತಾ. 26, 27 ಮತ್ತು 30, 31 ಈ ದಿನಗಳು ತಕ್ಕಮಟ್ಟಿಗೆ ಉತ್ತಮಗಳೆಂದೆ ಹೇಳಬೇಕು.

ಕೆಲೆಂಡರ್ ಸ್ವೀಕಾರ— ಈ ಕೆಳಗಿನವರ 1939ನೇ ಇಸವಿಯ ಕೆಲೆಂಡರುಗಳನ್ನು ಆಭಾರದಿಂದ ಸ್ವೀಕರಿಸಿದ್ದೇವೆ. 1. ಸದ್ವೈದ್ಯಶಾಲೆ, ನಂಜನಗೂಡು. 2. ಉಡುಪಿ ಪ್ರೈವೇಟ್ 3. ಸಪ್ಲೈ ಏಜೆನ್ಸಿ ಲಿಮಿಟೆಡ್. 4. ದಿ ಕೆನರಾ ಮ್ಯೂಚುವಲ್ ಇನ್ಶೂರೆನ್ಸ್ ಕಂಪೆನಿ 5. ಅಮೃತಾಂಜನ ಡಿಪೋ, ಬೊಂಬಾಯಿ.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ, ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಅಪಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. ಕ್ರಯ:- 100 ಮಾತ್ರೆಗಳಿಗೆ ರೂ 1-5-0, 500ಕ್ಕೆ ರೂ. 5-0-0, ಐದಾಣೆ ಸ್ಟಾಂಪು ಕಳಿಸಿದರೆ 13 ಮಾತ್ರೆ ಕಳಿಸಲ್ಪಡುತ್ತದೆ

ಆಮಲಕೀ ತೈಲ

(ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0.

2 ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ.

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ ಭಾರತ

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - . - - - - MANGALORE.

ಪ್ರಕಟಣೆ

ನವಯುಗ ಪತ್ರಿಕೆಯ ತಾ. 22-12-38ರ ಸಂಚಿಕೆಯಲ್ಲಿ ದಿ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಫಂಡಿನ ಹಣವನ್ನು ಶ್ರೀಯುತ ಪೂವ ಅಂಚನ್‌ನರು ಸಂಸ್ಥೆಯ ಮೇಲಾಧಿಕಾರಿಯವರ ವಶ ಒಪ್ಪಿಸಿರುತ್ತಾರೆಂದು ಕಾರ್ಯದರ್ಶಿಯು ಪ್ರಕಟಿಸಿದ ಬಾತ್ಮಿಯನ್ನೋದಿ ಬಹು ಆಶ್ಚರ್ಯವಾಗುತ್ತದೆ.

ತಾ. 5-8-28ರಲ್ಲಿ ಜನ್ಮ ತಾಳಿದ ಈ ಮೋಲ್ಯಾಣ್ಸ್‌ರುವ ಸಂಸ್ಥೆಯಿಂದ ಶ್ರೀಯುತ ಪೂವ ಅಂಚನ್‌ನರು ತಾ. 5-1-35ರಲ್ಲಿ (ಅವರು ತಿಳಿಸಿದಂತೆ ತಾ. 5-1-31ರಲ್ಲಿ ಅಲ್ಲ) ರೂ 150-0-0 ಸಾಲವಾಗಿ ಪಡಕೊಂಡು ಕ್ರಮದಂತೆ ವಾಯಿದೆಗೆ ಕೊಡದೆ ಬಾಕಿ ಮಾಡಿಕೊಂಡದ್ದನ್ನು ಕುರಿತು ತಾ. 25-10-36ರಲ್ಲಿ ಜರಗಿಸಿದ ಸಭೆಯಲ್ಲಿ ನಿಶ್ಚಯವಾಗಿ ಅಸಲು ಬಡ್ಡಿ ಸಮೇತ ತಾ. 5-2-37ಕ್ಕೆ ಕೊಡುತ್ತೇನಾಗಿ ಮುಚ್ಚಳಿಕೆ ಕೊಟ್ಟಿರುವ ಅಂಚನ್‌ನರು ಮುಚ್ಚಳಿಕೆ ತಪ್ಪಿದುದು ಮಾತ್ರವಲ್ಲದೆ ತನ್ನ ಅನುಯಾಯಿಗಳೊಂದೊಡಗೂಡಿ ಹೋರಾಡುತ್ತಿರುವರಷ್ಟೆ.

ಸದ್ರಿ ಅಂಚನ್‌ನರು ನಮ್ಮ ಸಂಸ್ಥೆಯಿಂದ ಸಾಲವಾಗಿ ಪಡಕೊಂಡಿರುವ ಹಣವು ಈ ಮೋಲ್ಯಾಣ್ಸ್‌ದ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಫಂಡಿಗೆ ಪಾವತಿ ಮಾಡಲಿಲ್ಲವೆಂದು ಸದ್ರಿ ಸಂಸ್ಥೆಯ ಮೇಲಾಧಿಕಾರಿಯವರಾದ ನಾವು ಈ ಮೂಲಕ ದೃಢಪಡಿಸುತ್ತೇವೆ.

ಮೋಲ್ಯಾಣ್ಸ್‌ದ ಸಂಸ್ಥೆಯ ಕಾರ್ಯದರ್ಶಿಯೆಂದು ಹೇಳಿಕೊಂಡು ನಿರಾಧಾರವಾಗಿ ಪ್ರಕಟಿಸಿದ ಪ್ರಕಟಣೆಯು ಶುದ್ಧ ಸುಳ್ಳು. ಇದನ್ನು ನಾವು ಈ ಮುಂಚಿನ ಪ್ರಕಟಣೆಗಳಲ್ಲಿಯೂ ಮತ್ತು ಈ ಮೂಲಕವೂ ಸಂಪೂರ್ಣ ಖಂಡಿಸಿರುತ್ತೇವೆ. ಅಲ್ಲದೆ ಈ ಮೇಲಿನ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಫಂಡಿನ ಸರ್ವಾಧಿಕಾರವೂ ಆದಿಯಿಂದ ಈ ತನಕವೂ ನಮ್ಮ ಸ್ವಾಧೀನದಲ್ಲಿರುತ್ತಾ ಸದ್ರಿ ಮೋಸ ಹೋಗಿರುವ ಹಣವನ್ನು ಪೂವ ಅಂಚನ್‌ನರು ಇನ್ನಿತರ ಸಂಸ್ಥೆಗೆ ಪಾವತಿ ಮಾಡಲಿಕ್ಕೂ ಹಾಗೆ ಪಾವತಿ ಮಾಡಿದರೆ ಅದನ್ನು ಪಡೆಯಲು ನಾವು ಹೊರತು ಇನ್ನಾರಿಗೂ ಹೇಗೂ ಯಾವದೊಂದು ತರದಲ್ಲಿಯೂ ಅಧಿಕಾರವಿರುವುದಿಲ್ಲ. ಹಾಗೆ ಮಾಡಿದರೆ ಅದು ಎಂದೂ ಸಿಂಧುವಾಗಲಾರದು.

ರಾಜು ಟಿ. ಕೋಟ್ಯಾನ್

ಗೌರವ ಕಾರ್ಯದರ್ಶಿ

ಕಾರ್ಯನಿರ್ವಾಹಕ ಮಂಡಳಿಯ ಅನುಮತಿಯಿಂದ

ನಮ್ಮ ಗೋಕಾಕ ಏಜಂಟರು:

ತಿರಗಾಂವಕರ ಬ್ರದರ್ಸ್.

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು.

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿದ ಬಳಿಕ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ಮೋಸಗೋಸವ ಔಷಧವೆಂದು ಖಾತ್ರಿಪಡಿಸುವವರಿಗೆ ರೂಪಾಯಿ 100 ಬಹುಮಾನ.

ಸ್ತಂಭಕ ವಟಿ—ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ವ ನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram

No. 552 **P. O. Katrisarai**, (GAYA)

ಪುಟ ೮ರಿಂದ

'ಮಕರ ಸಂಕ್ರಾಂತಿ' ವಿಶೇಷ ಸಂಚಿಕೆಯ ಉದ್ಘಾಟನೆ.

ವರ್ಷದಲ್ಲಿ ಹೊರಬಿದ್ದ ಕರ್ಣಾಟಕ ಪತ್ರಿಕೆಗಳ ಉತ್ಕೃಷ್ಟ ವಿಶೇಷ ಸಂಚಿಕೆಗಳಲ್ಲೊಂದಾಗಿದೆಯೆಂದರೆ ಅತಿಶಯೋಕ್ತಿಯ ಮಾತಾಗಲಾರದು ಈ 'ಮಕರ ಸಂಕ್ರಾಂತಿ ವಿಶೇಷ ಸಂಚಿಕೆ'ಯಿಂದಾಗಿ 'ನವಯುಗ'ವು ಕರ್ಣಾಟಕದಲ್ಲಿ ತನ್ನ ವಿಜಯಖ್ಯಾತಿ ಧ್ವಜವನ್ನು ಮತ್ತಷ್ಟು ಉನ್ನತತರವಾಗಿ ಹಾರಿಸಿದೆ ತನ್ನ ದಾರ್ಢ್ಯವನ್ನೂ ವಾಚಕ ವರ್ಗದ ಬಲವನ್ನೂ ವ್ಯವಹಾರ ಲೋಕದ ಪ್ರೋತ್ಸಾಹವನ್ನೂ ಜನತೆಯು ನಾಡಿ ಮುಟ್ಟಿ ನೋಡಿಕೊಳ್ಳುವಂತೆ ಕೈನೀಡಿದಂತಿದೆ. ನವಯುಗವನ್ನು ಅಭಿನಂದಿಸುವ ಈ ಸುಮುಹೂರ್ತದಲ್ಲಿ ಮತ್ತೊಂದು ವಿಷಯವನ್ನು ತಮ್ಮ ಅವಗಾಹನೆಗೆ ತಂದರೆ ಅಪ್ರಸ್ತುತವಾಗಲಾರದು. ಅದು ಈ ಸಂಚಿಕೆಯು ಗೊತ್ತಾದ ಹೊತ್ತಿಗೆ ತುಸು ಮುಂಚಿತವಾಗಿಯೇ ಪ್ರಕಟವಾಗಲು ಸಾಧ್ಯವಾಯಿತೆಂಬುದು ಸಾಮಾನ್ಯವಾಗಿ ಕರ್ಣಾಟಕದಲ್ಲಿ ಗೊತ್ತಾದ ಹೊತ್ತಿಗೆ ವಿಶೇಷ ಸಂಚಿಕೆಗಳು ಇಷ್ಟೊಂದು ಸರ್ವಾಂಗ ಸುಂದರವಾಗಿ ಮುದ್ರಿತವಾಗಿ ಪ್ರಕಟವಾದುದು ವಿರಳ. ಈ ಭಾಗದ ಖ್ಯಾತಿಯು ಕೆನರಾ ಡ್ ಪ್ರೆಸ್ಸಿಗೆ ಸಲ್ಲತಕ್ಕದು. ಶ್ರೀ. ಎಸ್. ಯು. ಪಣಿಯಾಡಿಯವರ ವ್ಯವಸ್ಥಾಪಕತ್ವದಲ್ಲಿ ನಡೆಯುವ ಈ ಮುದ್ರಣಾಲಯವಾಗಲೀ ಮಣಿಪಾಲ ಪವರ್ ಪ್ರೆಸ್ಸಾಗಲೀ ತಮಗೆ ಒಪ್ಪಿಸಿಕೊಟ್ಟಿರುವ ಮುದ್ರಣಾಕಾರ್ಯವನ್ನು ಹೊತ್ತುಗೊತ್ತಿಗೆ ತಪ್ಪದೆ ಒಪ್ಪಾಗಿ ನಿರ್ವಹಿಸಿಕೊಡುವುದರಲ್ಲಿ ಹೆಸರುಗೊಂಡಿವೆ ಅದು ಈ ಮುದ್ರಣಾಲಯಗಳ ವೈಶಿಷ್ಟ್ಯ. ಇಂತಹದರ ನೆರವನ್ನು ಹೊಂದಿದುದಕ್ಕಾಗಿಯೂ ನಾವಿಂದು 'ನವಯುಗ'ವನ್ನು ಅಭಿನಂದಿಸುವೆವು. ಶ್ರೀ ಕೃಷ್ಣೋತ್ಸವ ಕಾಲದಲ್ಲಿ ಪ್ರಕಟವಾದ ಈ ವಿಶೇಷ ಸಂಚಿಕೆಯು ಶ್ರೀಕೃಷ್ಣನ ಕೊಳಲಾಗಿ ವಾಚಕ ವರ್ಗವನ್ನು ಇತೋಪ್ಯತಿಶಯವಾಗಿ ಆಕರ್ಷಿಸಲಿ! ಅಜ್ಞಾನ, ಆಲಸ್ಯ, ವಿಧಿವಾದದ ಗಾಢನಿದ್ದೆಯಲ್ಲಿ ಬಿದ್ದಿರುವ ಜನಪದವನ್ನು ಶ್ರೀಕೃಷ್ಣನ ಪಾಂಚಜನ್ಯವಾಗಿ ಎಚ್ಚರಗೊಳಿಸಲಿ! ಶ್ರೀಕೃಷ್ಣನ ಗೀತೆಯಾಗಿ ಜನಕೋಟಿಯಲ್ಲಿ ಕರ್ಮಯೋಗಿಗಳಾಗುವ ಸ್ಫೂರ್ತಿಯನ್ನುಂಟುಮಾಡಲಿ! ಕನ್ನಡ ನುಡಿಗೆ, ಕನ್ನಡ ನಾಡಿಗೆ ಭೂಷಣವಾಗಿ ಮೆರೆಯಲಿ!

ಶ್ರೀ. ಎಸ್. ಯು. ಪಣಿಯಾಡಿಗಳವರ ಭಾಷಣ ಸಂಗ್ರಹ.

"ನವಯುಗ"ವು ಈ ವಿಶೇಷ ಸಂಚಿಕೆಯ ಪ್ರಕಟಣೆಯಿಂದ ಕರ್ಣಾಟಕ ಪತ್ರಿಕಾ ಪ್ರಪಂಚದಲ್ಲಿ ತನಗಿದ್ದ ಪ್ರಮುಖಸ್ಥಾನವನ್ನು ಮತ್ತಷ್ಟು ಉಜ್ವಲಗೊಳಿಸಿದೆ. ಕನ್ನಡ ವಾರ್ತಾಪತ್ರಿಕೆಗಳು ಬಯಸುವಷ್ಟು ಅನುಕೂಲ ವಾತಾವರಣವು ಕನ್ನಡನಾಡಿನಲ್ಲಿ ಉಂಟಾಗಿಲ್ಲವಾದರೂ ಸತತ ಪರಿಶ್ರಮದಿಂದ, ಛಲದಿಂದ, ಸುವ್ಯವಸ್ಥೆಯಿಂದ ದುಡಿಯುವ ಪತ್ರಿಕೆಗೆ ಪರಿಸ್ಥಿತಿಯು ಪ್ರತಿಕೂಲವಾಗಿಲ್ಲವೆನ್ನಬಹುದು. ಅದಕ್ಕೆ ಈ 'ನವಯುಗ'ವೇ ನಿದರ್ಶನ. ಆರ್ಥಿಕ ಸಂಕಷ್ಟದ ಇಂದಿನ ದುರ್ದಿನದಲ್ಲಿಯೂ ಅದು ಹೆಮ್ಮೆಯಿಂದ ತನ್ನದೆಂದು ಹೇಳಿಕೊಳ್ಳುವಷ್ಟು ಉತ್ಕೃಷ್ಟವಾದ ವಿಶೇಷ ಸಂಚಿಕೆಯನ್ನು ಹೊರಡಿಸುವಷ್ಟು ಧನಸಂಗ್ರಹವನ್ನು ಒಂಭೆರಡು ತಿಂಗಳ ಅಲ್ಪಕಾಲದೊಳಗೆ ಮಾಡಿಕೊಂಡಿತು. ಇಂದಿನ ಈ ಉದ್ಘಾಟನಾಸಮಾರಂಭವು 'ನವಯುಗ'ವು ತನ್ನ ಇತಿಹಾಸದಲ್ಲಿ ಪ್ರಗತಿಯ ಮತ್ತೊಂದು ಮೆಟ್ಟಲನ್ನು ಮುಟ್ಟಿದ ಹೆಚ್ಚಳದ ದಿನವೆನ್ನಲು ಸಂತೋಷವಾಗುತ್ತದೆ ಇದರ ಇಂದಿನ ವ್ಯವಸ್ಥಾಪಕರಾದ ಶ್ರೀ ಕೆ ಎಚ್. ಶೆಟ್ಟರ ಸಾಹಸಬುದ್ಧಿ, ಉದ್ಯೋಗಶೀಲತೆ, ದೇಶಸೇವಾ ತತ್ಪರತೆ, ವ್ಯವಹಾರಜ್ಞಾನ ಇವುಗಳಿಂದಾಗಿ 'ನವಯುಗ'ವು ಇಂದು ಪ್ರಗತಿಪಥದಲ್ಲಿ ರಭಸದಿಂದ ಮುಂದುವರಿಯುತ್ತಿದೆ. ಸೂತ್ರಬದ್ಧವಾಗಿ ನಡೆಯಿಸುವ ಪತ್ರಿಕೆಗಳ ಉತ್ಕರ್ಷೆಗೆ ಅನುಕೂಲವಾಗಿ ವಾಚಕಲೋಕವಿದೆಯೆಂಬುದಕ್ಕೆ ಮತ್ತೊಂದು ದೃಷ್ಟಾಂತವನ್ನು ತಮ್ಮ ಮುಂದಿಡಲು ಬಯಸುತ್ತೇನೆ, ಅದು ನಮ್ಮ 'ಅಂತರಂಗ'. ಅದು ಹೊರಟು ಇಂದಿಗೆ ಸುಮಾರು ಆರು ತಿಂಗಳಷ್ಟೆ. ಚಂದಾದಾರರಾಗಿರೆಂದು ನಾವು ಯಾರನ್ನೂ ಕಾಡಿಬೇಡಲು ಹೊರಡಲಿಲ್ಲ ಬಿಡಿ ಪ್ರತಿಗಳ ವಿಕ್ರಯಪ್ರಯೋಗ ನಮ್ಮದು. ಆದರೂ ನಾವಿಂದು ವಾಚಕವರ್ಗದ ಬೇಡಿಕೆಯನ್ನು ಪೂರೈಸುವುದಕ್ಕಾಗಿ ವಾರವಾರ ಹೆಚ್ಚು ಹೆಚ್ಚು ಪ್ರತಿಗಳನ್ನು ತೆಗೆಯಬೇಕಾಗುತ್ತಿದೆ ಒಟ್ಟಿನಲ್ಲಿ ಈಗ ಅದರ ಬೇಡಿಕೆಯು ಮೂರು ಸಾವಿರಕ್ಕೆ ಸಮೀಪವಾಗಿದೆ. ಆತ್ಮಶ್ಲಾಘನೆಗಾಗಿ ಈ ಪ್ರಸ್ತಾಪವನ್ನು ಎತ್ತಿದುದಲ್ಲ. ವಾಚಕವರ್ಗದ ಮನಸ್ಸನ್ನು ಪತ್ರಿಕೆಯು ಆಕರ್ಷಿಸಬೇಕು. ಹೊತ್ತುಗೊತ್ತಿಗೆ ಸರಿಯಾಗಿ ತಮ್ಮ ಕೈ ಸೇರುವುದೆಂಬ ಭರವಸೆಯನ್ನು ಅವರಲ್ಲಿ ಉಂಟುಮಾಡಬೇಕು. ಹಾಗೆ ಮಾಡಲು ಬೇಕಾದ ಯುಕ್ತಿಯೂ ಶಕ್ತಿಯೂ ಸಾಹಸವೂ ಶೀಲವೂ ಪತ್ರಿಕೆಯನ್ನು ನಡೆಯಿಸುವವರಲ್ಲಿ ಬೇಕು. ಅವು ನಮ್ಮ ಶ್ರೀ. ಹೊನ್ನಯ್ಯ ಶೆಟ್ಟರಲ್ಲಿ ತುಂಬಾ ಇವೆ. ಈ ಸಂಚಿಕೆಯನ್ನು ಸಕಾಲದಲ್ಲಿ ನಾವು ಮುದ್ರಿಸಿಕೊಟ್ಟೆವೆಂದು ಅವರು ಹೇಳುವುದಕ್ಕಿಂತಲೂ ಅವರೇ ಮುದ್ರಿಸಿಕೊಂಡು ಹೋದರೆಂದರೂ ಸರಿಯೇ. ಏಕೆಂದರೆ ಅವರ ಸ್ನೇಹಪರವಾದ ವರ್ತನೆಯಿಂದ ನಮ್ಮ ಮುದ್ರಕವರ್ಗವು ಅವರಿಗೆ ಮಚ್ಚಿಹೋಗಿದೆ. 'ನವಯುಗ'ದಲ್ಲೊಂದು ಆತ್ಮೀಯಭಾವವುಂಟಾಗಿದೆ ನಮ್ಮ ನೌಕರರಿಗೆಲ್ಲ. ಅದಕಾರಣ ಈ ವಿಶೇಷಸಂಚಿಕೆಯನ್ನು ಹೊತ್ತುಮೀರದೆ ಮುಂದಾಗಿ ಮುದ್ರಿಸಿಕೊಡುವುದರಲ್ಲಿ ಅವರಿಗೊಂದು ಹಿಗ್ಗು, ಆನಂದ, ಉತ್ಸಾಹ ಇದ್ದೇ ಇದ್ದವು. ಕರ್ತವ್ಯದೊಂದಿಗೆ ಇಂತಹ ಆತ್ಮೀಯತೆಯ ಭಾವವೂ ಉದ್ರೇಕಿತವಾದರೆ ಕೆಲಸವು ವಿಳಂಬವಾಗದೆ ಚೆನ್ನಾಗಿಯೇ ಆಗುವುದು. ಹಾಗೆ ಅದನ್ನು ಮಾಡಿಸಿಕೊಂಡ ಶ್ರೀ. ಶೆಟ್ಟರ ಜಾಣ್ಮೆಯನ್ನು ನಾನಿಂದು ಕೊಂಡಾಡುತ್ತೇನೆ. 'ನವಯುಗ'ವು ದಿನೇ ದಿನೇ ಪ್ರವರ್ಧಮಾನವಾಗುತ್ತ ಇದಕ್ಕಿಂತಲೂ ಮಿಗಿಲೆನಿಸುವ 'ಪರ್ಯಾಯ ಸಂಚಿಕೆ'ಯನ್ನು ಮುಂದಿನ ವರುಷ ವಾಚಕರ ಕೈಸೇರುವಂತೆ ಸಕಲರೂ ಪ್ರೋತ್ಸಾಹಿಸುವಂತಾಗಲೆಂದು ನನ್ನ ಆಕಾಂಕ್ಷೆ.

ಅಧ್ಯಕ್ಷರ ಭಾಷಣಾಸಂಗ್ರಹ.

ಡಾ. ಮಾಧವ ಪೈಗಳವರು ಉದ್ಘಾಟನಾ ಪೂರ್ವದಲ್ಲಿ 'ವಿಶೇಷ ಸಂಚಿಕೆ'ಯ ಶ್ರೇಯೋಕಾಂಕ್ಷೆಯಿಂದ ಬಂದಿದ್ದ ಸಂದೇಶಗಳನ್ನು ಓದಿದರು ಅನಂತರ ಸಂಚಿಕೆಯ ಉದ್ಘಾಟನೆಯನ್ನು ನೆರವೇರಿಸಿ ಭಾಷಣ ಮಾಡುತ್ತ ಹೀಗೆಂದರು:—'ಬ್ಯಾಂಕಿಂಗ್ ಇನ್ಶ್ಯೂರೆನ್ಸ್ ಮುಂತಾದ ಸಂಘಗಳಿಗೂ ಪತ್ರಿಕೆಗಳಿಗೂ ಒಂದು ನಿಕಟಸಂಬಂಧವಿದೆ. ಒಂದನ್ನೊಂದು ಮುಂದೊತ್ತಬೇಕು. ಒಂದಕ್ಕೊಂದು ಬೆಂಬಲವಾಗಿ ನಿಲ್ಲಬೇಕು. ತನ್ಮೂಲಕ ಜನತಾಸೇವೆಯಾಗುವುದರೊಂದಿಗೆ ತಾವೂ ಬಾಳಿ ಬೆಳಗಿ ಮತ್ತೂ ಹೆಚ್ಚಿನ ಸೇವೆಯನ್ನು ಜನತೆಗೆ ತಿರುಗಿ ಅರ್ಪಿಸಬೇಕು ಈ ದೃಷ್ಟಿಯಿಂದ 'ನವ

ಡಾ. [illegible]

ಯುಗ'ಕ್ಕೆ ನನ್ನ ಕೈಲಾದ ಸಹಾಯವನ್ನು ಮಾಡುತ್ತಲಿದ್ದೇನೆ. ಲೇಖನಮೂಲಕವಾಗಿ ಕೈಸಾಕಲು ಬಿಡುವಿಲ್ಲ. ಆ ಭಾಗದ ಕರ್ತವ್ಯವನ್ನು ರೂಪಾಂತರದಿಂದ ಪೂರೈಸಿಬಿಡೋಣವೆಂದು ಇಂದು ಈ ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡೆ. ಪತ್ರಿಕೆಗಳ ಜೀವಾಳ ಜಾಹೀರಾತುಗಳು. ಆದರೆ ನಾಡಪತ್ರಿಕೆಗಳಲ್ಲಿ ಜಾಹೀರಾತು ಕೊಡುವುದು ಲಾಭದಾಯಕವಲ್ಲವೆಂದು ಹಲವು ಆಶ್ಯ ಸಂಸ್ಥೆಗಳೂ ವರ್ತಕರೂ ಹಿಂಜರಿಯುವರು ಪ್ರತ್ಯಕ್ಷವಾಗಿ ಅಂಕೆ ಸಂಖ್ಯೆಗಳಿಂದ ಲಾಭವು ತೋರಿಬರದಿದ್ದರೂ ಹಳ್ಳಿಮೂಲೆಗಳಲ್ಲಿಯೂ ಹೆಸರಿನ ಪ್ರಚಾರವಾಗುತ್ತದೆ ಕಾಣದ ಕೈಯಂತೆ ಅದರಿಂದ ಪ್ರಯೋಜನ, ಪ್ರಖ್ಯಾತಿ, ಲಾಭ ಇದ್ದೇ ಇವೆ ಮೇಲಾಗಿ ಆರ್ಥಿಕ ವ್ಯವಹಾರದಲ್ಲಿ ಇಳಿದಿರುವ ಆಶ್ಯ ಸಂಸ್ಥೆಗಳೂ ವ್ಯಾಪಾರಿಗಳೂ ಧರ್ಮವೃತ್ತಿಯಿಂದಲೂ ನಾಡಪತ್ರಿಕೆಗಳಿಗೆ ಜಾಹೀರಾತುಗಳ ಮೂಲಕ ಪ್ರೋತ್ಸಾಹ ಕೊಡುವುದು ಕರ್ತವ್ಯವಿದೆ. ಜನಸಾಮಾನ್ಯರ ಜ್ಞಾನ, ಬುದ್ಧಿ, ವಿಚಾರಗಳ ವಿಕಾಸಕ್ಕಾಗಿ ಮಾರಿಸಲಾಗಿರುವ ಈ 'ನವಯುಗ'ಕ್ಕೆ ನಾವು ತುಂಬಾ ಪ್ರೋತ್ಸಾಹಿಸಬೇಕು. ಅದು ಇಂದು ಪ್ರಕಟಿಸಿರುವ ಈ ವಿಶೇಷ ಸಂಚಿಕೆಯಿಂದ ನಮ್ಮ ಉಡುಪಿಗೂ ಅಂದರ ನಮಗೂ ಒಂದು ಖ್ಯಾತಿ ಇದೆ ಸ್ಥಳೀಯ ಪತ್ರಿಕೆಯಾಗಿ ಈ ಪರಿಯ ಭಾಗ್ಯವೊದಗಿದೆ ನಾವು ಅದಕ್ಕೆ ನೆರವಾಗಬೇಕು. ದೀರ್ಘಕಾಲದಿಂದ ನಾಡಿನ ಸೇವೆಗಾಗಿ ದುಡಿದು, ದುಡಿಯುತ್ತಿರುವ ಪತ್ರಿಕೆ ನವಯುಗ ಅದರಿಂದಾಗಿ ಅದಿಂದು ನಾಡಿನಲ್ಲೊಂದು ಗಣನೀಯವಾದ ಸ್ಥಾನ ಮಾನ ಪ್ರತಿಷ್ಠೆಯನ್ನು ಹೊಂದಿದೆ. ತನಗೆ ಬೆಂಬಲಕೊಟ್ಟ ತನ್ನಿಂದ ಅಧಿಕತರ ಸೇವೆಯನ್ನು ಕೈಗೊಳ್ಳಿರೆಂದು ಜನತೆಯನ್ನು ಕೇಳುವ ಹಕ್ಕಿದ ಅದಕ್ಕೆ ಜನಸಾಮಾನ್ಯರಲ್ಲಿ ಇಂದು ತೋರುವ ಜಾಗ್ರದಾವಸ್ಥೆಯನ್ನು ಉಂಟುಮಾಡುವುದರಲ್ಲಿ 'ನವಯುಗ'ದ ಕೈ ಎಷ್ಟೆಂಬುದನ್ನು ಅಳೆದು ಹೇಳಲು ಬಾರದಿದರೂ ಅದು ಕಳೆದ ಹದಿನೇಳು ವರುಷಗಳಿಂದ ವಿಶೇಷತಃ ನಮ್ಮ ಜಿಲ್ಲೆಯ ಜನಜಾಗ್ರತಿಯ ಕಡೆಗೆ ಲಕ್ಷ್ಯವಿಟ್ಟು ವಿಶೇಷವಾಗಿ ದುಡಿದಿದೆ ಜನತೆಯ ನಡೆನುಡಿಯನ್ನು ತಿದ್ದಿದೆ. ಈಗಲೂ ತಿದ್ದುತ್ತಿದೆ. ನಿದರ್ಶನವಾಗಿ ಎತ್ತಿ ತೋರಿಸಬೇಕೆಂದಿದ್ದರೆ ಶ್ರೀ ಶಾಮರಾಯ ಸೆಟ್ಟರು ಅದರಲ್ಲಿ ಬರೆಯುತ್ತಿರುವ ಲೇಖನಮಾಲೆ ಜೀವನದಲ್ಲಿ ತಪ್ಪು ಹೆಜ್ಜೆಯಿಟ್ಟವರ ಗತಿಯನ್ನು ತೋರಿ ತೋರಿ ಬಗೆ ಮುಟ್ಟುವಂತೆ ಬೋಧಿಸುವ ಲೇಖನಗಳು ಅವು ಅಂತೆಯೇ ಜನತೆಯಲ್ಲಿ ನಿರ್ವಿಚಾರ, ಆಲಸ್ಯ, ಅಜ್ಞಾನ, ವಿದ್ಯಾಭಿಮಾನ ಮನೋವೃತ್ತಿಗಳನ್ನು ತಿದ್ದುವ ಇತರ ಎಷ್ಟೋ ಲೇಖನಗಳು 'ನವಯುಗ'ದ ಪುಟಗಳನ್ನು ಅಲಂಕರಿಸುವುದು ಪ್ರಶಂಸನೀಯ ಲಕ್ಷಣವಾಗಿದೆ ಅದುದರಿಂದ ಲೇಖಕರು ತಮ್ಮ ಬರೆಹಗಳಿಂದಲೂ ವಾಚಕರು ತಮ್ಮ ನೆರೆಹೊರೆಯವರನ್ನು ಚಂದಾದಾರರಾಗಲು ಪ್ರೋತ್ಸಾಹಿಸುವುದರಿಂದಲೂ ವಿವಿಧ ಸಂಸ್ಥೆಗಳೂ ಬ್ಯಾಂಕುಗಳೂ ವರ್ತಕರೂ [illegible] ತಮ್ಮ ವ್ಯಾಪಾರವ್ಯವಹಾರಗಳ ಕುರಿತು ಜಾಹೀರಾತುಗಳನ್ನು ಕೊಡುವುದರಿಂದಲೂ ಇನ್ನೂ ಹಿರಿದಾಗಿ 'ನವಯುಗ'ವು ಬಾಳಿ ಬೆಳಗಿ ದೇಶಸೇವೆಯನ್ನು ಮಾಡುವಂತೆ ನೆರವಾಗಬೇಕೆಂದು ನನ್ನ ಬಯಕೆ ಅಂತಾಗಲೆಂದು ದೇವರು ಈ ವಿಶೇಷ ಸಂಚಿಕೆಯನ್ನು ಆಶೀರ್ವದಿಸಲಿ

ಮಂಗಳೂರು ಮುನ್ಸಿಪಾಲಿಟಿ ನೋಟೀಸು

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ ಇದೇ 1939ನೇ ಇಸವಿ ಫೆಬ್ರವರಿ ತಿಂಗಳ 15ನೇ ತಾರೀಕಿನ ಮಧ್ಯಾಹ್ನ 4 ಘಂಟೆಯ ವರೆಗೆ ರೂಪಾಯಿ 88,510/- ಎಸ್ಟಿಮೇಟಿನ ವೆಬ್‌ಸ್ಟರ್ ಮಾರ್ಕೇಟು ಹೊಸತಾಗಿ ಕಟ್ಟುವ ಕಾಮಗಾರಿಯ ಬಗ್ಗೆ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಪಡೆಯಲಾಗುವುದು. ಟೆಂಡರ್ ಫೋರ್ಮ್, ಪ್ಲೇನ್, ಟೆಂಡರ್ ನೋಟೀಸು ವಗೈರೆ ರೂಪಾಯಿ 15/- ಪಾವತಿ ಮಾಡಿದಲ್ಲಿ ಕೊಡಲಾಗುವುದು.

ಕೆ. ಪಿ. ಕಂದಸ್ವಾಮಿ,

ಕಮಿಷನರ್, ಮಂಗಳೂರು ಮುನಿಸಿಪಾಲಿಟಿ,

ಮುನಿಸಿಪಲ್ ಆಫೀಸ, ಮಂಗಳೂರು, 23 12-38

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ. 2—4—0.

ಸಣ್ಣ ಸುಂದರ, ಆಕಾರ ಗಟ್ಟಿ ವ ಟ್ಯಾಂಕ್ ಮೆಷಿನರಿ ಪರಿಪೂರ್ಣವಾದ ಲೀವರ್ ವಾಚ್, 5 ವರ್ಷದ ಗ್ಯಾರಂಟಿ ದೊರೆಯುವುದು, ಹೀಗೆ ಚಕ ಚಕಿತ ಕಾರಿಯ ಇಲ್ಲದ ಚೌಕಾಕೃತಿಯ ವಾಚಿಗೆ ರೂ 2 4 0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0 ಸುವರ್ಣದಕ್ಕೆ ರೂ 3 8-0 ಅತ್ಯುತ್ತಮವಾದುದಕ್ಕೆ ರೂ 4 8 0, ಕತ್ತಲಲ್ಲಿ ತೋರುವ ಫೀತಿ ರಿಸ್ಟ್‌ವಾಚಿಗೆ ರೂ 6-0 0, ಮುಚ್ಚಳದ ರೋಲ್ಡ್‌ಗೋಲ್ಡಿನ ರೂ. 8-0 0, ಸ್ಪೋರ್ಟ್ಸ್ ಮಾದರಿಯದಕ್ಕೆ ರೂ 10-0-0 ಡ ಪ ಪ್ರತ್ಯೇಕ

ಎಚ್ ಡಾವಿಡ್ ಅಂಡ್ ಕೊ.

ಪೊ. ಬಾ. 11424 ಕಲ್ಕತ್ತ.

H. David & Co.

Post Box No 11424, Calcutta

ಮದ್ರಾಸು ಮೈಸೂರು ಕೇಫೆಯಲ್ಲಿ

ಮೈಸೂರು ಮಹಾರಾಜ, ಯುವರಾಜ, ರಾಜಕುಮಾರರ ತೈಲಚಿತ್ರ ಅನಾವರಣ ಸಮಾರಂಭ.

ಕೆ. ಗುರುರಾಜಾಚಾರ್.

ಕೆ. ಗೋಪಾಲಾಚಾರ್.

(ಮೈಸೂರು ಕೆಫೆ)



ತಾ. 29-11-38ರಲ್ಲಿ ಮೈಸೂರು ಕೆಫೆ, ಚೈನಾಬಜಾರು ರೋಡಿನಲ್ಲಿ ಮೈಸೂರು ಮಹಾರಾಜರು, ಯುವರಾಜರು, ಮತ್ತು ರಾಜಕುಮಾರ ಜಯಚಾಮರಾಜೇಂದ್ರ ಒಡೆಯರವರ ತೈಲಚಿತ್ರ ಅನಾವರಣ ಸಮಾರಂಭವು, ಮದ್ರಾಸು ಎಡ್ವಕೇಟು ಜನರಲಾದ ಸರ್. ಅಲ್ಲಾಡಿ ಕೃಷ್ಣಸ್ವಾಮಿಯವರಿಂದ ಬಹು ವಿಜೃಂಭಣೆಯಿಂದ ಜರಗಿತು, ಆನರೇಬಲ್ ಡಾಕ್ಟರ್ ಯು. ರಾಮರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಮೈಸೂರು ಯುವರಾಜರೂ, ಮದ್ರಾಸಿನ ಪ್ರಮುಖ ಪಟ್ಟಣಿಗರಲ್ಲಿ ಅನೇಕರೂ ಹಾಜರಿದ್ದರು.

ದಿವ್ಯವಾದ ಮೈಸೂರು ಕೆಫೆಯ ಭವನವು ಸಂದರ್ಭೋಚಿತವಾಗಿ ಅಲಂಕರಿಸಲ್ಪಟ್ಟಿದ್ದಿತು. ಗಂಟೆ ೬ಕ್ಕೆ ಸರಿಯಾಗಿ ಆಮಂತ್ರಿಸಿದ ಅತಿಥಿವರ್ಯರೆಲ್ಲರೂ ಬಂದು ವಿಶಾಲವಾದ, ಶೃಂಗರಿಸಿದ್ದ ಹಾಲಿನಲ್ಲಿ ನೆರವೇರಿದರು. ೬ಕ್ಕೆ ಸರಿಯಾಗಿ ಯುವರಾಜರು ತಮ್ಮ ಪ್ರೈವೇಟು ಮತ್ತು ಪರ್ಸನಲ್ ಸೆಕ್ರೆಟರಿಯವರೊಡನೆ ಬರಲು ಸಾಲು ಸಾಲಾಗಿ ರಸ್ತೆಯಲ್ಲಿ ನೆರವೇರಿದ್ದ ಜನಸ್ತೋಮವು ಕೈಚಪ್ಪಾಳೆಯ ಘೋಷವನ್ನೆತ್ತಿದ್ದರು. ಕೆಫೆಯ, ಬಾಗಿಲಿಗೆ ಬರಲು, ಪ್ರೊಪ್ರೈಟರವರ ಆನರೇಬಲ್ ಡಾ. ಯು. ರಾಮರಾಯರೂ, ಅಲ್ಲಾಡಿಯವರೂ ಅವರನ್ನೆದುರುಗೊಂಡು, ಆಮಂತ್ರಿಸಿ ಸಭಾಮಂಟಪಕ್ಕೆ ಕರೆದೊಯ್ದು ಪೀಠದಲ್ಲಿ ಕುಳ್ಳಿರಿಸಿದ ನಂತರ ಸಭಾಕಾರ್ಯವು ಪ್ರಾರಂಭವಾಯಿತು.

ಅಗ್ರಸ್ಥಾನವನ್ನು ವಹಿಸಿದ ಡಾ. ಯು. ರಾಮರಾಯರು ಅಲ್ಲಾಡಿಯವರನ್ನು ಅನಾವರಣ ಸಮಾರಂಭವನ್ನು ಮಾಡಬೇಕೆಂದು ಕೇಳುವ ತಮ್ಮ ಚಿಕ್ಕ ಭಾಷಣದಲ್ಲಿ "ಇಂದಿನ ಈ ಸಭಾಕಾರ್ಯದಲ್ಲಿ ಭಾಗವಹಿಸುವರೆ ನನಗೆ ತುಂಬಾ ಸಂತೋಷವಾಗುತ್ತದೆ. ಈ ಮರ್ಯಾದೆಯು ನಾನು ಕನ್ನಡಿಗನಾದ್ದರಿಂದ ತನಗೆ ಸಿಕ್ಕಿದೆ ಎಂದೇ ನಾನು ನೆನಸುತ್ತೇನೆ. ಮೈಸೂರು ಮಹಾರಾಜರು ಈ ತೈಲಚಿತ್ರಗಳನ್ನು ಕೆಫೆಯ ಮಾಲೀಕರಿಗೆ ಉಚಿತವಾಗಿತ್ತುದೂ, ಇಂದಿನ ಸಮಾರಂಭದಲ್ಲಿ ಯುವರಾಜರು ಭಾಗವಹಿಸಲು ಒಪ್ಪಿಕೊಂಡುದೂ, ಅವರಿಗೆ ತಮ್ಮ ಪ್ರಜೆಗಳಲ್ಲಿರುವ ವಾತ್ಸಲ್ಯವು ತೋರುತ್ತದೆ. ಮೈಸೂರೊಂದು ಆದರ್ಶ ದೇಶೀಯ ರಾಜ್ಯ. ವಿದ್ಯೆ, ಕೈಗಾರಿಕೆಗಳಲ್ಲಿಯೂ ಅದು ಮುಂದಿದೆ" ಎಂದು ಹೇಳಿ ಸರ್ ಅಲ್ಲಾಡಿಯವರು ಭಾವಚಿತ್ರ ಅನಾವರಣ ಮಾಡಬೇಕಾಗಿ ಕೇಳಿಕೊಂಡರು.

ಕೈ. ಸರ್. ಅಲ್ಲಾಡಿಯವರು ಕೈಚಪ್ಪಾಳೆಯೊಂದಿಗೆ ಎದ್ದು, "ಇಂದಿನ ಕಾರ್ಯದಲ್ಲಿ ಭಾಗವಹಿಸುವರೆ ನನಗೆ ತುಂಬಾ ಸಂತೋಷವಾಗುತ್ತದೆ. ಆದರ್ಶಮಹಾರಾಜರಿಗೆ ತನ್ನ ಪ್ರಜೆಗಳು ಮರ್ಯಾದಿಸಿ ಪೂಜಿಸುವುದು ನಮ್ಮ ದೇಶದಲ್ಲಿಯ ಪದ್ಧತಿ. ಇಂತಹ ಸ್ವರೂಪದಲ್ಲಿ ಮೈಸೂರು ಮಹಾರಾಜರಂತಹ ಆದರ್ಶರಾಜರು ಬೇರೆ ಯಾರಿರುವರು? ಅವರ ಆದರ್ಶಜೀವನ, ಪ್ರಜಾವಾತ್ಸಲ್ಯ, ರಾಜ್ಯದ ಭಂಡಾರದಿಂದ ಮಿತವ್ಯಯ ಇವೆಲ್ಲವು ದೇಶದ ಜನರ ಪ್ರೀತಿಯನ್ನು ಅವರಲ್ಲಿ ಹೆಚ್ಚಿಸಿವೆ, ಮತ್ತು ಮೈಸೂರು ಇತರ ಎಲ್ಲಾ ನೇಟಿವ್ ಸ್ಟೇಟ್‌ಗಳಿಗಿಂತಲೂ ಕೈಗಾರಿಗೆ ಮತ್ತು ವಿದ್ಯಾಭ್ಯಾಸಗಳಲ್ಲಿ ಉತ್ತಮಮಟ್ಟವನ್ನು ಹೊಂದಿರುವುದು. ಇವುಗಳಿಗೆಲ್ಲಾ ಶ್ರೀಮಾನ್ ಮಹಾರಾಜರವರ ರಾಜ್ಯಭಾರ ಪ್ರವೀಣತೆಯಲ್ಲದೆ ಬೇರೆ ಕಾರಣವಲ್ಲ ಎಂದು ಹೇಳಿ ಇಂಥಾ ಶ್ರೇಷ್ಠ ಕೋಟಿಕ್ಕೆ ಸೇರಿದ ಮಹಾರಾಜರು ಮತ್ತು ಯುವರಾಜರು ಮತ್ತು ಪ್ರಿನ್ಸ್ ಇವರ ತೈಲಚಿತ್ರವನ್ನು ನಾನು ಈ ದಿವಸ ಅನಾವರಣಮಾಡಲು ಸಿಕ್ಕಿದ್ದು ನನ್ನ ಭಾಗ್ಯವೇ ಸರಿ ಎಂದು ಹೇಳುತ್ತಾ ಅನಾವರಣಮಾಡಿದ ನಂತರ ಶ್ರೀಮಾನ್ ಯುವರಾಜರು ಈ ಒಂದೆರಡು ಮಾತುಗಳನ್ನಾಡಿದರು. "ನಮ್ಮ ಮೇಲಿನ ಅಭಿಮಾನಕ್ಕಾಗಿ ವಂದನೆಗಳು, ಇಂದಿನ ಸುದಿನದ ನೆನಪನ್ನು ನಾವು ನಮ್ಮೊಡನೆ ಒಯ್ಯುವೆವು. ಈ ಹೋಟೇಲಿನ ಕುರಿತಾದ ಉತ್ತಮ ಸುದ್ದಿಗಳನ್ನು ನಾವು ಕೇಳಿದ್ದೇವೆ, ಇದರ ಮೇಲಿನ ಜನಾದರಣೆಯು ಬೆಳೆಯುವಂತೆ ಮಾಡಿ ಅಧಿಕ ಪ್ರೋತ್ಸಾಹವೀಯುವಿರೆಂಬ ನಂಬಿಕೆ ಇದೆ. ನಿಮ್ಮ ನಗರಕ್ಕೆ ಈ ಯೋಗ್ಯವಾದ ಹೋಟೆಲಿಗೆ ಶುಭವನ್ನು ಬಯಸುವೆವು". ಅನಂತರ ಉಪಾಹಾರ ಸತ್ಕಾರವು ನಡೆಯಿತು, ಮೈಸೂರು ಅರಮನೆಯ ಬ್ಯಾಂಡು ವಾದ್ಯ ಘೋಷಗಳಾಗುತ್ತಿದ್ದುವು. ಸುಮಾರು 10-15 ಸಾವಿರಮಂದಿ ಜನರು ವೈಭವವನ್ನು ಕಾಣುವರೆ ಹೋಟೇಲಿನ ಮುಂಭಾಗದಲ್ಲಿ ಕೂಡಿದ್ದರು. ಈ ಹೋಟೇಲಿನ ಮಾಲಕರು ನಮ್ಮ ಜಿಲ್ಲೆಯವರಾದ ಶ್ರೀಯುತ ಕೊತ್ತತ್ತಾಯ ಗೋಪಾಲಾಚಾರ್ ಮತ್ತು ಗುರುರಾಜಾಚಾರ್.



"ಶಂಕ್ಸ"
SHANKS
(ಇಂಗ್ಲಿಷ್ ಮೇಕ್)
ಕ್ರೂಡ್ ಆಯಿಲ್ ಎಂಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬ್ಯಾಂಡ ಪ್ಲೆಂಟ್), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಕೊಳ್ಳಿ—

ಪೆರಮ್ಯೆಂಟ್ ಇಂಜಿನೀಯರಿಂಗ್ ಕೊರ್ಪೊರೇಶನ್
೮೨, ಎಪೊಲೊ ಸ್ಟ್ರೀಟ್, ಫೋರ್ಟ್ . . . ಮುಂಬಯಿ.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಟಿಗಳ ಬೀಜ, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುತ್ತದೆ.

CROWN RUBBER STAMP CO.,
Balmat Road, MANGALORE.
Included by the Mysore Govt. Stores Purchase Committee in the list of approved Firms.

ಮನೋಹರ ಗ್ರಂಥಮಾಲಾ

ಧಾರವಾಡ

ಆಜೀವ ಚಂದಾ ೭೫-೦-೦; ಪೋಷಕರು ೧೦-೦-೦; ಸಹಾಯಕರು ೫-೦-೦;
ವಾರ್ಷಿಕ ಚಂದಾ ೩-೮-೦.

ಸಾಹಿತ್ಯ ಸಲಹೆಗಾರರು ದ. ರಾ. ಬೇಂದ್ರೆ M. A. ವಿ. ಕೃ. ಗೋಕಾಕ B. A. (OXON) ರಂ. ಶ್ರೀ. ಮುಗಳಿ M. A. B. T. ಸಂಪಾದಕ: ಜ. ಬ. ಜೋಶಿ.

ಸ್ವತಂತ್ರ, ಕತೆ, ಕಾದಂಬರಿ, ನಾಟಕ ಹಾಟಿ ಮೊದಲಾದ ಮನವೊಪ್ಪಿಸುವ ಸರಸವಾಙ್ಮಯದ ಸುಗ್ಗಿ! ಅಖಿಲ ಕರ್ನಾಟಕದಲ್ಲಿ ಹೆಸರು ಪಡೆದ ಬರಹಗಾರರ ಕೈಮಾಟ! ಮನದ ಹಸಿವೆಯನ್ನು ಹಿಂಗಿಸಿಕೊಳ್ಳಿ!

ಒಂದು ವರ್ಷದಲ್ಲಿ ೧೫೦೦ ಪುಟಗಳುಳ್ಳ ಆರು ಸರಸ ಗ್ರಂಥಗಳು!



೨೪ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನ

ಶ್ರೀ. ದಿವಾಕರ ರಂಗನಾಥರಾಯರ ಅಧ್ಯಕ್ಷಭಾಷಣದ ಮುಖ್ಯಾಂಶ.

(ತಾ. 5-1-1939ನೇ ಸಂಚಿಕೆಯಿಂದ ಮುಂದರಿಸಿದ್ದು)

ಸಾಹಿತ್ಯ ರೂಪ

ನುಡಿ, ಭಾವ, ಶಬ್ದ ಇವು ಸಾಹಿತ್ಯದ ಕಚ್ಚಾಮಾಲು ಹಸೀ ಸರಕು, ಅವುಗಳ ಕಲಾಕೃತಿಯೇ ಸಾಹಿತ್ಯ. ಕಣಿಯಲ್ಲಿಯ ಕಲ್ಲು ತಂದು ಕಲ್ಪಿಸಿ ಕಡೆದು ಒಪ್ಪಗೊಟ್ಟಾಗ ಅದು ಮೂರ್ತಿಯಾಗುವದು. ಮಣ್ಣಲ್ಲಿಯ ಬಣ್ಣ ತೆಗೆದು ಕಲ್ಪಿಸಿ ಪಟದ ಮೇಲೆ ಬಳಿದಾಗ ಅದು ಚಿತ್ರವಾಗುವದು. ಧ್ವನಿಗೆ ತಾಳಮೇಳಗಳನ್ನು ಹಚ್ಚಿ ಸ್ವರ ಕೂಡಿಸಿದಾಗ ಅದು ಸಂಗೀತವಾಗುವದು. ಮೈಯ ನ್ಯಾಸವಿನ್ಯಾಸಗಳನ್ನು ವ್ಯವಸ್ಥೆಗೊಳಿಸಿ ಅವುಗಳಲ್ಲಿ ಭಾವವನ್ನು ತುಂಬಿದಾಗ ಅದು ನಾಟ್ಯನರ್ತನವೆನಿಸುವದು. ಅದೇ ರೀತಿ ಅರ್ಥವತ್ತಾದ ಶಬ್ದಗಳನ್ನು ರಸಹುಟ್ಟುವಂತೆ ಕೂಡಿಸಿದರೆ ಅದು ಸಾಹಿತ್ಯರೂಪವಾಗುವದು. ಅರ್ಥ ಮತ್ತು ಆನಂದ ಇವೆರಡೂ ಸಾಹಿತ್ಯಕ್ಕೆ ಅವಶ್ಯವಾದ ಅಂಗಗಳು. ಅರ್ಥವಿಲ್ಲದ ಶಬ್ದಗಳು ತಮ್ಮ ಸ್ವರದ ಸವಿಯಿಂದ ಒಮ್ಮೊಮ್ಮೆ ಆನಂದವನ್ನುಂಟುಮಾಡಬಹುದು. ಆದರೆ ಅದು ಸಂಗೀತವೆನಿಸಬಹುದು. ಸಾಹಿತ್ಯವೆನಿಸದು. ಶಬ್ದಗಳು ತಮ್ಮ ಸಾಮರ್ಥ್ಯದಿಂದ ಒಮ್ಮೊಮ್ಮೆ ಗಂಭೀರವಾದ ಅರ್ಥವನ್ನು ಸೂಚಿಸಬಹುದು. ಆದರೆ ಅಲ್ಲಿ ರಸೋತ್ಪತ್ತಿ ಇಲ್ಲದಿದ್ದರೆ ಆನಂದಾನುಭವವಿಲ್ಲದಿದ್ದರೆ ಅದು ಅರ್ಥಬೋಧವೆನಿಸಬಹುದು, ಆದರೆ ಅದು ಸಾಹಿತ್ಯವಲ್ಲ.

ಸಾಹಿತ್ಯವು ಯಾವಾಗಲೂ ಆಹ್ಲಾದವನ್ನುಂಟುಮಾಡಿ ಮನಗೊಳ್ಳುವದು. ಕೇವಲ ಅರ್ಥಬೋಧ ಮಾಡದೆ ಸಾಹಿತ್ಯವು ಆನಂದವನ್ನುಂಟುಮಾಡುತ್ತಲೆ ಸಹಜವಾಗಿ ಅರ್ಥಬೋಧ ಮಾಡಿಬಿಡುವದು. ಸಾಹಿತ್ಯವು ನಲ್ಲೆಯ ಮೆಲ್ನುಡಿಯಂತೆ ಮನೋಹರವಿದ್ದು ಮನವೊಲಿಸಿ ಸುವಂತಹದಿರುವದು ಎಂದು ಒಬ್ಬ ಸುಸ್ಕೃತ ಸಾಹಿತಿಯು ಅದನ್ನು ವರ್ಣಿಸಿರುವನು. ಕನ್ನಡಶಾಲೆಯ ಒಬ್ಬ ಕಠೋರ ಮಾಸ್ತರನು ಕೈಯಲ್ಲಿ ಬೆತ್ತ ಹಿಡಿದು ಮಗುವಿಗೆ 'ಖರೇ (ಸತ್ಯ) ಹೇಳು' ಎನ್ನುವದರಲ್ಲಿಯೂ ಅದೇ ಮಗುವನ್ನು ಅವಚಿಕೊಂಡು ತಾಯಿಯು 'ನಿಜ ನುಡಿ ಮಗು' ಎಂದು ಹೇಳುವದರಲ್ಲಿಯೂ ಯಾಂ ಭೇದವೋ ಅದೇ ಭೇದವು ಕೇವಲ ಅರ್ಥಬೋಧಕ ಶಬ್ದಗಳಲ್ಲಿಯೂ, ಆ ಶಬ್ದಗಳ ಸಾಹಿತ್ಯದ ಪದದಲ್ಲಿಯೂ ಇರುವದು.

ಸಾಹಿತ್ಯವೆಂಬುದು ಎಲ್ಲ ಲಲಿತಕಲೆಗಳಲ್ಲಿಯೂ ಅತ್ಯಂತ ಶ್ರೇಷ್ಠವು. ಇತರ ಲಲಿತಕಲೆಗಳು ಒಂದೊಂದು ಇಂದ್ರಿಯದ ಮುಖಾಂತರ ಮನುಷ್ಯನಿಗೆ ಸುಖವನ್ನುಂಟುಮಾಡುವವು. ಆದರೆ ಸಾಹಿತ್ಯವು ತನ್ನ ವರ್ಣನಾಸಾಮರ್ಥ್ಯದ ಮೂಲಕ ಹಾಗೂ ಶಬ್ದವೆಂಬ ಸರ್ವವ್ಯಾಪೀ ಸಾಧನವನ್ನುಪಯೋಗಿಸುತ್ತಿರುವದರಿಂದ ಸರ್ವೇಂದ್ರಿಯಗಳ ಮುಖಾಂತರ ಮಾನವಮನವನ್ನು ಮುಟ್ಟಿ ಅಲ್ಲಿ ಆನಂದೋದ್ರೇಕವನ್ನುಂಟುಮಾಡಬಲ್ಲದು. ಆದುದರಿಂದಲೇ ಅದು ಎಲ್ಲಕ್ಕೂ ಹೆಚ್ಚಿನ ಕಲೆಯು.

ಇನ್ನು ಸಾಹಿತ್ಯದ ಉದ್ದೇಶದ ಬಗ್ಗೆಯೂ ಎಷ್ಟೋ ಸಾರೆ ವಾದವಿವಾದಗಳಾಗುತ್ತವೆ. ಕೇವಲ ರಂಜನೆಯೇ ಅದರ ಉದ್ದೇಶವೆಂದು ಹಲವರ ಅಭಿಪ್ರಾಯವು. ಕಲೆಯು ಕಲೆಗಾಗಿ, ಅದು ಉದ್ದೇಶವಿರಹಿತವಿರುವದು ಎಂದು ಕೆಲವರು ಹೇಳುವರು. ನೋಡುವ ದೃಷ್ಟಿಯಿಂದ ಇಲ್ಲವೆ ವಾದದ ದೃಷ್ಟಿಯಿಂದ ಇದೇನೋ ಸರಿಯಿರಬಹುದು. ಆದರೆ ಉದ್ದೇಶರಹಿತವಾದುದು ಈ ಜಗತ್ತಿನಲ್ಲಿ ಏನೂ ಇರಲಾರದು. ಮೇಲಾಗಿ ಬುದ್ಧಿಪ್ರಧಾನನಾದ ಮಾನವನು ಉದ್ದೇಶವಿಲ್ಲದ ಏನಾದರೂ ಮಾಡುತ್ತಿ ಹೋಗುವದು ಹುಚ್ಚುತನವೆನಿಸಬಹುದು. ಪರಮಾತ್ಮನಾದರೂ ಈ ವಿಶ್ವವನ್ನು ಕೇವಲ ಲೀಲೆಗಾಗಿ ಮಾಡಿರುವನೆಂದು ನಾವು ಹೇಳುವದು ನಮ್ಮ ಅಜ್ಞಾನದ ಸಾಕ್ಷಿಯೇ ಹೊರತು ಬೇರೆ. ... ಕತದ ಪುರಾಣೆಯಲ್ಲಿ ಗಂಡನು ಹೆಂಗಸು ಕೂಡಿ ಇರುವದು ಕೇವಲ ಪ್ರೇಮದ ಮೂಲಕ ಎಂದು ಹೇಳುವಾಗ ಹೇಳಬಹುದು. ಆದರೆ ಅದರ ಪರಿಸ್ಫೂರ್ತಿಯು ಇಬ್ಬರ ಪ್ರೇಮದ ಫುತ್ಥಳಿಯ ಮಕ್ಕಳು ... ಉತ್ಪತ್ತಿಯಲ್ಲಿದೆ ಎಂಬುದನ್ನು ನಾವು ಮರೆಯಲಾಗಲಿಕ್ಕಿಲ್ಲ. ಬ್ರಹ್ಮನು ಸರಸ್ವತಿಯರ ಪರಸ್ಪರ ಪ್ರೇಮ ದೃಷ್ಟಿ ಮಾಡಿದ ಗುಟ್ಟು ಆ ವ್ಯಕ್ತಿಗಳಿಗೆ ಮಾತ್ರವಲ್ಲದೆ ಹೊರತು ಆ ಪ್ರೇಮದಲ್ಲಿಲ್ಲ ಎಂಬುದನ್ನು ನಾವು ಒಪ್ಪಬೇಕಾಗುತ್ತದ. ಹೀಗಿಲ್ಲದ ಹೋದರೆ, ಪ್ರೇಮವು ಅಲ್ಲಿಯೇ ಮುಗಿದರೆ, ನಿರ್ಮಾಣಕರ್ತನಾದ ಬ್ರಹ್ಮನು ತನ್ನ ಪದವಿಯನ್ನೇ ಬಿಟ್ಟು ಸನ್ಯಾಸಿ ತಿವಸಂತ ಬೂದಿ ಹೂಸಿ ಸ್ಮಶಾನವಾಸಿಯಾಗಬೇಕಾದೀತು. ತಾತ್ಪರ್ಯವೇನೆಂದರೆ ನನಗೆ ತಿಳಿದ ಮಟ್ಟಿಗೆ ಕೇವಲ ರಂಜನ ಇದು ಸಾಹಿತ್ಯದ ಉದ್ದೇಶವಲ್ಲ. ರಂಜನೆ, ಜೀವನಪೋಷಕವಾದ ಬೋಧನೆ, ಉಜ್ಜೀವಕವಾದ ಸ್ಫೂರ್ತಿ, ಇವಲ್ಲ ಸಾಹಿತ್ಯದ ಉದ್ದೇಶಗಳು. ಎಷ್ಟರ ಮಟ್ಟಿಗೆ ಈ ಉದ್ದೇಶಗಳು ಸಫಲವಾಗುವವೋ ಅಷ್ಟರ ಮಟ್ಟಿಗೆ ಆ ಸಾಹಿತ್ಯವು ಸಾರ್ಥಕವು. ಅಷ್ಟರ ಮಟ್ಟಿಗೆ ಅದು ನಮ್ಮ ಜೀವನವನ್ನು ಮಾರ್ಪಡಿಸುವದು, ಉದಾತ್ತವಾಗಿ ಮಾಡುವದು, ಉಚ್ಚತರಸ್ಥಿತಿಗೆ ಒಯ್ಯುವದು.

ಸಾಹಿತ್ಯ ಎಂಬುದೊಂದು ಕಲೆಯಿದೆ. ಹಲವರು ಸ್ಫೂರ್ತಿಯಿಂದ ಸಾಹಿತ್ಯವನ್ನು ನಿರ್ಮಾಣ ಮಾಡುತ್ತಿರಬಹುದು. ಆದರೆ ಅವರಲ್ಲಿ ಕಲೆಯಿಲ್ಲ ಎಂದು ಹೇಳಲಿಕ್ಕಾಗದು. ಕಲೆ ಎಂದರೆ ಕಸಬು, ಕೌಶಲ್ಯ, ಯಾವದೊಂದು ಕೆಲಸವನ್ನು ಉತ್ತಮವಾಗಿ, ಮನೋಹರವಾಗಿ, ಸುಂದರವಾಗಿ ಮಾಡುವ ರೀತಿ; ಎಲ್ಲರೂ ಸಾಹಿತಿಗಳಾಗಲಾರರು. ಸಾಹಿತ್ಯದ ಸೊಬಗನ್ನರಿಯುವವರು ಲಕ್ಷಾವಧಿ ಜನರಿದ್ದರೆ ಒಬ್ಬಿಬ್ಬರೇ ಸಾಹಿತ್ಯ ನಿರ್ಮಾತರು ಆಗಬಲ್ಲರು.

ನಮ್ಮ ಒಳ್ಳೇ ಸಾಹಿತ್ಯ ನಿರ್ಮಾಣಕ್ಕೆ ಆಧಾರ. ಮನಸ್ಥಿತಿಯಲ್ಲಿ ಜೀವನವೂ ಅವಶ್ಯ. ಮರುಭೂಮಿಯಲ್ಲಿ ಮಾವಿನ ತೋಪು ಇರಲರಿಯದು. ಅದೇ ರೀತಿ ನಮ್ಮ ಸುತ್ತಲಿನ ಜನಜೀವನವು ಉತ್ತಮ ನಿರ್ಮಾಣಕ್ಕೆ ಅನುಕೂಲವಿಲ್ಲದೆ ಹೋದರೆ ನಮ್ಮ ಸಾಹಿತ್ಯವು ಎಂದೂ ಸೋಜ್ವಲವಾಗದು. ನಮ್ಮ ಸಾಹಿತ್ಯವು ಉತ್ತಮವಾಗಬೇಕಾದರೆ ನಮ್ಮ ಜೀವನವು ಉತ್ತಮವಿರಬೇಕು. ಹೇಡಿಗಳೆಂದೂ ವೀರರಸವನ್ನು ಬಣ್ಣಿಸಲಾರರು. ಅಥವಾ ರುಕ್ಷಹೃದಯದವರು ನವರಸವನ್ನೆಂದೂ ಸ್ವಾದಿಸಲಾರರು. ಸಾಹಿತ್ಯವು ನಮ್ಮ ಜೀವನದ ಪ್ರತಿಬಿಂಬವು. ನಮ್ಮ ಜೀವನದ ಮೇಲೆ ಬರದ ಟೀಕಟಿಪ್ಪಣಿಯು, ನಮ್ಮ ಜೀವನವನ್ನು ಹಿಂಡಿ ತೆಗೆದ ತನಿರಸವು, ನಮ್ಮ ಜೀವನದ ದರ್ಶನವು, ನಮ್ಮ ಜೀವನ ರಸಾಯನವು, ನಮ್ಮ ಜೀವನದ ಸಂಜೀವನವು ಎಂದು ಬೇರೆ ಬೇರೆಯವರು ಬೇರೆ ಬೇರೆ ರೀತಿ ಹೇಳಿರುವದುಂಟು. ಈ ಎಲ್ಲ ವ್ಯಾಖ್ಯೆಗಳು ತಕ್ಕಮಟ್ಟಿಗೆ ಸರಿಯೇ ಎಂದು ಭಾವಿಸಬಹುದು. ಇವೆಲ್ಲವುಗಳ ಮೇಲಿಂದ ಗೊತ್ತಾಗುವದೇನೆಂದರೆ, ಸಾಹಿತ್ಯದ ಝರಿಯು ಜೀವನದಲ್ಲಿ ಉಗಮಹೊಂದುವದು. ಆದುದರಿಂದ ಆ ಉಗಮಸ್ಥಾನವನು ನಾವು ಎಷ್ಟು ಪರಿಶುದ್ಧವಾಗಿಯೂ ತೇಜಸ್ವಿಯಾಗಿಯೂ ರಸವತ್ತಾಗಿಯೂ ಇಡುವೆವೋ ಅಷ್ಟು ನಮ್ಮ ಸಾಹಿತ್ಯವು ಶ್ರೇಷ್ಠವಾಗುವದು. ಸಾಹಿತಿಯು ಪ್ರಗಮನಶೀಲನು, ವಿಶಾಲ ಹೃದಯದವನು, ಸ್ವತಂತ್ರನ್ಯತ್ತಿಯವನು, ನಿರ್ಭಯನು, ಸತ್ಯವ್ರತನು ಇದ್ದರೆ ಮಾತ್ರ ಅವನ ವಾಗ್ಝರಿಯು ಓಜಸ್ವಿಯಾಗಿ ತನ್ನ ಪ್ರಭಾವವನ್ನು ಬೀರುವದು.

ಸಾಹಿತ್ಯವು ಯಾವದೇ ನಾಡಿನ ಸಂಸ್ಕೃತಿಯ ಮುಖ್ಯಾಂಗವೆಂದು ನಾನ ಭಾವಿ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" ರಜಿಸ್ಟರ್ಡ್

ನಕಲಿ ಮದ್ದುಗಳಿಂದ ಮೋಸಹೋಗದಿರಿ. ಕೊಳ್ಳುವ ಮೊದಲು ಕೋಳಿಯ ಗುರುತಿನ ಗುರುತನ್ನೂ 'ಗೊನೊಕಿಲರ್' ಹೆಸರನ್ನೂ ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಅನೇಕ ಜನ ಡಾಕ್ಟರ ಇಂಗ್ಲೀಷು ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಹೊಸದೆ, ಬಹಳ ವರ್ಷದ್ದಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸುತ್ತಿದ್ದ ತೀವ್ರರೋಗವಾದರೂ, ಗೋನೋಕಿಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆಯದು ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ತೊಂದರೆವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 1. ವಿ ಪಿ ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲ ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4

ಸಿದ್ದೇನೆ ಯಾಕೆಂದರೆ ಆಯಾ ನಾಡಿನ ಆಚಾರ ವಿಚಾರ, ಇತಿಹಾಸ, ಮೇಲು ಕೀಳು, ಗುಣದೋಷ, ಭಾವನಾವಿಶೇಷ ಇವೆಲ್ಲ ಅದರಲ್ಲಿ ಪ್ರತಿಬಿಂಬಿತವಾಗಿರುತ್ತವೆ. ಆಯಾ ನಾಡಿನ ಇತರ ಕಲೆಗಳು ನಷ್ಟವಾಗಿ ಹೋಗಿ, ಸಾಹಿತ್ಯವೊಂದು ಉಳಿದಿದ್ದರೆ, ಅದರ ಸಂಸ್ಕೃತಿಯೆಲ್ಲ ಉಳಿದಿದೆ ಎಂದು ಹೇಳಬಹುದು. ಇಷ್ಟು ಮಹತ್ವದ್ದಿದೆ ಸಾಹಿತ್ಯವೆಂಬುದು.

× × × ×

ನಮ್ಮ ವಿಷಮ ಪರಿಸ್ಥಿತಿ

....ಪರಿಸ್ಥಿತಿಯನ್ನು ಪರಿಶೀಲಿಸುವಾಗ ನಾವು ಕೇವಲ ಕನ್ನಡ ನುಡಿ ಹಾಗು ಸಾಹಿತ್ಯದ ಪರಿಸ್ಥಿತಿಯನ್ನಷ್ಟೇ ನೋಡಿ ನಡೆಯುವಂತಿಲ್ಲ. ನಮ್ಮ ಜೀವನದಲ್ಲಿ, ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಇತ್ಯಾದಿ ಬೇರೆ ಬೇರೆ ವಿಭಾಗಗಳು ಕಂಡುಬಂದರೂ ಅವು ಅತ್ಯಂತ ನಿಕಟವಾಗಿ ಸಂಬಂಧಪಟ್ಟವು. ವಿಚಾರದ ಅನುಕೂಲತೆಗಾಗಿ ನಾವು ಅವುಗಳನ್ನು ಬೇರ್ಪಡಿಸುತ್ತೇವೆ ಹೊರತು ಅವೆಲ್ಲ ಸಕಲ ಜೀವನ ವ್ಯಾಪಿ ಇರುವವು ಹಾಗೂ ಹಾಸುಹೊಕ್ಕಿನಂತೆ ಪರಸ್ಪರಾವಲಂಬಿಗಳಿರುವವು. ಪರಸ್ಪರ ಪರಿಣಾಮಿಗಳಿರುವವು. ಆದುದರಿಂದ ಅವೆಲ್ಲವುಗಳ ವಿಚಾರವನ್ನು ನಾವು ಮಾಡಲಿಕ್ಕೆ ಬೇಕು. ಬೇಡವೆಂದರೆ ಆಗದು. ಇಲ್ಲಿ ಸಾಹಿತ್ಯವೇ ನಮ್ಮ ವಿಷಯ. ಉಳಿದವುಗಳನ್ನೆಲ್ಲ ನಾವು ಕೊಂಡು ಮಾಡುವದೇನು? ಎಂದು ಹಲವರು ಅನ್ನಬಹುದು. ಆದರೆ ಸಾಹಿತ್ಯದ ಪ್ರಗತಿಯಾಗದಿರಲಿಕ್ಕೆ ಇತರ ವಿಷಯಗಳಲ್ಲಿಯ ವಿಷಮಪರಿಸ್ಥಿತಿಯೇ ಕಾರಣವಿದೆಯೆಂದು ಕಂಡು ಬಂದರೆ ಅದನ್ನು ದುರ್ಲಕ್ಷಿಸುವ ಬಗೆ ಹೇಗೆ? ರೋಗನಿದಾನವನ್ನು ಚೆನ್ನಾಗಿ ಮಾಡದೆ ಬರೀ ಮೇಲೆ ಮೇಲೆ ಔಷಧಕೊಡುತ್ತ ಹೋದರೆ ಎಂದೂ ಗುಣವಾಗಲರಿಯದು. ಅದೇ ರೀತಿ ಇತರ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಅದನ್ನು ಉತ್ತಮಗೊಳಿಸದೆ (ಆ ಕಾರ್ಯವನ್ನು ನಾವು ಸ್ವತಃ ಮಾಡದಿದ್ದರೆ ಅದನ್ನು ಮಾಡುವವರಿಗೆ ಸಹಾಯ ಮಾಡಬಹುದು) ನಮ್ಮ ಸಾಹಿತ್ಯವು ಎಂದೂ ಸುಧಾರಿಸದು. ಸಾಹಿತ್ಯ ಪ್ರಗತಿಯು, ನಮ್ಮ ಜೀವನದ ಪ್ರಗತಿಯು ನಮ್ಮ ರಾಜಕೀಯ, ಧಾರ್ಮಿಕ, ಸಾಮಾಜಿಕ, ಹಾಗೂ ಆರ್ಥಿಕ ಪ್ರಗತಿಯನ್ನವಲಂಬಿಸಿವೆ. ಆದ್ದರಿಂದ ಅವುಗಳನ್ನಾದರೂ ಇಲ್ಲಿ ಸಂಕ್ಷೇಪದಿಂದ ನೋಡುವೆನು.

ಮೊದಲನೆಯ ಮಾತೆಂದರೆ ನಾವು ದಾಸ್ಯ ರಾಷ್ಟ್ರದವರು. ಈಗೇನೋ ಸ್ವಾತಂತ್ರ್ಯೋನ್ಮುಖರಾಗಿರುವೆವು. ಆದರೆ ನಮ್ಮ ಹಣೆಮೇಲಿದ್ದ ಈ ಕರಿಪಟ್ಟಿಯು ಅಳಿಸಿ ಹೋಗುವವರೆಗೆ ನಮ್ಮ ಸಾಹಿತ್ಯವು ಸ್ವತಂತ್ರ ವಿಹಂಗಮದಂತೆ ವಿಹರಿಸಲಾರದು. ಅದು ಪಂಜರದೊಳಗಿನ ಗಿಳಿಯಂತೆ ಕಲಿಸಿದಷ್ಟು ಹಾಡುತ್ತ ಕೂಡುವದು. ಇನ್ನು ನಮ್ಮ ಕನ್ನಡನಾಡಿನ ಪರಿಸ್ಥಿತಿಯನ್ನು ನೋಡಿದರೆ ಅದಂತೂ ಬಹಳ ವಿಷಮವಾಗಿದೆ. ೧೧೦ ಲಕ್ಷ ಕನ್ನಡಿಗರು, ೧೫೦ ಲಕ್ಷ ಕರ್ನಾಟಕಸ್ಥರು (ಕನ್ನಡ ನಾಡಿನಲ್ಲಿರುವವರೆಲ್ಲರೂ ಕೂಡಿ), ಈ ಹೊತ್ತು ಹದಿನೆಂಟು ಆಡಳಿತಗಳಲ್ಲಿ ಹರಿದು ಹಂಚಿ ಬಿದ್ದಿದ್ದಾರೆ! ಕನ್ನಡ ನುಡಿ, ನಾಡು ಸಾಹಿತ್ಯ ಇವುಗಳ ಬಗ್ಗೆ ನಾವು ಏನೇ ಮಾಡಬೇಕಾದರೂ ಈ ವಿಧದ ಆಡಳಿತಗಳೊಡನೆ ತಿಕ್ಕೆ ಹಾಯಬೇಕು, ಅವರೆಲ್ಲರೂ ಒಪ್ಪಿದಾಗ ನಾವು ಕರ್ನಾಟಕಸ್ಥರೆಲ್ಲರೂ ಏಕಮುಖದಿಂದ ಬಂದು ಕೆಲಸಮಾಡಬೇಕು. ಈಚಿನವರೆಗೆ ಮೈಸೂರೊಂದು ಬಿಟ್ಟರೆ ಉಳಿದ ಸಂಸ್ಥಾನಿಕರು ಕನ್ನಡದ ಮಾತನ್ನೇ ಎತ್ತುತ್ತಿರಲಿಲ್ಲ. ಈಗೇನೋ ಸೂಸೆಯ ಕಾಲವು ಬಂದಿದೆಯೆಂದು ತೋರುತ್ತದೆ! ಇರಲಿ, ಈ ವಿಚ್ಛಿನ್ನ ಸ್ಥಿತಿಯು ಕರ್ನಾಟಕದ ನುಡಿ ಸಾಹಿತ್ಯಗಳಿಗೆ ಬಹಳ ಅಡಚಣಿಗಳನ್ನುಂಟುಮಾಡುತ್ತಿದೆ. ಮೇಲಾಗಿ ಇದೇನು ನಿಸರ್ಗಸಿದ್ಧವಾದ ಅಡಚಣಿಯಲ್ಲ. ನಾವು ಕನ್ನಡಿಗರು ಕರ್ನಾಟಕಸ್ಥರು. ನಮಗೆ ಇಷ್ಟವೆಂದು ಮಾಡಿಕೊಂಡ ವ್ಯವಸ್ಥೆ ಇದಲ್ಲ. ಇದು ಕೃತಕವಾದುದು. ರಾಜಕೀಯ ಮಹತ್ವಾಕಾಂಕ್ಷಿಗಳು ಇಲ್ಲವೆ ದೇಶದ್ರೋಹಿಗಳು ತಮಗೆ ಇಷ್ಟಬಿದ್ದಂತೆ ಈ ನಮ್ಮ ತಾಯ್ನುಡಿಯನ್ನು ಆಯಾ ಕಾಲಕ್ಕೆ ನಮಗೆ ಹೇಳದೆ ಕೇಳದೆ ಹಂಚಿಕೊಂಡು ಬಿಟ್ಟಿದ್ದಾರೆ. 'ಈ ಭಾಗ ನನ್ನದು!' ಎಂದು ಈಗ ಹೇಳುತ್ತಿದ್ದಾರೆ. ಕುರುಬರು ಕುರಿಗಳನ್ನು ಪ್ರಾಯಶಃ ಇದೇ ರೀತಿ ಹಂಚಿಕೊಳ್ಳುತ್ತಿರಲಿಕ್ಕೆ ಸಾಕು. ಆದರೆ ನಾವು ಕುರಿಗಳಲ್ಲ. ಒಳ್ಳೆ ಕಣ್ಣು ಕಾಲುಗಳಿದ್ದ, ಬಾಯಿ ಬುದ್ಧಿಗಳಿದ್ದ ಮನುಷ್ಯರು. ನಮಗೆ ಈಗ ಎಚ್ಚರ ಹುಟ್ಟಿದೆ. ಆದುದರಿಂದ ಈಗ ನಾವು ಒಂದಾಗಬೇಕೆನ್ನುತ್ತೇವೆ. ನಮ್ಮ ನುಡಿ ಒಂದು, ನಮ್ಮ ನಾಡು ಒಂದು, ನಮ್ಮ ಇತಿಹಾಸ ಒಂದು. ಎಲ್ಲಕ್ಕೂ ಹೆಚ್ಚಿನದೇನೆಂದರೆ ಈಗ್ಗೆ ನಾವು ಒಂದಾಗಿ ಮುಂದಡಿಯಿಡಬೇಕೆನ್ನುತ್ತೇವೆ. ನಮ್ಮನ್ನು ತಡೆಯಬೇಡಿರಿ, ಕಡವಬೇಡಿರಿ. ಕರ್ನಾಟಕದಲ್ಲಿಯ ಪ್ರಸ್ತುತ ಪ್ರಜಾಶಕ್ತಿಯು ಜಾಗ್ರತವಾಗಿ ಜನಮನವನ್ನಾಕ್ರಮಿಸಿ ಕೃತಕ ಭೇದಗಳನ್ನು ವಿಸರ್ಜಿಸಿ ಏಕವಾಗಬೇಕೆಂದು ಮುಂದೆ ಸಾಗುತ್ತಿದೆ. ತನಗೆ ಸಹಾಯಕೊಟ್ಟರೆ ಸ್ವೀಕರಿಸಿ ಕೃತಜ್ಞತೆಯಿಂದ ಆ ಶಕ್ತಿ ಮುಂದೆ ಸಾಗುವದು, ತನ್ನನ್ನು ವಿರೋಧಿಸಿದರೆ ಕಠೋರತೆಯಿಂದ ಮೆಟ್ಟಿ ಅದು ಮುಂದಡಿಯಿಡುವುದು.

ಈ ಮೇಲಿನ ಅಡಚಣಿಗಳಿಗಿಂತ ನಮ್ಮ ಸಮಾಜರಚನೆಯ ಮೂಲಕ ಅನೇಕ ಅಡಚಣಿಗಳುಂಟಾಗುತ್ತವೆ. ಜಾತಿ ವೈಮನಸ್ಸು ಸಾಹಿತ್ಯ ಪ್ರವಾಹಕ್ಕೆ ಎಷ್ಟೋ ಅಡ್ಡಬರುತ್ತಿದೆ. ಈ ಬಗ್ಗೆಯೂ ಅನೇಕರಿಗೆ ಅನುಭವವು ಬಂದಿರಲಿಕ್ಕೇ ಸಾಕು. ಈ ಸ್ಥಿತಿಯನ್ನು ನೀವು ಹೋಗಲಾಡಿಸಲಿಕ್ಕೆ ಬೇಕು. ಇದ್ದಂತೆಯೇ ಈ ಎಲ್ಲ ದೋಷಗಳಿರಲಿ ನಮ್ಮ ಸಾಹಿತ್ಯ ಬೆಳೆಯಲಿ ಎಂದರೆ ಅದು ಆಗದು. ಒಳಗೆ ಹೆಗ್ಗಣ ಇಟ್ಟು ಗುದ್ದು ಬಡಿದರೆ ಅದು ಸಲ್ಲದು.

ನುಡಿ ಮತ್ತು ಸಾಹಿತ್ಯಗಳ ಸದ್ಯಸ್ಥಿತಿ

ಒಂದು ವೇಳೆ ಕನ್ನಡಿಗರು ನೆರೆಪ್ರಾಂತದಲ್ಲಿ— ಪರಪ್ರಾಂತವನ್ನುವದನ್ನು ನಾವು ಬಿಟ್ಟುಬಿಡಬೇಕು—ನೆಲೆಸುವದಾದರೆ ಅವರು ಬೇಕಾದಹಾಗೆ ಕನ್ನಡವನ್ನು ಮರೆಯಲಿ ಅದರಿಂದ ದೊಡ್ಡ ಹಾನಿಯಿಲ್ಲ. ಆದರೆ ಮುಂದೆ ಅವರಾಗಲಿ ಅವರ ಮಕ್ಕಳಾಗಲಿ ಇಲ್ಲಿ ಬರುವದಾದರೆ ಇಲ್ಲಿಗೆ ಬರುವ ಇಚ್ಛೆಯಿಂದ ಹೋಗಿದ್ದರೆ, ಹೊಲಮನೆಗಳನ್ನು ಇಲ್ಲಿ ಇಟ್ಟುಕೊಂಡಿದ್ದರೆ ತಮ್ಮ ಕನ್ನಡವನ್ನುಳಿಸಿಕೊಳ್ಳುವ ಭಾರವು ಅವರ ಮೇಲಿದೆ ಎಂದು ಹೇಳಬಲ್ಲೆ. ಅದೇರೀತಿ ಮರಾಟಿಗರಾಗಲಿ, ತೆಲುಗರಾಗಲಿ, ಕರ್ನಾಟಕದಲ್ಲಿ ನೆಲೆಸುವವರು ಇಲ್ಲಿಯ ನುಡಿಯನ್ನು ಕಲಿತು ಇಲ್ಲಿ ಸಮರಸರಾಗಲು ಯತ್ನಿಸಲಿಕ್ಕೇಬೇಕು. ಇದು ನೆರೆಪ್ರಾಂತದ ಪರಸ್ಪರ ಧರ್ಮ. ಹಾಗೆ ಮಾಡದೆ ಆಯಾ ಪ್ರಾಂತಗಳಲ್ಲಿ ಭಾಷಾ ಸಮಸ್ಯೆಗಳು ಉಂಟಾಗುವಂತೆ ವರ್ತಿಸುವದು ಬಹಳ ದೊಡ್ಡ ತಪ್ಪಾಗುವದು. ಇದಲ್ಲದೆ ನಮ್ಮ ನೆರೆಪ್ರಾಂತದವರು ನಮಗಿಂತ ಮೊದಲು ಜಾಗ್ರತರಾಗಿ ತಮ್ಮ ನುಡಿಗಳನ್ನು ಎಷ್ಟೋ ಸುಧಾರಿಸಿಕೊಂಡಿದ್ದಾರೆ. ಇಷ್ಟೇ ಅಲ್ಲ ಅವರು ಹೆಚ್ಚು ಪ್ರಚಾರಶೀಲರು ಇರುವರು. ಆದುದರಿಂದ ನಮ್ಮ ಪ್ರಾಂತ್ಯದಲ್ಲಿ ನಮ್ಮ ನುಡಿಯ ವರ್ಚಸ್ಸೇ ನಡೆಯುವಂತೆ ನಾವು ನಿರ್ದಾಕ್ಷಿಣ್ಯದಿಂದ ಎಚ್ಚರಗೊಳ್ಳಲಿಕ್ಕೆಬೇಕು. ಇವಲ್ಲದೆ ಈಗಿನ ಕಾಲದಲ್ಲಿ ಫೋನೋ, ರೇಡಿಯೋ, ಸಿನೇಮಾ, ವೃತ್ತಪತ್ರಿಕೆಗಳು ಇವಾದರೂ ನುಡಿಯ ಪ್ರಚಾರದಲ್ಲಿ ಸಹಾಯಕವಾಗುವವು. ಕನ್ನಡವು ಈ ವ್ಯವಸಾಯಗಳಲ್ಲಿ ಕೂಡ ಬಹಳ ಹಿಂದೆ ಇದೆ ಎಂದು ಹೇಳಬೇಕಾಗುವದು. ಮುಂಬಯಿ ರೇಡಿಯೋ ಸ್ಟೇಶನ್ನಿನಿಂದ ಈಗ ಶೈಕ್ಷಣಿಕ ವಿಷಯಗಳು ಬೀರಲ್ಪಡುತ್ತಿರುವವು. ಆದರೆ ಅಲ್ಲಿ ಕನ್ನಡಕ್ಕೆ ಸ್ಥಾನವು ದೊರತಿಲ್ಲ! ಸಿನೇಮಾ ಸೃಷ್ಟಿಯಲ್ಲಿ ಕನ್ನಡ ವಾಕ್ಪಟಗಳ ಸಂಖ್ಯೆ ಎಷ್ಟಿದೆ, ಕನ್ನಡ ವಾಕ್ಪಟಗಳನ್ನು ತಯಾರಿಸುವ ಕಂಪನಿಗಳೆಷ್ಟು ಎಂದು ವಿಚಾರಿಸಿದರೆ ಅತ್ಯಂತ ನಿರಾಶೆಯಾಗುವಂತಿದೆ. ಇವುಗಳನ್ನು ಈ ದಿನಗಳಲ್ಲಿ ದುರ್ಲಕ್ಷಿಸಿ ನಡೆಯುವಂತಿಲ್ಲ.

ಇದು ನುಡಿಯ ವಿಷಯವಾಯಿತು. ಇನ್ನು ಸಾಹಿತ್ಯದ ದೃಷ್ಟಿಯಿಂದ ನೋಡುವ. ಇಲ್ಲಿಯೂ ವಿಲಕ್ಷಣ ಸ್ಥಿತಿಯೇ ಇದೆ. ಕನ್ನಡಿಗರ ಸಂಖ್ಯೆಯೇನೋ ಹೇಳಲು ೧೧೦ ಲಕ್ಷ. ಆದರೆ ಭಿನ್ನ ಆಡಳಿತಗಳ ಮೂಲಕ, ವರ್ಷಾನುವರ್ಷ ಭಿನ್ನ ಆಡಳಿತಕ್ಕೆ ಒಳಗಾಗಿರುವದರಿಂದ ಭಿನ್ನ ಹಿತಸಂಬಂಧಗಳು ಉಂಟಾದ ಮೂಲಕ, ನೆರೆಯ ಭಿನ್ನ ಭಿನ್ನ ಭಾಷೆಗಳ ವರ್ಚಸ್ಸಿಗೆ ಒಳಗಾದ ಮೂಲಕ, ನಮ್ಮಲ್ಲಿ ಭಾಷಾಭೇದಗಳುಂಟಾಗಿವೆ. ಒಂದು ಭಾಗದಲ್ಲಿ ರಚಿಸುವ ಪುಸ್ತಕವು ಇನ್ನೊಂದೆಡೆ ಸರಿಹೋಗುವದಿಲ್ಲ. ಮಾಧ್ಯಮಿಕ ಅಥವಾ ಉಚ್ಚ ಶಿಕ್ಷಣಕ್ರಮದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಕನ್ನಡಕ್ಕೆ ಯೋಗ್ಯಸ್ಥಾನವಿಲ್ಲದ್ದರಿಂದ ಕನ್ನಡದಲ್ಲಿ

General Assurance Society Ltd.

ಹಿಂದೂದೇಶದ ಪ್ರಮುಖ ವಿಮಾ ಕಂಪನಿ:

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಪ್ರಧಾನ ಆಫೀಸು:— ಅಜ್ಮೀರ್ ಸ್ಥಾಪನೆ **1907**

- ಸಂತೃಪ್ತಿ ಹೊಂದಿರುವ **50,000** ಪೊಲಿಸಿದಾರರೇ ನಮ್ಮ ಉತ್ಕೃಷ್ಟ ಪ್ರಶಸ್ತಿ ಪತ್ರ
- ಎಲ್ಲಾ ವರ್ಗದವರ ಪ್ರತಿಯೊಂದು ಆವಶ್ಯಕತೆಗೂ ಅನುಕೂಲವಾದ ಪೊಲಿಸಿಗಳು.
- ಏಜನ್ಸಿ ಶರ್ತಗಳು: ಉದಾರ ಮತ್ತು ಲಾಭಕರ

ಹೆಚ್ಚಿನ ವಿವರವನ್ನು ಈ ಕೆಳಗಿನವರಿಂದ ಪಡೆಯಬಹುದು:—

ಜನರಲ್ ಮೆನೇಜರ್, ಅಜ್ಮೀರ್.

ಅಥವಾ, ಶಾಖಾ ಮೆನೇಜರ್:—ಮದ್ರಾಸ್, ಹುಬ್ಬಳ್ಳಿ, ಬೆಂಗಳೂರು.

ಅಥವಾ, ಚೀಫ್ ಏಜಂಟರು:—ಮಧುರ, ರಾಜಮಹೇಂದ್ರಿ, ಸಿಕಂದರಾಬಾದ್, ತಿರುಚಿನಾಪಳ್ಳಿ.

ಅಥವಾ ಒರ್ಗನೈಸರ್:—ಔರಂಗಬಾದ್, ಬಳ್ಳಾರಿ, ನೆಲ್ಲೂರು.

Established] [1906

THE

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	**Rs. 486 Lakhs**
Annual income Exceeds	**Rs. 28 Lakhs**
Total Assets Exceed	**Rs. 100 Lakhs**
Total claims paid over	**Rs. 36 Lakhs.**

The oldest and largest Life Assurance Company of South India, having 31 years of record service.

A POLICY IN THE **UNITED INDIA** *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to:—

THE BRANCH MANAGER,
The United India,
Life Assurance Company Ltd.
BLOCK No 2, Felixal Bazaar,
BRANCH, MANGALORE, S. B.

OR

K. Keshava Shenoy, M. A.
Organiser, Shantiniketan,
PENTLENDPET,
MANGALORE.

ಲ್ಲಿ ಶ್ರೇಷ್ಠ ತರಗತಿಯ ಪುಸ್ತಕಗಳು ಹೊರಡುವದು ಕಠಿಣವಾಗಿದೆ. ಯಾವದೇ ಲೇಖಕನು ಪುಸ್ತಕ ಬರೆದನೆಂದರೆ, ಅವನು ತನ್ನ ಪುಸ್ತಕವು ಇಲ್ಲವೆ ಪಠ್ಯಪುಸ್ತಕವಾಗುವಂತೆ ಯತ್ನಿಸಬೇಕು. ಇಂದರೆ ದೈನ್ಯ ಹೇಳಿಕೊಳ್ಳುತ್ತ ಹೋಗಬೇಕು—ಇಲ್ಲವೆ ಇದ್ದ ಬಿದ್ದ ಎರಡು ಮೂರು ಸಂಸ್ಥೆಗಳ ಕಡೆಗೆ ಧಾವಿಸಿ ಏನಾದರೂ ಪಾರಿತೋಷಕ ದೊರೆಯುವದೇನೋ ನೋಡಬೇಕು! ಯಾವದೇ ಪುಸ್ತಕವನ್ನು ನೋಡಿದರೂ ತೀರ ಲೋಕಪ್ರಿಯವಾಗುವ ಕಾದಂಬರಿಗಳನ್ನು ನೋಡಿದರೂ ಅವುಗಳ ಆರಂಭದಲ್ಲಿ, ಪ್ರಥಮ ಸಂಸ್ಕರಣ ೧೦೦೦ ಪ್ರತಿ ಎಂದು ಇರುತ್ತದೆ ಪಠ್ಯ ಪುಸ್ತಕಗಳನ್ನು ಬಿಟ್ಟರೆ ಎರಡನೆ ಸಂಸ್ಕರಣವಾದ ಪುಸ್ತಕಗಳೆಷ್ಟು! ಇದರ ಲೆಕ್ಕ ಮಾಡುವದು ಬಹಳ ಮನೋರಂಜಕವಾಗಬಹುದು. ಇದಲ್ಲದೆ ಸಾಹಿತ್ಯವನ್ನವಲಂಬಿಸಿ ಜೀವನ ಮಾಡುವವರು ಎಷ್ಟು ಜನರಿರುವರು ಎಂಬುದನ್ನು ನೋಡುವದೂ ಬಹಳ ಬೋಧಕರವಾಗುವದು ಇಷ್ಟೇ ಏಕೆ? ಕನ್ನಡದಲ್ಲಿ ಪುಸ್ತಕಗಳು ವರ್ಷ ವರ್ಷ ಹುಟ್ಟಿದವೆಷ್ಟು ಇತ್ಯಾದಿ ವಿಷಯವನ್ನು ಕಲಿಹಾಕಬೇಕೆಂದು ಯತ್ನಿಸಿದರೆ ಅದಕ್ಕಾಗಿ ತಕ್ಕ ಸಾಧನಗಳು ಕೂಡ ದೊರೆಯುವದಿಲ್ಲ ಇಡೀ ಕನ್ನಡ ಸಾಹಿತ್ಯಕ್ಕೆ ಭೂತ, ವರ್ತಮಾನ ಮತ್ತು ಭವಿಷ್ಯ—ಒಂದು ಮಧ್ಯವರ್ತಿ ಪುಸ್ತಕಾಲಯವು ಅವಶ್ಯವಿದೆ ಅಲ್ಲಿ ಈ ಬಗೆಯ ವಾರ್ಷಿಕ ಪರಿಶೀಲನಾದಿಗಳನ್ನು ಮಾಡುವುದು ಅನುಕೂಲವಾಗುವುದು

× × × ×

ನೆಳಲು ಬೆಳಕು

ನಾನು ನೆಳಲನ್ನು ಬಣ್ಣಿಸಿದಂತೆ ಬೆಳಕನ್ನು ಯಥಾರ್ಥವಾಗಿ ಬಣ್ಣಿಸಬಲ್ಲೆ. ನಿಜವಾಗಿ ಇಷ್ಟೆಲ್ಲ ಘೋರವಾದ ಅಡಚಣೆಗಳಿದ್ದರೂ ನಿತ್ಯ ಅದರ ಮೇಲೆ ಆಘಾತಗಳಾಗುತ್ತಿದ್ದರೂ ಕನ್ನಡವು ಉಳಿದು ಬದುಕಿ ಬಾಳಿ ಬೆಳೆಯುತ್ತದೆ ಇದೇನು ಸಣ್ಣ ಮಾತಲ್ಲ. ೧೯೨೧ರಲ್ಲಿಯ ಕನ್ನಡಿಗರ ಸಂಖ್ಯೆಗಿಂತ ೧೯೩೧ರಲ್ಲಿಯ ಕನ್ನಡಿಗರ ಸಂಖ್ಯೆ ... ಲಕ್ಷದಿಂದ ಬೆಳೆದಿದೆ. ದೈನಿಕ ಪತ್ರಗಳು ... ಗ ಹೆಚ್ಚು ಪ್ರಸಾರಹೊಂದಿವೆ ಇಷ್ಟೇ ... ಲ್ಲದೆ ಅವು ಎಷ್ಟೋ ಉತ್ತಮಗೊಂಡು ... ರೆ ಪ್ರಾಂತ್ಯದಲ್ಲಿಯ ತೆಲುಗು, ತಮಿಳು ... ತ್ರಗಳನ್ನು ಸಂಖ್ಯೆಯಲ್ಲಿಲ್ಲದಿದ್ದರೂ ... ಣದಲ್ಲಿ ಸರಿಗಟ್ಟುತ್ತಿವೆ. ಸಾಪ್ತಾಹಿಕ ... ಚಿತ್ರಗಳಿಂದ ಹಾಗೂ ವಿಷಯ ವೈವಿಧ್ಯದಿಂದ ಹೆಚ್ಚು ಲೋಕಪ್ರಿಯವಾಗಿವೆ, ... ಲ್ಲಿ ಕರ್ನಾಟಕ ಸಂಘಗಳು ಹೊರಟು ... ಆಸ್ಥೆಯಿಂದ, ಪ್ರೇಮದಿಂದ ಕನ್ನಡ ... ಡಿಯ ಬಾವುಟವನ್ನು ಎತ್ತಿ ಹಿಡಿಯು... ರೆ. ಕಥೆ–ಕಾದಂಬರಿಗಳು ದೊಡ್ಡವಿಲ್ಲ ... ರೂ ಸಣ್ಣವು ಹೆಚ್ಚಾಗಿ ಮತ್ತು ಮು... ಗಿ ಹೊರಡುತ್ತಲಿವೆ. ಅಷ್ಟರಲ್ಲಿ ಕವಿ... ಹಿಂದೆ ಬಿದ್ದಿಲ್ಲ. ಹೊಸವಿಚಾರಗಳ ಹೊಸ ಶೈಲಿಯಲ್ಲಿ ಮುಂದಿಟ್ಟು ಜನರ ... ತ್ಸುಗೆಯನ್ನು ಅವರು ಪಡೆಯುತ್ತ... ದ್ದಾರೆ. ಅಲ್ಲಲ್ಲಿ ಅಭಿಮಾನಶಾಲಿಗಳಾದ ... ವು ಕನ್ನಡಿಗರು ಕನ್ನಡದ ಹಕ್ಕುಗಳ ... ಹೋರಾಟ ದಿಮ್ಮಿಂದ ಹಿಡಿಯುತ್ತಿದ್ದಾರೆ

× × × ×

ಲೇಖಕರ ವಾಚಕರ ವೃತ್ತಿ

... ಶಾಲ ಅರ್ಥದಲ್ಲಿ ಸಾಹಿತ್ಯವೆಂಬುದು ... ದೃಷ್ಟಿಯಿಂದ ಲೇಖಕರ ಹಾಗೂ ... ಕರ ನಡುವಿನ ಕೊಡಕೊಳ್ಳುವ ವಸ್ತು. ಲೇಖಕರು ವಿವಿಧ ರೂಪಗಳಲ್ಲಿ ಸಾಹಿತ್ಯವನ್ನು ವಾಚಕರಿಗೆ ಕೊಡುವರು.

ಇನ್ನು ನಮ್ಮ ವಾಚಕರನ್ನು ಪರೀಕ್ಷಿಸಿದರೆ ಅಲ್ಲಿಯೂ ಇಷ್ಟವಾದ ವೃತ್ತಿ ಕಂಡು ಬರುವುದಿಲ್ಲ, ಪುಸ್ತಕ, ವೃತ್ತಪತ್ರ ಇವುಗಳ ಬಗ್ಗೆ ನಮ್ಮ ನೀತಿಯು ಬಹಳ ನಿಂದಾಸ್ಪದವಿದೆ, ಪುಸ್ತಕಕೊಳ್ಳಬಾರದು, ಕೊಂಡು ಓದಬಾರದು, ಓದಿದರೆ ನೆನಸಿಡಬಾರದು. ಕಡತಂದ ಪುಸ್ತಕ ಹಿಂದೆ ಕೊಡಬಾರದು. ತಂದ ಪುಸ್ತಕ ವ್ಯವಸ್ಥೆಯಿಂದ ಇಡಬಾರದು, ಈ ನೀತಿಗಳನ್ನು ಅನುಸರಿಸುವವರೇ ಬಹಳ! ಈಗ ಮನೆಮನೆ ಮಾರಾಟಕ್ಕೆ ಪುಸ್ತಕಗಳು ಬರುವದನ್ನು ಕಂಡು ವಾಚಕರು ಕಾಯಿಪಲ್ಲೆಯಂತೆ ಅದರ ಧಾರಣಿ ಕೇಳಲು ಪ್ರಾರಂಭಿಸಿದ್ದಾರೆ. ವೃತ್ತಪತ್ರ ವಾಚಕರ ಗತಿಯೂ ಇದೇ. 'ನಿಮ್ಮಲ್ಲಿ ವೃತ್ತಪತ್ರಬರುತ್ತಿದೆಯೇ' ಎಂದು ಕೇಳಿದರೆ, ನಮ್ಮ ಓಣಿಯಲ್ಲ ಬರುತ್ತಿದೆ ಎಂದು ಹೇಳುವವರು ಅನೇಕರು ಸಿಗುವರು ವೃತ್ತಪತ್ರವೆಂಬುದೊಂದು ತಾವು ಸ್ವತಃ ಕೊಂಡು ಓದತಕ್ಕ ವಿಷಯ ಎಂಬುದನ್ನು ನಮ್ಮವರು ಇನ್ನೂ ಅರಿತುಕೊಂಡಿಲ್ಲ. ಇಂಗ್ಲಂಡ, ಅಮೇರಿಕಾ ಮುಂತಾದ ದೇಶಗಳಲ್ಲಿ ನಾವು ನೋಡಿದರೆ ಕೂಲಿಕಾರರ ವೃತ್ತಿಯ ಗಂಡಹೆಂಡರು ಕೂಡ ಪ್ರತ್ಯೇಕ ಪತ್ರಗಳನ್ನು ಕೊಂಡು ಓದುವ ಪರಿವಾರವಿದೆ ಕೊಳ್ಳದೆ ಇದ್ದಬಗ್ಗೆ ಈಗ ನಮ್ಮಲ್ಲಿ ಸ್ವಲ್ಪ ನಾಚಲಾರಂಭಿಸಿದ್ದಾರೆ ಇದೇ ಒಳ್ಳೇ ಲಕ್ಷಣವೆಂದು ಹೇಳಬೇಕು

ವಿಮರ್ಶಕರು

ಲೇಖಕರು, ವಾಚಕರು ಇವರ ನಡುವೆ ವಿಮರ್ಶಕರದೊಂದು ವರ್ಗವಿದೆ. ಸಾಹಿತ್ಯದಲ್ಲಿಯ ಒಳಿತು ಕೆಡಕುಗಳನ್ನು ಹುಡುಕಿ, ನಿಷ್ಪಕ್ಷಪಾತವಾಗಿ ಮುಂದಿಡುವವರಿವರು ನಮ್ಮಲ್ಲಿ ಈ ವಿಮರ್ಶಕಲೆಯು ಇನ್ನೂ ಅಷ್ಟೊಂದು ವಿಕಸಿತವಾಗಿಲ್ಲ ಇನ್ನೂ 'ಅಹೋರೂಪ ಮಹೋಧ್ವನಿ' ಯಂಥ ವಿಮರ್ಶೆಯೇ ನಮ್ಮಲ್ಲಿ ಬಹಳವಿದೆ. ಇಲ್ಲದ ಗುಣಗಳ ಆರೋಪ, ಇದ್ದ ದೋಷಗಳ ಅನಾವಿಷ್ಕರಣ, ಇವೇ ಮುಖ್ಯವಾಗಿ ಈಗಿನ ವಿಮರ್ಶೆಯಲ್ಲಿ ಕಂಡುಬರುವವು. ಮೊದಮೊದಲೇನೋ ಇದು ಅವಶ್ಯಕವಾಗಿರಬಹುದು ಆದರೆ ಈಗ ವಿಮರ್ಶಕರು ಹೆಚ್ಚು ದಾಕ್ಷಿಣ್ಯರಹಿತವಾಗಿರಲಿಕ್ಕೇಬೇಕು ಇದರಲ್ಲಿ ಇನ್ನೊಂದು ಭಯವಿದೆ. ಪುಸ್ತಕಗಳೇ ವಿಮರ್ಶೆಗೆ ಬಾರದೆ ಹೋಗಬಹುದು. ಕೊಂಡಾದರೂ ಇಂಥ ವಿಮರ್ಶೆಮಾಡುವ ಧೈರ್ಯದಿಂದ ನಿಜವಾದ ವಿಮರ್ಶಕರು ಮುಂದೆ ಸಾಗಲಿಕ್ಕೆಬೇಕು. ಯಾವದೊಂದು ಪುಸ್ತಕದ ಧ್ಯೇಯ ಉದ್ದೇಶಗಳೇನು, ಅವೆಷ್ಟರ ಮಟ್ಟಿಗೆ ಸಾಧಿಸಿವೆ, ಲೇಖಕನ ಯೋಗ್ಯತೆಯೇನಿದೆ, ವಿಷಯಪ್ರತಿಪಾದನವು ಹೇಗಿದೆ, ಶೈಲಿ, ಪುಸ್ತಕದ ಅಚ್ಚು, ಬೆಲೆ ಇತ್ಯಾದಿ ಸರ್ವ ವಿಷಯಗಳನ್ನು ಕೇವಲ ನಿಷ್ಪಕ್ಷಪಾತದಿಂದ ಸಮಾಜ ಹಿತದೃಷ್ಟಿಯಿಂದ ಅಭ್ಯಸಿಸಿ ಬರೆಯುವ ವಿಮರ್ಶಕರು ನಮಗೀಗ ಬೇಕಾಗಿದ್ದಾರೆ ಸಾಹಿತ್ಯ ಸೃಷ್ಟಿಯಲ್ಲಿ ವಿಮರ್ಶಕನ ಸ್ಥಾನವು ಬಹಳ ಮಹತ್ವದ್ದಿದೆ

× × × ×

ನಾವೆಲ್ಲರೂ ಕನ್ನಡನುಡಿಯ ಸೇವಕರು ಅದರ ಬೆಳವಣಿಗೆ ಆಗುವಂತೆ ಪರಿಶ್ರಮಿಸೋಣ ಅದರ ಬೆಳಕು ಬೀರುವಂತೆ ನಡೆಯೋಣ ಅದರ ಕೀರ್ತಿದಿಗಂತವಾಗುವಂತೆ ಪ್ರಯತ್ನಿಸೋಣ.

ಯಾವ ಪುಸ್ತಕ ಬೇಕಾದರೂ
ನವಭಾರತ ಬುಕ್ ಡಿಪ್ಪೊ, ಉಡುಪಿ

ಕಾಂಗ್ರೆಸ್ ಕಮಿಟಿಗಳ ಪುನರ್ಘಟನೆ

ಈಗಾಗಲೇ ಪ್ರಾ. ಕಾಂ. ಕಮಿಟಿಯ ಚುನಾವಣೆಗಳು ಮುಗಿದು ಇದೇ ಜಾನೇವರಿ ೨..ನೇ ತಾರೀಕಿನ ದಿವಸ ಸೇರಲಿರುವ ಪ್ರಾ. ಕಾ. ಕಮಿಟಿಯ ವಾರ್ಷಿಕ ಸಭೆಯಲ್ಲಿ ಅಧಿಕಾರಿ ವರ್ಗದ ಚುನಾವಣೆ ಹಾಗೂ ಲೆಖ್ಖಪತ್ರಗಳ ಮಂಜೂರಿಯಾಗಲಿರುವದು ಇದೇ ವೇಳೆಗೆ ಪ್ರಾಂತದಲ್ಲಿಯ, ಜಿಲ್ಲಾ, ತಾಲೂಕ-ಹಳ್ಳಿ—ಗ್ರೂಪ ಮುಂತಾದ ಎಲ್ಲಾ ಅಧೀನ ಕಮಿಟಿಗಳ ಪುನರ್ಘಟನೆಮಾಡಲೂ ಆಗಬೇಕಾಗುವದು. ಈ ಸಂಬಂಧ ತಾ ೧೫—೧೨—೩೮ನೇ ದಿವಸ ಸೇರಿದ ಪ್ರಾಂತಿಕ ಕಾಂಗ್ರೆಸ್ ಕಾರ್ಯಕಾರಿ ಮಂಡಲದವರು ಈ ಕೆಳಗಿನ ಗೊತ್ತುವಳಿಯನ್ನು ಪಾಸುಮಾಡಿದ್ದು, ಅಧೀನ ಕಮಿಟಿಗಳ ಗಮನವನ್ನು ಇದರ ಕಡೆಗೆ ಎಳೆಯಲಾಗಿದೆ

ಅಧೀನ ಕಮಿಟಿಗಳ ಪುನರ್ಘಟನೆ—ಪ್ರಾಂತದಲ್ಲಿಯ, ಹಳ್ಳಿ, ಗ್ರೂಪ, ತಾಲೂಕು, ಜಿಲ್ಲಾ ಮುಂತಾದ ಎಲ್ಲಾ ಅಧೀನ ಕಾಂಗ್ರೆಸ್ ಕಮಿಟಿಗಳೂ ಜನವರಿ (೧೯೩೯) ೨೫ನೇ ತಾರೀಕಿನೊಳಗಾಗಿ ಸಂಬಂಧಿಸಿದ ವಾರ್ಷಿಕ ಚುನಾವಣೆಗಳನ್ನು ನಡಿಸಿ ೧೯೩೯ನೇ ಫೆಬ್ರುವರಿ ೧೫ನೇ ತಾರೀಕಿನೊಳಗಾಗಿ ಕಮಿಟಿಗಳ ವಾರ್ಷಿಕ ಸಭೆಯನ್ನು ಕರೆದು ಹೊಸ ಅಧಿಕಾರಿ ವರ್ಗವನ್ನು ಸ್ಥಾಪಿಸಬೇಕೆಂದು ಈ ಸಭೆಯು ನಿರ್ಧರಿಸುತ್ತದೆ. ಜಿಲ್ಲೆಯ ಪರಿಸ್ಥಿತಿ ಹಾಗು ಈ ನಿಯಮಕ್ಕನುಸರಿಸಿ ಜಿ. ಕಾ. ಕ.ಗಳು ಈ ಬಗ್ಗೆ ಕಾರ್ಯಕ್ಕೆ ಕೊಳ್ಳಬೇಕು.

ಇದರ ಮೇರೆಗೆ ತಾ ೨೫-೧-೩೯ರೊಳಗಾಗಿ ಜಿಲ್ಲಾ ಮತ್ತು ತಾಲೂಕು ಕಮಿಟಿಗಳ—ಸದಸ್ಯರ ಚುನಾವಣೆ ಕೆಲಸವು ಮುಗಿಯಬೇಕು, ಮುಂದೆ ಈ ಸದಸ್ಯರು ವಾರ್ಷಿಕ ಸಭೆಯನ್ನು ಫೆಬ್ರುವರಿ ೧೫ರೊಳಗಾಗಿ ಕರೆದು ಅಧಿಕಾರಿ ವರ್ಗದ ಚುನಾವಣೆಯನ್ನು ಮಾಡಬೇಕು, ತಾಲೂಕ—ಗ್ರೂಪ ಮತ್ತು ಹಳ್ಳಿ ಕಮಿಟಿಗಳ ಪುನರ್ಘಟನೆ ಮತ್ತು ಅಧಿಕಾರಿ ವರ್ಗದ ಚುನಾವಣೆಯು ಮುಗಿಯಲೇಬೇಕು.

ಈ ಸಂದರ್ಭದಲ್ಲಿ ತಾಲೂಕು ಅಥವಾ ಬೇರೆ ಅಧೀನ ಕಮಿಟಿಗಳು ತಮಗೆ ಅನುಕೂಲವಾದ ಸ್ಥಳದಲ್ಲಿ ತಾ. ೧೫-೨-೩೯ರೊಳಗಾಗಿ ಮುಗಿಯುವಂತೆ ಸಭೆಗಳನ್ನು ಕರೆಯಬಹುದು. ಈ ಸಂಬಂಧ ಅವಶ್ಯವಿದ್ದ ಸೇವಾಗಳನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಮಾಡಬೇಕು

ಹೊಸದಾಗಿ ವಾರ್ಷಿಕ ಸಭೆಯಲ್ಲಿ ಎಲ್ಲಾ ಕಮಿಟಿಗಳು ತಮ್ಮ ವಾರ್ಷಿಕ ವರದಿ ಪರಿಶೋಧಿಸಲ್ಪಟ್ಟ ಲೆಖ್ಖಪತ್ರ ಮತ್ತು ಮುಂದಿನ ವರ್ಷದ ಅಂದಾಜು ಪತ್ರಿಕೆ ಇವಲ್ಲವುಗಳನ್ನು ಸಿದ್ಧಪಡಿಸಿ ಆ ಸಭೆಯ ಮಂಜೂರಾತಿಯನ್ನು ಪಡೆದುಕೊಳ್ಳಬೇಕು.

ಈ ಪ್ರಕಾರ ಆರಿಸಲ್ಪಟ್ಟ ಕಮಿಟಿಗಳ ಹೊಸ ಅಧಿಕಾರಿ ವರ್ಗದ ಹೆಸರುಗಳನ್ನು ಪುನರ್ಘಟನೆ ಮಾಡಲ್ಪಟ್ಟ ಕಮಿಟಿಗಳ ಹೆಸರುಗಳನ್ನು ಮತ್ತು ಲೆಖ್ಖಪತ್ರ ಹಾಗೂ ಅಂದಾಜು ಪತ್ರಿಕೆಗಳನ್ನು ತಾ. ೨೫-೨-೩೯ರೊಳಗಾಗಿ ನಮ್ಮ ಕಛೇರಿಗೆ ತಲುಪುವಂತೆ ಕಳಿಸಿಕೊಡಬೇಕು. ಅಂದರೆ ಈ ಎಲ್ಲಾ ಮಾಹಿತಿಯನ್ನು ನಮ್ಮ ಕಮಿಟಿಯಿಂದ ಹೊರಡುವ "ಪ್ರಕಟಣೆ"ಯೊಳಗೆ ಹಾಕಲು ಅನುಕೂಲವಾಗುವದು.

ಧಾರವಾಡ ೧೪-೧-೩೯ } ಗುದ್ಲೆಪ್ಪ ಹಳ್ಳಿಕೇರಿ, ಪ್ರ. ಕಾರ್ಯದರ್ಶಿ ಕ. ಪ್ರಾಂ. ಕಾ. ಕಮಿಟಿ.

ರೂ. 1—8—0ಕ್ಕೆ 3 ವಾಚುಗಳು ಮತ್ತು 495 ಮನೋಹರ ವಸ್ತುಗಳು.



ನಮ್ಮ ರೂ 1–8–0 ಕ್ರಯದ 16 ಸಣ್ಣ ಸೀಸೆ "ಒಟೋರೋಸ"ನ್ನು ಕೊಂಡುಕೊಳ್ಳುವವರಿಗೆ ಒಂದು ಬಂಗಾರದ ಡಬ್ಬಿ ... ಪೌಂಟರ್ ಪೇಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿ ಕಡ್ಡಿಯ ಕೇಸು, ಒಂದು ಸಿಗರೇಟುಲೈಟು, ಒಂದು ಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ್ ಸ್ಕ್ರೂ, ೫೦೦ ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರೆಂಟಿಯಿರುವ ಭದ್ರ ಮೆಶಿನರಿಯುಳ್ಳ ಗಡಿಯಾರ, ಒಂದು ಫೌಂಟನ್ ಪೇನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 14 ಆಣೆ ಹೆಚ್ಚಿಗೆ.

Oriental Fancy Stores, S. C. E 90.
Post Box. No. 12204, **CALCUTTA.**

ಕೂದಲು
ಬೆಳ್ಳಗಾಗುವುದನ್ನು ನಿಲ್ಲಿಸಿರಿ.
ನಮ್ಮ ಎಣ್ಣೆಯ ಲೇಪನದಿಂದ ಎಂತಹ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ಮಟ್ಟು ವಾಪಾಸು ಕೊಡಲು ಗ್ಯಾರೆಂಟಿ ಎಂಬುದಕ್ಕೆ ದೊರೆತ ಸೂಚನಾ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ 5 0 0 ಪೂರ್ತಿ ಕಪ್ಪು ಮಿಶ್ರಿತ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ 7 0 0 ಬೆಲೆಯ ಎಣ್ಣೆ ಬೇಕಾಗುವದು. ಪತ್ರವ್ಯವಹಾರ ಇಂಗ್ಲೀಷಿನಲ್ಲೇ

HAZRA & Co.,
P. O. Bihar Nursery (DARBHANGA)

ಎಲ್ಲಾ ತರದ
ಶುದ್ಧ ಖಾದಿ
ಮಂಗಳೂರು
ಸ್ವದೇಶಿ ಸ್ಟೋರ್ಸ್,
ರಥಬೀದಿ — — ಮಂಗಳೂರು
ಅಖಿಲ ಭಾರತ ಚರಕಾ ಸಂಘದಿಂದ
ಸರ್ಟಿಫೈ ಮಾಡಲ್ಪಟ್ಟಿದೆ.



ಸರಿಯಾದ ಸಮಯವನ್ನು ಸೂಚಿಸುತ್ತಕ್ಕ ಅತ್ಯಾಧುನಿಕ ಲಿವರ್ ರಿಸ್ಟ್ ವಾಚಿಗೆ ... ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ. 2-8-0, ಅತ್ಯುತ್ತಮದಕ್ಕೆ ರೂ 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ 4-8-0, ರೋಲ್ಡ್ ಗೋಲ್ಡಿಗೆ ರೂ.6-8-0, ಚಿತ್ರದಲ್ಲಿ ತೋರುವಂತಹದಕ್ಕೆ ರೂ. 8-8 0 ಅಂಚೆ ವೆಚ್ಚ 0-10-0 ಪ್ರತ್ಯೇಕ.

Empress Trading Co.,
P.O. Box No. 6744 Calcutta

ಈ ವಾರದ ನಿಮ್ಮ ಭವಿಷ್ಯ

ತಾ 26—1—39ರಿಂದ 2—2—39ರ ವರೆಗೆ

[ಜ್ಯೋತಿಷವ ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಿನ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

ಮೇಷ, ಸಿಂಹ, ತುಲಾ, ಮಕರ ಈ ರಾಶಿಯವರಿಗೀವಾರವು ಅತ್ಯುತ್ತಮವಿರುವುದು. ಮಿಥುನರಾಶಿಯವರಿಗೆ ಮಧ್ಯಮವಾಗಿರುವುದು. ವೃಷಭ, ಕನ್ಯಾ, ವೃಶ್ಚಿಕ, ಧನು, ಕುಂಭ, ಮೀನ ರಾಶಿಗಳವರಿಗೆ ಕನಿಷ್ಟತರಗತಿಯಲ್ಲಿರುವುದು. ಕರ್ಕಾಟಕ ರಾಶಿಯವರಿಗೆ ಬಹಳ ಕಷ್ಟವಿರುವುದು.

ಮೇಷರಾಶಿ—

ಗ್ರಹಸ್ಥಿತಿಯು ಹೆಚ್ಚಿನಮಟ್ಟಿಗೆ ಅನುಕೂಲವಿರುವುದರಿಂದ ವಿರೋಧಿಗಳ ಪೀಡೆಯಿಂದ ಪಾರಾಗಿ ಸ್ವಕಾರ್ಯವನ್ನು ಕೊನೆಗೊಳಿಸಲು ಸಾಕಷ್ಟು ಅನುಕೂಲಗಳು ಒದಗುವವು. ಹಣದ ತಾಪತ್ರಯಗಳೆಂದೆಲ್ಲ ಒಮ್ಮೆಗೆ ಪಾರಾಗಿ ಕೈಯಲ್ಲಿ ನಾಲ್ಕು ಕಾಸು ಉಳಿದೀತು. ಗೃಹಸ್ಥರಿಗೂ ಕಾಮಿಗಳಿಗೂ ವನಿತಾ ಸಂಬಂಧದಲ್ಲಿ ವಿದ್ಯಮಾನಗಳು ಬಹ್ವಂಶ ಅನುಕೂಲವಾಗಿರುವುವು. ಆದರೂ ಕೂಡ ವಿಳಂಬವರೆಸಿಯೂ ವ್ಯಯಗತನಿರುವುದರಿಂದ ಧನವಿಷಯದಲ್ಲಿ ನೀವೆಷ್ಟು ಮಿತವಾಗಿ ವ್ಯಯಿಸಬೇಕೆಂದಿದ್ದರೂ ಅದು ಸಾಧ್ಯವಾಗುವಂತಿಲ್ಲ. ಭಾರ್ಯೋಪಯೋಗವಾಗಲಿ ಯಾ ಅವಳೊಡನೆ ಕಲಹವಾಗಲೀ ಯಾವಾಗಲೂ ತಪ್ಪದು. ರಾಜಕೀಯಭಾಗದಲ್ಲಿ ಭಯವೂ ದೇಹಾಲಸ್ಯವೂ ಪೂರ್ತಿಯಾಗಿ ನಿವೃತ್ತಿಯಾಗಲಾರದು. ತಾ. 28, 29 ಮತ್ತು 1, 2 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಮತ್ತು ಹೆಚ್ಚಿನ ಇಷ್ಟಾರ್ಥಗಳು ಕೈಗೂಡುವವು.

ವೃಷಭರಾಶಿ—

ಯಾವ ಭಾಗದಲ್ಲೇ ಆಗಲೀ ಎಷ್ಟು ಸಿಕ್ಕಿದರೂ ಕೂಡ ನಿಮಗೆ ತೃಪ್ತಿಯಿಲ್ಲವು. ಯಾವಾಗಲೂ ಅಸಂತೃಪ್ತಿಯೇ ನಿಮ್ಮನ್ನಾವರಿಸಿರುವುದು ಇದು ನಿಮ್ಮ ಹುಟ್ಟುಗುಣ. ಆತ್ಮೀಯರಿಗಿಂತಲೂ ನಿಮ್ಮ ದೃಷ್ಟಿಯು ಯಾವಾಗಲೂ ಪರಕೀಯರಲ್ಲಿ ಹೆಚ್ಚಾಗಿ ನೆಟ್ಟಿರುವುದು. ಏಕೆನ್ನಿ ಮಿತ್ರದಿಂದಲೇ ನಿಮಗೆ ಧನಪ್ರಾಪ್ತಿಯ ಯೋಗವು ಕಂಡುಬರುತ್ತದೆ. ಆದರದು ಬಹಳ ಹಾನಿಕಾರಕವಾದುದು. ಯಾಕೆಂದರೆ "ಉತ್ತಮಂ ಸ್ವಾರ್ಜಿತಂ ವಿತ್ತಂ ಮಧ್ಯಮಂ ಪಿತುರಾರ್ಜಿತಂ। ಅಧಮಂ ಭ್ರಾತೃವಿತ್ತಂ ಚ ಸ್ತ್ರೀವಿತ್ತ ಮಧಮಾಧಮಂ" ತನ್ನ ಸಂಪಾದಿಸಿದ ಹಣವು ಉತ್ತಮವಾದುದು. ಪಿತ್ರಾರ್ಜಿತವು ಮಧ್ಯಮವು ಅಣ್ಣ ತಮ್ಮಂದಿರಿಂದ ಸಿಕ್ಕಿದುದು ಅಧಮವಾದುದು. ಸ್ತ್ರೀ ಮೂಲಕ ಲಭಿಸಿದ ಧನವು ಅಧಮಾಧಮವೆಂದು. ಖರ್ಚಿನ ಮಾರ್ಗಗಳು ಅಧಿಕವಾಗಿ ಮನೋರೋಗಕ್ಕೆ ಕಾರಣಗಳಾದ ಅನೇಕ ಕಾರ್ಯಗಳು ಘಟಿಸುವವು. ಆರೋಗ್ಯವೂ ತೃಪ್ತಿಕರವಾಗಿರದು. ತಾ. 26, 27 ಮತ್ತು 30, 31 ಈ ದಿನಗಳಲ್ಲಿ ನಾನಾವಿಧಲಾಭ ಮಿತ್ರಸಮಾಗಮಗಳುಂಟಾಗುವವು.

ಮಿಥುನರಾಶಿಫಲ—

ಹಿಂದಿಗಿಂತ ಈಗೀಗ ನಿಮ್ಮ ಭವಿಷ್ಯವು ಎಷ್ಟೋ ಸುಧಾರಣೆ ಹೊಂದುತ್ತ ಬಂದಿರುವುದು. ದಾಯಾದಿಗಳಲ್ಲಿನ ಮನಃಕ್ಲೇಶವು ರಾಜಿಯಿಂದ ತೀರ್ಮಾನವಾಗುವುದು ಮಾತ್ರವಲ್ಲದೆ ವಿಶಕ್ಷದವರೂ ಕೂಡ ಬಹಳ ಕಡಿಮೆಯಾಗುವರು. ಕಾರ್ಯಗಳಲ್ಲಿ ಸಾಕಷ್ಟು ಧನವೂ ಧಾನ್ಯವೂ ಸಿಗುವವು. ಆದರೂ ಸ್ತ್ರೀಯರಿಂದ ನಿಮಗೆ ಹೆಚ್ಚಾದ ಅನಿಷ್ಟಗಳು ಬರಲಿವೆ. ಅವರಲ್ಲಿ ಹೆಚ್ಚಾಗಿ ಸ್ವಸ್ತ್ರೀಯರು ನಿಮಗೆ ಸರ್ವಕಾರ್ಯದಲ್ಲಿ ಪ್ರತಿಕೂಲರಾಗಿ ವರ್ತಿಸುವುದು ನಿಮ್ಮ ಪ್ರಗತಿಗೆ ಬಹಳ ಹಾನಿಕಾರಕವಾಗಿದೆ. ತಾಪದಾಯಕವಾದ ಜ್ವರದಿಂದಾಗಿ ಆರೋಗ್ಯವೂ ಕೆಡುವುದು. ಮನಸ್ಸು ಭಯದಿಂದ ಬಹಳ ಕಾತರಗೊಳ್ಳುವುದು. ಸ್ವಕೀಯ ದುಶ್ಚರಿತ್ರ್ಯದಿಂದಾಗಿ ಕೆಲವಂಶ ಧನವು ವ್ಯರ್ಥವ್ಯಯವಾಗುವುದಲ್ಲದೆ ಅಪಕೀರ್ತಿಗೂ ಪಾತ್ರರಾಗುವಿರಿ. ವಿದ್ಯಾಭಿಲಾಷಿಗಳು ಅಧ್ಯಯನದಲ್ಲಿ ಬಹಳ ಶ್ರಮವಹಿಸಿ ಕೆಲಸಮಾಡಬೇಕಾಗುವುದು. ತಾ. 30, 31 ಈ ದಿನಗಳು ಬಹಳ ಅನಿಷ್ಟಕಾರಿಗಳಾಗಿರುವುದರಿಂದ ತದ್ದಿನಗಳಲ್ಲಿ ದೇಹಾರೋಗ್ಯವು ವಿಶೇಷವಾಗಿ ಕೆಡುವುದಲ್ಲದೆ ನಿಮ್ಮ ಶಕ್ತಿಯನ್ನತಿಕ್ರಮಿಸಿ ಧನವ್ಯಯವಾಗಲಿದೆ.

ಕರ್ಕಾಟಕರಾಶಿ—

ಸದ್ಯದ ಗ್ರಹಸ್ಥಿತಿಯು ಬಹಳ ಕೆಟ್ಟಿರುವುದು. ಆವನೊಬ್ಬ ಗ್ರಹನೂ ಯೋಗ್ಯಸ್ಥಾನವನ್ನಾಕ್ರಮಿಸಿಲ್ಲವು. ಆದಕಾರಣ ನಿಮ್ಮ ವಿರೋಧಿಗಳಿಂದ ದುರ್ಜನರಿಗೆ ತಕ್ಕ ಪ್ರತಿಕ್ರಿಯೆಯನ್ನು ಮಾಡುವುದರಿಂದಲೇ ಅವರನ್ನು ಶಾಂತಗೊಳಿಸಬೇಕಲ್ಲದೆ ಅವರಿಗೆ ಉಪಕಾರವನ್ನು ಮಾಡೋಣದರಿಂದ ಸರ್ಪಕ್ಕೆ ಹಾಲೆರೆಯಲು ಅದು ಹೇಗೆ ವಿಷವೃದ್ಧಿಗೆನೇ ಕಾರಣವಾಗುವುದೋ ಅಂತೆಯೇ ಶತ್ರುಗಳೂ ಮತ್ತಷ್ಟು ಪ್ರಬಲರಾಗಿ ಹೆಚ್ಚಾಗಿ ಪೀಡಿಸುವರು. ಪ್ರಯಾಣದ ಸಲುವಾಗಿ ಹೆಚ್ಚಿನ ಧನವ್ಯಯವಾಗುವುದು. ಸ್ವಗ್ರಾಮದ ಜನರಿಂದಲೇ ಅನೇಕ ಪ್ರತಿಕ್ರಿಯೆಗಳು ಜರಗುವವು. ಅನೇಕಾನೇಕ ಕಾರ್ಯಗಳಲ್ಲಿ ಪರಾಭವವೇ ದೊರೆಯುವವು. ಶರೀರವು ವಿಶೇಷವಾದ ರೋಗಪೀಡೆಗೆ ಸಿಲುಕಿ ಬಹಳ ತ್ರಾಸಹೊಂದುವುದು. ಎಲ್ಲಾ ಭಾಗಗಳಲ್ಲೂ ಹೆಚ್ಚಿನ ಶೋಕಕ್ಕೆ ಪಾತ್ರರಾಗುವಿರಿ. ಧನಾಗಮದ ಮಾರ್ಗಗಳು ಕಡಿಮೆಯಾಗಿ ಸರ್ವತ್ರ ಧನವ್ಯಯವೇ ತೋರುವುದರಿಂದ ಆರ್ಥಿಕ ಮುಗ್ಗಟ್ಟಿಗೆ ಬಲಿಯಾಗುವಿರಿ. ವಾರದ ಆದ್ಯಂತ ಭಾಗಗಳಂತೂ ವಿಶೇಷ ಹಾನಿಕಾರಕಗಳಾಗಿವೆ.

ಸಿಂಹರಾಶಿ—

ಅನೇಕ ವಿಷಯಗಳಲ್ಲಿ ನಿಮಗೀ ವಾರವು ಇಷ್ಟದಾಯಕವಾಗಿರುವುದು. ಪ್ರತಿಕೂಲವರ್ತಿಗಳಾದ ಒಂದೆರಡು ಗ್ರಹರಿಂದಾಗಿ ಪುತ್ರಕಳತ್ರರಲ್ಲಿ ಪರಸ್ಪರ ಅಭಿಪ್ರಾಯಭೇದವುಂಟಾಗಿ ಜಗಳವಾಗುವ ಪ್ರಸಕ್ತಿ ಬಂದೀತು. ಮತ್ತು ಹೊಸತಾಗಿ ಪರಿಚಿತರಾದ ಜನರ ಸಂಸರ್ಗದಿಂದ ಕೆಲವು ಅನಿಷ್ಟಗಳು ಸಂಭವಿಸುವವು. ಹಿಂದಿನ ಮನೋರೋಗಗಳೆಲ್ಲ ಹೆಚ್ಚಿನಂಶ ನಿವೃತ್ತಿ ಹೊಂದಿ ಅಪಘಾತದೊಂದು ಸ್ಥಾನವನ್ನಾಕ್ರಮಿಸಿ ಉದ್ಯೋಗಶೀಲರಾಗುವಿರಿ. ಆರೋಗ್ಯವೂ ಕೂಡ ಉತ್ತಮ ಪರಿಸ್ಥಿತಿಗೆ ಬರುವುದು. ಕಾರ್ಯಗಳಲ್ಲಿ ಹೆಚ್ಚಾಗಿ ಜಯಶೀಲರಾಗುವಿರಿ. ಬಂಧುಗಳೂ ಮಿತ್ರರೂ ಸಕಲ ಭಾಗದಲ್ಲೂ ಸಾಧ್ಯವಿದ್ದಷ್ಟು ನೆರವಾಗುವರು. ನಿಮ್ಮ ವಾಕ್ಚಾತುರ್ಯದಿಂದಲೂ ಬುದ್ಧಿ ಕೌಶಲದಿಂದಲೂ ಕೂಡ ಹತ್ತು ಜನರಿಂದ ಮಾನಾದರವನ್ನು ಹೊಂದಲು ಸಮರ್ಥರಾಗುವಿರಿ. ಶತ್ರುಜನರನ್ನೂ ಕೂಡ ಉಪಾಯದಿಂದ ನಿಮ್ಮವರನ್ನಾಗಿ ಮಾಡಿಕೊಳ್ಳುವಿರಿ. ವಾರಾದಿಯ ನಾಲ್ಕು ದಿನಗಳು ನಿಮಗೆ ಅಷ್ಟೇನು ಅನುಕೂಲವಾಗಿಲ್ಲದಿದ್ದರೂ ಮೇಲಿನ ದಿನಗಳಲ್ಲಿ ಮಹಾಸುಖ ಇಷ್ಟಸಿದ್ಧಿಗಳು ಸಂಭವಿಸುವವು—

ಕನ್ಯಾರಾಶಿ—

ಹಲವು ಸಮಯದಿಂದ ನಿಮ್ಮ ಗ್ರಹಚಾರವು ಕೆಟ್ಟಿದ್ದು ಇತ್ತೀಚೆಗೆ ಸ್ವಲ್ಪ ಮಟ್ಟಿಗೆ ಸುಧಾರಿಸುತ್ತಾ ಬಂದಿದೆ. ನಿರುದ್ಯೋಗವೆಂಬ ಸಮಸ್ಯೆಯಿಂದ ಬಿಡುಗಡೆ ಹೊಂದುವಿರಿ. ಮಿತ್ರರ ಸಹಾಯವೂ ಪುತ್ರರ ಬೆಂಬಲವೂ ಅನುಕೂಲವಾಗಿರುವುದರಿಂದ ಕೆಲವು ಭಾಗಗಳಲ್ಲಿ ಧನಲಾಭವೂ ಸುಖಪ್ರಾಪ್ತಿಯೂ ಆಗುವುದು. ಆದರೂ ವಿರೋಧಿಗಳು ನಿಮ್ಮ ಮನೋರಥಕ್ಕೆ ಹಲವು ತರದಿಂದ ಭಂಗವನ್ನು ತರುವರು. ನೀವು ಕೆಲವು ಕಾರ್ಯಗಳನ್ನು ಆತ್ಮೀಯ ಫಲಪ್ರಾಪ್ತಿಗೋಸ್ಕರ ಮಾಡಿ ತದ್ವಿಪರೀತವಾದ ಫಲವನ್ನು ಪಡೆಯುವಿರಿ. ಇವರಲ್ಲಿ ನಿಮಗೆ ನಿಮ್ಮ ವಿಪಕ್ಷೀಯರ ಕೈವಾಡವೇ ಸ್ಪಷ್ಟವಾಗಿ ತೋರಿ ಬರುವುದರಿಂದ ದ್ವೈವವನ್ನು ಹಳಿಯಬೇಕಾಗಿಲ್ಲ. ಕೆಲವೊಮ್ಮೆ ಸ್ವಕಾರ್ಯಸಾಧನೆಗಾಗಿ ದೈನ್ಯಭಾವವನ್ನು ತಳೆಯಬೇಕಾದ ಪ್ರಸಕ್ತಿಯೂ ಬರುವುದು. ಸಂಸಾರದಲ್ಲಿ ಮನಃಕ್ಲೇಶಗಳು ಅಧಿಕಾಧಿಕವಾಗುವುವು. ಶರೀರಸುಖವೂ ಕಡಿಮೆಯಾಗುವುದು. ತಾ. 28ರಿಂದ 31ರ ವರೆಗೂ ರಾಜಭಯ, ಆಯಾಸ, ಅಪಮೃತ್ಯುವೇ ಮೊದಲಾದ ಅನಿಷ್ಟಗಳು ಸಂಭವಿಸುವುದರಿಂದ ಬಹಳ ಜಾಗ್ರತೆಯಿಂದ ವರ್ತಿಸತಕ್ಕದ್ದು.

ತುಲಾರಾಶಿ—

ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಉತ್ತಮತರಗತಿಗೆ ಬರುವುದು. ರವಿಕುಜರೇನೋ ಸ್ಥಾನಭೇದದಿಂದ ಸ್ವಲ್ಪ ಮಟ್ಟಿಗೆ ಕೆಟ್ಟಿರುವರು. ಆದಕಾರಣ ರಾಜಕೀಯರಂಗದಲ್ಲಿ ವಿಶೇಷ ಜಾಗ್ರತೆಯಿಂದ ಕಾರ್ಯನಿರ್ವಹಿಸಿರಿ. ಮತ್ತು ಮಾನಕ್ಕೆ ಬಹು ಭಾಗಗಳಲ್ಲಿ ಹಾನಿ ತಪ್ಪಲಾರದು. ಅಲ್ಲದೆ ಶರೀರದಲ್ಲಿ ಉಷ್ಣ ಮತ್ತು ಪಿತ್ಥ ವಿಶೇಷದಿಂದ ಕೆಲವು ರೋಗಗಳು ತಲದೋರುವವು. ಸಾಂಪತ್ತಿಕ ಸ್ಥಿತಿಯು ಬಹಳ ಸುಧಾರಣೆ ಹೊಂದಿರುವುದು. ಖರ್ಚಿನ ಮಾರ್ಗಗಳು ಬಹು ಕಡಿಮೆಯಾಗಿರುವುದರಿಂದ ಪ್ರಕೃತಕ್ಕೆ ನಿಮ್ಮನ್ನು ಧನಿಗಳೆನ್ನಬಹುದು. ಪರಭೃತ್ಯಾದಿ ಪರಿಜನರಿಂದೊಡಗೂಡಿದ ಸಂಸಾರದಲ್ಲಿ ಚಿಂತೆಗಾಸ್ಪದವಿಲ್ಲವು. ಕೆಲವೊಮ್ಮೆ ಮನಸ್ಸಾಕ್ಷಿಗೆ ವಿರೋಧವಾಗಿ ಕೆಲಸಮಾಡಿ ಅಧಿಕಾರಿಗಳ ಪ್ರಕೋಪಕ್ಕೂ ವಿರೋಧಿಗಳ ಬಲೆಗೂ ಸಿಲುಕಬೇಕಾಗುವ ಪ್ರಸಂಗ ಬರುವುದು. ಆದಕಾರಣ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿರಿ. ಸ್ತ್ರೀವಿಷಯಕವಾದ ಸುಖಕ್ಕಾವ ಹಾನಿಯೂ ಆಗುವಂತಿಲ್ಲ. ತಾ. 26ರಿಂದ 29ರ ವರೆಗಿನ ದಿನಗಳು ಅನುಕೂಲವಿರುವುದರಿಂದ ಸ್ತ್ರೀಸಹಿತ ದ್ರವ್ಯಲಾಭ ವಾಹನಾದಿಗಳ ಯಾನಮಾನಗಳನ್ನು ಹೊಂದುವಿರಿ.

ವೃಶ್ಚಿಕರಾಶಿ—

ಅಲ್ಪಸಂತುಷ್ಟರಾದ ನಿಮಗೆ ಈ ವಾರವು ಹಾನಿಕಾರಕವಾಗಿಲ್ಲವು. ನಿಮ್ಮ ಕಾರ್ಯಗಳನ್ನು ಶತ್ರುಗಳು ತಮ್ಮ ಕಪಟೋಪಾಯದಿಂದ ಅನ್ಯಥಾ ಮಾಡಿದರೂ ನಿಮಗೆ ನಷ್ಟವು ಆಗಲಾರದು. ಎಣಿತ್ರವಲ್ಲ ಲಾಭದ ಪ್ರಸಕ್ತಿಯೇ ಇರುವುದು. ಹೆಚ್ಚಾಗಿ ಸ್ತ್ರೀಯರೊಡನೆ ಕಲಹವಾಗುವುದು. ಆತ್ಮೀಯರು ಬಂಧುಗಳು ಇತ್ಯಾದಿ ಅಭಿಮಾನದಿಂದ ಯಾವ ಕಾರ್ಯದಲ್ಲೂ ಇನ್ನೊಬ್ಬರ ಮೇಲೆ ಭರವಸೆಯಿಟ್ಟು ಕಾರ್ಯವನ್ನು ನಿರ್ವಹಿಸಲು ಯತ್ನಿಸಬೇಡಿ. "ಕೆಟ್ಟ ವೇಳೆ ಬುದ್ಧಿ ಬಂತು, ಆಟ್ಟ ವೇಳೆ ಒಲೆ ಉರಿಯಿತು" ಎಂಬ ಗಾದೆಯ ಅರ್ಥವನ್ನು ಸ್ವಾನುಭವದಿಂದ ತಿಳಿಯಬೇಕಾದ ಸಂದರ್ಭ ಬಂದೀತು. ಜಾಗ್ರತೆ. ಪಶ್ಚಾತ್ತಾಪೇನ ಬುಧ್ಯತಿ" ಎಂದಂತೆ ಆಮೇಲೆ ಏನುಮಾಡಲೂ ಸಾಧ್ಯವಿಲ್ಲ. ವ್ಯಾಪಾರಾದಿ ವಾಣಿಜ್ಯವೃತ್ತಿಯಲ್ಲಿ ತೃಪ್ತಿಕರವಾದ ಲಾಭವು ನಿಮಗೆ ದೊರೆಯುವುದು. ಅನಾಯಾಸವಾಗಿ ಕೆಲವು ವಸ್ತುಗಳು ತಾವಾಗಿಯೇ ನಿಮ್ಮ ಕೈಸೇರುವವು. ವಾರದ ಆದ್ಯಂತ ಭಾಗಗಳು ಹೆಚ್ಚಿನ ಹಾನಿದಾಯಕಗಳಾಗಿರುವುದರಿಂದ ಪುತ್ರಭೃತ್ಯರಲ್ಲಿ ಕಲಹವಾದೀತು. ಅನೇಕ ಕಾರ್ಯಗಳು ವ್ಯರ್ಥವಾಗಿ ಹೋಗುವವು. ಶೋಕವು ಅಧಿಕವಾಗುವದು.

ಧನುರಾಶಿ—

ಹೆಚ್ಚಿನ ಗ್ರಹರ ಪ್ರತಿಕೂಲ ದೃಷ್ಟಿಯು ನಿಮ್ಮ ಮೇಲೆ ಬಿದ್ದಿರುವುದು. ಆದಕಾರಣ ಯಾವ ಕಾರ್ಯವನ್ನು ಆರಂಭಿಸಲೂ ಸಾಧಿಸಲೂ ಬೇಕಾದ ಶಕ್ತಿಯಾಗಲಿ ಯುಕ್ತಿಯಾಗಲಿ ನಿಮ್ಮಲ್ಲಿಲ್ಲವು. ಇದಕ್ಕೆ ನಿಮ್ಮ ಮನಶ್ಚಾಂಚಲ್ಯವೇ ಮುಖ್ಯ ಕಾರಣವಾಗಿರುವುದು. ಆತ್ಮವಿಶ್ವಾಸವು ನಿಮ್ಮಲ್ಲಿ ಸ್ವಲ್ಪವೂ ಉಳಿಯಲಾರದು. ಈ ಹಿಂದೆ ನೀವು ಸಂಗ್ರಹಿಸಿದ ಹಣವೂ ಕೂಡ ನಾನಾರೀತಿಯಿಂದ ವ್ಯಯವಾಗುವುದು ಮಾತ್ರವಲ್ಲ ಕಡಿಮೆಯಾದುದಕ್ಕೆ ಸಾಲಮಾಡಬೇಕಾದ ಪ್ರಸಕ್ತಿಯೂ ಬರುವುದು. ಶರೀರದಲ್ಲಿ ಒಂದಲ್ಲೊಂದು ತರಹದ ಕಾಯಿಲೆಯು ವೇದನೆಯು ನಿಮ್ಮನ್ನು ಸರ್ವದಾ ಪೀಡಿಸುತ್ತಿರುವುದು. ಸ್ತ್ರೀಭಾವಕವಾಗಿ ನಿಮ್ಮ ಮಾತಿನಲ್ಲಿಂತಹ ನೈಷ್ಠುರ್ಯವೇ ಹೆಚ್ಚಿನವರಲ್ಲಿ ಕಲಹಕ್ಕೆ ಕಾರಣವಾಗುವುದು. ಅದರಲ್ಲೂ ಸ್ತ್ರೀಯರೊಡನೆ ವ್ಯವಹಾರಮಾಡುವಾಗ ಹೆಚ್ಚಿನ ಜಾಗ್ರತೆ ವಹಿಸಿರಿ. ನಿಶ್ಚಯವಾಗಿಯೂ ಕಲಹದ ಸಂಭವವಿದೆ. ಜನಸಾಮಾನ್ಯರಿಂದ ತಿರಸ್ಕಾರವೇ ನಿಮಗೆ ಪುರಸ್ಕಾರವಾಗಿ ದೊರೆಯುವುದು. ಸಾಂಪತ್ತಿಕ ತಾಪತ್ರಯಗಳಿಂದ ಮುಕ್ತರಾಗುವಿರಿ. ವಾರದ ಅಂತ್ಯಾರ್ಧವು ಸ್ವಲ್ಪಮಟ್ಟಿಗೆ ಅನುಕೂಲವಿರುವುದರಿಂದ ಶತ್ರುನಾಶ ಆದರಿಂದಾಗಿ ಮನಸ್ಸಿಗೆ ನೆಮ್ಮದಿ ಕೆಲವಂಶ ಸುಖಗಳು ದೊರೆಯುವುವು.

ಮಕರರಾಶಿ—

ಪ್ರಕೃತ ನಿಮ್ಮ ಅದೃಷ್ಟಚಕ್ರವು ಬಹಳ ಉತ್ತಮದೆಡೆಗೆ ಬಂದುನಿಂತಿರುವುದು. ಆದಕಾರಣವೇ 'ಉದ್ಯೋಗಂ ಪುರುಷ ಲಕ್ಷಣಂ' ಎಂದಂತೆ ಪುರುಷ ಲಕ್ಷಣ ರೂಪವಾದ ಉದ್ಯೋಗದಲ್ಲಿ ಪ್ರವೃತ್ತರಾಗಿರಿ. ಖಂಡಿತವಾಗಿಯೂ ನೀವು

ಪುಟ ೧೩ಕ್ಕೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ ,, ,, 0—1—3
೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ ,, 0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅನೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ರೋಗಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-4-0.

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸಹಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ. ಬೆಲೆ: 0-8-0 ಮತ್ತು ರೂ. 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:—ಕುಂದಾಪುರ-ಕಾಮತ್ಸ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ—ಜಿ ಕೃಷ್ಣ ಕಾರಂತರು, ಆಯುರ್ವೇದೀಯ ಔಷಧಗಳ ಏಜೆಂಟರು, ಕಾರ್ಕಳ—ವಿ. ವಿ. ಶೆಣೈ-ಕೆಮಿಸ್ಟ್, ಕಾಸರಗೋಡು—ಭಕ್ತಾ ಬ್ರದರ್ಸ ಮತ್ತು ಶ್ರೀರಾಮ ಸ್ಟೇಶನರಿ ಹೌಸ್, ಪುತ್ತೂರು—ಬಿ. ಪಾಂಡುರಂಗ ಗೋವಿಂದ ಭಂಡಾರಿ ಮತ್ತು ಪೈ ಡಿಸ್ಪೆನ್ಸರಿ, ಮುಲ್ಕಿ—ಬಿ. ಎಸ್ ಸೀತಾರಾಮ ಶ್ಯಾನುಭೋಗ್, ಜನರಲ್ ಮರ್ಚೆಂಟ್ಸ್, ಮೂಡಬಿದ್ರೆ—ಸಂಜೀವ ಶೇಷಗಿರಿ ಪ್ರಭು ಬ್ರದರ್ಸ್, ಬಂಟ್ವಾಳ—ಪ್ರಭು ಅಂಡ್ ಕೋ, ಉಡುಪಿ—ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ದಾಡ ಮತ್ತು ಬಾಡಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, -- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ಪಿತವಾದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1 ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು— ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager. ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ.)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು, ಇದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2—8—0.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ.
ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] # ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಸಾದಾ ದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, MANGALORE.

೧೯೩೯ ಫೆಬ್ರವರಿಯಲ್ಲಿ ಪ್ರಕಟವಾಗಲಿರುವ ಎರಡು ಹೊಸ ಪುಸ್ತಕಗಳು

ಕರಿ ನೀರು ದೇ. ಭ. ಬ್ಯಾರಿಸ್ಟರ ಸಾವರಕರರಿಂದ ಬರೆಯಲ್ಪಟ್ಟ ರಮ್ಯ-ಭೀಷಣ ರೋಮಾಂಚಕರ ಪುಸ್ತಕದ ಕನ್ನಡ ಅನುವಾದ. ಸುಮಾರು ೪೦೦ ಪುಟ, ನುಣುಪು ಕಾಗದ. ಬೆಲೆ ಎರಡು ರೂಪಾಯಿ

ಪನ್ನೆ ಮನೋಹರವಾದ ಐತಿಹಾಸಿಕ ನಾಟಕ ಸುಮಾರು ೮೦ ಪುಟ, ಬೆಲೆ ೬ ಆಣೆ ಶ್ರೀ ಶೇ. ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ ಸೌಲಭ್ಯ. ಗ್ರಾಹಕರು ತ್ವರೆಮಾಡಿರಿ

ವಿಳಾಸ:—ಶ್ರೀ ಶೇಷಾಚಲ ಪ್ರೆಸ್, ಪೋ ಆನಂದವನ (ಹಾವೇರಿ) ಧಾರವಾಡ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸಿನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ. [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವುದು.
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,

ಸೋದೆ ಮಠದ ಲೇನು — — — ಉಡುಪಿ, ದ. ಕ.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

ಶ್ರೀ ಪಾರ್ಶ್ವನಾಥ ಸ್ವಾಮಿ

ಪಂಚಕಲ್ಯಾಣ ಪೂಜಾ ಮಹೋತ್ಸವ

ವೇಣೂರು, 1939.

ತೋರಣ ಮುಹೂರ್ತ	ನವಸ್ತ್ರಾಷ್ಟಕ ಕುಂಭಾಭಿಷೇಕ	ತೋರಣ ವಿಸರ್ಜನ
25—1—1939	4 2—1939 ಮಾಘ ಶು ೧೫ ಶನಿವಾರ.	6—2—1939

೩೦ ೧ ೩೯ ಗರ್ಭಾವತರಣ ಕಲ್ಯಾಣ ೧೦೮ ಕುಂಭಾಭಿಷೇಕ ಮಹೋತ್ಸವ ೩೧-೧-೩೯ ಜನ್ಮಾಭಿಷೇಕ ಕಲ್ಯಾಣ ೨೧೬ ಕುಂಭಾಭಿಷೇಕಮಹೋತ್ಸವ
೧-೨-೩೯ ಪರಿನಿಷ್ಕ್ರಮಣ ಕಲ್ಯಾಣ ೩೨೪ ಕುಂಭಾಭಿಷೇಕ ಮಹೋತ್ಸವ ೨ ೨-೩೯ ಕೇವಲ ಜ್ಞಾನ ಕಲ್ಯಾಣ ೪೩೨ ಕುಂಭಾಭಿಷೇಕ ಮಹೋತ್ಸವ.
೩—೨-೩೯ ನಿರ್ವಾಣ ಕಲ್ಯಾಣ ೫೦೪ ಕುಂಭಾಭಿಷೇಕ ಮಹೋತ್ಸವ.

ಶ್ರೀ ಗೋಮಟೇಶ್ವರ ಸ್ವಾಮಿ ಸನ್ನಿಧಿಯಲ್ಲಿ
೧೦೮ ಕುಂಭಾಭಿಷೇಕ ಮಹೋತ್ಸವ.

ವೇಣೂರು [illegible] ಪ್ರಸಿದ್ಧವಾದ ಈ ಸ್ಥಳವು ಪ್ರಕೃತಿಸೌಂದರ್ಯದಿಂದ ಮನೋಹರವಾಗಿದೆ ಇಲ್ಲಿ 36 [illegible] ಇಲ್ಲಿಯ ಶ್ರೀಪಾರ್ಶ್ವನಾಥಸ್ವಾಮಿ ಬಸದಿಯನ್ನು ಮೂಡಬಿದ್ರೆಯ [illegible] ವರು ಸಹಸ್ರಾರು ರೂಪಾಯಿ ಖರ್ಚುಮಾಡಿ ಜೀರ್ಣೋದ್ಧಾರ ಮಾಡಿಸಿ ಪಂಚಕಲ್ಯಾಣ ಪೂಜಾ ಮಹೋತ್ಸವ [illegible] ಬರುವ ಯಾತ್ರಿಕರಿಗೆ ಉತ್ತಮ ವ್ಯವಸ್ಥೆಗೊಳಿಸಲಾಗಿದೆ
ಯಾತ್ರಿಕರಿಗೆ [illegible] ಸ್ಥಳದಲ್ಲಿ ಸ್ಪೆಶಲು ಸರ್ವೀಸು ಬಾಲು ಮಾಡುವ ಯೋಗ್ಯ ವ್ಯವಸ್ಥೆ ಮಾಡಲಾಗುವುದು

JOINT MANAGERS

The Joint Booking Office KODIALBAIL, Mangalore	The Combined Booking Agency, MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ ದೊರಕುವುದು.

ವಾರ್ಷಿಕ ಚಂದಾ ರೂ ೩ ೦ ೦ ಬಿಡಿ ಪ್ರತಿ ೦ ೧ ೦

ಮ್ಯಾನೇಜರ್ ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸ್ವಸ್ತಿ ಏಜೆನ್ಸಿ (ಬೇಂಕರ್ಸ್) ಲಿಮಿಟೆಡ್

ಉಡುಪಿ

Authorised & Issued Capital	Rs 1 00000
Subscribed & Paid up „	Rs 30,760
Reserves	Rs 1,070

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

3ರಿಂದ	6	ತಿಂಗಳ ವರೆಗೆ	4 ಸಕೆ
7 „	11	„	5 „
12 „	18	„	6 „

ಎರಡು ವರ್ಷ ಯಾ ಅದಕ್ಕಿಂತ ಹೆಚ್ಚಿನ ಡಿಪಾಜಿಟುಗಳು ರಿಯಾಯಿತಿ
ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?

ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಎಸ್ ಯು ಪಣಿಯಾಡಿ,

Registered No M. 3618



The Canara Industrial & Banking Syndicate, Limited.

(INCORPORATED IN BRITISH INDIA)

ESTD. 1925

Head Office:- UDIPI, S. India.

MEMBER:

RESERVE BANK OF INDIA, BANKERS' CLEARING HOUSE, BOMBAY.

SEASON DEPOSITS MATURING BETWEEN 30th JUNE AND 15th JULY 1939 ARE ACCEPTED at 3½ per cent per annum.

Banking business of every description transacted on sound lines.

Particulars on application to any of

our 35 Branches.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಬಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅನ್ಯತ್ರ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು,

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಕಲಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಕಾಂತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: MANGALORE

BRANCHES: Udipi, Coondapoor, Kaup & Karkal.

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months } Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] H. O. UDIPI. [1920

BRANCHES:

MANGALORE, KATAPADI, and KANHANGAD.

(UNDER SECTION 37)

NOTICE is hereby given that the Register of members and of transfers of shares of the above Bank will be closed from Monday 13th February 1939 to Wednesday 1st March 1939, both days inclusive.

Office of the Bank. } P. Lakshman Nayak

ESTD 1921
FOUNDER
Sri. A B SHETTY, M.L.A.
Parliamentary Secretary Govt of Madras
ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ

NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೨-೨-೧೯೩೯ | Vol XVIII
ಸಂಚಿಕೆ ೨೨ | Udipi, Thursday 2-2-1939 | No. 22

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩-೪-೦
೬ ತಿಂಗಳಿಗೆ ರೂ. ೧-೧೦-೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ. ಪಿ. ಕ್ರಮವನ್ನು ನಿಲ್ಲಿಸಲಾಗಿದೆ.

ಪ್ರಿನ್ಸ್ ಆಫ್ ವೇಲ್ಸ್ ಗಾಂಧಿಜಿ ಮಾತುಕತೆಗೆ ತಡೆ

ಇಂಗ್ಲೆಂಡಿನ ಮಾಜಿ ಚಕ್ರವರ್ತಿಗಳಾದ 8ನೇ ಎಡ್ವರ್ಡರು ಪ್ರಿನ್ಸ್ ಆಫ್ ವೇಲ್ಸ್ ಆಗಿದ್ದಾಗ ಹಿಂದೂದೇಶವನ್ನು ಸಂದರ್ಶಿಸಿದಾಗ ಕಾಂಗ್ರೆಸಿನವರು ಅವರ ಸಂದರ್ಶನವನ್ನು ನಿಷೇಧಿಸಿ ದೇಶದಲ್ಲೆಲ್ಲಾ ಹರತಾಳ ನಡೆಸಿದ್ದು ತಪ್ಪೆ. ಈ ಸಂದರ್ಭದಲ್ಲಿ ಎಡ್ವರ್ಡರು ತನ್ನಿಚ್ಛೆಯಂತೆ ನಡೆಯುವಂತಾಗಿದ್ದಾರೆ. ಇಂಗ್ಲೆಂಡಿಗೆ ದೊಡ್ಡ ಅನಾಹುತ ಸ್ವರೂಪವಾದ ಕಾಯಿದೆ ಭಂಗ ಚಳವಳಿಯು ಹಿಂದೂದೇಶದಲ್ಲಿ ಹೂಡಲ್ಪಡದಿದ್ದಿತ್ತೆಂದು ಪ್ರಖ್ಯಾತ ಆಂಗ್ಲೇಯ ಗ್ರಂಥಕರ್ತರಾದ ಮಿ:ಸ್. ರೋಸಿಟ ಫೋರ್ಬ್ಸರು, ಹಿಂದೀ ರಾಜರುಗಳ ಕುರಿತು ಬರೆದಿರುವ ಪುಸ್ತಕವೊಂದರಲ್ಲಿ ಬಯಲು ಪಡಿಸಿರುತ್ತಾರೆ. ಈ ರಹಸ್ಯವನ್ನು ಹಿಂದೀ ಮಹಾರಾಜರೊಬ್ಬರು ಅವರಿಗೆ ತಿಳಿಸಿದರಂತೆ. ಆ ಕತೆಯು ಈ ಕೆಳಗಣಂತಿರುತ್ತದೆ: ಗಾಂಧಿಯವರು ಬಹಳ ವೃದ್ಧಿಮದ್ಧರ ಸ್ವಭಾವವುಳ್ಳವರೆಂಬುದನ್ನು ಪ್ರಿನ್ಸ್ ಆಫ್ ವೇಲ್ಸರು ತಿಳಿದುಕೊಂಡಿದ್ದರು. ತಾನು ಹಿಂದೂದೇಶವನ್ನು ಸಂದರ್ಶಿಸಲು ಸ್ಟೀಮರಿಂದ ಇಳಿಯುವ ಮೊದಲು ಗಾಂಧಿಯವರನ್ನೆ ಸ್ಟೀಮರಿನಲ್ಲಿ ಕಂಡು ಮಾತಾಡುವ ವ್ಯವಸ್ಥೆ ಮಾಡಬೇಕೆಂದು ಆಗಿನ ವೈಸರಾಯರಾದ ಲೋರ್ಡ್ ರೀಡಿಂಗರಿಗೆ ತಂತಿಕೊಟ್ಟರು. ಇದರಿಂದ ತಳಮಳಗೊಂಡ ಲೋರ್ಡ್ ರೀಡಿಂಗರು ಹಾಗೆ ಮಾಡುವುದು ಸರಿಯಲ್ಲೆಂದು ಪ್ರಿನ್ಸ್ ಆಫ್ ವೇಲ್ಸರಿಗೆ ತಿಳಿಸಿದರು. ಆದರೆ ತಾನು ಹಿಂದೂದೇಶಕ್ಕೆ ಇಳಿಯುವ ಮೊದಲು ಗಾಂಧಿಯವರನ್ನು ಕಂಡು ಮಾತಾಡಿಯೇ ತೀರಬೇಕೆಂದು

ಸಮಾಚಾರ ಸಂಗ್ರಹ

ಪ್ರಿನ್ಸ್ ಆಫ್ ವೇಲ್ಸರು ಛಲ ಹಿಡಿದರು. ಆವೇಳೆ ವೈಸರಾಯರು ಜೋರ್ಜ್ ಚಕ್ರವರ್ತಿಗಳಿಗೆ ಇದನ್ನು ತಿಳಿಸಿ ಅವರ ಮೂಲಕ ಪ್ರಿನ್ಸ್ ಆಫ್ ವೇಲ್ಸರು ತನ್ನ ಇಚ್ಛೆಯನ್ನು ನೆರವೇರಿಸದಂತೆ ತಡೆಮಾಡಿ ಹಾಕಿರಬೇಕು. ಅಂತೂ ಯುವರಾಜರು ಗಾಂಧಿಯವರನ್ನು ಕಾಣಲಿಲ್ಲ. ಅವರು ಹಿಂದೂದೇಶಕ್ಕೆ ಕಾಲಿಟ್ಟೊಡನೆಯೇ ಪ್ರಚಂಡ ಕಾಯಿದೆ ಭಂಗ ಚಳವಳಿ ಆರಂಭವಾಯಿತು. ಆವೇಳೆ ಮಿಸ್. ರೋಸಿಟಾ ಫೋರ್ಬ್ಸರು ಈ ಕುರಿತು ಗಾಂಧಿಜಿಯವರೊಡನೆ ಮಾತಾಡಿದಾಗ, ಯುವರಾಜರ ಆಮಂತ್ರಣವು ಅವರಿಗೆ ಬರುತ್ತಿದ್ದರೆ ಏನಾಗುತ್ತಿತ್ತೆಂದು ಪ್ರಶ್ನಿಸಿದರು. ಆವರನ್ನು ಸ್ಟೀಮರಿನಲ್ಲಿ ಮಾತ್ರ ಕಾಣುವ ಸಂಭವವು ಬಂದಿದ್ದಲ್ಲಿ ಯುವರಾಜರು ನನ್ನ ಅತಿಥಿಯಾಗಿ ಎತ್ತರದಲ್ಲಿ ... ನನ್ನ ... ನೆರವೇರಿಸಲು ಸಾಧ್ಯವಾಗುತ್ತಿತ್ತೆಂದು ಗಾಂಧಿಯವರು ಉತ್ತರಿಸಿದರು.

ಸಮುದ್ರಾಂತರ್ಗತ ಸುರಂಗ

ಇಂಗ್ಲೆಂಡು ಮತ್ತು ಫ್ರಾನ್ಸುಗಳ ನಡುವೆ ಇರುವ 32 ಮೈಲು ಅಗಲದ ಸಮುದ್ರಭಾಗದೊಳಗೆ ಸುರಂಗವನ್ನು ಕಟ್ಟಿ ಜೋಡಿಸುವ ಯೋಜನೆಯು ಹಲವು ವರ್ಷಗಳ ಮೊದಲೇ ನಡೆದಿದ್ದಿತು. ಈ ಸುರಂಗವು ... ಇಂಗ್ಲೆಂಡಿನ ಮೇಲೆ ಫ್ರಾನ್ಸ್ ದಾಳಿ ನಡಿಸಲು ಅನುಕೂಲವಾಗುವುದೆಂದು ಬ್ರಿಟಿಷ ಸರಕಾರವು ಬೆದರಿ ತಡೆ ಹಾಕಿದ್ದಿತು. ಈ ಭೀತಿಯು ಅರ್ಥರಹಿತವಾದುದೆಂದು ಈಗ ಸ್ಪಷ್ಟವಾಗಿದೆ. ಆದುದರಿಂದ ಪುನಃ ಈ ಜಲಸುರಂಗವನ್ನು ಕಟ್ಟುವ ಯೋಜನೆ ನಡೆದಿದೆ. ಈ ಸುರಂಗದಲ್ಲಿ ಎಂಟು ರೈಲ್ವೆ ಲೈನು ಮತ್ತು ಒಂದು ರಸ್ತೆಯು ಕಟ್ಟಲ್ಪಡುವುದು. ಸುರಂಗವನ್ನು ಕಟ್ಟಲು 300 ಅಡಿ ಆಳಕ್ಕೆ ಅಗೆದು ಕಂದಕ ಕಟ್ಟಬೇಕಾಗುವುದು. ಎಲ್ಲಾ ಕೆಲಸವನ್ನು ಸಂಪೂರ್ಣಗೊಳಿಸಲು 5 ವರ್ಷ ಹಿಡಿಯುವುದೆಂದೂ, ಒಟ್ಟು 2?,000,000 ಪವನು ವೆಚ್ಚ ತಾಗುವುದೆಂದೂ ಅಂದಾಜು ಮಾಡಲ್ಪಟ್ಟಿದೆ.

ಫ್ರಾನ್ಸಿಗೆ ಮುಸಲೋನಿಯವರ ಎಚ್ಚರಿಕೆ

ಜನವರಿ ತಾ. 30ರಲ್ಲಿ ಹಿಟ್ಲರರು ಮಾಡಿದ ಭಾಷಣದಲ್ಲಿ, ಈಗ ಫ್ರಾನ್ಸಿನ ಅಧೀನದಲ್ಲಿರುವ ಟ್ಯುನೀಸಿಯ, ಕಾರ್ಸಿಕ ಮೊದಲಾದ ಸ್ಥಳಗಳು ಇಟಲಿಗೆ ನ್ಯಾಯವಾಗಿ ಬಿಟ್ಟುಕೊಡತಕ್ಕವೆಂಬುದನ್ನು ಸಮರ್ಥಿಸಲಿದ್ದರು. ಅನಂತರ ಫೆಬ್ರವರಿ ತಾ. 4ರಲ್ಲಿ ಮುಸಲೋನಿಯವರು ಕೊಡುವ ಭಾಷಣದಲ್ಲಿ ಮೇಲಿನ ಸ್ಥಳಗಳನ್ನು ಸಂಧಾನದಿಂದ ಬಿಟ್ಟುಕೊಡದಿದ್ದಲ್ಲಿ ಸಂಗ್ರಾಮಕ್ಕೆ ಸಿದ್ಧವಿರಬೇಕೆಂದು ಎಚ್ಚರಿಸಲಿರುವರೆಂದೂ, ಈ ಬಗ್ಗೆ ಬೇಕಾದ ಸೈನ್ಯಸಿದ್ಧತೆಯೆಲ್ಲಾ ನಡೆದಿರುವುದೆಂದೂ ... ಲೇಖಕರಾದ ... ಟೇಬೂಯಿಯವರು ಸಂಡೇ ರಿಫರಿ ಎಂಬ ಪತ್ರಿಕೆಯಲ್ಲಿ ಬರೆದಿರುವರು. ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಮಿ. ಚೇಂಬರ್ಲೇನರೂ, ವಿದೇಶ ಮಂತ್ರಿ ಲಾರ್ಡ್ ಹೆಲಿಫೆಕ್ಸರೂ ರೋಮಿಗೆ ಹೋಗಿದ್ದಾಗ ಇಟಲಿಯ ವಿದೇಶ ಮಂತ್ರಿ ಕೌಂಟ್ ಸಿಯಾನೋರವರು ಈ ಕುರಿತು ಸೂಚನೆ ಕೊಟ್ಟಿರುವರಂತೆ. ಲೋರ್ಡ್ ಹೆಲಿಫೆಕ್ಸರಿಗೆ, ಇಟಲಿಯು ಜರ್ಮನಿಯಲ್ಲಿ ಇಸ್ಪೇನಿನಲ್ಲಿ ಸೇನಾಸಂಗ್ರಹ ಮಾಡಿರುವುದು ಹಿಟ್ಲರರು ತನ್ನ ಸೇನಾನಿಗಳೊಡನೆಲ್ಲಾ ಗುಪ್ತ ಮಾತುಕತೆ ನಡಿಸಿರುವರು. ಸ್ಪೈನಿನಲ್ಲಿ ಜನರಲ್ ಫ್ರೇಂಕೋರವರ ವಿಜಯವು ಗುರುತರ ಸಾಕ್ಷ್ಯ ಮುಸಲೋನಿಯವರು ಕಾಯುತ್ತಿರುವುದು. ಈಗ ಸ್ಪೈನಿನ ಎಲ್ಲಾ ... ಸ್ಪೈನಿಶ್ ಸರಕಾರದ ಸ್ವಾಧೀನದಲ್ಲಿದ್ದ ಬಾರ್ಸಿಲೋನವನ್ನು ಬಂಡಾಯಗಾರರು ಮುಖ್ಯವಾಗಿ ಇಟಲಿ ಮತ್ತು ಜರ್ಮನಿಯ ಸಹಾಯದಿಂದ ಗೆದ್ದಿರುವುದರಿಂದ ಜನರಲ್ ಫ್ರೇಂಕೋರವರು ಸಂಪೂರ್ಣ ಸ್ಪೈನನ್ನು ... ಸದ್ಯದಲ್ಲೇ ಮುಸಲೋನಿಯವರು ಭಾವಿಸಿಕೊಂಡಿರುವರು. ಸ್ಪೈನಿನ ಎಲ್ಲಿಯು ಸ್ಪೈನಿನ ಪ್ರದೇಶವೆಲ್ಲಾ ಈ ಜನರಲ್ ಫ್ರೇಂಕೋರವರ ವಶವಾಗಿದ್ದರೂ, ಜನರಲ್ ಫ್ರೇಂಕೋರವರ ಮತ್ತು ಇಟಲಿಯವರ ಸೈನಿಕರು ದಕ್ಷಿಣದಿಂದಲೂ ಫ್ರಾನ್ಸಿನ ಮೇಲೆ ಧಾಳಿ ನಡಿಸುವ ಸಿದ್ಧತೆ ನಡೆದಿದೆ. ಪೂರ್ವ ಮತ್ತು ಉತ್ತರಗಳಿಂದ ಇಟಲಿ ಮತ್ತು ಜರ್ಮನಿಗಳು ಫ್ರಾನ್ಸಿನ ಮೇಲೇರಿ ಹೋಗಲಿವೆ. ಹೀಗೆ ಫ್ರಾನ್ಸನ್ನು ಬಗ್ಗಬಡಿದು ತನ್ನ ಉದ್ದೇಶ ಸಾಧಿಸಿಕೊಳ್ಳಬೇಕೆಂದೇ ಮುಸಲೋನಿಯವರ ತಂತ್ರ. ಆದರೆ ಫ್ರಾನ್ಸು ಈ ಬೆದರಿಕೆಗಳಿಗೆ ಸೊಪ್ಪು ಹಾಕದೆ ಮುಂದಿನ ಯುದ್ಧವೆಂದರೆ ಭಯಪಡದೆ ನಿಶ್ಚಿಂತೆಯಿಂದಿದೆ. ಇಂಗ್ಲೆಂಡ ಮತ್ತು ... ರಷ್ಯವೂ ಅದಕ್ಕೆ ಬೆಂಬಲಿಗರಾಗಿರುವುದು. ಆದುದರಿಂದ ಮುಸಲೋನಿಯವರ ಯುದ್ಧಕ್ಕೆ ಸಿದ್ಧಗೊಂಡರೂ ಫ್ರಾನ್ಸ ಗದಗುಟ್ಟಿ ನಡುಗಿ ಮುಸಲೋನಿಯವರ ಬಗ್ಗೆ ನಡೆಯುವ ಹಾಗಿಲ್ಲ.

ಚೈಲಿಯಲ್ಲಿ ಭೀಕರ ಭೂಕಂಪ ೩೦,೦೦೦ ಮಂದಿ ಕೊಲ್ಲಲ್ಪಟ್ಟಿರುವರು

ಜನವರಿ ತಾ. 25ರಲ್ಲಿ ದಕ್ಷಿಣ ಅಮೇರಿಕದ ಚೈಲಿ ದೇಶದಲ್ಲಿ ಉಂಟಾದ ಭಯಂಕರ ಭೂಕಂಪದಿಂದ 30,000 ಮಂದಿ ಕೊಲ್ಲಲ್ಪಟ್ಟು 50,000 ಮಂದಿ ಗಾಯಗೊಂಡಿರುವರೆಂದು ಅಂದಾಜು ಮಾಡಲಾಗಿದೆ. ಚಿಲಾನ್ ಎಂಬ ಪಟ್ಟಣವು ಸಂಪೂರ್ಣ ನಾಶವಾಗಿ ಹೋಗಿದೆಯೆಂದು ... ಇದರಲ್ಲಿ ಕೇವಲ 1 ಮನೆಗಳು ಮಾತ್ರ ನಾಶವಾಗದೆ ಉಳಿದಿವೆ. ಇದರ 40,00

THE UDIPI BANK LTD.

ನಿರಖು ಠೇವಣಾತಿ (ಡಿಪ್ರೋಜಿಟು)ಗಳು
ಸಾ. ಶೇ. 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ
ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುತ್ತದಲ್ಲದೆ ಒಮ್ಮೆಗೆ ರೂ. 100-ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ರಾಜಕೋಟೆಯಲ್ಲಿ ಮುಖಂಡರ ದಸ್ತಗಿರಿ

ಬದುಕಿರುವರು. ಹಲವು ಹಳ್ಳಿಗಳಿಗೂ ಬಹಳ ಹಾವಳಿಯಾಗಿದೆ. ಒಟ್ಟು ನಷ್ಟವು ಒಂದೂವರೆ ಮಿಲ್ಯದಷ್ಟಾಗಬಹುದೆಂದು ನಂಬಲಾಗಿದೆ. ಭೂಕಂಪದ ಹಾವಳಿಯೊಂದಿಗೆ ಸಾಂಕ್ರಮಿಕ ರೋಗವು ಹಬ್ಬತೊಡಗಿ ಜನರು ಮತ್ತೂ ಕಂಗೆಡುವಂತಾಗಿದೆ. ಹಾಳಾದ ಪಟ್ಟಣ ಮತ್ತು ಹಳ್ಳಿ ಪ್ರದೇಶಗಳನ್ನು ಸರಿಪಡಿಸಲು 4ಮಿಲ್ಯ ಪವನುಗಳಷ್ಟರ ಸಾಲಪಡೆಯುವ ಆಲೋಚನೆ ನಡೆದಿದೆ

ಬರೋಡ ಸಂಸ್ಥಾನದಲ್ಲಿ ಗಲಾಟೆ

ಜನವರಿ ತಾ. 20ರಲ್ಲು ಸರ್ದಾರ್ ವಲ್ಲಭಾಯಿ ಪಟೇಲರು ಬರೋಡಕ್ಕೆ ಹೋಗಿ ವಿಜೃಂಭಣೆಯ ಸ್ವಾಗತ ಪಡೆದರು ಆದರೆ, ಆವರ ಮತ್ತು ಗುಜರಾಥಿಗಳ ವಿರೋಧವಾಗಿ ಮರಾಠಿಗಳು ಕ್ಷುದ್ರ ಅಪಪ್ರಚಾರದ ಪ್ರಕಟಣೆ ಹಂಚಿ ಸಂಜೆ ಸಾರ್ವಜನಿಕ ಸಭೆ ನಡೆದಾಗ ಸಭೆಯಲ್ಲಿ ಘಂಟಾಟಿಕೆ ನಡಿಸಿ, ಸಭಾ ವೇದಿಕೆಯ ಮೇಲೆ ಕಲ್ಲೆಸೆದು, ಗೇಟನ್ನು ಸುಟ್ಟುಹಾಕಿ, ಲೌಡ್ ಸ್ಪೀಕರನ್ನು ಮುರಿದುಹಾಕಿ ಗಲಾಟೆ ನಡಿಸಿ ಸಭೆ ನಡೆಯದಂತೆ ಮಾಡಿದರು. ಮರುದಿನ ಸಂಜೆ ಪುನಃ ಸಾರ್ವಜನಿಕ ಸಭೆ ನಡೆಯಿತು. ಸುಮಾರು 20,000 ಜನರು ನೆರೆದಿದ್ದರು. ಈ ಸಂದರ್ಭದಲ್ಲಿಯೂ ಮರಾಠಿ ಪುಂಡರು ಕೆಲವರು ಗಲಾಟೆ ಮಾಡಿ ಸಭೆ ನಡೆಯದಂತೆ ಮಾಡಲು ಸಿದ್ಧರಾಗಿ ಬಂದಿದ್ದರು, ಆದರೆ ಪೋಲೀಸರು ಅದನ್ನು ತಡೆಗಟ್ಟಿದರು. ಸಭೆ ನಡೆದ ನಂತರ ಈ ಪುಂಡರು, ಗಾಂಧಿಟೊಪ್ಪಿ ಇಟ್ಟುಕೊಂಡವರನ್ನೆಲ್ಲಾ ನಿಲ್ಲಿಸಿ ಅವರ ತಲೆಯಿಂದ ಟೊಪ್ಪಿ ತೆಗೆದು ಸುಟ್ಟುಹಾಕಿದರು, ಗುಜರಾಥಿ ಸ್ತ್ರೀಯರನ್ನೆಲ್ಲಾ ಬೈದು ಭಂಗಿಸಿ ಅವಮಾನಿಸಿದರು. ಈ ಗಲಾಟೆಯಲ್ಲಿ ಗಾಂಧಿಟೊಪ್ಪಿ ಇಟ್ಟುಕೊಂಡಿದ್ದ ಮರಾಠಿಯೊಬ್ಬನು ತಿವಿಯಲ್ಪಟ್ಟು ಮೃತನಾದನು. ಮರಾಠಿಗಳು ಇವನ ಶವವನ್ನು ಪೋಲೀಸರು ನಿಶ್ಚೈಸಿದ ದಾರಿ ಬಿಟ್ಟು ಇನ್ನೊಂದು ರಸ್ತೆಯಿಂದೊಯ್ದು ಗುಜರಾಥಿಗಳ ಮನೆಗಳೊಳಗೆ ಹೊಕ್ಕು ಗಲಾಟೆ ಮಾಡಿದರು. ಸರಕಾರವು ಈ ಗಲಾಟೆಯನ್ನಡಗಿಸಲು ಪ್ರಯತ್ನಿಸುತ್ತಿರುವುದು.

ರಾಜಕೋಟೆಯಲ್ಲಿ ದಬ್ಬಾಳಿಕೆ

ಮುಖಂಡರ ದಸ್ತಗಿರಿ

ರಾಜಕೋಟೆಯ ಪ್ರಜಾಮಂಡಲಿಯು ಸತ್ಯಾಗ್ರಹವನ್ನಾರಂಭಿಸಲು ನಿಶ್ಚಯಿಸಿರುವುದರಿಂದ, ಸರಕಾರವು ರಾಜಕೋಟೆಯಲ್ಲಿ

ಶ್ರೀ. ವಲ್ಲಭಾಯೀ ಪಟೇಲ್.

ಸಭೆ ಮೆರವಣಿಗೆಗಳನ್ನು ನಡಿಸದಂತೆ ನಿಷೇಧಿಸಿ 144 ಸೆಕ್ಷನ್ ಜ್ಯಾರಿಮಾಡಿರುವುದು. ಪ್ರಜಾ ಮಂಡಲಿಯ 19 ಜನ ಮುಖಂಡರು ದಸ್ತಗಿರಿ ಮಾಡಲ್ಪಟ್ಟಿರುವರು. 60 ವಾರಂಟುಗಳು ಜ್ಯಾರಿ ಮಾಡಲ್ಪಡಲಿವೆ. ಪೋಲೀಸರೂ ಸೈನಿಕರೂ ಪಟ್ಟಣದಲ್ಲೆಲ್ಲಾ ಬಂದೋಬಸ್ತು ನಡಿಸುತ್ತಿರುವರು. ಪ್ರಜಾಮಂಡಲಿಯವರು ಹೂಡಲಿರುವ ಸತ್ಯಾಗ್ರಹಕ್ಕೆ ಜನರು ಬೆಂಬಲ ಕೊಡದಂತೆ ನೋಡಬೇಕೆಂದು ಜನ ಪ್ರಮುಖರಿಗೆ ಎಚ್ಚರವೀಯಲಾಗಿದೆ ರಾಜಕೋಟೆಯ ಥಾಕೂರು ಸಾಹೇಬರು, ಪ್ರಜೆಗಳ ತೀವ್ರ ಚಳವಳದ ನಂತರ ಸರ್ದಾರ್ ವಲ್ಲಭಾಯಿಯವರೊಡನೆ ಸಂಧಿಮಾಡಿ, ಹೊಸತಾಗಿ ದಿವಾನರಾಗಿ ನೇಮಿಸಲ್ಪಟ್ಟ ಸರ್. ಪೇಟ್ರಿಕ್ ಕೇಡೆಲರನ್ನು ಕೆಲಸದಿಂದ ತೆಗೆದುಹಾಕಿ ರಾಜಕೀಯ ಸುಧಾರಣೆಯ ಕುರಿತು ವಿಚಾರಿಸಿ ವರದಿ ಒಪ್ಪಿಸಲು 10 ಮಂದಿಯ ಕಮಿಟಿಯೊಂದನ್ನು ನೇಮಿಸಲೊಪ್ಪಿದರು. ಈ ಮಂದಿಯಲ್ಲಿ 7 ಮಂದಿಯ ಹೆಸರನ್ನು ಸರ್ದಾರ್ ವಲ್ಲಭಾಯಿಯವರು ಸೂಚಿಸುವದೆಂದು ನಿರ್ಧಾರವಾಗಿದ್ದಿತು. ಆಮೇಲೆ ಈ ವಿಷಯದಲ್ಲಿ ರೆಸಿಡೆಂಟರಾದ ಮಿ. ಗಿಬ್ಸನರು ಆಕ್ಷೇಪವೆತ್ತಿ ಹೊರಗಣವರಾದ ಸರ್ದಾರ್ ವಲ್ಲಭಾಯಿಯವರ ಮಧ್ಯಸ್ಥಿಕೆಗೆ ಒಪ್ಪಿದುದು ತಪ್ಪೆಂದು ಸೂಚಿಸಿ ವಲ್ಲಭಾಯಿಯವರನ್ನು ಟೀಕಿಸಿದರು. ಇದರಿಂದಾಗಿ ರಾಜಕೋಟೆಯ ಥಾಕೂರು ಸಾಹೇಬರು ತಾನು ಸರ್ದಾರ್ ವಲ್ಲಭಾಯಿಯವರೊಡನೆ ಮಾಡಿದ ಸಂಧಿಯ ಶರ್ತಗಳಿಗೇನೇ ವಿರೋಧವಾಗಿ ನಡೆದು ಪ್ರಜಾ ಮಂಡಲಿಯವರು ಪುನಃ ಸತ್ಯಾಗ್ರಹ ಹೂಡಿದರೆ ಅದನ್ನಡಗಿಸಲು ಬೇಕಾದ ದಬ್ಬಾಳಿಕೆಯ ಶಾಸನಗಳನ್ನು ಮೊದಲೇ ತಯಾರಿಸಿಕೊಂಡಿರುವರು.

ತಿರುವಾಂಕೂರಿನ ಪರಿಸ್ಥಿತಿ

ತಿರುವಾಂಕೂರು ಸ್ಟೇಟ್ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯವರು ಜನವರಿ ತಾ. 21ರಲ್ಲು ಸಭೆಸೇರಿ, ತಮ್ಮ ಸಂಸ್ಥಾನದ ಪ್ರಕೃತ ದ ಪರಿಸ್ಥಿತಿಯನ್ನು ಪರಿಶೀಲಿಸಿ, ಸರಕಾರದ ಮುಂದೆ ತಮ್ಮ ಕೆಲವು ಕೇಳಿಕೆಗಳನ್ನಿಟ್ಟಿರುವರು. ಆ ಕುರಿತು ಸರಕಾರವು ತೃಪ್ತಿಕರವಾದ ಉತ್ತರವನ್ನೀಯದಿದ್ದಲ್ಲಿ ತಾ. 21ರಿಂದ 6 ಹಪ್ತೆಗಳೊಳಗೆ ತಿರುವಾಂಕೂರಿನಲ್ಲಿ ಪುನಃ ಸತ್ಯಾಗ್ರಹ ಮಾಡಲ್ಪಡುವುದು. ಈಗಣ ಪ್ರಜಾಪ್ರತಿನಿಧಿಗಳ ಚುನಾವಣೆಯ ಮತದಾನ ಕ್ರಮವನ್ನು ಪ್ರಾಯಸ್ಥರಿಗೆಲ್ಲಾ ಓಟಿನ ಹಕ್ಕು ಕೊಡಲ್ಪಡುವ ಸಂಪೂರ್ಣ ಜವಾಬ್ದಾರಿ ಸರಕಾರವು ಸ್ಥಾಪಿಸಲ್ಪಡುವವರೆಗೆ ಬದಲಾಯಿಸಬಾರದು. ಅದನ್ನು ಬದಲಾಯಿಸಲು ಕೆಲವರು ನಡಿಸುವ ಯತ್ನವು ನಿಷೇಧನೀಯವಿದೆ. ಹಾಗೆ ಮಾಡಲ್ಪಟ್ಟಲ್ಲಿ ತಿರುವಾಂಕೂರಿನಲ್ಲಿ ಪುನಃ ಜಾತೀಯ ವೈಷಮ್ಯ ಮೇಳುವುದು ನಿಶ್ಚಯ. ಆದುದರಿಂದ ಸ್ಟೇಟ್ ಕಾಂಗ್ರೆಸಿನವರು ಸತ್ಯಾಗ್ರಹ ಹೂಡಿಯಾದರೂ ಅಂತಹ ಪ್ರಯತ್ನವನ್ನು ವಿರೋಧಿಸಲಿರುವರು ಸರಕಾರವು ಜವಾಬ್ದಾರಿ ರಾಜ್ಯಭಾರವನ್ನೀಯುವ ವಿಷಯದಲ್ಲಿ ಈ ವರೆಗೂ ಮೌನ ತಾಳಿದೆ ಮಾತ್ರವಲ್ಲ ಸ್ಟೇಟ್ ಕಾಂಗ್ರೆಸಿನ ಸ್ವಯಂ ಸೇವಕರು ಮತ್ತು ಇತರರ ಕೇಸರಿಗಾರರೇ ಮೊದಲಾದ ಸುಮಾರು 300ಮಂದಿಯನ್ನು ಕೈದುಮಾಡಿ ದಂಡಿಸಿರುತ್ತದೆ. ಸಂಸ್ಥಾನದ ರಾಜಕೀಯ ಪರಿಸ್ಥಿತಿಯು ದಿನೇ ದಿನೇ ಕೆಡುತ್ತಾ ಹೋಗುತ್ತಿದೆ. ಆದುದರಿಂದ ಸ್ಟೇಟ್ ಕಾಂಗ್ರೆಸಿನವರು ಬೇಗನೆ ಸತ್ಯಾಗ್ರಹ ಹೂಡುವ ಆವಶ್ಯಕತೆ ಬಂದಿದೆ. ಹಾಗೆ ಹೂಡಲ್ಪಡುವ ಸತ್ಯಾಗ್ರಹವು ಮದ್ಯಪಾನ ಮತ್ತು ತಂಬಾಕು ನಿಷೇಧ, ಕೈಮಗ್ಗ ಕೈಗಾರಿಯ ಪ್ರೋತ್ಸಾಹ, ಉಪ್ಪಿನ ಮತ್ತು ಫೋರೆಸ್ಟ್ ಕಾನೂನು ಉಲ್ಲಂಘನೆ, ಟೋಲ್ ಗೇಟು, ಮಾರ್ಕೆಟು ಮತ್ತು ಭೂಕಂದಾಯ ನಿರಾಕರಣೆಯ ಸ್ವರೂಪ ತಾಳಲಿರುವುದು. ಸರಕಾರವು ಜವಾಬ್ದಾರಿ ರಾಜ್ಯಭಾರವನ್ನೀಯುವ ಏರ್ಪಾಡನ್ನು ಕೂಡಲೆ ಮಾಡಿ, ರಾಜಕೀಯ ಕೈದಿಗಳನ್ನೆಲ್ಲಾ ಬಿಟ್ಟು ಸ್ಟೇಟ ಕಾಂಗ್ರೆಸನ್ನು ಅಂಗೀಕರಿಸಿ ಗೋಳಿಬಾರು ಮೊದಲಾದ ಪೋಲೀಸ್ ಮತ್ತು ಸೈನಿಕರ ಅತ್ಯಾಚಾರದ ಕುರಿತು ವಿಚಾರಣೆ ನಡಿಸಿ, ಮಜೂರ ಮತ್ತು ವಿದ್ಯಾರ್ಥಿ ಮುಷ್ಕರಗಾರರ ಮೇಲೆ ನಡಿಸಲ್ಪಟ್ಟಿರುವ ಖಟ್ಲೆಗಳನ್ನು ಹಿಂತೆಗೆದ ಪಕ್ಷದಲ್ಲಿ ಸ್ಟೇಟ್ ಕಾಂಗ್ರೆಸಿನವರು ಸರಕಾರದೊಡನೆ ಸಹಕರಿಸಲು ಸಿದ್ಧರಿದ್ದಾರೆಂದು ಹೇಳಿಕೆಯನ್ನು ಹೊರಡಿಸಿರುವರು.

THE **Bombay Life**

ASSURANCE CO., LTD.

ಸ್ಥಾಪನೆ] [1908

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:
(1) ರಥಬೀದಿ, ಮಂಗಳೂರು.
(2) ಪುತಿಯಾರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು. (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, ಬೊಂಬೈ (ಫೋ. ನಂ. 26314)

ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು.
(6) ವಟ್ಟಪಾಳೆಂ, ದ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂಕೂರು.

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)

ರಿಜಿಸ್ಟ್ರಿಯಾದ ಆಫೀಸು: **ಉಡುಪಿ.**

ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.

ಸಮೃದ್ಧಿಯು ಸನ್ಮಾನದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	.... ರೂ.	**1,40,08,725**
ಪ್ರೀಮಿಯಂ ಆದಾಯ ಮೀರಿದುದು	.... ,,	**30,00,000**
ಒಟ್ಟು ಮೂಲ ಮಿಕ್ಕಿದುದು	.... ,,	**1,00,00,000**
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	**50,00,000**

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ **ಆಕರ್ಷಕ ಪ್ರತಿಫಲ.**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.



ಸರಿಯಾದ ಸಮಯವನ್ನು ಸೂಚಿಸತಕ್ಕ ಅತ್ಯಾಧುನಿಕ ಲಿವರ್ ರಿಸ್ಟ್‌ವಾಚಿಗೆ ಉರುಟು ಯಾ ಚಚ್ಚೌಕ ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ. 2-8-0, ಅತ್ಯುತ್ತಮದಕ್ಕೆ ರೂ. 3 0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ 4-8-0, ರೋಲ್ಡ್‌ಗೋಲ್ಡಿಗೆ ರೂ.6-8-0, ಚಿತ್ರದಲ್ಲಿ ತೋರುವಂತಹದಕ್ಕೆ ರೂ. 8-8-0. ಅಂಚೆ ವೆಚ್ಚ 0-10-0 ಪ್ರತ್ಯೇಕ.

Empress Trading Co.,
P.O. Box No. 6744, **Calcutta(G)**

ಬ್ರಿಟನ್ನಿನ ಆತ್ಮಸಮರ್ಪಣೆಯ ರಹಸ್ಯ

ಲೇಖಕರು:
ಶ್ರೀ. ಚಮನ್‌ಲಾಲ್, ಲಂಡನ್.

ಸತ್ಯವನ್ನು ಮರೆಮಾಡುವುದರಲ್ಲಿ ಬ್ರಿಟಿಷರು ಅಗ್ರಗಣ್ಯರು. ಬ್ರಿಟಿಷ್ ಪ್ರಧಾನರಾದ ಮಿ. ಚೇಂಬರ್ಲೇನರು ಶಾಂತಿಯ ದೇವತೆಯೆಂದು ಭಾವಿಸಿ ಅವರಿಗೆ ಅಮರತ್ವಪ್ರದಾನ ಮಾಡುವ ಪ್ರಯತ್ನ ನಡೆಯುತ್ತಿದೆ ನಾನು ಅವರಿಗೆ ವಿರೋಧಿಯೂ ಅಲ್ಲ ಅಥವಾ ಪ್ರತಿದ್ವಂದಿಯೂ ಅಲ್ಲ. ಆದರೂ ಬ್ರಿಟನ್ನು ಅಜೇಯವೆಂದು ಭಾವಿಸಿರುವ ನನ್ನ ದೇಶಬಾಂಧವರಿಗೆ ಸತ್ಯವು ತಿಳಿಯ್ಯಬೇಕೆಂಬುದೇ ನನ್ನ ಆಸೆ ಹಿಟ್ಲರನು ರಕ್ತಪಾತವಿಲ್ಲದೆ, ಒಂದೇ ಒಂದು ಗುಂಡಿನ ಶಬ್ದ ಸಹ ತೋರಿಸದೆ, ಬ್ರಿಟನ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಸಮ್ಮಿಳಿತ ಶಕ್ತಿಯನ್ನು ಮುರಿದನು, ಇದರಿಂದ ನಾನು ಬಂಡುಗಾರನೆಂದೂ; ಪಕ್ಷಪಾತಿಯೆಂದೂ ವಾಚಕರಿಗೆ ಶಂಕೆ ಇರಬಹುದು. ಆದುದರಿಂದ ಅತ್ಯಂತ ಪ್ರಮುಖ ಸಾಮ್ರಾಜ್ಯವಾದಿ "ಡೇಲಿ ಎಕ್ಸ್‌ಪ್ರೆಸ್" ಪತ್ರಿಕೆಯಿಂದ ಉದ್ಧರಿಸಿ, ನನ್ನ ವಾದವನ್ನು ಸಮರ್ಥಿಸುವೆನು. ಈ ಪತ್ರಿಕೆಯು ಮಿ. ಚೇಂಬರ್ಲೇನರ ನೀತಿಯನ್ನು ಸಮರ್ಥಿಸುವುದಲ್ಲದೆ ಜರ್ಮನಿಯ ಮಿತ್ರರೂ ಸಹ ಆಗಿರುವುದರಿಂದ ಅದರ ಮಾತುಗಳನ್ನು ಸ್ವಲ್ಪ ಕೊಡುತ್ತೇನೆ.

ನಾವು ಸಿದ್ಧರಿರಲಿಲ್ಲ

"ನಾವು ಯುದ್ಧಕ್ಕೆ ಸಿದ್ಧರಿದ್ದೆವೋ? ಖಂಡಿತವಾಗಿ ಇಲ್ಲ. ಬ್ರಿಟನ ನಾಗರಿಕರು ಇದನ್ನು ನಂಬುವುದಿಲ್ಲ ಮೊದಲು ನಾವು ನಮ್ಮ ವಾಯು ಯಾನ ವಿಧ್ವಂಸಕ ಗುಂಡುಗಳ (Anti Air Craft Guns) ವಿಚಾರವನ್ನೇ ತೆಗೆದುಕೊಂಡರೆ, ತಿಳಿಯುವುದೇನಂದರೆ, ಲಂಡನ್ನಿನ ರಕ್ಷಣೆಗೆಂದು ಇಟ್ಟಿರುವ ಈ ವಾಯು ಯಾನ ವಿಧ್ವಂಸಕ ಗುಂಡುಗಳೆಲ್ಲ ಮಹಾಯುದ್ಧಕ್ಕೆ ಮೊದಲಿನವು ಇವುಗಳಲ್ಲಿ ಆಧುನಿಕ ರೀತಿಯವು ಇಲ್ಲವೇ ಇಲ್ಲ. ಆಸ್ಟ್ರಿಯದಲ್ಲಿ ಸಂಕಟ ಪ್ರಾಪ್ತವಾದ ಸಮಯದಲ್ಲಿ ನಡೆದ ಒಂದು ಘಟನೆಯನ್ನು ಎಲ್ಲರೂ ಮರೆತಿರುವರು. ಅಲ್ಲಿ ಒಂದೇ ಒಂದು ಫೈರಿನಲ್ಲಿ ಆಧುನಿಕ ವಾಯು ಯಾನ ವಿಧ್ವಂಸಕ ಗುಂಡು ವಿಯನ್ನಾದ ಮೇಲೆ ಹಾರಾಡುತ್ತಿದ್ದ ವಿಮಾನವನ್ನು ಕೆಳಗುರುಳಿಸಿತು. ನಮ್ಮ ರಾಜಧಾನಿಯ ರಕ್ಷಣೆಗೆ ಇಂಥವುಗಳ ಆವಶ್ಯಕತೆ ಇದೆ.

'ಇನ್ನು ವಿಮಾನಗಳ ವಿಚಾರ. ನಮಗೆ ಬೇಕಾಗಿರುವುದು ಯುದ್ಧದ ವಿಮಾನಗಳು ಮತ್ತು ಶತ್ರುಗಳ ವಿಮಾನಗಳನ್ನು ಹಿಡಿದು ಧ್ವಂಸಮಾಡಬಲ್ಲ ವಿಮಾನಗಳು.

ಸೈನ್ಯದ ವಿಚಾರ. ಸಂಕಟದ ಸಮಯದಲ್ಲಿ ಸೈನಿಕರ ಹೃದಯವೇದನೆಯನ್ನುಂಟು ಮಾಡುವಂತಹ ನಿರಾಧಾರವಾದ ಸುದ್ದಿಗಳು ಹರಡಿದ್ದುವು. ರಕ್ಷಣೆಯ ಮುಖ್ಯ ವಸ್ತುಗಳಾದ ಮರಳಿನ ಚೀಲಗಳು, ಹಾರೆ ಗುದ್ದಲಿ ಆದಿ ಸಾಮಗ್ರಿಗಳು ಸಾಕಷ್ಟಿರಲಿಲ್ಲ. ಅವುಗಳ ಬೆಲೆಯೂ ಸಹ ವಿಪರೀತವಾಗಿ ಏರಿ ಹೋಗಿತ್ತು.

ಆಹಾರ ಸಾಮಗ್ರಿ ಇರಲಿಲ್ಲ. ಜನರು ಆಹಾರ ಸಾಮಗ್ರಿಯನ್ನು ಶೇಖರಿಸಲಾರಂಭಿಸಿದ್ದರು. ಮುಂದೆ ಅವರಿಗೆ ಅವುಗಳು ದೊರೆಯುವುದಿಲ್ಲವೆಂಬ ಹೆದರಿಕೆ ಇದ್ದುದರಿಂದ ಈ ರೀತಿ ಮಾಡಿದ್ದರು, ಮಿ. ಮೊರಿಸನ್‌ರವರು ಹಿಂದೊಮ್ಮೆ, ಭಾವೀ ಯುದ್ಧದ ಹೆದರಿಕೆಯಿಂದ ಈಗಿನಿಂದಲೇ ಆಹಾರವನ್ನು ಶೇಖರಿಸುವುದು ಮೂರ್ಖತನವೆಂದು ಸಾರಿದ್ದರು ಕಾರಣ, ಅವರು ಯುದ್ಧವಾಗುವುದೇ ಇಲ್ಲವೆಂದು ನಂಬಿದ್ದರು. ಈಗಂತೂ, ಆವಶ್ಯಕತೆಗಳಿಗನುಸಾರವಾಗಿ ಖಾದ್ಯ ವಸ್ತುಗಳನ್ನೂ ಅಧಿಕ ಪ್ರಮಾಣದಲ್ಲಿ ಉತ್ಪಾದನೆ ಮಾಡುವ ಯೋಜನೆಯನ್ನೂ ಸಿದ್ಧಗೊಳಿಸಬಲ್ಲ ಮಂತ್ರಿಯ ಅಗತ್ಯವಿದೆ. ಮೋರಿಸನ್‌ರಂತಹವರು ಅಗತ್ಯವಿಲ್ಲ.

ಮತ್ತೊಂದು ವಿಚಾರ, ಸರಿಯಾರಲಿ ತಪ್ಪಿರಲಿ, ನಮ್ಮಲ್ಲಿರುವ ಮುಖವಾಡಗಳು ವಿಷವಾಯುವಿನಿಂದ ರಕ್ಷಿಸಿಕೊಳ್ಳಲು, ತೀರ ಅನುಪಯೋಗವಾದುವು. ಇದು ಅನುಭವದಿಂದ ಮನಗಂಡ ಮಾತು.

ಡೊಮಿನಿಯನ್ನುಗಳ ಸಹಾಯ

ಸಾಮ್ರಾಜ್ಯದ ಗೌರವದ ಆಧಾರವಾದ ಡೊಮಿನಿಯನ್ನುಗಳಿಂದ ಕೇವಲ ಬಾಯಿ ಮಾತಿನ ಸಹಾನುಭೂತಿಯಲ್ಲದೆ ಮತ್ತೇನೂ ದೊರೆಯಲಿಲ್ಲ ಪಂಜಾಬಿನ ಸರ್ ಸುಂದರ್ ಮತ್ತು ಕೆಲವು ದೇಶೀ ಸಂಸ್ಥಾನಿಕರು ಸಹಾಯ ಮಾಡುವುದಾಗಿ ಆಶ್ವಾಸನವಿತ್ತಿದ್ದರು. ನಾವು ಎಷ್ಟು ಅಜಾಗರೂಕತೆಯಲ್ಲಿದ್ದೇವೆ, ಆತ್ಮರಕ್ಷಣೆಯ ಸಿದ್ಧತೆಯಲ್ಲಿ ಎಷ್ಟು ಹಿಂದುಳಿದಿರುವೆವು, ಇದು ನಮ್ಮ ಮತ್ತು ಡೊಮಿನಿಯನ್ನುಗಳ ಸಂಬಂಧವು ದೂರವಾಗಿರುವುದರಿಂದಲೇ ತಿಳಿಯುವುದು. ನಮ್ಮ ದೇಶವಾಸಿಗಳಿಗೆ ಇದರಿಂದ ಬಹಳ ನಿರಾಶೆಯಾಯಿತು'

ಕೊನೆಯಲ್ಲಿ ಪತ್ರಿಕೆಯು ಈ ರೀತಿ ಕೇವಲ ಸತ್ಯವಾದುದನ್ನು ಹೇಳುತ್ತಾ ಮುಗಿಸಿದೆ. ನಾವು ನಿಜವಾಗಿಯೂ ಸಿದ್ಧರಿರಲಿಲ್ಲ ಆದುದರಿಂದ ಆಗಿ ಹೋಯಿತು. ಗುಂಡಾದರೂ ಇದರಿಂದ ಪಾಠ ಕಲಿತು, ಡೊಮಿನಿಯನ್ನುಗಳ ಸಲಹೆ ಇಲ್ಲದೆ ಯಾರೊಡನೆಯೂ ಸಂಧಿಮಾಡಿಕೊಳ್ಳದೆ ಇದ್ದಲ್ಲಿ, ಯಾವ ಕರಾರಿಗೂ ಒಪ್ಪದೆ ಇದ್ದಲ್ಲಿ, ಈ ಸಂಕಟದ ಪರಿಣಾಮವೂ ಸಹ ಒಳ್ಳೆಯದೇ ಆಯಿತೆಂದು ಭಾವಿಸಬಹುದು.

ಒಂದೇ ಒಂದು ವಾರದ ಹಿಂದೆ ಇದೇ ಪತ್ರಿಕೆಯು, ಬ್ರಿಟನ್ ಅಜೇಯವೆಂದೂ, ಅಮೇರಿಕೆಯ ಹೊರತು, ಉಳಿದ ಯಾರಿಂದಲೂ ಪರಾಜಯ ಹೊಂದಿಲ್ಲವೆಂದೂ ಘೋಷಿಸಿತ್ತು, ಆದರೆ ಆರೇ ದಿನಗಳಲ್ಲಿ ವಾಸ್ತವಿಕ ಸ್ಥಿತಿಯನ್ನು ಸ್ವೀಕರಿಸಲೇ ಬೇಕಾಗಿ 'ನಾವು ಸಿದ್ಧರಿರಲಿಲ್ಲ'ವೆಂದು ಒಪ್ಪಿಕೊಳ್ಳುವ ಸ್ಥಿತಿಗೆ ಬಂತು.

ಮತ್ತೊಂದು ದೃಷ್ಟಿಯಿಂದ

ಬೇರೆ ರೀತಿ ವಾದಿಸುವವರ ಗುಂಪೊಂದಿದೆ ಹಿಟ್ಲರ್ ಮತ್ತು ಚೇಂಬರ್ಲೇನರಿಬ್ಬರಿಗೂ ಮೊದಲೇ ಮಾತುಕತೆ ನಡೆದಿತ್ತೆಂದೂ ಜೆಕೋಸ್ಲೋವೇಕಿಯದ ಸ್ವಾತಂತ್ರ್ಯವನ್ನು ಮಾರಿಬಿಡಬೇಕೆಂದು ನಿಶ್ಚಯವಾಗಿ ಹೋಗಿತ್ತೆಂತೆ. ವಾಸ್ತವಿಕ ಸ್ಥಿತಿಯನ್ನು ತಿಳಿದೂ ತಿಳಿದೂ ಮುಚ್ಚಿಡುವ ಪ್ರಯತ್ನ ನಡೆದಿತ್ತು ಕೊನೆಯ ಕೊನೆಯೊಳಗೆ ಬ್ರಿಟನ್ನಿನ ಅವಿಶ್ವ ಸಮಾನಮಂತ್ರಿಯ ಪ್ರತಿಷ್ಠೆ ಆದಿಗಳ ವ್ಯಾಪಾರ ನಡೆದಿತ್ತು.

ಮ್ಯೂನಿಚ್‌ಗೆ ಹೊರಡುವ ಮೊದಲು ಸ್ವಯಂ ಚೇಂಬರ್ಲೇನರೇ ಈ ಸಾರಿ ಎಲ್ಲವೂ ಸರಿಹೋಗಿಬಿಡುವುದು ಎಂದು ಗುಂಪಿನವರಿಗೆ ಹೇಳಿದರು. ಈ ರೀತಿ ಜೆಕೋಸ್ಲೋವೇಕಿಯದ ಸ್ವಾತಂತ್ರ್ಯವನ್ನು ಮಣ್ಣುಗೂಡಿಸಲು ನಿಶ್ಚಯಮಾಡಿಕೊಂಡಿದ್ದರು. ಅವರಿಗೆ ಇದರಲ್ಲಿ ವಿರೋಧಿಗಳು ಸಹ ಇಲ್ಲದ್ದರಿಂದ ವಿಶ್ವಾಸಘಾತಕ ಮಾಡಲು ತಮಗೆ ಸಂಪೂರ್ಣ ಅಧಿಕಾರವಿದೆಯೆಂದೂ ಸಹ ತಿಳಿದರು.

ಯುದ್ಧದ ಬಿಸಿ ವಾತಾವರಣದಲ್ಲಿ ಏನೇನೋ ಸುದ್ದಿಗಳು ಹರಡುತ್ತಿದ್ದುವು. ಅವುಗಳ ಪೈಕಿ, ರಷ್ಯದ ವಾಯು ಸೈನ್ಯವು ಕರ್ನಲ್ ಲಿಂಡ್ ಬರ್ಗರು ಹೇಳುವಂತೆ ಅವಿಶ್ವಾಸಪಾತ್ರವೆಂದು ಹೇಳಲಾಗಿತ್ತಂತೆ.

ನಿಜವಾಗಿ ಈಗ ಬ್ರಿಟಿಷರು ಸುಖಲೋಲುಪರು. ಟ್ರಫಾಲ್ಗರ್ ಚೌಕದಲ್ಲಿ ನಿಂತು ಬೊಬ್ಬೆ ಇಡುವುದು ವಿನಹ ಬಲಿದಾನ ಮಾಡುವ ಶಕ್ತಿ ಇಲ್ಲ, ಕಾದಾಡುವ ಚೈತನ್ಯ ಅವರಲ್ಲಿಲ್ಲ. ಹಿಂದೆ ಈ ರೀತಿ ಸಂಕಟ ಪ್ರಾಪ್ತವಾಗಲು, ಧನಿಕರೆಲ್ಲ ಪಟ್ಟಣಗಳನ್ನು ಬಿಟ್ಟು ದೂರ ಹೋಗಿ ಕೇಳಿದಷ್ಟು ಬಾಡಿಗೆ ಕೊಟ್ಟು ಕೇವಲ ಸಾಧಾರಣವಾದ ಮನೆಗಳಲ್ಲಿದ್ದರು. ಈ ಗಡಿಬಿಡಿಯಲ್ಲಿ ಹರಕು ಮುರುಕು ಗುಡಿಸಲುಗಳ ಹೋಟೆಲ್ ಮಾಲಿಕರ ಅದೃಷ್ಟ ಖುಲಾಯಿಸಿತು ಆದರೆ ಈ ಧನಿಕರು ಅಗತ್ಯಕ್ಕಿಂತ ಹೆಚ್ಚು ಆಹಾರವನ್ನು ಕೊಂಡುಹೋದರು. ಈ ರೀತಿ ಟೀ, ಸಕ್ಕರೆ, ಇದ್ದಲು ಸಹ ದೊರೆಯುವುದು ಸಹ ದುರ್ಲಭವಾಯಿತು. ಹೀಗೆ ದೂರಹೋದ ಧನಿಕರು ಲಾರಿಗಳಲ್ಲಿ ಆಹಾರ ಸಾಮಗ್ರಿಗಳನ್ನು ಸಾಗಿಸಿದರೆಂದು ತಿಳಿದು ಬಂದಿದೆ.

ನೋಡಿದಿರಾ! ಈ ರೀತಿ ಸೈನ್ಯಸಿದ್ಧವಾಗಿರಲಿಲ್ಲ ವಾಯು ಬಲವಿಲ್ಲ ಡೊಮಿಯನ್ನುಗಳ ಸಹಾಯವೂ. ಹರ ಹಿಟ್ಲರನ ಅಪ್ಪಣೆಯಾಗಿಯೇ ಹೋಯಿತು. ನನ್ನಪ್ಪಣೆ ಪಾಲಿಸುವಿರೋ, ಮರಣಕ್ಕೆ ಸಿದ್ಧರಾಗುವರೋ ಎಂದು, ಚೇಂಬರ್ಲೇನರು ಮೊಣಕಾಲೂರಿ, ಆಜ್ಞೆಯನ್ನು ಶಿರಸಾ ವಹಿಸುವೆನೆಂದರು. ಭಾವೀ ಇತಿಹಾಸಕಾರರು ಚೇಂಬರ್ಲೇನರಿಗೆ ಉಚಿತ ಪುರಸ್ಕಾರ ಕೊಟ್ಟೇ ಕೊಡುವರು ಅವರೇನು? ಇಂಗ್ಲೆಂಡಿನ ಗೌರವವನ್ನು ಮಾರಿಬಿಟ್ಟಿದ್ದರು.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ, ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ ಮೂತ್ರವಿಕಾರ ಸ್ತ್ರೀರೋಗ ಅಪ್ಪಸಿಕ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯಂತ ಯುಕ್ತವಾಗಿದೆ. ಕ್ರಯ:-100 ಮಾತ್ರೆಗಳಿಗೆ ರೂ 1-3-0, 500 ಕ್ಕೆ ರೂ 5-0-0. ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತವೆ

ಆಮಲಕೀ ತೈಲ

(ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅತ್ಯುತ್ತಮವಾದ ತೈಲ.

1 ಔನ್ಸಿನ ಸೀಸೆ ಒಂದರ 0—11—0.
½ ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ.
ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, ಕುಂಜಿಬೆಟ್ಟು,
ಬ್ರಹ್ಮಾವರ ಪೋಸ್ಟ್, ದ ಭಾರತ

ಶೀಘ್ರವಾಗಿಯೇ ಹೊರಬೀಳಲಿರುವ

ಪ್ರಜಾವಾಣಿ

(ವಿಷಯಗಳು-ಪುಟ ಪುಟಕ್ಕೂ ಚಿತ್ರಗಳು)

ಎಂಬ ಪ್ರಗತಿಪರ ರಾಷ್ಟ್ರೀಯ ವಾರ ಪತ್ರಿಕೆಯನ್ನು ಓದಲು ಮರೆಯಬೇಡಿ.
ಎಲ್ಲೆಲ್ಲೂ ಏಜೆಂಟರು ಬೇಕಾಗಿದ್ದಾರೆ.
ವಿವರಗಳಿಗೆ ಒಡನೆ ಈ ಕೆಳಗಿನ ವಿಳಾಸಕ್ಕೆ ತಪ್ಪದೆ ಬರೆಯಿರಿ.

ಮ್ಯಾನೇಜರ್,
ಪ್ರಜಾವಾಣಿ ಕಾರ್ಯಾಲಯ,
೧೭೪ ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ

ಮಂಗಳೂರು ಮುನ್ಸಿಪಾಲಿಟಿ

ನೋಟೀಸು

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ ಇದೇ 1939ನೇ ಇಸವಿ ಫೆಬ್ರವರಿ ತಿಂಗಳ 15ನೇ ತಾರೀಕಿನ ಮಧ್ಯಾಹ್ನ 4 ಘಂಟೆಯ ವರೆಗೆ ರೂಪಾಯಿ 83,540/- ಎಸ್ಟಿಮೇಟಿನ ವೆಬ್‌ಸ್ಟರ್ ಮಾರ್ಕೆಟು ಹೊಸತಾಗಿ ಕಟ್ಟುವ ಕಾಮಗಾರಿಯ ಬಗ್ಗೆ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಪಡೆಯಲಾಗುವುದು. ಟೆಂಡರ್ ಫೋರ್ಮ್, ಪ್ಲೇನ್, ಟೆಂಡರ್ ನೋಟೀಸು ವಗೈರೆ ರೂಪಾಯಿ 15/- ಪಾವತಿ ಮಾಡಿದಲ್ಲಿ ಕೊಡಲಾಗುವವು

ಕೆ. ಪಿ. ರಂಗಸ್ವಾಮಿ,
ಕಮಿಷನರ್, ಮಂಗಳೂರು ಮುನಿಸಿಪಾಲಿಟಿ

ನಮ್ಮ ಪೂರ್ವಿಕರು ನಮಗಿಂತ ಹೆಚ್ಚುಕಾಲ ಬಾಳುತ್ತಿದ್ದರೆಂದೂ, ಯಾವಾಗಲೂ ಆರೋಗ್ಯದಿಂದಿರುತ್ತಿದ್ದರೆಂದೂ ನಾವು ಕೇಳಿರುತ್ತೇವೆ. ಇದಕ್ಕೆ ಮುಖ್ಯವಾದ ಒಂದು ಕಾರಣವು ಅವರು ಸರಿಯಾದ ವ್ಯಾಯಾಮ ಪದ್ಧತಿಗಳನ್ನು ಅನುಸರಿಸಿ ಬರುತ್ತಿದ್ದುದೇ. ಸೂರ್ಯ ನಮಸ್ಕಾರವು ಇವುಗಳಲ್ಲಿ ಒಂದು.

ಸಾಮಾನ್ಯ ವ್ಯಾಯಾಮದಿಂದ ನಮ್ಮ ದೇಹದ ಮೇಲ್ಭಾಗದಲ್ಲಿರುವ ಸ್ನಾಯುಗಳು ಮಾತ್ರ ಬಲಹೊಂದುವವಲ್ಲದೆ, ಶರೀರದ ಒಳಗೊಳಗಿನ ಅಂಗೋಪಾಂಗಗಳ ಬೆಳವಣಿಗೆಯು ಅಷ್ಟೊಂದು ಚೆನ್ನಾಗಿ ಆಗುವುದಿಲ್ಲ, ಆದರೆ ಸೂರ್ಯ ನಮಸ್ಕಾರವನ್ನು ಮಾಡುವುದರಿಂದ ದೇಹದ ಪ್ರತಿಯೊಂದು ಅಂಗವೂ ಬಲಹೊಂದಿ ಪುಷ್ಟಿಯಾಗಿ ಬೆಳೆಯುವುದು, ಆದಕಾರಣವೇ ಸೂರ್ಯ ನಮಸ್ಕಾರವು ಇತರ ಯಾವ ತರದ ವ್ಯಾಯಾಮಕ್ಕಿಂತಲೂ ಶ್ರೇಷ್ಠವಾದುದೆಂದು ಪರಿಗಣಿಸಲ್ಪಟ್ಟಿದೆ. ಇದರಲ್ಲಿ ಹಲವು ಯೋಗಮುದ್ರೆಗಳು ಅಡಕವಾಗಿರುವುದರಿಂದ ಇದರ ಅಭ್ಯಾಸ ಮಾತ್ರದಿಂದ ದೇಹವು ಕಾಂತಿಯನ್ನು ಹೊಂದುತ್ತದೆ. ಇದೊಂದು ಅತ್ಯುತ್ತಮ ತರದ ವ್ಯಾಯಾಮವೆಂದು ಶ್ರೀ ಸಾಂಬಮೂರ್ತಿಗಳು ಕೂಡಾ ಮೊನ್ನೆ ಮದರಾಸಿನಲ್ಲಿ ಹೇಳಿರುವರು. ಇದರ ಶ್ರೇಷ್ಠತೆಯನ್ನು

೧. ನಮಸ್ಕಾರಾಸನ

ಕಂಡೇ ಇದನ್ನು ಇಂಗ್ಲೆಂಡ್ ಸಂಸ್ಥಾನದ ಶಾಲೆಗಳಲ್ಲಿ ಇತರ ವ್ಯಾಯಾಮಗಳ ಬದಲಾಗಿ ಇದನ್ನೇ ಖಡ್ಡಾಯವಾಗಿ ಕಲಿಸುತ್ತಿರುವರು

ಇದನ್ನು ಸ್ತ್ರೀಪುರುಷರಾದಿಯಾಗಿ ಸರ್ವರೂ ಅಭ್ಯಾಸಮಾಡಬಹುದು. ಇದೊಂದು ಜಾತೀಯತೆಯ ವಿಷಯವಲ್ಲವಾದ ಕಾರಣ ಎಲ್ಲಾ ಜಾತಿಯವರೂ ಇದನ್ನು ಮಾಡಬಹುದು. ಇತರ ವ್ಯಾಯಾಮಗಳಂತೆ ಇದಕ್ಕೆ ಉಪಕರಣಗಳ ಅಗತ್ಯವೇ ಇರುವುದಿಲ್ಲ. ಏನೂ ವೆಚ್ಚವಿಲ್ಲದೆ, ಸುಲಭ ರೀತಿಯಲ್ಲಿ ಇದನ್ನು ಮಾಡಬಹುದಾದುದರಿಂದ ಬಡವನೂ ಇದರ ಪ್ರಯೋಜನವನ್ನು ಹೊಂದಬಹುದಾಗಿದೆ.

ಪ್ರಸಿದ್ಧ ಶರೀರ ಶಾಸ್ತ್ರಜ್ಞನೊಬ್ಬನು ಹೇಳುವಂತೆ ವಾರ್ಧಕ್ಯವು ಶರೀರದ ಸಾಮಾನ್ಯ ಚಟುವಟಿಕೆಗಳಲ್ಲಿ ಉಂಟಾಗುವ ಅವ್ಯವಸ್ಥೆಯಲ್ಲದೆ ಬೇರೇನಿಲ್ಲ ಆದುದರಿಂದ ಆ ಅವ್ಯವಸ್ಥೆಯನ್ನೇ ಸರಿಮಾಡಿಕೊಂಡಲ್ಲಿ ಕಳೆದುಹೋದ ತಾರುಣ್ಯವು ಹಿಂತಿರುಗುವುದು. ಅಂದಮಾತ್ರಕ್ಕೆ ಮುದುಕನೊಬ್ಬನು ಇದರ ಅಭ್ಯಾಸ ಬಲದಿಂದ ಪುನಃ ತರುಣನಾಗಬಹುದೆಂಬ ಅರ್ಥವಲ್ಲ. ವೃದ್ಧಾಪ್ಯದಲ್ಲಿ ಕೂಡಾ ಆರೋಗ್ಯದಿಂದಿದ್ದು ತಾರುಣ್ಯದ ಹುರುಪಿನಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇದರ ಆಚರಣೆಯಿಂದ

ಸೂರ್ಯ ನಮಸ್ಕಾರ

ನಿಮ್ಮ ತಾರುಣ್ಯವನ್ನು ಉಳಿಸಿಕೊಂಡು ಆರೋಗ್ಯದಿಂದಿದ್ದು ಬದುಕುವ ಆಶೆಯು ನಿಮಗಿರುವುದೇ? ವೃದ್ಧಾಪ್ಯದಲ್ಲಿ ಕೂಡ ತಾರುಣ್ಯದ ಹುರುಪಿನಿಂದ ಕೆಲಸಮಾಡಿಕೊಂಡಿರಬೇಕೆಂಬ ಹಂಬಲಿಕೆಯು ನಿಮ್ಮದೇ? ಹಾಗಿದ್ದರೆ ಸೂರ್ಯ ನಮಸ್ಕಾರವನ್ನು ಇಂದಿನಿಂದಲೇ ಅಭ್ಯಾಸಮಾಡಿರಿ.

●

By T. Ananth Pai.

●

ಅಗ್ನಿಮಾಂದ್ಯ ದೋಷಗಳೂ, ಕರುಳಿನ ವ್ಯಾಧಿಗಳೂ, ಯಕೃತ್ತು, ಪ್ಲೀಹ ಮೊದಲಾದವುಗಳಿಂದ ಉಂಟಾಗುವ ವಿಕಾರಗಳೂ, ಅತಿಸಾರ, ಮಲಬದ್ಧತೆ ಮೊದಲಾದ ರೋಗಗಳೂ, ತಲೆನೋವು, ಗಂಟಲುನೋವು, ಅರುಚಿ, ಮುಖದ ದುರ್ಗಂಧ, ಶ್ವಾಸಕೋಶದ ರೋಗ ಮುಂತಾದುವೂ ನಿವಾರಣೆಯಾಗುವುವು. ಸ್ತ್ರೀಯರು ಇದನ್ನು ಅಭ್ಯಾಸಮಾಡುವುದರಿಂದ ಅವರಲ್ಲಿರಬಹುದಾದ ಋತು ದೋಷಗಳೂ ಮಾಯವಾಗುವುವು. ಶರೀರ ಕಾಂತಿಯೂ ಸೌಂದರ್ಯವೂ ಹೆಚ್ಚುವುವು. ದೇಹವು ಚೆನ್ನಾಗಿ ಪುಷ್ಟಿ ಹೊಂದುವುದು. ಬಾಹು, ಎದೆ, ಬೆನ್ನು, ಜಂಘೆ, ಮೀನಖಂಡಗಳು ಪುಷ್ಟಿಹೊಂದುವುವು. ಯೋಗ್ಯವಾದ ಆಹಾರ ಮತ್ತು ವಿಶ್ರಾಂತಿಗಳ ಜತೆಯಲ್ಲಿ ಇದನ್ನು ಅಭ್ಯಾಸ ಮಾಡುವುದರಿಂದ ತಾರುಣ್ಯವನ್ನು ಕಾಪಾಡಿಕೊಳ್ಳಬಹುದೆಂದರೆ ಅತಿಶಯೋಕ್ತಿಯಾಗಲಾರದು.

ಸೂರ್ಯನ ಕಿರಣಗಳು ಚೆನ್ನಾಗಿ ಪ್ರಸರಿಸಿರುವ ಸ್ಥಾನವೇ ಸೂರ್ಯ ನಮಸ್ಕಾರವನ್ನು ಮಾಡಲು ಯೋಗ್ಯವಾದ ಸ್ಥಳವು. ಪ್ರಾತಃಕಾಲದಲ್ಲಿ ಇದನ್ನು ಅಭ್ಯಾಸಿಸುವುದರಿಂದ Ultra violet rays ಎಂಬ ಸೂರ್ಯ ರಶ್ಮಿಯು ದೇಹಕ್ಕೆ ಆರೋಗ್ಯವನ್ನು ಕೊಡುತ್ತದೆ. ಇಂತಹ ಸ್ಥಾನವು ದೊರಕದಿದ್ದಲ್ಲಿ ಚೆನ್ನಾಗಿ ಗಾಳಿ ಬೆಳಕು ಬರುವ ನಿರ್ಮಲವಾದ ಕೊಠಡಿಯ ಉಪಯೋಗವನ್ನು ಮಾಡಿಕೊಳ್ಳಬಹುದು.

೨. ಪಾದ ಹಸ್ತಾಸನ: ಈ ಆಸನ ಮಾಡುವಾಗ ಕಾಲುಗಳನ್ನು ಸರ್ವಥಾ ಬಗ್ಗಿಸಬಾರದು.

ಪ್ರಾರಂಭದಲ್ಲಿ ಅಭ್ಯಾಸವನ್ನು ಸ್ವಲ್ಪ ಸ್ವಲ್ಪವಾಗಿ ಮಾಡಿ ಅನುಕ್ರಮವಾಗಿ ಹೆಚ್ಚಿಸುತ್ತಾ ಹೋದಲ್ಲಿ ಇದರ ಪೂರ್ಣ ಪ್ರಯೋಜನವು ಸಿಗದಿರಲಾರದು

೩. ಏಕಪಾದ ಪ್ರಸಾರಣಾಸನ: ಎಡಗಾಲನ್ನು ಹಿಂದಿಟ್ಟು ಬಲ ಮೊಣಗಾಲನ್ನು ಬಗ್ಗಿಸಿ ಇಡೀ ದೇಹದ ಭಾರವು ಬಲತೊಡೆಯ ಮೇಲೆ ಬೀಳಬೇಕು. ಈ ಆಸನದಲ್ಲಿ ಶ್ವಾಸವನ್ನು ಬಿಡಬಾರದು.

ಇದನ್ನು ಮಾಡುವ ಕ್ರಮವನ್ನು ಸಚಿತ್ರವಾಗಿ ಈ ಲೇಖನದಲ್ಲಿ ಕೊಡಲಾಗಿದೆ.

ಎರಡನೆಯ ಆಸನವಾದ ಪಾದ ಹಸ್ತಾಸನದ ಅಭ್ಯಾಸದಿಂದ ಉದರದ ಅಂಗಾಂಗಗಳು ಸರಿಯಾಗಿ ಕೆಲಸ ಮಾಡುವ ಕಾರಣ ಹೊಟ್ಟೆಯ ಯಾವ ರೋಗವೂ ಬರ



೪. ದ್ವಿಪಾದ ಪ್ರಸಾರಣಾಸನ: ಇಡೀ ಶರೀರವು ಒಂದೇ ಮಟ್ಟದಲ್ಲಿದ್ದು ಅದು ಅಂಗೈ ಮತ್ತು ಕಾಲ್ಬೆರಳುಗಳ ಮೇಲೆ ಆಧರಿಸಿಕೊಂಡಿರಬೇಕು.

ಬಾರದು ಬೆನ್ನೆಲುಬಿನ ರೋಗಗಳೂ, ಸ್ನಾಯುಗಳ ರೋಗಗಳೂ, ಮೂಲವ್ಯಾಧಿ ರೋಗವೂ ಗುಣಹೊಂದುವುವು ನಾಲ್ಕನೆಯ ಆಸನವಾದ ಅಷ್ಟಾಂಗ ಪ್ರಣೀತಾಸನದ ಅಭ್ಯಾಸದಿಂದ Thyroid gland ಎಂಬ ಕಂಠದ ಗ್ರಂಥಿಯು ಬಲಹೊಂದಿ ದೇಹಾರೋಗ್ಯವನ್ನು ಕ್ರಮಗೊಳಿಸಿ ಕಾಪಾಡುತ್ತದೆ ಐದನೆಯ ಆಸನವಾದ ಭುಜಂಗಾಸನವೂ ಎರಡನೆಯ ಆಸನವಾದ ಪಾದಹಸ್ತಾಸನವೂ ಬೆನ್ನುಹುರಿಯನ್ನು ಲಘುವಾಗಿರಿಸಿ ಪೃಷ್ಠಭಾಗದ ಕಷ್ಟಗಳನ್ನು ನಿವಾರಿಸುತ್ತವೆ

೧. ನಮಸ್ಕಾರ ಆಸನ.

ಒಂದು ನಮಸ್ಕಾರದಲ್ಲಿ ಹತ್ತು ಆಸನಗಳಿವೆ ಅವುಗಳಲ್ಲಿ ಮೊದಲನೆಯದು ನಮಸ್ಕಾರಾಸನ ಈ ಆಸನವನ್ನು ಮಾಡುವಾಗ ನಿಟ್ಟನೆ ನಿಂತು ಹಿಮ್ಮಡಿಗಳನ್ನು ಜೊತೆಗೊಳಿಸಿ, ಕಾಲಿನ ಹೆಬ್ಬೆರಳುಗಳನ್ನು ದೂರವಿರಿಸಬೇಕು ಅನಂತರ ಸಾಧ್ಯವಿರುವಷ್ಟು ಶ್ವಾಸವನ್ನು ಒಳಗೆ ತೆಗೆದುಕೊಂಡ ಬಳಿಕ ಭಾರತೀಯ ವಿಧಾನದಂತೆ ನಮಸ್ಕರಿಸಿದಾಗ ಎದೆಯು ವಿಶಾಲವಾಗುತ್ತದೆ

(ಚಿತ್ರ ನೋಡಿ)

ಭುಜಂಗಾಸನ

೫. ಅಷ್ಟಾಂಗ ಪ್ರಣೀತಾಸನ

ಆದುದ ಬಳಿಕ ಎದೆಯನ್ನೂ ಮುಂತಲೆಯನ್ನೂ ನೆಲಕ್ಕೆ ತಾಗಿಸಿರಿ ಈ ಆಸನದ ಹೆಸರಿನಿಂದಲೇ ತಿಳಿಯುವಂತೆ ಶರೀರದ ಎಂಟು ಭಾಗಗಳು ನೆಲವನ್ನು ಮುಟ್ಟುತ್ತವೆ.

೬. ಭುಜಂಗಾಸನ

ತಲೆಯೆತ್ತಿ ಕೈಗಳನ್ನು ನೆಟ್ಟಗೆ ಮಾಡಿರಿ. ಈ ಆಸನದಲ್ಲಿ ಪುನಃ ಶ್ವಾಸವನ್ನು ಒಳಕ್ಕೆ ತೆಗೆದುಕೊಳ್ಳಬೇಕು

೭. ಭೂಧರ ಆಸನ

ನಿಮ್ಮ ಮುಂಡವನ್ನು ಸಾಧ್ಯವಾದಷ್ಟು ಮೇಲಕ್ಕೆತ್ತಿ ಶಕ್ಯವಿರುವಷ್ಟು ಹಿಂದಕ್ಕೆ ಬಗ್ಗಿಸಿರಿ ನಿಮ್ಮ ಎರಡೂ ಹಿಮ್ಮಡಿಗಳು ಪೂರ್ಣವಾಗಿ ನೆಲಕ್ಕೆ ತಾಗಿರಬೇಕು ಈ ಆಸನದಲ್ಲಿ ಶ್ವಾಸವನ್ನು ಬಿಡಬಾರದು

೮. ಏಕಪಾದ ಪ್ರಸಾರಣಾಸನ

ಎಡಗಾಲನ್ನು ಮುಂದೆ ತಂದು ಅಂಗೈಯ ಒಳಯಲ್ಲಿಟ್ಟು ಮೂರನೆ ಆಸನವನ್ನು ಮಾಡಿರಿ ಈ ಆಸನದಲ್ಲಿ ಶ್ವಾಸವನ್ನು ಹೊರಕ್ಕೆ ಬಿಡಬಾರದು

೯. ಪಾದಹಸ್ತಾಸನ

ಇನ್ನೊಂದು ಕಾಲನ್ನು ಮುಂದಕ್ಕೆ ತಂದು ಎರಡನೆಯ ಆಸನವನ್ನು ಮಾಡಿ ಪೂರ್ಣ ಶ್ವಾಸವನ್ನು ಹೊರಗೆ ಬಿಡಿರಿ.

೧೦. ನಮಸ್ಕಾರಾಸನ

ಪ್ರಥಮಾಸನದಂತೆಯೇ ನೆಟ್ಟಗೆ ನಿಂತು ಉಚ್ಛ್ವಾಸ ಬಿಡಿರಿ

೫ ಅಷ್ಟಾಂಗ ಪ್ರಣೀತಾಸನ ಈ ಆಸನದಲ್ಲಿ ದೇಹದ ಎಂಟು ಭಾಗಗಳು ನೆಲಕ್ಕೆ ತಾಗುತ್ತವೆ ಹೊಟ್ಟೆಯ ಭಾಗವನ್ನು ಸರ್ವಥಾ ನೆಲಕ್ಕೆ ತಾಗಿಸಬಾರದು

೨. ಪಾದಹಸ್ತಾಸನ

ಒಂದನೆ ಆಸನವಾದ ಬಳಿಕ ನಿಲ್ಲಿನ ಎರಡನೆ ಆಸನವನ್ನು ಮಾಡತೊಡಗಬೇಕು ಪೂರ್ಣ ನಿಶ್ವಾಸ ಮಾಡಿದ ಬಳಿಕ ಕಾಲುಗಳನ್ನು ಬಗ್ಗಿಸದೆ ಮುಂಭಾಗಕ್ಕೆ ಶರೀರವನ್ನು ಬಗ್ಗಿಸಿ ಎರಡೂ ಕೈಗಳನ್ನು ನೆಲಕ್ಕೆ ತಾಗಿಸಬೇಕು ಇದರಿಂದ ಬೆನ್ನುಹುರಿಗೆ ವ್ಯಾಯಾಮವು ದೊರಕುತ್ತದೆ

೩. ಏಕಪಾದ ಪ್ರಸಾರಣಾಸನ

ಎರಡನೆಯ ಆಸನವನ್ನು ಮಾಡಿದ ಬಳಿಕ ಎಡಗಾಲನ್ನು ಹಿಂದಿಟ್ಟು ಬಲಮೊಣಕಾಲನ್ನು ಬಗಿಸಿ ಇಡೀ ದೇಹದ ಭಾರವು ಬಲತೊಡೆಯ ಮೇಲೆ ಬೀಳುವಂತೆ ಮಾಡಿರಿ ಎಡಮೊಣಕಾಲನ್ನು ನೆಲವನ್ನು ಮುಟ್ಟಬಹುದು ಈ ಆಸನದಲ್ಲಿ ಶ್ವಾಸವನ್ನು ಬಿಡದೆ ನಾಲ್ಕನೆಯ ಆಸನವನ್ನು ಮಾಡತೊಡಗಿರಿ

೪. ದ್ವಿಪಾದ ಪ್ರಸಾರಣಾಸನ

ಇನ್ನೊಂದು ಕಾಲನ್ನು ಹಿಂದಕ್ಕೆ ಚಾಚಿ, ಇಡೀ ಶರೀರವು ಒಂದೇ ಮಟ್ಟದಲ್ಲಿರಬೇಕಲ್ಲದೆ ಅದು ಕೈ ಮತ್ತು ಕಾಲ್ಬೆರಳುಗಳ ಮೇಲೆ ಆಧರಿಸಿಕೊಂಡಿರಬೇಕು ಆದರೆ ಶ್ವಾಸವನ್ನು ಬಿಡಬಾರದು. ಈ ಆಸನವನ್ನು ನಾಲ್ಕನೆಯ ಚಿತ್ರದಲ್ಲಿ ಕಾಣಬಹುದು

ಭೂಧರಾಸನ

ಈ ಆಸನದಲ್ಲಿ ಶ್ವಾಸವನ್ನು ಹೊರಕ್ಕೆ ಬಿಡಬಹುದು, ಆದರೆ ಹೊಟ್ಟೆಯ ಭಾಗ ನೆಲಕ್ಕೆ ತಾಗಬಾರದು. ಈ ಆಸನದಲ್ಲಿ ನೆಲಕ್ಕೆ ತಾಗುವ ಭಾಗಗಳೆಂದರೆ ಅಂಗೈಗಳು, ಮೊಣಕಾಲಿನ ಗಂಟುಗಳು, ಎರಡೂ ಕಾಲಿನ ಬೆರಳುಗಳು, ಎದೆ ಮತ್ತು ಮುಂತಲೆ

ತೃತೀಯಾಸನ ಮತ್ತು ಅಷ್ಟಮಾಸನಗಳು ದ್ವಿತೀಯ ಮತ್ತು ನವಮಾಸನಗಳು ಮತ್ತು ಪ್ರಥಮ ಮತ್ತು ದಶಮಾಸನಗಳು ಒಂದೇ ಆಗಿರುವದರಿಂದ ೮, ೯ ಮತ್ತು ೧೦ನೇ ಆಸನಗಳ ಚಿತ್ರಗಳು ಕೊಡಲ್ಪಡಲಿಲ್ಲ

WANTED

A lady candidate to edit a high class Kannada monthly magazine for ladies to be started shortly. Apply with stating minimum salary required with particulars as to qualification, experience etc to Box No. 11,

C/o **NAVAYUGA**, Udipi

ಎಲ್ಲಾ ತರದ

ಶುದ್ಧ ಖಾದಿ

ಮಂಗಳೂರು

ಸ್ವದೇಶಿ ಸ್ಟೋರ್ಸ್,

ರಥಬೀದಿ - ಮಂಗಳೂರು

ಅಖಿಲ ಭಾರತ ಚರಕಾ ಸಂಘದ

ಸರ್ಟಿಫೈ ಮಾಡಲ್ಪಟ್ಟದ್ದು

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance

CANARA AUTOMOBILES - - - - - MANGALORE

ವಾರ್ತಾ ವಾಹಿನಿ

ವಾಯುವ್ಯ ಗಡಿನಾಡಿನಲ್ಲಿ ಅತ್ಯಾಚಾರ

ವಾಯುವ್ಯ ಗಡಿನಾಡಿನ ಬನ್ನು ಮತ್ತು ಡೀರ್ ಇಸ್ಮಯೀಲ್ ಖಾನ್ ಮೊದಲಾದ ಸ್ಥಳಗಳಲ್ಲಿ, ಗಡಿನಾಡಿನ ಪಂಗಡಿಗರು, ರಸ್ತೆಯಲ್ಲಿ ಮೋಟರ್ ವಾಹನಗಳಲ್ಲಿ ಹೋಗುವ ಪ್ರಯಾಣಿಕರನ್ನು ತಡೆಗಟ್ಟಿ ಹಿಡಿದು ಕೊಂಡೊಯ್ಯುವ, ಹಳ್ಳಿಗಳ ಮೇಲೆ ಧಾಳಿ ನಡಿಸಿ ಲೂಟಿಮಾಡಿ ಮನೆಮಾರುಗಳನ್ನು ಸುಟ್ಟು ಹಾಕುವ ಅತ್ಯಾಚಾರಗಳನ್ನು ನಡಿಸುತ್ತಲೇ ಇದ್ದಾರೆ ಹೆಚ್ಚಾಗಿ ಹಿಂದುಗಳು ಈ ಉಪಟಳಕ್ಕೆ ಬಲಿಬೀಳುತ್ತಿದ್ದಾರೆ. ಇದರಿಂದಾಗಿ ವಾಯುವ್ಯ ಸರಹದ್ದಿನಲ್ಲಿ ವಾಸಿಸುವ ಅಲ್ಪ ಸಂಖ್ಯಾಕ ಹಿಂದುಗಳಲ್ಲಿ ದಿಗಿಲುಂಟಾಗಿದೆ. ಜನವರಿ ತಾ 20ರಲ್ಲಿ ಬನ್ನುವಿನ ಮಹದೇವ್ ಎಂಬ ಹಳ್ಳಿಯಿಂದ 18 ವರ್ಷ ಕೆಳಗಿನ ಇಬ್ಬರು ಸಹೋದರರು ಮತ್ತು ಅವರೊಬ್ಬ ಸಹೋದರಿಯು ಕದ್ದೊಯ್ಯಲ್ಪಟ್ಟಿದ್ದಾರೆ. ಈ ಅತ್ಯಾಚಾರ ನಡಿಸಿದವರು ವಜೀರಿಗಳೆಂದು ತಿಳಿದು ಬರುತ್ತದೆ ಈ ಬಾಲಕರ ತಂದೆ ತಾಯಿಂದಿರನ್ನೂ ಕದ್ದೊಯ್ದಿದ್ದರು ಆದರೆ ಪರಿಹಾರ ದ್ರವ್ಯ ತಂದು ಕೊಡಲು ಬಿಟ್ಟುಬಿಟ್ಟರು ಬಿಡುಗಡೆ ಹೊಂದಿದ ಕೂಡಲೆ ಇವರು ಕೂಗೆಬ್ಬಿಸಲು ಜನರು ಕೂಡಿ ದರೋಡೆಗಾರರನ್ನು ಬೆನ್ನಟ್ಟಿದರು ಆದರೆ ಅವರು ಸಿಕ್ಕಲಿಲ್ಲ ಬನ್ನು ಜಿಲ್ಲೆಯಲ್ಲಿ ಈ ಪಂಗಡಿಗರು ಇಷ್ಟರ ವರೆಗೆ 18 ಶಾಲೆಗಳನ್ನೂ ಮತ್ತು ಒಂದು ಆಸ್ಪತ್ರೆಯನ್ನೂ ಸುಟ್ಟು ಹಾಕಿರುವರು.

ಫೆಡರಲ್ ಕೋರ್ಟಿನ ಪ್ರಶಂಸೆ

ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಸರ್. ಮೋರಿಸ್ ಗ್ವಾಯರು ಜನವರಿ ತಾ 20ರಲ್ಲಿ ಡಿಲ್ಲಿಯ ರೋಟರಿ ಕ್ಲಬ್ಬಿನಲ್ಲಿ ಭಾಷಣಮಾಡುವಾಗ, ಹಿಂದೂದೇಶದ ಫೆಡರಲ್ ಕೋರ್ಟು ಅಮೇರಿಕದ ಸುಪ್ರೀಮ್ ಕೋರ್ಟಿನಂತೆ ಸ್ವಾತಂತ್ರ್ಯರಕ್ಷಣೆಯ ಕೋಟೆಯೂ, ಹಿಂದೀಯರನ್ನೆಲ್ಲಾ ಒಟ್ಟುಗೂಡಿಸುವ ಮಹಾ ಶಕ್ತಿಯೂ ಆಗುವುದೆಂದರು ಇಷ್ಟರ ವರೆಗೆ ಪ್ರಾಂತ ಮತ್ತು ಕೇಂದ್ರ ಸರಕಾರದೊಳಗೇನಾದರೂ ಕಾನೂನು ಕಾಯಿದೆಯ ಕುರಿತು ಭಿನ್ನಾಭಿಪ್ರಾಯವುಂಟಾದರೆ

ಸರ್ ಮೋರಿಸ್ ಗ್ವಾಯರು

ಕೇಂದ್ರ ಸರಕಾರವೇ ಅದನ್ನು ಇತ್ಯರ್ಥಿಸುತ್ತಿದ್ದಿತು. ಇನ್ನು ಅವನ್ನು ಫೆಡರಲ್ ಕೋರ್ಟು ತೀರ್ಮಾನಿಸುವುದು ಪ್ರಾಂತ ಪ್ರಾಂತಗಳೊಳಗಣ ವೈಷಮ್ಯ ವಿಷಯವನ್ನು ಅದು ವಿಚಾರಿಸಿ ನಿರ್ಧಾರಮಾಡುವುದು ಈಗ ಪ್ರೀವೀ ಕೌನ್ಸಿಲಿನಲ್ಲಿ ಇತ್ಯರ್ಥವಾಗುವ ವ್ಯವಹರಣೆಗಳೂ ಇನ್ನು ಮುಂದ ಫೆಡರಲ್ ಕೋರ್ಟಿನಲ್ಲಿ ತೀರ್ಮಾನಿಸಲ್ಪಡುವವು ಇಷ್ಟರಲ್ಲೇ ಹಿಂದೀ ಫೆಡರಲ್ ಕೋರ್ಟು ತೃಪ್ತಿಕರವಾಗಿ ತನ್ನ ಕಾರ್ಯವನ್ನಾರಂಭಿಸುವುದೆಂದರು

ಮಧ್ಯಪ್ರಾಂತದ ಮುಸಲ್ಮಾನರ ಸತ್ಯಾಗ್ರಹ

ಮಧ್ಯಪ್ರಾಂತದ ಕಾಂಗ್ರೆಸ್ ಮಂತ್ರಿ ಮಂಡಲವು, ವಾರ್ಧಾಶಿಕ್ಷಣ ಯೋಜನೆಯ ಮಾದರಿಯಲ್ಲಿ ವಿದ್ಯಾಮಂದಿರಗಳನ್ನು ಸ್ಥಾಪಿಸುವ ಯೋಜನೆಯೊಂದನ್ನು ತಯಾರಿಸಿ ಅದಕ್ಕಾಗಿ ಮಸೂದೆಯೊಂದನ್ನು ಎಸೆಂಬ್ಲಿಯಲ್ಲಿ ತರುವ ಏರ್ಪಾಡು ಮಾಡಿರುವುದು. ಇದು ಕೇವಲ ಹಿಂದೂ ಸಂಸ್ಥೆಯಾಗಿರುವುದೆಂದು ಮಧ್ಯಪ್ರಾಂತದ ಮುಸ್ಲಿಮ್ ಲೀಗಿನವರು ಆಕ್ಷೇಪಿಸಿ ಅದರ ನಿಷೇಧಾರ್ಥವಾಗಿ ಸತ್ಯಾಗ್ರಹ ಹೂಡುವ ನಿರ್ಧಾರ ಮಾಡಿದ್ದರು ಆದರೆ, ಆಮೇಲೆ ಮಂತ್ರಿಗಳ ಭೇಟಿ ಮಾಡಿ, ವಿದ್ಯಾಮಂದಿರವೆಂಬ ಹೆಸರು ಜಾತೀಯವಾದುದಲ್ಲೆಂಬ ಆಶ್ವಾಸನೆ ಪಡೆದು ಸತ್ಯಾಗ್ರಹ ಹೂಡುವ ಯೋಚನೆಯನ್ನು ಮುಂದುವರಿಸಿದರು ಮುಸ್ಲಿಮ್ ಲೀಗ್ ವರ್ಕಿಂಗ್ ಕಮಿಟಿಯು ಈ ನಿರ್ಧಾರವನ್ನು ನಿಷೇಧಿಸಿ ಮಧ್ಯಪ್ರಾಂತದ ತೀವ್ರಗಾಮಿ ಮುಸಲ್ಮಾನರು ಕೆಲವರು, ಕೇಂದ್ರ ಎಸೆಂಬ್ಲಿ ಮೆಂಬರರಾದ ಖಾನ್ ಬಹದೂರು ನವಾಬ್ ಸಿದ್ಧೀಕ ಅಲಿ ಖಾನರ ನಾಯಕತ್ವದಲ್ಲಿ ಜನವರಿ ತಾ. 26ರಲ್ಲಿ ಸತ್ಯಾಗ್ರಹವನ್ನಾರಂಭಿಸಿದರು ಖಾನ್ ಬಹದೂರು ಸಿದ್ಧೀಕ್ ಅಲಿ ಖಾನರು ಇನ್ನಿತರ 9 ಮಂದಿ ಮುಸಲ್ಮಾನರೊಂದಿಗೆ ನಾಗಪುರದ ಸಕ್ರಿಟರಿಯೇಟಿಗೆ ಹೋದಾಗ ಪೋಲೀಸರು ಅವರನ್ನು ತಡೆದು ಕಡೆಗೆ ಮೋಟರ್ ಕಾರುಗಳಲ್ಲಿ ಹಾಕಿ ಬೇರೆ ಬೇರೆ ಕಡೆಗಳಿಗೆ ಒಯ್ದುಬಿಟ್ಟರು.

ರಷ್ಯದ ಸೇನೆಯು ಉತ್ಕೃಷ್ಟವಾದುದು

ಜರ್ಮನಿಯು ಈಗ ಹಠಾತ್ತಾಗಿ ರಷ್ಯದ ಸೇನೆಯ ಕುರಿತು ಮೆಚ್ಚಿಗೆ ತೋರಿಸತೊಡಗಿರುವುದು ಆಶ್ಚರ್ಯಕರವಿದೆ. ಜರ್ಮನ್ ಸೇನಾಧಿಕಾರಿಯಾದ ಕೆಪ್ಟನ್ ವಾನ್ ಟಿಸ್ಕ ಎಂಬವರ ಅಂದಾಜಿನ ಮೇರೆಗೆ ಇಂಗ್ಲೆಂಡಿನ ಸೇನಾಬಲ 2 ಮಿಲ್ಯವಾಗಿದೆ. 6000 ವಿಮಾನಗಳ ಪಡೆಯಿದೆ ಇನ್ನು ರಿಸರ್ವ್ ಸೇನೆ ಬೇರೆ ಇದೆ. ಫ್ರಾನ್ಸಿಗೆ 6,100,000 ಸೇನೆ ಮತ್ತು 5000 ವಿಮಾನಗಳಿವೆ. ರಿಸರ್ವ್ ಬೇರೆ ಇದೆ ಸೋವಿಯೆಟ್ ರಷ್ಯಕ್ಕೆ 11,000,000 ಸೇನೆ ಮತ್ತು 9000 ವಿಮಾನಗಳಿವೆ ರಷ್ಯದ ಸೋವಿಯೆಟ್ ಸೈನಿಕನು ಧೈರ್ಯಶಾಲಿ, ಕಷ್ಟಸಹಿಷ್ಣು, ಮತ್ತು ಗಟ್ಟಿಮುಟ್ಟಾಗಿರುವವನಾಗಿರುತ್ತಾನೆ. ಚತುರ ನಾಯಕತ್ವದಲ್ಲಿ ಉತ್ಕೃಷ್ಟವಾಗಿ ಕಾದಾಡಬಲ್ಲನು ಆದುದರಿಂದ ರಷ್ಯದಮೇಲೆ ಫಕ್ಕನೆ ಧಾಳಿ ನಡಿಸಲು ಯಾರಿಗೂ ಎದೆ ಧೈರ್ಯವಿರಲಾರದು

WANTED

Orgamisers in Taluka centres either on salary or commission basais or both. Influential young men need apply Selected candidates should be prepared to deposit a sum of Rs 100/- For full particulars apply with stamps to *Box No. 5,*

C/o **NAVAYUGA, UDIPI.**

ತಿದ್ದುಪಡಿ

ಕಳೆದ ಸಂಚಿಕೆಯ ೮ನೇ ಪುಟದಲ್ಲಿ ಪ್ರಕಟಿಸಿದ ಸಾಂತೂರು ಸೀತಿ ಹೆಂಗ್ಸಿನ ನೋಟೀಸಿನಲ್ಲಿ 23ನೇ ಪಂಕ್ತಿಯಲ್ಲಿ ರಾಘವೇಂದ್ರ ನ್ಯಾಕ ಎಂದು ತಪ್ಪಾಗಿ ಬಿದ್ದಿರುತ್ತದೆ. ಅದು ರಾಘವೇಂದ್ರ ಪ್ರಭು ಎಂದಾಗಬೇಕು ಸಂ ನ

ಡಿಕ್ಟೇಟರರಿಗೆ ದೊಡ್ಡ ಸಲಾಮು

ಮಿ ಲ್ಲೈಡ್ ಜೋರ್ಜರು ಇಂಗ್ಲೆಂಡಿನ ಲ್ಯಾಂಡುಡ್ನೋ ಎಂಬಲ್ಲಿ ಜನವರಿ ತಾ. 14ರಲ್ಲಿ ಭಾಷಣಮಾಡುವಾಗ ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಮಿ ಚೇಂಬರ್ಲೇನರನ್ನು ಉಗ್ರವಾಗಿ ನಿಷೇಧಿಸಿ ಅವರ ಧೋರಣೆಯು ಡಿಕ್ಟೇಟರರಿಗೆ ದೊಡ್ಡ ಸಲಾಮು ಹಾಕುವಂತಹದಾಗಿದೆ. ಅವರು ಮ್ಯುನಿಚ್ ಮತ್ತು ರೋಮ್ ಪಟ್ಟಣಗಳಿಗೆ ಹೋದ ಪರಿಣಾಮವೆಂದು ಮಾತ್ರವಲ್ಲ ಪ್ರಚಂಡವಾದ ಯುದ್ಧ ಸಿದ್ಧತೆ ಮ್ಯುನಿಚಿನಿಂದ ಹಿಂತಿರುಗಿದ ಪ್ರಧಾನ ಮಂತ್ರಿಗಳು, ತಮ್ಮ ಜೀವಮಾನಕಾಲದವರೆಗೆ ಶಾಂತಿಸ್ಥಾಪಿತವಾದಂತಾಯಿತೆಂದು ಹೇಳಿದರೆ, ಆದರೆ ಆಕೂಡಲೆ ಜರ್ಮನ್ ವಿಮಾನಧಾಳಿಯಿಂದ ಇಂಗ್ಲೆಂಡಿನ ಪಟ್ಟಣಗಳನ್ನು ರಕ್ಷಿಸುವ ವ್ಯವಸ್ಥೆಮಾಡಲು ಹೊಸ ಮಂತ್ರಿಯೊಬ್ಬನನ್ನು ನೇಮಿಸಿದರು, ರೋಮ್ ನಗರದಿಂದ ಹಿಂತಿರುಗಿದೊಡನೆಯೇ ಚೇಂಬರ್ಲೇನರು ಕರೆದು ಮಾತುಕತೆ ನಡಿಸಿದುವೆಂದರೆ, ವಿಮಾನಧಾಳಿ ನಿರೋಧಕ, ಮತ್ತು ಯುದ್ಧವಿಮಾನ ತಯಾರಿ ಮಂತ್ರಿಗಳಿಬ್ಬರೊಡನೆಂದು ಖಂಡಿಸಿರುವರು ಇನ್ನು ಕೆಲವೇ ತಿಂಗಳುಗಳಲ್ಲಿ ಲೋಕಯುದ್ಧವು ನಿಶ್ಚಯವೆಂಬಂತೆ ಯುರೋಪಿನ ಮತ್ತು ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಮೊದಲಾದ ರಾಷ್ಟ್ರಗಳು ಭರದಿಂದ ಪ್ರಚಂಡ ಯುದ್ಧಸಿದ್ಧತೆ ನಡಿಸುತ್ತಿವೆ ಜರ್ಮನಿಯು, ಲೋಕದ ಎಲ್ಲಾ ರಾಷ್ಟ್ರಗಳಿಗಿಂತ ಪ್ರಬಲವಾದ ವಿಮಾನಪಡೆಯ

SAVING MONEY AND TIME

Thousands of prudent and thriving business-men prefer this Bank because attention is prompt and personal To most of these busy people their time is very valuable and they cannot afford to lose a few minutes every now and then in idle waiting They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD 1906
CANARA BANK
LIMITED

“ ಶೆಂಕ್ಸ ”



SHANKS

(ಇಂಗ್ಲಿಷ್ ಮೇಕ್)

ಕ್ರೂಡ್ ಆಯಿಲ್ ಎಂಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು “ಶೆಂಕ್ಸ” ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬೈಂಡ ಪ್ಲೆಂಟ), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ

ಕ್ಯಾಟಲಾಗಿಗೆ ಬರೆಕೊಳ್ಳಿ—

ಪೆರಮೌಂಟ್ ಇಂಜಿನೀಯರಿಂಗ್ ಕೊರ್ಪರೇಶನ್

೮೨, ಎಪೋಲೋ ಸ್ಟ್ರೀಟ್, ಫೋರ್ಟ್ .... ಮುಂಬಯಿ.

Paramount Engineering Corporation,

82 Appolo Street, Fort **BOMBAY.**

THE

Canara Banking Corporation, Udipi, Ltd.

(Incorporated in British India)

THE REGISTER OF MEMBERS & TRANSFER BOOKS of the CORPORATION will remain closed from 16—2—1939 to 5—3—1939 both days inclusive.

(By Order)

V. R. KAMATH,
MANAGER.

ನವಯುಗ

ಉಡುಪಿ, ಗುರುವಾರ, ತಾ. ೨-೨-೩೯

ದೇಶೀಯ ಸಂಸ್ಥಾನಗಳ ಚಳವಳ

ತಿರುವಾಂಕೂರಿನ ಪ್ರಶ್ನೆಗಳು ಜವಾಬ್ದಾರಿ ರಾಜ್ಯಭಾರಕ್ಕಾಗಿ ಚಳವಳವೆಬ್ಬಿಸಿದಾಗ ಅಲ್ಲಿಯ ದಿವಾನರಾದ ಸರ್. ಸಿ. ಪಿ. ರಾಮಸ್ವಾಮಿಯವರು, ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ರಾಜ್ಯಭಾರ ಸ್ಥಾಪಿಸಲು "ಚಕ್ರವರ್ತಿ ಸರಕಾರದ ತಡೆಯಿದೆಯೆಂದು ಹೇಳಿದ್ದರು. ಆದರೆ ಕೊಚ್ಚಿ ಸಂಸ್ಥಾನದ ದಿವಾನರಾದ ಸರ್. ಷಣ್ಮುಖಮರು, ಅಂತಹ ತಡೆಯೇನೂ ಇಲ್ಲೆಂದು ಸ್ಪಷ್ಟವಾಗಿ ಹೇಳಿ ಕೊಚ್ಚಿಯಲ್ಲಿ ಕೂಡಲೆ ಕೆಲಮಟ್ಟಿನ ಜವಾಬ್ದಾರಿ ರಾಜ್ಯಭಾರವನ್ನು ಜ್ಯಾರಿಗೆ ತಂದರು. ಈ ಸಂಬಂಧವಾಗಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ನಡದಾಗ ಇಂಡಿಯಾ ಅಂಡರ್ ಸಕ್ರೆಟರಿಗಳಾದ ಅರ್ಲ್ ವಿಂಟರ್ಟನರು, ಹಿಂದೀ ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ರಾಜ್ಯಭಾರವನ್ನು ಜ್ಯಾರಿಗೆ ತರಲು ಚಕ್ರವರ್ತಿ ಸರಕಾರದ ಆಕ್ಷೇಪವೇನೂ ಇರಲಾರದೆಂದು ಹೇಳಿದ್ದರು.

ಅನಂತರ ಹಲವು ದೇಶೀಯ ಸಂಸ್ಥಾನಗಳಲ್ಲೀಗ ಸ್ವಾತಂತ್ರ್ಯ ಚಳವಳ ನಡೆದಿರುವುದು. ತಿರುವಾಂಕೂರಿನಲ್ಲಿ ಒಮ್ಮೆ ತೀವ್ರ ಆಂದೋಲನ ನಡೆದು ನಿಲ್ಲಿಸಲ್ಪಟ್ಟಿರುವುದು. ಆದರೆ ಸರಕಾರವು ಪ್ರಜಾಜವಾಬ್ದಾರಿ ರಾಜ್ಯಭಾರವನ್ನೀಯುವ ಯೋಚನೆಯನ್ನೇ ಮಾಡದೆ, ಪ್ರಜೆಗಳನ್ನು ವಿಂಗಡಿಸುವ ಕುತಂತ್ರ ನಡಿಸುತ್ತಿದೆ. ಹಿಂದು, ಕ್ರೈಸ್ತ ಮತ್ತು ಈಜುವರೊಳಗೆ ಭೇದವನ್ನೆಬ್ಬಿಸಿ ತನ್ನ ಬೇಳೆ ಬೇಯಿಸಲೆತ್ನಿಸುತ್ತಿದೆ. ತಿರುವಾಂಕೂರು ಸ್ಟೇಟ್ ಕಾಂಗ್ರೆಸಿನವರು ಈ ಕುಟಿಲೋಪಾಯವನ್ನು ಬಯಲಿಗೆಳೆದು ಪುನಃ ಸತ್ಯಾಗ್ರಹಮಾಡುವ ನಿರ್ಧಾರವಮಾಡಿರುತ್ತಾರೆ. ಮೈಸೂರಿನಲ್ಲಿ ಉಗ್ರ ಚಳವಳ ನಡೆದು ಸರ್ದಾರ್ ವಲ್ಲಭಾಯಿಯವರ ಮಧ್ಯಸ್ತಿಕೆಯಿಂದ. ರಾಜಿಯಾದರೂ ಪರಿಸ್ಥಿತಿಯು ಸಮಾಧಾನಕರವಿರುವುದಿಲ್ಲ. ಪುನಃ ಸ್ಟೇಟ್ ಕಾಂಗ್ರೆಸ್ ಮತ್ತು ಸರಕಾರಕ್ಕೆ ತಿಕ್ಕಾಟವೆದ್ದಿದೆ. ಹೈದರಾಬಾದಿನಲ್ಲಿ ಸತ್ಯಾಗ್ರಹವು ನಡೆಯುತ್ತಿದೆ. ಜನವರಿ ತಾ. ೨೬ರಲ್ಲು ಹೈದರಾಬಾದ್ ದಿನವು ದೇಶದಲ್ಲೆಲ್ಲಾ ಆಚರಿಸಲ್ಪಟ್ಟಿತು

ಕರ್ನಾಟಕ ಮತ್ತು ಮಹಾರಾಷ್ಟ್ರದ ಚಿಕ್ಕ ಪುಟ್ಟ ಹಲವು ಸಂಸ್ಥಾನಗಳ ಪೈಕಿ ಕೆಲವು ಪ್ರಜೆಗಳ ಕೇಳಿಕೆಯಂತೆ ಜವಾಬ್ದಾರಿ ರಾಜ್ಯಭಾರವನ್ನಿತ್ತಿವೆ. ಔಂದ್ ಸಂಸ್ಥಾನದ ರಾಜರು, ತನ್ನ ರಾಜ್ಯದ ಸಂಪೂರ್ಣ ಜವಾಬ್ದಾರಿಯನ್ನು ಪ್ರಜೆಗಳಿಗೆ ಬಿಟ್ಟು ಕೊಟ್ಟು ತಾನು ಪ್ರಜಾಸೇವಕನಾಗಿ ಕೇವಲ ಸೂತ್ರಬದ್ಧ ಅರಸನಾಗಿರಲೊಪ್ಪಿರುವ ಮಾದರಿಯನ್ನು ಇತರ ರಾಜ ಮಹಾರಾಜರುಗಳು ಬೇಗನೆ ಅನುಸರಿಸದಿದ್ದಲ್ಲಿ ದೇಶೀಯ ಸಂಸ್ಥಾನಗಳಲ್ಲಿ ನೆಮ್ಮದಿಯು ನೆಲೆಗೊಳ್ಳುವಹಾಗಿಲ್ಲ ಒರಿಸ್ಸದ ಡೆಂಕನಾಲ್ ಮತ್ತು ಟಾಲ್ಚಾರ್ ಸಂಸ್ಥಾನಗಳಲ್ಲಿ ಭಯಂಕರ ದಬ್ಬಾಳಿಕೆ ನಡೆದಿದೆ. ಟಾಲ್ಚಾರಿನ 75,000 ಮಂದಿ ಜನಸಂಖ್ಯೆಯಲ್ಲಿ 26,000 ಮಂದಿ ದಬ್ಬಾಳಿಕೆಯನ್ನು ಸಹಿಸಲಾರದೆ ಸಂಸ್ಥಾನ ಬಿಟ್ಟು ಹೋಗಿ ಈಗ ೨ ತಿಂಗಳುಗಳಿಂದ ಬ್ರಿಟಿಷ್ ಒರಿಸ್ಸದಲ್ಲಿ ಆಶ್ರಯಪಡೆದಿರುತ್ತಾರೆ. ರಣಪುರದಲ್ಲಿ, ಪೊಲಿಟಿಕಲ್ ಏಜಂಟರೊಬ್ಬರು ಕೊಲ್ಲಲ್ಪಟ್ಟ ನೆವನದಿಂದ ಅಧಿಕಾರಿಗಳು ಪೈಶಾಚಿಕವಾಗಿ ಪ್ರಜೆಗಳನ್ನು ಪೀಡಿಸುತ್ತಿದ್ದಾರೆ.

ಉತ್ತರ ಹಿಂದುಸ್ಥಾನದ ಹಲವು ಸಂಸ್ಥಾನಗಳಲ್ಲಿಯೂ ಪ್ರಜೆಗಳು ಅಹಿಂಸಾತ್ಮಕ ಚಳವಳ ನಡಿಸಿರುತ್ತಾರೆ. ರಾಜಕೋಟೆಯಲ್ಲಿ ಸರ್ದಾರ್ ವಲ್ಲಭಾಯಿಯವರ ನೇತೃತ್ವದಲ್ಲಿ ಪ್ರಬಲ ಚಳವಳ ನಡೆದು ಒಮ್ಮೆ ಸಂಧಿಯಾಗಿ ಅನಂತರ ಅಲ್ಲಿಯ ಠಾಕೂರು ಸಾಹೇಬರು, ತಾನು ಕೊಟ್ಟ ಮಾತಿಗೇನೇ ತಪ್ಪಿ ನಡೆದ ಕಾರಣ ಪುನಃ ಸತ್ಯಾಗ್ರಹ ಆರಂಭಿಸಲ್ಪಟ್ಟಿದೆ. ಜಯಪುರ ಸಂಸ್ಥಾನಾಧಿಕಾರಿಗಳು, ಸೇಟ್ ಜಮುನಾಲಾಲ್ ಬಜಜರು ಜಯಪುರಕ್ಕೆ ಪ್ರವೇಶಿಸಬಾರದೆಂದು ನಿಷೇಧಿಸಿ ಅಲ್ಲಿಯ ಪ್ರಜಾಮಂಡಲಿಯನ್ನು ಬೇಕಾಯಿದೇಶೀರ ಸಂಸ್ಥೆಯಾಗಿ ಮಾಡಿ ದಬ್ಬಾಳಿಕೆಯನ್ನಾರಂಭಿಸಿರುವರು. ಸೇಟ್ ಜಮುನಾಲಾಲರು ಈ ನಿಷೇಧಾಜ್ಞೆಯನ್ನು ಬೇಗನೆ ಉಲ್ಲಂಘಿಸಲಿರುವರು. ಬರೋಡದ ಪ್ರಜೆಗಳು ಸ್ವಾತಂತ್ರ್ಯ ಚಳವಳ ಹೂಡಲು ಸಿದ್ಧತೆ ಮಾಡುತ್ತಿದ್ದಾರೆ.

ಇಂಡಿಯಾ ಸರಕಾರದ ಆತಂಕ

ಕಾಂಗ್ರೆಸಿನ ಮಾಡದಿಯನ್ನನುಸರಿಸಿ, ಕಾಂಗ್ರೆಸ್ ಮುಖಂಡರ ಪ್ರೇರಣೆ ಮತ್ತು ಪ್ರೋತ್ಸಾಹದಿಂದ ದೇಶೀಯ ಸಂಸ್ಥಾನದ ಪ್ರಜೆಗಳು ಅಹಿಂಸಾತ್ಮಕ ಸ್ವಾತಂತ್ರ್ಯ ಚಳವಳ ಹೂಡಿ ತಮ್ಮ ಹಕ್ಕು ಬಾಧ್ಯತೆಗಳನ್ನು ಸಾಧಿಸುತ್ತಿರುವುದು ಹಿಂದೀ ಸರಕಾರಕ್ಕೆ ಸಹಸಿಯವಿರುವುದಿಲ್ಲೆಂಬುದು ರಾಜಕೋಟೆಯ ವಿದ್ಯಮಾನದಿಂದ ಸುವಿದಿತವಾಗಿದೆ. ಅಲ್ಲಿಯ ಠಾಕೂರು ಸಾಹೇಬರು, ಪ್ರಜೆಗಳ ಹಿತಕಾಂಕ್ಷಿಯಾಗಿ ತನ್ನ ಸಂಸ್ಥಾನದ ಶ್ರೇಯಸ್ಸನ್ನು ಹಾರೈಸಿ ಸರ್ದಾರ್ ವಲ್ಲಭಾಯಿಯವರೊಡನೆ ಒಪ್ಪಂದ ಮಾಡಿಕೊಂಡ ಕುರಿತು ರಾಜಕೋಟೆಯ ಆಂಗ್ಲೇಯ ದಿವಾನರಾದ ಸರ್. ಪೇಟ್ರಿಕರೂ ರೆಸಿಡೆಂಟರಾದ ಮಿ. ಗಿಬ್ಸನರೂ ತೀವ್ರ ಅತೃಪ್ತಿ ಸೂಚಿಸಿ, ಸರ್ದಾರರನ್ನೂ ಕಾಂಗ್ರೆಸನ್ನೂ ಟೀಕಿಸಿ, ಇಂಡಿಯಾ ಸರಕಾರದ ಅತೃಪ್ತಿಗೆ ಪಾತ್ರರಾಗುವಿರೆಂದು ಠಾಕೂರು ಸಾಹೇಬರಿಗೆ ಬೆದರಿಕೆ ಹಾಕಿ, ಒಮ್ಮೆ ಮಾಡಿದ ಒಪ್ಪಂದವನ್ನು ಮುರಿಯುವಂತೆ ಮಾಡಿಸುವರು. ಜಯಪುರದ ಸಿಕಾರಿನ ಸಾಮಂತ ರಾಜ್ಯದಲ್ಲಿ ನಡೆದ ಸತ್ಯಾಗ್ರಹದಲ್ಲಿ ಸೇಟ್ ಜಮುನಾಲಾಲ ಬಜಜರು ಭಾಗವಹಿಸಿ ಅದನ್ನು ಜಯಶೀಲವಾಗಿ ಕೊನೆಗೊಳಿಸಿರುವರಷ್ಟೆ. ಇದರಿಂದ ಜಯಪುರ ದರ್ಬಾರಿನವರು ಅವರ ಮೇಲೆ ರೇಗಿ ಬಿದ್ದು ಸೇಟ್ ಜಮುನಾಲಾಲರು ಜಯಪುರಕ್ಕೆ ಕಾಲಿಡಬಾರದೆಂದು ತಡೆಹಾಕಿರುತ್ತಾರೆ. ಇದಕ್ಕೆ ಇಂಡಿಯಾ ಸರಕಾರದ ಸಂಪೂರ್ಣ ಬೆಂಬಲವಿರುವುದೆಂದು ತಿಳಿದುಬಂದಿದೆ. ಒರಿಸ್ಸದ ಡೆಂಕನಾಲ್, ಟಾಲ್ಚಾರ್ ಮತ್ತು ರಣಪುರ ಸಂಸ್ಥಾನಾಧಿಕಾರಿಗಳು, ತಮ್ಮ ಪ್ರಜೆಗಳ ತೀವ್ರವಾದ ಚಳವಳವನ್ನು ಕಠಿಣವಾಗಿ ಅಣಗಿಸಲು ಇಂಡಿಯಾ ಸರಕಾರವು ಬೇಕಾದ ಸಹಾಯವಿತ್ತಿರುತ್ತದೆ. ಒರಿಸ್ಸದ ಕಾಂಗ್ರೆಸ್ ಮಂತ್ರಿಮಂಡಲವು, ಕ್ರೂರ ದಬ್ಬಾಳಿಕೆಗೊಳಗಾಗಿರುವ ಈ ಬಡ ಪ್ರಜೆಗಳಿಗೆ ಆಶ್ರಯವೀಯುವುದು ಗವರ್ನರರಿಗೆ ಅಸಹನೀಯವಾಗಿದೆ. ಈ ಸಂಬಂಧವಾಗಿ ಮಂತ್ರಿಮಂಡಲ ಮತ್ತು ಗವರ್ನರರೊಳಗೆ ತಿಕ್ಕಾಟವುಂಟಾಗಿದೆ. ದೇಶೀಯ ಸಂಸ್ಥಾನಗಳಲ್ಲಿಯೂ ಕಾಂಗ್ರೆಸ್ ಮುಖಂಡರ ಅಥವಾ, ಕಾಂಗ್ರೆಸಿನ ಪ್ರಭಾವವು ಹಬ್ಬಿ ಬೆಳೆಯುತ್ತಿರುವುದರಿಂದ ಇಂಡಿಯಾ ಸರ[illegible]ಗೊಂಡಿದೆ. ಈ ಪ್ರವಾಹವನ್ನು ತಡೆಗಟ್ಟಲು ಅದು ಒಳಗಿಂದೊಳಗೆ ಸಾಧ್ಯವಾದ ಪ್ರಯತ್ನವಲ್ಲಾ ನಡಿಸುತ್ತಿದೆ.

ಮೈಸೂರಾಯರಿಗೆ ಗಾಂಧೀಜಿಯವರ ಪತ್ರ

ದೇಶೀಯ ಸಂಸ್ಥಾನಗಳಲ್ಲಿ ಪ್ರಜಾಜವಾಬ್ದಾರಿ ರಾಜ್ಯಭಾರವೀಯಲು ಚಕ್ರವರ್ತಿ ಸರಕಾರದವರ ಆತಂಕವೇನೂ ಇಲ್ಲೆಂದು ಒಂದೆಡೆ ಹೇಳಿ ಇನ್ನೊಂದೆಡೆ ಅದಕ್ಕೆ ಸಾಧ್ಯವಾದಷ್ಟು ತಡೆಹಾಕಿನೋಡುವ ಬ್ರಿಟಿಷ್ ಸರಕಾರದ ದ್ವಿಮುಖ ಧೋರಣೆಯು ಅರ್ಥರಹಿತ ಮತ್ತು ಅನ್ಯಾಯವಾದುದು. ದೇಶೀಯ ಸಂಸ್ಥಾನದ ಪ್ರಜೆಗಳ ಸ್ವಾತಂತ್ರ್ಯ ಚಳವಳವು ಇಂದೀಗ ಅಖಿಲಭಾರತದ ಪ್ರಾಮುಖ್ಯ ಪ್ರಶ್ನೆಯಾಗಿ ಬೆಳೆದಿದೆ. ಈ ಸಂದರ್ಭದಲ್ಲಿ ಇಂಡಿಯಾ ಸರಕಾರದ ಧೋರಣೆಯೇನೆಂದು ಸ್ಪಷ್ಟವಾಗಿ ತಿಳಿಸಲು ಮಹಾತ್ಮಾಗಾಂಧಿಯವರು ವೈಸರಾಯರಿಗೆ ಪತ್ರಬರೆದಿರುವರೆಂಬುದು ತಿಳಿದುಬರುತ್ತದೆ. ಸಂಸ್ಥಾನಿಕ ಪ್ರಜೆಗಳ ಸ್ವಾತಂತ್ರ್ಯ ಚಳವಳಕ್ಕೆ ಇಂಡಿಯಾ ಸರಕಾರವು ಅಡಹಾಕುವ ಧೋರಣೆ ವಹಿಸಿದರೆ ಅದನ್ನು ವಿರೋಧಿಸುವುದು ಕಾಂಗ್ರೆಸಿನ ಕರ್ತವ್ಯವಾಗುವುದು. ಅದರಿಂದಾಗಿ ಅಖಿಲಭಾರತ ಬಿಕ್ಕಟ್ಟೊಂದು ಉಪಸ್ಥಿತವಾಗುವುದು. ವೈಸರಾಯರು ಗಾಂಧಿಜಿಯವರಿಗೇನು ಉತ್ತರಕೊಡಲಿರುವರೋ ನೋಡಲಿದೆ.

೧ನೇ ಪುಟದಿಂದ

ನ್ನು ತಯಾರಿಸಿ ಈ ತನ್ನ ನೌಕಾಪಡೆಯನ್ನು ಬಲಗೊಳಿಸುತ್ತಿದೆ ಫ್ರಾನ್ಸ್ ಮತ್ತು ಇಟಲಿಗಳೊಳಗೆ ತೀವ್ರ ವೈಮನಸ್ಯವುಂಟಾಗಿದೆ. ಅಮೇರಿಕದ ಪ್ರಚಂಡ ಯುದ್ಧೋಪಕರಣ ಸಿದ್ಧತೆಯಿಂದ ಜಪಾನು ದಿಗಿಲುಗೊಂಡಿದೆ.

ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್—

ಇದರ 19ನೇ ವಾರ್ಷಿಕ ರಿಪೋರ್ಟ್ ನಮ್ಮೆಡೆಗೆ ಬಂದಿದೆ ವಿಮರ್ಶೆ ಯಥಾವಕಾಶವಾಗಿ: [ಸಂ.ನ

ಕಾಮನ್‌ವೆಲ್ತ್ ಎಶ್ಯೂರೆನ್ಸ್ ಕೊ., ಲಿಮಿಟೆಡ್.

ಈ ಸಂಸ್ಥೆಯ ನವಮ ವರ್ಷದ ವರದಿಯು ಅದರ ವಿಮಾತಜ್ಞರ ಮೂರನೇ ತ್ರೈವಾರ್ಷಿಕಗಳ ವರದಿಯೊಂದಿಗೆ ಕೈಸೇರಿರುವುದು. ದೇಶೀಯ ಪ್ರಗತಿಪರ ವಿಮಾ ಸಂಸ್ಥೆಗಳಲ್ಲಿ ಕಾಮನ್‌ವೆಲ್ತ್ ಎಶ್ಯೂರೆನ್ಸ್ ಕಂಪೆನಿಯು ಒಂದೆಂದು ಧಾರಾಳವಾಗಿ ಹೇಳಬಹುದಾಗಿದೆ. ವರದಿಯ ಮೇರೆಗೆ ಕಂಪೆನಿಯು ಜನತೆಯ ಪೂರ್ಣ ಪ್ರೇಮ ವಿಶ್ವಾಸಕ್ಕೆ ಪಾತ್ರವಾಗುವ ರೀತಿಯಲ್ಲಿ ತನ್ನ ಕಾರ್ಯ ಉದ್ಯಮಗಳನ್ನು ಬಹು ಯಶಸ್ವಿಯಾಗಿ ನಡೆಸುತ್ತಿರುವುದೆಂದು ತಿಳಿಯಬಹುದಾಗಿದೆ. ದೇಶದ ಪ್ರಸಿದ್ಧ ಮುಂದಾಳುಗಳಿಂದ ಸ್ಥಾಪಿತವಾದ ಈ ಕಂಪೆನಿಯು, ಗೋಖಲೆ, ರಾನಡೆ, ಮುಂತಾದ ಹಲ ದೇಶೋದ್ಧಾರಕರನ್ನು ದೈವಕ್ಕೊದಗಿಸಿಕೊಟ್ಟ, ದೇಶದ ಉಜ್ವಲ ಸಂಸ್ಕೃತಿ, ರಾಷ್ಟ್ರಾಭಿಮಾನಕ್ಕೆ ಪೂರ್ವಕಾಲದಿಂದಲೂ ಪ್ರಸಿದ್ಧ ಕೇಂದ್ರಗಳಲ್ಲೊಂದಾದ ಪೂನಾದಲ್ಲಿ ತನ್ನ ಪ್ರಧಾನ ಕಾರ್ಯಾಲಯವನ್ನು ಆರಿಸಿಕೊಂಡಿದ್ದು, ಕಳೆದ ಒಂಬತ್ತು ವರ್ಷಗಳ ತನ್ನ ಅವಿಶ್ರಾಂತ ಪರಿಶ್ರಮ, ಪ್ರಾಮಾಣಿಕತೆ, ಮಿತವ್ಯಯ ರೀತ್ಯಾ ವ್ಯವಹಾರ ಕಾರ್ಯದಿಂದ ವಿಮಾ ಸಾಮ್ರಾಜ್ಯದಲ್ಲಿ ಉತ್ಕೃಷ್ಟ ಸ್ಥಾನವನ್ನಪಡೆದು, ದೇಶದಲ್ಲಿ ತನ್ನ ಪ್ರಭಾವವನ್ನು ಬೀರಿ ಬೆಳಗುತ್ತಿದೆ.

ಕಳೆದ 1938ನೇ ಎಪ್ರಿಲ 30ಕ್ಕೆ ಅಂತ್ಯವಾಗುವ ಈ ಕಂಪೆನಿಯ ನವಮ ವರ್ಷದ ವರದಿಯ ಮೇರೆಗೆ, ಕಂಪೆನಿಯು ಎಂದಿಗಿಂತಲೂ ಹೆಚ್ಚಿನ ಉತ್ಕೃಷ್ಟ ವಹಿವಾಟುಗಳ ಸರ್ವತೋಮುಖ ಅಭಿವೃದ್ಧಿಯು ದಾಖಲೆಯನ್ನು ಮುಂದಿಡುತ್ತದೆ, ಎಕ್ಚುವ ವಾಲ್ಯುವೇಶನಿನ ವರದಿ ಮೇರೆಗೆ ಕಂಪೆನಿಯು ಈ ಮೊದಲಿನ ವರದಿ ಕಾಲಕ್ಕಿಂತ ಬೋನಸ್ಸು, ವ್ಯಾಪಾರ ವಹಿವಾಟುಗಳಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಗಳಿಸಿರುವುದೆಂಬುದು ಸ್ಪಷ್ಟವಿದೆ. ವಿಮಾತಜ್ಞರ ವರದಿಯ ಮೇರೆಗೆ 5300 ಪಾಲಿಸಿಗಳಿದ್ದುದು ಇದೀಗ 11000ಕ್ಕೆ ಮೀರಿರುವುದೆಂದು ತಿಳಿಯುತ್ತದೆ ಮಾತ್ರವಲ್ಲದೆ ವಿಮಾ ಮೊಬಲಗು ರೂ. 59 ಲಕ್ಷವಿದ್ದುದು ರೂ. ಒಂದೂವರೆ ಕೋಟಿಗೂ ಮಿಕ್ಕಿರುವುದೆಂದು ವರದಿಯ ಅಂಕೆ ಸಂಖ್ಯೆಯಿಂದ ತಿಳಿಯಬಹುದಾಗಿದೆ. ಆದರೆ ಮರಣವು ಸ್ವಲ್ಪದಲ್ಲೇ ಜಾರಿಗೆ ಬರಲಿರುವ ಹೊಸ ಕಾಯಿದೆಯ ಶರ್ತಗಳನ್ನು ಪೂರೈಸಲು ಈ ಮೊದಲೇ ಒಳ್ಳೆ ವ್ಯವಸ್ಥೆ ಮಾಡಿರುವುದಾಗಿ ತಿಳಿದುಬರುತ್ತದೆ. ಹೀಗೆ ಕಂಪೆನಿಯು ಅಭಿವೃದ್ಧಿ ಹೊಂದುತ್ತಿರುವ ಕಾಲದಲ್ಲಿ ಇದರ ಆಡಳಿತ ವೆಚ್ಚವು ಪೂರ್ವ ವರ್ಷ 41.65% ಇದ್ದುದು ಈ ವರ್ಷ 39 17%ಕ್ಕೆ ಇಳಿದಿರುವುದೆಂಬುದು ಅಭಿನಂದನೀಯವು. ಕಂಪೆನಿಯು ಪಾಲಿಸಿದಾರರ ಕಡೆಗೆ ತೋರಿಸುತ್ತಿರುವ ಸಹಾನುಭೂತಿ ಭದ್ರವಾದ ಕಂಪೆನಿಯ ಧೈರ್ಯ ಸಂಚಯ ಇವೆಲ್ಲಾ ಶ್ಲಾಘನೀಯವು.

ಕಂಪೆನಿಯು ಇದೀಗ ತನ್ನ ಪ್ರಧಾನ ಕಛೇರಿಗಾಗಿ ಪೂನಾದಲ್ಲಿ ಒಂದು ಭವ್ಯವಾದ ಉತ್ತಮ ಕಟ್ಟಡ ನಿರ್ಮಾಣಕ್ಕೆ ತೊಡಗಿರುವುದು. ಬರುವ ಮೂರು ತಿಂಗಳಿಗೆ ಈ ಕಟ್ಟಡದ ಕೆಲಸವು ಪೂರೈಸಬಹುದಾಗಿದೆಂದು ತಿಳಿದಿದೆ. ಸುಮಾರು ಒಂದೂವರೆ ಲಕ್ಷ

ಶ್ರೀ ಸುಭಾಷಚಂದ್ರ ಭೋಸರ ಪ್ರಚಂಡ ವಿಜಯ...ಕೇ

ಸೇಕೆಕಾಲದೊಳಗೆ ಲೋಕಯುದ್ಧವಾಗಬಹುದೆಂದು ಜವಾಹರಲಾಲರ ಹೇಳಿಕೆ—ಪಂಜಾಬು ಕಾಂಗ್ರೆಸ್ ಕ...

ಸ್ಪೈನಿನ ಭೀಕರ ಯುದ್ಧದ ಪರಿಣಾಮವೇನು?

ಸ್ಪೈನಿನ ಅಂತಃಕಲಹವು ಆರಂಭವಾಗಿ ಈಗ 26 ತಿಂಗಳುಗಳಾದುವು. ಕಳೆದ ಸಪ್ಟೆಂಬರ ವರೆಗಿನ 22 ತಿಂಗಳುಗಳ ಯುದ್ಧದಿಂದ ಒಟ್ಟು ಸುಮಾರು 500,000 ಜನರು ಹತರಾಗಿ 60 ಸಾವಿರ ಮಿಲ್ಯ ಚಿನ್ನದ ಪೆಸೆಟಾಸ್ (ಸ್ಪೆನಿಶ್ ನಾಣ್ಯ) ಗಳಷ್ಟು ಸೊತ್ತು ನಾಶವಾಗಿರುವುದೆಂದು ಅಂದಾಜು ಮಾಡಲಾಗಿದೆ. ಅನಂತರ 4 ತಿಂಗಳುಗಳಲ್ಲೀಗ ಅತ್ಯಂತ ಭೀಕರ ಯುದ್ಧ ನಡೆದಿರುತ್ತದೆ. ಎಬ್ರೋ ಮತ್ತು ಸೆಗ್ರೆ ರಣಾಂಗಗಳಲ್ಲಿ ಘೋರ ಕದನಗಳು ನಡೆದಿರುತ್ತವೆ. ಈಗ ತಾನೆ ಬಾರ್ಸೆಲೋನದ ಬಳಿ ನಡೆದು ಮುಗಿದಿರುವ ಸಮರವು ಅತ್ಯಂತ ಭೀಷಣವಾದುದು. ಇದರ ಹಾವಳಿಯು ಇಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಪ್ರತಿಯೊಂದು ಪ್ರಮುಖ್ಯ ಯುದ್ಧದಲ್ಲಿಯೂ ಜನರಲ್ ಫ್ರೇಂಕೋರವರು ಗೆದ್ದಾಗ, ಸ್ಪೆನಿಶ್ ಸರಕಾರದ ಪತನ ನಿಶ್ಚಯವೆಂಬಂತೆ ಪ್ರಕಟಿಸಲ್ಪಡುತ್ತಿತ್ತು. ಆದರೆ ಈ ವರೆಗೂ ಸ್ಪೆನಿಶ್ ರಿಪಬ್ಲಿಕನ್ ಸರಕಾರವು ಬಂಡಾಯಗಾರರ ಧಾಳಿಯನ್ನು ಎದುರಿಸಿಕೊಂಡು ಬಂದಿರುವುದು. ಆದರೆ ಇನ್ನು ಮುಂದೆ ಅದಕ್ಕೆ ಹೆಚ್ಚುಕಾಲ ಹಾಗೆ ಮಾಡಲು ಸಾಧ್ಯವಾಗಲಾರದು. ಬಂಡಾಯಗಾರರಿಗೆ ಜರ್ಮನಿ ಮತ್ತು ಇಟಲಿಗಳು ಹೆಚ್ಚೆಚ್ಚಾಗಿ ಯುದ್ಧೋಪಕರಣ ಮತ್ತು ಸೈನಿಕ ಸಹಾಯವೀಯುತ್ತಿವೆ. ದೊಡ್ಡ ವಿಮಾನ ಪಡೆಯ ಬಲದಿಂದ ಸ್ಪೆನಿಶ್ ಸರಕಾರವನ್ನು ಜನರಲ್ ಫ್ರೇಂಕೋರವರು ಸೋಲಿಸಿರುವರೆಂದರೆ ಅತಿಶಯೋಕ್ತಿಯಾಗಲಾರದು. ಆದರೆ ಇಂಗ್ಲೆಂಡ ಮತ್ತು ಫ್ರಾನ್ಸ್ ಮೊದಲಾದ ರಾಷ್ಟ್ರಗಳ ತಾಟಸ್ಥ್ಯದ ಅರ್ಥರಹಿತ ಧೋರಣೆಯಿಂದಾಗಿ ನ್ಯಾಯವಾಗಿ ಸ್ಥಾಪಿತವಾಗಿರುವ ಸ್ಪೆನಿಶ್ ರಿಪಬ್ಲಿಕನ್ ಸರಕಾರಕ್ಕೆ ಯಾವ ಸಹಾಯವೂ ಹೊರಗಣಿಂದ ದೊರೆಯದಂತಾಗಿದೆ. ಅವರ ಕಡೆಯವರು ಯುದ್ಧೋಪಕರಣವಂತಿರಲಿ, ಉಣ್ಣಲು ಸಾಕಷ್ಟು ಆಹಾರವಿಲ್ಲದೆ ಹೊಟ್ಟೆ ಕಟ್ಟಿಕೊಂಡು ಜೀವಿಸಬೇಕಾಗಿದೆ. ಈಗ ಜನರಲ್ ಫ್ರೇಂಕೋರವರು, ಸ್ಪೆನಿಶ್ ಸರಕಾರದ ಮುಖ್ಯ ಆಶ್ರಯವಾಗಿದ್ದ ಬಾರ್ಸೆಲೋನವನ್ನು ವಶಪಡಿಸಿಕೊಂಡಿರುವರು. ಸ್ಪೈನಿನಲ್ಲಿ ಪ್ರಜಾಸತ್ತೆಯ ಕೊನೆಯ ಕೋಟೆಯೆಂದರೆ ಬಾರ್ಸೆಲೋನ. ಇತಿಹಾಸ ಪ್ರಸಿದ್ಧ ಪಟ್ಟಣವಿದು. ಹಿಂದೆ ನೆಪೋಲಿಯನರು ಇದನ್ನೇ ವಶಪಡಿಸಿಕೊಳ್ಳಲು ಭಗೀರಥ ಪ್ರಯತ್ನ ಮಾಡಿ, ಸಾವಿರಾರು ಸೈನಿಕರನ್ನು ಕಳಕೊಂಡು ರಕ್ತದ ಕಾಲುವೆ ಹರಿಸಿ, ಹತಭಗ್ನರಾಗಿ ಹಿಂತಿರುಗಿದ್ದರು. ಇದೀಗ ಜನರಲ್ ಫ್ರೇಂಕೋರವರ ವಶವಾಗಿರುವುದರಿಂದ ಸ್ಪೆನಿಶ್ ಸರಕಾರಕ್ಕೆ ಅತಿ ದೊಡ್ಡ ಹಾನಿಯುಂಟಾಗಿದೆ. ಪರಿಸ್ಥಿತಿಯು ಇದೇ ರೀತಿ ನಡೆದಲ್ಲಿ ಕಟ್ಟಕಡೆಗೆ ಜನರಲ್ ಫ್ರೇಂಕೋರವರಿಗೆ ವಿಜಯವಂತೂ ನಿಶ್ಚಯವೆಂಬಂತೆ ತೋರುವುದು. ಆ ಸಣ ತೊಟ್ಟಿದ್ದಾರೆ ಮುಸಲೋನಿಯವರು. ಹಾಗಾದ ಪಕ್ಷದಲ್ಲಿ ಭೂಮಧ್ಯಸಾಗರದಲ್ಲಿ ಇಟಲಿ ಮತ್ತು ಜರ್ಮನಿಗಳ ಹಿಡಿತವು ಪ್ರಬಲವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಜನರಲ್ ಫ್ರೇಂಕೋರವರು ತಾನು ವಿಜಯಿಯಾದ ಮೇಲೆ ಯಾವ ಧೋರಣೆ ವಹಿಸುವರೆಂದು ನೋಡಬೇಕಾಗಿದೆ. ಮುಸಲೋನಿ ಮತ್ತು ಹಿಟ್ಲರರ ಕೈಗೊಂಬೆಯಾಗಿ ಆಡಳಿತ ನಡೆಸಿದರೆ ಸ್ಪೆನಿಶ್ ಜನರು ಅವರನ್ನು ವಿರೋಧಿಸದಿರಲಾರರು. ಆಗ ಪಾಳ್ಯದೊಳಗೇನೇ ಕಲಹವೇಳುವ ಸಂಭವವಿದೆ. ಮುಸಲೋನಿ ಮತ್ತು ಹಿಟ್ಲರರನ್ನು ಗಣಿಸದೆ ಸ್ವತಂತ್ರವಾಗಿ ನಡೆದರೂ ಜನರಲ್ ಫ್ರೇಂಕೋರವರಿಗೆ ಕಷ್ಟ ತಪ್ಪಲಾರದು. ಏನಾದರೂ ನೆವನ ಹಿಡಿದು ಅವರನ್ನು ಸದೆಬಡಿಯಲು ಮುಸಲೋನಿಯವರು ಹಿಂಜರಿಯಲಾರರು. ಆದುದರಿಂದ ದುರ್ದೈವೀ ಸ್ಪೈನಿನ ಗತಿಯು ಮುಂದೇನಾಗುವುದೆಂದು ಹೇಳಬರುವುದಿಲ್ಲ.

ತ್ರಿಪುರಿ ಕಾಂಗ್ರೆಸಿನ ಅಧ್ಯಕ್ಷತನ

ತ್ರಿಪುರಿ ಕಾಂಗ್ರೆಸಿನ ಅಧ್ಯಕ್ಷ ಪದವಿಯ ವಿಷಯದಲ್ಲಿ ದೊಡ್ಡ ವಾದವದ್ದಿರುವುದು. ಇದರಿಂದ ಕಾಂಗ್ರೆಸಿನೊಳಗೆ ಒಡಕುಂಟಾಗುವ ವಿಲಕ್ಷಣ ಚಿನ್ಹೆಗಳು ತೋರಬರುತ್ತಿವೆ. ಒಳಗಿಂದೊಳಗೆ ಹೊಗೆಯಾಡುತ್ತಿದ್ದ ಎಡಬಲ ಪಕ್ಷಗಳೊಳಗಣ ವೈಷಮ್ಯವು ಉರಿದೇಳುವ ಸಂಭವ ತೋರುತ್ತದೆ. ಶ್ರೀ ಸುಭಾಸಬಾಬುಗಳು ಅಧ್ಯಕ್ಷರಾಗಿ ಆರಿಸಲ್ಪಟ್ಟಲ್ಲಿ ಬಲಪಕ್ಷೀಯರು ಅವರೊಂದಿಗೆ ಉತ್ಸಾಹದಿಂದ ಸಹಕರಿಸಲಾರರು. ಶ್ರೀ ಪಟ್ಟಾಭಿಯವರು ಆರಿಸಲ್ಪಟ್ಟರೆ ಎಡಪಕ್ಷೀಯರ ಆಸಕ್ತಿಯ ಸಹಕಾರ ಅವರಿಗೆ ದೊರೆಯಲಾರದು. ವೈಸರಾಯರು ಆದಷ್ಟು ಶೀಘ್ರವಾಗಿ ಫೆಡರೇಶನನ್ನು ಜಾರಿಗೆ ತರಬೇಕೆಂದು ಸೊಂಟಕಟ್ಟಿರುವಾಗ, ಇಡೀ ದೇಶವೇ ಅದನ್ನು ವಿರೋಧಿಸಲು ಒಕ್ಕಟ್ಟಾಗಬೇಕಾಗುವ ಸಂದರ್ಭದಲ್ಲಿ ಕಾಂಗ್ರೆಸಿನೊಳಗೇನೇ ಈ ಬಿಕ್ಕಟ್ಟುಂಟಾದುದು ದೊಡ್ಡ ಗಂಡಾಂತರವೇ ಸರಿ.

ತಪ್ಪು ಯಾರದು?

ಕಾಂಗ್ರೆಸು ನಿಜವಾಗಿಯೂ ಪ್ರಜಾಸತ್ತಾತ್ಮಕ ಸಂಸ್ಥೆಯಾಗಿದ್ದರೆ ತನಗೆ ಬೇಕಾದ ಪ್ರತಿನಿಧಿಗಳನ್ನು ಆರಿಸುವುದು ಪ್ರತಿನಿಧಿಗಳ ಪವಿತ್ರ ಹಕ್ಕು. ಆ ವಿಷಯದಲ್ಲಿ ಯಾರೂ ಕೈ ಹಾಕಿ ತಮ್ಮ ಅಧಿಕಾರ ತೋರಿಸುವುದು ಪ್ರಜಾಸತ್ತೆಗೆ ದೊಡ್ಡ ಕುಂದು. ಸರ್ದಾರ್ ವಲ್ಲಭಾಯಿಯವರೇ ಮೊದಲಾದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರು ಕಾಂಗ್ರೆಸ್ ಅಧ್ಯಕ್ಷ ಪಟ್ಟಕ್ಕೆ ಶ್ರೀ ಸುಭಾಸಭೋಸರನ್ನು ಬಿಟ್ಟು ಶ್ರೀ ಪಟ್ಟಾಭಿಯವರನ್ನು ಸೂಚಿಸಿದುದು ದೊಡ್ಡ ತಪ್ಪು, ಅದಕ್ಕವರು ಕೊಟ್ಟ ಕಾರಣಗಳಲ್ಲಿಯೂ ಹುರುಳಿಲ್ಲ. ಆದರೆ ಶ್ರೀ ಭೋಸರು ಇದರಿಂದ ರೇಗಿಬಿದ್ದು ಕಾಂಗ್ರೆಸಿನೊಳಗಣ ಬಲಪಕ್ಷೀಯರ ಮೇಲೆಲ್ಲಾ, ಫೆಡರೇಶನನ್ನು ಸ್ವೀಕರಿಸುವ ಮತ್ತು ತಮ್ಮ ಕೈಗೊಂಬೆಯಾದ ಅಧ್ಯಕ್ಷರು ಆರಿಸಿ ಬರುವಂತೆ ಪ್ರಯತ್ನಿಸುವ ಆರೋಪ ಹೊರಿಸಿದುದು ಕೂಡಾ ದೊಡ್ಡ ಅವಿವೇಕ. ಶ್ರೀ ಸತ್ಯಮೂರ್ತಿ, ಶ್ರೀ ಭೂಲಭಾಯಿ ದೇಸಾಯಿಗಳಂತಹ ಕಾಂಗ್ರೆಸಿನೊಳಗಣ ಬಲ ಪಕ್ಷದ ಕೆಲವು ಮೆಂಬರರು ಫೆಡರೇಶನನ್ನು ಸ್ವೀಕರಿಸಬೇಕೆಂಬ ಅಭಿಪ್ರಾಯದಿಂದಿದ್ದರೆ ಬಲಪಕ್ಷೀಯರೆಲ್ಲರೂ ಅದಕ್ಕೊಪ್ಪಿದ ಹಾಗಾಗಲಿಲ್ಲ. ಕಾಂಗ್ರೆಸಿನ ಅಧ್ಯಕ್ಷತನಕ್ಕೆ ಉಮೇದ್ವಾರರಾಗಿರುವ ಶ್ರೀ ಭೋಸರು ಈ ವಾದವನ್ನೆಬ್ಬಿಸಿದುದು ಅನಾವಶ್ಯಕ ಮತ್ತು ಅಚಾತುರ್ಯ.

ಕೇವಲ ಗೌರವಕ್ಕೆ ಮಾತ್ರವೆ?

ಕಾಂಗ್ರೆಸಿನ ಅಧ್ಯಕ್ಷತನವೆಂದರೆ ದೇಶದ ಹಿರಿದಾದ ಗೌರವದ ಸ್ಥಾನಮಾತ್ರ. ಅಗ್ರಸ್ಥಾನವಹಿಸಿ ಸಭಾಕಾರ್ಯಕಲಾಪಗಳನ್ನು ಸಾಂಗವಾಗಿ ನಡಿಸುವುದಷ್ಟೇ ಅಧ್ಯಕ್ಷರ ಕೆಲಸ. ಕಾಂಗ್ರೆಸಿನ ಧೋರಣೆ, ರೀತಿ ನೀತಿಗಳನ್ನೆಲ್ಲಾ ನಿಶ್ಚೈಸುವ ಕೆಲಸ ಕಾಂಗ್ರೆಸ್ ವರ್ಕಿಂಗ್ ಕಮಿಟಿದ್ದೆಂಬ ಸರ್ದಾರ್ ವಲ್ಲಭಾಯಿಯವರೇ ಮೊದಲಾದವರ ತರ್ಕದಲ್ಲಿ ಹೆಚ್ಚಿನ ಹುರುಳಿಲ್ಲೆಂಬುದು ಸ್ವಲ್ಪ ಆಳವಾಗಿ ವಿಚಾರಿಸಿದಲ್ಲಿ ವ್ಯಕ್ತವಾಗುವುದು. ಅಧ್ಯಕ್ಷರು ಪ್ರತಿಯೊಂದು ಪ್ರಾಂತದ ಪ್ರತಿನಿಧಿಗಳಿಂದ ಆರಿಸಲ್ಪಟ್ಟ ಬಹುತೇಕ ಇಡೀ ದೇಶದ ವಿಶ್ವಾಸಕ್ಕೆ ಪಾತ್ರರಾಗಿರುವವರು. ಕಾಂಗ್ರೆಸಿನ ಹೊಸ ಘಟನೆಯಂತೆ ಅವರು ಇಂಗ್ಲೆಂಡಿನ ಪ್ರಧಾನ ಮಂತ್ರಿ ಇಲ್ಲವೆ ಅಮೇರಿಕದ ಪ್ರೆಸಿಡೆಂಟರಿರುವರು. ಅವರು, ತನ್ನ ಕಾರ್ಯದಲ್ಲಿ ನೆರವಾಗುವಂತೆ ತನ್ನ ಮಂತ್ರಿ ಮಂಡಲವನ್ನು ಅರ್ಥಾತ್ ವರ್ಕಿಂಗ್ ಕಮಿಟಿಯನ್ನು ಆರಿಸುವುದಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡುವ ಕಾರ್ಯಕಲಾಪಗಳಿಗೆಲ್ಲಾ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೇ ಜವಾಬ್ದಾರರಾಗಿರುವರಲ್ಲದೆ ವರ್ಕಿಂಗ್ ಕಮಿಟಿಮೆಂಬರರಲ್ಲ. ಆದುದರಿಂದ ಕಾಂಗ್ರೆಸಿನ ಧೋರಣೆ ಮತ್ತು ರೀತಿನೀತಿಗಳನ್ನು ರೂಪಿಸುವುದರಲ್ಲಿ ಅಧ್ಯಕ್ಷರಿಗೆ ಹೆಚ್ಚಿನ ಜವಾಬ್ದಾರಿಯಿದೆ. ಮತ್ತು ದೇಶದ ಪ್ರಕೃತದ ಪರಿಸ್ಥಿತಿಯಲ್ಲಿ ಶ್ರೀ ಭೋಸರಂತಹ ಫೆಡರೇಶನಿನ ಉಗ್ರ ವಿರೋಧಿಯೂ, ತರುಣೋತ್ಸಾಹಿಯೂ ಆದ ಅಧ್ಯಕ್ಷರು ಆರಿಸಲ್ಪಡುವುದು ಉಚಿತವೆಂಬ ವಾದವು ಯುಕ್ತವಾದುದು. ... ದ್ವಾರರಾದ ಶ್ರೀ ಭೋಸರೇ ಮುಂದೊತ್ತಿದುದು ದೊಡ್ಡ ಪ್ರಮಾದವಾಯಿತು.

ಸ್ಪೈನಿನ ಅಂತಃಕಲಹವು

ಇನ್ನು ಮುಂದೆ ಶೀಘ್ರವಾಗಿ ಕೊನೆಗೊಂದಬಹುದೆಂದು ಹಲವರ ನಿರೀಕ್ಷೆಯಿದೆ. ಬಾರ್ಸೆಲೋನವು ತಮ್ಮ ವಶವಾದ ಮೇಲೆ ಇನ್ನು ಮುಂದೆ ಇಡೀ ಸ್ಪೈನನ್ನು ತಾವು ಗೆದ್ದಂತೆಯೇ ಸರಿಯೆಂದು ಬಂಡಾಯಗಾರರು ಉಬ್ಬಿ ಅಬ್ಬರಿಸುತ್ತಿದ್ದಾರೆ. ಮುಸಲೋನಿ ಹಿಟ್ಲರರೂ ಹಿರಿಹಿರಿ ಹಿಗ್ಗಿದ್ದಾರೆ. ಆದರೆ ಸ್ಪೆನಿಶ್ ಸರಕಾರದ ಪ್ರಧಾನ ಮಂತ್ರಿ ಸೀನರ್ ನೆಗ್ರಿನರು, ಯುದ್ಧವು ಇನ್ನು ಮುಂದೆಯೂ ಪ್ರಬಲವಾಗಿ ನಡಿಸಲ್ಪಡುವುದು. ಸರಕಾರದ ಕಡೆಯ ಸೇನೆಯೆಲ್ಲಾ ಬಾರ್ಸೆಲೋನದಿಂದ ದಕ್ಷಿಣಕ್ಕೆ ಸರಿದು ಬಂಡಾಯಗಾರರನ್ನು ಇದಿರಿಸಲು ಸಿದ್ಧವಾಗಿರುವುದು. ಅವರಿಗೆ ಯುದ್ಧ ಸಾಮಗ್ರಿಗಳೂ ಬೇಕಷ್ಟಿರುವವೆಂದು ಪ್ರಕಟಣೆ ಹೊರಡಿಸಿರುವರು. ಬಾರ್ಸೆಲೋನವು ಬಂಡಾಯಗಾರರ ಆಧೀನವಾದುದರಿಂದ ಸ್ಪೆನಿಶ್ ಸರಕಾರಕ್ಕೆ ದೊಡ್ಡ ಹಾನಿಯುಂಟಾಗಿರುವುದೆಂಬುದೇನೋ ನಿಜ. ಬಂಡಾಯಗಾರರು ಅತಿದೊಡ್ಡ ವಿಜಯವದು. ಆದರೆ ಇಷ್ಟರಲ್ಲೇ ಸ್ಪೆನಿಶ್ ಸರಕಾರದ ಬಲವು ಮುರಿಯಲ್ಪಟ್ಟಿತೆಂದು ಹೇಳಬರುವುದಿಲ್ಲ. ಮೇದ್ರಿದಿನ ದ್ವಾರದ ವರೆಗೆ ಮುಂದೊತ್ತಿದ ಬಂಡಾಯಗಾರರು ಹಿಂದಕ್ಕೋಡಿಸಲ್ಪಟ್ಟು ಇನ್ನೂ ಅದು ಅಜೇಯವಾಗಿರುವಂತೆಯೇ ಸ್ಪೈನಿನ ಯುದ್ಧವು ಇನ್ನೂ ಹೆಚ್ಚು ಸಮಯ ಮುಂದುವರಿಯಬಹುದು. ಸರಕಾರದ ಸೈನಿಕರು ಬಾರ್ಸೆಲೋನ ಪಟ್ಟಣದಲ್ಲಿ ಹೋರಾಟವೇನೂ ನಡಿಸದೆ ಹಿಂದೆ ಸರಿಯಲು ಮುಖ್ಯಕಾರಣವೆಂದರೆ ಆಹಾರದ ಅಭಾವ. ಅವರೇನೂ ಪರಾಜಿತರಾಗಿರುವುದಿಲ್ಲ. ಅವರ ಯುದ್ಧೋತ್ಸಾಹವೇನೂ ಕುಂದಿಲ್ಲ. ಫ್ರಾನ್ಸ್ ಇಂಗ್ಲಂಡ್ ಮೊದಲಾದ ರಾಷ್ಟ್ರಗಳು ಇನ್ನಾದರೂ ಅಂತರ ರಾಷ್ಟ್ರೀಯ ತಾಟಸ್ಥ್ಯದ ಫಾರ್ಸನ್ನು ಕೊನೆಗೊಳಿಸಿದರರೆ ಬಂಡಾಯಗಾರರು ಸ್ಪೈನನ್ನು ಸಂಪೂರ್ಣ ಗೆಲ್ಲುವುದು ಬಹಳ ಕಷ್ಟವಿದೆ.

ಶ್ರೀ. ಸುಭಾಸಭೋಸರಿಗೆ ರ್ವೋಟುಗಳ ಬಹುಮತ

ಜನವರಿ ತಾ. 29ರಲ್ಲಿ ದೇಶದ ಬೇರೆ ಬೇರೆ ಪ್ರಾಂತಗಳಲ್ಲಿ, ತ್ರಿಪುರಿ ಕಾಂಗ್ರೆಸ್ ಅಧ್ಯಕ್ಷತನಕ್ಕೆ ನಡೆದ ಚುನಾವಣೆಯಲ್ಲಿ 10 ಪ್ರಾಂತಗಳಲ್ಲಿ ಶ್ರೀ. ಸುಭಾಸಭೋಸರಿಗೂ 11 ಪ್ರಾಂತಗಳಲ್ಲಿ ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯನವರಿಗೂ ಬಹುಮತ ದೊರೆತಿರುವುದು. ಶ್ರೀ. ಸುಭಾಸಚಂದ್ರರಿಗೆ ಒಟ್ಟು 1575 ಮತ್ತು ಡಾಕ್ಟರ್ ಪಟ್ಟಾಭಿಯವರಿಗೆ 1376 ಮತಗಳು ದೊರೆತಿರುತ್ತಿವೆ.

ಶ್ರೀ. ಸುಭಾಸಭೋಸರಿಗೆ ಈ ಕೆಳಗಣಂತೆ ಬೇರೆ ಬೇರೆ ಪ್ರಾಂತಗಳಿಂದ ಮತ ದೊರೆತಿರುವುದು. ತಮಿಳನಾಡು 110, ಬರ್ಮಾ 8, ಪಂಜಾಬು 182, ಕೇರಳ 80, ಬಂಗಾಳ 404, ದಿಲ್ಲಿ 10, ಸಂಯುಕ್ತ ಪ್ರಾಂತ 269, ಕರ್ನಾಟಕ 106, ಅಸ್ಸಾ...

ಆಂಧ್ರ ... ಸ್ಪ 77, ... ಯಿ ಪಟ್ಟ...

13, ಉ... ರಾರ್ 11 ... ತ 13.

ಶ್ರೀ ... ಪ್ರಾಂತಗ... ನಾಡು 1... ಕೇರಳ 1... ಸಂಯುಕ್ತ... ಅಸ್ಸಾಮ... ರ 6, ... ಮಹಾರಾ... ಬೊಂಬಾ... 197 ... ರಾರ್ಧ 10 ... ಗಡಿನಾಡು...

ಈ ವಿ... ರೋಧಿಗ... ಭೋಸರೆ... ಮಾತಾಡ... ಯವರು ... ಗಳೆಲ್ಲಾ ... ಕರಿಸಿದ... ಭೋಸರು ... ಬಂದುದು ... ಗ್ರೆಸಿನ ದ... ಹೇಳಿಕೆ... ಯಲ್ಲೆಸಿ... ವಾದ ವಾದ... ಸಂತೋಷ... ಪಕ್ಷೀಯರ... ಕರಿಸುವರೆ... ಶ್ರೀ. ಎಸ್. ... ಅಭಿಪ್ರಾಯ... ಕಾಂಗ್ರೆಸ್ ... ರಾದ ಶ್ರೀ ... ಶ್ರೀ. ಭೋಸ... ಸಿನೊಳಗಣ... ಪ್ರಜಾಸತ್ತೆ... ರಾಷ್ಟ್ರಪತಿ...

ಈ ಸಂಸ್ಥೆಯ ಇಂದಿನ ವರೆಗಿನ ಸಾಹಸಕಾರ್ಯವನ್ನು, ಅದರ ಉದ್ಯಮಶೀಲತೆಯನ್ನು ನೋಡುವಾಗ, ಅದರ ಆಡಳಿತ ಮಂಡಲದ ವಿಚಾರ ವಿಚಕ್ಷಣೆ ಕಾರ್ಯದಕ್ಷತೆಯನ್ನು ಪರಾಂಬರಿಸುವಾಗ, ಇದು ಇನ್ನಷ್ಟು ಉತ್ಕೃಷ್ಟ ರೀತಿಯಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿ, ಘನತೆಗೇರುವುದರಲ್ಲಿ ಅನುಮಾನವಿರದು. ಈ ಕಾಮನ್‌ವೆಲ್ತ್ ಸಂಸ್ಥೆಗೆ ದೇಶದ ಪ್ರಧಾನ ಕೇಂದ್ರಗಳಲ್ಲೆಲ್ಲಾ ಕಛೇರಿಗಳಿವೆ. ಇದರ ಬೆಂಗಳೂರಿನ ಚೀಫ್ ಏಜೆನ್ಸಿ ಕಾರ್ಯಭಾಗವನ್ನು ಮೆ. ಗವಾನಕರ ಎಂಡ್ ಸನ್ಸ್ ಇವರು ಯಶಸ್ವಿಯಾಗಿ ಜರಗಿಸುತ್ತಿರುವರು. ಈಗೀಗಲೇ ಉತ್ಸಾಹೀ ಪ್ರತಿಭಾವಂತ ತರುಣರಾದ ಶ್ರೀ ಎಸ್. ಜಿ. ಗವಾನಕರರು ಈ ಸಂಸ್ಥೆಯ ಹೆಸರನ್ನು ಮೈಸೂರು ಬೆಂಗಳೂರು ಕನ್ನಡ ಜಿಲ್ಲೆಗಳಲ್ಲಿ ಬಹು ಪ್ರಸಿದ್ಧಿಗೆ ತಂದಿದ್ದಾರೆ. ದೇಶೀಯ ಮುಖಂಡರಿಂದ ನಡೆಸಲ್ಪಡುವ, ಸ್ವದೇಶೀ ಉತ್ತಮ ಕಂಪೆನಿಗಳಲ್ಲೊಂದಾದ ಈ ಕಾಮನವೆಲ್ತ್ ಸಂಸ್ಥೆಯು ಇನ್ನಷ್ಟು ಉನ್ನತಿಯನ್ನು ಹೊಂದಲೆಂದು ಹಾರೈಸುವೆವು.

... ರಕ್ಷೆ ... ವೆಚ್ಚದಿಂದ ನಿರ್ಮಿತವಾಗುವ, ಈ ಆಧುನಿಕ ರೀತಿಯ ರಮಣೀಯವಾದ ಭವ್ಯ ಮಂದಿರವು ಮುಂದಣ ಕಂಪೆನಿಯ ಏಳಿಗೆಯನ್ನು ಸೂಚಿಸುವ ಇನ್ನೊಂದು ನಿದರ್ಶನವಾಗಿ ಉಳಿಯುವುದು.

ವಾರದೊಳಗೆ ಹಿಂದುದೇಶದಲ್ಲಿ ಬಿಕ್ಕಟ್ಟುಂಟಾಗುವವು

...ವಣೆಯಲ್ಲಿ ಹೊಡೆದಾಟ—ಕರ್ನಾಟಕ ಕಾಂಗ್ರೆಸ್ ಕಮಿಟಿ ಚುನಾವಣೆಯಲ್ಲಿ ೬೦ ಮಂದಿ ಭಾಗವಹಿಸಲಿಲ್ಲ.

..., ಮಹಾರಾ... ..7, ಬೊಂಬಾ... 70, ಸಿಂಧ್

...ಧ ಎ, ಬಿ ...ನಾಡ, ಪ್ರಾಂ

ಬೇರೆ ಬೇರೆ ...ಗಳು-ಪವಿ... ...ಂಜಾಬು ೩೫, ...9, ಡಿಲ್ಲಿ 5, ...ರ್ನಾಟಕ 11, ...ತ್ತು ಮರಾಠ ...ಗಪುರ, 17, ...ಕೋಸಲ 68, ..., ಬಿಹಾರ್ ...ಲ 99, ಗುಜ... ..., ವಾಯವ್ಯ

...ನ ಉಗ್ರ ವಿ... ...ಶ್ರೀ. ಸುಭಾಸ ...ಗಳು ತಾವೇ ...ರ್ ಪಟ್ಟಾಭಿ ...ತ್ತದ ಪತ್ರಿಕೆ ...ನ್ನು ಸ್ವಾಗತೀ ...ಸುಭಾಸಚಂದ್ರ ...ರಾಗಿ ಆರಿಸಿ ...ದಲ್ಲ, ಕಾಂ... ...ಮುಖಂಡರು, ...ಗಿ ಓಟುಪಡೆ... ...ದ ಅನಪೇಕ್ಷಿತ ...ದು ಎಲ್ಲರೂ ...ಕಿ. ಕಾಂಗ್ರೆಸ್ ...ರವನ್ನು ಸ್ವೀ... ...ಸಿದ" ಎಂದು ...ಯ್ಯಂಗಾರರು ...ಮಹಾರಾಷ್ಟ್ರದ ...ಕ್ಷದ ನಾಯಕ ...ಣೆಯವರು ...ದಿಸಿ, ಕಾಂಗ್ರೆ... ...ಕೊನೆಗೊಳಿಸಿ ...ವಿಸಲ್ಪಡುವಂತೆ ...ಮಾಡುವರೆಂದು ...ದು ಹೇಳಿರು...

ವರು. "ಶ್ರೀ. ಸುಭಾಸಚಂದ್ರಭೋಸರ ವಿಜಯವು ಅತಿ ಮಹತ್ವವಾದುದು. ಕಾಂಗ್ರೆಸಿನ ಇತಿಹಾಸದಲ್ಲಿ ಹೊಸ ಯುಗ ಆರಂಭವಾಗಿರುವ ಸಂಕೇತವದು. ಕಾಂಗ್ರೆಸಿನ ಉಚ್ಚ ಅಧಿಕಾರಿಗಳ ಪ್ರಭಾವವು ಇಳಿಮುಖವಾಗಿ ತೀವ್ರಗಾಮಿಗಳ ಬಲವು ಹೆಚ್ಚುತ್ತಿರುವುದೆಂಬುದು ಇದರಿಂದ ಸಿದ್ಧವಾಗುವುದು. ಹಳಬರ ಮೇಲಿನ ಹರತರು ...ರ ವಿಜಯವದು ಫೆಡರೇಶನಿನ ಅದೃಷ್ಟದ ಮೇಲೆ ಇದರ ಪರಿಣಾಮವಾಗಲಿದೆ. ಸೂತ್ರಬದ್ಧ ಕಾರ್ಯಕ್ರಮ ಮತ್ತು ಮಂದಗಾಮಿತ್ವಕ್ಕೆ ಹಿಂದೆಸರಿಯುವುದನ್ನು ಈ ವಿಜಯವು ತಡೆಗಟ್ಟಿ, ಜನತೆಯ ಯುದ್ಧೋತ್ಸಾಹವನ್ನು ಪುರಿಗೊಳಿಸುವಂತಹದಿರುವುದು" ಎಂದು ಕೇಂದ್ರ ಎಸೆಂಬ್ಲಿಯ ಡಿಪ್ಯುಟಿ ಪ್ರೆಸಿಡೆಂಟರಾದ ಶ್ರೀ. ಅಖಿಲ ಚಂದ್ರದತ್ತರು ಹೇಳಿರುವರು. ಇದೇನೂ ಸಮತಾವಾದಿಗಳ ವಿಜಯವೆಂದು ಪರಿಗಣಿಸಲಾಗುವುದಿಲ್ಲೆಂದು ಮದ್ರಾಸ್ ಮಂತ್ರಿಗಳಾದ ರಮಾನಾಥನರಂದಿರುವರು.

ಪಂಡಿತ ಜವಾಹರಲಾಲ ನೆಹರುಗಳು

ಈ ವರ್ಷ ಸಂಯುಕ್ತಪ್ರಾಂತ ಕಾಂಗ್ರೆಸ್ ಕಮಿಟಿಯು ಅಧ್ಯಕ್ಷರಾಗಿ ಸರ್ವಸಮ್ಮತಿಯಿಂದ ಆರಿಸಲ್ಪಟ್ಟಿರುವರು. ಪಂಡಿತರು ಅಧ್ಯಕ್ಷರಾಗುವುದರಿಂದ ಸಂಯುಕ್ತಪ್ರಾಂತದಲ್ಲಿ ಉಂಟಾಗಿರುವ ಪ್ರತಿಸ್ಪರ್ಧೆಯು ದೂರವಾಗುವುದೆಂದು ಬಾಬು ಪುರುಷೋತ್ತಮದಾಸ್ ಟಂಡನ್ ಮತ್ತು ಮೋಹನರಾವ್ ಸಕ್ಸೇನಾರವರು ಒತ್ತಾಯಪಡಿಸಿರುವುದರಿಂದ ಪಂಡಿತರು ಅಧ್ಯಕ್ಷರಾಗಲೊಪ್ಪಿರುವರು. ಪಂಡಿತರು ಪ್ರಾಂತಿಕ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಭಾಷಣಮಾಡುತ್ತಾ "ಬರುವ ಸಕೆ ಕಾಲದೊಳಗೆ ಲೋಕವು

ಯುದ್ಧಕ್ಷೇತ್ರವಾಗಬಹುದು. ಹಿಂದೂದೇಶದಲ್ಲಿ ನಾವು ಕೆಲವೇ ವಾರಗಳೊಳಗೆ ಬಿಕ್ಕಟ್ಟನ್ನೆದುರಿಸಬೇಕಾದೀತೆಂದು ಹೇಳಿ, ಅಂತಹ ಸಂದರ್ಭದಲ್ಲಿ ಜವಾಬ್ದಾರಿ ವಹಿಸಲು ಎಲ್ಲರೂ ಸಿದ್ಧರಿರಬೇಕೆಂದು ಎಚ್ಚರಿಸಿದರು. ಇತ್ತಲಾಗಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಬದಲಾವಣೆ ಹೊಂದಿವೆ. ಅದು ಚಳವಳ ನಡಿಸುವುದಾದರೆ ಜವಾಬ್ದಾರಿ ಸಂಸ್ಥೆಯಾಗಿ ಹಾಗೆ ಮಾಡತಕ್ಕದ್ದು. ಸ್ವ ಮಹತ್ವದ ಪ್ರಶ್ನೆಗಳನ್ನು ವಿಚಾರಿಸಿ ಇತ್ಯರ್ಥಿಸುವ ಸ್ವತಂತ್ರ ರಾಷ್ಟ್ರಗಳ ಪಾರ್ಲಿಮೆಂಟಿನಂತೆ ಮೆಂಬರರು ಪ್ರಾಂತಿಕ ಕಮಿಟಿಯನ್ನು ಪರಿಗಣಿಸಬೇಕೆಂದು ಹೇಳಿ ಕೊಂಡು, ಕಮಿಟಿಯೊಳಗೆ ಪಕ್ಷ, ಪ್ರತಿಪಕ್ಷ, ಸ್ಪರ್ಧೆ ಮತ್ತು ಜಾತಿ ಜಾತಿಗಳೊಳಗೆ ವೈಷಮ್ಯವು ಶೋಚನೀಯ"ವೆಂದರು.

ಪಂಜಾಬ್ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಗಲಾಟೆ

ಜನವರಿ ತಾ. 29ರಲ್ಲು ಲಾಹೋರಿನಲ್ಲಿ ಪಂಜಾಬು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಮತ್ತು ಇತರ ಅಧಿಕಾರಿಗಳ ಚುನಾವಣೆಯಲ್ಲಿ ಗಲಾಟೆಯುಂಟಾಗಿ, ಲಾಠಿ, ಪಾದರಕ್ಷೆ, ಕುರ್ಚಿ ಮೊದಲಾದುವುಗಳಿಂದ ಹೊಡೆದಾಟ ನಡೆದು ಐನೂರು ಮಂದಿ ಗಾಯಗೊಂಡಿರುವರು. ಡಾಕ್ಟರ್ ಎಸ್. ಡಿ. ಕಿಚಿಲುರವರಿಗೆ 177 ಮತ್ತು ಅವರ ಸೋಷಿಯಲಿಸ್ಟ್ ವಿರೋಧಿಯಾದ ಶ್ರೀ ರಾಮಕಿಶನರಿಗೆ 72 ಮತಗಳು ದೊರೆತು ಡಾಕ್ಟರ್ ಕಿಚಿಲುರವರೇ ಅಧ್ಯಕ್ಷರಾಗಿ ಆರಿಸಿಬಂದಿರುವರು. ಅಧ್ಯಕ್ಷತನಕ್ಕೆ ಡಾಕ್ಟರ್ ಗೋಪೀಚಂದ ಭಾರ್ಗವರ ಕಡೆಯಿಂದ ಡಾಕ್ಟರ್ ಕಿಚಿಲುರವರೂ, ಡಾಕ್ಟರ್ ಸತ್ಯಪಾಲರ ಕಡೆಯಿಂದ ಮೌಲಾನ ಅಬ್ದುಲ್ ಖಾದರ್ ಕಸೂರಿಯವರೂ, ಸೋಷಿಯಲಿಸ್ಟರ ಕಡೆಯಿಂದ ಶ್ರೀ. ರಾಮಕಿಶನರೂ ಉಮೇದ್ವಾರರಾಗಿದ್ದರು. ಡಾಕ್ಟರ್ ಸತ್ಯಪಾಲರ ತಂಡದ ಉಮೇದ್ವಾರರು ತಮ್ಮ ಕಡೆಯ ಉಮೇದ್ವಾರಿಯನ್ನು ಹಿಂತೆಗೆಸಿದರು. ಆಗ ಇಬ್ಬರು ಮಾತ್ರ ಉಮೇದ್ವಾರರಾಗಿದ್ದರು ಓಟು ತೆಗೆಯಲ್ಪಟ್ಟು ಬೆಲ್ಲಟ್ ಪೇಪರ್‌ಗಳನ್ನು ಎಣಿಸುವ ಸಂದರ್ಭದಲ್ಲಿ ಸೋಷಿಯಲಿಸ್ಟ್ ಮೆಂಬರನೊಬ್ಬನು ಓಟು ಲೆಕ್ಕಮಾಡುವ ಸ್ಥಳಕ್ಕೆ ಧಾಳಿಯಿಟ್ಟು ಕೆಲವು ಬೆಲ್ಲಟ್ ಪೇಪರುಗಳನ್ನು ಹಿಡಿದುಕೊಂಡು ಓಡಲೆತ್ನಿಸಿದನು. ಕೆಲವರು ಅವನನ್ನು ಬೆನ್ನಟ್ಟಿ ಹಿಡಿದರು. ಆಗ ಅವನು ಕೆಲವು ಬೆಲ್ಲಟ್ ಪೇಪರ್‌ಗಳನ್ನು ನುಂಗಿ ಇನ್ನು ಕೆಲವನ್ನು ಬಿಸಾಡಿಬಿಟ್ಟನು. ಇಷ್ಟರಲ್ಲಿ ದೊಡ್ಡ ಗಲಾಟೆಯೆದ್ದು ಅರ್ಧ ಘಂಟೆ ಹೊಡೆದಾಟ ಗುದ್ದಾಟ ನಡೆಯಿತು. ಅಧ್ಯಕ್ಷರಾಗಿದ್ದ ಡಾಕ್ಟರ್ ಸತ್ಯಪಾಲರು ಗಲಾಟೆಯ ನಡುವೆ ಸಭೆ ಬಿಟ್ಟು ಹೋದರು. ಪಂಜಾಬ್ ಇಲೆಕ್ಷನ್ ಬೋರ್ಡಿನ ಚೇರ್‌ಮೆನರಾದ ಶ್ರೀಲಾಲ ಶ್ಯಾಮಲಾಲರು ಬೆಲ್ಲಟ್ ಪೇಪರ್‌ಗಳನ್ನು ಸರಿಯಾಗಿ ಲೆಕ್ಕಮಾಡಿ ಮೇಲಿನ ಫಲಿತಾಂಶವನ್ನು ಪ್ರಕಟಗೊಳಿಸಲಿರುವರು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ

ಈ ಸಲ ಧಾರವಾಡದಲ್ಲಿ ನಡೆದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಡಿಸ್ಟ್ರಿಕ್ಟ್ ಎಸೆಂಬ್ಲಿ ಮೆಂಬರರಾದ ಶ್ರೀ ಎಸ್. ಕೆ. ಹೊಸಮನಿಯವರು ಹೊಸ ವರ್ಷದ ಅಧ್ಯಕ್ಷರಾಗಿಯೂ, ಶ್ರೀಮತಿ ...ಮುಲಾದೇವಿ ಮತ್ತು ಶ್ರೀ. ಟಿ. ಸಿದ್ಧಲಿಂಗಯ್ಯನವರು ಉಪಾಧ್ಯಕ್ಷರಾಗಿಯೂ, ಡಾಕ್ಟರ್ ಎನ್. ಎಸ್. ಹರ್ಡೀಕರರು ಜನರಲ್ ಸೆಕ್ರೆಟರಿಯಾಗಿಯೂ, ಶ್ರೀ ಯು. ಶ್ರೀನಿವಾಸ ಮಲ್ಯರು ಜಾಯಿಂಟ್ ಸೆಕ್ರೆಟರಿಗಳಾಗಿಯೂ, ಶ್ರೀಮತಿ ಕೃಷ್ಣಾಬಾಯಿ ಪಣಜೀಕರರು ಕೋಶಾಧಿಕಾರಿಯಾಗಿಯೂ ಆರಿಸಲ್ಪಟ್ಟಿರುವರು. ಶ್ರೀಗಳಾದ ಗಂಗಾಧರರಾವ್ ದೇಶಪಾಂಡೆ, ಬೊಂಬಾಯಿ ಎಸೆಂಬ್ಲಿಯ ಡಿಪ್ಯುಟಿ ಸ್ಪೀಕರರಾದ ಶ್ರೀ ನಾರಾಯಣರಾವ್ ಜೋಶಿ, ಎಮ್. ಪಿ. ಪಾಟೀಲ್, ಪಿ. ಆರ್. ನೆಸ್ರಿ, ಕೆ. ಎಸ್. ಪಾಟೀಲ್, ಅಂದಾನಪ್ಪ ದೊಡ್ಡಮೇಟಿ ಮೊದಲಾದ ಎಸೆಂಬ್ಲಿ ಮೆಂಬರರು, ಕರ್ನಾಟಕ ಹರಿಜನ ಸೇವಾ ಸಂಘದ ಅಧ್ಯಕ್ಷರಾದ ಶ್ರೀ. ಪಿ. ಪಿ. ಹ ಬೇಲರೇ ಮೊದಲಾದ 60ಮಂದಿ ಮೆಂಬರರು ಅಧಿಕಾರಿಗಳ ಚುನಾವಣೆಯಲ್ಲಿ ಭಾಗವಹಿಸದೆ ತಟಸ್ಥರಾಗಿದ್ದರು. ಐಕ್ಯ ಮತ್ತು ಸೌಹಾರ್ದವನ್ನು ಸ್ಥಾಪಿಸಲು ಮೆಂಬರರಲ್ಲಿ ಬೇಕಾದ ಸಹಕಾರ ಬುದ್ಧಿ ಇರಲಿಲ್ಲ. ಕೆಲಮಂದಿ ಮೆಂಬರರು ಕಾಂಗ್ರೆಸ್ ತತ್ವಗಳಿಗೆ ಪ್ರತಿವಿರೋಧವಾಗಿ ನಡೆದು ಕೇವಲ ಅಧಿಕಾರಲಾಲಸೆಯಿಂದ ಕೆಲಸಮಾಡುತ್ತಿದ್ದರು. ಅಧಿಕಾರದಲ್ಲಿದ್ದವರು ತಮ್ಮಿಚ್ಛೆಯಂತೆ ಸರಿಗವಾಗಿ ಅಧಿಕಾರ ಚಾಲೂಮಾಡಲು ಅನುಕೂಲವಾಗುವಂತೆ ತಾವು ಚುನಾವಣೆಯಲ್ಲಿ ಭಾಗಿಯಾಗದಿದ್ದುದು ಕಾಂಗ್ರೆಸಿನ ಮತ್ತು ದೇಶದ ಕುರಿತಾದ ಕರ್ತವ್ಯವನ್ನು ಮಾಡಲು ತಾವು ಸದಾ ಸಿದ್ಧವಿದ್ದೇವೆಂದು ಈ 60ಮೆಂಬರರು ಹೇಳಿಕೆಯಿತ್ತಿರುವರು.

ಕರ್ನಾಟಕ ಫ್ರೀ ಸ್ಟೈಟ್‌ಸ್ಕೂಲ್— ಇದರ 1939ರ ಕಾರ್ಯನಿರ್ವಾಹಕರಾಗಿ ಆರಿಸಲ್ಪಟ್ಟವರು. ಶ್ರೀ ಎಸ್. ಎಸ್. ಶೆಟ್ಟಿ, C. A. I. I. B., R. R. E. S. (Lond) ಅಧ್ಯಕ್ಷ... ಯು. ಯಂ. ಕುಮಾರ್, (ಮುಖ್ಯಾಧ್ಯಕ್ಷರ) ... ಜಿ. ಬಂಗೇರ (ಸಹಾಯಕ ಉಪಾಧ್ಯಕ್ಷ...) ... ಎಸ್. ಶೆಟ್ಟಿ (ಕಾರ್ಯದರ್ಶಿ) ಕೆ. ಪಿ. ಶೆ... (ಖಜಾ...)

ನೋಟೀಸು

ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್.

ಬ್ರೇಂಚ್—ಉಡುಪಿ.

ಈ ಬ್ಯಾಂಕಿನಲ್ಲಿ ನಗಗಳನ್ನು ಅಡವಿಟ್ಟು ವಾಯಿದೆಗೆ ಸರಿಯಾಗಿ ಬಡ್ಡಿಯನ್ನು ಸಲ್ಲಿಸದೆ ರಿಜಿಸ್ಟ್ರಿ ಕಾಗದ ಮೂಲಕ ತಿಳಿಸಿದರೂ ಸಂಬಂಧಪಟ್ಟ ಲೇವಾದೇವಿಯನ್ನು ತೀರಿಸದಿರುವ ಈ ಕೆಳಗಿನವರ ಚಿನ್ನದ ನಗಗಳನ್ನು ತಾ. 4-2-39ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಅದೇ ದಿನ ಸಂಪೂರ್ಣ ಆಗದೆ ಇದ್ದರೆ ಬೇಂಕಿಗೆ ಯುಕ್ತಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು. ತಿಳಿದಿರುವದು.

ಸಾಲದ ನಂಬ್ರ	ತಾರೀಖು	ಹೆಸರು ಮತ್ತು ವಿಳಾಸ	ಏನೇಡು ರೂಪಾ
J. L. No 12/166	26–10–36	ಲೋರೆನ್ಸ್ ಸುವಾರಿಸ್ S/o ಡೊಮಿಂಗ್ಸ್ ಸುವಾರಿಸ್, ಕೊಡವೂರು ಗ್ರಾಮ, ಮಲ್ಪೆ ಪೋಸ್ಟು, ದ. ಕ.	16-13-0
J. L. No.12/592	26– 5-37	ದಿವಂಗತ ತೋಮಸ್ ಪಿಂಟೊ, S/o ಸಾಲ್ವದೋರ್ ಪಿಂಟೊ ಕೊಡವೂರು ಗ್ರಾಮ, ಮಲ್ಪೆ ಪೋಸ್ಟು, ದ. ಕ.	13-12-6
J. L. No...[illegible]	25– 9–37	ದಿವಂಗತ ತೋಮಸ್ ಪಿಂಟೊ, S/o ಸಾಲ್ವದೋರ್ ಪಿಂಟೊ ಕೊಡವೂರು ಗ್ರಾಮ, ಮಲ್ಪೆ ಪೋಸ್ಟು ದ. ಕ.	125-7-3
J. L. No 13/631	17– 2–38	ದಿವಂಗತ ತೋಮಸ್ ಪಿಂಟೊ, S/o ಸಾಲ್ವದೋರ್ ಪಿಂಟೊ, ಕೊಡವೂರು ಗ್ರಾಮ, ಮಲ್ಪೆ ಪೋಸ್ಟು, ದ. ಕ.	46-13-3
J. L. No 14/80	28 7–38	ಪಪ್ಪು ಯಾನೆ ಮುತ್ತ ಮರಕಾಲ, S/o ನಾರಾಯಣ ಮರಕಾಲ, ಕೋಡಿ ಗ್ರಾಮ ಬೆಂಗ್ರೆ, ಹಂಗಾರಕಟ್ಟೆ ಪೋಸ್ಟು ದ. ಕ.	465-6-9
D.P.N.No14/12	28– 7–38	(1) ಪಪ್ಪು ಯಾನೆ ಮುತ್ತ ಮರಕಾಲ S/o ನಾರಾಯಣ ಮರಕಾಲ, ಕೋಡಿ ಗ್ರಾಮ, ಬೆಂಗ್ರೆ, ಹಂಗಾರಕಟ್ಟೆ ಮತ್ತು (2) ಕೆ. ತಬುರಪ್ಪ N/o ಪರ್ದೇಶಿ ಮರಕಾಲ ಕಡೇಕಾರ್, ಮಲ್ಪೆ ಪೋಸ್ಟು, ದ.ಕ.	170-5-3
J. L. No.12/50	10– 8–36	ಕಾಮಿಲ್ಲ್ ಸುವಾರಿಸ್ W/o ಜಾಕೊಬ್ ಸುವಾರಿಸ್, ಚೊಕ್ಕಾಡಿಗ್ರಾಮ. ಕಟಪಾಡಿ ಪೋಸ್ಟು ದ. ಕ.	19-13-9
J. L. No.13,54	23– 7–37	ಸೆಬೆಸ್ತಿನ್ ಮಾರ್ಟಿಸ್, S/o ನಿಕೊಲಸ್ ಮಾರ್ಟಿಸ್ ಮಲ್ಪೆ ಪೋಸ್ಟು, ದ. ಕ.	448-5-6
D.P.N.No.13/8		ಸೆಬೆಸ್ತಿನ್ ಮಾರ್ಟಿಸ್, S/o ನಿಕೊಲಸ್ ಮಾರ್ಟಿಸ್, ಮಲ್ಪೆ ಪೋಸ್ಟು ದ. ಕ	112-13-6

UDIPI
31-1-39

V. Andarde,
AGENT.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ 29-1-39

ನಗರ ಸಭೆ—ಕಳೆದ ತಾ. 23ನೇ ಸೋಮವಾರ ಮಂಗಳೂರು ನಗರ ಸಭೆಯು ಮಾಟಂಗು ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ವೆಬ್‌ಸ್ಟರ್ ಮಾರ್ಕೇಟಿನಲ್ಲಿ ತರಕಾರಿ ಮಾರುವವರು ಫಳ್ನೀರ್ ಪೈ ಬಜಾರಿನಲ್ಲಿಯೇ ಇನ್ನು ತರಕಾರಿ ಮಾರಬೇಕೆಂಬ ವಿಷಯದಲ್ಲಿ ಅಸಮಾಧಾನವನ್ನು ವ್ಯಕ್ತಗೊಳಿಸಲು ತರಕಾರಿ ಮಾರುವವರು ಅನೇಕರು ನಗರ ಸಭೆಯ ಮಂದಿರಕ್ಕೆ ಬಂದಿದ್ದರು.

ಪತ್ರಿಕೋದ್ಯಮಿಗಳ ಸಂಘ— ಕಳೆದ ತಾ. 25ರಲ್ಲಿ ಪಿ. ಸಿ. ಯಂ. ಭವನದಲ್ಲಿ ಜಲ್ಲಾ ಪತ್ರಿಕೋದ್ಯಮಿಗಳ ಸಭೆಯು ಶ್ರೀ. ಯಂ. ಎಸ್. ಶ್ರೇಷ್ಠರ ಅಧ್ಯಕ್ಷತೆಯಲ್ಲಿ ಸೇರಿತು. ಘಟನೆಯನ್ನು ಕೆಲ ತಿದ್ದುಪಡಿಗಳೊಂದಿಗೆ ಸ್ವೀಕರಿಸಲಾಯಿತು. ಶ್ರೀಗಳಾದ ಶ್ರೇಷ್ಠರು ಸಂಘದ ಅಧ್ಯಕ್ಷರಾಗಿಯೂ ಶ್ರೀ. ಅಚ್ಯುತ ಕಾಮತರು ಉಪಾಧ್ಯಕ್ಷರಾಗಿಯೂ ಶ್ರೀ ರಘುನಾಥರಾಯರು ಕಾರ್ಯದರ್ಶಿಗಳಾಗಿಯೂ ಶ್ರೀ. ಯು. ಗೋವಿಂದರಾಯರು ಖಜಾನ್ಚಿಯಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಬಿ. ಯು.ಸಿ. ಕಾರ್ಯಪ್ಪ, ಕೆ. ಶಂಕರಭಟ್ ಮತ್ತು ಎಚ್. ಭೀಮರಾಯರು ಕಾರ್ಯಕಾರಿ ಮಂಡಲಿಗೆ ಸದಸ್ಯರಾಗಿ ಆರಿಸಲ್ಪಟ್ಟರು. ಸಂಘದ ಉದ್ಘಾಟನೆ ನಡಿಸಲು ಸರ್. ಸಿ. ಪಿ. ರಾಮಸ್ವಾಮಿ ಅಯ್ಯರವರನ್ನು ಕೇಳಿಕೊಳ್ಳಲು ಪತ್ರವ್ಯವಹಾರ ನಡೆಸುವರೆ ಕಾರ್ಯದರ್ಶಿಗಳಿಗೆ ಅನುಮತಿ ಕೊಡಲಾಯಿತು. ಅನಂತರ ಧನ್ಯವಾದಗಳೊಂದಿಗೆ ಸಭೆಯು ಮುಗಿಯಿತು.

ಮೋಟರ್ ಕೆಲಸಗಾರರ ಸಭೆ— ಮೋಟರ್ ಕೆಲಸಗಾರರ ಸಂಘದ ಆಶ್ರಯದಲ್ಲಿ ಒಂದು ಸಾರ್ವಜನಿಕ ಸಭೆಯು ತಾ. 25ನೇ ಸಾಯಂ, ಮೈದಾನದಲ್ಲಿ ಶ್ರೀಮತಿ ಕಮಲಾಬಾಯಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ. ಕೆ. ರಘುನಾಥರಾಯರು ಮೋಟರ್ ಕೆಲಸಗಾರರ ಕನಿಷ್ಠ ಕೇಳಿಕೆಗಳನ್ನು ಸಭೆಯ ಮುಂದಿರಿಸಿದರು. ಅಧ್ಯಕ್ಷೆಯವರು ಕೆಲಸಗಾರರ ಕೇಳಿಕೆಗಳು ಸಾಧುವೆಂದೂ, ಅವುಗಳನ್ನು ಮಾಲಿಕರು ಕೆಲಸಗಾರರಿಗೆ ಕೊಡುವುದು ಅಗತ್ಯವೆಂದೂ ಹೇಳಿ ಭಾಷಣ ಮಾಡಿದರು.

ಮಜೂರರ ಸಭೆ—ಕಳೆದ ತಾ. 24ರಲ್ಲಿ ಮಂಗಳೂರ ಮಜೂರ ಸಂಘಗಳ ಸಭೆಯು ಶ್ರೀ. ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಮೈದಾನದಲ್ಲಿ ಜರಗಿತು. ಬರುವ ವರ್ಷದಲ್ಲಿ ಏನು ಕೆಲಸ ಮಾಡಬೇಕೆಂಬುದನ್ನು ನಿರ್ಧರಿಸುವುದೇ ಸಭೆಯ ಉದ್ದೇಶವಾಗಿತ್ತು. ಶ್ರೀ. ಬಿ. ವಿ. ಬಾಳಿಗರು ಕಾಂಗ್ರೆಸ್ ಮಂತ್ರಿಮಂಡಲವು ಮಾಡಿದ ಕೆಲಸವನ್ನು ವಿವರಿಸಿ ಕಾಂಗ್ರೆಸಿಗೆ ಬೆಂಬಲಕೊಡುವುದು ಅಗತ್ಯವೆಂದು ಹೇಳಿದರು. ಅನಂತರ ಶ್ರೀ. ಗೋಪಾಲ ಸಾಲಿನ್ಸರೇ ಮೊದಲಾದವರ ಭಾಷಣಗಳಾದುವು.

ಸ್ವಾತಂತ್ರ್ಯ ದಿನಾಚರಣೆಯ ಆಡಂಬರ—ಮಂಗಳೂರಿನ ಟೌನ್ ಕಾಂ. ಕಮಿಟಿಯವರು ನೋಟೀಸ್ ಪ್ರಚಾರ ಮಾಡಿ ಪ್ರಭಾತ ಫೇರಿ, ಧ್ವಜವಂದನೆ, ಇತ್ಯಾದಿಗಳು ಜರಗಿಸಲ್ಪಡುವುದಾಗಿ ತಿಳಿಸಿದ್ದರೂ ತಾ. 26ರಂದು ಪ್ರಭಾತ ಫೇರಿಯೂ ಇಲ್ಲ. 3 ಜನರು ಧ್ವಜದ ಹತ್ತಿರ ನಿಂತು ವಂದನೆಯ ಶಾಸ್ತ್ರ ನಡಿಸಿದರು. ಸಾಯಂಕಾಲ ಮೈದಾನದಲ್ಲಿ ಐದಾರು ಜನರು ಬಂದು ನಿಂತು ಶ್ರೀ. ಹೊಳ್ಳರು ಪ್ರತಿಜ್ಞೆ ಓದಿದ ಬಳಿಕ ಹೊರಟುಹೋದರು.

ವಿದ್ಯಾರ್ಥಿಗಳೂ, ಸ್ವಾತಂತ್ರ್ಯ ದಿನಾಚರಣೆಯೂ—ಮಂಗಳೂರು ವಿದ್ಯಾರ್ಥಿ ಸಂಘದವರು ಸ್ವಾತಂತ್ರ್ಯ ದಿನಾಚರಣೆಯಂದು ಪ್ರಭಾತ ಫೇರಿ, ಧ್ವಜ ವಂದನೆ, ನಡಿಸಿ ಮಧ್ಯಾಹ್ನ 45 ರೂ. ಗಳ ಖಾದಿ ಮಾರಿದರು. ಸಾಯಂಕಾಲ ಶ್ರೀಮತಿ ಕಸ್ತೂರಿ ದೇವಿಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಿದರು. ಶ್ರೀ. ಸಿ. ಕೆ. ಕಾರಂತರು ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ವ್ಯಕ್ತಗೊಳಿಸಿದರು. ಶ್ರೀ. ಸಿ. ಕೃಷ್ಣ ಭಟ್ಟರು ಪ್ರತಿಜ್ಞೆಯನ್ನೋದಿದರು. ಶ್ರೀ ಭಾಸ್ಕರ ರೈಗಳು ಧನ್ಯವಾದವನ್ನರ್ಪಿಸಿದರು.

ನಗರ ಕಾಂಗ್ರೆಸ್ ಕಮಿಟಿ— [illegible] ಸಭೆ [illegible] ಶ್ರೀ ವೈಕುಂಠ ಬಾಳಿಗರೂ, ಶ್ರೀ. [illegible] ಸಂ

ಮಾನಪತ್ರ ಕೊಡಬಾರದಂತೆ— ಡಿ. ಬೋರ್ಡಿನ ಕಳೆದ ಸಭೆಯಲ್ಲಿ ಕಾಂಗ್ರೆಸ್ ರಾಜಕೀಯ ಲೀಡರರಾದ ಶ್ರೀ. ಬಿ. ವೈಕುಂಠ ಬಾಳಿಗರು ದಿವಾನ್ ಮಿರ್ಜಾರಿಗೆ ಮಾನಪತ್ರ ಸಮರ್ಪಿಸಬೇಕೆಂದು ತಂದಿದ್ದ ರಾವು ಬಹುಮತದಿಂದ ಮಾನ್ಯವಾಗಿತ್ತು. ಆದರೆ ಆ ಠರಾವನ್ನು ಈಗ ರದ್ದುಪಡಿಸಿ ಮಾನಪತ್ರ ಕೊಡಬಿಯಾದರೂ ಸ್ಪರ್ಧಿಸಿದರು. ಶ್ರೀ. ನಂಬಿಯಾರರಿಗೆ 6 ಮತಗಳೂ ಶ್ರೀ. ಬಾಳಿಗರಿಗೆ 6 ಮತಗಳೂ ದೊರೆತು ಚೀಟಿ ಹಾಕಿ ಆಯ್ಕೆ ಮಾಡಲಾಯಿತು. ಶ್ರೀ. ಬಾಳಿಗರು ಈಗ ಎಂ. ಜಿ. ಬೋರ್ಡ್ ಕಾಂಗ್ರೆಸ್ ಪಾರ್ಟಿಯ ಲೀಡರ್ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿರುವರೆಂದು ತಿಳಿದುಬಂದಿದೆ ದಂತೆ ಮಾಡಬೇಕೆಂಬುದಕ್ಕೆ ಬಹಳ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮುಖ್ಯ ಅಧಿಕಾರಿಗಳ ಸಹಾಯವಿದೆಯೆಂದು ವದಂತಿ

Established] THE [1906

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	Rs.	486 Lakhs
Annual income Exceeds	Rs.	28 Lakhs
Total Assets Exceed	Rs.	100 Lakhs
Total claims paid over	Rs.	36 Lakhs.

The oldest and largest Life Assurance Company of South India, having 31 years of record service.

A POLICY IN THE UNITED INDIA *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to-

THE BRANCH MANAGER,
The United India,
Life Assurance Company Ltd.
BLOCK No 2, Felix Pai Bazaar,
BRANCH, MANGALORE S. K.

OR

K Keshava Shenoy, M. A.
Organiser, Shantiniketan
PENTLENDPET,
MANGALORE

ಗೇಟ್‌ವೇ ಸುಛದ್ರ ಸುಶೋಭಿತ ಖ್ಯಾತಿ

ಬಹುಮಾನಗಳು.

ನಮ್ಮ ಗ್ಯಾರಂಟಿ ಇನಾಮುಗಳು.

ರೂ. 42,000

ಎಲ್ಲಾ ಸರಿಯಾದ 20 ಉತ್ತರಗಳಿಗೆ ಹಂಚಲಾಗುವುದು.

ನಂಬ್ರ 5

ಉತ್ತರವನ್ನು ಮುಂಬಾಯಿಯ ಪ್ರಸಿದ್ಧವಾದ ಬ್ಯಾಂಕಿನಲ್ಲಿ ಭದ್ರವಾಗಿರಿಸಲಾಗಿದೆ ಕನಿಷ್ಠ ರೂ 2,100 ಇದಕ್ಕೆ ಸರಿಯಾದ ಪ್ರತಿ ಉತ್ತರಕ್ಕೆ ಕೊಡಲಾಗುವುದು.

ಹೆಚ್ಚು ಉತ್ತರ ಕಳುಹಿಸುವವರಿಗೆ ಕ್ರಮವಾಗಿ ರೂ. 500/- 300/- ಮತ್ತು 100/- ಕೊಡಲಾಗುವುದು



ನಮ್ಮ ಉತ್ತರಕ್ಕೆ ಹೋಲಿಕೆಯುಳ್ಳ ಉತ್ತರಗಳಿಗೆ ರೂ. 15/-ರ 50 ಸಾವಿರ ಪೇಯ ಬಹುಮಾನಗಳನ್ನು ಕೊಡಲಾಗುವುದು

ಕೆಳಗೆ ಕೊಟ್ಟ ಚೌಕದಲ್ಲಿಯ ಸಾಲುಗಳನ್ನು ಅಡ್ಡ ಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದ್ದಲ್ಲಿ ಜಮೆಯು 50 ಬರುವಂತೆ 5ರಿಂದ 20ರ ವರೆಗಿನ ಸಂಖ್ಯೆಗಳನ್ನು ಸೇರಿಸತಕ್ಕದ್ದು. ಕಳುಹಿಸುವ ಕೊನೆಯ ದಿನ 11-2-39 ಫಲಿತಾಂಶವು 18-2-39ರಲ್ಲಿ ಪ್ರಕಟಣೆ ಹೊಂದುವುದು.

ಪ್ರವೇಶಧನ ಒಂದು ಉತ್ತರಕ್ಕೆ ರೂ. 1/- ಮೂರಕ್ಕೆ ರೂ. 2/- 8ಉತ್ತರಗಳ ಸೆಟ್ಟುಗಳಿಗೆ ರೂ. 5/-ರಂತೆ.

ಶರ್ತಗಳು—ಮೇಲೆ ಕಾಣಿಸಿದಂತೆ ಯುಕ್ತ ಮೌಲ್ಯದೊಂದಿಗೆ ಸಾಮಾನ್ಯ ಕಾಗದದ ಮೇಲೆ ಸ್ಪಷ್ಟವಾಗಿ ಬರೆದು ಬೇಕಾದಷ್ಟು ಉತ್ತರಗಳನ್ನು ಕಳುಹಿಸಬಹುದು. ಹಣವು ಮನಿಯಾರ್ಡರು—ಪೋಸ್ಟಲ್ ಆರ್ಡರು ದ್ವಾರಾ ರವಾನಿಸತಕ್ಕದ್ದು. ವಿಳಾಸವನ್ನು ಮನಿಯಾರ್ಡರು ಕೂಪನಿನಲ್ಲಿ ಮತ್ತು ಉತ್ತರಬರೆಯುವ ಕಾಗದದಲ್ಲಿ ಸರಿಯಾಗಿ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು. ಮನಿಯಾರ್ಡರು ರಶೀದಿಯನ್ನು ಮತ್ತು ಫಲಿತಾಂಶ ತಿಳಿಯಲು ಅನುಕೂಲವಾಗುವಂತೆ ಉತ್ತರಸಹಿತವಾದ, ಸ್ಟ್ಯಾಂಪು ಅಂಟಿಸಿದ ಕವರನ್ನು, ಕಳುಹಿಸುವ ಉತ್ತರದೊಂದಿಗೆ ಲಗ್ತೀಕರಿಸಬೇಕು. ವ್ಯವಸ್ಥಾಪಕರ ತೀರ್ಮಾನವೇ ಕೊನೆಯ ತೀರ್ಮಾನವು, ಕಾಯಿದೆಶೀರ ಬಂಧನಕಾರಕವೂ ಆಗಿದೆ.

ಮೇಲಣ ಇನಾಮು ಮಾತ್ರವಲ್ಲದೆ ಕನಿಷ್ಠ ಹತ್ತು ಮೂರು ಉತ್ತರಗಳನ್ನು ಕಳುಹಿಸುವವರಿಗೆ ಉತ್ಕೃಷ್ಟವಾದ ಆಕರ್ಷಕರ 1939ರ ಕ್ಯಾಲೆಂಡರೊಂದ ಉಚಿತ, 8 ರಾ ಪಟ್ಟಿಗೆ ಉತ್ತರ ಕಳುಹಿಸುವವರಿಗೆ ಒಂದೇ (ಕವರಿನಲ್ಲಿ ಬೇರೆ ಬೇರೆ ಹೆಸರಿಂದ ಕಳುಹಿಸಿದ್ದು ಸ್ವೀಕಾರಾರ್ಹವಿದೆ,) ಈ ಕೆಳಗಣವುಗಳಲ್ಲಿ ಒಂದುದನ್ನು ಕೊಡಲಾಗುವುದು.

1. ವೆಡುಳು ಮತ್ತು ಗ್ರಂಥಿ ಟಾನಿಕ್,
2. ನೇತ್ರ ಚಿಕಿತ್ಸಕ(ಕಣ್ಣಿಗೆ ದಿವ್ಯ ಔಷಧ)

ಮೊದಲಿನ ಸ್ಪರ್ಧೆಯಲ್ಲಿ ಭದ್ರಗೊಳಿಸಿದ ಉತ್ತರದ ಜುಮ್ಲಾ 46.

೧ನೇ ಸಾಲು	19,	17,	6,	4,
೨ನೇ ಸಾಲು	5,	7,	16,	18,
೩ನೇ ಸಾಲು	8,	12,	11,	15,
೪ನೇ ಸಾಲು	14,	10,	13,	9,

ನಿಮ್ಮ ಉತ್ತರಗಳನ್ನೂ ಹಣವನ್ನೂ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.

ಮೆನೇಜರ್,

ದಿ ಗೇಟ್‌ವೇ ಪ್ರೊಡಕ್ಟ್ಸ್,

166, ಸಿ, ಜವೇರಿ ಬಜಾರ ಮುಂಬಯಿ. 2.

The Gateway Products,

166, C. Zavear Bazar, BOMBAY, 2.

ಉಡುಪಿ

ಸ್ವಾತಂತ್ರ್ಯ ದಿನಾಚರಣೆ—ಕಳೆದ ತಾ. 26ರಲ್ಲಿ ಸಂಜೆ ಅಜ್ಜರಕಾಡು ಗಾಂಧಿಮೈದಾನದಲ್ಲಿ ಅಡ್ವಕೇಟ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕದೆಕಾರ್ ಶ್ರೀನಿವಾಸ ರಾವ್, ನಾಗಪ್ಪ ಕಾಮತ್, ರಮಾನಾಥ ಪೈ, ಯು. ಜಿ. ರಾವ್ ಇವರ ಭಾಷಣಗಳಿದ್ದುವು.

ಅಕ್ಕಿ ಮುಹೂರ್ತ—ಮುಂಬರುವ ಶ್ರೀ. ಅದಮಾರು ಮಠಾಧೀಶರ ಪರ್ಯಾಯ ಮಹೋತ್ಸವದ ಸಲುವಾಗಿ ಕಳೆದ ಶುಕ್ರವಾರ ಮಠದ ಜನರಲ್ ಏಜಂಟರಾದ ಶ್ರೀ. ವೆಂಕಟಾಚಾರ್ಯರ ನೇತೃತ್ವದಲ್ಲಿ ಅಕ್ಕಿ ಮುಹೂರ್ತ ಸಮಾರಂಭವು ಮಹಾ ವೈಭವದಿಂದ ವಿಧಿಪೂರ್ವಕ ಆಚರಿಸಲ್ಪಟ್ಟಿತು.

ಶ್ರೀಕೃಷ್ಣ ಸನ್ನಿಧಾನದಲ್ಲಿ ಮಧ್ವನವಮಿ ಸಮಾರಂಭ—ಶ್ರೀಮನ್ಮಧ್ವಮತಾನುಯಾಯಿಗಳ ಕಾರ್ಯಕ್ಷೇತ್ರವಾದ ಶ್ರೀಮದುಡುಪಿ ರಜತಪೀಠ ಕ್ಷೇತ್ರದಲ್ಲಿ ಕಳೆದ ಆದಿತ್ಯವಾರ ಪರ್ಯಾಯ ಶ್ರೀ. ರಘುಮಾನ್ಯತೀರ್ಥ ಶ್ರೀಪಾದಂಗಳವರ ಘನಾಧಿಪತ್ಯದಲ್ಲಿ ಶ್ರೀ ಮಧ್ವಮುನಿ ಗುರುರಾಯರ ದಿನಾಚರಣೆಯು ಜಯಶೀಲವಾಗಿ ಅತ್ಯಂತ ವೈಭವದಿಂದ ನಡೆಯಿತು ಅಂದು ಮಧ್ಯಾಹ್ನ ಆರೇಳು ಸಹಸ್ರಜನರ ಸಂತರ್ಪಣೆ; ಸಂಜೆ ನಗರಭಜನೆ; ರಾತ್ರೆ ಮಹಾರಥೋತ್ಸವಾದಿಗಳು ಸಾಂಗವಾಗಿ ನೆರವೇರಿದುವು.

ನಗರಸಭೆ—ಸ್ಥಳೀಯ ನಗರಸಭೆಯು ಕಳೆದ ತಾ. 30ನೇ ಸೋಮವಾರ ಸಂಜೆ ಶ್ರೀ. ಅಡ್ವಕೇಟ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. [illegible] ಅಂಗೀಕರಿಸಲಾಯಿತು. ಸಂತೆಮಾರ್ಕೆಟು ತರಕಾರಿ ಮತ್ತು ಮೀನುಮಾರ್ಕೆಟುಗಳ ಪ್ರವೇಶಕ್ಕೆ ಕಬ್ಬಿಣದ ಒಂದರ ನಾಲ್ಕು ಗೇಟು ಮತ್ತು ಮೂರು ಪೈ ಅನುಕ್ರಮವಾಗಿ ವಸೂಲು ಮಾಡಬೇಕೆಂದಾಯಿತು. ಇನ್ನಿತರ ವಿಷಯಗಳ ತೀರ್ಮಾನವಾಗಿ ಸಭಾಂತ್ಯವಾಯಿತು.

ಪಿ. ಜಿ. ಎಸ್. ಮಾಬೆನ್ನರು—ನಿವೃತ್ತ ಉಪಾಧ್ಯಾಯರಾದ ಇವರು ಆಯುರ್ವೇದದ ಹೊಸ ಮೆಡಿಕಲ್ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಪಾಸಾಗಿ H. L. M. S. ಡಿಗ್ರಿಯನ್ನು ಪಡೆದಿರುವುದು ಶ್ಲಾಘನೀಯ, ಶ್ರೀಯುತರು ಉಪಾಧ್ಯಾಯರಾಗಿ ಹೆಸರುಗಳಿಸಿದಂತೆ ಈ ಹೊಸ ವೃತ್ತಿಯಲ್ಲಿಯೂ ಕೀರ್ತಿಗಳಿಸಲೆಂದು ಹಾರೈಸುತ್ತೇವೆ.

ವಾರ್ಷಿಕ ಸಭೆ—ಉಡುಪಿ ಶ್ರೀಮನ್ಮಧ್ವಸಿದ್ಧಾಂತಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲಾ ಪ್ರಾಕ್ತನವಿದ್ಯಾರ್ಥಿಗಳ ಸಂಘದ ದ್ವಿತೀಯ ವಾರ್ಷಿಕ ಮಹಾಸಭೆಯು ಇದೇ ಬಹುಧಾನ್ಯ ಸಂ|| ಮಾಘ ಕೃಷ್ಣ ೩ ಮಂಗಳವಾರ (7-2-1939) ಸಾಯಂಕಾಲ 5ಘಂಟೆಗೆ ಉಡುಪಿ ಚಂದ್ರೇಶ್ವರದಲ್ಲಿ ಜರಗಿಸಬೇಕಾಗಿ ನಿರ್ಣಯಿಸಿರುವುದರಿಂದ ಸದ್ರಿ ಸಭೆಯ ಸದಸ್ಯರಾದವರೂ ಸದಸ್ಯರಾಗಲಿರುವ ಮಹಾಶಯರೂ ಅಂದಿನ ಸಭೆಗೆ ಬಂದು ಸಭಾಕಾರ್ಯವನ್ನು ಸಾಂಗಗೊಳಿಸಬೇಕಾಗಿ ಕಾರ್ಯದರ್ಶಿಗಳಾದ ಶ್ರೀ. ಬಿ. ಶ್ರೀನಿವಾಸಭಟ್ಟ, ಸಾಹಿತ್ಯಶಿರೋಮಣಿ ಇವರು ಅಪೇಕ್ಷಿಸುತ್ತಾರೆ.

ಶುದ್ಧಿ—ಉಡುಪಿಯ ಆರ್ಯಸಮಾಜ ಕಾರ್ಯಾಲಯ ಸಮಿತಿಯಲ್ಲಿ, ತಾ. 27-1-39ರಲ್ಲಿ ಕ್ರೈಸ್ತಮತಾನುಯಾಯಿಗಳೆಂದ ಜೋಸೆಫ್ ಕ್ರಿಸ್ತಿಯಾನಂದ ಮತ್ತು ಅವರ ಪತ್ನಿ ಸಾರಾ ಎಂಬವರ ಶುದ್ಧಿ ಸಂಸ್ಕಾರವು ಆರ್ಯಧರ್ಮಪ್ರಚಾರ, ಶ್ರೀ. ಬಿ. ಮೋಹನಪ್ಪ ತಿಂಗಳಾಯರಿಂದ ನಡೆಸಲ್ಪಟ್ಟಿತು.

ಆರ್ಯ ಸಂಸ್ಕೃತಿಯನ್ನು ಒಪ್ಪಿಕೊಂಡ ಶ್ರೀ. ರಾಮಾನಂದ ಮತ್ತು ಸರಸ್ವತಿ ಎಂಬವರು ಮುಂಚೆ ಹಿಂದೂಮತಾವಲಂಬಿಗಳಾಗಿದ್ದರು. ಕಾಸರಗೋಡಿನಲ್ಲಿ ಇವರು ಪ್ರೊ. ಕ್ರೈಸ್ತಮತಾನುಯಾಯಿಗಳಾದರು. ಆದೇ ಮತವನ್ನು ಇಪ್ಪತ್ತುವರ್ಷಗಳ ವರೆಗೆ ಅನುಸರಿಸಿಕೊಂಡಿದ್ದರು.

ಅಖಿಲ ಕರ್ನಾಟಕವು ಏನು ಹೇಳುತ್ತದೆ?

(ನಮ್ಮ 'ನವಯುಗ' ಮಕರಸಂಕ್ರಾಂತಿ ವಿಶೇಷ ಸಂಚಿಕೆಯ ಕುರಿತು ಅಖಿಲಕರ್ನಾಟಕದಿಂದಲೂ ಒಮ್ಮತದ ಮೆಚ್ಚಿಗೆಯು ದಿನನಿತ್ಯವೆಂಬಂತೆ ಬರುತ್ತಿದೆ. ಅವುಗಳಲ್ಲಿ ಕೆಲವನ್ನು ಆರಿಸಿ ನಮ್ಮ ವಾಚಕರಿಗಾಗಿ ಕ್ರಮಶಃ ಕೊಡಲಾಗುವುದು. (ಸಂ ನ.)

೧

ನವಯುಗ

ಮಕರಸಂಕ್ರಾಂತಿ ವಿಶೇಷ ಸಂಚಿಕೆ

ಉಡುಪಿಯಿಂದ ಹೊರಡುತ್ತಿರುವ 'ನವಯುಗ' ವಾರಪತ್ರಿಕೆಯ ಮಕರ ಸಂಕ್ರಾಂತಿ ವಿಶೇಷ ಸಂಚಿಕೆಯು ನಮಗೆ ತಲಪಿದೆ. ಇದರಲ್ಲಿ ಅನೇಕ ಅತ್ಯುತ್ತಮ ಲೇಖನಗಳೂ, ಚಿತ್ರಗಳೂ ಇವೆ. ಕರ್ನಾಟಕದ ಸುಪ್ರಸಿದ್ಧ ಲೇಖಕರಾದ ಶ್ರೀ|| ಗಳು ಕೊರಡ್ಕಲ್ ಶ್ರೀನಿವಾಸರಾಯರು, ಆರ್. ವಿ. ಜಹಗೀರ್‌ದಾರ, ಈಶ್ವರ ಸಣಕಲ್ಲ, ಡಾ| ಹರ್ಡೀಕರ್, ಎಸ್. ಯು. ಪಣಿಯಾಡಿ, ಎಂ. ವಿ. ಹೆಗ್ಡೆ, ಶಿವರಾಮ ಕಾರಂತ, ಮುದವೀಡು ಕೃಷ್ಣರಾವ್, ಎ. ಆರ್. ಕಾಮತ್, ಕೆ. ಹೈದರ್ ಮುಂತಾದ ಮಹನೀಯರುಗಳು ತಮ್ಮ ಸ್ವಾರಸ್ಯವಾದ ಲೇಖನಗಳನ್ನು ಕಳುಹಿಸಿಕೊಟ್ಟಿದ್ದಾರೆ. ಅಲ್ಲದೆ ಶ್ರೀಮತಿಗಳಾದ ವಸಂತಿಬಾಯಿ, ಸರಸ್ವತಿಬಾಯಿ, ರಾಜವಾಡೆ, ಆರ್. ಕಲ್ಯಾಣಮ್ಮ, ಶಾಂಭವೀ ಪೂಂಜ—ಈ ಮಾನ್ಯ ಮಹಿಳೆಯರ ಲೇಖನಗಳೂ ಇವೆ. ಈ ಸಂಚಿಕೆಯಲ್ಲಿರುವ ಪ್ರತಿಯೊಂದು ಲೇಖನವನ್ನೂ ವಾಚಕರು ಸಾವಧಾನವಾಗಿ ಓದಿ ಮನನಮಾಡಲು ಅರ್ಹವಾಗಿದೆ.

ಕನ್ನಡದಲ್ಲಿ ವಿಶೇಷಾಂಕಗಳು ಹೊರಡುವುದು ಅಪರೂಪ. ಇತರ ಭಾಷೆಗಳಲ್ಲಿ ಹೊರಡುವಷ್ಟಂತೂ ಇಲ್ಲ. ಹೀಗಿರುವಲ್ಲಿ ಇನ್ನೂರು ಪುಟಗಳ ಸರ್ವಾಂಗ ಸುಂದರವಾದ ಇಂತಹ ಪ್ರಕಟಣೆಯನ್ನು ಹೊರಡಿಸುವುದು ಸ್ತುತ್ಯಕಾರ್ಯವೇ ಸರಿ.

ಕನ್ನಡಿಗರು ಈ ಸಂಚಿಕೆಯ ಸಂಪೂರ್ಣ ಪ್ರಯೋಜನವನ್ನು ಪಡೆಯಲೆಂದು ಕೋರುತ್ತೇವೆ.

'ಸಾಧ್ವಿ' ಮೈಸೂರು.

೨

ಗೆಳೆಯರಲ್ಲಿ ವಿನಂತಿಗಳು

HARIHARA.
16-1-'39

ಇಷ್ಟು ಸುಂದರವೂ, ಉಪಯುಕ್ತವೂ, ಬೋಧಪ್ರದವೂ, ಮೆದುಳಿಗೆ ಆಹಾರವನ್ನು ಕೊಡುವ ಲೇಖನಗಳಿಂದೊಡಗೂಡಿದುದೂ ಆದ ವಿಶೇಷ ಸಂಚಿಕೆಯನ್ನು ಜನತೆಯ ಮುಂದಿಟ್ಟದಕ್ಕಾಗಿ ನನ್ನ ಹೃತ್ಪೂರ್ವಕ ವಂದನೆಗಳು. 'ದೇವರ ಪುಣ್ಯ' ಶ್ರೀ. ಜಾರಪ್ಪನವರ ದೇಶಸೇವಕನಾರಾಗಬಹುದು?—ಯಾವ ಶ್ರೇಷ್ಠತಮ ಪತ್ರಿಕೆಗಳಲ್ಲಿಯೂ ಇರಲಿಲ್ಲ. ನಾಗು ಮತ್ತೊಮ್ಮೆ Congratulation.

S. L. Subrahmanyam.

೩

'ನವಯುಗ'—ದ 'ಮಕರ ಸಂಕ್ರಮಣ'ದ ವಾರ್ಷಿಕ ವಿಶೇಷ ಸಂಚಿಕೆಯು ನಮ್ಮ ಕೈಸೇರಿದೆ. ಕ್ರೌನ್ ೩/೪ದ ೨೦೦ಪುಟಗಳ ಈ ಸಂಚಿಕೆಗೆ ಇಟ್ಟ ೪ ಆಣೆ ಬೆಲೆಯೂ ತಕ್ಕದಾಗಿದೆ.

ಈ ಸಂಚಿಕೆಯ ಬಾಹ್ಯಾಂಗ, ಅಂತರಂಗಗಳೆರಡರ ಕಡೆಗೂ ಸಂಪಾದಕರು ಲಕ್ಷ್ಯ ಪೂರೈಸಿದುದು ಅಭಿನಂದನೀಯವಾಗಿದೆ. ಸಂಚಿಕೆಯ ಎತ್ತುಗಡೆಯು (Get up) ಚೆನ್ನಾಗಿದ್ದು, ಲೇಖನಗಳ, ಲೇಖಕರ ವೈವಿಧ್ಯ, ವೈಚಿತ್ರ್ಯ, ವೈಪುಲ್ಯಗಳಿಂದ ಸಂಪಾದಕರ ಪ್ರಯತ್ನವು ಯಶಸ್ವಿಯಾಗಿದೆಯೆಂದು ಹೇಳಬಹುದು. ಕಣ್ಮನಗಳನ್ನಾಕರ್ಷಿಸುವಂತಹ ಬಣ್ಣದ ಹೊದಿಕೆಯ ಪುಟವು, ಸಂಪಾದಕರ ಕಲಾಪ್ರಿಯತೆಗೂ ಅಚ್ಚುಮನೆಯವರ ಜಾಣ್ಮೆಗೂ ಬಲವಾದ ಸಾಕ್ಷಿಯಾಗಿದೆ. ಕನ್ನಡ ನಾಡಿನವರೆಲ್ಲರೂ ಸಂಪಾದಕರ ಈ ಪ್ರಯತ್ನವದ್ದು ಕೊಂಡಾಡದಿರರು.

ಲೇಖನಗಳಲ್ಲಿ ತುಂಬಾ ವೈವಿಧ್ಯವಿರುವದರಿಂದ ಲೇಖನಗಳ ವರ್ಗೀಕರಣದಿಂದಲೇ ಅವುಗಳನ್ನು ತೂಗಿ ನೋಡಬೇಕು. ವಿಸ್ತಾರದ ಭಯಕ್ಕಾಗಿ ಒಂದೆರಡೇ ಮಾತುಗಳನ್ನು ಬರೆಯುವ,

ಜೀವನದಲ್ಲಿ ಜನಾಂಗದ ಸ್ಥಾನ, ಮಣ್ಣು ಪಾಲಾಗುವ ಮಕ್ಕಳು, ಯಾರು ದೇಶಸೇವಕನಾಗಬಹುದು, ಸ್ತ್ರೀಯರೂ ಅವರ ಕರ್ತವ್ಯವೂ. ವಾಂಟೆಡ್ ಎ ಲೀಡರ್, ಹಳ್ಳಿ ಹೇಗಿದೆ, ಸ್ತ್ರೀಯರೂ ಸಮಾಜ ಸೇವೆಯೂ, ಕನ್ನಡ ಜನಾಂಗಕ್ಕೆ ನವಯುಗದ ಸಂಕ್ರಮಣ ಕಾಲ, ಕರ್ನಾಟಕ ಪ್ರಾಂತ ರಚನೆ, ಎಲ್ಲಿಂದ ಎಲ್ಲಿಗೆ, ಹೊಸ ಯುಗದಲ್ಲಿ ಭಾರತೀಯ ಸ್ತ್ರೀಯರ ಸ್ಥಾನ, ಕರ್ನಾಟಕ ಏಕೀಕರಣವೂ ತುಳುವರೂ, ಜನಸಂಖ್ಯೆಯಲ್ಲಿ ನಮಗೊಂದು ಧೋರಣೆ ಬೇಕು, ಈ ಲೇಖನಗಳೆಲ್ಲ ಒಳ್ಳೆಯ ವಿಚಾರಪರಿಪ್ಲುತವಾಗಿದ್ದು ತಾವು ಸೂಚಿಸುತ್ತಿರುವ ಒಂದಲ್ಲ ಒಂದು ಸಮಸ್ಯೆಯನ್ನು ಒಳ್ಳೆಯ ಜಾಣ್ಮೆಯಿಂದ ಪರ್ಯಾಲೋಚಿಸಿವೆ. ಈ ಲೇಖನಗಳಿಂದ ಈ ಸಂಚಿಕೆಗೊಂದು ವಿಶೇಷ ಶೋಭೆಯುಂಟಾಗಿದೆಯೆಂದು ಹೇಳಬಹುದು. ಇಂಥ ಲೇಖನಗಳು, ಕನ್ನಡ ಜ್ಞಾನ ಪ್ರಪಂಚಕ್ಕೆ ಅತ್ಯವಶ್ಯಕವಾಗಿದೆ. 'ಕನ್ನಡಿಗರು ಜಾಗ್ರತರಾದ ವಿಚಾರವಂತರೂ ಹೌದು' ಎಂಬ ಮಾತನ್ನು ಪುಷ್ಟೀಕರಿಸುತ್ತವೆ.

ಕತೆಗಳಲ್ಲಿ 'ಹರಕೆ'ಯು ಕಲಾಪೂರ್ಣವಾದುದು. ಆ ಕತೆಯು ಚಿಕ್ಕದಿದ್ದರೂ ಓದುಗರ ಮನಸ್ಸನ್ನು ಸೆರೆಹಿಡಿಯುವಂತಹದು. ವಿವಾಹ ವಿಚ್ಛೇದವು ಈಗಿನ ಸಮಾಜದ ಒಂದು ಚಿತ್ರವನ್ನು ತೋರಿಸುತ್ತಿದ್ದು, ಅದಕ್ಕಿನ್ನೂ ಶೈಲಿಯ ಸರಳತೆ, ಜೀವನ ವಾಸ್ತವ್ಯತೆಗಳು ಬೇಕು. ಕತೆ ಹೇಳುವಾಗಿನ ಸ... ಕತೆ ಬರೆಯುವಾಗಲೂ ಇದ್ದುದಾದರೆ ಕತೆಯು ಕಲೆಯು ಕೈವಶವಾದಂತೆಯೇ!

ತಾತ್ವಿಕ ವಿಚಾರಗಳನ್ನೊಳಗೊಂಡ 'ಜೀವಂತ ಮರಣ' 'ದೇವರ ಪುಣ್ಯ'ಗಳು ಚೆನ್ನಾಗಿವೆ. 'ದೇವರ ಪುಣ್ಯ'ವು ವಿಚಾರಿಗಳೊಬ್ಬರು ಚಿತ್ರಿಸಿದ 'ಮನೋಯುದ್ಧ'ದ ಕಲಾಯುಕ್ತ ಚಿತ್ರವಾಗಿದೆ. ರಾತ್ರಿಯ ನಕ್ಷತ್ರ ಕಡ್ಡಿ'ಯು ಮನೋರಂಜಕವಾದ ಕಿಡಿಗಳನ್ನುಬ್ಬಿಸಿದೆ. ಈ ಕಿಡಿಗಳು ಅಣುಗಳಾದರೂ, ಬಹ್ಮಾಂಡವನ್ನು ಕಟ್ಟಬಲ್ಲ ಶಕ್ತಿಯುತವಾಗಿವೆ. ಕಿಡಿಗಳೊಂದೂ ವರಲ್ಲ ಬೆಡಗಿವೆ, ಕಾವಿದೆ. ಕಿಡಿಗಳು ತಮ್ಮ ಗುರಿಯನ್ನು ಸಾಧಿಸದೆ ಬಿಟ್ಟಿಲ್ಲ.

'ಬೇಸಾಯ ಗೀತೆಗಳು ಆರನೆಯ ಶತಕದ ಒಂದೆ ಕನ್ನಡದಲ್ಲಿ ಸಾಹಿತ್ಯ'ವೆಂಬ ಲೇಖನಗಳನು ಬರೆದವರು ತಮ್ಮ ವೈಶಿಷ್ಟ್ಯವನ್ನು ಎಂದಿನಂತೆ ಕಾಪಾಡಿಕೊಂಡು ಬಂದಿದ್ದಾರೆ. 'ತಾರಾಬಲವು'ವು ತನ್ನ ಅಂಕು ಡೊಂಕು, ಅಡ್ಡ ತಿಡ್ಡ ಸುತ್ತು ಸುರುಳಿಗಳಿಂದ 'ಹರಟೆಯೆ.' ಎಂದೆನಿಸುವಷ್ಟು ಉದ್ದ ಬೆಳೆದಿದೆ. ಈ ಲೇಖಕರು ಕರ್ನಾಟಕದ ಪ್ರತಿಭಾವಂತ ವ್ಯಂಗ್ಯ ವಿನೋದಿಭಾವ ಪ್ರಬಂಧ (PERSON AL ESSEYS) ಲೇಖಕರಲ್ಲಿ ಒಬ್ಬರಾಗಬಹುದೆಂದು ನಮ್ಮ ಎಣಿಕೆ. ಇವರ ಉತ್ಕೃಷ್ಟ ಶೈಲಿಯು ಮನವಳೆಯುವಂತಹದು! ತಮ್ಮ ಲೇಖನಗಳ ಬೇಡಿಕೆಯು ಹೆಚ್ಚಾದಂತೆ ಹೇಗೆ ಹೇಗೋ ಲೇಖನಗಳನ್ನು ಬರೆಯತೊಡಗುವ ಲೇಖಕರಲ್ಲಿ ಈಗ ಇವರೂ ತಮ್ಮನ್ನು ಸೇರಿಸಿಕೊಂಡರೇನೋ ಎಂದು, ಪ್ರಕೃತ ಲೇಖನದ ಸಪ್ಪೆಯಾದ ಉದ್ದಳತೆಯನ್ನಳೆಯುವಾಗ ನಮಗೆ ಭಯವಾಯಿತು.

ಮುದ್ರಣವು ಮುದ್ದಾಗಿದೆ. ಉಡುಪಿಯ 'ಪರಿಚಯ ಸಾಹಿತ್ಯ'ವು ಮನೋರಂಜಕವಿದ್ದಷ್ಟು, ಉಪಯುಕ್ತವಾಗಿದೆ. ಕರ್ನಾಟಕದವರೆಲ್ಲರೂ ಸಂಚಿಕೆಯನ್ನು ಕೊಂಡುಕೊಳ್ಳುವುದು ಅತ್ಯಂತ ಯೋಗ್ಯ, ಅದನ್ನು ಓದಿ ನಲಿದಾಡುವದೊಂದು ಭಾಗ್ಯ.

'ಬಡವರ ಬಂಧು'
ಮಂಗಳೂರು.

೪

To.
The Editor,
NAVAYUGA.,
UDIPI.

N. Gundu Rao
1168 Bojjanna's Lines
Mysore.
Dated 16th Jan. 1939.

Dear sir,

Your Navayuga 1939 Annual to hand with great pleasure. The get up, matter merged in it, number of pages with colour photoes, short stories are really brilliant When I received this book I was very happy to see some of the photoes and discription about Udipi Mutt, So I have got an idea to go to Udipi once. I am waiting for the opportunity. Anyhow your Annual is very fine and I wish every success in future.

N. Gundu Rao
...spondent, **Mysore.**

ಅತ್ಯಲ್ಪ ಕಾಲದಲ್ಲಿ ಸಮಗ್ರ ಕರ್ನಾಟಕದಲ್ಲಿ ಖ್ಯಾತಿಗೊಂಡ
ಹೊಸ ಮಾದರಿಯ ಕನ್ನಡ ವಾರಪತ್ರಿಕೆ
ಅಂತರಂಗ
ಉಡುಪಿ.
ಇದರಲ್ಲಿ ಜಾಹೀರಾತನ್ನು ಕೊಟ್ಟರೆ ಕನ್ನಡಿಗರ ಅಂತರಂಗಕ್ಕೆ ಸೇರುವದು, ನಿಮಗೆ ಲಾಭವಾಗುವದು.
ವಾರ್ಷಿಕ ಚಂದಾ ರೂಪಾಯಿ ಮೂರು ಮಾತ್ರ.

ಸ್ಥಾಪಿತ: ಕ್ರೌನ ರಬ್ಬರ ಸ್ಟಾಂಪ ಕಂಪನಿ 1926
18 ಬಲ್ಮಠ ರಸ್ತೆ, ಮಂಗಳೂರು.
ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಸ್ಟಾಂಪುಗಳೂ, ಸ್ಟೆನ್ಸಿಲ್‌ಗಳು, ಹೇಳಿಗಳ ಮೊಹರು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಕಳಿಸಿಕೊಟ್ಟರೆ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುತ್ತದೆ.

CROWN RUBBER STAMP CO,
Balmat Road, MANGALORE.
Included by the Mysore Govt. Stores Purchase Committee in the list of approved Firms.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ಹಿತ್ತಾಳೆ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯ ಹೊಸಬಂತೆ ಸಾಮಾನುಗಳು ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲಿ, ರಖಂ ಆಗಿಯಾಗಲೀ ಕೊಂಡುಕೊಳ್ಳುವುದು ಅತಿ ಲಾಭಕರವಾಗಿದೆ.

ಈ ವಾರದ ನಿಮ್ಮ ಭವಿಷ್ಯ

ತಾ. 2—2—39ರಿಂದ 9—2—39ರ ವರೆಗೆ

[ಜ್ಯೋತಿಷವು ಅಪ್ರಸ್ತುತವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಿನ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ಸ.]

ಕರ್ಕಾಟಕ ರಾಶಿಯವರ ಭವಿಷ್ಯವು ಬಹಳ ಹೀನಾವಸ್ಥೆಯನ್ನೈದಿರುವುದು. ವೃಷಭ, ಕನ್ಯಾ, ಧನು, ಕುಂಭ, ಮೀನ ಈ ರಾಶಿಗಳವರ ಗ್ರಹಗತಿಯು ಸ್ವಲ್ಪ ಮಟ್ಟಿಗೆ ಕೆಟ್ಟಿರುವುದು. ಮಿಥುನ, ವೃಶ್ಚಿಕ ರಾಶಿಯವರ ಗ್ರಹಚಾರವು ಮಧ್ಯಮ ಸ್ಥಿತಿಯಲ್ಲಿದೆ. ಮೇಷ, ಸಿಂಹ, ತುಲಾ, ಮಕರ ರಾಶಿಯವರ ಭವಿಷ್ಯವು ಉತ್ತಮ ರೀತಿಯಲ್ಲಿದೆ.

ಮೇಷರಾಶಿ—

ಈ ವಾರವು ನಿಮ್ಮ ಭಾಗಕ್ಕೆ ಬಹಳ ಉತ್ತಮವಾಗಿಯೇ ಇರುವುದು. ಆದರೂ ವಿರೋಧಿಗಳು ಆಗಾಗ ಧನನಾಶಕಾರಕಗಳಾದ ಅನೇಕ ಅನರ್ಥಗಳನ್ನು ಹುಟ್ಟಿಸುತ್ತಿರುವರು. ಈ ವಿಷಯಕ್ಕೆ ತಾವು ಬೆದರಿ ಉದಾಸೀನರಾಗಬೇಕಾದ ಅವಶ್ಯವಿಲ್ಲವು. ಇವು ಕೇವಲ ಧನವ್ಯಯಕ್ಕೆ ಕಾರಣಗಳಾದಾವೇ ಹೊರತು ಕಾರ್ಯಹಾನಿಕಾರಕಗಳಾಗಲಾರವು. ಉದ್ಯೋಗಸ್ಥರಿಗೂ ವ್ಯಾಪಾರಿಗಳಿಗೂ ನ್ಯಾಯವಾದ ಪ್ರತಿಫಲ ದೊರೆಯುವುದು. ಧರ್ಮಕರ್ಮಗಳಲ್ಲಿ ಆಸಕ್ತಿಯು ಹೆಚ್ಚುವುದು. ಕೆಲವು ಭಾಗಗಳಲ್ಲಿ ಸತ್ಪುರುಷರ ಸಹವಾಸದಿಂದ ಮನಶ್ಶಾಂತಿಯನ್ನೂ ವಸಿಷ್ಠ ಸುಖವನ್ನೂ ಪಡೆಯುವಿರಿ. ಆರೋಗ್ಯವೂ ಕೂಡ ಹೆಚ್ಚಿನಮಟ್ಟಿಗೆ ಸುಧಾರಣೆಯೊಂದಿರುವುದು. ತಾ. 3ರಿಂದ 6ರ ವರೆಗಿನ ದಿವಸಗಳು ಅಷ್ಟೊಂದು ಉತ್ತಮವಾಗಿಲ್ಲದಿರುವುದರಿಂದ ತದ್ದಿನಗಳಲ್ಲಿ ಆಪ್ತಮಿತ್ರರಲ್ಲಿ ಮನಸ್ತಾಪ, ಕೆಲವೊಂದು ಕಾರ್ಯಹಾನಿ ಮತ್ತು ಶೋಕಗಳು ಸಂಭವಿಸಲಿರುವವು.

ವೃಷಭರಾಶಿ—

ಹಣದ ಅಡಚಣೆಯು ನಿಮಗೆ ಸಂಭವಿಸದಿದ್ದರೂ ಪತ್ನೀಸಂಬಂಧಗಳಾದ ಅನೇಕ ಕಲಹಗಳು ಉಂಟಾಗುವವು. ಮುಂಚಿನ ಸ್ಥಾನಮಾನಗಳೂ ಮಾಯವಾಗುವವು. ದೇಹದಲ್ಲಿ ಒಂದಲ್ಲೊಂದು ರೀತಿಯಿಂದ ಆರೋಗ್ಯವು ಕೆಟ್ಟಿದ್ದು ಕೇವಲ ದುಃಖಭಾಗಿಗಳಾಗುವಿರಿ. ಗೃಹಕಲಹಗಳೂ ಕೂಡ ದಿನಹೋದಂತೆ ಹೆಚ್ಚುತ್ತಲೇ ಇರುವವು. ಸ್ವೀಕೃತ ಕಾರ್ಯಗಳಿಗೆ ಶತ್ರುಗಳಿಂದ ವಿಘ್ನಗಳು ಬಾರದಿದ್ದರೂ ನಿಮ್ಮ ದುರ್ದೈವವಶಾತ್ ಆಕಸ್ಮಿಕವಾಗಿ ತೊಂದರೆಗಳು ಬರುವವು. ಈ ಎಲ್ಲ ವಿಷಯಗಳಿಂದ ನಿಮ್ಮ ಚಿಂತೆಯು ದಿನೇ ದಿನೇ ವೃದ್ಧಿಯನ್ನೈದುತ್ತಾ ಶರೀರಶೋಷೆಯನ್ನುಂಟುಮಾಡುವುದು. ಖರ್ಚಿನ ಮಟ್ಟಿಗೆ ಬೇರಿದಷ್ಟು ದುಡಿಯಲು ಶಕ್ತರಿರುವಿರಿ, ಮತ್ತು ಸತ್ಸ್ತ್ರೀಯರಿಂದಾಗಿ ಧನಾಗಮನ ಯೋಗವೂ ಕಂಡುಬರುತ್ತದೆ. ತಾ. 3-4 ಮತ್ತು 9 ಈ ದಿನಗಳು ಇದ್ದುದರಲ್ಲಿ ಉತ್ತಮವಾಗಿರುವುದರಿಂದ ರೋಗನಾಶ, ಧನಲಾಭ, ಸುಖಗಳು ಲಭಿಸುವವು.

ಮಿಥುನರಾಶಿ—

ಇಷ್ಟಾನಿಷ್ಟಗ್ರಹರು ಸಮಬಲರಾಗಿರುವುದರಿಂದ ನಿಮಗೀವಾರದಲ್ಲಿ ಹಾನಿ ವೃದ್ಧಿಗಳೆರಡೂ ಹೆಚ್ಚಾಗಿ ಸಂಭವಿಸಲಾರವು. ಪರೋಪಕಾರಿಗಳಿಂದುಂಟಾಗಲಿರುವ ಭಯವು ಸ್ವಲ್ಪವೂ ಶಾಂತಿಯೊಂದುವುದು. ಕೋರ್ಟು ವಗೈರೆ ಕಾರ್ಯಗಳಲ್ಲಿ ಹೆಚ್ಚಾಗಿ ಜಯವಾಗುವುದು. ಸ್ವಕೀಯ ಬುದ್ಧಿಚಾತುರ್ಯದಿಂದಾಗಿ ಧನ ಮನವೆಂಬವನ್ನು ಸಂಗ್ರಹಿಸುವಿರಿ. ... ಕಾರ್ಯಗಳಲ್ಲಿ ಯಾವುದರಲ್ಲಿಯೂ ನಷ್ಟವಾಗದು ಮಾತ್ರವಲ್ಲ ವೃಷ್ಟಿಕರವಾಗಿ ಲಾಭವಾಗುವುದು. ಆಸ್ತಿಕಮಾರ್ಗದಲ್ಲಿ ನಿಮಗೆ ಸ್ವಲ್ಪಮಟ್ಟಿಗೆ ಶ್ರದ್ಧೆಯು ಕಡಿಮೆಯಾಗುವುದರಿಂದ ಉತ್ಕಟವಾದ ಕೆಲವರಿಗೆ ನಿಮ್ಮಲ್ಲಿ ಸ್ವಲ್ಪ ವೈಮನಸ್ಯಭಾವವುಂಟಾಗುವುದು. ಸಾಮಾನ್ಯವಾಗಿ ಸ್ತ್ರೀಜನರಿಂದ ಅಶುಭವು ಸಂಭವಿಸಲಿರುವುದು. ಪ್ರತಿಯೊಂದು ವಿಷಯದಲ್ಲಿಯೂ ಸ್ವಸ್ತ್ರೀಯೂ ನಿಮಗೆ ವಿರುದ್ಧಳಾಗಿರುವಳು. ಆರೋಗ್ಯವೂ ಸ್ವಲ್ಪಮಟ್ಟಿಗೆ ಕೆಡುವುದು. ತಾ. 2 ಮತ್ತು 5-6 ಈ ದಿನಗಳಲ್ಲಿ ಕಾರ್ಯಜಯ, ಧನಲಾಭ, ಸ್ತ್ರೀಸುಖಗಳು ಲಭಿಸುವವು.

ಕರ್ಕಾಟಕರಾಶಿ—

ಯಾವ ಭಾಗದಲ್ಲಿ ನೋಡಿದರೂ ನಿಮಗೆ ಈ ವಾರವು ಅನಿಷ್ಟದಾಯಕವಾಗಿರುವುದೇ ಹೊರತು ಇಷ್ಟಾರ್ಥವು ಸ್ವಲ್ಪವೂ ಸಿಗುವಂತಿಲ್ಲ. ಪ್ರತಿಯೊಂದು ಗ್ರಹನೂ ಅನಿಷ್ಟಸ್ಥಾನವನ್ನೇ ಆಶ್ರಯಿಸಿರುವನು. ಆದಕಾರಣ ವ್ಯಾಪಾರ ವ್ಯವಹಾರಾದಿಕಾರ್ಯಗಳಲ್ಲಿ ನಷ್ಟವೇ ಪ್ರಾಪ್ತಿಯಾಗುವುದು. ಹಣಸಂಪಾದನೆಯ ಮಾರ್ಗಗಳು ದಿನೇ ದಿನೇ ಹೆಚ್ಚುತ್ತಿದ್ದ ಆರ್ಥಿಕ ಮುಗ್ಗಟ್ಟೆಂಬ ಮೃತ್ಯುವಿನ ದವಡೆಗೆ ತುತ್ತಾಗಲಿರುವಿರಿ. ನಿನ್ನ ಶೈಲಿಯಗಳ ಶತ್ರುವು ಕೂಡ ಸಮಯಸಿಕ್ಕಿದಾಗ ಶತೃತ್ವಸಾಧಿಸದೇ ಬಿಡನು ಎಂಬಂತೆ ತನ್ನ ಶಕ್ತಿ ಮೀರಿ ಉಪದ್ರವಿಸುವನು. ಅಕಸ್ಮಾತ್ತಾಗಿ ಪ್ರವಾಸಮಾಡಬೇಕಾದ ಸಂದರ್ಭವೊದಗಿ ಕಷ್ಟನಷ್ಟಗಳಿಗೆ ಗುರಿಯಾಗಿ ಅತ್ಯಂತ ಶೋಕದಿಂದ ತಪ್ತರಾಗುವಿರಿ. ಪುತ್ರನಿಂದಲೂ ಶೋಕಸಂಭವಿಸುವುದು. ಶರೀರದಲ್ಲಿ ಅನಾರೋಗ್ಯವೃದ್ಧಿಯಿಂದ ಶಕ್ತಿಯು ಕುಂದುವದು. ತಾ. 2-5-6-9 ಈ ದಿನಗಳು ವಿಶೇಷ ಅನಿಷ್ಟದಾಯಕಗಳಾಗಿರುವವು.

ಸಿಂಹರಾಶಿ...

ವೃಥಾ ಪ್ರಯಾಣದ ಫಲವಾಗಿ ನಿಮ್ಮ ಉತ್ಪತ್ತಿಯ ಬಹ್ವಂಶವನ್ನು ವ್ಯಯಿಸುವಿರಿ. ಅಲ್ಪ ಮನುಷ್ಯರ ಸಂಸರ್ಗದಿಂದಾಗಿ ಕೆಲವು ಕಾರ್ಯಗಳಲ್ಲಿ ಅನಿಷ್ಟಗಳೂ ಅಪಕೀರ್ತಿಯೂ ಸಂಭವಿಸುವುದು. ವಿಪಕ್ಷೀಯರು ಅಸತ್ಯತೆಯನ್ನೆಸಗಲು ಬಂದು ಅದರ ಫಲವನ್ನು ತಾವೇ ಅನುಭವಿಸುವರು. ವಾಣಿಜ್ಯ ವೃತ್ತಿಯವರಿಗೂ ವಕೀಲ ವೃತ್ತಿಯವರಿಗೂ ಅವರವರ ಉದ್ಯೋಗದಲ್ಲಿ ಹೆಚ್ಚಾದ ಯಶಸ್ಸೂ ಲಾಭವೂ ಸಿಗುವುದು. ಬಂಧುಮಿತ್ರರೂ ಗೃಹಪರಿವಾರವೂ ಸಂಪೂರ್ಣವಾಗಿರುವುದರಿಂದ ಸಂತೋಷದಿಂದ ಕಾಲ ಕಳೆಯುವಿರಿ. ಮನೋರೋಗಗಳೆಲ್ಲವೂ ನಿವಾರಿತವಾಗಿ ಸ್ವೀಕೃತ ಕಾರ್ಯಗಳಲ್ಲಿ ಜಯವನ್ನೂ ಉನ್ನತಿಯನ್ನೂ ಪಡೆಯುವಿರಿ. ಒಳ್ಳೇ ಮಾತಿನಿಂದ ನೀವು ಜನರನ್ನು ಬಹು ಸುಲಭದಿಂದ ವಶಪಡಿಸಿಕೊಳ್ಳುವಿರಿ. ಭೋಗೇಚ್ಛೆಗಳಿಂದ ನಿಮಗೆ ಸಕಲ ಭೋಗಗಳೂ ಅನಾಯಾಸವಾಗಿ ದೊರೆಯುವವು. ತಾ. 2, 5, 6, 9 ಈ ದಿನಗಳು ಸಕಲ ಕಾರ್ಯಗಳಿಗೂ ಬಹಳ ಅನುಕೂಲವಾದವುಗಳು.

ಕನ್ಯಾರಾಶಿ—

ಈ ವಾರವು ನಿಮಗೆ ಹೆಚ್ಚಿನಂಶ ಅಹಿತವಾಗಿಯೇ ಪರಿಣಮಿಸುವುದು. ಕಾರಣವೇನೆಂಬಿರಾ, ಕುಜಶುಕ್ರರನ್ನು ಬಿಟ್ಟಲ್ಲಿ ಇತರ ಸರ್ವಗ್ರಹರೂ ಅನಿಷ್ಟಕಾರಿಗಳಾಗಿರುವರು. ಅತಿ ನಿಜ ಪುತ್ರ ಕಳತ್ರರ ಕಲಹದಿಂದಾಗಿ ಸಂಸಾರದಲ್ಲಿ ಬಹಳ ವಿರಕ್ತಿಯೂ ಜುಗುಪ್ಸೆಯೂ ಉಂಟಾಗುವುದು. ಶತ್ರುಗಳ ಬಲವು ಹೆಚ್ಚಿರೋಣದರಿಂದ ಅವರಿಂದ ಪೀಡೆಗಳೂ ತದ್ವಿಷಯವಾಗಿ ಮನೋರೋಗವೂ ಕೂಡ ಅಧಿಕವಾಗುವುದು. ಪುರುಷಯತ್ನಕ್ಕೆ ಬಲ ಕಡಿಮೆಯಾದುದರಿಂದ ನೀವು ಎಣಿಸಿದಂತೆ ಕಾರ್ಯವಾಗವುದಿಲ್ಲವು. ಆದರೂ ನಿಮ್ಮ ಭಾಗಕ್ಕೆ ಮಿತ್ರರು ಅನುಕೂಲರಾಗಿರುವುದು ನಿಮ್ಮ ಸೌಭಾಗ್ಯವೆನಬೇಕು. ಕಾರಣ ಇವರಿಗಿಂತಲೂ ಇತರ ನೀಚ ಕುಲದವರಿಂದಲೂ ಅನೇಕ ಕಾರ್ಯಗಳಲ್ಲಿ ನಿಮಗೆ ಧನಲಾಭದ ಯೋಗವಿದೆ. ತಾ. 5, 6 ಮತ್ತು 9 ಈ ದಿನಗಳಲ್ಲಿ ಹೆಚ್ಚಿನ ಖರ್ಚು ಕಾರ್ಯವಿಘ್ನ ಮತ್ತು ಮಾನಹಾನಿಯಾಗುವ ಪ್ರಸಕ್ತಿಗಳು ಬರಲಿವೆ.

ತುಲಾರಾಶಿ—

ಕ್ಷತ್ರಿಯ ಕುಲಕ್ಕೆ ಸೇರಿದ ಶನಿ ಕುಜರು ನಿಮ್ಮ ಭಾಗಕ್ಕೆ ಪ್ರತಿಕೂಲರಾಗಿರುವರು. ಆದಕಾರಣ ರಾಜಕೀಯ ಭಾಗದಲ್ಲಿ ಬಹಳ ಜಾಗರೂಕತೆಯಿಂದ ವರ್ತಿಸತಕ್ಕದ್ದು. ಆದರೂ ಅನಿಷ್ಟವು ತಪ್ಪುವಂತಿಲ್ಲ. ಪಿತ್ಥ ದೋಷವು ಅಧಿಕವಾಗಿ ರೋಗವಾಗಿ ಪರಿಣಮಿಸಲಿರುವುದು. ಮತ್ತು ಅನೇಕ ಭೋಗ್ಯವಸ್ತುಗಳಿಗೆ ಹಾನಿಯಾಗುವದಲ್ಲದೆ ಮಾನಕ್ಷಯದ ಪ್ರಸಂಗವೂ ಕೂಡ ಸಂಭವಿಸೀತು. ಶತ್ರುಗಳ ನಾಶದಿಂದಾಗಿ ಮನಸ್ಸಿಗೆ ಸುಖನೆಮ್ಮದಿಗಳು ದೊರೆಯುವವು. ಮತ್ತು ಗೃಹಪರಿವಾರಾದಿಗಳು ಪೂರ್ಣವಾಗಿರುವುದರಿಂದ ಸಾಂಸಾರಿಕ ಸುಖವನ್ನು ಚೆನ್ನಾಗಿ ಅನುಭವಿಸಲಿರುವಿರಿ. ನಿರೋಗಿಯಾದ ಸಂಸಾರದಿಂದ ಕೂಡಿರುವ ನಿಮಗೆ ದಿವಸವು ಕ್ಷಣಪ್ರಾಯವಾಗುವುದು. ಸಕಲ ಕಾರ್ಯಗಳಲ್ಲೂ ನಿಮ್ಮ ಈಪ್ಸಿತಗಳು ಕೈಸೇರುವವು. ಸಾಂಪತ್ತಿಕ ಭಾಗದಲ್ಲಿ ಉತ್ತಮ ಸ್ಥಿತಿಯನ್ನೈದುವಿರಿ. ತಾ. 3ರಿಂದ 6 ಮತ್ತು 9 ಈ ದಿನಗಳು ಅತ್ಯುತ್ತಮಗಳಾಗಿವೆ.

ವೃಶ್ಚಿಕರಾಶಿ—

ಯೋಗ್ಯಸ್ಥಾನಾಪನ್ನರಿರುವುದರಿಂದಲೂ ವಿರೋಧಿಗಳ ಬಲೆಯಿಂದ ಮುಕ್ತರಾದ ಪ್ರಯುಕ್ತವೂ ಒಳ್ಳೇ ಸಂತೋಷದಿಂದ ಇರುವಿರಿ. ಕುಟುಂಬದಲ್ಲೂ ಕೂಡ ತುಂಬಾ ಹಿತವಿರುವುದು. ಈ ಕಾರಣದಿಂದಾಗಿ ನೀವು ಸ್ವಲ್ಪ ಎಚ್ಚರ ತಪ್ಪಿ ವರ್ತಿಸಿ ಅಧಿಕಾರಿಗಳ ಬೆದರಿಕೆಗೂ ಶತ್ರುಗಳ ಕಪಟೋಪಾಯಗಳಿಗೂ ಸಿಲುಕಲಿರುವಿರಿ. ಆದುದರಿಂದ ಜಾಗ್ರತೆಯಿಂದ ವರ್ತಿಸತಕ್ಕದ್ದು. ಅಕಸ್ಮಾತ್ತಾಗಿ ಅಪಘಾತಗಳಿಗೆ ಸಿಲುಕಿ ದೇಹದಲ್ಲಿ ಗಾಯ ವ್ರಣಾದಿಗಳು ಉಂಟಾಗುವ ಸಂಭವವು ಕಂಡುಬರುತ್ತದೆ. ಇನ್ನು ಕೆಲವೊಂದು ಭಾಗದಲ್ಲಿ ಬಂಧುಜನರಿಂದಾಗಿ ಮನಸ್ಸಿಗೆ ಕ್ಲೇಶವುಂಟಾಗಲಿದೆ. ಪುತ್ರ ಭೃತ್ಯರಲ್ಲೂ ಕೂಡ ಕಲಹವಾದೀತು. ಈ ಪೀಡೆಗಳಿಂದಾಗಿ ನಿಮ್ಮ ಸಂತೋಷಕ್ಕೆ ಬಹುಮಟ್ಟಿಗೆ ಹಾನಿಯಾಗುವುದೆಂದೇ ಹೇಳಬೇಕು. ತಾ. 5ರಿಂದ 8ರ ವರೆಗಿನ ದಿನಗಳಲ್ಲಿ ಇಷ್ಟಕಾರ್ಯಸಿದ್ಧಿ, ಮಿತ್ರಲಾಭ, ಸುಖ, ನಾನಾ ವಿಧ ಲಾಭಗಳು ಆಗಲಿವೆ.

ಧನುರಾಶಿ—

ಅನೇಕ ವಿಷಯಗಳಲ್ಲಿ ನಿಮಗೆ ದೈವವು ಪ್ರತಿಕೂಲವಾಗಿರುವುದರಿಂದ ಸ್ವೀಕೃತ ಕಾರ್ಯಗಳಲ್ಲಿ ಹೆಚ್ಚಾಗಿ ಪರಾಭವವುಂಟಾದೀತು. ಅಷ್ಟೇ ವಿನಹ ಆ ಕಾರ್ಯಗಳಲ್ಲಿ ನಷ್ಟವಾಗಲಾರದು. ಕೇವಲ ವಿಟಜನರಿಗೆ ಅತ್ಯುತ್ತಮವಿರುವುದು. ಇತರ ಜನರ ಭಾಗಕ್ಕೆ ಹೆಚ್ಚಾಗಿ ಅನಿಷ್ಟಗಳು ಕಂಡುಬರುತ್ತಿವೆ. ಸ್ಥೈರ್ಯವಿಲ್ಲದೆ ಅತೀವ ಚಂಚಲವಾಗಿರುವ ಮನಸ್ಸು ಕುಮಾರ್ಗಗಾಮಿಯಾಗಿರುವುದರಿಂದಲೂ, ತನ್ನಲ್ಲೇ ತನಗೆ ಭರವಸೆ ಇಲ್ಲದಿರೋಣದರಿಂದಲೂ ಯಾವ ಕಾರ್ಯವನ್ನೂ ಮುಂದಾಗಿ ಹೋಗಿ ಕೆಲಸಮಾಡಲಾರಿರಿ. ಅಂಗಕ್ಲೇಶ, ನೇತ್ರರೋಗ, ದಂತರೋಗಗಳಿಂದ ಶರೀರವು ಬಹಳ ಕಷ್ಟಕ್ಕೊಳಗಾಗುವುದು. ಮಿತ್ರರೂ, ಪರಿಜನರೂ, ಭಾರ್ಯಾದಿ ಸ್ವಕೀಯರು ವಿಯೋಗ ಹೊಂದುವುದರಿಂದ ಗಾಯಕ್ಕೆ ಇವರಿಗಿಟ್ಟ ರೀತಿಯಂತೆ ನಿಮ್ಮ ಮನಸ್ಸು ಅಷ್ಟು ಚಂಚಲವಾಗುವುದು. ತಾ. 3ರಿಂದ 6ರ ವರೆಗಿನ ದಿನಗಳು ಬಹಳ ಹಾನಿಕಾರಿಗಳಾಗಿರುವವು.

ಮಕರರಾಶಿ—

ಮಾನ, ಸ್ಥಾನ, ಕೀರ್ತಿ ಯಾ ಮರ್ಯಾದೆ ಗೌರವಗಳನ್ನು ಸಂಪಾದಿಸುವುದೂ ಸಂಪಾದಿಸಿದುದನ್ನು ಉಳಿಸಿಕೊಳ್ಳುವುದೂ ಯಾ ಅಳಿಸಿಕೊಳ್ಳುವುದೂ ಕೇವಲ ನಾಲಿಗೆಯೊಂದರಿಂದ. ಆದಕಾರಣ ನೀವು ಗೌರವಾರ್ಹರಾಗಿರಬೇಕಾದರೆ ನಾಲಿಗೆಯನ್ನು ಹಿಡಿತದಲ್ಲಿಟ್ಟುಕೊಳ್ಳಿರಿ. ಅವಾಚ್ಯಶಬ್ದಗಳ ಪ್ರಯೋಗದಿಂದ ಅದು ನಿಮ್ಮ ಭವಿಷ್ಯವನ್ನೇ ಹಾಳುಮಾಡಲಿದೆ. ನಿಮ್ಮ ಸುದೈವದಿಂದಾಗಿ ನಿಮಗೆ ಸಕಲ ಕಾರ್ಯಗಳಲ್ಲೂ ಜಯಪ್ರಾಪ್ತಿಯೂ ಧನಲಾಭವೂ ಕೀರ್ತಿಯೂ ಲಭಿಸುವುದು. ನೀವು ಎಷ್ಟೇ ಬಲಹೀನರಿದ್ದರೂ ಕೂಡ ನಿಮ್ಮ ವಿರೋಧಿಗಳ ಭಾಗಕ್ಕೆ ನೀವು ಸಬಲರಾಗಿರುವಿರಿ. ಪತ್ನ್ಯಾದಿ ಸಮಸ್ತ ಗೃಹಪರಿವಾರಗಳು ಸುಖಸಂತೋಷದಿಂದಿರುವುದರಿಂದ ನಿಮ್ಮ ಭಾಗಕ್ಕೆ ಅವರ ಚಿಂತೆಯೇ ಇಲ್ಲವು. ಅರ್ಜಿತವಾದ ಧನವಸ್ತ್ವಾದಿಗಳನ್ನು ಕಸಿದುವ ಬುದ್ಧಿ ನಿಮ್ಮಲ್ಲಿಲ್ಲವು. ತಾ. 2 3-4 ಮತ್ತು 9 ಈ ದಿನಗಳು ಸರ್ವಕ್ಕೂ ನಿಮಗೆ ಹಿತಕಾರಿಗಳಾಗಿರುತ್ತವೆ.

ಕುಂಭರಾಶಿ—

ಸಂಬಂಧಿಜನರಿಗಿಂತಲೂ ಬಾಲ್ಯ ಸ್ನೇಹಿತರು ಆಪ್ತಮಿತ್ರರು ಎಷ್ಟೋ ಪಾಲು ಮೇಲು. ಇದಾವ ಕಾರಣದಿಂದಲೇ ನಿಮಗೆ ಈ ವಾರದಲ್ಲಿ ಮೃಷ್ಟಾನ್ನಭೋಜನ ಯುಕ್ತವಾದ ಧನಾಗಮಗಳು ಆಗಲಿವೆ. ಆದರೂ ನೀವು ಧರ್ಮಕರ್ಮಗಳಲ್ಲಿ ಶ್ರದ್ಧೆಯುಳ್ಳವರಾಗಿದ್ದು ಅದರಂತೆ ಆಚರಿಸುತ್ತಾ ಬಂದಲ್ಲಿ ಕೆಲವು ವಿಷಯಗಳಲ್ಲಿ ನಿಮಗೆ ಹಿತವಿಹುದು. ಹಲವು ಭಾಗಗಳಲ್ಲಿ ನಿಮ್ಮ ಬುದ್ಧಿಚಾತುರ್ಯವು ಕಡಿಮೆಯಾಗಿ ಸ್ಥಾನಹಾನಿ ಕಲಹಗಳು ಸಂಭವಿಸುವವಲ್ಲದೆ ಧನವ್ಯಯವೂ ಆಪದಯವೂ ಉಂಟಾಗಿ ಮನೋರೋಗಪೀಡಿತರಾಗುವಿರಿ. ಶರೀರ ಆರೋಗ್ಯವೂ ಕೆಡುವುದು. ಹೀಗೆ ಬಾಹ್ಯಾಂತರ ರೋಗಗಳಿಂದ ವ್ಯಾಕುಲವಾದ ನಿಮ್ಮ ಶರೀರದಲ್ಲಿ ಶಾಂತಿಯಿಲ್ಲದಂತಾಗುವುದು; ಆರ್ಥಿಕ ಅಡಚಣೆಗೂ ತುತ್ತಾಗುವಿರಿ. ತಾ. 2-7-8-9 ಈ ದಿನಗಳಲ್ಲಿ ಕಾರ್ಯಹಾನಿ ರಾಜಭಯಾದ್ಯನಿಷ್ಟಗಳು ಸಂಭವಿಸಲಿವೆ.

ಮೀನರಾಶಿ—

ಒಂದು ಒಳ್ಳೆಯದಾದರೆ ಎರಡು ಕೆಟ್ಟದ್ದು ಈ ರೀತಿಯಲ್ಲಿ ಪರಿಣಮಿಸುವುದು ನಿಮ್ಮ ಭವಿಷ್ಯವು. ವ್ಯಾಪಾರ ವ್ಯವಹಾರ ಇತ್ಯಾದಿ ಕಾರ್ಯಗಳಲ್ಲೂ ಸನ್ಮಾನದ ಕಾರ್ಯಗಳಲ್ಲೂ ಜಯಪ್ರಾಪ್ತಿಯು ನಿಮಗಿದೆ. ಮಾತ್ರವಲ್ಲ ಅದರೊಡನೆ ಧನಲಾಭದ ಸಂಭವವೂ ಇದೆ. ಪುತ್ರಮಿತ್ರ ಕಳತ್ರರು ಅನುಕೂಲರಾಗಿರೋಣದರಿಂದ ಕಾಲವು ಸುಖದಿಂದ ಕಳೆದೀತು. ಆದರೆ ಕೆಲವು ಗ್ರಹರ ವರ್ತನೆಯಿಂದಾಗಿ ಪಂಕ್ತಿಜನಾತಿಗೆ ಕಲಹವೂ ದೇಹಪೀಡೆಯೂ ಅಧಿಕವಾಗಿ ಮನೋವ್ಯಾಧಿಯಲ್ಲಿ ಕೊನೆಗಾಣುವುದು. ಮಾರ್ಗಾತಿಕ್ರಮಣದಲ್ಲೂ ಇತರ ಕಾರ್ಯನಿರ್ವಾಹಕ ವಿಷಯದಲ್ಲೂ ನಿಮಗೆ ಹಾನಿಯಿದೆ. ಶರೀರವು ಧಾತುಕ್ಷಯದಿಂದಾಗಿ ಕ್ಷೀಣಹೊಂದಿ ವಿಲಂಬಿತವಾದ ಗತಿಯುಳ್ಳದಾಗುವುದು. ತಾ. 3-4 ಮತ್ತು 9 ಈ ದಿನಗಳಲ್ಲಿ ಕಾರ್ಯವಿಘ್ನ, ಮಾರ್ಗಯಾತ್ರಾ ಅನಿಷ್ಟಾದಿ ಶೋಕಗಳು ಸಂಭವಿಸಲಿವೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ „ „ 0—1—3
೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ „ 0—4—0.

ಶ್ರೀಕರ ಕಸ್ತೂರಿ ಮಾತ್ರೆ.

ಅಪೋಷೆ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕ ಶೂಲಗಳಿಗೂ ಅಮೃತ. ಬೆಲೆ 0-4-0 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0—4—0

ನಂಜನಗೂಡು ಸದ್ವೈದ್ಯ ಶಾಲಾ,

ಬ್ರ್ಯಾಂಚ್ ರಥಬೀದಿ, ಮಂಗಳೂರು.

Degrees: Books: Medicines.

Free H. L. M. S; H. M. B. H. M. D. etc. Free Homeo-Ayur-Unani-Naturo degrees by post also—Practitioners also get soon. Homeo Materiamedica, Rs. 5, Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)

P. O. MAHUVA, (Kathiawar Dt. India)

ಪುನರ್ವಿವಾಹ ಪ್ರಚಾರ

ನಾವು ಕಳೆದ ೧೦–೧೩ ವರ್ಷಗಳಿಂದ, ಸ್ತ್ರೀಪುನರ್ವಿವಾಹವು ಸನಾತನ ಧರ್ಮಶಾಸ್ತ್ರಕ್ಕೆ ಮತ್ತು ರಾಜಶಾಸನಕ್ಕೆ ಅವಿರೋಧವೂ, ಸದ್ಯದಃ ಕಾಲಕ್ಕೆ ಅವಶ್ಯಕವೂ ಎಂದು ನಿಶ್ಚೈಸಿ ಅದರ ಪ್ರಚಾರಕಾರ್ಯವನ್ನು ಕೈಕೊಂಡು ಈ ವರೆಗೆ ಅನೇಕ ವಿದ್ವಜ್ಜನಗಳ, ಮಹನೀಯರ ಹಾಗೂ ಮಹಿಳೆಯರ ಸಹಾಯ, ಸಹಾನುಭೂತಿ ಆಶೀರ್ವಾದಗಳಿಂದ ಹಲವು ಪುನರ್ವಿವಾಹಗಳನ್ನು ಜರಗಿಸಿದ್ದೇವೆ. ಮುಂದೆಯೂ ಜರಗಿಸಲು ಪ್ರಚಾರನಡಿಸುತ್ತಿದ್ದೇವೆ. ಕಾರಣ ಪುನರ್ವಿವಾಹವಾಗಲಿಚ್ಛಿಸುವ ಸ್ತ್ರೀಯರಾಗಲೀ ಪುರುಷರಾಗಲೀ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ತಿಳಿಸಬೇಕು. ಅವಶ್ಯವಿದ್ದಲ್ಲಿ ಪತ್ರವ್ಯವಹಾರವನ್ನು ಗುಪ್ತವಾಗಿರಿಸಲಾಗುವುದು. ೧. ಗಣಪತಿನಾರಾಯಣ ಭಟ್ಟ, ಅಕದಾಸ್, ಶಿರ್ಸಿ. ೨. ಮಾರ್ಕಾಳೀ ಬಾಯಿ, ಗಣಪತಿಭಟ್ಟ, ಅಕದಾಸ್ ಶಿರ್ಸಿ,
ಮೊಕ್ಕಾಂ: ಶಿರ್ಸಿ, ತಾಲ್ಲೂ ಶಿರ್ಸಿ,
ಜಿಲ್ಲಾ ಉತ್ತರ ಕನ್ನಡಾ.

ಬಂಟ ವಿದ್ಯಾರ್ಥಿಭವನ ಸಮಿತಿ, ಉಡ್ಪಿ

(ಕಳೆದ ಬಾರಿ ಸ್ಥಳಾಭಾವದಿಂದ ಪ್ರಕಟಿಸಲಾಗದುದನ್ನು ಈ ಬಾರಿ ಕೊಡಲಾಗಿದೆ ಸಂ.ನ.)

ಸಂಘಶಕ್ತಿಯೇ ಶಕ್ತಿಯಾಗಿರುವ ಕಾಲವಿದು. "ಬಂಟರ ಯಾನ ನಾಡವರ ಸಂಘ" ಎಂಬ ಅಂತಹ ಕೂಡಿಶಕ್ತಿಯು ಸ್ವಜಾತಿಯ ಮಕ್ಕಳ ಏಳಿಗೆಗಾಗಿ, ತನ್ಮೂಲಕ ಸಮಾಜದ ಉತ್ಕರ್ಷಗಾಗಿ (S. R. S. Home) ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನಗಳನ್ನು ಅಲ್ಲಲ್ಲಿ ಸ್ಥಾಪಿಸಿ ನಡೆಯಿಸಿಕೊಂಡು ಬರುತ್ತಿರುವುದು ತಿಳಿದ ವಿಷಯವೇ. ಅದರಿಂದ ಪ್ರಯೋಜನಹೊಂದಿ ಹೊರಬಿದ್ದವರು ಇಂದ ನಾಡಲ್ಲೆಲ್ಲ ಚದರಿದ್ದಾರೆ. ಅಂತಹ ಪೂರ್ವ ನಿವಾಸಿ (Old Boarders) ಗಳ ಅನ್ಯೋನ್ಯ ಸಮ್ಮಿಲನಕ್ಕೆ ಅವಕಾಶವಾಗುವಂತೆಯೂ ತಮ್ಮ ವಿದ್ಯಾರ್ಥಿದೆಸೆಯಲ್ಲಿ ಭವನವಾಸರೂಪವಾಗಿ ಪಡೆದ ಸಮಾಜದ ಋಣವನ್ನು ತೀರಿಸುವ ದೃಷ್ಟಿಯಿಂದ ಉಡುಪಿಯ ಉಪವಿದ್ಯಾರ್ಥಿ ಭವನದ ಆಡಳಿತೆಯನ್ನು ಕೈಗೊಂಡು ನಿರ್ವಹಿಸುವಂತೆಯೂ, ತದಿತರ ಸಮಾಜಹಿತ ಕಾರ್ಯಗಳಲ್ಲಿ ಒದಗುವಂತೆ ಕೈಯಿಕ್ಕುವಂತೆಯೂ ಒಂದು ಸುಸಂಘಟಿತ ವ್ಯವಸ್ಥೆಯನ್ನು ಮಾಡಿಕೊಳ್ಳುವ ಧ್ಯೇಯದಿಂದ ಆ ಮೂಲಭವನದ ಹಾಗೂ ಉಡುಪಿಯ ಉಪಭವನದ ಪೂರ್ವ ನಿವಾಸಿಗಳಲ್ಲಿ ಉಡುಪಿ ತಾಲೂಕಿಗೆ ಸೇರಿದ ಯಾ ಅದರಲ್ಲಿರುವವರ ಭವನದ ಪೂರ್ವ ನಿವಾಸಿಗಳ "ಸಂಘ" (Old Boarders' Association) ಎಂಬ ದನ್ನು ತಾ. 12-2-39ರಲ್ಲಿ ಸ್ಥಾಪಿಸಬೇಕೆಂದು ಅಭಿಪ್ರಾಯವಿದೆ. ಅಂದೇ ಉಡುಪಿಯ ಉಪಭವನದ ವಾರ್ಷಿಕೋತ್ಸವವನ್ನೂ ಜರಗಿಸುವದಾಗಿ ನಿರ್ಣಯಿಸಿದೆ.

ಆದುದರಿಂದ ಉಡುಪಿಯ ಉಪಭವನದಲ್ಲಿ (S. R. S. Home) ಅಂದು ನಡೆಯಲಿರುವ ಈ ಸಮಾರಂಭಕ್ಕೆ ಯಾವತ್ತು ಪೂರ್ವ ನಿವಾಸಿಗಳು ಬಹುಸಂಖ್ಯಾಕರಾಗಿ ಬಂದು ಸಂಕಲ್ಪಿತ ಸಂಘವು ಸ್ಥಾಪಿತವಾಗುವಂತೆಯೂ ಯಶಸ್ವಿಯಾಗಿ ಬಾಳಿ ಬೆಳಗುವಂತೆಯೂ ಸಹಕರಿಸಿ ನೆರವೇರಿಸಿಕೊಡಬೇಕೆಂದು ಸಮಿತಿಯವರು ವಿನಂತಿಸುತ್ತಾರೆ.

ಶಿರ್ವದ ವಾರ್ತೆ—ಶಿರ್ವದ ಕೆಲವು ಮಹನೀಯರು ಇತರ ಶಾಲೆಗಳ ಮೇಲೆ ಅಪವಾದಗಳನ್ನು ಹೊರಿಸಿ ಮಕ್ಕಳನ್ನು ಒತ್ತಾಯ ಪೂರ್ವಕವಾಗಿ ಬೋರ್ಡು ಹುಡುಗಿಯರ ಶಾಲೆಗೆ ಸೇರಿಸುತ್ತಿದ್ದಾರೆ ಎಂಬಿತ್ಯಾದಿಯಾಗಿ ಬಂದ ದೀರ್ಘ ವಾರ್ತೆಯೊಂದನ್ನು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ.

ಶಿರ್ವ ಪಂಚಾಯತ ಕೋರ್ಟಿನ ಚುನಾವಣೆ ಹೀಗಾಗಬೇಕು–ಎಂಬ ಶಿರೋನಾಮದಿಂದ ಶ್ರೀ. ಎನ್, ಎಸ್. ಎಚ್ ಎಂಬವರಿಂದ ಒಂದು ದೀರ್ಘ ವಾರ್ತೆ ನಮ್ಮೆಡೆಗೆ ಬಂದಿದೆ. ಕೆಲಸಕ್ಕಾಗಿಯೇ ಕೆಲಸವಾದಬೇಕೆನ್ನುವ ಮೆಂಬರನ್ನೇ ಆರಿಸಬೇಕೆಂಬುದೇ ಈ ವಾರ್ತೆಯ ಸಾರಾಂಶ.

(ಸಂ. ನ.)

ಸ್ವೀಕಾರ–ವಿಮರ್ಶೆ

ವೀರಶೈವ ವಾದ ವಿಮರ್ಶೆ—ಕ್ರಯ ೦–೨–೦. ಬರೆದವರು 'ಶ್ರೀ ರುದ್ರ' ಬೆಂಗಳೂರು.

ವೀರಶೈವ ಧರ್ಮವು ಮಾನವನನ್ನು ಮುನ್ನಡೆಸುವ ಶಕ್ತಿ, ಸಾಹಸ, ಸತ್ಯ ಸಾಧನದಿಂದ ಜೀವನ ಪಥದಲ್ಲಿ ಚಿರ್ಘಾಕವಾಗಿ ಬಾಳಿ, ಬೆಳಗಿಸುವ ಹಲವು ಉನ್ನತಿಕೆಯ ವಿಚಾರವನ್ನೊಳಗೊಂಡಿರುವುದು ನಿಜ; ಆದರೆ, ಅದರೊಂದಿಗೆ ಪೋಣಿಸಿರುವ ಹಲವು ಅಪ್ರಸ್ತುತ ವಿಚಾರಗಳು, ಅಂಧಶ್ರದ್ಧೆಯ ವಿಷಯಗಳು, ಖಂಡನಾರ್ಹವಾಗಿವೆ. ಶ್ರೀ. ರುದ್ರರು ತಮ್ಮದೇ ಆದ ಆದೊಂದು ಹೊಸರೀತಿಯಿಂದ, ಸಂಭಾಷಣೆಯ ರೂಪದಲ್ಲಿ, ವೀರಶೈವ ಧರ್ಮದ ಉತ್ತಮ ವಿಷಯಗಳನ್ನು ಬೇರ್ಪಡಿಸಿ, ಅಜ್ಞಾನ ಅಂಧಶ್ರದ್ಧೆಯ ವಿಚಾರಗಳನ್ನು ವಾಚಕರು ಸುಲಭವಾಗಿ ಗ್ರಹಿಸುವಂತೆ, ಸಕಾರಣದಿಂದ ಖಂಡಿಸಿರುವರು. ಇಂಥಾ ಸ್ವತಂತ್ರ ವಿಚಾರದ, ವಿಚಾರ ವಿವೇಕಗಳನ್ನುಳ್ಳ ಉದಾತ್ತಭಾವನೆಯ ವಿಮರ್ಶಕರು ನಮ್ಮ ನಾಡಿನಲ್ಲಿ, ನಮ್ಮ ದೇಶದಲ್ಲಿ ಹುಟ್ಟಿಗಲೆಂದು ಬಯಸುವೆವು. ಇಂಥಾ ಪುಸ್ತಕಗಳನ್ನು ಧರ್ಮವಿಚಾರಗಳನ್ನರಿಯಲು ಬಯಸುವವರು ಓದುವುದು ಲೇಸು. ವೀರಶೈವ ಧರ್ಮವನ್ನನುಸರಿಸುವರೆಂತೂ ಅಗತ್ಯ ಓದಲೇ ಬೇಕು.

ಆರ್ಯಸಮಾಜವೆಂದರೇನು ? —

ಉಡುಪಿಯಲ್ಲಿ ಇತ್ತೀಚೆ ಶ್ರೀಯುತ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ ಮೊದಲಾದ ಮಹನೀಯರ ಮೇಲ್ವಿಚಾರಣೆಯಿಂದ ಆರ್ಯಸಮಾಜದ ಸಮಿತಿಯೊಂದು ಸ್ಥಾಪಿತವಾದುದು ಧರ್ಮಕ್ಷೇತ್ರವಾದ, ಉಡುಪಿಗೆ ಇನ್ನಷ್ಟು ಕಳೆಯೇರಿದಂತಾಯಿತು. ಈ ಸಮಿತಿಯ ಆಶ್ರಯದಲ್ಲಿ ಆರ್ಯಸಿದ್ಧಾಂತ ಪ್ರಕಟಣಾ ಪತ್ರವನ್ನು ಜನತೆಯ ತಿಳುವಳಿಕೆಗಾಗಿ ಬರೆಯುವ ವ್ಯವಸ್ಥೆಯಾಗಿರುವುದಾಗಿ ಕೇಳುವಿಕೆ ಸಂತೋಷಪಡುವೆವು. ಇದೀಗ ಈ ಸಮಿತಿಯ ಪ್ರಕಾಶನ ಕೈಪಿಡಿ. ಬರೆದವರು ಶ್ರೀಯುತ ಕಡೆಕಾರು ಶ್ರೀನಿವಾಸರಾಯರು. ಇವರು ಸಮಾಜಸೇವೆಯಲ್ಲಿ ತುಂಬಾ ಆಸಕ್ತಿಯುಳ್ಳವರು. ತತ್ವ ಮನೋವೃತ್ತಿಯವರು. ಶಾಸ್ತ್ರ ವಿಚಾರ ಬಲ್ಲವರು. ಈ ಸಣ್ಣಪುಟ್ಟ ಗ್ರಂಥದಲ್ಲಿ ಆರ್ಯಸಮಾಜವೆಂದರೇನು? ಅದು ಋಷಿ ಮುನಿಗಳ ವಿಚಾರವನ್ನು ಹೇಗೆ ಪೂರೈಸುತದೆ? ದೇಶೋದ್ಧಾರಕ್ಕೆ ಆರ್ಯಸಮಾಜವು ಹೇಗೆ ನೆರವಾಗುವುದು? ಎಂಬೀ ಮೊದಲಾದ ವಿಷಯಗಳನ್ನು ಸರಳಭಾಷೆಯಲ್ಲಿ ವರ್ಣಿಸಿರುವರು. ಆರ್ಯಸಮಾಜದ ಪವಿತ್ರ ಕಾರ್ಯಕ್ಷೇತ್ರವು ಈ ಪುಣ್ಯಕ್ಷೇತ್ರದಲ್ಲಿ ವಿಸ್ತರಿಸುವಂತೆ ಜನತೆಯು ನೆರವಾಗುವುದು ಅಗತ್ಯ. ಇಂಥಾ ಹಲವು ಕುಸುಮಗಳನ್ನು ಲಂಗ್ರಹಿಸುವಂತೆ, ಈ ಸಮಿತಿಗೆ ತಕ್ಕ ಬೆಂಬಲವು ದೊರೆಯಲೆಂದು ಕೋರುವೆವು.

ಭಟ್ಕಳ ನೆರಿಹಾವಳಿ ಸಮಿತಿ—ಉತ್ತರ ಕನ್ನಡಾ ಜಿಲ್ಲೆಯ ಭಟ್ಕಳ ಪೇಟೆಯಲ್ಲಿನ ನೆರೆಹಾವಳಿ ಮತ್ತು ಭಟ್ಕಳ ನೆರೆಯ ವಳ ಸಂಕಷ್ಟ ನಿವಾರಣಾ ಸಮಿತಿಯವರ ತಾತ್ಕಾಲಿಕ ವರದಿ ನಮಗೆ ದೊರೆತಿದೆ. ನೆರೆಹಾವಳಿ ಸಂಕಷ್ಟಕ್ಕೆ ಬಲಿಬಿದ್ದ ಜನತೆಯ ಉದ್ಧಾರಕ್ಕಾಗಿ ಅವಿಶ್ರಾಂತ ಶ್ರಮದಿಂದ ದುಡಿದ ಸಮಿತಿಯನ್ನು ನಾವು ಅಭಿನಂದಿಸುವೆವು, ಹಲವು ರೀತಿಯಲ್ಲಿ ಈ ಸಮಿತಿಗೆ ನೆರವಾದ ಉದಾರ ಹೃದಯರಾದ ಪರೋಪಕಾರಿಯಾದ ಸದ್ಗೃಹಸ್ಥರ ಕಾರ್ಯೋದ್ದೇಶಗಳು ಶ್ಲಾಘನೀಯವು.

ಮುಂಬಯಿ

ಮುಂಬಯಿಯ ಕೋಟಿಬಜಾರ್ ಗೇಟಿನಲ್ಲಿರುವ "ಲಕ್ಷ್ಮಿ" ಮೊಷಲಿಸ್ಟ್ ಜಂಟ್ಸ್ ಟೈಲರ್ಸ್ ಎಂಡ್ ಔಟ್ ಫಿಟ್ಟರ್ಸ್ ಎಂಬ ಪ್ರಸಿದ್ಧ ಹೊಲಿಗೆಯ ಅಂಗಡಿಯಲ್ಲಿ ತಾ. 1-1-39ರಲ್ಲಿ "ಡಾಕ್ಟರ್ ವಿ. ಡಿ. ಯುಸ್, ಬೆಂಜನರ ಅಧ್ಯಕ್ಷತೆಯಲ್ಲಿ "ಸಿಟಿ ಟೈಲರಿಂಗ್ ಕ್ಲಾಸ್ ಬೊಂಬೈ" ಎಂಬ ಹೆಸರಿನಿಂದ ಹೊಲಿಗೆ ಮತ್ತು ಕತ್ತರಿಸುವುದರ ಅಭ್ಯಾಸದ ವರ್ಗಸ್ಥಾಪನಾ ಕಾರ್ಯವು ನೆರವೇರಿತು. ಈ ಸಂದರ್ಭದಲ್ಲಿ ಉಪಹಾರವೂ ಇತ್ತು.

ದಿ ಕಾಮನ್ ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನ.

ಷೇರುದಾರರಿಗೂ ಮತ್ತು ಪಾಲಿಸಿದಾರರಿಗೂ ಆಸಕ್ತಿ ಹುಟ್ಟಿಸುವ ಅಂಶಗಳು

ಬೋನಸ್ ಪ್ರಕಟಣೆ

ಹೋಲ್ ಲೈಫ್ ಪಾಲಿಸಿ ಮೇಲೆ	ಮೂರನೇ ವ್ಯಾಲ್ಯುಯೇಷನ್‌ನಲ್ಲಿ	ಎಂಡೋಮೆಂಟ್ ಪಾಲಿಸಿ ಮೇಲೆ
ಪ್ರತಿ ರೂ. 1,000/-ಕ್ಕೆ	ತ್ರೈವಾರ್ಷಿಕ ಬೋನಸ್	ಪ್ರತಿ ರೂ. 1,000/-ಕ್ಕೆ
ರೂ. 54		ರೂ. 45

ಶ್ರೀ. ಜಿ. ಎಸ್. ಮರಾಠೆಯವರು ತಮ್ಮ ವರದಿಯಲ್ಲಿ ಈ ರೀತಿ ನುಡಿದಿರುವರು:—

"ಕಳೆದ ವ್ಯಾಲ್ಯುಯೇಷನ್ನಿನಿಂದೀಚೆಗೆ ಕಂಪೆನಿಯು ಸಕಲರೀತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವುದನ್ನು ಈಗಿನ ವ್ಯಾಲ್ಯುಯೇಷನ್ ಫಲಿತಾಂಶವು ವ್ಯಕ್ತಪಡಿಸುತ್ತದೆ. ಪ್ರಗತಿಯನ್ನು ತೋರಿಸುವುದರಿಂದ ಮಾತ್ರವೇ ಈಗಿನ ವ್ಯಾಲ್ಯುಯೇಷನ್ ತೃಪ್ತಿಕರವಾದುದೆಂದು ಭಾವಿಸಬಾರದು. ಭರತಖಂಡದ ಅತ್ಯಂತ ಪ್ರಮುಖ ವಿಮಾ ಕಂಪೆನಿಗಳ ಬೋನಸ್ ಫಲಿತಾಂಶಗಳು ಕೂಡ ಇಳಿಮುಖವಾಗಿದ್ದಂತಹ ಕಷ್ಟಕಾಲದಲ್ಲಿ ಈ ಕಂಪೆನಿಯು ಇಷ್ಟು ಪ್ರಗತಿಯನ್ನು ತೋರಿಸುವುದರಿಂದ ಈಗಿನ ವ್ಯಾಲ್ಯುಯೇಷನ್‌ಗೆ ಹೆಚ್ಚಿನ ಬೆಲೆ ಕೊಡಬೇಕಾಗಿದೆ"

ದಿ ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಏಜನ್ಸಿಗಾಗಿಯೂ ಮತ್ತು ಇತರ ವಿವರಗಳಿಗೂ ಇವರಿಗೆ ಬರೆಯಿರಿ.

ಮೆಸರ್ಸ್ ಗವಾಂಕರ್ ಅಂಡ್ ಸನ್ಸ್,	ಅಥವಾ	ಆರ್. ಎನ್. ಅಭಯಂಕರ್, ಬಿ.ಎ., ಎಲ್.ಎಲ್.ಬಿ.
ಚೀಫ್ ಏಜಂಟ್ಸ್,		ಮೆನೇಜಿಂಗ್ ಏಜಂಟ್,
ಆನಂದರಾವ್ ಸರ್ಕಲ್, ಬೆಂಗಳೂರು.		ಪೂ ನಾ.

The Commomwealth Assurance Company, Ltd., Poona.

ಗಂಡನು ಹೆಂಡತಿಯಾದರೆ!

Two Standards of Judgment.

(ಲೇಖಕರು: ಶ್ರೀ. ಬಿ. ಅಂತಯ್ಯ ಶೆಟ್ಟಿ, ಬಿ.ಎ., ಎಲ್.ಟಿ., ಉಡುಪಿ.)

Many men adopt two standards of judgment, one, for themselves another, for others. Hence the trouble in this troubled world. Until these two standards become one, humanity cannot be happy. Hence the great saying, 'Do unto others as ye would be done by.' How many husbands follow this maxim? Hardly any. We talk of exploitation of one race by another race and of one nation by another nation. This is nothing, when compared with the exploitation that is going on from hour to hour in every home which ought to be the primary unit of every nation. The husband exploits the wife—the wife, poor submissive thing, is exploited—for no great cause except that of gratifying the animal appetites of the husband. She is shorn of her jewels for propitiating the damnable three D's drinking, debauchery and dicing. Very often the needy husband who is a prey to several vices commands her to fetch money from her rich parents. If the venture fails, she, poor thing, is deserted. Many husbands make their wives the pawns in the game of frightening their fathers-in-law. All privileges for the husbands; all sufferings for the wives. Many of these things do not come to light, but still a big section of humanity suffers. If only man sees himself in his wife, how many homes would be happy! 'Civilized man if let loose and the bonds of morality relaxed, is a far greater beast than the savage more refined in his cruelty, more fiend like in every act.' 'Humanity is yet raw.' **'Oh! when shall the History of Man kind become the record of human dignity?**

[ರಾಮಯ್ಯನು ತನ್ನ ಅಳಿಯ ನಾಗಯ್ಯನ ಗೆಳೆಯ ನಾದ ಜೋಗಯ್ಯನನ್ನು ಸಂಧಿಸಿದಾಗ]

ರಾಮಯ್ಯ—ಸ್ವಾಮಿ, ನಮಸ್ಕಾರ—ತಮ್ಮನ್ನು ಕಾಣಬೇಕೆಂದು ಎಷ್ಟೋ ಸಮಯದಿಂದ ಆಲೋಚಿಸುತ್ತಿದ್ದೆ. ತಮ್ಮಿಂದೊಂದು ಮಹದುಪಕಾರವಾಗಬೇಕಾಗಿದೆ ಬಿಡುವಿದ್ದರೆ ಈಗಲೇ ಹೇಳುತ್ತೇನೆ.

ಜೋಗಯ್ಯ—ಬಿಡುವೇನು, ತಡವೇನು! ನಮ್ಮ ನಾಗಯ್ಯನ ಮಾವನಲ್ವಾ ತಾವು? ತಮ್ಮ ಹತ್ತಿರ ಮಾತಾಡೋದಕ್ಕೆ ಬಿಡುವಿಲ್ಲಾಂದ್ರೆ ಆಗ್ತಾ? ಹೇಳ್ಬಿಡಿ!

ರಾಮಯ್ಯ—ನೋಡಿ, ನಾಗಯ್ಯನು ನಿಮಗೆ ಗೆಳೆಯ, ನನಗೆ ಅಳಿಯ. ಅಳಿಯನಿಗೆ ಹೇಳೋದು ಕಷ್ಟ. ಒಂದು ಹೇಳಿದರೆ ಕಡಿಮೆಯಾಗ್ತೆ. ಎರಡಂದರೆ ಹೆಚ್ಚಾಗಿ ಬಿಡ್ತೆ. ಆದರೆ ತಾವು ಅವನ ಗೆಳೆಯ. ಗೆಳೆಯ ಗೆಳೆಯನಿಗೆ ಹೇಗೂ ಹೇಳಲಿಕ್ಕೆ ಬರುತ್ತೆ. ಆದ ಕಾರಣ ತಾವು ನನಗಾಗಿ ಗೆಳೆಯನಿಗೆ ಎರಡು ಮಾತು ಹೇಳಬೇಕು. ನೀವು ಮಾತುಬಲ್ಲವರು, ಅರಿತು ನುರಿತವರು. ತಮ್ಮ ಮೇಲೆ ನನ್ನ ಅಳಿಯನಿಗೆ ಬಹಳ ವಿಶ್ವಾಸ. ತಮ್ಮ ಮಾತು ನಡೆದೀತೂಂತ ನಾನು ಅರಿಕೆಮಾಡಿಕೊಳ್ಳೋದು.

ಜೋಗಯ್ಯ—ನಡೆದೀತೂಂತಲೇ ಇಟ್ಟುಕೊಳ್ಳೋಣ. ಈಗ ಆಗಿರೋದು ಏನು? ಅದನ್ನ ಹೇಳಿ.

ರಾಮಯ್ಯ—ನೋಡಿ ಸ್ವಾಮಿ, ನನ್ನ ಸಂಗ್ತಿ ನಿಮಗೊತ್ತಿಲ್ಲಾಂತು—ನನಗೆ ಇನ್ನೂ ನಾಲ್ಕು ಹೆಣ್ಮಕ್ಕಳಿವೆ. ಆದರೂ ಈ ನಾಗಯ್ಯನಿಗೆ ನನ್ನ ಮಗಳನ್ನು ಕೊಡುವಾಗ ಎಂಟು ಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟಿದ್ದೆ—ಮತ್ತು ಆಭರಣಾಂತ ಹೇಳಿ ಮಗಳ ಮೈಮೇಲೆ ಸುಮಾರು ಮೂರು ಸಾವಿರ ರೂಪಾಯಿ ಹಾಕಿದ್ದೆ. ಇವೆಲ್ಲಾ ಇವನ ದುಂದುಗಾರಿಕೆ ದುರ್ವ್ಯಸನಗಳಿಂದಾಗಿ ಮಾರಿ ಸೇರಿಹೋಯ್ತು! ಇಷ್ಟು ಮಾತ್ರವಾ? ಅವಳು ಹಲವು ಸಲ ನಮ್ಮಲ್ಲಿ ಬಂದು ಅತ್ತು ತಕ್ಕೊಂಡು ಹೋದ್ದು ಸುಮಾರು ಎರಡು ಎರಡೂವರೆ ಸಾವಿರ ರೂಪಾಯಿ ಆದೀತು—ಮೊನ್ನೆ ತಿರುಗಿ ಬಂದಳು—ಗಂಡನಿಗೆ ಒಂದೂವರೆ ಸಾವಿರ ರೂಪಾಯಿ ಗರ್ಜವುಂಟಂತೆ, ಕೊಡದಿದ್ದರೆ ಜೈಲಿಗೆ ಹೋಗುತ್ತಾನಂತೆ ಈ ನೆವನ ಹಿಡಕೊಂಡು ಬಂದಿದ್ದಳು. ಬಂದವಳಿಗೆ ಈ ಸಾರಿ ಸ್ವಲ್ಪ ಜೋರುಮಾಡಿದೆ—ಹಿಂತಿರುಗಿ ಗಂಡನ ಮನೆಗೆ ಹೋದಳು—ಅಲ್ಲಿ ತಿರುಗಿ ಅಪ್ಪಣೆ—'ನೀನು ರೂಪಾಯಿ ತರದಿದ್ದರೆ ನನ್ನ ಮನೆಯ ಮೆಟ್ಲು ಹತ್ತಕೂಡದು' ಅಂತ! ಪುನಃ ಬಂದವಳಿಗೆ ನಾನು ಸ್ವಲ್ಪ ಇನ್ನೂ ಜೋರುಮಾಡಿದೆ ಯೆಂತ ಮೊನ್ನೆ ಮುಂಚಾನೆ ಎದ್ದವಳು ಬಾವಿಗೆ ಹಾರಿಬಿಟ್ಟಳು. ಏನೋ ನನ್ನ ಯಜಮಾಂತಿಗೆ ಎಚ್ಚರವಿತ್ತು ಬೊಬ್ಬೆ ಹೊಡೆದ್ಳು ಅನ್ನಿ—ಒಂದು ಹತ್ತು ಇಪ್ಪತ್ತು ಜನಕೂಡಿ ಅವಳನ್ನು ಬಚಾವು ಮಾಡಿದರು— ಈಗ ಮನೆಯಲ್ಲಿಯೇ ಇದ್ದಾಳೆ. ಗಂಡನ ಮನೆಗೆ ಹೋಗಲಿಕ್ಕೆ ಹೆದರಿಕೆ—ಸತ್ತೆನಲ್ಲಾ ಸ್ವಾಮಿ—ನಾನು! ಹೀಗೆಯೇ ಆದರೆ ಇನ್ನ ಲೋಕದಲ್ಲಿ ಸಂಟಸ್ಥಿಕೆ ಮಾಡಲಿಕ್ಕೆ ಸಾಧ್ಯವುಂಟು! ನಾನು ನಿಮಗೆ ಇದರಲ್ಲಿ ಹೆಚ್ಚಿಗೆ ಹೇಳುವ ಸಂಗ್ತಿ ಇಲ್ಲ—ತಾವೂ ಒಂದು ಕುಟುಂಬ ಇದ್ದವರು—ಸುಖಕಷ್ಟ ಗೊತ್ತಿದ್ದವರು—ಮಾತುಗಾರರು ಆಡುವುದರಲ್ಲಿ ನಿಪುಣರು—ಈ ಮೂರ್ಖನಿಗೆ ಸ್ವಲ್ಪ ಬುದ್ಧಿ ಹೇಳಿ ಆ ಹುಡುಗಿಯನ್ನು ಅವನು ನಡೆಯಿಸಿಕೊಂಡು ಹೋಗುವಂತೆ ಮಾಡ್ಬೇಕು. ತಮ್ಮ ಈ ಉಪಕಾರವನ್ನು ನಾವು ಎಂದೆಂದಿಗೂ ಮರೆಯೋಕಿಲ್ಲ.

ಜೋಗಯ್ಯ—ಆಯಿತು, ತಮ್ಮ ಬಗ್ಗೆ ಆದಷ್ಟು ಪ್ರಯತ್ನ ಮಾಡುತ್ತೇನೆ—ಆದರೆ ಇದು ಅವನ ಸಂಸಾರದ ವಿಷಯ. ಸಮಯ ನೋಡಿ ಈ ವಿಚಾರವನ್ನು ಅವನ ಮುಂದಿಡುತ್ತೇನೆ, ಏನಾದರೂ ಸಫಲವಾದರೆ ತಮ್ಮ ಮಗಳ ಪುಣ್ಯ.

)( )( )(

(ಸ್ವಲ್ಪ ದಿನಗಳ ನಂತರ ಜೋಗಯ್ಯನು ನಾಗಯ್ಯನಲ್ಲಿ ಬಂದು ಊಟೋಪಚಾರಗಳನ್ನು ಹೊಂದಿ ಮಾತಾಡುತ್ತಾ ಕುಳಿತಿದ್ದಾಗ)

ಜೋಗಯ್ಯ—ನಾಗಯ್ಯ, ನಾನು ಒಂದು ವಿಷಯ ಪ್ರಸ್ತಾಪಿಸಬೇಕೆಂದಿರುವೆನು. ಬೇಸರ ಮಾಡಿಕೊಳ್ಳುವುದಿಲ್ಲವಾದರೆ ಹೇಳುತ್ತೇನೆ.

ನಾಗಯ್ಯ—ನೀನು ಏನು ಹೇಳಿದರೂ ನನಗೆ ಬೇಸರವಿಲ್ಲ. ಹಾಗಿಲ್ಲ ಮಾತು ಮಾತಿಗೆ ಬೇಸರ ಮಾಡಿಕೊಂಡರೆ ಗೆಳೆತನ ಎಂದಾಗುತ್ತೆಯೆ? ಪೀಠಿಕೆ ಬೇಡ, ಪ್ರಸಂಗವೇ ತೊಡಗಲಿ!

ಜೋಗಯ್ಯ—ನೋಡು ನಿನ್ನ ಮಾವ ನನಗೆ ಮೊನ್ನೆ ಸಿಕ್ಕಿದರು—ಅವರು ಬಹಳ ವ್ಯಸನದಲ್ಲಿದ್ದಾರೆ—ನೀನು ನಿನ್ನ ಹೆಂಡ್ತಿಗೆ ಬಹಳವಾಗಿ ಪೀಡಿಸುತ್ತೀಯಂತೆ, ಅದು ಹೌದೇ?

ನಾಗಯ್ಯ—ಮತ್ತೇನು, ಹೌದಪ್ಪ, ಅದರಿಂದೇನು? ಗಂಡ ಹೆಂಡ್ತಿಯನ್ನು ಪೀಡಿಸುವುದರಲ್ಲಿ ವಿಶೇಷವೇನು! ಅವನಿಗೆ ಹಕ್ಕಿಲ್ವಾ? ಮತ್ಯಾರು ಪೀಡಿಸಬೇಕೂಂತಿ ನೀನು?

ಜೋಗಯ್ಯ—ನನ್ನ ಮಾತು ಕೇಳು ವಾಗ ನೀನು ನನ್ನ ಮೇಲೆ ರೇಗಿ ಬೀಳುವ ಹಾಗೆ ಕಾಣುತ್ತೆ!

ನಾಗಯ್ಯ—ಅದೇನೂ ಇಲ್ಲ. ಆದರೆ ಆ ಮಾವನ ಸಂಗ್ತಿಯನ್ನು ಬಿಡು—ಅಂಥ ಕಠಿಣ ಪಾಷಾಣ ಹೃದಯದಂಥ—ಅವನ ಹತ್ತಿರ ಅಷ್ಟು ದುಡ್ಡು ಉಂಟು ಆದರೂ ನನ್ನ ಸಂಕಷ್ಟಕ್ಕೆ ಕಾಸು ಬಿಚ್ಚಲಿಕ್ಕೆ ಮನಸ್ಸಿಲ್ಲ. ಅಂಥಾ ಆ ಮಾವ ಯಾಕೆ? ಅಂವನ ಮಗಳು ಯಾಕೆ?

ಜೋಗಯ್ಯ—ನಿನಗೆ ಕಷ್ಟ ಹೇಗೆ ಬಂತು? ಅವರಿಗೆ ಕಷ್ಟವಿಲ್ಲವೆಂತ ನಿನಗೆ ಹ್ಯಾಗೆ ಗೊತ್ತು? ಒಂದು ವೇಳೆ ನಿನ್ನ ಮಾವ ನಿನ್ನ ಕಷ್ಟಕ್ಕೆ ಒದಗದಿದ್ದರೆ ಅದಕ್ಕಾಗಿ ಆ ಪಾಪದ ಹೆಣ್ಣು, ನಿನ್ನ ಹೆಂಡ್ತಿ, ಜೀವ ತೆಕ್ಕೊಳ್ಳಬೇಕಾ?

ನಾಗಯ್ಯ—ಹೆಂಡ್ತಿ ಜೀವ ತಕ್ಕೊಳ್ಳಲೇ ಬೇಕು. ಹೆಂಡ್ತಿ ಮಾಡಿಕೊಳ್ಳುವುದು ಯಾಕೆ ಮತ್ತೆ? ತಂದೆ ಮನೆಗೆ ಹೋಗಿ ಕಾಡಿಬೇಡಿ ದುಡ್ಡು ತಂದು ಗಂಡನ ಗರ್ಜ ತೀರಿಸದ ಹೆಂಡ್ತಿ ಇದ್ದೇನು ಆಗ್ಬೇಕು!

ಜೋಗಯ್ಯ—ಅವರು ಕೊಡದಿದ್ದರೆ?

ನಾಗಯ್ಯ—ಕೊಡದಿದ್ದರೆ ಬಾವಿಗೆ ಹಾರಲಿ! —

ಜೋಗಯ್ಯ—ಹ್ಹಾ, ಹ್ಹಾ, ಹ್ಹಾ!—ಏನು ವಿಚಾರಪರವಾದ ಮಾತು! ಲೋಕಕ್ಕೆ ಎಂಥಾ ಆದರ್ಶ ಹಾಕಿ ಕೊಟ್ಟುಬಿಟ್ಟೆ! ಕಲಿಯುಗದ ಮನುವೇ ನೀನು! ನಿನ್ನ ಧರ್ಮಶಾಸ್ತ್ರದಲ್ಲಿ ಬಹಳ ಸ್ವಾರಸ್ಯ ಉಂಟು! ಇತಿಹಾಸಕ್ಕೆ ಹೋಗುವ ಮಾತಯ್ಯಾ ನಿನ್ನದು—ಆದರೆ ನೀನೇ ಹೆಂಡ್ತಿಯಾಗಿದ್ದರೆ ಹ್ಯಾಗೆ?

ನಾಗಯ್ಯ—ನಾನು ಹೆಂಡ್ತಿಯಾಗಿಲ್ಲವಲ್ಲ! ಆಗದ ಹೋಗದ ಆ ಸಂಗ್ತಿ ಈಗ ಯಾಕೆ?

ಜೋಗಯ್ಯ—ಏನು, ಅನ್ಯಾಯವಾಗಿ ಕವಾದ ಮಾತು ಮಾತಾಡುತ್ತೀಯಯ್ಯಾ, ನೀನು—ಹೇಸಿಗೆ—ಇದು ತೀರ ಸ್ವಾರ್ಥಿಗಳ ಮಾತು—ನಿನ್ನ ಮಾವಯ್ಯನವರು ಇಷ್ಟರ ತನಕ ಹತ್ತು ಹದಿನಾಲ್ಕು ಸಾವಿರ ರೂಪಾಯಿ ಖರ್ಚು ಮಾಡಿದರಂತೆ. ನೀನು ಇನ್ನೂ ದುಡ್ಡು ತ, ತಾ ಎಂದು ಹೆಂಡ್ತಿಯನ್ನ ಅಲ್ಲಿಗ ದೂಡಿದರೆ ಅಲ್ಲಿಯೇನು ಚಿನ್ನದ ಗನಿ ಉಂಟು—ಬೇಕು ಬೇಕಾದ ಹಾಗೆ ಅಗೆಯಲಿಕ್ಕೆ? ಅವರಿಗೆ ಪಾಪ ಇನ್ನೂ ನಾಲ್ಕು ಹೆಣ್ಣುಗಳು ಇದ್ದಾವಂತೆ—

ನಾಗಯ್ಯ—ಇರಲಿ, ಇನ್ನೂ ನಾಲ್ಕು ಹೆಚ್ಚಿರಲಿ—

ಜೋಗಯ್ಯ—ನಿನ್ನ ಹೆಂಡ್ತಿ ಮೊನ್ನೆ ಬಾವಿಗೆ ಬಿದ್ದಳಂತೆ—

ನಾಗಯ್ಯ—ಮೇಲೆ ಬಂದಳಲ್ಲವೇ—

ಜೋಗಯ್ಯ—ಅದೇನು ಅಲ್ಲಿಯೇ ಸಾಯಬೇಕಿತ್ತಾ?

ನಾಗಯ್ಯ—ಸತ್ತರೆ ಒಳ್ಳೇದಿತ್ತು. ನನ್ನ ಗರ್ಜ ತೀರುತ್ತಿತ್ತು.

ಜೋಗಯ್ಯ—ಹ್ಯಾಗೆ—ಸುಮ್ಮನೆ ನೀನು ಗರ್ವದ ಮಾತನ್ನು ಆಡಬೇಡ—

ನಾಗಯ್ಯ—ಅಯ್ಯೋ, ಹ್ಯಾಗಂದರೆ—ನಮ್ಮ ಜಾತಿಯಲ್ಲಿ ತುಂಬ ವರದಕ್ಷಿಣೆ ಕೊಟ್ಟು ಹೆಣ್ಣು ಕೊಡುವವರಿದ್ದಾರೆ—ಆದ್ದರಿಂದ ಹೆಂಡ್ತಿ ಸತ್ತರೆ ಮತ್ತೊಂದು ಹೆಂ

ಜಾಹೀರು ವಿನಂತಿ.

ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಉಡುಪಿ ತಾಲೂಕು ಗುಂಡ್ಮಿ ಗ್ರಾಮದ ಮಂಜುನಾಥ ಸಹಸ್ರ ಯಾನೆ ಕೆ. ಜಿ. ಕೆ. ರಾವ್ ಎಂಬವರು ನಮ್ಮ ಫರ್ಮಿನ ಔಷಧ ಪ್ರಚಾರಾಟದ ಟ್ರಾವಲಿಂಗ್ ಏಜಂಟರಾಗಿದ್ದರು. ಈಚೆಗೆ ಅವರ ಏಜನ್ಸಿಯನ್ನು ವಜಾ ಮಾಡಿದೆ. ಅವರಿಗೂ ನಮ್ಮ ಫರ್ಮಿಗೂ ಯಾವ ತರದ ಸಂಬಂಧವೂ ಇರುವುದಿಲ್ಲ. ಅವರು ನಡಿಸುವ ಪತ್ರವ್ಯವಹಾರಗಳು ನಮ್ಮ ಫರ್ಮಿಗೆ ಸಂಬಂಧಪಟ್ಟದ್ದಲ್ಲವೆಂಬದನ್ನು ಸರ್ವರೂ ತಿಳಿದಿರತಕ್ಕದ್ದು.

ಡಾ| ಎ. ಎಸ್ ಶ್ರೀನಿವಾಸ ರಾವ್,
ಆಯುರ್ವೇದ ವೈದ್ಯ ವಿದ್ವಾನ್,
ಯಂ. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಹೊಸ ಪುಸ್ತಕ! ಇದೀಗ ಪ್ರಕಟವಾಗಿದೆ!

ಅಜ್ಞಾನ ತಿಮಿರ ಮಾರ್ತಾಂಡ

ಜನ್ಮತಃ ಅಸ್ಪೃಶ್ಯತೆಯು ಇರಲಿಲ್ಲವೆಂಬುದನ್ನೂ ಅಂಥ ಸಂಪ್ರದಾಯದ ಸನಾತನಿಗಳ ವಾದದಲ್ಲಿ ತಿರುಳಿಲ್ಲವೆಂಬುದನ್ನೂ ವಿವರಿಸಿ ಪುರಾಣ, ಸ್ಮೃತಿಗಳ ಆಧಾರದಿಂದ ಶ್ರೀ. ಬಿ. ಅಂತಯ್ಯ ಶೆಟ್ಟರಿಂದ ನವೀನವಾಗಿ ಬರೆಯಲಾದ ಹೊಸ ಪುಸ್ತಕ.

ಬೆಲೆ: 0—4—0 ಮಾತ್ರ.

ಇದರ ಉತ್ಪತ್ತಿಯು ಹರಿಜನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲ್ಪಡುವುದು. 0-4-6 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳಿಸಲಾಗುವುದು.

ಉಡುಪಿಯಲ್ಲಿ ಪುಸ್ತಕ ಸಿಗುವ ಸ್ಥಳ:
Navabharat Book Depot,
Udipi.

ಬಿ. ಅಂತಯ್ಯ ಶೆಟ್ಟಿ,
ಹರಿಜನ ಶಿಕ್ಷಣ ಸಹಾಯಕ ಸಂಘ,
ಬ್ರಹ್ಮಾವರ

ತ್ತಿ ಬರುತ್ತೆ, ಅವಳೊಟ್ಟಿಗೆ ವರದಕ್ಷಿಣೆ ಗಂಟೂ ಬರುತ್ತೆ. ನನ್ನ ಗರ್ಜಿ ಪರಿಹಾರ ವಾಗುತ್ತೆ! ಹಾಗಾಗದಂತೆ ಅವಳನ್ನು ಆ ಬಾವಿಯಿಂದ ಮೇಲೆ ಎತ್ತಿದವರು ಯಾರು ಹೇಳು?—

ಜೋಗಯ್ಯ—ನಾಗಯ್ಯ, ಈ ತರದ ಮಾತನ್ನು ನೀನು ಮಾತಾಡತಕ್ಕದ್ದಲ್ಲ — ಇದರಲ್ಲಿ ನ್ಯಾಯ ನೀತಿ ಕರುಣೆ ಯಾವುದೂ ಇಲ್ಲ. **ನೀನೇ ಆ ಹೆಂಡ್ತಿ ಯಾಗಿದ್ದರೆ ಈ ಸಂದರ್ಭ ಹ್ಯಾಗೆ ತೋರುತ್ತಿತ್ತು! ಆಲೋಚನೆ ಮಾಡಿದ್ದಿಯಾ?**

ನಾಗಯ್ಯ— ಅದೆಲ್ಲಾ ಆಲೋಚನೆ ಮಾಡಲಿಕ್ಕೆ ಈಗ ಪುರುಸೋತು ಇಲ್ಲ— ನಮಗೆ ಗರ್ಜಿ ಹಿಡಿದವರಿಗೆ ಅದೆಲ್ಲಾ ತಲೆಗೆ ಬರುವುದಿಲ್ಲ—

ಜೋಗಯ್ಯ—ಯಾಕೆ ಈ ಗರ್ಜಿಯನ್ನು ಮಾಡಿಕೊಂಡದ್ದು?

ನಾಗಯ್ಯ— ಎಂಥಾ 'ನೋಸೆನ್ಸ್' (Nonsense) ಮಾತಾಡುತ್ತೀ ನೀನು! ಗರ್ಜಿ ಹ್ಯಾಗೆ ಬರುವುದೆಂದರೇ? ಅದು ವಿದ್ಯಮಾನಗಳಿಂದ ಬಂದುಬಿಡುತ್ತೆ

ಜೋಗಯ್ಯ— ನೀನು ವಿದ್ಯಮಾನಗಳನ್ನು ದೂರಬೇಡ— ನಿನ್ನ ಸುಖಕ್ಕೆ ನಿನಗೆ ಸೋಡಿ ನೋಡಿದ ವಿಷಯಗಳು ಬೇಕು— ಈ ದುರ್ಗುಣದಿಂದ ದುಡ್ಡಿನ ಗರ್ಜಿಯನ್ನು ನೀನೇ ತಂದುಕೊಂಡಿ. ಅದಕ್ಕಾಗಿ ಈಗ ಆ ಬಡ ಹೆಂಡ್ತಿ ಗೋಳಾಡಬೇಕೋ? ಒಳ್ಳೇ ತತ್ವ— ಯಾರ ತಪ್ಪಿಗೆ ಯಾರಿಗೆ ಶಿಕ್ಷೆ! ಈ ಅವಿಚಾರದ ಫಲ ಮುಂದೆ ನಿನಗೆ ಗೊತ್ತಾಗುತ್ತೆ!

ನಾಗಯ್ಯ—ಅದು ಹ್ಯಾಗೆ?

ಜೋಗಯ್ಯ—ನಿನಗೆ ಹೆಣ್ಣು ಮಕ್ಕಳಿಲ್ಲವಾ?

ನಾಗಯ್ಯ—ಎರಡು ಉಂಟಲ್ಲವಾ —

ಜೋಗಯ್ಯ—ನಾಗಯ್ಯ, ನಿನಗೆ ಹೆಂಡ್ತಿ ದೃಷ್ಟಿಯಿಂದ ನೋಡಲಿಕ್ಕೆ ಸಾಧ್ಯವಿಲ್ಲ—ಮಾವನ ದೃಷ್ಟಿಯಿಂದಾದರೂ ನೋಡಲಿಕ್ಕೆ ಪ್ರಯತ್ನಮಾಡು. ನಾಳೆ ನಿನ್ನ ತತ್ವವನ್ನೇ ನಿನ್ನ ಅಳಿಯಂದಿರೂ ಆಚರಿಸಿದರೆ—

ನಾಗಯ್ಯ—ಅದು ನಾಳೆ ಅಲ್ಲವಾ—

ಜೋಗಯ್ಯ—ನಾಳೆಯೆಂದರೆ ಬಹು ದೂರ ಉಂಟಾ?—

ನಾಗಯ್ಯ—ಸ್ವಲ್ಪ ಪುರುಸೋತು ಉಂಟಲ್ಲವಾ?—

ಜೋಗಯ್ಯ—ಆದರೂ ಬರುತ್ತದಲ್ಲಾ? **ಬಂದಾಗ ಆ ಅಳಿಯಂದಿರೂ ನಿನ್ನ ಹಾಗೇ ಮಾಡಿದರೆ ನೀನೇನು ಮಾಡಿಯೇ?**

ನಾಗಯ್ಯ—ನೋಡಬೇಕು.

ಜೋಗಯ್ಯ—ಎಂಥಾದ್ದು ನೋಡೋದು! ಬುದ್ಧಿ ಹೃದಯ ಎರಡೂ ಇಲ್ಲದವನ ಹಾಗೆ ಮಾತಾಡ್ತೀಯಲ್ಲ! ಮನುಷ್ಯನ ನಡೆನುಡಿಯಲ್ಲ ನಿನ್ನದು. ನೀನು ಸಿಟ್ಟಾದರೂ ಚಿಂತೆಯಿಲ್ಲ. ಸತ್ಯದ ದೃಷ್ಟಿಯಿಂದ ನಿನ್ನ ಹಿತಚಿಂತನೆಯ ದೃಷ್ಟಿಯಿಂದ ನಾನು ಎರಡು ಮಾತುಗಳನ್ನು ಹೇಳುತ್ತೇನೆ ನಿನಗೆ ಇಷ್ಟವಾಗದಿದ್ದರೆ ಇಲ್ಲಿಯೇ ಬಿಟ್ಟು ಬಿಡು. ಗರ್ಜಿಯು ನಮ್ಮ ಹಾಗೆಯೇ ಇತರರಿಗೂ ಉಂಟು-ನಿನ್ನ ಮಾವನಿಗೂ ಉಂಟು-ಗರ್ಜಿ ಹಿಡಿದವರು ಅವರ ಗರ್ಜಿಯನ್ನು ಹಣೆಯ ಮೇಲೆ ಬರೆದುಕೊಂಡು ಪ್ರದರ್ಶನ ಮಾಡುವುದಿಲ್ಲ. **ಇವತ್ತು ನಿನ್ನ ಮಾವನಿಗೆ ನಿನ್ನಿಂದ ಬಂದ ಕಷ್ಟ ನಾಳೆ ನಿನ್ನ ಅಳಿಯಂದಿರಿಂದ ನಿನಗೆ ಬರುವಾಗ ನಿನ್ನ** ಮಾತುಗಳ ಉರಿ ಎಷ್ಟು ಎಂಬುದು ಗೊತ್ತಾದೀತು. ನಿನ್ನಂತೆ ಈಗ ಹಾರುತ್ತಿರುವ ಅಳಿಯಂದಿರಿಗೆಲ್ಲ ಆ ಅನುಭವ ಬರುವ ದಿನ ದೂರವಿಲ್ಲ. ಮಾವಂದಿರ ಮತ್ತು ಹೆಂಡಂದಿರ ಸುಡು ಸುಡು ಶಾಪವು ಬೆಂಬಿಡದೆ ಬಂದೇ ಬಿಡುತ್ತೆ. ಗರ್ಜಿಯನ್ನು ಮಾಡಿಕೊಳ್ಳುವುದೂ ಮಾಡಿಕೊಳ್ಳದೆ ಇರುವುದೂ ಹೆಚ್ಚಿನ ಮಟ್ಟಿಗೆ ನಮ್ಮ ಕೈಯಲ್ಲಿ ಉಂಟು. ನಾವು ವಿಚಾರ ಗೆಟ್ಟು ಮಾಡಿಕೊಂಡ ಗರ್ಜಿಗಾಗಿ ಮಾವ ಮತ್ತು ಹೆಂಡಂದಿರ ಮೇಲೆ ಸಿಟ್ಟುಮಾಡಿ ಪ್ರಯೋಜನವಿಲ್ಲ. ಅವರನ್ನು ಪೀಡಿಸಿ ಎಳೆಸೆಯಾಗೋದಿಲ್ಲ ಅವರ ಜೀವನವನ್ನು ಹಿಂಡುವುದು ಮಹಾಪರಾಧ. ನಮ್ಮ ಹೆಂಡಂದಿರು ನಮ್ಮ ಹಾಗೆ ಮನುಷ್ಯ ಜಾತಿ; ಅವರಿಗೂ ನಮ್ಮ ಹಾಗೆ ಇಂದ್ರಿಯಗಳು ಇವೆ. ನಮ್ಮ ಹಾಗೆ ಹಸಿವು ಬಾಯಾರಿಕೆಯೂ ಇದೆ-ಕಟ್ಟಿದರೆ ಚುಚ್ಚಿದರೆ ನೋವಾಗುತ್ತೆ. ಈ ಲೋಕದಲ್ಲಿ ನಮ್ಮ ಹಾಗೆಯೇ ಸುಖಪಡಬೇಕೆಂದು ಅವರಿಗೂ ಆಶೆಯಿಲ್ಲವೇ? ನಮಗೊಂದು ಧರ್ಮ, ಅವರಿಗೊಂದು ಧರ್ಮ! ಈ ತರದ ಭೇದವ್ಯಾಕೆ? ನಮಗಾಗಿ ಅವರು ಸರ್ವತ್ಯಾಗ ಮಾಡಬೇಕು! ನಾವು ಅವರಿಗಾಗಿ ಮಾಡತಕ್ಕದ್ದೇ ಇಲ್ಲವೆ! ಇದು ದೈತ್ಯರ ತತ್ವ-ಮಾನವ ಧರ್ಮವಲ್ಲ ಯಾರು ತನ್ನ ಸುಖವನ್ನೂ ತನ್ನ ಹೆಂಡ್ತಿಯ ಸುಖವನ್ನೂ ಒಂದೇ ರೀತಿಯಲ್ಲಿ ನೋಡುತ್ತಾನೋ ಅವನೇ ನ್ಯಾಯನೀತಿ ಬಲ್ಲ ದಯಾಮಯ ಮಾನವ. ಹಾಗೆ ಮಾಡದವನು ಎರಡು ಕಾಲಿನ ಮೃಗ! ಇಂಥವನನ್ನು ಮಾನವನೆನ್ನುವ ಬದಲು ದಾನವನೆಂದರೆ ಲೇಸು. **ಹೆಂಡಂದಿರು ನಮ್ಮ ಕಡೆಗೆ ಮಾಡುವ ಕರ್ತವ್ಯದ ವಿಷಯ ನಾವು ತುಂಬಾ ಮಾತಾಡುವಾಗ ಅವರ ಕಡೆಗೂ ನಮ್ಮ ಕರ್ತವ್ಯವಿದೆಯೆಂಬುದನ್ನು ಮರೆಯಬಾರದು.** ಹೆಂಡಂದಿರನ್ನು ಪೀಡಿಸುವುದು ಬಹು ಸುಲಭ—ಅವರನ್ನು ಸುಖಪಡಿಸುವುದು ಕಷ್ಟ—ನಮ್ಮ ಹೆಂಗಸರು ಸುಖವಾಗಿದ್ದರೆ ನಮ್ಮ ಭಾರತ ಮಾತೆಯು ನಗುವಳು, ಸಂತೋಷಪಡುವಳು. ಆದ್ದರಿಂದ ಪ್ರತಿಯೊಬ್ಬ ಗಂಡನೂ ಒಂದು ಸಕ್ಕೊಂದಾವರ್ತಿಯಾದರೂ 'ನಾನು ಹೆಂಡತಿಯಾದರೆ'ಯೆಂದು ನೆನಸಿಗೆ ತಂದರೆ ಅವನಿಗೂ ಸುಖ, ಹೆಂಡತಿಗೂ ಕ್ಷೇಮ—ಮನೆಯಲ್ಲೆಲ್ಲ ನೆಮ್ಮದಿ ಅಂತಹ ಸಂಸಾರಗಳೇ ಸಮಾಜಕ್ಕೆ ಭೂಷಣ! ದೇಶಕ್ಕೆ ಪ್ರಾಣ! ನಾಗಯ್ಯ, ಯೋಚಿಸಿ ನೋಡು, ತಿರುತಿರುಗಿ ವಿಚಾರಿಸಿ ನೋಡು. ಆಗ ನೀನೆಂತಹ ಸ್ತ್ರೀ ಪೀಡಕ, ಸಮಾಜಘಾತಕ ಪ್ರಾಣಿಯಾಗಿರುವೆ ಎಂಬುದರ ಚಿತ್ರ ನಿನ್ನ ಕಣ್ಣಮುಂದೆ ಬಾರದಿರಲಾರದು.

ಬರುವ ಲೇಖನ—

'ಮಹಿಳಾ ಸಭೆ'

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ, ಡಾಕ್ಟರರೇ ನೋಡಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲಿ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ. ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಐದು ರೂಪಾಯಿ. ಎರಡು ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ಹಾಗೆಂದು ಈ ಔಷಧಿಯನ್ನು ಮಿಥ್ಯಪಡಿಸುವವರಿಗೆ ರೂಪಾಯಿ 100 ಬಹುಮಾನ

ಸ್ತಂಭಕ ವಟಿ—ಈ ಮಾತ್ರೆಯಿಂದ ನಾಲ್ಕು ರಾತ್ರಿ ನೀವು ಸ್ತ್ರೀ ಸಂಸರ್ಗದಲ್ಲಿ ಉಲ್ಲಾಸವನ್ನು ಪಡೆಯುವುದು. ಇದರಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram

No 352 P. O. Katrisarai, (GAYA)

ನಮ್ಮ ಬೊಂಬಾಯಿಯ ಪ್ರತಿನಿಧಿಗಳು:

ಶ್ರೀ ಯು. ಕೆ. ರಂಗ

ನಮ್ಮ ಗೋಕಾಕ ಏಜಂಟರು:

ಶಿರಗಾಂವಕರ ಬ್ರದರ್ಸ್.

ನಗರ, ಕಿನ್ನಿಗೋಳಿ ಏಜಂಟರು—

ಶ್ರೀ. ಎಂ. ದೊಡ್ಡಣ್ಣಶೆಟ್ಟಿ

ಪ್ರೊ. ಭಕ್ತೋದ್ಧಾರ ಸ್ವದೇಶಿಸ್ಟೋರ್ಸ್

ನೋಟೀಸು

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 540/1938

ತಿರುಮಲೇಶ್ವರ, ನೂಜಿಬೈಲು, ಗೋಪಾಲಕೃಷ್ಣಯ್ಯನವರ ಮಗ ಮೈನರ್ ಕ್ಷೇತ್ರ, ಬಂತಕಳು ತಾಯಿ ದೇವಮ್ಮ, ಕಾಸ್ರಗೋಡು ತಾಲೂಕು ಕಳೆಕಳ ಗ್ರಾಮ, } ವಾದಿ

1. ನೂಜಿಬೈಲು ಗೋಪಾಲಕೃಷ್ಣಯ್ಯ, ತಿರುಮಲೇಶ್ವರ ಭಟ್ಟ ಮಗ,
2. ವೆಂಕಟರಾಮಯ್ಯ } ಒಂದನೇ ಪ್ರತಿವಾದಿಯ ಮಕ್ಕಳು
3. ಮಹಾಬಲೇಶ್ವರ, } ಮೈನರು ಗಾರ್ಡಿಯನ ತಂದೆ ಒಂದನೇ ಪ್ರತಿವಾದಿ ಮಂಗ್ಳೂರು ತಾಲೂಕು ಪಂಚಗ್ರಾಮದ ಕುಂಜತ್ತೂರಲ್ಲಿರುವವರು, } ಪ್ರತಿವಾದಿರು

ಸದ್ರಿ ಪ್ರತಿವಾದಿರಿಗೆ ಸ್ಥಿರ ಚರ ಆಸ್ತಿಗಳ ಹಿಸ್ಸೆ ಪನಗೆ ಕೊಡಿಸಬೇಕಾಗಿ ವಾದಿಯು ಮೇಲ್ಕಂಡ ಪ್ರತಿವಾದಿರ ಮೇಲೆ ಹೂಡಿದ ಮೇಲಿನ ವ್ಯಾಜ್ಯವು ಈ ಕೋರ್ಟು ಮುಂದೆ 1939ನೇ ಇಸ್ವಿ ಫೆಬ್ರವರಿ ತಾರೀಕು 11ಕ್ಕೆ ಸ್ಟೇಟ್ಮೆಂಟ್‌ಗಳು ಸಲ್ಲಿಸುವ ಬಗ್ಗೆ ಇಟ್ಟಿದೆ. ಸದ್ರಿ ದಿವಸದಲ್ಲಿ ಪ್ರತಿವಾದಿರು ಎದುರಾದರೆ ಸದ್ರಿ ವ್ಯಾದೆಯ ದಿವಸ ಬೆಳಿಗ್ಗೆ ಘಂಟೆ 10ಕ್ಕೆ ಕೋರ್ಟು ಮುಂದೆ ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವನ್ನು ಏಕಪಕ್ಷ ವಿಚಾರಣೆಯಿಂದ ಕೋರ್ಟಿನಲ್ಲಿ ತೀರ್ಮಾನಿಸಲ್ಪಡುವದು ಎಂತ ಈ ಮೂಲಕ ತಿಳಿಸಲಾಗಿದೆ.

(*signed*) **M. Shiva rao**
Pleader for Plaintiff.

ಪ್ರಕಟಣೆ

ಕೋವಿ ಲೈಸೆನ್ಸುಗಳನ್ನು ಒಬ್ಬನ ಹೆಸರಿಂದ ಇನ್ನೊಬ್ಬನ ಹೆಸರಿಗೆ ಬದಲಿ ಮಾಡುವ ಸಂದರ್ಭಗಳಲ್ಲಿ ಒಬ್ಬನ ಹೆಸರಲ್ಲಿರುವ ಲೈಸನ್ಸನ್ನು ಇನ್ನೊಬ್ಬನ ಹೆಸರಲ್ಲಿ ಕೊಡಲಾಗುತ್ತದೆ ಈ ಬಗ್ಗೆ ಇಬ್ಬರು ಬರೆದುಕೊಡುವ ಅರ್ಜಿಗಳು ಆಗತ್ಯವಿರುತ್ತವೆ ಲೈಸನ್ಸುದಾರನು ತನ್ನ ಲೈಸನ್ಸನ್ನು ರದ್ದು ಪಡಿಸಿಕೊಳ್ಳುವ ಬಗ್ಗೆ ಒಂದಾಣೆ ಮೌಲ್ಯದ ಕೋರ್ಟು ಫೀ ಸ್ಟಾಂಪನ್ನು ಹೊಸ ಲೈಸನ್ಸುದಾರನು ಅಂದರೆ ಸದ್ರಿ ಲೈಸನ್ಸನ್ನು ತನ್ನ ಹೆಸರಲ್ಲಿ ಬದಲಿ ಪಡಿಸಿಕೊಳ್ಳುವವನು ಹನ್ನೆರಡಾಣೆ ಮೌಲ್ಯದ ಕೋರ್ಟುಫೀ ಸ್ಟಾಂಪನ್ನು ಅರ್ಜಿಗೆ ಅಂಟಿಸತಕ್ಕದ್ದು. ಹಾಗೆ ಸ್ಟಾಂಪು ಇಲ್ಲದ ಅರ್ಜಿಗಳನ್ನು ಅಂಗೀಕರಿಸಲಾಗಲಿಕ್ಕಿಲ್ಲ.

M. V. Vellodi,
Dt. Magistrate of South Kanara.

WANTED—Districts Organisers and Taluka Superintendents in Districts of Belgaum, Bijapur, Dharwar, Canara and Coorg on salary and commission basis. Special facilities for the initial business of Rs 10,000/-. Only influential gentlemen who can guarantee Rs. 50,000/- and Rs 25,000/- per year need apply, Messrs.

PADUBIDRI BROS., BOMBAY 8

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" ರಜಿಸ್ಟರ್ಡ



ನಕಲಿ ಮದ್ದುಗಳಿಗೆ ಮರುಳಾಗಬೇಡಿ, ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ' ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋರ್‍ಹಿಯ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವುದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರೋಗದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲಭಾಯಿ ಪಟೇಲ್ ರೋಡ್, ಮುಂಬಯಿ.

Sole Manufacturer DR. D. N. JASANI, Vitalbhai Patel Road, BOMBAY 4

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ. 2—4—0.

ಸಣ್ಣ ಸುಂದರ, ಆಕಾರ ಗಟ್ಟಿ ಪ್ಲೇಟ್ಯಾದ ಮೆಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರಂಟಿ ದುಂಡಾಕೃತಿಯ, ದೀರ್ಘ ಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0 ಸವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಚಿತ್ರದಲ್ಲಿ ತೋರುವ ಜೋಡಿ ರಿಸ್ಟ್‌ವಾಚಿಗೆ ರೂ 6-0-0. ಜುವೆಲಿರುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಗ್ಯಾರಂಟೀತವಾದುದಕ್ಕೆ ರೂ 10-0-0 ಟಪಾಲು ಪ್ರತ್ಯೇಕ

ಎಚ್ ಡಾವಿಡ್ ಅಂಡ್ ಕೊ.

ಪೊ ಬಾಕ್ಸ 11424 ಕಲ್ಕತ್ತ.

H. David & Co.

Post Box No 11424, Calcutta

ಆತಂಕನಿಗ್ರಹ ಮಾತ್ರೆ.

ಯುವ ಕಾರಣದಿಂದಾಗಲಿ ಉಂಟಾದ ನಾಶ ನಷ್ಟ ನರಗಳ ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ ದುಷ್ಟರಕ್ತವನ್ನು ಶುದ್ಧಿ ಮಾಡಿ ಜೀರ್ಣಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡತಕ್ಕದ್ದು. ಕ್ರಮ ಡಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯನಷ್ಟ ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗ ಅಥವಾ ಅತಿಯಾದ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧನ್ವಂತರಿ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಆರ್ಡರ್ ಮಾಡಿರಿ.

ಆತಂಕನಿಗ್ರಹ ಫಾರ್ಮಸಿ, ೭೪.

ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಮುದುಕನು

ಯುವಕನಾಗುವನು.

… ದೃಷ್ಟಿಯು ಮಂದವಾಗುತ್ತಿರುವುದು … ಸುಕ್ಕು ಗಟ್ಟುತ್ತಿರುವುದು … ಮುದುಕರನ್ನು ತರುಣರನ್ನಾಗಿ ಮಾಡ … ರೂ. 10

ಶೀಘ್ರಸತನ-ನಪುಂಸಕತ್ವಕ್ಕೆ

… ರೂ. 1 …

Jary Book Dawakhana,

P. O. BiharNursery (DARBHANGA)

ಬೊಂಬಾಯಿಯ ನಮ್ಮ ಪ್ರತಿನಿಧಿಗಳು

ಶ್ರೀ. ಯು. ಕೆ. ರಂಗ,

ಜಪಾನ್ ಕೊಟನ್ ಟ್ರೇಡಿಂಗ್

ಕೊ. ಲಿಮಿಟೆಡ್.

ಬೊಂಬಾಯಿ ಸಮಾಚಾರ

(ಸ್ವಂತ ಬಾತ್ಮೀದಾರರಿಂದ)

27-1-1939

ಚುನಾವಣೆಯ ಪ್ರತಿಫಲ—ಶ್ರೀಪುರಿ ಕೋಂಗ್ರೆಸ್ ಪ್ರತಿನಿಧಿಗಳ ಚುನಾವಣೆಯು ಒಂದಲ್ಲ ಎರಡು ಸಲ ನಡೆಯಿತು ಮುಂಬಯಿ ನಗರದಲ್ಲಿ. ಪ್ರಥಮ ಬಾರಿ ನಿಲ್ಲಿಸಲ್ಪಟ್ಟದ್ದು 'ಎ' ಮತ್ತು 'ಜಿ' ವಾರ್ಡುಗಳ ಚುನಾವಣೆಯು ಕಳೆದ ರವಿವಾರ ಯಶಸ್ವಿಯಾಗಿ ಜರಗಿತು. 'ಎ' ವಾರ್ಡಿನಲ್ಲಿ ರೋಯಿಸ್ಟರು ಶ್ರೀ. ಮದನಶೆಟ್ಟಿಯವರು ಅನಾಯಾಸವಾಗಿ ಚುನಾಯಿಸಲ್ಪಟ್ಟರು 'ಜಿ' ವಾರ್ಡಿನಲ್ಲಿ ಸಾಮ್ಯವಾದಿಗಳಾದ ಶ್ರೀ. ಜಿ. ಎಂ. ಅಧಿಕಾರಿಗಳವರು 7286 ಓಟುಗಳನ್ನು ಪಡೆದು ಪ್ರಥಮ ಸ್ಥಾನವನ್ನು ಪಡೆದರು. ಜನತೆಯು ಹೃದಯದಂತಿದ್ದ ಶ್ರೀ. ನರಿಮನ್ ರವರಿಗೂ ಇಷ್ಟು ಓಟು ದೊರಕಿದ್ದಿಲ್ಲ. ಇದರ ಪ್ರತಿಫಲ … ಸಾಮ್ಯವಾದಿ, ಸಮಾಜವಾದಿ, ರೋಯಿಸ್ಟ್, ಹೀಗೆ 8 ಮಂದಿಯೂ, ಇವರ ಜೊತೆಗೆ ಈಗಿನ ಕಾಂಗ್ರೆಸ್ ಹೈಕಮಾಂಡಿಗೆ ವಿರುದ್ಧವಾಗಿ (ನರಿಮನ್ನರ ಕಡೆ) 4 ಮಂದಿಯೂ, ಒಟ್ಟಿಗೆ 12 ಮಂದಿ ಎಡಪಕ್ಷದವರೂ, 13 ಮಂದಿ ಬಲಪಕ್ಷದವರೂ ಚುನಾಯಿಸಲ್ಪಟ್ಟರು. ಇದರಿಂದಾಗಿ, ಇವರ ತನಕ ಏಕಚಕ್ರಾಧಿಪತ್ಯವನ್ನು ನಡೆಸುತ್ತಿದ್ದ ಫೋಲಾಭಾಯಿ, ಎಸ್. ಕೆ. ಪಾಟೀಲ ಮೊದಲಾದವರ ಧರ್ಮ … ಇತ್ಯಾದಿ ತೊಡಗಿದೆ. ಈ ಪ್ರತಿನಿಧಿಗಳ ಪ್ರಥಮ ಸಭೆಯು … ಅಧ್ಯಕ್ಷ ಮೊದಲಾದವರ ಚುನಾವಣೆ … ಹೇಗೂ ಎಡಪಕ್ಷವು ಬಲಿಷ್ಠವಾಗಿ ಕೊಳ್ಳತೊಡಗಿದೆನ್ನಬಹುದು!

ನೃಸಂಶಿಯವರು ಮುಂಬಯಿ ನಗರಕ್ಕೆ—ಬಂದಾಗ ಅವರಿಗೆ ತಕ್ಕ ಸನ್ಮಾನವು ದೊರಕಬೇಕಾದದ್ದು ಸಂಭವವಿಲ್ಲ ಇದರ ಪ್ರತಿಫಲವಾಗಿ, ಇವರು ಪ್ರತಿಯೊಬ್ಬ ಪಟ್ಟಣಿಗರಿಗೂ ಆದರವನ್ನಿತ್ತು, ಫೆಡರೇಶನನ್ನು ಆದಷ್ಟು ತ್ವರೆಯಲ್ಲೇ ಹೇರಿಸಿ, 'ಶಾಂತಿ' (?) ಸ್ಥಾಪಿಸುವೆನೆಂದೂ ಅಭಿಧಾನವನ್ನಿತ್ತುದೂ ಆಯಿತು. 'ಶಾಂತಿ'ಗಾಗಿ ಹಾತೊರೆಯಲೇ?

ಇಂಡಿಯನ್ ಸ್ಪೇನಿಶ್ ರಿಲೀಫ್ ಕಮಿಟಿ—ಯಿಂದ ಕಳೆದ ವಾರ ಕಳುಹಿಸಲ್ಪಟ್ಟ 120 ಟನ್ ಅಕ್ಕಿಯು ಸ್ಪೇನ್ ದೇಶಕ್ಕೆ ತಲ್ಪಿ ಮಾಕ್ಸಿಲ್ಸನಲ್ಲಿ ಸ್ಪೇನ್ ಸರಕಾರದ ಏಜಂಟರು ಇದನ್ನು ಆದರದಿಂದ ಸ್ವೀಕರಿಸಿದರೆಂದು ತಿಳಿದುಬರುತ್ತದೆ.

ಮುಂಬರುವ ಮುಂಬಯಿ ಅಸೆಂಬ್ಲಿಯಲ್ಲಿ—ಬಹುಶಃ, ದಿ ಲೇಂಡ್ ರೆವಿನ್ಯೂ ಸೆಟ್ಲ್‌ಮೆಂಟ್ ಬಿಲ್ಲು ಆನರೇಬಲ್ ಮೊರಾರ್ಜಿ ದೇಸಾಯಿಯವರಿಂದ ತಯಾರಿಸಲ್ಪಟ್ಟಿದೆ. ಬರುವ ವಾರ ಇದನ್ನು ಅಸೆಂಬ್ಲಿ ಸದಸ್ಯರಿಗೆಲ್ಲ ಕಳುಹಿಸಿಕೊಡುವರು. ಈ ಬಿಲ್ಲಿನಿಂದಾಗಿ ಸರಕಾರಕ್ಕೆ 30 ಲಕ್ಷ ರೂ ನಷ್ಟ ಸಂಭವಿಸಬಹುದೆಂದೂ, ಇದಕ್ಕಾಗಿ ಸರಕಾರವು ಬರುವ ವರ್ಷದ ಬಜೆಟ್ಟಿನಲ್ಲಿ ಬೇಕಾದ ಸಲಕರಣೆಗಳನ್ನು ತಯಾರಿಸುವುದೆಂದೂ ತಿಳಿದುಬರುತ್ತದೆ.

ಶ್ರೀ. ಭೋಸಲೇ ಅಧ್ಯಕ್ಷರಾಗಬೇಕು—ತ್ರಿಪುರಿ ಕೋಂಗ್ರೆಸಿಗೆ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟ, ಕೋಂಗ್ರೆಸ್ ಎಡಪಕ್ಷದವರಾದ ಶ್ರೀ. ನರಿಮನ, ಅಧಿಕಾರಿ, ಮಿಟ್ಟವಾಲ, ಮಸಾನಿ ಮೊದಲಾದವರೆಲ್ಲ, ಶ್ರೀ ಸುಭಾಶ್ಚಂದ್ರ ಭೋಸರನ್ನೇ ತಿರುಗಿ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ತಮ್ಮ ಅಭಿಪ್ರಾಯವನ್ನು ಕಳುಹಿಸಿದರು.

ಸ್ವಾತಂತ್ರ್ಯ ದಿನಾಚರಣೆಯು—ಮುಂಬಯಿಯಲ್ಲಿ ಸುಂಗವಾಗಿ ಜರಗಿತು. ಸುಮಾರು 30 ಮುನಿಸಿಪಲ್ ಶಾಲೆಗಳು ಮುಚ್ಚಲ್ಪಟ್ಟಿದ್ದವು. ಇತರ ಕಾಲೇಜುಗಳಲ್ಲಿ ಮತ್ತು ಹೈಸ್ಕೂಲುಗಳಲ್ಲಿ ವಿದ್ಯಾರ್ಥಿ ಸಂಘಗಳು ಪಿಕೆಟಿಂಗ ನಡೆಸಿ, ಅವುಗಳನ್ನು ಮುಚ್ಚುವಂತೆ ಮಾಡಿದರು. ವಿದ್ಯಾರ್ಥಿಗಳಲ್ಲದೆ, ಕಾಮಗಾರರಲ್ಲೂ, ಕೋಂಗ್ರೆಸಿನವರಲ್ಲೂ ಹೀಗೆ ಪ್ರತಿಯೊಬ್ಬರೂ, ತಮ್ಮ ತಮ್ಮ ಮೆರವಣಿಗೆಗಳನ್ನು ನಡೆಸಿ, ಸಭೆಗಳನ್ನು ಮಾಡಿದ್ದರು. ವಿದ್ಯಾರ್ಥಿಯ ಮಂತ್ರಿಗಳಾದ ಶ್ರೀ. ಖೇರರೊಡನೆ, ಶಾಲೆಗಳಿಗೆಲ್ಲ ರಜೆಕೊಡಬೇಕೆಂದು ಎಷ್ಟು ಬೇಡಿಕೊಂಡರೂ ಅವರು ಕೇಳಲಿಲ್ಲ. ಆದರೂ ಸ್ವಾತಂತ್ರ್ಯ ದಿನಾಚರಣೆಯು ಸಂಪೂರ್ಣ ವಿಜಯವಾಯಿತು.

ರೂ. 1—8—0ಕ್ಕೆ 3 ವಾಚುಗಳು ಮತ್ತು 495 ಮನೋಹರ ವಸ್ತುಗಳು.



ನಮ್ಮ ರೂ 1-8-0 ಕ್ರಯದ 16 ಔನ್ಸಿನ ಶೀಸೆ "ಒಟೋರೋಸ"ನ್ನು ಕೊಂಡುಕೊಳ್ಳುವವರಿಗೆ ಒಂದು ಬಂಗಾರದ ಮಿಶ್ರ ರಿಸ್ಟವಾಚು, ಒಂದು ಪೌಡರ್ ಪೇಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿಕಡ್ಡಿಯ ಕೇಸು, ಒಂದು ಸಿಗರೇಟುಲೈಟರು, ಒಂದು ಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ್ ಸ್ಕ್ರೂ, 600 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರಂಟಿಯಿರುವ ಭವ್ಯ ಮೆಶಿನರಿಯುಳ್ಳ ಗಡಿಯಾರ, ಒಂದು ಪೌಂಟೆನ್ ಪೆನ್ನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು 14 ಆಣೆ ಹೆಚ್ಚಿಗೆ.

Oriental Fancy Stores, S. C. E 90.

Post Box. No. 12204, **CALCUTTA.**

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ವಿಧ ವಾತ್ಸ್ಯಾಯನ ಮೋಹಕ ರಹಸ್ಯಗಳು, ಹಾಗೆಯೆ ಸುಖ ಪಡುವಗಳು ಸ್ತ್ರೀ-ಪುರುಷರು ದಿನಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗೆ ಪ್ರೇಮ ಮತ್ತು ಸಂಯೋಗಕಾಲದ ಮಾರ್ಗಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ ಓದಿನೋಡಿರಿ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—T. V. ದೇವಕರ್ ಎಂಡ್ ಕಂಪೆನಿ,

ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, **G. T. MADRAS.**

ದಕ್ಷಿಣ ಕನ್ನಡ

ಮುಂದರ್ತಿ—ಇಲ್ಲಿಯ ಶ್ರೀ ಚಂಡಿಕಾದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ತಾ 10-2-39ರಿಂದ 15-2-39ರ ತನಕ ವಾಡಿಕೆಯಂತೆ ಉತ್ಸವಗಳು ಜರಗಲಿರುವವು.

ಮುಟ್ಟು—ತಾ. 25-1-39ರಲ್ಲಿ ಇಲ್ಲಿಯ ಬೋರ್ಡು ಶಾಲಾ ಕಟ್ಟಡದಲ್ಲಿ ಗ್ರಾಮಸ್ಥರ ಸಭೆಯೊಂದು ಶ್ರೀ. ಸೀತಾರಾಮ ದೊರೆ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಶ್ರೀ. ಗುರುರಾಜ ಭಟ್ಟರಿಂದ ಕೊಡಲ್ಪಟ್ಟ ಖಾದಿ ಟೊಪ್ಪಿ ಮತ್ತು ರಿಬ್ಬನ ಪಿನ್‌ಗಳು ಶಾಲಾಮಕ್ಕಳಿಗೆ ಹಂಚಲ್ಪಟ್ಟವು. ಶ್ರೀ. ಭಟ್ಟರಿಗೂ ಶಾಲೋನ್ನತಿಯನ್ನು ಸಾಧಿಸುವ ಇತರರಿಗೂ ಮುಖ್ಯೋಪಾಧ್ಯಾಯರು ಆಭಾರ ಸೂಚಿಸಿದರು.

ಕಾರ್ಕಳ—ಶ್ರೀ. ಪದ್ಮಸಾಲಿ ವೈಶ್ಯಸಮಾಜ ಸೇವಾ ಯುವಕಸಂಘದ ವಾರ್ಷಿಕ ಮಹಾಸಭೆಯು ಇದೇ ತಾ. 17ರಲ್ಲಿ ಜರಗಿ, ಗತವರ್ಷದ ವರದಿಯನ್ನು ಸ್ವೀಕರಿಸಿ, ನೂತನ ವರ್ಷದ ಬಾಬ್ತು ಈ ಕೆಳಗಣ ಮಹನೀಯರಿಂದೊಡಗೂಡಿದ ಕಾರ್ಯಕಾರಿ ಸಮಿತಿಯನ್ನು ನೇಮಿಸಲಾಗಿದೆಯಾಗಿ ತಿಳಿದುಬರುತ್ತದೆ. 1. ಅಧ್ಯಕ್ಷ ಶ್ರೀ. ಕೆ. ಮುತ್ತಯ್ಯ ಶೆಟ್ಟಿಗಾರರು, 2 ಕಾರ್ಯದರ್ಶಿ ಶ್ರೀ. ಯು. ಕೆ. ದುಗ್ಗಪ್ಪಶೆಟ್ಟಿಗಾರರು, 3. ಕೋಶಾಧಿಕಾರಿ ಶ್ರೀ. ಕೆ. ಸುಬ್ಬಯ್ಯ ಶೆಟ್ಟಿಗಾರರು, 4. ಲೈಬ್ರೇರಿಯನ ಶ್ರೀ. ಕೆ. ಗುಮ್ಮಣ್ಣ ಶೆಟ್ಟಿಗಾರರು ಮತ್ತು 5. ಕೀರ್ತನಾ ಕಾರ್ಯದರ್ಶಿ ಶ್ರೀ. ಕೆ. ಸಂಜೀವ ಶೆಟ್ಟಿಗಾರರು.

ಬ್ರಹ್ಮಾವರ—ಇಲ್ಲಿನ ಮೂಲಸ್ಥಾನ ಶಾಲಾ ಧ್ವಜಾರೋಹಣ ಕೂಟವು ತಾ. 21-1-39ರಲ್ಲಿ ಜರಗಿತು. … ಶ್ರೀ. … ಅಧ್ಯಕ್ಷತೆಯಲ್ಲಿ … ಶ್ರೀ. ಪಿ. ಜೆ. ಮಾರ್ಕರ್ ಮೊದಲಾದವರು … ವಿದ್ಯಾರ್ಥಿಗಳಿಗೆ … ಚುನಾಯಿಸಲ್ಪಟ್ಟವರಿಗೆ ಮನಃಪೂರ್ವಕ ಸಂತೋಷಪಡಿಸಲಾಯಿತು.

ಕಾಸರಗೋಡು—ತಾ. 21-1-1939ರಲ್ಲಿ ಶ್ರೀ ರಾಮ ಭಜನಾ ಮಂದಿರದ ವಾರ್ಷಿಕೋತ್ಸವವು ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮೊದಲು ಮಂದಿರದಲ್ಲಿ ಭಜನೆಯು ನಡೆಯಿತು. ಆನಂತರ ಶ್ರೀ ಬಾಲಕೃಷ್ಣ ಸಂಬ್ಯಾರ ಎಡ್ವೋಕೇಟ್ ಇವರ ಮನೆಯ ಮುಂದಿನ ವಿಶಾಲವಾದ ಚಪ್ಪರದಲ್ಲಿ ಮಹೋತ್ಸವದ ಮಹಾ ಸಭೆಯು ಶ್ರೀ ಸುರತ್ಕಲ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಯವರಾದ ಶ್ರೀ. ಎಂ. ವೆಂಕಟೇಶ ಪೈಯವರು ವಂದಿಸಿದ ಮೇಲೆ ಮಹನೀಯರ ಭಾಷಣಗಳಾದವು. ಬೋರ್ಡ್ ಹೈಸ್ಕೂಲಿನ ಹೆಡ್ಮಾಸ್ಟರರಾದ ಶ್ರೀಮಾನ್ ನಂಬಿಯಾರ ಬಿ. ಎ. ಎಲ್. ಟಿ. ಇವರು 'ನಿತ್ಯಜೀವನದಲ್ಲಿ ಭಕ್ತಿಯ ಸ್ಥಾನ' ಎಂಬ ವಿಷಯದಲ್ಲಿ ಬೋಧಪ್ರದವಾದ ಭಾಷಣವಿತ್ತರು. ಸಬ್ ಪೋಸ್ಟ್‌ಮಾಸ್ತರ್ ಶ್ರೀ ಜೆ. ಆರ್. ಶೆಣೈಯವರು ರಾಮಾಯಣವನ್ನು ದೇಶ ಮುಂದಿರಕ್ಕೆ ಅನ್ವಯಿಸಿಕೊಂಡು 'ನಯ ಮಂದಿರ' ಎಂಬ ಕಥಾ… ಭಾಷೆಯಲ್ಲಿ ಮನೋಜ್ಞವಾಗಿ ಭಾಷಣಮಾಡಿದರು. ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು 'ಲೀಲೆ' ಎಂಬ ವಿಷಯವನ್ನಿತ್ತು ಮಾತಾಡಿ ಸ್ವರಚಿತ 'ಲೀಲೆ' ಎಂಬ ಪುಸ್ತಕದ ಸ್ವಾರಸ್ಯವನ್ನು ಸರಸವಾಗಿ ವಿವರಿಸಿದರು. ಕೊನೆಗೆ ಶ್ರೀ ಕುರಿಯ ಶಂಕರ ಭಟ್ಟರು 'ಮನುಷ್ಯ ಜೀವನದ ಸಂವಿಧಾನ' ಎಂಬ ವಿಷಯದಲ್ಲಿ ಪ್ರೌಢವಾಗಿ ಭಾಷಣವಿತ್ತರು. ತರುವಾಯ ಅಧ್ಯಕ್ಷರು ಸಮಯೋಚಿತವಾದ ಆವೋಘವಾದ ಭಾಷಣವನ್ನಿತ್ತರು. ಕಟ್ಟಕಡೆಗೆ ಶ್ರೀ ಎಂ ಮುಂಡರಂಗ ಶೆಣೈಗಳು ಧನ್ಯವಾದಗಳನ್ನರ್ಪಿಸಿದರು.

ನವಯುಗಕ್ಕೆ ಏಜಂಟರು ಬೇಕು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ವ್ಯಾಪಾರ ಸ್ಥಳದ ಏಜಂಟರು - ಶ್ರೀ ಕೆ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,

President & Manager. ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲುಮಿಶ್ರಿ, ಕಲ್ಕದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ 2-8-0.

ಕಸ್ತೂರಿಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ರಕ್ಷಣೆ. ಬಾಟ್ಲಿ ೧ರ ರೂ 1-8-0.

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— ಯಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ಸಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, MANGALORE.

೧೯೩೯ ಫೆಬ್ರವರಿಯಲ್ಲಿ ಪ್ರಕಟವಾಗಲಿರುವ ಎರಡು ಹೊಸ ಪುಸ್ತಕಗಳು

ಕರಿ ನೀರು ದೇ. ಭ. ಬ್ಯಾರಿಸ್ಟರ ಸಾವರಕರರಿಂದ ಬರೆಯಲ್ಪಟ್ಟ ರಮ್ಯ-ಭೀಷಣ ರೋಮಾಂಚಕರ ಪುಸ್ತಕದ ಕನ್ನಡ ಅನುವಾದ. ಸುಮಾರು ೩೦೦ ಪುಟ, ನುಣುಪು ಕಾಗದ. ಬೆಲೆ ಎರಡು ರೂಪಾಯಿ

ಪನ್ನೆ ಮನೋಹರವಾದ ಐತಿಹಾಸಿಕ ನಾಟಕ ಸುಮಾರು ೮೦ ಪುಟ, ಬೆಲೆ ೬ ಆಣೆ ಶ್ರೀ. ಶೇ. ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ ಸೌಲಭ್ಯ. ಗ್ರಾಹಕರು ತ್ವರೆಮಾಡಿರಿ

ವಿಳಾಸ:—ಶ್ರೀ ಶೇಷಾಚಲ ಪ್ರೆಸ್, ಪೊ ಜನಂವಪನ (ಹಾವೇರಿ) ಧಾರವಾಡ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩-೮-೦	೧೦೦ ಮಾತ್ರೆಗಳಿಗೆ ರೂ. ೨-೮-೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್ ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತವೆ [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವುದು ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿ ರಾವ್,

ಸೋದೆ ಮಠದ ಲೇನು — — — ಉಡುಪಿ, ದ. ಕ.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

॥ ಶ್ರೀ ॥

ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ

ಃ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ ಃ

ಅತ್ಯಪೂರ್ವ ಸಂದರ್ಭ ! ಅಪೂರ್ವ ರಿಯಾಯತಿ !!

ತಾ. 3-2-1939ರಿಂದ 5-3-'39ರ ವರೆಗೆ ಮಾತ್ರ.

ಸೇಕಡಾ ೩೩, ರಿಯಾಯಿತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ ರಿಟರ್ನ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇದೇ ಬರುವ ತಾ. 17-2-39ರಲ್ಲು ಶ್ರೀಧರ್ಮಸ್ಥಳದಲ್ಲಿ ಶ್ರೀಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀಮಹಾಶಿವರಾತ್ರಿ ಮಹೋತ್ಸವಕ್ಕೆ ಹೋಗತಕ್ಕ ಯಾವತ್ತು ಯಾತ್ರಾರ್ಥಿಗಳಿಗೆ ಸಹ ಲೈನುಗಳ ಯಾವತ್ತು ಸ್ಟೇಶನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓ ರಿಯಾಯಿತಿಯಿಂದ ರಿಟರ್ನ ಟಿಕೇಟುಗಳನ್ನು ಕೊಡುವ ಏರ್ಪಾಟು ಮಾಡಲಾಗಿದೆ.

N B ಪ್ರಯಾಣವು ಮೋಟರು ಸೂಚಿಸಿದ ತಾರೀಖಿನೊಳಗೆ ಮುಗಿಯತಕ್ಕದಾಗಿದೆ

ಇಂತಹ ಅಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ.

JOINT MANAGERS

The Joint Booking Office, KODIALBAIL, Mangalore

The Combined Booking Agency, MANGALORE

Supply Agency Limited.

(BANKERS)

UDIPI

Directors —

1. Sri Mivala Narasimhachar (Chairman)
2. Dr T Madhava Pai
3. Dr K L Aithala
4. Sri B Krishnaya Hegde
5. Sri A B Krishnaraj
6. Sri S U Paniady, (Managing Director)

Authorised Capital	Rs	1,00 000
Subscribed & Paid up	Rs	30,760
Reserves	Rs	1,070

RATE OF INTEREST FOR FIXED DEPOSITS

3 to 6 Months	4	p c
7 to 11 „	5	„
12 to 18 „	6%	„

Special rates for long term deposits will be quoted on application.

WRITE FOR PARTICULARS TO

THE MANAGING DIRECTOR.

General Supplies Limited.

Printers Publishers General Merchants etc

UDIPI

Directors

1. Dr K L Aithala (Chairman)
2. Sri R S Shenoy,
3. Sri K Honnaya Shetty
4. Sri N Gururaj Udpa,
5. Sri S U Paniady (*Managing Director*)

All sorts of Printing works, wholesale & retail sales, every Agency business is undertaken in following institutions.

Thulunad Press,
Manipal Power Press,
Sri Bharata Vastu Mandira,
Thulunad Stationery Mart.

Write for full Particulars to

THE MANAGING DIRECTOR,

THE MANAGER OF ABOVE INSTITUTIONS.

NAVAYUGA

ನವಯುಗ

THE

CANARA INDUSTRIAL & BANKING SYNDICATE LTD.

ESTD.] (Incorporated in British India. Liability of Share-holders Limited) 1925

HEAD OFFICE: UDIPI (S. INDIA)

ABRIDGED BALANCE SHEET

as at 31st December, 1938

		Rs.	As.	Ps.
Paid-up Capital		3,87,960	0	0
Reserves		1,99,569	15	7
Deposits		24,87,214	12	6
Due to Bankers		10,01,200	7	0
Bills for Collection		1,35,603	0	6
Drafts issued but not presented		1,02,330	14	0
Sundry Liabilities (Including unclaimed dividends, rebate interest payable on deposits, outstanding charges, etc.)		60,236	3	10
Profit and Loss Account				
Amount brought forward from last year's account	3,468 4 8			
Current year's profit	49,254 3 5			
		52,722	8	1
	Total Rs.	44,86,837	13	6

	Rs.	As.	Ps.
Loans, cash credits and other advances			
(a) Debts considered good in respect of which the Bank is fully secured	17,03,331	14	11
(b) Debts considered good for which the Bank holds Joint & several Pronotes, bills discounted and other agreements	10,33,295	7	11
(c) Doubtful debts	47,848	12	6
Investments on:			
British India & Mysore Govt. Loans and other Gilt-edged Securities	9,35,548	5	7
Shares of other Companies	81,879	2	0
Landed properties	44,150	7	0
Sundry Assets (including accrued interest etc.,) Prepaid expenses and Branch adjustments	1,27,936	5	7
Office premises, safes & furniture and Library	9,023	0	0
Bills for collection	1,35,603	0	6
Cash in hand and with Bankers at call	3,17,611	5	6
Total Rs.	44,86,837	13	6

"MUKUND NIVAS", UDIPI.
6—2—1939.

T. M. A. PAI,
Chairman.



The Canara Industrial & Banking Syndicate, Limited.

(INCORPORATED IN BRITISH INDIA)

ESTD. 1925

Head Office:- **UDIPI, S. India.**

MEMBER:

RESERVE BANK OF INDIA, BANKERS' CLEARING HOUSE, BOMBAY.

SEASON DEPOSITS MATURING BETWEEN 30th JUNE AND 15th JULY 1939 ARE ACCEPTED at 3½ per cent per annum.

Banking business of every description transacted on sound lins e.

Particulars on application to any of our **35 Branches.**

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು
ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ,

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅನ್ಯತ
ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘ್ನಾಂತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: **MANGALORE**

BRANCHES: **Udipi, Coondapoor, Kaup & Karkal**

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] **H. O. UDIPI.** [1920

BRANCHES:

MANGALORE, KATAPADI, and KANHANGAD.

(UNDER SECTION 37)

NOTICE is hereby given that the Register of members and of transfers of shares of the above Bank will be closed from Monday 13th February 1939 to Wednesday 1st March 1939 both days inclusive.

Office of the Bank, Udipi, 28th January 1939.

P. Lakshman Nayak
Secretary & Treasurer.

ESTD 1921
FOUNDER
Sri. A B SHETTY, M.L.A.
Parliamentary Secretary, Govt of Madras
ಸಂಸ್ಥಾಪಕರ :
ಶ್ರೀ. ಎ. ಬಿ ಶೆಟ್ಟಿ, ಎಂ ಎಲ್ ಎ
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೨೩ | ಉಡುಪಿ, ಗುರುವಾರ ೯-೨-೧೯೩೯ Udipi, Thursday 9—2—1939 | Vol. XVIII No. 23

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ

ಲಂಡನಿನಲ್ಲಿ ಬೋಂಬ್ ಸ್ಫೋಟ

ಕೆಲವು ದಿವಸಗಳ ಮೊದಲು ಇಂಗ್ಲೆಂಡಿನ ಕೆಲವು ಕಡೆಗಳಲ್ಲಿ ಬೋಂಬುಗಳು ಸ್ಫೋಟವಾಗಿರುವುದಷ್ಟೆ. ಇದೇ ತಾ. 3ರಲ್ಲಿ ಲಂಡನಿನ ಟೊಟನ್ ಹೇಮ್ ಕೋರ್ಟುರಸ್ತೆಯ ಸುರಂಗ ರೈಲ್ವೆ ಸ್ಟೇಶನಿನಲ್ಲಿ ಬೋಂಬೊಂದು ಸ್ಫೋಟಿಸಿ 5 ಜನರಿಗೆ ಘಾಯವಾಗಿರುವುದು ಈ ಅತ್ಯಾಚಾರಗಳನ್ನು ಹಿಡಿಯಲು ಸ್ಕೋಟ್‌ಲೆಂಡ್ ಯಾರ್ಡಿನ ಪೋಲೀಸರು ಬಹಳವಾಗಿ ಪ್ರಯತ್ನಿಸುತ್ತಿರುವರು. ಈ ಅತ್ಯಾಚಾರಗಳಿಗೆ ಐರ್ಲೆಂಡಿನ ರಿಪಬ್ಲಿಕನ್ ಸೇನೆಯವರು ಕಾರಣವೆಂದು ತಿಳಿದುಬಂದಿದೆ. ಐರ್ಲೆಂಡಿನಲ್ಲಿ ಬ್ರಿಟಿಷ್ ಸೈನ್ಯವು ಗಲಾಟೆ ಮತ್ತು ಅಂತಃಕಲಹಕ್ಕೆ ಕಾರಣವಿರುವುದರಿಂದ ಸದ್ರಿ ಸೇನೆಯನ್ನು 4 ದಿವಸಗಳಲ್ಲಿ ಹಿಂದಿ ಕರೆಯಬೇಕು ಇಲ್ಲವಾದರೆ ಇಂಗ್ಲೆಂಡಿನಲ್ಲಿ ತಾವು ಬೇರೆ ಬೇರೆ ರೀತಿಯ ಹಾನಿಯನ್ನುಂಟುಮಾಡಬೇಕಾಗುವುದೆಂದು ರಿಪಬ್ಲಿಕನ್ ಸೇನೆಯವರು ಎಚ್ಚರಿಸಿ ಜನವರಿ ತಾ 16ರಲ್ಲಿ ಪತ್ರಬರೆದಿರುವರಾಗಿ ತಿಳಿದುಬಂದಿದೆ.

ಬಂಡಾಯಗಾರರ ವಿಮಾನ ಧಾಳಿ

ಇದೇ ತಾ. 3ರಲ್ಲಿ ಫಿಗ್ಯುರಾಸ್ ಎಂಬ ಸ್ಥಳದ ಮೇಲೆ 6ಸಲ ವಿಮಾನಧಾಳಿ ನಡೆದು ಸುಮಾರು 500 ಮಂದಿ ಕೊಲ್ಲಲ್ಪಟ್ಟಿರುವರು. ತಾ 4ರವರೆಗೆ 61,500 ಮಂದಿ ನಿರಾಶ್ರಿತ ಸ್ಪೆನಿಶ್ ಸ್ತ್ರೀಯರು, ಮಕ್ಕಳು ಮತ್ತು ಮುದುಕರು ಸ್ಪೈನಿನ ಎಲ್ಲೆಯಿಂದ ಫ್ರಾನ್ಸಿನ ಬೇರೆ ಬೇರೆ ಕಡೆಗಳಿಗೋಡಿಹೋಗಿರುವರು. ಬಂಡಾಯಗಾರರು ತಮ್ಮ ಧಾಳಿಯನ್ನು ಮುನ್ನಡೆಸಿ ಹೊಸ ಹೊಸ ಪ್ರದೇಶಗಳನ್ನು ಗೆಲ್ಲುತ್ತಿರುವರು ಸ್ಪೆನಿಶ್ ಸರಕಾರದ ಪ್ರಧಾನ ಮಂತ್ರಿಗಳಾದ ನೆಗ್ರಿನರು, ಇನ್ನೂ ತಾವು ಜೈಸುವೆವೆಂಬ ವಿಶ್ವಾಸದಿಂದಿರುವರು ಅವರಿಗೆ ಹೆಚ್ಚಿನ ಯುದ್ಧೋಪಕರಣಗಳು ಈಗ ದೊರೆತಿರುವುದಂತೆ

ಸಮಾಚಾರ ಸಂಗ್ರಹ

ಅಖಿಲ ಮೈಸೂರು ಕಾಂಗ್ರೆಸು

ಶ್ರೀ ಭೂಪಾಲಮ್ ಚಂದ್ರ ಶೇಖರ ಚೆಟ್ಟಿಯವರು ಮೈಸೂರು ಸ್ಟೇಟ್ ಕಾಂಗ್ರೆಸಿನ ತನ್ನ ಮೆಂಬರಿಕೆಗೆ ರಾಜಿನಾಮೆ ಕೊಟ್ಟು ಮೈಸೂರು ಸುಧಾರಣಾ ಕಮಿಟಿಯ ಮೆಂಬರಿಕೆಗೆ ಮಾತ್ರ ರಾಜಿನಾಮೆ ಕೊಟ್ಟಿರುವುದಿಲ್ಲವಷ್ಟೆ ಮೈಸೂರು ಸ್ಟೇಟ ಕಾಂಗ್ರೆಸಿನವರು ಅವರು ರಾಜಿನಾಮೆ ಮಾಡಬೇಕೆಂದು ನಿರ್ಧರಿಸಿ ಅವರ ಸ್ಥಾನದಲ್ಲಿ ಶ್ರೀ ಸಿದ್ಧಯ್ಯನವರನ್ನು ಸುಧಾರಣಾ ಕಮಿಟಿಯ ಮೆಂಬರರಾಗಿ ಆರಿಸಿರುವರು. ಆದರೆ ಶ್ರೀ ಚಂದ್ರಶೇಖರ ಚೆಟ್ಟಿಯವರು ರಾಜಿನಾಮೆ ಕೊಡಲಿಲ್ಲವಾದುದರಿಂದ ಸದ್ರಿ ವಿಷಯವನ್ನು ಅಖಿಲ ಮೈಸೂರು ಕಾಂಗ್ರೆಸಿನ ಮುಂದಿಡಲಾಗಿದೆ, ಮೈಸೂರು ಪಟ್ಟಣದಲ್ಲಿನ ಹೆಮಿಲ್ಟನ್ ಬಿಲ್ಡಿಂಗಿನಿಂದ ಹೆಮಿಲ್ಟನ್ ಎಂಬ ಹೆಸರನ್ನು ತೆಗೆದು ಹಾಕಬೇಕೆಂದು ನಡೆಸುವ ಸತ್ಯಾಗ್ರಹದಲ್ಲಿ ವೈಯಕ್ತಿಕವಾಗಿ ಸ್ಟೇಟ್ ಕಾಂಗ್ರೆಸಿನವರು ಭಾಗಿಯಾಗಬಹುದೆಂದು ವರ್ಕಿಂಗ್ ಕಮಿಟಿಯವರು ನಿರ್ಧರಿಸಿರುವರು. ಅಖಿಲ ಮೈಸೂರು ಕಾಂಗ್ರೆಸ್ ಕಮಿಟಿಯ ವಿಶೇಷ ಅಧಿವೇಶನವು ಇದೇ ತಾ. 23ರಲ್ಲಿ ಬೆಂಗಳೂರಲ್ಲಿ ನಡೆಯಲಿದೆ. ಎರಡನೇ ಮೈಸೂರು ಕಾಂಗ್ರೆಸ್ ಕನ್ವೆಶನನ್ನು ವಿದುರಾಶ್ವತ್ಥದಲ್ಲಿ ಎಪ್ರಿಲ್ ತಾ. 15ರಲ್ಲಿ ಜರಗಿಸಲಾಗುವುದು

ಶ್ರೀಮತಿ ಕಸ್ತೂರಿ ಬಾಯಿಯವರ ದಸ್ತಗಿರಿ

ಇದೇ ತಾ. 3ರಲ್ಲಿ ಶ್ರೀಮತಿ ಕಸ್ತೂರಿ ಬಾಯಿ ಗಾಂಧಿಯವರೂ ಸರ್ದಾರ್ ವಲ್ಲಭಾಯಿಯವರ ಪುತ್ರಿ ಶ್ರೀಮತಿ ಮಣಿಬೆನರೂ ರಾಜಕೋಟೆಯ ಸತ್ಯಾಗ್ರಹದಲ್ಲಿ ಭಾಗವಹಿಸಲು ಟ್ರೈನಿನಲ್ಲಿ ಬಂದು ಸ್ಟೇಶನಿನಲ್ಲಿ ಇಳಿದೊಡನೆಯೇ ಪೋಲೀಸ್ ಸುಪರಿಂಡೆಂಟರು ಹೋಗಿ ಅವರನ್ನು ದಸ್ತಗಿರಿ ಮಾಡಿ ಮೋಟರ್ ಕಾರಿನಲ್ಲಿ ಹಾಕಿ ಒಯ್ದರು ರೈಲ್ವೆ ಸ್ಟೇಶನಿನ ಹೊರಗೆ ಸುಮಾರು 30,000 ಜನರು ಶ್ರೀಮತಿ ಕಸ್ತೂರಿಬಾಯಿಯವರನ್ನು ಸ್ವಾಗತೀಕರಿಸಲು ನೆರೆದಿದ್ದು ಅವರು ಕೈದುಮಾಡಲ್ಪಟ್ಟಾಗ, ಮಹಾತ್ಮ ಗಾಂಧಿ ಕಿ ಜೈ ಎಂದು ಜಯಕಾರವೆಬ್ಬಿಸಿದರು. ಆ ವೇಳೆ ಮೆರವಣಿಗೆಯಿಂದ ಹೋಗಿ ಸಭೆನಡಿಸಲೆತ್ನಿಸಿ ಒಟ್ಟು 26 ಮಂದಿ ಕೈದುಮಾಡಲ್ಪಟ್ಟರು. ಶ್ರೀಮತಿ ಕಸ್ತೂರಿಬಾಯಿಯವರು ರಾಜಕೋಟೆಗೆ ಹೋಗುವ ಮೊದಲು ಅಹಮದಾಬಾದ್ ಮತ್ತು ಬಾರ್ಡೋಲಿಗಳಲ್ಲಿ ಸಾರ್ವಜನಿಕ ಭಾಷಣಮಾಡಿದರು ಮಹಾತ್ಮ ಗಾಂಧಿಯವರು ಹುಟ್ಟಿ ಮೆಟ್ರಿಕ್ಯುಲೇಶನಿನ ವರೆಗೆ ವಿದ್ಯೆ ಪಡೆದುದು ರಾಜಕೋಟೆಯಲ್ಲಿ. ಅವರ ತಂದೆಯು 20ವರ್ಷಗಳ ವರೆಗೆ ಅಲ್ಲಿಯ ದಿವಾನರಾಗಿದ್ದರು. ಈಗಣ ಠಾಕೂರು ಸಾಹೇಬರಿಗೆ ಮದುವೆಯಾದಾಗ ತಿಲಕ ಸಂಸ್ಕಾರ ನಡೆದುದು ಗಾಂಧಿಯವರ ಮನೆಯಲ್ಲಿ

ಡೇರ ಇಸ್ಮಯೀಲ್ ಖಾನಿನಲ್ಲಿ ಗಲಾಟೆ

ಇದೇ ತಾ. 2ರಲ್ಲಿ ವಾಯುವ್ಯ ಗಡಿನಾಡು ಪ್ರಾಂತದ ಡೇರ್ ಇಸ್ಮಯೀಲ್ ಖಾನ್ ಎಂಬಲ್ಲಿ ಇಡ್ ಹಬ್ಬದ ನಿಮಿತ್ತ

ಗಡಿನಾಡಿನ ಪ್ರಧಾನ ಮಂತ್ರಿಗಳಾದ ಡಾಕ್ಟರ್ ಖಾನ್‌ಸಾಹೇಬರು

ಮುಸಲ್ಮಾನರು ಗೋವಧೆನಡಿಸಲೆಂದು ಮೆರವಣಿಗೆಯಲ್ಲಿ ಹೋಗುವಾಗ ಹಿಂದುಗಳಿಗೂ ಅವರಿಗೂ ಜಗಳವಾಗಿ 10ಮಂದಿ ಕೊಲ್ಲಲ್ಪಟ್ಟು 20ಮಂದಿ ಗಾಯಗೊಂಡಿರುವರು ಇವರಲ್ಲಿ ಹೆಚ್ಚಿನವರು ಹಿಂದುಗಳು. ಸಮಯೋಚಿತವಾಗಿ ಗಲಾಟೆಯಾಗುವುದನ್ನು ಪೋಲೀಸರು ಸಕಾಲದಲ್ಲಿ ಬಂದು ತಡೆಗಟ್ಟಿರುವರು. ಡೇರ ಇಸ್ಮಯೀಲ್ ಖಾನಿನಲ್ಲಿ ಅಂಗಡಿಗಳಿಗೆ ಬೆಂಕಿ ಕೊಡಲ್ಪಟ್ಟು 110 ಅಂಗಡಿಗಳು ಸುಟ್ಟುಹೋಗಿರುವವು, 8 ಮಂದಿ ಸುಟ್ಟು ಹೋಗಿರುವರು. ಪ್ರಧಾನ ಮಂತ್ರಿಗಳಾದ ಡಾಕ್ಟರ್ ಖಾನ್ ಸಾಹೇಬರು, ಅರ್ಥ ಸಚಿವರಾದ ಶ್ರೀ ಭಂಜುರಾಮ್ ಗಾಂಧಿ, ಕೈಗಾರಿಕೆ ಖಾತೆಯ ಮಂತ್ರಿ ಖಾನ ಮಹಮ್ಮದ್ ಅಬ್ಬಾಸ್ ಖಾನ್ ಪೋಲೀಸ್ ಇನ್‌ಸ್ಪೆಕ್ಟರ್ ಜನರಲರೊಂದಿಗೆ ವಿಮಾನ ಮೂಲಕ ಡೇರ ಇಸ್ಮಯೀಲ ಖಾನಿಗೆ ಹಾರಿ ಗಲಾಟೆಯ ಕಾರಣದ ಕುರಿತು ತನಿಖೆನಡಿಸುತ್ತಿರುವರು

ಸಾಗರದ ಬಳಿ ಮೋಟರ್ ಅಪಘಾತ

ಇದೇ ತಾ 1ನೇ ಬೆಳಿಗೆ ಸಾಗರದ

THE UDIPI BANK LTD.

ನಿರಖು ಠೇವಣಾತಿ (ಡಿಪೋಜಿಟು)ಗಳು
ಸಾ. ಶೇ. 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ

ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100/-ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್, ಉಡುಪಿ

The Canara Industrial & Banking Syndicate, Limited.

(INCORPORATED IN BRITISH INDIA)

ESTD. 1925

Head Office:- **UDIPI, S. India.**

MEMBER:

RESERVE BANK OF INDIA, BANKERS' CLEARING HOUSE, BOMBAY.

SEASON DEPOSITS MATURING BETWEEN 30th JUNE AND 15th JULY 1939 ARE ACCEPTED at 3½ per cent per annum.

Banking business of every description transacted on sound lins e.

Particulars on application to any of our 35 Branches.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರಿಯ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಆರಿಷ್ಟಾಸವಗಳು.

ಅಸನ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಶಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘ್ನಾಶಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: **MANGALORE**

BRANCHES: **Udipi, Coondapoor, Kaup & Karkal**

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.

6 Months / 9 months Fixed Deposits at 3½ p. c. per annum.

One year Fixed Deposits at 4 p. c. per annum.

Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] H. O. UDIPI. [1920

BRANCHES.

MANGALORE, KATAPADI, and KANHANGAD.

(UNDER SECTION 37)

NOTICE is hereby given that the Register of members and of transfers of shares of the above Bank will be closed from Monday 13th February 1939 to Wednesday 1st March 1939 both days inclusive.

Office of the Bank,
Udipi, [illegible]th January 1939.

P. Lakshman Nayak
Secretary & Treasurer.

ESTD. 1921

FOUNDER

Sri. A B SHETTY, M.L.A.

Parliamentary Secretary Govt of Madras

ಸಂಸ್ಥಾಪಕರು:

ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ

ಸಂಪಾದಕರು:

ಕೆ. ಕೆ. ಶೆಟ್ಟಿ.

ನವಯುಗ

NAVAYUGA WEEKLY UDIPI

ಸಂಪುಟ ೧೮ | ಸಂಚಿಕೆ ೨೩

ಉಡುಪಿ, ಗುರುವಾರ ೯-೨-೧೯೩೯

Udipi, Thursday 9—2—1939

Vol. XVIII No. 23

ಸ್ಥಾಪನೆ: ೧೯೨೧

ಚಂದಾ ವಿವರ:

೧ ವರ್ಷಕ್ಕೆ ರೂ. ೩—೪—೦

೬ ತಿಂಗಳಿಗೆ ರೂ. ೧—೧೨—೦.

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ.

ಸಮಾಚಾರ ಸಂಗ್ರಹ

ಲಂಡನಿನಲ್ಲಿ ಬೋಂಬ್ ಸ್ಫೋಟ

ಕೆಲವು ದಿವಸಗಳ ಮೊದಲು ಇಂಗ್ಲೆಂಡಿನ ಕೆಲವು ಕಡೆಗಳಲ್ಲಿ ಬೋಂಬುಗಳು ಸ್ಫೋಟವಾಗಿರುವುವಷ್ಟೆ. ಇದೇ ತಾ. 3ರಲ್ಲು ಲಂಡನಿನ ಟೊಟನ್ ಹೇಮ್ ಕೋರ್ಟುರಸ್ತೆಯ ಸುರಂಗ ರೈಲ್ವೆಸ್ಟೇಶನಿನಲ್ಲಿ ಬೋಂಬೊಂದು ಸ್ಫುಟಿಸಿ 5 ಜನರಿಗೆ ಜಖಮವಾಗಿರುವುದು ಈ ಅತ್ಯಾಚಾರಗಳನ್ನು ಹಿಡಿಯಲು ಸ್ಕೋಟ್ ಲೆಂಡ್ ಯಾರ್ಡಿನ ಪೋಲೀಸರು ಬಹಳವಾಗ ಪ್ರಯತ್ನಿಸುತ್ತಿರುವರು. ಈ ಅತ್ಯಾಚಾರಗಳಿಗೆ ಅಯರ್ಲೆಂಡಿನ ರಿಪಬ್ಲಿಕನ್ ಸೇನೆಯವರು ಕಾರಣವೆಂದು ತಿಳಿದುಬಂದಿದೆ. ಅಯರ್ಲೆಂಡಿನಲ್ಲಿ ಬ್ರಿಟಿಷ್ ಸೈನ್ಯವು ಗಲಾಟೆ ಮತ್ತು ಅಂತಃಕಲಹಕ್ಕೆ ಕಾರಣವಿರುವುದರಿಂದ ಸದ್ರಿ ಸೇನೆಯನ್ನು 4 ದಿವಸಗಳಲ್ಲಿ ಹಿಂದೆ ಕರೆಯಬೇಕು ಇಲ್ಲವಾದರೆ ಇಂಗ್ಲೆಂಡಿನಲ್ಲಿ ತಾವು ಬೇರೆ ಬೇರೆ ರೀತಿಯ ಹಾನಿಯನ್ನುಂಟುಮಾಡಬೇಕಾಗುವುದೆಂದು ರಿಪಬ್ಲಿಕನ್ ಸೇನೆಯವರು ಎಚ್ಚರಿಸಿ ಜನವರಿ ತಾ. 16ರಲ್ಲು ಪತ್ರಬರೆದಿರುವರಾಗಿ ತಿಳಿದುಬಂದಿದೆ.

ಬಂಡಾಯಗಾರರ ವಿಮಾನ ಧಾಳಿ

ಇದೇ ತಾ. 3ರಲ್ಲು ಫಿಗ್ಯರಾಸ್ ಎಂಬ ಸ್ಥಳದ ಮೇಲೆ 6ಸಲ ವಿಮಾನಧಾಳಿ ನಡಿಸಿ ಸುಮಾರು 500 ಮಂದಿ ಕೊಲ್ಲಲ್ಪಟ್ಟಿರುವರು. ತಾ 4ರವರೆಗೆ 61,500 ಮಂದಿ ನಿರಾಶ್ರಿತ ಸ್ಪೆನಿಶ್ ಸ್ತ್ರೀಯರು, ಮಕ್ಕಳು ಮತ್ತು ಮುದುಕರು ಸ್ಪೈನಿನ ಎಲ್ಲೆಯಿಂದ ಫ್ರಾನ್ಸಿನ ಬೇರೆ ಬೇರೆ ಕಡೆಗಳಿಗೊಯ್ಯಲ್ಪಟ್ಟಿರುವರು ಬಂಡಾಯಗಾರರು ತಮ್ಮ ಧಾಳಿಯನ್ನು ಮುನ್ನಡೆಸಿ ಹೊಸ ಹೊಸ ಪ್ರದೇಶಗಳನ್ನು ಗೆಲ್ಲುತ್ತಿರುವರು ಸ್ಪೆನಿಶ್ ಸರಕಾರದ ಪ್ರಧಾನ ಮಂತ್ರಿಗಳಾದ ನೆಗ್ರಿಸರು, ಇನ್ನೂ ತಾವು ಜೈಸುವೆನೆಂಬ ವಿಶ್ವಾಸದಿಂದಿರುವರು ಅವರಿಗೆ ಹೆಚ್ಚಿನ ಯುದ್ಧೋಪಕರಣಗಳು ಈಗ ದೊರೆತಿರುವುದಂತೆ

ಅಖಿಲ ಮೈಸೂರು ಕಾಂಗ್ರೆಸು

ಶ್ರೀ ಭೂಪಾಲಮ್ ಚಂದ್ರ ಶೇಖರ ಚೆಟ್ಟಿಯವರು ಮೈಸೂರು ಸ್ಟೇಟ್ ಕಾಂಗ್ರೆಸಿನ ತಮ್ಮ ಮೆಂಬರಿಕೆಗೆ ರಾಜಿನಾಮೆ ಕೊಟ್ಟು ಮೈಸೂರು ಸುಧಾರಣಾ ಕಮಿಟಿಯ ಮೆಂಬರಿಂಗ ಮಾತ್ರ ರಾಜಿನಮೆ ಕೊಟ್ಟಿರುವುದಿಲ್ಲವಷ್ಟೆ. ಮೈಸೂರು ಸ್ಟೇಟ್ ಕಾಂಗ್ರೆಸಿನವರು ಅವರು ರಾಜಿನಾಮೆ ಮಾಡಬೇಕೆಂದು ನಿರ್ಧರಿಸಿ ಅವರ ಸ್ಥಾನದಲ್ಲಿ ಶ್ರೀಸಿದ್ಧಯ್ಯನವರನ್ನು ಸುಧಾರಣಾ ಕಮಿಟಿಯ ಮೆಂಬರರಾಗಿ ಆರಿಸಿರುವರು. ಆದರೆ ಶ್ರೀ ಚಂದ್ರಶೇಖರ ಚೆಟ್ಟಿಯವರು ರಾಜಿನಾಮೆಕೊಡಲಿಲ್ಲದುದರಿಂದ ಸದ್ರಿ ವಿಷಯವನ್ನು ಅಖಿಲ ಮೈಸೂರು ಕಾಂಗ್ರೆಸಿನ ಮುಂದಿಡಲಾಗಿದ, ಮೈಸೂರು ಪಟ್ಟಣದಲ್ಲಿನ ಹೆಮಿಲ್ಟನ್ ಬಿಲ್ಡಿಂಗಿನಿಂದ ಹೆಮಿಲ್ಟನ್ ಎಂಬ ಹೆಸರನ್ನು ತೆಗೆದು ಹಾಕಬೇಕೆಂದು ನಡೆದಿರುವ ಸತ್ಯಾಗ್ರಹದಲ್ಲ ವ್ಯಕ್ತಿಕವಾಗಿ ಸ್ಟೇಟ್ ಕಾಂಗ್ರೆಸಿನವರು ಭಾಗಿಯಾಗಬಹುದೆಂದು ವರ್ಕಿಂಗ್ ಕಮಿಟಿಯವರು ನಿರ್ಧರಿಸಿರುವರು. ಅಖಿಲ ಮೈಸೂರು ಕಾಂಗ್ರೆಸ್ ಕಮಿಟಿಯ ವಿಶೇಷ ಅಧಿವೇಶನವು ಇದೇ ತಾ. 23ರಲ್ಲು ಬೆಂಗಳೂರಲ್ಲ ನಡೆಯಲಿದೆ. ಎರಡನೇ ಮೈಸೂರು ಕಾಂಗ್ರೆಸ್ ಕನ್ವೆಶನನ್ನು ವಿದುರಾಶ್ವತ್ಥದಲ್ಲಿ ಎಪ್ರಿಲ್ ತಾ. 15ರಲ್ಲಿ ಜರಗಿಸಲಾಗುವುದು.

ಶ್ರೀಮತಿ ಕಸ್ತೂರಿ ಬಾಯಿಯವರ ದಸ್ತಗಿರಿ

ಇದೇ ತಾ. 3ರಲ್ಲು ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರೂ ಸರ್ದಾರ್ ವಲ್ಲಭಾಯಿಯವರ ಪುತ್ರಿ ಶ್ರೀಮತಿ ಮಣಿಬೆನರೂ ರಾಜಕೋಟೆಯ ಸತ್ಯಾಗ್ರಹದಲ್ಲಿ ಭಾಗವಹಿಸಲು ಟ್ರೈನಿನಲ್ಲಿ ಬಂದು ಸ್ಟೇಶನಿನಲ್ಲಿ ಇಳಿಮೊಡನೆಯೇ ಪೋಲೀಸ್ ಸುಪರಿಂಡೆಂಟರು ಹೋಗಿ ಅವರನ್ನು ದಸ್ತಗಿರಿ ಮಾಡಿ ಮೋಟರ್ ಕಾರಿನಲ್ಲಿ ಹಾಕಿ ಒಯ್ದರು ರೈಲ್ವೇಸ್ಟೇಶನಿನ ಹೊರಗೆ ಸುಮಾರು 30,000 ಜನರು ಶ್ರೀಮತಿ ಕಸ್ತೂರಿಬಾಯಿಯವರನ್ನು ಸ್ವಾಗತೀಕರಿಸಲು ನೆರೆದಿದ್ದು ಅವರು ಕೈದುಮಾಡಲ್ಪಟ್ಟಾಗ, ಮಹಾತ್ಮಾ ಗಾಂಧಿ ಕಿ ಜೈ ಎಂದು ಜಯಕಾರವೆಬ್ಬಿಸಿದರು. ಆ ವೇಳೆ ಮೆರವಣಿಗೆಯಿಂದ ಹೋಗಿ ಸಭೆನಡಿಸಲೆತ್ನಿಸಿ ಒಟ್ಟು 26ಮಂದಿ ಕೈದುಮಾಡಲ್ಪಟ್ಟರು. ಶ್ರೀಮತಿ ಕಸ್ತೂರಿಬಾಯಿಯವರು ರಾಜಕೋಟೆಗೆ ಹೋಗುವ ಮೊದಲು ಅಹಮದಾಬಾದ್ ಮತ್ತು ಬಾರ್ಡೋಲಿಗಳಲ್ಲಿ ಸಾರ್ವಜನಿಕ ಭಾಷಣಮಾಡಿದರು ಮಹಾತ್ಮ ಗಾಂಧಿಯವರು ಹುಟ್ಟಿ ಮೆಟ್ರಿಕ್ಯುಲೇಶನಿನ ವರೆಗೆ ವಿದ್ಯೆ ಪಡೆದುದು ರಾಜಕೋಟೆಯಲ್ಲಿ. ಅವರ ತಂದೆಯು 20ವರ್ಷಗಳ ವರೆಗೆ ಅಲ್ಲಿಯ ದಿವಾನರಾಗಿದ್ದರು. ಈಗಣ ಧಾಕೂರು ಸಾಹೇಬರಿಗೆ ಮದುವೆಯಾದಾಗ ತಿಲಕ ಸಂಸ್ಕಾರ ನಡೆದುದು ಗಾಂಧಿಯವರ ಮನೆಯಲ್ಲಿ

ಡೇರ ಇಸ್ಮಯೇಲ್ ಖಾನಿನಲ್ಲಿ ಗಲಾಟೆ

ಇದೇ ತಾ. 2ರಲ್ಲು ವಾಯವ್ಯ ಗಡಿನಾಡು ಪ್ರಾಂತದ ಡೇರ್ ಇಸ್ಮಯೇಲ್ ಖಾನ್ ಎಂಬಲ್ಲಿ ಇದ್ ಹಬ್ಬದ ನಿಮಿತ್ತ,

ಗಡಿನಾಡಿನ ಪ್ರಧಾನ ಮಂತ್ರಿಗಳಾದ ಡಾಕ್ಟರ್ ಖಾನ್‌ಸಾಹೇಬರು

ಮುಸಲ್ಮಾನರು ಗೋವಧೆನಡಿಸಲೆಂದು ಮೆರವಣಿಗೆಯಲ್ಲಿ ಹೋಗುವಾಗ ಹಿಂದುಗಳಿಗೂ ಅವರಿಗೂ ಜಗಳವಾಗಿ 10ಮಂದಿ ಕೊಲ್ಲಲ್ಪಟ್ಟು 20ಮಂದಿ ಗಾಯಗೊಂಡಿರುವರು ಇವರಲ್ಲಿ ಹೆಚ್ಚಿನವರು ಹಿಂದುಗಳು, ಸಮೀಪ್ಯದಲ್ಲಿ ಗಲಾಟೆಯಾಗುವುದನ್ನು ಪೋಲೀಸರು ಸಕಾಲದಲ್ಲಿ ಬಂದು ತಡೆಗಟ್ಟಿರುವರು. ಡೇರ ಇಸ್ಮಯೇಲ್ ಖಾನಿನಲ್ಲಿ ಅಂಗಡಿಗಳಿಗೆ ಬೆಂಕಿ ಕೊಡಲ್ಪಟ್ಟು 140 ಅಂಗಡಿಗಳು ಸುಟ್ಟು ಹೋಗಿರುವವು. 8ಮಂದಿ ಸುಟ್ಟು ಹೋಗಿರುವರು. ಪ್ರಧಾನ ಮಂತ್ರಿಗಳಾದ ಡಾಕ್ಟರ್ ಖಾನ್ ಸಾಹೇಬರು, ಅರ್ಥ ಸಚಿವರಾದ ಶ್ರೀ ಭಂಜುರಾಮ್ ಗಾಂಧಿ, ಕೈಗಾರಿಕೆ ಖಾತೆಯ ಮಂತ್ರಿ ಖಾನ ಮಹಮ್ಮದ್ ಅಬ್ಬಾಸ್ ಖಾನ್ ಪೋಲೀಸ್ ಇನ್‌ಸ್ಪೆಕ್ಟರ್ ಜನರಲರೊಂದಿಗೆ ವಿಮಾನ ಮೂಲಕ ಡೇರ ಇಸ್ಮಯೇಲ್ ಖಾನಿಗೆ ಹೋಗಿ ಗಲಾಟೆಯ ಕಾರಣವ ಕಂಡುಹಿಡಿಯ ತನಿಖೆನಡಿಸುತ್ತಿರುವರು.

ಸಾಗರದ ಬಳಿ ಮೋಟರ್ ಅಪಘಾತ

ಇದೇ ತಾ 2ನೇ ಬೆಳಿಗೆ ಮೈಸೂರಿನ

THE UDIPI BANK LTD.

ನಿರಖು ಠೇವಣಾತಿ (ಡಿಪೋಜಿಟು)ಗಳು

ಸಾ. ಶೇ. 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ

ಪ್ರತಿ ತಿಂಗಳ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100/-ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್,

ಉಡುಪಿ

ಸಾಗರದ ಬಳಿ ತಿಳಗುಪ್ಪೆ ಎಂಬಲ್ಲಿ, ಪೋಲೀಸರನ್ನೊಯ್ಯುತ್ತಿದ್ದ ಬಸ್ಸೊಂದು ಅಡಿಮಗುಚಿಬಿದ್ದು ಆಕ್ಷಣವೇ 3 ಮಂದಿ ಕೊಲ್ಲಲ್ಪಟ್ಟಿರುವರು ೧೮ ಮಂದಿಗೆ ಹೆಚ್ಚಿನ ಜಖಮ್ ಆಗಿದೆ 23 ಮಂದಿಗೆ ಸ್ವಲ್ಪ ಸ್ವಲ್ಪ ಪೆಟ್ಟಾಗಿದೆ.

ಬ್ರಿಟಿಷ್ ಸರಕಾರಕ್ಕೆ ಶ್ರೀ. ಭೋಸರ ಎಚ್ಚರ

ಇದೇ ತಾ. 2ರಲ್ಲಿ ಬಂಗಾಳದ ಮಾಲ್ಡಾ ಎಂಬಲ್ಲಿ ನಡೆದ ಜಿಲ್ಲಾ ರಾಜಕೀಯ ಪರಿಷತ್ತೊಂದರಲ್ಲಿ, ಶ್ರೀ ಸುಭಾಸಚಂದ್ರ ಭೋಸರ ನೇತೃತ್ವದಲ್ಲಿ ಮತ್ತು ಅವರ ಪ್ರೇರೇಪಣೆ ಮೇರೆಗೆ, ಬ್ರಿಟಿಷ್ ಸರಕಾರವು ೬ ತಿಂಗಳೊಳಗೆ ಹಿಂದೀಯರ ಕೇಳಿಕೆಗಳ ಕುರಿತು ಸ್ಪಷ್ಟ ಹಾಗೂ ನಿಶ್ಚಿತ ಉತ್ತರ ಕೀಯದಿದ್ದಲ್ಲಿ, ಅಥವಾ ಅತೃಪ್ತಿಕರ ಉತ್ತರವಿತ್ತಲ್ಲಿ, ಕಾಂಗ್ರೆಸಿನ ಮೂಲಭೂತವಾದ ತತ್ವ ಮತ್ತು ಧೋರಣೆ ಮೇರೆಗೆ ಅವಶ್ಯ ಬೀಳುವ ಕಾರ್ಯಕ್ರಮವನ್ನು ಕೈಕೊಳ್ಳುವ ಅಧಿಕಾರವು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗಿರಬೇಕೆಂಬ ಠರಾವು ಮಂಜೂರಾಗಿರುವುದು. ಇದು ತ್ರಿಪುರಿ ಕಾಂಗ್ರೆಸ್ ಅಧಿವೇಶನದ ಮುಂದೆ ರಾಷ್ಟ್ರಪತಿ ಭೋಸರು ಇಡಲಿರುವ ಕಾರ್ಯಕ್ರಮವನ್ನು ಸೂಚಿಸುವಂತಿಯದಾಗಿದೆ.

ಕಾಂಗ್ರೆಸಿನೊಳಗಣ ಎಡಪಕ್ಷೀಯರ ಸಭೆ

ಅಧ್ಯಕ್ಷತನದ ಚುನಾವಣೆಯಲ್ಲಿ ತನಗೆ ಬೆಂಬಲವಿತ್ತವರೆಲ್ಲರ ಸಭೆಯೊಂದನ್ನು ಶ್ರೀ ಸುಭಾಸಚಂದ್ರಭೋಸರು ಇದೇ ತಾ. 3ರಲ್ಲು ಕಲ್ಕತ್ತದಲ್ಲಿ ಕರೆದಿರುವರು. ಈ ಸಭೆಯಲ್ಲಿ ಕಾಂಗ್ರೆಸಿನ ಮುಂದಿನ ಧೋರಣೆಯ ಕುರಿತು ಚರ್ಚೆ ನಡೆಯಿತು

ಶ್ರೀ ಜಮುನಾಲಾಲ್ ಬಜಜರ ಬಿಡುಗಡೆ

ಇದೇ ತಾ. 1ರಲ್ಲು ಶ್ರೀ ಸೇಟ್ ಜಮುನಾಲಾಲ್ ಬಜಜರು ಜಯಪುರ ಸ್ಟೇಶನಿನಲ್ಲಿಳಿದೊಡನೆಯೇ ಕೈದು ಮಾಡಲ್ಪಟ್ಟು ಮೋಟರ್ ಕಾರಿನಲ್ಲಿ ಒಯ್ಯಲ್ಪಟ್ಟಿರುವರು. ಜಯಪುರ ಪಟ್ಟಣದಲ್ಲಿ ಪೋಲೀಸರ ಮತ್ತು ಸೈನಿಕರ ಪಹರೆಯಿತ್ತು. ಸೇಟ್ ಜಮುನಾಲಾಲರು, ಜಯಪುರಕ್ಕೆ ಹೋಗುವ ಮುಂಚಿನ ದಿನ ಡಿಲ್ಲಿಯಲ್ಲಿ ಅವರಿಗೆ ಸಾರ್ವಜನಿಕ ವಿದಾಯವೀಯಲ್ಪಟ್ಟಿತು. ಹಲವು ಸಂಘಗಳವರು ಮಾನಪತ್ರವಿತ್ತು ಸತ್ಕರಿಸಿದರು. ಸೇಟ್ ಜಮುನಾಲಾಲರು, ತಾನು ಕೈದು ಮಾಡಲ್ಪಟ್ಟಲ್ಲಿ ಜಯಪುರದಲ್ಲಿ ಚಳವಳವನ್ನು ಮುನ್ನಡೆಸುವ ವ್ಯವಸ್ಥೆ ಮಾಡಲು 6 ಮಂದಿ ಮಹನೀಯರ ಕೌನ್ಸಿಲ್ ಆಫ್ ಏಕ್ಶನನ್ನು ನೇಮಿಸಿರುವರು. ಇದೇ ತಾ. 2ರಲ್ಲು ಸೇಟ್ ಜಮುನಾಲಾಲ್ ಬಜಜರನ್ನು ಮಥುರಕ್ಕೆ ಮೋಟರ್ ಕಾರಿನಿಂದೊಯ್ದು ಬಿಟ್ಟುಬಿಡಲಾಯಿತು ಇಲ್ಲಿಂದ ಅವರು ಆಗ್ರಕ್ಕೆ ಹೋಗಿರುವರು. ಆಗ್ರದಲ್ಲಿ ಜಯಪುರ ಪ್ರಜಾಮಂಡಲಿಯ ಆಫೀಸು ಸ್ಥಾಪಿಸಲ್ಪಟ್ಟಿದೆ. ಶ್ರೀ ಜಮುನಾಲಾಲ ಬಜಜರು ಪುನಃ ಜಯಪುರಕ್ಕೆ ಪ್ರವೇಶಿಸುವ ನಿರ್ಧಾರಮಾಡಿ ಇದೇ ತಾ. 1ರಲ್ಲು ಆಗ್ರದಿಂದ ಸಿಕಾರಿಗೆ ಹೊರಟುಹೋಗಿರುತ್ತಾರೆ. 'ಜಯಪುರದ ದರ್ಬಾರಿನವರು ಕಳದ ಸಲ ಮಾಡಿದ ಘರ್ಷಣೆ ಈ ಸಲವೂ ಮಾಡಲಾರರೆಂದು ನೆನಸುತ್ತೇನೆ. ನಾನು ಜಯಪುರಕ್ಕೆ ಪ್ರವೇಶಿಸುವ ದೀಕ್ಷೆಯುಳ್ಳವನಿರುವೆನು. ಅದಕ್ಕಾಗಿ ಯಾವ ಕಷ್ಟವನ್ನಾದರೂ ಸಹಿಸಲು ಸಿದ್ಧನಿರುವೆನು. ಈ ಸಲ ಬಲಾತ್ಕಾರದ ವಿನಹ ಪ್ರಥಮ ಸಲದಂತೆ ತಮಾಷೆ ನಡಿಸಲು ಸಾಧ್ಯವಾಗಲಾರದು. ಜಯಪುರ ದರ್ಬಾರಿನವರು ಈ ವಿಪರ್ಯಾಸ ನಡಿಸದೆ ತಮ್ಮಿಂದ ಸಾಧ್ಯವಾದಷ್ಟು ಕಠಿಣವಾದ ದಬ್ಬಾಳಿಕೆಯನ್ನಾರಂಭಿಸಬೇಕೆಂದೇ ನನ್ನ ವಿನಂತಿ. ಯಾಕೆಂದರೆ ದಬ್ಬಾಳಿಕೆಯು ಎಷ್ಟು ಹೆಚ್ಚುವುದೋ ಅಷ್ಟು ನಮ್ಮ ಗುರಿಯು ಸಮೀಪಿಸುವುದೆಂದು ನನ್ನ ನಂಬಿಕೆ' ಯೆಂದು ಶ್ರೀ. ಬಜಜರು ಹೇಳಿಕೆ ಹೊರಡಿಸಿರುವರು. ಅವರು ಆಗ್ರದಿಂದ ಹೊರಡುವ ಮೊದಲು ಗಾಂಧಿಜಿಯವರು ಮತ್ತು ಪಂಡಿತ ಜವಾಹರಲಾಲರು ಅವರಿಗೆ ವಿಜಯವನ್ನು ಹಾರೈಸಿ ತಂತಿ ಬಿಟ್ಟಿರುವರು ಸೇಟ್ ಜಮುನಾಲಾಲರು ಇದೇ ತಾ. ೬ರಲ್ಲು ಜಯಪುರ ಸ್ಟೇಶನಿಗೆ ಮುಟ್ಟಿದಾಗ ನೂರಾರು ಜನರು ಅವರಿಗೆ ಸ್ವಾಗತವಿತ್ತರು 20 ಮಿನಿಟು ಅಲ್ಲಿ ಉಳಿದು ಶ್ರೀ. ಬಜಜರು ಸಿಕಾರಿಗೆ ಹೋಗಲಿಕ್ಕಾಗಿ ಇನ್ನೊಂದು ಟ್ರೈನು ಹತ್ತಿಹೋದರು.

ಜಮ್ನಾಲಾಲ್ ಬಜಾಜರು.

ಪಂಡಿತ ಜವಾಹರಲಾಲ ನೆಹರುಗಳು

ಕವಿ ರವೀಂದ್ರರಿಂದ ಶಾಂತಿನಿಕೇತನಕ್ಕೆ ಆಮಂತ್ರಿಸಲ್ಪಟ್ಟು, ಜನವರಿ ತಾ. 31 ರಲ್ಲು ಹಿಂದೀ ಸಾಹಿತ್ಯಾಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟಿರುವ ಹಿಂದೀ ಭವನವನ್ನು ತೆರೆಯುವ ಸಮಾರಂಭ ನಡಿಸಿದರು. ತಾ. 2ರಲ್ಲು ಕವಿ ರವೀಂದ್ರರು ಶ್ರೀ. ಭೋಸರನ್ನು ಶಾಂತಿನಿಕೇತನಕ್ಕೆ ಆಮಂತ್ರಿಸಿ

ಕವಿ ರವೀಂದ್ರರು

ಪಂಡಿತ ಜವಾಹರಲಾಲರೊಡನೆ ಮಾತಾಡುವ ಸಂದರ್ಭವನ್ನವರಿಗೆ ಒದಗಿಸಿಕೊಟ್ಟರು ಪ್ರಕೃತದ ಸಂದರ್ಭದಲ್ಲಿ ಕಾಂಗ್ರೆಸಿನೊಳಗೆ ಯಾವತರದ ಒಡಕೂ ಉಂಟಾಗಬಾರದೆಂದೇ ಕವಿವರ್ಯರ ಹಾರೈಕೆ. ಶ್ರೀ. ಭೋಸರು ಶಾಂತಿನಿಕೇತನಕ್ಕೆ ಬಂದೊಡನೆಯೇ ತುಸು ಹೊತ್ತು ಕವಿ ರವೀಂದ್ರರೊಡನೆ ಮಾತಾಡಿ ಆಮೇಲೆ ಪಂಡಿತ ಜವಾಹರಲಾಲರೊಡನೆ ಮಾತುಕತೆ ನಡಿಸಿದರು. ಈ ವಿಷಯವೇನೆಂಬುವನ್ನು ಇಬ್ಬರೂ ರಹಸ್ಯವಾಗಿರಿಸಿರುವರು.

ಆ ಶಾಂತತೆ

೧

ಕವಿದ ಕದನ ಕತ್ತಲೆ ಮೊಳೆಯುತಿರಲು,
ಕೋವಿಗಳ ಅಬ್ಬರವು ಕೇಳಿಬರುತಿರಲು,
ಸಿರ್ದಯರ ನಿರ್ಣಯವು ಕೊನೆಗಾಣುತಿರಲು,
ನಿರ್ದಯರ ಸತ್ಯ ಕುಗ್ಗುತಿರಲು,
ವಿಹಿಕರು ಉಸುರೆಳೆದು ಖಡ್ಗ ಒರೆ ಸೆಳೆಯುತಿರಲು
ವಿಹಿಕರು ಗತವಾದುದನು ಅರಿಯುತಿರಲು,
ದಿನವೊಂದರಲಿ ಜನಿಸಿದಾ ದೃಷ್ಟಿವಿಕಸನೆಗತವಾದುದನು ಎಣಿಸುವುದು,

೨

ಉಗ್ರಬಾಳ್ಗಿನ ಗಮನಸಿದ ಹರಿಯವರು,
ಹರಿಯುತಿರುವಲ್ಲಿ
ನೂರಾರು ಜೀವಿಗಳ ಜೀವಾಳಕುಂದಿ,
ವೇಧಿಸುತಿರುವಲ್ಲಿ
ಮೃತ್ಯು ಜವೆಯಲ್ಲಿ ಕಡಲಿನಲಿ ಪೃಥ್ವಿಯಲಿ,
ರಾವು ರಾಜಿಸಿರುವಲ್ಲಿ
ವಿಪತ್ತಿನಲಿ-ವೇದನಲಿ-ಶೋಕದಲಿ,
ಅಖಿಲ ಬಿಲಿಸುತಿರ ನಲ್ಲಿ,

೩

ಕಳಂಕ-ಸತತ-ಅನಲವೆ
ಕಣಜ ಕೂಡಿಸುವುದು.
ಆ ಹೊರೆಯು ಹರಿವು ಸಾಗಿಸುವುದು.
ಹಿಂದಾಗಿ ಶಾಂತಸ್ರೋತ ತೊದಗುತಿರಲು;
ನಾವೆ ಬಿರುಗಾಳಿಯಿಂ ಪಾರಾಗುವಂತೆ,
ನಾವಿಕನು ಸಮುದಾಯವಂ ಸಂಗ್ರಹಿಸುವಂತೆ,
ಅಸ ರಗತಿತಾಣುವಂತೆ,

೪

ಒಯ್ಯುತಿರುವಲಿ-ಕೈ-ಹೋರಾಟದೇರುತಿರುವಲ್ಲಿ
ಪೃಥ್ವಿಪತನವಾಗುತಿರುವಲ್ಲಿ,
ಜೀವಂತ ಸತ್ಯ ದೌರ್ಭಾಗ್ಯ ಕೆಡಿತುವಲ್ಲಿ
ಮಾನವಿಯ ವ್ಯಾತ್ಯ ಸೂಚಕವು ಝೇಂಕರಿಸ ತಿರುವಲ್ಲಿ,
ಅದಾರು, ನವ ವಲ್ಲ, ಅಪಮಾನ ಅಹುದಲ್ಲ,
ಆ ಬೆಲೆಭಾರ ಒಳಯಲ್ಲ,
ಆ ಪರಿಣಾಮ ನಾವ್ ಪಡೆಗೊಳಿಸಿದಾಪರಾಧ,
ಆ---ಆಶಾಂತಿ ಹಿತವಲ್ಲ

H. R. Dass
Bangalore

THE Bombay Life
ASSURANCE CO., LTD.

ಸ್ಥಾಪನೆ] [1908

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:

(1) ರಥಬೀದಿ, ಮಂಗಳೂರು.
(2) ಪುತಿಯೂರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು. (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, ಬೊಂಬೈ (ಫೋ. ನಂ. 26814)

ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು

(6) ಪಟ್ಟಪಾಳೆಂ, ದ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂಕೂರು.

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)

ರಿಜಿಸ್ಟ್ರಿಯಾದ ಆಫೀಸು: **ಉಡುಪಿ.**

ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.

ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	ರೂ.	**1,40,08,725**
ಪ್ರೀಮಿಯಂ ಆದಾಯ ಮಿಕ್ಕಿದುದು	,,	**30,00,000**
ಒಟ್ಟು ಮೂಲ ಮಿಕ್ಕಿದುದು	,,	**1,00,00,000**
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	**50,00,000**

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ. **ಅತ್ಯಧಿಕ ಪ್ರತಿಫಲ.**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

WANTED

A lady candidate to edit a high class Kannada monthly magazine for ladies to be started shortly. Apply with stating minimum salary required with particulars as to qualification, experience etc, to Box No. 11,

C/o **NAYAYUGA**, Udipi.

ಅಖಿಲ ತುಳುನಾಡಿನ ಸ್ತ್ರೀ ಸಮ್ಮೇಲನವು ಕಳೆದ ತಿಂಗಳ ತಾ. 25ರಲ್ಲಿ ಇತಿಹಾಸ ಪ್ರಸಿದ್ಧ ಬಾರಕೂರಿನಲ್ಲಿ ಜರಗಿತು. ಬಾರಕೂರಿನಿಂದ ಮಂಗ್ಳೂರಿನ ವರೆಗಿನ ಎಲ್ಲಾ ಪ್ರಖ್ಯಾತ ಮಹಿಳೆಯರು ಚಿತ್ತೈಸಿ ಈ ಸಮ್ಮೇಲನವನ್ನು ತಮ್ಮ ವೈದುಷ್ಯ ವಿವೇಕ ವಿಚಾರಗಳಿಂದ ಯಶಸ್ವಿಯಾಗಿ ಮಾಡಿದರು. ಈ ಸಾರಿಯು ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಶ್ರೀ. ಗೌರಮ್ಮನವರು ವಹಿಸಿದ್ದು ನಮ್ಮೆಲ್ಲರಿಗೂ ನಿಜವಾಗಿಯೂ ಅಭಿಮಾನಾಸ್ಪದವಾಗಿದೆ. ಇವರು ತುಳುನಾಡಿನ ಮಹಿಳೆಯರ ಏಳಿಗೆಗಾಗಿ ಹಗಲಿರುಳು ದುಡಿದವರು-ದುಡಿಯುತ್ತಿರುವವರು. ಶ್ರೀಮತಿ ಗೌರಮ್ಮನವರು ಕೇವಲ ಕಲ್ಪನಾಸಾಮ್ರಾಜ್ಯದಲ್ಲಿ ಹಾರಾಡುವ ಸ್ತ್ರೀಯಲ್ಲ—ಅವರು ಕರ್ಮವೀರೆ, ವ್ಯಾವಹಾರ ಚತುರೆ-ತನ್ನ ಸ್ತ್ರೀಸಮಾಜವು ಅದರ ಅಧೋಗತಿಯಿಂದ ಮುಂದೆಬರಬೇಕೆಂದು ಕನಸು ಕಾಣುವವರಲ್ಲದೆ ಆ ಕನಸನ್ನು ನೆನಸಾಗಿ ಮಾಡಬಲ್ಲ ವಿಧಾಯಕಿ. ಅವರ ಶ್ರಮ, ಸಮಯಜ್ಞತೆ, ಸಮತೋಲವೃತ್ತಿ, ವಿಚಾರ ವೈಖರಿಗಳನ್ನು ಕಂಡು ನಮ್ಮ ಮಹಿಳೆಯರು ಮುಗ್ಧವಾಗಿ ಹೋಗಿದ್ದಾರೆ. ಪ್ರಚಂಡ ಕೈಚಪ್ಪಾಳೆಯ ಸಮ್ಮಾನದೊಡನೆ ಅಮ್ಮನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು-ಅನೇಕ ಗೊತ್ತುವಳಿಗಳು ಸ್ವೀಕೃತವಾದವು.

ಶ್ರೀ ಗಂಗಮ್ಮನ ಭಾಷಣ ಮತ್ತು ಠರಾವು

ಸಹೋದರಿಯರೇ, ನಮ್ಮಲ್ಲಿ ಒಂದು ವಿಶೇಷವಾದ ಅಜ್ಞಾನವಿದೆ-ಅದನ್ನು ತೊಳೆದು ಬಳಿದುಬಿಡದೆ ನಮ್ಮ ಜಾತಿಗೆ ಏಳಿಗೆಯು ಬಾರದು. ನಮ್ಮನ್ನು ಸಸಾರಮಾಡಿಕೊಳ್ಳುವುದು ನಾವೇ-ನಮಗೆ ಹೆಣ್ಣುಮಗು ಹುಟ್ಟಿದರೆ ದುಃಖಬರುತ್ತದೆ-ಗಂಡು ಹುಟ್ಟಿದರೆ ಸಂತೋಷವಾಗುತ್ತದೆ. ಇದು ಯಾವ ವಿಧ್ಯಮಾನಗಳಿಂದ ಪರಿವೇಷ್ಟಿತವಾಗಿ ನಮ್ಮಲ್ಲಿ ಬೇರೂರಿದ್ದರೂ ನಾವಿದನ್ನು ನೈತಿಕ ಮತ್ತು ಸ್ವಾಭಿಮಾನ ದೃಷ್ಟಿಯಿಂದ ನೋಡಿ ವಿಚಾರಿಸತಕ್ಕದ್ದು. ಹೆಣ್ಣಿಂದ ಎರಡುಕುಲ ಉದ್ಧಾರ. ಗಂಡಿಂದ ಒಂದೇ. ಉತ್ತಮ ಜನಾಂಗವು ಮುಂದೆ ಬರಬೇಕಾದರೆ ಅದನ್ನು ರೂಪಿಸುವುದರಲ್ಲಿ ಹೆಣ್ಣಿನ ಕೈ ಮೊದಲು. ಜನಾಂಗದ ಮೂಲಾಧಾರ, ಜನಾಂಗದ ಅಲಂಕಾರ, ಜನಾಂಗದ ಜೀವಾಳ ಎಲ್ಲ ಹೆಣ್ಣೇ. ಆದುದರಿಂದ ಹೆಣ್ಣೆಂದು ತಗ್ಗಬಾರದು. ಇನ್ನು ಮುಂದೆ ನಾವು ಗಂಡುಹುಟ್ಟಿದಾಗ ದುಃಖಪಡಬೇಕು. ಹೆಣ್ಣು ಹುಟ್ಟಿದರೆ ಸಂತೋಷಪಡಬೇಕು (ಕೈಚಪ್ಪಾಳೆ-hear! hear!) ಇಷ್ಟನ್ನು ಪೀಠಿಕರೂಪದಲ್ಲಿ ಹೇಳಿ ಈ ಸೂಚನೆಯನ್ನು ತಮ್ಮೆಲ್ಲರ ಮುಂದೆ ಇಡುತ್ತೇನೆ—

ಇನ್ನು ಮುಂದೆ ಹೆಣ್ಣು ಮಗು ಹುಟ್ಟಿತೆಂದು ಕೇಳಿದರೆ ಅಥವಾ ಕಂಡರೆ-ಸ್ತ್ರೀಸಮಾಜದವರೆಲ್ಲರೂ ಅತ್ಯಾನಂದ ಹೊಂದತಕ್ಕದ್ದು-ಮತ್ತು ಹೆಣ್ಣು ಹಡೆಯುವರು ಎಂದು ಗಂಡನ ಕಡೆಯವರು ಕೀಳುಗೈದರೆ-ಸ್ತ್ರೀಸಮಾಜವು 'ಪ್ರೊಟೆಸ್ಟ್' (ಪ್ರತಿರೋಧ) ಮಾಡಬೇಕು.

ಮಿಸ್. ಬಿ. ಯವರು ಈ ಸೂಚನೆಯನ್ನು ಅನುಮೋದಿಸಿ ಭಾಷಣಮಾಡಿದ ನಂತರ-ಸರ್ವಸಮ್ಮತವಾಗಿ ಅಂಗೀಕೃತವಾಯಿತು.

ನಾಗಮ್ಮನವರ ಭಾಷಣ ಮತ್ತು ಠರಾವು

...ಗಿನಿಯರೇ, ನಮ್ಮ ಜಾತಿಯನ್ನು

ಮಹಿಳಾ ಸಭೆ

(ಕಲ್ಪಿತ ಲೇಖನ)

CONFERENCE OF WOMEN

(ಲೇಖಕರು:—ಶ್ರೀ ವಿ ರ್‍ಯಾಮಪ್ಪಯ ಶೆಟ್ರು, ಬಿ. ಎ., ಎಲ್. ಟಿ., ಉಡುಪಿ.)

Chaucer has a story of a clerk who asked, "What is better than gold?" And the answer was, "Jasper." "And what is better than Jasper?" "Wisdom", and, "What is better than wisdom?" "Woman;" and **"What is better than a good woman?" and the answer to that was, "Nothing"** 'Of woman's worth every poet in every clime has written and sung. In whatever phase of life we behold our women, whether as sisters, mothers, wives or widows, they shed lustre around the circle they occupy, they cheerfully perform duties that few men would—even if they could—care to undertake, and from the cradle to the grave may be truly said to be men's best companions.' The writer feels that he cannot do justice to their many virtues but he is proud to make an attempt, however feeble. There may be men without wives or sisters but no man or woman is without a mother. Mother is the sweetest term. A woman belongs to the mother sex. She has been made by Nature to temper man who would not have been one without her. She stands for amazing brightness, purity, truth, eternal joy and everlasting love. She has been much ill used and ill-treated She has borne it long. Her patience is styled assinine; her sacrifice as a wife and mother is seldom recognised; her fortitude is rarely admired; her courage is not often appreciated by many men, devoid of these virtues Still has she made history by contributing much to the glory of her country. Long has she tolerated the iniquities of the other sex. Now there is the awakening—hence this conference where stifled resentment against injustice is constitutionally ventilated. The writer wishes them success in their legitimate ambition and just aspiration.

ನಾವೇ ಇಷ್ಟು ತುಚ್ಛೀಕಾರಮಾಡಿಕೊಂಡದ್ದರಿಂದ ನಮ್ಮ ಬೆಲೆಯೇ ನಮಗೆ ತಿಳಿಯದಾಗಿದೆ. ಮೊನ್ನೆ ನನ್ನ ತಂಗಿಯು ಹೆಣ್ಣುಮಗು ಹೆತ್ತೆನೆಂದು ಅಳಲಿಕ್ಕೆ ಪ್ರಾರಂಭ. ನಮಗೆ ಈ ಸ್ವಯಂನಿಕೃಷ್ಟತಾಭಾವ ಇರುವುದರಿಂದ ನಮ್ಮ ಗಂಡಸರಿಗೆ, ಗಂಡಂದಿರಿಗೆ ನಾವು ಅಂದರೆ ಇನ್ನೂ ತಿರಸ್ಕಾರ. ನಾವು ಕೈಲಾಗದ ಪ್ರಾಣಿಗಳೆಂದೇ ಅವರ ಭಾವನೆ. ಆದಕಾರಣ ಹೆಣ್ಣು ಬಿಡುವ ಒಂದು ರೋಗವು ಇತ್ತೀಚೆಗೆ ವ್ಯಾಪಕವಾಗಿ ಹರಡುತ್ತ ಬರುತ್ತಿದೆ ಇದೇನು ನಾವು ಗಂಡಸರ ಪಾದದಾಸ್ಯೆಯೇ—ಏನು ಅನ್ಯಾಯ! ಮೊನ್ನೆ ನಮ್ಮೂರಿನ ಗರ್ಜಯ್ಯನವರು (Needy husband) ತನ್ನ ಹೆಂಡತಿ ತಾಕ್ಷಿಯಮ್ಮನವರನ್ನು ಕೈ ಮೈ ಕೀವು ನಾರಿಗು ಬರುವುದಾಗಿ ಮಾವನ ಮನೆಗೆ ಹಳೆ ಜೋಳಿಗೆಯಾದಿ ಬಿಸಾಡಿಬಿಟ್ಟರು. ಇಂತಹ ಅನ್ಯಾಯಗಳನ್ನು ವಿಚಾರಿಸುವವರೇ ಇಲ್ಲವೇ? ನಮ್ಮಲ್ಲಿ ಐಕ್ಯ, ಸಹಾನುಭೂತಿಯಿದ್ದರೆ ಈ ರೀತಿ ಆಗುತ್ತದೆಯೇ! (If one woman is discarded, every woman must take it as an insult on her. This nonsense must go-) ನಾವು ಒಂದು 'ಪ್ರೊಟೆಸ್ಟ್' ಕಮಿಟಿಯನ್ನು ಸ್ಥಾಪಿಸಬೇಕು. ಯಾರಾದರೂ ಒಬ್ಬ ಗಂಡ ಅವನ ಹೆಂಡ್ತಿಯನ್ನು ಪೀಡಿಸಿದನೆಂಬ ವರ್ತಮಾನವು ಈ ಕಮಿಟಿಗೆ ಸಿಕ್ಕಿದೊಡನೆಯೇ-ಈ ಕಮಿಟಿಯು ಎಲ್ಲಾ ಮಹಿಳೆಯರಿಗೆ ತಿಳಿಸತಕ್ಕದು-ಮತ್ತು ಅವರು ಈ (cause) ಅನ್ಯಾಯ ನಿವಾರಣೆಗಾಗಿ ತಮ್ಮ ಗಂಡಂದಿರು ಅಂಥಾ ಗಂಡನೊಡನೆ ಅಸಹಕಾರಮಾಡಿ ಅವನನ್ನು ಶಿಕ್ಷಿಸಿ ಸರಿಪಡಿಸುವಂತೆ ಪ್ರತಿ ಗೃಹದಲ್ಲಿ ಸತ್ಯಾಗ್ರಹ ತೊಡಗತಕ್ಕದ್ದು. ಆದಕಾರಣ ಈ ಸೂಚನೆಯನ್ನು ನಿಮ್ಮ ಮುಂದೆ ಇಡುತ್ತೇನೆ.

ಇನ್ನು ಮುಂದೆ ಯಾವ ಗಂಡನಾದರೂ ಹೆಂಡತಿಯನ್ನು ಬಿಟ್ಟರೆ ಅವನ ಮೇಲೆ ಕ್ರಮಬದ್ಧವಾದ ಶಿಸ್ತನ್ನು ಜ್ಯಾರಿಮಾಡುವ ಹಾಗೆ ಎಲ್ಲಾ ಮಹಿಳೆಯರು ಸಹೋದರೀ ಭಾವದಿಂದ ಸಹಾಯಮಾಡತಕ್ಕದು.

ಮಿಸೆಸ್. ಎ. ಯವರ ತಿದ್ದುಪಡಿ— 'ಇನ್ನು ಮುಂದೆ ಯಾವ ಗಂಡನಾದರೂ ನಿಷ್ಕಾರಣವಾಗಿ', ಈ ಶಬ್ದಗಳನ್ನು ಸೇರಿಸಿಕೊಳ್ಳತಕ್ಕದು—ತಿದ್ದುಪಡಿಯು ಮಿಸ್. ಡಿ. ಯವರ ಅನುಮೋದನೆಯಿಂದಲೂ ಬಹು ಸಂಖ್ಯಾಕರ ಸಮ್ಮತಿಯಿಂದಲೂ ತೇರ್ಗಡೆ ಹೊಂದಿತು.

ದುರ್ಗಮ್ಮನವರ ಭಾಷಣ ಮತ್ತು ಠರಾವು

ಅಕ್ಕ ತಂಗಿಯಂದಿರೇ, ಇಷ್ಟರ ತನಕವೂ ನಮ್ಮ ಗಂಡಂದಿರು ಒಡೆಯರೆಂದೂ ಇವರೇ ದೇವರೆಂದೂ ನಮ್ಮ ತನು ಮನ ಧನಗಳನ್ನು ಈ ಪುರುಷರಿಗೆ ಅರ್ಪಿಸಿದ್ದೇವೆ. ಪರಿಣಾಮವು ಕರುಣಾಜನಕವಾಗಲಿಲ್ಲ. ಬದಲಾಗಿ ನಾವು ಅಬಲೆಯರೆಂದು ಮತ್ತು ಮತ್ತು ಸ್ವಾರ್ಥದ ಸೂರೆ ಸುಲಿಗೆ ಮಾಡುತ್ತಿದ್ದಾರೆ. ನಮ್ಮ ಸರ್ವಸ್ವತ್ಯಾಗವು ನಮ್ಮ ಸದ್ಗುಣವೆಂಬ ಸನ್ಮಾನವಾಗಲೀ ಕೊನೆಗೆ ಬಾಯಿ ಉಪಚಾರದ ಮಾತಾಗಲೀ ಬರುವುದಿಲ್ಲ. ನಾವು ಹಾಗಿರುವುದು ನಮ್ಮ ಕರ್ತವ್ಯ, ಅವರು ನಮ್ಮನ್ನು ಹಾಗೆ ಉಪಯೋಗಿಸುವುದು ಅವರ ಹಕ್ಕು ಎಂದು ನಾರುವಷ್ಟು ಅವರಲ್ಲಿ ಹೆಮ್ಮೆ ಬಂದು ಹೋಗಿದೆ!(Shame! Shame! ನಾಚಿಕೆ! ಹೇಡಿತನ!) ನಮ್ಮ ಸದ್ಗುಣತೆಗಳನ್ನೆಲ್ಲ ಅವರು ನಮ್ಮಲ್ಲಿರುವ (weakness) ನಿರ್ಬಲತೆಯ ಕುರುಹು ಎಂದು ಗ್ರಹಿಸಿಕೊಂಡಿದ್ದಾರೆ—ಪುರುಷರು ನಮ್ಮನ್ನು ವರದಕ್ಷಿಣೆಗಾಗಿ ಲಗ್ನಮಾಡಿಕೊಳ್ಳುವುದೆಂದು ಎಷ್ಟೋ ಸಂದರ್ಭಗಳಿಂದ ವ್ಯಕ್ತವಾಗುತ್ತದೆ. ಬಡತಂದೆ ತಾಯಿಗಳಿಗೆ ಹುಟ್ಟಿದ ಎಷ್ಟೋ ಜನ ಸುಂದರಿಯರಾದ ಹೆಮ್ಮಕ್ಕಳು ಪ್ರಾಯ ಪ್ರಬುದ್ಧರಾಗಿ ಇನ್ನೂ ಅವಿವಾಹಿತೆಯರಾಗಿ ಇರುವರು. ಇವರ ಮಾನೇಶುಮಾರಿಯನ್ನು ತೆಗೆದರೆ ಕೆಲವು ಕಡೆಯಲ್ಲಿ ಮನೆಮನೆಯಲ್ಲಿ ಮುಪ್ಪಾದೆಗಾಗಿ ಪೇಚಾಡುತ್ತ ನರಳುವೆಯಲ್ಲಿರುವ ಹಾಗೆ ಯಾವ ಸಭೆಗೂ ಹೋಗಲು ಅಳುಕುತ್ತ ಯಜಮಾನರಿಂದ ಯಾವ ತರದ ಸಹಾನುಭೂತಿಯನ್ನು ಹೊಂದದೆ ನರಳಾಡುವವರು ಎಷ್ಟೋ ಇದ್ದಾರೆ. ಕಲಿಗಂಡಸರ ಮನೋವೃತ್ತಿಗಿಂತ ಕಲಿಯುದ

ಪುಟ ೧೬ಕ್ಕೆ

Firm Conviction

Every agent of the Canara Mutual has the Firm Conviction that his work is a genuine contribution to Society.

The Determination and enthusiasm which leads him to success daily spring from this FIRM CONVICTION.

Have you got that Firm Conviction?

If not, represent the

CANARA MUTUAL

and do real service.

It is purely a Policy-holders, Company managed for their Benifit

THE

CANARA MUTUAL

ASSURANCE CO., LTD.,

UDIPI, S. INDIA.

ಹೇಗಿದೆ ವಿಶೇಷ ಸಂಚಿಕೆ?

(ನವಯುಗದ ಮಕರಸಂಕ್ರಾಂತಿ ವಿಶೇಷ ಸಂಚಿಕೆಯ ಕುರಿತು ಅಖಿಲಕರ್ನಾಟಕದಿಂದ ಬರುತ್ತಿರುವ ಅಭಿಪ್ರಾಯಗಳಲ್ಲಿ ಕೆಲವನ್ನು ನಮ್ಮ ವಾಚಕರಿಗಾಗಿ ಕ್ರಮಶಃ ಕೊಡಲಾಗುವುದು.

[ಸಂ. ಪ.]

'ವರ್ತಕಧುರೀಣ' ವಾರ
ಪತ್ರಿಕೆಯ ಅಭಿಪ್ರಾಯ:—

ನವಯುಗದ ಮಕರಸಂಕ್ರಾಂತಿ ವಿಶೇಷ ಸಂಚಿಕೆ. ಪೃಷ್ಠ ಸಂಖ್ಯೆ ೨೦೦ಕ್ಕೂ ಮೇಲ್ಪಟ್ಟಿದೆ. ಬೆಲೆ ೦—೪—೦.

ಉಡುಪಿಯಿಂದ ಪ್ರಕಟವಾಗುತ್ತಿರುವ ಪ್ರಸಿದ್ಧ 'ನವಯುಗ' ವಾರಪತ್ರಿಕೆಯ ಸಂಪಾದಕ ಹಾಗೂ ಆಡಳಿತೆ ಮಂಡಲದವರಿಂದ ಹೊರಡಿಸಲಾಗಿರುವ ಈ ಅಪೂರ್ವ ಹಾಗೂ ಸುಂದರವಾದ ವಿಶೇಷ ಸಂಚಿಕೆಯನ್ನು ಅತ್ಯಾದರಪೂರ್ವಕ ಸ್ವೀಕರಿಸಿರುವೆವು.

ಈ ಸಂಚಿಕೆಯು ಅತ್ಯಂತ ಮನೋಹರವಾಗಿದ್ದು, ಸಂಚಿಕೆಯಲ್ಲಿ ಪ್ರಕಟವಾಗಿರುವ ಕಥಾಲೇಖನಗಳು ಮತ್ತಷ್ಟು ಸುರಸವಾಗಿವೆ.

ಸಂಪಾದಕ ವರ್ಗದವರ ಆತ್ಮನಿವೇದನೆಯ ಅನಂತರದ ಪ್ರಥಮ ಲೇಖನವೇ ಉಡುಪಿಯ ಲೇಖಕರಾದ ಶ್ರೀಯುತ ಕೊರಡ್ಕಲ್ ಶ್ರೀನಿವಾಸರಾಯರದು. ರಾಯರು ತಮ್ಮ ಲೇಖನಿಯಿಂದ ರೂಪಿಸಿರುವ 'ನಮ್ಮ ಉಡುಪಿಗೆ ಬನ್ನೀಂದ್ರೆ' ಎಂಬ ಚಿತ್ತಾಕರ್ಷಕ ಹಾಗೂ ಉಡುಪಿಯ ಪರಿಚಯಾತ್ಮಕ ಲೇಖನದಿಂದ ಈಗಿನ ಸುಧಾರಿತ ಉಡುಪಿಯ ಸುಂದರ ದೃಶ್ಯವು ಕಣ್ಗೋಚರಿಸುವುದು.

ಅನಂತರ ಉಡುಪಿ ಸ್ವಾಮಿಗಳ ಸನ್ಯಾಸ ಸ್ವೀಕಾರ ಕ್ರಮ, ಮಕರಸಂಕ್ರಾಂತಿ, ಎಂಬೆರಡು ಲೇಖನಗಳಿಂದ ಉಡುಪಿ ಶ್ರೀಕೃಷ್ಣ ದೇವಾಲಯಕ್ಕೆ ಸಂಬಂಧಪಟ್ಟ ಅಷ್ಟಮಠಗಳ ಸನ್ಯಾಸಿಗಳು ಸ್ವೀಕರಿಸುವ ಸನ್ಯಾಸ ಕ್ರಮ, ರಥೋತ್ಸವ ವಿವರ ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ.

ಮೇಲಿನ ಲೇಖನಗಳ ತರುವಾಯ, ಕರ್ನಾಟಕಸ್ಥರ ಪರಿಚಯದವರಾದ, ಮಹನೀಯರ ಬೋಧಪ್ರದವಾದ ಲೇಖನ, ಕತೆ, ಕವಿತೆಗಳಿಂದ ಕೂಡಿದ್ದು ಈ ಸಂಚಿಕೆಯು ಎಲ್ಲಾ ವಿಧಗಳಿಂದಲೂ ಸಂಗ್ರಾಹ್ಯವಾಗಿದೆ.

ಕ್ರೌನ್ 1/4 ಸೈಜಿನ ೨೦೦ಕ್ಕೂ ಮೇಲ್ಪಟ್ಟು ಪುಟಗಳಿದ್ದು, ಉತ್ತಮವಾದ ಭಾವಚಿತ್ರಗಳಿಂದ ಕೂಡಿರುವುದಾದರೂ ಈ ಸಂಚಿಕೆಯ ಬೆಲೆ ಬರೇ ನಾಲ್ಕಾಣೆ ಇಟ್ಟಿರುವುದರಿಂದ ಲಾಭಕ್ಕಿಂತಲೂ ಹೆಚ್ಚಾಗಿ ಸಮಾಜ ಸೇವೆಯ ಧ್ಯೇಯವೇ ಸ್ಪಷ್ಟವಾಗಿ ಕಾಣಬರುತ್ತಿದೆ ಈ ರೀತಿಯ ಉತ್ಕೃಷ್ಟವಾದ ವಿಶೇಷ ಸಂಚಿಕೆಯೊಂದನ್ನು ಹೊರಡಿಸಿರುವ ನವಯುಗದ ಆಡಳಿತೆಗಾರರ ಸಾಹಸಕ್ಕಾಗಿ ನಾವವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಬೇಕಾಗಿದೆ.

ವರ್ತಕ ಧುರೀಣ, ಉಡುಪಿ.

ಶ್ರೀ. ಬಿ. ರಾಮರಾವ್, ಎಂ. ಎ. ಎಲ್ ಎಲ್. ಬಿ., ಮದ್ರಾಸ್ ಸರಕಾರದ ನಿವೃತ್ತ ಸೀನಿಯರ್ ಟ್ರಾನ್ಸ್‌ಲೇಟರ್, ಬೆಂಗಳೂರು—ಇವರ ಅಭಿಪ್ರಾಯ.

ಬೆಂಗಳೂರು: 31ನೇ ಜನವರಿ 1939

'ನವಯುಗ' ಪತ್ರಿಕೆಯ ೧೯೩೯ನೇ ಇಸವಿಯ (ಮಕರ ಸಂಕ್ರಮಣ) ವಾರ್ಷಿಕ ಸಂಚಿಕೆಯನ್ನು ಆದರದೊಡನೆ ಓದಿ ನೋಡಿದೆನು. ಬಹಳ ಸಂತೋಷವಾಯಿತು. ಉತ್ತಮವಾದ ಕಾಗದ ಚೆಲುವಾದ ಮುದ್ರಣ, ವಿವಿಧ ವಿಷಯಗಳನ್ನು ಕುರಿತು ಬರೆಯಲಾದ ನುರಿತ ವಿದ್ವಾಂಸರ ಅಪೋಘವಾದ ಲೇಖನಗಳು, ರಮಣೀಯವಾದ ಚಿತ್ರಗಳು. ಇತ್ಯಾದಿಗಳಿಂದ ಕೂಡಿದುದಾದ ಈ ಸಂಚಿಕೆಯು ಸರ್ವಾಂಗಸುಂದರವಾಗಿ ನೋಡುವವರ ಕಣ್ಣಿಗೂ ಓದುವವರ ಮನಸ್ಸಿಗೂ ಹಬ್ಬವನ್ನುಂಟುಮಾಡತಕ್ಕದಾಗಿದೆ. ಮುಖ್ಯವಾಗಿ 'ಕನ್ನಡ ಜನಾಂಗಕ್ಕೆ 'ನವಯುಗ'ದ ಸಂಕ್ರಮಣ ಕಾಲ' ವೆಂಬ ಶೀರ್ಷಿಕೆಯ ಕೆಳಗೆ ನನ್ನ ಪರಮ ಮಿತ್ರರಾದ ಶ್ರೀಮಾನ್ ಮುದವೀಡು ಕೃಷ್ಣರಾಯರು ಬರೆದಿರುವ ಲೇಖನದ ಕಡೆಗೆ ತಮ್ಮ ವಾಚಕರ ಗಮನವನ್ನು ಸೆಳೆಯಲು ಅಪೇಕ್ಷಿಸುತ್ತೇನೆ ಶ್ರೀಯುತರು ಕರ್ನಾಟಕ ಏಕೀಕರಣದ ಕಲ್ಪನೆಯಿಂದ ಮೊದಲ್ಗೊಂಡು ಇಂದಿನವರೆಗೂ ನಡೆದ ಸಮಸ್ತ ಚಳುವಳಿಯ ಕೀರ್ತಿಯಲ್ಲಿ ಬಹ್ವಂಶವನ್ನು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಕೊಟ್ಟಿರುವರು. ಈ ಕೀರ್ತಿಯು ಅಚ್ಚಳಿಯದ ಹಾಗೆ ಇನ್ನೂ ಹೆಚ್ಚು ಹೆಚ್ಚಾಗಿ ಏಕೀಕರಣ ಕ್ಷೇತ್ರದಲ್ಲಿ ಅಹೋರಾತ್ರಿ ದುಡಿದು, ಕನ್ನಡ ದೇಶೀಯರ ಚಿರಕೃತಜ್ಞತೆಗೆ ಪಾತ್ರರಾಗುವಂತೆ ನಮ್ಮ ಜಿಲ್ಲೆಯ ತರುಣ ದೇಶಭಕ್ತರು ಪರಿಶ್ರಮಿಸದಿರರೆಂದು ನಾನು ಮನಃ ಪೂರ್ತಿಯಾಗಿ ಹಾರೈಸುತ್ತೇನೆ.

ಕೊನೆಯದಾಗಿ ಇಂತಹ ವಾರ್ಷಿಕ ಸಂಚಿಕೆಗಳಲ್ಲಿ, ಕರ್ನಾಟಕದಲ್ಲಿಯೂ ಭಾರತ ವರ್ಷದಲ್ಲಿಯೂ ಸಮಗ್ರ ಭೂಮಂಡಲದಲ್ಲಿಯೂ ಸಹ ಆಗಲೇ ಕಳೆದು ಹೋದ ವರ್ಷದೊಳಗೆ ನಡೆದ ಮುಖ್ಯ ಮುಖ್ಯವಾದ ಘಟನಾವಳಿಗಳನ್ನು ತಾರೀಖುವಾರಾಗಿ ಕೊಡುವುದಕ್ಕೆ ಎರಡೆಂಡು ಪುಟಗಳನ್ನು ಮೀಸಲಾಗಿಟ್ಟ ಪಕ್ಷದಲ್ಲಿ ಸಂಚಿಕೆಗಳ ಬೆಲೆಯು ತುಂಬ ಹೆಚ್ಚುವುದೆಂದು ನಾನು ಅಭಿಪ್ರಾಯ ಪಡುತ್ತೇನೆ.

ಇತಿ ನಾ। ನಮಸ್ಕಾರಗಳು

B. Rama Rao

ನಮ್ಮ ಗೋಕಾಕ ಏಜಂಟರು:

ಶಿರಗಾಂವಕರ ಬ್ರದರ್ಸ್.

ನಿಮ್ಮ ಕರ್ತವ್ಯ

ಬಡವನಿರಲಿ, ಶ್ರೀಮಂತನಿರಲಿ, ವಿವಾಹಿತನಾಗಿರಲಿ, ಅವಿವಾಹಿತನಾಗಿರಲಿ,
ಆತನನ್ನು ಆಶ್ರಯಿಸಿಕೊಂಡಿರುವವರ್ಯಾರಾದರೂ ಇದ್ದೇ ಇರುವರು.
ತನಗೆಲ್ಲಾದರೂ ಮರಣವುಂಟಾದರೆ ಅವರ ಬಾಳು ನಿರಾತಂಕವಾಗಿ ಸಾಗುವಂತೆ ವ್ಯವಸ್ಥೆ ಮಾಡಿಡುವುದು
ಪ್ರತಿಯೊಬ್ಬ ಯೌವನಸ್ಥನ ಕರ್ತವ್ಯ.
ಈ ಕರ್ತವ್ಯವನ್ನು ನೆರವೇರಿಸುವುದರಲ್ಲಿ 'ಓರಿಯಂಟಲ್' ನಿಮಗೆ ನೆರವಾಗಿ ಬರುವುದು.

ಏಕೆಂದರೆ ಕಳೆದ 64 ವರುಷಗಳಿಂದಲೂ ಸಾವಿರಾರು ಸಂಸಾರಗಳ ಸಂಪಾದನೆಯ ಕೈಗಳನ್ನು ಮೃತ್ಯುವು ಮುಕ್ಕತಿಂದಾಗ ಆ ಸಂಸಾರಗಳ ಅಂತಹ ಆಪತ್ಕಾಲದಲ್ಲಿ ಸಹಾಯವನ್ನಿತ್ತುದು
ಓರಿಯಂಟಲ್ ಪೊಲಿಸಿಗಳೇ!

ಶೀಘ್ರದಲ್ಲಾಗಲೀ ವಿಳಂಬವಾಗಿಯಾಗಲೀ ಪ್ರತಿಯೊಬ್ಬನೂ ವಿಮೆ ಮಾಡಲಿಕ್ಕೆ ಅನರ್ಹನಾಗುವ ಅವಸ್ಥೆಗೆ ಬರುತ್ತಾನೆ.
ಆದುದರಿಂದ ನಿಮ್ಮ
ಕರ್ತವ್ಯವನ್ನು ನೆರವೇರಿಸುವುದರಲ್ಲಿ ತಡಮಾಡಬೇಡಿರಿ.

'ಓರಿಯಂಟಲ್'ನಲ್ಲಿ ನಿಮ್ಮ ಜೀವವಿಮೆ ಮಾಡಿ ನಿಮ್ಮ ಆಶ್ರಿತರ ಭವಿಷ್ಯವನ್ನು ನಿಶ್ಚಿತಗೊಳಿಸಿಡಿರಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ
ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತ ವರ್ಷ 1874] ಭಾರತದಲ್ಲೆಲ್ಲಾ ನಮ್ಮ ಶಾಖೆಗಳೂ ಮತ್ತು ಪ್ರತಿನಿಧಿಗಳೂ ಇದ್ದಾರೆ. [ಹೆಡ್ ಆಫೀಸು—ಬೊಂಬಾಯಿ.
ಹೆಚ್ಚಿನ ಮಾಹಿತಿ ಬಗ್ಗೆ ಇವರಿಗೆ ಬರೆದು ತಿಳಿದುಕೊಳ್ಳಿ.

ಬ್ರಾಂಚ್ ಸೆಕ್ರಿಟರಿ,	ಅ	ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,	ಥ	ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.	ವಾ	ಮೈನ್ ರೋಡ್, ಮಡಿಕೇರಿ, (ಕೊಡಗು)

Oriental Government Security Life Assurance Co., Ltd.

ರಷ್ಯಾದ ಕ್ರಾಂತಿಕಾರರು

ಫ್ರಾನ್ಸ್ ದೇಶದ ಸೆಮಿಯಟ್ ಮೊರ್ನಿ ಎಂಬ ಜಿಲ್ಲೆಯಲ್ಲಿ ಬಾರ್ಬಿಜಾನ್ ಎಂಬುದೊಂದು ಊರು ಆ ಊರಿನ ಒಂದು ಮೂಲೆಯಲ್ಲಿ ಒಂದು ದೊಡ್ಡ ಬಂಗಲೆ. ಅದರಲ್ಲಿ ವಾಸಮಾಡುತ್ತಿದ್ದವರು ಯಾರು? ಅವರಿಗೇನು ಕೆಲಸ? ಆ ಮನೆಯಲ್ಲಿ ಎಷ್ಟು ಜನ ವಾಸಿಸುತ್ತಿದ್ದಾರೆ? ಎಂಬುದು ಆ ಊರಿನವರಿಗೇ ಗೊತ್ತಿಲ್ಲ. ಆ ಮನೆಯವರೆಲ್ಲರೂ ಗೋಪ್ಯವಾಗಿ ಹೋಗುವುದು, ಬರುವುದು ಪದ್ಧತಿಯನ್ನು ಇಟ್ಟುಕೊಂಡಿದ್ದರು. ನೆರೆಹೊರೆಯವರಿಗೆ ಕೂಡ ಇವರ ನಿಜವಿಚಾರ, ಗೋಪ್ಯತೆಗೆ ಕಾರಣಗಳು ತಿಳಿದಿರಲಿಲ್ಲ. ಎಲ್ಲರಿಗೂ ಆ ಮನೆಯ ಮೇಲೆ ಅನುಮಾನ.

ಯಾರೋ ದಂಗೆಕೋರರು ಮನೆಯಲ್ಲಿ ವಾಸಿಸುತ್ತಿರುವರೆಂದು ಕೆಲವರ ವಾದ. ಜೂಜಿನ ಮನೆಯೆಂದು ಮತ್ತೆ ಕೆಲವರ ವಾದ. ನಿಜಾಂಶವೇನೆಂದು ತಿಳಿದುಕೊಳ್ಳುವ ಧೈರ್ಯ ಯಾರಿಗೂ ಇರಲಿಲ್ಲ. ಹಾಗೆ ಪ್ರಯತ್ನಪಟ್ಟಿದ್ದರೂ ಅವರಿಗೆ ತಿಳಿಯುತ್ತಿರಲಿಲ್ಲ ಅಂತಹ ವ್ಯಕ್ತಿಗಳು ಅಲ್ಲಿ ವಾಸಿಸುತ್ತಿದ್ದರು. ಸಂಧಾನ ನಡೆಯುತ್ತಿದ್ದಿತು. ಊರಿನ ಜನರಿಗೆ ಅನುಮಾನ ಹೆಚ್ಚಾಗಿ ಪೋಲೀಸ್ ಠಾಣೆಗೆ ವರ್ತಮಾನ ಕಳುಹಿಸಿದರು.

ಪೋಲೀಸಿನವರು ಈ ಸಮಾಚಾರವನ್ನು ಕೇಳಿ ತನಿಖೆ ಮಾಡಲೋಸುಗ ಆ ಬಂಗಲೆಯ ಬಳಿ ಬಂದರು. ಎಲ್ಲವೂ ನಿಶ್ಶಬ್ದ. ಒಳಗೆ ಜನರು ಕೂಡ ಇದ್ದಂತೆ ಕಂಡುಬರಲಿಲ್ಲ. ಅಲ್ಲಿಯೇ ಕೊಂಚ ಹೊತ್ತು ನಿಂತು ಹೊಂಚುಹಾಕುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಒಬ್ಬ ವ್ಯಕ್ತಿ ಮೋಟಾರ್ ಸೈಕಲಿನಲ್ಲಿ ಬಂದನು. ಪೋಲೀಸಿನವರು ಅವನನ್ನು ತಡೆದರು. ಆದರೆ ತಾನು ಯಾವುದೂ ತಿಳಿಸುವುದಿಲ್ಲವೆಂದು ಹೇಳುತ್ತಾ ಮನೆಯೊಳಕ್ಕೆ ಹೋದನು

ಪೋಲೀಸಿನವರು ಸಹ ಅವನನ್ನು ಹಿಂಬಾಲಿಸಿದರು ಆದರೆ ಅವರು ಯೋಚಿಸಿದ್ದಂತೆ ಅನುಮಾನದ ಕುರುಹುಗಳಾವುವೂ ಕಂಡುಬರಲಿಲ್ಲ ಮನೆಯಲ್ಲಿ ಇಬ್ಬರು ಜರ್ಮನ್ ಜವಾನರು ಮತ್ತೆ ಒಬ್ಬ ಪೋಲೆಂಡ್ ಜವಾನನು ಇದ್ದನು. ಒಳಭಾಗದ ಒಂದು ಕೋಣೆಯಲ್ಲಿ ಅಪರಿಚಯಸ್ಥ ವ್ಯಕ್ತಿಯೊಬ್ಬನು ಮೇಜಿನ ಮೇಲೆ ಎರಡು ಪಿಸ್ತೂಲುಗಳನ್ನು ಇಟ್ಟುಕೊಂಡು ದೀರ್ಘಾಲೋಚನೆ ಮಾಡುತ್ತಿದ್ದ. ಈ ಅಂತರಂಗ ಜೀವನಕ್ಕೆ ಕಾರಣವನ್ನು, ಆ ವ್ಯಕ್ತಿಯ ಪರಿಚಯವನ್ನೂ ಕೇಳಲಾಗ್ಯೆ ಅವನು ರಷ್ಯದ ಕ್ರಾಂತಿಕಾರನಾದ ಲಿಯೋಟ್ರಾಟ್ಸ್ಕಿಯೆಂತಲೂ ತನ್ನ ಮೇಲಿನ ಪಿತೂರಿ ನಡೆಯಿಸಲು ಸ್ಟಾಲಿನ್ ಕಡೆಯವರು ಹೊಂಚು ಹಾಕುತ್ತಿರುವುದರಿಂದ ಈ ರೀತಿ ಗೋಪ್ಯವಾಗಿ ಅಜ್ಞಾತವಾಸ ಮಾಡಬೇಕಾಗಿ ಬಂದಿದೆಯೆಂದೂ ತಿಳಿಸಿದನು.

ಲಿಯೋ ಟ್ರಾಟ್ಸ್ಕಿ

ರಷ್ಯಾದ ಸರ್ವಾಧಿಕಾರಿಯಾಗುವ ಅರ್ಹತೆ ಇದ್ದವನು ಇಂದು ದೇಶಭ್ರಷ್ಟನಾಗಿ ಕುಳಿತಿದ್ದಾನೆ ದೇಶದ ಹಿತವೇ ಅವನ ಹೆಗ್ಗುರಿ. ಅದಕ್ಕಾಗಿ ಸರ್ವಸ್ವವನ್ನು ಬಲಿಕೊಟ್ಟ ವೀರ ಇಂದವನ ಅಜ್ಞಾತವಾಸ ರಷ್ಯದ ಶ್ರೇಯಸ್ಸಿಗಾಗಿಯೇ ಹೊರತು ಮತ್ತೆ ಬೇರೆಯಲ್ಲ.

ಕ್ರಾಂತಿನಾಯಕನಾದ ಲೆನಿನ್ನನ ಬಲಭುಜದಂತಿದ್ದು ಅವನ ತರುವಾಯ ರಷ್ಯಾದ ಸರ್ವಾಧಿಕಾರಿಯ ಹುದ್ದೆಗೆ ಬರುವ ಭರವಸೆಯನ್ನು ಪಡೆದಿದ್ದ, ಟ್ರಾಟ್ಸ್ಕಿಗೆ ದೇಶೋಚ್ಚಾಟನೆಯಾದುದು ಬಹು ವಿಷಾದದ ವಿಷಯ. ಜಗತ್ತಿನಲ್ಲೆಲ್ಲಾ ಸರ್ವಸಮತಾವಾದವನ್ನು ಹಬ್ಬಿಸಬೇಕೆಂಬುದೇ ಟ್ರಾಟ್ಸ್ಕಿಯ ಮುಖ್ಯತತ್ವ ಇವನ ಹುಟ್ಟು ಹೆಸರು ಟ್ರಾಟ್ಸ್ಕಿಯೆಂದಲ್ಲ; 'ಬ್ರೊನ್‌ಸ್ಟೀನ್' ಎಂದು. ಕ್ರಾಂತಿಕಾರರಲ್ಲ ಒಳ್ಳೆಯ ಪಿತೂರಿಗಾರನಾರೆಂದು ಕೇಳುವುದಾದರೆ ತಕ್ಷಣವೇ ಟ್ರಾಟ್ಸ್ಕಿಯೆಂದು ಹೇಳಲು ಯಾರೂ ಹಿಂದೆಗೆಯುವುದಿಲ್ಲ. ಇವನು ಅಪ್ರತಿಭ ಪಿತೂರಿಗಾರ, ಜೊತೆಗೆ ಹಠವಾದಿ. ಯಾರಾದರೂ ತನ್ನನ್ನು ವಿರೋಧಿಸಿ ಮಾತಾಡಿದರೆ ಸಾಕು. ಅವರನ್ನು ನಿರ್ಮೂಲಮಾಡಿಬಿಡುತ್ತಿದ್ದನು.

ಟ್ರಾಟ್ಸ್ಕಿಯ ಬುದ್ಧಿಕುಶಲತೆಗಳು ಅಗಾಧವಾದುದು. ವಿಶಾಲ ಹೃದಯಿಯಾದರೂ ಅತಿ ಆಶೆಯುಳ್ಳವನು. ಇವನಲ್ಲಿದ್ದ ಆಶೆ ಮತ್ತಾರಲ್ಲಿಯೂ ಇಲ್ಲವೆಂದು ಹೇಳಬಹುದು. ವಿಶಾಲ ವಿಶ್ವವೇ ಸೋವಿಯೆಟ್ ತತ್ವವನ್ನು ಆಚರಿಸುವಂತೆ ಮಾಡಬೇಕೆಂಬುದೇ ಇವನ ಆಕಾಂಕ್ಷೆ. ಟ್ರಾಟ್ಸ್ಕಿ ಜನ್ಮತಃ ಯೆಹೂದ್ಯ. ಈ ಹುಟ್ಟು ಇವನು ಸರ್ವಾಧಿಕಾರಿಯಾಗಬೇಕೆಂಬುದಿದ್ದುದಕ್ಕೆ ಅರ್ಧ ಅಡಚಣೆಯೆಂದು ಹೇಳಬಹುದು. ಟ್ರಾಟ್ಸ್ಕಿಯು ತನಗೆ 25 ವರ್ಷವಾಗುವದರೊಳಗಾಗಿ 2ಸಲ ಶಿಕ್ಷೆಯನ್ನು ಅನುಭವಿಸಿದ್ದ.

ರಷ್ಯದ ಜಾರ್ ಚಕ್ರವರ್ತಿಗಳ ಆಡಳಿತವು ಜನಗಳ ಮನಸ್ಸಿನ ಮೇಲೆ ದುಷ್ಪರಿಣಾಮವನ್ನುಂಟುಮಾಡಿತ್ತು ಇವನ್ನರಿತ ಜನರು ಅಲ್ಲಲ್ಲಿ ಕ್ರಾಂತಿ ಚಳುವಳಿ ನಡೆಯಿಸುತ್ತಿದ್ದರು. ಅಂತಹ ಕ್ರಾಂತಿಗುಂಪಿಗೆ ಸೇರಿ ಟ್ರಾಟ್ಸ್ಕಿಯು ಮುಂದಾಳಾಗಿ ನಿಂತನು. ಜಾರ್ ಚಕ್ರವರ್ತಿಗಳು ಇವನ ಪುಂಡಾಟವನ್ನು ಅಡಗಿಸಬೇಕೆಂದು ಸೈಬೀರಿಯಾಕ್ಕೆ ಓಡಿಸಿದರು. ರಷ್ಯದಲ್ಲಿ ಹೆಜ್ಜೆ ಇಡುವುದಾದರೆ ಮರಣದಂಡನೆಯೇ ಇವನಿಗೆ ತಕ್ಕ ಶಿಕ್ಷೆಯೆಂದು ಪ್ರಚುರಪಡಿಸಿದರು

ಟ್ರಾಟ್ಸ್ಕಿಯು ಧೈರ್ಯವಂತನಾದರೂ ರಷ್ಯದಲ್ಲಿ ಒಂದು ನಿಲಸಲು ಸಾಧ್ಯವಾಗಲಿಲ್ಲ. ಸೈಬೀರಿಯಾದಿಂದ ಅಮೇರಿಕಾಕ್ಕೆ ಓಡಿದನು. ಎಲ್ಲಿಗೆ ಓಡಿದರೇನ, ಅವನ ಮನಸ್ಸೆಲ್ಲವೂ ರಷ್ಯದಲ್ಲಿ ನೆಲಸಿತ್ತು. ಸರ್ವಸಮತಾವಾದವನ್ನು ರಷ್ಯದಲ್ಲಿ ಭದ್ರಪಡಿಸಬೇಕೆಂಬ ಆಕಾಂಕ್ಷೆ ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿತ್ತು. 1917ರಲ್ಲಿ ನಡೆದ ಘೋರ ಕ್ರಾಂತಿಯನ್ನು ಕೇಳಿ ರಷ್ಯಾಕ್ಕೆ ಬರಲು ಪ್ರಯತ್ನಪಟ್ಟನು. ಆದರೆ ಅದೃಷ್ಟಹೀನ. ದಾರಿಯಲ್ಲಿಯೇ ಬ್ರಿಟಿಷ್ ಅಧಿಕಾರಿಗಳಿಂದ ಸೆರೆಯಲ್ಲಿಡಲ್ಪಟ್ಟನು. ಇವನ ಮೇಲೆ ಬಂದ ವಿಲ್ಲದ ಅನುಮಾನವೇ ಇದಕ್ಕೆ ಕಾರಣವಾಗಿತ್ತು ರಷ್ಯದಲ್ಲಿ ಕ್ರಾಂತಿಯು ಅಭಿವೃದ್ಧಿ ಹೊಂದಿ ಅಲೆಕ್ಸಾಂಡರ್ ಕೆರೆನ್ಸ್ಕಿಗೆ (ನಾಯಕನಾದನು) ಹೇಗೋ ಟ್ರಾಟ್ಸ್ಕಿಯ ಬಂಧನವು ಕೆರೆನ್ಸ್ಕಿಗೆ ತಿಳಿದು ಅವನನ್ನು ಅಲ್ಲಿಂದ ಬಿಡಿಸಿದನು. ಟ್ರಾಟ್ಸ್ಕಿಯ ದೇಶಪ್ರೇಮವು ಪ್ರತಿಯೊಬ್ಬರಿಗೂ ತಿಳಿದಿತ್ತು ಅವನೂ ಸಹ ದೇಶಸೇವೆಗೋಸ್ಕರ ಪ್ರಾಣಕೊಡಲು ಸಿದ್ಧನಾಗಿದ್ದವನು. ಅದಕ್ಕಾಗಿ ತನಗಿದ್ದ ಅಲ್ಪ ಐಶ್ವರ್ಯವನ್ನು ಸಹ ಬಿಟ್ಟು, ರಷ್ಯದ ಉದ್ಧಾರಕ್ಕಾಗಿ ಟೊಂಕಕಟ್ಟಿ ನಿಂತನು.

ಅಷ್ಟು ದೇಶಪ್ರೇಮಿಯಾದರೂ ಜನರೊಡನೆ ಹೊಂದಿಕೊಂಡು ಕೆಲಸಮಾಡುವ ಗುಣ ಇವನಲ್ಲಿಲ್ಲ. ತಾನು ಹೇಳಿದ್ದು ತಾನು ಮಾಡಿದ್ದು ಸರಿಯೆಂದು ವಾದಿಸುವ ಮನುಷ್ಯನಾದುದರಿಂದಲೇ ಇಂದು ಇವನು ರಷ್ಯದ ಸರ್ವಾಧಿಕಾರಿಯಾಗುವುದರ ಬದಲು ಅಜ್ಞಾತವಾಸ ಮಾಡುತ್ತಿರುವುದು. ಕ್ರಾಂತಿನಾಯಕನಾದ ಲೆನಿನ್ನನೂ ಇವನೂ ಸಹ ಅನ್ಯೋನ್ಯ ಸ್ನೇಹಿತರಾದರೂ ಒಂದು ವಿಷಯದಲ್ಲಿ ಮಾತ್ರ ಇಬ್ಬರಿಗೂ ಭಿನ್ನಾಭಿಪ್ರಾಯವಿತ್ತು.

ಅದೇನೆಂದರೆ ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಸೋವಿಯೆಟ್ ತತ್ವವನ್ನು ಅನುಸರಿಸುವಂತೆ ಮಾಡಬೇಕು ಹಾಗೆ ಮಾಡದೆ ಹೋದಲ್ಲಿ ರಷ್ಯಾದ ಒಂದು ರಾಷ್ಟ್ರದಲ್ಲಿ ಮಾತ್ರ ಆಚರಣೆಗೆ ತರುವುದು ಅಸಾಧ್ಯವೆಂದು ಟ್ರಾಟ್ಸ್ಕಿಯ ವಾದ. ಇತರ ರಾಷ್ಟ್ರಗಳು ಸೋವಿಯೆಟ್ ತತ್ವವನ್ನು ಅನುಸರಿಸಲಿ, ಬಿಡಲಿ ನಾವು ಮಾತ್ರ ಅನುಸರಿಸಿ ಜಯಶೀಲರಾಗಬೇಕೆಂಬುದೇ ಲೆನಿನ್ನನ ವಾದ.

ಇದು ಇವರಿಬ್ಬರ ಮನೋಭಿನ್ನಾಭಿಪ್ರಾಯಗಳ ಗುಟ್ಟು. ಹೋದರೂ ಹೋಗಲಿ ಟ್ರಾಟ್ಸ್ಕಿಯು ಲೆನಿನ್ನನ ಅಭಿಪ್ರಾಯವನ್ನು ಅನುಮೋದಿಸದಿದ್ದರೂ, ಇವನನ್ನು ಬ್ರಿಟಿಷ್ ಸೆರೆಯಿಂದ ಬಿಡಿಸಿದ ಕೆರೆನ್ಸ್ಕಿಯೊಡನೆಯಾದರೂ ಸಹಕರಿಸಿದನೇ? ಅದೂ ಇಲ್ಲ ಅವನಿಗೆ ವಿರುದ್ಧವಾಗಿ ಚಳುವಳಿಮಾಡಲು ಆರಂಭಿಸಿದನು ಇನ್ನೊಂದು ಕಡೆ ಕ್ರಾಂತಿನಾಯಕನಾದ ಜಿನೋವೀವ್‌ನ ತತ್ವವನ್ನು ಸಹ ಒಪ್ಪಲಿಲ್ಲ. ಇವರೀರ್ವರೊಡನೆಯೂ ಸಹಕರಿಸದೆ ವಿರುದ್ಧ ಚಳುವಳಿಮಾಡಿ ಟ್ರಾಟ್ಸ್ಕಿಯು ಅವರನ್ನು ಮೂಲೆಗೆ ಕೂಡಿಸಿಬಿಟ್ಟನು

1921ರಲ್ಲಿ ಲೆನಿನ್ನನು ಮರಣ ಹೊಂದಲು ರಷ್ಯಾದೇಶವು ನಾಯಕರಿಲ್ಲದೆ ಅಲ್ಲೋಲಕಲ್ಲೋಲವಾಗಹತ್ತಿತು ಅಂತಹ ಕಾಲದಲ್ಲಿ ಟ್ರಾಟ್ಸ್ಕಿನಲ್ಲದೆ ಮತ್ತಾರಿಗೂ ರಷ್ಯವನ್ನು ಆಳಬಲ್ಲ ಶಕ್ತಿ ಇರಲಿಲ್ಲ. ಆ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF
A CRORE

ESTD. 1906
CANARA BANK
LIMITED



"ಶೆಂಕ್ಸ"
SHANKS
(ಇಂಗ್ಲಿಷ್ ಮೇಕ್)
ಕ್ರೂಡ್ ಆಯಿಲ್ ಎನ್ಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶೆಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬೈಂಡ ಪ್ಲೇಂಟ್), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಯಿರಿ—

ಪೆರಮೌಂಟ್ ಇಂಜಿನೀಯರಿಂಗ್ ಕೊರ್ಪರೇಶನ್

೮೨, ಎಪ್ಪೋಲೋ ಸ್ಟ್ರೀಟ್, ಫೋರ್ಟ್.... ಮುಂಬಯಿ.

Paramount Engineering Corporation,
82 Appolo Street, Fort, **BOMBAY.**

ಸ್ಥಾನವನ್ನು ಗಳಿಸಬೇಕೆಂದು ಆಶಿಸುತ್ತಿದ್ದ ಟ್ರಾಟಸಿಗೆ ಒಳ್ಳೆಯ ಸಮಯ ಸಿಕ್ಕಿದಂತಾಯಿತ. ಆದರೆ ಅಲ್ಲಲ್ಲಿ ನಡೆಯುತ್ತಿದ್ದ ಪಿತೂರಿಗಳೂ ಕ್ರಾಂತಿ ಚಳುವಳಿಗಳೂ ರಾಜ್ಯವನ್ನು ಒಂದು ಸ್ಥಿತಿಕ್ಕೆ ತಂದಿರಲಿಲ್ಲ. ಟ್ರಾಟ್ಸ್ಕಿಯ ಪ್ರಾಬಲ್ಯವನ್ನು ನೋಡಿ ಹೊಟ್ಟೆಕಿಚ್ಚು ಪಡುತ್ತಿದ್ದವರು ಒಳಗೊಳಗೆ ಚಳವಳಿಗೆ ಆರಂಭಮಾಡಿದರು. ಯಹೋದ್ಯನನ್ನು ತಮ್ಮ ನಾಯಕನೆಂದು ಭಾವಿಸುವುದಿಲ್ಲವೆಂದು ಕೆಲವರೂ, ಲೆನಿನ್ನನ ಅಭಿಪ್ರಾಯಕ್ಕೆ ವಿರುದ್ಧವಾಗಿ ತನ್ನ ಅಭಿಪ್ರಾಯಗಳನ್ನು ಕೊಟ್ಟಿರುವುದರಿಂದ ಟ್ರಾಟ್ಸ್ಕಿಯನ್ನು ಮನ್ನಿಸಲು ಸಾಧ್ಯವಿಲ್ಲವೆಂತಲೂ ಕೂಗಾಡಹತ್ತಿದರು.

ಇದಕ್ಕೆಲ್ಲಾ ಮುಖ್ಯಕಾರಣನಾದವನು ಇಂದಿನ ರಷ್ಯದ ಸರ್ವಾಧಿಕಾರಿ ಸ್ಟಾಲಿನ್ನು ಟ್ರಾಟ್ಸ್ಕಿಯ ವಿರೋಧಿಗಳನ್ನು ತನ್ನೆಡೆಗೆ ಸೆಳೆದುಕೊಂಡು ಅವನ ಚಿಕ್ಕ ಚಿಕ್ಕ ತಪ್ಪುಗಳನ್ನು ದೊಡ್ಡದಾಗಿ ಬೆಳೆಸಿ ಸ್ಟಾಲಿನನು ತನ್ನದೊಂದು ದೊಡ್ಡ ಸೇನೆಯನ್ನು ತಯಾರುಮಾಡಿದನು. ಅಲ್ಲಲ್ಲಿ ಟ್ರಾಟ್ಸ್ಕಿಯ ಜೀವನವನ್ನು ಬಹುತಿಗೊಳ್ಳಲು ಏರ್ಪಾಡುಗಳು ಮಾಡಲ್ಪಟ್ಟವು ಪಿತೂರಿಗಾರರ ಕೆಲಸಗಳು ಪೂರ್ಣವಾಗುವ ಹೊತ್ತಿಗೆ ಟ್ರಾಟ್ಸ್ಕಿಯು ರಷ್ಯಾದೇಶವನ್ನು ಬಿಟ್ಟು ಹೊರಟನು. ತನ್ನ ಪಕ್ಷದಲ್ಲಿದ್ದ ಸೇನೆಯಿಂದ ಟ್ರಾಟ್ಸ್ಕಿಯು ಸ್ಟಾಲಿನನನ್ನು ಎದುರಿಸಬಹುದಾಗಿತ್ತು ರಾಷ್ಟ್ರದಲ್ಲೆಲ್ಲಾ ಗಲಭೆಯನ್ನು ಎಬ್ಬಿಸಬಹುದಾಗಿತ್ತು ಆದರೆ ರಾಷ್ಟ್ರಪ್ರಿಯನೂ ಜನಪ್ರಿಯನೂ ಆದ ಟ್ರಾಟ್ಸ್ಕಿಗೆ ಅದು ಸರಿಬೀಳಲಿಲ್ಲ ಸುಮಾರು 10 ವರ್ಷದ ಕೆಳಗೆ ದೇಶಹಿತಕ್ಕಾಗಿ ರಷ್ಯಾವನ್ನು ಬಿಟ್ಟು ಅಲೆಯುತ್ತಿದ್ದಾನೆ. ರಷ್ಯಾವನ್ನು ಸೇರಿ ಎಂದು ತಾನು ಜನರ ಸಹಾಯಕನಾಗುವೆನೆಂಬ ಕುತೂಹಲ,ಆಶೆ ಅವನ ಹೃದಯದಲ್ಲಿ ನೆಲಸಿದೆ. ಅದಕ್ಕೋಸ್ಕರ ಹೊಂಚುಹಾಕುತ್ತಿದ್ದಾನೆ ಸ್ಟಾಲಿನನಂತಹ ಕೊಲೆಗಡಕನ ಮುಂದೆ ಅದು ಸಾಧ್ಯವೋ ಇಲ್ಲವೋ ಹೇಳಲಾಗುವುದಿಲ್ಲ. ಬಾರ್ಬಜಾನನ ಬಳಿ ಗೋಪ್ಯವಾಗಿ ವಾಸಿಸುತ್ತಿದ್ದುದು ಬಯಲಾಯಿತೆಂದು ತಿಳಿದು ಎಲ್ಲಿಗೋ ಹೊರಟು ಹೋದನು. ಎಲ್ಲಿಗೆ ಹೋದನು? ಎಲ್ಲಿ ನೆಲೆಸಿದನು? ಎಂಬುದು ಬಹಳ ದಿವಸದ ವರೆವಿಗೂ ತಿಳಿದುಬಂದಿಲ್ಲ.

ಆದರೆ ಈಗ ಒಂದು ವರುಷದ ಕೆಳಗೆ ಅವನು ಮೆಕ್ಸಿಕೋದಲ್ಲಿ ನೆಲೆಸಿರುವನೆಂದು ತಿಳಿದು ಬಂದಿತು. ಈಗಲೂ ಕೂಡ ಮೆಕ್ಸಿಕೋದೇಶದ ಕೊಯೆನ್ ಎಂಬಲ್ಲಿ ಒಂದು ಹುಸರು ಮನೆಯಲ್ಲಿ ವಾಸಿಸುತ್ತಿದ್ದಾನೆ. ಅಲ್ಲಿಂದ ಹೊರಬರುವಂತಿಲ್ಲ ಸೋವಿಯಟ್ ಸರಕಾರದ ಗುಪ್ತಕೊಲೆಗಡಕರು ಅವನನ್ನು ಕೊಲ್ಲಲು ಬದ್ಧಕಂಕಣರಾಗಿ ನಿಂತಿದ್ದಾರೆ ರಷ್ಯಾದಿಂದ ಓಡಿ ಬಂದಿದ್ದರೂ ಅವನನ್ನು ಕೊಲ್ಲದೆ ಬಿಡುವುದು ಅಪಾಯಕರವೆಂದು ಸ್ಟಾಲಿನನ ಭಾವನೆ,

ಅವನನ್ನು ಕಾಣಲು ಯಾರಾದರೂ ಹೋಗಬೇಕಾದರೆ ಶಸ್ತ್ರಧಾರಿಗಳು ಅಂಥವರನ್ನು ಒಳಗೆ ಕರೆದುಕೊಂಡು ಹೋಗಿ ಕೆಲವು ನಿಮಿಷಗಳು ಮಾತನಾಡಿಸಿ ಅದಷ್ಟು ಜಾಗ್ರತೆ ಅವರನ್ನು ಹಿಂದಿರುಗಿ ಕಳುಹಿಸಿಬಿಡುವರು ಮಾತನಾಡುವಾಗಲಂತೂ ಈರ್ವರೇ ಇರುವಂತಿಲ್ಲ. ಸುತ್ತಲೂ ಶಸ್ತ್ರಧಾರಿಗಳು ನಿಂತಿರಬೇಕು. ಇತ್ತೀಚೆಗೆ ಟ್ರಾಟ್ಸ್ಕಿಯನ್ನು ಕೊಲೆಮಾಡಬೇಕೆಂದು ರಷ್ಯದಿಂದ ಮತ್ತಷ್ಟು ಜನರನ್ನು ಕಳುಹಿಸಿರುವರೆಂದು ಗೊತ್ತಾಗಿದೆ.

ಪ್ರಕಟಣೆ.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. Cs No. 195/38

R. E P. No. 1195/38

A. M. L. D'souza—ಅರ್ಜಿದಾರ.

ಮತ್ತು

P. M. D'souza ಕೂಡ 2 ಜನರು } ಎದ್ರಿರು.

ಇವರೊಳಗೆ

ಮಂಗಳೂರು ತಾಲೂಕು ಬಪ್ಪನಾಡು ಗ್ರಾಮದ ಮೂಲ್ಕಿ Church view ಎಂಬಲ್ಲಿರುವ ಜೊಸೆಫ ಡಿಸೋಜರ ಮಗ 2ನೇ ಎದ್ರಿಪ್ರತಿವಾದಿ ಫ್ರಾಂಸಿಸ್ಕೆ ಜೋನ್ ಅಂತೋನ ಡಿಸೋಜ ಇವರಿಗೆ–

ಸದ್ರಿ ಅಮಲ್ದಾರಿಯಲ್ಲಿ ನಿಮ್ಮ ಬಾಬ್ತು ಸ್ಥಿರಾಸ್ತಿಯನ್ನು ಏಲಂ ಮಾಡಿಸುವದರ ಕುರಿತು ಏಲಂ ಇಸ್ತಿಹಾರು ಜಾಹಿರು ಮಾಡಿರುವದ್ರಿಂದ ಬಿನ ಮತ್ತು ಸದ್ರಿ ಆಸ್ತಿ ಏಲಂ ಸಮಯ ಬಿಡ್ ಮಾಡುವರೆ ಮತ್ತು ಬಿಡ್ ಮಾಡುವ ಖರೀದಿ ಮೊಬಲಗಿನಲ್ಲಿ ವಜಾ ಮಾಡುವರೇ ಕೂಡಾ ಪರ್ಮಿಶನ್ ಕೇಳಿ ಅರ್ಜಿದಾರರು ಅರ್ಜಿ ದಾಖಲು ಮಾಡಿರ.ವದ್ರಿಂದಲು ಇವುಗಳ ಕುರಿತು ನಿಮಗೆ ಆಕ್ಷೇಪ ಇದ್ದವದ್ರೆ ಅವುಗಳನ್ನು ನೀವು ಸ್ವತಃ ಯಾ ವಕೀಲರ ಮುಖಾಂತರ ತಾ. 4–3–39ನೆ ಹಗಲು ಗಂಟೆ ೧೧ಕ್ಕೆ ಸದ್ರಿ ಕೋರ್ಟಿಗೆ ಹಾಜರಾಗಿ ತಿಳಿಸಬೇಕು ತಪ್ಪಿದಲ್ಲಿ ಸದ್ರಿ ವ್ಯವಹಾರವನ್ನು ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸಿರುತ್ತೇನೆ.

ಕೋರ್ಟಿನವರ ಹುಕುಂ ಪ್ರಕಾರ.

ಯಂ. ಎಸ್. ಅಧಿಕಾರಿ,
ಅರ್ಜಿದಾರನ ಕಡೆ ವಕೀಲ.

ಮೊಕ್ಕಾಂ: ಕಾರ್ಕಳ, ತಾ. 4–2–1939.

ಪ್ರಕಟಣೆ.

ಶಿರ್ವ ಪಂ. ಬೋರ್ಡಿನ ಪ್ರೆಸಿಡೆಂಟರಿಂದ

ಶಿರ್ವ ಪಂಚಾಯತಬೋರ್ಡಿಗೊಳಪಟ್ಟ ಮಂಚಕಲ್ ಹಸ್ತೇವಾರು ಮಾರ್ಕೆಟಿನಲ್ಲಿ ಸಂ 1939ನೇ ಇಸ್ವಿ ಎಪ್ರಿಲ್ ತಿಂಗಳ ತಾ. 1ರ ಆರಭ್ಯತು 1940ನೇ ಮಾರ್ಚ 31ರ ವರೆಗೆ ಒಂದು ವರ್ಷದ ಮಟ್ಟಿನ ವಸೂಲ್ ಮಾಡುವ ಸ್ವತಂತ್ರವನ್ನು **1939ನೇ ಫೆಬ್ರವರಿ ತಾ. 19ನೇ ಆದಿತ್ಯವಾರ ಹಗಲು ಘಂಟೆ 3ಕ್ಕೆ ಸರಿಯಾಗಿ ಸದ್ರಿ ಪಂ. ಬೋ. ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.** ಸದ್ರಿ ಏಲಂಗಳು ಪಂಚಾಯತ ಬೋರ್ಡಿನ ಮಂಜೂರಾತಿಗೊಳಪಟ್ಟವುಗಳಾಗಿರುತ್ತವೆ. ಮತ್ತು ಸಂಬಂಧಪಟ್ಟ ಸಂಪೂರ್ಣ ಮಾಹಿತಿ ವಗೈರೆಗಳನ್ನು ಆಫೀಸ್ ನೋಟೀಸ್ ಬೋರ್ಡಿನ ಬಹಿರಂಗ ಪ್ರಕಟಣಾದಿಗಳಿಂದ ಓದಿ ಯಾ ಆಫೀಸಿನಲ್ಲಿ ಕೇಳಿ ತಿಳಕೊಳ್ಳಬಹುದು ಎಂದು ಉಮೇದ್ವಾರ ಹಾಗೂ ಸಾರ್ವಜನಿಕರಿಗೆಲ್ಲಾ ಈ ಮೂಲಕ ತಿಳಿಸೋಣಾಗುತ್ತದೆ,

Panchayat Bd. Office. Shirva, Dated 1-2-39	(Sd) S. Annayya Hegde President, Panchayat Board, Shirva, South Kanara.

ಬೊಂಬಾಯಿಯ ನಮ್ಮ ಪ್ರತಿನಿಧಿಗಳು

ಶ್ರೀ. ಯು. ಕೆ. ರಂಗ,

ಜಪಾನ್ ಕೊಟನ್ ಟ್ರೇಡಿಂಗ್ ಕೊ. ಲಿಮಿಟೆಡ್.

ನೋಟೀಸು.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P. No. 3/39

1 ಕೆ ವೆಂಕಟೇಶ ಶೆಣೈ

2 ಕೆ. ರಾಮದಾಸ
3 ಕೆ. ಶಾಂತಾರಾಮ } ಮ್ಯಾನರರು

ಕೆ ಅನಂತಯ್ಯ ಶ್ಯಾನುಭಾಗರ ಮಕ್ಕಳು. ಕ್ಷೇಮಚಿಂತಕ–ಅಣ್ಣ–**1 ನೇ ಅರ್ಜಿದಾರ**

4 ಕೆ. ಮಂಜುನಾಥ ಶ್ಯಾನುಭಾಗ

5 ಕೆ. ನಾರಾಯಣ ಶೆಣೈ

6 ಕೆ. ರಾಮನಾಥ ಶೆಣೈ

ಕೆ. ಅನಂತಯ್ಯ ಶ್ಯಾನುಭಾಗರ ಸಹೋದರರು ವ ಕೆ. ವ್ಯಾಸರಾಯ ಶ್ಯಾನುಭಾಗರ ಮಕ್ಕಳು

1, 2, 3ನೇ ಅರ್ಜಿದಾರರು ಉಡ್ಪಿ ಕಸಬಾ, 4, 5ನೇ ಅರ್ಜಿದಾರರು ಉಡ್ಪಿ ತಾಲೂಕು ಕಡೆಕಾರು ಗ್ರಾಮ, 6ನೆ ಕೊಚ್ಚಿನ ಸ್ಟೇಟಿನಲ್ಲಿ

ಅರ್ಜಿದಾರರು

1ನೆ 2ನೆ 3ನೆ ಅರ್ಜಿದಾರರ ತಂದೆ ವ 4ನೆ 5ನೆ 6ನೆ ಅರ್ಜಿದಾರರ ಅಣ್ಣ ಮೃತ ಕೆ. ಅನಂತಯ್ಯ ಶ್ಯಾನುಭಾಗರ ಬಾಬ್ತು The Bombay Life Assurence Co,Ltd, ಈ ಕಂಪನಿಯಿಂದ Policy No 24531-26 272-34685-6936ರ ಬಾಬ್ತು ರಕ್ಕ ಇನ್ಸೂರು ವ ಬೋನಸ್ ವಗೈರೆ ಐವೇಜುಗಳ ವಸೂಲಿ ಕುರಿತು 1ನೆ 2ನೆ 3ನೆ ಅರ್ಜಿದಾರರಿಗೂ ಸ್ವರ ಅವರ ಕಡೆಯಿಂದ ಕೂಡಾ 1ನೇ ಅರ್ಜಿದಾರಗೆ ಸಕಸೆಸ್ಸನ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖ್ಲೆ ಮಾಡಿದ ಸದ್ರಿ ಅರ್ಜಿಯು ತಾ. 10-2-39ಲ್ಲು ಇಡೋಣಾಗಿರುವದೆ ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ತಸ್ಕ ದಿವ್ಸ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಆಕ್ಷೇಪ ಹಾಜರ್ಪಡಿಸತಕ್ಕದ್ದು.

K. Ramanath Pai,
Pleader for Petitioners.
Udipi, S. K. Dated 6-2-39

Degrees: Books Medicines.

Free H. L. M S. H M. B. H. M D etc. Free Homeo-Ayur-Unani-Naturo degrees by post also—Practitioners also get soon. Homeo Materiamedica, Rs. 5, Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)
P. O MAHUVA, (Kathiawar Dt. India)

ತಿದ್ದುಪಡಿ

ದಿ ಇಂಡಸ್ಟ್ರಿಯಲ್ ಎಂಡ್ ಪ್ರುಡೆನ್ಸಿಯಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ—ನವಯುಗದ ಮಕರ ಸಂಕ್ರಾಂತಿ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಈ ಕಂಪೆನಿಯ ಜಾಹೀರಾತಿನಲ್ಲಿ ಚಾಲ್ತಿಯಲ್ಲಿರುವ ವಿಮಾ ಮೊಬಲಗು ರೂ. 5ಕೋಟಿಗೆ ಮಿಕ್ಕಿದೆ ಎಂದೂ ಒಟ್ಟು ವಿಮಾ ಭಂಡವಾಳ ರೂ. 8/-ಕೋಟಿಗೆ ಮಿಕ್ಕಿದೆ ಎಂದೂ ಪ್ರಕಟವಾಗಿದೆ. ಒಟ್ಟು ವಿಮಾ ಭಂಡವಾಳ ರೂ 8/-ಕೋಟಿ ಎಂಬುದರ ಬದಲಿಗೆ ರೂ. 1ಕೋಟಿ ಎಂದು ಓದಿಕೊಳ್ಳಬೇಕು. 8ಕೋಟಿ ಎಂದು ತಪ್ಪಾಗಿ ಪ್ರಕಟವಾದುದಕ್ಕೆ ವಿಷಾದಿಸುತ್ತೇವೆ. (ಸಂ ನ.)

ಕರ್ನಾಟಕ ಏಕೀಕರಣಸಂಘ-ಸ್ಥಾಪನೆ

ಬೆಂಗಳೂರು ಜ. ೨೦–ತಾರೀಖು ೧೯-೧-೩೯ ನೇಗುರುವಾರ ಸಾಯಂಕಾಲ ಬೆಂಗಳೂರು 'ಶರಣಸಾಹಿತ್ಯ' ಕಾರ್ಯಾಲಯದಲ್ಲಿ ಕರ್ನಾಟಕ ಏಕೀಕರಣ ತತ್ವಾಭಿಮಾನಿಗಳ ಸಭೆಯೊಂದು ಸೇರಿ ಅಖಂಡ ಕರ್ನಾಟಕದ ಏಕೀಕರಣ ತತ್ವಕ್ಕೆ ಬೆಂಬಲಕೊಡುವ ಸಲುವಾಗಿ ವಿಶೇಷತಃ ತುಂಗಭದ್ರೆಯ ದಕ್ಷಿಣ ಭಾಗದಲ್ಲಿ ಈ ಏಕೀಕರಣವನ್ನು ಪ್ರಚಾರಮಾಡುವ ಸಲುವಾಗಿ ಒಂದು ಸಂಘ ಸ್ಥಾಪನೆಯಾಯಿತು.

ಈ ಸಂಘಕ್ಕೆ ಶ್ರೀ. ಬೆನಗಲ್ ರಾಮರಾಯರು ಅಧ್ಯಕ್ಷರಾಗಿಯೂ, ಶ್ರೀ. ಬಿ ವೆಂಕಟೇಶಪ್ಪನವರು ಕೋಶಾಧ್ಯಕ್ಷರಾಗಿಯೂ, ಶ್ರೀಗಳಾದ ಕೀರ್ತನಕೇಸರಿ ಬಿ. ಶಿವಮೂರ್ತಿಶಾಸ್ತ್ರಿ ಮತ್ತು ಅ. ನ. ಕೃಷ್ಣರಾಯರು ಗೌರವ ಕಾರ್ಯದರ್ಶಿಯವರಾಗಿಯೂ ಬೆಂಗಳೂರಿನಿಂದ ಹನ್ನೆರಡು ಮಂದಿ ಪ್ರಮುಖರು ಕಾರ್ಯಕಾರಿ ಮಂಡಲ ಸದಸ್ಯರಾಗಿಯೂ ಆರಿಸಲ್ಪಟ್ಟಿರುವರು.

ಮುದುಕನು ಯುವಕನಾಗುವನು.

ಬೂಟಿ ಟಾನಿಕ್, ಕೂದಲು ನರೆಯುವುದನ್ನು ನಿಲ್ಲಿಸದಿದ್ದರೆ, ನರೆತ ಬಿಳಿ ಕೂದಲನ್ನು ಕಾಯಂ ಆಗಿ ಕಪ್ಪು ಮಾಡದಿದ್ದರೆ ಕಣ್ಣಿನ ದೃಷ್ಟಿಯು ಮಂದವಾಗುತ್ತಿರುವುದು ಶುಭ್ರಗೊಳಿಸದಿದ್ದರೆ, ಸುಕ್ಕು ಗಟ್ಟುತ್ತಿರುವುದು ತಡೆಯಾಗದಿದ್ದರೆ, ಮುದುಕರನ್ನು ತರುಣರನ್ನಾಗಿ ಮಾಡದಿದ್ದರೆ, ದುಬಾರೆ ಕಿರೀದಿಯನ್ನು ಹಿಂದೆ ಕೊಡುವ ಶರ್ತವಿದೆ. ತರುಣರ ಪೂರ್ಣ ಚಿಕಿತ್ಸೆಗೆ ರೂ 6. ಮುದುಕರಿಗೆ ರೂ. 10.

ಶೀಘ್ರಪತನ-ನಪುಂಸಕತ್ವಕ್ಕೆ

ಉತ್ಕೃಷ್ಟ ಟಾನಿಕು. ಕ್ರಯ ರೂ. 5. ಸಂಶಯವಿದ್ದರೆ ರೂ. 1ರ ಸ್ಟ್ಯಾಂಪಲು ಪಡೆಯಿರಿ; ತೃಪ್ತಿಗಾಂದು ದೊಡ್ಡ ಆರ್ಡರ ಕೊಡಿರಿ.

Jary Book Dawakhana,
P. O. BiharNursery (DARBHANGA,)

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ, ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಅಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. **ಕ್ರಯ:**-100ಮಾತ್ರೆಗಳಿಗೆ ರೂ 1–5–0, 500ಕ್ಕೆ ರೂ. 5–0–0. ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ

ಆ ಮ ಲ ಕೀ ತೈ ಲ

(ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0.
2 ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು **ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ**, ಇಲ್ಲಿ ಸಿಗುತ್ತವೆ. ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,
ಬ್ರಹ್ಮಾವರ ಪೋಸ್ಟ್, ದ. ಭಾರತ

THE

Canara Banking Corporation, Udipi, Ltd.

(Incorporated in British India)

THE REGISTER OF MEMBERS & TRANSFER BOOKS of the CORPORATION will remain closed from 16–2–1939 to 5–3–1939 both days inclusive.

(By Order)

V. R. KAMATH,
MANAGER.

ಉಡುಪಿ, ಗುರುವಾರ, ತಾ. ೯-೨-೩೯

ತ್ರಿಪುರಿ ಕಾಂಗ್ರೆಸಿನ ಅಧ್ಯಕ್ಷತೆ

ಈ ಕುರಿತು ದೇಶವೆಲ್ಲೆಲ್ಲಾ ತೀವ್ರ ವಾದವೆದ್ದು ಗಾಂಧಿಜಿಯವರ ಮೇಲೆ ಕೂಡಾ ಅದು ಪರಿಣಾಮವನ್ನುಂಟುಮಾಡಿರುವುದು ದೊಡ್ಡ ದುರ್ದೈವ. ಇದಕ್ಕೆ ಬಹುತೇಕ ಶ್ರೀ ಭೋಸರೇ ಕಾರಣವೆನ್ನಬಹುದು. ಶ್ರೀ ಭೋಸರನ್ನು ಇನ್ನೊಮ್ಮೆ ಅಧ್ಯಕ್ಷರಾಗಿ ಆರಿಸುವ ಆವಶ್ಯಕತೆಯಿಲ್ಲ. ಮಾತ್ರವಲ್ಲದೆ ಅದು ದೇಶಹಿತ ದೃಷ್ಟಿಯಿಂದ ಯುಕ್ತವಲ್ಲೆಂದು ಹೇಳುವಷ್ಟು ಶ್ರೀ ಸರ್ದಾರ್ ವಲ್ಲಭಭಾಯಿಯವರೇ ಮೊದಲಾದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರು ಮುಂದುವರಿದು, ಜಾಹೀರಾಗಿ ಶ್ರೀ ಪಟ್ಟಾಭಿಯವರ ಉಮೇದ್ವಾರಿಕೆಯನ್ನು ಸಮರ್ಥಿಸಿ ಪ್ರಯತ್ನ ಮಾಡಿದುದು ಬಹಳ ಅಚಾತುರ್ಯವಾಗಿದೆ. ಸಮತಾವಾದಿಗಳೇ ಮೊದಲಾದವರು ಶ್ರೀ ಭೋಸರ ವಿಷಯದಲ್ಲಿಯೂ ಪ್ರಯತ್ನ ಮಾಡಿರಬಹುದು. ಆದರೆ ದೇಶದ ಸನ್ಮಾನ್ಯ ಹಾಗೂ ಅತ್ಯಂತ ಜವಾಬ್ದಾರಿಯುಳ್ಳ ಮುಖಂಡರು ಈ ರೀತಿ ಪಕ್ಷ ಹಿಡಿಯಬಾರದಿತ್ತು. ಆದರಿಂದಲೇ ದೇಶದಲ್ಲೀಗ ತೀವ್ರವಾದ ವಿವಾದದ ಬಿರುಗಾಳಿಯೇಳಲು ಕಾರಣವಾಯಿತು.

ಶ್ರೀ ಭೋಸರ ಅವಿವೇಕ.

ಸರ್ದಾರ್ ವಲ್ಲಭಭಾಯಿಯವರು ಶ್ರೀ ಪಟ್ಟಾಭಿಯವರ ಪಕ್ಷ ಹಿಡಿದೊಡನೆಯೇ ಶ್ರೀ ಭೋಸರು ಸಂತಪ್ತರಾಗಿ ಕಾಂಗ್ರೆಸಿನೊಳಗಣ ಬಲಪಕ್ಷೀಯರೆಂಬವರ ಮೇಲೆ ನಾನಾ ಆರೋಪಗಳನ್ನು ಹಾಕಿ ಪ್ರಕಟಿಸಿರುವ ಹೇಳಿಕೆಗಳು ಅತ್ಯಂತ ಅವಿವೇಕಪರವಿರುತ್ತವೆ. ಆದರಿಂದಲೇ ಗಾಂಧಿಜಿಯವರು ಅಷ್ಟೊಂದು ನೊಂದುಕೊಳ್ಳಲು ಕಾರಣವಾಗಿರಬಹುದು. ಕಾಂಗ್ರೆಸಿನೊಳಗೆ ಈಗ ಅಧಿಕಾರದಲ್ಲಿರುವ ಬಲಪಕ್ಷೀಯರು ಎಡಪಕ್ಷೀಯರನ್ನು ಮೂಲೆಗೊತ್ತಿ ತಮ್ಮ ಕೈಗೊಂಬೆಯಾಗಿ ನಡೆಯುವ ಅಧ್ಯಕ್ಷರನ್ನು ಆರಿಸುವ ಪ್ರಯತ್ನದಲ್ಲಿದ್ದಾರೆ. ಬ್ರಿಟಿಷ್ ಸರಕಾರದೊಡನೆ ರಾಜಿಮಾಡಿಕೊಂಡು ಫೆಡರೇಶನನ್ನು ಸ್ವೀಕರಿಸುವ ಕೂಟ ನೀತಿಯು ಕಾಂಗ್ರೆಸಿನೊಳಗೆ ನಡೆದಿದೆ. ಫೆಡರಲ್ ಎಸೆಂಬ್ಲಿಯಲ್ಲಿ ಯಾರ್ಯಾರು ಮಂತ್ರಿಗಳಾಗುವದೆಂಬುದು ಕೂಡಾ ನಿಶ್ಚಯವಾಗಿದೆಯೆಂದೆಲ್ಲಾ ಶ್ರೀ ಭೋಸರು ತನ್ನ ಸಹವ್ಯವಸಾಯಿಗಳ ಮೇಲೆ ಆರೋಪ ಹೊರಿಸಿದುದು ದೊಡ್ಡ ಅವಿವೇಕವಾಯಿತು. ಕಾಂಗ್ರೆಸನ್ನು ಎಡಬಲಪಕ್ಷವಾಗಿ ಸಂಯಾಗಿ ವಿಂಗಡಿಸಿ ಬಲಪಕ್ಷೀಯರೆಂಬವರನ್ನು ಅನಾವಶ್ಯಕವಾಗಿ ಮತ್ತು ಅನುಚಿತವಾಗಿ ಟೀಕಿಸಿ ಒಡಕಿನ ಬೀಜ ಬಿತ್ತಿದವರು ಶ್ರೀ. ಸುಭಾಸಚಂದ್ರ ಭೋಸರು. ಈಗಣ ಅಧ್ಯಕ್ಷರೂ ಮುಂದಿನ ಅಧ್ಯಕ್ಷಪದವಿಗೆ ಉಮೇದ್ವಾರರಾಗಿ ನಿಂತವರೂ ಆದ ಅವರು ಈ ರೀತಿ ದುಡುಕಿದುದು ಬೇಜವಾಬ್ದಾರಿತನವಾಯಿತೆಂದು ಹೇಳಿದರೂ ತಪ್ಪಾಗಲಾರದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರರೂ ದೇಶದ ಸನ್ಮಾನ್ಯ ಮುಖಂಡರೂ ಆಗಿರುವ ಮಹನೀಯರು ಈ ರೀತಿ ಜಾಹೀರಾಗಿ ಪಕ್ಷವಹಿಸಿ, ತಮ್ಮ ಕೆಲವರ ಅಭಿಪ್ರಾಯವನ್ನು ದೇಶದ ಮೇಲೆ ಹೊರಿಸುವುದು ಪ್ರಜಾಸತ್ತೆಯ ಮೂಲತತ್ವಕ್ಕೇನೇ ವಿಘಾತುಕವಾದುದು. ಪ್ರತಿನಿಧಿಗಳು ತಮಗೆ ತೋರಿದಂತೆ ಉಮೇದ್ವಾರರ ಯೋಗ್ಯತೆಯನ್ನು ಸ್ವತಂತ್ರ ಬುದ್ಧಿಯಿಂದ ಚೆನ್ನಾಗಿ ಪರಿಶೀಲಿಸಿ ಮತದಾನವೀಯಬೇಕೆಂದು ಮಾತ್ರ ಶ್ರೀ. ಭೋಸರು ವಿನಂತಿ ಮಾಡಿಕೊಳ್ಳುತ್ತಿದ್ದರೆ [illegible] ದೊಡ್ಡ ತೊಡಕುಂಟಾಗುತ್ತಿದ್ದಿಲ್ಲ. ಒಂದು ವೇಳೆ ಆಗುತ್ತಿದ್ದರೂ ಅದಕ್ಕೆ ಅವರು ಜವಾಬ್ದಾರರಾಗುತ್ತಿದ್ದಿಲ್ಲ. ಅವರು ಉದ್ವೇಗಗೊಂಡು ಮಾಡಿದ ಅವಿವೇಕದಿಂದ ಗಾಂಧಿಜಿಯವರೇ ಮೊದಲಾದವರ ಸಹಕಾರವೇ ಅವರಿಗೆ ದೊರೆಯುವುದಿಲ್ಲವೋ ಎಂಬ ಸಂದೇಹಕ್ಕಾಸ್ಪದವಾಗಿದೆ.

ಗಾಂಧಿತ್ವಕ್ಕೆ ಅಪಜಯವಲ್ಲ

ಮಹಾತ್ಮ ಗಾಂಧಿಯವರು ಶ್ರೀ ಭೋಸರ ವಿಜಯವನ್ನು ತನ್ನ ಅಪಜಯವಾಗಿ ತೆಗೆದುಕೊಂಡಿರುವುದು ಅತ್ಯಂತ ವಿಷಾದಕರವಿದೆ. ಕಾಂಗ್ರೆಸಿನೊಳಗಣ ಎಡಪಕ್ಷೀಯರೆಂಬವರ ಇತ್ತಲಾಗಿನ ವರ್ತನೆಯಿಂದ ಅವರ ಮನಸ್ಸು ಬಹಳವಾಗಿ ನೊಂದಿರುವುದು. ದಿಲ್ಲಿಯಲ್ಲಿ ನಡೆದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯಿಂದ ಎಡಪಕ್ಷೀಯರು ಹಲವರು, ಒಂದು ಠರಾವನ್ನು ನಿಷೇಧಿಸಿ ಹೊರನಡೆದುದರಿಂದ ಗಾಂಧಿಯವರು ಬಹಳ ಸಂತಾಪಗೊಂಡು ಕಾಂಗ್ರೆಸನ್ನು ಇಂಥ [illegible] ಗಳ ಕಳವಾಗಿ ಮಾಡುವುದರಲ್ಲಿ ಅರ್ಥವಿಲ್ಲ. ಅವನ್ನು ಬೇಕಾದರೆ ಎಡಪಕ್ಷೀಯರೆನಿಸುವವರು ವಹಿಸಿ ನಡೆಸಬಹುದೆಂದೂ, ಅವಶ್ಯಬಿದ್ದರೆ ಬಲಪಕ್ಷೀಯರು ಕಾಂಗ್ರೆಸನ್ನು ಬಿಟ್ಟು ಹೊರಗೆಬಂದು ತಮಗೆ ತೋರಿದ ರೀತಿಯಲ್ಲಿ ದೇಶಸೇವೆ ಮಾಡುವುದು ಉಚಿತವೆಂದೂ ಎಚ್ಚರವಿತ್ತಿದ್ದರು. ಈಗ ಶ್ರೀ ಭೋಸರು ಕಾಂಗ್ರೆಸಿನೊಳಗಣ ಬಲಪಕ್ಷೀಯರ ಮೇಲೆ ಅನ್ಯಾಯವಾಗಿ ಹಲವು ಆರೋಪಗಳನ್ನು ಹೊರಿಸಿ, ಕಾಂಗ್ರೆಸನ್ನು ಎಡಬಲ ಪಕ್ಷಗಳಾಗಿ ಸರಿಯಾಗಿ ವಿಂಗಡಿಸಿ, ಅಧ್ಯಕ್ಷತನಕ್ಕಾಗಿ ಪ್ರತಿಸ್ಪರ್ಧೆಯನ್ನುಂಟುಮಾಡಿ, ಈ ಪ್ರತಿಸ್ಪರ್ಧೆಯೆಂದರೆ ಕಾಂಗ್ರೆಸಿನೊಳಗಣ ಎಡಬಲ ಪಕ್ಷಗಳೊಳಗಣ ಶಕ್ತಿಪರೀಕ್ಷೆಯೆಂಬಂತೆ ವರ್ತಿಸಿರುವರು. ಇದರಿಂದಲೇ ಗಾಂಧಿಯವರು ಶ್ರೀ ಭೋಸರ ವಿಜಯವನ್ನು ಕಾಂಗ್ರೆಸಿನೊಳಗಣ ತನ್ನ ತತ್ವ ಮತ್ತು ರೀತಿನೀತಿಗಳಿಗೆ ಅಪಜಯವೆಂದು ತೆಗೆದುಕೊಂಡಿರುತ್ತಾರೆ. ತಾನೂ ತನ್ನ ಅನುಯಾಯಿಗಳೂ, ಕಾಂಗ್ರೆಸಿನೊಳಗಣ ಎಡಪಕ್ಷೀಯರೆಂಬವರಿಗೆ ಕಾರ್ಯಕ್ಷೇತ್ರವನ್ನು ಬಿಟ್ಟುಕೊಟ್ಟು ಅವರಿಗೆ ತಮ್ಮಿಂದ ಸಾಧ್ಯವಾದ ಸಹಾಯವೀಯುತ್ತಾ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತುವುದರಲ್ಲಿ ನಿರತರಾಗಬೇಕೆಂದು ಗಾಂಧಿಜಿಯವರು ನಿರ್ಧಾರಮಾಡಿರುವಂತಿದೆ. ಅವರ ಹಲವು ಮಂದಿ ನಿಷ್ಠಾವಂತ ಅನುಯಾಯಿಗಳು ಇದೇ ರೀತಿ ಅಭಿಪ್ರಾಯಪಟ್ಟಿರುತ್ತಾರೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ತಾವಿನ್ನು ಶ್ರೀ. ಭೋಸರ ಸಹವ್ಯವಸಾಯಿಗಳಾಗಿ ಕೆಲಸಮಾಡಲು ಸಾಧ್ಯವಿಲ್ಲ. ಅವರು ತನ್ನ ರೀತಿನೀತಿಗಳಿಗೊಪ್ಪಿ ತನ್ನ ಅಭಿಮತದಂತೆ ನಡೆದು ತನ್ನೊಡನೆ ಸಂಪೂರ್ಣ ಮನಸ್ಸಿನಿಂದ ಸಹಕರಿಸುವ ಸಹೋದ್ಯೋಗಿಗಳನ್ನು ಆರಿಸತಕ್ಕದ್ದೆಂದೇ ಇವರ ಅಭಿಮತ. ಹೀಗಾದರೆ ಕಾಂಗ್ರೆಸಿನೊಳಗೆ ಒಡಕು ನಿಶ್ಚಯ. ಗಾಂಧಿವಾದವನ್ನೆತ್ತಿ ಹಿಡಿದು ಈ ಸಲದ ಅಧ್ಯಕ್ಷತನದ ಪ್ರತಿಸ್ಪರ್ಧೆಯೇನೂ ನಡೆದಿರುವುದಿಲ್ಲ. ಶ್ರೀ ಪಟ್ಟಾಭಿಯವರನ್ನೇ ಅಧ್ಯಕ್ಷರಾಗಿ ಆರಿಸಬೇಕು, ಆಗ ಮಾತ್ರ ಕಾಂಗ್ರೆಸಿನಲ್ಲಿ ತನ್ನ ರೀತಿನೀತಿಗಳಿಗೆ ಮನ್ನಣೆಯುಂಟಾಗುವುದು, ತನ್ನ ಸಲಹೆ ಮತ್ತು ಸಹಕಾರವನ್ನು ಕಾಂಗ್ರೆಸಿಗೆ ತಾನು ಯಥಾಪ್ರಕಾರ ಕೊಡುವಂತಾಗುವುದೆಂದು ಸ್ಪಷ್ಟಪಡಿಸಿ, ಈ ಸಲದ ಅಧ್ಯಕ್ಷತನದ ಚುನಾವಣೆಯೆಂದರೆ ಕಾಂಗ್ರೆಸಿನೊಳಗಣ ಗಾಂಧಿವಾದಿಗಳ ಮತ್ತು ಸಮತಾವಾದಿಗಳ ಶಕ್ತಿಪರೀಕ್ಷೆಯೆಂದು ಮಹಾತ್ಮ ಗಾಂಧಿಯವರು ವಿನಂತಿ ಮಾಡಿಕೊಂಡಿದ್ದೇನೂ ಇಲ್ಲ. ಹಾಗೆ ಮಾಡುತ್ತಿದ್ದರೆ ಪರಿಣಾಮ ಬೇರೆಯೇ ಆಗುತ್ತಿತ್ತು. ಶ್ರೀ ಭೋಸರು ಜಯಶೀಲರಾಗಲು ಬಹುತೇಕ ಅವರ ವ್ಯಕ್ತಿತ್ವ ಮತ್ತು ಅವರ ಪ್ರಾಂತದ ಅತಿಹೆಚ್ಚಿನ ಪ್ರಮಾಣದ ಪ್ರತಿನಿಧಿಗಳ ಸಂಖ್ಯೆಯೇ ಕಾರಣ. ಆದುದರಿಂದ ಶ್ರೀ ಭೋಸರ ವಿಜಯವನ್ನು ಗಾಂಧಿವಾದದ ಅಪಜಯವೆಂದು ಪರಿಗಣಿಸಲು ಸಾಧ್ಯವಿಲ್ಲ. ಕಾಂಗ್ರೆಸಿನ ಧೋರಣೆ ಮತ್ತು ಕಾರ್ಯಕ್ರಮವನ್ನು ಸೂಚಿಸುವ ಜವಾಬ್ದಾರಿಯು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯದಿದ್ದು, ಈ ವರ್ಷದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಬಲಪಕ್ಷೀಯರೇ ಬಹುಸಂಖ್ಯಾಕರಿರುವರೆಂದು ಸ್ಪಷ್ಟವೆಂದು ಹೇಳಬಹುದು. ತ್ರಿಪುರಿ ಕಾಂಗ್ರೆಸ ಅಧಿವೇಶನದಲ್ಲಿ ಗಾಂಧಿಜಿಯವರು ಈ ವಿಷಯವನ್ನು ಪ್ರತಿನಿಧಿಗಳ ಮುಂದಿಟ್ಟು ಅವರ ಅಭಿಪ್ರಾಯ ಪಡೆದು, ತನ್ನ ತತ್ವ ಮತ್ತು ಕಾರ್ಯಕ್ರಮಗಳಲ್ಲಿ ಕಾಂಗ್ರೆಸಿಗೆ ವಿಶ್ವಾಸವಿರುವುದೋ ಇಲ್ಲವೋ ಎಂದು ಪರೀಕ್ಷಿಸಿದಲ್ಲಿ ತನಗೆ ಎಷ್ಟರಮಟ್ಟಿನ ಬೆಂಬಲವಿದೆಯೆಂಬುದು ಸ್ಪಷ್ಟವಾಗುವುದು. ಆ ಮೊದಲು ಅವರು ಯಾವ ನಿರ್ಧಾರವನ್ನೂ ಮಾಡಲಾರರೆಂದೂ, ಪ್ರಕೃತದ ಸಂದಿಗ್ಧ ಕಾಲದಲ್ಲಿ ಕೇವಲ ಅಧ್ಯಕ್ಷತನದ ಚುನಾವಣೆಯಿಂದಾಗಿ ಕಾಂಗ್ರೆಸಿನೊಳಗಣ ಎಡಬಲ ಪಕ್ಷಗಳೊಳಗೆ ಒಡಕುಂಟಾಗುವ ಅನಾಹುತವುಂಟಾಗದಿರಲೆಂದೂ ಹಾರೈಸುತ್ತೇವೆ.

ಪಂಡಿತ ಜವಾಹರಲಾಲರ ಜವಾಬ್ದಾರಿ.

ಶ್ರೀ ಭೋಸರು ಗಾಂಧಿಜಿಯವರ ಕುರಿತು ತುಂಬಾ ಭಕ್ತಿ ಮತ್ತು ವಿಶ್ವಾಸವುಳ್ಳವರಿರುತ್ತಾರೆ. ಅವರ ಸಹಕಾರವನ್ನವರು ಕಳೆಕೊಳ್ಳಲು ಎಷ್ಟುಮಾತ್ರಕ್ಕೂ ಸಿದ್ಧರಿರುವುದಿಲ್ಲ. ಅಂತಹ ಮನೋಪ್ರವೃತ್ತಿಯನ್ನವರು ಇಷ್ಟರವರೆಗೆ ತೋರಿಸಿಯೂ ಇಲ್ಲ. ಆದರೆ ಅವರು ಕಾಂಗ್ರೆಸಿನೊಳಗಣ ಎಡಪಕ್ಷೀಯರೆಂಬವರ ಸಭೆಯೊಂದನ್ನು ಕಲ್ಕತ್ತದಲ್ಲಿ ಕರೆದಿರುವುದು ಅಸ್ಪಷ್ಟತೆಯೂ ಅಚಾತುರ್ಯವೂ ಇದೆ. ತನಗೆ ಗಾಂಧಿಜಿಯವರ ಮತ್ತು ಕಾಂಗ್ರೆಸಿನೊಳಗಣ ಬಲಪಕ್ಷೀಯರ ಸಹಕಾರವು ಎಷ್ಟಕ್ಕೂ ದೊರೆಯುವುದಿಲ್ಲೆಂದು ಖಚಿತವಾದ ಮೇಲೆ ಮಾತ್ರ ಆ ರೀತಿ ಮಾಡಬಹುದಿತ್ತು. ಅವರು ಅಧ್ಯಕ್ಷರಾಗಿ ಆರಿಸಲ್ಪಟ್ಟೊಡನೆಯೇ ಮೊದಲಾಗಿ ಗಾಂಧಿಜಿಯವರ ಬಳಿಗೆ ಹೋಗಿ ಹೃದಯಬಿಚ್ಚಿ ಮಾತಾಡಿ ಅವರ ಸಲಹೆ ಪಡೆಯಬೇಕಿತ್ತು. ಅವರು ಹಾಗೇನೂ ಮಾಡದೆ ಕೇವಲ ಎಡಪಕ್ಷೀಯರ ಪರಿಷತ್ತನ್ನು ಕಲ್ಕತ್ತದಲ್ಲಿ ಕರೆದು ಎಡಬಲ ಪಕ್ಷಗಳೊಳಗಣ ಭೇದವನ್ನು ಮತ್ತಷ್ಟು ಹೆಚ್ಚಿಸಿರುವರು. ಶ್ರೀ ಭೋಸರ ಮತ್ತು ಗಾಂಧಿಜಿಯವರ ಅಭಿಪ್ರಾಯಗಳ ವಿಷಯವಾಗಿ ಪಂಡಿತ ಜವಾಹರಲಾಲರ ಅಭಿಮತವೇನೆಂದು ಈ ವರೆಗೆ ತಿಳಿದಿಲ್ಲ. ಈ ಸಂದರ್ಭದಲ್ಲಿ ಶ್ರೀ ಭೋಸರನ್ನೂ ಗಾಂಧಿಜಿಯವರನ್ನೂ ಒಟ್ಟುಗೂಡಿಸಿ, ಕಾಂಗ್ರೆಸಿಗೆ ಮಹಾತ್ಮರ ಸಲಹೆಯು ಯಥಾಪ್ರಕಾರ ದೊರೆಯುವಂತೆ ಮಾಡಿ ಕಾಂಗ್ರೆಸಿನೊಳಗಣ ಎಡಬಲ ಪಕ್ಷೀಯರನ್ನು ಒಂದುಗೂಡಿಸಿ, ದೇಶಕ್ಕೆ ಅತಿ ದೊಡ್ಡ ಗಂಡಾಂತರವಾಗಿ ಬಂದಿರುವ ಫೆಡರೇಶನನ್ನು ಪ್ರತಿಭಟಿಸಲು ಕಾಂಗ್ರೆಸು ಒಮ್ಮನಸ್ಸಿನಿಂದ [illegible] ಒಕ್ಕಟ್ಟಿನಿಂದ ಕಟಿಬದ್ಧವಾಗಿರುವಂತೆ ಮಾಡುವ ಜವಾಬ್ದಾರಿಯು ಪಂಡಿತ ಜವಾಹರಲಾಲರದ್ದು. ಅವರೊಬ್ಬರಿಂದ ಮಾತ್ರ ಅದೀಗ ಸಾಧ್ಯವೆಂಬಂತೆ ತೋರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

ಈ ಕಂಪೆನಿಯು 1938ನೇ ಡಿಸೆಂಬರ 31ಕ್ಕೆ ಅಂತ್ಯವಾಗುವ [illegible] ವರ್ಷದ [illegible] ಪತ್ರಗಳು [illegible].

ಈ ಕಂಪೆನಿಯು [illegible] ಗಳ, [illegible] ಅನುಭವದ [illegible] ಪಡೆದ [illegible] ಬೆಳೆಯುತ್ತಿದೆ.

[illegible] ಈ ವರ್ಷ [illegible] 2,55,500 ಮೊತ್ತದ ವಿಮಾ [illegible] ರೂ. 11,038-13-0 [illegible]

ಯಮ್ಸ್ ಉತ್ಪತ್ತಿಯ ರೂ. 2,10,500 ಮೊತ್ತದ ವಿಮಾ ಪತ್ರಗಳು ಸ್ವೀಕೃತವಾಗಿವೆ. ಅಲ್ಲದೆ ಈ ಅವಧಿಯ ಪ್ರೀಮಿಯಮು ಒಟ್ಟು ಆಯವು ರೂಪಾಯಿ 29,297 ಆಗಿದೆ. ಬಡ್ಡಿ ಮತ್ತು ಇನ್ನಿತರ ಆಯದಲ್ಲಿಯೂ ಸಾಕಷ್ಟು ಅಭಿವೃದ್ಧಿ ಕಂಡುಬರುತ್ತಿದೆ. ಕಂಪೆನಿಯ ಇನ್ನೊಂದು ಮೇಲ್ಮೆಯ ಸಾಧನವೆಂದರೆ ವ್ಯಾಪಾರ ವಹಿವಾಟು ಹೆಚ್ಚುಗತ್ತಿರುವಂತೆ, ಆಡಳಿತದ ವೆಚ್ಚದ ಪ್ರಮಾಣವು ಸಾಕಷ್ಟು ತಗ್ಗುತ್ತಿರುವುದು. ಕಳೆದ ವರದಿಯ ಕಾಲದಲ್ಲಿ ಆಡಳಿತ ವೆಚ್ಚವು 36·6% ಇದ್ದುದು ಇದೀಗ 34·01%ಕ್ಕೆ ಇಳಿದಿದೆಯೆಂಬುದು ಉದಾಹರಣೆಯಾಗಿದೆ. ವರದಿಯ ಕಾಲದಲ್ಲಿ ಕಂಪೆನಿಯ ವಿಮಾ ಭಂಡವಾಳವು ರೂ. 1,27,709—6—3ಕ್ಕೆ ಹೆಚ್ಚಿರುವುದು ಕಂಪೆನಿಯ ಏಳಿಗೆಯನ್ನು ವ್ಯಕ್ತಗೊಳಿಸುವುದು. ಮಾತ್ರವಲ್ಲದೆ ರೂ. 40,000 ಮೊತ್ತದ ಸರಕಾರಿ ಭದ್ರತಾಪತ್ರಗಳನ್ನು ಕಂಪೆನಿಯು ತನಗಾಗಿ ಈ ಅವಧಿಯಲ್ಲಿ ರಿಜರ್ವ್ ಬೇಂಕಿನಲ್ಲಿ ಠೇವಣಾತಿಯನ್ನಾಗಿಟ್ಟಿರುವುದೆಂದು ತಿಳಿಯಬಹುದಾಗಿದೆ. ಕಂಪೆನಿಯ ಕಾಯಿದೆಗಳ ಹೊಸ ನಿಬಂಧನೆಯನ್ನು ಪೂರೈಸಲು ಈ ಸಂಸ್ಥೆಯು ಸಾಕಷ್ಟು ಮುಂದಾಗಿಯೇ ಜಾಗ್ರತೆಯಿಂದಿದೆ.

ಇಂಡಿಯಾ ಕಂಪೆನಿಯ ಹೊಸ ಆಸ್ತಿಗಳ ಮೇರೆಗೆ, ಇವರ ಆಡಳಿತವನ್ನು ನೋಡಿಕೊಂಡು, ಬಹು ಶ್ರದ್ಧೆಯಿಂದಲೂ, ಚತುರತೆಯಿಂದಲೂ ಸಂಸ್ಥೆಯ ಏಳಿಗೆಗಾಗಿ ದುಡಿಯುತ್ತಿದ್ದ ದಿ ಕೆನರಾ ಇಂಡಸ್ಟ್ರಿಯಲ್ ಮತ್ತು ಬ್ಯಾಂಕಿಂಗ್ ಸಿಂಡಿಕೇಟಿನ ಸೆಕ್ರೆಟರಿಯವರು ತಮ್ಮ ಆಡಳಿತವನ್ನು ಇದೇ ಜನವರಿ ತಾ. 14ರಂದು ಬಿಟ್ಟುಬಿಡಬೇಕಾಗಿ ಬಂದಿತು. ಆದರೆ, ಇದರಿಂದ ಈ ಸಂಸ್ಥೆಯ ಪ್ರಗತಿಗೆ ಮತ್ತು ಭದ್ರತೆಗೆ ಯಾವ ಹಾನಿಯೂ ತಪ್ಪದಂತೆ, ಆಡಳಿತ ಮಂಡಲದವರು ಮುಂಜಾಗ್ರತೆಯನ್ನು ತೆಗೆದುಕೊಂಡಿದ್ದಾರಾಗಿ ತಿಳಿಯಬಹುದಾಗಿದೆ. ಕಂಪೆನಿಯು ಯಶಸ್ವಿಯಾಗಿ, ಲಾಭದಾಯಕವಾದ ಸ್ಥಿತಿಯಲ್ಲಿ ಪ್ರಗತಿಪರ ಹಾದಿಯಲ್ಲಿ ಮುನ್ನಡೆಯುವುದರಿಂದ, ಶೀಘ್ರದಲ್ಲೇ ನಿರ್ಧರಿಸಲಾಗುವ ವಿಮಾತಜ್ಞರ ವರದಿಯ ಕಾಲದಲ್ಲಿ ಪೊಲಿಸಿದಾರರಿಗೆ ಲಾಭದಾಯಕ ಬೋನಸು ದೊರೆಯಬಹುದೆಂದು ನಿರೀಕ್ಷಿಸಲಾಗಿದೆ. ಕಂಪೆನಿಯ ಶ್ರೇಯಸ್ಸಿಗಾಗಿ ಸತತ ದುಡಿಯುತ್ತಿರುವ, ಸಮರ್ಥರಾಗಿ ಮುಂದಾಳುಗಳಾದ ಆಡಳಿತ ಮಂಡಲವನ್ನು ನಾವೀ ಸಂದರ್ಭದಲ್ಲಿ ಅಭಿನಂದಿಸುವೆವು. ಮತ್ತು ಕಂಪೆನಿಯ ಮುಂಬಾಳಿಗೆಯನ್ನು ಬಯಸುವೆವು.

ಉಡುಪಿ

ಟೌನ್ ಕಾಂಗ್ರೆಸ್ ಕಮಿಟಿ ರಚನೆ— ಟೌನ್ ಕಾಂಗ್ರೆಸ್ ಕಮಿಟಿಯ ರಚನೆಯ ಬಗ್ಗೆ ಪ್ರಾಥಮಿಕ ಸದಸ್ಯರ ಸಭಾಸಭೆಯೊಂದು ಇದೇ ತಾ. 12ರಲ್ಲು ಸಂಜೆ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿ ಕಾರ್ಯನಿರ್ವಾಹಕ ಮಂಡಲಿಗೆ ಏಳು ಜನ ಸದಸ್ಯರ ಚುನಾವಣೆಯಾಗಲಿರುವುದೆಂದು ವಾರ್ತೆ.

ಸಮಾರಂಭ— ಉಡುಪಿ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ 'ಹೊಸ್ಟೆಲ್ ಡೇ' ಸಮಾರಂಭವು ಇದೇ ತಾ. 12ನೇ ಆದಿತ್ಯವಾರ ಸಂಜೆ ಐದು ತಾಸಿಗೆ ಮಿಸೆಸ್ ಮನೋರಮಾಬಾಯಿ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ನಗರ ಸಭೆಯ ಕಮಿಶನರರ ನೇಮಕ— ಇನ್ನೂ ಆಗಲಿಲ್ಲ. ಹಳೆ ಕಮಿಶನರರ ವರ್ಗವಾಗಿ ಒಂದು ತಿಂಗಳು ದಾಟಿತು. ಕಮಿಶನರರ ಇಸಮು ಪ್ರಕೃತ ಅನಗತ್ಯವೆಂದು ಅಂತರಂಗದ ಸುದ್ದಿ.

ಮೈಸೂರು ದಿವಾನರ ಉಡುಪಿ ಕಾರ್ಯಕ್ರಮ— ಮೈಸೂರು ದಿವಾನರಾದ ಸರ್. ಮಿರ್ಜಾ ಎಮ್. ಇಸ್ಮಾಯಿಲರು ಇದೇ ತಾ. 19ನೇ ಆದಿತ್ಯವಾರ ಸಂಜೆ ನಾಲ್ಕು ತಾಸಿಗೆ ಉಡುಪಿಗೆ ಚಿತ್ತೈಸಲಿರುವರು. ಮಲ್ಪೆ ಬಂದರವನ್ನು ಅಂದೇ ಸಂದರ್ಶಿಸಿ ಅಜ್ಜರಕಾಡು ಗಾಂಧಿ ಮೈದಾನದಲ್ಲಿ ನಗರ ಸಭೆಯ ಮಾನಪತ್ರ ಸ್ವೀಕರಿಸಿ ಆ ಬಳಿಕ ಪರ್ಯಾಯ ಶ್ರೀ ಫಲಿಮಾರು ಮಠದ ಶ್ರೀಗಳವರ ಸಂಭ್ರಮದ ಸುಸ್ವಾಗತ ಮೆರವಣಿಗೆಯಿಂದ ಶ್ರೀಕೃಷ್ಣ ಮಠಕ್ಕೆ ಚಿತ್ತೈಸುವರು. ವಸಂತ ಮಹಲಿನಲ್ಲಿ ಪರ್ಯಾಯ. ಹಾಗೂ ಇತರ ಸ್ವಾಮಿಗಳವರ ಭೇಟಿಯಾಗಿ ಲೌಕಿಕ ಮತ್ತು ವೈದಿಕರೊಡನೆ ಸಂಭಾಷಣೆಗಳು ನಡೆಯುವವು. ರಾತ್ರಿ ಮಿತ್ರಮಂಡಳಿಯ ಡಿನ್ನರ್ ಪಾರ್ಟಿಯಲ್ಲಿ ಭಾಗವಹಿಸುವರು. ಮರುದಿನ ಬೆಳಿಗ್ಗೆ ಮಣಿಪಾಲದ ಅನಾಥಾಲಯದ

ಶಂಕುಸ್ಥಾಪನೆಮಾಡಿ ಅಲ್ಪಾಹಾರವನ್ನು ಸ್ವೀಕರಿಸಿ ಮುಂದೆ ಮೂಡಬಿದ್ರೆಕಡೆ ಪ್ರಯಾಣ ಬೆಳೆಸುವರು.

ಉಡುಪಿಯಲ್ಲಿ ಕೋಸ್ಮೋಪೊಲಿಟನ್ ಭೋಜನ - ತಾ. 4-2-39ನೇ ರಾತ್ರಿ ಉಡುಪಿ ಗಾಂಧಿ ಮೈದಾನಿನ ಶಿಬಿರದಲ್ಲಿ ಉಡುಪಿಯ ಕೆಲ ಸದ್ಗೃಹಸ್ಥರ ಪ್ರೋತ್ಸಾಹದಿಂದ ಒಂದು ಸಹಪಂಕ್ತಿ ಭೋಜನದ ವ್ಯವಸ್ಥೆ ನಡೆದಿತ್ತು. ಸ್ಥಳೀಕ ಶಾಲೆಗಳ ಕೆಲವು ಅಧ್ಯಾಪಕರು, ಪತ್ರಿಕೋದ್ಯಮಿಗಳು ಹಾಗೂ ಕೆಲವು ಸಭ್ಯಪುರನಾಸಿಗಳು ಈ ಕೂಟದಲ್ಲಿದ್ದರು. ಸಂಖ್ಯೆ ೯೦ರ ವರೆಗೆ ಇದ್ದಿತು. ಜಾತಿಮತದ ಗಣನೆಯನ್ನಳಿದು, ಭ್ರಾತೃಭಾವದ ಪರಸ್ಪರ ಸಹಕಾರದಿಂದ ಸೇರಿದ ಈ ಭೋಜನ ಸಮಾರಂಭವು ಕೂಟ ಉಡುಪಿಯಲ್ಲಿ ಈ ರೀತಿ ಬಹಿರಂಗವಾಗಿ ಸೇರಿದುದು ಇದುವೇ ಪ್ರಥಮಬಾರಿಯೆನ್ನಬಹುದು. ಭೋಜನದ ವ್ಯವಸ್ಥೆಯು ಅತ್ಯುತ್ತಮವಿತ್ತು. ಉಚ್ಚ ಶಿಕ್ಷಣಪಡೆದ ತರುಣ ಸ್ವಯಂಸೇವಕರು, ಪ್ರೇಮ ಗೌರವದಿಂದ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ಭೋಜನಾನಂತರ ಉಡುಪಿಯ ಹಿರಿಯ ವರ್ಗದ ವಕೀಲ ಏಟ್ಯಲ ಶಾಮರಾಯರು, ಶ್ರೀ. ಬಿ. ಶಿವರಾಯ ಶೆಟ್ಟರು ಬಿ. ಎಸ್., ಕೆ. ಪ್ಯಾಡರ್, ವೆಂಕಟರಾಯರ, ವಗ್ಗೆರು ಈ ಭೋಜನ ಕೂಟದ ಮಹತ್ವಿಕೆಯನ್ನು ಮನಗಾಣಿಸಿ, ಭ್ರಾತೃಭಾವದ ಆವಶ್ಯಕತೆಯನ್ನು ವಿವರಿಸಿ ಸುಸ ಭಾಷಣವನ್ನಿತ್ತರು. ಕೊನೆಗೆ ಭ್ರಾತೃಭಾವ ಬಾಳಬರಲೆಂದು ಹಾರೈಸಿ, ಆನಂದ ಕೋಲಾಹಲದಿಂದ ಸಭೆ ಮುಕ್ತಾಯವಾಯಿತು.

ಮಟ್ಟು— ತಾ. ೩೧-೧-೩೯ರಲ್ಲಿ ಸ್ಥಳೀಕ ಬೋರ್ಡು ಶಾಲಾ ತಿಂಗಳ ಹಬ್ಬವು ಶ್ರೀ. ಸೀತಾರಾಮ ಧೋರಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಶ್ರೀ. ಮಧ್ಯಸ್ಥ ಸಂಧಾನಸಭೆಯವರು ಮಕ್ಕಳಿಗ ಪೆನ್ಸಿಲು ಬಗ್ಗರೆ ಇನಾಮುಗಳನ್ನಿತ್ತು ಪ್ರೋತ್ಸಾಹಿಸಿದರು.

ಶಿನ್ನಿ ಕಂಬಳ— ಸ್ಥಳೀಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಮೂವತ್ತೆರಡನೇ ವರ್ಷದ ವರ್ಧಂತಿಯು ತಾರೀಕು ೮, ೧೦ ಮತ್ತು ೧೧ನೇ ಗುರು, ಶುಕ್ರ ಮತ್ತು ಶನಿವಾರಗಳಲ್ಲಿ ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಮ್. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಜರಗುವುದು.

ಶ್ರೀ. ಪಿ ರಂಗಸ್ವಾಮಿಯವರ ಅಕಾಲ ನಿಧನ— ವಿಕ್ಟೋರಿಯಾ ಗವರ್ನಮೆಂಟು ಸೆಕ್ಯುರಿಟಿ ಲೈಫ್ ಎಶ್ಯುರೆನ್ಸ್ ಕಂಪೆನಿ, ಲಿಮಿಟೆಡ್ ಬೆಂಗಳೂರು, ಈ ಸಂಸ್ಥೆಯ ಮನೇಜರಾದ ಶ್ರೀ. ಪಿ. ರಂಗಸ್ವಾಮಿ ಬಿ. ಎ., ಬಿ. ಎಲ್., ಇವರ ಅಕಾಲ ನಿಧನವು ಬಹು ವಿಷಾದಕರವಿದೆ. ಶ್ರೀಯುತರು ಬಹು ಕಾರ್ಯದಕ್ಷ, ವಿಚಾರವಿವೇಕಿಗಳಾದ ಮನುಷ್ಯರು, ಕಂಪೆನಿಯ ಏಳಿಗೆಗಾಗಿ ತುಂಬಾ ದುಡಿದವರು, ಸರಳ ಸ್ವಭಾವದವರು, ಜನತೆಯ ಪ್ರೇಮ ವಿಶ್ವಾಸಕ್ಕೆ ಪಾತ್ರರಾದವರು. ಇಂಥಾ ಮಹನೀಯರೊಬ್ಬರು ಅಗಲಿ ಹೋಗುವಂಥಾದುದು ಬಹು ವ್ಯಸನೋತ್ಪನ್ನವಾಗಿರುವುದು. ಸದ್ಗ್ರುಯವರ ನಿಧನದ ಕುರಿತಾಗಿ ಸಂತಾಪ ಸೂಚಿಸಲಿಕ್ಕಾಗಿ ಬೆಂಗಳೂರಿನ ವಿಕ್ಟೋರಿಯಾ ಎಶ್ಯುರೆನ್ಸ್ ಕಂಪೆನಿಯ ಕಟ್ಟಡದಲ್ಲಿ ಇದೇ ಫೆಬ್ರವರಿ ತಾ. 2ರಲ್ಲಿ ಕಂಪೆನಿಯ ಉದ್ಯೋಗಸ್ಥ ಮಂಡಳಿಯ ಮತ್ತು ಹಲವು ಹಿತಚಿಂತಕರ ಮತ್ತು ಪುರ ನಿವಾಸಿಗಳಿಂದ ಕೂಡಿದ ಒಂದು ಸಭೆಯು ಏರ್ಪಡಿಸಲ್ಪಟ್ಟಿತ್ತು. ಮೃತರ ಆತ್ಮಕ್ಕೆ ಚಿರಶಾಂತಿಯಾಗಲಿ.

ಪುಟ ೧೫ರಿಂದ

ಸದ್ಯನಾಗ ಸದಾಚಾರ ಸತ್ಕ್ರಿಯಾಗಳನ್ನು ಸುಸರಿಸಿಕೊಂಡಿರುವಲ್ಲಿ ಕೆಲವೊಂದು ಕಾಯಿಗಳ ಮಟ್ಟಿಗ ನಿಮಗೆ ಪುತ್ರಮಿತ್ರ ಕಳತ್ರಾದಿ ಬಂಧುಗಳು ಸಿಗಬಹುದು. ಇತರ ಎಲ್ಲಾ ಭಾಗಗಳಲ್ಲಿಯೂ ಹಿತವಿಲ್ಲವು. ಶರೀರ ಪೀಡೆಯಿಂದಾಗಿ ಸಕಲ ಇಂದ್ರಿಯಗಳಿಗೂ ದೌರ್ಬಲ್ಯವು ಬಂದೊದಗುವುದು. ದೇಹದಲ್ಲಿ ಸಹನಾಶಕ್ತಿ ಕಡಿಮೆಯಾದುದರಿಂದ ಮುಂಗೋಪವು ನಿಮ್ಮನ್ನು ಅನೇಕರಲ್ಲಿ ಕಲಹಕ್ಕೀಡುಮಾಡುವದು. ಶರೀರದಲ್ಲಾಗಲೀ ಮನಸ್ಸಿಗಾಗಲೀ ಸಂಸಾರದಲ್ಲಾಗಲೀ ಸುಖವು ಲೇಶವೂ ಇಲ್ಲವೆಂಬಂತಾಗುವುದು. ಸ್ವಜನರ ವಿಯೋಗದಿಂದಲೂ ಹಣದ ಬಿಕ್ಕಟ್ಟಿನಿಂದಲೂ ಅತೀವ ಚಿಂತೆಗೀಡಾಗುವಿರಿ. ೬ನೇ, ೪ರಿಂದ ೧೩ರ ವರೆಗಿನ ದಿನಗಳಲ್ಲಂತೂ ಆಯಾಸ, ಬಂಧನ, ಅಪಮೃತ್ಯು ಈ ಮೊದಲಾದ ಅನಿಷ್ಟಗಳು ಸಂಭವಿಸುವವೆಂದರೂ ತಪ್ಪಾಗದು

ಜಮುನಾಲಾಲ ಬಜಾಜರ

ಸುಭಾಷಭೋಸರ ಭಾಷಣ

“ಪ್ರತಿಯೊಂದು ಜಾತಿಗಾಗಿ ಪ್ರತಿಯೊಂದು ಪಂಥಕ್ಕಾಗಿ ನಮಗೆ ಸ್ವರಾಜ್ಯ ಬೇಕು” ಎಂದು ಸುಭಾಷಭೋಸರು ಪ್ರಾಂತಿಕ ರಾಜಕೀಯ ಸಮ್ಮೇಲನದ ಸಭೆಯಲ್ಲಿ ಉದ್ಘೋಷಿಸಿದರು. ಸ್ವಾತಂತ್ರ್ಯಕ್ಕಾಗಿ ಎಲ್ಲರೂ ಒಂದಾಗಬೇಕೆಂದರು. ಹಿಂ

ದೂದೇಶದ ಇಂದಿನ ಪರಿಸ್ಥಿತಿಯನ್ನು ಅಂತರರಾಷ್ಟ್ರಗಳ ಸ್ಥಿತಿಗತಿಯೊಂದಿಗೆ ಹೋಲಿಸಿ ಭಾಷಣವಿತ್ತರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಹೀಗೆಂದರು. ಕಾಂಗ್ರೆಸು ದಿನದಿಂದ ದಿನಕ್ಕೆ ಶಕ್ತಿಯನ್ನು ಗಳಿಸುತ್ತಿದೆ. ಇದಕ್ಕೀಗ ಆಂಗ್ಲೋ ಇಂಡಿಯಾನರು, ನೇಪಾಳಿಯರು ಮತ್ತು ಶೀಕರು ಕೂಡಾ ಸಹಾನುಭೂತಿ ಸಹಕಾರಕೊಡುತ್ತಿದ್ದಾರೆ. ಸಾಮ್ರಾಜ್ಯಶಾಹಿಯು ನಿರ್ನಾಮವಾಗುವ ಸಮಯ ಬಂದಿದೆ.

ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಸ್ಥಾನವನ್ನು ಪರಿಗಣಿಸುವಾಗ, ಬ್ರಿಟಿಷರ ಹಿಂದಣ ವೈಭವವೆಲ್ಲಾ ಕುಂದಿ, ಕಳೆಯಡಗಿ ಹೋಗಿದೆ. ಬ್ರಿಟನು ಈಗ ರೋಮು, ಬರ್ಲಿನಿಗೆ ಕೈ ಜೋಡಿಸಿಕೊಂಡು ಹೋಗುತ್ತಿದೆ, ಹಿಟ್ಲರ್ ಮುಸಲೋನಿಯರ ಶರಣುಹೊಕ್ಕು, ತನ್ನ ಸಮಸ್ಯೆ ಬಿಡಿಸಿಕೊಳ್ಳಲು ಬಯಸುತ್ತಿದೆ. ನಾವೀ ಸಂದರ್ಭವನ್ನು ಉಪಯೋಗಿಸಿಕೊಳ್ಳಬೇಕು. ನಮ್ಮ ಸ್ವಾತಂತ್ರ್ಯಕ್ಕಾಗಿ ಒಂದಾಗಿ ಸ್ವಾತಂತ್ರ್ಯವನ್ನು ಗಳಿಸಬೇಕು.

ಹಿಂದೂದೇಶವಿಂದು ಪರರಾಜ್ಯಕ್ಕೆ ಒಳಗಾಗಿರಲು ಮೆಚ್ಚದು. ಅದು ಅದರ ಶಕ್ತಿಯನ್ನು ಮನಗಂಡಿದೆ. ಇಂದು ಬ್ರಿಟಿಷರು ತಮ್ಮ ಇಚ್ಛೆಯಂತೆ ತಾವು ಹಿಂದೂಸ್ಥಾನವನ್ನು ಆಳುವೆವೆನ್ನಲು ಸಮರ್ಥರಿಲ್ಲ; ಕಾಂಗ್ರೆಸೀಗ ತಾನು ಅಂಥಾ ಶಕ್ತಿಗಳಿಸಿದೆಯೆನ್ನಬಲ್ಲುದು, ಆದರ ಅಳ್ವಿಕೆಯ ಶಕ್ತಿಯಿಂದು ರಾಜ್ಯಾಧಿಕಾರಮಾಡುವ ಯಾವ ಶಕ್ತಿಗಿಂತಲೂ ಕಡಿಮೆಯಿಲ್ಲ ಯುರೋಪಿಯಾನರೆಲ್ಲರೂ ಬಲ್ಲರು, ಹಿಂದೂದೇಶ ಸಮಗ್ರವನ್ನು ಕಾಂಗ್ರೆಸು ಸದ್ಯದಲ್ಲೇ ಆಳುವ ಸ್ಥಿತಿಗೆ ಬರುವುದೆಂಬುದನ್ನು ನಾವು ನಮ್ಮ ಹಕ್ಕನ್ನು ಅಧಿಕಾರಯುತರಾಗಿ ಕೇಳಿದರೆ ಅವರು ತಡೆಯಬಲ್ಲರೇ?

ಹಿಂದೂದೇಶವೀಗ ಜಾಗೃತಾವಸ್ಥೆಗೆ ಬಂದಿದೆ; ರಾಜಕೀಯ ಜಾಗೃತಿಯು ಸಮಗ್ರದೇಶದಲ್ಲಿ ವ್ಯಾಪಿಸಿರುವುದು. ಉದಾಹರಣೆಗಾಗಿ ದೇಶೀಯ ಸಂಸ್ಥಾನಗಳಲ್ಲಿ ಜನರ ಚಳವಳಿಯೇ ಸಾಕಾಗಿದೆ. ಹಿಂದೂದೇಶದ ಶಕ್ತಿ, ರಾಜಕೀಯ ವಿಚಾರ, ದೇಶದ ಎಲ್ಲೆಮೂಲೆಗಳಿಗೆ ಮಾತ್ರವಲ್ಲ, ಜಗತ್ತಿನ ಬೇರೆ ಬೇರೆ ಕಡೆಗೂ ಹಾಯ್ದು ಹೋಗಬಹುದಾಗಿದೆ. ಕಾಂಗ್ರೆಸೀಗ ತನ್ನ ಪ್ರಭಾವವನ್ನು ಉಜ್ವಲತೆಯಿಂದ ಬೀರಿದೆ ಆಶ್ರಿತ ಸಂಸ್ಥಾನಗಳಲ್ಲಿ ಕೂಡಾ ಅದರ ಶಕ್ತಿಯು ಅಧಿಕಾಧಿಕವಾಗುತ್ತಿದೆ ಎಂದರು.

ಹೈದರಾಬಾದಿನಲ್ಲಿ ಸತ್ಯಾಗ್ರಹ

ಕಳೆದ ತಾ. 4ರಲ್ಲಿ ಹಿಂದೂಮಹಾಸಭೆಯ ಏಳುಮಂದಿಯಿಂದ ಒಂದು ಸ್ವಯಂಸೇವಕ ದಳವು ಜಾವಡೇಕರರ ನಾಯಕತ್ವದಲ್ಲಿ ಹಿಂದೂ ಸಾರ್ವಜನಿಕ ಹಕ್ಕು ರಕ್ಷಣೆಯ ಚಳವಳದಲ್ಲಿ ಭಾಗವಹಿಸಲು ದುಲೋಯದಿಂದ ಹೈದರಾಬಾದಿಗೆ ತೆರಳಿದೆ

ಹೈದರಾಬಾದಿನ ವಿದ್ಯಾರ್ಥಿಗಳು ಗಾಂಧಿಯವರನ್ನು ಸಂದರ್ಶಿಸಿದರು

ಕಳೆದ ಹೈದರಾಬಾದಿನ ಕಾಲೇಜು ಮುಷ್ಕರದಲ್ಲಿ ಹೊರಬಿದ್ದ ಎಂಭತ್ತು ಮಂದಿ ವಿದ್ಯಾರ್ಥಿಗಳು ಗಾಂಧಿಯವರನ್ನು ಸಂದರ್ಶಿಸಿ ಸುಮಾರು ಅರೆತಾಸು ಮಾತುಕಥೆ ನಡಿಸಿದರು.

ಬರುವ ವರ್ಷದ ಕಾಂಗ್ರೆಸ್ ಅಧಿವೇಶನ ಪಂಜಾಬಿನಲ್ಲಿ ನಡೆಯಬಹುದು

ಬರುವ ಕಾಂಗ್ರೆಸು ಅಧಿವೇಶನವನ್ನು ಪಂಜಾಬಿನಲ್ಲಿ ಜರಗಿಸಬೇಕೆಂಬ ಇರಾದೆಯು ಪಂಜಾಬು ಕಾಂಗ್ರೆಸಿಗಿದೆ. ಈ ಸೂಚನೆಯು ಕಳೆದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಬಂದಿತ್ತು. ಆದರೆ ಅದು ಕಾರಣಾಂತರದಿಂದ ಮುಂದುವರಿಸಲ್ಪಟ್ಟಿದೆ. ಬರುವ ಸಿ. ಪಿ ಸಿ. ಸಿಯಲ್ಲಿ ನಿಷ್ಕರ್ಷೆಯಾಗಬಹುದಾಗಿದೆ. ಕಳೆದಬಾರಿ ಪಂಜಾಬಿನಲ್ಲಿ ಕಾಂಗ್ರೆಸ್ ಅಧಿವೇಶನ ಜರಗಿದುದು 1929ರಲ್ಲಿ

ಶ್ರೀನಿಕೇತನದ ವಾರ್ಷಿಕೋತ್ಸವ

ಶ್ರೀನಿಕೇತನದ ವಾರ್ಷಿಕೋತ್ಸವವು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಕಳೆದ ತಾ. 6ರಲ್ಲು ಜರಗಿತು. ಸಿ. ಆಫ್. ಆಂಡ್ರ್ಯೂಸರು, ಡಾ. ಪ್ರಫುಲ್ಲ ಘೋಷರು- ಇವರೇ ಮೊದಲಾದವರು ಚಿತ್ತೈಸಿದ್ದರು.

ಡಾ ರವೀಂದ್ರ ನಾಥ ಟಾಗೋರರು ತಮ್ಮ ಭಾಷಣದಲ್ಲಿ 'ನಾನು ಗ್ರಾಮಕಾರ್ಯಕ್ಕಾಗಿ ಗ್ರಾಮಾಭ್ಯುದಯಕ್ಕಾಗಿ ಸಿದ್ಧಗೊಳಿಸಿರುವೆನು. ಅವುಗಳು ಸುಂದರವಾಗಿರಬೇಕು. ಜೀವನದಲ್ಲಿ ಆನಂದವನ್ನೆಬ್ಬಿಸುವಂತಹದ್ದಾಗಿರಬೇಕು, ಫಲವತ್ತಾಗಿರಬೇಕು' ಎಂದರು.

ಡಾ. ರಾಜೇಂದ್ರ ಪ್ರಸಾದರು ಶ್ರೀನಿಕೇತನದ ಕಾರ್ಯವನ್ನು ಪ್ರಶಂಸಿದರು. ಕವಿವರ್ಯರನ್ನು ಅರಿಯಬೇಕಾದರೆ, ಅವರ ಪುಸ್ತಕಗಳನ್ನು ಓದುವುದು ಮಾತ್ರವಲ್ಲ. ಇಲ್ಲಿಗೆ ಬಂದು ಸ್ವತಃ ವಿಷಯಗಳನ್ನು ಅರಿತುಕೊಳ್ಳಬೇಕು-ಆಗ ಅವರ ಕಾರ್ಯ ಮಹತ್ವಿಕೆ ತಿಳಿಯುವುದು' ಎಂದರು.

ಮಹಾತ್ಮಾಜಿಯವರನ್ನು ನೋಡಿರಿ

ಉದಕಮಂಡಲದ (Ooty) ಪೌರ ಕಾಂಗ್ರೆಸು ಕಮಿಟಿಯ ವಿಶೇಷ ಸಭೆಯಲ್ಲಿ ಸುಭಾಷ ಭೋಸರು ಕಳೆದ ವರ್ಷ ಅಧ್ಯಕ್ಷರಾಗಿ ನಡೆಸಿದ ಕಾರ್ಯಭಾಗವನ್ನು ಪ್ರಶಂಸಿಸಲಾಯಿತು. ಮತ್ತು ಸುಭಾಷರು ಸದ್ಯದ ವಿದ್ಯಮಾನ ಪರಿಸ್ಥಿತಿಯಲ್ಲಿ ಗಾಂಧಿಯವರನ್ನು ಸಂದರ್ಶಿಸಿ, ಅವರ ಹಿತೋಕ್ತಿಯಂತೆ ನಡೆಯಬೇಕೆಂದು ಅಭಿಪ್ರಾಯವಾಗಿದೆ. ಗಾಂಧಿಜಿಯವರ ನಾಯಕತ್ವದಲ್ಲಿ ತಮಗೆ ತುಂಬಾ ವಿಶ್ವಾಸವಿದೆಯೆಂ

ದೂ, ಸುಭ
ಗಿ ಚುನಾ
ಗಾಂಧಿ ತ
ಈ ಕವಿಟ
ಈ ಕೆಳಗಣ
ಡಲಾಯಿತು
“ಸಂಹಾ
ಮುಂದಣ
ಅರಿಕೆ —”

ಶ್ರೀನಿವ
ಕಲ್ಕ
ಚರ್ಚೆಸ
ಸಿ

ಶ್ರೀ. ಎ
ರು ಇದೇ
ಲಕತ್ತೆಗೆ
ಸಭೋಸ,
ಗ್ರೆಸ ಮು
ಇದಿರುಗೊ
ಗಿ ಸ್ವಾಗತ
ಏಯ್ಯಂ
ಲ್ಲಿ ಗೋಸ
ರು. ಅವರ
ಲ್ಲೇ ಶ್ರೀಗ
ಲಿನ ಮೊವ
ದಿಗೆ ಮಾತ
ರು ಅವರನ
“ಪೌದ
ಹಾರವಾದ
ದು. ಅವರ
ಲ್ಲಿ ಬಂದು
ಕ್ಕಾಗಿಯಲ್ಲ

ವಿ
ಗಾಂಧಿ
ಸ್ತ್ರೀಯ
ಉತ್ತ

ಅನ
ಮಹಾ
ಹಂಜನ ಪ



ದುಮಾಡಲ್ಪಟ್ಟರು – ಹೈದರಾಬಾದಿನಲ್ಲಿ ಸತ್ಯಾಗ್ರಹ

ಅಧ್ಯಕ್ಷರಾ
ಕಾರಣದಿಂದ
ಗಲದೆಂದೂ
ಸಭಾಸದರಿಗೆ
ಜಾ ಕೊ
ಕಂಡು
ಸಬೇಕಾಗಿ
ಗಾರರು
ದು
ಜ್ಞಾಲಿಕ್ಕೆ,
ಲ್ಲಿ
ಯ್ಯಂಗಾರ
ಬೆಳಗ್ಗೆ ಕ
ನ್ನು ಸಭಾ
ಲಾದ ಕಾಂ
ಲ್ಡಾಣದಲ್ಲಿ
ಪೂರ್ವಕವಾ
ಪಾರ್ಕಿನ
ತಿಳಿಯುವ
ತ ಸಮಯ
ಸ್ವಾಮಿ,
ಲೀಡರರೊಂ
ರೋ ಒಬ್ಬ
ರು.
ಗ್ಗೆಯ ಫಲಾ
ಬೇಕೇ ಎಂ
ವರು. ಸಾನಿ
ಗಿ, ತಿನ್ನಲಿ
ಟೂ ಅಲ್ಲ."
ರಿಗೆ
ಎಚ್ಚರ.
ಸಮಾಜದ
ಧುನಿಕ
ಲ್ಲಿ.
ರು ತಮ್ಮ
ನ ಹುಡುಗಿ'

(Modern Girl) ಎಂಬ ಶಿರೋನಾಮೆಯಿಂದ ಹೀಗೆ ಬರೆಯುತ್ತಾರೆ.—

"ನನಗೆ ಹನ್ನೊಂದು ಹುಡುಗಿಯರ ಪರವಾಗಿ, (ವಿಳಾಸ ಸಹಿತವಾದ) ಒಂದು ಪತ್ರವು ಬಂದಿರುತ್ತದೆ. ನಿಜಾರ್ಥವನ್ನೊಳಗೊಂಡ ಅದರ ವಿಷಯವು ಈ ಕೆಳಗಣಂತಿದೆ.

"ನೀವು ಹರಿಜನ ಪತ್ರಿಕೆಯಲ್ಲಿ ಸ್ತ್ರೀ ವಿದ್ಯಾರ್ಥಿಯೊಬ್ಬಳೆಯ 'ವಿದ್ಯಾರ್ಥಿಗಳ ನಾಚಿಕೆಗೇಡಿತನ' ಎಂಬ ಬರೆಹದ ಕುರಿತಾದ ಟೀಕೆಯನ್ನು ಪ್ರಕಟಿಸಿರುವಿರಿ. ಅದನ್ನು ನಾವು ವಿಶೇಷತಃ ಲಕ್ಷಿಸಬೇಕಾಗಿರುವುದು, ಆಧುನಿಕ ಹುಡುಗಿಯರ ವಿಷಯ ನೀವು ತುಂಬಾ ಕೋಪಗೊಂಡಂತಿದೆ. ಇಂದಿನ ಹುಡುಗಿಯೆಂದರೆ ಅರ್ಧ ಡಜನ್ ರೋಮಿಯೋರಂತಹವರಿಗೆ ಒಬ್ಬಾಕೆ ಜೂಲಿಯಟ್" ಎಂಬ ತಮ್ಮ ಕೊನೆಯ ತೀರ್ಪಿಗೆ ಬಂದು ಮುಟ್ಟಿರುವುದೆಂಬುದು ವಿಷಾದಕರ. ಸ್ತ್ರೀಸಮಾಜದ ಸಾಮಾನ್ಯ ನೀತಿಯ ರೀತಿಗೆ ನಿಮ್ಮ ಅಭಿಪ್ರಾಯ ಸರಿಯಲ್ಲ ಮತ್ತು ಹಿತಕರವಾದುದೂ ಅಲ್ಲ.

"ಇಂದಿನ ದಿನಗಳಲ್ಲಿ ಸ್ತ್ರೀಯರು ಪುರುಷರ ಜೀವನದ ಹೊರೆಯನ್ನು ಕಡಿಮೆ ಮಾಡಲು ತಾವೂ ಹೆಗಲೊಡ್ಡಿ ಮುಂದೆ ಬರುತ್ತಿರುವರು. ಪುರುಷರು ಅವರನ್ನು ಕಳಂಕಗೊಳಿಸುವರು. ಆದರೂ ಸ್ತ್ರೀಯರನ್ನು ದೂರುವುದು ಯಾವ ನ್ಯಾಯ? ಹೌದು. ಕೆಲವು ಸಂದರ್ಭದಲ್ಲಿ ದೋಷಕ್ಕೆ ಸ್ತ್ರೀಯೂ ಸಮಾನಭಾಗಿಯಾಗಿರಬಹುದು. ಅರ್ಧ ಡಜನ್ ರೋಮಿಯೋರಿಗೆ ಒಬ್ಬಾಕೆ ಜೂಲಿಯಟ್" ಎಂಬ ಮಾತು ಒಂದು ವೇಳೆ ಕೆಲ ಹುಡುಗಿಯರಿಂದ ದೊರೆಯಬಹುದಾದರೆ ಆರು ಮಂದಿ ಜೂಲಿಯಟ್‌ರನ್ನು ಬೆಂಬತ್ತುವ ಒಬ್ಬಾತ ರೋಮಿಯನ ಉದಾಹರಣೆಗಳೂ ಇವೆಯೆಂಬುದು ನಿರ್ವಿವಾದ. ಹೀಗೆಂದಮೇಲೆ, ಇಂದಿನ ಹುಡುಗಿಯರೆಲ್ಲಾ ಇಂಥಾ ಜೂಲಿಯೇಟ್‌ರ್ ಮತ್ತು ಇಂದಿನ ಹುಡುಗರೆಲ್ಲಾ ಅಂಥಾ ರೋಮಿಯೋರು ಎಂದು ವರ್ಗೀಕರಿಸಲಾಗುವುದಿಲ್ಲ. ಅಷ್ಟೇಕೆ? ನಿಮ್ಮ ಬಳಿಗೆ ಬಂದ ಇಂದಿನ ಹುಡುಗಿಯರಲ್ಲಿ ಉತ್ಕೃಷ್ಟ ನಿರ್ಧಾರ, ತ್ಯಾಗ ಮತ್ತು ಪರಿಶುದ್ಧ ಸ್ತ್ರೀಸದ್ಗುಣಗಳುಳ್ಳ ಹಲವರನ್ನು ನೀವು ಕಂಡಿರಬೇಕಲ್ಲವೇ?"

"ನಿಮ್ಮೊಡನೆ ಪತ್ರವ್ಯವಹಾರ ನಡೆಸಿದಾಕೆ ತೋರಿಸಿದ ದುರ್ನಡತೆಯ ವಿರುದ್ಧವಾಗಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು ಹುಡುಗಿಯರ ತಪ್ಪು ಲಜ್ಜೆಯ ಭಾವಕ್ಕಿಂತಲೂ ಅದು ಪರಿಣಾಮಕಾರಿಯಾಗದಿರುವುದೇ ಕಾರಣ."

ಆದರೆ ಇಂಥಾ ಅಭಿಪ್ರಾಯವನ್ನು ಜಗದ್ವಂದ್ಯರಾದವರು ಕೊಡುವುದೆಂದರೆ ಸ್ತ್ರೀಯರ ದುರ್ದೈವವೇ ಸರಿ; ಇದರಿಂದ ಸ್ತ್ರೀಯರು ನರಕದ ದ್ವಾರವೆಂಬ ಹಿಂದಿನ ಅಸಹ್ಯ ಮಾತನ್ನು ಇನ್ನು ತಿರುಗಿ ಜಗತ್ತು ಎತ್ತಿ ಹಿಡಿಯುವುದೆಂಬಂತಿದೆ.

ಮೇಲಣ ಮಾತಿನಿಂದ ಇಂದಿನ ಹುಡುಗಿಯರು ನಿಮ್ಮಲ್ಲಿ ಗೌರವವುಳ್ಳವರಿಲ್ಲವೆಂದು ತಿಳಿಯಕೂಡದು. ನಿಮಗೆ ಪ್ರತಿಯೊಬ್ಬ ಯುವಕನು ಕೊಡುವಷ್ಟು ಮನ್ನಣೆಯನ್ನು ಪ್ರತಿಯೊಬ್ಬ ಹುಡುಗಿಯು ಇನ್ನೂ ಅರ್ಪಿಸುತ್ತಿರುವಳು. ಆಧುನಿಕ ಹುಡುಗಿಯು ತನ್ನನ್ನು ಕರುಣಾಜನಕ ದೃಷ್ಟಿಯಿಂದ ಕಾಣುವುದನ್ನು ಅಥವಾ ದ್ವೇಷಿಸುವುದನ್ನು ಆವಳು ಸಹಿಸಳು. ಅವರು ತಪ್ಪು ಮಾಡುವುದಾದರೆ, ತಮ್ಮ ದಾರಿಯನ್ನು ಸುಧಾರಿಸಿಕೊಳ್ಳಲು ಸಿದ್ಧರೇ ಇರುವರು. ಆದರೆ ಅಂಥಾ ಅಪರಾಧವು ನಿಷ್ಪಕ್ಷವಾಗಬೇಕು. ಈ ಸಂದರ್ಭದಲ್ಲಿ ನಾವು ಅಬಲೆಯರೆಂದು ಪರದೆಯನ್ನು ಹೊದ್ದುಕೊಂಡು ಅಡಗಿರಲಾರೆವು. ಅಥವಾ ಏನೇ ಹೇಳಲಿ, ಎಂದು ಸುಮ್ಮನೆ ಅಪರಾಧವನ್ನು ಒಪ್ಪಿಕೊಳ್ಳಲಾರೆವು. ಸತ್ಯವು ಬೆಳಕಿಗೆ ಬರಬೇಕಾದರೆ, ಈಗಿನ ಹುಡುಗಿಯೆನ್ನಿ, ಜೂಲಿಯಟೆನ್ನಿ, ಅದನ್ನು ಇದಿರಿಸುವ ಧೈರ್ಯ ಈಗಿನ ಹುಡುಗಿಯಲ್ಲದೆ.

ವಿದ್ಯಾರ್ಥಿಗಳ ನಾಚಿಕೆಗೇಡಿತನ ಪ್ರದರ್ಶನೆಗಾಗಿ!

ನಾನೀ ಆಶ್ರಮದಲ್ಲಿ ಸುಮಾರು ನಲ್ವತ್ತು ವರ್ಷಗಳ ಮೊದಲು ಸ್ತ್ರೀಸೇವೆಯನ್ನು ಆರಂಭಿಸಿದೆನು. ಪ್ರಾಯಶಃ ಈಗಿನ ಹುಡುಗಿಯರು ಯಾರೂ ಆ ಸಮಯ ಹುಟ್ಟಿರಲಿಕ್ಕಿಲ್ಲ. ಸ್ತ್ರೀತ್ವಕ್ಕೆ ವಿರುದ್ಧವಾಗಿ ನಾನೇನು ಬರೆಯಲು ಸಮರ್ಥನಲ್ಲ. ನನಗೆ ಸ್ತ್ರೀ ಸಮಾಜದ ಮೇಲಿರುವ ಅಭಿಮಾನವು ಅತೀವವಿದೆ. ನಾನೂ ಅವರ ವಿಷಯ ಏನೂ ದುರಭಿಪ್ರಾಯವುಳ್ಳವನಾಗಲಾರೆನು. ಸ್ತ್ರೀಯು ಇಂಗ್ಲಿಷಿನಲ್ಲಿ ಮಾತಿನಂತೆ (better half of mankind) ಮಾನವ ಸಮಾಜದ ಉತ್ತಮಾರ್ಧ. ನಾನು ಬರೆದುದು ಹುಡುಗರ ನಾಚಿಕೆಗೇಡಿತನವನ್ನು ಹೊರಗೆಡಹಿಸಲಿಕ್ಕಾಗಿಯಲ್ಲದೆ ಹುಡುಗಿಯರ ಚಂಚಲತೆಯನ್ನು ಪ್ರದರ್ಶಿಸಲಿಕ್ಕಾಗಿಯಲ್ಲ. ರೋಗದ ವಿವರಣೆಯನ್ನು ಸೂಚಿಸುವಾಗ ಅದರ ಸರಿಯಾದ ಚಿಕಿತ್ಸೆಯ ಸಾಧನವನ್ನು ಹೇಳುವಾಗ, ರೋಗವು ಹೇಗೆ ತಗಲಿತು ಎಂಬುವನ್ನು ಹೇಳಬೇಕಾಯಿತು.

"ಈಗಿನ ಹುಡುಗಿ" ಎಂಬ ಮಾತಿನ ಅರ್ಥ ಪ್ರತ್ಯೇಕವಿದೆ. ಇದರ ಅರ್ಥವು ಕೆಲವರಿಗೆ ಮಾತ್ರ ಅನ್ವಯಿಸತಕ್ಕದ್ದು. ಇಂಗ್ಲಿಷ್ ಶಿಕ್ಷಣ ಹೊಂದುವವರೆಲ್ಲ 'ಈಗಿನ ಹುಡುಗಿ"ಯರೆಂದು ಹೇಳಲ್ಪಡುವುದಿಲ್ಲ. 'ಈಗಿನ ಹುಡುಗಿಯರ' ಹುಡುಗಿಯರಿರುವರೆಂದು ನನಗೆ ಗೊತ್ತಿದೆ. ಆದರೆ ಈಗಿನ ಹುಡುಗಿಯರು ಎನ್ನುವವರು ಕೆಲವರಿರುವರು. ನನ್ನ ಹಿತೋಕ್ತಿಯೆಂದರೆ ಯುವತಿಯರು ಇಂಥಾ ಆಧುನಿಕ ಹುಡುಗಿಯರಾಗಿ ಕಳಂಕಿತರಾಗಬಾರದೆಂದಾಗಿದೆ. ನಾನು ಹೇಳಿದ ಈ ಪತ್ರದ ಮಧ್ಯೆ ಲಾಹೋರು ಹುಡುಗಿಗಿಂತಲೂ ವಿಶೇಷವಾಗಿ, ಆಂಧ್ರ ಹುಡುಗಿಯೊಬ್ಬಳು ವಿದ್ಯಾರ್ಥಿಗಳ ವರ್ತನೆಯ ಕುರಿತಾಗಿ ದೂರಿ ಬರೆದಿರುವಳು. ನಾನೀ ಕುರಿತು ಆಂಧ್ರ ವಿಶ್ವ ವಿದ್ಯಾಲಯದ ಅಧಿಕಾರಿಗಳಿಗೆ ಬರೆದಿರುವೆನು.

ಈ ಹನ್ನೊಂದು ಹುಡುಗಿಯರು ವಿದ್ಯಾರ್ಥಿಗಳ ದುರ್ವರ್ತನೆಗೆ ವಿರುದ್ಧವಾಗಿ ಚಳವಳ ಹೂಡಲಾರಂಭಿಸಲೆಂದು ನಾನು ಹೃತ್ಪೂರ್ವಕವಾಗಿ ಆಹ್ವಾನಿಸುವೆನು. ದೇವರು ಸಾಧಿಸಿದವನಿಗೆ ಸಹಾಯನೀಯುವನು. ಸ್ತ್ರೀಯರು ಪುರುಷರ ಅನ್ಯಾಯ ವರ್ತನೆಗೆ ಇದಿರಾಗಿ ತಮ್ಮನ್ನು ಕಾಪಾಡಿಕೊಳ್ಳುವ ಶಿಕ್ಷಣವನ್ನು ಗಳಿಸಬೇಕು.

೧೮೦,೦೦೦ ನಿರಾಶ್ರಿತರು

ಇಷ್ಟರವರೆಗೆ ನೂರು ಸಾವಿರಕ್ಕೂ ಮಿಕ್ಕಿ ನಿರಾಶ್ರಿತರು ಫ್ರಾನ್ಸಿನಲ್ಲಿ ಆಶ್ರಯ ಬೇಡಿದ್ದಾರೆ ಇದೀಗ ಮಿಲಿಟರಿ ನಿರಾಧಾರಿಗಳೂ ಬರುವಂತೆ ಗಡಿನಾಡಿನಲ್ಲಿ ಪ್ರವೇಶವೀಯಲಾಗಿದೆ ಒಡನೆ ಮೂರು ಸಾವಿರ ಮಂದಿ ಒಳಪ್ರವೇಶಿಸಿದರು.

ಸ್ಪೈಯಿನಿಗೆ ಬ್ರಿಟಿಷ್ ಆಹಾರ ಸಾಮಗ್ರಿ

ಅಲ್ ಎಂಟ್ರೆನು ಮತ್ತು ಕ್ಯಾಪ್ಟನ್ ಲೆನೂಕ್ಸ್ ಲೊಯಟ್ ಇವರು ಲಂಡನಿನಿಂದ ಕಳೆದವಾರ ವಿಮಾನಗಳಲ್ಲಿ ಆಹಾರ ಸಾಮಗ್ರಿಗಳನ್ನು ತುಂಬಿಸಿ ಸ್ಪೈಯಿನಿನ ನಿರಾಶ್ರಿತರಿಗೆ ಕೊಡುವವ್ಯವಸ್ಥೆ ಮಾಡಿರುವರು.

ಚಕ್ರವರ್ತಿ ಪಂಚಮ ಜೋರ್ಜರ ವಿಗ್ರಹ ಅನಾವರಣ

ಈಗ ಕಲ್ಕತ್ತೆಕ್ಕೆ ತಲುಪಿರುವ ಚಕ್ರವರ್ತಿ ಪಂಚಮ ಜೋರ್ಜರ ಕಂಚಿನ ವಿಗ್ರಹ ಅನಾವರಣ ಕಾರ್ಯವು ಬಂಗಾಳ ಗವರ್ನರಿಂದ ಇದೇ ತಾ. 27ಕ್ಕೆ ಜರಗಲಿರುವುದು.

ಶೇಟ್ ಜಮುನಾಲಾಲ ಬಜಾಜರು ಕೈದುಮಾಡಲ್ಪಟ್ಟರು

ಶೇಟ್ ಜಮುನಾಲಾಲ ಬಜಾಜರು ಕಳೆದ ತಾ. ೧೨ರಲ್ಲು ರಿಂಗಸ್ ಮತ್ತು ಸಿಕಾರದ ಮಧ್ಯದಲ್ಲಿರುವ ಟಕ್ರಿಬೋರಿ ಎಂಬ ರೈಲ್ವೆ ನಿಲ್ದಾಣದಲ್ಲಿ ಕೈದುಮಾಡಲ್ಪಟ್ಟರು. ಅವರನ್ನು ಪೋಲೀಸು ಡಿಪ್ಯುಟಿ ಇನ್ಸ್‌ಪೆಕ್ಟರರು ಕೈದುಮಾಡಿ ಜಯಪುರಕ್ಕೆ ಸ್ಪೆಶಲ್ ಗಾಡಿಯಲ್ಲಿ ಹಿಂದೆ ಕೊಂಡೊಯ್ಯಲಾಗುವುದೆಂದು ಹೇಳಿದರು. ಉಳಿದವರು ಸಿಕಾರಕ್ಕೆ ಹೋಗುವಂತೆ ವ್ಯವಸ್ಥೆ ಮಾಡಲಾಗುವುದೆಂದು ಪೋಲೀಸು ಅಧಿಕಾರಿಗಳು ತಿಳಿಸಿದರು. ಆಗ ಜಮುನಾಲಾಲರು, ತನ್ನೊಂದಿಗಿದ್ದವರು ತನ್ನ ಬಂಧುಗಳು, ಹಿತೈಷಿಗಳು ಅಥವಾ ಪತ್ರಿಕೋದ್ಯಮಿಗಳು ತನ್ನ ಕಡೆಯವರು; ಆದುದರಿಂದ ಅವರೂ ಹಿಂದೆ ಜಯಪುರಕ್ಕೆ ತನ್ನೊಂದಿಗೆ ಬರುವಂತೆ ವ್ಯವಸ್ಥೆ ಮಾಡಬೇಕೆಂದರು. ಇದಕ್ಕೆ ಸಮ್ಮತಿ ದೊರೆಯಿತು. ಬಜಾಜರು ಈ ಸಂದರ್ಭದಲ್ಲಿ ತನ್ನ ತನ್ನಿ ನಡೆಯಬೇಕೆಂದೂ ಸಂಸ್ಥಾನದಿಂದ ಹೊರಗೆ ಬಿಡುವಂ ಸಿಕಾರಕ್ಕೆ ಹೋಗುವ ನಿರ್ಧಾರವನ್ನು ಮುಂದೊತ್ತುವೆನಾಗಿಯೂ ತಿಳಿಸಿದರು. ಆಗ ಡಿಪ್ಯುಟಿ ಇನ್ಸ್‌ಪೆಕ್ಟರ್ ಜನರಲರು ಅವರನ್ನು ಸ್ಪೆಶಲ್ ಗಾಡಿಯಲ್ಲಿ ಜಯಪುರಕ್ಕೆ ಕಳುಹಿಸಲಾಗುವುದೆಂದ ಭರವಸೆಯಿತ್ತರು.

ಶೇಟ್ ಬಜಾಜರು ಗಾಡಿಹತ್ತಿದರು. ಅದು ಪಶ್ಚಿಮ ಜಯಪುರಕ್ಕೆ ಸೀದಾ ನಡೆಯಿತು. ಅಲ್ಲಿ ಬಜಾಜರನ್ನು ಅವರ ಮಗ, ಕಾರ್ಯದರ್ಶಿ, ಸೇವಕರೊಂದಿಗೆ ಕಾರಿನಲ್ಲಿ ಕುಳ್ಳಿರಿಸಿ ಜೇಲಿಗೆ ಒಯ್ಯಲಾಯಿತು.

ಸಾಮ್ಯುವೇಲ್ ಹೋರೆಯವರ ದೊಡ್ಡ ಮಾತು

ಸರ್ ಸಾಮ್ಯುವೆಲ್ ಹೋರೆಯವರು ತನ್ನ ದೇಶದ ಹೆಚ್ಚಳವನ್ನು ಬಾಯಿ ತುಂಬಾ ತಾನೇ ಪೊಗಳುತ್ತಾ ಹೀಗೆಂದರು. ಯುರೋಪಖಂಡದ ಯಾವ ದೇಶಕ್ಕೆ ಹೋದರೂ ಇಂದೀಗ ಗ್ರೇಟಬ್ರಿಟನು ಯುರೋಪಖಂಡದ ಶಾಂತಿಸ್ಥಾಪನೆಯ ಜನಾಂಗವೆನ್ನುವುದು ಕೇಳಬರುತ್ತದೆ ನಮ್ಮ ಪ್ರಧಾನಮಂತ್ರಿ ಚೇಂಬರ್ಲೇನ ಕುರಿತು ಯಾರ ಅಭಿಪ್ರಾಯ ಕೇಳಿದರೂ, ಅವರೊಬ್ಬ ಮುದುಕ, ಅಲ್ಲಿಂದ ಇಲ್ಲಿ, ಇಲ್ಲಿಂದಲ್ಲಿ ಓಡಾಡುವವನೆಂದು ಯಾರು ಹೇಳುವರೇ? ಹಾಗೆಂದೂ ಇಲ್ಲ ಜನರು ಅವರ ಗುಣ ಗಾನಮಾಡುವರು, ಅವರನ್ನು ... ತ್ಯಂತ ಹಾರ್ದಿಕ ಗೌರವದಿಂದ ಕಾಣುವರು. ಯುರೋಪಿನ ಶಾಂತಿಸ್ಥಾಪನೆಂದು ಮನವಾರೆ ಕೊಂಡಾಡುವರು. ತಮ್ಮ ಜೀವಿತ ಕಾಲದಲ್ಲಿ ಇಂಥಾ ಶಾಂತಿಗಾಗಿ ಯುರೋಪಿಯಾನ ಜನಾಂಗಗಳಲ್ಲಿ ಇಷ್ಟೊಂದು ಜನತೆಯ ಮೆಚ್ಚುಗೆಗೊಳಗಾದ ಪ್ರಧಾನರು ಬೇರಿಲ್ಲವೆಂದು ಅವರನ್ನುವರು. ಕೆಲಸಮಯದ ಹಿಂದೆ ನಮ್ಮ ಪ್ರಧಾನಮಂತ್ರಿಗಳು ರೋಮಿಗೆ ಹೋದಾಗ ಕಲೆತುಬಂದ ಅಲ್ಲಿಯ ಜನರು, ಚೇಂಬರ್ಲೇನರು ಮಾರ್ಗದಲ್ಲಿ ಮುಂದೆ ಸರಿಯುತ್ತಿರುವಾಗ ಆನಂದದಿಂದ ಚೇಂಬರ್ಲೇನರು ಯುರೋಪಿನ ಗಂಡಾಂತರ ನಿವಾರಕನೆಂದು ಸಾವಿರಗಟ್ಟಳೆಯಲ್ಲಿ ಹಿಂಡುಗೂಡಿ ಹೊಗಳುತ್ತಿದ್ದರು. ಅವರು ತನ್ನ ವಯಸ್ಸನ್ನು ಗಣಿಸದೆ, ತನ್ನ ಅಶಕ್ತತೆಯನ್ನು ಲಕ್ಷಿಸದೆ, ಶಾಂತಿಸಂದೇಶಕ್ಕಾಗಿ ಪ್ರಯಾಣ ಮಾಡುತ್ತಿರುವಾಗ ಜನರು ಒಂದುಸಲ ಈ ಪುಣ್ಯಪುರುಷನನ್ನು ದೂರದಿಂದಲಾದರೂ ನೋಡೋಣವೆಂದು ರೈಲ್ವೆ ನಿಲ್ದಾಣಗಳಲ್ಲಿ ಹಿಂಡುಗೂಡುತ್ತಿದ್ದರು.

ಜಗತ್ತಿನ ಇಂದಿನ ಭೀಕರ ಪರಿಸ್ಥಿತಿಯ ಮಧ್ಯೆ ಈ ಎರಡು ವಿಷಯಗಳು ಪ್ರಧಾನವಾಗಿ ಅಪಾಯವನ್ನು ದೂರಮಾಡುತ್ತಿವೆ. ಪ್ರಥಮತಃ ಯುರೋಪು ಜನಾಂಗದ ಜನತೆಗೆ ಯುದ್ಧಬೇಕಾಗಿಲ್ಲ; ಶಾಂತಿಬೇಕು. ಎರಡನೆಯದಾಗಿ ಗ್ರೇಟಬ್ರಿಟನ ಮತ್ತು ಬ್ರಿಟಿಷ್ ಸಾಮ್ರಾಜ್ಯದ ಉಚ್ಛ್ರಸ್ಥಾನ ಪ್ರಭೆ, ಯುರೋಪು ಶಾಂತಿಬಯಸುತ್ತಿರೆ ಬ್ರಿಟನು ಶಾಂತಿರಕ್ಷಣೆಯ ಭಾರವಹಿಸಿದೆ ಎಂಬ ವಿಷಯ ಸರ್ವತ್ರ ಬಹಿರಂಗವಿದೆ. ಮುಖ್ಯವಾಗಿ ಕಳೆದ ಮಹಾಯುದ್ಧದ ಭೀಕರ ದೃಶ್ಯವು ಇನ್ನೂ ಜನತೆಯ ಕಣ್ಣುಗಳಿಂದ ಮಾಯವಾಗಿಲ್ಲ ಜನತೆಗೆ ಯುದ್ಧವೆಂದರೆ ಅಪಾರ ಹೆದರಿಕೆ—ಎಂದರು.

TI
oap

ಕಟ್ಟಕಡೆಗೆ
ಲಕ್ಷಾಂತರ ಜನರು ಮನಗಂಡಿರುವ ವಿಷಯವಿದು. ಶೀತಲ ಉಲ್ಲಾಸಕರ ಮತ್ತು
ಸಂಭ್ರಮದ ಸ್ನಾನಕ್ಕೆ
ಸ್ವಸ್ತಿಕ
'ಕಾಂತಿ'
ಟ್ವೊಲೆಟ್ ಸೋಪಿನ ಹೊರತು ಇನ್ನೊಂದು ಉತ್ತಮವಿರಲಾರದು.
ಅಲ್ಪ ಬೆಲೆಗೆ
ಅತಿ ದೊಡ್ಡ ತುಂಡು
ಳಲ್ಲಿಯೂ ಮಾರಲ್ಪಡುತ್ತದೆ.
ಸ್ತಿಕ ಕಾಂತಿ ಟ್ವೊಲೆಟ್ ಸೋಪನ್ನು
ಮೇಲೆ ಇತರ ಸೋಪನ್ನು ಮೆಚ್ಚಲಾರಿರಿ.

ಕೋಮನ್ ವೆಲ್ತ್

ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಪೂನಾ ಸಿಟಿ.

ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭ ದರದಲ್ಲಿ ಒದಗಿಸಿಕೊಡುವುದು.

ಈ ಸಂಸ್ಥೆಯ ಹಿರಿಯ ಗುಣ

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆ ಮಾಡಿ ಸೇರಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನವರಿಗೆ ಬರೆಯಬೇಕಾಗಿದೆ.

ಎಸ್. ಪಿ. ಆರ್. ನಾಯಕ್ ಎಂಡ್ ಸನ್ಸ್,	ಗವಾನಕರ್ ಎಂಡ್ ಸನ್ಸ್,
	ಚೀಫ್ ಏಜಂಟ್ಸ್,
ಸ್ಪೆಶಲ ಏಜಂಟ್,	ಆನಂದರಾವ್ ಸರ್ಕಲ್,
ಕಾರ ಸ್ಟ್ರೀಟ್—ಮಂಗಳೂರು	ಬೆಂಗಳೂರು.

The Commonwealth Assurance Co., Ltd., Poona

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪನಿ** 1926

13 ಬಲ್ಮಠ ರಸ್ತೆ, ಮಂಗಳೂರು.



ಸರಕಾರಿ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು ಪೆಟ್ಟಿಗೆಗಳು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರದಲ್ಲಿ ಮಾಡಿ ಕೊಡಲಾಗುವುದು.

CROWN RUBBER STAMP CO,

Balmat Road, MANGALORE.

Included by the Mysore Govt Stores Purchase Committee in the list of approved Firms

ಮದನರತಿಕಾಮಶಾಸ್ತ್ರವೆಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಗೆಯೇ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರವಾಗಿರುವ ಗಟ್ಟಿಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತುಗಳು, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿರಿ ಪುಸ್ತಕ ಮುಗಿಯುವವರೆಗೂ ಕೆಳಗಿಡಲು ಮನಸ್ಸು ಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ—**T. V.** ದೇವಕರ್ ಎಂಡ್ ಕಂಪೆನಿ,

ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T V Devkar & Co, *Nambulier Street*, G. T. MADRAS.

ರೂ. 1—8—0ಕ್ಕೆ 3 ವಾಚುಗಳು ಮತ್ತು 405 ಮನೋಹರ ವಸ್ತುಗಳು.



ನಮ್ಮ ರೂ 1-8-0 ಕ್ರಯದ 15 ಜಣ್ಣಿನ "ಟಿಮೋರೋಸ್"ನ್ನು ಕೊಂಡುಕೊಳ್ಳುವವರಿಗೆ ಒಂದು ಬಂಗಾರದ ಡಬ್ಬಿ ರಿಸ್ಟ್‌ವಾಚು, ಒಂದು ಪೌಡರ್ ಪಾಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿಕಡ್ಡಿಯ ಕೇಸು, ಒಂದು ಸಿಗರೇಟ್‌ಲೈಟು, ಒಂದು ಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ್ ಸ್ಕ್ರೂ, 660 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರಂಟಿಯಿರುವ ಭದ್ರ ಮೆಶಿನರಿಯುಳ್ಳ ಗಡಿಯಾರ, ಒಂದು ಫೌಂಟೇನ್ ಪೆನ್ನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು 11 ಆಣೆ ಹೆಚ್ಚಿಗೆ.

Oriental Fancy Stores, S. C. E 90.

Post Box. No. 12204, **CALCUTTA.**

Notice to Subscribers.

Subscribers of 'Navayuga' weekly are requested to send in their subscriptions for the current year early since all subscriptions are payable in advance. Remittances should be made either by cheque or M. O. or through any of the branch of the Canara Industrial & Banking Syndicate Ltd.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 5 2-39

ಮುಸ್ಲಿಮರ ಅಸಮಾಧಾನ—ಮಂಗಳೂರು ಮುಸ್ಲಿಂ ಪುರಜನರ ಒಂದು ಮಹಾಸಭೆಯು ಜುಮಾ ಮಸೀದಿಯಲ್ಲಿ ಕಳೆದ ತಾ. 29ರಲ್ಲಿ ಸೇರಿ ಮಂಗಳೂರು ನಗರಸಭೆಯವರು ಮುಸ್ಲಿಂ ಪುರಜನರ ಹಿತದ ಕಡೆಗೆ ಗಮನಕೊಡುವುದಿಲ್ಲವೆಂಬ ವಿಷಯವನ್ನು ನಗರಸಭೆಯವರ ಅವಗಾಹನೆಗೆ ತರುವ ಬಗ್ಗೆ ಠರಾವನ್ನು ಮಾಡಿದರು. ಕೊಲಸುಗಳನ್ನು ಕೊಂದು ಮುಸ್ಲಿಮರು ಮಾರುವ ಪೇಟೆಯಲ್ಲಿ ಶೇಖರಿಸುತ್ತಿರುವ ವಿಷಯದಲ್ಲಿ ಆಕ್ಷೇಪಿಸಿ ನಗರಸಭೆಯವರಿಗೆ ತಿಳಿಸಿದರು. ಅವರು ಆ ವಿಷಯದಲ್ಲಿ ಯಾವ ಕಾರ್ಯಕ್ರಮವನ್ನೂ ಮಾಡದಿರುವುದು ವಿಷಾದಕರವೆಂದು ಸೂಚಿಸಲ್ಪಟ್ಟಿತು. ಮತ್ತು ಮುಸ್ಲಿಮರ ಸಂಕಷ್ಟಗಳನ್ನು ನಿವಾರಣೆಮಾಡಿಸುವ ಬಗ್ಗೆ ಚಳವಳಿ ಹೂಡಲು ಒಂದು ಸಮಿತಿಯೂ ಸಹ ಏರ್ಪಟ್ಟಿತು. ಈ ಸಭೆಗೆ ಜನಾಬ್ ಎಚ್. ಹುಸ್ಸೇನ್ ಪುತ್ತೂರು ಸಾಹೇಬರು ಅಧ್ಯಕ್ಷರಾಗಿದ್ದರು.

ಟ್ರೈನಿಂಗ್ ಶಾಲಾ ವರ್ಧಂತಿ—ಮಂಗಳೂರು ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. 29ರಲ್ಲಿ ಜಿ. ಬೋರ್ಡ್ ಪ್ರೆಸಿಡೆಂಟರಾದ ಡಾ. ಕೆ. ಪಟ್ಟಾಭಿರಾಮರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ವಾಗತ ವಚನಗಳಾದ ವೇಳೆ ಅಧ್ಯಕ್ಷರು ಉಪಾಧ್ಯಾಯರ ಕರ್ತವ್ಯ, ದೇಶದಲ್ಲಿ ವಿದ್ಯೆಯನ್ನು ಹರಡಲು ಅವರು ಮಾಡಬೇಕಾದ ಪ್ರಯತ್ನ, ಅವರ ವೇತನಗಳನ್ನು ಹೆಚ್ಚಿಸಲು ಈಗಿರುವ ತೊಡಕುಗಳು ಇವೇ ಮೊದಲಾದ ವಿಷಯಗಳನ್ನು ಎತ್ತಿ ಭಾಷಣಮಾಡಿದರು. ಅನಂತರ ನಾಟಕಪ್ರದರ್ಶನ, ಶಾಲಾ ಮುಖ್ಯೋಪಾಧ್ಯಾಯರಿಂದ ಧನ್ಯವಾದ ಸಮರ್ಪಣೆಗಳಾದ ಮೇಲೆ ಸಭೆ ಮುಕ್ತಾಯವಾಯಿತು.

ಇಸ್ಲಾಮಿಕ್ ಕಲ್ಚರಲ್ ಎಸೋಸಿಯೇಶನ್—ಮೇಲಿನ ಹೆಸರಿನ ಒಂದು ಸಂಘವು ಮಂಗಳೂರಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟಿತು. ಇದರ ಉದ್ಘಾಟನಾ ಸಮಾರಂಭವು ಕಳೆದ ಬಕ್ರೀದು ಹಬ್ಬದ ದಿವಸ ಜಿಲ್ಲಾ ಜಡ್ಜರಾದ ಶ್ರೀ ಪಿ. ರಾಜಗೋಪಾಲಾಚಾರ್ಯರಿಂದ ನೆರವೇರಿಸಲ್ಪಟ್ಟಿತು.

ಹಿಂದೀ ಅಧ್ಯಾಪಕರ ಸಭೆ—ಹಿಂದೀ ಅಧ್ಯಾಪಕ ಮತ್ತು ಪ್ರಚಾರಕರ ಸಭೆಯು ಬರುವ ತಾ. 11ನೇ ಸಾಯಂಕಾಲ ಗಣಪತಿ ಹೈಸ್ಕೂಲಿನಲ್ಲಿ ನಡೆಯುವುದು. ಈ ದಿನ ಸಾಯಂಕಾಲ ಶ್ರೀ. ಎ. ವರದರಾಜಯ್ಯರ ಅಧ್ಯಕ್ಷತೆಯಲ್ಲಿ ಮೋಟರ್ ಕೆಲಸಗಾರರ ಸಭೆಯು ಸೇರಲಿದೆ.

ನಿವೃತ್ತರಾದರು—ಮಂಗಳೂರು ಗವರ್ನಮೆಂಟ್ ಹುಡುಗಿಯರ ಟ್ರೈನಿಂಗ್ ಶಾಲೆಯ ಅಧ್ಯಾಪಿಕೆಯರಾದ ಶ್ರೀಮತಿ ಯಂ. ಎರ್ನೆಸ್ಟರು ಸುಮಾರು 30 ವರ್ಷಗಳ ಮೆಚ್ಚುಗೆ ಆ ಶಾಲೆಗೆ ಸೇವೆಸಲ್ಲಿಸಿ ಈಗ ನಿವೃತ್ತರಾದರು. ಶ್ರೀಮತಿಯವರಿಗೆ ಶಾಲಾ ಉಪಾಧ್ಯಾಯಿನಿಯರು ಔತಣಕೊಟ್ಟು ಸತ್ಕರಿಸಿದರು. ವಿದ್ಯಾರ್ಥಿನಿಯರು ಪುಷ್ಪಹಾರಗಳನ್ನಿತ್ತು ಅವರನ್ನು ಗೌರವಿಸಿದರು. ಈ ಸಮಾರಂಭಗಳು ಕಳೆದ ತಾ. 30 ಮತ್ತು 31ರಲ್ಲಿ ಜರಗಿದುವು.

ಗವರ್ನಮೆಂಟ್ ಕಾಲೇಜ್ ಕರ್ನಾಟಕ ಸಂಘ—ಸ್ಥಳೀಯ ಗವರ್ನಮೆಂಟ ಕಾಲೇಜಿನ ಕರ್ನಾಟಕ ವರ್ಧಂತಿ ಉತ್ಸವವು ನಿನ್ನೆಯ ದಿನ ಸಾಯಂಕಾಲ ಕಾಲೇಜಿನಲ್ಲಿ ಶ್ರೀ. ಸಾಬಾಜಿ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಕರ್ನಾಟಕ ಭಾಷಾ ಸೇವೆಯನ್ನು ಮಾಡುತ್ತಿರುವುದನ್ನು ಪ್ರಶಂಸಿಸಿ ಮಾತಾಡಿದರು.

ನಡಿಗೋಡು—ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ತಾ. 3-2-1939ರಲ್ಲು ಪಟೇಲ ಕೊಂಡಾಪ್ಪಶೆಟ್ಟಿ ಅಧ್ಯಕ್ಷತೆಯಲ್ಲಿ ಸುತ್ತುಮುತ್ತಲಿನ ಗ್ರಾಮಸ್ಥರ ಸಭೆ ಸೇರಿ ಶ್ರೀ ಪುತ್ರನಾರ ಯಕ್ಷಗಾನ ಸಭೆ, ಆದಿತ್ಯವಾರ ಭಜನೆ ಮಂಡಲಿಯು ಒಳ್ಳೆ ರೀತಿ ನಡೆಯಬೇಕೆಂದು ನಿರ್ಣಯಿಸಲಾಯಿತು. ಅದಕ್ಕೆ ಸದ್ರಿ ಪಟೇಲ ಕೊಂಡಾಪ್ಪಶೆಟ್ಟಿ ಅಧ್ಯಕ್ಷರಾಗಿಯೂ, ಪುಟ್ಟಶೆಟ್ಟಿ ಕಾರ್ಯದರ್ಶಿಯಾಗಿಯೂ, ಚುನಾಯಿತರಾದರು. ಅಂದು ಮಂದರಾಪಟ್ಟಾಭಿಷೇಕ ಎಂಬ ಪ್ರಸಂಗವನ್ನು ಆಡಲಾಯಿತು. ಅಧ್ಯಕ್ಷರ ಭಾಷಣ, ಫಲಾಹಾರದೊಡನೆ ಸಭಾಂತ್ಯವಾಯಿತು.

ಕಟೀಲು—ಇಲ್ಲಿಯ ಶ್ರೀ. ದುರ್ಗಾ ಹಾಯರ ಎಲಿಮೆಂಟರಿ ಶಾಲೆಯ ಅಭಿವೃದ್ಧಿಗೋಸ್ಕರ 4 ಆಣೆಯಂತೆ ವಸೂಲುಮಾಡಿದ ಸುಮಾರು ಇನ್ನೂರು ರೂಪಾಯಿಗಳ ಅವಸ್ಥೆಯೇನೆಂಬುದನ್ನು ಮೇಲಿನ ಶಾಲೆಯ ಅಭಿವೃದ್ಧಿ ಫಂಡಿನ ಅಧ್ಯಕ್ಷರಾಗಲೀ, ಆಡಳಿತಗಾರಿ ಮಂಡಲಿಯ ಸದಸ್ಯರಾಗಲೀ ದಯಮಾಡಿ ಕೂಡಲೆ ತಿಳಿಸಿದರೆ ಉತ್ತಮವಲ್ಲವೇ ಎಂತ ಬರೆಯುತ್ತಾರೆ.

ಕಿನ್ನಿಗೋಳಿ—ಇಲ್ಲಿಯ ಸಂಟ್ ಮೇರಿ ಇಗರ್ಜಿಯಿಂದ ಕಳೆದ ಎಪ್ರಿಲು ತಿಂಗಳಲ್ಲಿ ಕಳವಾದ ಮಾತೆಯ ಆಭರಣ (ತಲೆಯ ಕಿರೀಟ) ಪೋಲೀಸರಿಂದ ಬಲವಾಗಿ ಶೋಧನೆಮಾಡಿದ ಮೇಲೆ ಸಿಕ್ಕದೆ, ತಾರೀಕು 3-2-39ರಲ್ಲು ಕಿನ್ನಿಗೋಳಿ ಬಂಗ್ಲೆ ದೇವಗಸಿಂತ ಬಾವಿಯಲ್ಲಿ ಅದರ ಮುಕ್ಕಾಲು ಅಂಶವು ದೊರಕಿರುತ್ತದೆ. ಬಾಕಿಯ ಆಭರಣವನ್ನೂ ಕಳ್ಳರನ್ನೂ ಪತ್ತೆಹಿಡಿಯುವುದಕ್ಕೆ ಇನ್ನೂ ಪೋಲೀಸರಿಂದ ತನಿಖೆ ನಡೆಯುತ್ತದೆ.

ಶಿರ್ವ—ತಾ. 26-1-39ರಲ್ಲಿ ಶ್ರೀ. ಪಾಲಾಬಲ ಶೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿ ಶ್ರೀ. ರಾಮನ್ ಮೆನೊನರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು. ಶ್ರೀ ಪಾಕೀರಯವರು ವಿದ್ಯಾಮಂತ್ರಿಗಳಾದುದಕ್ಕಾಗಿ ಅಭಿವಂದಿಸಲಾಯಿತು. ಸುತ್ತುಮುತ್ತಲಿನ ಇತರ ಶಾಲೆಗಳ ಮಕ್ಕಳನ್ನು ತಪ್ಪಿಸಿ ಸ್ಥಳೀಯ ಬೋರ್ಡ ಶಾಲೆಗೆ ಸೇರಿಸುವ ಮೂಲಕ ಆ ಶಾಲೆಯನ್ನು ಉದ್ಧರಿಸಬಹುದೆಂಬ ಕೆಲವರ ನಂಬಿಕೆಯನ್ನು ಖಂಡಿಸಿ ಭಾಷಣಗಳಾದುವು.

೧ ರೂಪಾಯಿಗೆ ೨೪ ಆಣೆ!

ಒಂದೇ ಒಂದು ತಿಂಗಳು ಮಾತ್ರ.

೧ ರಾಜಾ ಹರಿಶ್ಚಂದ್ರ ೨ ವೇದಾಂತ ೩ ಹಿಂದು ಮುಸಲ್ಮಾನ ೪ ಪೋಸ್ಟಮಾಸ್ಟರ್ ೫ ವಿಚಿತ್ರ ನ್ಯಾಯ ೬ ಆದರ್ಶ ನೊಬ್ಬನೆ ೭ ಸಂಪೂರ್ಣ ರಾಮಾಯಣ ೮ !!! ೯ ಉತ್ಪಾತ ೧೦ ದೇವರ ಮಗು ೧೧ ಹೊಸ ಹೊಸ ೧೨ ಎರಡು ಕತೆಗಳು ೧೩ ಭಯ ನಿವಾರಣೆ ೧೪ ಹಂಗಸರ ಕತೆಗಳು ೧೫ ಮಿಸ್ 1954 ೧೬ ಮುದುಕನ ಹೆಂಡ್ತಿ, ಧಕಧೈರ್ಯ ರಾಧೆ ಒಂದೊಂದಾಣೆ ಬೆಲೆಯ ಮೇಲಿನ 16 ಪುಸ್ತಕಗಳನ್ನು ತರಿಸುವವರಿಗೆ 0-8-0 ಬೆಲೆಯ 'ಸನ್ಯಾಸಿಯ ಸೋಗಿನಲ್ಲಿ' ಎಂಬ ಪುಸ್ತಕವನ್ನು ಮುಫತ್ತಾಗಿ ಕೊಡಲಾಗುವುದು. ಅಂಚೆವೆಚ್ಚವೂ ಮುಫತ್ತು. ಕೂಡಲೇ 16 ಆಣೆಯ ಸ್ಟಾಂಪು ಕಳಿಸಿ ೨೪ ಆಣೆಯ ಪುಸ್ತಕ ಪಡೆಯಿರಿ.

೮ ಆಣೆಗೆ ೧೨ ಆಣೆ.

ಮೇಲಿನ ಒಂದೊಂದಾಣೆಯ 16 ಪುಸ್ತಕಗಳ ಪೈಕಿ ಯಾವುದಾದರೂ 8 ನ್ನು ತರಿಸುವವರಿಗೆ 0-4-0 ಬೆಲೆಯ 'ಹೆಂಡ್ತಿ ಗಂಡನಾದರೆ' ಎಂಬ ಪುಸ್ತಕವನ್ನು ಮುಫತ್ತಾಗಿ ಕೊಡಲಾಗುವುದು. ಇದಕ್ಕೂ ಅಂಚೆವೆಚ್ಚ ಮುಫತ್ತು. ಕೂಡಲೇ 0-8-0 ಸ್ಟಾಂಪು ಕಳಿಸಿ 12 ಆಣೆ ಪುಸ್ತಕ ಪಡೆಯಿರಿ. ಫೆಬ್ರವರಿ ಅಖೈರಿ ಒಳಗೆ ಯಾವುದಾದರೊಂದಕ್ಕೆ ಆರ್ಡರು ಕೊಡುವವರಿಗೆ ಪುಸ್ತಕಗಳೊಂದಿಗೆ 1939ನೇ ಇಸವಿಯ ಸುಂದರವಾದ ಕಲೆಂಡರೊಂದನ್ನು ಉಚಿತವಾಗಿ ಕಳಿಸಲಾಗುತ್ತೆ.

ವಿಳಾಸ —

ನವಭಾರತ ಪುಸ್ತಕಭಂಡಾರ

ಉಡುಪಿ.

ಬೊಂಬಾಯಿ ಸಮಾಚಾರ

(ಸ್ವಂತ ಬಾತ್ಮೀದಾರರಿಂದ)

ಎ. ಐ. ಸಿ. ಸಿ ಗೆ ಸದಸ್ಯರ ಚುನಾವಣೆಯು—ಕಳೆದ ಶನಿವಾರ ಜರಗಿತ್ತು. ಪ್ರಾರಂಭದಲ್ಲಿ ೯ ಜನರು ನಾಮಪತ್ರಗಳನ್ನು ಕಳುಹಿಸಿದ್ದಾಗ್ಯೂ ಕೂಡ, ಕೊನೆಯಲ್ಲಿ ಸಾಮ್ಯವಾದಿಗಳೂ, ಸಮತಾವಾದಿಗಳೂ ಒಂದೇ ಅಭಿಪ್ರಾಯಕ್ಕೆ ಬಂದು ಶ್ರೀ. ಮಸಾನಿಯವರು ತಮ್ಮ ನಾಮಪತ್ರವನ್ನು ಹಿಂದೆಗೆಯುವಂತೆ ಮಾಡಿದರು. ಸಾಮ್ಯವಾದಿಗಳು ಮೊದಲಿಂದಲೇ ಶ್ರೀ. ನರಿಮನರನ್ನು ಕಳುಹಿಸುವುದೆಂದು ನಿಶ್ಚಯಿಸಿದ್ದರು. ಆದ್ದರಿಂದ ಇಬ್ಬರು ಸಮತಾವಾದಿಗಳಿದ್ದು ಓಟು ತಗೆದಿದ್ದಲ್ಲಿ, ಇವರಿಗೆ ಪೆಟ್ಟುಬಿದ್ದು, ಆಫೀಸಿಯಲ್ ಪ್ರತಿನಿಧಿಗಳಿಗೆ ಲಾಭವಾಗುತ್ತಿತ್ತು. ಅಥವಾ ಶ್ರೀ. ನರಿಮನ್‌ರವರಿಗೆ ಧಕ್ಕೆ ತಗಲುತ್ತಿತ್ತು. 1. ಭೂಲಾಭಾಯಿ ದೇಸಾಯಿ, 2. ಎಸ್. ಕೆ. ಪಾಟೀಲ್, 3. ಕೆ. ಎಫ್. ನರಿಮನ್, 4. ಮೆಹರಾಲೀ, 5. ನಾಗೀಂದಾಸ್ ಮಾಸ್ತರ್, ಈ ಐದು ಮಂದಿ ವಿರೋಧವಿಲ್ಲದೆ ಚುನಾಯಿಸಲ್ಪಟ್ಟರು.

ನೇಶನಲ್ ಕೋಂಗ್ರೆಸಿನ ಅಧ್ಯಕ್ಷತೆಗೆ ಓಟುಕೊಡುವಾಗ ಶ್ರೀಮತಿ ಸರೋಜಿನಿ ನಾಯುಡುರವರು ಎಡಪಕ್ಷದವರ ವಿರೋಧದೆದುರಲ್ಲಿ ಓಟುಕೊಟ್ಟು, ಶ್ರೀ. ಭೋಸಲರವರಿಗೆ 12, ಶ್ರೀ. ಪಟ್ಟಾಭಿಯವರಿಗೆ 14 ಮತಗಳಾದವು. ಇದಾದ ನಂತರ ಎಡ ಪಕ್ಷದವರು, ಕೋಂಗ್ರೆಸ್ ಹೌಸಿನಲ್ಲಿ ಒಂದು ಸಭೆ ಸೇರಿಸಿ, ಬಿ. ಪಿ. ಸಿ. ಸಿ ಯು ಮಾಡಿದಂಥಾ ಈ ಕಾರ್ಯವನ್ನು ಖಂಡಿಸಿ ಠರಾವೊಂದನ್ನು ಪಾಸುಮಾಡಿತು.

ಸೋಮವಾರ ಬಿ. ಪಿ. ಸಿ. ಸಿ. ಯ ಅಧಿಕಾರಿಗಳ ಚುನಾವಣೆಯು ನಡೆದು ಕಳೆದ ವರ್ಷದವರೇ ತಿರಿಗೊಮ್ಮೆ ಚುನಾಯಿಸಲ್ಪಟ್ಟರು. ಉಪಕಾರ್ಯದರ್ಶಿಯವರಾದ ಗಣಪತಿ ಶಂಕರ ದೇಸಾಯಿಯವರ ಬದಲಿಗೆ ಗುಣವಂತ ತಳಪದಿಯವರು ಚುನಾಯಿಸಲ್ಪಟ್ಟರು. ಈ ಚುನಾವಣೆಯು ನಡೆಯುವಾಗ ಎಡ ಪಕ್ಷದವರು ಯಾವ ಅಡ್ಡಿಯನ್ನೂ ತರಲಿಲ್ಲ. ಚುನಾವಣೆಯಲ್ಲಿ ವಿಜಯಹೊಂದಿದ ಶ್ರೀ. ಸುಭಾಸ್‌ರವರಿಗೆ ಅಭಿವಂದನೀಯ ಟೆಲಿಗ್ರಾಮನ್ನು ಕಳುಹಿಸಬೇಕೆಂದು ಎಡಪಕ್ಷದವರು ಕೇಳಿಕೊಳ್ಳಲು ಅಧ್ಯಕ್ಷರಾದ ಭೂಲಾಭಾಯಿ ದೇಸಾಯಿಯವರು, "ನಾವು ಅವರಿಗೆ ನಿನ್ನೆಯಿಂದಲೇ ನಮ್ಮ ವಿರೋಧವನ್ನು ತೋರಿಸಿರುವೆವು. ಆದ್ದರಿಂದ ಏನನ್ನೂ ಕಳುಹಿಸಲು ಸಾಧ್ಯವಿಲ್ಲೆಂದು" ಅದನ್ನು ನಿರಾಕರಿಸಿದರು.

ಸಭೆಯು ಅಂತ್ಯಗೊಂಡೊಡನೆ ಶ್ರೀ ಎಸ್. ಕೆ. ಪಾಟೀಲರವರು ಹಣಕೊಟ್ಟು ತರಿಸಲ್ಪಟ್ಟ ಸಾಧಾರಣ 150 ಮಂದಿ ಭಯ್ಯಾ ಜನರು ಬಿ. ಪಿ. ಸಿ. ಸಿ. ಯು ಹೊರಡುಗಡೆ ನಿಂತು, ಎಡಪಕ್ಷದವರಿಗೆ ಬಯ್ಯತ್ತಾ ಬೊಬ್ಬೆಡ ತೊಡಗಿದರು. ಶ್ರೀ ಭೂಲಾಭಾಯಿ ಮತ್ತು ಎಸ್. ಕೆ. ಪಾಟೀಲರು ಇದನ್ನು ನೋಡಿ ಸುಮ್ಮನಿದ್ದರು. ಬಿ. ಪಿ. ಸಿ. ಸಿ. ಯ ಸದಸ್ಯರು ಆದರೆ ಈ ಜನರನ್ನು ಅಲ್ಲಿ ಕೂಡಿಸಿದವನು ಶ್ರೀ ಎಸ್. ಎಸ್. ಬಾಟ್ಲಿವಾಲರನ್ನು ಕೆಳಗೆ ಕರೆತಂದು, ಇವರಿಗೆ ಹೊಡಿಸಲು ಪ್ರಯತ್ನಿಸುವಾಗ, ಇವರು ಹ್ಯಾಗೂ ಇವರಿಂದ ತಪ್ಪಿಸಿಕೊಳ್ಳಬೇಕಾಯಿತು. ಇವೆಲ್ಲ ಬಿ. ಪಿ. ಸಿ. ಸಿ. ಯಲ್ಲಿ ಜರಗುವ ವಿಶೇಷ ಸಂಗತಿಗಳು.

ನಗರ ಸಭೆ ಚುನಾವಣೆಗೆ—ತಯಾರಿಕೆಯು ಬಹಳ ಭರದಿಂದ ಜರಗುತ್ತಿದೆ. 106 ಸ್ಥಾನಗಳಲ್ಲಿ ಕೋಂಗ್ರೆಸು 70 ಸದಸ್ಯರನ್ನು ನಿಲ್ಲಿಸಿದೆ. ಇದರಲ್ಲಿ ಸಾಧಾರಣ 60 ಮಂದಿಯಾದರೂ ಚುನಾಯಿಸಿ ಬರುವರೆಂಬ ಧೈರ್ಯವಿದೆ. ಚುನಾವಣೆಯು ಫೆಬ್ರವರಿ 7ನೆಯ ತಾರೀಕಿಗೆ ಜರಗಲಿದೆ. ಓಟುಗಾರರ ತಮ್ಮ ಮತಕೊಡಲು ಸಾಧ್ಯವಾಗುವಂತೆ, ಈ ದಿವಸ ರಜೆಕೊಡಬೇಕೆಂದು ಜನತೆಯು ಕೇಳಿಕೊಳ್ಳಲು ಮಿಲ್ಲಧಿಕಾರಿಗಳೆಲ್ಲ ಇದಕ್ಕೆ ಸಮ್ಮತಿಯನ್ನಿತ್ತಿರುವರು.

106 ಸ್ಥಾನಗಳಿಗೆ 171 ಸದಸ್ಯರ ನಾಮಪತ್ರಗಳು ಬಂದಿವೆ.

ಮೊಗವೀರ ವ್ಯವಸ್ಥಾಪಕ ಮಂಡಳಿ—ಸ್ವಜಾತಿಯ ಯುವಕ ಯುವತಿಯರನ್ನು ಸುಧಾರಕರನ್ನಾಗಿ ಮಾಡುವ ಈ ಸದುದ್ದೇಶದಿಂದ ವ್ಯವಸ್ಥಾಪಕ ಮಂಡಳಿಯವರು 'ಮೊಗವೀರ' ಎಂಬ ತ್ರೈಮಾಸಿಕ ಮೆಗೆಜಿನ್ (Magazhin) ಒಂದನ್ನು ಶೀಘ್ರದಲ್ಲಿಯೇ ಹೊರಡಿಸಲಿರುವುದು ಆನಂದದಾಯಕ. ಈ ಪ್ರಯತ್ನದಲ್ಲಿ ಸರ್ವರೂ ತಮ್ಮ ಸಹಾನುಭೂತಿಯನ್ನು ತೋರಿಸುವರೆಂಗಿ ನಂಬಲಾಗಿದೆ.

ಸತ್ಕಾರ ಸಭೆ—ಇಲ್ಲಿಗೆ ಬಂದಿರುವ ಉತ್ತಾಳ ಬೀಡು ಸ್ವರ್ಗಸ್ಥ ಕುಮಾರಯ್ಯ ಅರಸು ನಾರಂ ಹೆಗ್ಗಡೆಯವರ ಪುತ್ರ ಶಾಂತಿರಾಜಯ್ಯರನ್ನು ಯುವರ್ಗಳು ಬಡ ಉಚ್ಚಿಲ ಮತ್ತು ತೆಂಕ ಪಟ್ಟಣಗಳ ಮೊಗವೀರ ಸಭೆಯವರು ಆಮಂತ್ರಿಸಿ, ತಾ. 29-1-39 ರಲ್ಲಿ ಮೊಗವೀರ ಧರ್ಮಾರ್ಥ ರಾತ್ರಿ ಶಾಲಾ ಮಂದಿರದಲ್ಲಿ ಶ್ರೀ ಮುಖ್ಯರಾಗಳು ಕೊರಗಪ್ಪ ಎ. ಪುತ್ರನರ ಅಧ್ಯಕ್ಷತೆಯಲ್ಲಿ ಸತ್ಕಾರ ಸಭೆ ಜರಗಿಸಿ ಒಂದು writing setನ್ನು ಅರ್ಪಿಸಿ ಸನ್ಮಾನಿಸಿದರು. ಭಾಷಣಗಳಾಗಿ ವಂದನಾರ್ಪಣೆಯೊಡನೆ, ಧನ್ಯವಾದಾನಂತರ ಸಭೆ ಆಗಲಿತು. ಗ್ರೂಪ್ ಫೋಟೋ ತೆಗೆಯಲಾಗಿದೆ.

— — —

ಸ್ತ್ರೀ ಕಾರ–ವಿಮರ್ಶೆ

ವಿಚಾರವಾಹಿನಿ— ಮಾಸಪತ್ರಿಕೆ. ಸಂಪಾದಕರು ಕೊಡಲಿ ಚಿದಂಬರಂ–ತೀರ್ಥಹಳ್ಳಿ. ವಾರ್ಷಿಕ ಚಂದಾ ರೂ. ೩.

ಈ ವಿಚಾರವಾಹಿನಿಯ ಮೊದಲನೆಯ ಸಂಚಿಕೆಯನ್ನು ನಾವು ಆತ್ಮಾದರದಿಂದ ಸ್ವೀಕರಿಸಿರುವೆವು. ಸಾಮಾನ್ಯ ಜನತೆಯು ಮನಸ್ಸಿನ ಮಟ್ಟಕ್ಕೆ ನಿಲುಕುವಂತೆ, ಉಚ್ಚ ವಿಷಯಗಳು ಸುಲಭವಾಗಿ ಗ್ರಾಹ್ಯವಾಗುವಂತೆ, ಸರಳ, ಸಾದಾ ರೀತಿಯಲ್ಲಿ ಬರೆದು ಜನತೆಯಲ್ಲಿ ವಿಚಾರ ಸಂಸ್ಕೃತಿಗಳು ಬೇರೂರುವಂತೆ ಸಾಧಿಸುವುದು ಇಂದಿನ ನವೀನ ಬರಹಗಾರರ ಮುಂದಿರುವ ಪ್ರಧಾನ ಹೊಣೆಗಾರಿಕೆ; ಇಂಥಾ ಪ್ರಯತ್ನಗಳು ನಾಡಿನಲ್ಲಿ ನಡೆಯುತ್ತಿವೆಯೆಂಬುದು ದಿನದಿನಕ್ಕೆ ಹೆಚ್ಚುಗುತ್ತಿರುವ ಗ್ರಂಥಗಳಿಂದಲೂ, ವೃತ್ತಪತ್ರಿಕೆಗಳಿಂದಲೂ ತಿಳಿಯಬರುದಾಗಿದೆ. ಆದರೆ, ಕಲಾ ಸಂಸ್ಕೃತಿಗಳಲ್ಲಿ ಮುಂದುವರಿಯುತ್ತಿರುವ, ವಿಚಾರವಂತ ವಾಚಕ ವೃಂದದ ಕೋರಿಕೆಗಳನ್ನು ಈಡೇರಿಸಲು, ಸಂಪ್ರದಾಯ ಪದ್ಧತಿಯ ಬರವಣಿಗೆಗಿಂತಲೂ ವಿಮರ್ಶಾತ್ಮಕವಾದ, ವಿಚಾರ ಪ್ರಚೋದಕವಾದ ವಿಚಾರ ಸ್ವತಂತ್ರ ಸಾಧನಗಳ್ಳ, ಉತ್ಕೃಷ್ಟ ತರಗತಿಯ ಲೇಖನಗಳ ಸಂಗ್ರಹವೂ ಕೂಡಾ, ಬೇಕೇ ಬೇಕು ಎಂಬುದು ನಿರ್ವಿವಾದ. ಈ ಆವಶ್ಯಕತೆಯನ್ನು ಶ್ರೀಮಾನ್ ಚಿದಂಬರಂ–ಇವರು ಸಕಾಲದಲ್ಲಿ ಹೊರಡಿಸಿದ ವಿಚಾರವಾಹಿನಿಯು ಪೂರೈಸಲಿದೆಯೆಂಬುದು ಈ ಪ್ರಥಮ ಸಂಚಿಕೆಯಿಂದ ತಿಳಿಯಬರುದಾಗಿದೆ.

ಕನ್ನಡ ಸಾಹಿತ್ಯದಲ್ಲಿ ಹೊಸಯುಗವನ್ನು ನಿರ್ಮಾಣಮಾಡಲು ಸಾಧಿಸಿ, ಸಾಕಷ್ಟು ಕೃತಕೃತ್ಯರಾದ ಶ್ರೀ ಮುಂದಾಳುಗಳಾದ ಕೆ. ವಿ. ಪುಟ್ಟಪ್ಪ, ಕಾಂತ, ಕಸ್ತೂರಿ, ಆನಂದ, ಮುಗಳಿ, ಶಾಸ್ತ್ರಿ, ರತ್ನ–ಮೊದಲಾದವರ ಲೇಖನಗಳು ಈ ಸಂಚಿಕೆಯ ಹಿರಿಮೆಯ ಸಾಧನಗಳು. ಶ್ರೀ ಪುಟ್ಟಪ್ಪನವರ ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಕಸ್ತೂರಿಯವರ ಹಾಸ್ಯದಿಂದ ಮಾಣಿಕ್ಯ–ಕಾಂಚನದ ಕಣ್ಕಂದಿರುವ ಸ್ವಗತ, ಕಸದ ಬುಟ್ಟಿ. ಆನಂದರ ಸ್ವಪ್ನಜೀವಿ,–ಇಂಥಾ ಉನ್ನತ ವಿಚಾರದ ವಿಚಾರವಾಹಿನಿಯ ಲೇಖನಗಳು ವಾಚಕರಿಗೆ ವಿಚಾರ ಸೃಷ್ಟಿಯಲ್ಲಿ ಹೊಸ ದೃಷ್ಟಿಯನ್ನು ಸೃಷ್ಟಿಸಬಲ್ಲವುಗಳಾಗಿವೆ. ಮುಂದಿನ ಸಂಚಿಕೆಗಳು ಇನ್ನಷ್ಟು ಯಶಸ್ವಿಯಾಗಿ, ಮತ್ತಷ್ಟು ವಿಸ್ತಾರ ಹೊಂದಿ ಹೊರಬರಲೆಂದು ನಾವು ಹಾರೈಸುವೆವು.

ಜಗಳ—ತಾರಾವಿಹಾರ ಗ್ರಂಥಮಾಲೆಯ ಮೊದಲನೆಯ ಬಾಣ, ಸಂಪಾದಕರು ಆಯುರ್ವೇದ ಭೂಷಣ, ಸ್ವಾಮಿ ರಾಮಾಚಾರ್ಯರು, ತಾರಾವಿಹಾರ ಕಾರ್ಯಾಲಯ, ಶ್ರೀನಿವಾಸ, ತುಂಗಭದ್ರಾ, ಪ. ಬಳ್ಳಾರಿ. ಬರೆದವರು, ಪಂಡಿತ ತಾರಾನಾಥರು.

ಪಂಡಿತ ತಾರಾನಾಥರ ಲೇಖನಿಯಿಂದ ಮೂಡಿದ ಬರಹವೆಂದ ಮೇಲೆ ಕೇವಲ ಸಂಪ್ರದಾಯಕ ಪದ್ಧತಿಯ ಬರವಣಿಗೆಯಾಗಿರದೆ, ವಿಮರ್ಶಾಯುತವಾದ, ವಿಚಾರ ಪ್ರಚೋದಕವಾದ, ಪ್ರಗತಿಪರ ವಿಚಾರವೆಂದು ಕನ್ನಡ ಓದುಗರು ಮೊದಲೇ ಬಲ್ಲರು. ಪಂಡಿತ ಮಹಾಶಯರು ಈ ಸಣ್ಣ ಪುಸ್ತಕದಲ್ಲಿ ಜಗತ್ತಿನಲ್ಲಿ ಎಲ್ಲೆಲ್ಲಿಯೂ ನಡೆದಿರುವ ಜಗಳದ ಬಹಿರಂಗ ಕಾರಣಗಳನ್ನು ಬಯಲಿಗೆಳೆದು, ವಾಚಕರ ಮುಂದಿರಿಸಿರುವರು, ಕುರುಡು ನಂಬಿಕೆಗಳನ್ನೆಲ್ಲ ದೂರೀಕರಿಸಿ ವಿಚಾರ ವಿವೇಕದಂಥಾ ಬಹಿರಂಗ ವಿಚಾರಗಳನ್ನು ಹತೋಟಿಗೆ ತರಬೇಕೆಂಬ ವಿಷಯವನ್ನು ಮನಸ್ಸಿಗೆ ನಾಟುವಂತೆ ವರ್ಣಿಸಿರುವರು. ತಾರಾವಿಹಾರ ಗ್ರಂಥಮಾಲೆಯ ಸಂಪಾದಕರು ಈ ಜಗಳವನ್ನು ಪಂಡಿತರಿಂದ ಕಲ್ಪಿಸಿ, ವಾಚಕರೆದುರಿಗೆ ತಂದಿರಿಸುವುದಕ್ಕಾಗಿ ಅಭಿನಂದನಾರ್ಹರಿರುವರು.

ಮಹಿಳಾ ಪ್ರಕಾಶ—ಮೈಸೂರಿನಿಂದ ಹೊರಡುವ ಸ್ತ್ರೀಯರ ಉತ್ತಮ ದರ್ಜೆಯ ಮಾಸಪತ್ರಿಕೆ. ವಾರ್ಷಿಕ ಚಂದಾ ಪೋಷಕರಿಗೆ 5-0-0. ವಾಚನಾಲಯಗಳಿಗೆ 2-0-0. ಏಜೆಂಟರ ಮೂಲಕ 1-0-0. ಬಿಡಿ ಸಂಚಿಕೆ 0-1-0.

ಈ ಪತ್ರಿಕೆಯು ಮಹಿಳೆಯರ ಏಳಿಗೆಯ ದೃಷ್ಟಿಯನ್ನು ಮುಂದಿಟ್ಟುಕೊಂಡು ರಾಜಧಾನಿಯಿಂದ ಹೊರಡುತ್ತಿದೆ. ಇದರಲ್ಲಿ ಗೃಹಿಣಿಯರು ತಮ್ಮ ಅನ ನಿತ್ಯದ ಜೀವನದಲ್ಲಿ ತಿಳಿಯಬಹುದಾದ ಹಲವು ವಿಷಯಗಳು ವರ್ಣಿತವಾಗಿವೆ. ಕೆಲವು ಮನೋರಂಜನೆಯ ಕಥೆಗಳೂ ಇವೆ. ಅತ್ಯಲ್ಪ ಬೆಲೆಗೆ ಇಂಥಾ ಉತ್ಕೃಷ್ಟ ಯೋಜನೆಯನ್ನೊಳಗೊಂಡ 'ಮಹಿಳಾ ಪ್ರಕಾಶ'ವನ್ನು ಪ್ರಕಟಿಸಿದ್ದಕ್ಕೆ ಶಂಡ, ಲೇಖಕರನ್ನೂ ಭಗಿನೀ ವೃಂದವನ್ನು ನಾವು ಅಭಿನಂದಿಸುವೆವು.

The Karnatak Front, Dharvar—ಇದು ಧಾರವಾಡದಿಂದ ಹೊರಡುವ ಇಂಗ್ಲಿಷ್ ವಾರಪತ್ರಿಕೆ, ಬಿಡಿ ಸಂಚಿಕೆ ಕ್ರಯ ಅರ್ಧಾಣೆ ಸಂಪಾದಕರು ಎಸ್ ಆರ್. ಸುನ್ಮಾನಕರ ಬಿ. ಎ; ಎಲ್. ಎಲ್. ಬಿ.

ಕರ್ನಾಟಕದ ಏಳಿಗೆಗಾಗಿ ದೇಶದ ಉನ್ನತಿಗಾಗಿ ದುಡಿಯಲು ಮುಂದಾದ, ಸುನ್ಮಾನಕರರ ಅನುಭವಪೂರಿತ ಸಂಪಾದಕತ್ವದಿಂದ ಹೊರಡುವ ಈ ಇಂಗ್ಲಿಷ್ ವಾರ ಪತ್ರಿಕೆಯು ಯಶಸ್ವಿಯಾಗಿ ಬಾಳಬೇಕೆಂದು ಹಾರೈಸುವೆವು.

WANTED—Districts Organisers and Taluka Superintendents in Districts of Belgaum Bijapur, Dharwar, Canara and Coorg on salary and commission basis. Special facilities for the initial business of Rs 10,000/-. Only influential gentlemen who can guarantee Rs. 50,000/- and Rs 25,000/- per year need apply, Messrs

PADUBIDRI BROS., BOMBAY 8.

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಪಕ್ಷದಲ್ಲಿ, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು.

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿನಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನವೆಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ಮೋಸಗೊಳಿಸ ವ ಔಷಧವೆಂದು ಪ್ರಮಾಣಿಸಿದವರಿಗೆ ರೂಪಾಯಿ 100 ಬಹುಮಾನ.

ಸ್ತಂಭಕ ವಟಿ–ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram

No. 552 P. O. Katrisarai, (GAYA)

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕೆನ್ನು ಸಾಮಾನುಗಳಿವೆ ದಿನ ನಿತ್ಯ ವೆಂಬಂತೆ ಸಾಮಾನುಗಳು ಬೇಲಾಗಿಟ್ಟಲ್ಪಟ್ಟಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಬೆಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ಜಾಹೀರು ವಿನಂತಿ.

ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಉಡುಪಿ ತಾಲೂಕು ಗುಂಡ್ಮಿ ಗ್ರಾಮದ ಮಂಜುನಾಥ ಸಹಸ್ರ ಯಾನೆ ಕೆ. ಜಿ. ಕೆ. ರಾವ್ ಎಂಬವರು ನಮ್ಮ ಫರ್ಮಿನ ಔಷಧ ಮಾರಾಟದ ಟ್ರಾವಲಿಂಗ್ ಏಜಂಟರಾಗಿದ್ದರು. ಈಚೆಗೆ ಅವರ ಏಜನ್ಸಿಯನ್ನು ವಜಾ ಮಾಡಿದೆ. ಅವರಿಗೂ ನಮ್ಮ ಫರ್ಮಿಗೂ ಯಾವ ತರದ ಸಂಬಂಧವೂ ಇರುವುದಿಲ್ಲ. ಅವರು ನಡೆಸುವ ಪತ್ರವ್ಯವಹಾರಗಳು ನಮ್ಮ ಫರ್ಮಿಗೆ ಸಂಬಂಧಪಟ್ಟದ್ದಲ್ಲವೆಂಬವನ್ನು ಸರ್ವರೂ ತಿಳಿದಿರತಕ್ಕದ್ದು.

ಡಾ॥ ಎ. ಎಸ್. ಶ್ರೀನಿವಾಸ ರಾವ್,

ಆಯುರ್ವೇದ ವೈದ್ಯ ವಿದ್ವಾನ್,

ಯಂ. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಆತಂಕನಿಗ್ರಹ ಮಾತ್ರೆ.

ನಾನಾ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ಅಶಕ್ತಿ ಇವುಗಳನ್ನು ಹೋಗಲಾಡಿಸಿ ರಾಕ್ಷತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಪಡಿಸಿ ವೀರ್ಯಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗೆ ೧–೦–೦

ವಾಜೀಕರಣ ತೈಲ

ವೀರ್ಯನಷ್ಟ ಶಕ್ತಿಯಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಪರ್ಸ್ತ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡ ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೩೪.

ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ವಾರದ ವಿಚಾರ

ರಾಜಕೋಟೆ ಮತ್ತು ಜಯಪುರದ ಹೋರಾಟವು

ಅಖಿಲಭಾರತ ಸ್ವರೂಪ ತಾಳುವ ಸಂಭವ ತೋರುತ್ತಿದೆ. ಅದೀಗ ಬ್ರಿಟಿಷ್ ಸಾಮ್ರಾಜ್ಯ ಶಾಹಿ ಮತ್ತು ಕಾಂಗ್ರೆಸಿನೊಳಗಣ ಹೋರಾಟದ ಸ್ವರೂಪ ತಾಳಿದೆ ರಾಜಕೋಟೆಯ ಠಾಕೂರು ಸಾಹೇಬರು, ಸರ್ದಾರ್ ವಲ್ಲಭಾಯಿಯವರಂತಹ ಕಾಂಗ್ರೆಸ್ ಮುಖಂಡರೊಡನೆ ಮಾಡಿಕೊಂಡ ಒಪ್ಪಂದದಿಂದ ಬ್ರಿಟಿಷ್ ರೆಸಿಡೆಂಟರು ಸಿಟ್ಟುಗೊಂಡು, ಠಾಕೂರು ಸಾಹೇಬರನ್ನು ಗಾದಿಯಿಂದ ತಳ್ಳಿಹಾಕುವ ಬೆದರಿಕೆ ಹಾಕಿ ಸದ್ರಿ ಒಪ್ಪಂದವು ಮೂಲೆಗೊತ್ತಲ್ಪಡುವಂತೆ ಮಾಡಿರುವರು. ಇದರಿಂದ, ದೇಶೀಯ ಸಂಸ್ಥಾನಾಧಿಪತಿಗಳಿಗೆ ಯಾವ ತರದ ಸ್ವತಂತ್ರವೂ ಇಲ್ಲದೆ ಅವರು ಬ್ರಿಟಿಷ್ ಸರಕಾರದ ರೆಸಿಡೆಂಟರ ಕೈಗೊಂಬೆಗಳಂತಿರಬೇಕೆಂಬುದು ಸ್ಪಷ್ಟವಾಗುವುದು. ರಾಜಕೋಟೆಯಲ್ಲೀಗ ಸತ್ಯಾಗ್ರಹ ಆರಂಭಿಸಲ್ಪಟ್ಟಿರುವುದರಿಂದ ಅದನ್ನು ಪೈಶಾಚಿಕ ದಬ್ಬಾಳಿಕೆಯಿಂದ ಅಣಗಿಸಲು ಬೇಕಾದ ಸಹಾಯವನ್ನು ರೆಸಿಡೆಂಟರು ಕೊಡುತ್ತಿರುವರು. ಸ್ವಯಂಸೇವಕರನ್ನು ಹಿಡಿದು ಅನೇಕ ಮೈಲು ದೂರಕ್ಕೊಯ್ದು ಹೊಡೆದು ಹಾಕಿ ಬರುವ ಅಮಾನುಷ ಅತ್ಯಾಚಾರವು ನಡೆಸಲ್ಪಡುತ್ತಿರುವುದು. ಜಯಪುರದ ಬ್ರಿಟಿಷ್ ದಿವಾನರು, ಜಮುನಾಲಾಲ್ ಬಜಾಜ್ ಮತ್ತು ಜಯಪುರ ಪ್ರಜಾಮಂಡಲಿಯ ಮೇಲೆ ಪ್ರತೀಕಾರಮಾಡಿಯೇ ಸಿದ್ಧವೆಂಬಂತೆ ವರ್ತಿಸುತ್ತಿರುವರು.

ಗಾಂಧಿಯವರ ವಿನಂತಿ

ರಾಜಕೋಟೆ ಮತ್ತು ಜಯಪುರ ಸಂಸ್ಥಾನಗಳ ಪರಿಸ್ಥಿತಿಯ ಕುರಿತು ಗಾಂಧಿಜಿಯವರು ವೈಸರಾಯರೊಡನೆ ಮಾಡಿಕೊಂಡಿರುವ ವಿನಂತಿಯು ನಿಷ್ಫಲವಾದಂತೆ ತೋರುತ್ತದೆ. ರಾಜಕೋಟೆಯ ಠಾಕೂರರ ಮತ್ತು ಜಯಪುರ ದರ್ಬಾರಿನ ಧೋರಣೆಯನ್ನು ಸಮರ್ಥಿಸಿ ಜನತೆಯ ಕಣ್ಣಿಗೆ ಮಣ್ಣು ಹಾಕುವ ರೀತಿಯಲ್ಲಿ ಇಂಡಿಯಾ ಸರಕಾರವು ಪ್ರಕಟಣೆಯೊಂದನ್ನು ಗಾಂಧಿಜಿಯವರಿಗೆ ಉತ್ತರವಾಗಿ ಪ್ರಕಟಿಸಿರುವುದು. ಇದು ವೈಸರಾಯರ ಅಭಿಪ್ರಾಯವನ್ನು ಪ್ರತಿಫಲಿಸುತ್ತದಾದರೆ ರಾಜಕೋಟೆ ಮತ್ತು ಜಯಪುರ ಸಂಸ್ಥಾನಗಳ ಹೋರಾಟವಲ್ಲಿ ಕಾಂಗ್ರೆಸಿನವರು ಭಾಗವಹಿಸಿ ಅದು ಅಖಿಲ ಭಾರತ ಪ್ರಶ್ನೆಯಾಗುವುದು ನಿಶ್ಚಯ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಈ ಆಹ್ವಾನವನ್ನು ಸರ್ದಾರ್ ವಲ್ಲಭಾಯಿಯವರು ಸ್ವೀಕರಿಸಲು ಸಿದ್ಧರೇ ಇರುವರು. ಗಾಂಧಿಜಿಯವರು, ಶ್ರೀಮತಿ ಕಸ್ತೂರಿ ಬಾಯಿಯವರನ್ನೇ ರಾಜಕೋಟೆಯ ಸತ್ಯಾಗ್ರಹಕ್ಕೆ ಕಳುಹಿಸಿ ಅದರಲ್ಲಿ ಪ್ರತ್ಯಕ್ಷ ಭಾಗವಹಿಸಿರುವರೆಂದೇ ಹೇಳಬಹುದು. ತಮ್ಮ ಪ್ರಾಂತಕ್ಕೆ ಸೇರಿದ ಸಂಸ್ಥಾನಗಳಲ್ಲಿ ವಿಪ್ಲವವೆದ್ದು ಪ್ರಜೆಗಳು ಅಸಹನೀಯ ಪೀಡೆಗೊಳಗಾಗಿರುವಾಗ ಮಂತ್ರಿಗಳು ತಣ್ಣಗಿರಲು ಸಾಧ್ಯವಿಲ್ಲ ಉದಾಹರಣೆಗಾಗಿ ಒರಿಸ್ಸದ ಟಾಲ್ಚಾರ್ ಸಂಸ್ಥಾನದಿಂದ 26,000ಮಂದಿ ಪ್ರಜೆಗಳು ಹೊರಗಟ್ಟಲ್ಪಟ್ಟು, ಬ್ರಿಟಿಷ್ ಒರಿಸ್ಸದ ಆಶ್ರಯ ಪಡೆದಿರುವಾಗ ಅವರು ಪುನಃ ತಮ್ಮ ಸಂಸ್ಥಾನಕ್ಕೆ ಹೋಗುವಂತೆ ಮಾಡುವುದು ಒರಿಸ್ಸದ ಮಂತ್ರಿ ಮಂಡಲದ ಕರ್ತವ್ಯವಿದೆ. ಇಂತಹ ಸಂದರ್ಭದಲ್ಲಿ ಇಂಡಿಯಾ ಸರಕಾರವು ಅಡ್ಡಬಂದರೆ ಮಂತ್ರಿಗಳು ರಾಜಿನಾಮೆಕೊಟ್ಟು ಹೊರಬರಬೇಕಾದೀತೆಂದೇ ಗಾಂಧಿಯವರ ಅಭಿಪ್ರಾಯ

ಜಪಾನಿನ ಅವಸ್ಥೆ

ಜಪಾನಿಗೆ ಈಗ ಹಿಡಿಯುವುದಕ್ಕೂ ಅಲ್ಲ ಬಿಡುವುದಕ್ಕೂ ಅಲ್ಲೆಂಬ ಅವಸ್ಥೆಯುಂಟಾಗಿದೆ. ಮೂರೇ ತಿಂಗಳುಗಳಲ್ಲಿ ಚೈನವನ್ನು ಗೆದ್ದು ನಡೆಬಡಿಯಬಹುದೆಂದು ಅದು ಧಾಳಿ ನಡೆಸಿತು. ಆದರೆ ಈಗ ಯುದ್ಧ ಆರಂಭವಾಗಿ ಎರಡುವರ್ಷವಾಗುತ್ತಾ ಬಂದರೂ ಚೀನೀ ರಾಷ್ಟ್ರೀಯ ಸರಕಾರವು ಸೋಲಿಸಲ್ಪಟ್ಟಿಲ್ಲ ಚೀನೀ ಸೇನೆಯು ಸುಸಂಘಟಿತವಾಗಿಯೇ ಇದೆ. ಚೀನೀಯರೆಲ್ಲಾ ಮಾರ್ಶಲ್ ಚ್ಯಾಂಗರ ಕೈಕೆಳಗೆ ಒಕ್ಕಟ್ಟಾಗಿ ಕೊನೆಯವರೆಗೂ ಜಪಾನರನ್ನು ವಿರೋಧಿಸಿಯೇ ಸಿದ್ಧವೆಂಬ ದೃಢ ನಿರ್ಧಾರದಿಂದಿದ್ದಾರೆ. ಜಪಾನಿನ ಸಾಂಪತ್ತಿಕ ಸ್ಥಿತಿಯು ತೀರಾ ಕಟ್ಟುಹೋಗಿದೆ ಸರಕಾರವು ಔತಣಗಳ ಮೇಲೆ ಕೂಡಾ ತೆರಿಗೆ ಹೊರಿಸಿ ಯುದ್ಧ ವೆಚ್ಚಕ್ಕಾಗಿ ಹಣವನ್ನೊದಗಿಸಿಕೊಳ್ಳಬೇಕಾಗಿದೆ. ಜಪಾನರು ತಮ್ಮ ಚಿನ್ನಾಭರಣಗಳನ್ನು ಸರಕಾರಕ್ಕೆ ಕೊಡಬೇಕೆಂಬ ಹೊಸ ಕಾನೂನು ಹೊರಟಿದೆ. ಅಮೇರಿಕ ಇಂಗ್ಲೆಂಡ್ ಮೊದಲಾದ ರಾಷ್ಟ್ರಗಳು ಜಪಾನಿಗೆ ಪೆಟ್ರೋಲ್ ಮೊದಲಾದುವುಗಳನ್ನು ಕಳುಹಿಸದಂತೆ ಬಹಿಷ್ಕಾರ ಹಾಕಿ ಚೀನೀ ಸರಕಾರಕ್ಕೆ ಹಣಸಾಲಕೊಟ್ಟು ಸಹಾಯಮಾಡಿದರೆ ಜಪಾನಿನ ಅಹಂಕಾರ ಇಳಿದು ಚೈನದೊಡನೆ ಸಂಧಿಮಾಡಿಕೊಳ್ಳಲು ಹೆಚ್ಚು ಸಮಯ ಹೋಗಲಾರದು. ರಷ್ಯಕ್ಕೂ ಅದಕ್ಕೂ ಮಂಚೂರಿಯದ ಎಲ್ಲೆಯಲ್ಲಿ ಪುನಃ ತಿಕ್ಕಾಟವುಂಟಾಗಿದೆ. ಇದು ಚೈನಕ್ಕೆ ಶುಭಸೂಚನೆಯಾಗಿದೆ.

ಪ್ರೆಸಿಡೆಂಟ್ ರೂಸವೆಲ್ಟರ ನಿಶ್ಚಿತ ಧೋರಣೆ

ಬ್ರಿಟಿಷ್ ಪ್ರಧಾನ ಮಂತ್ರಿ, ಮಿ. ಚೇಂಬರ್ಲೇನರು, ಡಿಕ್ಟೇಟರುಗಳನ್ನು ಒಲಿಸಿಕೊಳ್ಳಲೆತ್ನಿಸಿ ಮತ್ತೂ ಮತ್ತೂ ಅವರನ್ನು ಅಹಂಭಾವಿಗಳನ್ನಾಗಿ ಮಾಡುತ್ತಿರುವಾಗ ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟ್ ರೂಸವೆಲ್ಟರು, ಡಿಕ್ಟೇಟರ್ ಶಾಹಿಯನ್ನು ಉಗ್ರವಾಗಿ ನಿಷೇಧಿಸಿ, ಅವನ್ನು ತನ್ನ ಕೂಡಿದ ಮಟ್ಟಿಗೆ ವಿರೋಧಿಸಲು ಸೊಂಟಕಟ್ಟಿ ಮುಂದೆ ಬಂದಿರುವರು. ಇಟಲಿಯು ಒಂದು ವೇಳೆ ಫ್ರಾನ್ಸಿನ ಮೇಲೆ ಧಾಳಿ ನಡೆಸಿದರೆ ಅಮೇರಿಕವು ಫ್ರಾನ್ಸಿನ ಸಹಾಯಕ್ಕೆ ನಿಲ್ಲುವುದೆಂಬುದನ್ನು ಸಾಕಷ್ಟು ಸ್ಪಷ್ಟಪಡಿಸಿರುವರು. ಡಿಕ್ಟೇಟರ್ ಶಾಹಿಯ ರೀತಿನೀತಿಗಳನ್ನು ಉಗ್ರವಾಗಿ ನಿಷೇಧಿಸಿ ಡಿಕ್ಟೇಟರರನ್ನು ಪ್ರಬಲವಾಗಿ ವಿರೋಧಿಸುವ ನಿಶ್ಚಿತ ಧೋರಣೆ ವಹಿಸಿರುವ ಪ್ರೆಸಿಡೆಂಟ್ ರೂಸವೆಲ್ಟರು, ಲೋಕದ ಪ್ರಜಾಸತ್ತೆಯ ರಕ್ಷಕರಾಗಿ ಅಭಿನಂದನೀಯರಿರುತ್ತಾರೆ.

ಚೀನಾ ಜಪಾನು ಯುದ್ಧ

ಜಪಾನಿಗೆ ಚೀನವನ್ನು ಗೆಲ್ಲಲು ಸಾಧ್ಯವೇ ಇಲ್ಲ ಅದು ಬೇಗನೆ ಸಂಧಿಮಾಡಿಕೊಳ್ಳಲೇಬೇಕು. ಈ ವರೆಗೆ ಗೆದ್ದ ಪ್ರದೇಶದಲ್ಲಿ ಕೂಡಾ ವ್ಯವಸ್ಥಿತವಾದ ರಾಜ್ಯಭಾರವನ್ನು ಸ್ಥಾಪಿಸಲು ಜಪಾನರಿಗೆ ಸಾಧ್ಯವಾಗಿರುವುದಿಲ್ಲ ಯಾಕೆಂದರೆ ಅವರಿಗೆ ಜನ ಸಾಮಾನ್ಯರು ಯಾವ ಸಹಕಾರವನ್ನೂ ಕೊಡುವುದಿಲ್ಲ ಅವರ ಬದಲಿಗೆ ಚೀನೀ ಗೊರಿಲ್ಲ ತಂಗಡಿಗರಿಗೆ ಬೇಕಾದ ಆಶ್ರಯವಿತ್ತು ಪ್ರತೀಕಾರವನ್ನೇ ಮಾಡುತ್ತಿದ್ದಾರೆ. ಜಪಾನರ ಭೀಕರ ಅತ್ಯಾಚಾರವೇ ಇದಕ್ಕೆ ಮುಖ್ಯವಾದೊಂದು ಕಾರಣ. ಕೆಲವೇ ಮೈಲು ಮುಂದುವರಿದ ಮೇಲೆ ಜಪಾನರ ಧಾಳಿಯು ತಡೆಗಟ್ಟಲ್ಪಟ್ಟಿದೆ ಕಳೆದ ನವಂಬರದ ನಂತರ ಜಪಾನರು ಮುಂದೊತ್ತಿರುವುದು ತೋರುವುದಿಲ್ಲ ಜಪಾನರ ಅಧೀನವಾಗುವುದೆಂಬ ಭೀತಿಯಿಂದ ಚೀನೀಯರು ಸುಟ್ಟುಹಾಕಿದ್ದ ಹುನಾನ್ ಪ್ರಾಂತದ ಮುಖ್ಯಪಟ್ಟಣವಾದ ಚಾಂಗ್ಷಾವನ್ನು ಕೂಡಾ ಜಪಾನರು ಈ ವರೆಗೆ ಗೆದ್ದಿರುವುದಿಲ್ಲ ಹೇಂಕೋ ಕ್ಯಾಂಟನ್ ರೈಲ್ವೆ ಕೂಡಾ ಜಪಾನರ ಅಧೀನವಾಗಿರುವುದಿಲ್ಲ. ಹೇಂಕೋ ಪಟ್ಟಣಬಿಟ್ಟು ಹೋದ ಪ್ರಾಮುಖ್ಯ ಚೀನೀ ಸೇನೆಯು ಸುಸಂಘಟಿತವಾಗಿದೆ ಅವರ ಯುದ್ಧೋತ್ಸಾಹವೇನೂ ಕಡಿಮೆಯಾಗಿಲ್ಲ. ಅದು ಯುದ್ಧೋಪಕರಣಗಳನ್ನೇನೂ ಕಳಕೊಂಡಿಲ್ಲ, ಕ್ಯಾಂಟನು ಜಪಾನರ ವಶವಾದುದು ಚೀನೀಸರಕಾರಕ್ಕೆ ದೊಡ್ಡ ಹಾನಿ ಇದರಿಂದ ಹೋಂಕೋಂಗ್ ಮೂಲಕ ಯುದ್ಧೋಪಕರಣಗಳು ಒಳಗೆ ಬಾರದಂತಾಗಿದೆ. ಭೂಮಾರ್ಗವಾಗಿ ರಷ್ಯದಿಂದ ಯುದ್ಧ ಸಾಮಗ್ರಿಗಳು ಬರುತ್ತಿವೆ. ಈಗ ಬರ್ಮದ ಮಾರ್ಗವಾಗಿ ಬರಲಾರಂಭಿಸಿವೆ ಇದು ಹೊರತು ಮದ್ದುಗುಂಡು ತಯಾರಿ ಕಾರ್ಖಾನೆಗಳು ಕೆಲವು ಚೀನದಲ್ಲೇ ಇವೆ. ಇನ್ನೂ ಕೆಲವನ್ನು ಚೀನೀ ಸರಕಾರವು ತಯಾರಿಸುತ್ತಿದೆ.

ಹೊಸ ಪುಸ್ತಕ! ಇದೀಗ ಪ್ರಕಟವಾಗಿದೆ!

ಅಜ್ಞಾನ ತಿಮಿರ ಮಾರ್ತಾಂಡ

ಜನ್ಮತಃ ಅಸ್ಪೃಶ್ಯತೆಯು ಇರಲಿಲ್ಲವೆಂಬುದನ್ನೂ ಅಂಥ ಸಂಪ್ರದಾಯದ ಸನಾತನಿಗಳ ವಾದದಲ್ಲಿ ತಿರುಳಿಲ್ಲವೆಂಬುದನ್ನೂ ವಿವರಿಸಿ ಪುರಾಣ, ಸ್ಮೃತಿಗಳ ಆಧಾರದಿಂದ ಶ್ರೀ. ಬಿ. ಅಂತಯ್ಯ ಶೆಟ್ಟರಿಂದ ನವೀನವಾಗಿ ಬರೆಯಲಾದ ಹೊಸ ಪುಸ್ತಕ.

ಬೆಲೆ: 0—4—0 ಮಾತ್ರ.

ಇದರ ಉತ್ಪತ್ತಿಯು ಹರಿಜನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲ್ಪಡುವುದು. 0-4-6 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳಿಸಲಾಗುವುದು.

ಉಡುಪಿಯಲ್ಲಿ ಪುಸ್ತಕ ಸಿಗುವ ಸ್ಥಳ: **Navabharat Book Depot,** *Udipi.*

ಬಿ. ಅಂತಯ್ಯ ಶೆಟ್ಟಿ, ಹರಿಜನ ಶಿಕ್ಷಣ ಸಹಾಯಕ ಸಂಘ. ಬ್ರಹ್ಮಾವರ

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.

ಫೇನ್ಸಿ ಲಿವರ್ ರಿಸ್ಟ್‌ವಾಚ್

ರೂ. 2—4—0.



ಸಣ್ಣ, ಸುಂದರ, ಆಕಾರ ಗಟ್ಟಿಮುಟ್ಟಾದ ಮೆಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರೆಂಟಿ ದುಂಡಾಕೃತಿಯ, ದೀರ್ಘ ಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಕತ್ತಲಲ್ಲಿ ತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0-0, ಮಿನುಗುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ಟ. ಖ. ಪ್ರತ್ಯೇಕ.

ಎಚ್. ಡಾವಿಡ್ ಆಂಡ್ ಕೊ.

ಪೋ. ಬಾಕ್ಸ್ 11424 ಕಲ್ಕತ್ತ.

H. David & Co.
Post Box No. 11424, Calcutta



ಸರಿಯಾದ ಸಮಯವನ್ನು ಸೂಚಿಸತಕ್ಕ ಅತ್ಯಾಧುನಿಕ ಲಿವರ್ ರಿಸ್ಟ್‌ವಾಚಿಗೆ ಉರುಟು ಯಾ ಚೌಕ ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ. 2-8-0, ಅತ್ಯುತ್ತಮದಕ್ಕೆ ರೂ. 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ 4-8-0, ರೋಲ್ಡ್‌ಗೋಲ್ಡಿಗೆ ರೂ.6-8-0, ಚಿತ್ರದಲ್ಲಿ ತೋರುವಂತಹದಕ್ಕೆ ರೂ. 8-8-0. ಅಂಚೆವೆಚ್ಚ 0-10-0 ಪ್ರತ್ಯೇಕ.

Empress Trading Co.,
P.O. Box No. 6744, **Calcutta(G)**

ಈ ವಾರದ ನಿಮ್ಮ ಭವಿಷ್ಯ

ತಾ 9—2—39ರಿಂದ 16—2—39ರ ವರೆಗೆ

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ನ.]

ಮೇಷ, ತುಲಾ, ಮಕರ ರಾಶಿಯವರ ಭವಿಷ್ಯವು ಉತ್ತಮರೀತಿಯಲ್ಲಿರುವುದು. ವೃಷಭ, ಮಿಥುನ, ಸಿಂಹ, ಕನ್ಯಾ, ಧನುರಾಶಿಗಳವರ ಭವಿಷ್ಯವು ಮಿಶ್ರೀಭೂತವಾಗಿರುವುದು. ವೃಶ್ಚಿಕ, ಕುಂಭ ರಾಶಿಗಳವರ ಗ್ರಹಮಾನವು ಸ್ವಲ್ಪ ಹೀನ ಭಾವವನ್ನೈದಿಹುದು. ಮೀನ ರಾಶಿಯವರ ಸ್ಥಿತಿಯು ಪೂರ್ಣ ಕೆಟ್ಟಿರುವುದು. ಕರ್ಕಾಟಕ ರಾಶಿಯವರಿಗೆ ಯಾವ ಭಾಗದಲ್ಲೂ ಹಿತವಿಲ್ಲವು.

ಮೇಷರಾಶಿ —

ಈ ವಾರವು ನಿಮಗೆ ಬಹುತರದಿಂದ ಉತ್ತಮವಾಗಿರುವುದು ಸಹಜ. ಆದರೂ ಕೆಲವೊಂದು ಭಾಗಗಳಲ್ಲಿ ವಿನಾ ಕಾರಣವಾಗಿ ಧನವನ್ನು ವ್ಯಯಿಸುವಿರಿ. ಮತ್ತು ಬಾಹ್ಯ ರೋಗಗಳು ಶರೀರದಲ್ಲಿ ತೋರಿ ಬರುವವು. ನಿಮ್ಮ ವಿಪಕ್ಷೀಯರು ಅನೇಕ ರೀತಿಯಿಂದ ನಿಮ್ಮ ಮೇಲೆ ಸೇಡು ತೀರಿಸಲೆಳಸಿದರೂ ಅದು ನೀರಿನಲ್ಲಿ ಮಾಡಿದ ಹೋಮದಂತೆ ನಿಷ್ಫಲವಾಗುವುದು. ಪ್ರತಿಯೊಂದು ಕಾರ್ಯದಲ್ಲಿಯೂ ನಿಮ್ಮ ಅಪೇಕ್ಷೆಯಂತೆ ಫಲ ಸಿಗುವುದರಿಂದ ಕೈಯಲ್ಲಿ ನಾಲ್ಕು ಕಾಸು ಉಳಿಯುವುದು. ಶತ್ರುಗಳನ್ನು ನಿಗ್ರಹಿಸುವುದರಿಂದ ಮನಸ್ಸಿಗೆ ನೆಮ್ಮದಿಯುಂಟಾಗುವುದು. ಗೃಹಸ್ಥಾಶ್ರಮಿಗಳಿಗೆ ಸ್ತ್ರೀಸುಖಕ್ಕೇನೂ ಕೊರತೆಯಾಗದು. ಸಾಂಸಾರಿಕ ಜೀವನವು ಅತ್ಯಂತ ಸುಖಮಯವಾಗಿ ಪರಿಣಮಿಸುವದು. ತಾ. 9, 10 ಮತ್ತು 16 ಈ ದಿನಗಳು ಅತ್ಯುತ್ತಮಗಳಾಗಿರುವುದರಿಂದ ಇಷ್ಟಸಿದ್ಧಿ ಮತ್ತು ಸ್ಥಾನಮಾನಗಳು ಸಿಗುವವು.

ವೃಷಭರಾಶಿ —

ಮಿಶ್ರಫಲದಾಯಕವಾದ ಈ ವಾರದಲ್ಲಿ ನಿಮಗೆ ಸ್ವೀಕೃತ ಕಾರ್ಯಗಳಿಗೆ ಶತ್ರುಗಳಿಂದ ವಿಘ್ನಗಳು ಬಂದರೂ ನೀವದನ್ನು ಲೆಕ್ಕಿಸದೆ ಮುಂದರಿಸಿ ಕಾರ್ಯದಲ್ಲಿ ಜಯಶಾಲಿಗಳಾಗುವಿರಿ. ಶರೀರದ ಆರೋಗ್ಯವು ಎಂದಿಗೂ ನೆಟ್ಟಗುಳಿಯಲಾರದು. ಈ ಸಲುವಾಗಿ ನೀವು ಆರ್ಜಿಸಿದ ಧನದ ಅರ್ಧಾಂಶಕ್ಕಿಂತಲೂ ಹೆಚ್ಚಿನ ಹಣವನ್ನು ಖರ್ಚು ಮಾಡುವಿರಿ. ನಿಮ್ಮ ಸ್ವಭಾವದಲ್ಲಿ ತೀಕ್ಷ್ಣಗುಣವೇ ಮುಂದಾಗಿ ತೋರುವುದರಿಂದ ಅನೇಕರಿಗೆ ನಿಮ್ಮ ನಡತೆಯು ಸರಿ ಬೀಳದು. ಸಾಂಪತ್ತಿಕ ಸ್ಥಿತಿಯು ಹೆಚ್ಚಿನಂಶ ಸುಧಾರಿಸಿರುವುದು. ಸಂಸಾರದಲ್ಲಿ ನಿಮ್ಮ ಧರ್ಮಾಂಗಿಯೇ ನಿಮಗೆ ವಿಪರೀತಳಾಗಿ ವರ್ತಿಸುವುದರಿಂದ ಹೆಚ್ಚಿನ ಚಿಂತೆಗೀಡಾಗುವಿರಿ. ವಾರಾಂತ್ಯದ ಮೂರು ದಿನಗಳು ಅಹಿತಕಾರಿಗಳಾಗಿರುವುದರಿಂದ, ರಾಜಭಯ, ರೋಗಾಧಿಕ್ಯ, ಶ್ರಮ ಇತ್ಯಾದ್ಯನಿಷ್ಟಗಳು ಆ ದಿನಗಳಲ್ಲಿ ಹೆಚ್ಚಾಗಿ ಅನುಭವಕ್ಕೆ ಬರುವವು.

ಮಿಥುನರಾಶಿ —

ನೀವು ನಿಮ್ಮ ಬುದ್ಧಿ ಮತ್ತು ಶಕ್ತಿ ಇವುಗಳ ಬಲದಿಂದ ಸಾಮಾನ್ಯ ಒಂದು ರೀತಿಗೆ ಬಂದು ಮುಟ್ಟಿರುವಿರಿ. ನಿರುದ್ಯೋಗಿಗಳಾಗಿ ಕಾಲಹರಣ ಮಾಡುತ್ತಿದ್ದವರೂ ಕೂಡ ಈಗಿನ ಪರಿಸ್ಥಿತಿಯಲ್ಲಿ ಯಾವುದಾದರೊಂದು ಸನಿಮಾಚೀನವಾದ ವ್ಯಕ್ತಿಯನ್ನನುಸರಿಸಿ ಯೋಗ್ಯವಾದ ಪ್ರತಿಫಲವನ್ನು ಪಡೆಯುತ್ತಿರುವರು. ನೀಚ ಜನರಿಂದಲೂ ಬಂಧು ಮ ಪುತ್ರರಿಂದಲೂ ಧನಲಾಭವಾಗುವದು. ಆದ್ದರಿಂದಲೇ ನಿಮ್ಮ ಸಂಪತ್ತಾಗವು ಬಹಳ ಉತ್ತಮ ಸ್ಥಿತಿಗೆ ಬಂದಿರುವದು. ಆದರೂ ಕೂಡ ನಿಮ್ಮ ದುರ್ದೈವದಿಂದ ಧನವನ್ನು ನಿಮಿತ್ತೀಕರಿಸಿಕೊಂಡು ಕಲಹವಾಗಲಿದೆ. ಮತ್ತು ಸ್ತ್ರೀಯರಿಂದ ಪೀಡೆಯೂ ಅಪಭಗಳೂ ಸಂಭವಿಸುವವು. ಇದರಲ್ಲಿ ಮುಖ್ಯವಾಗಿ ನಿಮ್ಮ ಚಿತ್ತಚಾಂಚಲ್ಯವೇ ಕಾರಣವೆಂದೂ ಹಿಸಬೇಕಾಗುವುದು. ಈ ಸಲುವಾಗಿ ವ್ಯರ್ಥ ಧನ ವ್ಯಯಿಸುವುದರಿಂದ ತದ್ವಿಷಯಕವಾದ ವ್ಯಸನಕ್ಕೀಡಾಗುವಿರಿ. ತಾ. 9, 10 ಮತ್ತು 16 ಈ ದಿನಗಳಲ್ಲಿ ಜಾಗರೂಕರಾಗಿ ವರ್ತಿಸಿರಿ.

ಕರ್ಕಾಟಕರಾಶಿ —

ಈ ವಾರದಲ್ಲಿ ನಿಮ್ಮ ಭಾಗಕ್ಕೆ ಯಾವ ವಿಧದಿಂದಲೂ ದೈವಾನುಕೂಲವಿಲ್ಲವೆಂದೇ ಹೇಳಬೇಕು. ಆದಕಾರಣ ನಿಮ್ಮ ಯತ್ನವು ಒಂದೂ ಸಾಗದು. ಆರಂಭಿಸಿದ ಕಾರ್ಯಗಳು ಕೊನೆ ಹೊಂದಲು ಬೇಕಾದ ಸೌಕರ್ಯಗಳು ಇಲ್ಲವು. ಒಂದು ವೇಳೆ ಒಂದೆರಡು ಕೊನೆ ಹೊಂದಿದರೂ ಕೂಡ ಅದರಲ್ಲಿ ನಿಮಗೆ ಪರಾಜಯ ಅಥವಾ ನಷ್ಟಗಳೇ ಸಂಭವಿಸುವವು. ಶತ್ರು ಜನರಿಂದ ಸದಾ ಪೀಡೆಯು ತಪ್ಪಲಾರದು. ಮಾತ್ರವಲ್ಲ ಶರೀರ ಪೀಡೆಯೂ ಅಧಿಕವಾಗಿ ರೋಗವು ಯಾವಾಗಲೂ ಮುಂದಾಗಿ ಕಾಣುವುದರಿಂದ ಹೆಚ್ಚಿನ ಚಿಂತೆಯೊಡನೆ ಕಲಹವಾಗುವುದು. ಪ್ರವಾಸ ವಿಷಯದಲ್ಲಿ ಈ ವಾರವು ಬಹಳ ಅನಿಷ್ಟಕಾರಿಯಾಗಿರುವುದು. ಇಷ್ಟೆಲ್ಲಾ ಅನರ್ಥಗಳಿಗೆ ನಿಮ್ಮಲ್ಲಿರತಕ್ಕ ಧರ್ಮಕರ್ಮಗಳ ನಾಶವೇ ಮೂಲಕಾರಣವಾಗಿರುವುದು. ಆದಕಾರಣ ದೈವ ದೇವರುಗಳಲ್ಲಿ ಭಕ್ತಿಯಿಟ್ಟು ಗುರುಹಿರಿಯರಿಗೆ ವಿಧೇಯರಾಗಿ ನಡೆಕೊಂಡಲ್ಲಿ ಹೆಚ್ಚಿನ ಅನಿಷ್ಟಗಳು ಶಾಂತವಾಗುವವು. ವಾರಾದಿಯ ಐದು ದಿನಗಳು ಬಹಳ ಅನಿಷ್ಟದಾಯಕಗಳಾಗಿರುವವು.

ಸಿಂಹರಾಶಿ —

ಗ್ರಹರು ತಮ್ಮ ತಮ್ಮ ನೈಸರ್ಗಿಕ ಗುಣಕ್ಕನುಕೂಲವಾದ ಇಷ್ಟಾನಿಷ್ಟ ಸ್ಥಾನಗಳನ್ನು ಹೊಂದಿರುವುದರಿಂದ ನಿಮ್ಮಲ್ಲಿಯೂ ಕೂಡ ನಿಮ್ಮ ನಿಮ್ಮ ಹುಟ್ಟುಗುಣದ ಅವಿರ್ಭಾವವೇ ಹೆಚ್ಚಾಗಿ ಬೆಳಕಿಗೆ ಬರುವುದು. ಪುತ್ರಮಿತ್ರ ಬಂಧುಜನರೇ ಮೊದಲಾದ ಪರಿವಾರದಿಂದ ಕೂಡಿದ ನಿಮಗೆ ಶತ್ರುಗಳ ಚಿಂತೆ ಇನಿತೂ ಇಲ್ಲವು. ನಿಮ್ಮ ಬುದ್ಧಿ ಕೌಶಲದಿಂದಲೂ ಸಾಕ್ಷಾತ್ತುರ್ಯದಿಂದಲೂ ಜನತೆಯನ್ನು ನಿಮ್ಮ ವಶವರ್ತಿಗಳನ್ನಾಗಿ ಮಾಡಿಕೊಳ್ಳುವಿರಿ. ಆದ್ದರಿಂದ ಸರ್ವತ್ರ ಸ್ಥಾನಮಾನಗಳೂ ಭೋಗ್ಯವಸ್ತುಗಳೂ ನಿಮಗೆ ಕಡಿಮೆಯಾಗಲೊಲ್ಲವು. ಆದರೆ ನೀವು ಇಷ್ಟೊಂದು ನೆನಪಿನಲ್ಲಿಡಬೇಕು! ನಿಮ್ಮ ಆಪ್ತಮಿತ್ರರೇ ನಿಮಗೆ ಎರಡೆಂಟಣೆಯವರು. ಆದ್ದರಿಂದ ಈ ವಿಷಯದಲ್ಲಿ ಸೂಕ್ಷ್ಮದೃಷ್ಟಿಯಿಟ್ಟು ಅವರಿಂದದೂರರಾಗುವುದು ಪರಮ ಲೇಸು. ಜ್ವರಾದಿಗಳಿಂದ ನಿಮ್ಮ ಶರೀರಕ್ಕೆ ಸ್ವಲ್ಪ ತಾಪವುಂಟಾಗಲಿರುವುದು. ವಾರಾಂತ್ಯದ ನಾಲ್ಕು ದಿನಗಳು ಅಷ್ಟೊಂದು ಚೆನ್ನಾಗಿಲ್ಲದಿರುವುದರಿಂದ ಆ ದಿನಗಳಲ್ಲಿ ಧನವ್ಯಯ ಕಾರ್ಯಹಾನಿ ಇತ್ಯಾದಿಗಳು ಸಂಭವಿಸಲಿವೆ.

ಕನ್ಯಾರಾಶಿ —

ದಿನೇ ದಿನೇ ನಿಮ್ಮ ಅದೃಷ್ಟವು ಸುಧಾರಿಸುತ್ತಾ ಬರುತ್ತಿರುವುದು ತುಂಬಾ ಸಂತೋಷದ ಸಂಗತಿ. ನಿಮ್ಮಲ್ಲಿ ನೆಲೆಯಾಗಿರತಕ್ಕ ಅನೇಕ ಶೋಕಗಳು ನಿವಾರಣೆಯಾಗುವವು. ಶತ್ರುಗಳು ನಿಮ್ಮ ಮೈತ್ರಿಯನ್ನಪೇಕ್ಷಿಸುವರು. ಶರೀರ ಪ್ರಕೃತಿಯೂ ಕೂಡ ಹೆಚ್ಚಿನ ಮಟ್ಟಿಗೆ ಆರೋಗ್ಯಕ್ಕೆ ಬಂದು ಮುಟ್ಟುವುದು. ಕೈಗೊಂಡ ಉದ್ಯೋಗದಲ್ಲಿ ಸಾಕಷ್ಟು ಧನಲಾಭವಾಗುವುದು. ವಕೀಲ ವೃತ್ತಿಯವರಿಗೆ ಕ್ರಿಮಿನಲ್ ವ್ಯವಹರಣೆ ಸಂಬಂಧದಿಂದಾಗಿ ಹೆಚ್ಚಿನ ಲಾಭವಿದೆ. ಮಿತ್ರವೃಂದವು ನಿಮಗೆ ತುಂಬಾ ಅನುಕೂಲವಾಗಿರುವುದು. ಆದರೆ ನಿಮಗೆ ನಿಮ್ಮ ಕುಟುಂಬದಲ್ಲಿ ಸಂಭವಿಸತಕ್ಕ ಕಲಹಗಳು ಹೆಚ್ಚಿನ ಮನೋವ್ಯಥೆಗೆ ಕಾರಣಗಳಾಗುವವು. ಅದೊಂದು ಅನಿರ್ವಾಚ್ಯವಾದ ಚಿಂತೆಯು ನಿಮ್ಮನ್ನು ಆವರಿಸಿಕೊಂಡಿರುವುದು. ಅದಿನ್ನು ಕೆಲವೇ ವಾರಗಳಲ್ಲಿ ನಿವಾರಣೆಯಾಗಲಿದೆ. ಈ ವಾರದಲ್ಲಿ ಪ್ರವಾಸ ಮಾಡಿದರೆ ಅನಿಷ್ಟಗಳು ಖಂಡಿತ ಸಂಭವಿಸುವವು. ತಾ. 11, 12, 13 ಹೊರತು ಇತರ ದಿನಗಳು ಕೆಟ್ಟಿರುವುವು.

ತುಲಾರಾಶಿ —

ರಾಜಕೀಯ ಭಾಗದಲ್ಲಿ ಪ್ರತ್ಯೇಕ ನಿಮಗೆ ಹಾನಿಯಿರುವುದು. ಆದ್ದರಿಂದ ಕೋರ್ಟು ವಗೈರೆಗಳ ಕಾರ್ಯಗಳನ್ನು ಸ್ವಲ್ಪ ಸಮಯ ಮುಂದರಿಸುವುದೊಳ್ಳಿತು. ಇಲ್ಲದಲ್ಲಿ ಧನನಾಶ, ಮಾನಹಾನಿ, ಭಯ ಇತ್ಯಾದಿಗಳು ಸಂಭವಿಸಲಿವೆ. ಪಿತ್ತ ದೋಷದಿಂದಾಗಿ ಆರೋಗ್ಯವು ಕೆಡುವುದು. ನಿಮ್ಮ ಸಂಸಾರಕ್ಕೆ ಆವ ಭಾಗದಲ್ಲೂ ಕೊರತೆಯಿಲ್ಲವು. ಮಿತ್ರಬಾಂಧವರು ಹೆಚ್ಚುವರು. ವ್ಯಾಪಾರಾದಿ ಉದ್ಯೋಗಗಳಲ್ಲಿ ಲಾಭವು ತೃಪ್ತಿಕರವಾಗಿರುವುದು. ಪಶು ಸಂಪತ್ತುಗಳೂ ಸಮೃದ್ಧವಾಗಿರುವವು. ಜನತೆಯಲ್ಲಿ ನಿಮ್ಮ ಅಧಿಕಾರವು ಕುಂಠಿತವಾಗಲಾರದು. ಶತ್ರುಗಳು ಆತ್ಮರಕ್ಷಣೆಗಾಗಿ ಪೇಚಾಡುವರು. ಸಂಸಾರಿಗಳಾದ ನಿಮಗೆ ಸ್ತ್ರೀವಿಷಯಕವಾದ ಸುಖಕ್ಕೆ ಏನೂ ಹಾನಿಯಿಲ್ಲವು. ತಾ. 11, 12, 13 ಮತ್ತು 16 ಈ ದಿನಗಳು ಉತ್ತಮವಿಲ್ಲದಿರುವುದರಿಂದ ಧನವ್ಯಯ, ಉದರರೋಗ, ಕೆಲವೊಂದು ವ್ಯವಹಾರಗಳಲ್ಲಿ ಕಲಹಗಳು ಉಂಟಾಗಲಿವೆ.

ವೃಶ್ಚಿಕರಾಶಿ —

ನಿಮಗೆ ಈ ವಾರವು ಹಲವು ಭಾಗಗಳಲ್ಲಿ ಅನಿಷ್ಟಕಾರಿಯಾಗಿರುವುದು. ನೀವು ಸಂಪಾದಿಸಿದ ಹಣಕ್ಕೆ ತುಂಬಾ ಖರ್ಚು ತೊಂದರೆಗಳೇ ಕಂಡು ಬರುತ್ತವೆ. ಈ ಹಣವು ನ್ಯಾಯ ರೀತಿಯಿಂದ ನಿಮ್ಮ ಕೈ ಸಿಕ್ಕಿದುದಲ್ಲವು. ಆದಕಾರಣ ಶತ್ರು ಭಯಕ್ಕೆ ಒಳಗಾಗುವಿರಿ. ಶರೀರದ ಸಲುವಾಗಿ ವಿಶೇಷ ಜಾಗ್ರತೆ ವಹಿಸಿರಿ. ಗಾಯ ಹುಣ್ಣು ಇತ್ಯಾದಿಗಳುಂಟಾಗುವ ಸಂಭವವಿದೆ. ನಿಮ್ಮ ಬಂಧು ವರ್ಗದವರಿಂದ ನಿಮಗೆ ಸಂಭವಿಸತಕ್ಕ ವಿಪತ್ತು ನಿಮ್ಮನ್ನು ದಿಙ್ಮೂಢರನ್ನಾಗಿ ಮಾಡುವುದು. ಸಕಲ ಭಾಗಗಳಲ್ಲೂ ಧನವ್ಯಯವು ಅಧಿಕಾಧಿಕವಾಗಿ ಋಣದ ಅಡಚಣೆಯಲ್ಲಿ ಬಿದ್ದು ನರಳಬೇಕಾದ ಪ್ರಸಂಗ ಬರುವದು. ಸಂಸಾರದಲ್ಲೂ ಜನತೆಯಲ್ಲಿಯೂ ಕಲಹವು ವಿಶೇಷವಾಗಿ ಹೆಚ್ಚುವುದು. ತಾ. 11, 12, 13 ಮತ್ತು 16 ಈ ದಿನಗಳಲ್ಲಿ ಇಷ್ಟಸ್ನೇಹಿತರ, ಭೋಗ್ಯವಸ್ತುಗಳ ಲಾಭ, ಕೆಲವೊಂದು ಕಾರ್ಯಗಳಲ್ಲಿ ಜಯ ಮತ್ತು ಸ್ತ್ರೀಸುಖಗಳು ಲಭಿಸುವವು.

ಧನುರಾಶಿ —

ನಿಮಗೀವಾರವು ಮಿಶ್ರಫಲದಾಯಕವಾಗಿ ಪರಿಣಮಿಸುವುದು. ನಿಮ್ಮ ಇಚ್ಛೆಯಂತೆ ಕಾರ್ಯವು ಕೊನೆಗೊಳ್ಳುವುದರಿಂದ ಇಷ್ಟಾರ್ಥವು ಕೈಗೂಡುವುದು. ಯೋಗ್ಯವಾದ ಸ್ಥಾನಮಾನವಿರುವುದರಿಂದ ಶತ್ರುಗಳ ನಾಶದಿಂದಲೂ ಸಂತೋಷ ಪರವಶರಾಗುವಿರಿ. ನಿಮ್ಮ ಭೋಗೇಚ್ಛೆಯು ಪರಿಪೂರ್ಣವಾಗಲಿರುವುದು. ಆದರೂ ನಿಮ್ಮ ಶರೀರವು ಆರೋಗ್ಯದಿಂದಿರುವುದು ಕಷ್ಟದ ಸಂಗತಿ. ಶಿರೋವೇದನ, ನೇತ್ರರೋಗ, ದಂತರೋಗ ಇತ್ಯಾದಿಗಳು ಆಗಾಗ ಪೀಡಿಸುವವು. ಅಂಗಾಂಗಗಳಲ್ಲಿ ಗಂಟುಸಂಧಿಗಳಲ್ಲಿ ನೋವು ತೋರಿ ಬರುವುದು. ಕೆಲವೊಂದು ಕಾರ್ಯಗಳು ಶತ್ರುಗಳ ಮಾಯಾಜಾಲದಿಂದಾಗಿ ಅನ್ಯಥಾ ಆಗುವ ಸಂಭವವಿದೆ. ಶ್ರೇಯೋಕಾಂಕ್ಷಿಗಳಾದ ನೀವು ದುರ್ಮಾರ್ಗದಲ್ಲಿ ಪ್ರವರ್ತಿಸತಕ್ಕ ನಿಮ್ಮ ಚಂಚಲವಾದ ಮನಸ್ಸನ್ನು ಬಿಗಿ ಹಿಡಿಯುವುದು ನಿಮ್ಮ ಆದ್ಯ ಕರ್ತವ್ಯ. ತಾ. 9, 10, 14, 15 ಈ ದಿನಗಳು ಇಷ್ಟಾರ್ಥದಾಯಕಗಳಾಗಿವೆ.

ಮಕರರಾಶಿ —

ಸದಾ ಕಠೋರನುಡಿಗಳನ್ನಾಡುವುದರಿಂದಲೂ, ಚಪಲತನವನ್ನೇ ಹೆಚ್ಚಾಗಿ ಅನುಸರಿಸುವುದರಿಂದಲೂ ನಿಮ್ಮಲ್ಲಿ ಅನೇಕರಿಗೆ ತಿರಸ್ಕಾರ ಬುದ್ಧಿ ಹುಟ್ಟಬಹುದು. ಆದರೂ ನಿಮ್ಮ ಅದೃಷ್ಟವೇನೋ ಚೆನ್ನಾಗಿರುವುದು. ಪ್ರತಿಯೊಂದು ಕಾರ್ಯದಲ್ಲೂ ನಿಮಗೆ ಜಯ ಕಾಣುವುದರಿಂದ ಜನರು ನಿಮಗೆ ಅನುಕೂಲರಾಗಿ ವರ್ತಿಸುವರು. ಮತ್ತು ಮಾನ ಮರ್ಯಾದೆಗಳನ್ನು ಪಡೆಯುವಿರಿ. ಶತ್ರುಗಳೂ ಮಿತ್ರರಾಗಿ ಪರಿಣಮಿಸುವರು. ನಾನಾ ರೀತಿಯಿಂದ ಧನವನ್ನು ಸಂಪಾದಿಸಲು ಶಕ್ತರಾಗುವಿರಿ. ಒಳ್ಳೇ ಆರೋಗ್ಯವನ್ನು ಪಡೆಯುವಿರಿ. ವಸನಾಭರಣಗಳ ಲಾಭವೂ ಕೂಡ ಆಗಲಿದೆ ಎಂದರೆ ತಪ್ಪಾಗದು. ಸುಖದಿಂದ ಕಾಲಯಾಪನೆ ಮಾಡುವಿರಿ. ಕೆಲವೊಂದು ಅಕಾರ್ಯಗಳಲ್ಲಿ ನೀವು ಧನ ವ್ಯಯಿಸುವ ಸಂದರ್ಭ ಬರುವುದರಿಂದ ಅದರಿಂದ ಬಹಳ ಚಿಂತೆಗೀಡಾಗುವಿರಿ. ತಾ. 14, 15 ಈ ದಿನಗಳಲ್ಲಿ ಜಾಗರೂಕರಾಗಿ ನಿಮ್ಮ ಯೋಗ್ಯತೆಯನ್ನತಿಕ್ರಮಿಸಿ ಹೋಗುವದು.

ಕುಂಭರಾಶಿ —

ನಿಮ್ಮ ಉದ್ಯೋಗದಲ್ಲಿ ಅಭಿವೃದ್ಧಿಯೂ ಯೋಗ್ಯವಾದ ಪ್ರತಿಫಲವೂ ಸಿಗುವುದು. ಮಿತ್ರಜನರಿಂದಾಗಿಯೂ ಧನಲಾಭವಾಗಲಿದೆ. ಆದರೂ ಅನಿಷ್ಟಕಾರಕ ಗ್ರಹರ ಆಧಿಕ್ಯದಿಂದಾಗಿ ಕೋರ್ಟು ವಗೈರೆ ವ್ಯವಹಾರಗಳಲ್ಲಿ ಪರಾಭವವುಂಟಾಗುವುದು. ಮಾತ್ರವಲ್ಲ ಹೆಚ್ಚಾಗಿ ಧನವ್ಯಯವಾಗುವುದು. ಕೆಲವೊಂದು ಕಾರ್ಯಗಳಲ್ಲಿ ಅಜಾಗರೂಕತೆಯಿಂದಾಗಿ ಧನವ್ಯಯವೂ ಉಂಟಾಗುವುದು. ದೇಹಪೀಡೆಯು ಅಧಿಕವಾಗಿ ಶರೀರವು ದೌರ್ಬಲ್ಯವನ್ನು ಹೊಂದುವುದು. ಖರ್ಚಿನ ದಾರಿಗಳು ಬಹುವಾಗಿ ಆಪದ್ಧನವನ್ನು ಕೂಡ ವ್ಯಯಿಸಬೇಕಾಗಿ ಬರುವುದು. ಪ್ರವಾಸದ ಸಲುವಾಗಿಯೂ ಕಷ್ಟನಷ್ಟಗಳು ಸಂಭವಿಸಲಿವೆ. ಸಂಪದ್ಭಾಗಗಳನೇಕಗಳು ಹ್ರಾಸ ಭಾವವನ್ನು ಹೊಂದಲಾರಂಭವಾಗುವವು. ತಾ. 9, 10 ಮತ್ತು 16 ಈ ದಿನಗಳಲ್ಲಿ ರಾಜಭಯ, ಆಯಾಸ, ಉದರರೋಗ, ಧನವ್ಯಯಗಳು ಅಧಿಕವಾಗುವವು.

ಮೀನರಾಶಿ —

ದಿನ ಹೋದಂತೆ ನಿಮ್ಮ ಅದೃಷ್ಟವು ಹೀನಾವಸ್ಥೆಯನ್ನೈದುತ್ತಿರುವುದು. ಆದ ಕಾರಣ

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0

೨ ಹೊಸ ಮಾದರಿ „ „ 0—1—3

೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ „ 0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ. ಬೆಲೆ 0-4-0 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0—4—0

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ಪುಟ ೫೦ರಿಂದ

ಮಹಿಳಾ ಸಭೆ

ಗಂಡಸರದೇ ಚಂದ—ಎಷ್ಟೋ ಚಂದ—ಕಲಿತವರು ಎಷ್ಟು ದೊಡ್ಡ ವರದಕ್ಷಿಣೆಯೆಂಬ ಬಂಗಾರದ ಗನಿಬೀಳುತ್ತೆ—ಎಷ್ಟು ಹೇರಾಳ ಸಂಪತ್ತಿರುವ ಒಂದೇ ಹುಡುಗಿ ಇದ್ದಾಳೆ; ಯಾವಾಗ ಆಂಘವಳನ್ನು ಬಗಲಿಗೆ ಹಾಕಿಕೊಂಡು ತಮ್ಮ 'ಟಿಸ್ ಪುಸ್' ಇಂಗ್ಲೀಷ್ ಮರ್ಜಿಯ ಕರ್ಚಿಗೆ ಕಿಸೆ ತುಂಬಿಸಿಕೊಳ್ಳೋಣಾಂತ ಬೇಟೆಯಾಡುತ್ತಿದ್ದಾರೆ. ಈ ಸುಶಿಕ್ಷಿತ ಗಂಡಸರು ಸಾವಿರ ಸಾವಿರ ಗಟ್ಲೆಯಲ್ಲಿ ಬದಿಕೇಳಿ, ಹುಡುಗಿಯರ ಮನೆಯನ್ನೂ, ಹುಡುಗಿಯನ್ನೂ, ಲಗಾಡಿ ತೆಗೆದರು—ಬರೇ ವಿದ್ಯಾವಂತನ ಹೆಂಡ್ತಿಯೆಂದು ಎರಡು ದಿವಸ 'ಶೋಕ್' ಮಾಡುವುದಕ್ಕಿಂತ ತಿಂಗಳಿಗೆ ಹತ್ತು ರೂಪಾಯಿ ಸಂಪಾದನೆ ಮಾಡುವ ಒಬ್ಬ ಹಳ್ಳಿಯ ಯುವಕನನ್ನು ವರಿಸುವುದು ಲೇಸು—ಒಣ ಹೆಸರು ಒಣ ಮರ್ಯಾದೆಗೆ ಮರುಳಾಗಿ ನಮ್ಮ ಹಲವು ಹೆಂಗಳ ಜನ್ಮವೇ ನಿಸ್ಸಾರ್ಥಕವಾಯಿತು ಆದಕಾರಣ ಈ ಮಣ ಮಣ ಭಾರದ ವರದಕ್ಷಿಣೆ ತೆರಲಾರದೆ ಅವಿವಾಹಿತರಾಗಿ ಉಳಿದಿರುವ ನಮ್ಮ ಸಹೋದರಿಯರಿಗೆ ನಾವು ಮಾಡುವ ಕರ್ತವ್ಯವುಂಟು ಆದಕಾರಣ ಈ ಸೂಚನೆಯನ್ನು ನಿಮ್ಮ ಮುಂದೆ ಇಡುತ್ತೇನೆ.

'ಐಶ್ವರ್ಯವಂತನ ಮಗಳೇ ಆಗಲಿ ಬಡವನ ಮಗಳೇ ಇರಲಿ, ಇನ್ನು ವರದಕ್ಷಿಣೆಯ ಪ್ರಸಂಗಬಂದರೆ ಮದುವೆಯೇ ಬೇಡವೆನ್ನಬೇಕು!

ಮಿಸಿಸ್. ಯುವಸ್. ಇವರ ತಿದ್ದುಪಡಿ—ಇದನ್ನು ಸೇರಿಸಿಕೊಳ್ಳತಕ್ಕದ್ದು—'ಮದುವೆಯಾಗದ ಸ್ತ್ರೀಯರನ್ನು ವರದಕ್ಷಿಣೆಯಿಲ್ಲದೆ ಮದುವೆಯಾಗದ ಗಂಡಸರು ಮದುವೆ ಮಾಡಿಕೊಳ್ಳುವ ಹಾಗೆ ಒತ್ತಾಯಪಡಿಸುವ ಹಾಗೂ ವರದಕ್ಷಿಣೆ ಕೇಳುವುದರಲ್ಲಿ ಕೇಳುವವನ ಕೈಲಾಗದ ಹೇಡಿತನವು ಸ್ವಯಂ ಪ್ರದರ್ಶನವಾಗುತ್ತದೆಂಬ ನ್ಯಾಯವನ್ನು ಪ್ರಚಾರಮಾಡುವಂತೆಯೂ ವಿವಾಹಿತೆಯಾದವರೆಲ್ಲ ಅವರವರ ಗಂಡಂದಿರಿಗೆ ಉತ್ಸಾಹಗೊಳಿಸಬೇಕು ಕೇಳದಿದ್ದರೆ ಹೆಂಡಂದಿರೆಲ್ಲಾ (strike) ಕರ್ತವ್ಯ ತಾಟಸ್ಥ್ಯದೀಕ್ಷೆ ಹಿಡಿಯಬೇಕು—(ಕೈಚಪ್ಪಾಳೆ—hear! hear!)

ಈ ತಿದ್ದುಪಡಿಯನ್ನು ಅನುಮೋದಿಸಿ ಮಿಸ್. ಕೆ. ಯವರ ಭಾಷಣವಾದ ಮೇಲೆ ಗೊತ್ತುವಳಿಯು ಸರ್ವಾನುಮತದಿಂದ ಮಂಜೂರಾಯಿತು.

ತುಂಗಮ್ಮನ ಭಾಷಣ ಮತ್ತು ಠರಾವು

ಗೆಳತಿಯರಿರಾ! ಯಾವ ಶಾಸ್ತ್ರದ ಆಧಾರವಿದೆ?—ಯಾವ ಪುರಾಣದಲ್ಲಿ ಹೇಳಿದೆ? ಹೆಂಗಸರಿಗೆ ಒಂದು ಧರ್ಮ, ಗಂಡಸರಿಗೆ ಮತ್ತೊಂದು ಎಂದು. (I challenge any one to produce any authority!—No! No! cry from the audience.) ಇದರ ವಿಷಯ ನಾನು ನನ್ನ ಗಂಡನೊಂದಿಗೆ ಯಾವಾಗಲೂ ತರ್ಕಮಾಡುತ್ತಾ ಇದ್ದಾನೆ. ಅವರು ಹೇಳುತ್ತಾರೆ—woman must obey man—woman ಅಂದರೆ—weaker than man ಅಂತೆ! woe of man ಅಂತೆ! wife of man ಅಂತೆ! wife ಅಂದ್ರೆ knife to his life ಅಂತೆ!—ಇದೇನು ನನ್ನ ಗಂಡ 'ನೋನ್ಸೆನ್ಸ್' (nonsense) ಮಾತಾಡುವುದು! ರಾತ್ರೆಗೆ ಮನೆಗೆ ಬರುವಾಗ ಹತ್ತು ಯಾ ಹನ್ನೊಂದು ಗಂಟೆ—ಮಾತಾಡಿದರೆ—you can't question—yours not to make reply—yours not to reason why, yours is only to obey and slave—you are a woman—wife of man ಅಂತ ಹೇಳುತ್ತಾರೆ! (Shame! Shame!) ಪತಿವ್ರತಾ ಧರ್ಮದ ವಿಷಯ ನಮಗೆ ಸಾರುತ್ತಾರೆ—ಅದೇನ್ರಿ ಇವರಲ್ಲಿ ಏಕಪತ್ನೀವ್ರತ, ಸತಿ ಸಂಸಾರ ಪಾಲನಾ ಧರ್ಮ ಇರಬೇಡವೇ?—ಇದೇನ್ರಿ ಗಂಡಸರು ಮದುವೆಯಾಗದೇ ಎಷ್ಟು ಸಮಯದ ವರೆಗೂ ಇರಬಹುದು. ಆದರೆ ಹೆಂಗಸರಿಗೆ ಬಹು ಬೇಗನೆ ವಿವಾಹವಾಗಬೇಕು. ಹೆಣ್ಣಿಗೆ ಬೇಗ ವಿವಾಹವಾಗದಿದ್ದರೆ ಮಾನಗೇಡು ನಾಚಿಗೇಡು! ಹಾಗೆ ಇಟ್ಟುಕೊಂಡದ್ದರಿಂದಲೇ ವರದಕ್ಷಿಣೆಯ ದರ ಏರಿದ್ದು! ಈ ತರದ ಎರಡು ವಿಧವರ್ಗಗಳಿರುವ ಪರಿಸ್ಥಿತಿಯಿಂದ ಗಂಡಸರು ನಮ್ಮನ್ನು (exploit) ಸೂರೆ ಸುಲಿಗೆ ಮಾಡುತ್ತಾರೆ. ಇನ್ನು ಮುಂದೆ ಹೀಗೆ ಆಗದಂತೆ—ಈ ಸೂಚನೆಯನ್ನು ನಿಮ್ಮ ಮುಂದೆ ಇಡುತ್ತೇನೆ; 'ಹೆಂಗಸಿನಷ್ಟೇ ಧರ್ಮ ಗಂಡಸಿನಲ್ಲಿಯೂ ಇರತಕ್ಕದು. ಹೆಂಗಸು ತುಸು ತಪ್ಪಿ ನಡೆದರೆ ಗಂಡುಲೋಕವು ಛೀಗೈಯಲು ಹೇಗೆ ನಾಲಗೆಯನ್ನು ಸದಾ ಮುನ್ನೀಡಿಯೇ ಇರುವುದೋ ಹಾಗೆಯೇ ಗಂಡಸರು ತಪ್ಪಿನಡೆದಾಗ ಸ್ತ್ರೀ ಪ್ರಪಂಚವೇ ಛೀ ಛೀ ಎಂದು ಕೂಗತೊಡಗಿ ಲೋಕ ಲೋಕವೇ ಅಂತಹರನ್ನು ತಿರಸ್ಕರಿಸುವಂತ ಪರಿಸ್ಥಿತಿಯುಂಟಾಗುವಂತೆ ಪ್ರಚಾರ ಕಾರ್ಯಕ್ರಮವನ್ನು ಕೈಗೊಳ್ಳಬೇಕು'

ಮಿಸಿಸ್. ಯುಸ್. ರವರ ತಿದ್ದುಪಡಿ—ಇದು ಮಾತ್ರವಲ್ಲದೆ ಈ ವರೆಗಿದ್ದ ವರದಕ್ಷಿಣೆಯ ಬದಲಾಗಿ ಕನ್ಯಾದಕ್ಷಿಣೆಯನ್ನು ಕೇಳುವಂತಾಗಬೇಕು—

ಮಿಸ್. ಯುಸ್.—ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ—'ವರದಕ್ಷಿಣೆ ಕನ್ಯಾದಕ್ಷಿಣೆಗಳ ವಿಚಾರ ಇನ್ನು ಯಾವ ಗಂಡಸಾಗಲಿ—ಹೆಂಗಸಾಗಲಿ ತೆಗೆಯಬಾರದು. ತೆಗೆದವರಿಗೆ ಬಹಿಷ್ಕಾರ'—

ಈ ತಿದ್ದುಪಡಿಯು ಬಿದ್ದು ಹೋಯಿತು ಮೂಲ ಸೂಚನೆಯೇ ನಿಂತು ಸರ್ವಮಾನಿತವಾಯಿತು.

ದುರ್ಗಮ್ಮನವರ ಭಾಷಣ ಮತ್ತು ಗೊತ್ತುವಳಿ

ಸಹೋದರಿಯರೇ, ಮದುವೆಯನ್ನು (Legalise) ಶಾಸನಬದ್ಧವಾಗಿ ಮಾಡಬೇಕು. ನಮ್ಮ ಹಿಂದೂಸ್ಥಾನದಲ್ಲಿ ವಿವಾಹವು ಬಹೂ ಪುರಾತನಕಾಲದಿಂದಲೂ ಆಮರಣ ಅಭೇಧ್ಯವಾದ ಬ್ರಹ್ಮಗಂಟೆಂದು ಮಾನ್ಯವಾಗಿತ್ತು. ಆದರೆ ಈಗದು ಹೆಚ್ಚಿನ ಮಟ್ಟಿಗೆ ಉಪೇಕ್ಷಿಸಲ್ಪಟ್ಟಿದೆ. ಆದುದರಿಂದ ಮದುವೆಯಾದ ಮೇಲೆ ಗಂಡನಾಗಲೀ ಹೆಂಡತಿಯಾಗಲೀ ಒಬ್ಬರನ್ನೊಬ್ಬರು ಬಿಡದ ಹಾಗೆ ಕಾನೂನು ನಿಬಂಧನೆಮಾಡಿದಲ್ಲಿ ಸಮಾಜಕ್ಕೆ ಕಲ್ಯಾಣವಾಗುವುದು. ಆದಕಾರಣ ಈ ಸೂಚನೆಯನ್ನು ನಿಮ್ಮ ಮುಂದೆ ಇಡುತ್ತೇನೆ—ವಿವಾಹಸಂಬಂಧವನ್ನು (Legalise) ಶಾಸನಬದ್ಧಮಾಡಬೇಕು—ಇನ್ನು ಮುಂದೆ ಗಂಡನಿಗೆ ಹೆಂಡತಿಯನ್ನು ಬಿಡುವ ಅಧಿಕಾರವಿಲ್ಲ—

ಮಿಸಿಸ್. ಯುಕ್. ತಿದ್ದುಪಡಿ—ಹಾಗೆಯೇ ಹೆಂಡತಿಗೂ ಗಂಡನನ್ನು ಬಿಡುವ ಅಧಿಕಾರವಿಲ್ಲ. (ಕೈಚಪ್ಪಾಳೆ—ನಗೆ!)

ತಿದ್ದುಪಡಿಯನ್ನು ಮಿಸಿಸ್. ಸಿ. ಯವರು ಅನುಮೋದಿಸಿದ ಮೇಲೆ ಮೂಲಸೂಚನೆಯು ತಿದ್ದುಪಡಿಯೊಂದಿಗೆ ಬಹುಮತದಿಂದ ಮಾನಿತವಾಯಿತು.

ಜಾಯಮ್ಮನವರ ಭಾಷಣ ಮತ್ತು ಠರಾವು

ಸ್ವಜಾತಿಯವರೇ, ಎಷ್ಟು ಠರಾವುಗಳು ಪಾಸಾದರೂ ಪ್ರಯೋಜನವಿಲ್ಲ—ಗಂಡಸರನ್ನು ಎಷ್ಟು ನೀತಿವಂತರನ್ನಾಗಿ ಮಾಡಿದರೂ ಕೆಲವು ಮೂರ್ಖರು ಇದ್ದೇ ಇರುವರು. ಆದುದರಿಂದ ಪ್ರತಿಕೂಲ ಸಂದರ್ಭಗಳು ಒದಗಿದರೂ ಆಗ ನಾವು ಸ್ವತಂತ್ರವಾಗಿ ಜೀವಿಸುವಂತಹ ಹಾದಿ ತಿಳಿದುಕೊಂಡಿರಬೇಕು. ನಮಗೆ ಒಂದು ವೇಳೆ ಮದುವೆಯಾಗದೆ ಕೂತುಕೊಳ್ಳಬೇಕೆಂದಿದ್ದರೆ, ಆ ಸ್ವಾತಂತ್ರ್ಯವನ್ನು ನಮಗೆ ಸಮಾಜವು ಕೊಡಬೇಕು—ಇದಕ್ಕಾಗಿ ನಮಗೆ ವಿದ್ಯೆಯೂ ಧಾರ್ಮಿಕ ಸಾಮಾಜಿಕ ಸೇವೆಗಳನ್ನು ನಡೆಯಿಸುವುದಕ್ಕಾಗಿ ಸಂಸ್ಥೆಗಳೂ ಅಗತ್ಯ—ನಮ್ಮಲ್ಲಿ ಅನೇಕ ಸಣ್ಣ ಪ್ರಾಯದ ವಿಧವೆಯರು ಇರುವರು—ಇವರನ್ನು ಮದುವೆಮಾಡಿಕೊಳ್ಳಲಿಕ್ಕೆ ನಮ್ಮ ಗಂಡಸರಿಗೆ ಅಸಹ್ಯ ಅವರಿಗೆ ಅವಿವಾಹಿತ ತರುಣಿಯರೇ ಆಗಬೇಕು ಗಂಡಸು ವಿಧವೆಗೆ ಕೈಗೊಡಲಾರನೆಂದಾದರೆ ಹೆಣ್ಣೇಕೆ ವಿದುರನಿಗೆ ಕೈಕೊಡಬೇಕಮ್ಮಾ! ಎಳೆ ಎಳೆ ವಿಧವಾ ತರುಣಿಯರು ವಿಧವೆಯರಾಗಿಯೇ ಸಾಯಬೇಕಾದರೆ ಎಳೆ ಎಳೆ ವಿಧುರ ತರುಣರೂ ಹಾಗೇ ಆಗಲಿ. ಹಾಗಾಗದೆ ಗಂಡಿಗೆ ಹೆಣ್ಣಿನ ಸಂಕಷ್ಟ ಗೊತ್ತಾಗುವುದಿಲ್ಲ (hear! hear!) ಆದಕಾರಣ ಈ ಸೂಚನೆಯನ್ನು ನಿಮ್ಮ ಮುಂದೆ ಇಡುತ್ತೇನೆ—'ಇನ್ನು ಮುಂದೆ ನಮ್ಮ ಅಕ್ಕತಂಗಿಯರಲ್ಲಿ ವಿದ್ಯಾ ಬುದ್ಧಿ ಸಂಪತ್ತುಗಳಿದ್ದು ಧರ್ಮ ರಾಷ್ಟ್ರ ಸಮಾಜಸೇವೆಗಳಲ್ಲಿ ತಮ್ಮ ಜೀವನವನ್ನು ಕಳೆಯುವುದಕ್ಕಾಗಿ ಮದುವೆಯಾಗದೆ ಕೂತುಕೊಳ್ಳುವ ಇಚ್ಛೆ ಇದ್ದಲ್ಲಿ ಅವರಿಗೆ ಆ ಹಕ್ಕು ಇರತಕ್ಕದು. ಮತ್ತು ಎಷ್ಟರತನಕ ವಿಧವಾ ವಿವಾಹಕ್ಕೂ ಗಂಡಸರ ವಿಮುಖತೆ ತಿರಸ್ಕಾರ ನಿಂದೆಗಳಿರುವವೋ ಅಷ್ಟರತನಕ ವಿಧುರ ವಿವಾಹಕ್ಕೂ ಸ್ತ್ರೀಲೋಕವು ವಿಮುಖವೂ ವಿರೋಧವೂ ಆಗಿರತಕ್ಕದು.

ಮಿಸಿಸ್. ಟಿ. ಯವರು ಇದನ್ನು ಅನುಮೋದಿಸಿದ ಮೇಲೆ, ಇದು ಅತ್ಯುತ್ಸಾಹಪೂರ್ವಕವಾಗಿ ಮಾನ್ಯವಾಯಿತು.

ಅಧ್ಯಕ್ಷಿಯರ ಭಾಷಣ

ಸಹೋದರಿಯರೇ, ನನಗೆ ಈ ಮರ್ಯಾದೆಯ ಸ್ಥಾನವನ್ನು ಕೊಟ್ಟದ್ದಕ್ಕೆ ನಾನು ನಿಮಗೆ ತುಂಬಾ ಆಭಾರಿಯಾಗಿದ್ದೇನೆ—ಇವತ್ತಿನ ಈ ಸಭೆಯಲ್ಲಿ ಅನೇಕ ಗೊತ್ತುವಳಿಗಳು ಹೆಚ್ಚು ಭಿನ್ನಭೇದಗಳಿಲ್ಲದೆ ಅಂಗೀಕೃತವಾದುವು. ಇದು ಅಭಿನಂದನೀಯ ಹಾಗೂ ಅಭಿಮಾನಾಸ್ಪದವಾದ ವಿಷಯ. ನಮ್ಮಲ್ಲಿ ಈ ತರದ ಐಕ್ಯವು ಉಂಟಾಗಿ ಬಾಳಿ ಬೆಳಗಿ ಬಂದರೆ ಅನೇಕ ಕೆಲಸಗಳನ್ನು ನಾವು ಮಾಡಬಹುದು. ನಮ್ಮನ್ನು ಪುರುಷರು ಕೊರಗಹಚ್ಚುವುದು ತಪ್ಪು—ನಾವು ಬಹುಕಾಲ ಸಹಿಸಿದೆವು. ಇನ್ನು ನಿಜವಾಗಿಯೂ ಸಹಿಸಲು ಸಾಧ್ಯವಿಲ್ಲ—ನಮ್ಮಲ್ಲಿ ಈ ನಮೂನೆಯ ಐಕ್ಯವಿದ್ದರೆ ಅವರು ನಮಗೆ ಹೆದರಲೇಬೇಕು. ನಾವು ಅವರನ್ನು ಹೆಚ್ಚುದಲ್ಲದೆ—ಅವರು ನಮ್ಮನ್ನಲ್ಲ—ನಾವು ಅವರ ತಾಯಿಯ ಜಾತಿಗೆ ಸೇರಿದವರು. ತಾಯಿಗಿಂತ ಮೇಲ್ಪಟ್ಟ ಬಂಧುವಿಲ್ಲ—ತಾಯಿಯ ಋಣವನ್ನು ಹಿಂತಿರುಗಿ ಕೊಡಲು ಅಸಾಧ್ಯ. 'ಹತ್ತು ತಿಂಗಳ ಹೊತ್ತು, ಹೆರಿಗೆಯ ಕುತ್ತನ್ನು ಸಹಿಸಿ ಜನನವಿತ್ತು, ಉಣಿಸಿ, ತಿನಿಸಿ, ಬೆಳಸಿ ಬಾಳಿಸಿದವಳು ತಾಯಿಯಲ್ಲದೆ ತಂದೆಯಲ್ಲ—ಆದ್ದರಿಂದಲೇ ತಾಯಿತಂದೆ ಎಂಬ ವಚನದಲ್ಲಿ ತಾಯಿಯ ಹೆಸರನ್ನೇ ಮುಂದುಮಾಡಿ ಲೋಕವು ಹೇಳುವ ವಾಡಿಕೆ ಇಂಥಾ ತಾಯಿಯ ಜಾತಿಯ ಸ್ತ್ರೀಗೆ ಪುರುಷನು ಅನ್ಯಾಯಮಾಡಬಹುದೇ? (hear! hear!) ಎಂದೂ ಕೂಡದು ಮಹಾಪಾಪ—ಆದರೆ ನಾವು ಈ ಉತ್ಸಾಹದಲ್ಲಿ, ನಮಗಾಗಿರುವ ಅನ್ಯಾಯವನ್ನು ಪ್ರತಿಭಟಿಸುವ ಉದ್ವೇಗದಲ್ಲಿ ನಮ್ಮ ಕರ್ತವ್ಯವನ್ನು ಮಾತ್ರ ಎಂದೂ ಮರೆಯಬಾರದು—ನಾವು ಪೂರ್ವಸಂಪ್ರದಾಯಗಳ ಗುಲಾಮರಾಗಿರದೆ ಪ್ರಗತಿಪರ ಮನೋವೃತ್ತಿಯುಳ್ಳವರಾಗಿ ಪುರುಷನ ಆದರ್ಶಸಂಗಾತಿಯಾಗುವುದೇ ಮುಂದಿನ ಹಿಂದೀ ಸ್ತ್ರೀಯ ಉದ್ದೇಶವಿರಬೇಕು. ಪುರುಷನನ್ನು ಧಿಕ್ಕರಿಸುವ ಸ್ವತಂತ್ರದರ್ಪವುಳ್ಳವಳಾಗದೆ ತನ್ನ ನ್ಯಾಯವಾದ ಹಕ್ಕುಗಳನ್ನು ಕಾಪಾಡುವಷ್ಟರ ಸ್ವಾಭಿಮಾನಿಗಳಾಗಿ, ಮನೋಹರವಾಗಿ ಶೃಂಗರಿಸಿ ಕೊಳ್ಳುವುದರಲ್ಲಿ ಆಸಕ್ತಿತೋರಿಸುತ್ತಾ ಕೃತ್ರಿಮ ಬೆಡಗು ಬಿನ್ನಾಣಗಳಿಗೆ ಗಮನವೀಯದೆ, ಹದಗೆಟ್ಟ ಆವೇಶ ಉದ್ವೇಗಗಳಿಗೆ ಬಲಿಯಾಗದೆ ಶಾಂತಪರ ಜೀವನದಲ್ಲಿ ಆನಂದ ಪಡೆಯುವ ಸಹ್ಯನಿಷ್ಠೆಳೂ, ಪ್ರಾಮಾಣಿಕಳೂ ಪ್ರೇಮಳರು ನಾಮಯಿಯೂ ಆದ ಸ್ತ್ರೀಯೇ ಲೋಕಕ್ಕೆ ಬೇಕಾಗಿದೆ. ಇಂತಹ ಆದರ್ಶಸ್ತ್ರೀಯರಿರುವ ದೇಶವು ಲೋಕದಲ್ಲಿ ಅಗ್ರಗಣ್ಯಸ್ಥಾನವನ್ನು ಪಡೆಯದಿರದು. **ಯಾವ ಮನೆಯಲ್ಲಿ ಗಂಡಸೂ ಹೆಂಗಸೂ (Life is adjustment) ಜೀವನವು ಸುಖ ಪರಸ್ಪರ ಸಮ್ಮಿಲನದಲ್ಲಿದೆಯೆಂಬ ನ್ಯಾಯವನ್ನು ತಿಳಿದು ಅನುಷ್ಠಾನದಲ್ಲಿ ತೋರುವರೋ ಆ ಮನೆಯು ಸ್ವರ್ಗವೇ ಸರಿ ಮನೆಯ ಸುಖವಿರುವುದು ಆದರಲ್ಲಿ ಕೋರ್ಟಿಯಲ್ಲಿಲ್ಲ, ಬಿರುದಿನಲ್ಲಿಲ್ಲ, ಕಾರಿನಲ್ಲಿಲ್ಲ ಹಾರಾಟ ಮೆರೆದಾಟಗಳಲ್ಲಿಲ್ಲ. ನಿಜವಾದ ಗೃಹಸ್ಥ ಗೃಹಿಣಿಯರಾಗಿರುವುದರಲ್ಲಿದೆ ದಾಂಪತ್ಯದ ಸುಖ, ಸಮಾಜದ ಏಳಿಗೆ, ರಾಷ್ಟ್ರದ ಶಕ್ತಿ!** ಅಂತಹ ಆದರ್ಶ ಯಜಮಾನ ಯಜಮಾನತಿಯರಿಂದ ನಾಡು ಮೆರೆವಂತೆ ನಮ್ಮ ಪ್ರಯತ್ನವು ಸಾಗಲಿ! ಅದಕ್ಕೆ ನೀತಿಪರ ಲೋಕದ ಬೆಂಬಲ, ಭಗವಂತನ ಅನುಗ್ರಹವೂ ಇದ್ದೇ ಇದೆ. ಭಗಿನಿಯರೆ, ಎದ್ದೇಳಿ, ಉದ್ಧಾರದ ದೀಕ್ಷಾಬದ್ಧರಾಗಿ! ವಂದೇ ಮಾತರಂ!

ಮುಂದಿನ ಲೇಖನ:—

'ದಾನ ಪ್ರತಿದಾನವೇ ಜೀವನದ ನೀತಿ.'

ಜಾಕೋರು—ತಾ. ೫-೨-೩೮ರಲ್ಲು ನಡೆದ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚಾರಕೂರು ಸಕಲಗಿರುವ ಒಂದು ಸ್ಥಿಸಕ್ಕೆ ಶ್ರೀ. ಮೋನಪ್ಪ ಸೆಟ್ಟರೂ, ಬಿ. ಗೋಪಾಲಕೃಷ್ಣ ಕಾಮತರೂ ಸ್ಪರ್ಧಿಸಿದ್ದರು. ಶ್ರೀ. ಸೆಟ್ಟರು ೧೭ಮತಗಳನ್ನು ಹೆಚ್ಚಿಗೆ ಪಡೆದು ವಿಜಯಿಗಳಾಗಿರುತ್ತಾರೆ.

ಇಂಗ್ಲೆಂಡಿನಲ್ಲಿ ಐರಿಷ್ ರಿಪಬ್ಲಿಕನ್ ಪಕ್ಷೀಯರ ಪಿತೂರಿ

ಇದೇ ತಾ. ೫ನೇ ರಾತ್ರಿ ಇಂಗ್ಲೆಂಡಿನ ಲಿವರ್‌ಪೂಲಿನ ವಾಲ್ಟನ್ ಜೈಲಿನಲ್ಲಿ ಬೋಂಬು ಸ್ಫೋಟಿಸಿ ಹಾವಳಿಯಾಗಿರುವುದು ಆಯರ್ಲೇಂಡಿನ ಬಂಡಾಯದ ನಂತರ ಅನೇಕ ಮಂದಿ ಸಿನ್ ಫೈನ್ ಕೈದಿಗಳು ಈ ಜೈಲಿನಲ್ಲಿರಿಸಲ್ಪಟ್ಟಿದ್ದರು. ಈ ಸಂಬಂಧವಾಗಿ ಪೋಲೀಸರು ಇಬ್ಬರನ್ನು ದಸ್ತಗಿರಿ ಮಾಡಿದರು. ವಿಂಡ್ಸರ್ ಅರಮನೆ ಮತ್ತು ಪಾರ್ಲಿಮೆಂಟ್ ಸಭಾಸದನದ ಸುತ್ತಲೂ ಪಹರೆ ಇರಿಸಲಾಗಿದೆ. ಪ್ರಾಮುಖ್ಯ ಬ್ರಿಟಿಷ್ ಪೋಲೀಸ್ ಅಧಿಕಾರಿಗಳನ್ನು ಕೊಲ್ಲುವ ಒಳಸಂಚು ನಡೆದಿದೆಯೆಂಬುದು ಆಯರ್ಲೇಂಡಿನ ಅಲ್‌ಸ್ಟರಿನಲ್ಲಿ ಸಿಕ್ಕಿದ ದಾಖಲೆಯೊಂದರಿಂದ ತಿಳಿದುಬಂದಿದೆ. ಬಕ್ಕಿಂಗ್ ಹಾಮ್ ಅರಮನೆ, ವಿಂಡ್ಸರ್ ರಾಜಭವನ, ಹೌಸ್ ಒಫ್ ಕೋಮನ್ಸ್, ಬೇಂಕ್ ಆಫ್ ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್ ಯಾರ್ಡ್ ಕಟ್ಟಡಗಳಿಗೆ ಬೋಂಬು ಹಾಕುವ ಪಿತೂರಿ ನಡೆದಿದೆಯೆಂದೂ ಈ ದಾಖಲೆಯಿಂದ ವಿದಿತವಾಗಿದೆ. ಡೌನಿಂಗ್ ಸ್ಟ್ರೀಟ್ ಮತ್ತು ವೈಟ್ ಹೋಲಿನಲ್ಲಿ ಹೆಚ್ಚಿನ ಪಹರೆ ಇಡಲಾಗಿದೆ. ಇದೇ ತಾ. ೫ರಲ್ಲಿ ಹೌಸ್ ಅಫ ಕೋಮನ್ಸ್ ಕಟ್ಟಡವು ಮುಚ್ಚಲ್ಪಟ್ಟಿರುವುದು. ಚಕ್ರವರ್ತಿ ಮತ್ತು ಮಹಾರಾಣಿಯರಿರುವ ವಿಂಡ್ಸರ್ ಅರಮನೆಯಲ್ಲಿ ರಾತ್ರಿ ಹಗಲು ಪಹರೆ ಇಡಲಾಗಿದೆ. ಈ ಅರಮನೆಯ ದ್ವಾರವು ಮುಚ್ಚಲ್ಪಟ್ಟಿದೆ. ಪ್ರಧಾನ ಮಂತ್ರಿಗಳಿಗೆ ಅಂಗರಕ್ಷಕವಾಗಿ ಪೋಲೀಸ್ ಪಾಟು ಚೆಕರ್ಸಿಗೆ ಕಳುಹಿಸಲ್ಪಟ್ಟಿದೆ. ಪೆಟ್ರೋಲ್ ಟಾಂಕಿಗಳು ಸ್ಫೋಟಗೊಳಿಸಲ್ಪಡುವವೆಂದು ಎಚ್ಚರಿಸಲ್ಪಟ್ಟದ್ದರಿಂದ ಲಂಡನ್ ಪೋಲೀಸರಿಗೆಲ್ಲಾ ಶಸ್ತ್ರಗಳನ್ನೀಯಲಾಗಿದೆ. ಆಂಗ್ಲೇಯರಲ್ಲಿ ಐರಿಶ್ ಜನರ ಕುರಿತು ತೀವ್ರ ದ್ವೇಷವುಂಟಾಗಿ ನೂರಾರು ಮಂದಿ ಕೆಲಸದಿಂದ ತೆಗೆದುಹಾಕಲ್ಪಟ್ಟು ಹಿಂದೆ ಆಯರ್ಲೇಂಡಿಗೆ ಪೋಗಬೇಕಾಗಿ ಬಂದಿದೆ.

ಚೆರೋನವು ಬಂಡಾಯಗಾರರ ವಶವಾಯಿತು.

ಸ್ಪೆನಿಶ್ ಸರಕಾರದ ಅಧೀನವಿದ್ದ ಕಟಲಾನ್ ಪ್ರಾಂತದ ಪ್ರಾಮುಖ್ಯ ಪಟ್ಟಣವಾದ ಚೆರೋನವು ಇದೇ ತಾ. ೪ರಲ್ಲಿ ಬಂಡಾಯಗಾರರ ಅಧೀನವಾಗಿರುವುದು. ಇದರಿಂದಾಗಿ ಜನರಲ್ ಫ್ರೇಂಕೋರವರ ಸೇನೆಯು ಫ್ರೆಂಚ್ ಎಲ್ಲೆಗೆ ಒಹಳ ಹತ್ತಿರ ಬಂದ ಹಾಗಾಯಿತು. ಸ್ಪೆನಿಶ್ ಸರಕಾರವು ಫಿಗ್ಯೂರಾಸನ್ನು ತನ್ನ ಕೇಂದ್ರವಾಗಿ ಮಾಡಿದ್ದು ಈಗ ಅದನ್ನು ಬಿಟ್ಟು ಬೇರೆ ಕಡೆಗೆ ಹೋಗುವ ನಿರ್ಧಾರ ಮಾಡಿರುತ್ತದೆ. ಫಿಗ್ಯೂರಾಸಿನ ಮೇಲೆ ಬಂಡಾಯಗಾರ ವಿಮಾನಗಳು ಎಡೆಬಿಡದೆ ಬೋಂಬೆಸೆಯುತ್ತಿವೆ. ಸ್ಪೆನಿನ್ ಎಲ್ಲೆಯಿಂದ ಫ್ರಾನ್ಸಿಗೆ ಹೋಗಿ ಆಶ್ರಯಪಡೆಯಲು ನಿರಾಶ್ರಿತರ ಸಂಖ್ಯೆಯು ದಿನೇ ದಿನೇ ಅಧಿಕವಾಗುತ್ತಿದೆ. ಇಷ್ಟರಲ್ಲೇ 70,000 ಮಂದಿ ಫ್ರಾನ್ಸಿಗೆ ಹೋಗಿರುತ್ತಾರೆ. ರಿಪಬ್ಲಿಕನ್ ಸೇನೆಯ 6 ಪಟ್ಟಣಗಳು ಸ್ಪೆನ್ ಮತ್ತು ಫ್ರಾನ್ಸಿನ ಎಲ್ಲೆಯ ಪರ್ವತಭಾಗದಲ್ಲಿ ಸಿಕ್ಕಿಬಿದ್ದಿರುತ್ತವೆ.

ವಾರ್ತಾ ವಾಹಿನಿ

ಬಂಗಾಳ ಪ್ರಾಂತಿಕ ರಾಜಕೀಯ ಪರಿಷತ್ತು

ಇದೇ ತಾ. ೪ರಲ್ಲಿ ಜಲ್‌ಪೈಗುರಿ ಎಂಬಲ್ಲಿ ಶ್ರೀ ಶರಚ್ಚಂದ್ರ ಭೋಸರ ಅಧ್ಯಕ್ಷತೆಯಲ್ಲಿ ನಡೆಯಿತು. 100ಕ್ಕಿಂತ ಹೆಚ್ಚಿನ ಪ್ರತಿನಿಧಿಗಳು ಮತ್ತು 10,000 ಮಂದಿ ಪ್ರೇಕ್ಷಕರು ನೆರೆದಿದ್ದರು. ಪಂಡಿತ ಜವಾಹರಲಾಲ ನೆಹರು, ಸರ್ದಾರ್ ವಲ್ಲಭಾಯಿ ಪಟೇಲ್, ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯನವರೇ ಮೊದಲಾದವರು ಸಂದೇಶ ಕಳುಹಿಸಿದ್ದರು. ಶ್ರೀ. ಸುಭಾಷಚಂದ್ರ ಭೋಸರು ಪರಿಷತ್ತಿನ ಚಪ್ಪರಕ್ಕೆ ಪ್ರವೇಶಿಸಿದೊಡನೆಯೇ 'ಗಾಂಧಿವಾದವು ಮೂಲೆಗುಂಪಾಗಲಿ!' ಎಂದು ಸೋಶಿಯಲಿಸ್ಟರೇ ಮೊದಲಾದವರು ಕೂಗಬ್ಬಿಸಿದರು. ಲೋಕದ ಎಲ್ಲಾ ಸ್ವಾತಂತ್ರ್ಯ ಪ್ರೇಮಿಗಳೊಂದಿಗೆ ಸಹಕರಿಸಿ ಕೆಲಸಮಾಡಲು ಹಿಂದೀ ರಾಷ್ಟ್ರೀಯ ಸಭೆಯು ಸಿದ್ಧವಿದೆಯೆಂದು ಪ್ರತಿಪಾದಿಸುವ ಸಮಯವು ಈಗ ಬಂದಿದೆ. ಹಿಂದೀಯರ ಆಕಾಂಕ್ಷೆ ಮತ್ತು ಕೋರಿಕೆಗಳನ್ನು ಲೋಕದ ಮುಂದಿಟ್ಟು ಅವುಗಳ ಸಾಧನೆಗಾಗಿ ಸಹಾಯವನ್ನು ಕೋರಬೇಕು. ಲೋಕದ ಸ್ವಾತಂತ್ರ್ಯ ಚಳವಳಿಯಲ್ಲಿ ಹಿಂದೀಯರು ಎಷ್ಟರ ಮಟ್ಟಿನ ತ್ಯಾಗ ಮಾಡಲು ಮತ್ತು ಭಾಗ ವಹಿಸಲು ಸಿದ್ಧರಿರುವರೆಂಬುದನ್ನೂ ವ್ಯಕ್ತಗೊಳಿಸಬೇಕು. ಫೇಡರೇಶನನ್ನು ಪ್ರತಿಭಟಿಸಿ ಸಮರ ಹೂಡಲು ಎಲ್ಲರೂ ಸಿದ್ಧರಾಗಬೇಕು. ಶಾಂತರೀತಿಯಲ್ಲಿ ಅದನ್ನು ಗಳಿಸಿಕೊಳ್ಳುವ ಸಂಭವ ತೋರುವುದಿಲ್ಲೆಂದು ಹೇಳಿದರು.

ಭೂಕಂದಾಯ ರಿಯಾಯಿತಿ

ಧಾನ್ಯಗಳ ಉತ್ಪತ್ತಿಯು 1347ನೇ ಫಸ್ಲಿಯಂತೆಯೇ ಇರುವುದರಿಂದ 1348ನೇ ಫಸ್ಲಿಯಂತೆಯೇ ಭೂಕಂದಾಯ ರಿಯಾಯಿತಿಯನ್ನೀಯಲಾಗುವುದು. ಈ ರಿಯಾಯಿತಿಯು ಕಡೆಯ ಕಿಸ್ತಿನಲ್ಲಿ ಕೊಡಲ್ಪಡುವುದೆಂದು ಮದ್ರಾಸ್ ಸರಕಾರದ ಪ್ರಕಟಣಾ ಖಾತೆಯ ಮಂತ್ರಿಗಳು ಪ್ರಕಟಗೊಳಿಸಿರುವರು.

ನಮ್ಮ ಕಿನ್ನಿಗೋಳಿ ಏಜಂಟರು—
ಶ್ರೀ. ಎಂ. ದೊಡ್ಡಣ್ಣಶೆಟ್ಟಿ
ಪ್ರೊ. ಭಕ್ತೋದ್ಧಾರ ಸ್ವದೇಶಿಸ್ಟೋರ್ಸ್

ಕೋಂಗ್ರೆಸ್ ದೃಷ್ಟಿ ಬದಲಾಯಿಸಬೇಕು.

ಕಾಂಗ್ರೆಸು ಅಧಿಕಾರಕ್ಕೆ ಬಂದು ಪ್ರಾಂತಿಕ ಸರಕಾರಗಳನ್ನು ನಡಿಸ ತೊಡಗಿದುದರಿಂದ ಮತ್ತು ಕಾಂಗ್ರೆಸಿನೊಳಗೆ ಸುಸಂಘಟಿತವಾದ ಎಡಬಲ ಪಕ್ಷಗಳಿದ್ದು ಅವುಗಳೊಳಗೆ ತೀವ್ರ ಪ್ರತಿಸ್ಪರ್ಧೆಯಿರುವುದರಿಂದ ಕಾಂಗ್ರೆಸ್ ಸಂಸ್ಥೆಗಳನ್ನು ವಶಪಡಿಸಿಕೊಂಡು ಅಧಿಕಾರ ಚಲಾಯಿಸಲು ಇಂದೀಗ ಬಹಳ ಹೋರಾಟ ನಡೆಯುತ್ತಿದೆ. ಕಾಂಗ್ರೆಸಿನ ವಾರ್ಷಿಕ ಮಹಾಧಿವೇಶನದ ಪ್ರತಿನಿಧಿಗಳ ಚುನಾವಣೆಯಲ್ಲಿ ತೀವ್ರ ಪ್ರತಿಸ್ಪರ್ಧೆಯುಂಟಾಗಿದೆ. ಧನ ಮತ್ತು ಜನ ಬಲದಿಂದ ಹಲವು ವ್ಯಕ್ತಿಗಳು ಕಾಂಗ್ರೆಸ್ ಸಂಸ್ಥೆಗಳನ್ನು ವಶಪಡಿಸಿಕೊಂಡು ತಮ್ಮಿಚ್ಛಾನುಸಾರ ನಡೆಸುತ್ತಿದ್ದಾರೆ. ಇದರಿಂದಾಗಿ ಕಾಂಗ್ರೆಸ್ ಕ್ಷೇತ್ರವು ಅನುಚಿತ ಹಾಗೂ ಅನೀತಿಕರ ಯುಕ್ತಿತಂತ್ರಗಳ ರಂಗಸ್ಥಳವಾಗಿ ಪರಿಣಮಿಸಿದೆ. ಇಂತಹ ಅನೀತಿಗೆ ಕಾಂಗ್ರೆಸಿನ ಈಗಿನ ಘಟನೆಯು ಸಹಾಯಕವಾಗಿರುವುದೆಂದೇ ಹೇಳಬಹುದು. ಈ ವರ್ಷ ಹಲವು ಕಡೆ ತ್ರಿಪುರಿ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಯು ಕೇವಲ ಒಂದು 'ಪ್ಲಾನಿ'ನಂತೆ ನಡೆದಿರುತ್ತದೆ. ಕೆಲವೆಡೆ ಹೊಡೆದಾಟವೇ ಮೊದಲಾದ ಗಲಾಟೆಗಳು ಕೂಡಾ ಉಂಟಾಗಿವೆ. ಒಂದೂರಿನ ಜನರು ಇನ್ನೊಂದೂರಲ್ಲಿ ನಿಂತು ಹೆಂಬರಿಕೆ ಪಡೆಯುವ ವಿಪರ್ಯಾಸ ನಡೆದಿದೆ. ಅಧಿಕಾರದಲ್ಲಿದ್ದವರು, ತಮ್ಮ ಅಧಿಕಾರವನ್ನು ಸ್ಥಿರಗೊಳಿಸಲು, ಎದುರಾಳಿಗಳು ಚುನಾವಣೆಗೇ ನಿಲ್ಲದಂತೆ ನಾನಾ ತಂತ್ರ ನಡಿಸುತ್ತಾರೆ. ಅವರಿಗನುಕೂಲವಾಗಿಯೇ ಮತ ಸಮುದಾಯ ಮತ್ತು ಓಟರರ ಪಟ್ಟಿ ತಯಾರಿಸಿಕೊಂಡು ಜನತೆಗೆ ಯಾವುದನ್ನೂ ಸರಿಯಾಗಿ ತಿಳಿಸದೆ ಅದೊಂದು ನಕಲಿಯಂತೆ ಚುನಾವಣೆಯನ್ನು ನಡಿಸಿರುತ್ತಾರೆ. ಇಂತಹ ಕುತಂತ್ರಗಳು ಇಡೀ ದೇಶದಲ್ಲೆಲ್ಲಾ ಹಲವು ಕಡೆಗಳಲ್ಲಿ ನಡೆದಿರುತ್ತವೆ. ಕಾಂಗ್ರೆಸು ಅತ್ಯಂತ ಪ್ರಜಾ ಸತ್ತಾತ್ಮಕ ಸಂಸ್ಥೆಯೆಂಬುದನ್ನೇ ಅಲ್ಲಗಳೆಯುವ ವಿಲಕ್ಷಣ ವಿಧ್ಯಮಾನಗಳು ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಗಳಲ್ಲಿ ನಡೆದಿರುತ್ತವೆ. ಅಧಿಕಾರ ಮತ್ತು ಧನ ಬಲದಿಂದ ಕೆಲವೇ ವ್ಯಕ್ತಿಗಳು ತಮಗೆ ಬೇಕಾದವರನ್ನು ಅಧಿಕಾರಕ್ಕೆ ತರಲು ನಿರಾತಂಕವಾಗಿ ಮತ್ತು ಜಯಶೀಲವಾಗಿ ಸೂತ್ರಚಾಲನೆ ನಡಿಸುವಂತಾಗಿದೆ.

ಮೊದಲಿನ ಘಟನೆಯಂತೆ ಹಳ್ಳಿ ಕಾಂಗ್ರೆಸ್ ಕಮಿಟಿಯಿಂದ ತಾಲೋಕಿಗೆ, ತಾಲೋಕಿನಿಂದ ಜಿಲ್ಲೆಗೆ, ಜಿಲ್ಲೆಯಿಂದ ಪ್ರಾಂತಕ್ಕೆ ಪ್ರತಿನಿಧಿಗಳು ಆರಿಸಲ್ಪಡುತ್ತಿದ್ದರು. ಹೊಸ ಘಟನೆಯು ಮೇರೆಗೆ ಅದು ತೆಗೆದು ಹಾಕಲ್ಪಟ್ಟು ಎಲ್ಲವಕ್ಕೂ ನೆಟ್ಟಗೆ ಚುನಾವಣೆ ನಡೆಯುವಂತಾಗಿದೆ. ಚುನಾವಣೆಯಿಂದಾಗಿ ಪ್ರತಿಕೂಲ ಪರಿಣಾಮವಾಗಿದೆ. ಕಾಂಗ್ರೆಸಿಗೆ ತಮ್ಮ ಸರ್ವಸ್ವವನ್ನೂ ಸೂಸಿ ಅನುದಿನ ದುಡಿಯುವ ಕೆಲಸಗಾರರು ಕಾಂಗ್ರೆಸಿನಿಂದ ಹೊರತಳ್ಳಲ್ಪಡುತ್ತಿದ್ದಾರೆ. ನಿಜವಾದ ಹಳ್ಳಿ ಕಮಿಟಿಗಳ ಪ್ರತಿನಿಧಿಗಳಿಗೆ ಮೇಲಿನ ಕಮಿಟಿಗಳ ಚಲನೆಯಲ್ಲಿ ಕೈಯೇ ಇಲ್ಲದಂತಾಗಿದೆ. ಪಟ್ಟಣಗಳಲ್ಲಿರುವ ಕೆಲವೇ ಮಂದಿ ತಮಗೆ ಬೇಕಾದಂತೆ ಸೂತ್ರಚಾಲನೆ ಮಾಡಿ ಕಾಂಗ್ರೆಸ್ ಸಂಸ್ಥೆಗಳನ್ನು ತಮ್ಮಿಚ್ಛಾನುಸಾರ ನಡಿಸುವಂತಾಗಿದೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

'ಗೊನೊಕಿಲರ್' (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂಜೆಕ್ಷನ್ ... ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗಿಯಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರೋಹಿಕಸ್ಸೆಂಬಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ತೆಗೆದುಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ' ಹೆಸರನ್ನೂ ಗಮನಿಸಿರಿ.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

'Sole Manufacturer Dr. D. N. JASANI, Vitalbhai Patel Road, BOMBAY 4

ಭೂಕಂದಾಯ ರಿಯಾಯಿತಿ

ದಿವಾನ್‌ಬಹದೂರ್ ಬಿ. ಮಹಾಬಲ ಹೆಗ್ಡೆಯರ ಭಾಷಣ.

(ತಾ. 31-12-1938ರಲ್ಲಿ ನಡೆದ ಸೌತ್ ಇಂಡಿಯಾ ಲಿಬರಲ್ ಫೆಡರೇಶನಿನಲ್ಲಿ ದಿವಾನ್ ಬಹದೂರು ಬಿ. ಎಂ. ಹೆಗ್ಡೆಯರು, ರಾವ್‌ಬಹದೂರ್ ಎನ್. ಆರ್. ಸಾಮಿಯಪ್ಪ ಮುದಲಿಯಾರ್, ಎಂ.ಎಲ್.ಸಿ.ಯವರು ಭೂಕಂದಾಯದ ಕುರಿತು ತಂದ ಸೂಚನೆಯನ್ನು ಅನುಮೋದಿಸಿ ಕೊಟ್ಟ ಭಾಷಣದ ಸಾರಾಂಶ.)

ಭೂಕಂದಾಯದ ಠರಾವಿನ ಸಂಬಂಧವಾಗಿ ನಾನು ಮಾತಾಡುವ ಮೊದಲು, ದಕ್ಷಿಣ ಕನ್ನಡದ ಕುರಿತು ಲಿಬರಲ್ ಫೆಡರೇಶನಿನವರ ನಡತೆಯ ವಿಷಯ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಕೆಲವು ಸಮಯದ ಮೊದಲು ನಡೆದ ಅವರ ಕಾರ್ಯ ನಿರ್ವಾಹಕ ಮಂಡಲಿಯ ಸಭೆಯಲ್ಲಿ, ದಕ್ಷಿಣ ಕನ್ನಡವನ್ನು ಬೊಂಬಾಯಿ ಪ್ರಾಂತಕ್ಕೆ ಸೇರಿಸಬಹುದೆಂದು ನಿರ್ಣಯವಾಗಿರುವುದು. ನಾನು ಸದ್ರಿ ಕಮಿಟಿಯ ಒಬ್ಬ ಮೆಂಬರನಾದರೂ ನನ್ನೊಡನೆ ಒಂದು ಮಾತೂ ಕೇಳದೆ ಈ ನಿರ್ಣಯ ಮಾಡಲಾಗಿದೆ. ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ ಸಾಂಕ್ರಾಮಿಕವು ತೀವ್ರ ಸ್ವರೂಪ ತಾಳಿ ನಮ್ಮ ಪಕ್ಷವು ಜಯಶೀಲ ಹೊಂದಲಿಲ್ಲೆಂಬುದು ನಿಜ. ಜಿಲ್ಲೆಯ ಆಗಣ ವಿಶಿಷ್ಟ ವಿದ್ಯಮಾನಗಳಿಂದಾಗಿ ಹಾಗಾಯಿತು. ಆದರೆ ಕಾಲವು ಈಗ ಬದಲಾಗುತ್ತಿದೆ. ನಾವು ಕೆಲವರು ನಿಮ್ಮೊಂದಿಗೆ ಹೋರಾಡಿ ಸುಖ ಕಷ್ಟಗಳಲ್ಲಿ ಭಾಗಿಗಳಾಗಿರುವೆವು. ಇನ್ನು ಕೆಲ ಸಮಯ, ಈಗ ಸಾರ್ವಜನಿಕ ಲಕ್ಷ್ಯವನ್ನೆಳೆದಿರುವ ಕರ್ನಾಟಕ ಪ್ರಾಂತರಚನೆಯ ವರೆಗೆ ನಮ್ಮನ್ನು ಸಹಿಸಿಕೊಳ್ಳಿರಿ.

ಭೂಕಂದಾಯ ಸಂಬಂಧವಾದ ಠರಾವಿನ ಕುರಿತು ಸೂಚಕರು ಸಮರ್ಥ ಭಾಷಣವಿತ್ತಿರುತ್ತಾರೆ. ನಾನು ಮಾರ್ಶ್ ಬೇಂಕ್ ಕಮಿಟಿಯ ವರದಿಗೆ ಸಂಬಂಧಿಸುವ ಮುಖ್ಯ ವಿಷಯಗಳಲ್ಲಿ ಕೆಲವನ್ನೆತ್ತಿ ಹೇಳುತ್ತೇನೆ. ಹಿಂದೂ ದೇಶದಲ್ಲಿ ಶೇಕಡ 75 ರಷ್ಟು ಮಂದಿ ಕೃಷಿಯ ಮೇಲೆ ಅವಲಂಬಿಸಿಕೊಂಡಿರುತ್ತಾರೆ, ಇತರರು ಒಂದಲ್ಲೊಂದು ರೀತಿಯಲ್ಲಿ ಕೃಷಿಯ ಮೇಲೆಯೇ ಹೊಂದಿರುತ್ತಾರೆ. ನಮ್ಮ ವಿದ್ಯೆ, ಬುದ್ಧಿ, ಸ್ಥಾನ ಮಾನವೆಲ್ಲಾ ಪ್ರಾಮುಖ್ಯವಾಗಿ ಕೃಷಿಯಿಂದಾಗಿ ನಮಗೆ ದೊರೆತುದಾಗಿದೆ.

ಕೃಷಿಕರ ಮೇಲಿನ ಭೂಕಂದಾಯವು ವಿಪರೀತವಾದುದೆಂಬುದನ್ನು ಎಲ್ಲರೂ ಒಪ್ಪಿರುತ್ತಾರೆ. ಹಿಂದಿನ ಮತ್ತು ಇಂದಿನ ಸರಕಾರಗಳೂ ಒಪ್ಪಿರುತ್ತವೆ. 1937ನೇ ಇಸವಿ ಎಪ್ರಿಲ್ ತಾ. 1ರಲ್ಲಿ ಹೊಸ ಸರಕಾರವು ರಾಜ್ಯಭಾರದ ಜವಾಬ್ದಾರಿ ವಹಿಸುವ ಮೊದಲು ಬಹಳವಾಗಿ ದ್ವೇಷಿಸಲ್ಪಟ್ಟ ಬ್ರಿಟಿಷ್ ಸರಕಾರ ಕೂಡಾ ಇದನ್ನೊಪ್ಪಿ ಪ್ರತಿವರ್ಷ ಭೂಕಂದಾಯ ರಿಯಾಯಿತಿಯನ್ನೀಯುತ್ತಿದ್ದಿತು. ಈ ರಿಯಾಯಿತಿಯು ಸುಮಾರು 51 ಆಗಿದ್ದು ದಕ್ಷಿಣಕನ್ನಡಕ್ಕೆ ದೊರೆಯುವ ಪ್ರಮಾಣವು ಶೇಕಡಾ 12ರಷ್ಟಾಗಿದ್ದಿತು. ರೆವಿನ್ಯೂ ಖಾತೆಯು ಜಸ್ಟಿಸ್ ಪಕ್ಷದ ಅಧೀನವಿರದೆ ಸರಕಾರವೇ ಅದರ ಆಡಳಿತ ನಡೆಸುತ್ತಿದ್ದರೂ ಭೂಕಂದಾಯ ರಿಯಾಯಿತಿ ಕೊಡಲಿಲ್ಲೆಂದು ಕಾಂಗ್ರೆಸಿನವರು ಜಸ್ಟಿಸ್ ಮಂತ್ರಿಮಂಡಲವನ್ನು ಖಂಡಿಸಿ ಭಂಗಿಸುತ್ತಿದ್ದರು. 1937ನೇ ಇಸವಿ ಎಪ್ರಿಲ್ ತಿಂಗಳಲ್ಲಿ ಜಸ್ಟಿಸ್ ಪಕ್ಷೀಯರೇ ಇಂಟರಿಮ್ ಮಂತ್ರಿಗಳಾದಾಗ, ಅವರು ಬೇರೆ ಬೇರೆ ರೀತಿಯ ಸಹಾಯಗಳ ವಾಗ್ದಾನ ಮಾಡಿದರು. ಅವುಗಳಲ್ಲಿ ಭೂಕಂದಾಯ ರಿಯಾಯಿತಿ ಮತ್ತು ಕಂದಾಯಪದ್ಧತಿಯ ವಿಚಾರಣೆಯು ಪ್ರಾಮುಖ್ಯವಾಗಿದ್ದಿತು. ಭೂಕಂದಾಯ ರಿಯಾಯಿತಿಗಾಗಿ ಅವರು ರೂ. 75 ಲಕ್ಷವನ್ನು ಪ್ರತ್ಯೇಕಿಸಿಟ್ಟರು. ಭೂಕಂದಾಯ ಪದ್ಧತಿಯ ಕುರಿತು ವಿಚಾರಿಸಿ, ಕಂದಾಯ ರಿಯಾಯಿತಿಯನ್ನು ಶಿಫಾರಸು ಮಾಡಲು ಕೂಡಲೆ ಮಾರ್ಶ್‌ಬೇಂಕ್ ಕಮಿಟಿಯನ್ನು ನೇಮಿಸಿದರು. 4 ಮಂದಿ ಅನುಭವಶಾಲಿಗಳಾದ ಸುಪ್ರಸಿದ್ಧ ಐ. ಸಿ. ಎಸ್. ಅಧಿಕಾರಿಗಳು, ನಿವೃತ್ತ ಆಕ್ಟಿಂಗ್ ಗವರ್ನರರು ಕಳೆದ ಮದ್ರಾಸ್ ಕೌನ್ಸಿಲಿನ ಅಧ್ಯಕ್ಷರಾದ ದಿವಾನಬಹದೂರ್ ಬಿ. ರಾಮಚಂದ್ರ ರೆಡ್ಡಿಯವರು, ನಿವೃತ್ತ ಜಿಲ್ಲಾ ಜಡ್ಜರಾದ ದಿವಾನಬಹದೂರ್ ಸುಬ್ಬಯ್ಯ ಮುದಲಿಯಾರರು ಮತ್ತು ನಾನು ಈ ಕಮಿಟಿಯ ಸದಸ್ಯರಾಗಿದ್ದೆವು. ಸರ್ ನೋರ್ಮನ ಮಾರ್ಶ್ ಬೇಂಕರು ಈ ಕಮಿಟಿಯ ಅಧ್ಯಕ್ಷರಿದ್ದರು. ಕಮಿಟಿಯವರು ಎಲ್ಲಾ ವಿಷಯಗಳನ್ನು ಕೂಲಂಕಷವಾಗಿ ಮತ್ತು ಆಳವಾಗಿ ವಿಚಾರಿಸಿ, ಹೆಚ್ಚಿನ ಭೂಕಂದಾಯ ರಿಯಾಯಿತಿಯನ್ನು ಶಿಫಾರಸು ಮಾಡಿ ಸರಕಾರಕ್ಕೆ ವರದಿಯನ್ನೊಪ್ಪಿಸಿದರು. 1902ರಿಂದ ಸುಮಾರು 18 ಜಿಲ್ಲೆಗಳ ಮೇಲೆ ಹೊರಿಸಲ್ಪಟ್ಟ ರಿಸೆಟ್ಲ್‌ಮೆಂಟ್ ದರಗಳು ರದ್ದು ಮಾಡಲ್ಪಟ್ಟವು. ಈ ಪ್ರಕಾರ ದಕ್ಷಿಣ ಕನ್ನಡದಲ್ಲಿ 1934ರ ರಿಸೆಟ್ಲ್‌ಮೆಂಟಿನಲ್ಲಿ ಹೆಚ್ಚಾದ ಸೇಕಡಾ 12½ಯಷ್ಟರ ಕಂದಾಯವು ರದ್ದಾಗುವದು. ದಕ್ಷಿಣ ಕನ್ನಡಿಗರು 1902ರಲ್ಲಿ ನಿಶ್ಚೈಸಲ್ಪಟ್ಟ ಕಂದಾಯವನ್ನು ಮಾತ್ರ ತೆರಬೇಕಾಗುವುದು. ಕೆಲವು ಜಿಲ್ಲೆಗಳ ನೀರಾವರಿ ಕರವು ರೂ. 1-4-0ರಷ್ಟು ಕಡಿಮೆ ಮಾಡಲ್ಪಟ್ಟಿತು. ದಕ್ಷಿಣ ಕನ್ನಡದ ದರ್ಖಾಸ್ತು ಮತ್ತು ಕರಿಮಣಸು ಕುಮರಿಗಳ ಮೇಲಿನ ಕಂದಾಯವು ರೂ. 2ಲಕ್ಷದಷ್ಟು ಕಡಿಮೆಮಾಡಲ್ಪಟ್ಟಿತು. ಕಳೆದ ಸೆಟ್ಲ್‌ಮೆಂಟಿನ ಮೊದಲು ದಕ್ಷಿಣಕನ್ನಡದಲ್ಲಿ ದರ್ಖಾಸ್ತಿಗೆ ಕಂದಾಯ ತೆರಬೇಕಾಗಿದ್ದಿಲ್ಲ ಅದನ್ನು ವರ್ಗದ ಒಂದು ಭಾಗವಾಗಿ ಪರಿಗಣಿಸಲಾಗಿತ್ತು. 1902ರಿಂದ ಅಂತಹ ಭೂಮಿಗಳ ಮೇಲೂ ಬಂಜರು ಕಂದಾಯ ಹೊರಿಸಲಾಯಿತು. ರೈತರು ಈ ಸ್ಥಳಗಳನ್ನು ದರ್ಖಾಸ್ತಿಗೆ ಪಡೆಯದೆ ನಿರ್ವಾಹವಿಲ್ಲವಾಯಿತು, ಇದರಿಂದ ಸರಕಾರಕ್ಕೆ ಸುಮಾರು 1 ಲಕ್ಷ ಕಂದಾಯ ದೊರೆಯಿತು. ನನ್ನ ಸೂಚನೆ ಮೇರೆಗೆ ಮಾರ್ಶ್ ಬೇಂಕ್ ಕಮಿಟಿಯವರು ಈ ಪ್ರಶ್ನೆಯನ್ನು ಪರಿಶೀಲಿಸಿ ದರ್ಖಾಸ್ತಿನ ಮೇಲಿನ ತೀರ್ವೆ ತೆಗೆದುಹಾಕಿ, ಮಲಬಾರಿನಂತೆಯೇ ಸಾಗುವಳಿಯಾಗದ ದರ್ಖಾಸ್ತಿಗೆ ತೆರಿಗೆ ಹೊರಿಸಬಾರದೆಂದು ಶಿಫಾರಸುಮಾಡಿದರು. ದಕ್ಷಿಣ ಕನ್ನಡದ ಕರಿಮೆಣಸು ಕುಮರಿಗಳನ್ನೂ ಮಲಬಾರಿನ ಕುಮರಿಗಳಂತೆಯೇ ಪರಿಗಣಿಸಿ ಅವುಗಳ ಮೇಲೆ ಕಂದಾಯ ಹೊರಿಸಬಾರದೆಂದು ನಿರ್ಧರಿಸಿದರು. ಭೂಕಂದಾಯದ ರೀತಿನೀತಿಗಳ ವಿಷಯದಲ್ಲಿ ಕೂಡಾ ಕಮಿಟಿಯವರು ಹಲವು ಸಲಹೆಗಳನ್ನಿತ್ತರು, ಇಂಟರಿಮ್ ಮಂತ್ರಿಗಳು ಈ ವರದಿಯ ಶಿಫಾರಸುಗಳನ್ನು ಸ್ವೀಕರಿಸಿದರು. ಆದರೆ ಅದನ್ನು ಜಾರಿಗೆ ತರಲು ಅವರು ಹೆಚ್ಚುಕಾಲ ಅಧಿಕಾರದಲ್ಲಿರಲಿಲ್ಲ. ಅನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮಂತ್ರಿಗಳು, ಮಾರ್ಶ್ ಬೇಂಕ್ ಕಮಿಟಿಯ ಸೂಚನೆಗಳನ್ನು ಜಾರಿಗೆ ತರಲಾಗುವುದೆಂದು ವ್ಯಕ್ತಗೊಳಿಸಿದರೂ ಈ ವರೆಗೆ ಆ ಕುರಿತು ಮಾಡಿದುದೇನೂ ತೋರಿಬಂದಿರುವುದಿಲ್ಲ. ಕಮಿಟಿಯ ವರದಿಯನ್ನು ಸ್ವೀಕರಿಸಲಾಗುವುದೋ, ನಿರಾಕರಿಸಲಾಗುವುದೋ ಎಂದು ಕೂಡಾ ಸ್ಪಷ್ಟವಾಗಿ ಹೇಳುವುದಿಲ್ಲ. ಕಳೆದ ವರ್ಷ ಕಲವಟ್ಟಿನ ಕಂದಾಯ ರಿಯಾಯಿತಿಯೇನೋ ಕೊಡಲ್ಪಟ್ಟದೆ. ಆದರೆ ವಾಸ್ತವವಾಗಿ ಅದು ಸೇಕಡ 12½ಗಿಂತಲೂ ಕಡಿಮೆಯಾಗಿದೆಯೆನ್ನಬಹುದು.

ಈ ವರ್ಷ ಕಂದಾಯ ರಿಯಾಯಿತಿ ಕೊಡುವ ವಿಷಯದಲ್ಲಿ ಸಂದೇಹ ತೋರಿಸುವ ರೆವಿನ್ಯೂ ಮಂತ್ರಿಗಳ ಹೇಳಿಕೆಯೊಂದರಿಂದ ನಾವೆಲ್ಲಾ ಆಶ್ಚರ್ಯಗೊಂಡಿರುತ್ತೇವೆ. ಪೂರ್ವಕರಾವಳಿಯ ಕೆಲವು ಜಿಲ್ಲೆಗಳಲ್ಲಿ ಬಿರುಗಾಳಿ ಹಾವಳಿ ಮತ್ತು ಬರಗಾಲ ಪೀಡೆಯುಂಟಾಗಿರುವುದರಿಂದ ವರ್ಷ ವರ್ಷ ಕೊಡುವ ಕಂದಾಯ ರಿಯಾಯಿತಿಯನ್ನು ಈ ವರ್ಷ ಕೊಡಲಾಗುವುದು ಸಂದೇಹಕರವೆಂದು ಅವರು ಸೂಚಿಸಿರುತ್ತಾರೆ. ಇದಕ್ಕೆ ಅರ್ಥವಿಲ್ಲ. ಕಂದಾಯವು ರೈತರಿಗೆ ಹೊರಲಾರದ ಹೊರೆಯಾಗಿ ತೀವ್ರ ಪೀಡೆಯುಂಟಾಗಿರುವಾಗ ಕೊಡಲ್ಪಟ್ಟಿರುವ ರಿಯಾಯಿತಿಯನ್ನು ಕೆಲವುಕಡೆ ಬಿರುಗಾಳಿ ಮತ್ತು ಬರಗಾಲ ಹಾವಳಿಯಾಯಿತೆಂದು ನಿರಾಕರಿಸುವುದರಲ್ಲಿ ಯಾವ ನ್ಯಾಯವಿದೆ? ಬಿರುಗಾಳಿ ಮತ್ತು ಬರಗಾಲ ಪೀಡಿತರಿಗೆ ಜನರಲ್ ಫಂಡ್ಸಿನಿಂದ ಇಲ್ಲವೆ ಸಾಲಮಾಡಿ ಸಹಾಯವೀಯಬೇಕು. ಅದಕ್ಕಾಗಿ ಬೇಡಿ, ಸಾಲಮಾಡಿ, ಅಥವಾ ಕದ್ದಾದರೂ ಹಣಪಡೆಯಬೇಕು. ಪ್ರಧಾನ ಮಂತ್ರಿಗಳು ಚಿಕ್ಕ ರೇವುಗಳ ಸುಮಾರು ರೂ. 40 ಲಕ್ಷವನ್ನು ಅಪಹರಿಸಿದ್ದಾರೆ. ಅದನ್ನವರೇ ಸುಲಿಗೆಯೆಂದು ಕರೆದಿರುತ್ತಾರೆ. ಹೀಗೆ ಸುಲಿಗೆ ಮಾಡಿದ ಸಂಪೂರ್ಣ ಹಣವನ್ನು ಬಿರುಗಾಳಿ ಹಾವಳಿ ನಿವಾರಣೆಗಾಗಿ ವಿನಿಯೋಗಿಸಬಹುದು. ಇನ್ನು ಮಂತ್ರಿಗಳೂ ಅವರ ಪಾರ್ಲಿಮೆಂಟರಿ ಸೆಕ್ರೆಟರಿಗಳೂ ಅನಾವಶ್ಯಕವಾದ ತಮ್ಮ ಸಂಚಾರಗಳನ್ನು ಕಡಿಮೆಮಾಡಿ ಸಾವಿರಾರು ರೂಪಾಯಿ ಉಳಿಸಬಹುದು.

Established] THE [1906

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	Rs. 486 Lakhs
Annual income Exceeds	Rs. 28 Lakhs
Total Assets Exceed	Rs. 100 Lakhs
Total claims paid over	Rs. 36 Lakhs.

The oldest and largest Life Assurance Company of South India, having 31 years of record service.

A POLICY IN THE UNITED INDIA *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to—

THE BRANCH MANAGER,
The United India,
Life Assurance Company Ltd.
BLOCK No. 2, Felix Pai Bazaar,
BRANCH, MANGALORE S. K.

OR

K Keshava Shenoy, M. A.
Organiser, Shantiniketan
PENTLENDPET,
MANGALORE

ಪ್ರಕಟಣೆ.

ಉಡುಪಿ ಮುನಿಸಿಪಾಲಿಟಿಯೊಳಗಿರುವ ಮಾರ್ಕೇಟಿನ ಅಂಗಡಿಕೋಣೆಗಳಲ್ಲಿ **1939-40**ನೇ ವರ್ಷಕ್ಕೆ ವರಿಗಳನ್ನು ವಸೂಲು ಮಾಡುವ ಸ್ವಾತಂತ್ರ್ಯವನ್ನು ತಾ **15-2-39**ನೇ ಬುಧವಾರ ಅಪರಾಹ್ನ ಘಂಟೆ **1**ಕ್ಕೆ ಉಡುಪಿಯಲ್ಲಿ ಉಡುಪಿ ಮುನ್ಸಿಪಲ್ ಆಫೀಸಿನಲ್ಲಿ ಉಡುಪಿ ಮುನಿಸಿಪಾಲಿಟಿ ಎಕ್ಸ್‌ಕ್ಯೂಟಿವ್ ಅಥೋರಿಟಿಯವರು ಯಾ ಅವರಿಂದ ಅಧಿಕಾರ ಹೊಂದಿದವರು ಬಹಿರಂಗವಾಗಿ ಏಲಂ ಮಾಡುವರು. ಖಾಯಿಸ್ ಉಳ್ಳವರು ಏಲಂಗೆ ನಿಲ್ಲಬಹುದು

ಏಲಂನ ಶರ್ತಗಳನ್ನು ವ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನಿಸಿಪಲ್ ಆಫೀಸಿನಲ್ಲಿ ಬಂದು ತಿಳಕೊಳ್ಳಬಹುದು.

(ಸಹಿ)
ಎ. ಲಕ್ಷ್ಮೀನಾರಾಯಣರಾವ್,
ಚೆಯರ್‌ಮೆನ್ & ಎಕ್ಸಿಕ್ಯೂಟಿವ್ ಅಥೋರಿಟಿ,
ಮುನ್ಸಿಪಲ್ ಆಫೀಸ್ ಉಡುಪಿ.
ತಾ. 6-2-1939

WANTED

Organisers in Taluka centres either on salary or commission basais or both. Influential young men need apply. Selected candidates should be prepared to deposit a sum of Rs. 100/-. For full particulars apply with stamps to Box No. 6, C/o NAVAYUGA, UDIPI.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾಗಲಾಗಿದೆ.

ಅಮೃತಾಂಜನ ಡಿಪ್ಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪ್ಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸೋಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.೭-೦-೦.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ. ಪಿ. ಸುಬ್ಬಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರದ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವನಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, *President & Manager.* — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾದ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆ ಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಒಡ್ಡುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನು ಹೆಚ್ಚಿಸುವದು. ಅಪಲ್ಲದೆ ಶರೀರ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವದು. ಬಾಟ್ಲಿ ೧ಕ್ಕೆ ರೂ 2-8-0.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಸುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager,
Kanara Printing Works,
Hampankatte, MANGALORE

೧೯೩೪ ಫೆಬ್ರವರಿಯಲ್ಲಿ ಪ್ರಕಟವಾಗಲಿರುವ ಎರಡು ಹೊಸ ಪುಸ್ತಕಗಳು

ಕರಿ ನೀರು ದೇ. ಭ. ಬ್ಯಾರಿಸ್ಟರ ಸಾವರಕರರಿಂದ ಬರೆಯಲ್ಪಟ್ಟ ರಮ್ಯ-ಭೀಷಣ ರೋಮಾಂಚಕರ ಪುಸ್ತಕದ ಕನ್ನಡ ಅನುವಾದ. ಸುಮಾರು ೪೦೦ ಪುಟ, ಸುಣುಪು ಕಾಗದ. ಬೆಲೆ ೨ರೂಪಾಯಿ

ಪನ್ನೆ ಮನೋಹರವಾದ ಐತಿಹಾಸಿಕ ನಾಟಕ ಸುಮಾರು ೮೦ ಪುಟ, ಬೆಲೆ ೬ ಆಣೆ ಶ್ರೀ ಕೇ ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ ಸೌಲಭ್ಯ. ಗ್ರಾಹಕರು ತ್ವರೆಮಾಡಿರಿ

ವಿಳಾಸ:—ಶ್ರೀ. ಶೇಷಾಚಲ ಪ್ರೆಸ್, ಪೋ ಜನಂದನ (ಪ ಪೇಠ) ಧಾರವಾಡ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ...	೧೦೦ ಮಾತ್ರೆಗಳಿಗೆ ರೂ ...—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು ಪಿ ಮೇಸ್ತ್ರ, ಗೋಲ್ಡ್ ಮೆಡಲ್ಸ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ವನವಿನೋದಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತವೆ [ಗ್ಯಾರಂಟಿ ಕೆಲಸ!

ಪೈಂಟಿಂಗ್ ಕೆಲಸ ... ಕಂಟ್ರಾಕ್ಟ್ ಕೆಲಸವನ್ನೂ ಕೈಕೊಳ್ಳಲಾಗುವದು
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ

ಪೈಂಟರ್ ಗಣಪತಿರಾವ್,

ಸೋಡೆ ಮಠದ ಲೇನ — — — ಉಡುಪಿ, ದ. ಕ.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

॥ ಶ್ರೀ ॥

ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ

ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ ! **ಅಪೂರ್ವ ರಿಯಾಯತಿ !!**

ತಾ.3-2-1939ರಿಂದ 5-3-'39ರ ವರೆಗೆ ಮಾತ್ರ.

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ
ರಿಟರ್ನ್ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇದೇ ಬರುವ ತಾರೀಕು 17—2—39ರಲ್ಲು ಶ್ರೀಧರ್ಮಸ್ಥಳದಲ್ಲಿ ಶ್ರೀಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದು ಹೋಗತಕ್ಕ ಯಾವತ್ತು ಯಾತ್ರಾರ್ಥಿಗಳಿಗೆ ನಮ್ಮ ಲ್ಯಾನುಗಳ ಯಾವತ್ತು ಸ್ಟೇಶನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓% ರಿಯಾಯಿತಿಯಿಂದ ರಿಟರ್ನ ಟಿಕೇಟುಗಳನ್ನು ಕೊಡುವಂತೆ ಏರ್ಪಾಟು ಮಾಡಿರುವೆವು.

N. B. **ಪ್ರಯಾಣವು ಮೇಲೆ ಸೂಚಿಸಿದ ಮಾಯಿದೆಯೊಳಗೆ ಮುಗಿಯತಕ್ಕದಾಗಿದೆ**

ಇಂತಹ ಅಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

Supply Agency Limited.
(BANKERS)
UDIPI

Directors:—

1. **Sri. Miyala Narasimhachar** (Chairman.)
2. **Dr. T. Madhava Pai**, M. B. & B. S.
3. **Dr. K. L Aithala**, M. B. & B. S
4. **Sri. B. Krishnaya Hegde.**
5. **Sri. A. B. Krishnaraj.**
6. **Sri. S. U. Paniady**, (Managing Director.)

Authorised Capital	**Rs 1,00,000**
Subscribed & Paid up	**Rs. 30,760**
Reserves	**Rs 1,070**

RATE OF INTEREST FOR FIXED DEPOSITS.

3 to 6	Months	4% p. a.
7 to 11	„	5% „
12 to 18	„	6% „

Special rates for long term deposits will be quoted on application.

WRITE FOR PARTICULARS TO

THE MANAGING DIRECTOR.

General Supplies Limited.
Printers, Publishers, General Merchants etc.
UDIPI

Directors:—

1. **Dr. K. L. Aithala**, M. B. & B. S. (Chairman
2. **Sri R. S. Shenoy,**
3. **Sri. K. Honnaya Shetty,**
4. **Sri. N. Gururaj Udpa,**
5. **Sri. S. U. Paniady** (*Managing Director*)

All sorts of Printing works, wholesale & retail sales, every Agency business is undertaken in following institutions.

Thulunad Press,
Manipal Power Press,
Sri Bharata Vastu Mandira,
Thulunad Stationery Mart.

Write for full Particulars to

THE MANAGING DIRECTOR, or
THE MANAGER OF ABOVE INSTITUTIONS.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No M 3618

NAVAYUGA

ನವಯುಗ

A great Secret Fizzled out!

The ANTARANGA

Yugadi Special 1939

What When ? No more speculation: The Cat is out of the Bag! It has become an open secret that the bumper volume of Antaranga Yugadi Special will be out on 16-4-1939, with tens of interesting articles, hundreds of bewitching illustrations and numerous other bright features to cheer you and your happy homes . . . . . .

ADVERTISEMENT CHARGES

Full Page	Rs 25/-	Half Page	Rs 13/-
Quarter Page	„ 7/	⅛ Page	„ 4/-
Col. Inch	„ 2/-	Cover Last	„ 50/-
	Cover Inside	Rs 35/-	

Copies Exceed 10,000

This is a golden opportunity for all advertisers. This special Yugadi number will certainly serve as the *best medium* to carry your message to the 11 Millions of Kannadigas throughout the length and breadth of Karnataka.

For particulars write to

The Manager ANTARANGA **Udipi, S. India.**

The Canara Industrial & Banking Syndicate, Limited.

(INCORPORATED IN BRITISH INDIA. LIABILITY OF SHAREHOLDERS LIMITED.)

ESTD. 1925

Head Office:- **"Mukund Nivas", UDIPI, S. India.**

NOTICE.

The Share Transfer Books of the Syndicate will remain closed from 10th February, 1939 to 6th March, 1939 both days inclusive.

UDIPI
5-2-'39

T. M. A. PAI,
CHAIRMAN.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು
ತೈಲ ಮತ್ತು ಅರಿಷ್ಟಾಸವಗಳು

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ
ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಖ
ದದ್ರು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರ್ಕ
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE:
MANGALORE

BRANCHES:
Udipi, Coondapoor, Kaup & Karkal

Fixed deposits are now received at all the offices of the Bank at the following terms:—

3 Months Fixed Deposits at 3 p. c. per annum.
6 Months } 9 months } Fixed Deposits at 3½ p. c. per annum
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

ರೂ. 1—8—0ಕ್ಕೆ 3 ವಾಚುಗಳು ಮತ್ತು 495 ಮನೋಹರ ವಸ್ತುಗಳು.



ನಮ್ಮ ರೂ 1—8—0 ಕ್ರಯದ 16 ಸಣ್ಣ ಸೀಸೆ "ಒಟ್ಟೋರೋಸ"ನ್ನು ಕೊಂಡು ಕೊಳ್ಳುವವರಿಗೆ ಒಂದು ಬಂಗಾರದ ಹವಿಶ್ಮ ರಿಸ್ಟುವಾಚು, ಒಂದು ಪೌಡರ್ ಪೇಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿ ಕಡ್ಡಿಯ ಕೇಸು, ಒಂದು ಸಿಗರೇಟುಲೈಟು, ಒಂದು ಕರವಸ್ತ್ರ, ಒಂದು ಉಂಗುರ, ಕತ್ತರಿ ಯೊಂದು, ಸರಪಣಿಯುಳ್ಳ ಚಾವಿ ಒಂದು, ಒಂದು ಪೆನ್ಸಿಲ್ ಸ್ಟ್ರ, 666 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರೆಂಟಿಯುರುವ ಭದ್ರ ಮೆಶಿನರಿಯುಳ್ಳ ಗಡಿಯಾರ, ಒಂದು ಫೌಂಟೆನ್ ಪೇನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು 14 ಆಣೆ ಹೆಚ್ಚಿಗೆ.

Oriental Fancy Stores, S. C. E 90.

Post Box. No. 12204, **CALCUTTA.**

ESTD. 1921
FOUNDER
Sri. A B SHETTY, M.L.A.
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೨೪ | ಉಡುಪಿ, ಗುರುವಾರ ೧೬-೨-೧೯೩೯ Udipi, Thursday 16—2—1939 | Vol. XVIII No. 24

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೮—೦
೬ ತಿಂಗಳಿಗೆ ರೂ. ೧—೧೨—೦
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ. ಪಿ. ಕ್ರಮವನ್ನು ನಿಲ್ಲಿಸಲಾಗಿದೆ

ಬರೋಡಾ ಮಹಾರಾಜರು ತೀರಿಕೊಂಡರು

ಬರೋಡೆಯ ಮಹಾರಾಜರಾದ ಸಯ್ಯಾಜಿರಾವ್ ಗಾಯಕವಾಡರವರು ಕಳೆದ ವಾರ ದಿವಂಗತರಾದರು. ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ಸಿಂಹಾಸನವನ್ನೇರಿ ೭೩ನೇ ವಯಸ್ಸಿನ ತನಕ ಐವತ್ತೈದು ವರ್ಷಗಳ ದೀರ್ಘಕಾಲ ರಾಜ್ಯಾಡಳಿತ ನೋಡಿದರು. ಈ ಅವಧಿಯಲ್ಲಿ ಇಪ್ಪತ್ತೈದು ಸಲ ಯುರೋಪ್ ಖಂಡದ ಪ್ರವಾಸವನ್ನೂ ಪೂರಾವರ್ತಿ ಜಪಾನ ಸಂದರ್ಶನೆಯನ್ನೂ ಎರಡು ಸಲ ಅಮೇರಿಕ ಸಂಚಾರವನ್ನೂ ಮಾಡಿದ್ದರು. ಈ ಸಂಚಾರಗಳ ಅನುಭವದಿಂದ ತನ್ನ ರಾಜ್ಯದಲ್ಲಿ ಹಲವು ಕ್ಷೇಮಕಾರಕ ವ್ಯವಸ್ಥೆಗಳನ್ನು ಪ್ರಯೋಗದಲ್ಲಿ ತಂದು ಇಂಡಿಯಾದ ಮೊತ್ತಮೊದಲ ಆದರ್ಶ ಸಂಸ್ಥಾನವೆಂದರೆ ಬರೋಡಾ ಎಂಬ ಖ್ಯಾತಿಯನ್ನು ಹೊಂದಿದ್ದರು. ವಿಶೇಷವಾಗಿ ತಮ್ಮ ಪ್ರಜಾವರ್ಗದಲ್ಲಿ ವಿದ್ಯಾಪ್ರಚಾರದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿದ್ದರು. ಪ್ರಜಾಭ್ಯುದಯ ದೃಷ್ಟಿಯಿಂದ ರಾಜ್ಯಾಡಳಿತದಲ್ಲಿಯೂ ಹಲವು ಸುಧಾರಣೆಗಳನ್ನು ಆಚರಣೆಗೆ ತಂದು ಪ್ರಜಾಪ್ರೀತ ರಾಜರಾಗಿ ಬಾಳಿ ಕೀರ್ತಿಶೇಷರಾಗಿ ಉಳಿದರು. ಕಳೆದ ನವಂಬರದಲ್ಲಿ ತನ್ನ ಇಪ್ಪತ್ತೈದನೆಯ ಯುರೋಪಿಯ ಸಂಚಾರವನ್ನು ಮುಗಿಸಿ ಸ್ವದೇಶಕ್ಕೆ ಮುಟ್ಟಿದೊಡನೆಯೇ ದೇಹಾಲಸ್ಯದಿಂದ ಹಾಸಿಗೆ ಹಿಡಿದಿದ್ದರು. ಆದರಿಂದ ರಾಜರು ಪಾರಾಗಲಿಲ್ಲ. ಇನ್ನು ಸಿಂಹಾಸನಾರೂಢರಾಗುವವರು ರಾಜರ ಹಿರಿಯ ಮಗ ೩೩ವರುಷ ಪ್ರಾಯದ ಪ್ರತಾಪಸಿಂಹ ಎಂಬವರು. ಇವರು ಈಗಾಗಲೇ ರಾಜ್ಯಾಡಳಿತೆಯ ಹಲವು ಖಾತೆಗಳಲ್ಲಿ ಅಧಿಕಾರಿಗಳಾಗಿ ರಾಜ್ಯಭಾರದ ಅನುಭವವನ್ನೂ ಪ್ರಜಾವರ್ಗದ ಜೀವನದ ಸುಖಕಷ್ಟ ಕುಂದುಕೊರತೆಗಳ ಅರಿವನ್ನೂ ಪ್ರಯೋಗಾತ್ಮಕವಾಗಿ ಹೊಂದಿರುವರು. ಆದು ಕಾರಣ ಇಂದಿನ ವಾತಾವರಣಕ್ಕೆ ಸರಿಹೋಗುವಂತೆ ರಾಜ್ಯಪರಿಪಾಲನೆ ಮಾಡುತ್ತ ಪ್ರಜೆಗಳಿಗಾಗಿ ರಾಜನೆಂಬ ತತ್ವವನ್ನು ಕೃತಿಯಲ್ಲಿ ತೋರಿಸಿಯಾರೆಂದು ನಿರೀಕ್ಷೆಯಿದೆ.

ಪಾಟಿಯಾಲಾ ಮಹಾರಾಜರ ಆಶ್ವಾಸನೆ

ಪ್ರಜಾಕೋಟಿಯ ಆಶಾಕಾಂಕ್ಷೆಗಳಲ್ಲಿ ಹಾಗೂ ಆವಶ್ಯಕತೆಗಳಲ್ಲಿ ಸಹಾನುಭೂತಿಪರನಾದ ಯಾವ ರಾಜನಾಗಲೀ ತನ್ನ ರಾಜ್ಯಭಾರ ಕ್ರಮದಲ್ಲಿ ಪ್ರಜೆಗಳ ಸಹಕಾರ ಸಂಪರ್ಕಗಳನ್ನು ಕೂಡಿಸಿಕೊಳ್ಳುವ ಆವಶ್ಯಕತೆಯನ್ನು ಅಲಕ್ಷಿಸಲಾರನು. ಪರಿವರ್ತಿತವಾಗುವ ವಿದ್ಯಮಾನಗಳಿಗನುಸಾರವಾಗಿ ಸುಧಾರಿಸಿಕೊಳ್ಳುವುದು ಚೇತನಯುಕ್ತವಾಗಿರುವ ರಾಜ್ಯಭಾರದ ಪ್ರಾಮುಖ್ಯ ಲಕ್ಷಣವಾಗಿರತಕ್ಕದು. ಈ ಧ್ಯೇಯದಿಂದಲೇ ಪಾಟಿಯಾಲದ ರಾಜ್ಯಾಡಳಿತೆಯಲ್ಲಿ ಪ್ರಜೆಗಳೂ ಶಾಸನನಿರ್ಮಾಣನಿರ್ವಾಹಕ ವಿಷಯಗಳಲ್ಲಿ ಹೊಣೆಗಾರಿಕೆ ಹೊರುವಂತೆ ರೀತಿನೀತಿಗಳ ಸೂತ್ರ ನಿರ್ಮಾಣಕ್ಕಾಗಿ ಒಂದು ಸಮಿತಿಯನ್ನು ಏರ್ಪಡಿಸಿಯದೆ. ಅದರ ವರದಿಯು ಕ್ಷಿಪ್ರದಲ್ಲೇ ಹೊರಡಲಿರುವುದು. ಪ್ರಜಾಭ್ಯುದಯ, ಸಂಸ್ಥಾನದ ಭದ್ರತೆ, ನವಯುಗದ ಸ್ಫೂರ್ತಿ, ಈ ಮೂರೇ ನಮ್ಮನ್ನು ಮುನ್ನಡೆಯಿಸುವ ಶಕ್ತಿತ್ರಯಗಳು. ಆದರೆ ಸುಧಾರಣೆಗಳೆಲ್ಲ ಶಾಂತರೀತಿಯಿಂದ ಪ್ರಗತಿ ಪಥದಿಂದ ಮುಂದುವರಿಯಬೇಕಲ್ಲದೆ ಕ್ರಾಂತಿ ಮಾರ್ಗದಿಂದಲ್ಲ ಎಂದು ರಾಜರು ಲಾಹೋರಿನ ಸಿಖ್ಖರ ನ್ಯಾಶನಲ್ ಕಾಲೇಜಿನಲ್ಲಿ ಅವರಿಗಿತ್ತ ಸನ್ಮಾನ ಕೂಟದಂದು ಪ್ರಜಾ ಪ್ರಾತಿನಿಧ್ಯದ ರಾಜ್ಯಭಾರ ಕ್ರಮವನ್ನು ಪ್ರಯೋಗದಲ್ಲಿ ತರುವ ತನ್ನ ಮನದೊಲವನ್ನು ತೋರಿ ಆಶ್ವಾಸನೆಯನ್ನು ಕೊಟ್ಟಿರುವರು.

ವಾರದ ವಿಚಾರ

ತ್ರಿಪುರಿಯಲ್ಲಿ ಗಾಂಧಿಗಳ 'ಗುಮ್ಮಟ'ವನ್ನು ಕಟ್ಟುವುದಿಲ್ಲ

ತ್ರಿಪುರಿಯ ಕಾಂಗ್ರೆಸ್ಸು ಜರಗುವ ಕಾಲಕ್ಕೆ ಸರಿಯಾಗಿ ಅಲ್ಲಿಯ ಬೆಟ್ಟವೊಂದರ ಮೇಲೆ ೭೫ ಅಡಿ ಎತ್ತರದ ಗಾಂಧಿ ಮೂರ್ತಿಯನ್ನು ಕಾಂಕ್ರೀಟಿನಿಂದ ನಿರ್ಮಿಸಿ ನಿಲ್ಲಿಸಬೇಕೆಂದೊಂದು ಸೂಚನೆಯಿತ್ತಷ್ಟೆ. ಅದಕ್ಕೆ ,—, ಸಾವಿರ ರೂಪಾಯಿ ವೆಚ್ಚಮಾಡಲೂ ಗಾಂಧಿ ಭಕ್ತರು ಸಿದ್ಧರಾಗಿದ್ದರು. ಆದರೆ ಗಾಂಧಿಜಿಗಳೇ ಅಂತಹ ಹುಚ್ಚಾಟದ ವೆಚ್ಚಕ್ಕೆ ಕೈಯಿಕ್ಕಬಾರದಾಗಿ ಹೇಳಿದುದರಿಂದ ಭಕ್ತರ ಮನೋರಥ ನೆರವೇರುವ ಹಾಗಿಲ್ಲ

ಹಿಂದೂ ಮುಸ್ಲಿಮ್ ಐಕ್ಯಸ್ಥಾಪನೆಗೆ ಹೊಸದೊಂದು ಯೋಜನೆ

ಬ್ರಾಹ್ಮಣ, ಲಿಂಗಾಯಿತ, ಮುಸಲ್ಮಾನ ಹೀಗೆ ಮೂವರು ಒಂದುಗೂಡಿ ಗೇದು ಜೀವನ ನಡೆಯಿಸುತ್ತ ಸೋದರಭಾವವನ್ನು ಮನಗಾಣುವಂತೆ ಮೊದಲಾಗಿ ಚಿಕ್ಕ ವಸಾಹತನ್ನು ಸ್ಥಾಪಿಸುವುದು. ಅನೇಲೆ ಅದು ಯಶಸ್ವಿಯಾದಂತೆಲ್ಲ ಅದೇ ಪ್ರಮಾಣದಲ್ಲಿ ಕ್ರಮಶಃ ಹೆಚ್ಚು ಹೆಚ್ಚು ಜನರನ್ನು ನೆಲೆಯಾಗಲು ಬಿಡುತ್ತ ವಸಾಹತನ್ನು ವಿಸ್ತಾರಗೊಳಿಸುವುದು. ಇದೇ ಹೊಸ ಯೋಜನೆ. ಇದರ ಜನಕರು ಮುಂಬಾಯಿ ಶಾಸನ ಸಭಾ ಸದಸ್ಯರಾದ ಹುಬ್ಬಳ್ಳಿಯ ಸರದಾರ್ ಮಹಬೂಬ್ ಅಲಿಖಾನ್ ಸವಣೂರರವರು. ಈ ಯೋಜನೆಯಲ್ಲಿ ಹರಿಜನನೊಬ್ಬನನ್ನೂ ಸೇರಿಸಬೇಕೆಂಬುದು ಖಾನರಿಗೇಕೆ ತೋರಲಿಲ್ಲವೊ! ಈ ಕಾರ್ಯಾರಂಭಕ್ಕಾಗಿ ಹುಬ್ಬಳ್ಳಿಯಿಂದ ೧೮ ಮೈಲು ದೂರದಲ್ಲಿ ೪೦ ಎಕ್ರೆ ಫಲವತ್ತಾದ ಸ್ಥಳವನ್ನು 'ಮಹಮ್ಮದ್‌ಬಾಗ್' ಎಂಬ ನಾಮಕರಣಮಾಡಿ ವಸಾಹತನ್ನು ಸ್ಥಾಪನೆಮಾಡುವರಂತೆ. ಚುನಾಯಿತರಾಗುವ ಮೂರು ಜಾತಿಯ ಮೂವರು ಆರು ತಿಂಗಳು ಬೊಂಬಾಯಿಯ ಸರಕಾರಿ ಕೃಷಿಶಾಲೆಯಲ್ಲಿ ಶಿಕ್ಷಣ ಪಡೆದು ಬರತಕ್ಕದ್ದು. ಆನಂತರ ಅವರಿಗೆ ಬೇಸಾಯವೃತ್ತಿಗೆ ಬೇಕಾದ ಬೀಜ, ಎತ್ತು, ನೇಗಿಲು ಮುಂತಾದ ಸಲಕರಣೆಗಳು ಕೊಡಲ್ಪಡುವವು. ಅವರು ಆ ಕ್ಷೇತ್ರದಲ್ಲಿ ಸಮರಸರಾಗಿ ದುಡಿದು ಜೀವಿಸಲು ಕಲಿಯಬೇಕು. ವಸಾಹತು ವಿಶಾಲವಾದಂತೆಲ್ಲ ವಿಶೇಷ ಸೌಕರ್ಯ ಸವಲತ್ತುಗಳನ್ನು ಒದಗಿಸಿ ಕೊಡುತ್ತ ಕೊನೆಗೆ ಕಾಲಕ್ರಮದಲ್ಲಿ ಹಿಂದೂದೇವಾಲಯವೂ ಮಸೀದಿಯೂ ಕಟ್ಟಲ್ಪಡುವುವಂತೆ. ಆಮೇಲೆ ದೇವರ ಹೆಸರಲ್ಲಿ ಯಥಾಪ್ರಕಾರ ದೊಣ್ಣೆ ಕತ್ತಿ ರಕ್ತಪಾತ ಬಾರದೋ? ಅಂತೂ ಬಾಯಿಮಾತಿನ ಹಿಂದೂ ಮುಸ್ಲೀಮ್ ಐಕ್ಯತೆಗಿಂತ ಪ್ರಯೋಗಾತ್ಮಕವಾದ ಈ ಯೋಜನೆಯು ಕುತೂಹಲ ವಿಶಿಷ್ಟವಾಗಿದೆ.

ಸರಕಾರಿ ನೌಕರರ ಸಂಬಳ ಕಡಿತದ ಠರಾವು—ಡಿಲ್ಲಿಯ ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ

ಒಂದು ನೂರು ರೂಪಾಯಿಗೆ ಮಿಕ್ಕಿದ ಸಂಬಳವುಳ್ಳ ಎಲ್ಲಾ ತರದ ಸರಕಾರಿ ನೌಕರರ ಸಂಬಳಗಳಲ್ಲಿ ಕಡಿತವಾಗಬೇಕೆಂದೂ ಅದು ಇದೇ ಬರುವ ಎಪ್ರಿಲ್ ತಾ. ೧ರಿಂದ ಪ್ರಯೋಗದಲ್ಲಿ ಬರತಕ್ಕದೆಂದೂ ಶ್ರೀ. ಸ್ವಾಮಿ ವೆಂಕಟಾಚಲಂ ಚೆಟ್ಟಿಯಾರರು ಡಿಲ್ಲಿಯ ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಠರಾವನ್ನು ಕಳೆದ ವಾರ ಸಭೆಯ ಮುಂದಿಟ್ಟರು. ಪಂಡಿತ ಲಕ್ಷ್ಮೀಕಾಂತ ಮಿಶ್ರರು ಕಡಿತವು ರೂ. ೨೦೦ಯಾ ಅದಕ್ಕಿಂತ ಮೇಲ್ಪಟ್ಟ ಸಂಬಳಕ್ಕೆ ಪ್ರಯೋಗಿಸಲ್ಪಡಬೇಕೆಂದು ತಿದ್ದುಪಡಿ ಸೂಚನೆಯನ್ನು ತಂದರು. ತಿದ್ದುಪಡಿಯು ಅಂಗೀಕೃತವಾದೊಡನೆ ಈ ಠರಾವಿನ ವಿಷಯ ಒಂದೂವರೆ ತಾಸಿನ ಚರ್ಚೆ ನಡೆಯಿತು.

THE UDIPI BANK LTD.

ನಿರಖು ಠೇವಣಾತಿ (ಡಿಪೋಜಿಟು)ಗಳು

ಸಾ. ಶೇ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ

ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100/-ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ಫೆಡರೇಷನ್ಸ್ ಮೆಂಬರರಾದ ಒನರೇಬಲ್ ಸರ್. ಜೋರ್ಜ್ ಗ್ರಿಗ್ಗರವರು ಮುಂದಿನ ಬಜೆಟ್ಟಿಗೆ ಸಂಬಂಧಪಟ್ಟ ಈ ವಿಷಯದಲ್ಲಿ ತಾನು ಯಾವ ಅಭಿಪ್ರಾಯವನ್ನೂ ಕೊಡಲು ಸಿದ್ಧನಿಲ್ಲವೆಂದರು. ತಾನಿದಕ್ಕೆ ಸೈಯೆಂದರೆ ಬಜೆಟ್ಟಿನಲ್ಲಿ ಕಡಿತವು ಅಡಕವಾಗಿದೆಯೆಂದೂ ವಿರೋಧಿಸಿದರೆ ಅಂತಹ ಸಂದರ್ಭವೇ ಇಲ್ಲವೆಂದೂ ಗ್ರಹಿಸಲ್ಪಡುವುದರಿಂದ ಬಜೆಟ್ಟಿಗೆ ಅನ್ವಯಿಸುವ ಸಲಹೆ ಸೂಚನೆ ಠರಾವುಗಳು ಮುಂದಾಗಿ ನಿರೀಕ್ಷಿಸಲ್ಪಡಲಾಗುವುದಿಲ್ಲವೆಂದು ಮಾತ್ರ ಹೇಳುವೆನೆಂದರು. ಅಂತೂ ಠರಾವು ತಿದ್ದುಪಡಿಯೊಂದಿಗೆ ಪಕ್ಷಭೇದವಿಲ್ಲದೆ ಮಾನ್ಯವಾಯಿತು. ಸರಕಾರಿ ಪಕ್ಷವು ಮೌನವ್ರತ ತಾಳಿತ್ತು.

ರಾಜಕೋಟೆ ಮತ್ತು ಜಯಪುರಗಳ ಹೋರಾಟಗಳಲ್ಲಿ ಭಿನ್ನತೆಯೇನು? ಗಾಂಧಿಜೀಯವರ ಹೇಳಿಕೆ.

ಈ ವಿಷಯದಲ್ಲಿ ಗಾಂಧೀಜಿಯವರು 'ಹರಿಜನ' ಪತ್ರಿಕೆಯಲ್ಲಿ ಹೀಗೆ ಬರೆದಿರುತ್ತಾರೆ-ರಾಜಕೋಟೆಯ ಪ್ರಜೆಗಳ ಹೋರಾಟವೆಂದರೆ, ರಾಜಾಶ್ರಯದಲ್ಲಿ ಪ್ರಜಾಪ್ರತಿನಿಧಿಪ್ರಭುತ್ವವುಳ್ಳ ರಾಜ್ಯಾಡಳಿತೆ ಕ್ರಮವನ್ನು ಸ್ಥಾಪಿಸುವನೆಂದು ರಾಜನಿತ್ತ ವಾಗ್ದಾನವನ್ನು ಪರಿಪಾಲಿಸಿಕೊಡಬೇಕೆಂದು ಪ್ರಜಾಜನರ ಕಾದಾಟ. ಹಾಗಾಗದಿದ್ದರೆ ಅಲ್ಲಿಯ ಬ್ರಿಟಿಷ್ ರೆಸಿಡೆಂಟನ ದಬ್ಬಾಳಿಕೆಯ ಸೂತ್ರಚಾಲನೆಯಿಂದ ಪ್ರಜೆಗಳಿಗೆ ಉಳಿಗಾಲವಿಲ್ಲ. ಆದುದರಿಂದ ರಾಜಕೋಟೆಯ ಪ್ರಶ್ನೆಯು ಮಹತ್ವದ್ದು, ವ್ಯಾಪಕವಾದುದು, ವಿಶೇಷ ಪರಿಣಾಮಕಾರಿಯಾದುದು.

ಜಯಪುರದ ಪ್ರಶ್ನೆಯು ಅಷ್ಟು ವ್ಯಾಪಕವಾದುದೂ ಮಹತ್ವದ್ದೂ ಅಲ್ಲ. ಜಯಪುರದ ಪ್ರಜೆಗಳ ಹಿಂವಾದ ರಾಜಕೀಯ ಸಂಘವನ್ನು ಕಾಯಿದೆಗೆ ವಿರೋಧವಾದ ಸಂಸ್ಥೆಯೆಂದು ಅಲ್ಲಿಯ ಸರಕಾರವು ಜಾಹೀರುಮಾಡಿದೆ. ಜಯಪುರದ ಪ್ರಜೆ ಹಾಗೂ ನಿವಾಸಿಕರಾದ ಅಧ್ಯಕ್ಷರನ್ನು ಬಹಿಷ್ಕಾರಕ್ಕೆ ಹಾಕಿದೆ. ಆದುದರಿಂದ ಈ ಬಹಿಷ್ಕಾರವನ್ನು ತೆಗೆದುಹಾಕಿ ಪ್ರಜೆಗಳು ಸಂಘದ ಸ್ಥಾಪನೆಮಾಡುವ ಸಭೆಗೂಡುವಂತಾದ ಸಾಮಾನ್ಯ ಹಕ್ಕು ಸವಲತ್ತುಗಳನ್ನು ಕೊಟ್ಟ ಕೂಡಲೇ ಜಯಪುರದ ಪ್ರಶ್ನೆಯು ತಾನಾಗಿ ನ್ಯಾಯವಾಗುವುದು. ಆದರೂ ಅಲ್ಲಿ ಪ್ರಧಾನ ಸಚಿವರಾಗಿರುವ ಬ್ರಿಟಿಷ್ ಗೃಹಸ್ಥನ ಮೂಲಕವಾಗಿ ಬ್ರಿಟಿಷ ಸಿಂಹದ ನಖದ ತೀಕ್ಷ್ಣತೆಯ ಲಕ್ಷಣವು ಕಾಣುತ್ತದೆ.

ಮಿಲಿಯಗಟ್ಟಳೆಯಲ್ಲಿ ಗೋಣಿಚೀಲಗಳು ಬ್ರಿಟನಿಗೆ ಬೇಕಾಗಿವೆ.

ಈಗಾಗಲೇ ಬ್ರಿಟಿಷ ಸರಕಾರವು ಇನ್ನೂರು ಮಿಲಿಯ ಗೋಣಿಚೀಲಗಳಿಗಾಗಿ ಕಲ್ಕತ್ತದ ಗೋಣಿನಾರು ಕಾರ್ಖಾನೆಗಳಿಗೆ ಆರ್ಡರು ಕೊಟ್ಟಿದೆ. ಇದು ಬರೇ ಮೊತ್ತ ಮೊದಲಿನ ಬೇಡಿಕೆಯೆಂದೂ ಇನ್ನೂ ಹೆಚ್ಚಿನ ಆರ್ಡರುಗಳು ಬರಲಿಕ್ಕಿವೆಯೆಂದೂ ನಿರೀಕ್ಷೆ. ಫ್ರಾನ್ಸು ಸಹ ಇಂಡಿಯದ ಗೋಣಿಚೀಲಗಳಿಗೆ ಗಿರಾಕಿಯಾಗಬಹುದೆಂದು ಯೋಚಿಸಲಾಗಿದೆ. ಈ ಚೀಲಗಳಲ್ಲಿ ಹೊಯಿಗೆ ತುಂಬಿಸಿ ಗೋಡೆ ಹಾಕಿ ಬೋಂಬು ಗುಂಡುಗಳ ಹೊಡೆತದಿಂದ ತಪ್ಪಿಸಿಕೊಳ್ಳಲಿಕ್ಕೆ ಆತ್ಮರಕ್ಷಣೆಯ ಯುದ್ಧದ ಪೂರ್ವ ಸನ್ನಾಹಕ್ಕಾಗಿ ಬ್ರಿಟಿಷ ಸರಕಾರವು ಚೀಲ ಸಂಗ್ರಹ ಮಾಡತೊಡಗಿರುವುದು.

ಸಾವಿರಗಟ್ಟಳೆ ಎತ್ತು ಕೋಣಗಳ ಬಲಿಗೊಡುವುದನ್ನು ನಿಲ್ಲಿಸಿದರು

ಗಯೆಯ ಕಾಳೇಶ್ವರೀ ದೇವಿಗೆ ವಸಂತ ಪಂಚಮಿಯ ದಿನ ಸುಮಾರು ಒಂದು ಸಾವಿರ ಎತ್ತು ಕೋಣಗಳನ್ನು ಆಹುತಿಗೊಡುವ ವಾಡಿಕೆ. ಕಳೆದ ಪಂಚಮಿಯಲ್ಲಿ ಪ್ರಾಣಿದಯಾ ಸಂಘದವರ ಪರಿಣಾಮಕಾರಿಯಾದ ಪ್ರಚಾರಕಾರ್ಯದಿಂದಾಗಿ ಒಂದೇ ಒಂದು ಎತ್ತಿನ ಕತ್ತೂ ಕಡಿಯಲ್ಪಡಲಿಲ್ಲ. ವಿವಿಧ ಹಬ್ಬಗಳ ಕಾಲಗಳಲ್ಲಿಂದು ವರುಷದಲ್ಲಿ ಆ ದೇವಿಯ ಮುಂದೆ ನಡೆಯುತ್ತಲಿದ್ದ ಇಪ್ಪತ್ತು ಸಾವಿರ ಪಶು ವಧೆಯೂ ಹೀಗೆಯೇ ನಿಂತುಹೋದೀತೆಂದು ನಿರೀಕ್ಷಿಸಲಾಗಿದೆ. ಗಯಾ ಜಿಲ್ಲೆಯ ಪ್ರಾಣಿದಯಾ ಸಂಘದವರ ಪ್ರಚಾರಕಾರ್ಯವು ಮಾತಿನಲ್ಲೇ ಪರ್ಯವಸಾನವಾಗದೆ ಕೃತಿಯಲ್ಲಿಯೂ ಪರಿಣಾಮಕಾರಿಯಾದುದು ಸ್ತುತ್ಯ.

ಇಲೆಕ್ಟ್ರಿಕ್ ಕಂಪೆನಿಯ ಮೇಲೆ ವಕೀಲರ ದಾವ

[illegible] ಇಲೆಕ್ಟ್ರಿಕ್ ಸಪ್ಲೈ ಕಂಪೆನಿಯ ಮೇಲೆ ಅಲ್ಲಿಯ ವಕೀಲರೊಬ್ಬರು ನಷ್ಟದಾವೆ ಹೂಡಿದ್ದಾರೆ. ವಸಂತಪಂಚಮಿಯ ದಿನ ಆ ವಕೀಲರು ತಮ್ಮ ಮನೆಯಲ್ಲಿ ಪೂಜೆಭೋಜನಾದಿಗಳ ವ್ಯವಸ್ಥೆಯನ್ನು ಮಾಡಿ ಬಂಧುಮಿತ್ರರುಗಳನ್ನು ಆಮಂತ್ರಿಸಿದ್ದರು. ಆ ಸಮಾರಂಭವು ನಡೆಯಬೇಕಾಗಿದ್ದ ಸಾಯಂಕಾಲ ಕಂಪೆನಿಯವರು ಮುಂದಾಗಿ ತಿಳಿಸದೆ ನ್ಯಾಯವಿರುದ್ಧವಾಗಿ ಅವರ ಮನೆಯ ಇಲೆಕ್ಟ್ರಿಕ್ ಜೋಡಣೆಯನ್ನು ಅನಿರೀಕ್ಷಿತವಾಗಿ ತಪ್ಪಿಸಿ ಕಾರ್ಯಕಲಾಪವನ್ನೆಲ್ಲ ಕತ್ತಲಲ್ಲಿ ಮುಳುಗಿಸಿ ಕೆಡಿಸಿದ್ದಕ್ಕಾಗಿ ನಷ್ಟದಾವೆ ಹೂಡಿದ್ದಾರೆ ವಕೀಲರು.

ಉಪಾಧ್ಯಾಯರ ಸಂಬಳದ ಕಡಿತವನ್ನು ತೆಗೆದುಬಿಡುವುದರಲ್ಲಿದೆ –

೧೯೩೯-೪೦ರ ಬಜೆಟಿನಲ್ಲಿ ಮಲಬಾರು ಡಿಸ್ಟ್ರಿಕ್ಟ್ ಬೋರ್ಡು ಎಲಿಮೆಂಟರಿ ವಿದ್ಯಾಭ್ಯಾಸದ ಖಾತೆಯ ವೆಚ್ಚಕ್ಕೆ ಎರಡು ಲಕ್ಷ ರೂಪಾಯಿ ಬೇಕಾಗಿದೆಯಾದರೂ ಉಪಾಧ್ಯಾಯರ ಸಂಬಳದಲ್ಲಿ ಮಾಡಿನ ಕಡಿತವನ್ನು ತೆಗೆದು ಹಾಕಬೇಕಾಗಿ ಬಜೆಟ್ ಕಮಿಟಿ ನಿರ್ಧರಿಸಿದೆ-ಕೆಲವು ಮೋಟಾರು ಸರ್ವೀಸುಗಳನ್ನು ಬೋರ್ಡು ನಡೆಯಿಸಿಯೂ ಇತರ ರೀತಿಗಳಲ್ಲಿಯೂ ಶಿಕ್ಷಣದ ವೆಚ್ಚಕ್ಕೆ ತಕ್ಕಷ್ಟು ಭರ್ತಿಮಾಡಿಕೊಳ್ಳುವ ಹಂಚಿಕೆ ನಡೆದಿದೆ. ಅಂತೂ ಮಲಬಾರಿನ ಉಪಾಧ್ಯಾಯರ ಕೂಗು ಅರಣ್ಯರೋದನವಾಗುವ ಸಂಭವವಿಲ್ಲ.

ಲೋಕ ಸಂಚಾರ ಮಾಡುತ್ತ ಬಂದಿದ್ದ ಜರ್ಮನಿನ ವಿಮಾನವು ಮದರಾಸಿನಲ್ಲಿ ಮುರಿದು ಬಿತ್ತು.

ಇಬ್ಬರು ಕುಳಿತುಕೊಳ್ಳುವ ಚಿಕ್ಕ ವಿಮಾನ ಅದು ದಶಂಬರ ೧೭ರಲ್ಲಿ ಬರ್ಲಿನ್ನಿಂದ ಹೊರಟಿತ್ತು. ಆಫ್ರಿಕವನ್ನೆಲ್ಲ ಸಂಚರಿಸಿ ಇಂಡಿಯಕ್ಕೆ ಹಾರಿತು. ಒಂದೇ ದಿನದೊಳಗೆ ಎಲ್ಲೂ ನಿಲ್ಲದೆ ನಾಲ್ಕು ಸಾವಿರ ಮೈಲು ಹಾರಿ ಗಯಾಕ್ಕೆ ಬಂದಿಳಿಯಿತು. ಅಲ್ಲಿಂದ ಹೊರಟು ಬರ್ಮಾಸಯಾಮ್ ಆಸ್ಟ್ರೇಲಿಯವರೆಗೂ ಸಂಚರಿಸಿಕೊಂಡು ಊರಿಗೆ ಹಿಂತಿರುಗುತ್ತ ಮದ್ರಾಸಿನಲ್ಲಿ ಸುರಕ್ಷಿತವಾಗಿ ಬಂದಿಳಿಯಿತು. ಮದ್ರಾಸಿನಲ್ಲಿ ಮರುದಿನ ಅಲ್ಲಿಯ ವಿಮಾನಾಭಿಮಾನಿಗಳಿಗೆಲ್ಲ ಅದನ್ನು ನಡೆಯಿಸುವ ಕೌಶಲ್ಯ ಪ್ರದರ್ಶನವನ್ನು ತೋರಿಸುತ್ತ ವಿಮಾನ ನಿಲ್ದಾಣವಾದ ಮೀನಂಬಕದ ಸಮೀಪ ಹಾರಾಡುತ್ತಿತ್ತು. ಮದ್ರಾಸ್ ವಿಮಾನ ಕ್ಲಬ್ಬಿನವರನ್ನು ಒಬ್ಬೊಬ್ಬರನ್ನಾಗಿ ಮೇಲೇರಿಸಿಕೊಂಡು ಹೋಗಿ ಅವರಿಗೂ ಆ ವೈಮಾನಿಕರಿಬ್ಬರೂ ತಮ್ಮ ಚಾತುರ್ಯವನ್ನು ಪ್ರದರ್ಶಿಸುತ್ತಿದ್ದರು. ಆದರೆ ಕೊನೆಗೊಮ್ಮೆ ಅದೇನಾಯಿತೋ ಆ ವೈಮಾನಿಕನೂ ಅವನೊಡನಿದ್ದ ಮದ್ರಾಸ್ ಕ್ಲಬ್ಬಿನವರೊಬ್ಬರೂ ಅಪಘಾತಕ್ಕೆ ತುತ್ತಾದರು. ವಿಮಾನವು ಮುರಿದು ಬಿತ್ತು. ಇಬ್ಬರ ಪ್ರಾಣವೂ ಹಾರಿಹೋಗಿತ್ತು.

ನೆಹರುಗಳವರ ಎಚ್ಚರಿಕೆಯ ಕಹಳೆ

ಆಶ್ರಿತ ಸಂಸ್ಥಾನಗಳ ಇಂದಿನ ಪರಿಸ್ಥಿತಿಯನ್ನು ಕಂಡು ಕಂಡೂ ಇನ್ನೂ ಬ್ರಿಟಿಷ ಇಂಡಿಯಾದ ಜನತೆಯು ಕೇವಲ ಪ್ರೇಕ್ಷಕರಾಗಿ ನಿಲ್ಲಲು ಸಾಧ್ಯವಿಲ್ಲ. ಕಳೆದ ೧೫೦ ವರ್ಷಗಳಿಂದ ಬಿಗಿಯಲ್ಪಟ್ಟಿರುವ ದಾಸ್ಯದ ಸಂಕೋಲೆಯನ್ನು ತುಂಡರಿಸಿ ಸ್ವತಂತ್ರರಾಗಲು ಆಶ್ರಿತ ಸ್ಥಾನಗಳ ಪ್ರಜಾಕೋಟಿಯು ಹೆಣಗಾಡುತ್ತಿರುವುದನ್ನು ಆ ವಿಷಯದಲ್ಲಿ ದಿನೇ ದಿನೇ ಉಂಟಾಗುತ್ತಿರುವ ಜಾಗ್ರತಿಯನ್ನು ನಾವು ಉಪೇಕ್ಷಿಸುತ್ತ ಅಥವಾ ಕೇವಲ ನೋಡುತ್ತ ಕುಳಿತುಕೊಳ್ಳುವ ಕಾಲವು ಮೀರಿತು. ಸಂಸ್ಥಾನಿಕ ಪ್ರಜೆಗಳ ಸ್ವಾತಂತ್ರ್ಯ ಸಂಗ್ರಾಮವು ತೋರಿಕೆಗೆ ತಮ್ಮ ತಮ್ಮ ಅರಸರೊಡನೆಂದು ತೋರಿಬಂದರೂ ಸೂಕ್ಷ್ಮವಿಚಾರಮಾಡಿದ್ದಲ್ಲಿ ಅವೆಲ್ಲ ಬ್ರಿಟಿಷ ಸಾಮ್ರಾಜ್ಯಶಾಹಿಯೊಡನೆಂಬುದು ಸುವ್ಯಕ್ತವಾಗುತ್ತಿದೆ. ಆದುದರಿಂದ ನಾವು ಅದರಲ್ಲಿ ದುಮುಕಬೇಕಾಗುವುದು ಎಂದು ಅಹಮದಾಬಾದಿನ ಮಹಾಜನ ಸಭೆಯಲ್ಲಿ ನೆಹರುಗಳು ಭಾಷಣಮಾಡುತ್ತ ದೇಶಕ್ಕೆ ಎಚ್ಚರಿಕೆಯ ಕಹಳೆಯ ಕೂಗನ್ನು ಕೊಟ್ಟಿದ್ದಾರೆ.

WANTED

Organisers in Taluka centres either on salary or commission basais or both. Influential young men need apply. Selected candidates should be prepared to deposit a sum of Rs 100/-. For full particulars apply with stamps to Box No. 5,

C/o NAVAYUGA, UDIPI.

WANTED

A lady candidate to edit a high class Kannada monthly magazine for ladies to be started shortly. Apply stating minimum salary required with particulars as to qualification, experience etc, to Box No. 11,

C/o NAVAYUGA, Udipi

THE Bombay Life

ESTD.] ASSURANCE CO., LTD. [1908

New Business completed in 1938 Exceed 1,44,00,000.

Life Insurance creates certainty, security, stability, peace of mind and happiness to YOU and your family; and thus makes life worth living.

The entire fabric of this Institution is based on the rock of 'Service first and service last' to the POLICY HOLDERS, to the Community and the society at large our Service and Experience of Twenty eight years are at your disposal to plan your Insurance requirements.

Honest, Energetic and Influential persons will have great opportunity to help the cause of society and also to earn a permanent and decent remuneration.

APPLY TO:

KOCHIKAR BROTHERS LIMITED.

Madras Branch Secretaries,

The Bombay Life Assurance Co., Ltd.,

The Bombay Life Building,

Gandhinagar, UDIPI.

or any of our following offices:

Post Box No. 337 Mount Road, MADRAS	Visweshwarapuram Circle BANGALORE CITY	Charni Road, GIRGAUM, BOMBAY 4	Car Street, MANGALORE	Puthiyara, CALICUT	Central Station Road, TRIVANDRUM	Ottapalam, S. MALABAR

ರಶ್ಯಾದ ಕ್ರಾಂತಿಕಾರರು-೫

1917ನೆಯ ವರ್ಷ ಎಂದರೆ ರಶ್ಯಾಕ್ಕೆ ಎಂದೆಂದಿಗೂ ಮರೆಯದಂತಹ ಸಂವತ್ಸರ. ನೂರಾರು ವರ್ಷಗಳಿಂದ ಸ್ಥಾಪಕವಾಗಿದ್ದ ಜಾರ್ ಸಾಮ್ರಾಜ್ಯವು ನಿರ್ನಾಮವಾಗಿ ಹೋಯಿತು. ಕ್ರಾಂತಿಕಾರರು ಹಿಂದಿನ ತತ್ವಗಳನ್ನು ತಲೆಕೆಳಗೆ ಮಾಡಿದರು. ಸರಕಾರದ ರೂಪು ರಚನೆಗಳನ್ನು ಹಿಂದುಮುಂದು ಮಾಡಿದರು. ಆ ಕ್ರಾಂತಿಯಲ್ಲಿ ಕೆಲಸಮಾಡಿದ ವೀರರು ಕೆಲವರು ಜೀವಿಸಿದ್ದಾರೆ; ಮತ್ತೆ ಕೆಲವರು ಜೀವವನ್ನು ತ್ಯಜಿಸಿದ್ದಾರೆ. ಕ್ರಾಂತಿಕಾರರ ಗುಂಪಿನಲ್ಲಿ ಸೇರಿ ಜೈಲುವಾಸಗಳನ್ನು ಅನುಭವಿಸಿ, ಚಳುವಳಿಗಳನ್ನು ಹೂಡಿ ಬದುಕಿರುವವರಲ್ಲಿ ಇಂದು ರಶ್ಯಾದಲ್ಲಿ ಬಹುದೊಡ್ಡ ಹುದ್ದೆಯನ್ನು ಹೊಂದಿರುವವನಾರೆಂದರೆ ತತ್‍ಕ್ಷಣವೇ 'ಸ್ಟಾಲಿನ್' ಎನ್ನುವುದು ಸ್ವಭಾವಸಿದ್ಧ. ಆದರೆ ನಿಜವಾಗಿಯೂ ಸ್ಟಾಲಿನ್ ಕೇವಲ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ. ಹಾಗಾದಲ್ಲಿ ಅವನಿಗಿಂತಲೂ ಹಿರಿದಾದ ಸ್ಥಾನದಲ್ಲಿ ಯಾರಾದರೂ ಇದ್ದಾರೆಯೇ ಎಂದರೆ 'ಹೌದು ಇದ್ದಾರೆ' ಎಂಬ ಉತ್ತರ ಬರುತ್ತದೆ. ಅವನಾರೆಂದರೆ ರಶ್ಯಾದ ಕೇಂದ್ರ ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷನಾದ ಮಿಕ್ ಹೈಲ್ ಇವೋನಿಚ ಕಲಿನಿನ್.

ಮಿಕಹೈಲ್ ಇವೋನಿಚ್ ಕಲಿನಿನ್

(ಲೇಖಕರು—ಶ್ರೀ ಆರಾಧ್ಯ, ತುಮ್ಕೂರು.)

ರಷ್ಯದ ಪ್ರಚಂಡ ಪರಿವರ್ತನೆಗೆ ಕಲಿನಿನ್ ಒಬ್ಬ ಮುಖ್ಯ ಕಾರಣ. ದೇಶೋದ್ಧಾರಕರಿಂದ ರೈತರ ಹಿತವನ್ನು ತನ್ನ ಮುಖ್ಯ ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತಿರುವ ಕಲಿನಿನ್ ಇದೇ ಕೆಲಸದಲ್ಲಿ ತನ್ನ ಜೀವಮಾನ ಪರ್ಯಂತ ಇರಬಹುದೆಂದು ಹೇಳಲು ಅಡ್ಡಿಯಿಲ್ಲ. ಈ ವಯಸ್ಸಿನಲ್ಲಿ ಇಷ್ಟೊಂದು ಉತ್ಸಾಹಶಾಲಿಗಳೂ, ದೇಶಸೇವಾ ತತ್ಪರರೂ ನಿರ್ವಂಚಕ ಪ್ರಜಾಹಿತೈಷಿಗಳೂ ಎಷ್ಟು ಜನ ನಮ್ಮಲ್ಲಿ ಸಿಗಬಲ್ಲರು?

ಕಲಿನಿನ್ನನು ಎಪ್ಪತ್ತು ವರ್ಷಗಳ ಕೆಳಗೆ ಮಾಸ್ಕೋವಿನ ಬಳಿ ಒಂದು ಹಳ್ಳಿಯಲ್ಲಿ ಜನ್ಮವೆತ್ತಿದನು. ಇವನ ತಂದೆ ಒಬ್ಬ ಬಡ ರೈತ; ರೈತನ ಹೊಟ್ಟೆಯಲ್ಲಿ ಜನಿಸಿದ್ದರೂ ರಾಜಕೀಯ ವಿಷಯಗಳೆಂದರೆ ಇವನಿಗೆ ಬಹಳ ಆಸಕ್ತಿ. ತನ್ನ ಹತ್ತನೆ ವಯಸ್ಸಿನಲ್ಲಿಯೇ ತನ್ನ ಊರನ್ನು ಬಿಟ್ಟು ಒಬ್ಬ ವೃದ್ಧ ಸಿಪಾಯಿಯ ಜೊತೆಯನ್ನು ಸೇರಿದನು. ಇವನನ್ನು ಸ್ಕೂಲಿಗೆ ಕಳುಹಿಸಿದವರಿಲ್ಲ ಅಥವಾ ತಾನಾಗಿಯೇ ಹೋಗಿ ಕಲಿಯಬೇಕೆಂಬ ಆಸೆಯೂ ಆವನಿಗಿರಲಿಲ್ಲ. ಆ ಸಿಪಾಯಿಯೇ ಇವನಿಗೆ ಓದು ಬರಹವನ್ನು ಕಲಿಸಿಕೊಟ್ಟನು. ಕೆಲವು ದಿವಸಗಳಲ್ಲಿ ಆವನು ಹೇಳಿಕೊಡಬಹುದಾದ ಪಾಠಗಳನ್ನೆಲ್ಲಾ ಆತನಿಂದ ಕಲಿತು, ಸ್ವಂತವಾಗಿ ತಾನೇ ವಿದ್ಯಾರ್ಜನೆಗೆ ನಿಂತ-ಮಾರ್ಕ್ಸನ ತತ್ವಗಳನ್ನು ಕೂಲಂಕಷವಾಗಿ ಯೋಚಿಸಿ ಒಪ್ಪಿಕೊಂಡ.

ವಯಸ್ಕನಾದ ಮೇಲೆ ಕೆಲವು ದಿವಸಗಳಲ್ಲಿ ಶಾಲೆಯ ಉಪಾಧ್ಯಾಯನಾಗಿ ಕೆಲಸಮಾಡುತಿದ್ದ. ಆಗ ಕ್ರಾಂತಿಯ ಬಿಸಿಯು ಕಲಿನಿನ್‍ಗೆ ತಗುಲಿತು. ಚಕ್ರವರ್ತಿಯ ಆಡಳಿತದಲ್ಲಿ ಎಂತಹ ಅನ್ಯಾಯಗಳಿವೆಯೆಂಬುದನ್ನು ಚೆನ್ನಾಗಿ ಮನಗಂಡನು. ಉಪಾಧ್ಯಾಯ ಕೆಲಸವನ್ನು ತ್ಯಜಿಸಿ ಕಂಚುಗಾರರ ಕೆಲಸಕ್ಕೆ ನಿಂತನು.

ಯಾವ ಕೆಲಸಕ್ಕೆ ನಿಂತರೂ ಕಲಿನಿನ್‍ಗೆ ಮನಸ್ಸು ದೇಶದ ಕಡೆಗೆ ಎಳೆಯುತ್ತಿತ್ತು. ಚಳುವಳಿಗೆ ಆರಂಭಮಾಡಿದ. ಮಾಸ್ಕೋ ನಗರದ ಕ್ರಾಂತಿಕಾರರ ಗುಂಪಿನಲ್ಲಿ ಇವನೂ ಒಬ್ಬ ಮುಖಂಡನಾದನು. ಜಾರ್ ಸರ್ಕಾರವು ಇವನನ್ನು ಬಂಧಿಸಿ 1905ರಲ್ಲಿ ಜೈಲಿಗೆ ಕಳುಹಿಸಿತು. ಬಿಡುಗಡೆಯಾದ ಮೇಲೆ ಮತ್ತೆ ಅದೇ ಚಳುವಳಿ, ಮತ್ತೆ ಬಂಧನ. ಆಂದಿನಿಂದಲೂ ಸ್ಟಾಲಿನ್‍ನ ಅಭಿಪ್ರಾಯಕ್ಕೂ ಇವನ ಅಭಿಪ್ರಾಯಕ್ಕೂ ಕೆಲವು ಭಿನ್ನಾಭಿಪ್ರಾಯವಿತ್ತು. ಆದರೂ ಹೆಚ್ಚು ವಿರೋಧಿಗಳಾಗದೆ ಚಳುವಳಿಯನ್ನು ನಡೆಯಿಸುತ್ತಿದ್ದರು. 1917ರಲ್ಲಿ ನಡೆದ ಪ್ರಚಂಡ ಕ್ರಾಂತಿಯ ಪರಿಣಾಮವಾಗಿ ಸೋವಿಯಟ್ ಸರಕಾರವು ಸ್ಥಾಪಿಸಲ್ಪಟ್ಟಿತು. ಅಂದಿನಿಂದಲೂ ಇಂದಿನವರೆಗೂ ರೈತರ ಸೇವೆಗೆ ನಿಂತಿರುವ ನಿಜವಾದ ಹಿತೈಷಿಯೆಂದರೆ ಕಲಿನಿನ್.

ಸೋವಿಯೆಟ್ ಸರಕಾರವು ಎಂದು ರಶ್ಯಾದಲ್ಲಿ ರಾಜ್ಯಭಾರವಮಾಡಲು ಮೊದಲಾಯಿತೋ ಅಂದಿನಿಂದಲೂ ಕಲಿನಿನ್ನು ರಷ್ಯಾದ ಅಧ್ಯಕ್ಷನಾಗಿದ್ದಾನೆ. ಈಗ ರಷ್ಯಾದ ರಾಜ್ಯಭಾರವೆಲ್ಲಾ ಕಲಿನಿನ್ ತಲೆಯಮೇಲೆ ಬಿದ್ದಿದೆ. ರೈತರ ಬೆಂಬಲದಿಂದಲೇ ರಷ್ಯಾದಲ್ಲಿ ಇವನ ಕೈನಾಡವು ನಡೆಯುತ್ತಿರುವುದು ಈ ಇಪ್ಪತ್ತು ವರ್ಷಗಳಿಂದಲೂ ಇವನು ರೈತರಿಗಾಗಿ ಶ್ರಮಿಸುತ್ತಿರುವುದನ್ನು ನೋಡಿದರೆ ಇಡೀ ರೈತರೆಲ್ಲ ಇವನನ್ನು ಚಿಕ್ಕಪ್ಪಮಾಡಿಕೊಂಡಿದ್ದಾರೆ ಅಷ್ಟೊಂದು ಅಭಿಮಾನ ಅವರಿಗೆ.

ರೈತರ ಕಷ್ಟ ನಷ್ಟಗಳನ್ನು ಪ್ರತ್ಯಕ್ಷ ನೋಡಿದವನೂ, ಅವರ ಸುಖದುಃಖಗಳನ್ನು ಚೆನ್ನಾಗಿ ಅರಿತವನೂ, ಸೋವಿಯೆಟ್ ರಾಜ್ಯಾಡಳಿತದಲ್ಲಿ ಭಾಗಿಯಾಗಿರುವವನೂ ಯಾರಾರಿರುವರೆಂದು ಹುಡುಕಿದರೆ ಕಲಿನಿನ್‍ನಲ್ಲದೆ ಮತ್ತಾರೂ ಸಿಗಲಾರರೆಂದು ಧಾರಾಳವಾಗಿ ಹೇಳಬಹುದು. ಜಗತ್ತಿನ ರೈತರಲ್ಲೆಲ್ಲಾ ರಷ್ಯಾದ ರೈತರು ಸುಖಸಂತೋಷದಿಂದ ಬಾಳಲು ಇವನ ಸಾಹಸವೇ ಮುಖ್ಯಕಾರಣ.

ಹೊಸ ಕಾರ್ಖಾನೆಗಳನ್ನು ತೆರೆಯುವುದು ಹೊಸ ವ್ಯವಸಾಯ ಪದ್ಧತಿಗಳನ್ನು ರೈತರಿಗೆ ತೋರಿಸಿಕೊಡುವುದು, ಕೂಲಿಗಾರರ ಮತ್ತು ರೈತರ ಸಮಾಜದ ಸಭೆಗಳಲ್ಲಿ ಭಾಷಣಮಾಡಿ ಅವರಿಗೆ ತಿಳುವಳಿಕೆ ಹೇಳುವುದು, ಗಣಿಗಳನ್ನು ಪರೀಕ್ಷಿಸುವುದು, ಅವರಿಗೆ ಉತ್ತಮ ಸಲಹೆಗಳನ್ನು ಕೊಡುವುದು ಇವೇ ಕಲಿನಿನ್‍ನ ಮುಖ್ಯಕೆಲಸ.

ಇವನಿಗೆ ಆಫೀಸಿನಿಂದ ಹೊರಗೆ ಹೋಗದಷ್ಟು ಕೆಲಸ ಅಲ್ಲೀ ಇರುತ್ತದೆ, ರೈತರಿಂದ ಮತ್ತು ಒಡಕೂಲಿಗಾರರಿಂದ ಬಂದ ಅರ್ಜಿಗಳನ್ನು ತಾನೇ ಖುದ್ದು ನೋಡುತ್ತಾನೆ. ಅವರುಗಳಿಗೆ ಸರಿಯಾದ ಉತ್ತರಗಳನ್ನು ಕೊಡಬೇಕಾದರೆ ಎಲ್ಲವನ್ನೂ ಪರಿಶೀಲಿಸದ ಹೊರತು ಮುಂದೇನಾಗುವುದಿಲ್ಲ ಕಲಿನಿನ್‍ನನ್ನು ಕಾಣುವುದು ಕೂಡಾ ಬಹುಸುಲಭ ಬೀದಿಯ ಭಿಕಾರಿಯು ಕೂಡಾ ಇವನನ್ನು ಸಂದರ್ಶಿಸಲು ಅವಕಾಶವಿದೆ. ಜಿಗುಪ್ಸೆಪಟ್ಟುಕೊಳ್ಳದೆ ಪ್ರತಿ ಒಬ್ಬರಿಗೂ ಉತ್ತರವನ್ನು ಕೊಟ್ಟುಕಳುಹಿಸುತ್ತಾನೆ. ಪ್ರತಿನಿತ್ಯವೂ 400-500 ಮಂದಿ ಭೇಟಿಗಾಗಿ ಕಾದಿರುತ್ತಾರೆ. ಸಾಮಾನ್ಯವಾಗಿ ಎಲ್ಲರೂ ರೈತರೇ. ಅರ್ಜಿಗಳಂತೂ 3-4 ಸಾವಿರ ಬಂದು ಬಿದ್ದಿರುತ್ತವೆ. ಅಷ್ಟೊಂದು ಗಳಿಗೆಯುಳ್ಳ ಕಾರ್ಯಾಲಯದಲ್ಲಿ ಕೆಲಸಮಾಡಲು ಈ ಮುದುಕನು ಕೋಚವೂ ಬೇಸರಪಡುವುದಿಲ್ಲ ಸಂತೋಷಚಿತ್ತನಾಗಿ ಪ್ರತಿ ಅಹವಾಲನ್ನು ಕೇಳಿ ಉತ್ತರಕೊಟ್ಟು ಕಳುಹಿಸುತ್ತಾನೆ. ನ್ಯಾಯವಾಗಿ ನೋಡುವದಾದರೆ ಕಲಿನಿನ್‍ಗೆ ಈ ವೃದ್ಧಾಪ್ಯದಲ್ಲಿ ಪೂರ್ಣ ವಿಶ್ರಾಂತಿ ಬೇಕು. ಆದರೆ ಕೊಡುವವರಾರು? ತನ್ನ ಪ್ರತಿಭೆಯಿಂದ, ವಿಶ್ವಾಸದಿಂದ 16 ಕೋಟಿ ಪ್ರಜೆಗಳ ಮನಸ್ಸನ್ನು ಸೆಳೆದಿದ್ದಾನೆ. ಕ್ರಾಂತಿಕಾರರ ಗುಂಪಿನಿಂದ ಇಳಿದು ಬಂದಿದ್ದರೂ ಶಾಂತಿಮಯ ವಾತಾವರಣವನ್ನು ಯಾವಾಗಲೂ ಅಪೇಕ್ಷಿಸುತ್ತಾನೆ.

(ಒನೇ ಪುಟಕ್ಕೆ ನೋಡುವುದು)

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF ACRORE

ESTD 1906
CANARA BANK
LIMITED



"ಶೆಂಕ್ಸ"
SHNAKS
(ಇಂಗ್ಲಿಷ್ ಮೇಕ್)
ಕ್ರೂಡ್ ಆಯಿಲ್ ಎಂಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶೆಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬೈಂಡ ಪ್ಲೆಂಟ), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮುಗ್ರಿಗಳು ಸಿಗುತ್ತವೆ,

ವಿವರಗಳಿಗೆ ಬರೆಯಿರಿ—

ಪೆರಮೌಂಟ್ ಇಂಜಿನೀಯರಿಂಗ್ ಕೋರ್ಪರೇಶನ್
೩೨, ಅಪೋಲೋ ಸ್ಟ್ರೀಟ್, ಫೋರ್ಟ . . . . ಮುಂಬಯಿ.

Paramount Engineering Corporation,
32 Appolo Street, Fort, BOMBAY.

ವಿದ್ಯಾಪ್ರಚಾರಕ್ಕೆ ಸ್ತ್ರೀಯರ ಸಹಾಯ

(ಲೇಖಕಿ — ಶ್ರೀಮತಿ ಕೆ. ಎಸ್. ಹೆಗ್ಡೆ)

ನಮ್ಮಲ್ಲಿ ಅವಿದ್ಯಾವಂತರಲ್ಲಿ ಹೆಚ್ಚಿನವರು ಸ್ತ್ರೀಯರು, ಅದೂ ಹೆಚ್ಚಾಗಿ ಅವರಿರುವದು ಹಳ್ಳಿಯಲ್ಲಿ. ಓದುಬರಹ ಬಲ್ಲ ಸ್ತ್ರೀಯರು ನೆರೆಕರೆಯ ಸ್ತ್ರೀಯರಿಗೆ ಓದುಬರಹ ವನ್ನು ಹೇಳಿಕೊಡಬೇಕು. ಇದರಿಂದ ಹಳ್ಳಿಗಳಲ್ಲಿ ಅದಷ್ಟು ವಿದ್ಯಾಪ್ರಚಾರವಾಗುವದು.

ನಮ್ಮ ದೇಶದ ಸ್ತ್ರೀಯರು ನಿರುದ್ಯೋಗಿಗಳೆಂದು ಜಗತ್ತೆಲ್ಲಾ ನಮ್ಮನ್ನು ಹೀನೈಸುತ್ತಿದೆ. ನಾವೇನೋ ಭಾರತದ ಮಹಿಳೆಯರು, ನಮ್ಮ ದೇಶದ ಅಧ್ಯಾತ್ಮ ವಿಚಾರದ ಶ್ರೇಷ್ಠತೆಗೆ ನಾವು ಮುಖ್ಯ ಕಾರಣವೆಂದು ಜಗತ್ತೆಲ್ಲಾ ನಮ್ಮನ್ನು ಕೊಂಡಾಡುತ್ತಿರಬಹುದು. ಆದರೆ ನಮ್ಮ ದೇಶದ ನಿಜವಾದ ಮೇಲ್ಮೆಯು 'Spiritualism' ಈ ಅಧ್ಯಾತ್ಮ ಹೆಗ್ಗಳಿಕೆಯಲ್ಲಿಯೇ ಇದೆ ಎಂದು ತಿಳಿಯಬಾರದು ಯಾಕೆಂದರೆ ಈಗ ಸಕಲ ಜಗತ್ತೇ 'Material' ಆರ್ಥಿಕ ಲೌಕಿಕ ವಿಚಾರಗಳಲ್ಲಿ ಉನ್ನತಿಯನ್ನು ಹೊಂದುತ್ತಿರುವಾಗ ನಾವು ಮಾತ್ರ ಎಂಥೋ ಬರಲಿರುವ ನೋಡಿ ಕಾಣದ ಮುಂದಿನ ಜನ್ಮದ ಮೇಲ್ಮೆಯನ್ನು ಗಳಿಸಿಕೊಳ್ಳುವುದು ವಿವೇಕವಲ್ಲ. ಈ ಜನ್ಮದಲ್ಲೇ ನಮ್ಮ ಕಣ್ಣಮುಂದೆಯೇ ನಮ್ಮ ಮುಕ್ತಿಯು ನಮ್ಮ ಅನುಭೋಗಕ್ಕೆ ಬರುವಂತೆ ನೋಡಿಕೊಳ್ಳಬೇಕು.

ಇದಕ್ಕೆ ಆಗ್ಯಬೇಕಾದ ಮುಖ್ಯ ಆಧಾರವೆಂದರೆ ವಿದ್ಯೆ. ವಿದ್ಯೆಯ ಆರಂಭವು ಓದು ಬರಹದಲ್ಲಿ ಮೊದಲಾಗುವುದರಿಂದ ನಮ್ಮ ಜನರನ್ನು ಸಾಕ್ಷರರನ್ನಾಗಿ ಮಾಡಬೇಕು. ಓದು ಬರಹ ಕಲಿತ ಮೇಲೆ ಅವರೆಲ್ಲಾ ಜಗತ್ತಿನ ಬೇರೆ ಬೇರೆ ಜನಾಂಗಗಳು ಹೇಗೆ ಮುಂದರಿಯುತ್ತಿವೆ ಎಂಬುದನ್ನು ಓದಿಯಾದರೂ ಸ್ವತಃ ತಿಳಿದು ನಮ್ಮ ಗಂಡಸರೊಂದಿಗೆ ನಾವೂ ಮುಂದರಿದು ಅವರ ರಾಜಕೀಯ ಸಾಮಾಜಿಕ ಕಾರ್ಯಗಳಲ್ಲಿ ಸಹಾಯಕರಾಗಬೇಕು. ಇಲ್ಲವೇ ಈ ವಿಚಾರದಲ್ಲಿ ಮುಂದರಿಯುವಂತೆ ಹುರಿದುಂಬಿಸಿ ಹಿಂದಿನ ವೀರ ನಾರಿಯರಂತೆ ಅವರಿಗೆ ಸೇಸೆಯನ್ನು ತಳಿದು ಮಂಗಳಾರತಿ ಎತ್ತಿ ಕಾರ್ಯರಂಗಕ್ಕೆ ಧೈರ್ಯದಿಂದ ಕಳುಹಿಸಬೇಕು. ಹೀಗೆ ಮಾಡಿದರೆ ಮುಂದೆ ಜನ್ಮವೆತ್ತಲಿರುವ ಭಾವೀ ಜನಾಂಗವಾದ ನಮ್ಮ ಮಕ್ಕಳ ಸಮುದಾಯವನ್ನೂ ಹೀಗೆಯೇ ಕಳುಹಿಸಿಕೊಡಬಹುದು. ಇವೆಲ್ಲಾ ಸುಲಭದ ಕೆಲಸವಲ್ಲ. ಬಾಯಿಯಲ್ಲಿ ಹೇಳಿದಷ್ಟು ಸುಲಭವಾದುದೂ ಅಲ್ಲವೆಂದು ಚೆನ್ನಾಗಿ ಬಲ್ಲೆನು. ಆದರೆ ಈಗಲೇ ಈ ಭಾಗದಲ್ಲಿ ನಮ್ಮ ಕೈಲಾದ ಸ್ವಲ್ಪನ ಜನಾಂಗಸೇವೆಯನ್ನು ಮಾಡಿ ಮುಂದೆ ಒಂದು ವೇಳೆ ನಮ್ಮ ಕನಸು ಕಾರ್ಯರೂಪಕ್ಕೆ ಬರುವ ಹಾಗಿದ್ದರೆ ಅದಕ್ಕೆ ನೆರವಾಗುವುದು ನಮ್ಮ ಪ್ರತಿಯೊಬ್ಬಳ ಕರ್ತವ್ಯವೆಂದು ತಿಳಿಯುತ್ತೇನೆ.

ನಮ್ಮ ಸ್ತ್ರೀಯರಲ್ಲಿ ಹೆಚ್ಚಿನ ಮಟ್ಟಿಗೆ ಮಧ್ಯಮತರಗತಿಯ ಮತ್ತು ಐಶ್ವರ್ಯ ಕುಟುಂಬಗಳವರು ಓದುಬರಹವನ್ನು ಬಲ್ಲರು. ವಿದ್ಯಾವಂತ (ಓದುಬರಹಬಲ್ಲ) ಸ್ತ್ರೀಯರಲ್ಲಿ ಹೆಚ್ಚಿನವರು ಇವರೇ ಎಂದು ಹೇಳಬಹುದು. ಈ ತರಗತಿಯ ಸ್ತ್ರೀಯರಿಗೆ ಹೆಚ್ಚಾಗಿ ಮನೆವಾರ್ತೆ ವಿಚಾರ ಅಷ್ಟು ವಿಶೇಷವಿಲ್ಲ. ಇದ್ದರೆ ಅಡುಗೆ ಮಾಡಿದರೆ ಸರಿ ಇಲ್ಲಿಯೂ ನಾಲ್ಕೈದು ಮಂದಿ ಕೂಡಿ ಅಷ್ಟೇ ಗಂಡಸರಿರುವ ಒಂದು ಕುಟುಂಬದ ಅಡುಗೆ ಸಿದ್ಧಮಾಡಿದರೆ ಸರಿ. ಇದು ಒಂದು ದಿನದ ಜಾಗರ ಕಾಲದ ಸುಮಾರು 16 ತಾಸುಗಳಲ್ಲಿ 2-3 ತಾಸುಗಳನ್ನು ಮಾತ್ರ ವೆಚ್ಚ ಮಾಡಿಸುವುದು ಉಳಿದ 12, 13 ತಾಸುಗಳಿಗೆ ವಿಕ್ರಿದ ಕಾಲದಲ್ಲಿ ನಿದ್ದೆ ಮಾಡಿಯೋ ವ್ಯರ್ಥವಾಗಿ ತಿರುಗಿಯೋ ಅತ್ತೆ ಸೊಸೆ, ಅತ್ತಿಗೆ ಮೊದಲಾದವರೊಂದಿಗೆ ಜಗಳವಾಡಿಯೊ ಇಲ್ಲವೇ ನೆರಮನೆಯ ಬೇರೆ ಹೆಂಗುಸರೊಂದಿಗೆ ಪ್ರಯೋಜನಕ್ಕೆ ಬಾರದ ಮಾತನ್ನಾಡಿಯೋ ಕಳೆಯುವೆವು. ಹೆಚ್ಚಾಗಿ ನಮಗೆ ಸಂಜೆ 3-4 ಗಂಟೆಯಿಂದ 6-6 ಗಂಟೆಗಳ ವರೆಗೆ ಏನೂ ಕೆಲಸವಿರುವುದಿಲ್ಲ. ಈ ಬಿಡು ಕಾಲವನ್ನು ನಾವು ಯಾವುದಾದರೊಂದು ಉಪಯುಕ್ತ ಕೆಲಸಕ್ಕೆ ವಿನಿಯೋಗಿಸುವುದು ಉತ್ತಮವೆಂದು ನನಗೆ ತೋರುವುದು. ಅಲ್ಲದೆ ಈ ಸಮಯದಲ್ಲಿ ಜಗಳವಾಡುತ್ತಾ ಶರೀರ ಸಕಲೋಗಗಳನ್ನು ಹಾಳುಮಾಡಿಕೊಳ್ಳುವುದು, ಗೌರವವನ್ನು ಕಡಿಮೆಮಾಡಿಕೊಳ್ಳುವುದು ನಿರರ್ಥಕ ಮಾತುಗಳನ್ನಾಡಿ ಅನೇಕ ಅನಾಹುತಗಳನ್ನು ನಾವು ತಿಳಿಯದೇ ನಮ್ಮ ತಲೇ ಮೇಲೆ ತಂದಿರಿಸಿಕೊಳ್ಳುವುದು ವಿಹಿತವಲ್ಲ.

ನಮ್ಮಲ್ಲಿ ಅವಿದ್ಯಾವಂತರಲ್ಲಿ ಹೆಚ್ಚಿನವರು ಸ್ತ್ರೀಯರು ಅದೂ ಹೆಚ್ಚಾಗಿ ಅವರು ನಮ್ಮೊಡನೆ ಹಳ್ಳಿಯಲ್ಲಿರುವರು. ಆದುದರಿಂದ ನಾವು ನಮ್ಮ ನೆರೆ ಮನೆಯ ಹೆಂಗುಸರನ್ನೆಲ್ಲಾ ಒಂದಾಗಿ ಸೇರಿಸಿ ಅಂದರೆ 10-60 ಮಂದಿಯನ್ನು ಅಗತ್ಯವಿಲ್ಲ. 4-6 ಮಂದಿಯನ್ನು ಸಾಕು—ಅವರಿಗೆ ನಮಗೆ ತಿಳಿದಿರುವ ಓದುಬರಹವನ್ನು ಹೇಳಿಕೊಡಬೇಕು. ಇದಕ್ಕೇನೂ ವಿಶೇಷ ವೆಚ್ಚವಾಗುವಂತಿಲ್ಲ. ಈಗ ಹಳ್ಳಿಯಲ್ಲಿಯೂ ಪ್ರತಿಯೊಂದು ಮನೆಯಲ್ಲೂ ಒಬ್ಬೊಬ್ಬನಾದರೂ ಸಾಲೆಗೆ ಹೋಗುವ ಹುಡುಗನಿರಬಹುದು. ಇಲ್ಲವೆ ಮೂರು ನಾಲ್ಕು ಮನೆಗಳಲ್ಲಿ ಒಂದು ಮನೆಯಲ್ಲಿ ಒಬ್ಬನಾದರೂ ಇರದೆ ಇರಲಿಕ್ಕಿಲ್ಲ. ಆ ಮಕ್ಕಳು ಸಂಜೆ ಸಾಲೆಯಿಂದ ಬಂದಕೂಡಲೇ ಅವರ ಬಳಪವನ್ನು ಉಪಯೋಗಿಸಿ ಬರೆಯಲು ಕಲಿಯಬಹುದು ಒಂದು ಪುಸ್ತಕವಿದ್ದರೆ ನಾಲ್ಕೈದು ಮಂದಿ ಓದಲು ಕಲಿಯಬಹುದು. ಇದರಿಂದ ಸಾಲೆಗೆ ಹೋಗುವ ಮಕ್ಕಳು ಓದು ಬರಹ ಕಲಿಯುವಷ್ಟು ಶೀಘ್ರವಾಗಿ ನಾವು ಕಲಿಯಬಲ್ಲೆವೆಂದಲ್ಲ ಆದರೆ ಒಮ್ಮೆ ನಮಗೆ ಅಕ್ಷರಮಾಲೆಯ ಗುರುತಾದರೆ ಅವೆಲ್ಲವನ್ನೂ ಬರೆಯಲು ಕಲಿತರೆ ಮೇಲೆ ನಮ್ಮ ಸಹಜವಾದ ಪ್ರಯತ್ನದಿಂದ ಗಟ್ಟಿ ಮಾಡಿಕೊಳ್ಳಲಾಪೆವು. ಅಲ್ಲದೆ ಈ ಸಮಯದಲ್ಲಿ ನಮ್ಮ ಗಂಡಂದಿರ ಇಲ್ಲವೇ ಮಕ್ಕಳೊಡನೆ ವ್ಯರ್ಥಜಗಳ ಮಾಡುವ ಆಗತ್ಯವೂ ನಮಗೆ ಇರದು. ಸಮಯವೂ ಸಿಕ್ಕದು.

ಹೀಗೆ ಒಬ್ಬ ವಿದ್ಯಾವತಿಯು (ಓದು ಬರಹಬಲ್ಲವಳು) ತನ್ನ ನೆರೆಯ ಕೆಲವು ಸ್ತ್ರೀಯರಿಗೆ ವಿದ್ಯೆಕೊಟ್ಟ ಮೇಲೆ (ಓದು ಬರಹ ಕಲಿಸಿದ ಮೇಲೆ) ಪುರಾಣ ಕೇಳಿದ್ದರೆ ರಾಮಾಯಣ, ಭಾರತಗಳನ್ನು ಓದಿ ಓದಿಸಿ ಸೀತೆ ದ್ರೌಪದಿಯರ ಗುರಿಯನ್ನು ಲಕ್ಷ್ಯವಾಗಿಟ್ಟುಕೊಳ್ಳಬಹುದು. ಇಲ್ಲವೇ ಈಗ ಪ್ರತಿಯೊಂದು ಮೂಲೆಯಲ್ಲಿಯೂ ಹಬ್ಬಿರುವ ವಾರ್ತಾ ಪತ್ರಿಕೆಗಳನ್ನು ಓದಿ ಹೇಳಿ ಪ್ರಕೃತ ಜಗತ್ತಿನ ರಾಜಕೀಯ ರಂಗದಲ್ಲಿ ಏನೇನು ನಡಿಯುತ್ತಿದೆ ಎಂದು ತಿಳಿದುಕೊಂಡು ಮುಂದೆ ನಮ್ಮ ಗರ್ಭದಲ್ಲಿ ಹುಟ್ಟಲಿರುವ ಯಾ ಹಿಂದೆ ಹುಟ್ಟಿರುವ ಮಕ್ಕಳನ್ನು ಹೇಗೆ ತರಬೇತಿ ಮಾಡಿ ನಮ್ಮ ದೇಶವನ್ನು ಪ್ರಪಂಚದ ಬೇರೆ ದೇಶಗಳ ಸರಿಗದ್ದುಗೆಯಲ್ಲಿ ಕುಳ್ಳಿರಿಸಬಹುದೆಂದು ಸ್ವತಃ ತಿಳಿದುಕೊಳ್ಳಬಹುದು. ಈಗ ನಮ್ಮ ಗಂಡಂದಿರೋ ಮಕ್ಕಳೋ ಏನಾದರೂ ಹೇಳಿದರೆ ಆ ವಿಚಾರದ ಮೇಲುಕೀಳನ್ನು ವಿವೇಚಿಸಲು ಜ್ಞಾನವಿಲ್ಲದೆ ನಾವು ಸುಮ್ಮನೆ ಮನೆಬಾಗಿಲಿಗೆ ಆಡಬಡುವ ಬಸವನಂತೆ ತಲೆ ಅಲ್ಲಾಡಿಸಬಲ್ಲೆವು. ಆದರೆ ನಮಗೆ ಒಂದು ವಿಷಯವು ಅವಶ್ಯವಾಗಿ ಚೆನ್ನಾಗಿ ತಿಳಿದರೆ ಅದರ ಮೇಲುಕೀಳನ್ನು ಗಂಡಸರಿಂದಲೂ ಹೆಚ್ಚಿನ ದಕ್ಷತೆಯಿಂದ ನಿರ್ಧರಿಸಬಲ್ಲೆವೆಂದು ಅಲ್ಪ ವಿಚಾರದಲ್ಲಿ ನಮ್ಮ ಸಲಹೆಯನ್ನು ಕೈಗೊಂಡು ಗೆದ್ದ ಪುರುಷರು ನಿಜವಾಗಿ ನಂಬುವರು.

ಹೀಗೆ ನಾವು ನಮ್ಮ ನೆರೆಕರೆಯ ಅವಿದ್ಯಾವಂತ ಸ್ತ್ರೀಯರನ್ನು ಓದುಬರಹ ಬಲ್ಲವರಾಗಿ ಮಾಡಿದರೆ ನಮ್ಮ ರಾಜ್ಯಕ್ಕೂ ನಾವು ನಮ್ಮ ಸೇವೆಯನ್ನು ಸಲ್ಲಿಸಿದಂತಾಗುವುದು. ನಮ್ಮ ಸಹೋದರಿಯರಾದ ಐರೋಪದೇಶದ ತರುಣಿಯರು ಯೋಧರಂತೆ ಪಟ್ಟೆಚಲ್ಲಣ ಬಿಗಿದು ಕೋವಿ ಹಿಡಿದು ಯುದ್ಧಕ್ಕೆ ತರಬೇತಿಯಾಗುತ್ತಾ ತಮ್ಮ ದೇಶರಕ್ಷಣೆಗೆ ಸಿದ್ಧರಾಗಿದ್ದು ನಮ್ಮ ಪೂರ್ವದ ವೀರನಾರಿಯರಾದ ದ್ರೌಪದಿ, ಸುಲ್ತಾನ್ ರೇಜಿಯಾ, ಲಕ್ಷ್ಮೀಬಾಯಿಯರೇ ಮೊದಲಾದ ವೀರನಾರಿಯರನ್ನು ನಮ್ಮ ಕಣ್ಣೆದುರು ತಂದು ನಿಲ್ಲಿಸುವವರಾದರೂ ನಮ್ಮಲ್ಲ ಬಹಳಕಾಲದ ಮರವೆ ಇಂದಾಗಿ ಆ ಶಕ್ತಿಯು ಇಲ್ಲದೆ ಹೋದರೂ ಪ್ರಕೃತದ ನಮ್ಮ ಸ್ಥಿತಿಯಿಂದಾಗಿ ನಮ್ಮ ಪುರುಷರಿಗೆ ಈ ಭಾಗ್ಯವು ಇಲ್ಲದೆ ಇರುವಾಗ, ನಮಗೆ ಬೇಡವೆಂದಾದರೂ ನಮ್ಮ ಗರ್ಭದಲ್ಲಿ ಇನ್ನು ಮುಂದೆ ಹುಟ್ಟಲಿರುವ ಮಕ್ಕಳಿಗಾದರೂ ಈ ಭಾಗದ ಸೇವೆಯು ದೊರಕಲೆಂದು ಹಾರೈಸಿ ಅದಕ್ಕೆ ಅನುಕೂಲವಾಗುವಂತೆ ನಮ್ಮ ಸಹೋದರಿಯರನ್ನು ಓದುಬರಹ ಬಲ್ಲವರನ್ನಾಗಿ ಮಾಡಿ ಮುಂದೆ ಒಂದೆರಡು ತಲೆಯೋಗಾದರೂ ನಮ್ಮ ದೇಶವೂ ಸಶಕ್ತವಾಗುವಂತೆ ಮಾಡುವುದು ನಮ್ಮ ಕರ್ತವ್ಯವಲ್ಲವೇ?

ಹಿಂದೆ ಹೇಳಿದಂತೆ ಈ ವಿದ್ಯಾಪ್ರಚಾರ ಕಾರ್ಯವನ್ನು ಮಾಡುವುದರಿಂದ ಸರಕಾರಕ್ಕೆ ವಿಶೇಷ ಹಣವೂ ಉಳಿಯುವುದು. ಹೀಗೆ ನಮ್ಮ ಸರಕಾರಕ್ಕೆ ನಾವು ಸುಲಭವಾಗಿ ಹಣವನ್ನು ಉಳಿಸಿಕೊಡಬಲ್ಲೆವಾದರೆ ನಮ್ಮ ದೇಶದ ಆರ್ಥಿಕ ಸ್ಥಿತಿಯೂ ಉನ್ನತಿಗೆ ಬಂದು ನಾವು ಬಹು ಶೀಘ್ರ ಕಾಲದಲ್ಲೇ ಉನ್ನತಿಯನ್ನು ಪಡೆಯಬಹುದು. ನಮ್ಮ ಪ್ರಾಂತಿಕ ಮಂತ್ರಿಗಳು ವಿದ್ಯಾಪ್ರಚಾರ ವಿಚಾರಕ್ಕೆ ಬೇಕಾದ ಹಣವನ್ನು ಹೇಗೆ ಸಂಗ್ರಹಿಸಬಹುದೆಂದು ಚಿಂತಿಸಿ, ಚಿಂತಿಸಿ ಕಡೆಗೆ ನಮ್ಮ ಮೇಲೆಯೇ ಹೊಸ ಹೊಸ ತೆರಿಗೆಗಳನ್ನು ಹೇರದಂತೆಯೂ ಮಾಡಬಹುದು. ಅಂದರೆ ಒಂದು ವೇಳೆ ನಾನು ಹೇಳಿದ ಉತ್ತಮ ಫಲವನ್ನು ಕೊಯ್ಯುವ ಕಾಲವು ಬಹಳ ಮುಂದೆ ಉಳಿಯುವುದಾದರೂ ಸದ್ಯ ಕೂಡಲೇ ಉಳಿಯುವ ಲಾಭವನ್ನೂ ಆಗುವ ಅನುಕೂಲ ಪರಿಸ್ಥಿತಿಯನ್ನೂ ಹೇಳಿದೆ.

ಈ ಮೇಲಿನ ವಿಚಾರಗಳಲ್ಲಿ ಅನೇಕ ತಪ್ಪುಗಳಿರಬಹುದು. ಆದರೆ ನಾನು ಬರೇ ಓದುಬರಹಬಲ್ಲ ವಿದ್ಯಾವತಿಯಾದುದರಿಂದ ನನ್ನ ಸಹೋದರಿಯರು ನನ್ನನ್ನು ಕ್ಷಮಿಸಿ ಈ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತರುವರೆಂದು ಭಾವಿಸುವೆನು. ಈ ವಿಚಾರದಲ್ಲಿ ಯಾರಾದರೂ ಇನ್ನೂ ಹೆಚ್ಚಿನ ವಿಚಾರ ತಿಳಿಯಬೇಕೆಂದು ಆಶಿಸುವುದಾದರೆ ಈ ಪತ್ರಿಕೆಯ ಮೂಲಕ ನನಗೆ ಬರೆಯಿರಿ ನನ್ನ ಅಲ್ಪ ಮತಿಗೆ ತಿಳಿದ ಸಲಹೆಗಳನ್ನು ಕೊಡಲು ಸಿದ್ಧಳಿರುವೆನು.

ಇತಿ—ನಿಮ್ಮ ಸಹೋದರಿ.

(ಹಿಂದೇ ಪುಟದಿಂದ ಮುಂದರಿಸಿದ್ದು)

ದೇವ್ಯದ ಪ್ರಜೆಗಳಿಗೆ ಇವನನ್ನು ಕಂಡರೆ ಪಂಚಪ್ರಾಣ. ಅದಕ್ಕಾಗಿಯೇ ಪ್ರತಿಸಲವು ಇವನನ್ನೇ ಅಧ್ಯಕ್ಷನನ್ನಾಗಿ ಮಾಡಿ ಕೂಡಿಸುತ್ತಾರೆ. ಜನಗಳೆಲ್ಲರೂ ಪಿತೃಭಾವನೆಯನ್ನಿಟ್ಟು ಪೂಜಿಸುತ್ತಿದ್ದಾರೆ.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್ ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: **ಆನಂದರಾವ್‌ಸರ್ಕಲ್, ಬೆಂಗಳೂರು.**

ಅವನು ಹಿಟ್ಲರನ ಗುರು

ನಾಝಿ ಪಂಥವನ್ನು ಕಂಡುಕೊಂಡವ ಹಿಟ್ಲರನಲ್ಲ ಒಬ್ಬ ಆಂಗ್ಲೇಯನು. ಇವನ ಹೆಸರು ಹೌಸ್ಟನ್ ಸ್ಟುವರ್ಟ್ ಚೆಂಬರ್‌ಲೈನ್ ಎಂದು. ಇವನು ಹಿಟ್ಲರನಿಗೆ ಮಾರ್ಗ ತೋರಿಸಿದವನು ಜರ್ಮನಿಯ ಭಾವೀಜನಾಂಗಸ್ಥಾಪಕ, ನಿರ್ಮಾಣಕ ಮತ್ತು ಶಿಕ್ಷಕ.

ಈ ಜರ್ಮನಿಯ ಅದೃಷ್ಟನಾವೆಯ ಮಾರ್ಗವನ್ನು ಮಾರ್ಪಡಿಸಿದ, ಜಗತ್ತಿನ ದೆಸೆಯಲ್ಲಿ ನವಯುಗವನ್ನು ಕೆರಳಿಸಿದ, ಈ ಪುರುಷನು ಆಂಗ್ಲೇಯನಾಗಿ ಜನಿಸಿ ಜರ್ಮನಿಯವರಿಗಿಂತ ಒಂದು ಹೆಜ್ಜೆ ಮುಂದಿಟ್ಟ ತಾಜಾ ಜರ್ಮನನಿದ್ದನು. ಇವನಿಗೆ ಜರ್ಮನಿಯ ಭಾಷೆಯ ಮೇಲೆ ಅತ್ಯಾಸಕ್ತಿಯುಂಟಾಯಿತು ಮೊದಲು ಅವನು ಜೆನೀವ ಯುನಿವರ್ಸಿಟಿಯಲ್ಲಿ ಸಸ್ಯಶಾಸ್ತ್ರ ಮತ್ತು ಚಿಕಿತ್ಸೆ ನಡೆಸುವ ಕ್ರಮ, ಅಭ್ಯಾಸಿಸುತ್ತಿದ್ದ. ಅಲ್ಲಿ ಅವನಿಗೆ ಜರ್ಮನಿಯೆಂಬುದರಲ್ಲೆಲ್ಲಾ ಅದ್ಭುತ ಅನುರಾಗ ತೋರತೊಡಗಿತು. ಈ ಹುಚ್ಚಿನಿಂದಾಗಿ ಅವನು ಜರ್ಮನ ಸಾಹಿತ್ಯ, ಗಾನ, ವಿಜ್ಞಾನ, ತತ್ವಜ್ಞಾನ ಆಶ್ಚರ್ಯಯುಕ್ತ ಯಂತ್ರ-ಯಂತ್ರ-ಇದರ ಶೋಧದಲ್ಲೆಲ್ಲಾ ಹೇಳಲಾರದ ಉತ್ಸುಕತೆಯನ್ನು ತೋರ್ಪಡಿಸಿದನು, ಜರ್ಮನಿ ಭಾಷೆಯನ್ನು ತನ್ನ ಅಂಗೈನೆಲ್ಲಿಯನ್ನಾಗಿ ಮಾಡಿಕೊಂಡ. ಅನಂತರ ಅವನ ಭಾಷೆ, ಅವನ ಮಾತು, ಅವನ ಪ್ರತಿಯೊಂದು ಅಕ್ಷರ ಜರ್ಮನಿಯಾಯಿತು ಆಂಗ್ಲೇಯ ಮಿತ್ರರಿಗಾದರೂ ಜರ್ಮನಿ ಪತ್ರ ಬರೆಯುತ್ತಿದ್ದ ಈತ

ವಂಶದ ಶೋಧ ವಿಚಾರದಲ್ಲಿ ಅವನ ಆಸಕ್ತಿ ಹೆಚ್ಚಿತು. ಬಹು ಶೋಧ ನಡಿಸಿ ಜನರ ವಂಶ ವಿಚಾರದಲ್ಲಿ ಅತ್ಯಾಧುನಿಕ ರೀತಿಯ ಸಿದ್ಧಾಂತಗಳನ್ನು ಗಳಿಸಿಕೊಂಡನು. ಅವನು ಬರೆದ, "Foundations of the Nineteenth Century" ಎಂಬ ಗ್ರಂಥದಿಂದ, ಯುರೋಪಿನ ಪ್ರಗತಿಗೆ ಆರ್ಯವಂಶಸ್ಥರಾದ ಈಗಿನ ಟ್ಯುಟೋನಿ ಜನರೇ ಕಾರಣರೆಂದು ಸ್ಪಷ್ಟೀಕರಿಸಿದನು. ಈ ಪುಸ್ತಕವು ಪ್ರಕಟವಾದುದೇ ತಡ; ಬಿಸಿದೋಸೆಯಂತೆ ಮಾರಾಟವಾಗಿ ಹೋಯಿತು. ಮಾಜಿ ಕೈಸರನು ತಾನೇ ಹಿಂದಿನ ಪ್ರತಿಗಳನ್ನು ಕೊಂಡುಕೊಂಡು, ತನ್ನ ಮಿತ್ರರೊಳಗೆ ಹಂಚಿದನು. ಚೆಂಬರ್ಲೇನನೀಗ ಚಕ್ರವರ್ತಿಯ ಅತ್ಯಂತ ಪ್ರೇಮ ಸಾಹಾರ್ದಕ್ಕೆ ಪಾತ್ರನಾದ ವ್ಯಕ್ತಿಯಾದನು.

ಹಿಟ್ಲರನ ಕೈಗೆ ಈ ಪುಸ್ತಕವು ಬಿದ್ದುದು 1908ರಲ್ಲಿ ಯೆಹೂದ್ಯರು ಮತ್ತು ಜರ್ಮನರು—ಎರಡು ಪ್ರಬಲ ಶಕ್ತಿಗಳು, ಪರಸ್ಪರ ಹೊಡೆದಾಡಿಕೊಳ್ಳುವರಾಗಿದ್ದಾರೆ" ಎಂಬೀ ಪುಸ್ತಕದ ಮಾತು ಹಿಟ್ಲರನ ಮನಸ್ಸನ್ನು ಸೆಳೆದು ಬಿಟ್ಟಿತು ಹಿಟ್ಲರನು ಸುತ್ತಲೂ ನೋಡಿದನು. ಎಲ್ಲೆಲ್ಲಿಯೂ ಸಮಾಜದ ವಕ್ರತೆ, ಲಜ್ಜಾಸ್ಪದ ವರ್ತನೆಯ ಸನ್ನಿವೇಶದಿಂದ ಅವನ ಮನಸ್ಸು ಕಠಿಣವಾಯಿತು. ಚೆಂಬರ್ಲೇನನ ಇನ್ನಿತರ ಗ್ರಂಥಗಳನ್ನೂ ಓದಿದನು. ಅದರಲ್ಲಿ ಪ್ರಖ್ಯಾತವಾದ1905ರಲ್ಲಿ ಪ್ರಕಟಿಸಲ್ಪಟ್ಟ Aryan mind—ಎಂಬ ಗ್ರಂಥವು ಅವನನ್ನು ಸ್ಥಿರ ಮನಸ್ಕನನ್ನಾಗಿ ಮಾಡಿತು

ಇಷ್ಟೆಲ್ಲಾ ಆಗುವಷ್ಟರಲ್ಲಿ ಮಹಾಯುದ್ಧ ತೊಡಗಿತು. ಚೆಂಬರ್ಲೇನನ ಹಿರಿದಾಶೆಗೆ ದಕ್ಕೆಬಡೆಯಿತು. ಅವನ ದೃಷ್ಟಿಯಲ್ಲಿ, ಟ್ಯುಟೊನಿವಂಶಕ್ಕೆ ಸೇರಿದ ಇಂಗ್ಲಿಷರೇ ಜರ್ಮನಿಯವರನ್ನು ವಂಚಿಸಿದರೆಂದು ಖಚಿತವಾಯಿತು. ಜರ್ಮನಿಯು ಜಗತ್ತಿನ ಆದರ್ಶಸಂಸ್ಕೃತಿಯ ಜನಾಂಗವೆಂದು ನಂಬಿದ್ದ ಚೇಂಬರ್ಲೇನನ ಹೃದಯವು ಸಂತಾಪದಿಂದ ಉರಿಯತೊಡಗಿತು. ಅವನು ತನ್ನ ಜನ್ಮಭೂಮಿಗೇನೇ ವೈರಿಯಾದನು, ಇಂಗ್ಲಿಷರ ವರ್ತನೆಯನ್ನು ಕಟುವಾಗಿ ಟೀಕಿಸಿ ಬರೆಯುತೊಡಗಿದನು.

ಅವನು ಒಂದೆಡೆ, ಹೀಗೆ ಬರೆದ "ಮಾನವವಂಶದಲ್ಲಿ ಪಾಮರನಾದ ಆಂಗ್ಲೇಯನಷ್ಟು ಪಾಮರನು ಬೇರಿಲ್ಲ. ಇಂಗ್ಲೆಂಡು ಗದ್ದಿತು ಅಂದರೆ ಜಗತ್ತಿನ ಸಂಸ್ಕೃತಿಗೆ ನಾಶಕಾಲ-' ಕೈಸರನು ಅವನನ್ನು ಬಹು ಸನ್ಮಾನಿಸುತ್ತಿದ್ದನು. ಅವನು ಬರೆದ ಕರಪತ್ರಗಳನ್ನು ಗಾಡಿಯಲ್ಲಿ ಸಾಗಿಸಿ ಹಂಚಿಸಲಾಗುತ್ತಿತ್ತು.

ಯುದ್ಧದ ಅಂತ್ಯಕಾಲದಲ್ಲಿ ಚೆಂಬರ್ಲೇನನು ಪ್ರಜಾಪ್ರಭುತ್ವ[illegible] ಸರ್ವಾಧಿಕಾರತ್ವವನ್ನು ಪ್ರಶಂಸಿಸತೊಡಗಿದನು. ಅವನ ಪ್ರಜಾಧಿಕಾರ ಮತ್ತು ಸರ್ವಾಧಿಕಾರ ಮತ್ತು ರಾಜಕೀಯ ಧ್ಯೇಯಗಳು ಇವೇ ಮೊದಲಾದ ಬರಹಗಳಿಂದ ನಾಝಿ ತತ್ವದ ತಳಹದಿ ಹಾಕಿದಂತಾಯಿತು. ಯುದ್ಧಮುಗಿದ ನಂತರ, ಜರ್ಮನಿಗೆ ಜಲ ನೆಲಗಳಲ್ಲಿ ಶತ್ರುಗಳನ್ನು ಪ್ರಬಲವಾಗಿ ಇದಿರಿಸುವ ಸಾಮರ್ಥ್ಯವಿದ್ದಿತು. ಆದರೆ ಯಹೂದ್ಯರು ಅಂತರ್ಗತ ಗಲಭೆಯನ್ನು ಹುಟ್ಟಿಸಿದರು. ಮತ್ತು ದುಷ್ಟ ಹೇತುವಿನಿಂದ ಕೂಡಿದ ವರ್ಸೈಲ್ಸ್ ಒಪ್ಪಂದವನ್ನು ಪುನರಾವರ್ತಿ ಪರಿಶೀಲಿಸತಕ್ಕದೆಂದು ಸಾರಿದವರಲ್ಲಿ ಅವನು ಮೊದಲಿಗನು. ಅನಂತರ ಅವನು ಜರ್ಮನಿಯು ತಿರುಗಿ, ಸಶಸ್ತ್ರದಿಂದ ಮುಂದಾಗಬೇಕು, ಜರ್ಮನಿಯ ಸೋಲೆಂಬುದು ನಿಜವಾದ ಸೋಲಲ್ಲ. ಜಯವು ಮುಂದಿದೆಯೆಂದು ಜರ್ಮನರನ್ನು ಎಚ್ಚರಿಸಿದನು.

ಹೋಸ್ಟನನು ಪ್ರಸಿದ್ಧ ಕವಿಯಾದ ವಾಗ್ನರ್ ಎಂಬವನ ಮಗಳನ್ನು ಮದುವೆಯಾಗಿದ್ದನು. ಮತ್ತು ಬ್ಯೆರಂತಿನಲ್ಲಿ ವಾಸಿಸುತ್ತಿದ್ದನು. ಅವನು ಹಿಟ್ಲರನಿಗೆ ಹೀಗೆ ಬರೆದಿದ್ದನು. "ಒಂದು ಹಿಂಸೆಯು ಗಲಭೆಯಿಂದ ಅಂತ್ಯವಾಗುವುದು ಮತ್ತು ಇನ್ನೊಂದು ಹಿಂಸೆಯಿಂದ ಹೊಸ ಜಗತ್ತು ನಿರ್ಮಾಣಹೊಂದುವುದು. ನೀನು ಇತಿಹಾಸದಲ್ಲಿ ಜಗತ್ತನ್ನು ನಿರ್ಮಿಸಿದವರಲ್ಲೊಬ್ಬ ಮಹನೀಯನೆಂಬ ಪ್ರಶಂಸೆ ಪಡೆಯುತ್ತಿ. ನೀನ ಜಗತ್ತು ನಾಶಕಾರಕವಲ್ಲವೆಂದು ನನ್ನ ನಂಬಿಕೆ."

ನೋಟೀಸು
ಉಡುಪಿ ಡಿ. ಮು. ಕೋರ್ಟಿನಲ್ಲಿ

O P. 16/39

1. ಫಿಲಿಪ್ ಫೆರ್ನಾಂಡಿಸ್, 2. ಜೋನ್ ಅಂತೋನಿ ಫೆರ್ನಾಂಡಿಸ್, 3 ರೇಜಿನಾ ಮ್ಯಾ—ಅರ್ಜದಾರರು.

2, 3ನೇ ಅರ್ಜದಾರರು 1ನೇ ಅರ್ಜದಾರನ ಮಕ್ಕಳು. ಎಲ್ಲರೂ ಉಡುಪಿ ತಾಲೂಕು ಪಡುಕೋಣೆ ಗ್ರಾಮದಲ್ಲಿರುವವರು.

1ನೇ ಅರ್ಜದಾರನ ಹೆಂಡತಿ, ಇತರ ಅರ್ಜದಾರರ ತಾಯಿ ಈಗ ಮೃತಪಟ್ಟಿರುವ ಎಲಿಜೆಬೆತ್ ಅಂದ್ರಾದ ಬ್ಯಾಯಿ, ವಿಲ್ ವಗೈರೆ ಮಾಡದೆ ಮೃತಪಟ್ಟಿರುವ ತನ್ನ ತಂದೆ ಜಾಕೋಬ್ ಅಂದ್ರಾದರು 'ಮಂಗಳೂರು ರೋಮನ್ ಕಥೋಲಿಕ್ ಪ್ರಾವಿಡೆಂಟ ಫಂಡಿನಲ್ಲಿ ನಂಬ್ರ 671ನೇ I ಕ್ಲಾಸ್ ಪೋಲಿಸಿ ಹಣದಲ್ಲಿ ಒಬ್ಬ ವಾರೀಸುದಾರಳಾಗಿದ್ದು ಸದರಿಯವಳು ಕೂಡ ವಿಲು ವಗೈರೆ ಮಾಡದೆ ಮೃತಪಟ್ಟಿರುವ ಕಾರಣ ಸದರಿ ಹಣದ ಸೈಕಿ ರೂ. 129-5-0 ಮಾತ್ರ ಪಡೆಯುವದೇ ನಮಗೆ ವಾರಿ ಸುಕರ್ಟಫಿಕೇಟು ಕೊಡಬೇಕಾಗಿ ಮನವಿಮಾಡಿದ್ದಾರೆ ಆ ಕುರಿತು ಆಕ್ಷೇಪವುಳ್ಳವರು ಈ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ತಾ. 3-3-1939 ರಲ್ಲು ಹಗಲು ಘಂಟೆ 11ಕ್ಕೆ ಜಾಹೀರುಮಾಡಬೇಕಾಗಿ ಈ ಮೂಲಕ ತಿಳಿಸಲಾಗುತ್ತದೆ

K. Vittal Nayak,
Vakil for Petitioners.

Udipi, 11-9 39.

WANTED—Districts Organisers and Taluka Superintendents in Districts of Belgaum Bijapur, Dharwar, Canara and Coorg on salary and commission basis. Special facilities for the initial business of Rs 10,000/-. Only influential gentlemen who can guarantee Rs. 50,000/- and Rs 25,000/- per year need apply, Messrs.

PADUBIDRI BROS BOMBAY 8

ಪ್ರಕಟಣೆ.
ಶಿರ್ವ ಪಂ. ಬೋರ್ಡಿನ ಪ್ರೆಸಿಡೆಂಟರಿಂದ

ಶಿರ್ವ ಪಂಚಾಯ್ತಬೋರ್ಡಿಗೊಳಪಟ್ಟ ಮಂಚಕಲ್ ಹಪ್ತೇವಾರು ಸಾರ್ಕೇಟೆನಲ್ಲಿ ಸಂ. 1939ನೇ ಇಸ್ವಿ ಎಪ್ರಿಲ್ ತಿಂಗಳ ತಾ 1ರ ಆರಭ್ಯಾತು 1940ನೇ ಮಾರ್ಚ 31ರ ವರೆಗೆ ಒಂದು ವರ್ಷದ ಮುಟ್ಟಿನ ವರಿವಸೂಲ್ ಮಾಡುವ ಸ್ವತಂತ್ರವನ್ನು **1939**ನೇ ಫೆಬ್ರವರಿ ತಾ **19**ನೇ ಆದಿತ್ಯವಾರ ಹಗಲು ಘಂಟೆ **3**ಕ್ಕೆ ಸರಿಯಾಗಿ ಸದ್ರಿ ಪಂ ಬೋ. ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ಸದ್ರಿ ಏಲಂಗಳು ಪಂಚಾಯ್ತ ಬೋರ್ಡಿನ ಮಂಜೂರಾತಿಗೊಳಪಟ್ಟವುಗಳಾಗಿರುತ್ತವೆ, ಮತ್ತು ಸಂಬಂಧಪಟ್ಟ ಸಂಪೂರ್ಣ ಮಾಹಿತಿ ವಗೈರೆಗಳನ್ನು ಆಫೀಸ್ ನೋಟೀಸ್ ಬೋರ್ಡಿನ ಬಹಿರಂಗ ಪ್ರಕಟಣಾದಿಗಳಿಂದ ಓದಿ ಯಾ ಆಫೀಸಿನಲ್ಲಿ ಕೇಳಿ ತಿಳಕೊಳ್ಳಬಹುದು ಎಂದು ಉಪೇ ದ್ವಾರ ಹಾಗೂ ಸಾರ್ವಜನಿಕರಿಗೆಲ್ಲಾ ಈ ಮೂಲಕ ತಿಳಿಸಲಾಗುತ್ತದೆ

Panchayat Bd Office Shirva, Dated 1-2-39	(Sd.) S Annayya Hegde President, Panchayat Board, Shirva, South Kanara.

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ. 2—4—0.

ಸಣ್ಣ ಸುಂದರ, ಅರಾದ ಗಟ್ಟಿಮುಟ್ಟಾದ ವೆ ಸಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರಂಟಿಯುಳ್ಳ ಕೃತಿಯು, ದೀರ್ಘ ಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2-10 0, ಅತ್ಯುತ್ತಮವಾದುದಕ್ಕೆ 3-4-0. ಸುವರ್ಣದಕ್ಕೆ ರೂ. 3 8 0 ಅತ್ಯುತ್ತಮವಾದುದಕ್ಕೆ ರೂ. 4 8 0, ಚಿತ್ರದಲ್ಲಿ ತೋರುವ ಲೀದಿ ರಿಸ್ಟ್‌ವಾಚಿಗೆ ರೂ. 6 0 0, ಜುವೆಲಿರುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ 10-0-0 ಟ ಮ. ಪ್ರತ್ಯೇಕ

ಎಚ್ ಡಾವಿಡ್ ಅಂಡ್ ಕೊ.
ಪೊ ಬಾಕ್ಸ್ 11424 ಕಲ್ಕತ್ತ.

H. David & Co.
Post Box No 11424. Calcutta

ಬೊಂಬಾಯಿಯ ನಮ್ಮ ಪ್ರತಿನಿಧಿಗಳು

ಶ್ರೀ. ಯು. ಕೆ. ರಂಗ,

ಜಪಾನ್ ಕೊಟನ್ ಟ್ರೇಡಿಂಗ್ ಕೊ. ಲಿಮಿಟೆಡ್.

ಹೊಸ ಪುಸ್ತಕ! ಇದೀಗ ಪ್ರಕಟವಾಗಿದೆ!

ಅಜ್ಞಾನ ತಿಮಿರ ಮಾರ್ತಾಂಡ

ಜನ್ಮತಃ ಅಸ್ಪೃಶ್ಯತೆಯು ಇರಲಿಲ್ಲವೆಂಬುದನ್ನೂ ಅಂಥ ಸಂಪ್ರದಾಯದ ಸನಾತನಿಗಳ ವಾದದಲ್ಲಿ ತಿರುಳಿಲ್ಲವೆಂಬುದನ್ನೂ ವಿವರಿಸಿ ಪುರಾಣ, ಸ್ಮೃತಿಗಳ ಆಧಾರದಿಂದ ಶ್ರೀ. ಬಿ. ಅಂತಯ್ಯ ಶೆಟ್ಟರಿಂದ ನವೀನವಾಗಿ ಬರೆಯಲಾದ ಹೊಸ ಪುಸ್ತಕ.

ಬೆಲೆ: 0—4—0 ಮಾತ್ರ.

ಇದರ ಉತ್ಪತ್ತಿಯು ಹರಿಜನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲ್ಪಡುವುದು. 0-4-6 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳಿಸಲಾಗುವುದು.

ಉಡುಪಿಯಲ್ಲಿ ಪುಸ್ತಕ ಸಿಗುವ ಸ್ಥಳ
Navabharat Book Depot.
Udipi.

ಬಿ. ಅಂತಯ್ಯ ಶೆಟ್ಟಿ,
ಹರಿಜನ ಶಿಕ್ಷಣ ಸಹಾಯಕ ಸಂಘ,
ಬ್ರಹ್ಮಾವರ

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಗೆಯೇ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ನೂತನವಾದ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅದರಲ್ಲಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—T. V. ದೇವಕರ್ ಎಂಡ್ ಕಂಪೆನಿ,
ನಂಬುಲಿಯರ್ ಬೀದಿ, ಜಿ ಟಿ. ಮದರಾಸು.

T V. Devkar & Co, *Nambulier Street*, G. T. MADRAS.

ಮೈಸೂರಿನ ದಿವಾನರನ್ನು ಸ್ವಾಗತೀಕರಿಸಲು

ಉಡುಪಿ ಮಹಾಜನರ ನವೋತ್ಸಾಹ.

ಮಾನಪತ್ರವನ್ನು ಮನ್ನಾಪಡಿಸಬೇಕೆನ್ನುವ ನಗರಸಭಾಸದಸ್ಯರ ಮೇಲೆ ಕಠಿಣ ಟೀಕೆ!

ಇದೇ ತಾ 19-2-39ಕ್ಕೆ ಉಡುಪಿಗಾಗಮಿಸಲಿರುವ ಮೈಸೂರು ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರನ್ನು ಸ್ವಾಗತೀಕರಿಸಿ ಅವರಿಗೆ ಮಾನಪತ್ರವರ್ಪಿಸಬೇಕೆಂದು ತಮ್ಮದೊಂದು ಸಭೆಯಲ್ಲಿ ಸರ್ವಸಮ್ಮತಿಯಿಂದ ನಿರ್ಧರಿಸಿದ್ದ ಉಡುಪಿ ಮುನಿಸಿಪಾಲಿಟಿಯ ಮೆಂಬರರಲ್ಲಿ ಕೆಲವರು, ಆ ನಿರ್ಧಾರವನ್ನು ಪುನರಾಲೋಚಿಸಬೇಕೆಂಬ ಬಗ್ಗೆ ಇದೇ ತಾ 14ಕ್ಕೆ ಪುನಃ ಮುನಿಸಿಪಾಲಿಟಿ ಸಭೆಕರೆದಿದ್ದರು. ಈ ವರ್ತನೆಯನ್ನು ನಿಷೇಧಿಸುವರೆ ಉಡುಪಿ ಮುನಿಸಿಪಲ್ ಸಂಕಷ್ಟನಿವಾರಣಾ ಸಮಿತಿಯ ಪರವಾಗಿ ಇದೇ ತಾರೀಕು 12-2-39ನೇ ಆದಿತ್ಯವಾರ ಸಂಜೆ 6½ ಘಂಟೆಗೆ ರಥಬೀದಿಯಲ್ಲಿ ಪ್ರಚಂಡ ಸಾರ್ವಜನಿಕ ಸಭೆಯೊಂದು ಡಾ ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಸೇರಿತು

ಮೆಂಬರರ ವರ್ತನೆಯ ತೀವ್ರ ಖಂಡನೆ

ಶ್ರೀ. ಬಿ. ಆರ್. ಕುಂಜೂರರು ತನ್ನ ಭಾಷಣದಲ್ಲಿ ಮಾನಪತ್ರವನ್ನು ಮನ್ನಾಪಡಿಸಬೇಕನ್ನುವ ಮೆಂಬರರ ವರ್ತನೆಯನ್ನು ತೀವ್ರವಾಗಿ ಖಂಡಿಸಿದರು. ಇದು ಕೆಲವರ ಜಾತಿದ್ವೇಷದ ಸಾಧನೆಯೆಂದೂ, ಸರ್. ಮಿರ್ಜಾರವರು ದೇಶಪ್ರೇಮಿಯೇ ಹೊರತು ದೇಶದ್ರೋಹಿಗಳಲ್ಲವೆಂದೂ ಹಲವು ದೃಷ್ಟಾಂತಗಳನ್ನು ಕೊಟ್ಟು ಮಾತನಾಡಿದರು ಪಂಡಿತ ಶ್ರೀ ವೆಂಕಟರಮಾಚಾರ್ಯರ, ಮೈಸೂರಿಗೂ ಉಡುಪಿಗೂ ಇರುವ ನಿಕಟಬಾಂಧವ್ಯವನ್ನು ವರ್ಣಿಸಿ ದೇಶಪ್ರೇಮವೆಂಬ ಹೆಸರಿನಿಂದ, ದೇಶಹಿತ ಸಾಧನೆಯ ಮುಖ್ಯಕಾರ್ಯವಾದ ಹಿಂದೂ ಮುಸ್ಲಿಮ್ ಐಕ್ಯತೆಗೆ ಭಂಗತಂದೆಳೆಸುವ ಮುನಿಸಿಪಲ್ ಸದಸ್ಯರ ವರ್ತನೆಯನ್ನು ನಿಷೇಧಿಸಿದರು! ಪುನರಾಲೋಚನೆಗೆ ನಗರಸಭೆಯ ಮೀಟಿಂಗು ಕರೆದ ಮೆಂಬರರ ವರ್ತನೆಯನ್ನು ಖಂಡಿಸಿ, ದಿವಾನರಿಗೆ ಸಂಭ್ರಮದ ಸ್ವಾಗತವೀಯಬೇಕೆಂಬ ಅಭಿಪ್ರಾಯದ ನಿರ್ಣಯವನ್ನು ಶ್ರೀ. ಎಸ್. ಎಸ್. ಕಾರಂತರು ತಂದು, ಒಮ್ಮೆ ಮಾನಪತ್ರವೀವೆನೆಂದು ತಾವಾಗಿ ಆಮಂತ್ರಿಸಿ, ಆಮೇಲೆ ಕೈ ಅಂಗಾತ ಹಿಡಿದು, ಮಾನ್ಯ ದಿವಾನರನ್ನು ಉದ್ದೇಶಪೂರ್ವಕ ಅವಮಾನಿಸಲೆಳೆಸುವವರ ವರ್ತನೆಯನ್ನು ಸಕಾರಣವಾಗಿ ಖಂಡಿಸಿದರು. ಶ್ರೀ. ಯಸ್ ಯು. ಪಡಿಯಾಡಿಯವರು ಅದನ್ನು ಅನುಮೋದಿಸುವಾಗ ಬಹಳ ಸ್ಫೂರ್ತಿಯಿಂದ ಮಾತನಾಡಿ ಸಾರ್ವಜನಿಕರ ಅಭಿಪ್ರಾಯಗಳನ್ನು ಅಲ್ಲಗಳೆಯುವುದರಲ್ಲಿರುವ ಅಪಾಯದ ಕುರಿತು ನಗರಸಭಾ ಸದಸ್ಯರನ್ನು ಎಚ್ಚರಿಸಿದರು. ಕರ್ತೃತ್ವಶಕ್ತಿ, ಬದ್ಧಿಬಲದಲ್ಲಿ ಮುನಿಸಿಪಲ್ ಮೆಂಬರರು 16 ಮಂದಿಯನ್ನು ಒಬ್ಬಂಟಿಗರಾಗಿ ಸರಿಗಟ್ಟಬಲ್ಲ ಪ್ರತಿಭಾವಂತರು ನಗರಸಭೆಯ ಹೊರಗಿರುವರೆಂಬುದನ್ನು ಮೆಂಬರರು ಮರೆಯಬಾರದೆಂದೂ, ಕಾಂಗ್ರೆಸ್ ನಿರ್ಣಯವೂ ಇಲ್ಲ, ಉಡುಪಿ ಮುನಿಸಿಪಾಲಿಟಿಯಲ್ಲಿ ಕಾಂಗ್ರೆಸ್ ಪಕ್ಷವೂ ಇಲ್ಲವಾದ್ದರಿಂದ, ಮೈಸೂರು ದಿವಾನರಿಂದು ಸ್ವಾಗತಾರ್ಹರೆಂದೂ ಹೇಳಿ, ನಗರಸಭೆಯು ತಪ್ಪಿದಲ್ಲಿ, ಅದರ ಮೆಂಬರರನ್ನಲಕ್ಷಿಸಿ, ಸಾರ್ವಜನಿಕರು ತಾವಾಗಿ ಸಂಭ್ರಮದ ಸ್ವಾಗತವೀಯಬೇಕೆಂದರು

ಅಧ್ಯಕ್ಷರ ಭಾಷಣ

ಅಧ್ಯಕ್ಷರು ನಿರ್ಣಯವನ್ನು ಸಭೆಯ ಮುಂದಿಟ್ಟಾಗ, ಸರ್ ಮಿರ್ಜಾರ ಜಯಘೋಷ, ಕರತಾಡನಗಳೊಡನೆ ಸರ್ವಾನುಮತದಿಂದ ಮಂಜೂರಾಯಿತು. ಅಧ್ಯಕ್ಷರು ದಿವಾನರ ಗುಣಗಾನಮಾಡುತ್ತಾ 'ಇವರಂತಹ ದೇಶಪ್ರೇಮಿಗಳು ಇಲ್ಲ ಯಾರೂ ಇಲ್ಲ. ಮೈಸೂರಿಗೆ ಹೋಗಿ ಕಂಡಲ್ಲಿ ಅವರ ದೇಶಪ್ರೇಮ, ಜನಾನುರಾಗಕ್ಕೆ ದೃಷ್ಟಾಂತಗಳು ದೊರೆಯುವವು. ಮಾನಪತ್ರ ನಿರಾಕರಣೆಗೆ ಹೊರಟವರ ವಾದದಲ್ಲಿ ಹುರುಳಿಲ್ಲ ವ್ಯಕ್ತಿಶಃ ಅವರು ಸಜ್ಜನರು ಅಸಾಮಾನ್ಯ ಪ್ರತಿಭಾವಂತರು. ಇನ್ನು ನಾವೆಷ್ಟೋ ಪ್ರಯೋಜನಗಳನ್ನು ಹೊಂದಬೇಕಾಗಿರುವ ಮೈಸೂರು ಸರಕಾರದ ಶಿರಸ್ಸಾಗಿರುವರು, ಅವರನ್ನು ಸ್ವಾಗತಿಸುವ ಸುಸಂದರ್ಭವು ನಮ್ಮ ಸೌಭಾಗ್ಯದಿಂದ ದೊರತಿರುವಾಗ ಅದನ್ನು ಕಳಕೊಳ್ಳಬಾರದೆಂದರು ಮುನಿಸಿಪಾಲಿಟಿಯವರು ಮಾನಪತ್ರವೀಯಬೇಕೆಂದೂ, ಅವರದಕ್ಕೆ ತಪ್ಪಿದರೆ ಶ್ರೀ ಪಣಿಯಾಡಿಗಳಂದಲೇ ಸಾರ್ವಜನಿಕರು ಸ್ವಾಗತಕ್ಕೆ ಮುಂದಾಗಬೇಕೆಂದೂ ಕೇಳಿಕೊಂಡರು.

ಶ್ರೀ. ಬಿ. ಆರ್ ಕುಂಜೂರರು ಧನ್ಯವಾದಗಳನ್ನರ್ಪಿಸಿ ಸಭಾಂತ್ಯವಾಯಿತು

ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು, Kt K C I. C.

ಇವರು ತಾ. 18-2-39ಕ್ಕೆ ಜಾಗಲಿರುವ ದಕ್ಷಿಣ ಕನ್ನಡ ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಬ್ಯಾಂಕಿನ ರಜತೋತ್ಸವದ ಅಧ್ಯಕ್ಷತೆ ವಹಿಸಲು ನಮ್ಮ ಜಿಲ್ಲೆಗೆ ಬರುವರು. ಇವರು ರಾಜನೀತಿಜ್ಞರು, ಪ್ರಗತಿಪರ ಮೈಸೂರಿನ ಪ್ರಾಗತಿಕ ಮನೋವೃತ್ತಿಯ ದಿವಾನರಾಗಿ ಮಹಾರಾಜರ ಪ್ರೇಮ ವಿಶ್ವಾಸಕ್ಕೆ ಪಾತ್ರರಾಗಿ ಮೂರನೆ ಬಾರಿ ದಿವಾನಪದವಿಯನ್ನೇರಿದವರು ರಾಜ್ಯಾಡಳಿತದ ಸರ್ವಾನುಭವವುಳ್ಳವರಾಗಿ, ಬಹು ಜಾಣ್ಮೆಯಿಂದ ಮೈಸೂರಿನ ಆಡಳಿತವನ್ನು ಪ್ರಗತಿಮಾರ್ಗದಲ್ಲಿ ಮುನ್ನಡೆಸುತ್ತಿರುವರು. ತಾ. 19ಕ್ಕೆ ಇವರು ಉಡುಪಿಗೆ ಬರಲಿರುವರು, ಇಲ್ಲಿ ಸಂಭ್ರಮದ ಸ್ವಾಗತದ ವ್ಯವಸ್ಥೆಯಾಗಿದೆ.

ಮುನಿಸಿಪಲ್ ಸ್ಪೆಶಲ್ ಮೀಟಿಂಗ್

ತಾ. 14ರಲ್ಲಿ ಜರಗಿದ ಸಭೆಯಲ್ಲಿ ದಿವಾನರಿಗೆ ಮಾನಪತ್ರ ಕೊಡಬೇಕೆಂದು ಸರ್ವಸಮ್ಮತಿಯಿಂದ ಮಂಜೂರಾಗಿದೆ!

ಹಾಲಾಡಿ— ತಾ 12-2-39ರಲ್ಲಿ ನಡೆದ ಹಾಲಾಡಿ ಕೇಂದ್ರ ಕೋಂಗ್ರೆಸ್ ಕಮಿಟಿಯ ಸಭೆಯಲ್ಲಿ ಶ್ರೀಗಳಾದ ಹಾಲಾಡಿ ಎ ಹಾಬಲ ಶೆಟ್ರ ಅಧ್ಯಕ್ಷ, ಹಾಲಾಡಿ ಗಣಪಯ್ಯ ಕಮ್ತಿರು ಕಾರ್ಯದರ್ಶಿ, ವೆಂಕಟಗಿರಿ ನಾಯ್ಕರು ಖಜಾನ್ಜಿಗಳಾಗಿಯೂ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಗೆ ಶ್ರೀ ಹಾಲಾಡಿ ಯು ವಿಟ್ಠಪ್ಪ ಶ್ಯಾನುಭಾಗರನ್ನು ಪ್ರತಿನಿಧಿಯರನ್ನಾಗಿಯೂ ಆರಿಸಲ್ಪಟ್ಟರು

ನೋಟೀಸು.

ಕುಂದಾಪುರ ಡಿ ಮುನ್ಸಿಫ್ ಕೋರ್ಟಿನಲ್ಲಿ

O S 441/1938

1 ಶ್ರೀನಿವಾಸ ಹೆಬ್ಬಾರ 2 ಕೃಷ್ಣಯ್ಯ ಹೆಬ್ಬಾರ ಕೊರವಡಿ ಸೂರಪ್ಪ ಯಾನೆ ವೆಂಕಟಾಚಲ ಹೆಬ್ಬಾರರ ಮಗಂದಿರು.

ಹಾಲಿ ಬೆಂಗಳೂರು ಚಾಮರಾಜಪೇಟೆ 102ನೇ ರಸ್ತೆಯ 14ನೇ ನಂಬ್ರದಲ್ಲಿರುತ್ತಾರೆ.

ವಾದಿರು

ರಾಘವೇಂದ್ರ ಹೆಬ್ಬಾರ, ಕೊರವಡಿ ಸೀತಾರಾಮ ಹೆಬ್ಬಾರರ ಮಗ ಹಾಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಯನೂರು ಎಂಬಲ್ಲಿ ಇರುವವ.

3ನೇ ಪ್ರತಿವಾದಿ

ಸದರಿ 3ನೇ ಪ್ರತಿವಾದಿಗೆ ತಿಳುಹಿಸುವುದೇನೆಂದರೆ—

ನೀವು ಕೊಡ 4ನೇ ವರಿಗಿನ ಪ್ರತಿವಾದಿರ ಬಗ್ಗೆ ವಾದಿರು ಕಲ್ಮಾಡಿಯವರಿಗೂ ಸರ್ವೋತ್ತಮ ಹೆಬ್ಬಾರರ ಮಾರೀಸುದಾರರಿಗೂ ತೆತ್ತ ಹಣವನ್ನೆರೆ ಬರಮಾಡಿಕೊಳ್ಳುವರೆ ವಾದೀರು ಹೂಡಿದ ಸದರಿದಾವೆಯು ತಾ. 1-3-1939ಕ್ಕೆ ತನಿಕೆಗೆ ಇಟ್ಟಿರುತ್ತದೆ. ಆ ದಾವೆಯ ಕುರಿತು ನೀವು ಉಜ್ರುಹೇಳುವಂಥಾದಿದ್ದರೆ ಆ ಕುರಿತು ನಿಮ್ಮ ಬರಹಮೂಲಕವಾದ ಹೇಳಿಕೆಯನ್ನು ತನಿಕೆಗಿಂತ ಮುಂಚಿತವಾಗಿ ಕೋರ್ಟಿಗೆ ಹಾಜರುಮಾಡಬೇಕಾಗಿ ಈ ಮೂಲಕ ತಿಳಿಸಿಯದೆ

M M Ural,
Advocate for Petitioner

ಕುಂದಾಪುರ, ತಾ. 1-2-1939

ಬ್ರಹ್ಮಾವರ— ತಾ 8-2-39ರಲ್ಲಿ ಬ್ರಹ್ಮಾವರ ಸ್ವರಾಜ್ಯ ಮೈದಾನಿನಲ್ಲಿ ರಿಟರ್ನಿಂಗ್ ಆಫೀಸರರಾದ ಶ್ರೀ. ಹೇರೂರು ರಾಮಕೃಷ್ಣ ಅಡಿಗಳವರ ಅಧ್ಯಕ್ಷತೆಯಲ್ಲಿ 1939ನೇ ವರ್ಷದ ಬಗ್ಗೆ ಕೇಂದ್ರ ಕೋಂಗ್ರೆಸ್ ಕಮಿಟಿಯ ಮೆಂಬರರನ್ನು ಆರಿಸಲಾಯಿತು ಶ್ರೀ ಎಚ್ ಪದ್ಮನಾಭ ಬಿ ಆಂತ್ಯ ಶೆಟ್ರು ಅಧ್ಯಕ್ಷರಾಗಿಯೂ ಎ ನಾಗಪ್ಪಯ್ಯ ಮಲ್ಯರು ಉಪಾಧ್ಯಕ್ಷರಾಗಿಯೂ, ಎನ್. ಶ್ರೀನಿವಾಸ ಶ್ಯಾನುಭಾಗರು ಮತ್ತು ಹಾರಾಡಿ ಆಂತ್ಯ ಶೆಟ್ಟರು ಜೊತೆ ಕಾರ್ಯದರ್ಶಿಯರಾಗಿಯೂ, ಬಿ ಗಣಪನ ನಾರಾಯಣ ಶೆಟ್ರು ಕೋಶಾಧ್ಯಕ್ಷರಾಗಿಯೂ, ಹೇರೂರು ರಾಮಕೃಷ್ಣ ಅಡಿಗಳವರು ಉಡುಪಿ ತಾಲೂಕು ಕೋಂಗ್ರೆಸ್ ಕಮಿಟಿಯ ಮೆಂಬರರಾಗಿಯೂ, ಇತರ ನಾಲ್ಕರು ಸಾಮಾನ್ಯ ಸದಸ್ಯರಾಗಿಯೂ ಆರಿಸಲ್ಪಟ್ಟರು

ಹಿರಿಯಡಕ— ತಾ 7-2-39ನೇ ರಾತ್ರಿ ಜರಿಕಲ್ಲು ವೆಂಕಪ್ಪ ಗೌಡ ಎಂಬವನನ್ನು ಯಾರೋ ಗುಂಡು ಹಾಕಿ ಕೊಂದಿರುವರಾಗಿ ವಾರ್ತೆ. ಈ ಗ್ರಾಮದಲ್ಲಿ ಮೇಲಿಂದಮೇಲೆ ಕೊಲೆ, ಸುಲಿಗೆ, ಕಳವು ಮೊದಲಾದ ಅತ್ಯಾಚಾರಗಳು ನಡೆಯುತ್ತಿರುವುದು ಶೋಚನೀಯವಿದೆ.

ಬರುವ ವಾರ

'ಜಗತ್ತಿನ ದೃಷ್ಟಿಯಲ್ಲಿ ಭಾರತ' ಭಾರತದ ಪರರಾಷ್ಟ್ರ ನೀತಿ' 'ಸಮಯದ ಬೆಲೆ' ಮೊದಲಾದ ಲೇಖನಗಳು ಬರುವವು. ಓದಲು ಮರೆಯಬೇಡಿರಿ.

THE
PANGAL NAYAK BANK
LIMITED.
Estd] H O UDIPI. [1920
BRANCHES
MANGALORE, KATAPADI, and KANHANGAD

Deposits are accepted at all the Offices of the Bank on the following terms
One year Fixed Deposits at 3½ p c per annum.
Two years' Fixed Deposits at 4 p c per annum
Savings Bank Deposits - 3 p. c per annum
INTEREST ON FIXED DEPOSITS IS PAYABLE EVERY HALF YEAR OF THE CALENDAR YEAR
Reckoning of interest on the day to day balances is a special feature of our Savings Bank System.

ಸ್ಥಾಪನ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ, 1926
18 ಬಲ್ಮಠ ರಸ್ತೆ, ಮಂಗಳೂರು.
ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಪರುಗಳ ಬೇರು, ವೆಸಿಟಿಂಗ್ ಕಾರ್ಡು, ಇತ್ಯಾದಿಗಳನ್ನು ಕ್ಲಪ್ತವಾದ ಅಭಿರುಚಿಗೊಪ್ಪುವಂತೆ ಸುಲಭ ದರದಲ್ಲಿ ಮಾಡಿಕೊಡಲಾಗುತ್ತದೆ.

CROWN RUBBER STAMP CO.,
Balmat Road, MANGALORE.
Included by the Mysore Govt Stores Purchase Committee in the list of approved Firms

THE

Canara Banking Corporation, Udipi, Ltd.

(Incorporated in British India)

THE REGISTER OF MEMBERS & TRANSFER BOOKS of the CORPORATION will remain closed from 16–2–1939 to 5–3–1939 both days inclusive.

(By Order)

V. R. KAMATH,
MANAGER.

ನವಯುಗ

ಉಡುಪಿ, ಗುರುವಾರ, ತಾ. ೧೬-೨-೩೯

ಪ್ರಗತಿಪರ ಮೈಸೂರು

ಮೈಸೂರಿನ ದಿವಾನರುಗಳಾದ ಸರ್. ಮಿರ್ಜಾ ಮಹಮ್ಮದ್ ಇಸ್ಮಾಯಿಲ್ ಸಾಹೇಬರು ಈ ವಾರ ನಮ್ಮ ಜಿಲ್ಲೆಯಲ್ಲಿ ಸಂಚಾರಮಾಡಲಿಕ್ಕಿರುವರು. ಈ ಸಂದರ್ಭದಲ್ಲಿ ಮೈಸೂರಿನ ವಿಷಯವಾಗಿ ಪ್ರಾಮುಖ್ಯ ವಿಷಯಗಳನ್ನು ಹೇಳೋಣವೆನಿಸುತ್ತದೆ. ಇಂಡಿಯಾದಲ್ಲಿರುವ ೫೬೦ ಕ್ಕೂ ಮಿಕ್ಕಿರುವ ಸಂಸ್ಥಾನಗಳಲ್ಲಿ ಮೈಸೂರು ವಿಸ್ತೀರ್ಣದಲ್ಲಿಯೂ ಜನಸಂಖ್ಯೆಯಲ್ಲಿಯೂ ಹುಟ್ಟುವಳಿಯಲ್ಲಿಯೂ ಎರಡನೆಯದಾಗಿದೆ. ಜನಸಂಖ್ಯೆ ಸುಮಾರು ೬೦ಲಕ್ಷ. ಮೈಸೂರು ಪ್ರಗತಿಪರವಾದ ಸಂಸ್ಥಾನ. ಅಲ್ಲಿ ಪ್ರಜಾಭ್ಯುದಯ ಧ್ಯೇಯವುಳ್ಳ ರಾಜ್ಯಭಾರವಿದೆ. ರಾಜ್ಯಾಡಳಿತೆಯಲ್ಲಿ ಇತರ ಎಷ್ಟೋ ಸಂಸ್ಥಾನಗಳಿಗಿಂತ ಹೆಚ್ಚಾಗಿ ಪ್ರಜಾವಾಣಿಗೆ ಪ್ರಾಶಸ್ತ್ಯವಿದೆ. ಹಲವು ಸಂಸ್ಥಾನಗಳಲ್ಲಿ ಆಡಳಿತದ ವರದಿಯೆಂಬುದಿಲ್ಲ. ಬಜೆಟೆಂಬುದನ್ನು ಕೇಳಬೇಡಿ. ರಾಜರು ತಮ್ಮ ಇಚ್ಛಾನುಸಾರ ಪ್ರಜೆಗಳ ಹಣವನ್ನು ದುಂದುವ್ಯಯಮಾಡುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಹೊನ್ನಿನ ಹೊಳೆಯನ್ನು ಹರಿಯಿಸುತ್ತಾರೆ. ಆದರೆ ಮೈಸೂರಿನ ಪರಿಸ್ಥಿತಿಯು ಹಾಗಿಲ್ಲ. ಅತಿ ರಭಸದಿಂದ ಪರಿವರ್ತಿತವಾಗುತ್ತಿರುವ ಅತಿಗಾಮಿಗಳ ಮನೋಭೀಷ್ಟಕ್ಕೆ ಸುತೃಪ್ತಿಯಾಗುವಷ್ಟು ಪ್ರಜಾಪ್ರಾತಿನಿಧ್ಯದ ರಾಜ್ಯಭಾರದ ಮಟ್ಟಕ್ಕೆ ಅದು ಮುಟ್ಟಿಲ್ಲವಾದರೂ ಕ್ರಮಶಃ ಆ ಗುರಿಯನ್ನು ಸೇರುವ ಲಕ್ಷಣಗಳೆಲ್ಲ ಶಾಸನಕ್ರಮಗಳಲ್ಲಿ ಸಮನ್ವಯವಾಗಿವೆ. ರಾಜ್ಯಭಾರ ಕ್ರಮದಲ್ಲಿ ಅತ್ಯಂತ ನವೀನವಾದ ಆಡಳಿತದ ವ್ಯವಸ್ಥೆಯಿದೆ. ಮಹಾರಾಜರ ದಿವಾನರ ಮತ್ತು ಅಧಿಕಾರಿಗಳ ದೃಷ್ಟಿಯು ಪ್ರಜಾಭ್ಯುದಯ ಕಡೆಗಿದೆ. ಸಂಸ್ಥಾನಕ್ಕಿರುವ ಮೂರೂವರೆ ಕೋಟಿ ರೂಪಾಯಿಯ ಹುಟ್ಟುವಳಿಯಿಂದ ಪ್ರಜೆಗಳ ಸೌಕರ್ಯ, ಆರೋಗ್ಯ, ವಿದ್ಯೆ, ಜೀವನದ ಉದ್ಯೋಗ, ಜನತೆಯ ಸಂಪದಭಿವೃದ್ಧಿಗೆ ಏನೇನು ಮಾಡಬಹುದೋ ಅದನ್ನೆಲ್ಲ ನಡೆಯಿಸಿಕೊಡುವುದರಲ್ಲಿ ಸರಕಾರದ ದೃಷ್ಟಿಯು ಕೇಂದ್ರೀಕೃತವಾಗಿರುವುದು ಬ್ರಿಟಿಷ್ ಸರಕಾರಕ್ಕೆ ಸಲುವ ಪೊಗದಿಯು ವಜಾ ಆದರೆ ಸಂಸ್ಥಾನ ಪ್ರಜೆಗಳಿಗೆ ಹೆಚ್ಚಿನ ಹಿತಸಾಧನೆಯನ್ನು ಕೈಗೂಡಿಸಿಕೊಡಲಿಕ್ಕೆ ಬರುತ್ತೆ. ಅದಕ್ಕಾಗಿ ಸರ್. ಮಿರ್ಜಾರವರು ವಿಶೇಷ ಪ್ರಯತ್ನದಲ್ಲಿರುವರು. ಮಾತ್ರವಲ್ಲ, ರಾಜ್ಯದ ನಿಸರ್ಗ ಸಂಪತ್ತನ್ನು ಪರಿಪೂರ್ಣವಾಗಿ ಸದ್ವಿನಿಯೋಗಗೊಳಿಸಲು ಅವಶ್ಯವಾದ ಗುಡಿ ಕೈಗಾರಿಕೆಗಳ ಮತ್ತು ಯಂತ್ರ ಕಾರ್ಖಾನೆಗಳ ಕಡೆಗೆ ಸರಕಾರದ ಬಲವಿರುತ್ತದೆ. ಕೇವಲ ಕೈಕಸಬಿಂದಲೇ ದೇಶೋದ್ಧಾರವಾಗುವುದೆಂಬ ಅಂಧಶ್ರದ್ಧೆಯು ಮೈಸೂರಿಗಿಲ್ಲ. ಯಂತ್ರಗಳ ಸದುಪಯೋಗದಿಂದ ನಾಡಿನ ಸಂಪತ್ತನ್ನು ಹೆಚ್ಚಿಸಬಹುದೆಂಬ ದೃಢನಿಶ್ಚಯದಿಂದ ಸರ್. ವಿಶ್ವೇಶ್ವರಯ್ಯನವರ ದಿವಾನಗಿರಿ ಕಾಲದಿಂದಲೂ ಮೈಸೂರು ಸರಕಾರವು ಕಾಮಗಾರಿಕೆಗಳಿಗೆ ಕೈಯಿಕ್ಕಿ ಪ್ರಯೋಗದ ಮೂಲಕ ತನ್ನ ಧೋರಣೆಯು ಸರಿಯೆಂಬುದನ್ನು ಲೋಕಕ್ಕೆ ಮನಗಾಣಿಸಿರುವುದು. ಗಂಧದೆಣ್ಣೆ, ಕಬ್ಬಿಣ, ಸಾಬೂನು, ಸಕ್ಕರೆ, ರೇಷ್ಮೆ ಮುಂತಾದುವುಗಳ ಕೈಗಾರಿಕೆಗಳಲ್ಲಿ ಮೈಸೂರು ವಿದೇಶಗಳಲ್ಲಿಯೂ ಖ್ಯಾತಿಯನ್ನು ಹೊಂದಿರುವುದು. ಸಂಸ್ಥಾನದ ಸರಕಾರವು ತನ್ನ ವರಮಾನವನ್ನೂ ಪ್ರಜಾಜೀವನದ ಸುಖ ಸೌಕರ್ಯ ಆರ್ಥಿಕ ಸ್ಥಿತಿಗಳ ಮಟ್ಟವನ್ನೂ ಏರಿಸುವ ಹಲವು ಯೋಜನೆಗಳನ್ನು [illegible] ಇದೆ. ಮೈಸೂರಿನ ವಿದ್ಯುದ್ಯೋಜನೆಯು ಕೈಗಾರಿಕೆಗಳ ಅಭಿವೃದ್ಧಿಗೂ ಜನಜೀವನ ಸೌಕರ್ಯಕ್ಕೂ ವಿಶೇಷ ಸಹಕಾರಿಯಾಗಿ ನಿಂತಿರುವುದು. ೧೯೦೨ರಲ್ಲಿ ಆರಂಭವಾದ ಈ ಯೋಜನೆಯು ಯಶಸ್ವಿಯಾಗುತ್ತಾ ಬಂದು ಇಂದು ಇಂಡಿಯದಲ್ಲೇಕೆ ಪ್ರಪಂಚದಲ್ಲೇ ಬೆರಗುಂಟುಮಾಡುವಷ್ಟು ಪ್ರಯೋಜನಕಾರಿಯಾಗಿದೆ. ಪ್ರಧಾನ ನಗರಗಳಲ್ಲಿ ಮಾತ್ರವಲ್ಲದೆ ಗ್ರಾಮಗ್ರಾಮಗಳಿಗೂ ವಿದ್ಯುತ್ತಿನ ಬೆಳಕು ಹಾಗೂ ಶಕ್ತಿಯ ಪ್ರಯೋಗದ ಸೌಕರ್ಯ ದೊರೆತಿದೆ. ಹಳ್ಳಿ ಮೂಲೆಗಳಲ್ಲಿಯೂ 'ಮೈಸೂರು ಆಕಾಶವಾಣಿಯು' ಜನಮನೋರಂಜನೆಯನ್ನು ಮಾಡುತ್ತಿದೆ ಶಿಕ್ಷಣವನ್ನೀಯುತ್ತಿದೆ. ಓದುಬಾರದವರಿಗೂ ಪ್ರಪಂಚದ ವಿಚಾರ ವಿಜ್ಞಾನರಾಜಕಾರಣಗಳ ಪರಿಚಯವನ್ನು ಮಾಡಿಕೊಡುತ್ತಿದೆ.

ಕೃಷ್ಣರಾಜ ಭೂಪಗೃಹೇ ಗೃಹೇ ವಿದ್ಯಾದೀಪ! ಎಂಬುದು ಮನೆಮಾತಾಗುವ ಕಾಲ ಬಂದಿದೆ. ದೇಶೀಯ ವೈದ್ಯ, ದೇಶೀಯ ಸಂಗೀತ, ದೇಶೀಯ ಕೈಗಾರಿಕೆ, ಇವುಗಳನ್ನು ಕಲಿಯಲು ಮೈಸೂರು ಬೆಂಗಳೂರುಗಳಲ್ಲಿ ಸೌಕರ್ಯಗಳೂ ಶಾಲಾ ಕಾಲೇಜುಗಳೂ ಇವೆ. ಹೊರವೂರಿನವರೂ ಅಲ್ಲಿ ಹೋಗಿ ಕಲಿತು ಬರುತ್ತಿದ್ದಾರೆ. ಮೊನ್ನೆ ತಾನೇ ಜೋಗಜಲಪಾತದ ಬಳಿಯಲ್ಲಿ ವಿದ್ಯುದ್ಯೋಜನೆಯ ಯಂತ್ರಾಲಯದ ಶಿಲಾಪ್ರತಿಷ್ಠೆಯನ್ನು ಶ್ರೀಮನ್ಮಹಾರಾಜರೇ ನೆರವೇರಿಸಿರುವರು. ಈಗಾಗಲೇ ಮೈಸೂರಿನಲ್ಲಿ ವಿದ್ಯುಚ್ಛಕ್ತಿಯನ್ನುಪಯೋಗಿಸುವ ಯಂತ್ರಕಾರ್ಖಾನೆಗಳು ೪೦೫೦೦ ಇವೆ. ಈ ಯೋಜನೆಯು ಪರಿಪೂರ್ಣವಾದೊಡನೆ ವಿದ್ಯುತ್ತನ್ನು ಉಪಯೋಗಿಸುವ ಪಟ್ಟಣ ಗ್ರಾಮಗಳೂ ಯಂತ್ರಸ್ಥಾಪನೆಗಳೂ ಹೆಚ್ಚಾಗಿ ಸಂಸ್ಥಾನದ ಉತ್ಪತ್ತಿಯ ಕಾಲಂಶವು (ಒಂದುಕೋಟಿ ರೂಪಾಯಿಯು) ಈ ಭಾಗದಿಂದಲೇ ಹುಟ್ಟಿಬರುವುದೆಂದು ನಿರೀಕ್ಷಿಸಲಾಗಿದೆ. ಹೀಗೆ ಪ್ರಜಾಭ್ಯುದಯ ದೃಷ್ಟಿಯಿಂದ ಸರ್ವತೋಮುಖವಾದ ಪ್ರಗತಿಪಥದಲ್ಲಿ ಮುಂದುವರಿಯುತ್ತಿರುವ ಅತ್ಯಂತ ಸುಧಾರಿತವಾದ ಸಂಸ್ಥಾನವಾದ ಈ ಮೈಸೂರಲ್ಲಿಯೂ ಅಸಂತೃಪ್ತಿಯ ಕೂಗೂ ಚಳವಳಿಗಳೂ ಇಲ್ಲವೆಂದಲ್ಲ. ಜನಮನೋವೃತ್ತಿಯು ಪರಿವರ್ತನವಾಗುವಷ್ಟು ರಭಸದಿಂದ ರಾಜ್ಯಭಾರದ ಯಂತ್ರವು ತಿರುಗಲಾರದಷ್ಟೆ. ಆದುದರಿಂದ ಕೆಲವೇ ವರ್ಷಗಳ ಹಿಂದೆ ಅತ್ಯಾಧುನಿಕ ಪ್ರಗತಿಪರ ಆದರ್ಶಸಂಸ್ಥಾನವೆಂದು ಪ್ರಜೆಗಳಿಂದಲೂ ಬ್ರಿಟಿಷ್ ಇಂಡಿಯಾದಿಂದಲೂ ಹೊಗಳಿಸಿಕೊಂಡ ಮೈಸೂರು ಇಂದು ಅತ್ಯುಗ್ರಗಾಮಿಗಳ ದೃಷ್ಟಿಯಲ್ಲಿ ಹಿಂದುಬಿದ್ದುದೆಯೆಂದೂ ರಾಜ್ಯಾಡಳಿತೆಯು ಆದರ್ಶಕ್ಕೆ ಮುಟ್ಟುವಷ್ಟು ಪ್ರಜಾಪ್ರಭುತ್ವದ ಚಿನ್ಹೆಗಳಿಂದೊಡಗೂಡಿಲ್ಲವೆಂದೂ ಟೀಕೆಗೊಳಗಾಗಿದೆ. ಆದರೆ ಜನಮನೋವೃತ್ತಿಯು ಎಷ್ಟು ಶೀಘ್ರಗತಿಯಿಂದ ಮಾರ್ಪಾಟುಹೊಂದುತ್ತಿದೆಯೆಂಬುದಕ್ಕೆ ಪರಾಭಿಪ್ರಾಯದ ಕಾಂಗ್ರೆಸ್ಸಿನಲ್ಲೇ ಬಗೆಬಗೆಯಾದ ಧೋರಣೆ, ಸ್ಪರ್ಧೆ, ಯೋಜನೆಗಳ ತಾಕಲಾಟಗಳು ತಲೆದೋರಿರುವುದೇ ಸಾಕ್ಷಿ. ಈ ನವನವ ಭಾವನೆಗಳ ಪ್ರಚಾರದಿಂದ ಅವುಗಳಲ್ಲಿರುವ ನೂತನದ ಆಕರ್ಷಣೆಯಿಂದ ಯಾವ ಆಡಳಿತೆಯೂ ಸರ್ವಸಮ್ಮತವಾದ ಮನ್ನಣೆಯನ್ನು ಹೊಂದಲಾರದು ಅದರಲ್ಲೂ ಒಂದೆ. ರಾಜ್ಯಭಾರ ಪದ್ಧತಿಯು ಜನಮನದ ಚಪಲತೆಗನುಸಾರವಾಗಿ ದಿನದಿಂದ ದಿನಕ್ಕೆ ಪರಿವರ್ತಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಪ್ರಜೆಗಳಿಗಾಗಿ ಆಳುವುದು, ಪ್ರಜೆಗಳಿಗಾಗಿ ರಾಜ, ಪ್ರಜೆಗಳ ಸಾರ್ವತ್ರಿಕ ಅಭ್ಯುದಯಕ್ಕಾಗಿ ರಾಜ್ಯದ ವರಮಾನ, ಶಾಸನ ನಿರ್ಮಾಣ ನಿರ್ವಾಹಗಳಲ್ಲಿ ಪ್ರಜಾಭಿಪ್ರಾಯಗಳಿಗೆ ಪ್ರಾಬಲ್ಯ, ಇವು ಯಾವ ರಾಜ್ಯಭಾರ ಪದ್ಧತಿಯಲ್ಲಿವೆಯೋ ಅದು ವ್ಯಕ್ತಿನಿರೀಕ್ಷಣೆಯಷ್ಟು ಶೀಘ್ರಗತಿಯಿಂದ ಮುಂದುಬಾರದಿದ್ದರೂ ಸಹನೆಯಿಂದ ಸಹಕಾರದಿಂದ ಗೌರವದಿಂದ ಶಿಸ್ತಿನಿಂದ ಶಾಂತಿಯಿಂದ ಅದನ್ನು ಮುನ್ನಡೆಯಿಸಿಕೊಂಡು ಹೋಗುವುದೇ ಶ್ರೇಯಸ್ಕರವಲ್ಲದೆ ಅನುಗುಣವಾದ ರಾಜ್ಯಭಾರಕ್ರಮವನ್ನು ಅದು ನಿರೀಕ್ಷಣೆಯ ಮಟ್ಟವನ್ನು ತಕ್ಷಣ ಮುಟ್ಟಲಿಲ್ಲವೆಂದೂ ಕ್ರಾಂತಿಗೆ ಮಂದಿಯನ್ನು ಹುರಿದುಂಬಿಸುವುದು ಅಪಾಯಕರವೇ ಸರಿ. ಈ ದೃಷ್ಟಿಯಿಂದ ನಾವು ಮೈಸೂರನ್ನು ನೋಡಿ ಅದರ ಪ್ರಜಾಭ್ಯುದಯ ಧ್ಯೇಯಕ್ಕಾಗಿ ದುಡಿಯುತ್ತಿರುವ ಮಹಾರಾಜರನ್ನೂ ದಿವಾನರನ್ನೂ ಅಭಿನಂದಿಸಬೇಕು.

ಮುಂಬಯಿ ಕನ್ನಡಿಗರಲ್ಲಿ ವಿನಂತಿ.

ನಮ್ಮ ಉಪಸಂಪಾದಕರಾದ ಶ್ರೀ. ಎನ್. ಎಸ್. ಶೆಟ್ಟರು 'ನವಯುಗ'ದ ಪ್ರಚಾರಾರ್ಥವಾಗಿ ಇದೀಗ ಮುಂಬಯಿಗೆ ಒಂದಿರುವರು. ಅಲ್ಲಿಯ ಕನ್ನಡಿಗರು ಈ ಮೊದಲೇ ನಮಗೆ ನಮ್ಮ ನಿರೀಕ್ಷೆಗಿಂತಲೂ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಈಗಲೂ ಕೊಡುತ್ತಿದ್ದಾರೆ. ಆದುದರಿಂದಲೇ ನವಯುಗಕ್ಕೀಗ ಮುಂಬಯಿ ನಗರದಲ್ಲಿ ಬೇರೆಲ್ಲೂ ಇರದಷ್ಟು ಹೆಚ್ಚು ಚಂದಾದಾರರಿದ್ದಾರೆನ್ನಲು ನಮಗೆ ಅಭಿಮಾನವೆನಿಸುತ್ತದೆ. ನವಯುಗವೀಗ ದಿನೇ ದಿನೇ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವುದನ್ನು ಕನ್ನಡಿಗರೆಲ್ಲರೂ ಬಲ್ಲರು. ಅಖಿಲ ಕರ್ನಾಟಕದಲ್ಲಿ ಎಲ್ಲೆಲ್ಲಿಯೂ ಅದಕ್ಕೀಗ ಆದರಪೂರ್ವಕ ಸ್ವಾಗತವು ಅಧಿಕಾಧಿಕವಾಗಿ ದೊರೆಯತೊಡಗಿರುವುದು ಶುಭಚಿಹ್ನೆಯಾಗಿದೆ. ನವಯುಗವನ್ನು ಸರ್ವಾಂಗ ಸುಂದರ ವಾರಪತ್ರಿಕೆಯಾಗಿ ಮಾರ್ಪಡಿಸುವ ಹಂಬಲವು ನಮ್ಮಲ್ಲಿ ದಿನೇದಿನೇ ಹೆಚ್ಚುತ್ತಿದೆ. ಪುಟ ಸಂಖ್ಯೆ, ಚಿತ್ರ ಸಂಖ್ಯೆಗಳನ್ನು ಹೆಚ್ಚಿಸದೆ ವಿಷಯ ವೈವಿಧ್ಯವು ಬರಲಾರದು. ಹಾಗಾಗಬೇಕಾದರೆ ಚಂದಾದಾರರ ಸಂಖ್ಯೆಯೂ ಜಾಹೀರಾತುಗಳೂ ಹೆಚ್ಚಾಗಬೇಕಾಗಿದೆ. ಇದಕ್ಕೆ ಕನ್ನಡಿಗರೆಲ್ಲರ ಸಹಕಾರ ಸಹಾನುಭೂತಿಗಳು ಆವಶ್ಯಕವೆಂದು ಬೇರೆ ಹೇಳಬೇಕಾಗಿಲ್ಲ.

ಮುಂಬಯಿ ನಗರದಲ್ಲಿರುವ ಕನ್ನಡಿಗರ ಸಂಖ್ಯಾಮಾನದಿಂದ ಅಳೆದು ಹೇಳುವುದಾದರೆ ಈಗ ನಮಗಿರುವ ಚಂದಾದಾರರ ಸಂಖ್ಯೆಯು ತೀರ ಕಡಿಮೆಯೆಂದೇ ಹೇಳಬಹುದು. ಮುಂಬಯಿ ಕನ್ನಡಿಗ ಬಂಧು

ಪುಟ ೧೪ಕ್ಕೆ

ಬೇಕಾಗಿದ್ದಾರೆ

ಜಗತ್ಪ್ರಸಿದ್ಧವಾದ ಯುರೋಪಿಯನ್ ವಿಮಾ ಕಂಪನಿಯಾದ 'ಅಲ್ಲಿಯಾನ್ಸ್ ಅಂಡ್ ಸ್ಟಟಗಾರ್ಟರ್ ಲೈಫ್ ಇನ್ಶೂರೆನ್ಸ್ ಬ್ಯಾಂಕ್ ಲಿಮಿಟೆಡ್'ಗೆ ಉಡುಪಿ ಮತ್ತು ಪುತ್ತೂರು ತಾಲೂಕುಗಳಿಗೆ ಇಬ್ಬರು ಪ್ರಭಾವಶಾಲಿ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿಶೇಷ ಮಾಹಿತಿ ಬಗ್ಗೆ:— ಪಿ. ಪಿ. ಕವಾಲ್,
ಸುಪರಿಂಟೆಂಡೆಂಟ್,
C/o ಪೋಸ್ಟ್‌ಮಾಸ್ಟರ್, ಉಡುಪಿ

ಖಾನ್ಪುರದಲ್ಲಿ ಹಿಂದೂ—ಮುಸ್ಲಿಮರ ಹೋರಾಟ

ಜೈಪುರದಲ್ಲಿ ಜಮ್ನಾಲಾಲ್ ಬಜಾಜರ ಮೂರನೆಯ ಸಲದ ದಸ್ತಗಿರಿ.

ಖಾನ್ಪುರದಲ್ಲಿ ಹಿಂದೂಮುಸ್ಲಿಂ ಕಾದಾಟ.

ಭಯಂಕರ ಕಾದಾಟ. ೩೫ ಮಂದಿಗೆ ಪ್ರಾಣಹಾನಿ. ೨೦೦ ಮಂದಿ ಗಾಯಗೊಂಡು ಆಸ್ಪತ್ರೆಗಳಲ್ಲಿ ಅವರಲ್ಲಿ ಹಲವರಿಗೆ ವಿಶೇಷ ಘಾಸಿ. ಪೋಲೀಸರು ೫೦೦ ಜನರನ್ನು ದಸ್ತಗಿರಿ ಮಾಡಿರುವರು. ತಾ. ೧೧ ಮತ್ತು ೧೨ರಲ್ಲಿ ಅಲ್ಲಲ್ಲಿ ಗಲಾಟೆಗಳು ನಡೆದು ಪಟ್ಟಣಿಗರಲ್ಲಿ ಗಾಬರಿ ಹತ್ತಿದೆ. ಭಯಗ್ರಸ್ತರಾದವರನ್ನು ಸುರಕ್ಷಿತವಾಗಿ ದೂರ ಸಾಗಿಸುವರೆ ಪೋಲೀಸರೂ ಕಾಂಗ್ರೆಸ್ ಕೆಲಸಗಾರರೂ ವಿಶೇಷ ಶ್ರಮ ವಹಿಸುತ್ತಿದ್ದಾರೆ. ಕಾಂಗ್ರೆಸ್ಸು ಕೆಲಸಗಾರರು ಹಿಂದೂ ಮುಸ್ಲೀಮರೆನ್ನದೆ ೨೦೦೦ ಮಂದಿಯನ್ನು ಸುರಕ್ಷಿತವಾದ ಸ್ಥಳಗಳಿಗೆ ಮುಟ್ಟಿಸಿರುವರು. ಅಶ್ವಾರೋಹಿ ಸೈನಿಕರೂ ಸಶಸ್ತ್ರ ಪೋಲೀಸರೂ ಗಂಡಾಂತರ ಬರಬಹುದಾದ ಬೀದಿ ಚೌಕಗಳಲ್ಲಿ ಪಹರೆ ನಡೆಯಿಸುತ್ತ ಪರಿಸ್ಥಿತಿಯನ್ನು ಹತೋಟಿಗೆ ತರುತ್ತಲಿರುವರು. ೧೪೪ ಸೆಕ್ಷನ್ ಎರಡು ತಿಂಗಳ ಅವಧಿಯ ವರೆಗೆ ಪ್ರಯೋಗ ತರಲಾಗಿದೆ ರಾತ್ರಿಸಂಚಾರ, ಐದು ಮಂದಿಗೆ ಮಿಕ್ಕಿ ಒಂದುಗೂಡುವುದು, ಲಾಠೀ, ಕತ್ತಿ ಕೋಲುಗಳ ಧಾರಣೆ ಇವೆಲ್ಲವನ್ನು ನಿಷೇಧಿಸುವ ಕರ್ಫ್ಯೂ ಆರ್ಡರಿನಡಂಗುರ ಸಾರಲಾಗಿದೆಯಲ್ಲದ ಅವಶ್ಯ ತೋರಿದಲ್ಲಿ ಗುಂಡು ಹಾರಿಸುವ ಅಧಿಕಾರವನ್ನೂ ಪೋಲೀಸರಿಗೆ ಕೊಡಲಾಗಿದೆ ಎಂದು ಸಾರಲ್ಪಟ್ಟಿದೆ ಇಷ್ಟೆಲ್ಲ ಅನಾಹುತಕ್ಕೆ ಮೂಲವು ಮೆಸ್ಟನ್ ರೋಡಿನ ಮಾರ್ಗವಾಗಿ ಹೋಗುತ್ತಿದ್ದ ಹಿಂದೂ ಮದುವೆಯ ಮೆರವಣಿಗೆಯ ಮೇಲೆ ಮುಸ್ಲೀಮರು ಬಿದ್ದು ಜಗಳ ತೊಡಗಿಸಿದುದು. ಬೆಂಕಿ ಹಬ್ಬಿದಂತೆ ಬೀದಿ ಬೀದಿ ಹಬ್ಬಿ ಕಾದಾಟಗಳಾಗಿ ದುರಂತ ಪರಿಣಾಮಕ್ಕೆ ಕಾರಣವಾಯಿತು. ಗಾಯಗೊಂಡವರಲ್ಲಿಯೂ ಕೊಲ್ಲಲ್ಪಟ್ಟವರಲ್ಲಿಯೂ ಹಿಂದೂಗಳೂ ಮುಸ್ಲೀಮರೂ ಇರುವರು.

ಜೈಪುರದಲ್ಲಿ ಜಮ್ನಾಲಾಲ್ ಬಜಾಜರ ಮೂರನೆಯ ಸಲದ ದಸ್ತಗಿರಿ

ಮೂರನೆಯ ಸಲ ಜೈಪುರ ಪ್ರವೇಶಕ್ಕೆ ಹೋದ ಜಮ್ನಾಲಾಲ್ ಬಜಾಜರನ್ನು ಜೈಪುರ ಸರಕಾರವು ದಸ್ತಗಿರಿಮಾಡಿ ಜಯಪುರ ನಗರದಿಂದ ೩೪ ಮೈಲು ಪೂರ್ವದಲ್ಲಿರುವ ಮೋರಾನ್ ಸಾಗರ ಎಂಬಲ್ಲಿ ಇಟ್ಟಿರುವುದು ಅವರ ಕಾವಲಿಗೆ ಡೆಪ್ಯುಟಿ ಸುಪರಿಂಟೆಂಡೆಂಟರೂ ಎಂಟು ಜನ ಪೋಲೀಸರೂ ಇರುವರು. ಬಜಾಜರೊಂದಿಗೆ ಅವರ ಸೇವಕನೊಬ್ಬನನ್ನು ಇರಲು ಬಿಡಲಾಗಿದೆ

ಜೈಪುರದ ಸತ್ಯಾಗ್ರಹದಿನಾಚರಣೆ ಮತ್ತು ಹರತಾಳ

ತಾ. ೧೨ರಲ್ಲಿ ಆಚರಿಸಲ್ಪಟ್ಟ ಈ ಸತ್ಯಾಗ್ರಹಿಗಳ ಹರತಾಳ ಕಾರ್ಯಕ್ರಮವು ಮೊತ್ತಾಗಿ ತೊಡಗಿ ನಡುಹೊತ್ತಿಗೆ ಸಾಧಾರಣ ಸಂಪೂರ್ಣವಾಗಿ ನೆರವೇರಿತು ನಗರವು ಪೋಲೀಸ್ ಮತ್ತು ಸೈನಿಕರ ಪಹರೆಯಲ್ಲಿತ್ತು. ಆದರೆ ಎಲ್ಲಿಯೂ ಕಾದಾಟ ಸಂಭವಿಸಲಿಲ್ಲ ಒಂದೆರಡು ಕಡೆ ಪೋಲೀಸರು ಗುಂಪನ್ನು ಚದರಿಸಬೇಕಾಗಿತ್ತು, ಆದರೆ ಮಂದಿಯು ಗಲಾಟೆಮಾಡಲಿಲ್ಲ

ಸುಭಾಸ್-ನೆಹರೂ-ಗಾಂಧೀ ಭೇಟಿ

ಸುಭಾಸ್ ಚಂದ್ರಬೋಸರು ಈ ವಾರದಲ್ಲಿ ನೆಹರುಗಳನ್ನೂ ಗಾಂಧಿಜಿಗಳನ್ನೂ

ಸಂದರ್ಶಿಸಲಿರುವರು. ತಾನು ಕಾಂಗ್ರೆಸ್ ಅಧ್ಯಕ್ಷತನಕ್ಕೆ ತಿರುಗಿ ಚುನಾಯಿತನಾದ ಕಾರಣ ಕಾಂಗ್ರೆಸ್ಸಿನ ಬಲ ಪಕ್ಷದ ಕೆಲವು ಪ್ರಮುಖ ಮುಂದಾಳುಗಳಲ್ಲುಂಟಾಗಿರುವ ಭಿನ್ನಾಭಿಪ್ರಾಯ ಅಸಂತೃಪ್ತಿ ಅಸಮಾಧಾ



ನಗಳನ್ನು ನಿವಾರಿಸಿ ಕಾಂಗ್ರೆಸ್ಸಿನಲ್ಲಿ ಒಡಕುಂಟಾಗದಂತೆ ಪ್ರಯತ್ನಿಸುವ ಉದ್ದೇಶದಿಂದಲೇ ಬೋಸರು ಈ ಕಾರ್ಯಕ್ರಮವನ್ನು ಕೈಗೊಂಡಿರುವರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಬಲಪಕ್ಷದ ಸದಸ್ಯರ ಪರವಾಗಿ ರಾಜಿನಾಮೆಯನ್ನು ಕೊಡಲುದ್ಯುಕ್ತರಾಗಿರ್ದವೆಂದು ವಲ್ಲಭಾಯಿ ಪಟೇಲರು ಬೋಸರಿಗೆ ಬರೆದ ಪತ್ರಕ್ಕೆ ಅವರು ಪ್ರತ್ಯುತ್ತರವನ್ನಿನ್ನೂ ಕೊಡಲಿಲ್ಲ ಕೊಡದೆಯೇ ಈಗಿರುವ ಕಾಂಗ್ರೆಸ್ ಕಾರ್ಯಕಾರಿ ಮಂಡಳ (ವರ್ಕಿಂಗ್ ಕಮಿಟಿ) ಯು ತಾ. ೨೨ಕ್ಕೆ ಸಭೆಗೂಡಬೇಕೆಂದು ಬೋಸರು ಆಹ್ವಾನಿಸಿದುದನ್ನೂ ತತ್ಪೂರ್ವ-ನೆಹರೂ ಗಾಂಧಿಜಿಗಳ ಸಂದರ್ಶನೆಯ ಕಾ-

ರ್ಯಕ್ರಮವನ್ನು ಕೈಗೊಂಡುದನ್ನೂ ಪರಿಶೀಲಿಸಿದರೆ ಅವರಿಗೆ ಕಾಂಗ್ರೆಸ್ಸು ವರ್ಕಿಂಗ್ ಕಮಿಟಿಯ ಬಲಪಕ್ಷದವರೊಡನೆ ಮುಖತಃ ಮಾತಾಡಿ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಒಂದುತನದಿಂದ ಮುನ್ನಡೆಯಬೇಕೆಂಬ ಅಗ್ರಹವಿರುವುದೆಂದೂ ಆ ಧ್ಯೇಯದ ಪೂರ್ವಸಿದ್ಧತೆಗಾಗಿ ನೆಹರೂ ಗಾಂಧಿಜಿಗಳ ಭೇಟಿಯನ್ನು ಮಾಡಲು ಹವಣಿಸಿರುವರೆಂದೂ ಎಣಿಸಬಹುದಾಗಿದೆ.

ಎಮ್. ಎನ್. ರೋಯಿಗಳಿಗೆ ಬೋಸರ ಆಮಂತ್ರಣ.

ಆಲೋಚನೆ ಅಭಿಪ್ರಾಯ ವಿನಿಮಯಗಳಿಗಾಗಿ ಬೋಸರು ರೋಯಿಗಳನ್ನು ಕಲ್ಕತ್ತೆಗೆ ಕರೆಯಿದುತ್ತಾರೆ. ಅವರು ಕಲ್ಕತ್ತೆಗೆ ಬಂದಿರುವರು. ಬೋಸರು ವಾರ್ಧದಿಂದ ಹಿಂತಿರುಗಿ ಬರುವುದನ್ನು ನಿರೀಕ್ಷಿಸುತ್ತಿದ್ದಾರೆ, ನೂತನವಾಗಿ ನಿರ್ಮಾಣವಾಗಬೇಕಾಗಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ರೋಯಿಗಳೂ ಒಬ್ಬ ಸದಸ್ಯರಾಗಬಹುದೆಂಬ ಅಭಿಪ್ರಾಯ ಕಲ್ಕತ್ತೆಯಲ್ಲಿದೆ

ರಾಜಕೋಟೆಯಲ್ಲಿ

ದಸ್ತಗಿರಿಮಾಡಲ್ಪಟ್ಟಿದ್ದ ಕುಮಾರಿ ಮಣಿಬೆನ್ ಪಟೇಲ್ (ವಲ್ಲಭಾಯಿ ಪಟೇಲರ ಪುತ್ರಿ) ಇವರು ತನ್ನನ್ನು ಶ್ರೀಮತಿ ಕಸ್ತೂರಿ ಬಾಯಿ ಗಾಂಧಿಯವರಿಂದ ಬೇರ್ಪಡಿಸಿ ಪ್ರತ್ಯೇಕ ಸ್ಥಳದಲ್ಲಿರಿಸಿದುದಕ್ಕಾಗಿ ಕೈಗೊಂಡಿದ್ದ ಉಪವಾಸ ದೀಕ್ಷೆಯು ಸಫಲವಾಯಿತು ಈಗ ಅವರಿಬ್ಬರನ್ನೂ ಒಂದೇ ಕಡೆಯಲ್ಲಿರಿಸಿದ್ದಾರೆ. ಮೊದಲಿಟ್ಟಿದ್ದ ಸ್ಥಳಕ್ಕಿಂತ ಉತ್ತಮವಾದ ಜಾಗ ಅವರಿಗೆ ಒದಗಿಸಿಕೊಡಲಾಗಿದೆ ಕುಮಾರಿ ಪಟೇಲ್ ತನ್ನ ಉಪವಾಸದೀಕ್ಷೆಯನ್ನು ತ್ಯಜಿಸಿರುವರು. ದೌರ್ಬಲ್ಯ ಹೊಂದಿರುವ ಕಸ್ತೂರೀಬಾಯಿಯವರಿಗೆ ವೈದ್ಯಕೀಯ ಸಹಾಯದ ಏರ್ಪಾಡು ಮಾಡಲಾಗಿದೆ. ರಾಜಕೋಟೆಯ ರಾಜಮಾತುಶ್ರೀಯವರು ಮಕ್ಕಳಂತಿರುವ ತನ್ನ ಪ್ರಜೆಗಳಿಗುಂಟಾಗಿರುವ ಸಂಕಷ್ಟವನ್ನು ಅಲ್ಲಿಯ ಬ್ರಿಟಿಷ್ ರೆಸಿಡೆಂಟರು ನಿವಾರಿಸದಿದ್ದರೆ ವೈಸರಾಯರಿಗೆ ದೂರಿಡುವೆನಾಗಿ ತಿಳಿಸಿದ್ದಾರೆ

ಮೆಂಚೆಸ್ಟರಿನಲ್ಲಿ ಬೆಂಕಿಯ ಅನಾಹುತ

ಕಳೆದ ಇಪ್ಪತ್ತು ವರುಷಗಳಿಂದೀಚೆಗೆ ಕಂಡು ಕೇಳದಷ್ಟು ಪ್ರಚಂಡವಾದ ಅಗ್ನಿಯ ಹಾವಳಿಯು ತಾ. ೧೧ರಲ್ಲಿ ಮೆಂಚೆಸ್ಟರಿನಲ್ಲಿ ಅನಿರೀಕ್ಷಿತ ರಭಸದಿಂದ ತೊಡಗಿ ನಗರದ ಮಧ್ಯದಲ್ಲಿದ್ದ ಕೆಂಡಾಲ್ ಮಿಲ್ನಸ್ ಸ್ಟೋರ್ ಎಂಬ ಕಟ್ಟಡದ ಐದು ಅಂತಸ್ತುಗಳನ್ನು ಏಕಕಾಲದಲ್ಲಿ ದಹಿಸಿತು. ಸಮೀಪ ಮತ್ತೊಂದು ಕಡೆಯಲ್ಲಿಯೂ ಬೆಂಕಿಯ ಮಹತ್ತಾದ ಅಪಘಾತವು ಸಂಭವಿಸಿತು. ಬೆಂಕಿ ತೋರುವ ಮೊದಲು ಸಿಡಿಮದ್ದಿನ ಸಿಡಿತದ ಸದ್ದು ಕೇಳುತ್ತಿದ್ದುದರಿಂದ ಐರ್ಲೆಂಡಿನ ಚಳವಳಿಯ ಕೈಯೇನಾದರೂ ಇದರಲ್ಲಿರಬಹುದೇ ಎಂದು ಗುಪ್ತ ಪೋಲೀಸರು ಪತ್ತೆ ನಡೆಯಿಸುತ್ತಿದ್ದಾರೆ.

ಓಂಮಂಡಳಿಯ ಸ್ಥಾಪನಾಚಾರ್ಯರ ಮೇಲೆ ಚಾರ್ಜ್ ಶೀಟ್

ಓಂ ಮಂಡಳಿಯ ಸ್ಥಾಪನಾಚಾರ್ಯ ದಾದಾಲೇಖರಾಜರು ಹಲವು ಅಪ್ರಾಯಸ್ಥ ಕನ್ಯೆಯರನ್ನು ಕದ್ದು ತಮ್ಮ 'ಓಂ ನಿವಾಸ'ದಲ್ಲಿ ಬಂಧನದಲ್ಲಿಟ್ಟಿರುವ ಆರೋಪಣೆಯ ಮೇಲೆಯೂ ಇತರ ವಿವಿಧ ಸೆಕ್ಷನುಗಳ ಪ್ರಕಾರವೂ ಆರೋಪಿತರಾಗಿ ತಾ. ೩೪ಕ್ಕೆ ಕರಾಚಿಯ ಎಡಿಶನಲ್ ಮೆಜಿಸ್ಟ್ರೇಟರ ಮುಂದೆ ವಿಚಾರಣೆಗೆ ನಿಲ್ಲಬೇಕಾಗಿದೆ. ಕಂಪ್ಲೆಂಟಿನ ಕೋರ್ಟು ಹುಕುಮಿನಂತೆ ಈ ಮೊದಲು ಹಲವು ಹುಡುಗಿಯರನ್ನು ಅವರ ಹೆತ್ತವರ ವಶಕ್ಕೆ ಲೇಖರಾಜರು ಒಪ್ಪಿಸಿಕೊಡಬೇಕಾಗಿತ್ತು. ಮಾತ್ರವಲ್ಲ ಆ ಪ್ರಾಂತದ ಎಷ್ಟೋ ಹಿಂದೂ ಸಂಘ ಸಮಾಜಗಳು ಲೇಖರಾಜರ ಚಳವಳಿಯನ್ನು ಪ್ರತಿಬಂಧಿಸಬೇಕೆಂದು ಸಾವಿರಗಟ್ಟಳೆ ನಿರ್ಣಯಗಳನ್ನು ಸರಕಾರಕ್ಕೆ ಕಳುಹಿಸಿರುವರು. ಇವೆಲ್ಲದರ ಪರಿಣಾಮವಾಗಿ ಸ್ಥಾಪನಾಚಾರ್ಯರ ಮೇಲೆ ಚಾರ್ಜ್ ಶೀಟ್!

ಸಮಾಜತತ್ವವೇ ಏಕಮಾತ್ರ ಸೂತ್ರ. ನೆಹರುಗಳವರ ಹೇಳಿಕೆ

ಬೆನಾರೀಸ್ ಯೂನಿವರ್ಸಿಟಿಯ ಸಾಯನ್ಸ್ ಕಾಲೇಜ್ ಡೇ ಸಮಾರಂಭದಲ್ಲಿ ಜವಾಹರ ನೆಹರುಗಳು ಹಿಂದೀಯಲ್ಲಿ ಭಾಷಣ ತೊಡಗಿದಾಗ ಇಂಗ್ಲೀಷಿನಲ್ಲಿ ಮಾತಾಡಬೇಕೆಂದು ಕೆಲವರು ಕೇಳಿಕೊಂಡರು. ತನಗೆ ಇಂಗ್ಲೀಷಿನಲ್ಲಿ ಮಾತಾಡಲು ಆಕ್ಷೇಪವೇನೂ ಇಲ್ಲದಿದ್ದರೂ ಇದೊಂದು ತತ್ವಾನುಸಾರವಾಗಿ ಹಿಂದಿಯಲ್ಲೇ ಮಾತಾಡಲು ತಾನು ಬಯಸುತ್ತೇನೆಂದರು. ಹಿಂದುಸ್ಥಾನವು ಇಂದು ಕ್ರಾಂತಿಗಳ ನಡುವೆ ನಡೆಯಬೇಕಾಗಿದೆ. ಇಂಗ್ಲೀಷನ್ನು ಬಿಟ್ಟು ಹಿಂದೀಯಲ್ಲಿ ತಮ್ಮ ಕಾರ್ಯ ನಿರ್ವಹಿಸುವುದೂ ಅಂತಹ ಕ್ರಾಂತಿಗಳಲ್ಲೊಂದು. ಹಿಂದೀ ಕಾರ್ಯನಿರ್ವಹಿಸಲಾರದ ಇಂಗ್ಲೀಷು ವಿದ್ಯಾವಂತರು ನಿಷ್ಪ್ರಯೋಜಕರಾಗುವರು. ದೇಶದ ಮುಂದಿರುವ ಹಲವು ಸಮಸ್ಯೆಗಳ ಇತ್ಯರ್ಥಕ್ಕೆ ಸಮಾಜತತ್ವವೇ (ಸೋಶಿಯಾಲಿಜಂ) ಏಕಮಾತ್ರ ಸೂತ್ರವೆಂಬ ನನ್ನ ನಂಬುಗೆಯು ದಿನೇ ದಿನೇ ದೃಢವಾಗುತ್ತ ಪ್ರಬಲವಾಗುತ್ತ ಬರುತ್ತಿದೆ.

ಸ್ಪೈನಿನಲ್ಲಿ ವಿಶೇಷ ರಣಾಗ್ರ

ಮೇಡ್ರಿಡಿನ ಮೇಲೆ ಬಾಂಬುಗಳ ಸುರಿತ

ಒಂದುನೂರ ಇಪ್ಪತ್ತು ಬಾಂಬುಗಳ

ಕೆಥೋಲಿಕ್ ಜಗದ್ಗುರು ಪೋಪ್ ಪಯಸ್‌ರವರ ನಿಧನ

ಗುಂಪಿನ ಮೇಲೆ ಗುಂಡು ಹಾರಿಸಿ ಹನ್ನೊಂದು ಮಂದಿಯ ಪ್ರಾಣಹಾನಿ

ಸ್ಫೋಟನದಿಂದ ಮೇಡ್ರಿಡಿನಲ್ಲಿ ದಿಗಿಲು ಗಟ್ಟಿದೆ. ಇಂತಹ ಬಾಂಬಿನ ಮಳೆಯು ಎಲಿಕಾಂಟಿ, ವೆಲೆನ್ಸಿಯಾ, ಜಟೇವಾ ಆಲ್ಕೋಯಿ ಮುಂತಾದ ನಗರಗಳಲ್ಲಿಯೂ ಸುರಿದಿದೆ-ದಿನದಿನವೂ ಸಾವಿರಗಟ್ಟಳೆಯಿಂದ ಜನರು ನಿರಾಶರಾಗಿ ದೇಶಬಿಟ್ಟು ದೂರ ಸಾಗುತ್ತಿದ್ದಾರೆ. ದಂಗೆಗಾರ ಫ್ರಾಂಕೋನಿಗೆ ಜಯಮಾಲೆ ಕಾದು ಕೂತಿದೋ ಎಂದು ತೋರುತ್ತಿದೆ.

ಉಪವಾಸ ದೀಕ್ಷೆಯ ಹುಚ್ಚುತನ ಬಿಡಿರಿ.

ಬೆನಾರೀಸ್ ಯುನಿವರ್ಸಿಟಿಯ ಆಡಳಿತೆಯಲ್ಲಿ ಮಾರ್ಪಾಟುಗಳನ್ನುಂಟುಮಾಡುವ ಧ್ಯೇಯಕ್ಕಾಗಿ ಉಪವಾಸ ದೀಕ್ಷೆಯನ್ನು ಕೈಗೊಂಡವರ ಕುರಿತು ಮಾತಾಡುತ್ತ ನೆಹರುಗಳವರು ಗಾಂಧಿಜಿಯವರ ಉಪವಾಸ ದೀಕ್ಷೆಯು ನನಗೆ ಅರ್ಥವಾಗುತ್ತದೆ. ಆದರೆ ಎಲ್ಲೆಲ್ಲಿಯೂ ಪ್ರತಿಯೊಬ್ಬನೂ ತನ್ನ ತನ್ನ ವೈಯಕ್ತಿಕ ಅಭಿಪ್ರಾಯವನ್ನು ಬೇರೆಯವರ ಮೇಲೆ ಬಲವತ್ಪ್ರಯೋಗ ಮಾಡುವುದಕ್ಕಾಗಿ ಕೈಗೊಳ್ಳುವ ಉಪವಾಸ ದೀಕ್ಷೆಗಳ ಅರ್ಥವೇ ನನಗಾಗುವುದಿಲ್ಲ. ಸ್ವಾತಂತ್ರ್ಯಸಾಧನೆಯ ಮತ್ತು ಪ್ರಜಾಪ್ರಭುತ್ವದ ವಿಜಯಕ್ಕೆ ಹೊಣೆಗಾರಿಕೆ ಮತ್ತು ಶಿಸ್ತು ಇವುಗಳ ಮಹದಾವಶ್ಯಕತೆಯನ್ನು ಮನಗಂಡು ಮುಂದಾದರೆ ಗೆಲವು ಅನತಿದೂರದಲ್ಲೇ ಇದೆ ಎಂಬುದು ನಿಶ್ಚಯ ಎಂದರು.

ಗುಂಪಿನ ಮೇಲೆ ಗುಂಡು ಹಾರಿಸಿದುದು
ಮೊಂಡಲೇಯಲ್ಲಿ ಹನ್ನೊಂದು ಮಂದಿಯ ಪ್ರಾಣಹಾನಿ

ಬರ್ಮಾದಲ್ಲಿ ಮೊಂಡಲೇ ನಗರದ ಕೋರ್ಟು ಕಟ್ಟೋಣಗಳ ಕಡೆಗೆ ಹತ್ತೆಪ್ಪತ್ತು ಸಾವಿರ ಮಂದಿಯ ಮಹಾ ಮೆರವಣಿಗೆ ಸಾಗಿತು. ಸವಿನಯ ಕಾಯಿದೆ ಭಂಗ ಚಳವಳಿಯ ಪರಿಣಾಮವಾಗಿ ಕೆಲವರನ್ನು ದಸ್ತಗಿರಿ ಮಾಡಿರುವುದು ತಪ್ಪೆಂದೂ ಅವರನ್ನು ಬಿಡುಗಡೆಮಾಡಬೇಕೆಂದೂ ಜನತೆಯ ಮನದೊಲವನ್ನು ಪ್ರದರ್ಶಿಸುವ ಧ್ಯೇಯದಿಂದ ಆ ಮಹಾ ಮೆರವಣಿಗೆಯು ಎತ್ತುಗಡೆಯಾಗಿತ್ತು. ಹಲವರು ಆಯುಧಪಾಣಿಗಳಾಗಿದ್ದರೆಂದೂ ಸರಕಾರದ ಹೇಳಿಕೆ. ಅಂತೂ ಅವರು ಚದರಲು ಸಮ್ಮತಿಸದೆ ನುಗ್ಗಿ ಲೂಟಿಮಾಡುವ ಉದ್ಧಟತನವನ್ನು ತೋರಿದುದರಿಂದ ಅನಿವಾರ್ಯವಾಗಿ ಪೋಲೀಸರು ಗುಂಡುಹಾರಿಸಬೇಕಾಯಿತೆಂದೂ ಆದರಿಂದಾಗಿ ಹನ್ನೊಂದು ಜನ ಕೊಲ್ಲಲ್ಪಟ್ಟಿರುವರೆಂದೂ ಹತ್ತೊಂಬತ್ತು ಮಂದಿ ಗಾಯಗೊಂಡಿರುವರೆಂದೂ ನಗರವು ಈಗ ಸಿವಿಲ್ ಮತ್ತು ಮಿಲಿಟರೀ ಪಡೆಗಳ ಪಹರೆಯಿಂದ ಸುರಕ್ಷಿತವಾಗಿ ಕಾಯಲ್ಪಡುತ್ತಿದೆಯೆಂದೂ ಸರಕಾರದ ಪ್ರಕಟಣೆ.

ಹಿಟ್ಲರನ ದೃಷ್ಟಿಯು ಪಶ್ಚಿಮಕ್ಕೆ ತಿರುಗಿದೆ

ಇದು ಪೂರ್ವದ ಯೂಕ್ರೇಯಿನಿನ ಕಡೆಗಿತ್ತು. ಆದರೆ ಅದನ್ನು ನುಂಗಬೇಕಾದರೆ ರಷ್ಯಾದ ಕರಡಿಯನ್ನು ಕೆಣಕದೆ ಆಗುವಂತಿಲ್ಲ. ಹಿಟ್ಲರನ ಸಮರ ಸಾಧನದ ವೈಶಿಷ್ಟ್ಯವೆಂದರೆ ವಿಮಾನವಡೆ. ಅದು ಕಿಕ್ಕಿರಿದು ಜನಸಂದಣಿಯಿರುವ ನಗರ ಪಟ್ಟಣಗ್ರಾಮಗಳಿಂದ ಕೂಡಿದ ಪಶ್ಚಿಮದ ಚಿಕ್ಕ ದೇಶಗಳಲ್ಲಿ ಪರಿಣಾಮಕಾರಿಯಾಗುವಂತೆ ಜನವಸತಿಯೂ ನಗರಪಟ್ಟಣಗ್ರಾಮಗಳೂ ದೂರ ದೂರವಾಗಿ ಹರಡಿಕೊಂಡಿರುವ ವಿಸ್ತಾರವಾದ ರಷ್ಯಾದಲ್ಲಿ ವಿಶೇಷ ಫಲಕಾರಿಯಾಗಲಾರದು. ಆದುದರಿಂದ ಯೂಕ್ರೇಯಿನಿನ ದಂಡಯಾತ್ರೆಯ ಕಾರ್ಯಕ್ರಮವನ್ನು ಮುಂದರಿಸಿ ಪ್ರಕೃತಭೀತರಾಗಿರುವ ಪಶ್ಚಿಮ ದೇಶಗಳ ಕಡೆಗೆ ದೃಷ್ಟಿ ತಿರುಗಿಸೋಣ ಎಂಬ ಘೋಷಣೆಯಲ್ಲಿದ್ದಾನೆ ಹಿಟ್ಲರ್.

ಮೈಸೂರಲ್ಲಿ ಶ್ರೀ. ತಗಡೂರು ರಾಮಚಂದ್ರರಾಯರ ದಸ್ತಗಿರಿ

ತಾ. ೧೩ರಲ್ಲಿ ಮೈಸೂರು ಸಿಟಿ ಮೆಜಿಸ್ಟ್ರೇಟರ ಆಜ್ಞಾನುಸಾರವಾಗಿ ಶ್ರೀ ತಗಡೂರು ರಾಮಚಂದ್ರರಾಯರು ದಸ್ತಗಿರಿ ಮಾಡಲ್ಪಟ್ಟಿರುವರು. ಹಿಂದೇ ಅವರು ಒಂದುವರ್ಷದ ಅವಧಿಯ ಸದ್ವರ್ತನೆಗೆ ಇನ್ನೂರು ರೂಪಾಯಿಯ ಕರಾರು ಬರೆದು ಕೊಡಬೇಕೆಂದೂ ಅಷ್ಟೇ ಮೌಲ್ಯದ ಎರಡು ಜಾಮೀನುಗಳನ್ನು ಕೊಡಬೇಕೆಂದೂ ಚಾರ್ಜುಶೀಟ್ ಮಾಡಲಾಯಿತು. ಅದಕ್ಕೆ ಒಪ್ಪದುದರಿಂದ ಅವರನ್ನು ರಿಮಾಂಡಿನಲ್ಲಿಟ್ಟಿದೆ. ತಾ. 20ಕ್ಕೆ ವಿಚಾರಣೆಯ ಹೇರಿಂಗ್ ನಡೆಯಲಿರುವುದು. ಅವರು ಪತ್ರಿಕೆಗಳ ಮೂಲಕವೂ ಭಾಷಣಗಳಲ್ಲಿಯೂ ತಾನು ಸತ್ಯಾಗ್ರಹ ಪ್ರಾರಂಭಿಸುತ್ತೇನೆಂದೂ ಆ ಮೂಲಕ ದೊಡ್ಡಪೇಟೆಯ ಪೋಲೀಸ್ ಸ್ಟೇಶನ್ ಕಟ್ಟೋಣಕ್ಕೆ ಇತ್ತೀಚೆಗ ಇಡಲ್ಪಟ್ಟ 'ಹೆಮಿಲ್ಟನ್ ಬಿಲ್ಡಿಂಗ್ಸ್' ಎಂಬ ಹೆಸರನ್ನು ಸರಕಾರವು ತೆಗೆಯುವಂತೆ ಒತ್ತಾಯಿಸುತ್ತೇನೆಂದೂ ಸಾರಿದ ಪ್ರಯುಕ್ತ ಸಾರ್ವಜನಿಕ ಸಮಾಧಾನ ಶಾಂತಿಗಳಿಗೆ ಭಂಗಬರುವ ಸಂಭವವಿರುವ ಕಾರಣ ಅವರನ್ನು ದಸ್ತಗಿರಿಮಾಡಿರುದಾಗಿ ಚಾರ್ಜುಶೀಟಿನಲ್ಲಿ ನಮೂದಿಸಿದೆ.

ಶ್ರೀ. ಎ. ಬಿ. ಶೆಟ್ಟರ ಭಾಷಣ

ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ. ಎ. ಬಿ. ಶೆಟ್ಟರು ಕೊಯಮುತ್ತೂರು ಟೌನ್ ಹೋಲಿನಲ್ಲಿ ಪಬ್ಲಿಕ್ ಹೆಲ್ತ್ (ಸಾರ್ವಜನಿಕ ಸ್ವಾಸ್ಥ್ಯರಕ್ಷಣೆ) ಮತ್ತು ಇತ್ತೀಚೆಗೆ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾದ 'ಮದ್ರಾಸು ಪಬ್ಲಿಕ್ ಹೆಲ್ತ್ ಬಿಲ್ಲು' ಇವುಗಳ ಕುರಿತಾಗಿ ಪರಿಣಾಮಕಾರಿಯಾದ ಭಾಷಣವನ್ನು ಮಾಡಿದರು. ಕೊಯಮುತ್ತೂರು ಎಗ್ರಿಕಲ್ಚರಲ್ (ಕೃಷಿ) ಕಾಲೇಜಿನಲ್ಲಿ 'ಕೃಷಿ ಮತ್ತು ಶಿಕ್ಷಾವರ್ಧಕ ಆಹಾರ' ಈ ವಿಷಯವಾಗಿ ಬೋಧಪ್ರದವಾದ ಭಾಷಣವನ್ನಿತ್ತರು.

ಕಾಶ್ಮೀರ ಸಂಸ್ಥಾನದಲ್ಲಿ ಶಾಸನಕ್ರಮ ಸುಧಾರಣೆಯ ಉದ್ಘಾಟನೆ

ಕಾಶ್ಮೀರದ ಸಂಸ್ಥಾನದಲ್ಲಿ ಕಳೆದ ೧೯೩೪ರಲ್ಲಿ ಸುಧಾರಿತ ರಾಜ್ಯಭಾರ ಕ್ರಮವನ್ನು ಕೈಗೊಂಡಿತ್ತು. ಆ ನವಶಾಸನ ಪ್ರಕಾರ ಒಂದು ಮಂತ್ರಿಮಂಡಲವೂ ಒಂದು ಪ್ರಜಾಸಭಾ ಎಂಬ ಪ್ರಜಾಪ್ರತಿನಿಧಿ ಸಂಘವೂ ಏರ್ಪಡಿಸಲ್ಪಟ್ಟು ಈ ತನಕ ಸಂಸ್ಥಾನದ ಸರಕಾರದೊಡನೆ ರಾಜಕಾರಣದಲ್ಲಿ ಸಹಕರಿಸಿಕೊಂಡು ಬಂದಿತ್ತು. ಪ್ರಜೆಗಳಿಗೆ ಇಂದಿನಯುಗ ಸ್ಥಿತಿಗೆ ತಕ್ಕಂತೆ ಮತ್ತಷ್ಟು ಹೆಚ್ಚಿನ ಆಡಳಿತದ ಹೊಣೆಗಾರಿಕೆಯನ್ನು ಕೊಡುವುದಕ್ಕಾಗಿ ಮಹಾರಾಜರು ಆ ಶಾಸನವನ್ನು ತಿದ್ದಿದ್ದಾರೆ. ಹಾಗೆ ದ್ವಿತೀಯಾವರ್ತಿ ಸುಧಾರಿತವಾದ ಶಾಸನದ ಉದ್ಘಾಟನೆಯನ್ನು ಮಾಡುವಾಗ ಹಿಂದಿನ ನವರಾಜ್ಯಭಾರದ ಪದ್ಧತಿಯೂ ಜಯಶೀಲವಾಗಿ ಕಾರ್ಯ ನಿರ್ವಹಿಸಿರುವುದರಿಂದ ಸಂತುಷ್ಟರಾಗಿರುವ ತಾನು ಪ್ರಜೆಗಳಮೇಲೆ ಮತ್ತು ಹೆಚ್ಚಿನ ಹೊಣೆಗಾರಿಕೆಯನ್ನು ಬಿಟ್ಟು ಕೊಡಲು ಸಂತೋಷಪಡುತ್ತೇನೆಂದರು—ಹಾಗ ತಿದ್ದಲ್ಪಟ್ಟಿರುವ ಶಾಸನ ಪ್ರಕಾರ ಪ್ರಜಾಸಭೆಯಲ್ಲಿ ಚುನಾವಣೆಯ ಮೂಲಕ ತುಂಬಲ್ಪಡುವ ಸ್ಥಾನಗಳು ಹಿಂದಿದ್ದ ೩೩ರಿಂದ ೪೦ಕ್ಕೆ ಏರಿಸಲಾಗಿವೆ. ಚುನಾವಣೆಗೆ ಸೇರದ ಸ್ಥಾನಗಳು ಹಿಂದಿದ್ದ ೪೨ರಿಂದ ೩೫ಕ್ಕೆ ಇಳಿಸಲ್ಪಟ್ಟಿದೆ. ಸದಸ್ಯರಿಗೆ ಡೆಪ್ಯುಟಿ ಪ್ರೆಸಿಡೆಂಟರನ್ನು ಚುನಾಯಿಸುವ ಅಧಿಕಾರಕೊಡಲ್ಪಟ್ಟಿದೆ. ಮಂತ್ರಿಮಂಡಲವು ಸಂಸ್ಥಾನದ ರಾಜ್ಯಭಾರಕ್ಕೆ ಹಿಂದಿನಹಾಗೆ ಹೊಣೆಯಾಗಿರಬೇಕೆಂಬ ಹೊಸನಿಯಮದಿಂದ ಮಂತ್ರಿಗಳಿಗೆ ಪ್ರಜಾಭಿಪ್ರಾಯವನ್ನು ತಿಳಿದು ಸಹಕರಿಸಿ ನಡೆಯುವ ಅವಕಾಶವನ್ನು ಕಲ್ಪಿಸಿಕೊಡುವ ವಿಶೇಷ ಲಕ್ಷಣವನ್ನು ಸೇರಿಸಲ್ಪಟ್ಟಿದೆ.

ಕಥೋಲಿಕ ಜಗದ್ಗುರು ಪವಿತ್ರಮಯ ಹನ್ನೊಂದನೆಯ ಪೋಪ್ ಪಯಸ್‌ರವರ ದಿವಂಗತರಾದರು

ಪೋಪ್ ಗುರುಗಳು ಕಳೆದ ಎರಡು ವರುಷಗಳಿಂದ ಆಗಾಗ ಹೃದ್ರೋಗದಿಂದ ಪೀಡಿತರಾಗುತ್ತಿದ್ದರು. ಕಳೆದ ತಾ. 10ರಲ್ಲು ಆದರಿಂದಲೇ ಅವರು ತೀರಿಕೊಂಡರು. ಮತ್ತೆರಡೇ ದಿನಗಳಲ್ಲಿ ಅವರ ಪಟ್ಟದ ವಾರ್ಷಿಕೋತ್ಸವವು ನಡೆಯಲಿಕ್ಕಿತ್ತು. ಅದಕ್ಕಾಗಿ ಸರ್ವ ಸನ್ನಾಹಗಳು ಸಿದ್ಧವಾಗಿದ್ದವು. ಆದರೆ ಆನಂದೋತ್ಸವದ ಸಿದ್ಧತೆಗಳೆಲ್ಲ ದುಃಖದ ಬೀಡಾಗಿ ಪರಿಣಮಿಸಿತು. ಪೋಪರ ಮನಸ್ಸು ಕಡೆಯ ಕ್ಷಣದವರೆಗೂ ಅಧೀರವಾಗದೆ ಸ್ಥಿರವಾಗಿತ್ತು. ಅಂತ್ಯಕ್ಷಣ ಸಮೀಪಿಸಿದಾಗ ಆಶೀರ್ವಾದಾರ್ಥವಾಗಿ ತನ್ನ ಬಲಗೈಯನ್ನೆತ್ತಿದರು. ಬಾಯಿಂದ ಅಸ್ಪಷ್ಟವಾಗಿ 'ಜೇಸುವೇ, ಶಾಂತಿ! ಶಾಂತಿ!' ಎಂದರು. ಮರುಕ್ಷಣದಲ್ಲಿ ಕೈಯು ಕೆಳಗಿಳಿಯಿತು. ಆತ್ಮವು ಮುಖದಲ್ಲಿ ಶಾಂತಿಯ ದೈವಿಕ ಛಾಯೆಯನ್ನು ವಿಕಸಿಸಿ ಹೊರಟುಹೋಯಿತು.

ಜಗದ್ಗುರು ಸ್ಥಾನಕ್ಕೆ ನೂತನ ಪೋಪರನ್ನು ಚುನಾಯಿಸುವ ಕಾರ್ಡಿನಲ್ ಮಂಡಲವು ೧ನೆಯ ತಾರೀಕಿಗೆ ಕೂಡುವುದು. ನಾಲ್ಕು ಶತಮಾನಗಳ ಸಂಪ್ರದಾಯದಂತೆ ಈ ಸಲ ಇಟೇಲಿಯನ್ ಗುರುವಿನ ಚುನಾವಣೆಯಾಗದೆ ಅನ್ಯದೇಶೀಯರಾದವರನ್ನು-ಬಹಶಃ ಅಮೇರಿಕನರನ್ನು ಜಗದ್ಗುರು ಸ್ಥಾನಕ್ಕೆ ಚುನಾಯಿಸಲಾಗುತ್ತೋ ಏನೋ ಎಂದು ಊಹಿಸಲಾಗಿದೆ

ಪೋಪ ಗುರುಗಳ ಸಂಕ್ಷಿಪ್ತ ಜೀವನ ಪರಿಚಯ—ಅವರ ಮೊದಲಿನ ಹೆಸರು ಅಂಬ್ರೋಸ್ ಡೇಮಿಯನ್ ಅಚಿಲೀ ರಟ್ಟೀ ಎಂದು. ೧೯೨೨ರಲ್ಲಿ ಜಗದ್ಗುರು ಪಟ್ಟವನ್ನೇರುವಾಗ ತೆಗೆದುಕೊಂಡ ಹೆಸರು ಪೋಪ್ ಪಯಸ್ ೧೧ನೇ ಎಂದು. ಅವರ ಜನನ ತಾ ೩೧-೫-೧೮೫೭ರಲ್ಲಿ ವಿದ್ಯಾಭ್ಯಾಸ ಸಾನ್ ಪಿಟ್ರೋ ಮಾರ್ಟೀ ಸೆಮಿನರಿ, ಮೊಂಜಾ ಸೆಮಿನರಿ, ಮತ್ತು ಮಿಲಾನಿನ ಸೈಂಟ್ ಚಾರ್ಲಿಸ್ ಕಾಲೇಜು, ಇವುಗಳಲ್ಲಿ ಆಮೇಲೆ ರೋಮಿಗೆ ಹೋಗಿ ಗ್ರೆಗೋರಿಯನ್ ಯುನಿವರ್ಸಿಟಿಯಲ್ಲಿ ವ್ಯಾಸಂಗವನ್ನು ನಡೆಯಿಸಿ ಫಿಲಾಸಫಿ, ಥಿಯಾಲೋಜಿ, ಕೆನನ್ ಲಾ ಇವುಗಳಲ್ಲಿ ಡಾಕ್ಟರ್ ಎಂಬ ಮಹಾಪದವಿಯ ಬಿರುದನ್ನು ಹೊಂದಿದರು. ಇವರು ಬಹುಭಾಷಾ ಪಂಡಿತರು. ಅಂದಿನ ಪೋಪ್ ೧೦ನೆಯ ಪಯಸರು ಇವರ ಅಸಾಧಾರಣ ಪ್ರತಿಭೆಯನ್ನು ಕಂಡು ರೋಮಿಗೆ ಕರೆಯಿಸಿಕೊಂಡರು ಹಲವು ಪ್ರಾಮುಖ್ಯ ಸ್ಥಾನಗಳಲ್ಲಿ ಒಂದರ ನಂತರ ಮತ್ತೊಂದಾಗಿ ಇವರನ್ನು ನೇಮಿಸುತ್ತ ಕೊನೆಗೆ ೧೯೨೧ರಲ್ಲಿ ಕಾರ್ಡಿನಲ್ ಪದವಿಗೂ ಮಿಲಾನಿನ ಆರ್ಚ್ ಬಿಷೋಪ್ ಸ್ಥಾನಕ್ಕೂ ಏರಿಸಿದರು ಮರುವರುಷ ಪೋಪರ ನಿಧನಾನಂತರ ೧೧ನೆಯ ಪಯಸ ಎಂಬ ಅಭಿಧಾನದಿಂದ ಜಗದ್ಗುರು ಪಟ್ಟಕ್ಕೆ ಚುನಾಯಿತರಾಗಿ ಅಲಂಕರಿಸಿದರು.

ಇವರ ಕಾಲದಲ್ಲಿ ಕಥೋಲಿಕ ಜಗದ್ಗುರು ಹಾಗೂ ಆ ಸಮಾಜದ ಸ್ಥಾನಮಾನ ಹಕ್ಕು ಸವಲತ್ತುಗಳ ರಕ್ಷಣೆಗಾಗಿ ಅಸಾಧಾರಣ ಧೈರ್ಯದಿಂದಲೂ ಬುದ್ಧಿಚಾತುರ್ಯದಿಂದಲೂ ರಾಜಕೀಯ ಡಿಕ್ಟೇಟರುಗಳೊಡನೆ ಸಾಹಸದ ಕಾದಾಟವಾಡಬೇಕಾಗಿತ್ತು. ಈ ಹೋರಾಟದ ವಿಜಯ ಸಂಕೇತವಾಗಿ ಇಟೇಲಿಯ ರಾಜನಿಗೂ ಇವರಿಗೂ ಕಥೋಲಿಕ ದೇವಾಲಯಗಳ ಸೊತ್ತು ಸ್ವಾತಂತ್ರ್ಯಗಳ ಸ್ಥಿರತೆಯು ಹಾಗೂ ಧರ್ಮಾಧಿಕಾರದ ಕುರಿತು ಒಂದು ಒಪ್ಪಂದದ ಕರಾರು ೧೯೨೯ರಲ್ಲಿ ಆಯಿತು. ಕಥೋಲಿಕ ಸಮಾಜದ ಅಭ್ಯುದಯ ಸಂಕಷ್ಟ ನಿವಾರಣೆ ಲೌಕಿಕಧಾರ್ಮಿಕ ಹಕ್ಕು ಸವಲತ್ತುಗಳ ಪ್ರಶ್ನೆ ಯಾವ ದೇಶದಿಂದ ಬಂದರೂ ಅವಕ್ಕೆ ಪೋಪರ ಶಕ್ತಿ ಸ್ಫೂರ್ತಿಕವಾದ ಸಹಾನುಭೂತಿಯ ಬೆಂಬಲಗಳು ಇದ್ದೇ ಇದ್ದುವು.

ಇಂಡಿಯದಲ್ಲಿಯ ಕ್ರೈಸ್ತರ ಕಡೆಗೆ ಪೋಪರ ಹೃದಯದಲ್ಲಿ ವಿಶೇಷ ಪ್ರಾಶಸ್ತ್ಯದ ಪ್ರೇಮಮಯ ಸ್ಥಾನವು ಇತ್ತು. ಕ್ರೈಸ್ತ ದೇವಾಲಯಗಳ ಸಮಾಜಗಳ ಧರ್ಮಾಧಿಕಾರಗಳಲ್ಲಿ ದೇಶೀಯರಿಗೆ ಹೆಚ್ಚಿನ ಸ್ಥಾನಮಾನಗಳನ್ನು ಕೊಡುವ ಉದಾರ ಧೋರಣೆಯನ್ನು ತೋರಿದ ಪೋಪು ಗುರುಗಳೆಂದರೆ ಇವರೇ. ದೇಶೀಯ ಕ್ರೈಸ್ತ ಸನ್ಯಾಸಿಗಳನ್ನು ಬಿಷೋಪಸ್ಥಾನಕ್ಕೆ ಏರಿಸುವ ಔಚಿತ್ಯವನ್ನು ಮನಗಂಡ ಮಹಾತ್ಮರಿವರು. ಇವರು ಮಂಗಳೂರು, ಟ್ಯೂಟಿಕೋರಿನ್, ಕುಂಭಕೋಣ, ಕೊಟ್ಟಾರ, ಕೊಚ್ಚಿ, ತಿರುಚಿನಾಪಳ್ಳಿ ಈ ಸ್ಥಳಗಳಲ್ಲಿಯ ಬಿಷೋಪ್ ಗದ್ದುಗೆಗೆ ದೇಶೀಯರನ್ನೇ ಏರಿಸಿದ ಖ್ಯಾತಿ ಕಾರ್ಯಗಳೂ ವೀರಪಳ್ಳಿಯ ಆರ್ಚ್ ಬಿಷೋಪ್ ಸ್ಥಾನವನ್ನು ದೇಶೀಯರಿಗಿತ್ತ ಮಹದೌದಾರ್ಯದ ಚಿರಸ್ಮರಣೆಯು ಇಂಡಿಯದ ಕಥೋಲಿಕ ಸಮಾಜಕ್ಕೆ ಇವರ ಪವಿತ್ರ ಚಿರಸ್ಮಾರಕವಾಗಿ ಉಳಿಯುವುದೆಂಬುದು ನಿಸ್ಸಂದೇಹ.

ಮಂಗಳೂರು

ಮೋಟಾರ್ ಕೆಲಸಗಾರರ ಸಭೆ - ತಾ. 11ನೇ ಶನಿವಾರ ಸಾಯಂಕಾಲ 6·30ಕ್ಕೆ ಸರಿಯಾಗಿ ಶ್ರೀ ಕೆ. ಯು. ಪೈಗಳವರ ಅಧ್ಯಕ್ಷತೆಯಲ್ಲಿ ದ. ಕ. ಜಿಲ್ಲಾ ಮೋಟರ್ ಯೂನಿಯನಿನ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಮೈದಾನದಲ್ಲಿ ಸೇರಿತು. ಶ್ರೀ ಕೆ. ರಘುನಾಥರಾಯರು ಮಾಲಿಕರಿಗೆ ಕಳುಹಿಸಿಕೊಟ್ಟಿದ್ದ ಕೆಲಸಗಾರರ ತಲಬಿನ ವಿವರದ ಪಟ್ಟಿಯ ನಕಲನ್ನು ಸಭೆಯ ಮುಂದೆ ಓದಿ ಹೇಳಿ ಕೆಲಸಗಾರರ ಕೇಳಿಕೆಗಳು ಎಷ್ಟು ನ್ಯಾಯವಾದವುಗಳೆಂಬುದನ್ನು ವಿವರಿಸಿದರು. ಅನಂತರ ಶ್ರೀ. ಕೆ. ಕೆ. ಶೆಟ್ಟಿಯವರು ಭಾಷಣ ಮಾಡುತ್ತಾ ಸ್ವತಂತ್ರಭಾರತದ ವಾರ್ತಾವಾಹಕರು ತಮ್ಮ ವರದಿಯಲ್ಲಿ ಶ್ರೀ ವರದರಾಯರ ಅಧ್ಯಕ್ಷತೆಯಲ್ಲಿ ಜರಗಿದ ಮಹಾಸಭೆಯ ವರದಿಯನ್ನು ಹೇಗೆ ತಪ್ಪಾಗಿ, ಏಕಪಕ್ಷೀಯ ದೃಷ್ಟಿಯಿಂದಲೂ, ಟೀಕೆಯ ಉದ್ದೇಶದಿಂದಲೇ ಬರೆದುದು ಪತ್ರಿಕಾಧರ್ಮಕ್ಕೆ ವಿರೋಧವೆಂದೂ ಅಂತಹ ಏಕಪಕ್ಷೀಯ ಬರವಣಿಗೆಗಳಿಗೆ ಮಹಾಜನರು ಗಮನಕೊಡದೆ ಸತ್ಯಶೋಧನೆ ಮಾಡಬೇಕೆಂದೂ ಹೇಳಿದರು. ಶ್ರೀ. ನಾರಾಯಣ ಶೆಟ್ಟಿಯವರು ಭಾಷಣ ಮಾಡುತ್ತಾ ಕೆಲಸಗಾರರು ಮಾನ್ಯ ಮಂತ್ರಿಗಳ ಮುಂದೆ ತಮ್ಮ ಕೇಳಿಕೆಗಳನ್ನು ಸರಿಯಾದ ರೀತಿಯಲ್ಲಿರಿಸಬೇಕೆಂದು ಕೇಳಿಕೊಂಡರು. ಶ್ರೀ. ಕೆ. ಕೃಷ್ಣರಾಯರು ತನ್ನ ಭಾಷಣದಲ್ಲಿ ಕಳೆದ ಸಾರಿ ತಾವು ಭಾಷಣ ಮಾಡಿದ ವಿಷಯವನ್ನು ಸ್ವತಂತ್ರ ಭಾರತದ ವಾರ್ತಾವಾಹಕರು ತಿಳಿಸಿದ್ದೆ, ತಮ್ಮನ್ನು ವೈಯಕ್ತಿಕವಾಗಿ ಟೀಕಿಸಿದುದು ಆ ಪತ್ರಿಕೆಯ ವಾರ್ತಾವಾಹಕರ ಕ್ಷುದ್ರ ಮನೋವೃತ್ತಿಯನ್ನು ಪ್ರದರ್ಶಿಸುವಂತಹದೆಂದೂ, ಇಂತಹ ರೀತಿಯ ವರದಿಯನ್ನು ಸ್ವಲ್ಪ ಮಾತ್ರ ತಿಳುವಳಿಕೆಯುಳ್ಳ ಮತ್ತು ಜವಾಬ್ದಾರಿಕೆಯನ್ನು ತಿಳಿದ ಪತ್ರಿಕೋದ್ಯಮಿಯು ಬರೆಯುವುದಿಲ್ಲವೆಂದೂ, ಅವರೆ ಇಂತಹ ರೀತಿ, ಸುಳ್ಳುವಾರ್ತೆಗಳಿಂದ ಮಹಾಜನರನ್ನು ಮೋಸಗೊಳಿಸುವ ಯತ್ನವು ಪತ್ರಿಕೆಯ ವಾರ್ತಾವಾಹಕರಿಗೆ ಅಯೋಗ್ಯವೆಂದೂ ಹೇಳಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ವಿವಾದವನ್ನು ಬಗೆಹರಿಸಲು ತಮ್ಮಿಂದಾಗುವ ಯತ್ನವನ್ನು ತಾವು ಮಾಡುವುದಾಗಿ ಹೇಳಿದರು ಮತ್ತು ಯೂನಿಯನಿನ ಸಹಾಯಾರ್ಥವಾಗಿ (ಕೆಲಸಗಾರರಿಗೆ ಸಹಾಯ ಮಾಡಲು) ರೂ. 5ನ್ನು ಸಹಾಯ ಮಾಡುವುದಾಗಿ ಹೇಳಿದರು.

ಹೋಸ್ಟೇಲ್ ಡೇ ಸಮಾರಂಭ:— ಇಲ್ಲಿಯ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕ ದಿನಾಚರಣೆಯು ತಾ. 8-2-39ರಲ್ಲಿ ಡಿಸ್ಟ್ರಿಕ್ಟ್ ಸೆಷನ್ ಜಡ್ಜರಾದ ಶ್ರೀ. ಎನ್. ಪಿ. ರಾಜಗೋಪಾಲಾಚಾರಿಯವರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ಜರಗಿತು. ಉಡುಪಿ ಸಬ್ ಮೆಜಿಸ್ಟ್ರೇಟರಾದ ಶ್ರೀ. ಪಿ. ಎನ್. ತಿಮ್ಮಪ್ಪ ಶೆಟ್ಟರು ಶ್ರೇಯೋಭಿವೃದ್ಧಿಯನ್ನು ಕೋರಿ ಭಾಷಣವಿತ್ತರು. ಅಧ್ಯಕ್ಷರ ಸಮಯೋಚಿತ ಭಾಷಣ, ವಿನೋದ ನಾಟಕಾದಿಗಳಿಂದ ಸಭಾಂತ್ಯವಾಯಿತು.

ಮಂಗಳೂರು ಟೆನ್ನಿಸ್ ಪಂದ್ಯಾಟ:- ಮಂಗಳೂರು ಕಾಸ್ಮೋಪೊಲಿಟನ್ ಕ್ಲಬ್ಬಿನ ಆಶ್ರಯದಲ್ಲಿ ಟೆನ್ನಿಸ್ ಸ್ಪರ್ಧೆಗಳು ತಾ. [illegible]-39ರಲ್ಲಿ ಆರಂಭವಾಗುವುದು.

ಕಾಶಿ, ಗೋಕರ್ಣ, ಮತ್ತು ಅದಮಾರು ಸ್ವಾಮಿಗಳವರ ಪರಸ್ಪರ ಸಂದರ್ಶನ

ಮಂಗಳೂರು ಶ್ರೀವೆಂಕಟರಮಣ ದೇವಸ್ಥಾನದ ಮೆನೇಜರ್ ಶ್ರೀಯುತ ಎನ್. ನಾರಾಯಣರಾಯರ ಆಹ್ವಾನ ಪತ್ರದ ಮೇರೆಗೆ ಮುಂದಿನ ಉಡುಪಿ ಶ್ರೀಕೃಷ್ಣ ಪರ್ಯಾಯಪಟ್ಟವೇರಲಿರುವ ಶ್ರೀ ಅದಮಾರು ಮಠಾಧೀಶ ಶ್ರೀ ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರು ಇದೇ ಬರುವ ತಾ. 17-2-39ಕ್ಕೆ ಮಂಗಳೂರಿಗೆ ಚಿತ್ತೈಸುವರೆಂಬ ವಾರ್ತೆಯಿದೆ.

ಈ ಸುಸಮಯದಲ್ಲಿ ಮಂಗಳೂರಿಗೆ ಚಿತ್ತೈಸಿರುವ ಗೌಡ ಸಾರಸ್ವತ ವರ್ಗದ ಧರ್ಮಗುರುಗಳಾದ ಶ್ರೀ ಕಾಶೀಮಠಾಧೀಶರಾದ ಶ್ರೀಪಾದಂಗಳವರಿಗೂ ಶ್ರೀಗೋಕರ್ಣ ಮಠಾಧೀಶ ಶ್ರೀಪಾದಂಗಳವರಿಗೂ ಶ್ರೀ ಅದಮಾರು ಮಠಾಧೀಶ ಶ್ರೀಪಾದಂಗಳವರ ಪರಸ್ಪರ ಸಂದರ್ಶನ-ಸಂಭಾಷಣ ಸತ್ಕಾರಾದಿ ಮರ್ಯಾದೆಗಳು ನಡೆಯಬಹುದೆಂದೂ ಊಹಿಸಲಾಗಿದೆ. ಇಂತಹ ಸುಸಂದರ್ಭದಿಂದ ಜಾತಿದ್ವೇಷಗಳು ಕಡಿಮೆಯಾಗಿ ಪರಸ್ಪರ ಸೌಹಾರ್ದ ಸಹಾನುಭೂತಿಯು ಬೆಳೆದು ಐಕ್ಯಮತ್ಯದಿಂದಾಗತಕ್ಕ ಕಾರ್ಯಗಳು ನೆರವೇರಿ ದೇಶಕಲ್ಯಾಣವಾಗಲಿಕ್ಕೆ ಅನುಕೂಲವಾಗಬಹುದಾದುದರಿಂದ ದೇಶಾಲೋಚಿತವಾದ ಇಂತಹ ಸುಸಂಘಟನೆಯು ಬಹುದಿನಕ್ಕೆ ಭಾರತೀಯರಲ್ಲಿ ಸ್ವಧರ್ಮಾಚಾರ ಮರ್ಯಾದೆಗಳಿಗೆ ಕುಂದುಬಾರದಂತೆ ಹೆಚ್ಚು ಬಳಕೆಯಲ್ಲಿ ಬರಲೆಂದು ಹಾರೈಸುವೆವು.

ಡಿ. ಸಿ. ಯಂ. ಶಾಲಾ ಸಾಹಿತ್ಯಸಂಘ

ಸ್ಥಳೀಯ ಡಿ. ಸಿ. ಯಂ. ಶಾಲಾ ಸಾಹಿತ್ಯ ಸಂಘದ ವರ್ಧಂತಿಯು ತಾ. 5ನೇ ಸಾಯಂ. 5 30ಕ್ಕೆ ಶ್ರೀ ವಿ. ಆರ್. ನಾಯನಾರ್ ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಪ್ರಾರ್ಥನೆ, ವಂದಿವಾಚನೆ, ಅಭಿಭಾಷಣಗಳಾದ ಮೇಲೆ ಅಧ್ಯಕ್ಷರು ವಿದ್ಯಾರ್ಥಿಗಳು ಇಂತಹ ಸಭೆಗಳನ್ನು ನಡೆಸಿಕೊಂಡು ಬರುವುದು ಬಹಳ ವಿಶೇಷದ ಸಂಗತಿಯೆಂದು ಹೇಳಿ, ಸಾಹಿತ್ಯಸಂಘಕ್ಕೆ ಅಭಿವೃದ್ಧಿಯನ್ನು ಕೋರಿದರು. ಅನಂತರ ವಿದ್ಯಾರ್ಥಿಗಳು ನಾಟಕ ಪ್ರದರ್ಶನದಿಂದ ಸಭಿಕರನ್ನು ಸಂತೋಷಗೊಳಿಸಿದರು.

ಉಡುಪಿ

ರಾಮಕೃಷ್ಣ ವಿದ್ಯಾರ್ಥಿಭವನದ ದಿನಾಚರಣೆ— ಇದೇ ತಾ. 12ರಲ್ಲಿ ಶ್ರೀಮತಿ ಎಚ್. ಮನೋರಮಾಬಾಯಿ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಶೃಂಗರಿಸಲ್ಪಟ್ಟ ಭವನದ ವಠಾರದಲ್ಲಿ ಯಥಾಸಾಂಗವಾಗಿ ನೆರವೇರಿತು. ಪ್ರಾರಂಭದಲ್ಲಿ ಉಪಹಾರದ ಸತ್ಕಾರ ನಡೆಯಿತು. ಈ ಸಂದರ್ಭದಲ್ಲಿ ಶ್ರೀ. ಉಡುಪಿ ಸಾಬಾಜಿ ರಾಘವೇಂದ್ರಾಚಾರ್ಯರ ಪುತ್ರಿ ಕುಮಾರಿ ಯಶೋದಾಬಾಯಿಯ ಸುಶ್ರಾವ್ಯ ಗಾಯನವು ಹಾರ್ಮೋನಿಯಂ ಮಾಸ್ಟರ್ ಶ್ರೀ ಕಡಿಯಾಳಿ ಪದ್ಮನಾಭಾಚಾರ್ಯರ ನೇತೃತ್ವದಲ್ಲಿ ಜರಗಿತು. ಅನಂತರ ಶ್ರೀ. ಕೆ. ಜಿ. ಬಲ್ಲಾಳ್ ಬಿ. ಎ. ಎಲ್ ಎಲ್. ಬಿ. ಯವರ ಸೂಚನೆ, ಶ್ರೀ. ಪಿ. ಎನ್. ತಿಮ್ಮಪ್ಪ ಶೆಟ್ಟಿ, ಸಬ್ ಮೆಜಿಸ್ಟ್ರೇಟ್ ಇವರ ಅನುಮೋದನೆಯಂತೆ ಶ್ರೀ. ಎಚ್. ಮನೋರಮಾಬಾಯಿಯವರು ಅಧ್ಯಕ್ಷ ಪೀಠವನ್ನೇರಿದರು. ಕುಮಾರಿ ಗೋದಾಬಾಯಿಯ ಪ್ರಾರ್ಥನೆಯಾದೊಡನೆ ಶ್ರೀ. ಕೆ. ಗೋವಿಂದಶೆಟ್ಟರು ಹೈಸ್ಕೂಲಿನ ವರದಿಯನ್ನೋದಿದರು. ಭವನದ ಹಳೆ ನಿವಾಸಿಗಳಾದ ಶ್ರೀ. ಬಿ. ರಘುನಾಥ ಹೆಗ್ಡೆ ಎಮ್. ಎ ಎಲ್. ಟಿ ಯವರು ಅಭಿಭಾಷಣ ಮಾಡಿದರು. ಶ್ರೀ. ಬಿ. ಶೀನಪ್ಪಹೆಗ್ಡೆ ಬಿ. ಎ. ಬಿ. ಎಲ್. ರವರು ಆದಕ್ಕೃತ್ತ್ರರನ್ನು ಯುಕ್ತಾ ಹೋಸ್ಟೆಲ್ ಕಟ್ಟಡಕ್ಕಾಗಿ ಸ್ಥಳವಿತ್ತ ಸರಕಾರವನ್ನು ಅಭಿವಂದಿಸಿದರು, ಹೆತ್ತವರಿಂದ ಹೆಚ್ಚಿನ ಸಹಕಾರವನ್ನು ಕೋರಿದರು. ತರುವಾಯ ಅಧ್ಯಕ್ಷೆಯವರು ಸಂದರ್ಭೋಚಿತವಾಗಿ ಮಾತನಾಡುತ್ತಾ ವಿದ್ಯಾರ್ಥಿನಿಲಯಗಳ ಆವಶ್ಯಕತೆ, ವಿದ್ಯಾರ್ಥಿಗಳ ಕರ್ತವ್ಯಗಳ ಕುರಿತು ವಿಚಾರಪೂರ್ಣ ಭಾಷಣವಿತ್ತರು. ಕೊನೆಗೆ ಉತ್ಸಾಹೀ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳು ಪ್ರೇಕ್ಷಣೀಯವಾಗಿ ಪ್ರದರ್ಶಿಸಲ್ಪಟ್ಟವು. ನವಯುಗದಲ್ಲಿ ಪ್ರಕಟಿಸಲ್ಪಟ್ಟ "ಗಾಳಗೋಪುರ" ಎಂಬ ಶ್ರೀ. ಬಿ. ಶ್ಯಾಮರಾಯ ಶೆಟ್ಟರ ದೃಶ್ಯವು, ಜಯಶೀಲವಾಗಿ ಅಭಿನಯಿಸಲ್ಪಟ್ಟಿತು. ಕಟ್ಟಕಡೆಗೆ ಶ್ರೀ. ಬಿ. ಶ್ಯಾಮರಾಯ ಶೆಟ್ಟಿ ಬಿ. ಎ. ಎಲ್. ಟಿ. ಯವರು ಈ ಸಮಾರಂಭಕ್ಕೆ ನೆರವಾದವರೆಲ್ಲರಿಗೂ ಧನ್ಯವಾದಗಳನ್ನರ್ಪಿಸಲು ಸಭಾಂತ್ಯವಾಯಿತು. ಶ್ರೀ. ಕೆ. ಜಿ. ಬಲ್ಲಾಳ್, ಶ್ರೀ. ಪಿ. ಎನ್. ತಿಮ್ಮಪ್ಪ ಶೆಟ್ಟಿ ಮೊದಲಾದವರ ನೇತೃತ್ವದಲ್ಲಿ ವಿದ್ಯಾರ್ಥಿ ಭವನವು ಇತ್ತೀಚೆಗೆ ನವಚೇತನ ಪಡೆದು ಅಧಿಕಾಧಿಕ ಜನಹಿತಕಾರಿಯಾಗುವಂತಾದುದು ಅಭಿನಂದನೀಯವಿದೆ.

ಪರ್ಯಾಯಪೀಠವನ್ನೇರಲಿರುವ ಶ್ರೀಗಳವರಿಗೆ ಔತಣ ಸಮಾರಂಭ:— ಮುಂದಣ ಪರ್ಯಾಯ ಸಿಂಹಾಸನಾರೋಹಣ ಮಾಡಲಿರುವ ಶ್ರೀ ಅದಮಾರು ಮಠದ ಶ್ರೀ ವಿಬುಧಮಾನ್ಯತೀರ್ಥ ಶ್ರೀಪಾದಂಗಳವರನ್ನು ಕಲ್ಯಾಣಪುರದ ಗೋಪಾಲಪುರ ಮಠದಲ್ಲಿ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಗಳವರು ಸ್ವಾಗತ ಮೆರವಣಿಗೆಯಲ್ಲಿ ಬರಮಾಡಿಕೊಂಡು ಇದೇ ತಾ. 9ರಲ್ಲಿ ಮಠಸಂಸ್ಥಾನಕ್ಕೆ ಉಚಿತವಾದ ರೀತಿಯ ಔತಣವನ್ನಿತ್ತು ಸತ್ಕರಿಸಿದರು. ಈ ಸಮಾರಂಭದಲ್ಲಿ ಸ್ವಜಾತಿಯ ಲೌಕಿಕ ವೈದಿಕ ಮಹನೀಯರನೇಕರು ಸಹಭಾಗಿಗಳಾಗಿದ್ದರು.

ಟೌನ್ ಕಾಂಗ್ರೆಸ್ ಕಮಿಟಿ:— ಉಡುಪಿ ಟೌನ್ ಕಾಂಗ್ರೆಸ್ ಕಮಿಟಿಯ ಮಹಾಸಭೆಯೊಂದು ಇದೇ ತಾ. 12ರಲ್ಲಿ ಶ್ರೀ. ಪಿ ಲಕ್ಷ್ಮೀನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯನಿರ್ವಾಹಕ ಮಂಡಳಿಯ ರಚನೆಯಾಯಿತು. ಶ್ರೀಗಳಾದ ಸಗರ ರಾಮರಾವ್, ಆರ್. ಎಮ್. ಅಂದ್ರಾಡೆ, ಮಿಯ್ಯಾಳ ನರಸಿಂಹಾಚಾರ್, ವೆಂಕಟೇಶ ನಾಯಕ್, ವಿಠಲ ಶ್ಯಾನುಭಾಗ್, ರಾಮಚಂದ್ರ ಮತ್ತು ಶ್ರೀಮತಿ ಮನೋರಮಾಬಾಯಿ ಪಾಂಗಾಳಕರ್ ಇವರು ಸದಸ್ಯರಾಗಿ ಆರಿಸಲ್ಪಟ್ಟರು.

ಪುಟ ೯ರಿಂದ

ಗಳು ಸುಸಂಘಟಿತರಾಗಿ ತಮ್ಮ ನಾಡಿನ ನಾಡನುಡಿಯ ಕಡೆಗೆ ಹೆಚ್ಚಿನ ಅಭಿಮಾನವುಳ್ಳವರಾಗಿದ್ದಾರೆಂಬುದನ್ನು ನಾವು ಬಲ್ಲೆವು. ಈ ಬಗ್ಗೆ ಅಲ್ಲಿಯ ಮೊಗವೀರ ಸಂಘ, ಕರ್ನಾಟಕ ಸಂಘ, ಕನ್ನಡ ಸಂಗೀತ ಸಭಾ, ಬಂಟರ ಸಂಘ, ಬಿಲ್ಲವರ ಎಸೋಶಿಯೇಶನ್, ಸಸಿಹಿತ್ಲು ಭಗವತೀ ಸಂಘ ಮೊದಲಾದ ಸಂಘಸಂಸ್ಥೆಗಳು ಬಹುಕಾಲದಿಂದ ಅತ್ಯುತ್ಸಾಹದಿಂದ ದುಡಿಯುತ್ತಿವೆ. ಇದರಿಂದಾಗಿ ಅಲ್ಲಿಯ ಕನ್ನಡಿಗರಲ್ಲಿ ನವಜಾಗೃತಿಯುಂಟಾಗಿದೆ. ಈಗ ಅವರೊಡನೆ ನಮ್ಮ ವಿನಂತಿಯಿಷ್ಟೇ;—ನವಯುಗವು ನಿಮ್ಮ ಸಹಕಾರ, ಸಹಾಯವನ್ನು ಅಪೇಕ್ಷಿಸುತ್ತಿದೆ. ಕಡಿಮೆಯೆಂದರೆ ಮುಂಬಯಿಯಲ್ಲೇ ಎರಡು ಸಾವಿರ ಚಂದಾದಾರರಾಗುವುದು ಅಷ್ಟೇನು ಮಹತ್ವದ ವಿಷಯವಲ್ಲ. ಆದುದರಿಂದ ಬೊಂಬಾಯಿಯ ಎಲ್ಲಾ ಕನ್ನಡಿಗರ ಸಂಘಗಳೂ, ಕನ್ನಡಿಗರೂ ಹುಚ್ಚೇಕೆ ಯಾವತ್ತು ಹತ್ತು ಸಮಸ್ತರೂ ವ್ಯಕ್ತಿಗತವಾಗಿಯಾಗಲೀ ಸಾಮುದಾಯಕವಾಗಿಯಾಗಲೀ ನವಯುಗಕ್ಕೆ ಚಂದಾದಾರರನ್ನೂ ಜಾಹೀರಾತುಗಳನ್ನೂ ಹೆಚ್ಚಿಸುವುದಕ್ಕೆ ಕೈಲಾದ ಸಹಾಯ ಮಾಡಬೇಕೆಂದು. ಈ ಕಾರ್ಯದಲ್ಲಿ ಯಾವತ್ತೂ ಮುಂಬಯಿ ಕನ್ನಡ ಬಂಧುಗಳು ಹಿಂದುಳಿಯಲಾರರೆಂದು ನಮಗೆ ಭರವಸೆಯಿದೆ. ಇವರು ಈ ವರೆಗೆ ಕೊಟ್ಟಿರುವ ಮತ್ತು ಮುಂದೆ ಕೊಡಲಿರುವ ಸಕಲ ಸಹಕಾರಂಗಳಿಗೆ ನಾವು ಅನರ ಉಪಕಾರ ಸ್ಮರಿಸುವೆವು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 76/35 R. I. A. No. 58/39

(1) ಸುಬ್ರಾಯಾಚಾರಿ—ತುಂಗಯಾಚಾರಿ ಮಗ (3) ಕಮಲ—ಪಡುಬಿದ್ರಿ ಅನಂತಾಚಾರಿ ವಿಧವೆ-ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದ ಬನ್ನಂಜೆಯಲ್ಲಿರುವವರು.

ಅರ್ಜಿದಾರರು.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ:—

ಮೇಲ್ಕಂಡ 2ನೇ ಅರ್ಜಿದಾರಳ ಗಂಡ ಮೃತ ಅನಂತಾಚಾರಿಯು ತಾ. 30-9-35ರಲ್ಲಿ ಬರೆದಿಟ್ಟ ವೀಲುನಾಮೆ ಪ್ರಕಾರ ಆತನ ಬಾಬ್ತು ಕೆಲವು ಸೊತ್ತುಗಳ ಬಗ್ಗೆ ಮಾತ್ರ ಸದ್ರಿ O. P. 76/35ನೇ ಅರ್ಜಿಯಲ್ಲಿ 2ನೇ ಅರ್ಜಿದಾರಳ ಹೆಸರಲ್ಲಿ ಕೊಟ್ಟ ವಾರೀಸು ಸರ್ಟಿಫಿಕೇಟನ್ನು Extend ಮಾಡಿ ಸದ್ರಿ ಅನಂತಾಚಾರಿಗೆ M. ಗೋವಿಂದಾಚಾರಿ ಎಂಬವನು ತಾ 3-4-33ರಲ್ಲಿ ರೂಪಾಯಿ 130/-ಕ್ಕೆ ಬರೆಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ವಗೈರೆಯನ್ನು ವಸೂಲು ಮಾಡುವ ಸಂಪೂರ್ಣ ಹಕ್ಕು ಸಂಬಂಧವನ್ನು ನ್ಯಾಯವಾದ ಪ್ರತಿಫಲಕ್ಕೆ 2ನೇ ಅರ್ಜಿದಾರಳು 1ನೇ ಅರ್ಜಿದಾರಗೆ ತಾ. 22-9-38ರಲ್ಲಿ ಟ್ರಾನ್ಸ್‌ಫರ ಮಾಡಿಕೊಟ್ಟಿರುವದರಿಂದ ಆ ಕುರಿತು 1ನೇ ಅರ್ಜಿದಾರನ ಹೆಸರಲ್ಲಿ Extended ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಮೇಲ್ಕಂಡ ಅರ್ಜಿದಾರರು ಮಾಡಿಕೊಂಡ ಮೇಲ್ಕಂಡ R. I. A. 58/39ನೇ ಅರ್ಜಿಯು ತಾ. 22-2-39ಕ್ಕೆ ಶಿನಾಕಿಯಿಟ್ಟಿರುವದರಿಂದ ಆ ಕುರಿತು ಆಕ್ಷೇಪ ಇದ್ದವರು ಸದ್ರಿ ದಿವಸ ಸದ್ರಿ ಕೋರ್ಟ ಮುಂದೆ ಹಾಜರಾಗಿ ಜ್ಯಾಹೀರ್ಮಾಡಿಕೊಳ್ಳಬಹುದು.

K. Ramakrishna Rao,
Vakil for Petitioners.
ಉಡುಪಿ, ತಾ. 15-2-1939.

The Tropical Insurance

CO., LTD., DELHI.

Chairman: Sjt. SUBASH CHANDRA BOSE.
(Congress President)

Founder Directors
PANDIT MOTILAL NEHRU
DR. M. A. ANSARI
SJT. S. SRINIVASA IYENGAR
HAKIM AJMAL KHAN

This leading National Company founded and managed by five Congress Presidents invites applications for representation on salary and commission.

APPLY TO:

K. S. RAMAMURTHI, M.A.,
Branch Secretary,
160, Mount Road,
Madras.

OR

M. SUNDER RAM SHETTY
Branch Manager,
Hampankatta,
Mangalore.

ದಕ್ಷಿಣ ಕನ್ನಡ

ಉಡುಪಿ ತಾಲೂಕು ರಾಜಕೀಯ ಪರಿಷತ್ತು

ತಾ.4,5/6/1938ರಲ್ಲಿ ಕಟಪಾಡಿಯಲ್ಲಿ ಜರಗಿದ ಪರಿಷತ್ತಿನ ಜಮಾ-ಖರ್ಚಿನ ವಿವರ

ಜಮಾ ರೂಪಾಯಿ

ಸ್ವಾಗತ ಸಮಿತಿಯ ವರ್ಗಣಿಯಿಂದ	263	1	3
ಸಭಾಪ್ರವೇಶ ಟಿಕೇಟುಗಳಿಂದ	174	13	0
ಪರಿಷತ್ತಿನ ಸಹಾಯ ಧನದಿಂದ	167	3	0
ಪ್ರತಿನಿಧಿ ಹಾಸಲು	8	8	0
ವ್ಯಾಪಾರದ ಚಪ್ಪರ ಬಾಡಿಗೆಯಿಂದ	16	8	0
ಊಟದ ಟಿಕೇಟುಗಳ ಬಾಬ್ತು	46	11	0
ಮುದಲು ಮಾರಾಟದ ಬಾಬ್ತು	15	7	0
ಇತರ ಸಾಮಾನುಗಳ ಮಾರಾಟದಿಂದ	6	2	6
ಜುಮಾಲಾ ಜಮಾ ರೂಪಾಯಿ	727	5	9

ಖರ್ಚು ರೂಪಾಯಿ

ಪ್ರಿಂಟಿಂಗ್ ಮತ್ತು ಸ್ಟೇಶನರಿ ಬಾಬ್ತು	35	6	0
ಕೂಲಿ ಆಳುಗಳ ಪಗಾರ	32	7	0
ಅಡಿಗೆಯ ಮತ್ತು ಊಟದ ಸಾಮಾನುಗಳು	122	14	9
ಕಾಫಿ ವ ಫಲಾಹಾರದ ಬಗ್ಗೆ	37	11	11
ಚಿಮಣಿ ಎಣ್ಣೆ ದೀಪದ ವಗೈರೆ	21	9	6
ಟಪ್ಪಾಲು ಖರ್ಚು	9	6	3
ಬಸ್ಸು ಮತ್ತು ಕಾರು ಬಾಡಿಗೆ	72	15	0
ಸ್ವಯಂಸೇವಕರ ಉಡಿಗೆ ಬಾಬ್ತು	62	3	6
ಇತರ ವಿವಿಧ ಸಾಮಾನುಗಳ ಖರ್ಚು	182	12	4
ಜುಮಲಾ ಖರ್ಚು ರೂಪಾಯಿ	557	5	3
ಖಾಸ್ ಶಿಲ್ಕು ರೂಪಾಯಿ	170	0	6
ಒಟ್ಟು ಜುಮಲಾ ರೂಪಾಯಿ	727	5	9

N. B. — ಪರಿಷತ್ತಿನ ಬಾಬ್ತು ಇನ್ನು ರೂಪಾಯಿ 39 15 ವಸೂಲಿಗೆ ಬಾಕಿ ಇರುತ್ತದೆ. ಈ ಲೆಕ್ಕಪತ್ರವನ್ನು ತಾ. 4.2.39ರಲ್ಲಿ ಜರಗಿದ ಸ್ವಾಗತ ಸಮಿತಿಯ ಕಾರ್ಯಕಾರಿ ಮಂಡಳಿಯ ಕೊನೆಯ ಮೀಟಿಂಗಿನಲ್ಲಿ ಸಂಪೂರ್ಣವಾಗಿ ಪರಿಶೋಧಿಸಲ್ಪಟ್ಟು ತಾ.5.2.39ರಲ್ಲಿ ಜರಗಿದ ಕಟಪಾಡಿ ಕೇಂದ್ರ ಕಾಂಗ್ರೆಸ್ ಕಮಿಟಿಯ ವಾರ್ಷಿಕ ಮಹಾಸಭೆಯಲ್ಲಿ ಮಂಜೂರು ಮಾಡಲ್ಪಟ್ಟಿದೆ.

ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್
ಅಧ್ಯಕ್ಷ

ಕುದುಕಾಲು ಗಣಪಯ್ಯ ಶೆಟ್ಟಿ } ಕಾರ್ಯ
ಕಟಪಾಡಿ ವಾಸುದೇವ ಕಿಣಿ } ದರ್ಶಿಗಳು

ಉಡುಪಿ ತಾಲೂಕು ರಾಜಕೀಯ
ಪರಿಷತ್ತಿನ ಸ್ವಾಗತ ಸಮಿತಿ
ಕಟಪಾಡಿ

ಕಟಪಾಡಿ—ಶ್ರೀ. ಸತ್ಯಾನಂದ ಸಂಯುಕ್ತ ಯುವಕಸಂಘದ ಸಭೆಯೊಂದು ನ ಕ್ಲರ್ಕ್ ಪುಷ್ಪ ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘಕ್ಕೆ ಅನೇಕ ವಿಧದಲ್ಲಿ ಸಹಾಯ ಮಾಡಿದ ಮಾನ್ಯ ಡಾಕ್ಟರರಿಗೆ ಅವರ ವಿವಾಹದ ಸಂಬಂಧ ಅಭಿನಂದನಾ ಪತ್ರವನ್ನು ಒಪ್ಪಿಸುವುದೇ ಸಭೆಯ ಉದ್ದೇಶವಾಗಿತ್ತು.

ಅಯ್ಯನ ಕಟ್ಟೆ—ತಾ. 5-2-1939ರಲ್ಲಿ ಬೆಳ್ಳಾರೆ, ಬಾಳಿಲ, ಪೆರುವಾಜೆ ಕಾಂಗ್ರೆಸು ಕಮಿಟಿಗಳ ಪ್ರಾಥಮಿಕ ಸದಸ್ಯರ ಮಹಾಸಭೆಯು ಶ್ರೀ. ಬಿ. ನಾರಾಯಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. 250ಕ್ಕೆ ಮಿಕ್ಕಿ ಸದಸ್ಯರು ಹಾಜರಿದ್ದರು. ಪುತ್ತೂರು ವಿಭಾಗದ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಚುನಾವಣೆಯು ತೀರಾ ಅಪಮಾರ್ಗಕವಿರುವುದರಿಂದ ಸದ್ರಿ ಚುನಾವಣೆಯಲ್ಲಿ ಶ್ರೀ. ಕೆ. ಆರ್. ಕಾರಂತರಿಗೆ ಭಾಗವಹಿಸಲು ಪುನಃ ಚುನಾವಣೆ ಮಾಡುವ ಬಗ್ಗೆ ಪ್ರಾಂತಿಕ ಕಮಿಟಿಗೆ ಬರೆಕೊಳ್ಳುವುದಾಗಿ ನಿರ್ಣಯಿಸಲ್ಪಟ್ಟಿತು.

ಬೆಳ್ಳಾರೆ, ಬಾಳಿಲ ಒಳಗೊಂಡಿರುವ ಮತದಾರರ ಕ್ಷೇತ್ರಗಳಲ್ಲೇ ಇರತಕ್ಕ ಉಮೇದ್ವಾರರ ನಾಮಪತ್ರಗಳನ್ನು ತಳ್ಳಿ ಹಾಕಿ ಹೊರಗಿನ ವ್ಯಕ್ತಿಗಳಿಗೆ ಅವಿರೋಧ ಆಯ್ಕೆಗೆ ಅವಕಾಶಕೊಟ್ಟುದಕ್ಕೆ ನಿಷೇಧ ಸೂಚಿಸಲಾಯಿತು. ಆರಿಸಲ್ಪಟ್ಟವರು ತಮ್ಮ ಸದಸ್ಯ ಸ್ಥಾನಗಳಿಗೆ ಕೂಡಲೇ ರಾಜಿನಾಮೆ ಕೊಡುವ ಹಾಗೆ ಅಗ್ರ್ಯದಪೂರ್ವಕವಾಗಿ ಕೇಳಿಕೊಳ್ಳುವುದೆಂದು ನಿರ್ಣಯಿಸಲ್ಪಟ್ಟಿತು.

ಮೋರವಾಜಲು - ಇಂಡಿಯ ಸೈಂಟ್ ಜೋಸೆಫ್ಸ್ ಹಯರ್ ಎಲಿಮೆಂಟರಿ ಶಾಲೆ ಮತ್ತು ಇದರ ಶಾಖೆಗಳಾದ ಸೇವಾಗನೈಂಟ ಲಿಗೋರಿಸ್ ಶಾಲೆ ಬೋಂದೇಲ ಸೈಂಟ್ ಥೋಮಸ್ ಶಾಲೆಗಳ ವರ್ಧಂತ್ಯುತ್ಸವವು ಇದೇ ತಾ. 5-2-39ನೇ ಆದಿತ್ಯವಾರ ಮೋರವ ಜಳಿನಲ್ಲಿ ಸೈಂಟ್ ಎಲೋಸಿಯಸ್ ಕೋಲೇಜಿನ ರೆಕ್ಟರರಾದ ವೆರಿ ರೆವರೆಂಡ್ ಫಾದರ್ ಬಿ. ಡಿ. ಸೋಜರ ಅಧ್ಯಕ್ಷತೆಯಲ್ಲಿ ಸುಮಾರು ನಾಲ್ಕುಸಾವಿರ ಮಂದಿಯ ಕೂಡುವಿಕೆಯಿಂದ ಬಹಳ ವಿಜೃಂಭಣೆಯಿಂದ ಜರಗಿತು. ಪೂರ್ವಾಹ್ನ 8 ಘಂಟೆಯಿಂದ ಸಂಜೆ 5 ಗಂಟೆವರೆಗೆ ತೆರೆಯಲ್ಪಟ್ಟಿದ್ದ ವಿದ್ಯಾರ್ಥಿಗಳ ಕೈಗಾರಿಕಾ ಪ್ರದರ್ಶನವು ಚಿತ್ತಾಕರ್ಷಕವಾಗಿತ್ತು. ಸಾಯಂ ಘಂಟೆ 5-30ಕ್ಕೆ ಸರಿಯಾಗಿ ಅಧ್ಯಕ್ಷರ ಆಗಮನವಾಗಿ ವಿದ್ಯಾರ್ಥಿನಿಯರ ಸ್ವಾಗತಗೀತೆಯ ನಂತರ ಪಿ. ಸಿ. ಎಲ್. ಲೋಬೋ ಬಿ. ಎ. ಬಿ. ಎಲ್. ಇವರು ಕೊಟ್ಟಂತಹ ಈ ಶಾಲೆಯ ಸ್ಥಾಪಕರಾದ ದಿವಂಗತ ರೆ. ಫಾ. ... ಎ. ಎಮ್. ಎಲ್. ವಾಸರ ತೈಲಚಿತ್ರ ಅನಾವರಣ ಸಮಾರಂಭವು ಜರಗಿತು. ತರುವಾಯ ಅಧ್ಯಕ್ಷರಿಂದ ಇನಾಮುಗಳು ಹಂಚಲ್ಪಟ್ಟು, ವಿದ್ಯಾರ್ಥಿಗಳು ಇಂಗ್ಲಿಷ್, ಕನ್ನಡ, ತುಳು, ಕೊಂಕಣಿ ಮೊದಲಾದ ಸ

ಬೊಂಬಾಯಿ ಸಮಾಚಾರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮುಂಬಯಿ ನಗರ ಸಭಾ ಚುನಾವಣೆಯು ಏಳನೆಯ ತಾರೀಕು ವ ಂಗಳವಾರ ಶಾಂತವಾಗಿ ಜರಗಿತು. ಪ್ರತಿಯೊಂದು "ಬೂತ"ಗಳಲ್ಲಿ ಸರಿಯಾದ ಸಲಕರಣೆಗಳನ್ನು ಮಾಡಿದ್ದರಿಂದ ಯಾವೊಂದು ವಿಶೇಷತೆಯೂ ನಡೆಯಲಿಲ್ಲ. ಬೇಕಿದ್ದ ಮತ ಹಾಕಿರುವುದು ಹೋದುದಕ್ಕಾಗಿ ಸಾಧಾರಣ ನೂರು ಮಂದಿ ಓಡಿಸಲ್ಪಟ್ಟಿದ್ದರು. ಕಾಂಗ್ರೆಸಿನ 73 ಪ್ರತಿನಿಧಿಗಳಲ್ಲಿ 54ಮಂದಿ ವಿಜಯ ಹೊಂದಿದ್ದರಿಂದ, ಬಹುಮತವು ಕಾಂಗ್ರೆಸಿನ ಕಡೆಗಾಯಿತು. ಸುಮ್ಯವಾದಿಗಳು ತಮ್ಮ ಸ್ಥಳಗಳಲ್ಲಿ ಪ್ರಥಮ ಸ್ಥಾನಗಳನ್ನು ಪಡೆದುದು ಮಾತ್ರವಲ್ಲದೆ ಇವರನ್ನು ಓಟನ್ನು ಬೇರೆ ಯಾರೂ ಪಡೆಯಲಿಲ್ಲ. ಶ್ರೀ. ನಿಂಬಕರ್‌ರವರಿಗೆ (10901) ಮತ್ತು ಜೋಗ್ಲೇಕರರವರಿಗೆ 9703 ಮಿರಾಜ್‌ಕರ 4863, ನರಿಮನರವರಿಗೆ 4141. ಮುಸ್ಲಿಂ ಲೀಗಿನವರ 17ರಲ್ಲಿ 13 ವಿಜಯ ಹೊಂದಿದ್ದರು. ಇಂಡಿಪೆಂಡೆಂಟ್ ಲೇಬರ್ ಪಾರ್ಟಿ 8ರಲ್ಲಿ 5. ಹಿಂದೂ ಇಲೆಕ್ಷನ ಬೋರ್ಡ 7ರಲ್ಲಿ 4. ಎಡಪಕ್ಷ ಲೇಬರ್ ಪಾರ್ಟಿ 3ರಲ್ಲಿ 3 ಫ್ಲೂವರ್ ಲೀಗ್ ಪಾರ್ಟಿ 3ರಲ್ಲಿ 0. ಇಂಡಿಪೆಂಡೆಂಟ್ಸ್ 39ರಲ್ಲಿ 27. ಹೀಗೆ ಕಾಂಗ್ರೆಸ್ ನಗರ ಸಭೆಯನ್ನು ಜಯಿಸಿಯಾಯಿತು. ಇನ್ನು ಜನತೆಗೆ ಏನೆಲ್ಲ ಉಪಕಾರ ಮಾಡಲಿದೆಯೆಂಬುದನ್ನು ನೋಡಬೇಕಾಗಿದೆ.

ಟನೆ ನಾಟಕಗಳಿಂದ ಬೇಟೆಯು, ಕೋಲಾಟ, ಡ್ರಿಲ ಹಾಡುಗಳು ಇತ್ಯಾದಿ ವಿನೋದಗಳಿಂದಲೂ, ನೆರೆದ ಪ್ರೇಕ್ಷಕರ ಮನಸ್ಸನ್ನು ಸಂತೋಷಗೊಳಿಸಿದರು. ವಿದ್ಯಾರ್ಥಿನಿಯರ ಹಸ್ಸೆಸಿಗಳ ಭಾಷಣ, ಅಧ್ಯಕ್ಷರ ಭಾಷಣ ಅಲ್ಲದೆ ಕೃತಜ್ಞತಾ ವಂದನೆಗಳೊಂದಿಗೆ ಉತ್ಸವವು ಕೊನೆಗೊಂಡಿತು.

ಬೆಳ್ಳಾರೆ—ತಾ. 8-2-39ನೇ ದಿನ ಇಲ್ಲಿಯ ಪಂಜಿಗಾರು ಎಂಬಲ್ಲಿ ಒಬ್ಬಳು ಹೆಂಗಸು ಎರಡು ಗಂಡು ಮಕ್ಕಳನ್ನು ಹೆತ್ತಿರುವಳು. ಇದೇ ಹೆಂಗಸು ಹಿಂದೆ ವರ್ಷಗಳ ಮೊದಲು ಹೀಗೆಯೇ ಅವಳಿ ಮಕ್ಕಳನ್ನು ಹೆತ್ತಿದ್ದಳು. ಎಲ್ಲಾ ಮಕ್ಕಳೂ ಸೌಖ್ಯದಿಂದಿವೆ. ಇಲ್ಲಿಯೇ ಸಮೀಪ ಕೆಲವು ಸಮಯದ ಮೊದಲು ಒಬ್ಬ ಎಮ್ಮೆಯು ಒಂದು ಗಂಡು ಮತ್ತು ಒಂದು ಹೆಣ್ಣು ಹೀಗೆ ಎರಡು ಕರುಗಳನ್ನು ಹಾಕಿದ್ದಿತು. ಈಗಲೂ ಇವೆ.

ತಾ. 22-1-39ರಲ್ಲಿ ಶ್ರೀ. ಮುಂಡಾಲಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಪುತ್ತೂರು ತಾಲೂಕಿನ ಗ್ರಾಮ ಉದ್ಯೋಗಸ್ಥರ ಸಭೆ ಸೇರಿ ಸಂಘ ಸ್ಥಾಪನೆ ಉಪನಿಬಂಧನೆಗಳನ್ನು ತಯಾರಿಸಿದ ದು, ಕಾರ್ಯಕಾರೀ ಮಂಡಳಿಯ ಚುನಾವಣೆ ಮೊದಲಾದ ಕಾರ್ಯಕ್ರಮಗಳು ಜರಗಿದುವಲ್ಲದೆ ಸದ್ರಿ ಸಭೆಯಲ್ಲಿ ಈ ವರ್ಷ ಕೋವಿ ಲೈಸನ್ಸುದಾರರಿಗೆ ಸಪ್ಲಯಿ ಮಾಡಿದ ಲೈಸನ್ಸುಗಳನ್ನು ತಕ್ಕ ಸಮಯದಲ್ಲಿ ಗನ್ನ್ಯಾಪಲ್ ಮಾಡಿ ಕಳುಹಿಸದುದರಿಂದ ಉಂಟಾದ ತೊಂದರೆಗಳ ಕುರಿತಾಗಿ ಮಾನ್ಯ ಜಿಲ್ಲಾ ಕಲೆಕ್ಟರವರಿಗೆ ಬರೆಕೊಳ್ಳುವುದೆಂದು ಠರಾಯಿಸಿತು.

ಮದ್ರಾಸಿನ ವಿದ್ಯಾಖಾತೆಯ ಮಂತ್ರಿಗಳಾದ ಶ್ರೀ. ಸಿ. ಜೆ. ವಾರ್ಕಿಯವರು ಮೊನ್ನೆ ರವಿವಾರ ಮುಂಬಯಿಯಲ್ಲಿ ಬಂದಿಳಿದವರು ಹಲವು ಕಡೆಗಳಲ್ಲಿ ಭಾಷಣಗೈದಿತ್ತು, ಮುಂಬಯಿಯ ಮಂತ್ರಿಗಳನ್ನೆಲ್ಲ ಸಂದರ್ಶಿಸಿ, ಮಂಗಳವಾರ ರಾತ್ರಿ ಮದ್ರಾಸಿಗೆ ಹಿಂದಿರುಗಿದರು.

ಟೆಕ್ಸ್‌ಟೈಲ್ ಲೇಬರ್ ಎನ್‌ಕ್ವೆರಿ ಕಮಿಟಿಯು - ಕಾಂಡಿವ್, ಬೀರಾರ್ ಮತ್ತು ಬರ ಹಾಂಪುರ ಮಿಲ್ಲಧಿಕಾರಿಗಳ ಎಸೋಸಿಯೇಶನಿನ ಪ್ರತಿನಿಧಿಗಳನ್ನು ಬುಧವಾರ ದಿವಸ ಪರೀಕ್ಷಿಸಿತು. 'ಒಬ್ಬ ಕಾಮಗಾರನ ಜೀವನದ ಖರ್ಚಿನ ಪ್ರಕಾರ ಅವನ ಸಂಬಳವನ್ನು ನಿಶ್ಚೈಸುವದೊಂಬದಕ್ಕೆ ನಾವು ವಿರೋಧಿಸುತ್ತೇವೆ. ಯಾಕೆಂದರೆ ಒಬ್ಬೊಬ್ಬನ ಜೀವನ ಕ್ರಮವು ಒಂದೊಂದು ತರವಾಗಿದೆ. ಒಬ್ಬನಿಗೆ ಅತಿ ಕಡಿಮೆ ಜೀವನ ಖರ್ಚು ಎಷ್ಟು ಬೇಕಾಗುತ್ತದೆಂಬುದನ್ನು ಕಂಡುಹಿಡಿಯುವುದೂ ಅಸಾಧ್ಯ.' ಪ್ರತಿನಿಧಿಗಳು ಹೇಳಿದ ಮಾತುಗಳಿವು.

ಪ್ರತಿವರ್ಷ ಜಪ್ತಿ ಗಳಾದ, ಮಾ, ರಾ. ಕಸದ್ಯಾ ಮಾಡಿಯಾ ಮತ್ತು ಮಮೋ ಇತರ ಮನೆಗಳು ಸಂಲಿಗೆ ಮಾಡಲ್ಪಟ್ಟು 3000 ರೂಪಾಯಿ ಬೆಲೆ ಬಾಳುವ ವಸ್ತುಗಳು ಕಳವು ಮಾಡಲ್ಪಟ್ಟಿವೆ. ಇವಾ ಹಿಂ ಎಂಬವನನ್ನು ಹಿಡಿದಿದ್ದಾರೆ. ಕದಿಯಲ್ಪಟ್ಟ ಕೆಲವು ಸಾಮಾನುಗಳು ದೊರೆತಿವೆಯೆಂದು ತಿಳಿದುಬರುತ್ತದೆ.

ಮುಂಬಯಿ ಎಸೆಂಬ್ಲಿಯು ಪ್ರಾರಂಭವಾಗಿ ರೆವೆನ್ಯೂ ಮಂತ್ರಿಗಳಾದ ಆನರೇಬಲ್ ಮೊರಾರ್ಜಿ ದೇಸಾಯಿಯವರಿಂದ ತಯಾರಿಸಲ್ಪಟ್ಟ 'ಟೆನೆನ್ಸಿ ಬಿಲ್ಲಿ'ನ ಕುರಿತ ಚರ್ಚೆ ನಡೆಯುತ್ತಿದೆ. ಇದರಿಂದ ಬಡವರಿಗೆ ಉಪಕಾರವಾಗಲಿದೆಯೆಂದು ಕಾಂಗ್ರೆಸ್ ಸರಕಾರದ ಭಾವನೆ. ಇದನ್ನು ಅನುಭವಿಸಿ ನೋಡಬೇಕು ಬಡವರೇ.

ದಿ ಕೆನರಾ ಬಿಲ್ಲವ ಅನಾಥ ಸಂಘ ಮುಂಬಯಿ—ಈ ಸ್ತ್ರೀಯರ ಸಂಘದ ದ್ವಿತೀಯ ವಾರ್ಷಿಕ ಮಹಾಸಭೆಯು ತಾ. 29-1-39ರಲ್ಲಿ ಮೊಗವೀರ ಧರ್ಮಾರ್ಥ ರಾತ್ರಿಶಾಲೆಯ ಸದಾವದಲ್ಲಿ ಶ್ರೀ. ಎಮ್. ಸಿ ರಾಮಣ್ಣಯ್ಯ ಬಿ ಎ. ಎಲ್. ಎಲ್. ಬಿ. ಅಡ್ವೋಕೇಟ ಪಾಯ್‌ಕೋರ್ಟು, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸದಸ್ಯರ ಅನುಮತಿ ಮೇರೆಗೆ ಸಂಘದ ಕಾರ್ಯದರ್ಶಿಯವರು ಗತವರ್ಷದ ಲೆಕ್ಕಪತ್ರವನ್ನೊಳಗೊಂಡಿರುವ ವರದಿಯನ್ನು ಮಂಜೂರು ಮಾಡಲಾಯಿತು. 1939ನೇ ಇಸವಿಯ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನು ಚುನಾಯಿಸಲಾಗಿದೆ. ಅಧ್ಯಕ್ಷರು ಸಂಘದ ಮುಂದೇಳಿಗೆಯನ್ನು ಕುರಿತು ಭಾಷಣಮಾಡಿದಲ್ಲದೆ ಈ ಸಂಘದ ಉದ್ದೇಶವು ಜಯಪೂರ್ಣವಾಗಲೆಂದು ಆಶೀರ್ವದಿಸಿದರು. ಕೊನೆಗೆ ಲಘುಫಲಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

Established] [1906

THE
UNITED INDIA
LIFE ASSURANCE COMPANY, LTD.
HEAD OFFICE—MADRAS.
Trustee:—THE OFFICIAL TRUSTEE OF MADRAS.

Policies in force	Rs	455 Lakhs
Annual income Exceeds	Rs.	28 Lakhs
Total Assets Exceed	Rs.	100 Lakhs
Total claims paid over	Rs.	36 Lakhs.

The oldest and largest Life Assurance Company of South India, having 31 years of record service.

A POLICY IN THE UNITED INDIA COMBINES PERFECT SAFETY WITH PRUDENCE.

BRANCHES ALL OVER INDIA.

WANTED AGENTS

For particulars, please apply to-

THE BRANCH MANAGER,
The United India,
Life Assurance Company Ltd.
BLOCK No. 2, Felix Pai Bazaar,
BRANCH, MANGALORE S. K.

OR

K Keshava Shenoy
M. A.
Organiser, Shantiniketan
PENTLENDPET,
MANGALORE

ನವಯುಗದ ಮಕರಸಂಕ್ರಾಂತಿ ವಿಶೇಷ ಸಂಚಿಕೆಯ ಕುರಿತು ಅಖಿಲಕರ್ನಾಟಕದ ಅಭಿಪ್ರಾಯಗಳಲ್ಲಿ ಕೆಲವನ್ನಿಲ್ಲಿ ಕೊಡಲಾಗಿದೆ. ಸಂ. ನ.

• ಅನ್ಯರ ದೃಷ್ಟಿಯಲ್ಲಿ •

೭

ನವಯುಗ ಮಕರಸಂಕ್ರಾಂತಿ ಸಂಚಿಕೆ:—ಶ್ರೀಮದುಡುಪಿ ಮಕರ ಸಂಕ್ರಮಣ ಮಹೋತ್ಸವ ಸಂದರ್ಭದಲ್ಲಿ 'ನವಯುಗ'ದ ಜನವರಿ ತಾ. ೧೨ರ ಸಂಚಿಕೆಯು ಮಕರಸಂಕ್ರಾಂತಿ ವಿಶೇಷ ಸಂಚಿಕೆಯಾಗಿ ಪ್ರಕಟವಾಗಿದೆ. ೧೫೬ ಪುಟಗಳಿಂದ ಕೂಡಿದೆ; ಬೆಲೆ ಆ. ೪ ಮಾತ್ರ. ಅನೇಕ ಚಿತ್ರಗಳೂ ಇದ್ದು ಸುಂದರವಾಗಿ ಕಾಣುತ್ತಿದೆ. ಸಾಮಾಜಿಕ, ರಾಜಕೀಯ, ಸಾಹಿತ್ಯ ವಿಷಯಗಳನ್ನೊಳಗೊಂಡ ಅನೇಕ ಲೇಖನಗಳು ಕನ್ನಡನಾಡಿನ ಪ್ರಸಿದ್ಧ ಲೇಖಕ, ಲೇಖಕಿಯರಿಂದ ಬರೆಯಲ್ಪಟ್ಟಿವೆ. ಲೇಖನ ವೈವಿಧ್ಯತೆಯ ಕಡೆಗೆ ಹೆಚ್ಚಿನ ಗಮನ ಕೊಟ್ಟಿದ್ದಾರೆ. ಶ್ರೀ. ಬೆನಗಲ್ ರಾಮರಾಯರು ತಮ್ಮ ಲೇಖನದಲ್ಲಿ ಕರ್ನಾಟಕ ಏಕೀಕರಣಕ್ಕೆ ಏನೆಲ್ಲ ತೊಡಕುಗಳಿವೆ? ಅವುಗಳನ್ನು ಹೇಗೆ ಪರಿಹರಿಸಬಹುದು ಎಂಬುದಕ್ಕೆ ಸೂಕ್ತವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಕನ್ನಡ ಜನಾಂಗದ ಸರ್ವನಾಶಕ್ಕೆ ಅದರ ವಿಭಜನೆಯೇ ಕಾರಣ; ಅದರ ಏಳಿಗೆಯಾಗಬೇಕಾದರೆ ಕನ್ನಡನಾಡು ಒಂದಾಗಬೇಕು, ಎಂಬುದನ್ನು ಶ್ರೀ| ಮುದವೀಡು ಕೃಷ್ಣರಾಯರು ಸಮರ್ಥಿಸಿದ್ದಾರೆ. ಇನ್ನೊಂದು, ಉತ್ತಮ ರೀತಿಯಲ್ಲಿ ವಿಶೇಷ ಸಂಚಿಕೆಯನ್ನು ರೂಪಿಗೆ ತಂದ ಪತ್ರಿಕಾ ಕರ್ತರು ಅಭಿನಂದನೀಯರು. ಅವರ ಪ್ರಯತ್ನಕ್ಕೆ ಜಯವಾಗಲಿ!

—'ರಾಷ್ಟ್ರಬಂಧು' ಮಂಗಳೂರು

೮

ನವಯುಗದ ವಿಶೇಷಾಂಕವು ಈ ಸಲ ಒಳ್ಳೆಯ ರೀತಿಯಲ್ಲಿ ಪ್ರಕಟವಾಗಿದೆ. ಕನ್ನಡದಲ್ಲಿ ಹೆಸರಾದ ಬರಹಗಾರರ ಲೇಖನಗಳೂ ಚಿತ್ರಗಳೂ ಸಂಗ್ರಹಿಸಲ್ಪಟ್ಟಿರುವುವು, ಕರ್ನಾಟಕ ಏಕೀಕರಣ ಸಮಸ್ಯೆಗೆ ಸಂಬಂಧಿಸಿದ ಎರಡು ಮೂರು ಉದ್ಬೋಧಕವಾದ ಲೇಖನಗಳು ಅವಶ್ಯವಾಗಿ ಗಮನೀಯವಾಗಿವೆ. ಸ್ತ್ರೀ ಸಮಾಜಕ್ಕೆ ಸಂಬಂಧಿಸಿದವುಗಳಾಗಿ ಒಂದೆರಡು ಒಳ್ಳೆಯ ಬರಹಗಳೂ ಇವೆ. ನಗೆಬರಹಗಳಿಗೂ ಈ ಸಂಚಿಕೆಯಲ್ಲಿ ತಕ್ಕಷ್ಟು ಸ್ಥಾನ ದೊರೆತಿರುವುದು. ರಾಜಕೀಯ ಆರ್ಥಿಕ ವಿಷಯಗಳನ್ನು ಕುರಿತಾಗಿಯೂ ಲೇಖನಗಳನ್ನು ಸಂಗ್ರಹಿಸುವುದಕ್ಕೆ ಸಂಪಾದಕರು ಮರೆಯಲಿಲ್ಲ. ಇತರ ವಿಷಯಕವಾದ ಲೇಖನಗಳೂ ಸಂಗ್ರಹೀತವಾಗಿವೆ. ದಕ್ಷಿಣ ಕನ್ನಡದಲ್ಲಿ ಉತ್ತಮವಾದ ಪತ್ರಗಳ ಅಭಾವವನ್ನು ಇಂಥ ಮಾರ್ಗಕ ಸಂಚಿಕೆಗಳು ಪರಿಹರಿಸುತ್ತಿವೆಯೆಂದು ಧಾರಾಳವಾಗಿ ಎನ್ನಬಹುದು. "ನವಯುಗ" ವಿಶೇಷ ಸಂಚಿಕೆಯು ಸಂಪಾದನೆ ಮುದ್ರಣ ಅಚ್ಚುಕಟ್ಟಿನ ಮಟ್ಟಿಗೆ ಯಾವುದರಲ್ಲಿಯೂ ಹಿಂದಿಲ್ಲ. ಆಗಿಂದಾಗ ಇಂಥ ವಿಶೇಷಾಂಕಗಳು ಪ್ರಕಟಿತವಾಗಿ ದಕ್ಷಿಣ ಕನ್ನಡದ ಪತ್ರಿಕೋದ್ಯಮವು ಕಳೆಗೊಳ್ಳಲೆಂದು ಹಾರೈಸುವೆವು.

—ಪ್ರಭಾತ, ಮಂಗಳೂರು.

೯

ನೂರೈಂಭತ್ತೈದು ಪುಟಗಳಷ್ಟು ದೊಡ್ಡದಾಗಿರುವ ಈ ಸಂಚಿಕೆಯು ಮನೋರಂಜಕವಾಗಿ ಮುದ್ರಿಸಲ್ಪಟ್ಟಿದೆ. ಬಣ್ಣಬಣ್ಣದ ಚಿತ್ರಗಳು, ನಾನಾ ವಿಷಯಕ ಲೇಖನಗಳಿಂದ ವಿವಿಧ ರುಚಿಗಳವರೆಲ್ಲರಿಗೂ ಆನಂದದಾಯಕವಾಗಿದೆ. ಸುಪ್ರಸಿದ್ಧ ಲೇಖಕರಾದ ಡಾ|| ಹರ್ಡೀಕರರ, ಗೋವಿಂದ ಪೈ, ಶ್ರೀ| ಶಿವರಾಮ ಕಾರಂತ, ಶ್ರೀಮತಿ ಆರ್. ಕಲ್ಯಾಣಮ್ಮ ಮುಂತಾದವರ ಉದ್ದಾಮ ಲೇಖನಗಳಿವೆ. ಹೀಗೆ ಚಿತ್ತಾಕರ್ಷಕ ಸಂಚಿಕೆಯನ್ನು ಹೊರಗೆಡಹಿದ್ದಕ್ಕಾಗಿ ಸಂಪಾದಕರು ಅಭಿನಂದನೀಯರು. ಕನ್ನಡಿಗರು ಈ ಸಂಚಿಕೆಗೆ ಪ್ರೋತ್ಸಾಹಕೊಡುವರೆಂದು ನಂಬಿದ್ದೇವೆ.

—ಪ್ರಜಾಮತ, ಹುಬ್ಬಳ್ಳಿ.

೧೦

ನವಯುಗದ ಮಕರ ಸಂಕ್ರಾಂತಿ ಸಂಚಿಕೆಯನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸುತ್ತೇವೆ. ೧೫೫ ಪುಟಗಳಿಂದ ಕೂಡಿದ ಈ ಪತ್ರಿಕೆಯು ನುರಿತ ಲೇಖನಗಳಿಂದಲೂ ತುಂಬಾ ನಕ್ಷೆಗಳಿಂದಲೂ ಕೂಡಿದ್ದಾಗ್ಗಿ, ಓದುಗರಿಗೆ ಉಪಯುಕ್ತವಾಗಿರುವದು. ಬರಹಗಾರರು ಜಿಲ್ಲೆಯ ಮತ್ತು ಹೊರಗಣ ಪ್ರಖ್ಯಾತಿವೆತ್ತವರಾದುದರಿಂದ ಈ ಸಂಚಿಕೆಯ ಆಕರ್ಷಣವು ಇನ್ನೂ ಹೆಚ್ಚಾಗಿದೆ.

—ಸ್ವತಂತ್ರ ಭಾರತ, ಮಂಗಳೂರು.

೧೧

ಮಕರ ಸಂಕ್ರಾಂತಿ ವಿಶೇಷ ಸಂಚಿಕೆ ೧೯೩೯, ಸಂಪಾದಕರು ಶ್ರೀಮಾನ್ ಕೆ. ಕೆ. ಶೆಟ್ಟಿ. ನವಯುಗ ಕಾರ್ಯಾಲಯ, ಉಡುಪಿ. ಕ್ರೌನ್ ೧/೪ ೧೫೫ ಪು. ನವಯುಗವು, ತನ್ನ ಈ ವರೆಗಿನ ವಿಶೇಷ ಸಂಚಿಕೆಗಳೆಲ್ಲವನ್ನೂ ಮೀರಿಸುವಂತಹ ಉತ್ತಮೋತ್ತಮ ಸಂಚಿಕೆಯೊಂದನ್ನು ಈ ವರ್ಷ ಹೊರಡಿಸಿರುವುದಕ್ಕಾಗಿ ಸಂಪಾದಕರನ್ನು ಹೃತ್ಪೂರ್ವಕ ಅಭಿನಂದಿಸುತ್ತೇವೆ. ಕನ್ನಡಿಗರಲ್ಲಿ ಭಾಷಾಭಿಮಾನವನ್ನೂ, ವಾಚನಾಭಿರುಚಿಯನ್ನೂ ಹೆಚ್ಚಿಸುವಲ್ಲಿ ಆಗಾಗ್ಗೆ ಹೊರಡುವ ಈ ಬಗೆಯ ವಿಶೇಷ ಸಂಚಿಕೆಗಳು ಬಹು ಉಪಯುಕ್ತವೆನ್ನಿಸಿವೆ. ಪ್ರಕೃತ ಸಂಚಿಕೆಯು, ಮನೋಹರವೂ, ವಾಚನೀಯವೂ ಆದ ಹಲವು ಉಪಯುಕ್ತ ಲೇಖನ, ಕಥೆ, ಕವಿತೆಗಳಿಂದ ಶೋಭಿಸುತ್ತದೆ. 'ನವಯುಗ' ಪತ್ರಿಕೋದ್ಯಮದಲ್ಲಿ ತೊಡಗಿ ಶ್ರಮಿಸುತ್ತಿರುವ ಈ ಭಾಷಾಭಿಮಾನಿಗಳಿಗೆ ಉತ್ತರೋತ್ತರ ವಿಶೇಷ ಪ್ರೋತ್ಸಾಹ ದೊರೆತು, ಇನ್ನೂ ಘನವಾದ ಸಂಚಿಕೆಗಳನ್ನು ಪ್ರಕಟಿಸುವಂತಹ ಸುಯೋಗವೊದಗಲೆಂದು ಹಾರೈಸುತ್ತೇವೆ.

—ಸುಬೋಧ, ಬೆಂಗಳೂರು.

೧೨

ಕನ್ನಡ ನಾಡಿನ ಪತ್ರಿಕೋದ್ಯಮದಲ್ಲಿ ನಾವೊಂದು ಶುಭವನ್ನು ಹಲವು ವರ್ಷಗಳಿಂದ ಕಾಣುತ್ತಿದ್ದೇವೆ. ಸಮಯವರಿತು, ಆಯಾ ಪತ್ರಿಕೆಗಳವರು, ಜನರ ತಿಳಿವಿಗಾಗಿ ಉಪಯುಕ್ತ ಲೇಖನಗಳಿಂದೊಡಗೂಡಿದ ವಿಶೇಷ ಸಂಚಿಕೆಗಳನ್ನು ಹೊರಡಿಸುವುದೇ ಆ ಶುಭವೆಂದರೆ ತಪ್ಪಾಗಲಾರದು. ಮಕರ ಸಂಕ್ರಮಣ ಪುಣ್ಯಕಾಲದಲ್ಲಿ ಉಡುಪಿಯಲ್ಲಿ ನೆರೆಯಲಿರುವ ಜಾತ್ರೆಯನ್ನರಿತು ಆ ಸಂದರ್ಭವನ್ನು ಜನರು ಸರಿಯಾಗಿ ಉಪಯೋಗಿಸಲೆಂದು ಈ ವಿಶೇಷ ಸಂಚಿಕೆಯನ್ನು 'ನವಯುಗ' ವಾರಪತ್ರಿಕೆಯವರು ಹೊರಡಿಸಿ ಯಾತ್ರಾರ್ಥಿಗಳಿಗೆ ಉಪಕಾರಮಾಡಿದ್ದಾರೆ. 'ನವಯುಗ'ವು ಉದಯಿಸಿ ಹದಿನೆಂಟು ವರ್ಷಗಳಾಗಿವೆ. ಇಷ್ಟು ದೀರ್ಘ ವರ್ಷಗಳಿಂದ ನಡೆದುಬರುತ್ತಿರುವ ಪತ್ರಿಕೆಯು ವಿಶೇಷ ಸಂಚಿಕೆಯೊಂದನ್ನು ಯಶಸ್ವಿಯಾಗಿ ಹೊರಡಿಸುವುದೊಂದು ಹೆಚ್ಚೇ, ಈ ವಿಶೇಷ ಸಂಚಿಕೆಯು ತನ್ನ ಉದ್ದೇಶದಲ್ಲಿ ವಿಜಯವನ್ನು ಪಡೆದಿದೆ.

ನವಯುಗದ ವಿಶೇಷ ಸಂಚಿಕೆಯಲ್ಲಿ ಎಲ್ಲಾ ಪಂಗಡದ ಲೇಖಕರಿಗೂ ಪ್ರಾತಿನಿಧ್ಯ ದೊರೆತಿರುವುದು ಸಂತೋಷದ ವಿಷಯ. ಸ್ಥಳ ಮಹಾತ್ಮೆ, ಸಾಮಾಜಿಕ ಸುಧಾರಣೆ, ರಾಜಕೀಯ, ವಾಣಿಜ್ಯ ಎಲ್ಲದರ ಮೇಲೆಯೂ ನುರಿತವರೇ ಬರೆದ ಉತ್ತಮ ಲೇಖನಗಳನ್ನು ನಾವು ಕಾಣಬಹುದು. ಹೆಣ್ಣು ಮಕ್ಕಳೂ ಲೇಖನಗಳನ್ನು ಬರೆದಿದ್ದಾರೆ. ಸಾಮಾಜಿಕ ಮತ್ತು ರಾಜಕೀಯವನ್ನು ಕುರಿತು ಬರೆದ ಲೇಖನಗಳು ಬಹಳ ಉಪಯುಕ್ತವಾದುವುಗಳೆಂದು ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ ಈ ವಿಶೇಷ ಸಂಚಿಕೆಯು ಪುಸ್ತಕ ಭಂಡಾರಗಳಲ್ಲಿ ಸಂಗ್ರಹಿಸಬೇಕಾದುದು, ಸಂಚಿಕೆಯು ಸಚಿತ್ರವಾದುದು. ಬಿ ಶ್ರೀ. ವಾ

—'ಸರಸ್ವತಿ'

೧೩

ನವಯುಗದ ಮಕರಸಂಕ್ರಮಣ ವಿಶೇಷ ಸಂಚಿಕೆಯು—ಈ ಸಂಚಿಕೆಯು ನಮ್ಮ ಕೈಸೇರಿ, ಸುಮಾರು ಒಂದು ತಿಂಗಳು ಆಗುತ್ತ ಬಂದಿತು. ಈ ಸಂಚಿಕೆಯನ್ನು ಓದಲುಹತ್ತಿದ ವೇಳೆ ಮುಗಿಯುವವರೆವಿಗೂ, ಬಿಡಲು ಸಾಧ್ಯವಾಗಲಿಲ್ಲ. ಅಂದಮೇಲೆ ಇದರ ವೈಶಿಷ್ಟ್ಯತೆಯು ಓದುಗರಿಗೆ ಒಡೆದು ಕಾಣಿಸದೆ ಇರಲಾರದು. ಈ ಸಂಚಿಕೆಯು ಸುಸಂಸ್ಕೃತಿಯನ್ನು ಪಡೆದ ಪದವೀಧರ ಮತ್ತು ಪಂಡಿತ ಬರಹಗಾರರ ವಿಚಾರ ಪರಿಪ್ಲುತ ಲೇಖನಗಳಿಂದಲೂ, ನವೀನ ತತ್ವತಳ್ಳ ರಸಭರಿತ ಕಾದಂಬರಿಗಳಿಗಿಂತಲೂ ಉತ್ತಮ ಕವಿತಾ ಪ್ರಬಂಧಗಳಿಂದಲೂ, ಚಾರಿತ್ರಿಕ ವಿಜ್ಞಾನಶಾಸ್ತ್ರ ಸಮನ್ವಿತ ವಿ... ಪೂರ್ಣ ವಿಷಯಗಳಿಂದಲೂ ತುಂಬಿ ತುಳುಕ... ಓದುಗರಿಗೆ ಪ್ರಸಾದದ ಕೈಪಿಡಿಯಂತೆ, ಒಪ್ಪ... ದಿರುವದು. ಸಂಪಾದಕರು ಆಯ್ದು ಪ್ರಕಟಿ... ವ ಲೇಖನಗಳು, ಆದರಣೀಯವಾಗಿವೆ. ಈ ಲೇ... ಗಳಲ್ಲಿ ಶಿವಶರಣರ ನಾಡಸೇವೆ, (ಶ್ರೀ ವಿರೇಶ್ವರ) ವರ ಪುಣ್ಯ, (ಶ್ರೀ ಪಿ. ವಿ. ಉಪಾಧ್ಯಾಯ ಬಿ. ಎಲ್. ಎಲ್. ಬಿ) ನನ್ನದೊಂದು ಹೃದಯಕರ (ಶ್ರೀ ಸ. ಪ. ಗಾಂವಕರ ಬಿ. ಎ.) ಹಳ್ಳಿ ಹೇಗಿ... (ಶ್ರೀ ಎಂ. ವಿ. ಹೆಗ್ಡೆ) ಸ್ತ್ರೀಯೂ ಅವಳ ಕರ್ತವ್ಯವೂ, (ಶ್ರೀ. ಸರಸ್ವತಿಬಾಯಿ ರಾಜವಾಡೆ) ಈ ಲೇಖನಗಳು ಸ್ಫೂರ್ತಿದಾಯಕವಾಗಿದ್ದು ಲೇಖಕರ ಹೃದಯಾಂತರಂಗದ ನಿರ್ಮಲಭಾವವನ್ನು ಅವರ ತತ್ತ್ವ... ಬಗ್ಗೆ ಕಳಕಳಿಯನ್ನು ಸೂಚಿಸುವವು. ಸಂಚಿಕೆಯು ಆಕಾರವಾದರೂ ಸರ್ವಾಂಗ ಸುಂದರವಾ... ಕೆಲ ಚಿತ್ರಗಳು ಆರ್ಟ್ ಪೇಪರುಗಳಲ್ಲಿ ಸ... ಮಾಡಲ್ಪಟ್ಟಿವೆ. ಈ ಸಂಚಿಕೆಯ ಪುಟಗಳು 2... ಮೇಲ್ಪಟ್ಟು ಇದ್ದು ಕ್ರಯ ನಾಲ್ಕಾಣೆ ಮಾತ್ರ... ರವನ್ನು ನೋಡಿದರೆ "ನವಯುಗ" ಸಂಪಾದ... ಇದನ್ನು ಕನ್ನಡ ನಾಡಿನ ಸೇವೆಗಾಗಿ ಹೊರಡಿಸಿರು... ದಾಗಿ ತೋರುತ್ತದೆ. ... ಶುಭದೃಷ್ಟಿಗಳಲ್ಲವು ... ರ ಸ್ತುತ್ಯಕಾರ್ಯಕ್ಕೆ ನಾವು ಅಭಿನಂದಿಸದೆ ಇರ... ರೆವು.

—ನವಸಂದೇಶ (ಬಳ್ಳಾ...

೧ ರೂಪಾಯಿಗೆ ೨೪ ಆಣೆ!

ಒಂದೇ ಒಂದು ತಿಂಗಳು ಮಾತ್ರ.

೧ ರಾಜಾ ಶರದೌಲ ೨ ವೇದಾಂತ ೩ ಹಿಂದೂ ಮುಸಲ್ಮಾನ ೪ ಪೋಸ್ಟಮಾಸ್ಟರ್ ೫ ವಿಚಿತ್ರ ನ್ಯಾಯ ೬ ಆದರ್ಶನೊಬ್ಬನೆ ೭ ಸಂಪೂರ್ಣ ರಾಮಾಯಣ ೮ !!! ೯ ಉತ್ಪಾತ ೧೦ ದೇವರ ಮಗು ೧೧ ಹೊಸ ಹೊಸ ೧೨ ಎರಡು ಕತೆಗಳು ೧೩ ಭಯ ನಿವಾರಣೆ ೧೪ ಹೆಂಗಸರ ಕತೆಗಳು ೧೫ ಮಿಸ್ 1964 ೧೬ ಮುದುಕನ ಹೆಂಡ್ತಿ ಥಕಥೈ ರಾಧೆ

ಒಂದೊಂದಾಣೆ ಬೆಲೆಯ ಮೇಲಿನ 16 ಪುಸ್ತಕಗಳನ್ನು ತರಿಸುವವರಿಗೆ 0-8-0 ಬೆಲೆಯ **'ಸನ್ಯಾಸಿಯ ಸೋಗಿನಲ್ಲಿ'** ಎಂಬ ಪುಸ್ತಕವನ್ನು ಮುಫತ್ತಾಗಿ ಕೊಡಲಾಗುವುದು. ಅಂಚೆವೆಚ್ಚವೂ ಮುಫತ್ತು. ಕೂಡಲೇ 16 ಆಣೆಯ ಸ್ಟ್ಯಾಂಪು ಕಳಿಸಿ ೨೪ ಆಣೆಯ ಪುಸ್ತಕ ಪಡೆಯಿರಿ.

೮ ಆಣೆಗೆ ೧೨ ಆಣೆ.

ಮೇಲಿನ ಒಂದೊಂದಾಣೆಯ 16 ಪುಸ್ತಕಗಳ ಪೈಕಿ ಯಾವುದಾದರೂ 8 ನ್ನು ತರಿಸುವವರಿಗೆ 0-!-0 ಬೆಲೆಯ 'ಹೆಂಡ್ತಿ ಗಂಡನಾದರೆ' ಎಂಬ ಪುಸ್ತಕವನ್ನು ಮುಫತ್ತಾಗಿಕೊಡಲಾಗುವುದು.

ಇದಕ್ಕೂ ಅಂಚೆವೆಚ್ಚ ಮುಫತ್ತು. ಕೂಡಲೇ 0-8-0 ಸ್ಟ್ಯಾಂಪು ಕಳಿಸಿ 12 ಆಣೆ ಪುಸ್ತಕ ಪಡೆಯಿರಿ. ಫೆಬ್ರವರಿ ಆಖೈರಿ ಒಳಗೆ ಯಾವುದಾದರೊಂದಕ್ಕೆ ಆರ್ಡರು ಕೊಡುವವರಿಗೆ ಪುಸ್ತಕಗಳೊಂದಿಗೆ 1939ನೇ ಇಸವಿಯ ಸುಂದರವಾದ ಕೆಲೆಂಡರೊಂದನ್ನು ಉಚಿತವಾಗಿ ಕಳಿಸಲಾಗುತ್ತೆ.

ವಿಳಾಸ:—

ನವಭಾರತ ಪುಸ್ತಕಭಂಡಾರ

ಉಡುಪಿ

ನವಯುಗಕ್ಕೆ ಎಲ್ಲಾ ಕಡೆಗಳಲ್ಲೂ ಏಜಂಟರು ಬೇಕು.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ|| ಜಸಾನಿಯವರ ಜಗತ್ಪ್ರಸಿದ್ಧ

'ಗೊನೊಕಿಲರ್' (ರಜಿಸ್ಟರ್ಡ್)

GONO KILLER ORIGINAL

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದಲೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ್' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

'Sole Manufacturer **Dr. D. N. JASANI, Vitalbhai Patel Road, BOMBAY 4**

ಸ್ವೀಕಾರ–ವಿಮರ್ಶೆ

ಆಹುತಿ ಇತ್ಯಾದಿ ಕಥೆಗಳು—ಶ್ರೀಮತಿ ಸರಸ್ವತಿಬಾಯಿ ರಾಜವಾಡೆ—ಬೆಂಗಳೂರು ಇವರಿಂದ—ಶ್ರೀಮತಿಯವರು ಬರೆದ ಆಹುತಿ ಶಾಪ, ಪ್ರತೀಕಾರ ಮತ್ತು ಪ್ರೇಮಪಂಚ ನಾಲ್ಕು ಕಥೆಗಳಿಂದ ಕೂಡಿದ ಪುಸ್ತಕವಿದು. ಶ್ರೀಮತಿಯವರು ಕರ್ನಾಟಕದ ಲೇಖಕಿಯರಲ್ಲೊಬ್ಬರು. ಈ ಆಹುತಿ ಇತ್ಯಾದಿ ಕತೆಗಳಲ್ಲಿ ಸಮಾಜದಲ್ಲಿ ಅಜ್ಞಾನ ಅಂಧ ಶ್ರದ್ಧೆ, ಸ್ವಾರ್ಥ ಸಂಕುಚಿತ ಭಾವಗಳ ಕಾರಣದಿಂದಾಗಿ ಒದಗುವ ಅನರ್ಥ ಪರಂಪರೆಗಳು, ಶುದ್ಧ ಪ್ರೇಮವನ್ನು ತಡೆಗಟ್ಟುವ ಸಮಾಜದ ದುರಾಚಾರಗಳು, ಸ್ತ್ರೀ ಹೃದಯದ ಕೋಮಲ ಭಾವಗಳು, ಸಮಾಜ, ಸಂಸಾರದ ಸಂಘರ್ಷಗಳು, ಉಪ್ಪುಪಕ್ಷಿಯಂತಹ ಮಾನಸಿಕ ದ್ವಂದ್ವದ ಧ್ಯೇಯಗಳು, ಮತ್ತು ಇವುಗಳಿಂದಾಗುವ ಭಯಂಕರ ಪರಿಣಾಮಗಳು—ಇತ್ಯಾದಿ ವಿಷಯಗಳು ಮನಸ್ಸಿಗೆ ನಾಟುವಂತೆ ಚಿತ್ರಿತವಾಗಿವೆ. ಅಲ್ಲಲ್ಲಿ ಕಥೆಯನ್ನು ನೇಯ್ದ ರೀತಿಯು ಸ್ವಾಭಾವಿಕವಾಗಿ, ಸರಳವಾಗಿರುವಂತೆ ತೋರದಿರಬಹುದು. ಪರಂತು, ಲೇಖಕಿಯವರಲ್ಲಿ ಉತ್ತಮ ಕಥೆಗಳನ್ನು ಬರೆಯುವ ಯೋಗ್ಯತೆಯಿದೆ. ಮತ್ತು ಇನ್ನಷ್ಟು ಹೆಚ್ಚಿನ ಸಾಹಿತ್ಯಸೇವೆ ಮಾಡಿ ನಿರೀಕ್ಷಿಸಬಹುದೆಂದು ಈ ಕಥಾಸಂಗ್ರಹಗಳ ಪುಸ್ತಕವನ್ನೋದಿದರೆ ಮನದಟ್ಟಾಗದಿರದು.

ಸಂಧ್ಯಾರಾಗ—ಧಾರವಾಡದ ಮನೋಹರ ಗ್ರಂಥಮಾಲೆಯ ೩ನೆಯ ಕುಸುಮ. ಬರೆದವರು: ಶ್ರೀ ಅ. ನ. ಕೃಷ್ಣರಾಯರು ಬೆಲೆ ರೂ. ೧

ಇದು ಸ್ವತಂತ್ರ ಸಾಮಾಜಿಕ ಕಾದಂಬರಿ. ಶ್ರೀ. ರಾಯರು ಇನ್ನೂ ತರುಣರು; ಆದರೆ ಇವರು ಕಲೆಯನ್ನು ಆಶ್ರಯಿಸಿ, ಹಲವು ಪುಸ್ತಕಗಳನ್ನು ಬರೆದು, ಸಾಹಿತ್ಯಪ್ರಪಂಚದಲ್ಲಿ ತಮ್ಮ ಪ್ರತಿಭೆಯನ್ನು ತೋರಿರುವರು. ಇವರ ಶೈಲಿಯಲ್ಲಿ ನವ್ಯ ಭಾವಿಕತೆಯಿದೆ; ವರ್ಣನೆಯಲ್ಲಿ ಮಾಧುರ್ಯವಿದೆ, ಕಥೆಯಲ್ಲಿ ಸ್ವಾರಸ್ಯವಿದೆ; ಕೃತಿಯಲ್ಲಿ ಚೇತನವಿದೆ. ಅನುಭವದಲ್ಲಿ ಸುಖದುಃಖಗಳ ವಿಚಾರ ವಿಸ್ತಾರಗಳಿವೆ; ಜೀವನ ಸಮಸ್ಯೆಯ ಕಡೆಗೊಯ್ಯುವ ಜೀವನಪೂರ್ಣತೆಯ ಜೀವಂತ ವಿಚಾರಗಳಿವೆ. ಚಿತ್ರ, ಸಂಗೀತ, ಸಾಹಿತ್ಯವಿಚಾರದಲ್ಲಿ ಇವರು ಸ್ವತಂತ್ರರೀತಿಯಲ್ಲಿ ವಿಮರ್ಶಿಸಬಲ್ಲ ಕಲಾವಿದರು; ಇವರ ಚಾಚಾರದಿವಸರ್, ಉದಯರಾಗ, ಸಂಧ್ಯಾರಾಗ, ಇವೇ ಮೊದಲಾದ ಗ್ರಂಥಗಳು ಇದಕ್ಕೆ ಸಾಕ್ಷ್ಯವಾಗಿವೆ

ಶ್ರೀ. ಅ. ನ. ಕೃಷ್ಣರಾಯರ ಸಂಧ್ಯಾರಾಗವು ಅವರ ಉದಯರಾಗದ ಕೆಲವು ವರ್ಷಗಳ ನಂತರ, ಇತ್ತೀಚೆ ಹೊರಹೊರಟ ಅವರ ಹೃದಯದ ಮಾಧುರ್ಯ, ಸಂಧ್ಯಾರಾಗವು, ಆಗಸದ ದಿಗಂತದಲ್ಲಿ ಎಷ್ಟೋ ಮಂದು ಮರೆಯಾಗದು, ಹಾಗೆಯೇ ಮೇಲಕ್ಕೆ ಏರುವರೆಂಬುದನ್ನು ಸ್ಪಷ್ಟಗೊಳಿಸುವುದು.

ಸಂಧ್ಯಾರಾಗದಲ್ಲಿ ಚಿತ್ರಿತವಾದ ಕೆಲ ಪಾತ್ರಗಳು, ಹಲವು ದೃಶ್ಯಗಳು ನಮ್ಮ ಮಾತ್ರ ಮುಕ್ತಿನ ಪರಿಶುದ್ಧ ಸಂಚಾರಗಳಿಸಿದ್ದವಂತಿದೆ. ಬುದ್ಧಿಯ ತೀಕ್ಷ್ಣತೆಗಿಂತ ಹೃದಯದ ವಿಶಾಲತೆಯಿದೆಷ್ಟೋ ಸಂಸಾರದ ಸುಖಕ್ಕೂ, ಲೋಕದ ಹಿತಕ್ಕೂ ಸಾಧನವೆಂಬುದು ಹೃದಯಂಗಮವಾಗಿ ವರ್ಣಿತವಾಗಿದೆ. ರಾಮ್ಯ ಸಾತ್ವಿಕ ವೃತ್ತಿಯ ಗೃಹಸ್ಥನ ಸಂಸ್ಕೃತ ಜೀವನವು ಶ್ರೀನಿವಾಸದದು. ಪತಿಭಕ್ತಿಯ, ಉದಾರ ಹೃದಯದ ಶುದ್ಧ, ಸರಳ ಜೀವನದ ಗೃಹಿಣಿಯರ ಚಿತ್ರವನ್ನು ವಿಶಿಷ್ಟ ಮತ್ತು ಸಾವಿತ್ರಿಯನ್ನು—ಇವರ ಜೀವನದಲ್ಲಿ ಕಾಣಬಹುದಾಗಿದೆ, ಉಚ್ಚಶಿಕ್ಷಣ ಹೊಂದಿದವನಾದರೂ, ಧನ ದೌಲತ್ತಿನ ಲೋಭಕ್ಕೊಳಗಾದ ರಾಮರಾಯನ ಅಸಾರಂತ ರಹಿತ ಜೀವನ ಮತ್ತು ಅದರ ದುಷ್ಪರಿಣಾಮವು ಇಂದಿನ ಕೆಲ ಸಮಾಜದಲ್ಲಿ ಸ್ಥಾನಮಾನವನ್ನು ಪಡೆದ ಕೆಲ ಸ್ವಾರ್ಥಿಗಳ ನಿಜ ಚಿತ್ರವನ್ನಾಗಿಸಿದೆ. ಶಾಂತ ಮತ್ತು ಪದ್ಮ, ಜೀವನ ಯೌವನದಲ್ಲಿ ಯಶಸ್ವಿಯಾದ ವೆಂಕಟೇಶ ಸಾವಿತ್ರಿಯರ ಗೋಪಾಲ ಇವರ ಜೀವನ ವಿಚಾರಗಳು ಒಂದೊಂದು ರೀತಿಯ ಸಮಾಜದ ಸ್ತ್ರೀಪುರುಷರ ಆದರ್ಶ ಮಾರ್ಗಗಳಾಗಿವೆ. ಮಾಲತಿ ಗಾಯಕ ರಮಣ ಲಕ್ಷ್ಮಣರು ಕಲಾಪೂರ್ಣರೆನಿಸಿ, ತನ್ನ ಅಪಾರ ಸರಿಂದ, ಅನಂತರದೊಂದಿಗೆ ಲೀನನಾಗವ, ಆವರ ಸಂಧ್ಯಾರಾಗದ ಚಿತ್ರವು ಬಹು ಸೊಗಸಾಗಿ, ಹೃದಯಂಗಮವಾಗಿ, ಸರಳ ಶೈಲಿಯಲ್ಲಿ ವರ್ಣಿತವಾಗಿದೆ. ಶ್ರೀ. ಅ. ನ. ಕೃಷ್ಣರಾಯರ ಸಂಧ್ಯಾರಾಗವು ಕನ್ನಡಿಗರ ಆದರಾಗಕ್ಕೆ ಸಂಪೂರ್ಣ ಪಾತ್ರವಾಗಬಹುದು.

ವರದಿ—ಬೆಳಗಾವಿ ಜಿಲ್ಲೆಯಲ್ಲಿ ಬರಗಾಲ ಪರಿಹಾರಕ ಸಮಿತಿಯ ಚಟುವಟಿಕೆಗಳ ವರದಿಯನ್ನು ನಾವು ಸಂತೋಷದಿಂದ ಸ್ವೀಕರಿಸುವೆವು. ೧೯೩೬ನೇ ಡಿಸೆಂಬರದಲ್ಲಿ ಬರಗಾಲವು ಪ್ರಾರಂಭವಾದಂದಿನಿಂದ ಈ ವರೆಗೆ ಈ ಸಮಿತಿಯು ನಡೆಸಿದ ಕಾರ್ಯಕಲಾಪಗಳ ವಿವರವು ಈ ವರದಿಯಲ್ಲಿ ನಮೂದಿತವಾಗಿರುವುದು, ಬರಗಾಲದ ಹಾವಳಿಯ ನಿವಾರಣೆಗಾಗಿ ಅಷ್ಟು ಸಂಘಗಳಿಂದ ನಡೆಸಲ್ಪಟ್ಟ ಕಾರ್ಯವು ಶ್ಲಾಘನೀಯವಾದುದು. ದುಃಸ್ಥಿತಿಗಳಿಂದ ಜನತೆಯ ಹಿತ ಕ್ಕಾಗಿ ಅವಿಶ್ರಾಂತ ಶ್ರಮದಿಂದ ದುಡಿದ, ಜನಸೇವಕರಾದ ಈ ಸಮಿತಿಯ ಉಪಕಾರವು ಅಪಾರವಾದುದು.

ನೋಟೀಸು.

ಕಾರ್ಕಳ ಡಿ. ಮು ಕೋರ್ಟಿನಲ್ಲಿ

O. P. ೧೯೩೯

ಶಂಕರನಾರಾಯಣ ಮೈನರ್, ಇವನ ಗಾರ್ಡಿಯನ್ ನಾಗಮ್ಮ —ಅರ್ಜಿದಾರಳು,

ಮತ್ತು

ಕೃಷ್ಣಯ್ಯ ಸಹಾ —ಎದ್ರಿರು.

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—

ಕಾರ್ಕಳ ತಾಲೂಕು ಕಲ್ಲಮುಂಡ್ಕೂರು ಗ್ರಾಮ ದಲ್ಲಿದ್ದ ಮೃತನಾದ ಮೈನರ ಅರ್ಜಿದಾರನ ತಂದೆ ಗಣಪಯ್ಯ ಯಾನೆ ಜಿ. ಎಸ್. ಕೇಂಜೆಯ ಬಾಬ್ತು ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿಯ ಬಾಬ್ತು ನಂಬ್ರ 247ನೇ ಪಾಲಿಸಿ ಪ್ರಕಾರ ಬರತಕ್ಕ ರೂಪಾಯಿ 1000/-ನ್ನು ಪಡೆಯುವ ಬಗ್ಗೆ ಅರ್ಜಿದಾರಗೆ ಒಂದು ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ಮಾಡಿರುವ ಮೇಲ್ಕಂಡ ಅರ್ಜಿಯು ತಾ. 21-2-1939ಕ್ಕೆ ತನಿಖೆ ಇಟ್ಟಿರುತ್ತದೆಂತಲೂ ಆಕ್ಷೇಪವುಳ್ಳವರು ಸದ್ರಿ ತಾರೀಕು ಬೆಳಿಗ್ಗೆ 10 ಘಂಟೆಗೆ ಕೋರ್ಟಿಗೆ ಹಾಜರಾಗಿ ಉಜರು ಹರಿಸಬೇಕೆಂತಲೂ ಈ ಮೂಲಕ ತಿಳಿಸಲಾಗುತ್ತದೆ

(*Sd*, A. N. S. Achar,
Vakil for petitioner.

Karkal, 1-2-1939

ಗೋಕರ್ಣ ಯಾತ್ರೆ

ಬೊಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿಯವರು ಫೆ. ತಾ. ೧೭ರಿಂದ ೨೮ರ ವರೆಗೆ ನಡೆಯುವ ಗೋಕರ್ಣ ಯಾತ್ರೆಯ ಕಾಲದಲ್ಲಿ ಮಂಗಳೂರಿನಿಂದ ಮತ್ತು ಮುಂಬಾಯಿಯಿಂದ ತದ್ರಿ ವರೆಗೆ ರಿಯಾಯತಿ ದರದಲ್ಲಿ ರಿಟರ್ನ್ ಟಿಕೇಟು ಕೊಡುವರು

ಫೆಬ್ರವರಿ ತಾ. 14, 17 ಮತ್ತು 21ರಲ್ಲು ಮಂಗಳೂರಿನಿಂದಲೂ ಮುಂಬಾಯಿಯಿಂದಲೂ ತದ್ರಿಯಲ್ಲಿಳಿಯಲು ಅನುಕೂಲವಾಗುವಂತೆ ಸ್ಟೀಮರುಗಳು ಹೊರಡುವವು.

ಸ್ಪೆಶಲ್ ರಿಯಾಯತಿ ದರ ಹೋದವರ್ಷ ರೂ. ೬/- ಇದ್ದುದನ್ನು ಈ ವರ್ಷ ರೂ. ೬-೧೨-೦ಕ್ಕೆ ಇಳಿಸಲಾಗಿದೆ

ನೋಟೀಸು

ಯಾವತ್ತೂ ಜನರಿಗೆ ಈ ಮೂಲಕ ತಿಳಿಸುವದೇನೆಂದರೆ —

ಬೇಸಾಯಗಾರರು ಪಡುತ್ತಿರುವ ಸಾಲದ ಬಾಧೆಯನ್ನು ನಿವಾರಿಸುವರೆ ಮಂಗಳೂರು ರೆವಿನ್ಯೂ ಡಿವಿಜನ್ನಿನ ಬಗ್ಗೆ ಸ್ಥಾಪಿಸಿದ ಸಾಲ ಪರಿಹಾರದ ಬೋರ್ಡು ಅದರ ಸಿಟ್ಟಿಂಗುಗಳನ್ನು ಸರಕಾರಿ ರಜೆ ದಿನವಲ್ಲದ ಪ್ರತೀ ಶುಕ್ರವಾರ ದಿವಸ ಕೆಲಸ ಇದ್ದಾಗ್ಗೆ ಜಿಲ್ಲಾ ಕಲೆಕ್ಟರರ ಆಫೀಸಿಗೆ ತಾಗಿರುವ ಮಂಗಳೂರು I ಕ್ಲಾಸು ಬೆಂಚ್ ಕೋರ್ಟು ಬಿಲ್ಡಿಂಗಿನಲ್ಲಿ ಜರಗಿಸುವದು. ಮತ್ತು ಅರ್ಜಿಗಳನ್ನು ಬೋರ್ಡಿನ ಚೇರ್ಮೆನನಿಗೆ ದಾಖಲು ಮಾಡತಕ್ಕದ್ದು. ಮತ್ತು ಅರ್ಜಿಗಳಿಗೆ ಸಂಬಂಧಪಟ್ಟ ರಿಜಿಸ್ಟ್ರಿ ನೋಟೀಸುಗಳಿಗೆ ತಗಲುವ ಖರ್ಚು, ಸಾಕ್ಷಿಗಾರರ ಭತ್ತೆ, ಸಾಕ್ಷಿ ಪಟ್ಟಿ ಮತ್ತು ಸ್ಟೇಟ್ಮೆಂಟುಗಳು ವಗೈರೆ ಸರಕಾರಿ ರಜಾ ಅಲ್ಲದ ಇತರ ದಿವಸಗಳಲ್ಲಿ ಸದ್ರಿ ಬೆಂಚ್ ಕೋರ್ಟ ಕಟ್ಟೋಣದಲ್ಲಿರುವ ಬೋರ್ಡು ಆಫೀಸು ಕ್ಲಾರ್ಕರ ವಶ ಹಾಜರುಪಡಿಸತಕ್ಕದ್ದು. ನಗದು ಹಣಗಳ ಬಗ್ಗೆ ಸದ್ರಿ ಬೋರ್ಡು ಕ್ಲಾರ್ಕರು ಅವಶ್ಯವುಳ್ಳ ರಶೀದಿಗಳನ್ನು ಕೊಡುವರು.

B. Gopalakrishnaya,
ಸಾಲಪರಿಹಾರದ ಬಹಿರಂಗದಿಕೆಯ ಬೋರ್ಡಿನ ಚೇರ್ಮೆನ್.

ಮಂಗಳೂರು, 6-2-1939.



ಸರಿಯಾದ ಸಮಯವನ್ನು ಸೂಚಿಸತಕ್ಕ ಆತ್ಯಧುನಿಕ ಲಿವರ್ ರಿಸ್ಟ್‌ವಾಚಿಗೆ ಉದ್ದ ಚೌಕ ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ 2-8-0, ಅತ್ಯುತ್ತಮದಕ್ಕೆ ರೂ. 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ 4-8-0, ರೋಲ್ಡ್ ಗೋಲ್ಡಿಗೆ ರೂ.6-8-0, ಚಿಕ್ಕದಲ್ಲಿ ತೋರುವಂತಹದಕ್ಕೆ ರೂ. 8-8-0. ಅಂಚೆ ವೆಚ್ಚ 0-10-0 ಪ್ರತ್ಯೇಕ.

Empress Trading Co.,
P.O. Box No. 6744, **Calcutta (G)**

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ್ ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲಿ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಿಕ್ಕಿಲ್ಲದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹದ ಆರೋಗ್ಯಕ್ಕೆ ಹಾನಿಕರವಲ್ಲ. ಮೋಸಗೋಸವೆಂದು ರುಜುಪಡಿಸುವವರಿಗೆ ರೂಪಾಯಿ 100 ಬಹುಮಾನ.

ಸ್ತಂಭಕ ವಟಿ—ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ತಂಭನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram
No. 552 **P. O. Katrisarai, (GAYA)**

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತು ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಹೇರುಗಟ್ಟಿ ಬರುತ್ತಿವೆ. ಇಷ್ಟರಿಂದಲೇ ನಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ

ಜಾಹೀರು ವಿನಂತಿ.

ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಉಡುಪಿ ತಾಲೂಕು ಗುಂಡ್ಮಿ ಗ್ರಾಮದ ಮಂಜುನಾಥ ಸಹಸ್ರ ಯಾನೆ ಕೆ. ಜಿ. ಕೆ. ರಾವ್ ಎಂಬವರು ನಮ್ಮ ಫರ್ಮಿನ ಔಷಧ ಮಾರಾಟದ ಟ್ರಾವಲಿಂಗ್ ಏಜಂಟರಾಗಿದ್ದರು. ಈಚೆಗೆ ಅವರ ಏಜನ್ಸಿಯನ್ನು ವಜಾ ಮಾಡಿದೆ. ಅವರಿಗೂ ನಮ್ಮ ಫರ್ಮಿಗೂ ಯಾವ ತರದ ಸಂಬಂಧವೂ ಇರುವುದಿಲ್ಲ. ಅವರು ನಡಿಸುವ ವ್ಯವಹಾರಗಳು ನಮ್ಮ ಫರ್ಮಿಗೆ ಸಂಬಂಧ ಪಟ್ಟದ್ದಲ್ಲವೆಂಬದನ್ನು ಸರ್ವರೂ ತಿಳಿದಿರತಕ್ಕದ್ದು.

ಡಾ| ಎ. ಎಸ್. ಶ್ರೀನಿವಾಸ ರಾವ್,
ಆಯುರ್ವೇದ ವೈದ್ಯ ವಿದ್ವಾನ್,

ಯಂ. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ಶಕ್ತಿ ಇವುಗಳನ್ನು ಹೋಗಲಾಡಿಸಿ ಪುಷ್ಟಿಗೊಳಿಸುವಂತೆ ಮಾಡುತ್ತದೆ. ರಕ್ತವನ್ನು ವೃದ್ಧಿಮಾಡಿ ಜ್ಞಾಪಕಶಕ್ತಿಯನ್ನು ಸ್ಥಿರಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಮೊದಲಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಂದಾಗಲಿ ಅತಿಯಾದ ಭೋಗದಿಂದಲೂ ದುಷ್ಟ ಸ್ತ್ರೀಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಪುರುಷತ್ವ ನಷ್ಟವಾಗುವುದನ್ನು ಈ ತೈಲದ ಉಪಯೋಗದಿಂದ ನಿವಾರಿಸಬಹುದು. ಇಂದ್ರಿಯದ ಬಿಗಿ ತಪ್ಪಿಹೋಗುವುದು ಅಥವಾ ಸಡಿಲವಾಗಿ ನಪುಂಸಕತ್ವವನ್ನು ಹೊಂದಿದವರು ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಗುಣವನ್ನುಂಟುಮಾಡುವುದು. ಅರ್ಧ ತೊಲೆ ಶೀಶೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪.
ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಈ ವಾರವು ಹೇಗಿದೆ?

(ತಾ 16—2—39ರಿಂದ 23—2—39ರ ವರೆಗಿನ ರಾಶಿಫಲ)

[ಜ್ಯೋತಿಷ್ಯ ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ. ನ.]

ಮಕರ ರಾಶಿಯವರಿಗೆ ಈ ವಾರವು ಅತ್ಯುತ್ತಮವಾಗಿರುವುದು—ಮೇಷ, ವೃಷಭ, ಕನ್ಯಾರಾಶಿಯವರಿಗೆ ಉತ್ತಮವಾಗಿಯೇ ಇರುವುದು—ತುಲಾ ರಾಶಿಯವರಿಗೆ ಮಧ್ಯಮರೀತಿಯಲ್ಲಿರುವುದು—ಮಿಥುನ, ಸಿಂಹ, ವೃಶ್ಚಿಕ, ಧನು ರಾಶಿಗಳವರಿಗೆ ಅನಿಷ್ಟವೇ ಸ್ವಲ್ಪ ಅಧಿಕವಾಗಿ ಪರಿಣಮಿಸುವದು—ಕರ್ಕಾಟಕ, ಕುಂಭರಾಶಿಯವರ ಭವಿಷ್ಯವು ಬಹಳ ಹೀನಸ್ಥಿತಿಯಲ್ಲಿಹುದು—ಮೀನರಾಶಿಯವರ ಸ್ಥಿತಿಯು ಚಿಂತಾಜನಕವಾಗಿರುವುದು.

ಮೇಷರಾಶಿ—

ಪ್ರಕೃತದ ವಾತಾವರಣವು ನಿಮ್ಮ ಭಾಗಕ್ಕೆ ಬಹಳ ಅನುಕೂಲವಿರುವುದು. ವೈಶ್ಯ ವೃತ್ತಿಯ ಜನರಿಗೆ ಸ್ವೋದ್ಯೋಗದಲ್ಲಿ ಉತ್ತಮ ರೀತಿಯಿಂದ ಧನಾಗಮವಾಗುವದು. ಮತ್ತು ಕೋರ್ಟು ವಗೈರೆಗಳಲ್ಲಿನ ರಾಜಕಾರಣಗಳಲ್ಲೂ ಜಯಸಿಗುವದು. ಆರೋಗ್ಯವೂ ಕೂಡ ನೆಟ್ಟಗಿರುವದು, ಧರ್ಮ ಕರ್ಮಗಳ ಮೇಲಿನ ಶ್ರದ್ಧೆಯು ಅಭಿವೃದ್ಧಿಯಾಗುವುದು, ಧನ ಜನ ಬೆಂಬಲವೂ ಗಟ್ಟಿಯಾಗಿ ಬಹಳ ಉತ್ತಮ ರೀತಿಯಲ್ಲಿರುವದರಿಂದ ಆರಂಭಿಸಿದ ಕಾರ್ಯಗಳೆಲ್ಲವೂ ನಿರಾಯಾಸವಾಗಿ ಕೊನೆಗಾಣುವವು. ಆದರೂ ಕೂಡ ನಿಮ್ಮ ದಾಯಾದಿಗಳು ವ ಶತ್ರುಗಳು ತಮ್ಮ ಪೀಡನಾಸ್ವಭಾವವನ್ನು ಬಿಡರು. ಕೆಲವು ಕಾರ್ಯಗಳಲ್ಲಿ ನಿಮ್ಮ ಧನವು ಅಪವ್ಯಯವಾಗುವುದರಿಂದ ಧನ ವಿಷಯಕವಾದ ಕೋಶವು ನಿಮ್ಮಲ್ಲುದ್ಭವಿಸುವುದು. ತಾ. 21, 22, 23 ಈ ದಿನಗಳಲ್ಲಿ ಹೆಚ್ಚಿನ ಧನವ್ಯಯವಾಗುವುದಲ್ಲದೆ ಮಾನನಷ್ಟದ ಪ್ರಸಂಗವೂ ಒದಗಬಹುದು.

ವೃಷಭರಾಶಿ—

ಸುಖವಾಗಲಿ ದುಃಖವಾಗಲಿ ಅದನ್ನು ಅನುಭವಿಸುವುದು ದೇಹದ ಮೂಲಕವಾಗಿಯಷ್ಟೆ. ಈ ದೇಹಕ್ಕೇ ಮುಖ್ಯವಾದ ಆರೋಗ್ಯವಿಲ್ಲದಿದ್ದಲ್ಲಿ ಇತರ ಆವ ಭಾಗ್ಯಗಳಿದ್ದರೇನು? ಏನೂ ಪ್ರಯೋಜನವಿಲ್ಲವು. ಪ್ರಕೃತದ ಸ್ಥಿತಿಯಲ್ಲಿ ನಿಮ್ಮ ಆರೋಗ್ಯವನ್ನು ಕಾಪಾಡುವುದು ಕಷ್ಟ. ಅದಕ್ಕನುಕೂಲವಾಗಿ ಹೆಂಡತಿಯೂ ಕೂಡ ಕಲಹಕಾರಿಯಾಗಿರುವಳು. ಈ ಎರಡು ಭಾಗಗಳನ್ನು ಹೊರತು ನಿಮಗೆ ಮಿಕ್ಕೆಲ್ಲ ವಿಷಯಗಳಲ್ಲೂ ಒಳ್ಳೆಯ ಶುಭಚಿಹ್ನೆಗಳೇ ಇವೆ. ಇಷ್ಟಸಿದ್ಧಿಯೂ ವಿವಾದದಲ್ಲಿ ಜಯವೂ ಆಗುವುದು. ಯಾವ ಕಾರ್ಯದಲ್ಲೂ ನಷ್ಟ ಬಾಧೆ ಉತ್ತಮ ಫಲ ದೊರೆಯುವುದು. ಮಿತ್ರ ವರ್ಗದವರೂ ಇತರ ಮಾನ್ಯ ಜನರೂ ನಿಮ್ಮನ್ನು ಗೌರವಪೂರ್ವಕವಾಗಿ ಕಾಣುವರು. ವಾರಾವಧಿಯ ಮೂರು ದಿನಗಳು ಕಿಂಚಿದನಿಷ್ಟಪ್ರದಗಳು.

ಮಿಥುನರಾಶಿ—

ಸಾಮಾನ್ಯವಾಗಿ ಎಲ್ಲಾ ಜನರಿಗೂ ಸುಖಕಷ್ಟಗಳು ಇದ್ದೇ ಇವೆ. ದುಡ್ಡಿಲ್ಲದ ಬಡವನಿಗೆ ದಿನಗಳೆಯುವುದು ಬಹಳ ಕಷ್ಟವಾಗಿ ತೋರುವುದು. ಅಂತೆಯೇ ಒಂಬಾ ಹಣವಂತನಿಗೂ ಕೂಡ ರಾತ್ರಿ ನಿದ್ದೆ ಬಾರದು. ಕಾರಣ ಹಣದ ಪ್ರಭಾವವೇ. ಎಲ್ಲಿ ತನ್ನ ಹಣಕ್ಕೆ ಕಾಕಪೋಕರಿಂದ ಹಾನಿ ಸಂಭವಿಸಿತೋ, ಸಾಲ ಕೊಟ್ಟವರಿಂದ ಮೋಸ ಬಂದೀತೋ, ಎಂಬಿತ್ಯಾದಿ ರೂಪಗಳಿಂದ. ಇವರಲ್ಲಿ ನೀವು ಪ್ರಕೃತ ಹಣಕೊಟ್ಟು ತಕ್ಕೊಳ್ಳುವ ವಿಚಾರದಲ್ಲಿ ಸ್ವಲ್ಪ ನಿಷ್ಕಾಳಜಿಯಾಗಿ ಕಷ್ಟವನ್ನನುಭವಿಸಲಿಕ್ಕಿರುವಿರಿ. ನಿಮ್ಮಲ್ಲಿ ವ್ಯವಹಾರ ಚಾತುರ್ಯವು ಬೇಕಾಗಿರುವುದು. ಆದರೂ ಸದ್ಯ ಅದು ಪ್ರಯೋಜನಕ್ಕೆ ಬಾರದು. ಅನೇಕ ವಿಷಯಗಳಲ್ಲಿ ಹೆಚ್ಚಾಗಿ ಸ್ತ್ರೀಯರಿಂದ ವಿಘ್ನಗಳೂ ಅನಿಷ್ಟಗಳೂ ಸಂಭವಿಸಲಿವೆ. ನೀವು ಉಪಕಾರ ದೃಷ್ಟಿಯಿಂದ ಬೇರವರಿಗೆ ನೆರವಾದರೂ ಅದು ವಿಪರೀತದ ಫಲ ಕೊಡಲಿರುವುದು. ತಾ. 16ರಿಂದ 20ರ ವರೆಗಿನ ದಿನಗಳಲ್ಲಿ ನಿಮಗೆ ಹೆಚ್ಚಾಗಿ ಈ ಅನಿಷ್ಟಗಳೇ ಕಾರ್ಯರೂಪಕ್ಕೆ ಬರಲಿರುವವು.

ಕರ್ಕಾಟಕರಾಶಿ—

ಈ ವಾರವು ನಿಮಗೆ ಹಲವು ವಿಧಗಳಿಂದ ಅನಿಷ್ಟಕಾರಿಯಾಗಿ ಪರಿಣಮಿಸುವುದು. ಎಲ್ಲೆಲ್ಲಿಯೂ ನಿಮಗೆ ವಿರೋಧಿಗಳೇ ಹೆಚ್ಚುವರು. ಮಾತ್ರವಲ್ಲ ನಿಮ್ಮ ಸಂಸಾರದಲ್ಲಿ ಒಡಕುಗಳು ದಿನೇ ದಿನೇ ಪ್ರಬಲವಾಗುವವು. ಕೆಲವೊಮ್ಮೆ ಮನೆಬಿಟ್ಟು ಪ್ರಯಾಣ ಮಾಡಬೇಕಾದ ಸಂದರ್ಭವೊದಗಿ ಹೆಚ್ಚಿನ ಕಷ್ಟ ನಷ್ಟಗಳಿಗೆ ಗುರಿಯಾಗುವಿರಿ. ಶತ್ರುಗಳ ವಿರೋಧದಿಂದಾಗಿ ನಿಮ್ಮ ಕಾರ್ಯಗಳು ಕೊನೆಗೊಳ್ಳುವುದು ದುರ್ಲಭ. ಅಕಸ್ಮಾತ್ತಾಗಿ ಶರೀರದ ಆರೋಗ್ಯವು ನಷ್ಟವಾಗುವುದು. ಸರ್ವತ್ರ ಧನವ್ಯಯದ ಪ್ರಕರಣಗಳೇ ಕಂಡುಬರುವುದರಿಂದ ಆರ್ಥಿಕ ಅಡಚಣೆಯಲ್ಲಿ ಸಿಲುಕಿ ಬಹಳ ತ್ರಾಸಹೊಂದುವಿರಿ. ಇಂಥಾ ಕಷ್ಟಕಾಲದಲ್ಲಿ ಪುತ್ರ ಕಳತ್ರರೂ ಕೂಡಾ ನಿಮಗೆ ಶೋಕದಾಯಕರಾಗುವರೇ ಹೊರತು ಅನುಕೂಲನಾಗಿರಲಾರರು. 'ಧರ್ಮಕ್ಕೆ ಕೈ ಬಾರದೀ ಕಾಲ' ಎಂಬ ದಾಸರ ನುಡಿಯು ನಿಮ್ಮಲ್ಲಿ ಸರಿಯಾಗಿ ಅನ್ವಯಿಸುವುದು. ತಾ. 16, 17, 18ರ ಮಟ್ಟಿಗೆ ಧನವಿಷಯದಲ್ಲಿ ಮತ್ತು ಕಾರ್ಯಸಿದ್ಧಿಯ ಸಲುವಾಗಿ ಚಿಂತಿಸಬೇಕಾಗಿಲ್ಲವು.

ಸಿಂಹರಾಶಿ—

'ಉದ್ಯಾಯೇನ ಹಿ ಸಿಧ್ಯಂತಿ ಕಾರ್ಯಾಣಿ...' (ಉಪಾಯೇನ ಹಿ ಯಚ್ಛಕ್ಯಂ ನ ತಚ್ಛಕ್ಯಂ ಪರಾಕ್ರಮೈಃ)! ಎಂಬಂತೆ ಪರಾಕ್ರಮದಿಂದಲೂ ಕೊನೆಗಾಣಿಸಲು ಅಶಕ್ಯವಾದ ಸಂಗತಿಗಳನ್ನು ಜಾಣರು ಉಪಾಯಗಳಿಂದಲೇ ಕೊನೆಗೊಳಿಸುವರು. ನಿಮಗೂ ಕೂಡ ಈ ವಾರದಲ್ಲಿ ಹಲವು ಅನಿಷ್ಟಗಳು ಸಂಭವಿಸಲಿವೆ. ಆದರೂ ಅವುಗಳಲ್ಲಿ ಹಲವನ್ನು ನೀವು ನಿಮ್ಮ ಬುದ್ಧಿ ಚಾತುರ್ಯದಿಂದಾಗಿ ದೂರಗೊಳಿಸುವಿರಿ. ಅನೇಕರಲ್ಲಿ ನಿಮಗೆ ವ್ಯವಹಾರದ ಸಲುವಾಗಿ ಕಲಹವಾಗಲಿದೆ, ಆದರೂ ನಿಮ್ಮ ವಾಕ್ಚಾತುರ್ಯದಿಂದ ಕಲಹವಾಗಿದ್ದರೂ ಕೂಡ ನಿವಾರಿಸಲು ಶಕ್ತರಾಗುವಿರಿ. ಕೆಲವು ಮಿತ್ರರು ನಿಮಗೆ ಆಪಾತತಃ ಸುಭಗರೆಂದೆನಿಸಿದ್ದರೂ ಅಂತತಃ ಅನರ್ಥಕಾರಿಗಳಾಗಿರುವರೆಂಬುದನ್ನು ಅರಿತು ಅದಕ್ಕೆ ತಕ್ಕ ಪ್ರತೀಕಾರವನ್ನು ಕೂಡ ಮುಂಚಿಯೇ ಮಾಡಿಕೊಳ್ಳಲು ಮರೆಯಲಾರಿರಿ. ಆರೋಗ್ಯವನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಬಹಳ ಕಷ್ಟ. ವಾರಾಂತ್ಯದ ಮೂರು ದಿನಗಳಲ್ಲಿ ಆತ್ಮೀಯರಲ್ಲೂ ಶಂಕೆಯದಲ್ಲೂ ಸೂಕ್ಷ್ಮ ದೃಷ್ಟಿಯನ್ನಿಡಿರಿ. ಕೇಡು ತಪ್ಪದು.

ಕನ್ಯಾರಾಶಿ—

ಈ ವಾರವು ನಿಮಗೆ ಸರ್ವ ವಿಧದಿಂದಲೂ ಉತ್ತಮವಿರುವುದು. ಆದರೂ ಒಂದೆರಡು ವಿಷಯಗಳಲ್ಲಿ ಶತ್ರುಗಳಿಂದ ಹಾನಿ ಸಂಭವಿಸಿ ಅದೇ ನಿಮ್ಮ ಚಿಂತೆಗೆ ಮೂಲಕಾರಣವಾಗುವುದು. ಅಸಂಭಾವಿತವಾಗಿ ಕೆಲವೊಂದು ಖರ್ಚಿನ ಪ್ರಸಂಗಗಳೂ ಒದಗಲಿರುವವು. ಇಷ್ಟಾರ್ಥ ಸಿದ್ಧಿಗಾಗಿ ಹಲವು ಸಮಯದಿಂದ ಕಾದಿದ್ದು ಅದರ ಫಲವನ್ನು ಈಗ ಅನುಭವಿಸಲಿರುವಿರಿ. ಹಿಂದಿನ ಅನೇಕ ಮನೋರೋಗಗಳು ನಿರ್ನಾಮವಾಗಲಿರುವವು. ನಿಮ್ಮ ಸಂಪದ್ಭಾಗವು ಬಹಳ ಉತ್ತಮ ಸ್ಥಿತಿಗೆ ಬಂದಿರುವುದು. ಮಾತ್ರವಲ್ಲ ಹಲವು ವಿಧದಿಂದ ನಿಮ್ಮಲ್ಲಿ ಧನವು ಸೇರಲಿದೆ. ಯಾವ ಭಾಗದಲ್ಲೂ ನಿಮ್ಮ ಮನಸ್ಸಿನ ನೆಮ್ಮದಿಗೆ ಭಂಗ ಬಾರದಿರುವುದರಿಂದ ದಿನಗಳು ಬಹಳ ಸುಖದಿಂದ ಕಳೆಯುವವು. ತಾ. 16ರಿಂದ 18ರ ವರೆಗೆ ಕೆಲವು ಕಾರ್ಯಗಳಿಗೆ ತಡೆ ಮತ್ತು ಪ್ರಯಾಣದ ಸಲುವಾಗಿ ಖರ್ಚು ಆಗುವ ಸಂಭವವಿದೆ.

ತುಲಾರಾಶಿ—

ಸದ್ಯದ ಗ್ರಹಸ್ಥಿತಿಯಲ್ಲಿ ಇಷ್ಟಾನಿಷ್ಟದ ಬಲಸಾಮ್ಯದಿಂದ ಮಿಶ್ರ ಫಲಗಳೇ ಕಂಡುಬರುತ್ತಿವೆ. ಪರಸ್ಪರ ನಿಮ್ಮ ಹೆಂಡಿರುಮಕ್ಕಳಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟುವುದರಿಂದ ಗೃಹಕಾರ್ಯತ್ರಯಗಳಿಗೆ ಗುರಿಯಾಗುವಿರಿ. ಹೆಚ್ಚಿನ ಹಣಬರ್ಜನ ದಾರಿಗಳು ಉದ್ಭವಿಸುವವು. ಕೋರ್ಟು ವಗೈರೆ ವ್ಯವಹಾರಗಳಲ್ಲಿ ಅನಿಷ್ಟವೇ ಕಂಡುಬರುತ್ತಿದೆ. ಕೆಲವೊಂದು ಆಹಾರದೋಷದಿಂದಾಗಿ ಶರೀರದಲ್ಲಿ ಅಜೀರ್ಣ ವ ಪಿತ್ಥ ಸಂಬಂಧವಾದ ರೋಗವು ತಲೆದೋರಿ ಶರೀರ ಸುಖವನ್ನಪಹರಿಸುವುದು. ಆದರೂ ನಿಮ್ಮ ಖರ್ಚಿಗಿಂತಲೂ ಅಧಿಕವಾಗಿ ದುಡಿಯಲು ಪ್ರಕೃತ ನೀವು ಸಮರ್ಥರಿರುವಿರಿ. ಗೃಹದಲ್ಲಿ ಪಶುಧನ್ಯ ಪರಿಜನಾದಿ ಸಂಪತ್ತುಗಳಿಗೆ ಹಾನಿಕಾಣದು. ತಾ. 16ರಿಂದ 19ರವರೆಗಿನ ದಿನಗಳು ಹೆಚ್ಚಿನ ಹಾನಿದಾಯಕಗಳಾಗಿರುವುದರಿಂದ ಆ ಪ್ರಸ್ತದಲ್ಲಿ ಮನಸ್ತಾಪ, ವಿಪಕ್ಷೀಯರಿಂದ ಕಾರ್ಯಕ್ಕೆ ವಿಘ್ನ, ಭಯ, ಶೋಕ, ಇತ್ಯಾದ್ಯನಿಷ್ಟಗಳು ಸಂಭವಿಸಲಿರುವವು. ಆದಕಾರಣ ಬಹಳ ಜಾಗರೂಕರಾಗಿ ವರ್ತಿಸಿರಿ.

ವೃಶ್ಚಿಕರಾಶಿ—

ಇಷ್ಟಕ್ಕೆ ದ್ವಿಗುಣವಾಗಿ ಅನಿಷ್ಟಗಳೇ ಕಂಡುಬರುವ ಪ್ರಯುಕ್ತ ನಿಮ್ಮ ಭಾಗಕ್ಕೆ ಈ ವಾರವು ಹಿತಕಾರಿಯಾಗಿಲ್ಲವು. ಮಿತ್ರರೂ ಕುಟುಂಬದವರೂ ನಿಮಗೆ ಸಹಾಯಕರಾಗಿರುವುದರಿಂದ ಕೆಲವು ಕಾರ್ಯಗಳು ನಿಮ್ಮಂತೆ ಜರಗಿ ತಕ್ಕ ಪ್ರತಿಫಲವನ್ನು ಕೊಡುವವು. ಶತ್ರುಗಳು ಉದಾಸೀನರಾಗಿ ಕುಳಿತುಕೊಳ್ಳುವರು. ಆದರೆ ಪುತ್ರಭೃತ್ಯರಲ್ಲಿ ಕಲಹವಾಗಿ ನಿಮ್ಮನ್ನು ತೊಳಗುವ ಸಂಭವವಿದೆ. ಆಪ್ತಜನರು ಮೋಸಮಾಡುವುದರಿಂದ ಹೆಚ್ಚಿನ ಧನವ್ಯಯ ಮತ್ತು ಚಿಂತೆಯು ಸಂಭವಿಸುವುದಲ್ಲದೆ ಕೆಲವೊಮ್ಮೆ ಮಾನಹಾನಿಯ ಪ್ರಸಕ್ತಿಯೂ ಬರಲಿದೆ. ಯಾನಾದಿಗಳ ಪ್ರಯಾಣಕಾಲದಲ್ಲೂ ಶಸ್ತ್ರ ವಗೈರೆಗಳ ಕ್ರಿಯೆಗಳಲ್ಲೂ ಜಾಗರೂಕರಾಗಿದ್ದಷ್ಟೂ ಹಿತಕರವು. ಇತರ ದಿನಗಳಿಗಿಂತ ವಾರಾಂತ್ಯದ ಮೂರು ದಿನಗಳು ಉತ್ತಮವಿರುವ ಪ್ರಯುಕ್ತ ಕಾರ್ಯಜಯ, ಧನಲಾಭ, ಸ್ತ್ರೀಸುಖ ಇತ್ಯಾದಿಗಳು ಈ ದಿನಗಳಲ್ಲೇ ಆಗಲಿವೆ.

ಧನುರಾಶಿ—

ಕೆಲವು ಕಾರ್ಯಗಳಲ್ಲಿ ನಿಮ್ಮ ಮನೋರಥವು ಈಡೇರಲಿರುವುದು. ಮತ್ತು ಶತ್ರುಗಳ ಪೀಡೆಯು ನಿವೃತ್ತಿ ಹೊಂದುವುದು. ಒಂದೆರಡು ಕಾರ್ಯಗಳಲ್ಲಿ ನಿಮಗೆ ಪರಾಜಯ ವಾದರೂ ಅದರಿಂದ ಲಾಭವಾಗುವ ಪ್ರಯುಕ್ತ ಇದೊಂದು ನಿಮಗೆ ಸಂತೋಷದ ಘಟನೆಯಾಗಿರುವುದು. ಸ್ತ್ರೀ ಸುಖವು ನಿಮಗೆ ಆವ ಭಾಗದಲ್ಲೂ ಕಡಿಮೆಯಾಗದು. ಆದರೆ ಇತರರೊಡನೆ ಕಲಹವು ನಿಶ್ಚಿತವಾಗಿ ಆಗಲಿದೆಯೆಂಬುದನ್ನು ಮರೆಯದಿರಿ. ನಿಮ್ಮ ಚಿತ್ತಚಾಂಚಲ್ಯವು ಹಲವು ವಿಷಯಗಳಲ್ಲಿ ನಿಮ್ಮ ಸುಖನಾಶಕ್ಕೆ ಕಾರಣವಾಗುವುದು. ಶರೀರದಲ್ಲಿ ಒಂದಲ್ಲೊಂದು ರೂಪದಿಂದ ಅನಾರೋಗ್ಯವು ಕಂಡುಬರುವುದರಿಂದ ಚಿಂತೆ ತಪ್ಪದು. ತಾ. 19, 20 ಈ ದಿನಗಳನ್ನು ಬಿಟ್ಟು ಇತರ ದಿನಗಳಲ್ಲಿ ಧನವ್ಯಯ, ಮಾನಹಾನಿ, ಕಾರ್ಯವಿಘ್ನ, ಆಪ್ತರಲ್ಲಿ ಬಂಧುಗಳಲ್ಲಿ ಮನಃಕ್ಲೇಶ, ಇತ್ಯಾದಿ ಶೋಕದಾಯಕಗಳಾದ ಅನರ್ಥಪರಂಪರೆಗಳು ಸಂಭವಿಸಲಿವೆ.

ಮಕರರಾಶಿ—

ಅದೃಷ್ಟವೂ ಪ್ರಯತ್ನವೂ ಪರಸ್ಪರ ಒಂದನ್ನೊಂದು ಆಶ್ರಯಿಸಿಕೊಂಡಿರುವವು. ಈ ವಾರದಲ್ಲಿ ನಿಮ್ಮ ಅದೃಷ್ಟವು ಅತ್ಯುತ್ತಮ ಪರಿಸ್ಥಿತಿಗೆ ಬಂದಿರುವುದು. ಆದ ಕಾರಣ ನೀವು ಕೂಡ ತಕ್ಕ ಪ್ರಯತ್ನ ಮಾಡಿದಲ್ಲಿ ಅದರ ಫಲವನ್ನುಣ್ಣಲು ಶಕ್ತರಾದೀರೇ ಹೊರತು ಆಲಸ್ಯದಿಂದ ಕಾಲಕಳೆದಲ್ಲಿ ಪುಣ್ಯಕಾಲವು ಸಂಕಲ್ಪದಲ್ಲೇ ಹೋಯಿತು, ಎಂಬ ಗಾದೆಯಂತೆ ಆದೀತು. ಪ್ರತಿಯೊಂದು ವಿಷಯದಲ್ಲೂ ನಿಮಗೆ ಸಂಪೂರ್ಣ ಶುಭಚಿಹ್ನೆಗಳೇ ಇವೆ. ಯಾವ ವೃತ್ತಿಯವರೇ ಆಗಿರಲಿ, ಅವರು ತಮ್ಮ ಕಾರ್ಯದಿಂದ ತೃಪ್ತಿಗೊಳ್ಳುವರು. ಗೃಹಕಾರ್ಯತ್ರಯಗಳೊಂದೂ ಆತ್ಮಾಲದಲ್ಲಿ ನಿಮ್ಮನ್ನು ಪೀಡಿಸಲಾರವು. ಮನಸ್ಸಿನ ಶಾಂತಿಗೆ ಯಾರಿಂದಲೂ ಹಾನಿಯಿಲ್ಲವು. ತಾ. 19–20ಈ ಎರಡು ದಿನಗಳ ಮಟ್ಟಿಗೆ ಮಾತ್ರ ನಿಮ್ಮ ಶರೀರದಲ್ಲಿ ಸ್ವಲ್ಪ ಮಟ್ಟಿನ ಆಯಾಸ (ಉದರ ನೋವು) ಕಂಡುಬಂದೀತು. ಮತ್ತು ನಿಮ್ಮ ಇಚ್ಛೆಯ ಸ್ವತಃ ಕ್ರಮಿಸಿ ಹಣವೂ ಖರ್ಚಾಗುವುದು. ಅಲ್ಪ ನಿಮಿತ್ತದ ಕಲಹದಿಂದಾಗಿ ಮಾನಕ್ಕೆ ಸ್ವಲ್ಪ ಹಾನಿ ತಗಲುವ ಸಂಭವವೂ ಇದೆ.

ಕುಂಭರಾಶಿ—

ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯೆಂದಂತೆ ನಿಮ್ಮ ಪರಿಶ್ರಮಕ್ಕೆ ತಕ್ಕ ಪ್ರತಿಫಲದೊರೆಯುವುದು. ಇದರಲ್ಲಿ ನಿಮ್ಮ ಮಿತ್ರವರ್ಗದವರ ಸಹಾಯವು ಸ್ವಾತ್ಮಾರ್ಹವಾದುದು. ಇತರ ವಿಷಯಗಳೆಲ್ಲಾ ನಿಮಗೆ ವಿಪರೀತವಾಗಿವೆ. ಆದರೂ ನೀವು ಧರ್ಮದಲ್ಲಿ ಶ್ರದ್ಧೆಯಿಟ್ಟು ಸದಾಚಾರಿಗಳಾದರೆ ಹೆಚ್ಚಿನ ಹಾನಿಯಾಗದು. ಇಲ್ಲದಲ್ಲಿ ಕಾಲಾಂತರದಿಂದ ನಿಮ್ಮಲ್ಲಿ ಅನಾಚಾರಗಳು ಹೆಚ್ಚಿ ಅವಿವೇಕದಿಂದಾಗಿ ಸ್ವಾನಭ್ರಷ್ಟರಾಗಿ ಸರ್ವಜನರಲ್ಲಿ ಕಲಹಪ್ರಿಯ ಎಂಬ ಹೆಸರನ್ನು ಪಡೆವಿರಿ. ಇದರಿಂದ ನಿಮಗೆ ಎಲ್ಲಿಯೂ ಪ್ರವೇಶವಿಲ್ಲದಂತಾಗುವುದು. ಸಂಸಾರದಲ್ಲಿ ಆಪತ್ತುಗಳು ಮೇಲಿಂದ ಮೇಲಕ್ಕೆ ಬರುವವು. ಆಯಕ್ಕಿಂತ ವ್ಯಯವು ಅತಿರೇಕ ಹೆಚ್ಚುವುದು. ಆ ಕಾಲದಲ್ಲಿ ನಿಮಗೆ ಹಣದ ಬೆಲೆಯು ಅರಿವಾಗುವುದು. ಚಿರಸಂಗ್ರಹೀತವಾದ ಧನವೂ ನಾಶವಾಗುವುದು. ಇಷ್ಟೆಲ್ಲಾ ಚಿಂತೆಗೊಳಗಾದ ನಿಮ್ಮ ಶರೀರವು ಬಹಳ ಕೃಶವಾಗುವುದು. ಆದರೂ ತಾ. 10-20ರ ಮಟ್ಟಿಗೆ ಈ ದೋಷಗಳು ಸ್ವಲ್ಪ ಕಡಿಮೆಯಾದಾವು.

ಮೀನರಾಶಿ—

ಇದೋ ನಿಮ್ಮ ಅವನತಿಯ ಪರಾಕಾಷ್ಠತೆಯು ಈಗಾಗಲೇ ಬಂದಿರುವುದು. ಪ್ರಕೃತದಲ್ಲಿ ನಿಮ್ಮ ಪಾಲಿನ ದೈವವೆಂದರೆ ನಿಮ್ಮ ಪೂರ್ವಸಂಚಿತ ಕರ್ಮವಿಶೇಷವೇ ಹೊರತು ಮತ್ತಾವ ಗ್ರಹನೂ ಇಲ್ಲವೆಂದರೆ ನಿಮಗೆ ಆಶ್ಚರ್ಯಕರವಾಗಿ ತೋರಬಹುದು. ನಿಮ್ಮ ಭಾಗಕ್ಕೆ ಈ ವಾರವೇ ಇಲ್ಲವೆಂದಾಗಿದ್ದಲ್ಲಿ ಎಷ್ಟೋ ಲೇಸಿತ್ತೆಂದು ಹೇಳಬಹುದು. ಹೋದಲ್ಲಿ ಕಲಹ ಬಂದಲ್ಲಿ ಕಲಹವೆಂಬಂತೆ ಸರ್ವದಲ್ಲಿ ನಿಮಗೆ ನಿಷ್ಠುರವೇ ಉಂಟಾಗುವುದು. ಅಕಸ್ಮಾತ್ತಾಗಿ ಪ್ರಯಾಣ ಮಾಡಬೇಕಾದ ಸಂದರ್ಭವೊದಗಿ ಹೋಗಬಾರದವರಲ್ಲಿಗೆ ಹೋಗಬೇಕಾಗಬರುವುದು. ಇಲ್ಲಸಲ್ಲದ ಕಷ್ಟಗಳು ನಿಮ್ಮನ್ನು ಹುಡುಕಿಕೊಂಡು ಬಂದಂತೆ ಬರುವವು. ಎಲ್ಲಿ ಹೋದರೂ ಧನಧನ್ಯವೆಂದು ಬಾಯಿಬಿಡಬೇಕಾಗುವ ಪ್ರಕರಣ ಬರುವುದು. ಇದು ನಿಮ್ಮ ವೈರಿಗಳಿಗೆ ಅತ್ಯಂತ ಸಂತೋಷಕಾಲವಾಗಿ ಪರಿಣಮಿಸುವದು. ಅಲ್ಲಸಲ್ಲದ ಪೀಡೆಯನ್ನು ಕೊಡಲು ಅವರು ಎಳ್ಳಷ್ಟೂ ಅಂಜರು. ಶರೀರದಲ್ಲೂ ನಿಮಗೆ ಆರೋಗ್ಯದೊರೆಯದು. ಅಂತೂ ನಿಮಗೆ ಜೀವಮಾನದಲ್ಲಿ ಇಂತಹ ದಿನಗಳು ಸಂಭವಿಸುವುದು ಬಹಳ ಅಪೂರ್ವವೆಂದೇ ಹೇಳಬೇಕಾಗಿದೆ. ತಾ. 19, 20 ಈ ದಿನಗಳನ್ನು ನೀವು ಎಂದಿಗೂ ಮರೆಯರಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ „ „ 0-1—3
೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ „ 0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅಮೃತ. ಬೆಲೆ 0-4-0 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0—4—0

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ಹೆಂಡ್ತಿ—ನೋಡಿ, ನೀವು ಈಗ ಒಳ್ಳೇ ಮನಸ್ಥಿತಿಯಲ್ಲಿದ್ದೀರಿ. ಎಷ್ಟೋ ಸಮಯದಿಂದ ನನ್ನ ಅಂತಃಕರಣದಲ್ಲಿರುವ ಒಂದು ಸಂಗ್ತಿಯನ್ನು ನಿಮ್ಮಲ್ಲಿ ನಿವೇದನೆ ಮಾಡಿಕೊಳ್ಳಲಿಕ್ಕೆ ಇದು ಸುಸಂದರ್ಭ-ಹೇಳಿ ಬಿಡಲಾ? ಬೇಜಾರನಾಗದಷ್ಟೆ?

ಗಂಡ—ಏನೂ ಬೇಜಾರವಿಲ್ಲ—ಹೇಳು.

ಹೆಂಡ್ತಿ—ಮತ್ತೇನಿಲ್ಲ, ಒಮ್ಮೊಮ್ಮೆ ನೀವು ನನಗೆ ಕಂಡಾಬಟ್ಟೆ ಗದರಿಸಿ ಬಿಡುತ್ತೀರಿ. ಏನು ವಿದ್ಯಮಾನ, ಏನು ಸಂಗ್ತಿಯೆಂಬ ವಿಚಾರವನ್ನು ಗೋಚರಕ್ಕೆ ತೆಗೆದುಕೊಳ್ಳದೆ ಅನಾವಶ್ಯಕವಾಗಿ ನನ್ನ ಮೇಲೆ ರೇಗುತ್ತೀರಿ, ಬೈಯುತ್ತೀರಿ, ಪೆಟ್ಟು ಹೊಡೆಯಲಿಕ್ಕೆ ಬರುತ್ತೀರಿ. ನಾನೇನೋ ಮರುಮಾತಾಡದೆ ಸುಮ್ಮನಿದ್ದು ಬಿಡುತ್ತೇನೆನ್ನಿ. ಎರಡು ದೃಷ್ಟಿಯಿಂದ ನಾನು ಅವನ್ನೆಲ್ಲ ತಾಳಿಕೊಳ್ಳುತ್ತೇನೆ ಒಂದು ಪತಿವ್ರತಾಸ್ತ್ರೀಧರ್ಮದ ದೃಷ್ಟಿಯಿಂದ, ಎರಡನೇದಾಗಿ ನಾವು ಪ್ರತ್ಯುತ್ತರಕೊಟ್ಟರೆ ಜಗಳವುಂಟಾಗಿ ಮನೆಯಲ್ಲಿ ಶಾಂತಿಯು ನೆಲೆಸಲಾಗದೆಂದು ಹೀಗೆ ನೀವು ವರ್ತಿಸುವುದು ತಪ್ಪು ಎಂದು ನಿಮಗೆ ತಿಳಿಯುವುದಿಲ್ಲವೇ?

ಗಂಡ—ಹೌದು, ನಿಜವಾಗಿಯೂ ತಪ್ಪು. ಆದರೆ, ನೋಡು ನಾವು ಹೊರಗೆ ಹೋಗುವವರು; ಜೀವನ ಸಂಗ್ರಾಮವನ್ನು ಹೂಡುವವರು.—ಹೊರಗಿನ ಲೋಕದಲ್ಲಿ ಅನೇಕ ವಿದ್ಯಮಾನಗಳು ಬಂದು ಬಿಡುತ್ತವೆ. ಅನೇಕ ವೇಳೆ ನಮ್ಮ ಮನಸ್ಸನ್ನು ಕಳವಳಗೊಳಿಸುತ್ತವೆ. ಆ ಬೇಜಾರದಿಂದ ಮನೆಗೆ ಬಂದಾಗ ಲೋಕದ ಮೇಲಿನ ಸಿಟ್ಟೆಲ್ಲ ಮನೆಮೇಲೆ ಬೀಳುತ್ತೆ. ಈ ಕಾರಣದಿಂದ ನಿನ್ನ ಮೇಲೆ ರೇಗಿ ಬೀಳಬಹುದು—ಆದರೆ ನೀನು ಬಹಳ ಚಾತುರ್ಯವನ್ನು ತೋರಿಸಬೇಕು—ಸ್ತ್ರೀಯರಲ್ಲಿ ತುಂಬಾ ವ್ಯವಹಾರಜ್ಞಾನ, ವಿವೇಕ ಇರತಕ್ಕದ್ದು ನೋಡು, ನನಗೆ ನನ್ನ ಮಿತ್ರ ಗೋವಿಂದರಾಯರು ಅವರ ಗೆಳೆಯ ರಂಗರಾಯರ ವಿಷಯ ಕೆಲವು ಸಂಗತಿಗಳನ್ನು ಹೇಳುತ್ತಿದ್ದರು. ರಂಗರಾಯರು ದೊಡ್ಡ ಸರಕಾರಿ ಹುದ್ದೇದಾರರು. ಅವರಿಗೆ ಕೆಲಸದ ರಗಳೆಯು ವಿಪರೀತವಾದರೆ ಅವರು ಬಿಸ್ಸಾರಾಗುತ್ತಾರಂತೆ, ಅವರ ಹೆಂಡತಿ ಬಹು ಚತುರೆಯಂತೆ—ಗಂಡನು ತಾಳುವ ಅವತಾರಕ್ಕೆ ತಕ್ಕ ಉಪಶಮನಮೂರ್ತಿಯಾಗಲು ಆ ಹೆಂಗಸಿಗೆ ತಿಳಿಯುತ್ತದಂತೆ. ಯಾವ ಪರಿಸ್ಥಿತಿಯಲ್ಲಿಯೂ ಸಂಸಾರ ನೌಕೆಯನ್ನು ಆ ಹೆಂಗಸು ನಡಿಸಿಕೊಂಡು ಹೋಗುತ್ತದಂತೆ. ಇವರೇ ಗೃಹಿಣಿಯರೆಂದರೆ—ಅಲ್ಲದೆ ಇದಕ್ಕೆ ವಿರೋಧವಾದ ಮತ್ತೊಂದು ಚಿತ್ರವನ್ನೂ ಗೋವಿಂದರಾಯರು ಬಣ್ಣಿಸಿದ್ದರು—ಈ ಎರಡು ಚಿತ್ರಗಳನ್ನು ನೀನು ಸರಿಹೋಲಿಸಿ ನೋಡು.

ಹೆಂಡ್ತಿ—ಅದೇನ್ರೀ-ಹೇಳಿ ನೋಡುವ.

ಗಂಡ—ಅವರು ಹೇಳುತ್ತಾರೆ—ಅವರ ಭಾವನ ಹೆಂಡ್ತಿಗೆ ವಿವೇಕ, ವಿಚಾರ, ನಾಳಿನ ಯೋಚನೆ ಯಾವುದೂ ಇಲ್ಲವಂತೆ. ಆವಳ ಗಂಡ ಬೊಬ್ಬೆ ಹೊಡೆಯುತ್ತಾರಂತೆ—ಎಷ್ಟು ಸಂಪಾದನೆ ಮಾಡಿದರೂ—ಅಂದರೆ ಸಂಪಾದನೆ ಸಾಧಾರಣ ಮುನ್ನೂರು ನಾನ್ನೂರು ರೂಪಾಯಿ ಮಾಡುತ್ತಾರೆ—ಬೇರೆ ಬೇರೆ ತರದ ವೈವಾಟಗಳುಂಟು ಅವರಿಗೆ—ಎಷ್ಟು ಮಾಡಿದರೂ ಆ ಹೆಂಗಸಿಗೆ ತೃಪ್ತಿಯಿಲ್ಲವಂತೆ. ಆ ಗಂಡನನ್ನು ತುಂಬಾ ಬೇಜಾರಪಡಿಸುತ್ತದಂತೆ. ಅವರು ಹೇಳುತ್ತಾರಂತೆ ... ಶ್ರರ ಹತ್ತಿರ, ಭಾವ, ಹೊ

ದಾನ ಪ್ರತಿದಾನವೇ ಜೀವನದ ನೀತಿ

LIFE IS ADJUSTMENT

(ಲೇಖಕರು:—ಶ್ರೀ ಬಿ. ಶ್ಯಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ., ಉಡುಪಿ.)

Adjustment is the secret of life. This great art is known only to a few. Even those few who know fail, when it comes to action. Knowing is one thing; acting is another. Hence the common saying that an ounce of practice is more than a ton of theory Many people condemn life. There is nothing wrong with life; there is everything wrong in our attitude towrads it. No doubt, "Life is full of risks, failures, difficulties and disappointments. We have to act with men of different opinions, contrary tastes and dispositions, some good, some bad, others indifferent. We have to agree with some, differ from others. We have to bear and forbear. We have to face life calmly and reconcile ourselves to much that is disagreeable. For this sweetness of mind and heart is necessary to bring concord out of the discord of life, to get harmony out of the jarring notes of this world and make our own lives and the lives of others harmonious. The life of the world is full of diversities. Out of them we have to evolve unity, which makes up for strength. It is the life in the family that prompts this unity amidst diversities. It is in the home that we first and best learn how to give and take, that is how to live by mutual toleration." With many to take is not to give—rather it is all 'take' and no 'give.' Such people should discard all illusion about them. They are dangerous to society Without contributing anything to the general welfare, they want to enjoy the best of life. For a time by luck and fraud they apparently succeed but miserably fail at the end-for fail they should. The laws of life are hard. She is a stern mistress. You may for a time camouflage your black art as a good art and get the applause of some people and be idolised and lionised by them But when life applies the brake, down you go and the idol of to-day will become the bogy of tomorrow. **So adjust yourself and play the game with life—for no man can cheat life**

ರಗಿನ ಪೆಟ್ಟು ನಿಮಗೂ ಗೊತ್ತುಂಟಲ್ಲ ಎಷ್ಟು ಕಷ್ಟವೆಂದು—ಸಂಪಾದನೆಯೆಂದರೆ ಸುಲಭವಾ-ಇದಕ್ಕಿಂತಲೂ ಮನೆಯೊಳಗಿನ ಪೆಟ್ಟು ಜೋರಪ್ಪಾ—ಬಚಾವು ಇಲ್ಲ—ಎಲ್ಲ ಯಾವರೂ ಓಡಿಬಿಡುವನಾ ಎಂದು ಕಾಣುತ್ತದೆ' ಅಂತ

ಹೆಂಡ್ತಿ—ಅಂದರೆ ಎಂಥಾದ್ದು—ಅದೇನು ಆ ಹೆಂಗಸು ರಾಕ್ಷಸಿಯೋ, ಗಂಡನನ್ನು ತಿನ್ನಲಿಕ್ಕೆ ಬರುತ್ತಾಳೆಯೋ—ಏನು ಹೇಳುತ್ತೀರಿ ನೀವು?

ಗಂಡ—ರಾಕ್ಷಸಿಯಾದರೂ ಚಿಂತೆಯಿದ್ದಿಲ್ಲ.

ಹೆಂಡ್ತಿ—ಹಾಗಂದರೆ?

ಗಂಡ—ರಾಕ್ಷಸಿ ಹೆಂಡತಿಯಾದರೆ ಒಮ್ಮೆಯೇ ನುಂಗಿ ಬಿಡುತ್ತಾಳೆ—ಮತ್ತೆ ರಗಳೆಯಿಲ್ಲ—ಈ ಹೆಂಗಸು ದಿನದಿನ ಹೀಡಿಸಿ ಹೀಡಿಸಿ ರಕ್ತ ಹಿಂಡುತ್ತಾಳಂತೆ. ಸಾಯಲಿಕ್ಕೂ ಇಲ್ಲ. ಬಾಳಲಿಕ್ಕೂ ಇಲ್ಲ!

ಹೆಂಡ್ತಿ—ಅಂದರೆ ಅದು ಹ್ಯಾಗೆ?

ಗಂಡ—ಕೇಳು, ಆ ಹೆಂಗಸಿಗೆ ನೋಡಿ ನೋಡಿದ್ದು ಆಗಬೇಕು—ಪ್ರತಿದಿವಸ ಸಿನೆಮಕ್ಕೆ ಹೋಗಬೇಕಂತೆ—ಕಂಡ ಕಂಡ ಸೀರೆ ಬೇಕು—ಆಭರಣ ಬೇಕು—ಹೊಸ ಹೊಸ ನಮೂನೆ ಬಂದ ಹಾಗೆ ಆಭರಣಗಳನ್ನು ತಿರುತಿರುಗಿಸಿ ಕರಗಿಸಿ, ಕರಗಿಸಿ ಹೊಸದು ಮಾಡಬೇಕು—ದೊಡ್ಡ ದೊಡ್ಡವರ ವಿಷಯ ಮಾತಾಡುವುದು—ಅವರ ಹಾಗೆ ಆಗಬೇಕೆಂಬುದು—ಇಡೀ ದಿವಸ ಕರಕರೆ ಮಾಡುವುದು—ಎಲ್ಲಿ ಹೋಗಿ ಯಾರ ಮನೆಯಲ್ಲಿ ಯಾವುದೊಂದು ನಾಜೂಕಿನ ವಸ್ತುವನ್ನು ಕಂಡರೂ ಅಂಥಹದನ್ನು ಎಳ ತಾಸುಗಳೊಳಗೆ ತನ್ನ ಮನೆಗೂ ಗಂಡ ತಂದು ಹಾಕಬೇಕು—ಇಲ್ಲದಿದ್ದರೆ ಊಟಕ್ಕೆ ನೊನ್ನೆ—ಈಗ ಮಕ್ಕಳಿಗೆಲ್ಲ ಎಪ್ಪದ ಜಂಜೋಳಿ ಪಕ್ಕದ ಬಳಿ ಆಗಬೇಕೆಂದು ಹಠವಂತೆ—ದೊಡ್ಡ ಹುಡುಗಿಗೆ ಈಗ ೧೬ನೆ ವರ್ಷ—ಅವಳಿಗೊಬ್ಬ ಇಂಗ್ಲೀಷ್ ಕಲಿತ ಡಿಗ್ರಿಯ ಗಂಡನನ್ನು ನಿಶ್ಚಯಮಾಡಬೇಕಂತ ಹಠವಂತೆ—ಗಂಟೆ ಗಂಟೆಗೂ ಮಂತ್ರ ಅದೇ ಅಂತೆ. ಪಾಪ, ಶಕ್ತಿ ಮೀರಿ ಕುಟುಂಬದ ಸೇವೆ ಮಾಡುತ್ತಾರೆ ಆದರೆ ಎಷ್ಟು ಮಾಡಿದರೂ ಆ ಹೆಂಗಸಿನ ಹರಟೆಗೆ ಅಂತ್ಯವಿಲ್ಲವಂತೆ!—ಹಾಗೆ ನೀನು ಮಾಡಬೇಡ—ನೋಡು, ನಿನಗೆ ಹೆಂಗಸರಿಗೆ ಗಂಡಂದಿರ ಸುಖಕಷ್ಟ ತಿಳಿಯದಿದ್ದರೆ ಲೋಕ ನಡಿದೀತೆ? ಒಬ್ಬ ಮಾಡಿದ ಹಾಗೆ ಮತ್ತೊಬ್ಬನಿಗೆ ಮಾಡಲಿಕ್ಕೆ ಸಾಧ್ಯವಿತ್ತೆ? ಯೋಚಿಸಿ ನೋಡು, ಮದ್ರಾಸಿನಲ್ಲಿ ನಿನ್ನ ಅಣ್ಣನ ಭಾವ ವಕಾಲತು ಮಾಡಿಕೊಂಡು ಇದ್ದಾರಲ್ಲಾ? ಅವರಿಗೆ ತಿಂಗಳಿಗೆ ಹತ್ತು ಸಾವಿರ ರೂಪಾಯಿ ಸಂಪಾದನೆ ಆಗುತ್ತದೆ—ಅವರು ಕಾರಿನಲ್ಲಿ ತಿರುಗಾಡುತ್ತಾರೆ—ಅವರ ಹೆಂಡ್ತಿಗೆ ವಜ್ರದ ಬೆಂಡೋಲೆ—ಜರಿಸೀರೆ ಕೈಗೊಂದು ಕಾಲಿಗೊಂದು ಜನವುಂಟೆಂದು ನಾನು ಸಹಾ ಹಾಗೆ ಮಾಡಬೇಕೆಂತ ನೀನು ಹಠ ಹಿಡಿದರೆ ನಾನೇನು ಮಾಡುವುದೇ? ಮದ್ರಾಸಿಗೂ, ಮಂಗ್ಳೂರಿಗೂ ವ್ಯತ್ಯಾಸವಿಲ್ಲವಾ? ಅವರವರ ವಿದ್ಯಮಾನವನ್ನು ನೋಡಬೇಕಲ್ಲವಾ? ಹೆಂಗಸರಿಗೆ ಇಷ್ಟು ತಲೆಯಿಲ್ಲದಿದ್ದರೆ ಗಂಡಸರು ಇನ್ನು ಮದುವೆ ಮಾಡಿಕೊಳ್ಳುವುದೇ ತಪ್ಪು ನಾವು ಮೇಲೆಯೇ ನೋಡಲಿಕ್ಕೆ ಕೂಡದು—ಕೆಳಗೂ ನೋಡಲಿಕ್ಕೆ ಕಲಿಯಬೇಕು—ನೋಡು, ನೀನು ಪಕ್ಕದ—ಅಕ್ಕನ ಹಾಗೆ ಆಸ್ತಿ, ಮನೆ, ಅದು, ಇದು ಆಗಬೇಕೆಂದರೆ ನಾನು ಏನು ಗುಂಡಿಗೆ ಹಾರುವುದೇ? ನಮ್ಮ ಸ್ಥಿತಿಗೆ ತಕ್ಕಂತೆ ನಾವು ಮಾಡುವುದಲ್ಲವಾ? ನೋಡು, ನಾವು ಬೇರೊಬ್ಬರನ್ನು ಮೆಚ್ಚುವುದು ಬಿಡಬೇಕು—ನಮ್ಮನ್ನೇ ನಾವು ಮೆಚ್ಚಿಕೊಳ್ಳಬೇಕು—

ಹೆಂಡ್ತಿ—ಅದೆಲ್ಲ ಸರಿ. ನಿಮ್ಮ ಹತ್ತಿರ ಕತೆ ತುಂಬಾ ಉಂಟಪ್ಪಾ—ಆದರೆ ಅವೆಲ್ಲ ನಿಮ್ಮ ಗಂಡಸರ ದೃಷ್ಟಿಗೆ ತೆಂದು ಬಂದ ಕರುಣಾಜನಕ ಕಥಾವಳಿಗಳು ನಮ್ಮ ಹೆಂಗಸರ ದೃಷ್ಟಿಯಿಂದ ನೋಡಿರುವ ಕತೆಗಳೂ ಚಿತ್ರಗಳೂ ಎಷ್ಟೋ ಇವೆ. ಅಂಥಹದೊಂದನ್ನು ನಮೂನೆಗಾಗಿ ಹೇಳಲಾ?

ಗಂಡ—ಹೇಳು, ಒಂದಲ್ಲ—ಮೂರು ಹೇಳು—ಎರಡು ದೃಷ್ಟಿಯಿಂದಲೂ ನೋಡೋಣ

ಹೆಂಡ್ತಿ—ನಮ್ಮ ದಾಯಮ್ಮ ಹೇಳುತ್ತಾರೆ—ಅವರು ಇಲ್ಲಿ ಪರ್ವವಾಗಿ ಬರುವದಕ್ಕಿಂತ ಮುಂಚೆ ಹಳೇಪೂರಿನಲ್ಲಿ ಇದ್ದರಂತೆ—ಅಲ್ಲಿ ಅವರ ಬಿಡಾರದ ಹತ್ತಿರ ಯಾರೋ ಗಂಡಹೆಂಡಂದಿರು ಬಿಡಾರಮಾಡಿಕೊಂಡಿದ್ದರಂತೆ—ಅವರಿಗೆ ತಾಲೂಕಿನಲ್ಲಿ ಏನೋ ಕೆಲಸ—ಅದೇನೋ—ನನಗೆ ಅವರ ಹೆಸರು ಸಹ ಬರುವುದಿಲ್ಲ—ಗಂಡ ದಿವಸಾಗಲೂ ಹೆಂಡ್ತಿಗೆ ಹೊಡೆಯುವುದಂತೆ—ಆ ಗಂಡಸಿಗೆ ಕುಡಿಯುವ ಅಭ್ಯಾಸ ಬಹು ವಿಪರೀತವಂತೆ—ಮನೆಯಲ್ಲಿ ದುಡ್ಡು ಇಲ್ಲದಿದ್ದರೂ ಆ ಹೆಂಗಸು ನೆರೆಕರೆಗೆ ಹೋಗಿ ದುಡ್ಡು ಕಡತಂದು ಒಂದು ಡ್ರಿಂಕ್ ಆದರೂ ತಂದು ಇಟ್ಟಿತೂ ಇಟ್ಟಿತು, ಇಲ್ಲವಾ

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ನೋವುಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮುತ್ರಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ, ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಆಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯಂತ ಯುಕ್ತವಾಗಿದೆ. ಕ್ರಯಃ—100 ಮಾತ್ರೆಗಳಿಗೆ ರೂ 1–5–0, 500ಕ್ಕೆ ರೂ. 6–0–0, ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ



ಆಮಲಕೀ ತೈಲ

(ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0.

2 ಔನ್ಸಿನ ಸೀಸೆ ಒಂದರ 0—6—0

ನವ್ಯ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ. ಕಟೀಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ. ಭಾರತ

ಜರಿ ಬೆನ್ನಿಗೆ ಹಾಳೆಯೇ ಕಟ್ಟಿಕೊಳ್ಳಬೇಕಂತೆ- ಉಡಲಿಕ್ಕೆ ವಸ್ತ್ರವಿಲ್ಲದಿದ್ದರೂ, ತೊಡಲಿಕ್ಕೆ ಬಳೆಯಿಲ್ಲದಿದ್ದರೂ, ಗಂಡನ ಕುಡಿಯುವ ಸ್ವಭಾವದಿಂದ ಏನೂ ಸುಖವಿಲ್ಲದಿದ್ದರೂ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಇನ್ನೂ ಗಂಡನ ಭಕ್ತಿಯನ್ನು ಮಾಡುತ್ತವಂತೆ- ನೀವು ವಿವೇಕಗೆಟ್ಟ ಹೆಂಗಸರ ಕತೆ ಹೇಳುವಾಗ, ಅದಕ್ಕಿಂತಲೂ ಹೆಚ್ಚಿನ ಅತ್ಯಾಚಾರದಲ್ಲಿರುವ ಗಂಡಸರಿಂಬ ಈ ಎರಡು ಕಾಲಿನ ಕ್ರೂರ ಮೃಗಗಳಿಗೇನು ಹೇಳುತ್ತೀರಿ? ಇದು ನ್ಯಾಯವೇ?

ಗಂಡ—ಇದನ್ನು ಯಾವ ಮೂರ್ಖನೂ ನ್ಯಾಯವೆನ್ನನು. ಇಂಥಾ ಸಂಗತಿಗಳು ಉಂಟೆಂಬುದು ಖರೆ-ಆದೂ ಸಹಾ ಹೋಗಲೇ ಬೇಕು-ಆಗ ಲೋಕಕ್ಕೆ ಕಲ್ಯಾಣವಾದೀತು-ನೋಡು ದಾನ ಪ್ರತಿದಾನವೇ ಜೀವನದ ನೀತಿ-ಎಲ್ಲಿ ಗಂಡ ಹೆಂಡತಿಯರಲ್ಲಾಗಲೀ ಇನ್ನು ಇತರರಲ್ಲಿಯಾಗಲೀ ಈ ಪರಸ್ಪರ ತ್ಯಾಗ ಪ್ರತಿತ್ಯಾಗದ ಮನೋವೃತ್ತಿಯುಂಟೋ (The spirit of give and take) ಅಲ್ಲಿ ಜೀವನವು ಸುಗಮವಾಗಿ ಸಾಗುವುದ. ಗಂಡನನ್ನು ಹೆಂಗಸೂ ಕರಕರಮಾಡಬಾರದು-ಹೆಂಗಸನ್ನು ಗಂಡನೂ ಸೂರೆ ಸುಲಿಗೆ ಮಾಡಬಾರದು-ಹೀಗೆ ಮಾಡುವ ಮೂರ್ಖ ಹೆಂಗಸರೂ ಗಂಡಸರೂ ಕಡಿಮೆಯಾದಷ್ಟು ಲೋಕದಲ್ಲಿ ಸುಖವು ಹೆಚ್ಚುವುದು-ನೋಡು, ನಮ್ಮಲ್ಲಿ ಕೆಲವರಿಗೆ ತೆಕ್ಕೊಳ್ಳಲಿಕ್ಕೆ ಮಾತ್ರ ಗೊತ್ತಿಲ್ಲದೆ ಕೊಡಲಿಕ್ಕೆ ಗೊತ್ತೇ ಇಲ್ಲ-ಸುಖವು ಅಂತರಂಗವಾದುದು. ಹೊರಗೆಲ್ಲಿಯೂ ದೊರಕದು.—ತುಷ್ಟಿಯಿಂದಲೇ ಸುಖ--ಒಬ್ಬರನ್ನೊಬ್ಬರು ಆದರಿಸಿಕೊಂಡು ಹೋಗುವುದರಲ್ಲಿ ಸುಖ-ನೋಡು ಜೀವನದ ಪ್ರತಿಯೊಂದು ಹೆಜ್ಜೆಯಲ್ಲಿಯೂ ಈ ದಾನ ಪ್ರತಿದಾನವು ಇರಬೇಕು-ಬನ್ನಾಭಿಪ್ರಾಯವಿದ್ದಲ್ಲಿ ಸಮಯ ಸಂದರ್ಭ ನೋಡಿ ಪರಿಸ್ಥಿತಿಯು ವಿಷಮತೆಗೆ ಬರಲಾಗದಂತಹ ರೀತಿನೀತಿಯಿಂದ ತಮ್ಮ ವಿಚಾರ ವಿನಿಮಯಮಾಡಿಕೊಳ್ಳಬೇಕು. ತರ್ಕಮಾಡುವುದರಲ್ಲಿಯೂ-ತನ್ನ ಸ್ಥಿತಿಯನ್ನು ನೋಡಿ ಹೆಜ್ಜೆಯಿಡುವುದರಲ್ಲಿಯೂ, ಗಂಡನ ಪರಿಸ್ಥಿತಿಯನ್ನು ತಿಳಿಯುವ ಹೆಂಡತಿ ಸಾಧ್ವಿಯಲ್ಲ-ಹೆಂಡತಿ ಮತ್ತು ಸಂಸಾರದ ಗೊಡವೆಯಿಲ್ಲದೆ ತನ್ನ ದುರ್ವ್ಯಸನದ ದುಂದುಗಾರಿಕೆಗಳಿಗಾಗಿ ಸುಲಿಯುವ ಗಂಡನು ಮಾರಿ ಹೆಂಡತಿ ತಂದಿರುವ ಚಿನ್ನಾಭರಣಗಳನ್ನು ತೆಗೆದು ಲತ್ತೆಯಾಡುವವ ಮೂರ್ಖ, ಹೆಂಡಕುಡಿಯುವವ ಭೂಮಿಗೆ ಭಾರ-ಹೆಂಡತಿಯ ತ್ಯಾಗಕ್ಕೆ ತಕ್ಕ ಗಂಡನ ಪ್ರತಿತ್ಯಾಗವೂ ಗಂಡನ ಆತ್ಮಯಜ್ಞಕ್ಕೆ ತಕ್ಕ ಹೆಂಡತಿಯ ಪ್ರತಿಯಜ್ಞವೂ ಇರಬೇಕು. ಇದೇ ಜೀವನದ ನೀತಿ--ಇನ್ನು ಮುಂದೆ ನನಗೆ ಸಿಟ್ಟು ಬಂದಾಗ ನೀನೂ ರೇಗಿಕೊಳ್ಳಬೇಡ-ಮುಂದಿನ ಹಾಗೆ ಸಮಾಧಾನದಲ್ಲಿಯೇ ಇದ್ದು ನನ್ನನ್ನು ಶಾಂತಮಾಡು-ನಾನು ಎಷ್ಟು ಬೈದರೂ ನೀನು ಸುಮ್ಮಗಿದ್ದು ಬಿಡು. ಸ್ವೈರಣೆಯಂತಹ ವಿಜಯಾಸ್ತ್ರ ಬೇರೊಂದಿಲ್ಲ.

ಹೆಂಡ್ತಿ—ಹಾಗೆಯೇ ನನಗೆಲ್ಲಾದರೂ ಗರ್ವ ಬಂದಾಗ ನೀವೂ ಸುಮ್ಮಗಿರುವಿರಾ? ದಾನಕ್ಕೆ ಪ್ರತಿದಾನ ಮಾಡುವಿರಾ?

ಬರುವ ಲೇಖನ:—"ಸಮಯದ ಬೆಲೆ"

ನಮ್ಮ ಕಿನ್ನಿಗೋಳಿ ಏಜಂಟರು—
ಶ್ರೀ. ಎಂ. ದೊಡ್ಡಣ್ಣ ಶೆಟ್ಟಿ
ಪ್ರೊ. ಭಕ್ತೋದ್ಧಾರ ಸ್ವದೇಶಿ ಸ್ಟೋರ್ಸ್

. ವಾ ರ್ತಾ ವಾ ಹಿ ನಿ .

ಬೊಂಬಾಯಿ ಸರಕಾರದ ಪ್ರೆಸ್ ಆಕ್ಟ್ ಪ್ರಯೋಗ

ಹಿಂದೂಮುಸ್ಲಿಮರೊಳಗೆ ದ್ವೇಷದ ಕಿಚ್ಚು ಹರಡುವಂತಹ ವಿಷಯಗಳನ್ನು ಮುದ್ರಿಸಲೂ ಪ್ರಕಟಿಸಲೂ ಬಾರದೆಂದು ಮಂತ್ರಿ ಪ್ರಧಾನರು ಎಚ್ಚರಿಸಿದ್ದರೂ ಗಮನಕೊಡದೆ ಇದ್ದುದಕ್ಕಾಗಿ ೧೯೩೧ನೇ ಇಸವಿಯ ಪ್ರೆಸ್ ಆಕ್ಟಿನ ಎಮರ್ಜನ್ಸೀ ಅಧಿಕಾರಕ್ಕನುಸಾರವಾಗಿ ಈ ಕೆಳಗಿನ ಪತ್ರಿಕೆಗಳೂ ಮುದ್ರಣಾಲಯಗಳೂ ಭದ್ರತೆಯ ಮೊಬಲಗನ್ನು ಕೇವಣಾತಿ ಇಡತಕ್ಕದೆಂದು ಹುಕುಂ ಕೊಡಲಾಗಿದೆ—

ಶೋಲಾಪುರ-ಬಾರ್ಷೀ-ಅನ್ಸಾರ್ ಪತ್ರಿಕೆ ಮತ್ತು ಅನ್ಸಾರ್ ಮುದ್ರಣಾಲಯ, ಪೂನೆಯ ತ್ರಿಕಾಲ ಪತ್ರಿಕೆ ಮತ್ತು ತ್ರಿಕಾಲ ಮುದ್ರಣಾಲಯ. ಅಹ್ಮದಾಬಾದಿನ ರೋಜ್ಗಾರ್ ಪತ್ರಿಕೆ ಮತ್ತು ಫ್ಯಾನ್ಸಿಆರ್ಟ್ ಪ್ರಿಂಟಿಂಗ್ ಪ್ರೆಸ್ಸ್. ಶೋಲಾಪುರದ ಅಂಗಾರ್ ಪತ್ರಿಕೆ ಮತ್ತು ಕಲ್ಯಾಣ ಪವರ್ ಪ್ರಿಂಟಿಂಗ್ ಪ್ರೆಸ್ಸು.

ಹೈಸ್ಕೂಲುಗಳಲ್ಲೊಂದು ಡಾಕ್ಟರ್ ಉಪಾಧ್ಯಾಯರನ್ನು ನೇಮಿಸುವ ಯೋಜನೆ ಒರಿಸ್ಸಾ ಸರಕಾರದ ನಿರ್ಧಾರ.

ಪ್ರತಿಯೊಂದು ಹೈಸ್ಕೂಲುಗಳಲ್ಲಿ ಒಬ್ಬ ಗ್ರಾಜುವೇಟ ಉಪಾಧ್ಯಾಯನ ಬದಲಾಗಿ ಒಬ್ಬ ಎಲ್. ಎಮ್. ಪಿ. ಡಾಕ್ಟರ ಉಪಾಧ್ಯಾಯನನ್ನು ನೇಮಿಸಬೇಕೆಂದೂ ಆತನು ಅಧ್ಯಾಪಕತ್ವದ ಸಾಮಾನ್ಯ ಕರ್ತವ್ಯವನ್ನು ಇತರ ಉಪಾಧ್ಯಾಯರಂತೆಯೇ ನೆರವೇರಿಸುವುದಲ್ಲದೆ ವಿದ್ಯಾರ್ಥಿಗಳಲ್ಲಿ ಆರೋಗ್ಯ ಸಂರಕ್ಷಣೆ ರೋಗ ಪ್ರತಿಬಂಧನೆ ಇವುಗಳಿಗೆ ಸಹಕಾರಿಯಾಗುವ ಶೀಲಗುಣಗಳು ವಿಕಾಸವಾಗಿ ನೆಲೆಯಾಗುವಂತೆ ದುಡಿಯಬೇಕೆಂದೂ ಅಲ್ಲಿಯ ವಿದ್ಯಾಖಾತೆಯ ಡೈರೆಕ್ಟರರ ಸೂಚನೆ. ಅದನ್ನು ಸರಕಾರವು ಅಂಗೀಕರಿಸಿ ಆಚರಣೆಗೆ ತರುವ ನಿರ್ಧಾರಮಾಡಿದೆ.

ಪಂಜಾಬು ಸಾಹುಕಾರನ ಔದಾರ್ಯ, ರೂ ೫೫,೦೦೦ ದಾನ!

ನಿಖಿಳ ಭಾರತ ಗ್ರಾಮೋದ್ಧಾರ ಸಂಘದ ಕಾರ್ಯಕಲಾಪಗಳ ರೀತಿಯಲ್ಲಿಯೂ ಮಾರ್ಗ ಯೋಜನೆಯ ಹಾದಿಯಲ್ಲಿಯೂ ಹಳ್ಳಿಗಳ ಉನ್ನತಿಯನ್ನು ಸಾಧಿಸುವುದಕ್ಕೆ ಸಹಾಯಾರ್ಥವಾಗಿ ಮುಕುಂದ ಐಸರ್ನ್ ಎಂಡ್ ಸ್ಟೀಲ ಮಿಲ್ಸ್ ಲಿಮಿಟೆಡ್ ಎಂಬ ಕಬ್ಬಿಣ ಕಾರ್ಖಾನೆಯ ಸೇಟ್ ಮುಕುಂದಲಾಲ್ ಎಂಬ ಪಂಜಾಬೀ ಸಾಹುಕಾರರು ತನ್ನ ಹಳ್ಳಿಯ ಸಮೀಪ ಇಂತಹ ಕಾರ್ಯ ಸಾಧನೆಗಾಗಿ ವಿಸ್ತಾರವಾದ ಆಸ್ತಿಯನ್ನೂ ಕಟ್ಟೋಣಗಳನ್ನೂ (ಒಟ್ಟು ೫೫ಸಾವಿರ ಬೆಲೆಯುಳ್ಳ ಸೊತ್ತು ದಾನವಾಗಿ ಕೊಟ್ಟಿದ್ದಲ್ಲದೆ ಈ ಕಾರ್ಯದ ಜಯಶೀಲತೆಗೆ ಆವಶ್ಯಕವೆಂದೆನಿಸುವಷ್ಟು ಕಾಲ ತಿಂಗಳಿಗೆ ೧೫೦ರೂಪಾಯಿಯಂತೆ ವಂತಿಗೆಯನ್ನೂ ವಾಗ್ದಾನ ಮಾಡಿ ಆದರ ಸುವ್ಯವಸ್ಥೆ ಮತ್ತು ಕಾರ್ಯನಿರ್ವಾಹಕ್ಕಾಗಿ ಒಂದು ಟ್ರಸ್ಟನ್ನು ನಿರ್ಮಿಸಿರುವರು ಸೇಟ್ ಜಮ್ನಾಲಾಲ್ ಬಜಾಜ್. ಡಾ. ಗೋಪೀಚಂದ್ ಭಾರ್ಗವ, ಸೇಟ್ ಸುದರ್ಶನ್, ಸೇಟ್ ಜೈಪ್ರಕಾಶ್ ಮುಂತಾದವರು ಅದರ ಟ್ರಸ್ಟಿಗಳಾಗಿರುವರು.

ಸ್ಥಾಪನೆ] **ತೊದಲ್ನುಡಿ ಗ್ರಂಥಮಾಲೆ** [೧೯೩೦

ಸ್ಥಾಪಕರಿಗೆ ಚಂದಾ ರೂ ೫೦; ರಕ್ಷಕರಿಗೆ ರೂ ೨೫; ಆಶ್ರಯದಾತರಿಗೆ ರೂ. ೧೦; ಪೋಷಕರಿಗೆ ರೂ ೫

ಚಂದಾದಾರರು ಆರಂಭದಲ್ಲಿ ರೂ. ೧ ಪ್ರವೇಶ ಧನವಿತ್ತು ಗ್ರಂಥಮಾಲೆಯ ಎಲ್ಲ ಗ್ರಂಥಗಳನ್ನು ಪಡೆಯುವವರು ಇವರಿಗೆ ¾ಬೆಲೆಗೆ ಪುಸ್ತಕಗಳು ಕೊಡಲ್ಪಡುವವು

ಈ ವರೆಗೆ ಪ್ರಕಟವಾದ ಪುಸ್ತಕಗಳು

ಸ್ವತಂತ್ರ ಜೀವನೋಪಾಯ ೧—೨—೬, ನಾಡಕತೆಗಳು ೦—೬—೦, ಸಂಸಾರ ಪಿಶಾಚಿ ೦—೬—೦
ಕುಟಿಲನ ೦—೪—೦, ಮುಂದಿನ ದೇವರು ೦—೨—೦, ಕಾವ್ಯಸಾಮ್ರಾಜ್ಯ ೦—೧೨—೦
ಮಧುವನ ೧—೮—೦, ವ್ಯಭಿಚಾರಿಣಿ ಯಾರು? ೦—೮—೦, ದೇಶಭಕ್ತ ೦—೧೦—೦
ನಂದಾದೀಪ ೦—೬—೦, ಸನ್ಯಾಸಿಯ ಸೋಗಿನಲ್ಲಿ ೦—೮—೦,
ಹೆಂಡ್ತಿ ಗಂಡನಾದರೆ ೦—೪—೦, ಪುರುಷವಧು ೦—೪—೦.

ವಿ. ಪಿ. ರೂ. ೫ಕ್ಕೆ ಈ ಎಲ್ಲಾ ಪುಸ್ತಕಗಳನ್ನು ಫ್ರೀ ಡೆಲಿವರಿಯಾಗಿ ಕೊಡಲಾಗುವುದು

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.
ಮಿಕ್ಕ ವಿಚಾರಗಳಿಗೆ ಬರೆಯಿರಿ.

ಕಾರ್ಯದರ್ಶಿ, **ಕಿರಿಯರ ಪ್ರಪಂಚ, ಉಡುಪಿ.**

Transport & Car Owners

ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES ----- MANGALORE.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. I. A. 111/1939 in O. S. 142/1937

ಫಾದರ್ ಸ್ಟೈಫನ್ ಕ್ಲೆಮೆಂಟ ಲೂವಿಸ್
ಅರ್ಜಿದಾರ (**ವಾದಿ**)
ಮತ್ತು

1. ಫಾದರ್ ಪಿ. ಜಿ. ಕೋಶಿ
2. ,, ಕೆ ಕೆ ಕುರಿಯ ಕೋಶಿ
3. ,, ಕೆ. ಟಿ. ವರ್ಗೀಸ್
4. ಅಸಲ್ಕವಾಸ್

ಎದ್ರಿರು (**ಪ್ರತಿವಾದಿರು**)

ಸಿವಿಲ್ ಪ್ರೊಸೀಜರ್ ಕೋಡಿನ ಆರ್ಡರ್ 1 ರೂಲು 8ರ ಪ್ರಕಾರ ವಾದಿಕಡೆ ಅರ್ಜಿ

(1)ಉಡ್ಪಿತಾಲ್ಕ ಬಾರಂಬಳ್ಳಿ ಗ್ರಾಮದ ಬ್ರಹ್ಮಾವರ ಮಿಲಾಗ್ರಿ ಅಮ್ಮನವರ ಶಿರಿಯಾನ್ ಇಗರ್ಜಿಯು ಆದಿಯಿಂದಲೂ ಈ ವರೆಗೆ ಶಿರಿಯಾ (syria) ದೇಶದ ಅಂತಿಯೋಕ (Antioch) ದಲ್ಲಿರುವ ಪಾತ್ರಿಯಾರ್ಕರ (Patriach) ಅಧಿಕಾರಕ್ಕೆ ಒಳಪಟ್ಟದ್ದಾಗಿರುವುದರಿಂದಲೂ, ಸದರಿ ಅಂತಿಯೋಕದ ಪಾತ್ರಿಯಾರ್ಕರ ಏಕಮಾತ್ರ ಪ್ರತಿನಿಧಿಯಾದ ಮಲಬಾರಿನಲ್ಲಿರುವ ಮೆಟ್ರೊಪೊಲಿಟನ್ ಡೆಲಿಗೇಟರವರು (Delegate Metropolitan) ರಿವಾಜು ಪ್ರಕಾರ ವಾದಿಯನ್ನು ದಾವಾ ಇಗರ್ಜಿಗೆ ಪಾದ್ರಿ (Vicar)ಯನ್ನಾಗಿ ತಾ. 26-10 1938 ರಲ್ಲಿ ನೇಮಿಸಿರುವುದರಿಂದಲೂ, ದಾವಾ ಇಗರ್ಜಿಯಲ್ಲಿ "ಪಾದರಿತನ" ನಡೆಯಿಸುವ ಬಗ್ಗೆ 'to perform the duties and to exercise the powers of the office of the Vicar) ತನ್ನದೆಂದು ದೃಢಪಡಿಸಿ (declaration) ಕೊಡಿಸಬೇಕಾಗಿ ವಾದಿಯು ಸದರಿ ದಾವಾ ಮಾಡಿರುತ್ತಾನೆ.

(2) ಮತ್ತು ವಾದಿಯು ದಾವಾ ಇಗರ್ಜಿಯಲ್ಲಿ "ಪಾದರಿತನ"ದ ಯಾವತ್ತೂ ಕಾರ್ಯಕಲಾಪಗಳನ್ನು ಮಾಡುವಲ್ಲಿ, ಆ ಅಧಿಕಾರಗಳನ್ನು ಚಲಾಯಿಸುವಲ್ಲಿ, ಪ್ರತಿವಾದಿರಾಗಲಿ, ದಾವಾ ಇಗರ್ಜಿಯ ಕೂಡುಕಟ್ಟು (Parish)ನಿಂದ ಅಗಲಿಕೊಂಡು, ಅಂತಿಯೋಕದ ಪಾತ್ರಿಯಾರ್ಕರ ಸ್ವಾಮಿತ್ವವನ್ನೂ ಅಧಿಕಾರವನ್ನೂ ಒಪ್ಪಿಕೊಳ್ಳದೆ ಇದ್ದು ಸದ್ರಿ ಪಾತ್ರಿಯಾರ್ಕರಿಂದ ಮಾನ್ಯಮಾಡಲ್ಪಡದೆ ಇರುವ "ಕತೋಲಿಕೋಸ" (Catholicos)ಎಂದು ಹೇಳಿಕೊಳ್ಳುವ ಟ್ರಾವೆಂಕೋರಿನ ಬಿಶೋಪರಿಂದ ಅಭಿಷೇಕ ಹೊಂದಿದ 1ನೇಪ್ರತಿವಾದಿಯು ಗುರುತ್ವವನ್ನು ಅಂಗೀಕರಿಸುವುದರ ಮೂಲಕ ಸದರಿ ಅಂತಿಯೋಕದ ಪಾತ್ರಿಯಾರ್ಕರ ಸ್ವಾಮಿತ್ವವನ್ನು ನಿರಾಕರಿಸುವ ಯಾವತ್ತೂ 1ನೇ ಪ್ರತಿವಾದಿಯ ಅನುಯಾಯಿ (followers) ಗಳಾಗಲಿ, ಆತಂಕಿಸದಂತೆ ಪ್ರತಿವಾದಿರನ್ನೂ 1ನೇ ಪ್ರತಿವಾದಿಯ ಸದರಿ ವಿವಾದ ಅನುಯಾಯಿಗಳನ್ನೂ ಶಾಶ್ವತವಾದ ಅಜ್ಞೆ (Permanent injunction)ಯ ಮೂಲಕ ನಿರ್ಬಂಧಪಡಿಸಬೇಕಾಗಿಯೂ ವಾದಿಯು ಸದ್ರಿ ದಾವೆಯಲ್ಲಿ ನಿವೃತ್ತಿ ಕೇಳಿರುತ್ತಾನೆ.

(3)ಸದರಿ ದಾವೆಯಲ್ಲಿ4ನೇಪ್ರತಿವಾದಿಯನ್ನು 1ನೇ ಪ್ರತಿವಾದಿಯ ಸದರಿ ವಿವರದ ಯಾವತ್ತೂ ಅನುಯಾಯಿಗಳ ಪರವಾಗಿ ಈ ದಾವೆಯ ಕಕ್ಷಿಯಲ್ಲಿ ಸೇರಿಸಿಯದೆಯೆಂದೂ, ಸದರಿ ಅನುಯಾಯಿಗಳ ಪೈಕಿ ಯಾವತ್ತೂ ಜನರಿಗೆ ಈ ದಾವೆಯಲ್ಲಿ ಕಕ್ಷಿಗಾರರಾಗಿ ಬಂದು ಸೇರಿಕೊಳ್ಳಲಿಕ್ಕೆ ಹಕ್ಕಿರುವುದೆಂತಲೂ, ಸದರಿ ದಾವೆಯಲ್ಲಿ ಆಗುವ ಯಾವತ್ತು ತೀರ್ಮಾನಗಳು ಅದರ ಕಕ್ಷಿಗಾರರಲ್ಲದ 1ನೇ ಪ್ರತಿವಾದಿಯ ಯಾವತ್ತು ಅನುಯಾಯಿಗಳನ್ನು ಸಹಾ ಬದ್ಧಿಕರಿಸುವುದೆಂತಲೂ ಈ ಮೂಲಕ ಸಂಬಂಧಪಟ್ಟ ಎಲ್ಲಾ ಜನರಿಗೂ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗುತ್ತದೆ, ಸದರಿ ಅರ್ಜಿಯು ತಾ. 27-2-1939ರಲ್ಲು ಹಗಲು ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ತನಿಖೆಗೆ ಬರುತ್ತದೆ.

B. Vasudeva Rau.
Advocate for Petitioner.
Udipi, 11th February 1939.

ಪ್ರಾಮುಖ್ಯ ಪ್ರಕಟಣೆ
ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ
ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು, ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ. ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE
MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, *President & Manager.*
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!
K. R. K. SHET
Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ಎಮ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು, ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ
(ಸ್ವರ್ಣ, ಸಾಲಾಮಿಶ್ರಿ, ಕಸ್ತೂರಿ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು, ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ ಬಾಟ್ಲಿ 1ರ ರೂ. 2—8—0.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] # ಕೆನರಾ ಛಾಪಖಾನೆ [1920
(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟಿದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager,
Kanara Printing Works,
Hampankatte, **MANGALORE**

೧೯೩೯ ಫೆಬ್ರವರಿಯಲ್ಲಿ ಪ್ರಕಟವಾಗಲಿರುವ ಎರಡು ಹೊಸ ಪುಸ್ತಕಗಳು

ಕರಿ ನೀರು
ದೇ. ಭ. ಬ್ಯಾರಿಷ್ಟರ ಸಾವರಕರರಿಂದ ಬರೆಯಲ್ಪಟ್ಟ ರಮ್ಯ–ಭೀಷಣ ರೋಮಾಂಚಕರ ಪುಸ್ತಕದ ಕನ್ನಡ ಅನುವಾದ. ಸುಮಾರು ೪೦೦ ಪುಟ, ನ್ಯೂಸು ಕಾಗದ. ಬೆಲೆ ೨ ರೂಪಾಯಿ

ಪನ್ನೆ
ಮನೋಹರವಾದ ಐತಿಹಾಸಿಕ ನಾಟಕ ಸುಮಾರು ೮೦ ಪುಟ, ಬೆಲೆ ೬ ಆಣೆ ಶ್ರೀ. ಕೇ. ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ ಸೌಲಭ್ಯ. ಗ್ರಾಹಕರು ತ್ವರೆಮಾಡಿರಿ

ವಿಳಾಸ:—ಶ್ರೀ. ಕೇಷಾಚಲ ಪ್ರೆಸ್, ಪೊ ಜನಂದವನ (ಹಾವೇರಿ) ಧಾರವಾಡ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೪—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರಿಯುತ್ತವೆ.

ಯು ಪಿ ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಶೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್ ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು
ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ. [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,
ಸೋದೆ ಮಠದ ಲೇನು – – – ಉಡುಪಿ, ದ. ಕ.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

॥ ಶ್ರೀ ॥

ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ

ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ ! ಅಪೂರ್ವ ರಿಯಾಯತಿ !!

ತಾ. 3-2-1939ರಿಂದ 5-3-'39ರ ವರೆಗೆ ಮಾತ್ರ.

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ **ರಿಟರ್ನ್ ಟಿಕೇಟು**ಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇದೇ ಬರುವ ತಾರೀಕು 17—2—39ರಲ್ಲು ಶ್ರೀಧರ್ಮಸ್ಥಳದಲ್ಲಿ ಶ್ರೀಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದು ಹೋಗತಕ್ಕ ಯಾವತ್ತು ಯಾತ್ರಾರ್ಥಿಗಳಿಗೆ ನಮ್ಮ ವ್ಯಾನುಗಳ ಯಾವತ್ತು ಸ್ಟೇಶನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓% ರಿಯಾಯಿತಿಯಿಂದ ರಿಟರ್ನ ಟಿಕೇಟುಗಳನ್ನು ಕೊಡುವಂತೆ ಏರ್ಪಾಟು ಮಾಡಿರುವೆವು.

N. B. ಪ್ರಯಾಣವು ಮೇಲೆ ಸೂಚಿಸಿದ ವಾಯಿದೆಯೊಳಗೆ ಮುಗಿಯತಕ್ಕದಾಗಿದೆ

ಇಂತಹ ಅಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

Supply Agency Limited.

(BANKERS)

ESTD] **UDIPI** [1933

—o—

Authorised Capital	Rs.	**1,00,000**
Subscribed & Paid up	Rs.	**30,760**
Reserves	Rs.	**1,070**

DEPOSITS EXCEED

Rs. 20,000

RATE OF INTEREST FOR FIXED DEPOSITS.

3 to 6 Months	4%	p. a.
7 to 11 „	5%	„
12 to 18 „	6%	„

SPECIAL RATE FOR LONG TERM DEPOSITS ON APPLICATION.

Current Accounts are accepted at 3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

General Supplies Limited.

UDIPI

PROPRIETORS:

Sri Bharata Vastu Mandira,
Thulunad Stationery Mart.
Manipal Power Press.
Thulunad Press,
Antaranga

---

6 Apprentices will be entertained to work at our Printing Presses.

WILLING CANDIDATES MAY APPLY TO: MANAGING DIRECTOR.

ತುಳುನಾಡ್ ತಿಲಕಪಂಚಾಂಗ

ಬೆಲೆ ೦—೧—೦

ಮಾರಾಟಕ್ಕೆ ತಯಾರಾಗಿದೆ.

ವ್ಯಾಪಾರಿಗಳಿಗೆ ಧಾರಾಳ ಕಮಿಶನ್

ಬೇಕಾದವರು ತರಿಸಿಕೊಳ್ಳಬಹುದು.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

ದಕ್ಷಿಣ ಕನ್ನಡದಲ್ಲಿ

ತಿಂಗಳ
ಕಾಣಿಕೆ
೬

ಎಲ್ಲೆಲ್ಲಿಯೂ ಸಂಭ್ರಮದ ಸ್ವಾಗತ ಪಡೆದ
ಪ್ರಗತಿಪರ ಮೈಸೂರಿನ ಸಮರ್ಥ ದಿವಾನರೂ, ಅಂತ ಯ
ಖ್ಯಾತಿಯ ಪ್ರತಿಭಾಶಾಲಿಗಳೂ. ಅ
ಅಮೀನ್-ಉಲ್-ಮುಲ್ಕ್ ಸರ್. ಮಿರ್ಜಾ ಎಂ. ಲ್
Kt , K C. I. E. ರವರು.



Monthly Spe

23-2-39.

The Canara Industrial & Banking Syndicate, Limited.

(INCORPORATED IN BRITISH INDIA, LIABILITY OF SHAREHOLDERS LIMITED.)

ESTD. 1925

Head Office:- **"Mukund Nivas", UDIPI, S. India.**

NOTICE.

The Share Transfer Books of the Syndicate will remain closed from 10th February, 1939 to 6th March, 1939 both days inclusive.

UDIPI
5-2-'39

T. M. A. PAI,
CHAIRMAN

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅನ್ಯತ್ರ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ —ಭುವನಾಂಜನ
ನೇತ್ರ ವ್ಯಾಧಿಗಳಿಗೆ —ಶೀತಾಂಜನ
ಹಲ್ಲುನೋವು, ಅಜೀರ್ಣಗಳಿಗೆ —ಚಂದ್ರಮುಸ್
ದದ್ದು, ಗಜಕರ್ಣಗಳಿಗೆ —ಕ್ರಿಮಿನಾಶಿನಿ
ಕಜ್ಜಿ, ರಕ್ತದೋಷಗಳಿಗೆ —ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ —ಗರ್ಭಪಾಲ
ಮಕ್ಕಳ ಗ್ರಹಣಿಗೆ —ಚಿತ್ರಕ
ಬೆಳವಣಿಗೆಗೆ —ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: **MANGALORE**
BRANCHES. **Udipi, Coondapoor, Kaup & Karkal.**

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] **H. O. UDIPI.** [1920

BRANCHES.

MANGALORE, KATAPADI, and KANHANGAD.

Deposits are accepted at all the Offices of the Bank on the following terms

One year Fixed Deposits at 3½ p. c. per annum.
Two years' Fixed Deposits at 4 p. c. per annum.
Savings Bank Deposits ... 3 p. c. per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD 1921
FOUNDER
Sri. A B SHETTY, M.L.A
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಸಂಚಿಕೆ ೨೫
ಉಡುಪಿ, ಗುರುವಾರ ೨೩-೨-೧೯೩೯
Udipi, Thursday 23—2—1939
Vol. XVIII
No. 25

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ. ೧—೧೨—೦.

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ವಿ. ಪಿ. ಕ್ರಮವನ್ನು ನಿಲ್ಲಿಸಲಾಗಿದೆ.

ಸಮಾಚಾರ ಸಂಗ್ರಹ

ಭೋಸ್-ನೆಹರೂ ಗಾಂಧೀ ಸಂದರ್ಶನೆ

ಸುಭಾಸಚಂದ್ರಭೋಸರು ತಾ. ೧೩ರಲ್ಲಿ ನೆಹರೂಗಳವರನ್ನು ಅಲ್ಹಾಬಾದಿನಲ್ಲಿ ಸಂದರ್ಶಿಸಿ ಆ ದಿನವೆಲ್ಲ ಅವರೊಡನೆ ಮಾತುಕತೆ ನಡೆಯಿಸಿದರು. ಅದರಲ್ಲಿ ಜಯಪ್ರಕಾಶ ನಾರಾಯಣರೂ ಭಾಗವಹಿಸಿದ್ದರು. ಅಲ್ಲಿಂದ ಭೋಸರು ವಾರ್ಧಾಕ್ಕೆ ಹೊರಟಾಗ ಪತ್ರಿಕಾಪ್ರತಿನಿಧಿಗಳು ಫಲಿತಾಂಶ ಕೇಳಿದ್ದಕ್ಕೆ ಪರಿಸ್ಥಿತಿಯು ಆಶಾಜನಕವಾಗಿದೆಯೆಂದೂ ಗಾಂಧೀಜೀಯವರನ್ನು ನೋಡಿ ಮಾತಾಡದ ಮುನ್ನ ಹೆಚ್ಚಿಗೆ ಹೇಳಲಾರೆನೆಂದೂ ಪ್ರತ್ಯುತ್ತರವಿತ್ತರು.

ಭೋಸ್—ಗಾಂಧೀ ಸಂದರ್ಶನೆ

ತಾ. ೧೫ರಲ್ಲಿ ಭೋಸರು ಗಾಂಧೀಜಿಗಳ ಸಂದರ್ಶನೆಯನ್ನು ಮಾಡಿದರು. ಮೂರುತಾಸುಗಳ ತನಕ ಮಾತುಕತೆ ನಡೆಯಿತು. ಆ ಕುರಿತು ಭೋಸರವರು ಹೀಗೆ ಪ್ರಕಟಣೆಕೊಟ್ಟದ್ದಾರೆ. ಮಹಾತ್ಮಾ ಗಾಂಧಿಯವರು ಅವರ ವೈಶಿಷ್ಟ್ಯವಾದ ದಯಾಪ್ರೇಮಭಾವದಿಂದ ನನ್ನನ್ನು ಬರಮಾಡಿಕೊಂಡರು. ಇಂದಿನ ಕೆಂಗೇಡದಂತಿರುವ ಸಮಸ್ಯೆಗಳನ್ನು ಅತ್ಯಂತ ಸುಹೃದ್ಭಾವದಿಂದ ಮೂರುತಾಸುಗಳ ತನಕ ಚರ್ಚಿಸಿದೆವು. ಸ್ಥಿರವಾದ ನಿರ್ಧಾರಗಳಿಗೆ ನಾವು ಮುಟ್ಟಲಿಲ್ಲ. ಆದರೆ ತಾತ್ಪೂರ್ತಿಕ ತೀರ್ಮಾನಗಳನ್ನು ಮಾಡಿರುವೆವು ಅವನ್ನು ಬಹಿರಂಗಪಡಿಸುವ ಕಾಲವಿನ್ನೂ ಹಟ್ಟಾಗಲಿಲ್ಲ. ಆದುದರಿಂದ ಪತ್ರಿಕೆಗಳೂ ಮಹಾಜನರೂ ತಾ. ೨೨ರಲ್ಲಿ ವಾರ್ಧಾದಲ್ಲಿ ಜರಗುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಮುಗಿವ ತನಕ ದಯಮಾಡಿ ಸೈರಣೆಯನ್ನು ತಾಳಬೇಕೆಂದು ನನ್ನ ವಿನಂತಿ. ಮಹಾತ್ಮಾಜಿಯವರೂ ಆ ಕಾಲದಲ್ಲಿ ಅಲ್ಲಿರಲು ಅವಕಾಶವಾಗುವಂತೆ ತನ್ನ ಬಾರ್ದೋಲಿಯ ಪ್ರಯಾಣದ ಕಾರ್ಯಕ್ರಮವನ್ನು ಮುಂದುವರಿಸಿದ್ದಾರೆ. ಮಹಾತ್ಮಾಜಿಯವರ ಅನುಮತಿ ಹೊಂದಿ ಈ ಪ್ರಕಟಣೆಯನ್ನು ಪ್ರಸಿದ್ಧಿಸಿದ್ದೇನೆ. ತಾ. ೧೬ನೇ ದಿನ ಬೆಳಗ್ಗೆ ಭೋಸರವರು ಕಲ್ಕತ್ತಕ್ಕೆ ಹೊರಟುಹೋದರು. ತಾ. ೧೭ರಲ್ಲಿ ಕಲ್ಕತ್ತೆಗೆ ಬಂದೊಡನೆ ಬಂಗಾಲಪ್ರಾಂತದ ಸಮಾಜವಾದಿ (ಸೋಶಿಯಲಿಸ್ಟ್) ಮತ್ತು ಮಜೂರ ಮುಂದಾಳುಗಳ ಅನಧಿಕೃತ ಸಮ್ಮೇಳನವನ್ನು ಕರೆದು ತನ್ನ ಮುಂದಿನ ಕಾರ್ಯಕ್ರಮಗಳ ಕುರಿತು ತನ್ನ ಗಾಂಧೀ-ನೆಹರೂ ಸಂದರ್ಶನೆಯ ದೃಷ್ಟಿಯಿಂದ ಮಾತುಕತೆ ನಡೆಯಿಸಿದರು. ಮರುದಿನ ಬಿಹಾರ ಸಂಚಾರಕಾರ್ಯಕ್ರಮವನ್ನು ಕೈಗೊಂಡರು.

ಜಯಪುರದಲ್ಲಿ ಸರ್. ಬ್ಯೂಕೇಂಪ್—ಜುಡ್ಸ್ಗರ್-ಗಾಂಧೀ ಪತ್ರವ್ಯವಹಾರ.

ಜಯಪುರದ ಪ್ರಧಾನಮಂತ್ರಿಗಳಾದ ಲೆಫ್ಟಿನೆಂಟ್ ಕರ್ನಲ್ ಸರ್. ಬ್ಯೂಕೇಂಪ್ ಸೈಂಟ್ ಜೋನರನ್ನು ಶ್ರೀ. ಜುಡ್ಸ್ಗರವರು ಜನವರಿ ತಾ ೧ರಲ್ಲಿ ಸಂದರ್ಶಿಸಿ ಜಯಪುರದ ಗೊಂದಲನ ಕುರಿತು ಮಾತುಕತೆ ನಡೆಯಿಸಿದಾಗ ಬ್ಯೂಕೇಂಪರು ಅಹಿಂಸಾತ್ಮಕ ಹೋರಾಟವನ್ನು ಎದುರಿಸಲು ಮೆಶಿನ್ ಫಿರಂಗಿಗಳೇ ತಕ್ಕ ಸಾಧನವೆಂದೂ ಕರುಣ ಹೃದಯರಾದ ಬ್ರಿಟಿಷರು ಇಂಡಿಯವನ್ನು ಆಳುತ್ತಿದ್ದುದರಿಂದ ಹಿಂದೀಯರ ಈ ಅಹಿಂಸಾತ್ಮಕ ಸಮರದ ಬೇಳೆಬೇಯುತ್ತಿದೆಯೆಂದೂ ಹೆಮ್ಮೆಯೇರುತ್ತಿದೆಯೆಂದೂ ಹಿಟ್ಲರನ ಸರಕಾರವಾಗಿದ್ದರೆ ಹಿಂದೀಯರ ಹೋರಾಟದ ಚಂದ ನೋಡಬಹುದಿತ್ತೆಂದೂ ಮುಂತಾಗಿ ತನ್ನೊಡನೆ ಹೇಳಿದರೆಂದು ಜುಡ್ಸ್ಗರವರು ಗಾಂಧಿಜಿಗಳಿಗೆ ಬರೆದಿದ್ದರು ಅವರು ಅದನ್ನು 'ಹರಿಜನ' ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಮಾತ್ರವಲ್ಲದೆ ಪ್ರಕಟಿಸುವ ಮುಂಚೆ ಆ ಮಾತುಗಳು ಸತ್ಯವೋ ಎಂದು ಬ್ಯೂಕೇಂಪರಿಗೆ ಬರೆದು ಕೇಳಿದರು. ಆದರೆ ಅವರು ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡದೆ ಹೋದುದರಿಂದ ಆ ಮಾತುಕತೆ ಪ್ರಕಟವಾಯಿತು. ಈಗ ಬ್ಯೂಕೇಂಪರು ತನ್ನ ಬಾಯಿಂದ ಅಂತಹ ಮಾತುಗಳು ಹೊರಟಿಲ್ಲವೆಂದು ಪತ್ರಿಕೆಗಳಲ್ಲಿ ಸಾರಿದ್ದಾರೆ. ಅಂದಿನ ತಮ್ಮ ಮಾತುಕತೆಗಳನ್ನು ವಿಕಾರಗೊಳಿಸಿ ವಿವರ ಪೂರ್ಣವಿಲ್ಲದೆ ಅರೆ ಸತ್ಯದ ಮಾತುಗಳನ್ನು ಎದುರು ಹಾಕಿ ಸ್ವಂತ ಬಣ್ಣ ಕಾರಬೆರೆಸಿ ವಿಕಲ್ಪ ಚಿತ್ರವನ್ನು ಜುಡ್ಸ್ಗರವರು ಬಡಿಸಿದ್ದಾರೆಂದು ಬ್ಯೂಕೇಂಪರರ ಹೇಳಿಕೆ.

ಜಯಪುರ ಸತ್ಯಾಗ್ರಹ

ಜಯಪುರ ಪ್ರಜಾಮಂಡಲದ ಸತ್ಯಾಗ್ರಹಿಗಳ ದ್ವಿತೀಯ ತಂಡವು ಸೇಟ್ ಸರ್ದಾರ್ ಮಾಲ್ ಗೊಲೇಚಾ ಇವರ ಮುಂದಾಳುತನದಲ್ಲಿ ಹೊರಟು ಪ್ರಜಾಮಂಡಲದ ಆಫೀಸಿನಿಂದ ಹೊರಬಂದಾಗಲೇ ದಸ್ತಗಿರಿ ಮಾಡಲ್ಪಟ್ಟಿತು ದಿಲ್ಲಿಯಲ್ಲಿ ಶ್ರೀಮತಿ ಸತ್ಯವತೀ ದೇವಿಯು ವ್ಯವಸ್ಥಾಪಕತ್ವದಿಂದ ಜಯಪುರ ಸತ್ಯಾಗ್ರಹ ಸಹಾಯಕ ಸಮಿತಿಯು ನಿರ್ಮಾಣವಾಗಿ ಪ್ರಚಾರ ಕಾರ್ಯ, ಸತ್ಯಾಗ್ರಹ ಸಮರಕ್ಕೆ ವಾಲಂಟೀಯರುಗಳನ್ನು ಕೂಡಿಸುವುದು ಮುಂತಾದ ಕಾರ್ಯಕಲಾಪಗಳನ್ನು ಕೈಗೊಂಡಿದೆ. ಜಯಪುರ ನಗರವು ಶಾಂತ ಪರಿಸ್ಥಿತಿಯಲ್ಲಿ ಅನುದಿನದ ವ್ಯವಹಾರಗಳನ್ನು ನಡೆಯಿಸುತ್ತಿದೆ. ಪೋಲೀಸರ ಪಹರೆ ನಡೆಯುತ್ತಿ.

ರಾಜಕೋಟೆಯ ಪರಿಸ್ಥಿತಿ

ವೀರಂಗದಿಂದ ಮತ್ತು ಭಾವನಗರದಿಂದ ಇಪ್ಪತ್ತೆಂಟು ವಾಲಂಟೀಯರುಗಳೂ ಅಮೇರೇಲಿಯಿಂದ ಇಪ್ಪತ್ತನಾಲ್ಕು ವಾಲಂಟೀಯರುಗಳೂ ದಸ್ತಗಿರಿ ಮಾಡಲ್ಪಟ್ಟು ಲೋರಿಗಳಲ್ಲಿ ಕೂಡಿಸಿ ಎಲ್ಲಿಗೋ ಒಯ್ಯಲ್ಪಟ್ಟಿದ್ದಾರೆ. ಪಿಕೆಟಿಂಗ್ ಮಾಡುತ್ತಿದ್ದ ೧೮ ಮಂದಿಯನ್ನು ಪೋಲೀಸರು ಹಿಡಿದಿದ್ದಾರೆ.

ಶ್ರೀ. ಕಸ್ತೂರಿಬಾಯಿ ಮತ್ತು ಕುಮಾರಿ ಮಣಿಬೆನ್ ಪಟೇಲ ಇವರನ್ನು ನಗರಕ್ಕೆ ತಂದು ಟೆಲಿಫೋನಿನ ಮೂಲಕ ಗಾಂಧಿಜಿಯವರೊಡನೆ ಕಸ್ತೂರಿಬಾಯಿಯವರು ಆರೋಗ್ಯದ ಕುರಿತು ಸಂಭಾಷಣೆ ನಡೆಯಿಸಲಿಕ್ಕೆ ಬಿಟ್ಟು ತಿರುಗಿ ಪೋಲಿಸು ಪಹರೆಯೊಡನೆ ತ್ರಂಬಾ ಎಂಬಲ್ಲಿಗೆ ಒಯ್ಯಲ್ಪಟ್ಟಿದ್ದಾರೆ. ರಾಜಕೋಟೆ ಸರಕಾರದ ಪ್ರಕಟಣೆಯ ಮೇರೆಗೆ ಅವರು ತ್ರಂಬಾ ಎಂಬಲ್ಲ ಸರ್ವಾನುಕೂಲ ಸೌಕರ್ಯಗಳುಳ್ಳ ಪ್ರಥಮ ಶ್ರೇಣಿಯ ಅತಿಥಿಗಳಂತೆ ಅವರನ್ನು ತ್ರಂಬಾದಲ್ಲಿ ಇರಿಸಲಾಗಿದೆಯೆಂದೂ ಇಷ್ಟವಿದ್ದಲ್ಲಿ ಅವರು ವಾರ್ಧಾಕ್ಕಾಗಲೀ, ಬೇರಲ್ಲಿಗಾಗಲೀ ರಾಜ್ಯದ ಹೊರಗಡೆ ಹೋಗಲು ಅವರನ್ನು ಬಿಡಲಾಗುವುದೆಂದೂ ಇದೆ.

ಬರ್ಮಾದಲ್ಲಿ ಮಂತ್ರಿ ಮಂಡಲದ ಮೇಲೆ ಅವಿಶ್ವಾಸದ ಠರಾವು-ಮಂತ್ರಿ ಮಂಡಲದ ರಾಜಿನಾಮೆ.

ಅವಿಶ್ವಾಸದ ಠರಾವು ಮೊದಲಾಗಿ ಸಿನೇಟಿನಲ್ಲಿ ಅದರ ಪರವಾಗಿ ೩೧ ವೋಟು ವಿರೋಧವಾಗಿ ಒಂದು ವೋಟು ಬಿದ್ದು ತೇರ್ಗಡೆಯಾಯಿತು ಯುರೋಪಿಯನ್ ಮತ್ತು ಇಂಡಿಯನ್ ಮೆಂಬರರು ವೋಟು ಕೊಡದೆ ಸುಮ್ಮಗಿದ್ದರು ಸರಕಾರವು ದೇಶದಲ್ಲಿ ಶಾಂತಿ ನೆಮ್ಮದಿ ಹಾಗೂ ಶಾಸನ ಪರಿಪಾಲನೆಯ ಕರ್ತವ್ಯದಲ್ಲಿ ಅದು ಯಶಸ್ವಿಯಾಗದಿದ್ದುದರಿಂದ ಹೊಸ ಮಂತ್ರಿಮಂಡಲ ನಿರ್ಮಾಣವಾಗಬೇಕೆಂಬುದು. ಮರುದಿನ ಹೌಸ್ ಆಫ್ ರಿಪ್ರೆಸೆಂಟೇಶನ್ ಎಂಬ ನ್ಯಾಯವಿಧಾಯಕ ಸಭೆಯಲ್ಲಿಯೂ ಈ ಅವಿಶ್ವಾಸದ ಠರಾವು ಬಹುಮತದಿಂದ ತೇರ್ಗಡೆ ಹೊಂದಿತು. ಮಂತ್ರಿಮಂಡಲವು ರಾಜಿನಾಮೆ ಕೊಟ್ಟಿದೆ.

ಲೋಹಾರಾಲ್ ಸಂಸ್ಥಾನದಲ್ಲಿ ತೆರಿಗೆ ರಿಯಾಯಿತಿ.

ಸಂಸ್ಥಾನದ ಪ್ರಜಾಭಿಮತಕ್ಕನುಸಾರವಾಗಿ ನಿಯೋಜಿತವಾದ ವಿಚಾರಣಾ ಸಮಿತಿಯ ಶಿಫಾರಸಿನ ಮೇರೆಗೆ ರೈತರಿಗೆ ಭೂಕಂದಾಯದಲ್ಲಿ ರೂಪಾಯಿಗೆ ಸಾರ್ವತ್ರಿಕವಾಗಿ ಮೂರಾಣೆಯಂತೆಯೂ ಕೆಲವು ಕಡೆಗಳಲ್ಲಿ ನಾಲ್ಕಾಣೆಯಂತೆಯೂ ರಿಯಾಯಿತಿಯನ್ನು ಮಾಡಿರುವುದಾಗಿ ರಾಜಾಜ್ಞೆ ಪ್ರಕಟವಾಗಿದೆ ಮಾತ್ರವಲ್ಲದೆ ನೆರೆಹೊರೆಯ ಸಂಸ್ಥಾನಗಳು ಪ್ರಯೋಗಕ್ಕೆ ತರಬಹುದಾದಂತಹ ಪ್ರಜಾಸತ್ತಾತ್ಮಕವಾದ ಶಾಸನ ಕ್ರಮವನ್ನು ತಾನೂ ಅನುಸರಿಸುವೆನೆಂದು ರಾಜರು ಪ್ರಜಾ ಮುಖಂಡರಿಗೆ ಆಶ್ವಾಸನೆಯಿತ್ತಿರುವರು.

ಅಖಿಲ ಭಾರತ ಸಂಸ್ಥಾನಿಕ ಪ್ರಜಾ ಪರಿಷತ್ತು, ನೆಹರುಗಳವರ ಅಧ್ಯಕ್ಷತೆ

ಸಂಸ್ಥಾನಿಕ ಕಾಂಗ್ರೆಸ್ಸು ಮತ್ತು ರಾಷ್ಟ್ರೀಯ ಕಾಂಗ್ರೆಸ್ಸುಗಳ ಸಮ್ಮಿಳಿತ ಕಾರ್ಯ ಕಲಾಪಗಳ ಕುರಿತು ನಿರ್ದಿಷ್ಟ ಸ್ಪಷ್ಟ ನಿರ್ದೇಶಗಳ ನಿರ್ವಾಕ್ಷಿಣ್ಯ ಭಾಷಣ.

ಹರಿಪುರ ಕಾಂಗ್ರೆಸ್ಸಿನಲ್ಲಿ ಸಂಸ್ಥಾನಿಕ ಸ್ವಾತಂತ್ರ್ಯದ ಹೋರಾಟದ ಕುರಿತು ನಿಶ್ಚಿತವಾದ ತಾಟಸ್ಥ್ಯ ಘೋಷಣೆಯು ಲಿಸ್ಲಾ ದು ಧ್ಯೇಯವಿತ್ತು. ರಾಷ್ಟ್ರೀಯ ಕಾಂಗ್ರೆಸ್ಸು ದೂರವಾಗಿ ದುಡಿಯುತ್ತಿಂದು ಸಂಸ್ಥಾನಿಕ ಪ್ರಜೆಗಳು ಆಲಸ್ಯದಿಂದಿರದೆ ಜಾಗ್ರತರಾಗಿ ತಮ್ಮ ಭವಿಷ್ಯ ನಿರ್ಮಾಣಕ್ಕಾಗಿ ತಾವೇ ಸೊಂಟಕಟ್ಟುವಂತೆ ಮಾಡುವ ಜಾಣತನವು ಅದರಲ್ಲಿ ಅಡಕವಾಗಿತ್ತು. ಇಂದು ಆಶ್ರಿತ ರಾಜ್ಯಗಳಲ್ಲಿ ಎಲ್ಲೆಲ್ಲಿಯೂ ಕಾಣಬರುವ ಅಪೂರ್ವ ಜಾಗೃತಿಗಳನ್ನು ಪರಿಶೀಲಿಸಿದರೆ ಕಾಂಗ್ರೆಸ್ಸಿನ ಆ ಜಾಣ್ಮೆಯು ಹೆಚ್ಚೆ ಸರಿಯೆಂದು ವ್ಯಕ್ತವಾಗುತ್ತಿದೆ. ಈಗ ಅವರು ರಾಷ್ಟ್ರೀಯ ಕಾಂಗ್ರೆಸ್ಸಿನ ಹಂಬಲಿಗೆ ಸರಿಸಮಬಂದಿದ್ದಾರೆ ಅದರಿಂದಾಗಿ ನಮ್ಮ ರಾಜಕೀಯ ಸಮರಕ್ಕೊಂದು ಬಲಬಂದಿದೆ ಕಳೆಯೇರಿದೆ. ಈಗಿನ ಪರಿಸ್ಥಿತಿಯನ್ನು ಅಖಿಲಭಾರತದ ಒಮ್ಮುಖವಾದ ಸ್ವಾತಂತ್ರ್ಯ ಸಂಗ್ರಾಮವೆನ್ನಬಹುದು. ರಣರಂಗಗಳು ಬೇರೆ ಬೇರೆ ಕಡೆಗಳಲ್ಲಿದ್ದರೂ ಅವುಗಳ ಸ್ವರೂಪ ಧ್ಯೇಯಗಳೆಲ್ಲ ಒಂದೇ ಭಾರತೀಯ ಸಂಪೂರ್ಣ ಸ್ವಾತಂತ್ರ್ಯ. ಸಂಸ್ಥಾನಿಕ ರಾಜ್ಯಭಾರದ ಸೂತ್ರ ಚಾಲನೆಯಲ್ಲಿ ಬ್ರಿಟಿಷ್ ಪ್ರಭುತ್ವದ ಪ್ರಬಲ ಕೈಯಿದೆಯೆಂಬುದು ರಾಜಕೋಟೆ ಜಯಪುರಗಳ ವಿದ್ಯಮಾನಗಳಿಂದ ಸುಸ್ಪಷ್ಟವಾಗಿದೆ. ನರೇಂದ್ರರು ಸಂಪೂರ್ಣ ಪ್ರಜಾಪ್ರಭುತ್ವದ ರಾಜ್ಯಭಾರ ಸೂತ್ರವನ್ನು ಕೊ

ಡಲೊಪ್ಪಿದರೂ ಅದು ಅವರ ಕೈಯಲ್ಲಿಲ್ಲ. ಅವರು ಬ್ರಿಟಿಷ್ ಪ್ರಭುತ್ವದ ತಂತಿಯೊಳ ದಂತೆ ಕುಣಿಯಲೇ ಬೇಕಾಗಿರುವ ಗೊಂಬೆ ಗಳಾಗಿದ್ದಾರೆ. ಆದುದರಿಂದ ಸಂಸ್ಥಾನಿಕ ರಿಗಾಗಲಿ ಬ್ರಿಟಿಷ್ ಇಂಡಿಯಾ ಪ್ರಜೆಗಳಿ ಗಾಗಲೀ ನಿಜವಾದ ಸ್ವಾತಂತ್ರ್ಯ ದೊರಕ ಬೇಕಾದರೆ ಅವರು ಇದಿರಿಸಬೇಕಾದುದು ಬ್ರಿಟಿಷ್ ಪ್ರಭುತ್ವವನ್ನೇ. ಆದುದರಿಂದ ಸಮರಾಂಗಣವು ಸಂಸ್ಥಾನದಲ್ಲಿದೆಯೆಂದು ರಾಷ್ಟ್ರೀಯ ಕಾಂಗ್ರೆಸು ತಟಸ್ಥವಾಗಿರುವ ಕಾಲವು ಸಂದುಹೋಯಿತು. ಅದು ಸಂಸ್ಥಾನಗಳನ್ನು ಪ್ರವೇಶಿಸುವ ಮುಹೂರ್ತ ಬಂದಿದೆ. ನಾಳಿನ ತ್ರಿಪುರಿ ಕಾಂಗ್ರೆಸ್ಸಿನಲ್ಲಿ ಈ ನಿರ್ಧಾರವು ಮುಂದಾಗಿ ನಿಲ್ಲಬೇಕಾಗಿದೆ–ಎಂಬ ಮುಂದಿನ ಧ್ಯೇಯವನ್ನು ಹಲವಾರು ಸಂಸ್ಥಾನಗಳ ವಿದ್ಯಮಾನಗಳ ನಿದರ್ಶನಗಳಿಂದ ಸುಸ್ಪಷ್ಟಗೊಳಿಸಿ ಅಖಿಲ ಭಾರತದ ಸರ್ವಾನುಮತದ ಏಕಮಾತ್ರ ಅಧಿಕಾರವಾಣಿಯೆಂಬಂತೆ ವಿರೋಧಿಗಳ ಎದೆನಡುಗುವಂತೆ ಎಡೆತಿದ್ದಿಕೊಳ್ಳುವಂತೆ ನುಡಿಕೊಟ್ಟಿದ್ದಾರೆ ಭಾರತದ ಸ್ವಾತಂತ್ರ್ಯದ ಚೈತನ್ಯಮಯ ಮೂರ್ತಿಯೆಂತಿರುವ ನೆಹರೂಗಳವರು.

ಕೊಯಮುತ್ತೂರು ಫೊರೆಸ್ಟ್ ಕಾಲೇಜು

ಟ್ರೈನಿಂಗ್ ಸ್ಕೂಲು ಆಗುವ ಸಂಭವವಿದೆ

ಬರುವ ಜೂನ್ ತಿಂಗಳಿಂದ ಮುಚ್ಚಲಾಗುವ ಫೊರೆಸ್ಟ್ ಕಾಲೇಜನ್ನು ವಿದ್ಯಾಖಾತೆಯ ಡೈರೆಕ್ಟರರಾದ ಮಿ. ಸ್ಟೇತಮರು ಕಳೆದವಾರ ಸಂದರ್ಶಿಸಿದರು. ಅದನ್ನು ವಾರ್ಧಾಶಿಕ್ಷಣ ಪ್ರಣಾಲಿಯ ತರದ ಟ್ರೈನಿಂಗ್ ಶಾಲೆಯನ್ನಾಗಿ ಮಾರ್ಪಡಿಸುವ ಯೋಜನೆ ತನಗಿದೆಯೆಂದೂ ಆದರೆ ಆ ಕಟ್ಟಡಗಳ ಉಪಯೋಗದ ಕುರಿತು ಕೊನೆಯ ನಿರ್ಧಾರವು ಸರಕಾರದ ಕೈಯಲ್ಲಿರುವುದರಿಂದ ತಾನು ಯಾವುದನ್ನೂ ನಿಶ್ಚಯವಾಗಿ ಹೇಳಲಾರೆನೆಂದೂ ಸಂದರ್ಶನವಾಡಿದವರೊಂದಿಗೆ ಹೇಳಿದರು.

ಸೇಲಮಿನಲ್ಲಿ ದೊಡ್ಡ ಕಂದೀ ಕೇಸ್!

ಒಂಭತ್ತು ಜನರ ದಸ್ತಗಿರಿ!

ಆಲಿಪಟ್ಟಿಯಿ ಎಂಬ ಗ್ರಾಮದಲ್ಲಿ ಕಳ್ಳಭಟ್ಟಿಯಲ್ಲಿ ಬಟ್ಟಿಯಿಟ್ಟು ಗಂಗಸರ ಇಳಿಸುವ ಒಂದು ಕೂಟವನ್ನು ಪೋಲೀಸರು ಪತ್ತೆಮಾಡಿರುವರು. ಮೂರುಮಂದಿ ಗಂಡಸರೂ ನಾಲ್ವರು ಹೆಂಗಸರೂ ದಸ್ತಗಿರಿಯಾಗಿದ್ದಾರೆ. ೧೧೦ ಗೆಲನ್ ಹುಳಿ ಹೆಂಡವೂ ಒಂದು ಗೇಲನ್ ಸಾರಾಯಿವೂ ಅವರಲ್ಲಿ ಸಿಕ್ಕಿಯದೆ ಉತ್ತೊಂದೆಡೆಯಲ್ಲಿ ಇಬ್ಬರು ಸಿಕ್ಕಿದ್ದಾರೆ. ಅವರಲ್ಲಿ ಒಂದು ಗೆಲನ್ ನಿಗೆ ವಿಕ್ಕಿ ಸಾರಾಯಿ ಇತ್ತು.

ಫ್ರೆಂಚ್ ಪತ್ರಿಕೋದ್ಯಮಿ ದಂಪತಿಗಳ ಭೂಸಂಚಾರ

ಎಮ್. ರಾಟೆಲ್ ಮತ್ತು ಪತ್ನಿ ಇವರು ಸ್ವಾತಲಿನಿಂದ ಭೂಸಂಚಾರಮಾಡಬೇಕೆಂದು ಒಂದು ವರುಷದ ಹಿಂದೆ ಪ್ಯಾರಿಸ್ಸಿಂದ ಹೊರಟವರು ಅಫ್ಘಾನಿಸ್ಥಾನದ ಮಾರ್ಗವಾಗಿ ಹಿಂದೂಸ್ಥಾನಕ್ಕೆ ಬಂದು ಅಲಹಾಬಾದಿನಲ್ಲಿ ನೆಹರೂಗಳವರನ್ನೂ ಡಿಲ್ಲಿಯಲ್ಲಿ ಗಾಂಧೀಜಿಯವರನ್ನೂ ಸಂದರ್ಶಿಸಿ ಈಗ ಬೆಂಗಳೂರಿಗೆ ಬಂದಿಳಿದಿರುವರು. ಎಮ್. ರಾಟಲರು ತನ್ನ ಪ್ರವಾಸದ ಪ್ರತ್ಯಕ್ಷಾನುಭವ ಮತ್ತು ವಿಷಯಸಂಗ್ರಹಗಳಿಂದ ಒಂದು ಪುಸ್ತಕ ಬರೆಯಲಿಕ್ಕಿರುವರಂತೆ ಅವರ ಪತ್ನಿಯು ಚಿತ್ರ ಕಲಾಪ್ರಿಯೆ. ಅವಳ ವಶದಲ್ಲಿರುವ ಹಲವು ತೈಲವರ್ಣದ ಚಿತ್ರಗಳನ್ನು ಬೆಂಗಳೂರಲ್ಲಿ ಪ್ರದರ್ಶಿಸಲಿರುವಳಂತೆ.

ಸಂಯುಕ್ತಪ್ರಾಂತ ಮತ್ತು ಬಿಹಾರುಗಳಲ್ಲಿ ಹೊಸ ಗವರ್ನರುಗಳ ನೇಮಕ

ಈಗ ಸಂಯುಕ್ತಪ್ರಾಂತದ ಗವರ್ನರರಾಗಿರುವ ಸರ್. ಹೆರ್ರಿ ಹೇಗ್‌ರವರು ಬರುವ ಡಿಸೆಂಬರದಲ್ಲಿ ಉದ್ಯೋಗನಿವೃತ್ತರಾಗುವಾಗ ಆ ಸ್ಥಾನಕ್ಕೆ ಈಗ ಬಿಹಾರ್ ಗವರ್ನರರಾದ ಸರ್. ಮೊರೀಸ್ ಹೆಲೆಟ್‌ರವರು ಗವರ್ನರರಾಗಿಯೂ ಬಿಹಾರದ ಗವರ್ನರ ಸ್ಥಾನಕ್ಕೆ ಈಗ ಗವರ್ನರ್ ಜನರಲ್ ಕೌನ್ಸಿಲಿನ ಮೆಂಬರರಾದ ಸರ್. ಟಿ. ಎ. ಸ್ಟೂವರ್ಟರು ಗವರ್ನರರಾಗಿಯೂ ನೇಮಕಹೊಂದಿದ್ದಾರೆ.

ಘೋಷರ ಪುಸ್ತಕದ ಮೇಲಿನ ಬಹಿಷ್ಕಾರ

ಘೋಷರ ಪುಸ್ತಕದ ಮೇಲೆ ಇಂಡಿಯಾ ಸರಕಾರವು ಹಾಕಿರುವ ಬಹಿಷ್ಕಾರಾಜ್ಞೆಯನ್ನು ಈಗ ರದ್ದುಮಾಡುವುದಾಗಿ ನಿಶ್ಚೈಸಿರುತ್ತದೆಂದು ಡಿಲ್ಲಿಯ ಕೇಂದ್ರ ಎಸೆಂಬ್ಲಿಯಲ್ಲಾದ ಪ್ರಶ್ನೋತ್ತರದಿಂದ ತಿಳಿದು ಬಂದಿದೆ.

ಸತ್ಯಮೂರ್ತಿ–ಕಾಳೇಶ್ವರರಾವ್ ಸಂವಾದ.

ಶ್ರೀ ಸತ್ಯಮೂರ್ತಿಗಳು ಫೆಡರೇಶನನ್ನು ಸ್ವೀಕರಿಸಿ ಪ್ರಯೋಗದಲ್ಲಿ ತಂದು ನೋಡುವ ಆಶೆ ತನಗಿದೆಯೆಂದು ಹೇಳಿರುತ್ತಾರಾಗಿ ಶ್ರೀ. ಕಾಳೇಶ್ವರರಾಯರ ಟೀಕೆ. ಆ ಟೀಕೆಗೆ ಎಡೆಗೊಡುವಂತಹ ಮಾತುಗಳನ್ನೇ ತಾನೆಲ್ಲಿಯೂ ಹೇಳಲಿಲ್ಲವೆಂದು ಸತ್ಯಮೂರ್ತಿಗಳು ಪತ್ರಿಕಗಳಿಗೆ ಪ್ರಸಿದ್ಧ ಲೇಖನವನ್ನು ಕೊಟ್ಟುದರಲ್ಲಿ ಹೀಗಿದೆ:– ನನಗೆ ಫೆಡರೇಶನನ್ನು ಅಂಗೀಕರಿಸಬೇಕೆಂಬ ಆಗ್ರಹವಿಲ್ಲ ಇತರ ಕಾಂಗ್ರೆಸ್‌ವಾದಿಗಳಂ ನಾನೂ ಅದಕ್ಕೆ ಬದ್ಧ ವಿರೋಧಿಯು. ನಾ ಅಭಿಮತಕ್ಕೆ ವಿರೋಧವಾಗಿ ಸರಕಾರವು ಅದನ್ನು ಪ್ರಯೋಗಕ್ಕೆ ತರಲೆತ್ನಿಸಿ ಕಾಂಗ್ರೆಸ್ಸು ತನ್ನ ಸರ್ವಶಕ್ತಿ ಸಾಧನಗಳಿಂದ ಪ್ರತಿಭಟಿಸಲೇ ತಕ್ಕುದು ಆ ಹೋರಾಟದಲ್ಲಿ ನಾನು ತಲೆಗೊಡಲು ಸಿದ್ಧನಿದ್ದೇನೆ. ಎರಡು ಮೂರು ವರುಷಗಳ ಹಿಂದೆ ಪ್ರಾಂತಿಕ ಮಂತ್ರಿ ಸ್ವೀಕಾರದ ಪಕ್ಷಪಾತಿಯಾಗಿ ನಾನು ಮಾತಾಡಿದಾಗ ನನಗೆ ಅಂತ ಸ್ಥಾನವನ್ನು ಹೊಂದುವ ಆಶೆಯಿದೆ ಎಂದು ಹೇಳಿದ್ದರು. ಆಮೇಲಿನ ವಿದ್ಯಮಾನಗಳನ್ನು ಪರಿಶೀಲಿಸಿದರೆ ಮಂತ್ರಿಸ್ಥಾನ ಸ್ವೀಕಾರ ಮಾಡಿದವನು ನಾನಲ್ಲ, ಕಾಂಗ್ರೆಸ್ ಮತ್ತು ಕಾಳೇಶ್ವರರಾಯರಂಥವರೇ. ಅವರು ಸ್ವೀಕಾರ ಮಾಡಿದುದು ನನಗೆ ಸಂತೋಷವೇ. ಆದರೆ, ಹೊಣೆಗಾರಿಕೆಯುಳ್ಳ ಕಾಂಗ್ರೆಸ್‌ವಾದಿಗಳೂ ಪಾರ್ಲಿಮೆಂಟರಿ ಸೆಕ್ರೆಟರಿಗಳೂ ಈ ತರದ ಟೀಕೆ ಮಾಡುವುದನ್ನು ಬಿಟ್ಟರೆ ಲೇಸು.

ಅಣ್ಣಾಮಲೆ ಯುನಿವರ್ಸಿಟಿಯಲ್ಲಿ ವಿದ್ಯಾರ್ಥಿಗಳ ಮುಷ್ಕರ.

ಹಿಂದಿನ ಮುಷ್ಕರಕ್ಕೆ ಕಾರಣವಾದ ವಿದ್ಯಾರ್ಥಿಗಳಲ್ಲಿ ಆರು ಮಂದಿಯು ಹೊರಗಿ ಉಳಿದವರನ್ನು ಯುನಿವರ್ಸಿಟಿಯು ಸೇರಿಸಿಕೊಂಡಿತ್ತು. ಈಗ ಆ ಆರು ಮಂದಿಗೂ ಪ್ರವೇಶಕೊಡಬೇಕೆಂದು ತಿರುಗಿ ಮುಷ್ಕರ. ಒಮ್ಮೆ ಪ್ರೊಫೆಸರರೆಲ್ಲರು ಕೂಡಿ ಮಾಡಿದ ನಿರ್ಧಾರಕ್ಕೆ ವಿರುದ್ಧವಾಗಿ ಏನೂ ನಡೆಯಲಾಗುವುದಿಲ್ಲವೆಂದು ಯುನಿವರ್ಸಿಟಿ ಚಾನ್ಸಲರಾದ ಶ್ರೀ. ಶಾಸ್ತ್ರಿಗಳವರು ಹೇಳಲು ಸುಮಾರು ೩೦ ಮಂದಿ ವಿದ್ಯಾರ್ಥಿಗಳು ಮುಷ್ಕರಕ್ಕೆ ತೊಡಗಿದ್ದಾರೆ. ವಿದ್ಯಾರ್ಥಿಗಳು ಕ್ಲಾಸಿಗೆ ಹೋಗದಂತೆ ಹಾಸ್ಟೆಲುಗಳ ಮೇಲೆ ಐವತ್ತೈದು ಮುಷ್ಕರಗಾರರು ಅಡ್ಡ ಮಲಗುತ್ತಾರೆ. ಆದರೂ ಯುನಿವರ್ಸಿಟಿಯು ಬಹಿರಂಗ ಮರಾರದ ಮತ್ತು ಲ್ಯಾಬೊರೆಟರಿ ಮುಂತಾದ ಇತರ ಕಟ್ಟಡಗಳಲ್ಲಿ ಕ್ಲಾಸು ನಡೆಯುತ್ತದೆ. ವಿದ್ಯಾರ್ಥಿಗಳ ಹಾಜರಿಯೂ ತಕ್ಕಮಟ್ಟಿಗೆ ಚೆನ್ನಾಗಿದೆ ಇದೆ. ಅಧಿಕಾರಿಗಳು ಮುಷ್ಕರಗಾರರನ್ನು ಶಾಂತಚಿತ್ತದಿಂದ ನೋಡುತ್ತಿದ್ದಾರೆ. ಮುಷ್ಕರಗಾರರು ಮದ್ರಾಸಿನ ಪ್ರಧಾನಮಂತ್ರಿಗಳಿಗೆ ಕೊಟ್ಟ ತಂತಿಗೆ ಅವರು ಹೀಗೆ ಪ್ರತ್ಯುತ್ತರ ಕೊಟ್ಟಿದ್ದಾರೆ. 'ಯೋಗ್ಯರಾದ ಚಾನ್ಸಲರ ಶಾಂತಿ ಭಂಗಮಾಡುವ ಕೆಲವು ವಿದ್ಯಾರ್ಥಿಗಳ ವರ್ತನೆಯನ್ನು ನೋಡುವುದು ನನಗೆ ವ್ಯಥೆಯಾಗುತ್ತಿದೆ. ವಿದ್ಯಾರ್ಥಿಗಳು ಸರ್ವತರದ ತ್ಯಾಗಬುದ್ಧಿ ಪ್ರದರ್ಶನದಿಂದ ಅಂತಹ ಸಮರ್ಥ ಚಾನ್ಸಲರನ್ನು ಇಟ್ಟುಕೊಳ್ಳುವ ಪ್ರಯತ್ನ ಮಾಡಬೇಕು.

ಯೂತ್ ಲೀಗ್‌ನವರಿಗೆ ಶಿಕ್ಷೆ

ತಿರುವಾಂಕೂರಿನ ಆಲಪ್ಪೆಯಲ್ಲಿ ರಾಜಶಾಸನ ಮೂಲಕ ನಿಷೇಧಿಸಲ್ಪಟ್ಟ ಯೂತ್ ಲೀಗಿನ ಪ್ರತಿಜ್ಞಾ ಪತ್ರವನ್ನು ಬಹಿರಂಗವಾಗಿ ಸಭೆಯಲ್ಲಿ ಓದಿದ ಅಪರಾಧಕ್ಕಾಗಿ ಯೂತ್ ಲೀಗಿನ (ಇ... ವಕ್ಕೂಟದ) ಇಬ್ಬರಿಗೆ ೧೧ ತಿಂಗಳ ಕಠಿಣ ಕಾರಾಗೃಹವಾಸ ಮತ್ತು ೧೦೦ರೂಪಾಯಿ ಜುಲ್ಮಾನೆಯೂ ತಿರುಗಿ ಎರಡು ತಿಂಗಳು ಚಿಲ್ಲರೆ ಅದೇ ತರದ ಶಿಕ್ಷೆ ವಿಧಿಸಲಾಗಿದೆ.

THE Bombay Life

ASSURANCE CO., LTD.

ESTD.] [1908

New Business completed in 1938 Exceed 1,44,00,000.

Life Insurance creates certainty, security, stability, peace of mind and happiness to YOU and your family; and thus makes life worth living

* * * * *

The entire fabric of this Institution is based on the rock of 'Service first and service last' to the POLICY HOLDERS, to the Community and the society at large our Service and Experience of Twenty eight years are at your disposal to plan your Insurance requirements.

Honest, Energetic and Influential persons will have great opportunity to help the cause of society and also to earn a permanent and decent remuneration

APPLY TO

KOCHIKAR BROTHERS LIMITED.

Madras Branch Secretaries,

The Bombay Life Assurance Co., Ltd.,

The Bombay Life Building,

Gandhinagar, UDIPI.

or any of our following offices:

Post Box No 337 Mount Road, MADRAS	Visweshwarapuram Circle BANGALORE CITY	Charni Road, GIRGAUM, BOMBAY 4	Car Street, MANGALORE	CALICUT	Central Station Road, TRIVANDRUM	Ottapalam, S MALABAR.

ಜಗತ್ತಿನ ದೃಷ್ಟಿಯಲ್ಲಿ: ಭಾರತ

ಪ್ರವಾಸಿಗಳೊಬ್ಬರ ಅನುಭವಗಳು.

ಪ್ರೊಫೆಸರ್ ಮಲ್ಕಾನಿಯವರು ಈಗತಾನೇ ಯೂರೋಪು ಪ್ರವಾಸದಿಂದ ಭಾರತಕ್ಕೆ ಹಿಂದಿರುಗಿರುವರು. ಅವರು ತಮ್ಮ ಅನುಭವದ ಆಧಾರದ ಮೇಲೆ ಬರೆದಿರುವ ಈ ವಿಚಾರಗಳು ವಾಚಕರಿಗೆ ನಿಸ್ಸಂದೇಹವಾಗಿಯೂ ರುಚಿಕರವಾಗಿರುವುವು.

(ಅನುವಾದಕ—ಎಸ್, ಎಲ್, ಸುಬ್ರಹ್ಮಣ್ಯಂ, ಹರಿಹರ.)

ನನಗೆ ವಿದೇಶದ ಪ್ರವಾಸದಿಂದ ಒಂದು ವಿಚಾರದಲ್ಲಿ ಬಹಳ ಆಶ್ಚರ್ಯವಾಗುತ್ತದೆ. ಏನೆಂದರೆ ಭಾರತವಾಸಿಗಳಾದ ನಾವು ಪಾಶ್ಚಿಮಾತ್ಯ ದೇಶಗಳ ವಿಭಾಗದಲ್ಲಿ ಎಷ್ಟೋ ತಿಳಿದಿರುವೆವು. ಆದರೆ ಯುರೋಪಿನವರಿಗೆ ನಮ್ಮ ದೇಶದ ವಿಷಯವಾಗಿ ಎಷ್ಟು ಸ್ವಲ್ಪ ಜ್ಞಾನವಿದೆ! ಮಿಲಾನ್ ನಗರದಲ್ಲಿ ನನಗೂ ಒಬ್ಬ ಇಟಾಲಿಯಾನನಿಗೂ ಸಂಭಾಷಣೆ ನಡೆಯಿತು. ಆತನು ಭಾರತದ ರಾಜ ಮಹಾರಾಜರು, ಆನೆಗಳು, ಬಂಗಾಳದ ಸಿಂಹಗಳು ಮತ್ತು ಸರ್ಪಗಳು ಇವುಗಳ ವಿಚಾರವನ್ನು ಕೇಳಿದ್ದಾನಂತೆ. ಅವನ ಮಾತಿನಲ್ಲಿ ಭಾರತದ ಸರ್ಪಗಳ ಹೊರತು ಇತರ ವಿಚಾರಗಳನ್ನೂ ಸಹ ತಿಳಿದುಕೊಳ್ಳಬೇಕೆಂಬ ಉತ್ಸಾಹವು ಕಂಡುಬರುತ್ತಿತ್ತು. ಪ್ರತಿ ಯೂರೋಪಿಯನನಿಗೂ ಸರ್ಪದ ಭಯವೊಂದು ಹೊರತು, ರಾಜರ ಆನೆಗಳ ಮೇಲೆ ಕುಳಿತು, ಸಿಂಹ, ಹುಲಿಗಳ ಬೇಟೆಯಾಡುವುದಕ್ಕೆ ಹೇಗೆ ತಾನೇ ಆಸೆ ಇಲ್ಲ? ಶೇ. 90 ಮಂದಿ ಯೂರೋಪಿಯನರಿಗೆ ಭಾರತದ ವಿಚಾರದಲ್ಲಿ ಇದಕ್ಕಿಂತ ಹೆಚ್ಚು ಜ್ಞಾನವೇ ಇಲ್ಲ ಇದು ಹೊರತು ಅಲ್ಲಿನವರಿಗೆ ಭಾರತದ ಧರ್ಮ, ಸಂಸ್ಕೃತಿ, ಕಾಂಗ್ರೆಸ್ ಸುದ್ದಿಗಳು ಇವ್ಯಾವುದೂ ಗೊತ್ತೇ ಇಲ್ಲ ಆದರೆ "ಗ್ಯಾಂಡಿ" (ಮಹಾತ್ಮಾಜೀಯವರು) ಮತ್ತು "ಟ್ಯಾಗೋರ್" (ಕವಿ ರವೀಂದ್ರರು) ಇವರ ಹೆಸರನ್ನು ಕೆಲವರು ಮಾತ್ರ ಬಲ್ಲರು. ಗಾಂಧಿಯವರ ವಿಚಾರದಲ್ಲಿ ಅವರೊಬ್ಬರು ಲಂಗೋಟಿ ಧರಿಸುವ ವ್ಯಕ್ತಿಯೆಂದೂ, ಆಡಿನ ಹಾಲನ್ನು ಕುಡಿಯುವವರೆಂದೂ, ಆಗಾಗ್ಯೆ ಇಂಗ್ಲೀಷರೊಡನೆ ಹೋಡಾಡುವವರೆಂದೂ ಅವರ ಭಾವನೆ. ಗಾಂಧೀಜೀಯವರು ದೊಡ್ಡವರೆಂದೂ, ಸತ್ಯ ಮತ್ತು ಶಾಂತತೆಯ ಉಪಾಸಕರೆಂದೂ ಬಲ್ಲರು. ಮಹಾತ್ಮಾಜೀಯವರ ವಿಚಾರದಲ್ಲಿ ಅಲ್ಲಿಯವರಿಗೆ ಈ ಆದರಭಾವನೆಗಳಿಲ್ಲದೆ ಹೋಗಿದ್ದಲ್ಲಿ ನಾನು ಅಲ್ಲಿ ತಲೆಯೆತ್ತಿಕೊಂಡು ತಿರುಗಾಡಲು ಸಹ ಸಾಧ್ಯವಿರುತ್ತಿರಲಿಲ್ಲ. ಗಾಂಧಿಯವರಲ್ಲಿರುವ ಅವರ ಜ್ಞಾನವೇ, ನನ್ನನ್ನು ಹೋಪೆಡೆಯಲ್ಲೆಲ್ಲಾ ಅಪಮಾನದಿಂದುಳಿಸಿದುದು.

ಬರ್ಲಿನ್ ನಗರದ ಒಂದು ಘಟನೆ ಅಲ್ಲಿ ಮ್ಯೂಜಿಯಂ ನೋಡಲು ಹೋದೆ, ನಾನೂ ಒಬ್ಬ ಜರ್ಮನನೆಂದೇ ಭಾವಿಸಿ ನೋಡಲು ಅನುಮತಿ ದೊರೆಯಿತು. ಹೊರಡುವಾಗ ನಾನು ಅವನಿಗೆ ನಮಸ್ಕಾರಮಾಡಲು ಅವನಿಗೆ ನನ್ನ ವಿಚಾರವನ್ನು ತಿಳಿಯಬೇಕೆಂದೆನಿಸಿತು. ನಾನು ಭಾರತದವನೆಂದು ಹೇಳಲು ಅವನಿಗೆ ಉತ್ಸಾಹವು ಹೆಚ್ಚಿ "ತಾವು "ಗ್ಯಾಂಡಿ" (ಗಾಂಧಿಜಿ)ಯವರನ್ನು ಬಲ್ಲಿರಾ?" ಎಂದು ಕೇಳಿದನು "ಹೌದು" ಎನಲು "ತಾವು ಎಂದಾದರೂ ಅವರೊಡನೆ ಸಂಭಾಷಣೆ ನಡೆಸಿರುವಿರಾ?' ಎಂದನು. "ಹೌದು" ನನ್ನಲ್ಲಿ ಅವರದೊಂದು ಪತ್ರ ಸಹ ಇದೆ"ಎಂದೆನು. ಅವನು ಆ ಪತ್ರವನ್ನು ನೋಡಿ ಹತ್ತಿರಕ್ಕೆ ಬಂದು—ಅವನು ಅದನ್ನು ಮುಟ್ಟಲಿಲ್ಲ—"ಇದು ಬಹಳ ಪವಿತ್ರ ವಸ್ತು. ನಾನು ಅದನ್ನು ಮುಟ್ಟಲು ಯೋಗ್ಯನಲ್ಲ ತಾವು ತಮ್ಮ ದೇಶಕ್ಕೆ ಹಿಂತಿರುಗಿದಾಗ ಮಹಾತ್ಮರಿಗೆ ನನ್ನ ಪ್ರೇಮಾಭಿವಂದನೆಗಳನ್ನು ತಿಳಿಸುವ ಕೃಪೆ ಮಾಡುವಿರಾ?" ಎಂದನು.

ಎಲ್ಲೆಲ್ಲೂ ಒಂದೇ ಪ್ರಶ್ನೆ

ಯುರೋಪಿನ ಅನ್ಯ ರಾಷ್ಟ್ರದವರಿಗಿಂತಲೂ, ಇಂಗ್ಲೆಂಡಿನಲ್ಲಿ ಕೆಲವರು ಭಾರತದ ವಿಚಾರದಲ್ಲಿ ಸ್ವಲ್ಪ ವಿಷಯಗಳನ್ನು ಬಲ್ಲರು—ಇದಕ್ಕೆ ಕಾರಣ ಅವರ ಸ್ವಾರ್ಥವೇ. ಇಷ್ಟರಿಂದಲೇ ಅವರಿಗೆ ನಮ್ಮ ವಿಭಾಗದಲ್ಲಿ ಆಸಕ್ತಿ ಇದೆ ಎಂದು ಭಾವಿಸಲಾಗದು. ಆದರೆ ಮೊದಲಿಗಿಂತಲೂ ವಿಶೇಷವಾಗಿ ಹೆಚ್ಚು ನಮ್ರತೆಯಿಂದಲೂ ಸಹಿಷ್ಣುತೆಯಿಂದಲೂ ಮಾತಾಡುವರು. ಕಾಂಗ್ರೆಸಿನ ಅಸ್ತಿತ್ವವನ್ನು ಸ್ವೀಕಾರ ಮಾಡುವರು. ಎಲ್ಲಿಯಾದರೂ ಈ ಮೂರೇ ಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ—(1)ತಾವು ಅಸ್ಪೃಶ್ಯರಿಗಾಗಿ ಏನು ಮಾಡಿರುವಿರಿ? (2) ಮುಸಲ್ಮಾನರು ಎಂದಾದರೂ ಹಿಂದುಗಳೊಡನೆ ಸೇರುವರೆ? (3) ಇಂಗ್ಲೀಷರು ಭಾರತವನ್ನು ಬಿಟ್ಟು ಬಂದಲ್ಲಿ, ನೀವು ಸುರಕ್ಷಿತರಾಗಿರಬಲ್ಲಿರಾ? ಅಲ್ಲಿನ ಪತ್ರಿಕೆಗಳಂತೂ ನಮ್ಮ ವಿಭಾಗದಲ್ಲಿ ಮೌನವಾಗಿಯೇ ಇರುವುವು. ಆದರೆ ಎಲ್ಲಿಯಾದರೂ, ಹಿಂದೂ ಮುಸ್ಲಿಂ ದೊಂಬಿಯಾದಾಗ, ಗಡಿನಾಡಿನಲ್ಲಿ ಏನಾದರೂ ಉಪದ್ರವವಾದಾಗ ಮಾತ್ರ ಇಲ್ಲಿನ ವಿಚಾರಗಳು ಪ್ರಕಟವಾಗುವುವು. ಪಂ ಜವಾಹರಲಾಲ್ ನೆಹರುಗಳ ಆಗಮನದ ಸುದ್ದಿಯನ್ನೂ ಸಹ ಪ್ರಕಟಿಸಲು ಅವುಗಳಿಗೆ ಮನಸ್ಸು ಬರಲಿಲ್ಲ ಆದರೆ ಗಾಂಧಿಜಿಯವರು "ಇನ್ನೊಂದು ವರ್ಷಕ್ಕಿಂತ ಹೆಚ್ಚಿಗೆ ಬದುಕಲಾರರೆಂಬುದನ್ನು ಖಂಡಿತ ಪ್ರಕಟಿಸದೆ ಬಿಡರು. New Statesman & Nationನ ಸಂಪಾದಕರನ್ನು ಕುರಿತು ಪ್ರಶ್ನಿಸಲು ಅವರು ಈ ರೀತಿ ಹೇಳಿಬಿಟ್ಟರು. "ಇಂಡಿಯಕ್ಕಿಂತ ಹೆಚ್ಚು ಮಹತ್ವದ ಸಂಬಂಧವುಳ್ಳ ಇತರ ದೇಶಗಳಿರುವಾಗ—ನಮಗೆ ಅವುಗಳಿಂದ ಹೆಚ್ಚು ಲಾಭವುಂಟು—ಇಂಡಿಯದ ಸುದ್ದಿಗಾಗಿ ನಾವು ಹೇಗೆ ತಾನೇ ಮಹತ್ವ ಕೊಡಲಾದೀತು? ಈಗಂತೂ ನಾವು ಜೆಕೋಸ್ಲೊವೇಕಿಯಾ, ಸ್ಪೇನ್, ಚೀನ ಇವುಗಳ ವಿಚಾರದಲ್ಲಿ ಬರೆಯಬೇಕಾಗಿದೆ. ಇಂಡಿಯಾವು ಯುರೋಪಿನ ಚಳವಳಿಯಿಂದ ರಷ್ಯವು ದೂರವಿರುವಂತೆ—ದೂರವಿದೆ. ಈಗಂತೂ ಕೊಲೆ, ಖೂನಿಗಳಿಲ್ಲದೆ ಇದ್ದಲ್ಲಿ ಸಮಾಚಾರವೆಲ್ಲಿಯದು? ನೋಡಿ ಸ್ಪೇನು ಮತ್ತು ಚೀನದಲ್ಲಿ ಸಾವಿರಾರು ಜನರು ಹತರಾಗುತ್ತಿರುವರು. ಬ್ರಿಟಿಷ್ ವೃತ್ತಪತ್ರಿಕೆಗಳು ನಿಮ್ಮಲ್ಲಿಯ ಸುದ್ದಿಗಳನ್ನು ಪ್ರಕಟಿಸಬೇಕೆನ್ನುವಿರಾದರೆ, ನೀವು ಹಾಗೆ ಸಾಯಬೇಕು ನೋಡಿ. ಈ ಕಾರಣದಿಂದ ನಾನು ನಿಮ್ಮ ವಿಚಾರವನ್ನು ಬರೆಯಲಾರೆನು. ಸಂಪಾದಕರೇನೋ ಉತ್ಸಾಹಿಗಳು, ಸ್ವಾತಂತ್ರ್ಯ ಪ್ರೇಮಿಗಳು. ಆದರೆ ತಮ್ಮ ವಾಚಕರನ್ನು ತೃಪ್ತಿಪಡಿಸದಿದ್ದರೆ ಅವರ ಗತಿ? ಅವರು ಗಾಂಧಿಯವರನ್ನು ಪೂಜ್ಯಭಾವದಿಂದೇನೋ ನೋಡುವರು. ಆದರೆ ಅವರ ರಾಜನೀತಿಯನ್ನು ಕಂಡರೆ ಮಾತ್ರ ಆಗದು. ಅವರು ಬಹಳ ಕೆಟ್ಟ ಪ್ರಚಾರಕರಂತೆ. ಲಾರ್ಡ್ ಲಿನ್‌ಲಿತ್‌ಗೋರವರು ಭಾರತಕ್ಕೆ ಹಿಂದಿರುಗಿದ ಮೇಲಂತೂ ಅವರು ಗಾಂಧಿಯವರನ್ನು ಅನುಕೂಲ ದೃಷ್ಟಿಯಿಂದಲೇ ನೋಡುತ್ತಿರುವರು. ಪಂ. ಜವಾಹರಲಾಲರ ಆತ್ಮಕಥೆಯು ಪ್ರಕಟಿತವಾದ ಮೇಲೆ ಅವರನ್ನು ಮರ್ಯಾದೆಯಿಂದ ಕಾಣುತ್ತಿರುವರು. ಅನೇಕರು ಅವರನ್ನು ನೋಡಬಯಸುವುದುಂಟು, ಅಧಿಕಾರಿಗಳು ಮಾತ್ರ "ಸಂಧಾನಕ್ಕೆ ಮಾತ್ರ ಸಾಧ್ಯವಿಲ್ಲ" ದ ಮನುಷ್ಯನೆಂದೇ ಹೆದರುವರು.

ರಾಜರೂ ವಿದ್ಯಾರ್ಥಿಗಳೂ

ನಮ್ಮಲ್ಲಿ ಅಲ್ಲಿಗೆ ಹೋಗುವ ರಾಜರು, ವಿದ್ಯಾರ್ಥಿಗಳಲ್ಲದೆ ನಮ್ಮ ವಿಚಾರವನ್ನು ಅಲ್ಲಿ ತಿಳಿಸಲು ನಾವು ಮಾಡಿರುವುದಾದರೂ ಏನು? ಇವರ ವಿಚಾರವನ್ನಂತೂ—ವಿಶೇಷವಾಗಿ ರಾಜರ—ಹೇಳಲೇ ಬೇಕಾಗಿಲ್ಲ! ಹಿಂದೂದೇಶದಲ್ಲಿ ದೊರೆಯದ ಆಮೋದಪ್ರಮೋದಗಳಿಗಾಗಿಯೇ ಅವರು ಅಲ್ಲಿಗೆ ಹೋಗುವುದು. ವಿದ್ಯಾರ್ಥಿಗಳಿಗೆ ಪರೀಕ್ಷೆಯ ಚಿಂತೆ ಹತ್ತಿರುತ್ತದೆ ಜ್ಞಾನಾರ್ಜನೆಯ ಯೋಚನೆಯಲ್ಲ!

ಉಡುಪು ಮತ್ತು ಪ್ರತಿಷ್ಠೆ

ಅಲ್ಲಿಗೆ ಹೋಗುವುದೇ ಹಾನಿಕರವೆಂದು ಅಭಿಪ್ರಾಯವಲ್ಲ, ಆದರೆ ಇಲ್ಲಿನ ವಿದ್ಯಾರ್ಥಿಗಳು ಅಲ್ಲಿಗೆ ಹೋದರೆ ಅವರ ವ್ಯವಹಾರ ರೀತಿನೀತಿಗಳು, ಅವರು ವಿದೇಶದಲ್ಲಿ ನಮ್ಮ ಸಂಸ್ಕೃತಿಯನ್ನು ಯಾವ ರೀತಿ ಪ್ರಕಟಿಸುವರು, ಈ ವಿಚಾರಗಳೇ ಮಹತ್ವಪೂರ್ಣವಾದುವು. ಉಡುಪನ್ನು ತೆಗೆದುಕೊಳ್ಳಿ. ಸ್ತ್ರೀಯರ ವಿಚಾರದಲ್ಲಂತೂ ಸೀರೆಯೇ ಸರಳವೂ, ಆಕರ್ಷಕವೂ ಆಗಿರುತ್ತದೆ. ನಮ್ಮ ಸ್ತ್ರೀಯರು ಅಲ್ಲಿ ಇದನ್ನೇ ಉಪಯೋಗಿಸುವುದರಿಂದ ಅಲ್ಲಿನವರು ಇವರನ್ನು ಬಹಳ ಗೌರವದಿಂದ ನೋಡುವರು, ಆದರೆ ಉಳಿದವರು? ಅವರು ಯುರೋಪಿಯನ್ ಉಡುಪಿನಲ್ಲೇ ತಮ್ಮ ಗೌರವವನ್ನು ಕಾಣುವರು. ನನ್ನ ಉಡುಪನ್ನು ನೋಡಿ ಇಟೆಲಿಯಲ್ಲಿ ಹಾಸ್ಯಮಾಡಲಾರಂಭಿಸಿದರು, ಆದರೆ ನಾನು ಅದರ ವಿವರಣೆಯನ್ನು ಹೇಳಿದಾಗ ಅವರು ಸಂತೋಷಪಟ್ಟು ಇತರ ಭಾರತೀಯರೂ ಸಹ ಏಕೆ ಈ ರೀತಿ ಉಡುಪನ್ನು ಧರಿಸುವುದಿಲ್ಲವೆಂದು ಕೇಳಿದರು.

ಹಡಗಿನಲ್ಲಿ ಇಬ್ಬರು ಭಾರತೀಯರು ಒಂದು ದಿನ ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದರು. ಆಗ ಒಬ್ಬ ಇಟೆಲಿಯವರು ನನ್ನನ್ನು ಕುರಿತು "ನಿಮ್ಮ ಮಾತೃಭಾಷೆ ಯಾವುದು? ಇವರೇಕೆ ಈ ರೀತಿ ಪರಭಾಷೆಯಲ್ಲಿ ಮಾತನಾಡುವರು?" ಎನ್ನಲು ಲಜ್ಜಿತನಾಗಿಹೋದೆ. ಭಾರತದ ವಿದ್ಯಾರ್ಥಿಗಳ ಕೋಣೆಯಲ್ಲಿ ಭಾರತೀಯತೆಯ ಕುರುಹೇ ಇರುವುದಿಲ್ಲ ಉಡುಪು, ಮಾತುಕತೆ, ಬಳಸುವ ವಸ್ತುಗಳು ಯಾವುವೂ ನಮ್ಮ ದೇಶದ್ದಲ್ಲ! ಅವರು ಒಂದುಕಡೆ ಭಾರತದ ಸ್ವಾತಂತ್ರ್ಯದ ವಿಚಾರದಲ್ಲಿ ಆಸಕ್ತಿ ತೋರಿಸುವರು, ಇನ್ನೊಂದು ಕಡೆ ಭಾರತದ ರೀತಿನೀತಿಗಳ ಕಡೆ ಉಪೇಕ್ಷೆ ತೋರಿಸುವರು.

ನಮ್ಮ ಮಾತೃಭೂಮಿ

ನಾವು ಈ ವಿಚಾರಗಳನ್ನೆಲ್ಲ ಬದಲಾಯಿಸಬೇಕಾಗಿದೆ. ನಮ್ಮ ದೇಶವಾಸಿಗಳು—ತಾವು ಯಾವಾಗಲೂ ಲಂಡನ್ನಲ್ಲಿ ಇರುವರೆಂದೋ ಏನೋ—ಈ ರೀತಿ ವರ್ತಿಸುತ್ತಿದ್ದರೆ, ನಮ್ಮ ದೇಶದ ವಿಚಾರದಲ್ಲಿ ಪರರಿಂದ ಹೇಗೆ ತಾನೆ ಸಹಾನುಭೂತಿಯನ್ನು ನಿರೀಕ್ಷಿಸಲಾದೀತು? ವಿದೇಶೀಯರಂತೂ ನಮ್ಮ ಪತ್ರಿಕೆಗಳನ್ನು ಓದುವಂತಿಲ್ಲ, ನಮ್ಮ ಸಮಾಚಾರವೂ ಅವರಿಗೆ ಬೇಡ ಈ ರೀತಿ ಇರುವಾಗ ಪ್ರವಾಸಕ್ಕೆಂದು ಪರದೇಶಕ್ಕೆ ಹೋಗುವ ನಮ್ಮವರು ತಾನೇ ಇಲ್ಲಿನ ಸ್ಥಿತಿಗತಿಗಳನ್ನು ಅಲ್ಲಿ ಪ್ರಚಾರ ಮಾಡಬೇಕು!

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್ ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: ಆನಂದರಾವ್ ಸರ್ಕಲ್, ಬೆಂಗಳೂರು.

ಭಾರತದ ಪರರಾಷ್ಟ್ರ ನೀತಿ

ಇದು ದೇಶಹಿತಕ್ಕನುಗುಣವಾಗಿದೆಯೆ?

ಯಾವುದೇ ರಾಷ್ಟ್ರವಾಗಲಿ — ಅದು ಎಷ್ಟೋ ಶಕ್ತಿಯುತವಾಗಿರಲಿ, ಅನ್ಯರಾಷ್ಟ್ರಗಳ ಸಹಯೋಗವಿಲ್ಲದೆ, ತಾನು ಸುರಕ್ಷಿತವಾಗಿರಲಾರದು. ಈ 20ನೇ ಶತಮಾನದ ಪ್ರಥಮ ಪಾದದಲ್ಲಿ, ಇಂಗ್ಲೆಂಡ್ ಮತ್ತು ಜಪಾನುಗಳ ನಡುವೆ ಸಂಬಂಧವಿರದಿದ್ದರೆ, ಜಪಾನು ಆಗಿನ ರಷ್ಯವನ್ನು ಪರಾಜಿತ ಮಾಡುವುದು ಅಸಂಭವವಾಗುತ್ತಿತ್ತು. ಗತ ಮಹಾಯುದ್ಧದಲ್ಲಿ ಮಿತ್ರಮಂಡಲಿಗೆ, ಜಪಾನ್, ಭಾರತ ಮತ್ತು ಅನ್ಯರಾಷ್ಟ್ರಗಳ ಸಹಾಯ ದೊರೆಯದೆ ಇದ್ದಿದ್ದರೆ, ಜರ್ಮನಿಗೆ ಖಂಡಿತ ಜಯ ದೊರೆಯುತ್ತಿತ್ತು. ಇಂಗ್ಲೆಂಡಾದರೂ ಇಷ್ಟು ಬೃಹತ್ಸಾಮ್ರಾಜ್ಯವನ್ನು ಸ್ಥಾಪಿಸಿರುವುದು ತನ್ನ ಬಾಹುಬಲದಿಂದೆಂದು ತಿಳಿದಿರುವಿರಾ? ಇಲ್ಲ. ಇದು ತನ್ನ ಬುದ್ಧಿಶಕ್ತಿಯಿಂದ, ಇತರ ರಾಷ್ಟ್ರಗಳ ಶಕ್ತಿಯನ್ನು ಉಪಯೋಗಿಸಿಕೊಂಡು, ಅಥವಾ ತನ್ನ ಶತ್ರುಗಳ ದಮನದಿಂದ ಈ ರೀತಿ ಇದೆ. ಈ ಕಾರಣದಿಂದಲೇ ಇಂಗ್ಲೆಂಡಿಗೆ ಪ್ಯಾಲಸ್ಟೈನ್, ಈಜಿಪ್ಟ್, ಭಾರತ ಆದಿದೇಶಗಳ ಪರರಾಷ್ಟ್ರ ನೀತಿಯ ಸಂಚಾಲನಸೂತ್ರವು ಚಿರಕಾಲ ತನ್ನ ಕೈಯಲ್ಲಿ ಇರಬೇಕೆಂಬ ಆಸೆ ಇರುವುದು. ಈ ಕಾರಣದಿಂದ ಅದು ಈ ಎಲ್ಲ ದೇಶಗಳೂ ಬ್ರಿಟನ್ನಿನ ವಿರೋಧಿಗಳೊಡನೆ ಸ್ನೇಹ ಬೆಳೆಸದಂತೆ ನಿರೋಧಿಸಬಲ್ಲುದು. ಸದ್ಯದ ಭಾರತಶಾಸನ ವಿಧಾನದ ರೂಪರೇಖೆಗಳನ್ನು ಸ್ಥಿರಪಡಿಸಲು ಏರ್ಪಡಿಸಿದ್ದ ಚಕ್ರಗೋಷ್ಠಿಯಲ್ಲಿ, ಇಂಗ್ಲಿಷ್ ಪ್ರತಿನಿಧಿಗಳು ಅಜ್ಞಾತಕಾಲದ ವರೆಗೂ ಭಾರತದ ರಾಷ್ಟ್ರನೀತಿಯು—ಭಾರತದ ಸ್ವಾರ್ಥಕ್ಕಲ್ಲ, ಬ್ರಿಟಿಷ್ ಸಾಮ್ರಾಜ್ಯವಾದದ ಸ್ವಾರ್ಥಕ್ಕಾಗಿ – ಬ್ರಿಟಿಷ್ ಸರಕಾರದ ಕೈಯಲ್ಲಿಯೇ ಇರಬೇಕೆಂದು ವಾದಿಸಿದರು. ಇದರಂತೆ ಗವರ್ನರ್ ಜನರಲ್ಲಿಗೆ ಪೂರ್ಣ ಅಧಿಕಾರ ಕೊಡಲಾಗಿದೆ.

ಪರರಾಷ್ಟ್ರ ನೀತಿಯ ಅರ್ಥ ಯಾವುದೇ ರೀತಿಯಾಗಿಯೇ ಇರಲಿ, ವಸ್ತುತಃ ಈ ನೀತಿಯು ಪರಾಧೀನ ರಾಷ್ಟ್ರದ ವಿಷಯದಲ್ಲಿ ಅನ್ವಯವಾಗುವುದಿಲ್ಲ. ಪರರಾಷ್ಟ್ರ ನೀತಿ ಪರಾಧೀನತೆ ಈ ಎರಡೂ ಪರಸ್ಪರ ವಿರೋಧ ಪ್ರಕೃತಿಗಳು. ಈ ಸಿದ್ಧಾಂತ ರೀತಿ ಭಾರತವು ಪರಾಧೀನವಾಗಿರುವುದರಿಂದ, ಅದಕ್ಕೆ ಯಾವ ಪರರಾಷ್ಟ್ರ ನೀತಿಯೇ ಇಲ್ಲವೆಂದು ಅರ್ಥವಾಗಲಾರದು. ಈ ವಿಷಯದಲ್ಲಿ ಭಾರತದ, ಭಾರತವಾಸಿಗಳ ಯಾವುದೇ ಸ್ವತಂತ್ರ ನೀತಿಯಿರುವುದಿಲ್ಲ. ಆದರೆ ಭಾರತವನ್ನು ಆಳುವವರಿಗೆ ಈ ನೀತಿ ಇದ್ದೇ ಇದೆ. ಮತ್ತು ಈ ಶಕ್ತಿಯು ಭಾರತವನ್ನು ಕೇಂದ್ರವಾಗಿಟ್ಟುಕೊಂಡೇ ಇದುವರೆಗೂ ನಡೆದುಬಂದಿದೆ. ಈ ರೀತಿ ಈ ದೇಶದವರಿಗೆ ಯಾವ ಅಧಿಕಾರವೂ ಇಲ್ಲ. ಯಾವುದೇ ರಾಷ್ಟ್ರದ ಪರರಾಷ್ಟ್ರದ ನೀತಿಯೊಡನೆ ಅಲ್ಲಿನ ಸಾಮೂಹಿಕ ನೀತಿಯ ಸಂಬಂಧವೂ ಇರುತ್ತದೆ. ಪರಾಧೀನ ದೇಶದ ಕರ್ತವ್ಯವು ಶಾಸನವರ್ಗದವರಿಂದ ಮುಕ್ತಿಹೊಂದಲು ಶಕ್ತಿ ಸಂಚಯನಮಾಡಿಕೊಳ್ಳುವುದೇ ಆಗಿರುವುದು. ಆಧುನಿಕ ಕಾಲದಲ್ಲಿ, ಎಷ್ಟು ದುರ್ಬಲರಾಷ್ಟ್ರಗಳೂ ಕೂಡಾ, ಇತರ ರಾಷ್ಟ್ರಗಳ ಸಂಬಂಧದಿಂದ ಮುಕ್ತರಾಗಿರಲು, ಅವುಗಳ ಪರರಾಷ್ಟ್ರ ನೀತಿಯ ವೈಶಿಷ್ಟ್ಯವೇ ಕಾರಣ. ಐರ್ಲೆಂಡ್, ಈಜಿಪ್ಟ್ ಆದಿ ದೇಶಗಳೇ ಇದಕ್ಕೆ ಉದಾಹರಣೆ.

ಅಂದಮೇಲೆ ನಮ್ಮ ವಿಚಾರ ವಿನಿಮಯವನ್ನೂ ಸಹ ಇತರ ರಾಷ್ಟ್ರಗಳೊಡನೆ ಮಾಡಲು ನಾವು ಸಮರ್ಥರಿಲ್ಲವೆ? ಯಾವ ಪರಾಧೀನ ದೇಶವೇ ಆಗಲಿ, ಇಂತಹ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಅನಿವಾರ್ಯ. ಕೇವಲ ವ್ಯವಸಾಯ, ವಾಣಿಜ್ಯ ಮತ್ತು ಸಂಸ್ಕೃತಿಕ ಸಂಬಂಧಕ್ಕೆಂದಿಷ್ಟೇ ಮಾತ್ರವೇ ಅಲ್ಲದೆ, ಸ್ವಾತಂತ್ರ್ಯವನ್ನೂ ಹೊಂದಲು ಸಹ ಇದು ಆಗತ್ಯ. ಪಂ. ಜವಹರರು ಸಹ ಈ ವಿಚಾರದಲ್ಲಿ ಎಲ್ಲರ ಧ್ಯಾನವನ್ನೂ ವಿಶೇಷ ರೀತಿಯಿಂದ ಆಕರ್ಷಿಸಿರುವರು. ಈಗ ಸ್ವಲ್ಪ ವರ್ಷಗಳಿಂದೀಚೆಗೆ ಭಾರತವು ಅಂತರರಾಷ್ಟ್ರೀಯ ಜಗತ್ತಿನಲ್ಲಿ ಪಡೆದಿರುವ ಪ್ರತಿಷ್ಠೆಗೆ ನೆಹರೂಗಳ ಸ್ವದೇಶ ಸೇವಾ ನಿಷ್ಠೆಯೇ ಮುಖ್ಯ ಕಾರಣವು. ಜಗತ್ತಿನ ಭಿನ್ನಭಿನ್ನ ಸ್ಥಾನಗಳ ದಲಿತ ಸ್ವದೇಶ ಪ್ರೇಮಿಗಳ ಸಾಧನೆಯೊಡನೆ, ಇವರು ಭಾರತದ ರಾಷ್ಟ್ರವಾದಿಗಳದೊಂದು ಆಂತರಿಕ ಯೋಗಸೂತ್ರವನ್ನೇ ಸ್ಥಾಪಿಸಿರುವರು. ಅತ್ಯಾಚಾರ ಪೀಡಿತರಾದ ಅಬಿಸೀನಿಯರು, ಸ್ಪೈನಿನವರು, ಪ್ಯಾಲಸ್ಟೈನಿನ ಸ್ವಾತಂತ್ರ್ಯಕಾಮಿಗಳು, ಚೀನದ ಸಾಮ್ರಾಜ್ಯವಾದದ ನಿರ್ಯಾತಕರು ಇವರ ಮೇಲೆ ನೆಹರುಗಳ ಆಂತರಿಕ ವೇದನೆಯ ಪ್ರಭಾವವು ಬಿದ್ದು, ತತ್ಪರಿಣಾಮವಾಗಿ ಭಾರತದ ರಾಜನೀತಿ ಕ್ಷೇತ್ರದಲ್ಲಿ ಸಹ ಅದರ ಪ್ರಭಾವವು ತೋರುತ್ತಿದೆ. ಕಾಂಗ್ರೆಸಿನ ನೀತಿಯು ಭಾವೀ ಸಾಮ್ರಾಜ್ಯವಾದೀ ಸಂಗ್ರಾಮದಲ್ಲಿ, ಸಾಮ್ರಾಜ್ಯವಾದೀ ರಾಷ್ಟ್ರಗಳ ಪಕ್ಷವನ್ನು ಸೇರಬಾರದೆಂಬುದೇ ಇದೆ.

ವಿದೇಶಗಳೊಡನೆ ಇನ್ನೂ ಅನೇಕ ರೂಪಗಳಲ್ಲಿ ಸಂಪರ್ಕ ಬೆಳೆಸುವುದರಿಂದ ಪ್ರಯೋಜನವುಂಟು. ಯುರೋಪು, ಅಮೇರಿಕೆಗಳಲ್ಲಿ, ಭಾರತದ ವಿಚಾರದಲ್ಲಿ–ಇಲ್ಲಿನ ಶಿಕ್ಷಣ, ಸಭ್ಯತೆ, ಸಂಸ್ಕೃತಿ, ಸಮಾಜ, ಸಾಹಿತ್ಯ ಮತ್ತು ರಾಜ ನೀತಿಕ ಸಂಬಂಧಗಳಲ್ಲಿ ಬಹಳ ಅಸತ್ಯದ, ಅರ್ಧಸತ್ಯದ ವಿಷಯಗಳು ಸ್ವಾರ್ಥಾಂಧವ್ಯಕ್ತಿಗಳ ಮೂಲಕ, ಪ್ರಚಾರಮಾಡಲ್ಪಡುತ್ತಿವೆ. ನಾವು ಈ ಕಡೆಗೂ ವಿಶೇಷ ಧ್ಯಾನವನ್ನಿಡಬೇಕು. ವಿದೇಶಗಳೊಡನೆ ವಾಣಿಜ್ಯ ವ್ಯವಸಾಯದ ಸಂಬಂಧವನ್ನು ಕಲ್ಪಿಸಿ, ಸ್ವದೇಶದ ಸಮೃದ್ಧಿಯನ್ನು ಸಾಧಿಸುವುದು. ಇತರ ದೇಶಗಳ ಅಭೀಷ್ಟವಾಗಿರುತ್ತದೆ. ಆದರೆ, ಪರಾಧೀನ ದೇಶವೇನು ಮಾಡಬಲ್ಲದು? ನಮ್ಮಲ್ಲಿ ರಾಷ್ಟ್ರ ಶಕ್ತಿಯು ಬರುವ ವರೆಗೆ, ನಾವು ಯಥಾಸಂಭವ ಸಚೇಷ್ಟರಾಗಿರಬೇಕು. ಪರಾಧೀನ ದೇಶಗಳ ಮುಕ್ತಿ ಪಥವು, ಪರದೇಶೀಯರಸರ ಕೈಲಿರುವುದರಿಂದ ಅವರ ತಾಳಕ್ಕೆ ನಾವು ಕುಣಿಯಬೇಕಾಗುವುದು. ಆದರೆ ಅಂತರರಾಷ್ಟ್ರೀಯ ಸ್ಥಿತಿಯ ಜಟಿಲತೆಯ ಸುಯೋಗವನ್ನು ಗ್ರಹಿಸಿ, ಪರಾಧೀನರೂ ಸಹ ಸ್ವಾತಂತ್ರ್ಯ ಹಾದಿಯಲ್ಲಿ ಮುಂದುವರಿಯಲೆತ್ನಿಸುವರು.

1936ರ ಅಬಿಸೀನಿಯದ ವಿಭಾಗದಲ್ಲಿ ಇಟಲಿ ಮತ್ತು ಬ್ರಿಟನ್ನಿನ ನಡುವೆ ಸಂಘರ್ಷಣವಾಗುವ ಸಂಭವವಿತ್ತು. ಆಗ ಬ್ರಿಟನ್ನಿನ ತಾಳಕ್ಕನುಸಾರವಾಗಿ ಕುಣಿಯಲು ಸಿದ್ಧವಿರಲಿಲ್ಲ. ಅಲ್ಲಿನವರು ನಾನಾ ರೀತಿಯಲ್ಲಿ ಬ್ರಿಟಿಷರ ವಿರೋಧವಾಗಿ ಹರತಾಳವನ್ನಾರಂಭಿಸಿದರು. ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಈಜಿಪ್ಟಿಗೆ ಮಹತ್ವ ಪೂರ್ಣವಾದ ಸಾಧನವಿರುವುದರಿಂದ, ಇಂಗ್ಲೀಷರು, ಅವರೊಡನೆ ಸಂಧಿಗೆ ಸಿದ್ಧರಾದರು. ಈಜಿಪ್ಟಿಗೆ ಇದು ವರೆಗೆ ದೊರೆತಿರುವ ಸ್ವಾಧೀನತೆಯು ಅಂತರರಾಷ್ಟ್ರೀಯ ಸ್ಥಿತಿಯಿಂದಲೇ. ಈಗ ಸಿರಿಯಾವನ್ನೂ ನೋಡೋಣ. ಅಬಿಸೀನಿಯವನ್ನು ನುಂಗಿ, ಇಟೆಲಿಯು ಭೂಮಧ್ಯ ಸಮುದ್ರದಲ್ಲಿ ಪ್ರಬಲವಾಗಲು, ಫ್ರಾನ್ಸು ವಿದ್ರೋಹಿ ಸಿರಿಯಾವನ್ನು ಶಾಂತ ಮಾಡಬೇಕಾಗಿ ಬಂತು.

ನಮಗೆ ಈ ಸುಯೋಗವು ಲಭ್ಯವಾಗುವುದಿಲ್ಲವೇ. ಇಟೆಲಿಯು ಭೂಮಧ್ಯಸಾಗರದಲ್ಲಿ ತನ್ನ ಶಕ್ತಿಯನ್ನು ವೃದ್ಧಿಪಡಿಸಿಕೊಳ್ಳುತ್ತದೆ. ಜರ್ಮನಿಯೊಡನೆ ಸೇರಿ ತನ್ನ ಮನೋಭೀಷ್ಟವನ್ನು ಪೂರ್ತಿಮಾಡಿಕೊಳ್ಳುತ್ತಿದೆ.

ಪೂರ್ವದಲ್ಲಾಗುತ್ತಿರುವುದೇನು? ಚೀನದ ಮೇಲೆ ಜಪಾನ್ ಧಾಳಿ ಆಗುತ್ತಿದೆ. ಸಾಧಾರಣವಾಗಿ ಚೀನದ ಎಲ್ಲ ರೇವು ಪಟ್ಟಣಗಳು ಅವರ ವಶವಾಗಿವೆ. ಈ ರೀತಿಯಲ್ಲಿ ಎಲ್ಲೆಲ್ಲೂ ಬ್ರಿಟಿಷರ ಪ್ರಬಲ ಪ್ರತಿದ್ವಂದಿಗಳು ತಲೆ ಎತ್ತುತ್ತಿವೆ. ಭಾರತದ ಹಣದಿಂದ ಬ್ರಿಟಿಷ್ ಸೇನೆಯನ್ನೂ ಯಂತ್ರಚಾಲಿತ (Mechanised) ವನ್ನೂ ಮಾಡಲಾಗುತ್ತಿದೆ. ಇಂತಹ ಸಮಯದಲ್ಲಿ ನಮ್ಮ ಕರ್ತವ್ಯವೇನು?

ಎಲ್ಲಾ ದೇಶಗಳಲ್ಲಿಯೂ ಆತ್ಮರಕ್ಷಣೆಯ ಆವಶ್ಯಕತೆ ಇದ್ದೇ ಇದೆ—ಭಾರತಕ್ಕಂತೂ ಇದು ಅನಿವಾರ್ಯ. ಆದರೆ ಇದರಲ್ಲಿ ಭಾರತೀಯರು ಕಣ್ಮುಚ್ಚಿ ಆಳರಸರ ಆಜ್ಞೆಯಂತೆ ಕುಣಿದರೆ, ಲಾಭವಿಲ್ಲ. ಇತರ ದೇಶಗಳಿಗೆ, ಅಂತರರಾಷ್ಟ್ರೀಯ ಪರಿಸ್ಥಿತಿಯಿಂದ ಉಂಟಾಗಿರುವ ಒಂಚತನದಿಂದ ಕೆಲವು ಪಾಠ ಕಲಿಯಬೇಕಾಗಿದೆ. ಪೂರ್ವದಲ್ಲಿ ಭಾರತೀಯರಿಗೆ ಯಾವ ಅಧಿಕಾರವೂ ಇಲ್ಲ—ಮೊದಲು ಅಲ್ಪ ಸ್ವಲ್ಪ ಇತ್ತು. ನಮ್ಮ ರಾಷ್ಟ್ರೀಯ ಮಹಾಸಭೆಯು ಯಾವ ರೀತಿ ಪರರಾಷ್ಟ್ರ ನೀತಿಯ ಸಂಬಂಧದಲ್ಲಿ ಸ್ವತಂತ್ರವಾದ ಮಾರ್ಗವನ್ನು ಹುಡುಕಬೇಕಾಗಿದೆಯೋ ಅದೇ ರೀತಿ ದೇಶರಕ್ಷಣೆಯ ವಿಚಾರದಲ್ಲಿ ಸಹಧ್ಯಾನವಿರಬೇಕಾಗಿದೆ. ರಾಷ್ಟ್ರಪತಿಗಳು ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರಿ ಸಮಿತಿಗೆ (Shadow cabinet) ಛಾಯಾ ಮಂತ್ರಿ ಸಭೆಯೆಂದು ಹೆಸರಿಟ್ಟಿದ್ದಾರೆ. ಇವರ ಸದಸ್ಯರು ಪ್ರತ್ಯೇಕ ವಿಷಯದಲ್ಲಿ ವಿಶೇಷಜ್ಞರಾಗಿರಬೇಕು. ಒಬ್ಬ ಸದಸ್ಯರು ಪರರಾಷ್ಟ್ರ ನೀತಿಯ ಸಂಬಂಧದಲ್ಲಿಯೂ, ಇನ್ನೊಬ್ಬರು ದೇಶರಕ್ಷಣೆಯ ವಿಭಾಗದಲ್ಲಿ ಜವಾಬ್ದಾರರೂ. ಪರಾಧೀನ ಭಾರತದ ಪರರಾಷ್ಟ್ರ ನೀತಿಯ ಅರ್ಥವೇನೆಂದರೆ ದೇಶದ ಮುಕ್ತಿಗಾಗಿ, ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಸಹಜ ದೃಷ್ಟಿಯಿಂದ ಅವಲೋಕಿಸಿ, ಪ್ರತಿಯೊಂದು ಕ್ಷೇತ್ರದಲ್ಲೂ ದೇಶದ ಸ್ವಾಧೀನತೆಗಾಗಿ ಪ್ರಯತ್ನಪಡುವುದೇ.

ಹೊಸ ಪುಸ್ತಕ!   ಇದೀಗ ಪ್ರಕಟವಾಗಿದೆ!

ಅಜ್ಞಾನ ತಿಮಿರ ಮಾರ್ತಾಂಡ

ಜನ್ಮತಃ ಅಸ್ಪೃಶ್ಯತೆಯು ಇರಲಿಲ್ಲವೆಂಬುದನ್ನೂ ಅಂಧ ಸಂಪ್ರದಾಯದ ಸನಾತನಿಗಳ ವಾದದಲ್ಲಿ ತಿರುಳಿಲ್ಲವೆಂಬುದನ್ನೂ ವಿವರಿಸಿ ಪುರಾಣ, ಸ್ಮೃತಿಗಳ ಆಧಾರದಿಂದ ಶ್ರೀ. ಬಿ. ಅಂತಯ್ಯ ಶೆಟ್ಟಿರಿಂದ ನವೀನವಾಗಿ ಬರೆಯಲಾದ ಹೊಸ ಪುಸ್ತಕ.

ಬೆಲೆ: 0–4–0 ಮಾತ್ರ.

ಇದರ ಉತ್ಪತ್ತಿಯು ಹರಿಜನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲ್ಪಡುವುದು. 0–4–6 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳಿಸಲಾಗುವುದು.

ಉಡುಪಿಯಲ್ಲಿ ಪುಸ್ತಕ ಸಿಗುವ ಸ್ಥಳ:
Navabharat Book Depot,
Udipi.

ಬಿ. ಅಂತಯ್ಯ ಶೆಟ್ಟಿ,
ಹರಿಜನ ಶಿಕ್ಷಣ ಸಹಾಯಕ ಸಂಘ,
ಬ್ರಹ್ಮಾವರ.

ಮದನರತಿಕಾಮಶಾಸ್ತ್ರವೆಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಸೂಳೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು

ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗೆ ಪ್ರೇಮ ಮತ್ತು ಸಂಯೋಗಕ್ಕಾದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನೆಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co, *Nambulier Street*, G. T. MADRAS.

ಮಾನ್ಯ ಮಂತ್ರಿಗಳ ಆಗಮನ

ಮೋಟರ್ ಕೆಲಸಗಾರರ ಸಂಘದವರಿಗೆ ಹಿತೋಕ್ತಿ

"ನೀವು ಒಳ್ಳೆಯ ಕೆಲಸಗಾರರಾಗಿರಿ—ನಿಮ್ಮ ಮಾಲಕರಿಗೆ ವಿಧೇಯರಾಗಿರಿ—ಹೆಚ್ಚು ಲಾಭ ಬರುವಂತೆ ಮಾಡಿ, ನಿಮ್ಮ ಹಕ್ಕನ್ನು ಸಾಧಿಸಿರಿ."

ಪತ್ರಿಕೋದ್ಯಮಿಗಳ ಸಂಘದ ಉದ್ಘಾಟನೆ.

(ನಮ್ಮ ವಿಶೇಷ ಪ್ರತಿನಿಧಿಗಳಿಂದ) ಮಂಗಳೂರು ತಾ. 18-2-'39

ತಾ. 14-2-1939ನೇ ಸಾಯಂಕಾಲ ಮದ್ರಾಸ್ ಸರಕಾರದ ಲೇಬರ್ ಮಂತ್ರಿಗಳಾದ ಮಾನ್ಯ ಶ್ರೀ| ವಿ. ವಿ. ಗಿರಿಯವರೂ ವಿದ್ಯಾಂಗದ ಮಂತ್ರಿಗಳಾದ ಮಾನ್ಯ ಶ್ರೀ| ಸಿ. ಜೆ. ವಾರ್ಕಿಯವರೂ ಮಲಬಾರ್ ಎಕ್ಸ್‌ಪ್ರೆಸ್ಸಿನಿಂದ ಮಂಗಳೂರಿಗೆ ಚಿತ್ತೈಸಿದರು. ಇವರನ್ನು ಸ್ವಾಗತೀಕರಿಸಲು ಹಲವರು ಬಂದಿದ್ದರು. ಮಂತ್ರಿಗಳು ರೈಲಿನಿಂದಿಳಿದೊಡನೆ ಅವರುಗಳಿಗೆ ಹಲವು ಸಂಸ್ಥೆಗಳ ಮತ್ತು ಮಹನೀಯರ ಪರವಾಗಿ ಪುಷ್ಪ ಮಾಲಿಕೆಗಳು ಅರ್ಪಿಸಲ್ಪಟ್ಟವು.

ಸಾಯಂಕಾಲ ೫—೩೦ಕ್ಕೆ ದ. ಕ. ಜಿಲ್ಲಾ ವಸ್ತು ಪ್ರದರ್ಶನ ಮಂದಿರದ ಉದ್ಘಾಟನಾ ಸಮಾರಂಭವು ಮಾನ್ಯ ಗಿರಿಗಳಿಂದ ನೆರವೇರಿಸಲ್ಪಟ್ಟಿತು.

೬-೩೦ಕ್ಕೆ ಸರಿಯಾಗಿ ಕಾಂಗ್ರೆಸ್ ಕಚೇರಿಯಲ್ಲಿ ದಿವಂಗತ ದೇಶಭಕ್ತ ಕಾರ್ನಾಡು ಸದಾಶಿವರಾಯರ ಭಾವಚಿತ್ರದ ಅನಾವರಣ ಕಾರ್ಯವು ಮಾನ್ಯ ಗಿರಿಗಳ ಹಸ್ತದಿಂದ ನೆರವೇರಿತು. ಈ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ಶ್ರೀಮತಿ ಕಮಲಾದೇವಿಯವರು ವಹಿಸಿಕೊಂಡಿದ್ದರು.

ಸಾಯಂಕಾಲ ೬-೩೦ರ ಅನಂತರ ಮಾನ್ಯ ಗಿರಿಗಳು ನಗರದ ಕೆಲವು ಲೇಬರ್ ಶಾಲೆಗಳನ್ನು ಸಂದರ್ಶಿಸಿದರು. ಮತ್ತು ರಾತ್ರಿ ೮ಗಂಟೆಗೆ ಪೆಂಟ್ಲೇಂಡ್ ಪೇಟೆಯ ಮೈದಾನದಲ್ಲಿ ಮೋಟಾರ್ ಕೆಲಸಗಾರರ ಮತ್ತು ಮಹಾಜನರ ಸಭೆಯ ಮುಂದೆ ಭಾಷಣಮಾಡಿದರು.

ಮಾನ್ಯ ಗಿರಿಗಳ ಭಾಷಣದ ಸಾರ—

ಗೆಳೆಯರೇ, ನಾನು ಕೆಲಸಗಾರರ ಹಿತಕಾಂಕ್ಷಿಯಾಗಿದ್ದೇನೆ. ಅವರ ಹಿತದ ವಿಷಯದಲ್ಲಿ ನನಗೆ ನಂಬಿಕೆಯಿದೆ. ೨೦ವರ್ಷಗಳಿಂದ ಕೆಲಸಗಾರರ ಸೇವೆ ಮಾಡುತ್ತಿದ್ದೇನೆ. ಅಧಿಕಾರ ಬಿಟ್ಟ ಮೇಲೂ ಕೆಲಸಗಾರರ ಹಿತಕ್ಕಾಗಿಯೇ ದುಡಿಯುವವನಿದ್ದೇನೆ. ಚಳವಳಿಗಳನ್ನು ಹೂಡುವಾಗ ನಿಮ್ಮ ಕೇಳಿಕೆಗಳು ನ್ಯಾಯವಾಗಿರಬೇಕು. ನೀವು ಅನುಸರಿಸುವ ರೀತಿಯು ಪರಿಶುದ್ಧವಾಗಿರಬೇಕು.

ನಿಮಗೆ ನನ್ನ ಸೂಚನೆಗಳು:— ನೀವು ಒಳ್ಳೆಯ ಕೆಲಸಗಾರರಾಗಬೇಕು. ನಿಮ್ಮ ಮಾಲಕರಿಗೆ ವಿಧೇಯರಾಗಿರಬೇಕು. ನೀವು ಕೆಲಸ ಮಾಡುವ ಕೈಗಾರಿಕೆಯಲ್ಲಿ ಲಾಭವು ದೊರಕುವಂತೆ ಮಾಡಬೇಕು. ಇಷ್ಟನ್ನು ನೀವು ಮಾಡಿದಾಗ ನಿಮ್ಮ ಹಕ್ಕುಗಳು ಆರಂಭವಾಗುವುವು. ಇಷ್ಟು ಮಾಡಿದರೆ ನಿಮ್ಮ ಹಕ್ಕುಗಳಿಗೆ ಹೋರಾಡಲು ನಿಮಗೆ ಅಧಿಕಾರವುಂಟಾಗುತ್ತದೆ



ನಿಮಗೆ ಸಂಘಗಳನ್ನು ಸ್ಥಾಪಿಸುವ ಅಧಿಕಾರವಿದೆ. ನಿಮ್ಮ ಸಂಘವನ್ನು ಸರಿಯಾದ ಟ್ರೇಡ್ ಯೂನಿಯನ್ ರೀತಿಯಲ್ಲಿ ನಡಿಸಬೇಕು. ಕೆಲಸಗಾರರೂ ಮಾಲಕರೂ ಕೈಗಾರಿಕೆಯಲ್ಲಿ ಪಾಲುದಾರರಾಗಬೇಕೆಂದು ನನ್ನ ಅಭಿಮತ. ಪ್ರತಿಯೊಂದು ಉದ್ಯೋಗದವರಿಗೆ ತಮ್ಮ ಸಂಘಗಳನ್ನು ಸ್ಥಾಪಿಸುವ ಹಕ್ಕು ಇದೆ. ಮದ್ರಾಸ್ ಸರಕಾರವು ಈ ಹಕ್ಕನ್ನು ಎಲ್ಲಾ ಕೆಲಸಗಾರರಿಗೂ ಕೊಟ್ಟಿದೆ. ಕೆಲಸಗಾರರು ತಮ್ಮ ಕೇಳಿಕೆಗಳನ್ನು ಮಾಲಿಕರ ಮುಂದಿಡುವಾಗ ಅವರ ಕೇಳಿಕೆಗಳು ಸತ್ಯವಾದವುಗಳಾಗಿರಬೇಕು. ಸಣ್ಣದನ್ನು ದೊಡ್ಡದು ಮಾಡಬೇಡಿರಿ. ನಿಮ್ಮ ಕೇಳಿಕೆಗಳು ನ್ಯಾಯವಾದುವುಗಳಾಗಿರಬೇಕು. ಇವಿಷ್ಟನ್ನು ನೀವು ಮಾಡಬೇಕು. ಮಾಲೀಕನಿಗೆ ಕೆಲಸಗಾರರನ್ನು ದೂರನಿಕ್ಷಿಸುವ (?) ಅಧಿಕಾರವಿದೆ. ಕೆಲಸಗಾರರಿಗೆ ಮುಷ್ಕರ ಹೂಡುವ (?) ಹಕ್ಕು ಇದೆ. ತನ್ನ ಸಂಕಷ್ಟವನ್ನು ನಿರ್ಭೀತಿಯಿಂದ ತಿಳಿಸದೆ ಕೆಲಸಗಾರನ ವಿಷಯದಲ್ಲಿ ನನಗೆ ಸಮಾನುಭೂತಿಯಿಲ್ಲ. ಆದರೆ ಮುಷ್ಕರಕ್ಕೆ ಏಕಾಏಕಿ ಕೈ ಹಾಕಬೇಡಿ. ರಾಜಿಯಿಂದಲೇ ನಿಮ್ಮ ವಿವಾದಗಳನ್ನು ತೀರ್ಮಾನಿಸಿಕೊಳ್ಳಲೆತ್ನಿಸಿರಿ, ಬಲವಾದ ಟ್ರೇಡ್ ಯೂನಿಯನುಗಳಿದ್ದರೆ ಅವುಗಳ ಸಹಾಯದಿಂದ ಮುಷ್ಕರಗಳಾಗದಂತೆ ಮಾಡಬಹುದು. ನೀವು ಒಕ್ಕಟ್ಟಾಗಿದ್ದರೆ, ನಿಮ್ಮ ಕೇಳಿಕೆಗಳು ನ್ಯಾಯವಾದುವುಗಳಾದರೆ ಮಾಲಿಕರು ನಿಮ್ಮ ಕೇಳಿಕೆಗಳನ್ನು ಕೂಡಲೇ ಕೊಡಬೇಕಾಗುವುದು. ನೀವು ಅಶಕ್ತರಾದರೆ ನೀವು ಸೋಲುವಿರಿ. ಎಲ್ಲಾ ಕೆಲಸಗಾರರಿಗೂ ಮದ್ರಾಸ್ ಸರಕಾರವು ಸಹಾಯವನ್ನು ಕೊಡುವುದು. ನಿಮ್ಮ ಮಾಲಕರನ್ನು ದ್ವೇಷಿಸಬೇಡಿರಿ, ಅವರು ನಿಮ್ಮನ್ನು ದ್ವೇಷಿಸದ ಇರಲಿ. ಎಲ್ಲಾ ಕೆಲಸಗಾರರೂ ಒಂದಾಗಿ ತಮ್ಮ ಯೂನಿಯನುಗಳನ್ನು ಬಲಪಡಿಸಿಕೊಳ್ಳಬೇಕು. ಪ್ರಕೃತ 'ನಿಮ್ಮ ಕೇಳಿಕೆಗಳು ನ್ಯಾಯವಾದುವು. ಆದರಿಂದ ನೀವು ಜಯ ಹೊಂದಲೇ ಬೇಕು' ಎಂದು ತಮ್ಮ ಭಾಷಣವನ್ನು ಮುಗಿಸಿದರು. ಮೋಟರ್ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ| ಎಸ್. ಎ. ಸಾಲ್ಡಾನರು ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನರ್ಪಿಸುತ್ತಾ ಪ್ರಕೃತದ ಹೋರಾಟದಲ್ಲಿ ಕೆಲಸಗಾರರಿಗೆ ತಮ್ಮ ನ್ಯಾಯವಾದ ಹಕ್ಕುಗಳು ದೊರಕುವಂತೆ ಮಾನ್ಯ ಮಂತ್ರಿಗಳು ಸಹಾಯ ಮಾಡಬೇಕೆಂದು ಪ್ರಾರ್ಥಿಸಿದರು ಜಯಘೋಷದೊಂದಿಗೆ ಸಭಾಂತ್ಯವಾಯಿತು

ಪತ್ರಿಕೋದ್ಯಮಿಗಳ ಸಂಘದ ಉದ್ಘಾಟನೆ:—ಕಳೆದ ತಾ. ೧೫ನೇ ಸಾಯಂಕಾಲ ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಸಭಾ ಮಂದಿರದಲ್ಲಿ ದ. ಕ. ಜಿಲ್ಲಾ ಪತ್ರಿಕಾ ವ್ಯವಸಾಯಿಗಳ ಸಂಘವು, ಲೇಬರ್ ಮಂತ್ರಿಗಳಾದ ಮಾನ್ಯ ವಿ. ವಿ. ಗಿರಿಯವರಿಂದ ಉದ್ಘಾಟನೆ ಮಾಡಲ್ಪಟ್ಟಿತು.

ಸಂಘದ ಅಧ್ಯಕ್ಷರಾದ ಶ್ರೀ. ಯಂ. ಎಸ್. ಶ್ರೀಷ್ಟರು ಮಾನ್ಯ ಮಂತ್ರಿಗಳನ್ನು ಸ್ವಾಗತೀಕರಿಸಿ ಭಾಷಣಮಾಡುತ್ತಾ ಪತ್ರಿಕಾ ವ್ಯವಸಾಯದ ಚರಿತ್ರೆಯನ್ನು ಸ್ವಲ್ಪದರಲ್ಲಿ ತಿಳಿಸಿ, ಈ ಜಿಲ್ಲೆಯಲ್ಲಿ ಸುಮಾರು ಇಪ್ಪತ್ತಕ್ಕೂ ಮೇಲ್ಪಟ್ಟು ಪತ್ರಿಕೆಗಳು ಇರುವುದಾಗಿಯೂ, ಮದ್ರಾಸಿನ ಹಲವು ದೈನಿಕಗಳ ಪ್ರತಿನಿಧಿಗಳು ಇಲ್ಲಿ ಇರುವುದಾಗಿಯೂ, ಆದರೆ ಪತ್ರಿಕಾ ವ್ಯವಸಾಯಿಗಳಿಗೆ ತಕ್ಕಷ್ಟು ಪ್ರೋತ್ಸಾಹವಿಲ್ಲವೆಂದೂ, ಅಧಿಕಾರಿಗಳ ಮತ್ತು ಜನತೆಯ ಸಹಾಯ ಸಹಕಾರಗಳು ಅವರುಗಳಿಗೆ ದೊರಕುತ್ತಿಲ್ಲವೆಂದೂ, ಆದಕಾರಣ ಇತರ ಎಲ್ಲಾ ಸಂಘಗಳಂತೆಯೇ ಪತ್ರಿಕೋದ್ಯಮಿಗಳು ಕೂಡ ತಮ್ಮ ಹಿತಸಾಧನಗಾಗಿ ಈ ಸಂಘವನ್ನು ಸ್ಥಾಪಿಸಿದ್ದಾಗಿಯೂ ತಿಳಿಸಿ ಅದರ ಉದ್ಘಾಟನ ಮಾಡುವಂತೆ ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸಿದರು.

ಮಾನ್ಯ ಮಂತ್ರಿಗಳು 'ಈಗಿನ ಕಾಲದಲ್ಲಿ ಮುಖ್ಯವಾಗಿ ಬೇಕಾದುದು ಸಂಘಟನೆ ಮತ್ತು ಐಕ್ಯತೆ, ಅದಿಲ್ಲದೆ ಯಾವ ಕೆಲಸವೂ ಸಾಧಿಸುವಂತಿಲ್ಲ. ಹೀಗೆಯೇ ಪತ್ರಿಕೋದ್ಯಮಿಗಳು ಸಹ ಒಕ್ಕಟ್ಟಿನಿಂದ ತಮ್ಮ ಹಿತಸಾಧನೆಯನ್ನು ಮಾಡಿಕೊಳ್ಳಬೇಕು. ಪತ್ರಿಕೋದ್ಯಮವು ಬಹಳ ಉಪಯೋಗವದ್ದು. ಜನತೆಯ ಅಭಿಪ್ರಾಯವನ್ನು ಕೇಂದ್ರೀಕರಿಸಲು ಪತ್ರಿಕೆಗಳಷ್ಟು ಪ್ರಯೋಜನವು ಮತ್ತೊಂದಿಲ್ಲ. ಆದರೆ ಈಗ ಪತ್ರಿಕೆಗಳ ಪ್ರತಿನಿಧಿಗಳಿಗೆ ಕೆಲ ಅಧಿಕಾರಿಗಳಿಂದಲೂ ಮಹಾಜನರಿಂದಲೂ ಪ್ರೋತ್ಸಾಹ ದೊರೆಯುತ್ತಿಲ್ಲ. ಹಾಗಾಗಿ ಪತ್ರಿಕೋದ್ಯ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF ACRORE

ESTD. 1906

CANARA BANK LIMITED

"ಶೆಂಕ್ಸ್"

SHANKS

(ಇಂಗ್ಲಿಷ್ ಮೇಕ್)

ಕ್ರೂಡ್ ಆಯಿಲ್ ಎಂಜಿನುಗಳು



ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶೆಂಕ್ಸ್" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬೈಂಡ ಪ್ಲೇಂಟ್), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಯಿರಿ—

ಪೆರಮೌಂಟ್ ಇಂಜಿನೀಯರಿಂಗ್ ಕೋರ್ಪರೇಶನ್

೮೨, ಎಪ್ಪೋಲೋ ಸ್ಟ್ರೀಟ್, ಫೋರ್ಟ್ . . . . ಮುಂಬಯಿ

Paramount Engineering Corporation,

82 Appolo Street, Fort, **BOMBAY.**

ಮಿಗಳು ಬಹಳ ಕಷ್ಟಕ್ಲೋಳಗಾಗಿರುತ್ತಾರೆ. ಮಹಾಜನರೂ ಇತರರೂ ಈ ಬಾಬಿನಲ್ಲಿ ಪತ್ರಿಕೆಗಳ ಪ್ರತಿನಿಧಿಗಳಿಗೆ ಪ್ರೋತ್ಸಾಹ ಕೊಡಬೇಕಾದುದು ಅಗತ್ಯ.

ಪತ್ರಿಕೋದ್ಯಮಿಗಳು ಸತ್ಯಶೋಧನೆ ಮಾಡಿ ಬರೆಯಬೇಕು. ಊಹೆಗಳನ್ನಿಟ್ಟುಕೊಂಡು ಬರೆಯಬಾರದು, ಹಿಂದುಸ್ಥಾನದಲ್ಲಿ ಪತ್ರಿಕೋದ್ಯಮವು ಉಚ್ಚ ಮಟ್ಟದಲ್ಲಿದೆ. ಇದು ಸಂತೋಷದ ಸಂಗತಿ. ಮದ್ರಾಸ್ ಸರಕಾರದವರು ಪತ್ರಿಕೆಗಳಿಗೆ ತುಂಬಾ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಆದರೆ ಈ ಸ್ವಾತಂತ್ರ್ಯವನ್ನು ಪತ್ರಿಕೆಗಳವರು ಸದುಪಯೋಗಪಡಿಸಿಕೊಳ್ಳಬೇಕು, ಎಂದು ಮುಂತಾಗಿ ಹೇಳಿ ಸಂಘದ ಉದ್ಘಾಟನೆ ಮಾಡಿದರು.

ಕಾರ್ಯದರ್ಶಿಗಳಾದ ಶ್ರೀ| ರಘುನಾಥ ರಾಯರು ಮಾನ್ಯ ಮಂತ್ರಿಗಳಿಗೂ, ಕಾಲೇಜಿನ ಮಂದಿರವನ್ನಿತ್ತ ಪ್ರಿನ್ಸಿಪಾಲರಿಗೂ ಬಂದಿದ್ದ ಮಹನೀಯರುಗಳಿಗೂ ಧನ್ಯವಾದಗಳನ್ನರ್ಪಿಸಿದರು. (ಸಮಾರಂಭವು ಪ್ರಾರಂಭವಾಗುವ ಮೊದಲು ಛಾಯಾಚಿತ್ರ ಸಹ ತೆಗೆಯಲಾಯಿತು.)

ಸಾರ್ವಜನಿಕ ಸಭೆಯಲ್ಲಿ ಭಾಷಣ

ತಾ. ೧೫ನೇ ಸಾಯಂಕಾಲ ಜಿ. ಕಾಂ. ಕಮಿಟಿಯ ಆಶ್ರಯದಲ್ಲಿ ಶ್ರೀ. S. N. ಹೊಳ್ಳರ ಅಧ್ಯಕ್ಷತೆಯಲ್ಲಿ ಮೈದಾನದಲ್ಲಿ ಸಾರ್ವಜನಿಕ ಸಭೆ ಸೇರಿತು.

ಈಗ ಮಾತುಗಳ ಕಾಲ ಹೋಗಿ ಕೆಲಸ ಮಾಡುವ ಕಾಲ ಬಂದಿದೆ ನಮ್ಮ ಮುಂದಾಳುಗಳಾದ ಪಂಡಿತ ಜವಹರಲಾಲರು ಈ ವಿಷಯವಾಗಿ ನಮ್ಮನ್ನು ಎಚ್ಚರಿಸಿದ್ದಾರೆ ಕಾಂಗ್ರೆಸಿನಲ್ಲಿ ಬಲಪಕ್ಷ, ಎಡಪಕ್ಷಗಳೆಂಬ ಇತ್ತಂಡಗಳಿವೆಯೆಂದು ಭಯಪಡಬೇಡಿರಿ.

ಜನಾಂಗದ ಮುನ್ನಡೆಯನ್ನು ನಿಲ್ಲಿಸಲು ಸಾಧ್ಯವಿಲ್ಲ ಒಂದು ಸರ್ತಿ ಜಾಗ್ರತರಾದರೆಂದರೆ ಜನರನ್ನು ಮತ್ತೆ ತಡೆಯಲು ಸಾಧ್ಯವಿಲ್ಲ ಈಗ ಸಂಸ್ಥಾನದ ಪ್ರಜೆಗಳು ಜಾಗ್ರತರಾಗಿದ್ದಾರೆ ಮಹಾತ್ಮಾ ಗಾಂಧಿಯವರು ಸಂಸ್ಥಾನಗಳ ಜನರ ಮುಂದಾಳುತನವನ್ನು ವಹಿಸಿದ್ದಾರೆ ಸಂಸ್ಥಾನಗಳು ತಮ್ಮ ಹಿತದೃಷ್ಟಿಯಿಂದಲಾದರೂ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ಕೊಡುವುದು ಉಚಿತ.

ಸರಕಾರದವರು ನಮಗೆ ಬೇಡವಾದ ಸಂಯುಕ್ತ ರಾಜ್ಯ ಮಂಡಲವನ್ನು ನಮ್ಮ ಮೇಲೆ ಹೊರಿಸಬೇಕೆಂದಿದ್ದಾರೆ. ಅದನ್ನು ಮುರಿಯಬೇಕಾಗಿದೆ. ಹಾಗೆ ಮುರಿಯಬೇಕಾದರೆ ಜನತೆಯಲ್ಲಿ ಒಕ್ಕಟ್ಟು ಬೇಕು. ಹಿಂದುಗಳೂ ಮುಸಲ್ಮಾನರೂ ಒಂದಾಗಬೇಕು. ನಮಗಿಂದು ಸೇಕಡಾ ೩೦ರಷ್ಟು ಸ್ವಾತಂತ್ರ್ಯ ದೊರೆತಿದೆ. ಬರೆ ಸೇಕಡ ೩೦ರಷ್ಟು ಸ್ವಾತಂತ್ರ್ಯದಿಂದ ಕಾಂಗ್ರೆಸ್ ಮಂತ್ರಿಮಂಡಲಗಳು ಅಪಷ್ಟು ಒಳ್ಳೆಯದನ್ನು ಮಾಡುತ್ತಿವೆ ಇಷ್ಟೇ ಅಧಿಕಾರದಲ್ಲಿ ಇನ್ನೆಷ್ಟು ಅನುಕೂಲತೆಗಳನ್ನು ಒದಗಿಸಬಹುದು. ನಮ್ಮ ದುಡ್ಡಿನ ಪೆಟ್ಟಿಗೆ ಬೇರೊಬ್ಬರ ಅಧೀನವಿದೆ, ಆ ದೊಡ್ಡ ಪೆಟ್ಟಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾದರೆ ಕಾಂಗ್ರೆಸಿನ ಶಕ್ತಿ ಹೆಚ್ಚಬೇಕು.

ನಮ್ಮ ದೇಶದಲ್ಲಿ ೭ಲಕ್ಷ ಹಳ್ಳಿಗಳಿವೆ. ೭ಕೋಟಿ ಕುಟುಂಬಗಳಿವೆ. ಪ್ರತಿಯೊಂದು ಕುಟುಂಬಕ್ಕೂ ಇರುವುದಕ್ಕೆ ಮನೆ; ಮೂರು ಹೊತ್ತು ಹೊಟ್ಟೆತುಂಬ ಅನ್ನ; ಮೈತುಂಬ ಬಟ್ಟೆ; ಸಕಲರಿಗೂ ಧರ್ಮಾರ್ಥ ಪ್ರಾಥಮಿಕ ವಿದ್ಯಾಭ್ಯಾಸ; ಮುದುಕರಿಗೆ ಅಶನಾರ್ಥ; ಧರ್ಮಾರ್ಥ ವೈದ್ಯಕೀಯ ಚಿಕಿತ್ಸೆ—ಇತ್ಯಾದಿಗಳು ದೊರೆತರೆ ಆಗ ನಮಗೆ ಸ್ವರಾಜ್ಯ ಸಿಕ್ಕಿದಂತಾಯಿತು. ಆದರೆ ಜಮೀನ್ದಾರರೂ ಸಾಲಕೊಡುವವರೂ ಸರಕಾರವನ್ನು ದೂರುತ್ತಾರೆ. ಈ ಹಣಾಪೇಕ್ಷಾದೃಷ್ಟಿಯಿಂದಲೂ ಕೂಡ ಕಾಂಗ್ರೆಸ್ ಅಧಿಕಾರ ನಡೆಸುವುದು ಒಳ್ಳೆಯದು. ಒಕ್ಕಟ್ಟಾಗಿರಿ! ಮತ್ತು ಶಿಸ್ತಿನಿಂದ ಸಂಘಟಿಸಿ ಮುನ್ನಡೆಯಿರಿ!

ಜಿ. ಕಾ. ಕಮಿಟಿಯ ಆಶ್ರಯದಲ್ಲಿ ನಡೆದ ಸಭೆಯು ಮುಕ್ತಾಯವಾದೊಡನೆ ಮಾನ್ಯ ಗಿರಿಗಳವರು ಮೋಟರ್ ಕೆಲಸಗಾರರು ಏರ್ಪಡಿಸಿದ್ದ ಸಾರ್ವಜನಿಕ ಸಭೆಗೆ ಚಿತ್ತೈಸಿದರು. ಇಲ್ಲಿ ಮೊದಲಿನ ಸಭೆಯಲ್ಲಿದ್ದುದಕ್ಕಿಂತಲೂ ಅನೇಕ ಪಾಲು ಹೆಚ್ಚು ಜನರು ಬಂದು ನೆರೆದಿದ್ದರು. ಶ್ರೀ. ಎ. ಬಿ. ಶೆಟ್ಟಿ ಯಂ. ಎಲ್. ಎ, ಪಾರ್ಲಿಮೆಂಟರಿ ಸೆಕ್ರೆಟರಿ, ಇವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಆರಂಭ ಭಾಷಣದ ಮೇಲೆ ಮಾನ್ಯ ಮಂತ್ರಿಗಳು ಕೆಲಸಗಾರರಿಗೆ ಕೆಲ ಹಿತೋಕ್ತಿಗಳನ್ನು ಹೇಳಿದರು. ಮುಷ್ಕರವು ಕೊನೆಯ ಆಯುಧ ಶಾಂತ ರೀತಿಯಲ್ಲಿ, ಸಂಧಾನದ ರೀತಿಯಲ್ಲಿ ವಿವಾದಗಳನ್ನು ತೀರಿಸಿಕೊಳ್ಳಿರಿ. ನಿಮ್ಮ ಸಂಘಶಕ್ತಿಯನ್ನು ದುರುಪಯೋಗಮಾಡಬೇಡಿರೆಂದರು.

ಕೆಲಸಗಾರರ ಸಂಘಕ್ಕೆ ಉತ್ತೇಜನ

ಮದ್ರಾಸ್ ಸರಕಾರವು ಕೆಲಸಗಾರರ ಸಂಘಗಳ ಅಭಿವೃದ್ಧಿಗೆ ಸಂಪೂರ್ಣ ಸಹಾಯಮಾಡಬಹುದು. ಮಾಲಿಕರು ನಿಮ್ಮ ಶತ್ರುಗಳೆಂದು ಎಂದೂ ತಿಳಿಯಬೇಡಿರಿ. ವಿವಾದಕ್ಕೆ ಸಂಬಂಧಪಟ್ಟ ಎರಡು ಪಕ್ಷಗಳ ಪ್ರತಿನಿಧಿಗಳೂ ಸೇರಿ ರಾಜಿಯಿಂದ ತಮ್ಮ ಭೇದಭಾವಗಳನ್ನು ಪರಿಹರಿಸಲು ಯತ್ನಿಸಬೇಕೆಂದು ಮದ್ರಾಸ್ ಸರಕಾರದ ಆಶೆ. ಆದರೆ ಸರಕಾರದವರೇ ಬಂದು ರಾಜಿ ತೀರ್ಪು ಕೊಡಬೇಕಾದ ಅಗತ್ಯಬಿದ್ದರೆ ಸರಕಾರದವರು ತಮ್ಮ ಕರ್ತವ್ಯವನ್ನು ಮಾಡಲು ಹಿಂಜರಿಯುವುದಿಲ್ಲ.

ಸಿ. ಪಿ. ಸಿ. ಯ ಮೇನೇಜರರು

ನಾನು ಸಿ. ಪಿ ಸಿ. ಕಂಪೆನಿಯ ಮೇನೇಜರರೊಡನೆ ಮಾತಾಡಿದ್ದೇನೆ. ಅವರು ತಮ್ಮ ಹೇಳಿಕೆಗಳನ್ನು ನನ್ನ ಕೂಡೆ ಹೇಳಿದ್ದಾರೆ. ಅವರ ಗುಣವನ್ನು ನೋಡಿ ನನಗೆ ಅತ್ಯಾನಂದವಾಗಿದೆ. ಅದೇ ರೀತಿಯಲ್ಲಿ ನೀವು ಕೂಡ ನಿಮ್ಮ ಚಳವಳವನ್ನು ಬಹಳ ಉತ್ತಮ ರೀತಿಯಿಂದ ನಡೆಸುತ್ತಿದ್ದೀರಿ. ಹೀಗಿರುವಲ್ಲಿ ವಿವಾದವನ್ನು ತೀರಿಸಲು ತೊಂದರೆಯಿರದು. ಮುಖ್ಯವಾಗಿ ಇಕ್ಕಡೆಯವರೂ ನನ್ನಲ್ಲಿ ವಿಶ್ವಾಸವನ್ನಿಟ್ಟರೆ ಈ ಕೆಲಸವನ್ನು ನಾನು ನಡಿಸಬಲ್ಲೆ. ಇಕ್ಕಡೆಯವರಲ್ಲಿಯೂ ಸ್ವಲ್ಪ ಜಾಗ್ರತೆ ಬೇಕು. ಯೂನಿಯನುಗಳು ಬಲವಾದ್ದರೆ ಮಾಲಿಕರಿಗೇನೇ ಹೆಚ್ಚು ಪ್ರಯೋಜನವಿದೆಯೆಂಬುದನ್ನು ಮಾಲಿಕರು ತಿಳಿಯಬೇಕು. ಆದ್ದರಿಂದ ಕರ್ತವ್ಯವನ್ನು 'ಮಾಡಬೇಕು. ಎಲ್ಲರೂ ಒಕ್ಕಟ್ಟಾಗಿರಿ. ಇದು ನನ್ನ ಸಂದೇಶ' ಎಂದು ಭಾಷಣ ಮುಗಿಸಿದರು.

ಅಧ್ಯಕ್ಷರು, ಕೆಲವೇ ಮಾತುಗಳನ್ನಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

"THE PRIDE AND ENVY OF INDIAN INSURANCE"

Facts that call for your immediate attention:-

*The Company has just undergone its First Valuation as at 31st December, 1938

*The Valuation has been performed assuming an interest rate of 3½%, a low rate which is adopted by very few Indian Companies of good standing and nevertheless the surplus disclosed is substantial.

*A substantial Life Fund supported by clean assets and complete absence of preliminary expenses and organisation outlay in the assets of every one of the Balance Sheets.

*A very low expense ratio.

The above in the opinion of the Consulting Actuary, Prof. K. B. Madhava M. A., F. R. A. S., A. I. A. (London), "**are undoubtedly such as to be the pride and envy of Indian Insurance**". The Actuary recommends the declaration of a simple Reversionary Bonus at Rs. 15/- per Rs 1000/- Sum Assured on Special Whole Life Assurances and at Rs. 10/- per Rs. 1,000/- Sum Assured on Endowment Assurances

Just the Company for you to insure with or represent.

THE

CANARA MUTUAL

ASSURANCE CO., LTD.

The Company is Mutual] UDIPI, S. INDIA. [**There are no Shareholders.**

The Tropical Insurance
CO., LTD., DELHI.

ದಿ ಟ್ರೊಪಿಕಲ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಡೆಲ್ಲಿ.
ಅಧ್ಯಕ್ಷರು:—ಶ್ರೀ. ಸುಭಾಷಚಂದ್ರ ಬೋಸರು.
(ರಾಷ್ಟ್ರಪತಿಗಳು)
ಸಂಸ್ಥಾಪಕ ಡೈರೆಕ್ಟರರು:
ಪಂಡಿತ ಮೋತಿಲಾಲ ನೆಹರು. ಡಾಕ್ಟರ್ ಎಂ. ಎ. ಅನ್ಸಾರಿ.
ಶ್ರೀ। ಎಸ್. ಶ್ರೀನಿವಾಸ ಐಯ್ಯಂಗಾರ್. ಹಕೀಮ್ ಅಜ್ಮಲ್ ಖಾನ್.
ಪ್ರಗತಿಗಾಮಿಯಾದ ಈ ದೇಶೀ ವಿಮಾಕಂಪೆನಿಯು ಇವರು ರಾಷ್ಟ್ರಪತಿಗಳಿಂದ ಸ್ಥಾಪನೆ ಹೊಂದಿ ನಡೆಸಲ್ಪಟ್ಟದ್ದು.
ಪ್ರಾತಿನಿಧ್ಯಕ್ಕಾಗಿ ಸಂಬಳ ಯಾ ಕಮಿಶನಿನ ಮೇಲೆ ಅರ್ಜಿಗಳು ಸ್ವೀಕರಿಸಲ್ಪಡುತ್ತವೆ.
ಕೆ. ಎಸ್. ರಾಮಮೂರ್ತಿ, ಎಂ. ಎ. ಬ್ರಾಂಚ್ ಸೆಕ್ರೆಟರಿ, 160, ವಸ್ಟೌಂಟ್ ರೋಡು, ಮದ್ರಾಸ್.
ಅಥವಾ
ಎಂ. ಸುಂದರ ರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ, ಮಂಗಳೂರು.

ನಾಟ್ಯದಲ್ಲಿ ನರ್ತನ

(ಶ್ರೀಮಾನ್ ಕುಲಕರ್ಣಿ ಶ್ರೀನಿವಾಸರಾವ್, ಬಿ. ಎ., ಧಾರವಾಡ ಅವರಿಂದ)

ನರ್ತನವೂ ಒಂದು ಕಲೆ, ಉಚ್ಚತಮವಾದ ಕಲೆ, ದೇವಾಸುದೇವತೆಗಳಿಂದ, ಗುರುಗಳಿಂದ, ಋಷಿಗಳಿಂದ, ಪಂಡಿತರಿಂದ, ಮನ್ನಣೆ ಹೊಂದಿ, ಗಂಗಾನದಿಯ ಪುಣ್ಯಪ್ರವಾಹದಂತೆ ನಮ್ಮ ಜನಜೀವನವನ್ನು ಪುನೀತವನ್ನಾಗಿ ಮಾಡಿದೆ.

(ತಾ ೨೯-೧೨-೩೮ನೆಯ ದಿನ ಬಳ್ಳಾರಿಯಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಲನದ ಅಂಗವಾಗಿ ಏರ್ಪಡಿಸಲ್ಪಟ್ಟ ನಾಟ್ಯ ಸಮ್ಮೇಲನದ ಕಾಲಕ್ಕೆ ಕನ್ನಡ ನಾಟಕಗಳ ವಿಷಯವಾಗಿ ಕನ್ನಡ ನಾಟ್ಯಾಭಿಮಾನಿಗಳ ವಿಚಾರ ಸರಣಿಯೊಂದನ್ನು ಇಟ್ಟುಕೊಂಡಿದ್ದರು ಆ ಕಾಲಕ್ಕೆ ಧಾರವಾಡದ ಪ್ರೇಮ ಗ್ರಂಥಮಾಲೆಯ ಸಂಪಾದಕರೂ ಕರ್ನಾಟಕ ನೃತ್ಯ ಕಲಾಕೋವಿದರೂ ಆದ ಶ್ರೀಮಾನ್ ಕುಲಕರ್ಣಿ ಶ್ರೀನಿವಾಸ, ಬಿ. ಎ ರವರು ಮಾಡಿದ ಭಾಷಣದ ಸಾರಾಂಶ)

ಭಾರತ ನಾಟ್ಯ ಶಾಸ್ತ್ರದಲ್ಲಿ ನಾಟ್ಯ, ನೃತ್ತ, ನೃತ್ಯ ಈ ಮೂರೂ ಶಬ್ದಗಳನ್ನು ಉಪಯೋಗಿಸಿದ್ದು ನಮಗೆ ಕಂಡು ಬರುವುದು ನೃತ್ತವೆಂದರೆ ರಸಭಾವ ರಹಿತವಾದ ನರ್ತನವೆಂದೂ, ನೃತ್ಯವೆಂದರೆ ರಸಭಾವ ವ್ಯಂಜನಗಳನ್ನೊಳಗೊಂಡುದೆಂದೂ, ನಾಟಕಗಳಲ್ಲಿ ಕಥಾಸಂದರ್ಭಗಳಿಗೆ ಅನ್ವಯಿಸಿ ಬಳಸಿಕೊಂಡ ನರ್ತನಗಳು ನಾಟ್ಯವೆಂದೂ ನಮ್ಮ ಶಾಸ್ತ್ರ ಗ್ರಂಥಗಳಲ್ಲಿದ್ದುದೂ ಕಂಡು ಬರುತ್ತಿದೆ ಆದರೆ ಅಭಿನಯವನ್ನು ನಾಟ್ಯವೆಂದು ಕರೆಯುವುದು ಸದ್ಯಕ್ಕೆ ವಾಡಿಕೆಯಿಲ್ಲದ ಕಾರಣ ನಾಟ್ಯವೆಂದರೆ ನಾಟಕಾಭಿನಯವೆಂದು ಕಲ್ಪಿಸಿಕೊಂಡು ಅದರಲ್ಲಿ ನರ್ತನದ ಸ್ಥಾನವಾವುದು ಎಂಬುದರ ವಿಷಯವಾಗಿ ಎರಡು ಮಾತು ಹೇಳಬೇಕೆಂದಿದ್ದೇನೆ.

ನರ್ತನ ಹಾಗೂ ನಾಟಕಗಳಲ್ಲಿ ಅತ್ಯಂತ ನಿಕಟವಾದ ಸಂಬಂಧವಿದೆ. ನಾಟಕಗಳು ಉಗಮವಾಗುವ ಮೊದಲಿಗೆ ನರ್ತನಗಳು ರೂಢಿಯಲ್ಲಿದ್ದಿರಬೇಕು. ತನ್ನ ಹೃದಯದ ಭಾವನೆಗಳನ್ನು ಮನುಷ್ಯನು ನರ್ತನದ ಮೂಲಕವಾಗಿಯೇ ವ್ಯಕ್ತಗೊಳಿಸಲು ಯತ್ನಿಸಿದ. ಪ್ರಾರಂಭದಲ್ಲಿ ತನಗೆ ಅನಿಸಿದುದನ್ನು ಆವನು ಸ್ಥೂಲವಾಗಿ ಹೇಳಲು ಮಾತ್ರ ಸಮರ್ಥನಾಗಿದ್ದ. ವಾದ್ಯವೈಭವದ ಸೌಕರ್ಯವಾಗಲಿ, ಸಂಗೀತ ಮೇಳಗಳ ಅನುಕೂಲವಾಗಲಿ, ಅಭಿನಯ ವೇಷಭೂಷಣಗಳ ಸಹಾಯವಾಗಲಿ ಅವನಿಗೆ ಇಲ್ಲದಿರಬಹುದು. ಆದರೂ ಅವನು ನರ್ತಿಸುತ್ತಲಿದ್ದ. ಇತರ ಸೌಕರ್ಯಗಳು ದೊರೆತ ಹಾಗೆಲ್ಲ ಅವನ ನರ್ತನಕ್ಕೆ ಕಳೆ ಬರತೊಡಗಿತು.

ಕರ್ನಾಟಕ ನೃತ್ಯ ಪರಂಪರೆಯು ಯಕ್ಷಗಾನದಲ್ಲಿದೆ ನೃತ್ಯದ ಜೊತೆಗೆ ವಿವಿಧ ವಾದ್ಯಗಳು, ಹಾಡುಗಾರಿಕೆ, ಮಾತಿನ ಚಾತುರ್ಯ ಬಂತು ... ಆಕರ್ಷಕವಾಗಿವೆ ಯಕ್ಷಗಾನದಲ್ಲಿಯ ನರ್ತನ ಹಾಡುಗಾರಿಕೆಗಳನ್ನು ಕಡಿಮೆ ಮಾಡುತ್ತ ಮಾಡುತ್ತ ಅದನ್ನೇ ನಾಟಕವಾಗಿ ರೂಪಾಂತರಗೊಳಿಸಿದರು. ಕರ್ನಾಟಕದ ಬೇರೆ ಬೇರೆ ನಾಟಕ ಪ್ರಯೋಗಗಳನ್ನು ನಾವು ಪರಿಶೀಲಿಸಿದಲ್ಲಿ ಈ ಬದಲಾವಣೆಯ ಕಲ್ಪನೆಯು ನಮಗಾಗಬಹುದು.

ಆಧುನಿಕ ನಾಟಕಗಳಲ್ಲಿ ನರ್ತನಕ್ಕೆ ಯಾವ ಸ್ಥಾನವನ್ನೂ ಕೊಟ್ಟಿರಲಾಗುವುದಿಲ್ಲ ಇದ್ದ ಸ್ವಲ್ಪ ಸ್ಥಾನವಾದರೂ ಅತ್ಯಂತ ಹೇಯವಾದುದು. ಮತ್ತು ನರ್ತನದ ವಿಷಯವಾಗಿ ತಪ್ಪು ಕಲ್ಪನೆಯನ್ನು ಮಾಡಿಕೊಡುವಂತಹದು. ಯಾವ ಭಾವಗಳನ್ನಾದರೂ ಮಾರ್ಮಿಕವಾಗಿ, ಸುಂದರವಾಗಿ ರಸವತ್ತಾಗಿ, ಹೇಳಲು ಸಮರ್ಥವಾಗಿರುವ ನರ್ತನವು ಕೇವಲ ವಿಲಾಸದ ಸಾಧನವಾಗಿ ಪರಿಣಮಿಸಿತು. ರಾಜರ ದರ್ಬಾರುಗಳಲ್ಲಿ 'ನರ್ತಕಿಯನ್ನು ಬರಮಾಡು' ಎಂದು ನರ್ತನದ ಪ್ರಾರಂಭವಾಗಿ 'ಅವಳಿಗೆ ತಕ್ಕ ಮರ್ಯಾದೆಯನ್ನು ಮಾಡಿ ಕಳಿಸು' ಎಂಬ ರಾಜನ ಅಪ್ಪಣೆಯೊಡನೆ ನರ್ತನದ ಪರಿಸಮಾಪ್ತಿಯಾಗತೊಡಗಿತು. ನರ್ತನವು ಸೋತ ದೇಹ, ನೊಂದ ಮನಸ್ಸುಗಳನ್ನು

ರಂಜಿಸಬಲ್ಲದೆಂಬ ಕಲ್ಪನೆಯಾಗಿ ಸುಂದರ ನರ್ತಕಿಯರ ಅಂಗವಿಕ್ಷೇಪವನ್ನು ನೋಡಲು ನಮ್ಮ ಪ್ರೇಕ್ಷಕರು ಹಾತೊರೆಯತೊಡಗಿದರು.

ಆದರೆ ನರ್ತನವು ಮನರಂಜನೆಯನ್ನು ಮಾಡುವುದರ ಜೊತೆಗೆ ಹೃದಯ ವಿಕಾಸವನ್ನು ಮಾಡಬಲ್ಲುದು. ಒಬ್ಬ ಸಾಹಿತಿಯಂತೆ, ಚಿತ್ರಕಾರನಂತೆ, ಗಾಯಕನಂತೆ, ನರ್ತಕನಾದರೂ ಜೀವನದ ಆಗು ಹೋಗುಗಳ ಬಗ್ಗೆ, ಆಶೆ ನಿರಾಶೆಗಳ ಬಗ್ಗೆ ಹೊಸ ಬೆಳಕನ್ನು ಚಲ್ಲಿ ಆತ್ಮ ವಿಕಾಸವನ್ನು ಮಾಡಬಲ್ಲನು. ನರ್ತನವೂ ಒಂದು ಕಲೆ, ಉಚ್ಚತರವಾದ ಕಲೆ, ದೇವಾಸು ದೇವತೆಗಳಿಂದ ಗುರುಗಳಿಂದ, ಋಷಿಗಳಿಂದ, ಪಂಡಿತರಿಂದ, ಮನ್ನಣೆ ಹೊಂದಿ ಗಂಗಾನದಿಯ ಪುಣ್ಯಪ್ರವಾಹದಂತೆ ನಮ್ಮ ಜನಜೀವನವನ್ನು ಪುನೀತವನ್ನಾಗಿ ಮಾಡಿದೆ ಅಂತೆಯೇ ಅದರ ನಿಜವಾದ ಯೋಗ್ಯತೆಯನ್ನು ನಾವು ಕಂಡುಕೊಳ್ಳುವುದು ಅತ್ಯಗತ್ಯವಾಗಿದೆ

ಸುಶಿಕ್ಷಿತರಲ್ಲಿ ಕೆಲವರು ನರ್ತನದ ಬೆಲೆಯನ್ನರಿತು ಅದರ ಉಪಾಸನೆಯನ್ನು ಮಾಡತೊಡಗಿದ್ದಾರೆ ವಿವಿಧ ರೀತಿಯ ಪ್ರಯತ್ನಗಳನ್ನು ಪ್ರಯೋಗರೂಪದಲ್ಲಿ ಜನರ ಮುಂದಿಡುತ್ತಲಿದ್ದಾರೆ. ಆ ಪ್ರಯೋಗಗಳನ್ನು ನಾವು ಸ್ಥೂಲವಾಗಿ ಮೂರು ವಿಧವಾಗಿ ವಿಭಾಗಿಸಬಹುದು. ಮೂಕ ನರ್ತನಗಳು, ಈ ರೀತಿಯ ನರ್ತನಗಳಲ್ಲಿ ಕೇವಲ ಹಾವಭಾವಗಳಿಂದಲೇ ನರ್ತಕನು ತನ್ನ ಭಾವನೆಗಳನ್ನು ವಿವರಿಸಲು ಯತ್ನಿಸುತ್ತಾನೆ ಇದಕ್ಕೆ ಅನುಕೂಲವಾಗುವ ರೀತಿಯಲ್ಲಿ ವಾದ್ಯಗಳ ಹಿಮ್ಮೇಳವನ್ನಿಟ್ಟುಕೊಳ್ಳಬಹುದು. ಅದರಲ್ಲಿ ತನಗೆ ಬೇಕಾದ ರೀತಿಯಲ್ಲಿ ವೈವಿಧ್ಯವನ್ನು ಉಪಯೋಗಿಸಿಕೊಳ್ಳಬಹುದು. ಉದಯ ಶಂಕರ, ಮೇನಕ್, ಗೋಪೀನಾಥ, ರಾಗಿಣೀ ದೇವಿಯವರ ನರ್ತನಗಳು ಇದಕ್ಕೆ ಉದಾಹರಣೆ ಗೀತನೃತ್ಯಗಳು ಕೆಲವು ನೃತ್ಯದ ಅರ್ಥವನ್ನು ಸೂಚಿಸುವಂತೆ ಪದ್ಯವನ್ನು ಹೇಳುವುದು ನರ್ತಕರೇ ಆ ಪದ್ಯವನ್ನು ಹೇಳಬಹುದು, ಇಲ್ಲವೆ ಹಿಮ್ಮೇಳದವರು ಪದ್ಯವನ್ನು ಹೇಳುತ್ತಿರುವಾಗ ಅದಕ್ಕೆ ಸರಿಯಾಗಿ ನರ್ತಕರು ಹಾವಭಾವಗಳೊಡನೆ ನೃತ್ಯ ಮಾಡಬಹುದು. ಕಥಕ್ಕಳಿ ನೃತ್ಯ, ಯಕ್ಷಗಾನದಲ್ಲಿಯ ಕೆಲವು ವಿಭಾಗ, ದಕ್ಷಿಣ ಹಿಂದುಸ್ಥಾನದ ವೇಶ್ಯೆಯರಲ್ಲಿ ರೂಢಿಯಲ್ಲಿರುವ ಭರತ ನಾಟ್ಯ, ಉತ್ತರ ಹಿಂದುಸ್ಥಾನದಲ್ಲಿ ರೂಢವಾಗಿರುವ ಕಥಕ್ ನೃತ್ಯದ ಕೆಲವು ಭಾಗ ಈ ರೀತಿಗೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ನಾಟಕ ನೃತ್ಯಗಳಲ್ಲಿ ಮಾತ್ರ ಸಾಕಷ್ಟು ಕೆಲಸವಾಗಿಲ್ಲ. ನಾಟಕದ ಕಥಾಸಂದರ್ಭಕ್ಕೆ ಅನ್ವಯಿಸುವಂತೆ ನರ್ತನಗಳಲ್ಲಿ ಸೇರಿಸಿ ಆ ನರ್ತನಗಳಿಂದ ನಾಟಕಕ್ಕೂ ಆ ನಾಟಕದ ಕಥೆಯಿಂದ ನರ್ತನಕ್ಕೂ ಹೆಚ್ಚು ಕಳೆ ಬರುವ ರೀತಿಯಲ್ಲಿ ಇವೆರಡನ್ನೂ ಜೋಡಿಸುವ ಪ್ರಯತ್ನಗಳು ಸಾಕಷ್ಟು ಈ ವರೆಗೆ ಆಗಿಲ್ಲವೆಂದೇ ಹೇಳಬಹುದು ಚಲಚ್ಚಿತ್ರ ಪ್ರಪಂಚದಲ್ಲಿ ಮಾತ್ರ ಕೆಲವು ಪ್ರಯತ್ನಗಳಾಗಿವೆ ಪಾಶ್ಚಾತ್ಯ ನರ್ತಕರಾದ ಫ್ರೆಡ್ ಆಸ್ಟೇರ್ ಮತ್ತು ಜೋರ್ಜ್ ರೇಜರೇ ತಮಗೆ ಅನ್ವಯವಾಗುವಂತೆ ಕತೆಗಳನ್ನು ಜೋಡಿಸಿಕೊಂಡು ನಡೆನಡುವೆ ಸಂದರ್ಭಗಳಿಗೆ ಅನುಸರಿಸಿ ನರ್ತನಗಳನ್ನು ಹೊಂದಿಸಿವೆ. ಕೆಲವು ಒಳ್ಳೇ ಚಿತ್ರಗಳಲ್ಲಿ ಅಭಿನಯ ಹಾಗೂ ನರ್ತನಗಳನ್ನೂ ಪ್ರದರ್ಶಿಸಿದ್ದಾರೆ. ಹಿಂದೂಸ್ಥಾನದಲ್ಲಿ ನ್ಯೂ ಥಿಯೇಟರ್ಸಿನವರು 'ಪ್ರೆಸಿಡೆಂಟ್' ಎಂಬ ಚಿತ್ರದಲ್ಲಿ ೫ ನಿಮಿಷಗಳ ನರ್ತನವೊಂದನ್ನು ಅತ್ಯಂತ ಮಾರ್ಮಿಕವಾಗಿ ಉಪಯೋಗಿಸಿಕೊಂಡಿದ್ದಾರೆ. ಮುಖ್ಯ ನಾಯಕಿಯೇ ಆ ನರ್ತನವನ್ನು ಮಾಡುವುದರಿಂದ ಸಿನೇಮಾ ಕತೆಯಲ್ಲಿಯ ಪ್ರಣಯದ ಸಮಸ್ಯೆಗೆ ಆ ನರ್ತನವು ಹೊಸ ಬೆಳಕನ್ನು ಬೀರಿ ಮುಂದಿನ ಕತೆಯನ್ನು ಬೇರೆ ಮಾರ್ಗದಲ್ಲಿ ಕೊಂಡೊಯ್ಯಲು ಕಾರಣವಾಗುವುದಿ? ಭವನಾನಿಯವರ 'ಜಾಗರಣ' ಹಿಮಾಲ ನಾರಿ ಬೇಟಿ' ಎಂಬ ಚಿತ್ರಗಳಲ್ಲಿಯೂ ಶ್ರೀಮತಿ ವನಜಾಕ್ಷಿಯವರು ಕಥಾಸಂದರ್ಭಕ್ಕೆ ಅನ್ವಯಿಸುವಂತೆ ಹಲವು ನರ್ತನಗಳನ್ನು ಪ್ರದರ್ಶಿಸಿದ್ದಾರೆ. ತೆಲುಗು ಚಿತ್ರವೊಂದರಲ್ಲಿ ಶ್ರೀಮತಿ ಜಲಜಾ ಇವರು ಕೆಲವು ಈ ಬಗೆಯ ನೃತ್ಯಗಳನ್ನು ಉಪಯೋಗಿಸಿಕೊಂಡಿದ್ದಾರಂತೆ.

ಸಿನೇಮಾಕ್ಕೆ ಎದುರಾಗಿ ನಿಲ್ಲಲು ಸಾಧ್ಯವಿಲ್ಲದೆ ನಾಟಕ ಪ್ರಪಂಚವೇ ಅಳಿದು ಹೋಗುತ್ತಿರುವ ಈ ದಿನಗಳಲ್ಲಿ ನಾಟಕಗಳಲ್ಲಿ ನರ್ತನಗಳನ್ನು ಯುಕ್ತರೀತಿಯಲ್ಲಿ ಬೆರಸುವ ಸ್ವಾಗತವನ್ನು ಮಾಡುವವರೆಯಾರಿಗವೆ? ಕೆಲವು ನಟ್ಯ ವಿಲಾಸ(Amateur)ಗಳು ಮಾತ್ರ ತಮ್ಮ ಗೌರವಾರ್ಥವಾಗಿ ಇಂಥ ಪ್ರಯತ್ನಗಳನ್ನು ಮಾಡಬಹುದು.

ಪುಟ ೧೬ಕ್ಕೆ

ಮೈಸೂರು ದಿವಾನರ ಆಗಮನ

ಎಲ್ಲೆಲ್ಲಿಯೂ ಉತ್ಸಾಹಪರ ಸಂಭ್ರಮದ ಸುಸ್ವಾಗತ-ಸತ್ಕಾರಗಳು

ದಕ್ಷಿಣ ಕನ್ನಡ ಜಿಲ್ಲೆಯ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ರಜತ ಮಹೋತ್ಸವದ ಅಧ್ಯಕ್ಷತೆಯನ್ನು ಮೈಸೂರಿನ ದಿವಾನರಾದ ಅಮೀನ್ ಉಲ್‌ಮುಲ್ಕ್ ಸರ್. ಮಿರ್ಜಾ ಮಹಮ್ಮದ್ ಇಸ್ಮಾಯಿಲ್ ಕೆ. ಟಿ., ಕೆ. ಸಿ. ಐ. ಇ., ಒ. ಬಿ. ಇ., ಇವರು ನಿರ್ವಹಿಸಿ ಅನುಗ್ರಹಿಸಬೇಕಾಗಿ ಬ್ಯಾಂಕಿನ ಉತ್ಸಾಹಶೀಲ ಅಧ್ಯಕ್ಷರಾದ ಶ್ರೀ. ಮೊಳಹಳ್ಳಿ ಶಿವರಾಯರು ಬೆಂಗಳೂರ ತನಕ ಹೋಗಿ ಕೇಳಿಕೊಂಡದರ ಪರಿಣಾಮವಾಗಿ ಆ ಕಾರ್ಯವನ್ನು ನೆರವೇರಿಸಿಕೊಡಲು ಬಂದ ದಿವಾನರನ್ನು ನಮ್ಮ ಜಿಲ್ಲೆಯ ಹಲವು ಸ್ಥಳ, ಸಂಘ, ಸಂಸ್ಥೆಗಳು ಆಮಂತ್ರಿಸಿ ಆದರದ ಸ್ವಾಗತ, ಮಾನಪತ್ರ, ಸತ್ಕಾರಾದಿಗಳಿಂದ ಸನ್ಮಾನಿಸಿಯವೆ. ಅವರು ಸಂಚರಿಸಿದ ಹಾದಿಯುದ್ದಕ್ಕೂ ಸಂದರ್ಶಿಸಿದ ಸ್ಥಳಗಳಲ್ಲೂ ಜನತೆಯು ಆದರೋತ್ಸಾಹಗಳಿಂದ ಗುಂಪುಕೂಡಿ ಕಾದುಕೂತು ಅವರ ದರ್ಶನಮಾಡಿ ಸಂತಸಗೊಂಡಿದೆ. ಹೋದಲ್ಲೆಲ್ಲ ದಿವಾನರು ತನ್ನ ಸರಳ ಸಹಜ ಸ್ನೇಹಮಯ ವರ್ತನೆಯಿಂದಲೂ ಮಾತುಕತೆಗಳಿಂದಲೂ ಅನುಭವಪೂರಿತ ವಿಚಾರ ವಿವೇಕಪರ ಭಾಷಣಗಳಿಂದಲೂ ಜನತೆಯ ಹೃದಯದಲ್ಲಿ ಅವರ ಚಿತ್ರವು ಅಚ್ಚಳಿಯದೆ ಉಳಿಯುವಂತಾಗಿದೆ.

ಪರಿಚಯ

ದಿವಾನರು ಶ್ರೀಮಂತ ಪರ್ಶಿಯನ್ ಕುಟುಂಬದವರು. ಇವರ ತಂದೆಯವರಾದ ಆಗಾಖಾನರವರು ಹಿಂದಿನ ಮಹಾರಾಜರೇ ಮೊದಲಾದ ರಾಜ ಕುಟುಂಬಿಕರಿಗೆ ಎ. ಡಿ. ಸಿ ಗಳಾಗಿದ್ದರು. ಅವರ ತಂದೆ ಅಲಿ ಅಸ್ಕರರವರೂ ಮೈಸೂರು ರಾಜವಂಶದೊಂದಿಗೇ ಸಾಗಿಬಂದವರು. ಹೀಗೆ ಪರಂಪರೆಯಿಂದಲೂ ಮೈಸೂರು ರಾಜಮನೆತನದ ಕೃಪಾವಿಶ್ವಾಸಗಳಿಗೆ ಪಾತ್ರವಾಗಿದ್ದ ಮನೆತನವು ದಿವಾನರದು. ಜನನ ೧೮೮೩ರಲ್ಲಿ ವಿದ್ಯಾಭ್ಯಾಸ ಬೆಂಗಳೂರ ವೆಸ್ಲಿ ಹೈಸ್ಕೂಲ್ ಮತ್ತು ಸೆಂಟ್ರಲ್ ಕಾಲೇಜು. ಮಹಾರಾಜರ ಸಹಾಧ್ಯಾಯಿ. ಪ್ರಥಮ ನೌಕರಿ ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟ್. ಮೂರು ವರುಷಗಳ ನಂತರ ಮಹಾರಾಜರ ಪರ್ಸನಲ್ ಸ್ಟಾಫ್. ಆ ಮೇಲೆ ಹಜೂರು ಸೆಕ್ರಿಟರಿ. ಅನಂತರ ೧೯೨೨ರಲ್ಲಿ ಮಹಾರಾಜರ ಪ್ರಾವೇಟ್ ಸೆಕ್ರಿಟರಿ. ಕೊನೆಗೆ ೧೯೨೬ರಿಂದ ದಿವಾನ್. ೧೯೨೦ರಲ್ಲಿ ಮೈಸೂರು ಸರಕಾರದಿಂದ ಅಮೀನ್-ಉಲ್-ಮುಲ್ಕ್ ಎಂಬ ಬಿರುದು. ೧೯೨೩ರಲ್ಲಿ ಬ್ರಿಟಿಷ್ ಸರಕಾರದಿಂದ ಒ. ಬಿ. ಇ ಮತ್ತು ಕೆ. ಸಿ. ಐ. ಇ ಬಿರುದುಗಳು. ೧೯೩೦ರಲ್ಲಿ ಸರ್ (ಕೆ ಟಿ) ಬಿರುದುಗಳು ಇವರ ಅಸಾಧಾರಣ ಪ್ರತಿಭೆ ಮತ್ತು ಕಾರ್ಯದಕ್ಷತೆಗೆ ಮೆಚ್ಚಾಗಿ ಬಂದುವು. ಸಂಸ್ಥಾನಗಳ ಪ್ರತಿನಿಧಿಗಳಾಗಿ ಎರಡು ಸಲವೂ ವಿಲಾಯತಿಯ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಹೋಗಿದ್ದರು. ಅಂತರ್ರಾಷ್ಟ್ರೀಯ ಖ್ಯಾತಿಯನ್ನು ಹೊಂದಿರುವ ವ್ಯಕ್ತಿಗಳು ದಿವಾನರು. ನಮ್ಮ ಜಿಲ್ಲೆಯ ಸಂಚಾರದ **ಸಮಯ ಕಾರ್ಯಕಲಾಪ ಹಾಗೂ ಆತಿಥ್ಯ** ಸತ್ಕಾರಗಳು ಕಳೆದ ಶನಿವಾರ ತಾ. ೧೮ರ ಮಧ್ಯಾಹ್ನ ಸಂಪಾಜೆ ಮಾರ್ಗವಾಗಿ ಮಂಗಳೂರಿಗೆ ಆಗಮನ. ಕದ್ರಿ ಬಂಗಲೆಯಲ್ಲಿ ವಿಶ್ರಾಂತಿ. ಸಾಯಂಕಾಲ ಹ್ಯಾಲ್ಯಾಂಡ್ ಕಾಫಿ ವರ್ಕ್ಸ್ ಸಂದರ್ಶನ, ಡಿ. ಬೋ. ಅಧ್ಯಕ್ಷರ ಮತ್ತು ಮೆಂಬರರ ಉಪಹಾರ ಸತ್ಕಾರ-ಮಂಗಳೂರು ಮುನ್ಸಿಪಲ್ ಕೌನ್ಸಿಲರ ಟೀಪಾರ್ಟಿ ಸತ್ಕಾರ. ಸೆಂಟ್ರಲ್ ಬ್ಯಾಂಕ್ ರಜತಮಹೋತ್ಸವದ ಅಧ್ಯಕ್ಷ ಕಾರ್ಯನಿರ್ವಾಹ. ರಾತ್ರೆ ಭೋಜನಸತ್ಕಾರ. ಆದಿತ್ಯವಾರ ಬೆಳಗ್ಗೆ ಜಿಲ್ಲಾ ಪ್ರೊಡ್ಯೂಸ್ ಮರ್ಚೆಂಟ್ಸ್ ಸಂಘದ ಡೆಪ್ಯುಟೇಶನ್—ಕಾರ್ಕಳ ಪ್ರಯಾಣ. ಗೋಮಟೇಶ್ವರ ಸಂದರ್ಶನ—ಸಾರ್ವಜನಿಕ ಸ್ವಾಗತ—ಕಾರ್ಕಳ ಪಂಚಾಯತ ಬೋರ್ಡು ಮಾನಪತ್ರಾರ್ಪಣ—ಮೆಟರ್ನಿಟಿ ವಾರ್ಡ್ ಶಂಕುಸ್ಥಾಪನೆ—ಬಂಗ್ಲೆಯಲ್ಲಿ ವಿಶ್ರಾಂತಿ. ಮಧ್ಯಾಹ್ನದ ಮೇಲೆ ಉಡುಪಿಗೆ ಪ್ರಯಾಣ, ಮಲ್ಪೆಬಂದರ ದರ್ಶನ, ಉಡುಪಿ ಸಾರ್ವಜನಿಕ ಸ್ವಾಗತ—ಮುನಿಸಿಪಾಲಿಟಿಯವರ ಮಾನಪತ್ರ—ಮೆ. ಕೊಚ್ಚಿಕಾರ್ ಬ್ರದರ್ಸರ ಉಪಾಹಾರಸತ್ಕಾರ. ಶ್ರೀಕೃಷ್ಣ ಮಠಕ್ಕೆ ಪರ್ಯಾಯ ಶ್ರೀಗಳವರು ವಿಜೃಂಭಣೆಯ ಮೆರವಣಿಗೆಯಿಂದ ಬರಮಾಡಿಸಿಕೊಂಡು ಅಷ್ಟಮಠಗಳ ಪರವಾಗಿ ಕೊಟ್ಟ ಮಾನಪತ್ರ, ಸತ್ಕಾರ ಔತಣಾದಿಗಳ ಸಂಭ್ರಮ—ಅಂಜುಮಾನ ಕ್ಲಬ್ಬಿನಲ್ಲಿ ಸತ್ಕಾರ. ಸೋಮವಾರ ಮುಂಜಾನೆ ಆದಮಾರು ಮಠದಲ್ಲಿ ಶ್ರೀವಿಬುಧಪ್ರಿಯತೀರ್ಥ ಸ್ವಾಮಿಯವರ ಫೋಟೋ ಅನಾವರಣ. ಮಣಿಪಾಲದಲ್ಲಿ ಅನಾಥಾಲಯ ಶಂಕುಸ್ಥಾಪನೆ ಮತ್ತು ಉಪಾಹಾರ ಸತ್ಕಾರ. ಮೂಡಬಿದ್ರೆಗೆ ಪ್ರಯಾಣ—ಅಲ್ಲಿ ಸಾರ್ವಜನಿಕ ಸ್ವಾಗತ, ದಿಗಂಬರ ಜೈನಶಾಲೆ, ಚೌಟರ ಅರಮನೆ ಇವುಗಳ ಸಂದರ್ಶನೆ. ಅಪರಾಹ್ನ ಮಂಗಳೂರಿಗೆ ತಲಪಿ ಸೈಂಟ್ ಎಗ್ನೇಸ್ ಕಾಲೇಜು, ಕಂಕನಾಡಿ ಆಸ್ಪತ್ರೆ, ಸೈಂಟ್ ಎಲೋಸಿಯಸ್ ಕಾಲೇಜು ಮತ್ತು ಜೇಸೇಫ್, ಈಶ್ವರಾನಂದ ಮಹಿಳಾ ಸೇವಾಶ್ರಮ, ಡಿ. ಸಿ. ಮಿಶನ್, ಬೆಸೆಂಟ್ ಶಾಲೆ, ಬಿ ಪಿ ಸಿ ಪೋಟರ್ ವರ್ಕ್ಸ್ ಶಾಪ್, ಕೆನರಾ ಹೈಸ್ಕೂಲ್ ಮ್ಯೂಜಿಯಂ, ಇವುಗಳ ಸಂದರ್ಶನ. ಕೊನೆಗೆ ಮಂಗಳೂರು ಮುಸ್ಲಿಮ್ ಎಡ್ಯುಕೇಶನಲ್ ಸಂಘದ ಮಾನಪತ್ರ.

ದಿವಾನರು ತನಗಿತ್ತ ಮಾನಪತ್ರಗಳ ಕುರಿತಾಗಿ ಮಾಡಿದ ಪ್ರತಿಭಾಷಣಗಳ ಸಂಕ್ಷಿಪ್ತ ವಿವರಗಳನ್ನು ಮಾತ್ರ ಸ್ಥಳಾಭಾವದಿಂದ ಕೊಟ್ಟಿರುತ್ತೇವೆ.

ಉಡುಪಿ ಮುನ್ಸಿಪಲ್ ಸಭೆಯವರು ಒಪ್ಪಿಸಿದ ಸ್ವಾಗತ ಸನ್ಮಾನಪತ್ರದ ಸಂದರ್ಭದಲ್ಲಿ—

'ಒಬ್ಬ ಯಾತ್ರಿಕನ ಮನೋಧರ್ಮದಿಂದ ಬಂದಿರುತ್ತೇನೆ. ಈ ಪ್ರದೇಶದ ಪ್ರಕೃತಿ ಸೌಂದರ್ಯದ ಸನ್ನಿವೇಶದಿಂದ ಮುಗ್ಧನಾಗಿದ್ದೇನೆ. ಈ ವಿಹಾರಕ್ಷೇತ್ರ ಮತ್ತು ಜಿಮ್ನೇಶಿಯಮ್ ಇದಕ್ಕಿಂತ ಎಷ್ಟೋ ದೊಡ್ಡ ನಗರಪಟ್ಟಣಗಳಿಗೂ ಆದರ್ಶಪ್ರಾಯವಾಗಿದೆ. ಆಗುಂಬೆ ರಸ್ತೆಯ ವಿಷಯವಾಗಿ ನಿಮ್ಮ ಕೇಳಿಕೆಗೆ ನಿಗಾಕೊಡುತ್ತೇನೆ. ಭರತಖಂಡದ ನಾನಾ ಭಾಗಗಳಿಂದ ಪ್ರತಿವರ್ಷವೂ ಉಡುಪಿಗೆ ಸಹಸ್ರಾರು ಮಂದಿ ಯಾತ್ರಿಕರು ಬರುತ್ತಾರೆ. ಆದುದರಿಂದ ಈ ಊರನ್ನು ಚೊಕ್ಕಟವಾಗಿಟ್ಟು ಜನರ ಆರೋಗ್ಯಸ್ಥಿತಿಯನ್ನು ಕಾಪಾಡುವ ತಮ್ಮ ಕರ್ತವ್ಯವು ಗುರುತರವಾಗಿದೆ. ಈ ವಿಷಯದ ತಮ್ಮ ಪ್ರಯತ್ನಗಳು ಸಫಲವಾಗಿ ನೆರವೇರಲೆಂದು ಹಾರೈಸುತ್ತೇನೆ. ಈಗಿನ ಪರ್ಯಾಯಸ್ವಾಮಿಗಳು ವೇದಾಂತ ವಿಷಯಗಳಲ್ಲೇ ತೃಪ್ತರಾಗಿರದೆ ಗ್ರಾಮಾಭಿವೃದ್ಧಿಯ ಕಾರ್ಯದಲ್ಲಿಯೂ ತೀವ್ರಾಸಕ್ತಿ ವಹಿಸಿರುವರೆಂದು ನನಗೆ ತಿಳಿದುಬಂದಿದೆ. ಧರ್ಮಬೋಧಕರು ಕೈಗೊಳ್ಳಬೇಕಾದ ಉತ್ತಮ ಮಾರ್ಗವು ಇದು. ಪರ್ಯಾಯ ಸ್ವಾಮಿಗಳವರ ಮೇಲ್ಪಂಕ್ತಿಯು ಅನುಸರಣೀಯವಾಗಿದೆ.'

ಉಡುಪಿ ಶ್ರೀಕೃಷ್ಣಮಠದಲ್ಲಿ ಮಾನಪತ್ರ ಸ್ವೀಕಾರಾನಂತರದ ಭಾಷಣದಲ್ಲಿ

'ಪ್ರಾಚೀನಕಾಲದ ಒಂದು ಮಠದ ಶ್ರೀಗಳವರು ಅನ್ಯಮತೀಯನಾದ ನನ್ನನ್ನು ಆದರದಿಂದ ಬರಮಾಡಿಕೊಂಡು ಈ ಸತ್ಕಾರಕೂಟವನ್ನು ಏರ್ಪಡಿಸಿದುದು ಸಾಮಾನ್ಯ ವಿಚಾರವಾಗಿರದೆ ನಾನಾ ಮತಗಳವರೊಳಗಿರಬೇಕಾದ ಪರಸ್ಪರ ಪ್ರೀತಿವಿಶ್ವಾಸಗಳಿಗೆ ಇದೊಂದು ದೊಡ್ಡ ನಿದರ್ಶನ. ಜನರು ತಮ್ಮ ತಮ್ಮ ಮತಗಳ ಸಾರತತ್ವಗಳನ್ನು ಗ್ರಹಿಸಿ ಆಚರಣೆಯಲ್ಲಿಟ್ಟುಕೊಂಡರೆ ಅದರ ಜೊತೆಗೆ ಅನ್ಯಮತಗಳ ತತ್ವಗಳನ್ನು ವಿಚಾರಮಾಡಿ ತಿಳಕೊಂಡರೆ ಮತಸಂಬಂಧವಾದ ಗೊಂದಲಗಳಿಗೆ ಅವಕಾಶ ಸಿಗದಿರುವುದು ಮಾತ್ರವಲ್ಲದೆ ಪರಸ್ಪರ ಸ್ನೇಹಪ್ರವೃತ್ತಿಯೇ ಬಲವಾಗುತ್ತದೆ. ಮತಸಂಬಂಧವಾದ ಗುರುಪೀಠವನ್ನೇರಿದವರು ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಆಸಕ್ತಿ ವಹಿಸಿದ್ದು ಇತಿಹಾಸಪ್ರಸಿದ್ಧವಿದೆ. ಇಂದೂ ಹಲವು ಮಠಗಳಲ್ಲಿ ಆ ಭಾಗದ ಕಾರ್ಯಕಲಾಪಗಳು ಈಗಿನ ಸನ್ನಿವೇಶಕ್ಕೆ ತಕ್ಕಂತೆ ನಡೆಯುತ್ತಿವೆ. ಉಡುಪಿಯವರಿಗಂತೂ ಪರ್ಯಾಯ ಶ್ರೀಗಳವರ ಪ್ರತ್ಯಕ್ಷ ನಿದರ್ಶನವೇ ಎದುರಿಗಿದೆ. ಶ್ರೀಕೃಷ್ಣ ದೇವಾಲಯದ ಐತಿಹ್ಯವು ಉದಾರವಾದ ಮತ್ತು ಉದಾತ್ತವಾದ ಭಾವನೆಗಳಿಂದ ತುಂಬಿದೆ. 'ಕನಕನ ಕಿಂಡಿ'ಯೇ ಅದಕ್ಕೆ ನಿದರ್ಶನೆ. ಭಗವಂತನನ್ನು ಮೆಚ್ಚಿಸಲು ಭಕ್ತಿಯೊಂದೇ ಮುಖ್ಯವೇ ಹೊರತು ಜಾತಿಮತಗಳು ಮುಖ್ಯವಲ್ಲವೆಂಬ ಭಾವನೆಯನ್ನು ಅದು ಸಾರುತ್ತಿದೆ. ಈಗಿನ ಪರ್ಯಾಯ ಶ್ರೀಗಳವರು ವಿದ್ವತ್ತಿನಿಂದಲೂ ಜ್ಞಾನಾನುಭವಗಳಿಂದಲೂ ಸರಳಜೀವನದಿಂದಲೂ ಸುಪ್ರಸಿದ್ಧರಾಗಿದ್ದಾರೆ. ಯಾತ್ರಿಕರಾಗಿ ಬಂದವರ ವಿಷಯದಲ್ಲಿ ಹಿಂದೆ ನಡೆಯುತ್ತಿದ್ದ ಅವ್ಯವಸ್ಥೆಗೆ ಈಗ ಅವಕಾಶವೇ ಇಲ್ಲ. ಶ್ರೀಗಳವರ ವ್ಯವಸ್ಥೆಯು ಅಚ್ಚುಕಟ್ಟು. ಸಮಸ್ತರನ್ನೂ ತಲೆದೂಗಿಸುವಂತಿದೆ. ಅದಕ್ಕಾಗಿ ಬಹಳ ಹಣವೆಚ್ಚವಾಗುತ್ತಿದೆ. ಹಿಂದಿನ ಶ್ರೇಷ್ಠ ಸಂಪ್ರದಾಯಗಳೂ ಉಳಿದಿದ್ದು ಅವುಗಳ ಜೊತೆಗೆ ಈಗಿನ ಕಾಲದ ಜೀವನ ಸೌಕರ್ಯಗಳೂ ಹದವರಿತು ಸೇರಿ ಜನರಿಗೆ ಅನುಕೂಲವಾಗುವಂತೆ ಮಾಡಬೇಕೆಂಬುದು ಶ್ರೀಗಳವರ ಪರಮಧ್ಯೇಯ. ಈ ಊರು ಪ್ರಕೃತಿಸೌಂದರ್ಯಕ್ಕೆ ಪ್ರಸಿದ್ಧವಾದ ಪುಣ್ಯಕ್ಷೇತ್ರವಾಗಿರುವುದು ಮಾತ್ರವಲ್ಲದೆ ಈಗಿನ ಕಾಲದ ನೂತನವಾದ ನಾಗರಿಕ ಜೀವನಕ್ಕೆ ಬೇಕಾದ ಸಾಧನಗಳಿಂದಲೂ ತುಂಬಿ ಊರನ್ನು ಚೊಕ್ಕಟವಾಗಿಟ್ಟುಕೊಂಡಿರುವ ವಿಷಯದಲ್ಲಂತೂ ಉಡುಪಿಯು ಕನ್ನಡನಾಡಿನಲ್ಲೆಲ್ಲಾ ಮೇಲ್ಪಂಕ್ತಿಯಾಗಿರುವ ನಗರಪಟ್ಟಣಗಳ ಜೊತೆಗೆ ಸೇರಲು ಅರ್ಹವಾಗಿ ಇದು ಇಹಪರ ಸುಖಗಳೆರಡಕ್ಕೂ ಸಾಧಕವಾಗಿದೆಯೆಂದು ಧಾರಾಳವಾಗಿ ಹೇಳಬಹುದು.'

ಮಣಿಪಾಲದಲ್ಲಿ ಅನಾಥ ರಕ್ಷಣಾಲಯದ ಶಂಕುಸ್ಥಾಪನೆಯ ಸುಮುಹೂರ್ತದಲ್ಲಿ

'ಅನಾಥ ಮಕ್ಕಳು ಚಿಕ್ಕದಾಗಿರುವಾಗ ಅವರ ಪಾಲನೆಯನ್ನು ನೋಡಿಕೊಳ್ಳುವುದು

ಪುಟ ೧೧ಕ್ಕೆ

ಬೇಕಾಗಿದ್ದಾರೆ.

ಜಗತ್ಪ್ರಸಿದ್ಧವಾದ ಯುರೋಪಿಯನ್ ವಿಮಾ ಕಂಪೆನಿಯಾದ 'ಅಲ್ಲಿಯಾನ್ಸ್ ಅಂಡ್ ಸ್ಟೆಟ ಗಾರ್ಟರ್ ಲೈಫ್ ಇನ್ಶೂರೆನ್ಸ್ ಬ್ಯಾಂಕ್ ಲಿಮಿಟೆಡ್'ಗೆ ದಕ್ಷಿಣ ಕನ್ನಡ ಮತ್ತು ಕೊಡಗುಗಳಿಗೆ ಇಬ್ಬರು ಪ್ರಭಾವಶಾಲಿ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿಶೇಷ ಮಾಹಿತಿ ಒಗ್ಗೆ:— ವಿ. ವಿ. ಕವಾಲ್,
ಸುಪರಿಂಟೆಂಡೆಂಟ್,
C/o ಪೋಸ್ಟ್‌ಮಾಸ್ಟರ್, ಧಾರವಾಡ

THE

Canara Banking Corporation, Udipi, Ltd.

(Incorporated in British India)

—o—

THE REGISTER OF MEMBERS & TRANSFER BOOKS of the CORPORATION will remain closed from 16—2—1939 to 5—3—1939 both days inclusive.

(By Order)

V. R. KAMATH,
MANAGER.

ನವಯುಗ

ಉಡುಪಿ, ಗುರುವಾರ, ತಾ. ೨೩-೨-೩೯

ಮದ್ರಾಸು ಸರಕಾರದ ಆಯವ್ಯಯ ಪಟ್ಟಿ

ಇದೇ ತಾ. 20ರಲ್ಲಿ ಪ್ರಧಾನ ಮಂತ್ರಿಗಳು ಮದ್ರಾಸ್ ಸರಕಾರದ 1939-'40ನೇ ವರ್ಷದ ಆಯವ್ಯಯ ಪಟ್ಟಿಯನ್ನು ಎಸೆಂಬ್ಲಿಯ ಮುಂದಿರಿಸಿರುವರು. ಈ ವರ್ಷ ಆದಾಯಕ್ಕಿಂತ ವೆಚ್ಚವು ರೂ. 17,27,000ದಷ್ಟು ಅಧಿಕವಾಗಿರುವುದು. ಈ ವರ್ಷ ಆದಾಯದ ಅಂದಾಜು ರೂ. 16ಕೋಟಿ 23ಲಕ್ಷವಿದ್ದು ವ್ಯಯವು 16 ಕೋಟಿ 40ಲಕ್ಷವಾಗಿರುವುದು. ಕಳೆದ ವರ್ಷ ಆಯವು ರೂ. 16ಕೋಟಿ 1ಲಕ್ಷವಾಗಿ ವ್ಯಯವು 15ಕೋಟಿ 83ಲಕ್ಷವಾಗಿಷ್ಟು. ರೂ. 18 ಲಕ್ಷ ಉಳಿತಾಯವಿದ್ದಿತು. 1939-'40ರಲ್ಲಿ ರೂ. 17ಲಕ್ಷದಷ್ಟರ ಅಭಾವವುಂಟಾಗಿದೆ. ಇಲೆಕ್ಟ್ರಿಸಿಟಿಯ ಮತ್ತು ಪೆಟ್ರೋಲಿನ ಮೇಲೆ ಹೊಸ ತೆರಿಗೆಯು ಹಾಕಲ್ಪಡಲಿದೆ. ಅದರಿಂದ ದೊರೆಯ[illegible]ದಾದ ರೂ. 15,12,000ವನ್ನು ಆಯಕ್ಕೆ ತೆಗೆದುಕೊಳ್ಳಲಾಗಿದೆ. ಇದು ಹೊರತು ಹೊಗೆಸೊಪ್ಪಿನ ಮೇಲೆ ಕರಹಾಕಲಾಗುವುದು. ವರ್ಷಕ್ಕೆ ರೂ 10,000ಕ್ಕಿಂತ ಹೆಚ್ಚಿನ ವ್ಯಾಪಾರ ಮಾಡುವ ವ್ಯಾಪಾರಿಗಳ ಮೇಲೆ ತೆರಿಗೆ ಹಾಕಲಾಗುವುದು. ದೇಶೀಯ ಸಾರಾಯಿಯ ಮೇಲಿನ ಕರವನ್ನು ಗೆಲನಿಗೆ ರೂ. 1-8-0ಯಷ್ಟು ಹೆಚ್ಚಿಸಲಾಗುವುದು. ಸಿನೆಮ ಮೊದಲಾದ ವಿನೋದ ಪ್ರದರ್ಶನಗಳ ಮೇಲೆ ಇನ್ನು ಮುಂದೆ ಪ್ರಾಂತಿಕ ಸರಕಾರವೇ ಕರಹಾಕುವುದು. ಅದೊಂದು ಪರಿಮಿತಿಗಿಂತ ಹೆಚ್ಚಿನ ಸಂಬಳ ಪಡೆಯುವ ಅಧಿಕಾರಿಗಳ ಸಂಬಳದಲ್ಲಿಸ್ವಲ್ಪಮಟ್ಟಿಗೆ ಕಡಿಮೆವಾಗುವುದು. 1939-'40ರಲ್ಲಿ ರೂ. 150 ಲಕ್ಷ ಸಾಲ ಪಡೆಯುವ ಏರ್ಪಾಡುಮಾಡಲಾಗಿದೆ.

1939-40ರಲ್ಲಿ ಬರಗಾಲ, ಬಿರುಗಾಳಿಹಾವಳಿ ಮೊದಲಾದುವುಗಳಿಂದ ಸರಕಾರದ ಖರ್ಚು ನಿರೀಕ್ಷಿಸಿದುದಕ್ಕಿಂತ ಅಧಿಕವಾಗಿ ಕಂದಾಯ ರಿಯಾಯಿತಿಯಿಂದಾಗಿ ಆದಾಯವು ಇಳಿದುಹೋಗಿದೆ. ಆದುದರಿಂದ ಈ ವರ್ಷ ಉತ್ತರಾರ್ಕಾಡು ಜಿಲ್ಲೆಯೊಂದರಲ್ಲಿ ಮಾತ್ರ [illegible] ವನ್ನು ಜ್ಯಾರಿಗೆ ತರಲಾಗುವುದು. ಹೀಗೆ ಬಿಟ್ಟ ಈ ವರೆಗೆ ಸೇಲಂ, ಚಿತ್ತೂರು, ಕಡಪ, ಮತ್ತು ಉತ್ತರಾರ್ಕಾಡು ಅಂದರೆ ಇಡೀ ಪ್ರಾಂತದ ಐದನೇ ಒಂದು ಪಾಲಷ್ಟು ವಿಸ್ತೀರ್ಣದಲ್ಲಿ ಸಂಪೂರ್ಣವಾಗಿ ಮದ್ಯಪಾನವನ್ನು ನಿಷೇಧಿಸಿದಂತಾಗುವುದು. ಇಡೀ ಪ್ರಾಂತದಲ್ಲಿ ಸಂಪೂರ್ಣ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರುವುದು ಅನಿವಾರ್ಯವೂ ಅಲ್ಲ, ಅಸಾಧ್ಯವೂ ಅಲ್ಲ. ಅದಕ್ಕೆ ದೊಡ್ಡ ತೊಡಕೆಂದರೆ ಧನಾಭಾವ. ಮದ್ಯಪಾನ ನಿಷೇಧದಿಂದ ಸುಮಾರು ರೂ. 15ಕೋಟಿ ಬಡಜನರ ಕೈಯಲ್ಲಿ ಉಳಿಯುವಂತಾಗುವುದು. ಅದರಿಂದಾಗಿ ಬಡಜನರ ಜೀವನ ಪ್ರಮಾಣವು ಹೆಚ್ಚಿ, ವ್ಯಾಪಾರ ವಹಿವಾಟುಗಳಲ್ಲಿ ತೇಜಿ ಉಂಟಾಗುವುದು. ಕೇಂದ್ರ ಸರಕಾರದಲ್ಲಿ ಸಂಪೂರ್ಣ ಪ್ರಜಾಜವಾಬ್ದಾರಿ ರಾಜ್ಯಭಾರವು ಸ್ಥಾಪಿತವಾಗಿ ಪ್ರಾಂತಗಳಿಗೆ ಹಣ ದೊರೆಯುವವರೆಗೆ ಬಡ ಜನರಿಗಾಗಿ ಧನವಂತರು ಕೆಲಮಟ್ಟಿನ ತೆರಿಗೆ ಭಾರವನ್ನು ಸಂತೋಷದಿಂದ ಹೊರಬೇಕೆಂದೇ ಪ್ರಧಾನ ಮಂತ್ರಿಗಳ ಆಗ್ರಹದ ವಿನಂತಿ.

ಇಷ್ಟರವರೆಗೆ ಸರಕಾರವು ಸುಮಾರು ರೂ. 2ಕೋಟಿಯಷ್ಟರ ಆದಾಯ ನಷ್ಟ ಪಡೆದಿರುವುದು. ಆದರೂ ಅದರ ಆರ್ಥಿಕ ಸ್ಥಿತಿಯು ಸುಭದ್ರವಾಗಿಯೇ ಇರುವುದು. [illegible]ರಲ್ಲಿ ರೂ. 17 ಲಕ್ಷದಷ್ಟು ವೆಚ್ಚವು ಹೆಚ್ಚಿದುದರಿಂದ ಯಾರೂ ಗಾಬರಿಗೊಳ್ಳಬೇಕಾಗಿಲ್ಲ. ಹೊಸ ತೆರಿಗೆಗಳಿಂದಾಗಿ ಈ ಅಭಾವವು ಕೂಡಿಬರುವುದು. ಮಾತ್ರವಲ್ಲದೆ ಜನಹಿತಕಾರಕವಾದ ವಿಧಾಯಕ ಯೋಜನೆಗಳಿಗೆ ಸಾಕಷ್ಟು ಹಣ ದೊರೆಯುವುದು. ಸರಕಾರವು ವರ್ಷವರ್ಷ ಸಾಲಮಾಡುತ್ತಾ ಹೋಗುವುದೆಂದು ಯಾರಾದರೂ ದಿಗಿಲುಗೊಳ್ಳಬಾರದು. ಸಾಲ ಪಡೆದ ಹಣವನ್ನೆಲ್ಲಾ ಲಾಭದಾಯಕ ಯೋಜನೆಗಳಿಗಾಗಿ ವಿನಿಯೋಗಿಸಲಾಗಿದೆ. ಸರಕಾರವು ಈ ಕಷ್ಟಕಾಲದಲ್ಲಿಯೂ ರೂ. 75ಲಕ್ಷದಷ್ಟರ ಕಂದಾಯ ರಿಯಾಯಿತಿಯನ್ನಿತ್ತಿರುತ್ತದೆ. ಬೇಸಾಯಗಾರರ ಸಾಲವನ್ನಿಳಿಸಲು ಕನ್ಸಿಲಿಯೇಶನ್ ಬೋರ್ಡುಗಳನ್ನೂ ಸ್ಥಾಪಿಸಿದೆ. ಆಸ್ತಿ ಅಡವಿನಿಂದ ಸಾಲಕೊಡದೆ ಲೇಂಡ್ ಮೋರ್ಗೇಜ್ ಬೇಂಕುಗಳನ್ನು ಸ್ಥಾಪಿಸಿದೆ. ಎಲ್ಲರೂ ಸರಕಾರದ ಕುರಿತು ಸಹಾನುಭೂತಿಯುಳ್ಳವರಾಗಿ ಅದು ಹೊರಿಸಲಿರುವ ಹೊಸ ಕರಗಳ ಕುರಿತು ಸಂತಾಪ ಪಡಬಾರದೆಂದು ಪ್ರಧಾನ ಮಂತ್ರಿಗಳು ಕೇಳಿಕೊಂಡಿರುವರು.

ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ರಾಜ್ಯಭಾರ

ಇಂದೀಗ ದೇಶೀಯ ಸಂಸ್ಥಾನಗಳ ಪ್ರಶ್ನೆಯು ಸ್ವಾಭಾವಿಕವಾಗಿ ಅಖಿಲಭಾರತ ಸ್ವರೂಪ ಹೊಂದಿದೆ. ಭಾರತವು ಅಖಂಡವಾದುದು. ಅದರಿಂದ ದೇಶೀಯ ಸಂಸ್ಥಾನಗಳನ್ನು ವಿಂಗಡಿಸಲು ಸಾಧ್ಯವಿಲ್ಲ. ಹಿಂದೀಯರೆಲ್ಲರೂ ಸರಿಸಮಾನ. ರಾಜಕೀಯ ಸ್ವಾತಂತ್ರ್ಯ ಪಡೆದು ಸಂಯುಕ್ತ ರಾಜ್ಯಭಾರದೊಳಗೆ ಒಂದುಗೂಡಿ ತಮ್ಮ ಅದೃಷ್ಟವನ್ನು ರೂಪಿಸಬೇಕು; ತಮ್ಮ ಅಭ್ಯುದಯ ಸಾಧಿಸಬೇಕು. ಅಂದಮೇಲೆ ಬ್ರಿಟಿಷ್ ಹಿಂದುಸ್ಥಾನವು ಸ್ವಾತಂತ್ರ್ಯ ಪಡೆಯುವಾಗ ದೇಶೀಯ ಸಂಸ್ಥಾನಗಳ ಪ್ರಜೆಗಳೂ ಪ್ರಜಾಜವಾಬ್ದಾರಿ ರಾಜ್ಯಭಾರ ಪಡೆಯಲೇಬೇಕು. ಇಲ್ಲವಾದರೆ ಸಂಯುಕ್ತ ರಾಜ್ಯಾಂಗ ರಚನೆಯೇ ಸಾಧ್ಯವಿಲ್ಲ. ಆದುದರಿಂದಲೇ ಕಾಂಗ್ರೆಸು ಒಂದೆಡೆ ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರ್ಯವನ್ನು ಕಸಕೊಳ್ಳಲು ಹೋರಡುವಾಗ, ದೇಶೀಯ ಸಂಸ್ಥಾನಗಳ ಪ್ರಜೆಗಳ ಸ್ವಾತಂತ್ರ್ಯ ಸಾಧನಾ ಚಳವಳಿಕ್ಕೂ ಸಾಧ್ಯವಾದ ಸಹಾಯವನ್ನಿತ್ತಿರುವುದು ಅವಶ್ಯವಿದ್ದಲ್ಲಿ ಅದರಲ್ಲಿ ಸ್ವತಃ ಕೈಹಾಕಿ ಭಾಗವಹಿಸುವುದಕ್ಕೂ ಕಾಂಗ್ರೆಸು ಹಿಂಜರಿಯಲಾರದೆಂಬುದನ್ನು ಗಾಂಧಿಜಿಯವರು ಸ್ಪಷ್ಟಗೊಳಿಸಿರುವರು. ಇದೇ ತಾ 15ರಲ್ಲಿ ಲುಧಿಯಾನದಲ್ಲಿ ನಡೆದ ಅಖಿಲಭಾರತ ದೇಶೀಯ ಸಂಸ್ಥಾನಗಳ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಪಂಡಿತ ಜವಾಹರಲಾಲರು, ದೇಶೀಯ ಸಂಸ್ಥಾನಗಳ ಮತ್ತು ಬ್ರಿಟಿಷ್ ಹಿಂದುಸ್ಥಾನದ ಜನತೆಯ ಸ್ವಾತಂತ್ರ್ಯ ಚಳವಳಿವು ಒಂದೇ ಸವನೆ ಕೈಕೈಕೊಟ್ಟು ಮುನ್ನಡೆಯ ಬೇಕು. ಇಡೀ ಭಾರತವು ಅವಿಭಕ್ತವಾಗಿ ಸಂಪೂರ್ಣ ಸ್ವಾತಂತ್ರ್ಯ ಗಳಿಸಿ ಒಂದಾಗಬೇಕೆಂಬುದನ್ನು ಪ್ರತಗೊಳಿಸಿರುವರು. ಅಂದಮೇಲೆ ಸಾಂಸ್ಥಾನಿಕ ಪ್ರಜೆಗಳ ಸ್ವಾತಂತ್ರ್ಯ ಚಳವಳಿವನ್ನು ಸಂಸ್ಥಾನಾಧಿಪತಿಗಳು ನಿರಂಕುಶರಾಗಿ ಅಣಗಿಸಲೆತ್ನಿಸಿದರೆ ಅವಕ್ಕೆ ಬ್ರಿಟಿಷ್ ಸರಕಾರವು ತಡೆಹಾಕಬೇಕೇ ಹೊರತು ಯಾವ ತರದ ಒತ್ತಾಸೆಯನ್ನೂ ಮಾಡಬಾರದು. ಹಾಗೆ ಮಾಡಿದರೆ ಕಾಂಗ್ರೆಸು ಅದನ್ನು ವಿರೋಧಿಸಿ ಅಖಿಲಭಾರತ ಚಳವಳಿ ಹೂಡಬೇಕಾಗುವುದು.

ಬೆನಾರೀಸಿನ ಮಹಾರಾಜರ ಮಾದರಿ

ವಿವೇಕಿಗಳಾದ ಕೆಲವಂದಿ ರಾಜ ಮಹಾರಾಜರುಗಳು ಕಾಲಗುಣವನ್ನನುಸರಿಸಿ ತಾವು ಪ್ರಜಾಸೇವಕರಲ್ಲದೆ ಪ್ರಜಾಧಿಕಾರಿಗಳಲ್ಲೆಂಬುದನ್ನು ಮನಗಂಡು, ಪ್ರಜೆಗಳ ಸ್ವಾತಂತ್ರ್ಯಾಕಾಂಕ್ಷೆಯನ್ನು ಮನ್ನಿಸಿ ಪ್ರಜಾಜನ ಜವಾಬ್ದಾರಿರಾಜ್ಯಭಾರವನ್ನೀಯಲು ಮುಂದಾಗಿರುವುದು ಅಭಿನಂದನೀಯವಿದೆ. ಹೀಗೆ ಮಾಡಿದವರಲ್ಲಿ ಬೆನಾರೀಸಿನ ಮಹಾರಾಜರೊಬ್ಬರು. ಪ್ರಜಾಸತ್ತೆಯು ಹಿಂದೀ ಸಂಪ್ರದಾಯಕ್ಕೇನೂ ನವೀನವಾದುದಲ್ಲ. ಗ್ರಾಮ 'ಸ್ವಯತ್ತತೆಯ ಆಧಾರದಿಂದ ಜವಾಬ್ದಾರಿ ರಾಜ್ಯಭಾರವು ಕಟ್ಟಲ್ಪಡಬೇಕು. ಆಧುನಿಕ ರೀತಿನೀತಿಗಳಿಗನುಗುಣವಾಗಿ ಈಗಣ ರಾಜ್ಯಭಾರ ಪದ್ಧತಿಯಲ್ಲಿ ಬದಲಾವಣೆಯು ಅವಶ್ಯಬಿದ್ದೀತು. ತನ್ನ ಪ್ರಜೆಗಳು ಅಪೇಕ್ಷೆಪಟ್ಟಲ್ಲಿ ತಾನು ಕಾಲಧರ್ಮಕ್ಕನುಗುಣವಾದ ಬದಲಾವಣೆಮಾಡಲು ಸಿದ್ಧನೇ ಇರುವೆನೆಂದು ತಿಳಿಸಿ, ತನ್ನ ಪ್ರಜೆಗಳ ಸೂಚಿಸಿರುವ ಹೆಸರುಗಳ ಪಟ್ಟಿಯಲ್ಲಿ ಕೆಲವರನ್ನು ಆರಿಸಿ [illegible] ಬೇಕೆಂದು ವಿಚಾರಿಸಲು ಒಂದು [illegible]ಯನ್ನು ನೇಮಿಸಿರುವರು. ಇದೀಗ ಅನುಸರಣೀಯ ಮಾದರಿಯಿದೆ. ಇತರ ದೇಶೀಯ ಸಂಸ್ಥಾನಗಳವರು ಇದೇ ರೀತಿ ನಡೆದಲ್ಲಿ ಇಂದೀಗ ಹಲವು ದೇಶೀಯ ಸಂಸ್ಥಾನಗಳಲ್ಲಿ ನಡೆದಿರುವ ಆಂದೋಲನಕ್ಕೆ ಆಸ್ಪದ ದೊರೆಯುವಂತಿಲ್ಲ.

ದಿ ಹಾಂಗಾಳೆ ನಾಯಕ್ ಬ್ಯಾಂಕ್, ಲಿಮಿಟೆಡ್ ಉಡುಪಿ

ಈ ಬ್ಯಾಂಕಿನ 1938ನೇ ದಶಂಬರ 31ಕ್ಕೆ ಅಂತ್ಯವಾಗುವ, ಪರಿಶೋಧಿತ, ಲಾಭನಷ್ಟ ಶಿಲ್ಕು ಪತ್ರಗಳೊಂದಿಗೆ ಕೂಡಿದ ಹತ್ತೊಂಭತ್ತನೇ ವರ್ಷದ ವರದಿಯು ನಮ್ಮ ಕೈಸೇರಿರುವುದು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಬ್ಯಾಂಕಿಂಗ್ ಸಂಸ್ಥೆಗಳಲ್ಲೊಂದು. ಉತ್ತಮ ವ್ಯವಸ್ಥೆಯು ಜನತೆಯ ಪ್ರೇಮಾಭಿಮಾನಕ್ಕೆ ಪಾತ್ರವಾದ, ಅನುಭವಿಗಳಿಂದ ಕೂಡಿದ ಆಡಳಿತ ಮಂಡಲವನ್ನೊಳಗೊಂಡ ಸಂಸ್ಥೆಯಾಗಿದ್ದು ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತಿರುವುದು. ಇದಕ್ಕೀಗ ಕಟಪಾಡಿ, ಮಂಗಳೂರು, ಮತ್ತು ಕುಂದಾಪುರ ಈ ಮೂರು ಸ್ಥಳಗಳಲ್ಲಿ ಶಾಖೆಗಳಿವೆ. ವರದಿಯ ಮೇರೆಗೆ ಈ ಬ್ಯಾಂಕಿಂಗ್ ಸಂಸ್ಥೆಯು ತನ್ನ ಸ್ಥಾನದ ಯೋಗ್ಯತೆಯನ್ನು ಕಾಪಾಡುವುದರಲ್ಲಿ ಬಹು ವಿಚಾರ, ವಿಚಕ್ಷಣತೆಯಿಂದ ವಹಿವಾಟುಗಳನ್ನು ನಡೆಸುತ್ತಿರುವುದೆಂದು ತಿಳಿಯ ಬರುವುದಾಗಿದೆ. ವರದಿಯ ವರ್ಷದಲ್ಲಿ ಕಂಪೆನಿಯ ಲಾಭವು ರೂ. 12,335-15-7 ಆಗಿರುವುದು. ಬೇರೆ ಬೇರೆ ರಿಸರ್ವ ಫಂಡು (ಆಪದ್ಧನ)ಗೆ ಲಾಭಾಂಶದಿಂದ ರೂ. 3,231-7-1ನ್ನು ಸೇರಿಸುವ ಆಡಳಿತ ಮಂಡಲದ ನಿರ್ಧಾರವು ಪ್ರಶಂಸನೀಯವಿದೆ. ಮಾತ್ರವಲ್ಲದೆ ಇದರ ಆಪದ್ಧನ (Reserve fund Rs. 77,900-0-0 & Doubtful and Bad Debts Reserve Fund Rs. 1,21,803-14-11)ಒಟ್ಟಿಗೆ ರೂ. 2,00,000ದ ವರೆಗಿರುವುದು ಈ ಬ್ಯಾಂಕಿನ ಭದ್ರತೆಯನ್ನು ವ್ಯಕ್ತಗೊಳಿಸುವುದು. ಅದಲ್ಲದೆ ರೂ 1,17,478-3-6ರ ವರೆಗೆ ಈ ಬ್ಯಾಂಕಿಂಗ್ ಸಂಸ್ಥೆಯು ಸರಕಾರಿ ಪ ಭದ್ರವಾದ ಸೆಕ್ಯೂರಿಟಿಗಳ ಮೇಲೆ ವಿನಿಯೋಗಿಸಿರುವುದು. ಇದರ ಉತ್ಕೃಷ್ಟ ಸ್ಥಿತಿಗೆ ಇಷ್ಟೆಷ್ಟು ಬಲವಾದ ಆಧಾರ. ವರದಿ ವರ್ಷದ ವಹಿವಾಟು ಇನ್ನಷ್ಟು ಪ್ರಗತಿಯ ಮಾರ್ಗದಲ್ಲಿ ಮುಂದುವರಿದಿದೆಯೆಂಬುದಕ್ಕಾಗಿ ಆಡಳಿತ ಮಂಡಲದ ಕಾರ್ಯೋದ್ಯಮವನ್ನು ಅಭಿನಂದಿಸಬೇಕಾಗಿರುವುದು. ಇದರ ಮುಂದಿನ ಕಾರ್ಯಕ್ಷೇತ್ರವು ಇನ್ನಷ್ಟು ವಿಸ್ತಾರ ಹೊಂದಿ ಇದರ ಮಹತ್ವಕೆಯು ಮತ್ತಷ್ಟು ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯು—1938ನೇ ದಶಂಬರ ತಾ. 31ರಲ್ಲಿ ಪ್ರಥಮ 'ವೇಲ್ಯುವೇಶನ'ಗೊಳಗಾಗಿರುತ್ತದೆಂದು ತಿಳಿಯುತ್ತೇವೆ. ಈ ಕಂಪೆನಿಯ ಆಡಳಿತದ ಅತ್ಯಂತ ಕಡಿಮೆ ವೆಚ್ಚದ ಪ್ರಮಾಣವು, ವೇಲ್ಯುವೇಶನನಲ್ಲಿ ಪ್ರತ್ಯಕ್ಷವಾಗಿ ತೋರುವಂತೆ ಹೆಚ್ಚಿನ ಉಳಿತಾಯಕ್ಕೆ ಕಾರಣವಾಗಿದೆ. ವೇಲ್ಯುವೇಶನು ಸೇಕಡ 3½ಯಷ್ಟರ ಅತಿ ಕಡಿಮೆ ದರದ ಬಡ್ಡಿಹಿಡಿದು ನಡೆಸಲ್ಪಟ್ಟಿದೆ. ಇಷ್ಟೊಂದು ಕಡಿಮೆ ಬಡ್ಡಿ ದರಹಿಡಿದು ವೇಲ್ಯುವೇಶನ್ ನಡೆದ ಮೇಲೆ ಮತ್ತು ಉಳಿತಾಯ ತೋರಿಸಲು ಶಕ್ಯವಿರುವ ಕಂಪೆನಿಗಳು ಹಿಂದೂದೇಶದಲ್ಲಿ ಬಹಳ ಕಡಿಮೆ. ಕಂಪೆನಿಯ ಸೊತ್ತುಗಳ ಬೆಲೆಯನ್ನೇನಾದರೂ ಏರಿಸಿ ತೋರಿಸಿರುವುದಿಲ್ಲ. ಇದು ಹೊರತು ಕಂಪೆನಿಯು ಲೈಫ್ ಫಂಡು ಸ್ವಚ್ಛವಾದ ಸೊತ್ತುಗಳನ್ನೊಳಗೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯ ವಿಮಾಕಂಪೆನಿಯೊಂದು, ಅತ್ಯಂತ ಕಠಿಣ ರೀತಿಯಲ್ಲಿ ನಡೆಸಲ್ಪಟ್ಟಿರುವ ಪ್ರಥಮ ವೇಲ್ಯುವೇಶನನಲ್ಲಿ ಇಷ್ಟೊಂದು ಭದ್ರತೆಯುಳ್ಳದ್ದಾಗಿರುವುದು ಹೆಮ್ಮೆಯ ವಿಷಯವಿದೆ. ಈ ವಿಮಾಕಂಪೆನಿಯು ದಿನೇದಿನೇ ಬೆಳೆದು ಅತ್ಯಂತ ಏಳಿಗೆಶೀಲವಾಗಲೆಂದು ಹಾರೈಸುತ್ತೇವೆ.

ತಿದ್ದುಪಡಿ

ತಾ. 22-12-38ನೇ ಸಂಚಿಕೆಯಲ್ಲಿ ಜಿಲ್ಲಾ ಸಮಾಚಾರದಲ್ಲಿ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನ ಫಂಡಿನ ಸುದ್ದಿಯಲ್ಲಿ ತಾ 5-1-35 ಎಂಬುದರ ಬದಲಾಗಿ 5-1-31 ಎಂದು ತಪ್ಪಾಗಿ ಪ್ರಕಟವಾಗಿದೆ. ಅದನ್ನು ತಾ. 5-1-35 ಎಂದು ತಿದ್ದುಪಡಿ ಮಾಡಿಕೊಳ್ಳತಕ್ಕದ್ದು.

ಯುರೋಪಿನಲ್ಲಿ ಇನ್ನೊಂದು ಬಿಕ್ಕಟ್ಟಿನ ಸಂಭವ

ರಾಷ್ಟ್ರಪತಿ ಭೋಸರ ಆರೋಗ್ಯ

ವಾರ್ಧದಿಂದ ಬಂತೆರಳಿದಂದಿನಿಂದ ಶ್ರೀ ಭೋಸರು ಇನ್‌ಫ್ಲುಯೆನ್ಸಾ ಮತ್ತು ಕೆಮ್ಮಿನಿಂದ ಪೀಡಿತರಾಗಿರುವರು. ತಾ. 19ನೇ ಬೆಳಿಗ್ಗೆ ಅವರ ದೇಹಸ್ಥಿತಿಯು ಸ್ವಲ್ಪ ಸುಧಾರಿಸಿದ್ದರೂ, ಅಪರಾಹ್ನ ಜ್ವರವು 103 ಡಿಗ್ರಿಗೇರಿರುವುದು. ಬಹಳ ಅಶಕ್ತಿಯುಂಟಾಗಿ ಹಾಸಿಗೆಯಿಂದ ಏಳದಂತಾಗಿದೆ. ಕಾಯಿಲೆಯು ಸ್ವಲ್ಪ ದೀರ್ಘ ಕಾಲದವರೆಗೆ ಮುಂದುವರಿಯುವ ಸಂಭವ ತೋರುತ್ತದೆ. ಪ್ರಕೃತ ಯಾವ ತರದ ಅಪಾಯ ಅಥವಾ ಆತುರಕ್ಕೇನಾದರೂ ಆಸ್ಪದವಿಲ್ಲ. ಪ್ರಕೃತದ ಪ್ರಸ್ಥಿತಿಯಲ್ಲಿ ರಾಷ್ಟ್ರಪತಿಗಳಿಗೆ ತಾ. 20ರಲ್ಲು ವಾರ್ಧಕ್ಕೆ ಹೊರಡಲು ಸಾಧ್ಯವಾಗಲಾರದು. ತಾ. 20ರಲ್ಲಿ ಜ್ವರವು ಕಡಿಮೆಯಾಗಿದೆ. ಆದರೆ ಬಹಳ ಅಶಕ್ತಿಯಿದೆ. ರಾಷ್ಟ್ರಪತಿಗಳ ದೇಹಸ್ಥಿತಿ ಸುಧಾರಿಸಿ ಅವರು ಪ್ರಯಾಣಮಾಡಬಹುದೆಂದಾದರೆ ತಾ. 21ನೇ ಬೆಳಿಗ್ಗೆ ವಿಮಾನ ಮೂಲಕ ವಾರ್ಧಕ್ಕೆ ಹೋಗಲಿರುವರು.

ಸಂಪೂರ್ಣ ಶರಣಾಗತರಾಗಬೇಕು

ಸ್ಪೈನಿನ್ ಸರಕಾರದ ಮುಂದಾಳುಗಳು ತನಗೆ ಸಂಪೂರ್ಣ ಶರಣಾಗತರಾಗದೆ ಸಂಧಾನವು ಸಾಧ್ಯವಿಲ್ಲ. ಸಂಧಾನದ ಶರ್ತಗಳನ್ನು ನಿಶ್ಚೈಸುವವನು ವಿಜಯಿಯಾದ ತಾನಲ್ಲದೆ ಇತರರಲ್ಲ. ಸ್ಪೈನಿನ್ ಸರಕಾರವು ತನ್ನ ಕೋವಿ, ತೋಪು ಮತ್ತು ಯುದ್ಧ ವಿಮಾನಗಳನ್ನೆಲ್ಲಾ ತನಗೊಪ್ಪಿಸಬೇಕೆಂದು ಜನರಲ್ ಫ್ರೇಂಕೋರವರು ಸ್ಪಷ್ಟಪಡಿಸಿರುವರು. ಇವಕ್ಕೆ ಅವರ ಮಂತ್ರಿಮಂಡಲದ ಸಂಪೂರ್ಣ ಸಮ್ಮತಿಯಿದೆ. ಇಂಗ್ಲೆಂಡು ಮತ್ತು ಫ್ರಾನ್ಸುಗಳು ಇಷ್ಟರವರೆಗೂ ಜನರಲ್ ಫ್ರೇಂಕೋರವರ ಸರಕಾರವನ್ನು ಅಂಗೀಕರಿಸುವುದಿಲ್ಲ. ಫ್ರೆಂಚ್ ರಾಯಭಾರಿಯಾದ ಎಮ್. ಬೆರಾರ್ಡರು ಬರ್ಗೋಸಿಗೆ ಹೋಗಿ ಬಂಡಾಯಗಾರ ಸರಕಾರದ ವಿದೇಶ ಮಂತ್ರಿಗಳೊಡನೆ ಮಾತುಕತೆ ನಡೆಸುತ್ತಿರುವರು. ಅಂತೂ ರಾಜಿಯಿಂದ ಸ್ಪೈನಿನ ಯುದ್ಧವು ಕೊನೆಗೊಳ್ಳುವ ಸಂಭವ ತೋರುವುದಿಲ್ಲ.

ಯುರೋಪಿನಲ್ಲಿ ಇನ್ನೊಂದು ಬಿಕ್ಕಟ್ಟಿನ ಸಂಭವ

ಪ್ರೆಸಿಡೆಂಟ್ ರೂಸ್‌ವೆಲ್ಟರು, ಪ್ರಚಂಡ ನೌಕಾ ಪರೀಕ್ಷೆಗಾಗಿ ಹೋಗಿ ಸಮುದ್ರಕ್ಕೆ ಹೋದವರು ಮಧ್ಯದಲ್ಲೇ ತನ್ನ ಕಾರ್ಯಕ್ರಮವನ್ನು ನಿಲ್ಲಿಸಿ, ಅವಸರದಿಂದ ಹಿಂದೆ ಬಂದಿರುವರು. ಯುರೋಪಿನಲ್ಲಿ ಶೀಘ್ರವಾಗಿ ಇನ್ನೊಂದು ಬಿಕ್ಕಟ್ಟುಂಟಾಗುವ ಸಂಭವವಿದೆಯೆಂದು ಪ್ರೆಸಿಡೆಂಟರಿಗೆ ಯುರೋಪಿನಿಂದ ವರ್ತಮಾನ ಬಂದುದೇ ಇದಕ್ಕೆ ಕಾರಣವೆಂದು ತಿಳಿದು ಬರುತ್ತದೆ. ಡಿಕ್ಟೇಟರ್ ಶಾಹಿ ರಾಜ್ಯಗಳು ಆಕ್ರಮಣದ ಬೆದರಿಕೆ ಹಾಕಿ ತಮ್ಮ ಆಟ ನಡೆಸಲು ಒಳಗಿಂದೊಳಗೆ ಪ್ರಯತ್ನ ನಡೆಸುತ್ತಿವೆಯೆಂದು ತಿಳಿದು ಬಂದಿದೆ. ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ಯುರೋಪಿನಲ್ಲಿ ಇನ್ನೊಂದು ಗಂಡಾಂತರವು ಸನ್ನಿಹಿತವಾಗಿದೆಯೆಂಬ ವರ್ತಮಾನವು ಎಲ್ಲಿಂದ ದೊರೆಯಿತೆಂಬ ಕುರಿತು ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ವಿಸ್ಮಯಗೊಂಡಿವೆ. ಇಟಲಿ, ಜರ್ಮನಿಗಳು ಅದು ಬರಿಯ ಪಟಾಟೋಪವೆಂದು ನಿಷೇಧಿಸಿರುತ್ತವೆ.

ಹೊಸ ಪೋಪರ ಚುನಾವಣೆಯು

ಇದೇ ಬರುವ ತಾ. 28ರಲ್ಲು ನಡೆಯಲಿರುವುದು. ಈ ಸಲವೂ ಇಟೆಲಿಯಾನ ಕಾರ್ಡಿನಲರೊಬ್ಬರೇ ಪೋಪರಾಗಿ ಆರಿಸಲ್ಪಡುವ ಸಂಭವವಿದೆ. ಲೋಕದ ಬೇರೆ ಬೇರೆ ದೇಶಗಳ 62 ಮಂದಿ ಕಾರ್ಡಿನಲರು ರೋಮಿನಲ್ಲಿ ಸೇರಿ ಹೊಸ ಪೋಪರನ್ನು ಆರಿಸಬೇಕಾಗಿದೆ. ಹೊಸ ಪೋಪರ ಚುನಾವಣೆಗೆ ಸಿದ್ಧತೆಯು ನಡೆಯುತ್ತಿದೆ.

ವಾರ್ಧಾದಲ್ಲಿ ಕಾಂಗ್ರೆಸ್ ಮುಖಂಡರ ಮಾತುಕತೆ

ಇದೇ ತಾ. 20ನೇ ಅಪರಾಹ್ನ, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಗಾಗಿ ಹೋಗಿದ್ದ ಸರ್ದಾರ್, ವಲ್ಲಭಾಯಿ ಪಟೇಲ್, ಬಾಬು ರಾಜೇಂದ್ರ ಪ್ರಸಾದ್, ಶ್ರೀ. ಭೂಲಭಾಯಿ ದೇಸಾಯಿ, ಸರೋಜಿನಿ ದೇವಿ, ಶಂಕರರಾವ್ ದೇವ್ ಮತ್ತು ಆಚಾರ್ಯ ಕೃಪಲಾನಿಯವರು ವಾರ್ಧದಲ್ಲಿ ಗಾಂಧಿಯವರೊಡನೆ ಮಾತಾಡಿದಾಗ ಗಾಂಧಿಯವರು ತನ್ನ ಮತ್ತು ರಾಷ್ಟ್ರಪತಿ ಭೋಸರ ಮಾತುಕತೆಯ ವಿಷಯವನ್ನೆಲ್ಲಾ ಅವರಿಗೆ ತಿಳಿಸಿದರು. ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಿಂದುಂಟಾಗಿರುವ ಪ್ರಶ್ನೆಗಳ ಕುರಿತು ಚರ್ಚೆಯು ಮೆಂಬರರೊಳಗೆ ನಡೆಯುತ್ತಿರುವುದು. ರಾಷ್ಟ್ರಪತಿ ಭೋಸರು ತ್ರಿಪುರಿ ಕಾಂಗ್ರೆಸಿನ ಮುಂದಿರಿಸುವ ತೀವ್ರಗಾಮಿ ಕಾರ್ಯಕ್ರಮಕ್ಕೆ ಗಾಂಧಿವಾದಿಗಳು ಯಾವ ರೀತಿಯಲ್ಲಿಯೂ ಆತಂಕವನ್ನೊಡ್ಡುವ ಹಾಗೆ ತೋರುವುದಿಲ್ಲ. ಶ್ರೀ. ಭೋಸರು ತನಗೆ ಬೇಕಾದವರನ್ನೇ ಆರಿಸಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರನ್ನೇರ್ಪಡಿಸಬೇಕು. ಅದಕ್ಕೆ ಗಾಂಧಿವಾದಿಗಳೇನೂ ತೊಡಕನ್ನುಂಟುಮಾಡಲಾರರು. ಕಾಂಗ್ರೆಸಿನ ಮೂಲಭೂತತತ್ವಕ್ಕನುಗುಣವಾದ ಎಷ್ಟೊಂದು ತೀವ್ರಗಾಮಿ ಕಾರ್ಯಕ್ರಮವನ್ನಾದರೂ ರಾಷ್ಟ್ರಪತಿಗಳು ತ್ರಿಪುರಿ ಕಾಂಗ್ರೆಸಿನ ಮುಂದಿರಿಸಬಹುದು. ಇದಕ್ಕೆ ಗಾಂಧಿಜಿಯವರೇನೂ ಆಕ್ಷೇಪಿಸಲಾರರು. ಅದನ್ನು ಕಾಂಗ್ರೆಸಿನ ಪ್ರತಿನಿಧಿಗಳಿಗಾಗಲೀ ವರ್ಕಿಂಗ್ ಕಮಿಟಿ ಮೆಂಬರರಿಗಾಗಲೀ ಶಿಫಾರಸು ಕೂಡಾ ಮಾಡಲಾರರು. ಅದರ ಅಭಿಪ್ರಾಯದಂತೆ, ಹರಿಪುರದಲ್ಲಿ ನಿಶ್ಚೈಸಲ್ಪಟ್ಟಿರುವ ಕಾರ್ಯಕ್ರಮವೇ ಸಂದರ್ಭೋಚಿತ ಹಾಗು ಯೋಗ್ಯವಾದುದು. ಆದರೆ ಶ್ರೀ. ಭೋಸರು ಇನ್ನೊಂದು ಕಾರ್ಯಕ್ರಮವು ಯೋಗ್ಯ ಮತ್ತು ಅದರಿಂದ ಅತಿ ಬೇಗನೆ ಸ್ವರಾಜ್ಯಪಡೆಯಲು ಸಾಧ್ಯವೆಂಬುದನ್ನು ಸಿದ್ಧಗೊಳಿಸಿದರೆ, ಗಾಂಧಿಜಿಯವರಿಗೆ ಅದು ವಿಹಿತವೆಂದು ತೋರಿದರೆ ಅದನ್ನವರು ಸ್ವೀಕರಿಸುವುದಕ್ಕೆ ಹಿಂಜರಿಯಲಾರರು. ಜನತೆಯು ಹೋರಾಟಕ್ಕೆ ಸಿದ್ಧವಾಗಿ ಬೆಂಬಲಕ್ಕೆ ನಿಲ್ಲದೆ ಬ್ರಿಟಿಷ್ ಸರಕಾರವನ್ನು ಎಚ್ಚರಿಸುವ ಅಥವಾ ಅದನ್ನು ಹೋರಾಟಕ್ಕೆ ಆಹ್ವಾನಿಸುವ ವಿಷಯದಲ್ಲಿ ಗಾಂಧಿಜಿಯವರಿಗೆ ವಿಶ್ವಾಸವಿಲ್ಲ. ಗಾಂಧಿಜಿಯವರು ರಾಷ್ಟ್ರಪತಿ ಭೋಸರೊಡನೆ ಅತ್ಯಂತ ಪ್ರೀತಿಭಾವದಿಂದ ಮಾತುಕತೆ ನಡೆಸಿದರೆಂದೂ, ಆದರೆ ತಾನು ಆರಂಭದಲ್ಲಿ ಹೊರಡಿಸಿದ ಹೇಳಿಕೆಯಲ್ಲಿ ವಹಿಸಿದ ಧೋರಣೆಯನ್ನು ಒಂದಿಷ್ಟು ಬಿಟ್ಟುಕೊಡಲಿಲ್ಲೆಂದೂ ತಿಳಿದುಬರುತ್ತದೆ. ಆದರೆ ಕಾಂಗ್ರೆಸಿನ ಪಾರ್ಲಿಮೆಂಟರಿ ಕಾರ್ಯವನ್ನೇನಾದರೂ ಬದಲಾಯಿಸುವಂತಾದರೆ ಈಗಣ ಮಂತ್ರಿಗಳೆಲ್ಲಾ ರಾಜಿನಾಮೆಕೊಡಬೇಕಾಗುವುದೆಂದು ಮಹಾತ್ಮರು ಭೋಸರಿಗೆ ಎಚ್ಚರವಿತ್ತಿರುವರೆಂದು ತಿಳಿದುಬರುತ್ತದೆ. ಕಾಂಗ್ರೆಸಿನೊಳಗಣ ಎಡಬಲಪಕ್ಷೀಯರೊಂದುಗೂಡಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಕೆಲಸಮಾಡುವ ಸಂಭವ ತೋರುವುದಿಲ್ಲ. ಪಂಡಿತ ಜವಾಹರಲಾಲರಿಗೆ ಗಾಂಧಿಜಿಯವರ ಮನಸ್ಸನ್ನು ಬದಲಾಯಿಸಲು ಸಾಧ್ಯವಿದೆಯೋ ಎಂಬೊಂದು ಆಶೆಯಿದೆ. ತಾ. 22ರ ಕಾಂಗ್ರೆಸ್ ವರ್ಕಿಂಗ್ ಕಮಿಟಿಸಭೆಯಲ್ಲಿ ಹೆಚ್ಚಿನ ಕೆಲಸವೇನೂ ಇರುವುದಿಲ್ಲ. ಅದು ಒಮ್ಮೆ ಸೇರಿ ಅಗಲಿರುವುದಷ್ಟೆ.

ಕಾಶೀ ಸಂಸ್ಥಾನದಲ್ಲಿ

ಪ್ರಜಾಪ್ರತಿನಿಧಿತ್ವವುಳ್ಳ ಆಡಳಿತೆಗಾಗಿ ಸತ್ಯಾಗ್ರಹಪ್ರಾರಂಭವಾಗುವುದಿತ್ತು. ಕಾಶೀರಾಜರು ಒಂದು ಪ್ರಕಟಣೆಯನ್ನು ಹೊರಡಿಸಿದ್ದರು. ಆ ಪ್ರಕಟಣೆಯ ಪ್ರಕಾರ ಡಾ. ಎಸ್. ಸಿನ್ಹಾರವರ ಅಧ್ಯಕ್ಷತೆಯಲ್ಲಿ ಒಂದು ವಿಚಾರಣಾ ಮಂಡಳಿಯು ಸ್ಥಾಪಿಸಲ್ಪಟ್ಟಿದೆಯೆಂದೂ ಅದು ಸಂಸ್ಥಾನದ ರಾಜ್ಯಾಡಳಿತೆಯಲ್ಲಿ ಪ್ರಜಾಸತ್ತೆಯ ರೂಪ ನಿರೂಪಣೆಯನ್ನು ನಿಷ್ಕರ್ಷಿಸಿ ವರದಿಯನ್ನೊಪ್ಪಿಸಬೇಕೆಂದೂ ಪ್ರಜಾಜನರು ಈ ಕಾರ್ಯಭಾಗದಲ್ಲಿ ಸಹಕರಿಸಬೇಕೆಂದೂ ನಿರೂಪವಿರುವುದನ್ನು ಕಂಡು ಅಲ್ಲಿಗೆ ಹೋಗಿದ್ದ ನೆಹರುಗಳವರು ಅದರ ಇತ್ಯರ್ಥವಾಗುವ ತನಕ ಸತ್ಯಾಗ್ರಹ ಸಮರವನ್ನು ಕೈಗೊಳ್ಳಬಾರದೆಂದು ಬೋಧಿಸಿದರು. ಆ ಬೋಧನೆಯು ಮಾನ್ಯವಾಗಿದೆ.

ಅದೃಷ್ಟವಾದಿಗಳನ್ನು ಮೊದಲಾಗಿ ಜೈಲಿನಲ್ಲಿಡಬೇಕು.

"ನಾನೇನು ಮಾಡಲಿ! ಹಾಗಾಗಿ ಹೋಯಿತು. ನನ್ನ ಹಣೇ ಬರಹ" ಎಂದು ಕೈ ಅಂಗಾತ ಹಿಡಿಯುವವನನ್ನು ಮೊದಲಾಗಿ ಬಂಧೀಖಾನೆಯಲ್ಲಿ ಸೇರಿಸಬೇಕು. ಹಣೇಬರಹ, ವಿಧಿ, ಅದೃಷ್ಟ, ಪೂರ್ವಕರ್ಮ ಇತ್ಯಾದಿ ವಿಧಿವಾದಿಗಳಿಂದ ಹಿಂದೂದೇಶದ ಪೌರುಷವೆಲ್ಲ ನಾಶವಾಗಿ ಹೋಗಿದೆ." ಅಂಜುಬುರುಕತನ, ಆಲಸ್ಯ ಜೀವನ ನೆಲೆನಿಂತಿದೆ. ಅದರೊಂದಿಗೆ ಸಕಲತರದ ಅಜ್ಞಾನ ಮೂಢ ನಂಬಿಗೆಗಳೂ ಜನಪದ ಅದನ್ನು ದಿನದ ಜೀವನದಲ್ಲಿ ತುಂಬಿ ನಾರಿಗಟ್ಟಿ ಹೋಗಿದೆ. ಮೂರನೆಯದಾಗಿ ನಿರಕ್ಷರತೆಯಿಂದ ಮುಂದಿಗೆ ಜೀವನದ ಬೆಳಕೇ ತೋರದಂತಾಗಿದೆ. ಹೀಗೆ ಅದೃಷ್ಟವಾದ, ಮೂಢ ನಂಬಿಗೆ, ನಿರಕ್ಷರತೆ ಈ ಮೂರು ಮಹಾ ಮಾರಿರೋಗಗಳು ಹಿಂದೀಯರಿಂದ ದೂರಾಗದೆ 'ನವಭಾರತೋದಯ'ವಾಗದು. ಭಾರತೀಯರಿಗೆ ಉದ್ಧಾರವಿಲ್ಲ. ಈ ಶನಿತ್ರಯಗಳನ್ನು ದೇಶದಿಂದಟ್ಟಲು ವಿದ್ಯಾರ್ಥಿಗಳು ಬದ್ಧಕಂಕಣರಾಗಬೇಕು-ಎಂದು ಡಾಕ್ಟರ್ ಜೋನ್ಸ್ ಬೆಂಗಳೂರು ಯೂನಿವರ್ಸಿಟಿ ಯೂನಿಯನಿನಲ್ಲಿ ಭಾಷಣವೀಯುತ್ತ ಪ್ರೌಢ ವಿದ್ಯಾರ್ಥಿಗಳು ದೇಶಸೇವೆಯನ್ನೂ ಭಾರತೋದ್ಧಾರವನ್ನೂ ಯಾವ ಹಾದಿಹಿಡಿದು ಮಾಡಬಹುದೆಂಬುದನ್ನು ತೋರಿಸಿಕೊಟ್ಟಿರುವರು.

ಫೆಡರೇಶನು ಬದಲಾಗುವ ಸಂಭವವಿದೆ

ಇದೇ ತಾ. 19ರಲ್ಲು ಕರಾಚಿಯಲ್ಲಿ ಸರ್ ಗುಲಾಮ್ ಹಿದಯತುಲ್ಲರವರ ನಿವಾಸದಲ್ಲಿ ಸಿಂಧ್ ಎಸೆಂಬ್ಲಿ ಮೆಂಬರರೊಡನೆ ಆಗಾಖಾನರು ಮಾತುಕತೆ ನಡಿಸಿದಾಗ ಫೆಡರೇಶನಿನ ಕುರಿತು ಈ ಕೆಳಗಣ ಅಭಿಪ್ರಾಯವಿತ್ತರು. "ಹಿಂದೂದೇಶದಲ್ಲೇ ಕಾಂಗ್ರೆಸ್ ಮಂತ್ರಿಗಳ ಮತ್ತು ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳ ಪರಿಷತ್ತೊಂದು ನಡೆದು ಅದರಲ್ಲಿ ಫೆಡರೇಶನಿನ ಕುರಿತು ಚರ್ಚೆ ನಡಿಸಲಾಗುವುದು. ಫೆಡರೇಶನನ್ನು ಹಿಂದೂದೇಶದ ಗಂಟಲೊಳಗೆ ಬಲಾತ್ಕಾರದಿಂದ ತುರುಕುವ ಪ್ರಯತ್ನವು ನಡೆಯಲಾರದಾದರೂ ಅದು ಬರುವುದಂತೂ ನಿಶ್ಚಯ. ಅದರಲ್ಲಿ ಹೆಚ್ಚಿನ ಬದಲಾವಣೆಗಳಾಗಲಿವೆ. ಫೆಡರಲ್ ಎಸೆಂಬ್ಲಿಗೆ ದೇಶೀಯ ಸಂಸ್ಥಾನಿಕ ಪ್ರತಿನಿಧಿಗಳನ್ನು ಸಂಸ್ಥಾನಾಧೀಶರು ನೇಮಿಸುವುದನ್ನು ತೆಗೆದುಹಾಕಿ ಆ ವಿಷಯದಲ್ಲಿ ಒಂದು ರೀತಿಯ ಚುನಾವಣೆಯನ್ನು ಜ್ಯಾರಿಗೆ ತರಲಾಗುವುದು. ಪ್ರಾಂತದ ಕೌನ್ಸಿಲುಗಳು ಫಲಕಾರಿಯಾಗಿ ಕೆಲಸಮಾಡಿರುವುದಿಲ್ಲ. ಅದುದರಿಂದ ಸರಕಾರವು ಅದನ್ನು 5 ವರ್ಷಗಳ ಅವಧಿಯ ನಂತರ ತೆಗೆದುಹಾಕುವ ಸಂಭವವಿದೆ." ಆಗಾಖಾನರು ಹಿಂದೂಮುಸಲ್ಮಾನ ಐಕ್ಯಸ್ಥಾಪನೆಗಾಗಿ ಪ್ರಯತ್ನಿಸುತ್ತಿದ್ದು, ಆ ಕುರಿತಾದ ಅವರ ಪ್ರಯತ್ನವನ್ನು ಮುಂದುವರಿಸಲು ಜವಾಬ್ದಾರಿ ಮನುಷ್ಯರನ್ನು ನೇಮಿಸಿರುವರು. ಅವರು ವಿಮಾನ ಮಾರ್ಗವಾಗಿ ಇಂಗ್ಲೆಂಡಿಗೆ ಕೂಡಲೆ ಹೊರಟುಹೋಗುವರು. ಸಿಂಧಿನಲ್ಲಿ ಕಾಂಗ್ರೆಸ್ ಪಕ್ಷದ ಪ್ರತಿನಿಧಿಗಳೂ ಸೇರಿ ಮಿಶ್ರಮಂಡಲವೊಂದನ್ನೇರ್ಪಡಿಸುವುದೊಳ್ಳೇದೆಂದು ಆಗಾಖಾನರ ಅಭಿಮತ

ನೇ ತಿಂಗಳವರೆಗೆ ಯುದ್ಧವಾಗುವ ಹಾಗಿಲ್ಲ

ಯುರೋಪಿನ ರಾಜಕೀಯದಲ್ಲಿ ಬರುವ ಮೇ ತಿಂಗಳವರೆಗೆ ಅಂತಹ ವಿಪ್ಲವವೇನೂ ಉಂಟಾಗಲಾರದು. ಚಿಕ್ಕ ಪುಟ್ಟ ಗಲಾಟೆಗಳೇನೋ ನಡೆಯಬಹುದು. ಆದರೆ ಅವುಗಳಿಂದಾಗಿ ಮಹಾಯುದ್ಧ ಆರಂಭವಾಗಲಾರದೆಂದು ಅಮೆರಿಕದ ನ್ಯೂಯೋರ್ಕ್ ಟೈಮ್ಸ್ ಪತ್ರಿಕೆಯ ಯುರೋಪಿನ ಮುಖ್ಯ ಬಾತ್ಮೀದಾರರಾದ ಮಿ. ಫ್ರೆಡರಿಕ್ ಬರ್ಚೆಲರ ಅಭಿಮತ. ಮೇ ತಿಂಗಳ ನಂತರ ಏನಾಗುವುದೆಂದು ಹೇಳಲು ಸಾಧ್ಯವಿಲ್ಲ. ಯುರೋಪಿನ ಜನಾಂಗಕ್ಕಾದರೂ, ಡಿಕ್ಟೇಟರಶಾಹಿ ಜನತೆಗಾದರೂ ಯುದ್ಧ ಬೇಕಾಗಿಲ್ಲ. ಡಿಕ್ಟೇಟರರೇ ಯುದ್ಧದ ಭಯಂಕರ ಅನಾಹುತಕ್ಕೆ ಸಿದ್ಧರಿಲ್ಲ. ಆದರೆ ಅವರು ಜನರಲ್ಲಿ ಹೆಚ್ಚಿನ ಆಶೆಯನ್ನುಂಟುಮಾಡಿ ಅವರು ಅತಿ ಹೆಚ್ಚಿನ ತ್ಯಾಗಮಾಡುವಂತೆ ಮಾಡಿದ್ದಾರೆ. ಅವರಿಗೆ ಜನತೆಯನ್ನು ತೃಪ್ತಿಪಡಿಸಲು ಅಸಾಧ್ಯವಾದಾಗ ಅಥವಾ ಅವರಿಗೆ ತೋರಿಸುವ ರಿಯಾಯಿತಿಯ ಪರಮಾವಧಿ ಮುಟ್ಟಿದಾಗ ಯುದ್ಧವು ಅನಿವಾರ್ಯವಾಗುವುದು. ಅಂತೂ ದೊಡ್ಡದಾದೊಂದು ಸ್ಫೋಟವು ದಿನೇ ದಿನೇ ಸಮೀಪಿಸುತ್ತಿರುವಂತಿದೆ. ಕಳದ ಸೆಪ್ಟಂಬರ ತಿಂಗಳ ಅನಾ

ಪ್ರಚಂಡ ನೌಕಾಬಲ ಪರೀಕ್ಷೆ – ಸ್ಪೈನಿನ ಪರಿಸ್ಥಿತಿ

ಹುತವು ಕೇವಲ ಎರಡೇ ಘಂಟೆಗಳಿಂದಾಗಿ ನಿವಾರಿತವಾಯಿತು. ಸೆಪ್ಟಂಬರ ತಾ 28 ನೇ ಬುಧವಾರ ಅಪರಾಹ್ನ ಘಂಟೆ 3ಕ್ಕೆ ಹಿಟ್ಲರರು ಜೆಕೋಸ್ಲೊವೇಕಿಯದ ಮೇಲೆ ಧಾಳಿನಡಿಸಲು ಸೇನಾಸಂಗ್ರಹದ ಹುಕುಂ ಕೊಡುವವರಿದ್ದರು. ಅಪರಾಹ್ನ ಘಂಟೆ 1 ಕ್ಕೆ ಮುಸಲೋನಿಯವರು ಮ್ಯುನಿಚ್ ಪರಿಷತ್ತಿಗೊಪ್ಪಬೇಕೆಂದು ಹಿಟ್ಲರರಿಗೆ ತಿಳಿಸಿದರು. ಹಿಟ್ಲರರ ವಸಾಹತುಗಳ ಕೇಳಿಕೆಗಿಂತಲೂ ಮುಸಲೋನಿಯವರು ಫ್ರಾನ್ಸಿಗೆ ಸೇರಿದ ಟ್ಯೂನಿಸ್ ಮೊದಲಾದ ಸ್ಥಳಗಳನ್ನು ಕೇಳುವುದರಿಂದ ಯುದ್ಧವುಂಟಾಗುವ ಅಪಾಯ ಹೆಚ್ಚೆಂದೇ ಮಿ. ಚರ್ಚಿಲರ ಅಭಿಪ್ರಾಯ. ಅವರು ಎಪ್ರಿಲ್ ತಿಂಗಳವರೆಗೆ ಹಿಂದೂದೇಶದಲ್ಲೆಲ್ಲಾ ತಿರುಗಾಡಿ ಮಹಾತ್ಮಗಾಂಧಿ, ಪಂಡಿತ ಜವಾಹರಲಾಲ ನೆಹರು ಸರ್ದಾರ್ ಪಟೇಲ್, ರಾಷ್ಟ್ರಪತಿ ಭೋಸ್ ಮತ್ತು ಇತರ ಪಕ್ಷಗಳ ಕೆಲವಂದಿ ಮುಖಂಡರೊಡನೆಯೂ ಮಾತಾಡಲಿರುವರು.

ಅಧ್ಯಾಪಕರು ರಾಜಕೀಯದಲ್ಲಿ ಕೈಹಾಕಬಾರದು

ಖಾಸಗಿ ಶಾಲೆಗಳ ಅಧ್ಯಾಪಕರುಗಳು ಕೂಡಾ ರಾಜಕೀಯದಲ್ಲಿ ಕೈಹಾಕದೆ ತಮ್ಮ ಉದ್ಯೋಗದಲ್ಲೇ ನಿರತರಾಗುವಂತೆ ಸರಕಾರವು ಬೇಗನೆ ಹುಕುಮೊಂದನ್ನು ಹೊರಡಿಸಲಿರುವುದೆಂದು ಶಿಕ್ಷಣ ಮಂತ್ರಿಗಳಾದ ಮಿ. ಸಿ. ಜೆ ವಾರ್ಕಿಯವರು ಇದೇ ತಾ. 14ರಲ್ಲಿ ಅಖಿಲ ಮಲಬಾರು ಟೀಚರ್ ಮನೇಜರರ ಪರಿಷತ್ತನ್ನು ತೆರೆಯುವ ಸಂದರ್ಭದಲ್ಲಿ ಹೇಳಿರುವರು. ಟೀಚರ್ ಮನೇಜರರು ಹೇಗೆ ತಮ್ಮ ಸಂಘಗಳನ್ನು ನಡಿಸಬೇಕೆಂಬುದನ್ನು ನಿರೂಪಿಸುವ ಮತ್ತು ಅಧ್ಯಾಪಕ ಸಂಘಗಳನ್ನು ಸಂಘಟಿಸಿ ಅಂಗೀಕರಿಸುವ ಕುರಿತು ಕೂಡಾ ಬೇಗನೆ ಸರಕಾರವು ಹುಕುಂ ಹೊರಡಿಸುವುದು. ಅಧ್ಯಾಪಕ ಸಂಘಗಳಿಗೆ ಶಿಕ್ಷಣ ಖಾತೆಯ ಮುಖ್ಯಾಧಿಕಾರಿಗಳೇ ಅಧ್ಯಕ್ಷರಾಗುವರು. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧವಿಲ್ಲದ ಯಾವ ರಂಗವನ್ನಾದರೂ ಇನ್ನು ಮುಂದೆ ಈ ಸಂಘಗಳು ತರಕೂಡದು. 1939ನೇ ಇಸ್ವಿ ಜೂನ್ ತಾ. 1ರಿಂದ ಹೊಸ ಕ್ರಮ ಹೊಸ ಹುಕುಂ ಮತ್ತು ಹೊಸ ಪಾಠ ಕ್ರಮವು ಜ್ಯಾರಿಗೆ ಬರುವುದು. ಆರ್ಥಿಕ ಅಡಚಣೆಯ ನಿಮಿತ್ತ ಈ ವರ್ಷ ಮಾಸಿಕವಾಗಿ ಗ್ರಾಂಟುಕೊಡಲು ಸಾಧ್ಯವಾಗಿರುವುದಿಲ್ಲ. ಮೂರು ತಿಂಗಳಿಗೊಮ್ಮೆ ಗ್ರಾಂಟುಕೊಡುವ ಆಲೋಚನೆಯಿದೆ. ಬರುವ ವರ್ಷ ಸರಕಾರದ ಆರ್ಥಿಕ ಸ್ಥಿತಿಯು ಒಳ್ಳೇದಾದರೆ ಗ್ರಾಂಟನ್ನು ಮಾಸಿಕವಾಗಿ ಕೊಡುವ ಕುರಿತು ಆಲೋಚಿಸಲಾಗುವುದೆಂದು ತಿಳಿಸಿದರು.

ಪ್ರಚಂಡ ನೌಕಾಬಲ ಪರೀಕ್ಷೆ.

ಇದೇ ತಾ. 18ರಲ್ಲಿ ಅಮೇರಿಕ ಯುನೈಟೆಡ್ ಸ್ಟೇಟ್ಸ್ ಸರಕಾರವು ಪ್ರಚಂಡ ನೌಕಾಬಲ ಪರೀಕ್ಷೆಯೊಂದನ್ನು ಗುಪ್ತವಾಗಿ 7 ದಿವಸಗಳ ವರೆಗೆ ನಡಿಸಲಿರುವುದು. ಇದರಲ್ಲಿ ಯುದ್ಧನಾವೆ, ಯುದ್ಧವಿಮಾನ ಮತ್ತು ಜಲಾಂತರ್ಗಾಮಿ ನಾವೆಗಳು ಭಾಗವಹಿಸುವವು. 60,000 ಮಂದಿ ಸೈನ್ಯಾಧಿಕಾರಿಗಳು ಇದನ್ನು ನಡಿಸುವರು. ನಕಲಿ ಯುದ್ಧಗಳು ಪ್ರೆಸಿಡೆಂಟ್ ರೂಸ್‌ವೆಲ್ಟರ ಸಮಕ್ಷಮದಲ್ಲಿ ನಡಿಸಲ್ಪಡುವವು. ಈ ಪರೀಕ್ಷೆಯು ನಡಿಯುವ ಸ್ಥಳವನ್ನು ಕೂಡಾ ಗುಪ್ತವಾಗಿಡಲಾಗಿದೆ

ಸ್ಪೈನಿನ ಪರಿಸ್ಥಿತಿ

ಸ್ಪೈನಿನಲ್ಲಿ ಈಗ ಸೈನಿಕರೊಳಗೆ ಯುದ್ಧವೇನೂ ನಡೆಯುವುದಿಲ್ಲವಾದರೂ ಬಂಡಾಯಗಾರ ವಿಮಾನಗಳು ಮೋದ್ರಿದ್ ಮತ್ತು ವೆಲೆನ್ಸಿಯಾ ಪಟ್ಟಣದ ಮೇಲೆ ಎಡೆಬಿಡದೆ ವಿಮಾನಧಾಳಿ ನಡಿಸುತ್ತಿವೆ. ಕೆಟಲಿನ್ ಪ್ರಾಂತದಿಂದ 2,03,000 ಸೈನಿಕರು ಫ್ರಾನ್ಸಿನಲ್ಲಿ ಆಶ್ರಯಪಡೆದಿರುತ್ತಾರೆ. ಸ್ಪೆನಿಶ್ ಸರಕಾರದ ಪ್ರೆಸಿಡೆಂಟರಾದ ಅಜಾನರವರು, ಇನ್ನು ಮುಂದೆ ಹೋರಾಡಿ ಫಲವಿಲ್ಲೆಂದೂ, ವ್ಯಥಾ ರಕ್ತಪಾತವನ್ನುಂಟುಮಾಡುವುದಕ್ಕಿಂತ ಸಂಧಿಮಾಡಿಕೊಳ್ಳುವುದೊಳ್ಳೇದೆಂದೂ ಅಭಿಪ್ರಾಯವುಳ್ಳವರಿರುವರು. ಅವರು ಮೋದ್ರಿದಿಗೆ ಹೋಗಲೊಪ್ಪದೆ ಫ್ರಾನ್ಸಿನಲ್ಲೇ ಇರುವರು. ಫ್ರೆಂಚ್ ಮತ್ತು ಬ್ರಿಟಿಷ್ ಸರಕಾರಗಳು ತಮ್ಮ ರಾಯಭಾರಿಗಳ ಮುಖಾಂತರ ಸಂಧಾನಮಾಡುವ ಪ್ರಯತ್ನ ನಡಿಸುತ್ತಿರುವವು. ಇಷ್ಟರವರೆಗೆ ಇದರಿಂದೇನೂ ಫಲವುಂಟಾಗಿರುವುದಿಲ್ಲ. ಸ್ಪೆನಿಶ್ ಸರಕಾರದ ವಿದೇಶ ಮಂತ್ರಿಗಳಾದ ಸೀನರ್ ಡೆಲ್ ವಾಯೋ ಮತ್ತು ಪ್ರಧಾನ ಮಂತ್ರಿ ಡಾಕ್ಟರ್ ನೇಗ್ರಿನರು, ಕೊನೆತನಕವೂ ಹೋರಾಡಿಯೇ ಸಿದ್ಧವೆಂದು ಅದಕ್ಕೆ ಬೇಕಾದ ಸಿದ್ಧತೆಮಾಡುತ್ತಿರುವರು ಮೋದ್ರಿದನ್ನು ಜಯಶೀಲವಾಗಿ ಕಾಪಾಡಿ ಸುರಕ್ಷಿತಗೊಳಿಸಿ ಪ್ರಖ್ಯಾತರಾದ ಜನರಲ್ ಮಿಯಾಜರವರು ನೆಲಜಲ ಮತ್ತು ವಿಮಾನಪಡೆಯ ನಾಯಕರಾಗಿ ನೇಮಿಸಲ್ಪಟ್ಟಿರುವರು.

ಅತ್ಯಂತ ವೇಗದ ಯುದ್ಧವಿಮಾನ

ಲೋಕದ ಇತರ ಎಲ್ಲಾ ವಿಮಾನಗಳಿಗಿಂತಲೂ ಅತ್ಯಂತ ವೇಗವಾಗಿ ಹಾರಬಲ್ಲ ಯುದ್ಧವಿಮಾನ ಒಂದು ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟಿರುವುದು. 'ಸ್ಪಿಟ್ ಫೈರ್' ಎಂದು ಅದರ ಹೆಸರು. ಇದರಲ್ಲಿ 7 ತೋಪುಗಳಿರುತ್ತವೆ. ಒಬ್ಬನು ಮಾತ್ರ ಕೂತುಕೊಳ್ಳಬಹುದು. ಗಂಟೆಗೆ 362ಮೈಲುಗಳಷ್ಟರ ವೇಗವುಳ್ಳದಾಗಿದೆ. 4ಮಿನಿಟು 8ಸಕುಂಡ್‌ಗಳಲ್ಲಿ ಇದು ಸಮುದ್ರ ಮಟ್ಟದಿಂದ 17,000ಅಡಿ ಮೇಲಕ್ಕೇರಬಲ್ಲುದು. ಇನ್ನೂ ಹೆಚ್ಚಿನ ವೇಗದ ವಿಮಾನಗಳು ಇನ್ನು ಮುಂದೆ ಕಟ್ಟಲ್ಪಡಲಿವೆ. ಬ್ರಿಟಿಷ್ ಸರಕಾರವು ಇಂತಹ 1000 ವಿಮಾನಗಳನ್ನು ನ್ಯೂಫಿಲ್ಡ್ ಕಂಪೆನಿಯಲ್ಲಿ ತಯಾರಿಸುವವರಿದ್ದರು ಇನ್ನು ವೈಕರ್ಸ್ ಕಂಪೆನಿಗೂ ಓರ್ಡರ್ ಕೊಟ್ಟಿದ್ದಾರೆ.

ನವಾಬ ಇಸ್ಮಾಯೀಲರ ರಾಜಿನಾಮೆ

ಸಂಯುಕ್ತ ಪ್ರಾಂತದ ಮುಸ್ಲಿಮ್ ಲೀಗಿನ ಅಧ್ಯಕ್ಷರಾದ ನವಾಬ್ ಇಸ್ಮಾಯೀಲ್ ಖಾನರು ತನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿರುವರು. ಕೆಲ ಸಮಯದ ಮೊದಲು ನವಾಬರು ಮೌಲಾನ ಅಬ್ದುಲ್ ಕಲಾಮ್ ಆಜಾದರನ್ನು ಕಾಣಲು ಆನಂದ ಭವನಕ್ಕೆ ಹೋದುದಕ್ಕಾಗಿ ಮಿ. ಜಿನ್ನಾರವರು ಆಕ್ಷೇಪಿಸಿದುದೇ ಈ ರಾಜಿನಾಮೆಗೆ ಕಾರಣ. ತಾನು ಮುಸ್ಲಿಮ್ ಲೀಗಿನ ಅಧಿಕಾರಿಯಾದಾಕ್ಷಣ ಪ್ರತಿ ಪಕ್ಷೀಯ ಮುಖಂಡರೊಡನೆ ಸಾಮಾಜಿಕ ವ್ಯವಹಾರ ನಡಿಸಬಾರದೆಂದೇನೂ ಇಲ್ಲವೆಂದು ನವಾಬರು ಮಿ ಜಿನ್ನರವರಿಗೆ ಬರೆದು ಅವರ ಆಕ್ಷೇಪವನ್ನು ಖಂಡಿಸಿರುವರೆಂದು ತಿಳಿದು ಬರುತ್ತದೆ.

ಬ್ರಿಟಿಷ್ ಸೇನಾವೆಚ್ಚ

1939–40ರ ಬ್ರಿಟಿಷ್ ಸೇನಾ ವೆಚ್ಚವು 580ಮಿಲ್ಯ ಪವನಿಗೇರಿದೆ ಯುದ್ಧ ಹಡಗ ವಿಮಾನ ಮತ್ತು ಸೇನೆಯನ್ನು ಬಹಳವಾಗಿ ಹೆಚ್ಚಿಸುವ ಪಂಚವಾರ್ಷಿಕ ಯೋಜನೆಯನ್ನು ಬ್ರಿಟಿಷ್ ಸರಕಾರವು ಕೈಕೊಂಡಿದೆ. 1942ರಲ್ಲಿ ಈ ಯೋಜನೆಯು ಸಂಪೂರ್ಣವಾಗುವುದು. ಈ ವರ್ಷದ ಯುದ್ಧವಿಮಾನ ತಯಾರಿ ವೆಚ್ಚವು 200ಮಿಲ್ಯ ಪವನುಗಳಿಗಿಂತಲೂ ಹೆಚ್ಚಿವೆ, 90ಯುದ್ಧ ನಾವೆಗಳು ಹೊಸತಾಗಿ ಕಟ್ಟಲ್ಪಡುತ್ತಿವೆ ಮಾರ್ಚ ತಿಂಗಳೊಳಗೆ ಹೊಸನಮೂನೆಯ 1750ಯುದ್ಧ ವಿಮಾನಗಳು ತಯಾರಾಗುತ್ತವೆ. ಇಂಗ್ಲೆಂಡು ತನ್ನ ಯುದ್ಧೋಪಕರಣ ವೆಚ್ಚವನ್ನು ಈ ವರ್ಷ 2ಪಾಲಷ್ಟು ಹೆಚ್ಚಿಸಿರುವುದರಿಂದ ಜರ್ಮನಿಯು ತಳಮಳಗೊಂಡಿದೆ.

ಬಂಗಾಳ ಮಂತ್ರಿಯ ರಾಜಿನಾಮೆ

ಬಂಗಾಳದ ಕೃಷಿಕ ಪ್ರಜಾಪಕ್ಷದಿಂದ ಇತ್ತಲಾಗಿ ವ್ಯವಸಾಯ ಖಾತೆಯ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವ ಮಿ. ಶಮ್ಸುದ್ದೀನ್ ಅಹಮ್ಮದರು ಹಕ್ ಮಂತ್ರಿಮಂಡಲದಿಂದ ರಾಜಿನಾಮೆ ಕೊಟ್ಟು ಹೊರ ಬಂದಿರುವರು. ಯಾವ ಕಾರ್ಯಕ್ರಮವನ್ನು ಜ್ಯಾರಿಗೆ ತರುವ ಶರ್ತದಿಂದ ತಾನು ಮಂತ್ರಿಪದವಿ ಸ್ವೀಕರಿಸಿದೆನೋ ಅದಕ್ಕೆ ಇತರ ಮಂತ್ರಿಗಳನ್ನು ಒಪ್ಪುವಂತೆ ಮಾಡಲು ಪ್ರಧಾನ ಮಂತ್ರಿ ಹಕ್ಕರಿಗೆ ಸಾಧ್ಯವಾಗಲಿಲ್ಲೆಂದೇ ಮಿ.ಶಮ್ಸುದ್ದೀನರ ಆರೋಪ.

ಕೋನಪುರದ ಗಲಾಟೆಯು

ಈಗ ಶಾಂತವಾಗಿರುವುದು. ತಾ. 16 ರಲ್ಲಿ ಹೊಡೆದಾಟವೇನೋ ನಡೆದಿರುವುದಿಲ್ಲ. ಫೆಬ್ರುವರಿ ತಾ. 7ರಲ್ಲಿ ಗಲಾಟೆಯ ನಿಮಿತ್ತ ಮಧ್ಯದಲ್ಲೇ ಬಿಟ್ಟುಬಿಡಬೇಕಾಗಿ ಬಂದ ಮದುವೆಯ ಮೆರವಣಿಗೆಯು ತಾ. 10ರಲ್ಲಿ ಪೋಲೀಸ್ ಮತ್ತು ಸೈನಿಕ ಬಂದೋಬಸ್ತಿನಿಂದ ಬನ್ಸ್‌ಮಂಡಿ ಮಸೀದಿಯ ಬಳಿಯಲ್ಲೇ ವಾದ್ಯ ಘೋಷದಿಂದ ಹಾದು ಹೋಯಿತು. ಆದರೆ ಗಲಾಟೆಯೇನೂ ಆಗಲಿಲ್ಲ. ಗಿರಣಿ ಮತ್ತು ಅಂಗಡಿ ಬೀದಿಗಳು ತೆರೆಯಲ್ಪಡುತ್ತಿವೆ. ಈ ಗಲಾಟೆಯಿಂದ ಒಟ್ಟು 40ಮಂದಿ ಕೊಲ್ಲಲ್ಪಟ್ಟು 217 ಮಂದಿ ಗಾಯಗೊಂಡಿರುವರು. ಗಾಯಗೊಂಡವರಲ್ಲಿ 166ಮಂದಿ ಆಸ್ಪತ್ರೆಯಲ್ಲಿರುವರು.

ಹಿಂದೂ ಮುಸಲ್ಮಾನ ಐಕ್ಯದ ಯತ್ನ

ಆಗಾಖಾನರು ಮಹಾತ್ಮ ಗಾಂಧಿಯವರೊಡನೆ ಮಾತಾಡಿ ಹಿಂದು ಮುಸಲ್ಮಾನ ಐಕ್ಯ ಸ್ಥಾಪನೆಯ ಕುರಿತು ಕೆಲವು ಸೂತ್ರಗಳನ್ನು ತಯಾರಿಸಿ ಆ ಕುರಿತು ದೇಶದ ಬೇರೆ ಬೇರೆ ಭಾಗಗಳ ಮುಸಲ್ಮಾನ ಮುಖಂಡರ ಅಭಿಪ್ರಾಯ ಪಡೆಯುತ್ತಿರುವರು. ಈ ಸಂಬಂಧವಾಗಿ ಮುಸಲ್ಮಾನ ಮುಖಂಡರ ಪರಿಷತ್ತೊಂದನ್ನು ಕರೆದು ಎಲ್ಲವರ ಅಭಿಪ್ರಾಯದ ಮೇರೆಗೆ ಆಗಾಖಾನರು ಗಾಂಧಿಜಿಯವರೊಡನೆ ಸಂಧಿ ಪ್ರಸ್ತಾಪ ಮಾಡುವ ಆಲೋಚನೆಯಿಂದಿರುವರು. ಮಿ. ಎಮ್. ಎ. ಜಿನ್ನಾರವರು ಇವಕ್ಕೆ ವಿರೋಧವಿದ್ದರೂ, ಪಂಜಾಬಿನ ಪ್ರಧಾನ ಮಂತ್ರಿಗಳಾದ ಸರ್. ಸಿಕಂದರ್ ಹಯತ್ ಖಾನರೂ ಬಂಗಾಳದ ಹೋಮ್ ಮೆಂಬರರಾದ ಸರ್. ಕೆ. ನಜೀಮುದ್ದೀನರೂ ಆಗಾಖಾನರಿಗೆ ಬೆಂಬಲವಿತ್ತಿರುವರೆಂದು ತಿಳಿದು ಬರುತ್ತದೆ. ಸರ್ ಸಿಕಂದರ್ ಹಯತ್ ಖಾನರು ಪಂಜಾಬಿನಲ್ಲಿ ಈಗಿರುವ ಸ್ಥಿತಿಯನ್ನೇ ಕಾಂಗ್ರೆಸಿನವರು ಇರಗೊಡಿಸಿ ಬರುವ ಚುನಾವಣೆಯವರೆಗೆ ಈಗಣ ಮಂತ್ರಿ ಮಂಡಲವೇ ಅಧಿಕಾರದಲ್ಲಿರುವಂತಾಗಬೇಕೆಂದು ಸೂಚಿಸಿರುವರು ಸರ್. ಕೆ. ನಜೀಮುದ್ದೀನರು, ಬಂಗಾಳದಲ್ಲಿ ಕಾಂಗ್ರೆಸ್ ಪಕ್ಷೀಯರು ಮತ್ತು ಇತರರು ಸೇರಿ ಸಂಯುಕ್ತ ಮಂತ್ರಿ ಮಂಡಲವನ್ನೇರ್ಪಡಿಸಬೇಕೆಂದಿರುವರು. ಸರ್. ಮಹಮ್ಮದ್ ಶಫಿಯವರ ಅನುಯಾಯಿಗಳಿದ್ದು ಮುಸ್ಲಿಮ್ ಲೀಗನ್ನು ಬಿಟ್ಟು ಆಲ್ ಇಂಡಿಯಾ ಮುಸ್ಲಿಮ್ ಪರಿಷತ್ತನ್ನು ನಡಿಸಿದ ಮುಸಲ್ಮಾನ ಮುಖಂಡರು, ಆಗಾಖಾನರು ಹಿಂದೂದೇಶದಲ್ಲೇ ಕೆಲಕಾಲ ನಿಂತು ಮುಸಲ್ಮಾನರನ್ನು ಸರಿದಾರಿಗೆ ಹಚ್ಚಬೇಕೆಂದು ಕೇಳಿಕೊಂಡಿರುವರು. ಆಗಾಖಾನರು, ಜಾತೀಯ ರಾಜಕೀಯ ಪಕ್ಷಗಳ ಸ್ಥಾಪನೆಗೆ ವಿರೋಧವಿರುವರು. ಮತ್ತು ಅದರಿಂದ ಮುಸಲ್ಮಾನರಿಗೆ ಹಾನಿಯಿದೆಯೆಂದು ಅವರ ಅಭಿಮತ. ತ್ರಿಪುರಿ ಕಾಂಗ್ರೆಸ್ ಅಧಿವೇಶನದ ಮೊದಲು ಹಲವು ಮಂದಿ ಮುಸಲ್ಮಾನ ಮುಖಂಡರು ಬೊಂಬಾಯಿಯಲ್ಲಿ ಸೇರಿ ಕಾಂಗ್ರೆಸಿನೊಡನೆ ಸಂಧಿ ಪ್ರಸ್ತಾಪ ನಡಿಸಲು ಆಗಾಖಾನರಿಗೆ ಅಧಿಕಾರ ಕೊಡುವ ಸಂಭವವಿದೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು

ಇದೇ ತಾ. 16ರಲ್ಲಿ ಗಾಂಧಿಜಿಯವರೊಡನೆ ಮಾತಾಡಲು ವಾರ್ಧಕ್ಕೆ ಬಂದಿರುವರು. ತಾ. 17ರಲ್ಲಿ ಶಿಂಗಾವಿಗೆ ಹೋಗುವರು. ಶ್ರೀಮತಿ ಕಸ್ತೂರಿ ಬಾಯಿ ಗಾಂಧಿಯವರು ರಾಜಕೋಟೆಯ ಸತ್ಯಾಗ್ರಹದಲ್ಲಿ ಭಾಗವಹಿಸಿ ದಸ್ತಗಿರಿಯಾದ ಮೇಲೆ ಶ್ರೀಮತಿ ವಿಜಯಲಕ್ಷ್ಮಿಯವರು ಸದ್ರಿ ಸತ್ಯಾಗ್ರಹದಲ್ಲಿ ಭಾಗವಹಿಸಲು ಅಪೇಕ್ಷಿಸಿಟ್ಟು ಗಾಂಧಿಜಿಯವರಿಗೆ ಪತ್ರ ಬರೆದಿರುವರೆಂದು ತಿಳಿದು ಬರುತ್ತದೆ. ಶ್ರೀಮತಿಯವರ ಗಂಡ ಶ್ರೀ. ಆರ್. ಎಸ್. ಪಂಡಿತರು. ಹಿಟ್ಟಾರು ರಾಜಕೋಟೆ. ಸತ್ಯಾಗ್ರಹದಲ್ಲಿ ಭಾಗವಹಿಸುವ ನಿರ್ಧಾರ ಮಾಡುವ ಮೊದಲು ತನ್ನೊಡನೆ ಮಾತಾಡಬೇಕೆಂದು ಗಾಂಧಿಜಿಯವರು ಅಪೇಕ್ಷಿಪಟ್ಟ ಮೇರೆಗೆ ಶ್ರೀಮತಿಯವರು ವಾರ್ಧಕ್ಕೆ ಬಂದುದಾಗಿದೆ. ಗಾಂಧಿಜಿಯವರು ಸಮ್ಮತಿಯಿತ್ತ ಪಕ್ಷದಲ್ಲಿ ಶ್ರೀಮತಿ ಪಂಡಿತರು ರಾಜಕೋಟೆಯ ಸತ್ಯಾಗ್ರಹದಲ್ಲಿ ಭಾಗವಹಿಸಲಿರುವರು.

ಪುಟ ೧೦೨ರಿಂದ

ಮೈಸೂರು ದಿವಾನರ ಆಗಮನ

ಮಾತ್ರ ತಮ್ಮ ಉದ್ದೇಶವಾಗಿರದೆ ಇವರು ದೊಡ್ಡವಾದ ಮೇಲೆ ಅವರ ಜೀವನೋಪಾಯಕ್ಕೆ ತಕ್ಕ ಅನುಕೂಲ ಮಾಡಿಕೊಡಬೇಕೆಂದೂ ಉದ್ದೇಶಿಸಿರುವುದು ಶ್ಲಾಘನೀಯ. ಈ ರಕ್ಷಣಾಲಯವನ್ನು ಸಣ್ಣದರಲ್ಲಿ ಪ್ರಾರಂಭಿಸಿರುವುದು ತಮ್ಮ ವಿವೇಕವನ್ನು ವ್ಯಕ್ತಪಡಿಸುತ್ತದೆ. ಅಲ್ಪಾರಂಭವು ಯಾವಾಗಲೂ ಕ್ಷೇಮಕರವೆಂಬುದು ನನ್ನ ನಂಬಿಕೆ. ಆರಂಭ ಶೂರತ್ವದಿಂದ ಅಗಾಧವಾಗಿ ತೊಡಗಿ ಕೊನೆಗೆ ಕೊರಗಿ ಕಷ್ಟಪಡುವುದಕ್ಕಿಂತ ಅಲ್ಪವಾಗಿ ಆರಂಭ ಮಾಡಿ ಭದ್ರವಾದ ತಳಹದಿಯ ಮೇಲೆ ಅಭಿವೃದ್ಧಿಯ ಸಾಧನೆಯನ್ನು ಮಾಡುತ್ತ ಬರುವುದು ಹೆಚ್ಚು ಸೂಕ್ತವಾಗಿದೆ. ಬಾಲಕರಿಗಾಗಿ ತೆರೆದ ಈ ಆಶ್ರಮದಂತೆಯೇ ಪರೋಪಕಾರಿಗಳಾದ ದೊಡ್ಡ ಮನುಷ್ಯರು ಅನಾಥಬಾಲಕಿಯರಿಗೂ ಇಂತಹ ಸಂಸ್ಥೆಯನ್ನು ನಿರ್ಮಿಸಿಯಾರೆಂದು ನನ್ನ ಹಾರೈಕೆ. ಅನಾಥರಿಗಿಂತಲೂ ಹೆಚ್ಚಿನ ದಾನಪಾತ್ರರು ಯಾರೂ ಇಲ್ಲವೆಂಬುದು ನನ್ನ ಭಾವನೆ.

ಕಾರ್ಕಳ ಪಂಚಾಯತರ ಸಭೆಯ ಮಾನಪತ್ರಕ್ಕೆ ಕೊಟ್ಟ ಪ್ರತ್ಯುತ್ತರ

'ಇಲ್ಲಿಂದ ಮೈಸೂರು ಪ್ರಾಂತಕ್ಕೆ ಬಂದು ನೆಲಸಿದವರಿಗೆ ಅನುಕೂಲದೊರೆತುದಕ್ಕೆ ಮಾನಪತ್ರದಲ್ಲಿ ಶ್ಲಾಘನೆಯಿದೆ. ಅದರಲ್ಲಿ ವಿಶೇಷವೇನೂ ಇಲ್ಲ. ಕನ್ನಡನಾಡಿನವರೆಲ್ಲರೂ ಭಾಷೆಯ ದೃಷ್ಟಿಯಿಂದಲೂ ಸಾಹಿತ್ಯದ ದೃಷ್ಟಿಯಿಂದಲೂ ಮತ್ತು ಸಂಸ್ಕೃತಿಯ ದೃಷ್ಟಿಯಿಂದಲೂ ಒಂದೇ ಕುಟುಂಬದವರೆಂಬ ಭಾವನೆಯಿಂದ ಬಾಳುವಂತಾಗಬೇಕೆಂದು ನಮ್ಮೆಲ್ಲರ ಆಶೆ. ಇಲ್ಲಿಯವರಿಗೆ ಮೈಸೂರು ಸಂಸ್ಥಾನದಲ್ಲಿ ಇತರ ಪ್ರಜೆಗಳೊಡನೆ ಸಮಾನವಾಗಿ ತಮಗೆ ದೊರಕುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಇನ್ನೂ ಹೆಚ್ಚಿನ ಪ್ರಯೋಜನಗಳನ್ನು ಪಡೆಯುವರೆಂದು ನಾನು ನಂಬಿದ್ದೇನೆ.'

ಮಂಗಳೂರಿನ ಮುಸಲ್ಮಾನ ಪಂಗಡದವರ ಮತ್ತು ಮುಸಲ್ಮಾನ ವಿದ್ಯಾಭ್ಯಾಸ ಸಂಘದವರ ಮಾನ ಪತ್ರಕ್ಕೆ ಕೊಟ್ಟ ಪ್ರತಿಭಾಷಣದಲ್ಲಿ.

'ತಮ್ಮ ಪರಿಸ್ಥಿತಿಗೆ ಹೊರಗಿನ ಕಾರಣಗಳಿಗಿಂತಲೂ ಹೆಚ್ಚಾಗಿ ತಮ್ಮ ಪಂಗಡದೊಳಗಿನ ಕುಂದುಕೊರತೆಗಳೇ ಕಾರಣವೆಂಬುದಾಗಿ ನಾನು ತಿಳಿಯುತ್ತೇನೆ. ಇಂಥಾ ಸಂದರ್ಭದಲ್ಲಿ ಸರಕಾರದವರಿಗೆ ಹೆಚ್ಚಾಗಿ ಏನನ್ನೂ ಮಾಡುವುದಕ್ಕೂ ಸಾಧ್ಯವಿರುವುದಿಲ್ಲ. ಏನಿದ್ದರೂ ಆ ಪಂಗಡದವರೇ ತಮ್ಮ ಪುರೋಭಿವೃದ್ಧಿಗಾಗಿ ಪ್ರವರ್ತಿಸಿ ಮುಂದುವರಿದು ಕೆಲಸ ಮಾಡಬೇಕು. ತಮ್ಮಲ್ಲಿ ಹಲವರಿಗಿರುವ ಮಲಿಯಾಳ ಭಾಷಾ ವಿಷಯವಾದ ಅನಾನುಕೂಲತೆಗೆ ತಕ್ಕ ಮಾರ್ಗವು ಹಿಂದೂಸ್ಥಾನಿಯನ್ನು ಕಲಿಯುವುದೇ. ಈ ವಿಷಯದಲ್ಲಿ ಸರಕಾರದವರು ಮಾಡುತ್ತಿರುವ ಪ್ರಯತ್ನಗಳಲ್ಲಿ ನೀವು ಆದರ ಬುದ್ಧಿಯುಳ್ಳವರಾಗಿರಬೇಕು. ಬಾಲಕಿಯರ ವಿದ್ಯಾಭ್ಯಾಸಕ್ಕೆ ತೊಡಕು ಗೋಷಾಪದ್ಧತಿ. ಸಂಪ್ರದಾಯ ಶರಣ್ಯತೆಯು ಅಭಿವೃದ್ಧಿಗೆ ತಡೆಯಾಗಿದೆ ನಮ್ಮ ಸಂಸ್ಥಾನದಲ್ಲಿ ಮುಸಲ್ಮಾನ ಬಾಲಕಿಯರು ಗ್ರಾ... [illegible]

ಪರಿಸ್ಥಿತಿಯು ವಿವ್ಯಮಾನಗಳಿಗನುಸಾರವಾಗಿ ನಮ್ಮ ಭಾವನೆಗಳನ್ನು ಮಾರ್ಪಡಿಸಿಕೊಳ್ಳುವ ವಿಷಯದಲ್ಲಿ ತಾವು ತೀವ್ರವಾದ ಪ್ರಚಾರಕಾರ್ಯವನ್ನು ನಡೆಯಿಸಬೇಕು. ಈ ಕಾಲದಲ್ಲಿ ಜ್ಞಾನಾರ್ಜನೆಯೆಂದರೆ ಪಾರಮಾರ್ಥಿಕ ವಿದ್ಯಾವ್ಯಾಸಂಗ ಮಾತ್ರವಾಗಿರದೆ ಬದಲಾಯಿಸಿರುವ ಈಗಿನ ಪರಿಸ್ಥಿತಿಗನುಗುಣವಾಗಿ ಲೌಕಿಕ ಜೀವನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಆಸ್ಥೇ ಮತುವರ್ಜಿಯಿಂದ ಅಭ್ಯಸಿಸುವ ಆವಶ್ಯಕತೆಯನ್ನು ಜನರಿಗೆ ಮನಗಾಣಿಸಬೇಕು. ಮತವಿಷಯದ ವ್ಯಾಸಂಗವನ್ನು ಒತ್ತಾಯಪಡಿಸುವವರ ಆಶೆಯನ್ನೂ ಈಡೇರಿಸಲು ಶಾಲೆಗಳಲ್ಲಿ ಇತರ ಪಾಠಗಳೊಂದಿಗೆ ಅದನ್ನು ಹೇಳಿಕೊಡುವ ಏರ್ಪಾಟು ಮಾಡಿದರಾಯಿತು'.

ಮೂಡಬಿದ್ರೆಯ ಪಂಚಾಯತರ ಸನ್ಮಾನಪತ್ರಕ್ಕೆ ಉತ್ತರಕೊಡುವ ಸಂದರ್ಭದಲ್ಲಿ

ಕನ್ನಡಭಾಷೆ ಮತ್ತು ಸಂಸ್ಕೃತಿಗಳ ವಿಷಯ ನನ್ನ ಆಸಕ್ತಿಯನ್ನು ಕೊಂಡಾಡಿರುವಿರಿ. ಆದರೆ ಕನ್ನಡಭಾಷೆ ಮತ್ತು ಸಂಸ್ಕೃತಿಗಳಿಗೆ ಮೈಸೂರಿನವರಷ್ಟೇ ಕನ್ನಡ ಜಿಲ್ಲೆಯವರೂ ಬಾಧ್ಯರು. ಅಂತೆಯೇ ಶ್ರಮಿಸುತ್ತಿದ್ದಾರೆ. ನಾವೆಲ್ಲ ಒಂದೇ ಭಾಷೆ ಒಂದೇ ಸಂಸ್ಕೃತಿಯುಳ್ಳವರೆಂಬ ಏಕೋಭಾವದಿಂದ ಪರಸ್ಪರ ಸೌಹಾರ್ದದಿಂದ ವರ್ತಿಸುತ್ತಾ ಬರಲೆಂದು ಹಾರೈಸೋಣ.

ಪೇತ್ರಿ—ತಾ. 12-2-39ರಲ್ಲಿ ಪೇತ್ರಿ ಕೇಂದ್ರ ಕೋಂಗ್ರೆಸ ಕಮಿಟಿಯ ಸಭೆ ಸೇರಿ ಕ್ರಮದಂತೆ ಚುನಾವಣೆ ನಡೆದು ಈ ಕೆಳಗಿನವರ ಕಮಿಟಿಯು ನಿರ್ಮಾಣವಾಯ್ತು. ಡಾಕ್ಟರ್ ಎ. ಸುಬ್ಬರಾವ್ ಎಲ್. ಐ. ಯಮ್. (ಅಧ್ಯಕ್ಷ), ಎಚ್. ರಾಮಚಂದ್ರ ಪಾಟೀಲ್ (ಕಾರ್ಯದರ್ಶಿ), ಬಿ. ನಿ. ಶೇಷ ಶೆಟ್ರು (ಖಜಾಂಜಿ), ಪಿ ರಾಮಚಂದ್ರ ಪಾಟೀಲ್, ಪಿ ವೆಂಕಟೇಶ ಶ್ಯಾನುಭಾಗ್, ಎಮ್. ಪಂಡಿತ್ ಅನಂತಯ್ಯ ಪಾಟೇಲ್, ಎಚ್. ಶೀನಪ್ಪ ಶೆಟ್ರು, ಜಿ. ಅಪ್ಪಾಯ ಸಾಮಂತರು, ಕೆ. ಸಿದ್ದೈ ಶೆಟ್ರು, ಕೆ. ರಘುನಾಥ ಪ್ರಭು, ಐ. ಸದಾಶಿವ ಶೆಟ್ರು (ರಿಜಿಸ್ಟರ್ಡ ಮೆಡಿಕಲ್ ಪ್ರಾಕ್ಟೀಶನರ್), ಆರ್. ಎನ್. ಪಂಡಿತ್ ಪುಟ್ಟಣಯ್ಯ (ಮೆಂಬರರು)

ಪಡುತೋನ್ಸೆಯಲ್ಲಿ ಪಂಚಾಯತು ಬೋರ್ಡು—ಪಡುತೋನ್ಸೆಯಲ್ಲಿ ಪಂಚಾಯತು ಬೋರ್ಡು ಸ್ಥಾಪನೆಯಾಗಬೇಕೆಂದು ನಿಶ್ಚಯವಾಗಿ ಬೋರ್ಡಿಗೆ ಹೊಸ್ತ ಮೊದಲಿನ ಮೆಂಬರರ ಚುನಾವಣೆಯು ಕಳೆದ ತಾ. ೧೪ರಲ್ಲಿ ನಡೆಯಿತು. ಕತಿಪೂರ್ವದಲ್ಲಿ ಸಮಸ್ತ ಗ್ರಾಮಸ್ಥರೆಲ್ಲ ಸಭೆಗೂಡಿ ತಮ್ಮಲ್ಲಿ ಯಾರ್ಯಾರು ಮೆಂಬರರಾಗಬೇಕೆಂಬುದನ್ನು ಪರ್ಯಾಲೋಚಿಸಿ ೧೩ಮಂದಿಯನ್ನು ಸರ್ವಾನುಮತದಿಂದ ನಿಶ್ಚಯಿಸಿಟ್ಟುಕೊಂಡಿದ್ದರು. ಆದರೆ ವ್ಯಕ್ತಿಕ ದ್ವೇಷ, ಸ್ವಾರ್ಥ, ಸ್ಥಾನ ಮೋಹ ಮುಂತಾದುವುಗಳಿಂದ ಪ್ರೇರಿತರಾದ ಐವರು ಪ್ರತಿಕಕ್ಷಿಗಳಾಗಿ ಎದುರು ಬಂದುದರಿಂದ ಎಲ್ಲರೂ ಚುನಾವಣೆಯ ಸಮರಾಂಗಣಕ್ಕೆ ಇಳಿಯಬೇಕಾಯಿತು. ಗ್ರಾಮವನ್ನು ಎದುರಿಸಿ ಬೆದರಿಸಿ ಗ್ರಾಮದ ಬೋರ್ಡಿನಲ್ಲಿ ಸ್ಥಾನವನ್ನು ಹೊಂದಲು ಸಾಧ್ಯವಿಲ್ಲವೆಂಬುದನ್ನು ಚುನಾವಣೆಯ ಫಲಿತಾಂಶವು ಚೆನ್ನಾಗಿ ಬಿಸಿಬಿಸಿ ಎಚ್ಚರಿಕೆ ಕೊಟ್ಟು ತೋರಿಸಿದೆ. ಗ್ರಾಮಸ್ಥರು ನಿಶ್ಚಯಿಸಿಟ್ಟುಕೊಂಡಿದ್ದ ೧೩ಮಂದಿಯೂ ನೂರುಗಟ್ಟಳೆ ವೋಟು ಹೊಂದಿ ಗೆದ್ದು ಬಂದರು. ಎದುರಾಳಿಗಳಾಗಿ ನಿಂತ ಆ ಐವರೂ ಹತ್ತುಗಟ್ಟಳೆ ವೋಟು ದೊರಕಿ ಸೋತುಹೋದರು. ಇನ್ನು ಮುಂದಾದರೂ ಗ್ರಾಮದ ಬಹುಮತದ ನಿರ್ಣಯವನ್ನು ವಿರೋಧಿಸುವ ಎದೆಗಾರಿಕೆಯ ಹವ್ಯಾಸಕ್ಕೆ ಬಲಿಬೀಳದೆ, ಚಿಕ್ಕಪುಟ್ಟ ತಂಡಗಳನ್ನು ಕಟ್ಟಿಕೊಂಡು ಗ್ರಾಮದಲ್ಲಿ ಕಲಹ, ದ್ವೇಷ, ಅಸಮಾಧಾನಗಳ ಬೀಜವನ್ನು ಬಿತ್ತದೆ, ಸಾರ್ವಜನಿಕ ಹಿತದೃಷ್ಟಿಯಿಂದ ವ್ಯಕ್ತಿ ಪ್ರತಿಷ್ಠೆಯನ್ನು ಮರೆತು ಸಂಬಂಧಪಟ್ಟವರು ಅಲ್ಪವರ್ಗೂ ವರ್ತಿಸಿಯಾರೆಂದು ಹಾರೈಸುತ್ತೇನೆ ಎಂಬದಾಗಿ ಗ್ರಾಮದ ಹಿತಚಿಂತಕರೊಬ್ಬರು ಬರೆದಿದ್ದಾರೆ.

ಅಖಿಲ ಭಾರತ ಚರಖಾ ಸಂಘದ ಖಾದಿ ಭಂಡಾರ, ಮಂಗಳೂರು—ಇವರು ಮಾರ್ಚ, ಎಪ್ರಿಲ್, ಮೇ ತಿಂಗಳುಗಳಲ್ಲಿ ಜಿಲ್ಲೆಯಲ್ಲಿಯ ಹಳ್ಳಿಗಳಲ್ಲಿರುವ ಖಾದಿ ಪ್ರೇಮಿಗಳಿಗೆ ಖಾದಿಕೊಳ್ಳಲು ಅನುಕೂಲವಾಗುವಂತೆಯೂ ಖಾದಿ ಕೈಗಾರಿಕೆಯಲ್ಲಿ ಇದುವರೆಗೆ ನಡೆದಿರುವ ಪ್ರಗತಿಯನ್ನು ನೋಡಲು ಹಳ್ಳಿಗರಿಗೆಲ್ಲ ಸಿಗುವಂತೆಯೂ ಖಾದಿ ಬಟ್ಟೆಗಳನ್ನು ತಂದು ಒಂದೆರಡು ದಿನಗಳು ಪ್ರದರ್ಶಿಸಿ ಖಾದಿ ಮಾರಾಟ ಮಾಡಲು ವ್ಯವಸ್ಥೆ ಮಾಡಿರುತ್ತಾರೆ. ಮಹಾಜನರು ಖಾದಿ ಪ್ರದರ್ಶನಕ್ಕೆ ಬಂದು ಖಾದಿಯನ್ನು ಕೊಂಡು ಪ್ರೋತ್ಸಾಹಿಸಬೇಕೆಂದು ವ್ಯವಸ್ಥಾಪಕರಾದ ಶ್ರೀ. ಬಿ. ನಾರಾಯಣ ರೈಗಳು ವಿನಂತಿಸುತ್ತಾರೆ.

ವಾರ್ಷಿಕ ಇನಾಂ ದಿನಾಚರಣೆ:—ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲ್ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ವಾರ್ಷಿಕ ಇನಾಂ ದಿನಾಚರಣೆ (Annual Prize Distribution Day) ಜ. ೩ ಸಾಲಿಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಕೆಳಗಿನವರಿಗೆ ಬಹುಮಾನಗಳನ್ನು ಕೊಡಲಾಯಿತು. ಫೇನ್ಸಿ ಡ್ರೆಸ್- ಉಮಾನಾಥ ರಾವ್, ಪುಂಡಲೀಕ ಪೈ. ಇಂಗ್ಲಿಷ್ ಪ್ರಬಂಧ- ಆರ್. ದಿನಕರ ರಾವ್, ಕನ್ನಡ ಪ್ರಬಂಧ- ಅಗ್ನಿ ನಾರಾಯಣ ರಾವ್ ಇಂಗ್ಲಿಷ್ ಭಾಷಣ- ಪಿ. ಶೇಷಗಿರಿ ರಾವ್, ಬೇಡ್‌ಮಿಂಟನ್ ಸಿಂಗ್ಸ್- ದಯಾನಂದ ಶೆಣೈ, ರಿಂಗ್ ಟೆನ್ನಿಸ್ ಸಿಂಗ್ಸ್- ಲಕ್ಷ್ಮಣರಾವ್.

ನವಯುಗಕ್ಕೆ ಚಂದಾದಾರರಾಗಿರಿ.

—ಕೂದಲು ರಂಗು ತೈಲಸಿರಿ—

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬಿಳಿದಾಗುವುದು ನಿಲ್ಲುವುದು, ನರೆತಕೂದಲು ಪೂರ್ಣ ಕಪ್ಪಾಗಿ ಬಿಳಿರಂಗು ನಾಶಹೊಂದುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿವೆ. ವೃದೇ ನಮ್ಮ ತೈಲದ ಯೋಗ್ಯತೆಯನ್ನು ತೋರುವುವು. ಅಪ್ರಯೋಜನಕಾರಿಯೆಂದು ರುಜುಪಡಿಸಬಲ್ಲವರಿಗೆ ಕೊಟ್ಟಹಣ ವಾಪಾಸು ಕೊಡುವ ಶರ್ತವಿದೆ. ಅಲ್ಪ ಸ್ವಲ್ಪ ನರೆತಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಕಾಲುಪಾಲಿಗೂ ಮಿಕ್ಕಿರುವುದಾದರೆ ರೂ.7, ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

Hazra & Co,
P. O. Behar Nersery (Darbhanga)

ಮೂಲೀಕಲಿಸಿರಿ—ದೃಷ್ಟಿಚಕ್ರ—ನರೆತಕೂದಲು - ವೃದ್ಧಾಪ್ಯ ತಯಾರು

ಎರಡು ತಿಂಗಳ ಶಿಸಳವೂ, ವೃದ್ಧರು ನಾಲ್ಕು ತಿಂಗಳವರೆಗೂ ಟಾನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಥಳಕು ಬಾರದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ. ಟಾನಿಕಿನ ಕ್ರಯವು ಈ ರೀತಿಯಾಗಿದೆ. ಒಂದು ತಿಂಗಳಿನ ಟಾನಿಕಿಗೆ ರೂ 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Jari Booti Dawakhana,
P. O. Behar Nursery (Darbhanga)

ಟೆಂಡರ್ ನೋಟೀಸು

ಉಡುಪಿ ಮುನಿಸಿಪಾಲಿಟಿಯ **1939-'40**ನೇ ವರುಷದ ಕಾಮಗಾರಿಕೆಗಳ ಬಗ್ಗೆ ತಾ **28-2 '39**ನೇ ಮಂಗಳವಾರ ಅಪರಾಹ್ನ ಮೂರು ತಾಸಿನ ತನಕ ಕಂಟ್ರಾಕ್ಟರರಿಂದ ಟೆಂಡರುಗಳು ಸ್ವೀಕರಿಸೋಣಾಗುವವು ಮುನಿಸಿಪಾಲಿಟಿಯ ದಾಖಲೆಯಲ್ಲಿ ರಿಜಿಸ್ಟ್ರಿಯಾಗದ ಉಮೇದ್ವಾರರು ರೂಪಾಯಿ **5/-**ನ್ನು ಪಾವತಿಮಾಡಿ ರಿಜಿಸ್ಟರ್ಡ ಕಂಟ್ರಾಕ್ಟರರಾಗಿರತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಮುನಿಸಿಪಲ್ ಆಫೀಸು ಸಮಯ ಖುದ್ದು ಬಂದು ಪಡೆಯಬಹುದು.

ಕಾಮಗಾರಿಕೆಯ ವಿವರ

ರಸ್ತೆಯ ಹೆಸರು	ಅಂದಾಜು ಖರ್ಚು	ಟೆಂಡರ್ ಡಿಪೋಜಿಟ್
ಕಂಪಾವಳಿಮಾರ್ಗ	ರೂ. 1,800/-	ರೂ. 90/-
ಮಲ್ಪೆ ಕಾರ್ಕಳದಾರಿ	ರೂ. 1,600/-	ರೂ. 80/-
ಟೌನ್ ಮಾರ್ಗ (ಪೂರ್ವ)	ರೂ. 1,500/-	ರೂ. 75/-
ಡಿ (ಪಶ್ಚಿಮ)	ರೂ. 1,100/-	ರೂ 55/-

ಮುನಿಸಿಪಲ್ ಆಫೀಸು, ಉಡುಪಿ, ತಾ. 15—2—1939.

ಎ. ಲಕ್ಷ್ಮೀನಾರಾಯಣ ರಾವ್,
ಚೆಯರ್‌ಮೇನ್ ಎಂಡ್ ಎಗ್ಸಿಕ್ಯೂಟಿವ್ ಆಥೋರಿಟಿ, (ಉ. ಮು.)

1939ನೇ ಇಸ್ವಿ ಫೆಬ್ರವರಿ ತಿಂಗಳ ತಾರೀಕು 13ನೇ ಸೋಮವಾರ ದಿವಸದ ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆಗಳು.

ಜಂಜ್ಯಾ ನಂಬ್ರ	ಹೆಸರು			ಮೊಬಲಗು ರಿಂದ	ವರೆಗೆ ಮೊಬಲಗು
1 (a)	ಭತ್ತ- ಅವ್ವಲ್ ತರದ ಗುಡ್ಡೆ ಮುಡಿಗೆ		...	1—11—0	...
(b)	,, ದುಯಂ ,, ,,		...	1—10—0	...
2 (a)	,, ಅವ್ವಲ್ ,, ಸುಗ್ಗಿ ಮುಡಿಗೆ		...	1—10—0	...
(b)	,, ದುಯಂ ,, ,,		...	1— 9—0	...
3 (a)	ಅಕ್ಕಿ-ಅವ್ವಲ್ ತರದ ಗುಡ್ಡೆ ಮುಡಿಗೆ		...	4— 2 - 0	...
(b)	,, ದುಯಂ ,, ,,		...	3—14—0	...
4 (a)	,, ಅವ್ವಲ್ ತರದ ಸುಗ್ಗಿ ,,		...	...	...
(b)	,, ದುಯಂ ,, ,,		..	3— 8—0	...
5 (a)	ಸುಲಿದ ತೆಂಗಿನ ಕಾಯಿ 1000ಕ್ಕೆ	...	...	35— 0—0	45—0—0
(b)	ನಿಪ್ಪೆಯಿದ್ದ ,, ,,	...	...	37— 8—0	47—8—0
6 (a)	ಕೊಬ್ಬರಿ ಆಫೀಸು ಮಿಂಡಿಗೆ	...	...	45— 0—0	...
(b)	,, ದಿವಿ ,,	...	...	48—12—0	...
(c)	,, ದಿಲ್‌ಪಸಂದ್ ,,	..	...	47— 8—0	...
7	ತೆಂಗಿನ ಎಣ್ಣೆ ಮಣಕ್ಕೆ	..	...	3— 5—0	...
8	ಓಪ್ಪೆಯಿದ್ದ ಅಡಿಕೆ 1000ಕ್ಕೆ	...	...	3— 4—0	3-12—0
9	ಗೇರುಬೀಜ ಮುಡಿಗೆ	...	...	3—12—0	...
10	ಕಬ್ಬಿನ ಬೆಲ್ಲ ಮುಂದಿಗೆ	...	...	42— 8—0	50—0—0
11	ಒಳ್ಳೇ ಮೆಣಸು ಹಂದ್‌ರ್‌ವೇಟಿಗೆ	...	...	15— 8—0	16—8—0

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

17-2-1939

ನಿಷೇಧ—ಮುಂಬಯಿ ಸರಕಾರದ ಬಜೆಟ್ಟನ್ನು ಆದರಲ್ಲೂ ಪೆಟ್ರೋಲಿನ ಮೇಲೆ ಗಿಲಸಿಗೆ ಒಂದಾಣೆಯಂತೆ ಟೇಕ್ಸ್ ಹೊರಿಸಬೇಕೆಂಬುದನ್ನು ಮತ್ತು ಮಿಲ್ಲು ಬಟ್ಟೆಗಳ ಮೇಲೆ ಟೇಕ್ಸ್ ಹೊರಿಸಬೇಕೆಂಬುದನ್ನು ನೋಡಿ, ನಗರದ "ಬಡಾ ಸಾಹೇಬರು"ಗಳ ಎದೆಯುಬ್ಬತೊಡಗಿದೆ. ಈಗಿನ ಮೇಯರರಾದ ಶ್ರೀ. ಚುನಾಯಿಯವರೇ ನಗರ ಸಭೆಯಲ್ಲಿ ನಿನ್ನೆ ಇದನ್ನು ಖಂಡಿಸಿ ಮಾತಾಡಿದರು. ಇನ್ನಿತರರೂ ಕೂಡ ಇದರ ಕುರಿತಾಗಿ ತಮ್ಮ ನಿಷೇಧವನ್ನು ತೋರ್ಪಡಿಸಿರುವರು.

ಮುಂದಿನ ಮೇಯರರಾರು?— ಮುಂಬಯಿ ನಗರ ಸಭೆಯನ್ನು ಕಾಂಗ್ರೆಸ್ ಆಪಹರಿಸಿತು. ಇನ್ನು ಮೇಯರರನ್ನು ಚುನಾಯಿಸುವ ಅಧಿಕಾರವು ಇದರ ಕೈಯಲ್ಲಿದೆ. ಇಷ್ಟರ ತನಕ ನಡೆದು ಬಂದ ಕ್ರಮದಂತೆ, ಜಾತಿ ಹಕ್ಕಿನ ಪ್ರಕಾರ ಪಾರ್ಸಿಯರ ಮೇಯರರ ಸ್ಥಾನವನ್ನು ವಹಿಸಬೇಕು. ಕಾಂಗ್ರೆಸ್ ಸದಸ್ಯರಲ್ಲೀಗ ಇಬ್ಬರು ಪಾರ್ಸಿಗಳಿರುವರು, 1. ಕೆ. ಎಫ್. ನರಿಮನ್ (ಮುಂಚಿನ ಮೇಯರ್), 2. ಎಂ. ಆರ್. ಮಸಾನಿ (ಸಮಾಜವಾದಿಯಾಗಿದ್ದರೂ, ಶುದ್ಧಗಾಗಿ ಬಿ. ಪಿ. ಸಿ. ಸಿಯಲ್ಲಿರುವ "ನಾರಿ"ಗಳ ಬೆನ್ನು ಹಿಡಿದು ಹಾರಾಡುವವರು). ಮುಂಬಯಿ ನಗರದ ಈಗಿನ ಕಾಂಗ್ರೆಸ್ ಅಧಿಕಾರಿಗಳ ಮಧ್ಯೆ ಶ್ರೀ. ನರಿಮನರ ಹೆಸರೆತ್ತುವ ಆಗತ್ಯವೇ ಇಲ್ಲ. ಇನ್ನು ಸಮತಾವಾದಿ ಮಸಾನಿಯವರ ಅವಸ್ಥೆ. ಎರಡು-ಮೂರು ತಿಂಗಳಿಂದಲೂ, ಒಂದು ಮೇಯರ್ ಹುದ್ದೆಗಾಗಿ, ಚಡಪಡಿಸುತ್ತ, ತಮ್ಮ ಪಾರ್ಟಿ ಧ್ಯೇಯಗಳಿಗೆ ವಿರುದ್ಧವಾಗಿ ನಡೆದುಕೊಂಡು ಇದ್ದ "ರಿಯಾಕ್ಷನರಿ"ಗಳಿಗೆಲ್ಲ "ಮಸ್ಕ" ಹಾಕುತ್ತಿದ್ದರೂ, ಈಗ ಚುನಾವಣೆಯಲ್ಲಿ ಚುನಾಯಿಸಿ ಬಂದ ಪ್ರತಿನಿಧಿಗಳ ಅಂಬೋಣವನ್ನು ನೋಡುವಾಗ ಶ್ರೀ. ಮಸಾನಿಯವರ "ಮಸ್ಕ"ವು ಸೀರಾಗಿ ಎಲ್ಲಿ ಚೆಲ್ಲಿ ಹೋಗುವುದೋ ಎಂದು ಭಯಪಡಬೇಕಾಗಿದೆ. ಕಾಂಗ್ರೆಸು ಈ ಜಾತಿವಾರು ಕ್ರಮವನ್ನು ತೆಗೆದು ಭೂಲಾಭಾಯಿ ದೇಸಾಯಿ ಮತ್ತು ಕಂಪೆನಿಯ "ಸೋಲ್ ರಿಪ್ರಸೆಂಟೇಟಿವ್"ರಾದ ಶ್ರೀ. ಮಥುರಾದಾಸ್ ತ್ರಿಕಂಜಿಯವರನ್ನು ಮುಂಬಯಿ ನಗರದ ಮೇಯರ ಸಿಂಹಾಸನಕ್ಕೇರಿಸಿ, ಪಟ್ಟ ಕಟ್ಟುವ ಅಭಿಪ್ರಾಯವಿದೆಂದು ಕಂಡು ಬರುತ್ತದೆ. ಹುದ್ದೆಯ ಆಕಾಂಕ್ಷೆಯಿಂದ ತಮ್ಮ ಪಾರ್ಟಿಯ ಧ್ಯೇಯಗಳಿಗೆ ತಿಲಾಂಜಲಿಯನ್ನಿಡುವ ಶ್ರೀ. ಮಸಾನಿಯಂಥವರು ಇನ್ನಾದರೂ ಬುದ್ಧಿ ಕಲಿಯಲಿ!

ಉಡುಪಿ ಮುನ್ಸಿಪಾಲಿಟಿ.

ಪ್ರಕಟಣೆ

ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನೆಂದರೆ — ಉಡುಪಿ ಮುನಿಸಿಪಾಲಿಟಿಯ ತಾಬೆಯಲ್ಲಿರುವ ಗ್ಯಾಸ ದೀಪಗಳೂ ಅವುಗಳ ಕಂಬಗಳೂ, ಸಾಮಾನ್ಯ ದೀಪಗಳೂ ಅವುಗಳ ಲಾಟಾನ್ ಕಂಭಗಳೂ (ಎಲ್ಲವೂ ಚಿಟೋರೀತಿಯಲ್ಲಿರುವವು). ತಾ 28-2-39ನೇ ಮಂಗಳವಾರ ಸಂಜೆ 5 ಗಂಟೆಗೆ ಮುನಿಸಿಪಲ್ ಆಫೀಸಿನಲ್ಲಿ ಎಗ್ಜಿಕ್ಯೂಟಿವ್ ಆಥೋರಿಟಿಯೂ ಅವರಿಂದ ಅಧಿಕೃತರಾದವರಿಂದ ಬಹಿರಂಗವಾಗಿ ಮಾರಾಟಮಾಡಲ್ಪಡುವವು ಮಾರಾಟವು ಅಂದೇ ಮುಗಿಯದಿದ್ದಲ್ಲಿ ಮರುದಿನಕ್ಕೆ ಮುಂದರಿಸಲಾಗುವುದು. ಅಖೈರು ಕ್ರಯಕ್ಕೆ ಹಿಡಿದ ಉಸೀದುವಾರರು ತಮ್ಮಿಂದ ಪಾವತಿಯಾಗತಕ್ಕ ಐವಜನ್ನು ಕೂಡಲೇ ಮುನಿಸಿಪಲ್ ಲೆಕ್ಕಕ್ಕೆ ಪಾವತಿ ಮಾಡತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯದಲ್ಲಿ ಪಡೆಯಬಹುದು.

(ಸಹಿ). ಎ. ಲಕ್ಷ್ಮೀನಾರಾಯಣರಾವ್,
ಚೆಯರ್‌ಮೆನ್ ಎಂಡ್ ಎಗ್ಜಿಕ್ಯೂಟಿವ್
ಉಡುಪಿ ಮುನಿಸಿಪಾಲಿಟಿ,
ತಾ. 15-2-1939

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಾನ್ಯ ಮಂತ್ರಿಗಳಲ್ಲಿಗೆ ಮೋಟರ್ ವರ್ಕರ್ಸ್ ಯೂನಿಯನಿನ ಶಿಷ್ಟ ಮಂಡಲ—ಮಂಗಳೂರಲ್ಲಿ ಕಳೆದ ತಾ. 15ನೇ ಸಾಯಂಕಾಲ ಮೋಟರ್ ಕೆಲಸಗಾರರ ಯೂನಿಯನಿನ ಶಿಷ್ಟ ಮಂಡಲವೊಂದು, ಮಂತ್ರಿವರ್ಯರ ಅಪ್ಪಣೆಯ ಮೇರೆಗೆ ಅವರನ್ನು ಕಾಣುವರೆ ಅವರು ತಂಗಿದ್ದ ಬಂಗ್ಲೆಗೆ ಹೋಯಿತು. ತಮ್ಮ ತಕರಾರನ್ನು ಮದ್ರಾಸಿಗೆ ಹೋಗಿ ಒಂದುವಾರದಲ್ಲಿ ಕಳುಹಿಸುವುದಾಗಿ ಮಂತ್ರಿಗಳು ಹೇಳಿದರು.

ಸಾರ್ವಜನಿಕ ಸಭೆ—ಮೋಟರ್ ಕೆಲಸಗಾರರ ಯೂನಿಯನಿನ ಆಶ್ರಯದಲ್ಲಿ ಮಹಾಜನರ ಸಭೆಯು ಶ್ರೀ। ರಾಘವನ್ ನಂಬಿಯಾರ್ (ಜಿ. ಬೋ. ಮೆಂಬರ್) ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಜೂರರ ಧುರೀಣತ್ವದ ವಿಷಯವಾಗಿ ಶ್ರೀ. ಕೆ. ಕೃಷ್ಣರಾಯರು ಭಾಷಣಮಾಡುತ್ತಾ ಮಂಗಳೂರಲ್ಲಿ ಮಜೂರರ ಸಂಘವನ್ನು ಸ್ಥಾಪಿಸಿದವರು ಮಜೂರರ ಹಿತಚಿಂತನೆಗಾಗಿ ಸ್ಥಾಪಿಸಿದ್ದಲ್ಲವೆಂದೂ, ಅವರು ತಮ್ಮ ರಾಜಕೀಯ ಪ್ರಭಾವವನ್ನು ತೋರಿಸಲಿಕ್ಕಾಗಿ ಅವನ್ನು ಸ್ಥಾಪಿಸಿ ಅವುಗಳ ಮೂಲಕ ಜಿಲ್ಲೆಯ ಕಾಂಗ್ರೆಸ್ ಕಾರ್ಯಕ್ಷೇತ್ರದಲ್ಲಿ ಹೆಸರು ಪಡೆಯುವುದಕ್ಕಾಗಿ ಪ್ರಯತ್ನಿಸಿದರೆಂದೂ ನಿದರ್ಶನ ಕೊಟ್ಟು ಹೇಳಿದರು. ಶ್ರೀ ನಾರಾಯಣಕಿಲ್ಲೆಯವರೂ ಅದನ್ನು ಅನುಮೋದಿಸಿ ಭಾಷಣಮಾಡಿದರು.

ಅಧ್ಯಕ್ಷರು ಮಾನ್ಯ ಮಂತ್ರಿಗಳಿಂದ ಕೆಲಸಗಾರರ ಕೇಳಿಕೆಗೆ ಮಾನ್ಯತೆ ದೊರಕುವುದೆಂದು ತಮಗೆ ಭರವಸೆಯಿದೆಯೆಂದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಆರ್ಯಸಮಾಜದ 21ನೇ ವಾರ್ಷಿಕೋತ್ಸವ—ತಾ. 17ರಲ್ಲಿ ನಗರ ಸಂಕೀರ್ತನೆ ಭಜನೆ, ವೈದಿಕ ಧ್ವಜಾರೋಹಣ, ವೇದೋಪದೇಶ, ಹವನವೇ ಮೊದಲಾದ ಕಾರ್ಯಕ್ರಮಗಳಿಂದ ಸ್ಥಳೀಯ ಆರ್ಯಸಮಾಜದ 21ನೆಯ ವರ್ಷೋತ್ಸವವು ನಡೆಯಿತು. ಅದೇ ದಿನ 19ವರ್ಷ ಪ್ರಾಯದ ಪ್ರೊಟೆಸ್ಟೆಂಟ್ ಕ್ರಿಸ್ತ ಯುವತಿಯಾದ ಎಸ್ಸಿಬಾ ಕೆಲ್ವಿನ ರತ್ನ ಎಂಬಾಕೆ ವೈದಿಕಧರ್ಮವನ್ನು ಸ್ವೀಕರಿಸಿದಳು. ಆಕೆಯ ಹಿಂದೂ ಹೆಸರು ರತ್ನಾವತಿ ದೇವಿ ಎಂದು. ಅಪರಾಹ್ನ ವಿಗ್ರಹಾರಾಧನೆಯ ಗುಣದೋಷಗಳ ವಿಷಯ ಚರ್ಚೆನಡೆಯಿತು. ಶ್ರೀ ಗೋಪಾಲನಾಯಕರು ಅಧ್ಯಕ್ಷತೆ ವಹಿಸಿದ್ದರು. ಸಾಯಂ. 5-30ಕ್ಕೆ ಋಷಿಬೋಧೋತ್ಸವವು ಪಂಡಿತ್ ಕರಮಚಂದ ಭಲ್ಲರವರ ಅಧ್ಯಕ್ಷತೆಯಲ್ಲಿ ಜರಗಿತು. ಕೆ. ಕೃಷ್ಣರಾವ್ ಇವರು ಶುದ್ಧಿ ಮತ್ತು ಸಂಘಟನೆಯ ವಿಷಯ ಭಾಷಣಮಾಡಿದರು. ಶ್ರೀ ಬಿ. ಯಂ. ತಿಂಗಳಾಯರೂ, ಪಂಡಿತ ವಿ. [illegible] ಶೆಟ್ಟಿಗರೂ ಸ್ವಾಮಿದಯಾನಂದರ ಚರಿತ್ರೆಯನ್ನು ಸ್ವಲ್ಪದರಲ್ಲಿ ತಿಳಿಸಿದರು. ಅಧ್ಯಕ್ಷರು ಆರ್ಯಧರ್ಮದ ವಿಷಯವಾಗಿ ಭಾಷಣಮಾಡಿದರು. ಹೈದರಾಬಾದ್ ಸತ್ಯಾಗ್ರಹ ಫಂಡಿಗೆ ಚಂದಾ ಎತ್ತಲಾಯಿತು. ಶ್ರೀ. ಬಸ್ತಿ ದಾಸಪ್ಪ ಶೆಣ್ಯೆಗಳು ಧನ್ಯವಾದಗಳನ್ನರ್ಪಿಸಿದರು.

ಪ್ರೊ. ವಾರ್ಕಿಯವರ ಭಾಷಣ—ಕಳೆದ ತಾ. 15ರಲ್ಲಿ ಸೈಂಟ್ ಎ ಕಾಲೇಜಿನಲ್ಲಿ ಮಾನ್ಯ ವಿದ್ಯಾ ಮಂತ್ರಿಗಳು ವಾರ್ಧಾ ವಿದ್ಯಾ ಯೋಜನೆಯು ಎಷ್ಟು ಉಪಯುಕ್ತವಾದುದೆಂಬುದನ್ನು ವಿವರಿಸಿದರು. ಮಾತೃಭಾಷೆಯಲ್ಲಿ ವಿದ್ಯಾಭ್ಯಾಸವನ್ನು ಕೊಡುವ ವಿಷಯವಾಗಿ ಹೇಳುತ್ತಾ ದ. ಕನ್ನಡದಂತಹ ಜಿಲ್ಲೆಗಳಲ್ಲಿ ಜಿಲ್ಲೆಯ ಪ್ರಧಾನ ಭಾಷೆಯಲ್ಲಿ ವಿದ್ಯಾಭ್ಯಾಸ ಕೊಡಲು ಸಾಧ್ಯವೆಂದರು.

ಮೂಲ್ಕಿ—ಕಾಂಗ್ರೆಸ್ ಕಮಿಟಿಯ ಪ್ರಾಥಮಿಕ ಸದಸ್ಯರ ಸಾಮಾನ್ಯ ಸಭೆಯು, ತಾ. 11-2-39ರಲ್ಲಿ ರಾ. ರಾಮಕೃಷ್ಣ ಪೂಂಜರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸು ಕಚೇರಿಯಲ್ಲಿ ಸೇರಿ ಬಂದು ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಗೆ ಸದಸ್ಯರಾಗಿ ಶ್ರೀಗಳಾದ 1. ಯಂ. ಸುಂದರಕೃಷ್ಣ ಕಾಮತ್ 2. ಮಾಧವ ಪೈ, ಇವರಿಬ್ಬರನ್ನು ಚುನಾಯಿಸಲಾಯಿತು. ಮೂಲ್ಕಿ ಕಾಂಗ್ರೆಸ್ಸು ಕಮಿಟಿಗೆ ಯು. ಆರ್. ಪೂಂಜರು, ವಿ. ಕೆ. ಪ್ರಭು, ಬೋಳಾ ವಾಸುದೇವ ರಾವ್, ಯನ್. ಯಸ್. ಕುಡ್ವಾರ್ (ಉಪಾಧ್ಯಕ್ಷರು) ಟಿ. ನರಹರಿ ಶೆಣೈ (ಕಾರ್ಯದರ್ಶಿ) ಲೂವೀಸ್ ಕೋತ್ಯ, ಯಂ. ನರಸಿಂಹ ಕಾಮತ್, ಬಿ. ಸೀತಾರಾಮ ಕಾಮತ್ (ಅಧ್ಯಕ್ಷ) ಯಂ. ರಮಾನಾಥ ಪ್ರಭು, ಮಾಧವ ಪೈ, (T. C. C.) ಯಂ. ಸುಂದರಕೃಷ್ಣ ಕಾಮತ್, (T. C. C.) ರಾಘವೇಂದ್ರ ಕುಡ್ವ, ರಾಮ ಶೆಣೈ, ರಾಘವೇಂದ್ರ ಪ್ರಭು, ಯನ್. ವಾಮನ ಕಾಮತ್ ಇವರನ್ನು ಆರಿಸಲಾಯಿತು.

"ಸಹಕಾರಿ ಟೌನ್ ಬೇಂಕಿನ" ಮಹಾಸಭೆಯು 12-2-39ರಲ್ಲಿ ಶ್ರೀ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. 128 ಮೆಂಬರರು ಹಾಜರಿದ್ದರು. ಚಾಲ್ತಿ ವರ್ಷಕ್ಕೆ ಈ ಕೆಳಗಿನವರು, ಡೈರೆಕ್ಟರರಾಗಿ ಆರಿಸಲ್ಪಟ್ಟರು. ಯು. ಕೃಷ್ಣರಾವ್, ಕೆ. ಅಣ್ಣಪ್ಪ ಭಟ್ಟ, ವಿ. ಕೆ. ಪ್ರಭು, ಚಾರ್ಲ್ಸ್ ವಿ. ಅರಾಂಜ, ಯಂ. ಕೆ. ಪೂವಪ್ಪ, ವಿ ಯಸ್. ಕಾಮತ್, ಜೆ. ಸಿ. ಕಾಮತ್, ವಿ. ಯನ್. ಕಾಮತ್, ಬೋಳಾ ವಾಸುದೇವ ರಾವ್, ಕಾಫಿ ಫಲಾಹಾರ ಅದನಂತರ ಸಭೆಯು ಮುಕ್ತಾಯವಾಯಿತು.

ಸುರತ್ಕಲ್—ಪ್ರೊಫೆಸರ್ ಎಸ್. ಶೇಷಪ್ಪನವರ ಶಿಷ್ಯರುಗಳಿಂದ ಕೂಡಿದ "ದಿ ಕೆನರಾ ಬ್ರದರ್ಸ್ ಎಕ್ರೊಬೆಟಿಕ್ ಟ್ರೂಪ್" ಬೊಂಬಾಯಿ ಇವರು ಹಿಂದುಮಾಡಿ ಶಾಲಾ ಕಟ್ಟೋಣದ ವಿಸ್ತೃತಿ ಫಂಡಿನ ಸಹಾಯಾರ್ಥವಾಗಿ ತಾ. 8-2-39ರಲ್ಲು ತಮ್ಮ ಅಮೋಘವಾದ ಸರ್ಕಸಿನ ಆಟಗಳನ್ನು ಇಸ್ಕ ವಿದ್ಯಾದಾಯಿನೀ ಶಾಲಾ ಕಟ್ಟಡದಲ್ಲಿ ಆಡಿ ತೋರಿಸಿದರು. ಮರುದಿನ ಸುರತ್ಕಲ್ ಸಹಕಾರ ಮಂದಿರದಲ್ಲಿ ಶ್ರೀ. ಎಮ್. ರಾಮಕೃಷ್ಣನವರು ಇವರನ್ನು 'ಟೀಪಾರ್ಟಿ'ಯನ್ನು ಕೊಟ್ಟು ಸತ್ಕರಿಸಿದರು.

ಮಂದಾರ್ತಿ—ಸ್ಥಳೀಯ ರಥೋತ್ಸವವು ಇದೇ ತಿಂಗಳ ತಾ. 12, 13, 14ರಂದು ಸಂಭ್ರಮದಿಂದ ಜರಗಿದಾಗ ಗೀತಯಾರು ಶಾಂಭವಿ ಶಾಲೆಯ ಪರವು ಬಾಲವೀರ ದಳದವರು ಮಾಡಿದ ಸೇವೆಯು ಸ್ತುತ್ಯಾರ್ಹವಾಗಿತ್ತು.

ಕಿನ್ನಿ ಗೋಳಿ—ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಮೂವತ್ತೆರಡನೇ ವರ್ಷ ವರ್ಧಂತಿಯು ತಾ. 9, 10 ಮತ್ತು 11ರಲ್ಲು ಕ್ರಮಬದ್ಧವಾಗಿ ಆಚರಿಸಲ್ಪಟ್ಟಿತು. ವರ್ಧಂತಿ ಮಹಾಸಭೆಯು ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಯಂ. ಎಲ್. ಸಿ. ಯವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ನೆರವೇರಿತು. ಹಿತಚಿಂತಕರ ಮತ್ತು ಅಧ್ಯಕ್ಷರ ಭಾಷಣಗಳಾದ ಮೇಲೆ ಹಿಂದೀ ಕನ್ನಡ ನಾಟಕಗಳು ಅಭಿನಯಿಸಲ್ಪಟ್ಟು ಉತ್ಸವವು ಅಂತ್ಯವಾಯಿತು.

ಅಧ್ಯಕ್ಷರು ತನ್ನ ಭಾಷಣದಲ್ಲಿ, ಶಾಲೆಯು ಕೈಕೊಂಡಿರುವ ಕಾರ್ಯಕಲಾಪಗಳಿಗಾಗಿ ತುಂಬಾ ಕೊಂಡಾಡಿ, ಶಾಲಾ ಉಪಯೋಗಕ್ಕೆ ರೂ. 25/- ನ್ನೂ, ಮಕ್ಕಳ ತಿಂಡಿ ಬಗ್ಗೆ ರೂ. 5/- ನ್ನೂ ದಯಪಾಲಿಸಿ ತನ್ನ ವಿದ್ಯಾಪ್ರೇಮವನ್ನು ವ್ಯಕ್ತಗೊಳಿಸಿದರು. ಶ್ರೀ. ಕೆ. ಆರ್. ಬಲ್ಲಾಳರೂ ಸ್ವಲ್ಪದಾನ ಮಾಡುವುದಾಗಿ ಹೇಳಿದರು.

ಜಿಲ್ಲಾ ಬೋರ್ಡು ಮೇಸ್ತ್ರಿಗಳ ಸಭೆ-ಕುಂದಾಪುರ ಡಿವಿಜನಿನ ಜಿಲ್ಲಾ ಬೋರ್ಡು ಮೇಸ್ತ್ರಿಗಳ ಸಭೆಯೊಂದು ಇದೇ ಕಳೆದ ತಾ. 17ರಲ್ಲು ಬ್ರಹ್ಮಾವರದಲ್ಲಿ ಶ್ರೀ. ಯಂ. ಆರ್. ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾ ಬೋರ್ಡು ಮೇಸ್ತ್ರಿಗಳೆಲ್ಲರ ಸಂಘವೊಂದನ್ನು ಸ್ಥಾಪಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆದು ಅದರ ಸ್ಥಾಪನೆ, ಘಟನೆಯ ಸಿದ್ಧತೆಯೇ ಮೊದಲಾದ ಕೆಲಸಕ್ಕಾಗಿ 4ಮಂದಿ ಮೆಂಬರರು ಮತ್ತು ಒಬ್ಬ ಹೊರಗಣ ಸದಸ್ಯರು ಹೀಗೆ 5ಮಂದಿಯ ಸಬ್ ಕಮಿಟಿಯೊಂದನ್ನು ಸ್ಥಾಪಿಸಲಾಯಿತು. ಶ್ರೀಗಳಾದ ಕೃಷ್ಣ ಭಟ್ಟ, ಕೆ. ತಿಮ್ಮಪ್ಪ ಶೆಟ್ಟಿ, ಕೆ. ಕೃಷ್ಣಪ್ಪ, ಬಿ. ನಾರಾಯಣರಾವ್ ಮತ್ತು ಕೆ. ಕೆ. ಶೆಟ್ಟಿ (ಹೊರಗಣವರು) ಈ ಸಬ್ ಕಮಿಟಿಯ ಮೆಂಬರರು. ಶ್ರೀ. ಕೆ. ತಿಮ್ಮಪ್ಪ ಶೆಟ್ಟಿ ಕಮಿಟಿಯ ಸೆಕ್ರೆಟರಿ ಮತ್ತು ಕೋಶಾಧಿಕಾರಿಯಾಗಿ ಕೆಲಸ ಮಾಡಬೇಕೆಂದು ನಿರ್ಧರಿಸಲಾಯಿತು. ಮೇಸ್ತ್ರಿಗಳ ಸಂಘದ ಪಿರದು ಘಟನೆಯನ್ನು ತಯಾರಿಸಿ ಬರುವ ಮಾರ್ಚಿ ತಾ. 25ರೊಳಗೆ ಜಿಲ್ಲೆಯ ಎಲ್ಲಾ ಮೇಸ್ತ್ರಿಗಳ ಮಹಾಸಭೆಯೊಂದನ್ನು ಮಂಗಳೂರಲ್ಲಿ ಕರೆಯುವ ಕುರಿತು ಎಲ್ಲಾ ವ್ಯವಸ್ಥೆಯನ್ನು ಈ ಸಬ್ ಕಮಿಟಿಯವರು ಮಾಡತಕ್ಕದ್ದು. ಪ್ರತಿಯೊಬ್ಬ ಮೆಂಬರನು ಪ್ರವೇಶ ಹಾಸಲು ರೂ. 1 ಮತ್ತು ಮಾಸಿಕ ವಂತಿಗೆ 4ಆಣೆ ಕೊಡಬೇಕೆಂದಾಯಿತು. ಕುಂದಾಪುರ ಜಿಲ್ಲಾ ಬೋರ್ಡು ಮೇಸ್ತ್ರಿ ಸಂಘದ ಸರ್ಕ್ಯುಲರನ್ನು ಓದಲಾಯಿತು.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ, ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಅಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ಥ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. ಕ್ರಯ:-100ಮಾತ್ರೆಗಳಿಗೆ ರೂ. 1-8-0, 500ಕ್ಕೆ ರೂ. 6-0-0. ಐದಾಣೆ ಸ್ಟಾಂಪು ಕಳಿಸಿದರೆ 13 ಮಾತ್ರೆ ಕಳಿಸಲ್ಪಡುತ್ತದೆ

ಆಮಲಕೀ ತೈಲ

(ಸುಗಂಧಯುಕ್ತ ಕೇಶವರ್ಧಕ ತೈಲ)

ಮಿದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0.
2 ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ. ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,
ಬ್ರಹ್ಮಾವರ ಪೋಸ್ಟ್, ದ. ಭಾರತ

ಸುಳ್ಳೆಂದು ರುಜುಪಡಿಸುವವರಿಗೆ

ರೂ. 50 ಇನಾಂ

ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು.

1 **ವಶೀಕರಣ ಯಂತ್ರ:** ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರಧರಿಸಿದ ಮಾತ್ರದಿಂದಲೇ ಅವಳು ನಿಮ್ಮೊಡನೆ ಮಾತನಾಡಬಯಸುವಳು, ಮಾತ್ರವಲ್ಲದೆ ನಿಮ್ಮ ವಶವಾಗುವಳು, ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ ತಾಯಿತಕ್ಕೆ ರೂ 7-8-0.

2 **ಲಕ್ಷ್ಮೀಯಂತ್ರ:** ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ಮಹಿಮಾಟಗಳು ಹೆಚ್ಚಿ ಲಾಭದಾಯಕ ಸುಸಂಧಿಬರುವುದು. ಬೆಳ್ಳಿ ಯಂತ್ರಕ್ಕೆ ರೂ. 2-8-0 ಚಿನ್ನದ್ದಕ್ಕೆ ರೂ. 7-8-0. ಇಂದೇ ಕೆಳಗಿನ ವಿಳಾಸಕ್ಕೆ ಬರೆಯಿರಿ. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

SRI SADANAND RAM
No 57, P. O. Warisaligunj,
(Gaya)

ಉದಯಶಂಕರರ ನೃತ್ಯದೊಂದು ದೃಶ್ಯ

ಕಥಕ್ಕಳಿಯು ಬಹು ಪ್ರಸಿದ್ಧ ನಾಟ್ಯಕಲೆಯೆಂ ಜಗದ್ವಿಖ್ಯಾತ ನಾಟ್ಯಗಾರರಾದ ಉದಯಶಂಕರರು ಅಭಿಪ್ರಾಯ ಪಟ್ಟಿದ್ದಾರೆ

ಪುಟ ೯ರಿಂದ

ನಾಟ್ಯದಲ್ಲಿ ನರ್ತನ

ಈ ಸಮ್ಮೇಲನಕ್ಕೆ ಅಧ್ಯಕ್ಷರಾಗಿರುವ ಶ್ರೀಮಾನ್ ಕಾರಂತರವರು ಕೆಲವು ಗೀತಾ ನಾಟಕಗಳನ್ನು ಬರೆದು ತಾವೇ ಸ್ವತಃ ಪ್ರದರ್ಶಿಸಿದ್ದಾರೆ ಅವರ, 'ಮುಕ್ತದ್ವಾರ' 'ಡಿಸ್ಸಾಡಿ ಚೆಲ್ಲಿ' 'ಬದುಕು' ಎಂಬ ಗೀತ ನಾಟಕಗಳು ಒಂದೊಂದು ಬಗೆಯಲ್ಲಿ ಹೆಚ್ಚಳವನ್ನೊಳಗೊಂಡಿವೆ. ಅವುಗಳನ್ನು ಪ್ರದರ್ಶಿಸುವುದು ಕಷ್ಟಸಾಧ್ಯವಾದರೂ ಅವು ಕಲಾಕೃತಿಗಳು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ನಟರಿಗೆ—ನರ್ತಕರಿಗೆ ಹೆಚ್ಚು ಶಿಕ್ಷಣವು ಸಂಸ್ಕೃತಿಯು ಕಲಾಜ್ಞಾನವು ಬೇಕು ಪ್ರದರ್ಶನಕ್ಕೆ ಅನೇಕ ಅನುಕೂಲತೆಗಳು ಅಂಗರಚನೆಯ ಸೌಂದರ್ಯಗಳು ಬೇಕು ಆಗ ಈ ಗೀತ ನಾಟಕಗಳ ಸವಿಯನ್ನು ನಾವು ಸವಿಯಬಲ್ಲೆವು

ನಾಟಕದಲ್ಲಿ ನರ್ತನವನ್ನು ಬೆರೆಸುವ ಸಾಹಸವನ್ನು ನಾನೂ ಒಂದು ಸಲ ಮಾಡಿದೆ. ಭವಭೂತಿಯ ಉತ್ತರ ರಾಮಚರಿತ್ರವನ್ನು ಆಧುನಿಕ ರಂಗಭೂಮಿಗೆ ಅಳವಡಿಸುವಂತೆ ಬರೆದುಕೊಂಡೆ ಅದರ ಪ್ರಾರಂಭದಲ್ಲಿ ಕರ್ತವ್ಯ ಪ್ರಣಯಿಗಳ ಇರಾತಿನಲ್ಲಿ ಸಿಕ್ಕಿ ತೊಳಲಾಡುವ ರಾಮನ ಜೀವನವನ್ನು ಕಿರಿದರಲ್ಲಿ ಹೇಳುವರು ಮೂಲ ನಾಂದಿ ಅಥವಾ ಪ್ರಸ್ತಾಪನಾ ರೂಪವಾಗಿ ನಾಟಕದ ಪ್ರಾರಂಭದಲ್ಲಿ ಒಂದು ನರ್ತನವನ್ನು ಸೇರಿಸಿಕೊಂಡಿದ್ದ ಮುಂದ ವಾಲ್ಮೀಕಿಯು ತಾನು ರಚಿಸಿದ ನಾಟಕವನ್ನು ರಾಮನೆದುರಿಗೆ ಪ್ರದರ್ಶಿಸುವಾಗ ಆ ಚಿಕ್ಕ ನಾಟಕವನ್ನು ಸಂಪೂರ್ಣವಾಗಿ ನೃತ್ಯ ಗೀತಗಳಿಂದಲೇ ಪ್ರದರ್ಶಿಸಲಾಯಿತು. ಅದು ನಮ್ಮ ಪ್ರಥಮ ಪ್ರಯತ್ನ ತಕ್ಕಂಬು ಯಶಸ್ವಿಯಾಯಿತೆಂದೇ ಹೇಳಬಹುದು.

ಕಂಪೆನಿಯ ನಾಟಕಗಳಲ್ಲಿಯೂ ಈ ರೀತಿಯನ್ನು ಪ್ರಾರಂಭಿಸಬೇಕು ಎಂದು ನನ್ನ ಆಸೆ ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಮಂಡಳಿಯ ಒಡೆಯರಾದ ಶ್ರೀ. ವೀರಣ್ಣನವರು ಈ ಸಾಹಸವಮಾಡಲು ಸಮ್ಮತಿಸಿದ್ದಾರೆ ಅವರು ಈಗ ಹೊಸತಾಗಿ ತೆಗೆದುಕೊಂಡ ಶ್ರೀ ಬಿ. ಪುಟ್ಟಸ್ವಾಮಿಯವರ 'ಅಕ್ಕ ಮಹಾದೇವಿ' ಎಂಬ ನಾಟಕದಲ್ಲಿ ಕೆಲವು ನರ್ತನಗಳನ್ನು ಸೇರಿಸಬೇಕೆಂದು ನನ್ನನ್ನು ಕೇಳಿದ್ದಾರೆ. ಈಗ ನಾನು ಆ ಪ್ರಯತ್ನದಲ್ಲಿದ್ದೇನೆ. ಈ ರೀತಿಯು ಎಷ್ಟರಮಟ್ಟಿಗೆ ಆಕರ್ಷಿತವಾಗಿ ಜನರಿಂದ ಮನ್ನಣೆಪಡೆಯುವುದೋ ನೋಡಬೇಕು ಅಕ್ಕ ಮಹಾದೇವಿಯು ನರ್ತನ ಮಾಡುವುದಂದರೇನು ಎಂದು ಕೆಲವರಿಗೆ ಸೋಜಿಗವೆನಿಸಬಹುದು, ಆದರೆ ಆ ಬಗೆಯ ಸಂಶಯಗಳನ್ನು ತೆಗದುಕೊಳ್ಳಲು ಕಾರಣವಿಲ್ಲ ನಮ್ಮ ದಾಸರು ದೇವರ ಪ್ರೀತ್ಯರ್ಥವಾಗಿ ದೇವರೆದುರಿನಲ್ಲಿ ನರ್ತಿಸುತ್ತಿದ್ದರು. ಮೀರಾಬಾಯಿಯು ಪದಗಳನ್ನು ಹಾಡುತ್ತ ಪ್ರೇಮರತು ಕುಣಿಕುಣಿದು ದೇವರನ್ನು ಮೆಚ್ಚಿಸಿದಳು. ಮಹಾದೇವಿ ನರ್ತಮಾಡಿದರೇನು ತಪ್ಪು?

ನಾಟಕಗಳು ಜನಜೀವನದ ಪ್ರತಿಬಿಂಬವಾಗಿರಬೇಕು ಎಂದು ನಾವು ಹೇಳುತ್ತಿರುವಾಗ ಈ ನರ್ತನಗಳನ್ನು ನಾಟಕಗಳಲ್ಲಿ ಹೇಗೆ ಸೇರಿಸುವುದು ಎಂದು ಕೆಲವರು ಕೇಳಬಹುದು. ಆದರೆ ನರ್ತನವು ಜನಜೀವನದ ಪ್ರತಿಬಿಂಬವಲ್ಲವೆಂದು ತಿಳಿಯುವುದೇ ತಪ್ಪು ಕಲ್ಪನೆ ನರ್ತನದಲ್ಲಿಯ ಹಾವಭಾವಗಳ ಹೆಚ್ಚು ಕಲ ಪೂರ್ಣವಾಗಿರಬಹುದು, ಸುಂದರವಾಗಿರಬಹುದು ಸಣ್ಣವಾಗಿರಬಹುದು, ತಾಳಬದ್ಧವಾಗಿರಬಹುದು ಅಂತೆಯೇ ಅಸ್ವಾಭಾವಿಕವೆಂಬ ಕಲ್ಪನೆಯನ್ನುಂಟುಮಾಡುತ್ತಿರಬಹುದು ಆದರೆ ನರ್ತಕನು ಜನಜೀವನದ ಮಾತುಗಳನ್ನು ಹಾವಭಾವಗಳನ್ನೇ ತೆಗೆದುಕೊಂಡು ಬಣ್ಣಕೊಟ್ಟು ಸುಂದರವಾದ ಕಟ್ಟುಹಾಕಿ ಗೋಡೆಗೆ ತಗಲಿಸಿದ್ದಾನೆಂಬುದನ್ನು ಮರೆಯುವುದು ಬೇಡ.

ಮುಂದಿನ ವರ್ಷದಲ್ಲಿ ಸಮ್ಮೇಲನದ ಕಾಲಕ್ಕೆ ಆದರ್ಶ ನಾಟಕವೊಂದನ್ನು ಪ್ರದರ್ಶಿಸುವ ವಿಚಾರವಿದೆ ಆ ನಾಟಕದಲ್ಲಿ ನರ್ತನಕ್ಕಾಗಿ ಯೋಗ್ಯವಾದ ಸ್ಥಾನಮಾನಗಳು ದೊರೆಯಲಿ ಎಂದು ನಾನು ಹಾರೈಸುತ್ತೇನೆ

(ವಿಶೇಷ ಸಂಚಿಕೆಗಾಗಿ ಬಂದುದು)



ಸರಿಯಾದ ಸಮಯವನ್ನು ಸೂಚಿಸತಕ್ಕ ಅತ್ಯಾಧುನಿಕ ಲಿವರ್ ರಿಸ್ಟ್ ವಾಚಿಗೆ ಉದಾ ಯಾ ಚಚ್ಚೌಕ ಆಕಾರದಲ್ಲಿದ್ದುದಕ್ಕೆ ರೂ 1-15 0 ಮಾತ್ರ. 4 ವರ್ಷಗಳ ಗ್ಯಾರಂಟಿ ಉತ್ತಮ ಜಾತಿಗೆ ರೂ, 2-8-0, ಅತ್ಯುತ್ತಮದಕ್ಕೆ ರೂ 5-0-0, ಚಿನ್ನದ ಕವಚದಕ್ಕೆ ರೂ. 3 8 0, ಕ್ರೋಮಿಯಮಿಗೆ ರೂ 4-8-0, ರೋಲ್ಡ್ ಗೋಲ್ಡಿಗೆ ರೂ 6-8-0, ಚಿತ್ರದಲ್ಲಿ ತೋರುವಂತಹದಕ್ಕೆ ರೂ 8-8-0. ಅಂಚೆವೆಚ್ಚ 0-10-0 ಪ್ರತ್ಯೇಕ.

Empress Trading Co ,

P.O. Box No 6744, **Calcutta(G)**

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನ ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ್, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ, ಮೋಸಗೋಸ್ಕರ ಔಷಧವೆಂದು ಋಜುಪಡಿಸುವವರಿಗೆ ರೂಪಾ 100 ಬಹುಮಾನ

ಸ್ತಂಭಕ ವಟಿ- ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ಕಾಲ ಇಂದ್ರಿಯಸ್ಖಲನವಾಗಲಾರದು 16 ಮಾತ್ರೆಗಳಿಗೆ ಒಂದು ರೂಪಾಯಿ

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

Vaidraj Akhilkishore Ram

No 502 **P O. Katrisarai, (GAYA)**

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ ದಿನ ನಿತ್ಯ ವೆಂಬಂತೆ ಸಾಮಾನುಗಳು ಬೇಲುಗಲ್ಲೆ ಬರುತ್ತಿವೆ ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ

ಜಾಹೀರು ವಿನಂತಿ.

ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಉಡುಪಿ ತಾಲೂಕು ಗುಂಡ್ಮಿ ಗ್ರಾಮದ ಮಂಜುನಾಥ ಸಹಸ್ರ ಯಾನೆ ಕೆ ಜಿ. ಕೆ. ರಾವ್ ಎಂಬವರು ನಮ್ಮ ಫರ್ಮಿನ ಔಷಧ ಮಾರಾಟದ ಟ್ರಾವಲಿಂಗ್ ಏಜಂಟರಾಗಿದ್ದರು. ಈಚೆಗೆ ಅವರ ಏಜನ್ಸಿಯನ್ನು ವಜಾ ಮಾಡಿದೆ. ಅವರಿಗೂ ನಮ್ಮ ಫರ್ಮಿಗೂ ಯಾವ ತರದ ಸಂಬಂಧವೂ ಇರುವುದಿಲ್ಲ. ಅವರು ನಡಿಸುವ ಪತ್ರವ್ಯವಹಾರಗಳು ನಮ್ಮ ಫರ್ಮಿಗೆ ಸಂಬಂಧಪಟ್ಟಿದ್ದಲ್ಲವೆಂಬದನ್ನು ಸರ್ವರೂ ತಿಳಿದಿರತಕ್ಕದ್ದು.

ಡಾ| ಎ. ಎನ್ ಶ್ರೀನಿವಾಸ ರಾವ್,

ಆಯುರ್ವೇದ ವೈದ್ಯ ವಿದ್ವಾನ್,

ಯಂ. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ ದುಷ್ಟರಕ್ತವನ್ನು ಶುದ್ಧಿಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ ಕ್ರಯ ದಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ವಿಶ್ರಾಮವಿಲ್ಲದೆ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವದೇ ಈ ತೈಲದ ಉತ್ಕೃಷ್ಟವಾದ ಗುಣವು ಜನನೇಂದ್ರಿಯದ ಬಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಈ ಧಾರ್ಘವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು ಅರ್ಧ ತೊಲೆ ಸೀಸೆ 1ಕ್ಕೆ ರೂ 5--0--0

'ಕಾಮಶಾಸ್ತ್ರ' ಧರ್ಮಾರ್ಥ, ಪೋಸ್ಟೇಜು ಮಾಫಿಯಾಗಿ ಕಳುಹಿಸಲ್ಪಡುವುದು ಒಂದು ಕಾರ್ಡು ಹಾಕಿರಿ

ಆತಂಕನಿಗ್ರಹ ಫಾರ್ಮಸಿ, ಬಳೆ. ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ.

ಸ ಮ ಯ ದ ಬೆ ಲೆ
VALUE OF TIME.

ಲೇಖಕರು: ಶ್ರೀ ಬಿ. ದಾಮೋದರ ರಾಯ ಶೆಟ್ಟರು, ಬಿ.ಎ., ಎಲ್.ಟಿ. ಉಡುಪಿ.

Time is a great factor in our life. No body can ignore it; but still many do not care to think of it; but they forget that it thinks of all. As time rolls on, our life within us and around us changes. Generations unborn take life, the living unconsciously grow old and the old and sometimes the young die—similarly systems and customs change or die. 'Old order changeth yielding place to new.' It is very difficult to say what we shall be, what the world around us will be after a short time. The past stands fixed before us, the present is with us—the future is in the womb of time. It is our duty to harness time as it rolls on—'Take time by the forelock'—that is what the proverb says; but how many of us act according to it? I am of opinion that Time is wealth and mother Nature is impartial to all, for she gives every one the day which is of equal duration. Many of us do not attach any value to Time. Not even Rockfeller with his enormous fortune was able to buy one minute that slipped by. We waste time when we gossip, revel, slander, quarrel and fight. All people cannot make a mark either in the Walks of literature or in the Halls of science or in the Battle field or in the Cabinet. Let such men know that life is more extensive than this—and 'where there is a will there is a way'. So, O man, do not despair—teach yourself and your children the value of time—your home will be rich—your country richer. A man who cannot fill his hours with interesting and usefull work is simply to be pitied—for he is a great pest to society. It is better that such people do something rather than murder time. Vices grip a man who has nothing to do. Let no rich man or the son of a rich man think that he is happy, if he has nothing to do. If you don't occupy your time, surely time will kill you. People who have ample time are a great nuisance to others. So let no man inflict himself on others when they are busy. If he has any business let him be brief and clear out as early as possible. Value time most and it will value you—for your name will be recorded either in the history of your home or homeland.

ಶೆಟ್ರು—ನೋಡಿ, ಎಷ್ಟೋ ಸಮಯದಿಂದ ನಿಮಗೊಂದು ವಿಷಯವನ್ನು ಹೇಳಬೇಕೆಂದಿದ್ದೆ. ಸೌಜನ್ಯದಿಂದಲೂ ದಾಕ್ಷಿಣ್ಯದಿಂದಲೂ ತಡೆ ಬಂದು ಹೋಗಿತ್ತು. ಆದರೆ ಇನ್ನು ಹೇಳದಿದ್ದರೆ ನಿಮಗೂ ಕೇಡು, ನನಗೂ ಹಾನಿ. ಆದುದರಿಂದ ನಿಸ್ಸಂಕೋಚವಾಗಿ ಹೇಳುತ್ತೇನೆ. ಬೇಗನೆ ತೂಗಿ ನೋಡಿ. ನೀವು ಯಾವಾಗಲೂ ಲೋಕವನ್ನು ದೂರುವುದರಲ್ಲೇ ಬಿದ್ದಿದ್ದೀರಲ್ಲದೆ, ನಿಮ್ಮನ್ನು ಪರೀಕ್ಷಿಸಿಕೊಳ್ಳುವುದಿಲ್ಲ. ಯಾವ ಸಮಯವೆಂದು ನೋಡದೆ, ನಾನೇನು ಕೆಲಸದಲ್ಲಿ ಇದ್ದೇನೆಂಬುದನ್ನು ಸ್ವಲ್ಪವೂ ಮನಸ್ಸಿಗೆ ತೆಗೆದುಕೊಳ್ಳದೆ ಹಾಳು ಹರಟೆ, ಗತಪುರಾಣ, ಯಾರ್ಯಾರ ತೋರಭಾರ ಆಳತೆ ಮಾಡುತ್ತ ನಿಮ್ಮ ಆಯುಷ್ಯ ಸವೆಯುತ್ತೀರಿ, ನನ್ನ ಸಮಯ ಹಾಳು ಮಾಡುತ್ತೀರಿ. ಅನ್ಯರ ಸಮಯವನ್ನು ಕೊಲ್ಲುವ ಈ ರೋಗವನ್ನು ನೀವು ಬಿಡಬೇಕು. ನಿಮಗೆ ಸಮಯ ಧಾರಾಳವಿರಬಹುದು—ಆದರೆ ಬೇರೆಯವರ ಸಮಯವನ್ನು ಹಾಳು ಮಾಡುವ ಅಧಿಕಾರ ನಿಮಗಿಲ್ಲ—ನನ್ನ ಒಂದು ಗಂಟೆ ಈಗ ಹಾಳಾಯಿತಲ್ಲ—ಅದನ್ನು ನನಗೆ ಯಾರೂ ಕೊಡುತ್ತಾರೆ? ದುಡ್ಡು ಕೊಟ್ಟರೆ ಸಿಕ್ಕುವುದಿಲ್ಲ—ಯಾವ ಸಂತೆಯಲ್ಲಿ ಸಿಕ್ಕುತ್ತದೆ ಸ್ವಲ್ಪ ಹೇಳಿ? ಒಬ್ಬನಿಗಿರುವ ಬಿಡು ಸಮಯವನ್ನು ಮತ್ತೊಬ್ಬನಿಗೆ ವರ್ಗಾಯಿಸಲಿಕ್ಕೆ ಆಗುವುದಿಲ್ಲ—ಆದಕಾರಣ ಸುಮ್ಮನೆ ಮತ್ತೊಬ್ಬನಲ್ಲಿ ಹೋಗಿ ಅವನ ಸಮಯ ಹಾಳು ಮಾಡಬಾರದು.

ಮಿತ್ರ—ಓಹೋ, ಕಮ್ಮಿಯೆಲ್ಲ—'ಇಬ್ಲೀಸ್' ಮರ್ಜಿ—ಹಾಗಾದರೆ ಒಬ್ಬರು ಮತ್ತೊಬ್ಬರಲ್ಲಿ ಹೋಗಲಿಕ್ಕಿಲ್ಲವೋ — ಮಾತಾಡಲಿಕ್ಕಿಲ್ಲವೋ —ಸ್ವಲ್ಪ ತಾಳ್ಮೆ ಬೇಕು ಸ್ವಾಮಿ, ಇಷ್ಟು ಸಿಟ್ಟು ಮಾಡಿದರೆ ಹ್ಯಾಗೆ?—

ಶೆಟ್ರು—ಅದೇನು, ನೀವು 'ಇಬ್ಲೀಸ್' ಮರ್ಜಿಯೆಂದು ತಾತ್ಸಾರ ಮಾಡುವುದು? ಇದೇ ನಮ್ಮ ಜನರಲ್ಲಿರುವ ಒಂದು ದೌರ್ಬಲ್ಯ, ಒಂದು ದೊಡ್ಡ ದೋಷ. ಏನಾದರೂ ಒಂದು ಒಳ್ಳೇ ಸಂಗತಿಯನ್ನು ಹೇಳಿದರೆ ಅದನ್ನು 'ಮಸ್ಕಾರ' ಮಾಡುವುದು—ಇದರಲ್ಲಿಯೇ ಹೋಯಿತು ನಮ್ಮ ಆಯುಷ್ಯವೆಲ್ಲ! 'ಇಬ್ಲೀಸ್' ಮರ್ಜಿಯೆಂದು ಹಾಸ್ಯ ಮಾಡುತ್ತೀರಲ್ಲಾ ನೀವು—ಹಾಗೆಂದರೇನು?—ಅದು 'ಇಬ್ಲೀಸ್' ಮರ್ಜಿಯಲ್ಲ —ಒಳ್ಳೇ ಮರ್ಜಿ—ನಿಮ್ಮಂಥವರಿಗೆ ಅದು 'ಇಬ್ಲೀಸ್' ಮರ್ಜಿ—ನಮ್ಮಂಥವರಿಗೆ ಅದು ಒಳ್ಳೇ ಮರ್ಜಿ—ಅದು 'ಇಬ್ಲೀಸ್' ಮರ್ಜಿಯೆಂದು ಅದನ್ನು ನಾನು ಶ್ಲಾಘನೆ ಮಾಡಿದ್ದಲ್ಲ—ಅದು ಒಳ್ಳೇ ಮರ್ಜಿಯೆಂದು—ಇಂಥಾ ಮರ್ಜಿಗಳೆಲ್ಲಾ ಇಂಗ್ಲೀಷರಿಗೇ ಮಾರಿಹೋಗಲಿಲ್ಲ, ನಮಗೂ ಬೇಕು. ನಮಗೆ ತಲೆ ಇಲ್ಲದ್ದರಿಂದ ನಾವು ಇದಕ್ಕೆ ತಮಾಷೆ ಮಾಡುತ್ತೇವೆ—ನಮ್ಮ ಸ್ವಭಾವವೇ ಹಾಗಾಗಿ ಹೋಗಿದೆ ಈಗ! ಏನಾದರೂ ಒಂದು ಸದ್ಬೋಧೆಯ ವಿಷಯವನ್ನೆತ್ತಿ ಮಾತಾಡಿದರೆ ಅದನ್ನು ಗೇಲಿ ಮಾಡುವುದು!—

ಮಿತ್ರ—ಹಾಗಾದರೆ ನೀವು ಹೇಳುವುದೇನೀಗ?

ಶೆಟ್ರು—ನೋಡಿ, ನೀವು ಇನ್ನು ಮುಂದೆ ಕಂಡಾಬಟ್ಟೆ ಬೇರೆಯವರ ಮನೆಗೆ ಹೋಗುವುದೂ, ಎಲ್ಲಿಯಾದರೂ ಹಾಳು ಹರಟೆ ಮಾತಾಡುತ್ತಾ ಕೂತುಕೊಂಡು ಸಮಯವನ್ನು ಹಾಳುಮಾಡುವುದೂ ಎಲ್ಲಾ ತಪ್ಪು—ಒಂದು ವೇಳೆ ಎಲ್ಲಿಗಾದರೂ ಹೋದರೆ ನೀವು ಅಲ್ಲಿಗೆ ಹೋದ ಕೆಲಸವೇನೆಂಬುದನ್ನು ಚುಟುಕಿನಲ್ಲಿ ಹೇಳಿ ಅದನ್ನು ಮಾಡಿ ಆದಷ್ಟು ಬೇಗನೆ ಹೊರಟುಬಿಡಬೇಕು.

ಮಿತ್ರ—ನೀವು ಎಲ್ಲಿಯಾದರೂ ಹೋದರೆ ಹಾಗೆಯೇ ಮಾಡುತ್ತೀರೋ?

ಶೆಟ್ರು—ನೋಡಿ, ಅದೇ—ನಿಮ್ಮ ಕುತರ್ಕ—ಆ ಪ್ರಶ್ನೆಗೆ ಎಡೆಯೇ ಇಲ್ಲ. ನಾನು ನಿಮ್ಮ ಮನೆಗೆ ಬಂದಿದ್ದೇನಾ ಈಗ? ನಿಮ್ಮ ಸಮಯವನ್ನು ಹಾಳುಮಾಡುತ್ತೇನಾ? ನನ್ನನ್ನೇಕೆ ಪ್ರಶ್ನಿಸುವುದು?

ಮಿತ್ರ—ನಿಮ್ಮನ್ನೇಕೆಂದರೆ, ಎಲ್ಲರಿಗೆ ಬುದ್ಧಿ ಹೇಳುವ ನೀವು ನಿಮ್ಮ ಮಾತನ್ನು ಕೃತಿಯಲ್ಲಿ ತೋರಿಸುತ್ತೀರಾ? ಹೇಳುವುದೆಲ್ಲಾ ಸುಲಭ. ಆಡಿದ್ದನ್ನು ಮಾಡಿತೋರಿಸಬೇಕು. ಅಲ್ಲದಿದ್ದರೆ ಮನುಷ್ಯನ ಮಾತಿನ ಬೆಲೆ. ನಾವೆಲ್ಲ ಬುದ್ಧಿ ಹೇಳುವುದು ಬೇರೆಯವರಿಗಲ್ಲವೆ? ನಮಗೆ ನಾವು ಬುದ್ಧಿ ಹೇಳಿಕೊಳ್ಳುತ್ತೇವಾ?

ಶೆಟ್ರು—ಶಾಬಾಸ್! ನೀವು ಒಳ್ಳೇ ಮಾತು ಆಡಿದ್ದೀರಿ—ನಿಮ್ಮಲ್ಲಿ ಸ್ವಲ್ಪ ವಿಚಾರದ ಕಿಡಿ ಇನ್ನೂ ಉಂಟು—ಆದರೆ ಬೂದಿ ಮುಚ್ಚಿಹೋಗಿದೆ. ಅದು ಹಾರಿಹೋಗಿ ಕಿಡಿಯು ಪ್ರಜ್ವಲಿಸುವಂತೆ ಗಾಳಿಹಾಕುವುದು ನನ್ನ ಪ್ರಯತ್ನ. ನನ್ನ ವಿಷಯ ನಾನು ಹೊಗಳಿಕೊಳ್ಳುವುದು ನ್ಯಾಯವಲ್ಲ—ನನ್ನ ನ್ಯೂನತೆಯಿಂದ ನನ್ನಲ್ಲಿ ಹೊಗಳತಕ್ಕದ್ದೇನೂ ಇಲ್ಲವೆನ್ನುವ—ನಾನು ನಿಮಗೆ ಒಂದು ಉಪಾಯ ಹೇಳುತ್ತೇನೆ—ನಾನು ಆಡಿದ ಮಾತಿಗೆ ತಪ್ಪಿ ನಡೆದಲ್ಲಿ ನನ್ನನ್ನು ಹಿಡಿದು ಚೆನ್ನಾಗಿ ತಿಕ್ಕಿಬಿಡಿ—

ಮಿತ್ರ—ಅದರಿಂದೇನು ಪ್ರಯೋಜನ?

ಶೆಟ್ರು—ಆಗ ನನಗೆ ನಾಚಿಕೆ ಆಗುತ್ತದೆ, -ನೀವು ಬಾಲನನ್ನು ಎತ್ತರವಾಡಿ ಅಲ್ಲಾಡಿಸಬಹುದು.—

ಮಿತ್ರ—ಅಷ್ಟು ಧೈರ್ಯದಿಂದ ನೀವು ಮಾತಾಡುವಿರಾ?

ಶೆಟ್ರು—ಸ್ವಲ್ಪ ಧೈರ್ಯಬಂದಿದೆ ಈಗ.

ಮಿತ್ರ—ಕಾರಣ?

ಶೆಟ್ರು—ಕಾರಣವೇನೆಂದರೆ, ಈ ಲೋಕದ 'ರಕ್ತಪಾಳಿ', 'ಗಲ್ಲಾಟೆ', ವಿಧ್ವಂಸನಕಾರ್ಯ, ಒಣಡಂಭ, ಹೆಗ್ಗಳಿಕೆ, ಟೊಳ್ಳು ಪ್ರದರ್ಶನ, 'ಢೋಂಗಿ', 'ಹಿಂಸಾತ್ಮಕ ಕಾರ್ಯ' 'ಥಳಕು ಪಳಕು' ಪುಂಡುಗಾರಿಕೆ ದುರ್ವ್ಯಸನ ಇತ್ಯಾದಿಗಳನ್ನು ಕಿವಿಯಾರೆ ಕೇಳಿ ಕೇಳಿ, ಕಣ್ಣಾರೆ ಕಂಡು ಕಂಡು ಇವುಗಳಿಲ್ಲದ ಅಲ್ಪಾಯುಷ್ಯವನ್ನೂ ದರಿದ್ರ ಪರಿಣಾಮವನ್ನೂ ನೋಡಿ ನೋಡಿ ಈ ತರದ ಅಸ್ಥಿರ ಜೀವನ (Hectic life)ದ ಸಾರ್ಥಕ್ಯದಲ್ಲಿ ವಿಶ್ವಾಸವಿಲ್ಲವಾಗಿದೆ, ಜುಗುಪ್ಸೆ ತೋರಿದೆ, ತಾತ್ಸಾರ ಹುಟ್ಟಿದೆ. ಈ ಜೀವನದ ಹಾದಿಹಿಡಿದವರ ಬಾಳೆಲ್ಲ ಗೋಳು. ಬೆಳೆದರು, ಮುಳಿಗಿದರು, ನರಳಿ ಹೊರಳಿ ಮುಳುಗುತ್ತಾ ಇದ್ದಾರೆ—ಇವರಿಂದ ನಾವು ಒಂದು ಪಾಠ ಕಲಿಯಬೇಡವೇ?

ಮಿತ್ರ—ಸ್ವಾಮಿ, ತಾವು ಪ್ರಸ್ತುತ ವಿಷಯವನ್ನು ಬಿಟ್ಟು ಎಲ್ಲಿಯೋ ಹೋಗಿಬಿಟ್ಟಿರಲ್ಲ?

ಶೆಟ್ರು—ಇಲ್ಲ—ಅಲ್ಲಿಯೇ ಇದ್ದೇನೆ.

ಮಿತ್ರ—ಹಾಗಾದರೆ ನೀವು ಏನು ಹೇಳುವುದು ಈಗ?—

ಶೆಟ್ರು—ಹೇಳುತ್ತೇನೆ ಕೇಳಿ—ನೋಡಿ ನಮ್ಮಲ್ಲಿ ಅನೇಕರಿಗೆ ಸಮಯದ ಬೆಲೆ ಗೊತ್ತಿಲ್ಲ—ಆ ಕಾರಣದಿಂದ ಅನೇಕ ದುರ್ವ್ಯಸನ, ಪುಂಡುಗಾರಿಕೆ, ದುರಾಚಾರಗಳಿಗೆ ತುತ್ತಾಗುತ್ತಾರೆ. ನಿಮ್ಮ ಪಾಡು ಹಾಗಾಗಬಾರದೆಂದಿದ್ದರೆ ನಿಮ್ಮ ಸಮಯವನ್ನು ಹಾಳುಮಾಡಬಾರದು.

ಮಿತ್ರ—ಅದನ್ನು ಉಪಯೋಗಿಸುವುದು ಹ್ಯಾಗೆ?

ಶೆಟ್ರು—ಆಲೋಚನೆ ಮಾಡಿ.

ಮಿತ್ರ—ಎಷ್ಟು ಮಾಡಿದರೂ ಗೊತ್ತಾಗುವುದಿಲ್ಲವಲ್ಲ!

ಶೆಟ್ರು—ನಿಮಗೆ ಹಿರಿಯರು ಮಾಡಿದ್ದು ಏನಾದರೂ ಉಂಟೋ?

ಮಿತ್ರ—ಧಾರಾಳ ಉಂಟು—

ಶೆಟ್ರು—ಧಾರಾಳ ಅಂದರೆ—ಆಳವಲ್ಲಿ ವಿಸ್ತಾರದಲ್ಲಿ ಸಮುದ್ರ ಸಮಾನವಾಗಿದೆಯೋ?

ಮಿತ್ರ—ಹಾಗಿಲ್ಲದಿದ್ದರೂ ನಮಗೆ ಬೇಕಾದಷ್ಟು ಉಂಟೆನ್ನಿ.

ಶೆಟ್ರು—ನಿಮಗೆ ಬೇಕಾದಷ್ಟು ಇದ್ದ ಸಕ್ಕೆ ಧಾರಾಳ ಎಂದಾಯಿತಾ? ಇದೇ ಈ ಒಣ ಹೆಗ್ಗಳಿಕೆ—ಕೆಟ್ಟದ್ದು, ಪ್ರಯೋಜನವಿಲ್ಲ—ಬೇರೆಯವರು ಕಟ್ಟಿಕೊಟ್ಟ ಬುತ್ತಿಯುಂಟೆಂಬ ಜಂಭ ಹೆಚ್ಚು ದೂರದ ತನಕ ಬರಲಾರದು—ನಿಮಗೆ ಬುದ್ಧಿಯಿದ್ದರೆ ಈ ಹೆಗ್ಗಳಿಕೆಯನ್ನು ಇವತ್ತಿಗೇ ಕೃಷ್ಣಾರ್ಪಣ ಮಾಡಿಬಿಡಿ.

ಮಿತ್ರ—ಹೌದು ನಿಮಗೆ 'ದ್ರಾಕ್ಷಿ ಹಣ್ಣು ಹುಳಿಯಾಗಿದೆ'—ನಿಮಗೂ ಸಹಾ ಹಿರಿಯರು ಏನಾದರೂ ಮಾಡಿಡುತ್ತಿದ್ದರೆ ಹೀಗೆ ಹೇಳುತ್ತಿರಲಿಲ್ಲ—

ಶೆಟ್ರು—ನನಗೆ ಏನೂ ಇಲ್ಲ—ಇದನ್ನು ಹೆಮ್ಮೆಯಲ್ಲಿಯೇ ಹೇಳಿಬಿಡುತ್ತೇನೆ—ಏನಾದರೂ ಇರುತ್ತಿದ್ದರೆ ನಾನು ಬಹುಶಃ ಇಷ್ಟರಲ್ಲೇ ಖಾನೇಶುಮಾರಿಗೆ ದಾಖಲು ಆಗಬೇಕಿತ್ತೋ ಏನೋ! ಅದು ಇರಲಿ ಹಾಗೆ—ಪ್ರಸ್ತುತ ವಿಷಯಕ್ಕೆ ಬಾಹ್ಯವಾದುದು—ನೋಡಿ, ದಯಾಳು ನಮ್ಮನ್ನು ಸೃಷ್ಟಿ ಮಾಡಿದ ದೇವರು ಎಲ್ಲರಿಗೂ ಸಮನಾಗಿ ಒಂದು ಸಂಪತ್ತನ್ನು ಕೊಟ್ಟಿದ್ದಾನೆ. ಅದೇನೆಂಬಿರಾ? ಒಂದು ದಿನಕ್ಕೆ 24 ತಾಸು—ಬಡವನಿಗೂ ಒಂದೇ, ಬಲ್ಲಿದನಿಗೂ ಒಂದೇ—ಯಾರು ಇದನ್ನು ಸದುಪಯೋಗ ಮಾಡುತ್ತಾನೋ ಅವನೇ ಇಹಪರಗಳೆರಡನ್ನೂ ಸಾಧಿಸುವ ಧೀರ. ಅದನ್ನು ದುರ್ವ್ಯಯ ಮಾಡುವವನಿಗೆ ಇಲ್ಲಿಯೂ ಅಲ್ಲಿಯೂ ನರಕವೇ.

ಮಿತ್ರ—ಹ್ಹಾ, ಹ್ಹಾ, ಹ್ಹಾ...

ಶೆಟ್ರು—ಏನು ಸ್ವಾಮಿ ನಗಾಡುತ್ತೀರಿ?—

ಮಿತ್ರ—ಅಲ್ಲ ನೀವು ಸಮಯವನ್ನು ಸಂಪತ್ತಿಗೆ ಹೋಲಿಸಿದಿರಿ. ಅದು ಎಲ್ಲರಿಗೂ ಒಂದೇ ರೀತಿಯಲ್ಲಿ ಉಂಟು ಅನ್ನುತ್ತೀರಿ—ಹಾಗಾದರೆ ಈ ಲೋಕದಲ್ಲಿ ಸುಖ ದುಃಖ ಯಾಕೆ?

ಶೆಟ್ರು—ನೋಡಿ, ನಿಮ್ಮ ದೃಷ್ಟಿ, ನಿಮ್ಮ ಜೀವನದ ಧ್ಯೇಯ ಇವು ವಿಸ್ತಾರವಾಗಿಲ್ಲ. ಹಾಗಾಗಲಿಕ್ಕೆ ಬೇಕಾದ ವಿದ್ಯೆ, ಬುದ್ಧಿ, ವಿಚಾರ, ವಿವೇಕ, ಕಲಾ ಪಾಂಡಿತ್ಯ ಇವು ಯಾವುವೂ ನಿಮ್ಮಲ್ಲಿಲ್ಲ. ಹೀಗೆಂದೆನೆಂದು ಬೇಜಾರು ಮಾಡಬೇಡಿ. ಒಬ್ಬನ ಮೇಲೆ ಹಿಂದಿನ ಇಂದಿನ ಜನಜೀವನದ ವಿದ್ಯಮಾನಗಳನ್ನು ಪರೀಕ್ಷಿಸಿ ನೋಡುವ ಶಕ್ತಿ ನಿಮಗಿಲ್ಲ.

ಮಿತ್ರ—ಅಂದರೆ? ನಾನು ಜೀವನವನ್ನು ನೋಡುವುದಿಲ್ಲವೆ? ಅನುದಿನದ ನನ್ನ ಕಸುಬೇ ಅದು.

ಶೆಟ್ರು—ಹೌದು ನೋಡುತ್ತೀರಿ. ಆದರೆ ಅದು ಉಪೇಕ್ಷೆಯ ಕಣ್ಣಿನಿಂದಲ್ಲದೆ ಸಂಶೋಧನೆಯ ದೃಷ್ಟಿಯಿಂದಲ್ಲ. ಅದು ನಿಜವೆಂದು ತೋರಿಸುವುದಕ್ಕಾಗಿ ನಿಮ್ಮನ್ನು ಕೇಳುತ್ತೇನೆ ನಿಮ್ಮ ಸಮಯವು ಹೇಗೆ ಹೋಗುತ್ತದೆ? ನಿಮ್ಮ ಮನೆಯಲ್ಲಿ ಹೆಂಗಸರು ಹೇಗೆ ಹೊತ್ತು ಕಳೆಯುತ್ತಾರೆ? ದಯವಿಟ್ಟು ಹೇಳಿ.

ಮಿತ್ರ—ನಮ್ಮ ಸಮಯವೆಲ್ಲ ಹೇಗೋ ಹೋಗುತ್ತದೆ. ನಮ್ಮ ಹತ್ತಿರ ಕೇಳಿದ ಬಗ್ಗೆ ...

ಸ್ಥಾಪನೆ: ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ, 1926

ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಿಗಳಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೆಟ್ಟಿಗೆಗಳ ಚೀಟು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುವುದು.



CROWN RUBBER STAMP CO.,
Balmat Road, MANGALORE.
Included by the Mysore Govt. Stores Purchase Committee in the list of approved Firms.

THE BOMBAY MILK HOUSE

ಶುದ್ಧ ಹಾಗೂ ಕೆನೆ ತುಂಬಿದ ಹಾಲು ಬೇಕಾದರೆ

ನಮ್ಮ ಹಾಲು ಮಾರಾಟದ ದುಖಾನನ್ನು ಸಂದರ್ಶಿಸಿರಿ.

ಮೊಹರು ಮಾಡಲ್ಪಟ್ಟ ಬಾಟ್ಲಿಗಳಲ್ಲಿ ನಿಮ್ಮ ಮನೆಬಾಗಿಲಿಗೆ ಕಳುಹಿಸಲ್ಪಡುವುದೀ ಹಾಲು.

ಅಂಗಡಿಯು ಇಡೀ ಹಗಲು ಮತ್ತು ರಾತ್ರೆ 11 ಗಂಟೆವರೆಗೆ ತೆರೆದಿರುವುದು.

ಶುದ್ಧ ಕೆನೆ ಹಾಲು ಗ್ಲಾಸಿಗೆ 0—1—3 ದರದಲ್ಲಿ ಮಾರಲ್ಪಡುವುದು.

ಹೆಚ್ಚಿನ ಮಾಹಿತಿಗೆ ಬರೆಯಿರಿ—

ಬೊಂಬೆ ಮಿಲ್ಕ್ ಹೌಸ್

ಶೇರಿ ಹೌಸ್, ಕೆನಾಟ್ ಹೊಟೇಲ್ ಸ್ಟ್ರೀಟ್,

ಪ್ರೋಪ್ರೈಟರ್ . . . . ಬೊಂಬಾಯಿ.

ತಾನಿತ್ತದೆ. ಪ.ತ್ತೆ ಎಂದಾದ್ದು? ನಮ್ಮ ಮನೆಯ ಹೆಂಗಸರು ಶ್ರೀಮಂತರಾಗಿ ಹುಟ್ಟಿ ಕೆಲಸಮಾಡಲಾರರು-ಅದು ನಮ್ಮ 'ಬರಂ' ಗೆ ಕಡಿಮೆ-ಕೆಲಸವೆಲ್ಲಾ ಆಳುಕೂಲಿಗಳಿಂದ ನಡೆಯುತ್ತದೆ.

ಶೆಟ್ಟಿ—ನೀವೇನು ಮಾಡುತ್ತೀರಿ? ಬಹುಶಃ ಎಲ್ಲಿಯೋ ಹೋಗಿ ಬೀಳುವುದು-ಅಲ್ಲದ್ದು ಸಲ್ಲದ್ದು ಮಾತಾಡುವುದು-ನಿಮ್ಮ ಸಮಯ ಹಾಳುಮಾಡುವುದು-ಬೇರೆಯವರ ಸಮಯ ಕೊಲ್ಲುವುದು-ನಿಮ್ಮಂಥವರು ಸಮಾಜಕ್ಕೆ ಭಾರ, ಗೊತ್ತಾಯಿತೇ?—

ಮಿತ್ರ—ತಪ್ಪು ಮಾತಾಡ ಬೇಡಿ, ಗೊತ್ತಾಯಿತೇ?

ಶೆಟ್ಟಿ—ನಮ್ಮ ಸಮಿತ್ರರಿಗೆ ಅಲ್ಲವಾ! ರೇಗಬೇಡಿ--ಕಾಫಿ ಗೀಫಿ ಕರಿಸುವಾ--ದೋಸ್ತಿ, ಮಿ ಜಾಂಡದಲ್ಲಿ ಮಾತಾಡುವಾಗ ಸ್ವಲ್ಪ ಸಲಿಗೆ ಹೆಚ್ಚು ತೆಗೆದುಕೊಳ್ಳುತ್ತೇನೆ, ನಾನು. ಇಂಲಿ ಸತ್ಯ ಹೇಳಿ--ನೀವು ಪೇಟೆಗೆ ಅನಾವಶ್ಯಕವಾಗಿ ಬರುತ್ತೀರಿ--ಹೌದಾ, ಅಲ್ಲವಾ?

ಮಿತ್ರ—ಅನಾವಶ್ಯಕ ಎಂದು ಹೇಳಲಿಕ್ಕೆ ಆಗುವುದಿಲ್ಲ—

ಶೆಟ್ಟಿ—ಹಾಗಾದರೆ, ಯಾಕೆ ಬಂದದ್ದು ಹೇಳಿ?-ನಿಮಗೇನಾದರೂ ಉದ್ಯೋಗವುಂಟೋ ಇಲ್ಲ! ಅದರಿಂದ ಸಂಪಾದನೆ ಉಂಟೋ?-

ಮಿತ್ರ—ಸತ್ಯ ಹೇಳುವದಾದರೆ-ಇಲ್ಲ.

ಶೆಟ್ಟಿ—ನಿಮ್ಮ ವ್ಯಸನದ ದುಂದುಗಾರಿಕೆಗೆ ತೆತ್ತಿಗಿದ್ದೀರೋ ಇಲ್ಲವಾ?

ಮಿತ್ರ—ಆಗಿರಬಹುದು-

ಶೆಟ್ಟಿ—ನಿಮಗೆ ಸಾಲಗೀಲ ಉಂಟೋ, ಇಲ್ಲವಾ?

ಮಿತ್ರ—ಇರಬಹುದು—

ಶೆಟ್ಟಿ—ಹಾಗಾದರೆ ಈ ರೀತಿಯಲ್ಲಿ ನೀವು ಎಷ್ಟರ ತನಕ ಇನ್ನ ಈ ಭಾರದ ಮೋಟಾರ್ ಓಡಿಸಬಹುದು! ದಿನ ಹೋದಂತೆ ಹುರಿಯರು ಕೊಟ್ಟ ಪೆಟ್ರೋಲ್ ಮುಗಿಯುತ್ತಲ್ಲ? ಆ ವೇಳೆ ಏನು ಮಾಡುತ್ತೀರಿ? ಗ್ರಹಿಸಿ, ಇದನ್ನೆಲ್ಲಾ ಚೆನ್ನಾಗಿ ಗ್ರಹಿಸಿ-

ಮಿತ್ರ—ಗ್ರಹಿಸಿದರೆ ತಲೆಯಲ್ಲೆಲ್ಲ ಅಗಳಿ ತಂಬುತ್ತೆ ಅದ್ದರಿಂದ ಆ ವಿಷಯ ಯೋಚಿಸುವುದನ್ನೇ ಬಿಟ್ಟುಬಿಟ್ಟಿದ್ದೇನೆ-

ಶೆಟ್ಟಿ—ನೀವು ಗ್ರಹಿಸುವುದು ಬಿಟ್ಟು ಬಿಟ್ಟರೆ ಲೋಕ (ಜೀವನ)ವು ನಿಮಗೆ ಶಿಕ್ಷಿಸುವ ಕ್ಲಪಿಸುತ್ತದೆಯೇ!

ಮಿತ್ರ—ಹಾಗುಂಟೋ?

ಶೆಟ್ಟಿ—ರಾಯರೇ- ಹಾಗುಂಟೆ— ಕೇಳಿ-ದೇವರು ಕೊಟ್ಟ ಸಮಯವನ್ನು ನಾವು ಚೆನ್ನಾಗಿ ಉಪಯೋಗಿಸದಿದ್ದರೆ, ಅದು ನಮ್ಮನ್ನು ದುರುಪಯೋಗ ಮಾಡುತ್ತದೆ- **ಸಮಯವೇ ಸಂಪತ್ತು—ಸಮಯವೆಂಬ ಕುದುರೆಗೆ ಲಗಾಂ ಹಾಕಲಿಕ್ಕೆ ಗೊತ್ತಿರುವವನೇ ಈ ಲೋಕದಲ್ಲಿ ಜಯಶಾಲಿ** ಸಮಯದಷ್ಟು ಅಮೂಲ್ಯವಾದ ವಸ್ತುವು ಈ ಲೋಕದಲ್ಲಿ ಬೇರೆ ಯಾವುದೂ ಇಲ್ಲ. ನಮ್ಮಲ್ಲಿ ಹೆಂಗಸರೂ ಗಂಡಸರೂ ಸಮಯವನ್ನ ಲಕ್ಷ್ಯವಿಲ್ಲದೆ ಕೊಲ್ಲುತ್ತಾರೆ. ಎಷ್ಟೋ ಗಂಡಸರು ತಾವು ಶ್ರೀಮಂತರೆಂಬ ಹೆಮ್ಮೆಯಿಂದ ಪ್ರತಿಯೊಬ್ಬನ ಜೀವನವನ್ನೂ ರೂಪ್ಯಾ-ಆಣೆ-ಪೈಯ ತಕ್ಕಡಿಯಿಂದ ತೂಗಿ ತಾವು ತಮ್ಮ ಹುದುಕಿ—ತಾವು ಇತರರಿಗಿಂತ ಅನುಕೂಲವಂತರು, ಪುಣ್ಯಾತ್ಮರು ಎಂಬ ಭ್ರಮೆಯು ಅಮಲಿನಲ್ಲಿದ್ದಾರೆ. ಈ ಅಮಲಿನಿಂದ ಸಮಯದ ಬೆಲೆಯೇ ಅವರಿಗೆ ಹೊಳೆಯುವುದಿಲ್ಲ. ಸಂಪತ್ತೆಂದರೆ ಬರೇ ಹಣವೆಂಬ ತಪ್ಪು ಕಲ್ಪನೆಯನ್ನು ಬಿಡಬೇಕು. ಹಾಗೆ ತಿಳಕೊಂಡರೆ ಅದು ನಮಗೆ ಮೋಸ ಮಾಡದೆ ಬಿಡದು. **ವಿದ್ಯೆ, ವಿಚಾರ, ಕಲಾ ಸಾಹಿತ್ಯ—ವಿಜ್ಞಾನ, ಸಂಶೋಧನೆ— ಕಾಯಕಷ್ಟ ನಿಷ್ಠೆ, ಉದ್ಯಮಶೀಲ ಇವೇ ಮೊದಲಾದವು ಸಂಪತ್ತುಗಳೆನಿಸುವುವು.** ವಿನಾವಾದ ಸದುಪಯೋಗವಿಲ್ಲದೆ ಸುಮ್ಮನೆ ಸಮಯವನ್ನು ಕೊಲ್ಲುತ್ತಾ ಶೃಂಗಾರ ದಾಸನ ಹಾಗೆ ಸಿಗರೇಟು ಸೇದುತ್ತಾ ತನ್ನ ರಕ್ತ ಸೌಂದರ್ಯವನ್ನೂ, ದೊಡ್ಡಸ್ತಿಕೆಯನ್ನೂ ಪ್ರದರ್ಶಿಸುವುದಲ್ಲ. **ಕೆಲಸವಿಲ್ಲವೆಂದು ಪೇಟೆ ಸುತ್ತುವುದಕ್ಕಿಂತ ಹಾರೆ ಹೆಗಲ ಮೇಲೇರಿಸಿ ತನ್ನ ತೋಟ ಗದ್ದೆಗಳಲ್ಲಿ ಸುತ್ತು ಬರುವುದು ಮೇಲು.** ಅದರಿಂದ ಸಂತೋಷವೂ ಉಂಟು, ಪ್ರಯೋಜನವೂ ಉಂಟು. ಏನಾದರೊಂದು ಮನಸ್ಸಿಗೊಪ್ಪುವ ಒಂದು ಅಷ್ಟ ಕಸಬಿನಲ್ಲಿ ಕಾಲ ಕಳೆಯುವುದೇ ವಿರಾಮ. ದುಡಿಯಲಿಕ್ಕೊಂದು ಪ್ರಧಾನ ಉದ್ಯೋಗ, ವಿರಾಮಕ್ಕೊಂದು ಚಿತ್ತರಂಜಕ ವೃತ್ತಿ ಇವನ್ನು ನಿಷ್ಠೆಯಿಂದಿಟ್ಟುಕೊಂಡು ಹೊಸ ಹರಿಸದ ಸೋಮಾರಿ ಸಮಯಗಳೆಲ್ಲರ ಮನೆಯೇ ಹಾಳ-ಅಲ್ಲಿ ಒಡಾಯಿ, ಕ್ರಿಮಿನಲ್ ತಪ್ಪದು. ಕೆಲಸಗಳ್ಳರ ರಾಗಿ ಕೂತಿರುವ ಹೆಂಗಸರ ಮನಸ್ಸು ಉಡಿಗೆ ತೊಡಿಗೆ, ಚಿನ್ನಾಭರಣ, ಅತ್ಯಾಧುನಿಕ ಬಿನ್ನಾಣದ ರೀತಿಗಳ ಚಿಂತನೆಯಲ್ಲಿ ಸಿಲುಕಿ ಅವರನ್ನು ದುವ್ಯಸನಗಳಿಗೆಳೆಯುವುದು. ಗಂಡಸರ ಮನಸ್ಸು ಜೂಜು, ಜಗಾಡು, ಹೆಂಡ, ಹುಡುಗಿಗಳ ಕಡೆಗೆ ತಿರುಗುವುದು, ಎಲ್ಲಿ ಉಪಯೋಗ ಮಾಡದಿರುವ ಸಮಯವು ಧಾರಾಳವಿರುವುದೋ ಅಲ್ಲಿ ದಂಪತಿಗಳಿಗೆ ಸುಖವಿಲ್ಲ. ಆ ಮನೆಯು ನಿಷ್ಟಯವಾಗಿಯೂ ಹಾಳು. **ಆದುದರಿಂದ ನೆಂಟಸ್ತಿಕೆ ಮಾಡುವಾಗ ಜೋಡಿಯನ್ನೇ ನೋಡುವುದು ತಪ್ಪು. ಒಬ್ಬ ವ್ಯಕ್ತಿಯ ಬೆಲೆ ಗಟ್ಟುವಾಗ** ಅವನ ತಂದೆಯಿಂದ ಬಂದ ಆಸ್ತಿಯನ್ನೇ ನೋಡುತ್ತಾ ಪೆಟ್ಟುವುದು ತಪ್ಪು—ಹೆಂಗಸಿರಲಿ, ಗಂಡಸಿರಲಿ, ಯಾರಲ್ಲಿ ಸಮಯದ ಜ್ಞಾನವುಂಟೋ ಅವರೇ ದೊಡ್ಡವರ—ಅವರ ದೊಡ್ಡಸ್ತಿಕೆಗೆ ಸರಿಯಾಗಿ ನಾಶವಿಲ್ಲ.

ಮಿತ್ರ—ಹಾಗಾದರೆ ನೀವು ಇನ್ನೂ ದೊಡ್ಡವರು!

ಶೆಟ್ಟಿ—ಚಾಳಿಸಬೇಡಿ, ಇದು ಹೀಗೆ ಪ್ರತ್ಯಕ್ಷ ರಕೊಡುವುದು ಸಭ್ಯತನವಲ್ಲ. ನೋಡಿ, ಸಮಯದ ಜ್ಞಾನವಿದ್ದರೆ ಪ್ರತಿಯೊಬ್ಬನೂ ದೊಡ್ಡವನೆ -ಇದಕ್ಕೆ ಅನುಮಾನವಿಲ್ಲ—ಇಗೊಳ್ಳಿ, ನಾವು ಬೆಳಗ್ಗೆ ಏಳುತ್ತೇವೆ. ಏಳುವಾಗಲೇ ಎಂಟು, ಯಾ ಒಂಭತ್ತು ಗಂಟೆ—ಮುಖ ತೊಳೆಯಲಿಕ್ಕೆ ಒಂದು ಘಂಟೆ-ತಲೆಯನ್ನು 'ಪಾಲಿಶ್' ಮಾಡಲಿಕ್ಕೆ ಒಂದು ಘಂಟೆ—ಆಧುನಿಕ ಅತ್ಯಾಧುನಿಕ ಸ್ಟೈಲ್-ಸುಧಾರಣೆ-ರಾಯರೇ, ಸುಧಾರಣೆ ಅಂದರೆ ಇದೇ ಎಂತ ಕೆಲವರ ಅಭಿಪ್ರಾಯ—ಅದಿರಲಿ, ಆಮೇಲೆ ಕಾಫಿ ಹೋಟೆಲಿನಲ್ಲಿ ಒಂದು ಘಂಟೆ-ಕನಿಷ್ಠ ಪಕ್ಷಕ್ಕೆ-ಮತ್ತೊಂದು ಘಂಟೆ ಕೂತುಕೊಂಡಲ್ಲಿಯೇ ದೊಡ್ಡಸ್ತಿಕೆಯನ್ನು ಸರಿತೋಲಿಸುವುದರಲ್ಲಿ ಹೋಯಿತು—ಅಲ್ಲದಿಸಲ್ಲದ ತರ್ಕಮಾಡುವುದರಲ್ಲಿ ಸ್ವಲ್ಪ ಸಮಯ ಪೆಟ್ಟು-ಆಮೇಲೆ ಇಸ್ಪೀಟ್ ಆಡುವುದರಲ್ಲಿ-ಇನ್ನು ಕೆಲವರಿಗೆ ಮದ್ಯಕುಡಿಯುವುದರಲ್ಲಿ, ವೇಶ್ಯರ ಮನೆಯಲ್ಲಿ-ಆಸ್ಪೆಯೆ! ಈ ವಿಷಯಗಳೆಲ್ಲಾ ದೊಡ್ಡ ಪೌರುಷದ ಕಾರ್ಯಗಳೆಂದು ಪಂಥಪರಾಕ್ರಮಗಳನ್ನು ಮಾತಾಡಿಕೊಳ್ಳುವದರಲ್ಲಿ ಹೀಗೆಲ್ಲ ಸಮಯ ವ್ಯರ್ಥವಾಗಿ ಹೋಗುತ್ತದೆ. ಕೆಲವರಿಗೆ ಸಮಯವನ್ನು ಹ್ಯಾಗೆ ಕಳೆಯುವುದು.ನಮಗೆ ತಿನ್ನುವ ಬಗ್ಗೆ ದುಡಿಯಬೇಕೆಂದಿಲ್ಲ. ಏನು ಮಾಡುವುದು ಎಂಬ ಅಜ್ಞಾನವು ಬಂದ ಬಿಡುತ್ತೆ-ಮನಸ್ಸಿದ್ದವನಿಗೆ ಸಮಯದ ಸದ್ವಿನಿಯೋಗಕ್ಕೆ ಹಲವು ಹಾದಿಗಳುಂಟು. ಅಕ್ಷರಜ್ಞಾನವಿಲ್ಲದ ವ್ಯಕ್ತಿಯು ಓದು ಕಲಿಯಬಹುದು, ಓದುಬಲ್ಲವನು ಮತ್ತೂ ಓದಿ ಜ್ಞಾನದ ನಿಧಿಯಾಗಬಹುದು. ಕಲಾಜ್ಞಾನವನ್ನು ವೃದ್ಧಿಗೊಳಿಸಬಹುದು-ವಿಜ್ಞಾನಿಯಾಗಬಹುದು-ಗ್ರಾಮೋದ್ಧಾರ, ದೀನ ಜನೋದ್ಧಾರ ಕಾರ್ಯಗಳಲ್ಲಿ ಬಿಡುವಿನ ಕಾಲವನ್ನೆಲ್ಲ ಉಪಯೋಗಿಸಬಹುದು. ಅದಕ್ಕಾಗಿ ರಾಯರೇ-ಸಮಯವನ್ನು ಹ್ಯಾಗೆ ಉಪಯೋಗಮಾಡುವುದು ಎಂದು ಕೇಳುವವನ ಹುಚ್ಚನು—ಬೇರೆಯವರು ಕೆಲಸದಲ್ಲಿರುವಾಗ ದಯಾದಾಕ್ಷಿಣ್ಯವಿಲ್ಲದೆ ಅವರ ಕೆಲಸವನ್ನು ಪಟ್ಟಾಂಗಹೊಡೆದು ಹಾಳುಮಾಡುವವನು ಹೇಡಿಯು. ಒಂದು ಕಡೆಯಲ್ಲಿ ಕೆಲಸವು ನಡೆಯುತ್ತದೆಯೆಂದು ಗೊತ್ತಿದ್ದರೆ ನಾವು ಅಲ್ಲಿಗೆ ಸುಮ್ಮನೆ ಹೋಗಬಾರದು. ಒಂದು ವೇಳೆ ಅಲ್ಲಿ ನಮಗೆ ಕೆಲಸವಿದ್ದರೆ ಹೋಗಿ ಅಸಂಗತ ಮಾತುಕತೆಗಳಿಂದ ಹೊತ್ತುಗಳೆಯದೆ ನಮ್ಮ ಕೆಲಸವಾದೊಡನೆ ಹೊರಟುಬಿಡಬೇಕು. ಅದ್ದರಿಂದ ರಾಯರೇ, ನಿಮ್ಮ ಸಮಯವನ್ನು ಒಳ್ಳೆ ರೀತಿಯಲ್ಲಿ ಉಪಯೋಗಿಸಿ, ಅದರಿಂದ ನಿಮಗೆ ಸುಖ-ಬೇರೆಯವರಿಗೆ ಕ್ಷೇಮ. ಕೆಲಸವಿಲ್ಲದೆ ಪೇಟೆಯಲ್ಲಿಗೆ ಹೋಗುವ ಆ 'ಬಿನ್ನದಿಗ' ರೋಗ ನಮ್ಮ ಸಮಾಜದಿಂದ ಹೋಗಬೇಕು. ಹೀಗೆ ಮಾಡುವುದರಿಂದ ಮನೆಯಲ್ಲಿ ಸಿರಿ ಸಂಪತ್ತು ಸುಖಶಾಂತಿ ಇವೆಲ್ಲ ತಳವೂರಿ ನೆಲೆಯಾಗುವವು. ಇಂಥಾ ಮನೆಗಳಿಂದ ತುಂಬಿದ ಸಮಾಜಕ್ಕೆ ತೇಜಸ್ಸಿದೆ, ಓಜಸ್ಸಿದೆ, ವರ್ಚಸ್ಸಿದೆ. ಅದು ಸ್ವಯಂ ಸ್ವತಂತ್ರವಾಗುವುದು. ಸ್ವತಂತ್ರ ರಾಷ್ಟ್ರನಿರ್ಮಾಣಕ್ಕೆ ಶಕ್ತಿ ಮೂರ್ತಿಯಾಗಿ ನಿಲ್ಲುವುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಮಯದ ಅಂತಶ್ಶಕ್ತಿಯನ್ನು ತಿಳಿದು ಸದ್ವಿನಿಯೋಗಗೊಳಿಸಿದರೆ ಕಾಳು ಕೋಳಿನ ಬಡತನ, ಬುದ್ಧಿನ ಬಡತನ, ಬುದ್ಧಿಯ ಬಡತನ ಇವು ನಮ್ಮನ್ನು ಕಾಡುವಂತೆ ಈ ರೀತಿ ಎದ್ದು ನಿಲ್ಲುತ್ತಿತ್ತೇ?

ಮಿತ್ರ—ಇಲ್ಲ ಶೆಟ್ರೇ, ಇಲ್ಲ! ಈಗೆಲ್ಲ ತಿಳಿಯಿತು.

ಶೆಟ್ಟಿ ತಿಳಿದುದನ್ನು ನುಡಿನಲ್ಲೆಲ್ಲ ಹರಡಿರಿ, ಸಮಯಜ್ಞತೆಯ ಪ್ರಚಾರಮಾಡಿರಿ, ನಮಸ್ಕಾರ—

(ಬರುವ ಲೇಖನ: —**'ಜಾಪಿಯಾನು'**)

ಸ್ಥಾಪನೆ] # ತೊದಲ್ನುಡಿ ಗ್ರಂಥಮಾಲೆ [1930

ಸ್ಥಾಪಕರಿಗೆ ಚಂದಾ ರೂ ೫೦; ರಕ್ಷಕರಿಗೆ ರೂ ೨೫; ಆಶ್ರಯದಾತರಿಗೆ ರೂ. ೧೦; ಪೋಷಕರಿಗೆ ರೂ ೫.

ಚಂದಾದಾರರು ಆರಂಭದಲ್ಲಿ ರೂ. ೧ ಪ್ರವೇಶ ಧನವಿತ್ತು ಗ್ರಂಥಮಾಲೆಯ ಎಲ್ಲ ಗ್ರಂಥಗಳನ್ನು ಪಡೆಯುವವರು. ಇವರಿಗೆ ¾ ಬೆಲೆಗೆ ಪುಸ್ತಕಗಳು ಕೊಡಲ್ಪಡುವವು

ಈ ವರೆಗೆ ಪ್ರಕಟವಾದ ಪುಸ್ತಕಗಳು

ಸ್ವತಂತ್ರ ಜೀವನೋಪಾಯ ೦—೩—೬, ನಾಟಕಗಳು ೦—೭—೦, ಸಂಶಯ ಪಿಶಾಚಿ ೦—೬—೦
ಕುಶಲವ ೦—೪—೦, ಮುಂದಿನ ದೇವರು ೦—೩—೦, ಕಾವ್ಯಸಾಮ್ರಾಜ್ಯ ೦—೧೨—೦
ಮಧುವನ ೧—೮—೦, ವ್ಯಭಿಚಾರಿಣಿ ಯಾರು? ೦—೮—೦, ದೇಶಭಕ್ತ ೦—೧೦—೦
ನಂದಾದೀಪ ೦—೮—೦, ಸನ್ಯಾಸಿಯ ಸೋಗಿನಲ್ಲಿ ೦—೮—೦,
ಹೆಂಡ್ತಿ ಗಂಡನಾದರೆ ೦—೪—೦, ಪುರುಷವಧು ೦—೪—೦.

ವಿ. ಪಿ. ರೂ. ೫ಕ್ಕೆ ಈ ಎಲ್ಲಾ ಪುಸ್ತಕಗಳನ್ನು ಫ್ರೀ ಡೆಲಿವರಿಯಾಗಿ ಕೊಡಲಾಗುವುದು.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.
ಮಿಕ್ಕ ವಿಚಾರಗಳಿಗೆ ಬರೆಯಿರಿ.

ಕಾರ್ಯದರ್ಶಿ, **ಕಿರಿಯರ ಪ್ರಪಂಚ, ಉಡುಪಿ.**

Transport & Car Owners

ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - - MANGALORE.

Broadcast

Your Business

By ADVERTISING in

NAVAYUGA

The Leading Kanarese Weekly.

For rates

PLEASE APPLY TO THE

ADVT. MANAGER.

Bombay readers please note.

Sri U K. Ranga C/o Japan Cotton Trading Co. P. B No 247 Bombay, is hereby authorised to enlist Subscribers and canvass Advertisements to '**NAVA YUGA**' in Bombay and its suburbs He is also entitled to collect subscriptions and advt charges as well.

Manager.

WANTED

Organisers in Taluka centres either on salary or commission basis or both. Influential young men need apply. Selected candidates should be prepared to deposit a sum of Rs 100/-. For full particulars apply with an anna stamp to *Box No. 5,*

C/o **NAVAYUGA, UDIPI.**

WANTED

A lady candidate to edit a high class Kannada monthly magazine for ladies to be started shortly. Apply stating minimum salary required with particulars as to qualification, experience etc. to Box No. 11,

C/o **NAVAYUGA**, Udipi

ಫೇನ್ಸಿ ಲಿವರ್ ರಿಸ್ಟ್‌ವಾಚ್

ರೂ. 2—4—0.

ಸಣ್ಣ ಸುಂದರ, ಆಕಾರ ಗಟ್ಟಿಯಾದ ಮೆಟ್ಟಿನ ಮೆಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರಂಟಿ ದುಂಡಾಕೃತಿಯ, ದೀರ್ಘಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಚಿತ್ರದಲ್ಲಿ ತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0-0; ಖಚಿತವಿರುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸರ್ವೋತ್ಕೃಷ್ಟವಾದುದಕ್ಕೆ ರೂ. 10-0-0 ಟಪಾಲು ಖರ್ಚು ಪ್ರತ್ಯೇಕ.

ಎಚ್. ದಾವಿದ್ ಅಂಡ್ ಕೊ.

ಪೊ. ಬಾಕ್ಸ್ 11424 ಕಲ್ಕತ್ತ.

H. David & Co.

Post Box No. 11424. Calcutta

ಎಲ್ಲೆಲ್ಲಿ ಏನೇನು?

ಬೊಂಬಾಯಿಯಲ್ಲಿ ಮದ್ಯಪಾನ ಪ್ರತಿಬಂಧನೆ—ಸಿಂಧಿನಲ್ಲಿ ವರದಕ್ಷಿಣೆ ಪ್ರತಿಬಂಧಕ ಬಿಲ್ಲು—ಚಿದಂಬರದಲ್ಲಿ ದೇವಸ್ಥಾನ ಪ್ರವೇಶ ಬಿಲ್ಲಿಗೆ ಬಂಧಕ.

ಬೊಂಬಾಯಿ ಪ್ರಾಂತ್ಯದಲ್ಲಿ ಮೂರು ವರುಷಗಳೊಳಗೆ ಮದ್ಯಪಾನ ಸಂಪೂರ್ಣ ಪ್ರತಿಬಂಧನೆ. ಆರ್ಥಿಕ ಮಂತ್ರಿ ಲಟ್ಠೆಯವರ ಯೋಜನೆ.

ಅಹಮ್ಮದಾಬಾದಿನಲ್ಲಿ ಕೈಗೊಂಡ ಪ್ರಯೋಗವು ಮುಂದಿನ ವರ್ಷ ಮತ್ತೂ ಎರಡು ತಾಲೂಕುಗಳಲ್ಲಿ ವ್ಯಾಪ್ತಿಯುಳ್ಳದ್ದಾಗಿ ಅದು ಸಂಪೂರ್ಣ ಪ್ರತಿಬಂಧಕ ಕ್ಷೇತ್ರವಾಗುವುದು. ಅಲ್ಲದೆ ಈಗ ಸಾಮಾನ್ಯ ಪ್ರತಿಬಂಧಕವುಳ್ಳ ಬೇರೆ ಮೂರು ಜಿಲ್ಲೆಗಳೂ ಸಂಪೂರ್ಣ ಪರಿತ್ಯಾಗ ಪ್ರದೇಶಗಳಾಗಲಿಕ್ಕಿವೆ. ಬೊಂಬಾಯಿ ನಗರವೂ ಅದರ ಸುತ್ತುವಳೆಯವೂ ಮದ್ಯಪಾನ ನಿಷೇಧ ಕ್ಷೇತ್ರವಾಗಿ ಬರುವ ಆಗೋಸ್ತು ತಾ. ೧ರಿಂದ ಮಾರ್ಪಡುವುದು. ಶೋಲಾಪುರ, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಗಿರಣಿಗಳ ಸಂಬಳ ಬಟವಾಡೆಯ ದಿನ ಶೇಂದಿಯಂಗಡಿಗಳನ್ನು ಮುಚ್ಚುತ್ತಿದ್ದ ಕ್ರಮವು ಊರ್ಜಿತದಲ್ಲಿಡಲಾಗುವುದು. ಈ ಕಾರ್ಯಕ್ರಮದಿಂದ ಶೇಂದಿಯುತ್ಪತ್ತಿಯಲ್ಲಿ ೧೮೦ಲಕ್ಷ ರೂಪಾಯಿ ಸರಕಾರಕ್ಕೆ ಕಡಿಮೆ ಬೀಳುವುದು. ಮಾತ್ರವಲ್ಲದೆ ಪ್ರತಿಬಂಧಕ ಕಾರ್ಯನಿರ್ವಾಹದ ವೆಚ್ಚಕ್ಕೆ ಸುಮಾರು ಹತ್ತು ಹದಿನೈದು ಲಕ್ಷ ರೂಪಾಯಿ ಬೇಕಾಗುವುದು. ಇಂಡಿಯಾ ಸರಕಾರವು ತನ್ನ ವೆಚ್ಚದಲ್ಲಿ ಕಡಿತವನ್ನುಂಟುಮಾಡುವುದರ ಮೇಲೂ ಬೊಂಬಾಯಿ ಸರಕಾರವು ತನ್ನ ವರಮಾನವನ್ನು ಹೆಚ್ಚಿಸಲಿಕ್ಕೆ ಯೋಚಿಸಿರುವ ಕೆಲವು ಸೂಚನೆಗಳಿಗೆ ಸಮ್ಮತಿಯನ್ನೀಯುವುದರಲ್ಲಿಯೂ ಈ ಯೋಜನೆಯು ಸಾಫಲ್ಯವಿದೆಯೆಂದೂ ಅಂತೆಯೇ ಮುಂದುವರಿದರೆ ಮೂರು ವರುಷಗಳಲ್ಲಿ ಬೊಂಬಾಯಿ ಪ್ರಾಂತ್ಯವು ಪರಿಪೂರ್ಣ ಮದ್ಯಪಾನ ಪರಿತ್ಯಾಗದ ನಾಡಾಗುವುದೆಂದೂ ಲಟ್ಠೆಯವರು ತನ್ನ ಬಜೆಟ ಭಾಷಣದಲ್ಲಿ ನುಡಿದರು.

ಬೊಂಬಾಯಿ ಸರಕಾರದ ಬಜೆಟ್ಟಿನ ಇತರ ಪ್ರಶಂಸನೀಯ ಲಕ್ಷಣ.

ಪ್ರಾಂತ್ಯದ ಮೂರು ಡಿವಿಜನುಗಳಲ್ಲಿ ವಾರ್ಧಾ ಯೋಜನೆಯ ಮೂಲತತ್ವಾನುಸಾರವಾಗಿ ಶಾಲೆಗಳನ್ನು ತೆರೆವುದಕ್ಕಾಗಿ ಏಕಾವರ್ತಿಯ ವೆಚ್ಚಕ್ಕೆ ೮೫ ಸಾವಿರ ರೂಪಾಯಿ ಮರುಕೊಳಿಸುವ ವಾರ್ಷಿಕ ವೆಚ್ಚಕ್ಕಾಗಿ ೯೫ ಸಾವಿರ, ಗುಜರಾತು ಮತ್ತು ಕರ್ನಾಟಕದಲ್ಲಿ ಒಂದೊಂದು ಆಯುರ್ವೇದ ಶಾಲೆಗಳ ಕಟ್ಟಡ ಮತ್ತು ಸಲಕರಣೆಗಳ ಬಗ್ಗೆಯೂ ಹೋಮ್ಯೋಪೆಥಿಕ್ ಶಾಲೆಯು ತೆರೆಯುವುದಕ್ಕೂ ಕೂಡ ೨ ಲಕ್ಷ ರೂಪಾಯಿ. ಇವುಗಳಿಗೆ ಬಜೆಟ್ಟಿನಲ್ಲಿ ಅವಕಾಶಗೊಟ್ಟಿದೆ.

ಕಳೆದ ವರ್ಷ ೫೦,೯೬,೦೦೦ ಬಾಟ್ಲಿ ವಿದೇಶೀ ಸಾರಾಯವನ್ನು ಬೊಂಬಾಯಿ ನಗರ ಕುಡಿಯಿತು!

ಅವುಗಳ ಬೆಲೆ ರೂ. ೭೭,೫೩,೦೦೦!

ಅಬ್ಕಾರಿ ಇಲಾಖೆಯವರ ಅಂಕೆ ಸಂಖ್ಯೆಗಳ ಪ್ರಕಾರ ೧೯೩೭–೩೮ನೇ ವರುಷದಲ್ಲಿ ಬೊಂಬಾಯಿ ನಗರ ಮತ್ತು ಅದರ ಹೊರವಳೆಯದಲ್ಲಿ ಕುಡಿಯಲ್ಪಟ್ಟ ವಿದೇಶೀ ಸಾರಾಯಗಳ ಲೆಕ್ಕ ಹೀಗಿವೆ. ವ್ಯಾನ್ ಬಾಟ್ಲಿಗಳು ೧೪,೭೦೦, ಬೆಲೆ ೭೩೭,೦೦೦ ರೂಪಾಯಿ. ವಿಸ್ಕೀ ಮತ್ತು ಜಿನ್ ಬಾಟ್ಲಿಗಳು ೫೨೪,೦೦೦, ಬೆಲೆ ರೂ. ೩,೭೦೦,೦೦೦, ಬೀರ್ ಬಾಟ್ಲಿಗಳು ೪,೪೫೧,೦೦೦ ಬೆಲೆ ರೂ ೩,೩೧೬,೦೦೦ ಜುಮ್ಲಾ ಬಾಟ್ಲಿಗಳು ೫೦,೯೬,೦೦೦! ಬೆಲೆ ೭೭,೫೩,೦೦೦ ರೂಪಾಯಿ!

ವರದಕ್ಷಿಣೆ ಪ್ರತಿಬಂಧಕ ಬಿಲ್ಲು ಸಿಂಧ್ ನ್ಯಾಯ ವಿಧಾಯಕ ಸಭೆಯಲ್ಲಿ

ಸಿಂಧ್ ಪ್ರಾಂತದ ನ್ಯಾಯವಿಧಾಯಕ ಸಭೆಯಲ್ಲಿ ಕಳೆದ ವಾರ ಡಾ| ಹೆಮಾನ್‌ದಾಸರು ಮುಂಡಿಸಿದ ವರದಕ್ಷಿಣೆ ಪ್ರತಿಬಂಧಕ ಬಿಲ್ಲು ಚರ್ಚೆಗೆ ಬಂತು. ಪ್ರೇಕ್ಷಕರ ಗ್ಯಾಲರಿಯಲ್ಲಿ ಸ್ತ್ರೀಯರಿಂದ ಕಿಕ್ಕಿರಿದು ತುಂಬಿತ್ತು. ವರದಕ್ಷಿಣೆಯ ಸಂಪ್ರದಾಯವು ಹಾನಿಕರವೆಂದೂ ಅದರಿಂದ ಹಲವು ಸಂಸಾರಗಳು ದಿವಾಳಿಯಾಗಿಯೂ ಅನೇಕಾನೇಕ ವಿವಾಹ ವಯಸ್ಕ ಕನ್ಯೆಯರು ಅವಿವಾಹಿತರಾಗಿಯೂ ಇರುವುದಕ್ಕೆ ಈ ಅನಿಷ್ಟ ಆಚರಣೆಯೇ ಕಾರಣವೆಂದೂ ಅದನ್ನು ಶಪಿಸುವುದರಲ್ಲಿ ಭಾಷಣಕಾರರಲ್ಲೆಲ್ಲ ಏಕಾಭಿಪ್ರಾಯವಿತ್ತು. ಕುಮಾರಿ ಜೆಠಿಸಿಪಹಿಯಾ ಮಾಲಿನಿಯು ಸ್ತ್ರೀಪಕ್ಷ ಹಿಡಿದು ಹೆಣ್ಣು ಮಕ್ಕಳಿಗೂ ಗಂಡು ಮಕ್ಕಳಂತೆಯೇ ಪಿತ್ರಾರ್ಜಿತದಲ್ಲಿ ಹಕ್ಕು ಸ್ಥಾಪನೆಯಾದಲ್ಲಿ ಈ ವರದಕ್ಷಿಣೆಯ ಕೂಗು ತಾನಾಗಿ ಮೂಲೆ ಪಾಲಾಗುವುದೆಂದು ಸ್ಫೂರ್ತಿವತ್ತಾಗಿ ಭಾಷಣಮಾಡಿದಳು. ಅಂತೂ ಈ ಬಿಲ್ಲಿನ ವಿಷಯ ವಿಶೇಷ ವಿಚಾರಮಾಡಿ ವರದಿಯನ್ನೊಪ್ಪಿಸುವರೆ ಒಂದು ಕಮಿಟಿಯು ನಿಯುಕ್ತವಾಗಿ ಅದಕ್ಕೆ ಬಿಲ್ಲನ್ನು ಒಪ್ಪಿಸಿಕೊಟ್ಟಿದೆ.

ಶ್ರೀ. ಇ. ರಾಘವೇಂದ್ರರಾಯರಿಗೆ ಇಂಡಿಯಾದ ಸೆಕ್ರೆಟರಿ ಆಫ್ ಸ್ಟೇಟರ ಎಡ್ವೈಜರಾಗಿ ನೇಮಕ.

ಇಂಗ್ಲೆಂಡಿನಲ್ಲಿ ಈ ವರೆಗೆ ಇಂಡಿಯಾ ಸೆಕ್ರೆಟರಿಗಳ ಎಡ್ವೈಜರಾಗಿದ್ದ ದಿವಾನ್ ಬಹದ್ದೂರ್ ಸರ್ ರಾಮಸ್ವಾಮಿ ಮುದಲಿಯಾರರು ಎಪ್ರಿಲ್ ಅಂತ್ಯಕ್ಕೆ ಆ ಸ್ಥಾನವನ್ನು ಬಿಟ್ಟು ಇಂಡಿಯಾಕ್ಕೆ ಬಂದು ಗವರ್ನರ ಜನರಲರ ಎಕ್ಸಿಕ್ಯುಟಿವ್ ಕೌನ್ಸಿಲಿನ ಕಾಮರ್ಸ್ ಮೆಂಬರರಾಗುವರು. ಅವರ ಸ್ಥಾನಕ್ಕೆ ಶ್ರೀ. ಇ. ರಾಘವೇಂದ್ರರಾಯರನ್ನು ಇಂಡಿಯಾ ಸೆಕ್ರೆಟರಿ ಮಾರ್ಕ್ವೆಸ್ ಜೆಟ್ಲೆಂಡರು ನೇಮಕಮಾಡಿರುವರು. ರಾಘವೇಂದ್ರರಾಯರ ೧೯೩೬ರಲ್ಲಿ ಕೆಲಕಾಲ ಮಧ್ಯಪ್ರಾಂತದ ಆಕ್ಟಿಂಗ್ ಗವರ್ನರಾಗಿದ್ದರು. ಕಾಂಗ್ರೆಸ್ಸು ಮಂತ್ರಿತ್ವ ಸ್ವೀಕಾರಮಾಡುವ ಪೂರ್ವದಲ್ಲಿ ಮಧ್ಯಪ್ರಾಂತದ ತಾತ್ಕಾಲಿಕ ಮಂಡಲದ ನಿರ್ವಾಹಕರಾಗಿದ್ದರು.

ಸೇಲಮಿನಲ್ಲಿ ಡಾ| ಮೂಂಜೆಯವರ ಭಾಷಣ. ಜನಾಂಗದ ಸ್ವಾತಂತ್ರ್ಯ ರಕ್ಷಣೆಗೆ ಸೇನಾಬಲ ಅವಶ್ಯ.

ಹಿಂದೂ ಮಹಾಸಭೆಯ ಮುಂದಾಳುಗಳಾದ ಡಾ| ಬಿ. ಎಸ್. ಮೂಂಜೆಯವರಿಗೆ ಸೇಲಮಿನ ಮಹಾಜನರು ಮಾನಪತ್ರವನ್ನರ್ಪಿಸಿದ ಸಂದರ್ಭದಲ್ಲಿ ಅವರು ಭಾಷಣ ಮಾಡುತ್ತ ಇಂದು ಭಾರತೀಯರು ಹೋರಾಡುತ್ತಿರುವ ಸ್ವಾತಂತ್ರ್ಯ ಸ್ಥಾಪನೆಯ ಸ್ಥಿರತೆಗೆ ಭಾರತೀಯ ಸೇನಾಬಲವು ಆವಶ್ಯವಿದೆಯೆಂಬುದನ್ನು ಮನಗಾಣಿಸಿ ಭೋನ್ಸ್ಲೆ ಮಿಲಿಟರಿ ಶಾಲೆಯಲ್ಲಿ ಈ ದೃಷ್ಟಿಯಿಂದ ಹಿಂದೀಯರಿಗೆ ಕೊಡುತ್ತಿರುವ ಸೈನಿಕ ಶಿಕ್ಷಣದ ಕ್ರಮವನ್ನು ವಿವರಿಸಿದರು.

ಫೆಡರಲ್ ಕೋರ್ಟಿನ ನ್ಯಾಯಾಧೀಶ ಪಟ್ಟಕ್ಕೆ

ಮದ್ರಾಸಿನ ಹೈಕೋರ್ಟ ಜಡ್ಜರಲ್ಲೊಬ್ಬರಾದ ಜಸ್ಟೀಸ್ ಶ್ರೀನಿವಾಸ ವರದಾಚಾರ್ಯರು ನಿಯುಕ್ತರಾದರು. ಈ ವರೆಗೆ ಫೆಡರಲ್ ಕೋರ್ಟಿನ ಜಡ್ಜರಾಗಿದ್ದ ಜಸ್ಟೀಸ್ ಎಮ್. ಆರ್. ಜಯಕಾರ್‌ರವರು ಪ್ರಿವೀ ಕೌನ್ಸಿಲಿನ ಜ್ಯುಡಿಶಿಯಲ್ ಕಮಿಟಿಯ ಮೆಂಬರರಾಗಿ ನೇಮಕಗೊಂಡಿದ್ದಾರೆ.

ಚಿದಂಬರದಲ್ಲಿ 'ಮುರಜಪ' ದೇವಸ್ಥಾನ ಪ್ರವೇಶ ಬಿಲ್ಲಿಗೆ ಪ್ರತಿಬಂಧಕಾರ್ಥವಾಗಿ

ಮಲಬಾರು ದೇವಸ್ಥಾನ ಸಂರಕ್ಷಣಾ ಸಮಿತಿ, ಕಲ್ಲಿಕೋಟೆ, ಇದರ ನಿರ್ಣಯಾನುಸಾರವಾಗಿ ಚಿದಂಬರದ ಶ್ರೀ ನಟರಾಜ ದೇವಸ್ಥಾನದ ದೀಕ್ಷಿದಾರರು ದಕ್ಷಿಣ ಆರ್ಕಾಟಿನ ಬ್ರಾಹ್ಮಣ ಮಹಾಸಭೆಯ ಸಹಕಾರದಿಂದ 'ಮುರಜಪ' ಮಹಾಕಾರ್ಯವನ್ನು ಹರಿಜನ ದೇವಸ್ಥಾನ ಪ್ರವೇಶಬಿಲ್ಲಿನ ಪ್ರತಿಬಂಧಕಾರ್ಥವಾಗಿ ತೊಡಗಿದ್ದಾರೆ. ಈ 'ಮುರಜಪ'ವು ೪೧ ದಿನಗಳ ಪರ್ಯಂತ ನಡೆವುದು. ಇದನ್ನು ಸಮರ್ಥಿಸಿ ಕಲ್ಲಿಕೋಟೆಯ ಜಾಮೋರಿನರು ಶುಭಸಂದೇಶವನ್ನು 'ಮುರಜಪ' ಕಾರ್ಯಕಾರಿ ಮಂಡಳಿಗೆ ಕಳುಹಿಸಿರುವರಂತೆ.

ಮಂಡ್ಯದಲ್ಲಿ ಸ್ಕೌಟುದಳಕ್ಕೆ ದಾನ

ಮಂಡ್ಯದ ಸ್ಕೌಟ್ ಸಂಘದ ಕಟ್ಟೋಣಕ್ಕಾಗಿ ಅಲ್ಲಿಯ ಸಾಹುಕಾರರುಗಳಾದ ಶ್ರೀ ಸಾತನೂರು ಕರಿಯಪ್ಪನವರು ರೂ. ೨೦೦ ಮತ್ತು ಶ್ರೀ ಚನ್ನಯ್ಯನವರು ರೂ. ೧೫೦ ದಾನವಾಗಿಕೊಟ್ಟಿರುತ್ತಾರೆ.

Established] [1906
THE
UNITED INDIA
LIFE ASSURANCE COMPANY, LTD.,
HEAD OFFICE—MADRAS.
Trustee:—THE OFFICIAL TRUSTEE OF MADRAS.

Policies in force	Rs.	486 Lakhs
Annual income Exceeds	Rs.	28 Lakhs
Total Assets Exceed	Rs.	100 Lakhs
Total claims paid over	Rs.	36 Lakhs.

The oldest and largest Life Assurance Company of South India, having 31 years of record service.
A POLICY IN THE UNITED INDIA COMBINES PERFECT SAFETY WITH PRUDENCE.
BRANCHES ALL OVER INDIA.
WANTED AGENTS
For particulars, please apply to-
THE BRANCH MANAGER, The United India, Life Assurance Company Ltd. BLOCK No. 2, Felix Pai Bazaar, BRANCH, MANGALORE S. K.
OR
K. Keshava Shenoy, M. A. Organiser, Shantiniketan, PENTLENDPET, MANGALORE

KANTI
Toilet Soap

ಕಟ್ಟಕಡೆಗೆ
ಲಕ್ಷಾಂತರ ಜನರು ಮನಗಂಡಿರುವ
ವಿಷಯವಿದು. ಶೀತಲ ಉಲ್ಲಾಸಕರ
ಮತ್ತು
ಸಂಭ್ರಮದ ಸ್ನಾನಕ್ಕೆ
ಸ್ವಸ್ತಿಕ
'ಕಾಂತಿ'
ಟ್ಯೊಲೆಟ್ ಸೋಪಿನ ಹೊರತು
ಇನ್ನೊಂದು
ಉತ್ತಮವಿರಲಾರದು.
ಅಲ್ಪ ಬೆಲೆಗೆ
ಅತಿ ದೊಡ್ಡ ತುಂಡು
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.
ಒಮ್ಮೆ ನೀವು ಸ್ವಸ್ತಿಕ ಕಾಂತಿ ಟ್ಯೊಲೆಟ್ ಸೋಪನ್ನು
ಉಪಯೋಗಿಸಿದರೆ ಆ ಮೇಲೆ ಇತರ ಸೋಪನ್ನು ಮೆಚ್ಚಲಾರಿರಿ.

ಈ ವಾರದ ಫಲಿತಾಂಶವೇನು?

(ತಾ 23—2—39ರಿಂದ 2—3—39ರ ವರೆಗಿನ ರಾಶಿಫಲ)

[ಜ್ಯೋತಿಷವು ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ ನ.]

ಕರ್ಕಾಟಕ, ಸಿಂಹ, ಕುಂಭ, ಮೀನ ಈ ರಾಶಿಗಳವರ ಗ್ರಹಸ್ಥಿತಿಯು ಬಹಳ ಹಾನಿಕಾರಿಯಾಗಿರುವುದು—ವೃಶ್ಚಿಕ, ಧನು, ಮಕರರಾಶಿಗಳವರ ಗ್ರಹಮಾನವು ಕನಿಷ್ಟತರಗತಿಯಲ್ಲಿರುವುದು—ಮೇಷ, ಮಿಥುನ, ತುಲಾ ರಾಶಿಗಳವರ ಭವಿಷ್ಯವು ಸುಖದುಃಗಳಿಂದ ಮಿಶ್ರೀಭೂತವಾಗಿರುವುದು—ವೃಷಭ, ಕನ್ಯಾರಾಶಿಗಳವರ ಭವಿಷ್ಯವು ಸಾಮಾನ್ಯ ಉತ್ತಮ ರೀತಿಯನ್ನೈದಿಗುವುದು—ಮಕರರಾಶಿಯವರ ಭವಿತವ್ಯವು ಅತ್ಯುತ್ತಮ ರೀತಿಯಲ್ಲಿರುವುದು:

ಮೇಷರಾಶಿ—

ಪ್ರತಿಯೊಂದು ಕಾರ್ಯಾರಂಭ ಮಾಡುವಾಗಲೂ ನರನು ಅದರ ಪೂರ್ವಾಪರಗಳ ವಿಮರ್ಶೆಯನ್ನು ಚೆನ್ನಾಗಿ ಮಾಡತಕ್ಕದ್ದು ಆತನ ಆದ್ಯ ಕರ್ತವ್ಯ. ಅದಕ್ಕಾಗಿಯೇ ಆರ್ಯರು 'ಸಹಸಾ ವಿದಧೀತ ನ ಕ್ರಿಯಾಂ' ಅಂದರೆ ಕಾರ್ಯವನ್ನು ಥಟ್ಟನೆ ಮುಂದರಿಸಬಾರದು. ಹಾಗೆ ಮಾಡತಕ್ಕದ್ದು ಅವಿವೇಕಿಗಳ ಸ್ವಭಾವ. ಇದರಿಂದ ಅನೇಕ ಅನರ್ಥಗಳು ಸಂಭವಿಸುವವು ಎಂದಿರುವರು. ಪ್ರಕೃತದಲ್ಲಿ ನೀವು ಸ್ವಲ್ಪ ದುಡುಕು ಸ್ವಭಾವದವರಾಗಿ ಕಾಣುವಿರಿ. ಈ ಕಾರಣದಿಂದಾಗಿ ವ್ಯರ್ಥ ಧನವ್ಯಯವಾಗುವುದು. ಮಾತ್ರವಲ್ಲದೆ ಶೋಕದಾಯಕಗಳಾದ ಕಾರ್ಯಗಳೂ ಸಂಭವಿಸಲಿವೆ. ಆದರೆ ಎಲ್ಲಾ ಕಾರ್ಯಗಳು ಹೀಗಾಗುತ್ತವೆಂದಲ್ಲ. ಅನೇಕ ಕಾರ್ಯಗಳಲ್ಲಿ ಜಯಶೀಲರಾಗಿ ತಕ್ಕ ಸ್ಥಾನಮಾನಗಳನ್ನೂ ಧನವನ್ನೂ ಗಳಿಸುವಿರಿ. ಬೇಕಾದ ಜನ ಬೆಂಬಲವೂ ನಿಮಗಿರುವುದು. ಆದಾವುದೋ ದುರ್ದೈವದಿಂದ ಜನತೆಯೊಡನೆ ನಿಷ್ಕಾರಣವಾಗಿ ಕಲಹವಾಗುವುದು. ಅಂತೂ ತಾ, 24, 25 ಮತ್ತು 28, 1 ಈ ದಿನಗಳು ನಿಮಗೆ ಶುಭದಾಯಕಗಳೇ ಆಗಿವೆ.

ವೃಷಭರಾಶಿ—

ಈ ವಾರವು ನಿಮಗೆ ಹಲವು ವಿಧಗಳಲ್ಲಿ ಉತ್ತಮವಾಗಿರುವುದಾದರೂ ಆರೋಗ್ಯ ವಿಷಯದಲ್ಲಿ ಮತ್ತು ಕುಟುಂಬ ವಿಚಾರದಲ್ಲಿ ಅಷ್ಟೊಂದು ಚೆನ್ನಾಗಿಲ್ಲವು. ಸದ್ಯದಲ್ಲಿ ನಿಮಗಾರೂ ಶತ್ರುಗಳಿಲ್ಲದಿರುವುದರಿಂದ ನಿಮ್ಮ ಸರ್ವ ಕಾರ್ಯಗಳೂ ಯೋಗ್ಯ ಫಲವನ್ನು ಕೊಡುವವು. ಪರಕೀಯಳಾದ ಸ್ತ್ರೀಯಳಿಂದ ಧನಪ್ರಾಪ್ತಿಯ ಯೋಗವು ಕಂಡುಬರುವುದು. ಆರ್ಥಿಕ ದೃಷ್ಟಿಯಿಂದ ವಿಚಾರಮಾಡಿದಲ್ಲಿ ಯಾವ ಭಾಗದಲ್ಲೂ ಕೊರತೆಯಿಲ್ಲವು. ಋಣಬಾಧೆ ನನ್ನು ಪರಿಹಾರ ಮಾಡತಕ್ಕ ಯೋಗ್ಯತೆಯು ನಿಮ್ಮಲ್ಲುಂಟಾಗುವುದು. ಸ್ವಾಭಾವಿಕವಾಗಿ ಸ್ವಲ್ಪ ತೀಕ್ಷ್ಣ ಗುಣವು ನಿಮ್ಮಲ್ಲಿ ತೋರಿ ಬಂದರೂ ಸದ್ಯದಲ್ಲಿ ಅದರಿಂದ ಹಾನಿಯಾಗದು. ಧರ್ಮಕ್ರಿಯೆಗಳು ಕ್ರಮವಾಗಿ ಜರಗುವವು. ಸ್ತ್ರೀಸಂಬಂಧ ಸುಖಕ್ಕೆ ಹಾನಿಯಾಗದು. ತಾ 24, 25, 28, 1 ಈ ದಿನಗಳಲ್ಲಿ ಸ್ವಲ್ಪ ಅಧಿಕವಾಗಿ ಧನವ್ಯಯವೂ ಕೈಗೊಂಡ ಕಾರ್ಯಗಳಿಗೆ ಒಂದೆರಡು ವಿಘ್ನಗಳೂ ತಲೆದೋರಲಿವೆ.

ಮಿಥುನರಾಶಿ—

ಮಿಶ್ರಫಲಪ್ರದವಾಗಿದ್ದ ಈ ವಾರದಲ್ಲಿ ಒಂದೊಂದು ದಿನಗಳಲ್ಲಿ ಅನಿಷ್ಟಗಳೇ ಹೆಚ್ಚಾಗಿ ಕಾಣಬಹುದು. ಧನವಿಷಯಕವಾದ ಕಲಹದಿಂದ ನೀವು ಹೆಚ್ಚಿನ ವ್ಯಸನಾಕ್ರಾಂತರಾಗಿರುವಿರಲ್ಲದೆ ನಿಮ್ಮ ಮನಸ್ಸಂತೂ ಅತ್ಯಂತ ಚಂಚಲವಾಗಿರುವುದು. ಉದ್ಯೋಗದಲ್ಲಿ ಯೋಗ್ಯವಾದ ಫಲಪ್ರಾಪ್ತಿಯಿರುವುದಾದರೂ ವಿಘ್ನಗಳು ಆಗಾಗ ಬಾಧಿಸುತ್ತವೆ. ಚತುರಸ್ವಭಾವಿಗಳಾದ ನಿಮಗೆ ಜನರೇನೋ ಒಲಿದಿರುವರು. ಸಾಂಸಾರಿಕ ವಿಷಯಗಳಲ್ಲಿ ಪರಿಪೂರ್ಣತೆಯಿರುವುದರಿಂದ ತದ್ವಿಷಯದಲ್ಲಿ ನೀವು ನಿಶ್ಚಿಂತರಾಗಿರಬಹುದು. ವಿದ್ಯಾಭಿಲಾಷಿಗಳಾದ ಜನರಿಗೆ ಇದು ಉತ್ತಮ ಸಮಯವಲ್ಲವು. ಕೆಲವೊಮ್ಮೆ ನಿಷ್ಕಾರಣವಾಗಿ ಅಪವಾದಕ್ಕೆ ಗುರಿಯಾಗುವಿರಿ. ಆದರೂ ತಾ, 23, 24, 25 ಮತ್ತು 28, 1 ಈ ದಿನಗಳು ಬಹಳ ಉತ್ತಮವಿರುವುದರಿಂದ ಮಿತ್ರ ಸಮಾಗಮ, ಇಷ್ಟ ಸಿದ್ಧಿ, ನಾನಾ ವಿಧ ಲಾಭಗಳುಂಟಾಗುವವು.

ಕರ್ಕಾಟಕರಾಶಿ—

ಪ್ರಾಚೀನರು ತಮ್ಮ ಅನುಭವದ ಸಾರವನ್ನು ಗಾದೆಯ ರೂಪದಲ್ಲಿ ಸಾರಿರುವರು. ಆದ್ದರಿಂದಲೇ "ಗಾದೆಯು ವೇದಕ್ಕೆ ಸಮಾನ"ವೆಂಬ ಪ್ರತೀತಿ ಬಂದಿದೆ. ಅವರು ಸ್ತ್ರೀಯರ ವಿಷಯದಲ್ಲಿ 'ಒಲಿದರೆ ನಾರಿ ಮುನಿದರೆ ಮಾರಿ' ಎಂದಿರುವರಷ್ಟೆ. ಅದು ನಿಜವೆಂಬು ಈ ವಾರದಲ್ಲಿ ನೀವು ನಿರ್ಧರಿಸುವಿರಿ ನಿಮ್ಮ ಪರಿಸ್ಥಿತಿಯಿಂದ. ಜನಾಂಗದ ಜೀವಾಳವೆಂತಿರ ಪ ಸ್ತ್ರೀಯರು ಮುನಿದು ಬಿದ್ದರೆ ನರನು ಜೀವಿಸುವುದು ಬಹಳ ಕಷ್ಟಕ್ಕೆ ಬಂದೀತು. ತತ್ಕಾಲದಲ್ಲಿ ಪರರ ಉತ್ಕರ್ಷೆಯನ್ನು ನಿಮಗೆ ಸಹಿಸಲಾಗದುದರಿಂದ ವಿರೋಧಭಾವವು ಹುಟ್ಟುವುದು. ನಿಮ್ಮ ಧರ್ಮವು ಹ್ರಾಸವಾದಂತೆ ಧನವೂ ಕೂಡ ನಾಶವಾಗುವುದು. ಅನಾರೋಗ್ಯವು ಪೂರ್ತಿ ನಿಮ್ಮನ್ನು ವರಿಸುವುದು. ಆದರೂ ವಾರದ ನಾಲ್ಕು ದಿನಗಳು ತಕ್ಕ ಮಟ್ಟಿಗೆ ಚೆನ್ನಾಗಿರುವುದರಿಂದ ಧನವೃದ್ಧಿ, ಇಷ್ಟಸಿದ್ಧಿ, ಕಾರ್ಯಜಯ ಇತ್ಯಾದಿ ಶುಭಫಲಗಳು ಸಿಗಲಿವೆ.

ಸಿಂಹರಾಶಿ—

ಗುರ್ವನುಗ್ರಹವು ನಿಮಗೆ ಪರಿಪೂರ್ಣವಾಗಿರುವುದರಿಂದ ಇತರ ದುಃಸ್ಥಗ್ರಹರಿಂದ ಸಂಭವಿಸತಕ್ಕ ಹಲವಾರು ದೋಷಗಳು ನಿಮ್ಮ ಸಮೀಪ ಬರಲಾರವು. ನಿಮ್ಮ ಪರಾಕ್ರಮಶೌರ್ಯವು ಶತ್ರುಗಳನ್ನೂ ಕೂಡ ಭ್ರಮೆಗೊಳಿಸಲಿರುವುದು. ಈ ಕಾರಣದಿಂದಾಗಿ ಪೂಜಾಗೌರವಾದಿಗಳನ್ನು ಹೊಂದುವಿರಿ. ಪ್ರಯಾಣ ವಿಷಯಕ್ಕೆ ಈ ವಾರವು ಯಾವ ಭಾಗದಲ್ಲಿಯೂ ತೃಪ್ತಿಕರವಿಲ್ಲವು. ಉತ್ತಮವರ್ಣದವರಲ್ಲಿಯೂ ಮಿತ್ರಜಾತಿಯವರಲ್ಲೂ ಕಲಹವಾಗುವ ಪ್ರಸಂಗ ಬರುವುದು. ಕೆಲವು ಕಾರ್ಯಗಳಲ್ಲಿ ಅಪಜಯವುಂಟಾಗುವುದು. ಆರೋಗ್ಯವು ಕೆಡುವುದು. ಆಯಕ್ಕಿಂತ ವ್ಯಯವು ಅಧಿಕವಾಗುವುದು. ವಾರಾದಿಯ ಎರಡು ದಿನಗಳು ಮತ್ತು ಅಂತ್ಯದ ದಿನ ಹೀಗೆ 3 ದಿನಗಳು ಬಹಳ ಅನಿಷ್ಟಕಾರಿಗಳಾಗಿರುವುದರಿಂದ ರಾಜಭಯ ಆಯಾಸ, ಉದರರೋಗ, ಧನವ್ಯಯ ಇತ್ಯಾದಿಗಳು ಸಂಭವಿಸಲಿವೆ.

ಕನ್ಯಾರಾಶಿ—

"ವಿಘ್ನೈಃ ಪುನಃ ಪುನರಪಿ ಪ್ರತಿಹನ್ಯಮಾನಾ ಪ್ರಾರಬ್ಧಮುತ್ತಮಜನಾ ನ ಪರಿತ್ಯಜಂತಿ" ಅಮೃತಪಾನೇಚ್ಛುಗಳಾದ ಸುರರು ಸಮುದ್ರಮಥನಕಾಲದಲ್ಲಿ ಮಧ್ಯೆ ಭಯಂಕರ ವಿಘ್ನಗಳು ಬಂದರೂ ತಮ್ಮ ಇಷ್ಟಪೂರ್ತಿಯಾಗದೆ ಸ್ವೀಕೃತ ಕಾರ್ಯವನ್ನು ಕೈಬಿಡಲಿಲ್ಲವೋ ಅಂತೆಯೇ ಆರಂಭಿಸಿದ ಕಾರ್ಯಕ್ಕೆ ಮೇಲಿಂದ ಮೇಲೆ ವಿಘ್ನಗಳು ಬಂದರೂ ಉತ್ತಮಜಾತಿಯ ನರರು ಕಾರ್ಯವನ್ನು ಕೊನೆಗಾಣಿಸದೆ ಎಂದೂ ಬಿಡರು. ಇದೇ ರೀತಿಯಲ್ಲಿ ನಿಮಗೂ ಈ ಹಿಂದೆ ಬಹಳ ಆಪತ್ತುಗಳೂ ಸಂಭವಿಸಿವೆ. ಆದರೂ ಅದನ್ನು ನೀವು ಸಹಿಸಿಕೊಂಡು ಕಾರ್ಯವಿಮುಖರಾಗದೆ ಇದ್ದಲ್ಲಿ ಅದರ ಪೂರ್ಣ ಫಲವನ್ನು ಈಗ ಹೊಂದುವಿರಿ. ಸಕಲ ಭಾಗಗಳಲ್ಲೂ ನಿಮ್ಮ ಭವಿಷ್ಯವು ಸುಧಾರಿಸಿರುವುದು. ಆದರೂ ಅದಾವುದೋ ಒಂದು ಭೀತಿಯು ನಿಮ್ಮನ್ನು ಬಹಳ ಸಮಯದಿಂದ ಹಿಡಿದಿದ್ದು ಕೊನೆಗೆ ಕೂಡ ತೊಲಗಲು ಬಿಡುವುದಿಲ್ಲವು. ತಾ. 24ರಿಂದ 27ರ ತನಕ ಯಾವ ಕಾರ್ಯದಲ್ಲೂ ಮುಂದಾಗಬೇಡಿರಿ.

ತುಲಾರಾಶಿ—

ನಿಮ್ಮಲ್ಲಿರತಕ್ಕ ಉತ್ಸಾಹಶಕ್ತಿಯು ಕುಂದಿ ಹೋಗಿರುವುದರಿಂದಲೂ ಮನದಲ್ಲಿ ಭೀತಿಯು ಮೂಡಿರುವುದರಿಂದಲೂ ಯಾವ ಕಾರ್ಯವನ್ನು ಮಾಡಲೂ ನೀವು ಮುಂಚಿನಂತೆ ಧೈರ್ಯದಿಂದ ಹೋಗಲಾರಿರಿ. ರಾಜಕೀಯ ಭಾಗಗಳಲ್ಲಿ ಕೋರ್ಟುವಗೈರೆ ವ್ಯವಹರಣೆಗಳಲ್ಲಿ ಅನಿಷ್ಟಸಂಭವಿಸಲಿದೆ. ದೇಹಾರೋಗ್ಯವೂ ಸ್ವಾಭಾವಿಕವಾಗಿ ಕೆಟ್ಟು ಹೋಗುವುದು. ಕಾರಣಾಂತರದಿಂದ ಗೃಹದಲ್ಲಿನ ಜನರಲ್ಲಿ ಪರಸ್ಪರ ಭೇದಬುದ್ಧಿಯು ಹೆಚ್ಚಿ ಒಡಕುಗಳು ಸಂಭವಿಸುವ ಪ್ರಸಕ್ತಿ ಕಾಣುತ್ತಲಿದೆ. ಆದರೂ ನಿಮಗೆ ಪುರಜನರ, ಬಂಧುಜನರ ಬೆಂಬಲವಿರುವುದರಿಂದ ಅದನ್ನು ನೀವು ಗಣನೆಗೆ ತರಲಾರಿರಿ. ತತ್ಕಾಲದಲ್ಲಿ ಶತ್ರುಗಳನ್ನು ಇದಿರಿಸುವ ಶಕ್ತಿ ನಿಮಗಿರುವುದು. ವ್ಯಾಪಾರಾದಿ ಉದ್ಯಮಗಳಲ್ಲಿ ಉತ್ತಮರೀತಿಯ ಫಲವು ದೊರೆಯುವುದು. ಮಿತ್ರರನೇಕರ ಪರಿಚಯವಾಗುವುದು ಮಾತ್ರವಲ್ಲ ಸಕಲ ವಿಷಯಗಳಲ್ಲಿಯೂ ನಿಮಗವರು ಸಂಪೂರ್ಣ ಸಹಾಯಮಾಡುವರು. ತಾ, 23-24-25 ಈ ದಿನಗಳಲ್ಲಿ ಇಷ್ಟಾರ್ಥವು ಪ್ರಾಯಃ ಕೈಗೂಡಿ ಗೊಳ್ಳುವುದು.

ವೃಶ್ಚಿಕರಾಶಿ—

ನಿಮ್ಮ ಭಾಗಕ್ಕೆ ಈ ವಾರದಲ್ಲಿ ಹೆಚ್ಚಿನ ಹಾನಿಯುಂಟಾಗಲಿದೆ. ಕಾರಣ ಹಲವು ಗ್ರಹರು ನಿಮಗೆ ವಿಪರೀತವಾಗಿರುವರು. ಅಧಿಕಾರವನ್ನು ಹೊಂದಿದ ತಕ್ಕವರಿಗೆ ಸೇವಕಜನರೊಡನೆ ಕಲಹವಾಗಿ ಮಾನಚ್ಯುತಿಯ ಪ್ರಸಂಗವೊದಗುವುದು. ಅವರ ಇಚ್ಛಾವಿರೋಧವಾಗಿ ಕಾರ್ಯವು ಕೊನೆಗಾಣುವುದು. ವಿಪಕ್ಷೀಯರು ಹಲವು ರೀತಿಯಿಂದ ಪೀಡಿಸುವರು. ಮಾತ್ರವಲ್ಲ ಬಂಧುಗಳೆನಿಸಿಕೊಂಡಿರತಕ್ಕ ಆಪ್ತರೇ ಕೆಲವು ವಿಷಯಗಳಲ್ಲಿ ವಿಪರೀತವಾಗಿ ವರ್ತಿಸಿರುವುದು ಕಾರ್ಯಹಾನಿಯಾದ ನಂತರವೇ ನಿಮ್ಮ ಗೋಚರಕ್ಕೆ ಬರುವುದು. ಇದರಿಂದಾಗತಕ್ಕ ಮನೋವ್ಯಥೆಯು ಇಷ್ಟೆಂದು ಹೇಳಲು ಸಾಧ್ಯವಿಲ್ಲ. ಅನಿರೀಕ್ಷಿತಗಳಾದ ಆಪತ್ತುಗಳು ಅಕಸ್ಮಾತ್ ಬಂದೊದಗುವವು. ಆದರೂ ತಾ, 24ರಿಂದ 27ವರೆಗೆ ನಿಮಗೆ ದೈವವು ಅನುಕೂಲವಿರುವುದರಿಂದ ಸ್ತ್ರೀಸಹಿತ ದ್ರವ್ಯಲಾಭ, ವಾಹನಾದಿಗಳಲ್ಲಿ ಯಾನ, ಸುಖ, ಮಾನಾದಿಗಳು ಕೆಲವಂಶ ದೊರೆಯಲಿರುವವು.

ಧನುರಾಶಿ—

ಚಿಕ್ಕಂದಿನಿಂದಲೂ ಮನುಷ್ಯರಿಗೆ ನಡತೆ (Conduct)ಯು ಉತ್ತಮವಾಗಿರಬೇಕು. ಸತ್ಕಾರದವರೂ ಕೂಡ ಈ ಭಾಗದಲ್ಲಿ ಹೆಚ್ಚಿನ ದೃಷ್ಟಿಯನ್ನಿಟ್ಟಿರುವರು. ನಡತೆಯು ಉತ್ತಮರೀತಿಯಲ್ಲಿದ್ದರೆ ಅವನಲ್ಲಿರತಕ್ಕ ಸಾಮಾನ್ಯ ದೋಷಗಳನ್ನು ಯಾರೂ ಪರಿಗಣಿಸುವುದಿಲ್ಲ. ಪ್ರಕೃತದಲ್ಲಿ ನಿಮ್ಮ ನಡತೆಯಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸವುಂಟಾಗಿರುವುದರಿಂದ ಅಧಿಕಾರಿಗಳ ಪ್ರಕೋಪಕ್ಕೆ ಕಾರಣರಾಗುವಿರಿ. ಜನತೆಯಲ್ಲಿ ಶತ್ರುಭಾವವು ಹೆಚ್ಚುವುದು. ಇದರಿಂದ ನಿಮ್ಮ ಮನಸ್ಸು ಗಾಳಿಗೆ ಸಿಲುಕಿದ ದೀಪದಂತೆ ಬಹಳ ಚಂಚಲವಾಗುವುದು. ಸ್ತ್ರೀಜನರ ಕೋಪಕ್ಕೆ ಕಾರಣರಾಗುವಿರಿ. ಖರ್ಚಿನ ಭಾಗಗಳು ದಿನೇ ದಿನೇ ಹೆಚ್ಚತೊಡಗುವವು. ಆದರೂ ಈ ಖರ್ಚಿಗೆ ಬೇಕಾಗುವಷ್ಟು ತತ್ಕಾಲದಲ್ಲಿ ನೀವು ದುಡಿಯುವುದರಿಂದ ಹಣದ ಅಡಚಣೆಗೆ ಸಿಲುಕಲಾರಿರಿ. ಸಾಂಸಾರಿಕ ತಾಪತ್ರಯಗಳು ನಿವೃತ್ತಿಯಾಗುವುದರಿಂದ ಆ ಭಾಗದಲ್ಲಿ ಚಿಂತಿಸಬೇಕಾಗಿಲ್ಲವು. ತಾ 26-27-28, 1 ಈ ದಿನಗಳು ಇದ್ದುದರಲ್ಲಿ ಉತ್ತಮವಿವೆ.

ಮಕರರಾಶಿ—

"ಸ್ತ್ರೀಣಾಂ, ಚ ಚಿತ್ತಂ ಪುರುಷಸ್ಯ ಭಾಗ್ಯಂ ದೇವೋ ನ ಜಾನಾತಿ ಕುತೋ ಮನುಷ್ಯಃ" ಎಂದು ಒಂದೆಡೆ ಹೇಳಿರುವರು. ಸ್ತ್ರೀಯರ ಮನಸ್ಸನ್ನೂ ಪುರುಷನ ಭಾಗ್ಯವನ್ನೂ ಕೂಡ ದೇವತೆಗಳಿಂದಲೂ ತಿಳಿಯಲುಸಾಧ್ಯವು. ಅಂದಮೇಲೆ ಮನುಷ್ಯರಿಗೆ ಅದನ್ನು ಊಹಿಸಲು ಕೂಡ ಶಕ್ತಿಸಾಲದು. ಇಂದು ಸಕಲ ವೈಭವಗಳಿಂದ ಕೂಡಿದ ಚಕ್ರವರ್ತಿಯು ನಾಳೆನ ದಿನ ಕಾರಾಗೃಹವಾಸಿಯಾದ ಕೈದಿಯಾಗುವನು. ಈ ದಿನ ಕಾರಾಗೃಹದಲ್ಲಿ ನರಳುತ್ತಿರುವ ಅಪರಾಧಿಯು ನಾಳೆ ಚಕ್ರವರ್ತಿಯೆನಿಸಿಕೊಳ್ಳಬಲ್ಲನು. ಇದಕ್ಕೆ ಮುಖ್ಯವಾಗಿ ದೈವಬಲವೇ ಕಾರಣವಾಗಿರುವುದು. ಸದ್ಯ ನಿಮಗೆ ದೈವದೊಲುಮೆಯು ಚೆನ್ನಾಗಿರುವುದರಿಂದ ನೀವು ಹೇಳಿದ್ದೇ ಮಾತು ಮಾಡಿದ್ದೇ ಕಾರ್ಯವೆಂಬ ಸ್ಥಿತಿಗೆ ಬರುವುದು. ಆತ್ಮವಿಶ್ವಾಸವಿಲ್ಲದಿರುವ ಮನಸ್ಸನ್ನು ಬಿಗಿಹಿಡಿದು ಕಾರ್ಯಪ್ರವೃತ್ತರಾದಲ್ಲಿ ನಿಮಗೆ ಯಾವ ಭಾಗದಲ್ಲೂ ಪರಾಜಯವಾಗದು. ನಿಷ್ಕಾರಣವಾಗಿ ಹೆದರಿ ಅದರಿಂದ ಮಾನಕ್ಕೆ ಹಾನಿಯಿದೆ. ತಾ. 24ರಿಂದ 27ರ ವರೆಗೆ ಸ್ವಲ್ಪ ಜಾಗ್ರತೆಯಿಂದ ವರ್ತಿಸಿರಿ. ಆಪ್ತರಲ್ಲಿ ಅವಿಶ್ವಾಸ, ಕಾಯ ಹಾನಿಗಳು ಒದಗಲಿವೆ.

ಕುಂಭರಾಶಿ—

ಇಂದಿನ ದಿನವು ಹೇಗೂ ಕಳೆಯಿತು, ನಾಳಿನ ವಿಚಾರವೇನು ಎಂಬ ಪರಿಸ್ಥಿತಿಯು ನಿಮಗೆ ಬಂದಿರುವುದು. ಯಾವ ಕಾರ್ಯವನ್ನು ಮಾಡಲೂ ಶಕ್ತಿಯಿಲ್ಲ ಸಾಧ್ಯವಿಲ್ಲವೆಂದು ಸುಮ್ಮನೆ ಕುಳಿತರೆ ನಾಳಿನ ದಿನ ಬಹಳ ಭಯಂಕರವಾಗಿ ಪರಿಣಮಿಸೀತು. ಉದರಭರಣೆಯ ವಿಷಯವು ಬಹಳ ವಿಚಾರಕ್ಕೆ ಬಂದಿದೆ. ಆಪತ್ಕಾಲಕ್ಕೆಂದು ನಿರ್ಧರಿಸಿಟ್ಟ ಧನಧಾನ್ಯಗಳು ಅದೆಂದೋ ಮಾಯವಾಗಿರುವವು. 'ತಾನು ಸಾಯಬೇಕು ಸ್ವರ್ಗ ಪಡೆಯಬೇಕು' ಎಂದಂತೆ ಕೆಲಸಮಾಡಿಯೇ ತೀರಬೇಕು. ನಿಮ್ಮ ನಿಷ್ಠುರವಾಣಿಯು ಸರ್ವರಿಂದಲೂ ನಿಮ್ಮನ್ನು ಬೇರ್ಪಡಿಸುವುದು. ಜನತೆಯಲ್ಲಿ ನಿಮಗೆ ಸಿಗತಕ್ಕ ಮನ್ನಣೆಯೆಂದರೆ ದುಷ್ಟವಾಕ್ಯಗಳ ತಿರಸ್ಕಾರಗಳೇ ಸರಿ. ವಿಚಾರಶೂನ್ಯತೆಯಿಂದಾಗಿ ಇದ್ದ ಭಾಗ್ಯವೂ ನಾಶವಾಗುವುದು. ಇವಕ್ಕೆಲ್ಲಕ್ಕೆ ಸರಿಯಾಗಿ ಅನಾರೋಗ್ಯವೂ ಪ್ರಾಪ್ತಿಯಾಗಿರುವುದು. ಅಂತೂ ದಿನಹರಣವು ಬಹಳ ಕಷ್ಟದ ವಿಚಾರ. ತಾ. 24, 25 ಈ ದಿನಗಳಲ್ಲಿ ಹೆಚ್ಚು ಕಷ್ಟ ಕಾಣದು.

ಮೀನರಾಶಿ—

ಸಾವಿರಾರು ರೂಪಾಯಿಗಳನ್ನು ಕೂಡಿಸುವುದಕ್ಕಿಂತಲೂ ಒಂದೆರಡು ಒಳ್ಳೇ ಮಿತ್ರರನ್ನು ಸಂಗ್ರಹಿಸಿದರೆ ಕಾಲದಲ್ಲಿ ಒದಗುವರು. ಒಳ್ಳೆಯ ಮಿತ್ರರಿಲ್ಲದವನ ಬಾಳು ಹಾಳು ಎಂದರೂ ಅತಿಶಯೋಕ್ತಿಯಾಗದು. ಬಾಲ್ಯಸ್ನೇಹವು ಮರಣ ಪರ್ಯಂತವೂ ಕೆಡದು. ಇಂತಹ ಮಿತ್ರರಿಗೇನೇ ಆಪ್ತ ಮಿತ್ರರೆನ್ನುವರು. ನಿಮಗೆ ಈಗ ಸಕಾಲದಲ್ಲಿ ಒದಗತಕ್ಕವರೆಂದರೆ ಇವರೇ. ಇಲ್ಲದಲ್ಲಿ ನಿಮ್ಮ ಅವಸ್ಥೆಯು ಯಾವ ರೀತಿಗೆ ಬರುತ್ತಿತ್ತೆಂದು ಹೇಳಲು ಸಾಧ್ಯವಿಲ್ಲ. ಶತ್ರುಗಳ ಪೀಡೆಯನ್ನು ತಡೆಯಲಾರದೆ ಈ ಊರೇ ನಮಗೆ ಬೇಡ ಎಂದು ನಿಮಗೆ ತೋರಬಹುದು. ಆತ್ಮೀಯರೆಂಬವರಾರೂ ಸದ್ಯದಲ್ಲಿ ನಿಮಗಿಲ್ಲವು. ವ್ಯರ್ಥ ದೇಶಾಟನೆ ಪ್ರಸಕ್ತಿ ಬರುವದು. ಸಾಲ ಮಾಡಿಯಾದರೂ ಖರ್ಚನ್ನು ಮಾಡುವಿರಿ. ಶರೀರ ಪ್ರಕೃತಿಯು ಕೆಟ್ಟು ಸಶಕ್ತಿಯು ತಲೆದೋರುವುದು. ಅರ್ತತ್ರಾಣಪರಾಯಣನನ್ನು ಭಕ್ತಿ ವಿಶ್ವಾಸದಿಂದರ್ಚಿಸಿದಲ್ಲಿ ತಾ. 23, 26, 27 ಈ ದಿನಗಳ ಮಟ್ಟಿಗೆ ಸ್ವಲ್ಪ ಸುಖಸಿಗಲಿರುವುದು.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತುಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶೇಖರ ಕಸ್ತೂರೀ ಮಾತ್ರೆ" ಮತ್ತು "ಶೇಖರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

ವನಿತಾವಿಭಾಗ

ಶಿಕ್ಷಿತ ತರುಣಿಯರ ದುರ್ದೆಶೆ

ಸಹೋದರಿಯರಿಂದ ಬೇರ್ಪಡಿಸಿದುದು ನನ್ನಿಂದಿನ ಶಿಕ್ಷಣ. ಪುರುಷರನ್ನು ಸ್ತ್ರೀಯರ ಮೇಲಿರುವ ಪೂಜ್ಯಭಾವನೆಯಿಂದ ದೂರವಾಗುವಂತೆ ಮಾಡಿದುದೂ ಅದುವೆ ಶಿಕ್ಷಣ.... ನಾಟ್ಯರಂಗದಂತಿರುವ ಜೀವನದಲ್ಲಿ ಸ್ತ್ರೀಯರೆಲ್ಲ ಒಂದೆ! ವೇಶ್ಯೆಯರಿಗೂ ಇತರ ಸ್ತ್ರೀಯರಿಗೂ ಅಭ್ಯಂತರವೆಲ್ಲಿ? ಎಲ್ಲರೂ ಸುಖಭೋಗಗಳಿಗಾಗಿ ನಾಟ್ಯಮಂದಿರದಲ್ಲಿರುವವರು!

(ವಿಶ್ವವಿದ್ಯಾಲಯದ ಬಿ. ಎ. (Hons) ಡಿಗ್ರಿ ಗಳಿಸಿದ ಯುವತಿಯೋರ್ವಳು, ಶಿಕ್ಷಿತ ತರುಣಿಯರ ದುರ್ದೆಶೆಯನ್ನು ವರ್ಣಿಸುತ್ತಾ ಒಂದು ವೃತ್ತಪತ್ರಿಕೆಯಲ್ಲಿ ಹೀಗೆ ಬರೆದಿರುವಳು.)

ನಾನು ವಿದ್ಯಾವಂತಳು! ನನ್ನ ಸಂಸ್ಕೃತಿಯ ವಿಷಯ ತಿಳಿಸುವುದು ನನಗೆ ಲಜ್ಜಾಸ್ಪದವಾಗಿದೆ. ನನ್ನೀ ವಿದ್ಯೆಯಿಂದ ನಾನು ನನ್ನ ಮಾತೃಭಾಷೆಯಲ್ಲಿ ಬರೆಯಲಾರೆನು. ನನ್ನ ಗ್ರಾಮಸ್ಥರ ಮುಂದೆ ಸ್ವಭಾಷೆಯಲ್ಲಿ ಮಾತಾಡಲಾರೆ. ಅವರ ಕೆಲಸ, ಅವರ ರೀತಿ—ಇವೆಲ್ಲಾ ನನಗೆ ಜಿಗುಪ್ಸೆಯನ್ನುಂಟುಮಾಡುತ್ತವೆ. ಹೌದು! ನನಗೆ ಹಳ್ಳಿಗರ ಉದ್ಧಾರವಾಗಬೇಕೆಂಬ ಆಸೆಯಿದೆ—ಈ ಕಾರ್ಯದಲ್ಲಿ ನನ್ನ ಸಹಾನುಭೂತಿಯಿದೆ. ನಾನು ಗ್ರಾಮವಾಸಕ್ಕೆ ಇಚ್ಛಿಸುವೆನು ಆದರೆ, ಕಾರ್ಯತಃ ಹಳ್ಳಿಗಳ ಕುರಿತಾಗಿ ನಾನೇನೂ ಮಾಡಲಾರದವಳಾಗಿರುವೆನು ನಾನು ಬರೆಯಬಲ್ಲೆನು ಮಾತ್ರ

ಮೇಲಾಗಿ ನನ್ನ ಕಷ್ಟವೆಂದರೆ, ನಾನು ನನ್ನ ಸ್ತ್ರೀಸಮಾಜದ ಸಂಪರ್ಕದಿಂದ ಸಂಪೂರ್ಣ ಬೇರ್ಪಟ್ಟಿರುವುದಾಗಿದೆ. ವಿಶ್ವವಿದ್ಯಾಲಯದಿಂದ ತೇರ್ಗಡೆ ಹೊಂದಿದ ಮಹಿಳೆಯರು ಪತ್ನಿಯರಾಗಿ, ಗುಮಾಸ್ತೆಯರಾಗಿ, ಇಲ್ಲವೆ ಟೈಪಿಸ್ಟರಾಗಿ—ಎಲ್ಲಾದರೂ ನೌಕರಿ ಗಳಿಸುವ ಮೊದಲು—ಅವರು ವಾಸಿಸಲು ಅನುಕೂಲವಾದ ನಿವಾಸಗೃಹವಿರುತ್ತಿದ್ದರೆ, ನಾನು ಅಲ್ಲಿ ಸೇರಿ ಸುಖಪಡುತ್ತಿದ್ದೆ.

ಆದರೆ ಅಂತಹದ್ದೇನೂ ಇರಲಾರದು. ಹೀಗಾಗಿ ನಾನು ನೀರಿನಿಂದ ಹೊರತೆಗೆದ ಮೀನಿನಂತೆ ನನ್ನ ಜೀವನದ ಸಂಕಟಕ್ಕೆ ಒಳಪಟ್ಟಿರುವೆನು. ನನ್ನ ಇಂಗ್ಲೀಷು ಬಾರದ ಸಹೋದರಿಯರಿಗೂ, ನನಗೂ ಸಮಾನ ವಿಚಾರವಾವುದೂ ನನಗೆ ತೋರುವುದಿಲ್ಲ. ನನ್ನ ಶಿಕ್ಷಣದ ರೀತಿಯಲ್ಲಿ ತರಬೇತಿ ಹೊಂದದ, ಇಂಗ್ಲೀಷ್ ಬಲ್ಲ ಮಹಿಳೆಯರು ಕೂಡಾ ನನಗೆ ಹೆಚ್ಚಿನ ಪ್ರಯೋಜನಕ್ಕೆ ಬೀಳಲಾರರು. ಅವರು ನನಗ ಅಪರಿಚಿತರಂತೆಯೇ ಸರಿ.

ಇನ್ನು ಶಿಕ್ಷಿತ ತರುಣರ ವಿಚಾರ. ಇವರ ಮಿತ್ರತ್ವವು ಸುಖದಾಯಕವೇ? ನಿರುದ್ಯೋಗ ಸಂಸ್ಥೆಗೆ ಸೇರಿದ ಯೂನಿವರ್ಸಿಟಿ ಪದವೀಧರರಿಗೆ ಮಿತ್ರತ್ವ ಮಾಡಿಕೊಳ್ಳುವುದು ಹಿತವಾಗಿ ಕಂಡೀತು. ಆದರೆ ಅವರು ಉದ್ಯೋಗವಿಲ್ಲದ, ಕನಸಿನ ರಾಜ್ಯದಲ್ಲಿ ಭ್ರಮಿಸುವ, ಅತೃಪ್ತರ ಸಾಲಿನವರು. ಅವರೊಂದಿಗೆ ನಾನು ಬಹು ಸಲುಗೆಯಿಂದಿರಬಲ್ಲೆನೆಂಬುದು ನಿಜ. ನಮ್ಮ ಶಿಕ್ಷಣದಲ್ಲಿ ಸಾಮ್ಯವಿದೆ. ನನ್ನಂತೆಯೇ ಅವರೂ ಸಾಮಾನ್ಯ ಸಂಕಟಕ್ಕೀಡಾದವರು. ಹೀಗಾಗಿ ನಾನು ಗಂಡಸರ ಸಂಪರ್ಕದಲ್ಲಿರಲು ಅರ್ಹಳು!

ಸ್ತ್ರೀಪುರುಷರು ಬೆರತಿರುವುದೆಂದರ? ಕೆಲವು ವೇಳೆ ಸಂತೋಷಕರವಾಗಿರಬಹುದು; ಆದರೆ, ಅಲ್ಲಿ ಸ್ವಾಭಾವಿಕವಾದ ಮನೋವಿಕಾರಕ್ಕೆಡೆಯಾಗಿ ದುಷ್ಪರಿಣಾಮಕ್ಕೀಡಾಗುವ ಅಪಾಯ ಹೆಚ್ಚು. ಈ ಪದವೀಧರನಾಗಿ ನಿರುದ್ಯೋಗಿಯಾಗಿರುವ ಈ ಶಿಕ್ಷಿತ ತರುಣರೆಂದರ ಕೈಯಲ್ಲಿ ಕಾಸಿಲ್ಲದವರು, ಹೊಟೇಲಿನ ಸಾಲದ ಬಾಧೆ ಇನ್ನೊಂದು ಕಡೆ. ರೈಲು ಬಂಡಿಯ ಅಡಿಗಾದರೂ ಬೀಳೋಣವೆಂದು ಒಮ್ಮೊಮ್ಮೆ ನಿರಾಶೆಯನ್ನು ಹೊಂದುವವರು—ಇಂಥವರನ್ನು ಪ್ರೇಮ ಮಾಡುವುದೆಂದರ? ಇಂಥಾ ತರುಣನು ಆಕರ್ಷಿತನಾಗಿ ಒಂದು ವೇಳೆ ಕೈಕೊಡಬಲ್ಲ ಮುಂದೆ ಜೀವನದ ಪಾಡೇನು?

ನನಗಿಂಥಾ ಶಿಕ್ಷಣ ದೊರೆಯಿತು. ಇದರಿಂದ ನನಗೆ ವಿಪರೀತ ಚಿಂತೆಗೆ ಕಾರಣವಾಗಿದೆ. ಹೀಗಾಗಿ ನನಗೆ ನನ್ನ ಜೀವನದ ಆಸಕ್ತಿಯೇ ಇಲ್ಲದಂತಾಗಿದೆ. ಇದರಿಂದಾಗಿ ನನಗೀ ಜೀವನವು ಒಂದು ಸೆರೆಮನೆಯಂತಿದೆ. ಸ್ತ್ರೀ ಸಮಾಜದಿಂದ ನಾನು ಬೇರ್ಪಡಬೇಕಾಗಿರುವುದು. ನನ್ನ ಜೀವನದ ವಿಚಾರ ಅಭಿಪ್ರಾಯಗಳು ಪುರುಷರಂತೆ. ಆದರೆ, ಪುರುಷರೊಂದಿಗೆ ಸಂಪರ್ಕ ಬೆಳಸಿಕೊಂಡಿರಲು ಸಾಧ್ಯವಿಲ್ಲ. ಅವನ ಕಾಮಾತುರತೆಯಿಂದ ಹಾನಿಯಾಗಬಹುದೆಂಬುದು ನನಗೆ ತಿಳಿದಿದೆ. ಅಯ್ಯೋ! ಎಂಥಾ ದುಃಸ್ಥಿತಿಯಿದು. ನನ್ನ ಬಡ ತಂದೆಯು ಹಣ ವೆಚ್ಚ ಮಾಡಿ, ನನ್ನನ್ನೀ ಸ್ಥಿತಿಗೆ ತಂದು ಮುಟ್ಟಿಸಿದನೇ?

ಗ್ರಾಮೋದ್ಧಾರ ಕಾರ್ಯದಲ್ಲಿ ಸ್ತ್ರೀಯರು ಭಾಗವಹಿಸಬೇಕೆಂಬ ಗಾಂಧಿಯವರ ವಿಚಾರ ನನಗೆ ಸರಿಯೆಂದು ತೋರುತ್ತದೆ. ಆದರೆ ಹೇಳುವುದು ಸುಲಭ, ಮಾಡುವುದು ಕಷ್ಟ. ಹಳ್ಳಿಯ ಭಾಷೆ ಬಾರದಿರುವುದೊಂದು ಕಷ್ಟ. ಒಂದು ವೇಳೆ ಅದನ್ನಾದರೂ ಸರಿಪಡಿಸಿಕೊಳ್ಳಬಹುದೆಂದರೆ, ಹಳ್ಳಿಗರ ಸಾಮಾಜಿಕ ನೀತಿಯು ಅಡಚಣೆ ಮುಂದೆ ಬರುತ್ತದೆ. ನಾನೀಗ ಪ್ರಾಯಕ್ಕೆ

ನಿಮ್ಮ ಕರ್ತವ್ಯ

ಬಡವನಿರಲಿ, ಶ್ರೀಮಂತನಿರಲಿ, ವಿವಾಹಿತನಾಗಿರಲಿ, ಅವಿವಾಹಿತನಾಗಿರಲಿ,
ಆತನನ್ನು ಆಶ್ರಯಿಸಿಕೊಂಡಿರುವವರ್‍ಯಾರಾದರೂ ಇದ್ದೇ ಇರುವರು.
ತನಗೆಲ್ಲಾದರೂ ಮರಣವುಂಟಾದರೆ ಅವರ ಬಾಳು ನಿರಾತಂಕವಾಗಿ ಸಾಗುವಂತೆ ವ್ಯವಸ್ಥೆ ಮಾಡಿಡುವುದು

ಪ್ರತಿಯೊಬ್ಬ ಯೌವನಸ್ಥನ ಕರ್ತವ್ಯ.

ಈ ಕರ್ತವ್ಯವನ್ನು ನೆರವೇರಿಸುವುದರಲ್ಲಿ 'ಓರಿಯಂಟಲ್' ನಿಮಗೆ ನೆರವಾಗಿ ಬರುವುದು.

ಏಕೆಂದರೆ ಕಳೆದ 64 ವರುಷಗಳಿಂದಲೂ ಸಾವಿರಾರು ಸಂಸಾರಗಳ ಸಂಪಾದನೆಯ ಕೈಗಳನ್ನು ಮೃತ್ಯುವು ಮುಕ್ಕಿತೆಂದಾಗ ಆ ಸಂಸಾರಗಳ ಅಂತಹ ಆಪತ್ಕಾಲದಲ್ಲಿ ಸಹಾಯವನ್ನಿತ್ತುದು

ಓರಿಯಂಟಲ್ ಪೊಲಿಸಿಗಳೇ!

ಶೀಘ್ರದಲ್ಲಾಗಲೀ ವಿಳಂಬವಾಗಿಯಾಗಲೀ ಪ್ರತಿಯೊಬ್ಬನೂ ವಿಮೆ ಮಾಡಲಿಕ್ಕೆ ಅನರ್ಹನಾಗುವ ಅವಸ್ಥೆಗೆ ಬರುತ್ತಾನೆ.
ಆದುದರಿಂದ ನಿಮ್ಮ

ಕರ್ತವ್ಯವನ್ನು ನೆರವೇರಿಸುವುದರಲ್ಲಿ ತಡಮಾಡಬೇಡಿರಿ.

'ಓರಿಯಂಟಲ್'ನಲ್ಲಿ ನಿಮ್ಮ ಜೀವವಿಮೆ ಮಾಡಿ ನಿಮ್ಮ ಆಶ್ರಿತರ ಭವಿಷ್ಯವನ್ನು ನಿಶ್ಚಿತಗೊಳಿಸಿರಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತ ವರ್ಷ 1874] ಭಾರತದಲ್ಲೆಲ್ಲಾ ನಮ್ಮ ಶಾಖೆಗಳೂ ಮತ್ತು ಪ್ರತಿನಿಧಿಗಳೂ ಇದ್ದಾರೆ. [ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿ ಬಗ್ಗೆ ಇವರಿಗೆ ಬರೆದು ತಿಳಿದುಕೊಳ್ಳಿ.

ಬ್ರಾಂಚ್ ಸೆಕ್ರೆಟರಿ,	ಅ	ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,	ಥ	ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.	ವಾ	ಮೈನ್ ರೋಡ್, ಮಡಿಕೇರಿ, (ಕೊಡಗು)

Oriental Government Security Life Assurance Co., Ltd.

ಬಂದ ಹುಡುಗಿ, ಮದುವೆಯಾಗಿಲ್ಲ. ಸಂಪ್ರದಾಯವಾದಿಗಳಾದ ಹಳ್ಳಿಗರು ನನ್ನನ್ನು ನೋಡಿದೊಡನೆ, ನನ್ನ ಕುರಿತು ತಪ್ಪು ಅಭಿಪ್ರಾಯ ಮಾಡಿಕೊಳ್ಳದಿರಲಾರರು. ವಿದ್ಯಾವಂತ ಸಹೋದರನೂ ನನ್ನಂಥ ಯುವತಿಯರ ಕುರಿತು ತಪ್ಪು ಭಾವನೆ ಮಾಡುವನೆಂದಾದ ಮೇಲೆ ಅಂಧಶ್ರದ್ಧೆಯು ಸಂಸ್ಕೃತರಲ್ಲದ, ಹಳ್ಳಿಗರು ಮದುವೆಯಾಗದೆ ಬೆಳೆದ ಕಲಿತ ಹುಡುಗಿಯರೆಂದರೆ-ಇದ್ದದ್ದನ್ನು ಇದ್ದ ಹಾಗೆ ಹೇಳುವುದೆಂದರೆ, ಸಾದರಗಿತ್ತಿಯರೆನ್ನುವುದರಲ್ಲಿ ವಿಶೇಷವಿಲ್ಲ.

ಪ್ರಾಚೀನ ಭಾರತೀಯ ಸಂಸ್ಕೃತಿಗೂ ಇಂದಿನ ಪರಿಸ್ಥಿತಿಗೂ ಎಷ್ಟು ತಾರತಮ್ಯವಿದೆ! ಹಿಂದಿನ ದಿನಗಳಲ್ಲಿ ಭಾರತೀಯರು ಸ್ತ್ರೀಯರನ್ನು ತಮ್ಮ ತಾಯಿಂದಿರಂತೆ, ತಮ್ಮ ಸೋದರಿಯರಂತೆ ಗೌರವಿಸುತ್ತಿದ್ದರು. ಆದರೆ ಇಂದಿನ ಕಾಲದ ಸ್ತ್ರೀಯರೆಂದರೆ ತಮ್ಮ ಕಾಮತೃಪ್ತಿಗಾಗಿರುವವರೆಂದು ಈಗಿನವರ ನಂಬಿಕೆಯೆಂದು ತೋರುವುದು.

ನನ್ನ ಸಹೋದರಿಯರಿಂದ ಬೇರ್ಪಡಿಸಿದುದು ನನ್ನಿಂದಿನ ಶಿಕ್ಷಣ; ಪುರುಷರನ್ನು ಸ್ತ್ರೀಯರ ಮೇಲಿರುವ ಪೂಜ್ಯ ಭಾವನೆಯಿಂದ ದೂರವಾಗುವಂತೆ ಮಾಡಿದುದು ಆಧುನಿಕ ಶಿಕ್ಷಣ. ಈಗಣ ಶಿಕ್ಷಿತ ತರುಣರ ಮನೋವೃತ್ತಿಯೇ ಬೇರೆ. ನಾಟ್ಯರಂಗದಂತಿರುವ ಜೀವನದಲ್ಲಿ ಸ್ತ್ರೀಯರೆಲ್ಲ ಒಂದೇ, ವೇಶ್ಯೆಗೂ ಇತರರಿಗೂ ಅಭ್ಯಂತರವೆಲ್ಲಿ? ಎಲ್ಲರೂ ಸುಖಭೋಗಕ್ಕಾಗಿ ಈ ನಾಟ್ಯ ಮಂದಿರದ ಮೇಲಿರುವರು ಎಂದು ಅವರ ನೆನಸು.

ಈಗ ಸ್ತ್ರೀಯರ ಸಮ್ಮೇಳನಗಳು ಅಲ್ಲಲ್ಲಿ ನೆಯೆಂದು ನನಗೆ ಗೊತ್ತಿದೆ. ಅಲ್ಲಿ ಅವರು ಸಭೆ ಸೇರುವರು, ಮಾತಾಡುವರು, ಠರಾವು ಮಂಜೂರು ಮಾಡುವರು. ಆಯಿತು. ಯಾವ ಸ್ತ್ರೀ ಸಂಸ್ಥೆಯಾದರೂ ನನ್ನಂಥಾ ಶಿಕ್ಷಿತ ಯುವತಿಯರನ್ನು ಗ್ರಾಮಸೇವೆಯ ಕಾರ್ಯಕ್ಕೆ ಬೇಕಾದ ಸಲಹೆಯನ್ನಿತ್ತು ಕಳುಹಿಸಿಕೊಡುವುದಿದ್ದರೆ, ಗ್ರಾಮದಲ್ಲಿ ಮರ್ಯಾದೆಯಿಂದ ಬಾಳುವ ಸೌಕರ್ಯವನ್ನು ಒದಗಿಸಿ ಕೊಡುವುದಿದ್ದರೆ, ನಾನು ಸಂತೋಷದಿಂದ ಆ ಸಂಸ್ಥೆಯ ಆಶಯವನ್ನು ಈಡೇರಿಸಲು ಮುಂದಾಗಲು ಇರುವೆನು. ಆದರೆ ನಾನು ಅಂಥಾ ಸಂಸ್ಥೆಯನ್ನು ಇಷ್ಟರ ವರೆಗೆ ಕಂಡಿಲ್ಲ. ನನಗೆ ಸಂಬಳ ಬೇಕೆಂಬುದಲ್ಲ. ಸ್ತ್ರೀತ್ವದ ಪ್ರತಿನಿಧಿಯಾಗಿ. ಸ್ತ್ರೀತ್ವದ ಪೂಜ್ಯತೆಯನ್ನುಳಿಸಿಕೊಂಡು ನನ್ನ ದೀನ ಸೇವೆಯನ್ನು ಸಲ್ಲಿಸುವ ಸಂದರ್ಭ ಬೇಕಾಗಿದೆ ನಾನು ಹಳ್ಳಿಯಲ್ಲಿ ನಿರಕ್ಷರತೆಯನ್ನು ದೂರೀಕರಿಸಲು ಸಾಧಿಸಬಲ್ಲೆ

ಒಂದು ಸಣ್ಣ ಮನೆ. ಪೋಷಣೆಗೆ ಮತ್ತು ಶಿಕ್ಷಣಕ್ಕೆ ೨೦-೩೦ ಮಂದಿ ಬಾಲಿಕೆಯರು ಬೇಕು. ನಾನು ನನ್ನ ಸಮಯ ಮತ್ತು ಯೋಚನೆಯನ್ನು ಯಾವಾಗಲೂ ಕಾರ್ಯದಲ್ಲಿರಿಸಿ ಮನೆಯನ್ನು ಶುಚಿಯಾಗಿಟ್ಟು ಬಾಲಿಕೆಯರೊಂದಿಗೆ ಪ್ರಾರ್ಥಿಸುತ್ತಾ ಪಾಠ ಕಲಿಸುತ್ತಾ ದಿನಗಳೆಯಬಲ್ಲೆನು. ಹೀಗಾದರೆ ತಿರುಗಿ ನಾನು ನನ್ನ ಸ್ತ್ರೀತ್ವವನ್ನು ಗಳಿಸಿ ಪಾವನೆಯಾಗಬಲ್ಲೆನು.

WANTED—Districts Organisers and Taluka Superintendents in Districts of Belgaum Bijapur, Dharwar, Canara and Coorg on salary and commission basis. Special facilities for the initial business of Rs 10,000/-. Only influential gentlemen who can guarantee Rs. 50,000/- and Rs 25,000/- per year need apply. Messrs.

PADUBIDRI BROS., **BOMBAY 4.**

ಜನಪದ ಸಾಹಿತ್ಯ

ತಾಂಬೂಲ

ಗೆಳೆಯರನು ಅಳವಡಿಸುತಿರುವುದು
ಬೆಳಗಿಸುವುದಿದು ವದನವನು ನೀವ್
ಕೇಳಿ ವೀಳೆಯದೆಲೆಯ ಲೀಲೆಯ ನಂತು
ಪೇಳುವೆನೂ ‖

ಧೂಮನಾಥನ ತೋಗಲಾಡಿಸಿ
ಕಾಮಕಲೆಯನುದ್ದೀಪಗೊಳಿಸುತ
ಸೋಮ ವದನವ ಬೆಳಗಿ ಕಾಮಾಕರ್ಷವೀವುದಿದೂ ।
ನಮಗೆ ತಿನ್ನಲು ಕಾರ, ಸಿಹಿ, ಕಹಿ
ಕ್ರಮ ಕ್ರಮದಿ ಒಗರುಪ್ಪನೀವುದು
ಕ್ರಿಮಿಗಳನು ಹೊಡೆದೋಡಿಸುವುದಿದು ಅಮೃತವೆ ಸರಿಯೂ‖

ಅನುನಯದಿ ವೀಳೆಯವ ಕೊಳ್ಳುತ
ಸುಣ್ಣ, ಜ್ಯಾಕಾಯಿ, ಪತ್ರಿ, ಅಡಿಕೆಯ
ಚಕ್ಕೆಲಕ್ಕಿ, ಲವಂಗ ಕರ್ಪೂರಗಳ ಸೇರಿಸುತಾ ।
ರನ್ನದ್ದರಿವಾಣದೊಳಗಿಡುತಲಿ
ತನ್ನಧರಗಳ ಸವಿಯ ತಿಳಿಯುತ
ಜನಪದವು ಸೇವಿಸುತಲಾನಂದವನುಗೊಳ್ಳುವುದೂ ‖
ಸಿನೆಮ್ಮ, ಹೋಟೆಲು, ಆಟ ನಾಟಕ
ಮನೆಯು, ನಟ, ನಟಿ, ಜನರಕೂಟವು
ಧನಕರ್ಬುಡವರು ಪೇಟೆ ಪೇಟೆಗಳಲ್ಲಿ ತಿನ್ನುವರೂ ।
ಪ್ರಾಣಕತಿಶಯ ಮನ್ನಣೆಯನಿ-
ತ್ತಿನ್ನು ಬಹುಗುಣ ಕಥನಮಾಳ್ಪರು
ಎನಿತೊ ಜನರಿಧನೆನಿತೊ ಸೇವಿಸಿ ಇದರ ಸವಿಯುವರೂ
ಬರಿಯ ತಾಂಬೂಲವನೆ ಕೆಲವರು
ಪರಿಮಳದ ತಂಬಾಕ ಹಲವರು
ಕಾರದೇಟಿನ ಪುಡಿಯ ಬಾಯೊಳಗಿಟ್ಟು ಮೆಲುಕುವರೂ ।

ಇರುಳೊಳಗೆ ಕಣ್ಮುಚ್ಚಿ ತಿಂಬರು
ಸರಿಮಧ್ಯಾಹ್ನಕೆ ಇದನು ಸವಿವರು
ಮರುಗುತಲಿ ಬಿರಗುತಲಿ ದಾರಿಯ ನಡೆಯುತಲಿ ತಿಂಬರ್ ‖
ಪರರ ಒಡವೆಯ ಬಯಸದಿರುವರು
ಪರೋಪಕಾರವನೆಣ್ಣದಿರುವರು
ಸಿರಿ ಸಂಪದ ಬಿಟ್ಟುಬರಿರುವರು ವೀಳ್ಯ ತಾವ್ ಬಿದರು ।
ಪಂಕಥೆಯ ತಾವ್ ಕೇಳಹೋಗರು
ಪರಿಯ ಮಂದಿರ ಕಾಣದಿರುವರು
ಪೊರೆದ ಮಾತೆಯ ಮರೆತು ಬಿಡುವರು ವೀಳ್ಯ ತಾವ್ ಬಿದರು ‖
ಅನ್ನದಾನವು, ಅಭಯ ದಾನವು,
ಇನ್ನು ಗೋ, ಭೂ, ಕನ್ಯಾದಾನವು
ಉನ್ನತೋದಕ ದಾನ, ವಿದ್ಯಾ, ವಸ್ತ್ರ ದಾನಗಳೂ ।
ಧನ ಕನಕ ಆನಂದವೀಯುವು
ತನು ಮನಕೆ ಆನಂದವೀವುದು
ಮುನ್ನ ವೀಳೆಯ ದಾನ, ನಸ್ಯವು ಎರಡನೆಯದಾಗೆ ‖

ತುಸು ವಿನೋದ

[ಗಂಡನು ಮನೆಯ ಜಗಲಿಯಲ್ಲಿ ಕುಳಿತು ಏನನ್ನೋ ಬರೆಯುತ್ತಿದ್ದಾನೆ. ಹೆಂಡತಿ ಅಲ್ಲಿಗೆ ಬಂದು ಏನೇನೋ ಪಿರಿ ಪಿರಿ ಮಾತನಾಡುವುದನ್ನು ಗಂಡನು ಕೇಳಿ ಬೇಸರದಿಂದ]

ಗಂಡ—ಎಲೋ! ಒಳಗೆ ಹೋಗಿ ಚಾಪೆ ಹಾಕಿ ಮಲಗು, ಬೇಸರಾಗುತ್ತೆ.

ಹೆಂಡತಿ— (ನಗುವಿನಿಂದ) ನೀವೂ ಬನ್ನಿ.

o o

ಶೀನ—(ಕೈಯಲ್ಲೊಂದು ಬೀಡಿ ಹಿಡಿದುಕೊಂಡು) ರಾಮೂ, ನನಗೆ ಸ್ವಲ್ಪ ಬೆಂಕಿಕೊಡು.

ರಾಮು—ಏನು ನಿನಗೆ ಕುಟುಂಬದವರಿಲ್ಲವೇ?

o o

ರಂಗ—ಬ್ರೆಡ್‌ಮೆನ್ ಸತ್ತನಂತೆ.

ಕಿಟ್ಟ—ಹಾಗಾದರೆ ನಾವು ಇನ್ನೆಲ್ಲಿಂದ ಬ್ರೆಡ್ಡು ತಿನ್ನೋದು?

ರಂಗ—ಹಾಗಲ್ಲ ಮಹರಾಯ, ಕ್ರಿಕೆಟ್ ಪಂದ್ಯಾಟಗಾರನಾದ ಬ್ರೆಡ್‌ಮೆನ್ ಸತ್ತನಂತೆ.

o o

ಸುರೆಯು, ಕಾಫಿಯು, ಕೊಕೊ, ಗಾಂಜವೂ
ಶರಬತ್, ವಿಸ್ಕಿಯು, ಓವಲ್ಟಿನ್,
ಬರಾಂಡಿ, ವೈನಾ, ಫೀಮು, ಬಿಸಿ ಬಿಸಿ 'ಚಾಯ' ಕುಡಿವವರೂ ।
ಭಾರಿ ಮದುವೆಯೊಳ್, ಮುಂಜಿ ಕಾರ್ಯದೊಳ್
ಸರಸ ಕಾಲದೊಳ್, ಸಾವು ಕಾಲದೊಳ್
ಹರಥದ ಆನಂದ ಕಾರ್ಯದೊಳ್ 'ವೀಳ್ಯ' ತಿನ್ನುವರು ‖
ಆಡುವಾಗಲು, ಓದುವಾಗಲು,
ನಡೆಯುವಾಗಲು, ಕೂಡುವಾಗಲು,
ಸಡಗರದಿ ತಾಂಬೂಲವನು ಕೈಕೊಂಡು ಮೆರೆಯುವರೂ ।
ಉಡುಪಿ ವೆಂಕಟಪಾಲ ಕೃಷ್ಣನು
ಒಡೆಯನಾಗಿದಕಿಂದು ರಕ್ಷಿಪ-
-ಗಡಣವನು ನಾನೆಂತು ಪೇಳುವೆ "ವೀಳ್ಯದೆಲೆ" ಸೊಬಗ ‖

ವಿ ಆರ್. ಉಪಾಧ್ಯಾಯ,
ಸೆಂಟ್ರಲ್ ಸ್ಟುಡಿಯೋ, ಕೊಯಂಬತ್ತೂರ್.

ಜ್ಯೋತಿಷ್ಯ—(ಪ್ರಶ್ನೆ ಫಲ ಹೇಳುತ್ತಾ) ಇಗೋ ನೋಡು, ಕನ್ಯಾರಾಶಿ ಬಂದಿದೆ. ಆದ್ದರಿ........

ಪ್ರಶ್ನೆಗಾರ— ಎಷ್ಟಿದೆ ಸ್ವಾಮಿ, ನಾನು ಮದುವೆ ಆಗಿಲ್ಲ ಒಳ್ಳೇ ಕನ್ಯೆ ಒಂದು ನನಗೆ ಬೇಕಿತ್ತು.

o o

ಯಜಮಾನ—ನಮ್ಮ ಹಲಸಿನಮರದಿಂದ ಸುಮಾರು ನಲವತ್ತು ಹಲಸಿನ ಕಾಯಿ ಕಳವಾಗಿ ಹೋಗಿದೆ. ಬಹುಶಃ ನಿನ್ನ ಒಕ್ಕಲು ಆ ತಿಮ್ಮ ತೆಗೆದಿರಬೇಕು.

ನೆರೆಯವ—ಛೆ ಅವನು ಒಬ್ಬನೇ ಅಷ್ಟಲ್ಲಾ ತೆಗೆಯಲಿಕ್ಕಿಲ್ಲ

ಯಜಮಾನ—ತೆಗೆಯಲಿಕ್ಕೆ ತೆಗೆದಾನು, ಕೊಂಡುಹೋಗಲಿಕ್ಕೆ ಸಾಧ್ಯವಿಲ್ಲ.

o o

ಟೀಚರ್—ಬಾಲಕೃಷ್ಣ ಎಂಬುದನ್ನು ಇಂಗ್ಲೀಷಿನಲ್ಲಿ ಬರೆ.

ವಿದ್ಯಾರ್ಥಿ—Tail Krishna.

o o

ಜ್ಯೋತಿಷ್ಯ—ಏನು ಸ್ವಾಮಿ, ನಿಮ್ಮ ಜಾತಕದಲ್ಲಿ ಮಕ್ಕಳಿಲ್ಲ.

ಜಾತಕಗಾರ—ಒಂದು ಮಗು ತೊಟ್ಟಿಲಲ್ಲುಂಟು. ಉಳಿದವರು ಶಾಲೆಗೆ ಹೋಗಿದ್ದಾರೆ. ಜಾತಕದಲ್ಲಿರುವುದು ಹೇಗೆ?

o o

ಸೇಸ—ನಮ್ಮ ಊರಿಗೆ ಮಂತ್ರಿಗಳು ಬರಲಿಕ್ಕಿದ್ದಾರಂತೆ.

ವಿಟ್ಟ—ಯಾಕೆ ನಮ್ಮೂರಲ್ಲೇ ಇದ್ದಾರಲ್ಲ ಕೆಲಜನ ಮಂತ್ರಿಗಳು.

ಸೇಸ—ಎಲ್ಲಿದ್ದಾರೆ? ಹಾಗೆಲ್ಲ ಇರಲಿಕ್ಕೆ ಡು ಸಂತೆಸಾಮಾನೋ?

ವಿಟ್ಟ—ತಂತ್ರ ತಿಳಿದವ ತಂತ್ರಿ, ಮಂತ್ರ ತಿಳಿದವ ಮಂತ್ರಿ, ಹಾಗಲ್ಲವೇ?

o o

ನವಯುವಕನ ಮಗ—ನಿರುದ್ಯೋಗ ನಿವಾರಣೆಗೆ ಉಪಾಯವೇನು?

ವೃದ್ಧ ತಂದೆ— ಅವಿವಾಹಿತರಾಗಿರುವುದು.

o o

ಒಬ್ಬ ಸಾಹುಕಾರ—(ಸೇವಕನಿಗೆ) ಸುವ್ವರ್ ಕಾ ಬಚ್ಚಾ!

ಸೇವಕ—ತಾವೇ ತನ್ನ ತಂದೆತಾಯಿಗಳು, ಏನು ಬೇಕಾದರೂ ಅನ್ನಿ.

ಅರ್ಗಳ ಪುರಂದರ ರೈ (ಸಂಗ್ರಾಹಕ)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ

'ಗೊನೊಕಿಲರ್' (ರಜಿಸ್ಟರ್ಡ್)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾಧೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು ೦-೬-೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

'Sole Manufacturer **DR. D. N. JASANI**, Vitalbhai Patel Road, BOMBAY 4

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ ಮುಲಾಮು —

ಆಸ್ಪತ್ರೆ ಚರಿಗಳ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುತ್ತದು, ಕ್ರಯ ಬಾಟ್ಲಿ ೧ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ರಾಣಿಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2–8–0.

ಕಸ್ತೂರಿಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ " " 1—8—0.

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಸುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE**

೧೯೩೯ ಫೆಬ್ರವರಿಯಲ್ಲಿ ಪ್ರಕಟವಾಗಲಿರುವ ಎರಡು ಹೊಸ ಪುಸ್ತಕಗಳು

ಕರಿ ನೀರು ದೇ. ಭ. ಬ್ಯಾರಿಸ್ಟರ ಸಾವರಕರರಿಂದ ಬರೆಯಲ್ಪಟ್ಟ ರಮ್ಯ-ಭೀಷಣ ರೋಮಾಂಚಕರ ಪುಸ್ತಕದ ಕನ್ನಡ ಅನುವಾದ ಸುಮಾರು ೪೦೦ ಪುಟ, ನುಣುಪು ಕಾಗದ. ಬೆಲೆ ಎರಡೂಕಾಯಿ

ಪನ್ನೆ ಮನೋಹರವಾದ ಐತಿಹಾಸಿಕ ನಾಟಕ ಸುಮಾರು ೮೦ ಪುಟ, ಬೆಲೆ ೬ ಆಣೆ ಶ್ರೀ ಶೇ. ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ ಸೌಲಭ್ಯ. ಗ್ರಾಹಕರು ತ್ವರೆಮಾಡಿರಿ

ವಿಳಾಸ:—ಶ್ರೀ ಶೇಷಾಚಲ ಪ್ರೆಸ್, ಪೋ ಆನಂದವನ (ಹಾವೇರಿ) ಧಾರವಾಡ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೇರಾ ಫಿಲ್ಸ್	**ಭೈರವ ಮಾತ್ರೆಗಳು**
ಕೊಲೇರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ. ೭—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,

ನೋಟೆ ಮರದ ಲೇನು – – – ಉಡುಪಿ, ದ ಕ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು

॥ ಶ್ರೀ ॥

ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ

ಃ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ ಃ

ಅತ್ಯಪೂರ್ವ ಸಂದರ್ಭ ! **ಅಪೂರ್ವ ರಿಯಾಯತಿ !!**

ತಾ.3-2-1939ರಿಂದ 5-3-'39ರ ವರೆಗೆ ಮಾತ್ರ.

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ
ರಿಟರ್ನ್ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇದೇ ಬರುವ ತಾರೀಕು 17-2-39ರಲ್ಲು ಶ್ರೀಧರ್ಮಸ್ಥಳದಲ್ಲಿ ಶ್ರೀಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದು ಹೋಗತಕ್ಕ ಯಾವತ್ತು ಯಾತ್ರಾರ್ಥಿಗಳಿಗೆ ನಮ್ಮ ಬ್ಯಾಸುಗಳ ಯಾವತ್ತು ಸ್ಟೇಶನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓% ರಿಯಾಯಿತಿಯಿಂದ ರಿಟರ್ನ ಟಿಕೇಟುಗಳನ್ನು ಕೊಡುವಂತೆ ಏರ್ಪಾಟು ಮಾಡಿರುವೆವು.

N. B. **ಪ್ರಯಾಣವು ಮೇಲೆ ಸೂಚಿಸಿದ ವಾಯಿದೆಯೊಳಗೆ ಮುಗಿಯತಕ್ಕದಾಗಿದೆ**

ಇಂತಹ ಅಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ.

JOINT MANAGERS.

The Joint Booking Office
KODIALBAIL, Mangalore

The Combined Booking Agency,
MANGALORE

Supply Agency Limited.

(BANKERS)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760
Reserves Rs 1,070

DEPOSITS EXCEED
Rs. 20,000

RATE OF INTEREST FOR FIXED DEPOSITS.

3 to 6 Months	4%	p. a.
7 to 11 „	5%	„
12 to 18 „	6%	„

SPECIAL RATE FOR LONG TERM DEPOSITS ON APPLICATION.

Current Accounts are accepted at 3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to -
THE MANAGING DIRECTOR.

General Supplies Limited.

UDIPI

PROPRIETORS.

Sri Bharata Vastu Mandira,
Thulunad Stationery Mart.
Manipal Power Press,
Thulunad Press,
Antaranga

6 Apprentices will be entertained to work at our Printing Presses.

WILLING CANDIDATES MAY APPLY TO: MANAGING DIRECTOR.

ತುಳುನಾಡ್ ತಿಲಕಪಂಚಾಂಗ

ಬೆಲೆ 0-1-0
ಮಾರಾಟಕ್ಕೆ ತಯಾರಾಗಿದೆ.
ವ್ಯಾಪಾರಿಗಳಿಗೆ ಧಾರಾಳ ಕಮಿಶನ್
ಬೇಕಾದವರು ತರಿಸಿಕೊಳ್ಳಬಹುದು.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

ಮೌಲಾನಾ ಅಬ್ದುಲ್ ಕಲಂ ಆಜಾದರು

ಸರೋಜಿನಿದೇವಿ



ಖಾನ್ ಅಬ್ದುಲ್ ಗಫರ್‌ಖಾನ್

ಬಾಬು ರಾಜೇಂದ್ರ ಪ್ರಸಾದ

ಜಮುನಾಲಾಲ್ ಬಜಾಜರು

ಭುಲುಬಾಯಿ

ಕಾಂಗ್ರೆಸ್ ವರ್ಕಿಂಗ್

ಕಮಿಟಿ ಮೆಂಬರರ

ರಾಜಿನಾಮೆ!

(ವಿವರ ಒಳಗಡೆಯಿದೆ)

2– [illegible]

[illegible]

[illegible]

The Canara Industrial & Banking Syndicate, Limited.

(INCORPORATED IN BRITISH INDIA. LIABILITY OF SHAREHOLDERS LIMITED.)

ESTD. 1925

Head Office:- **"Mukund Nivas", UDIPI, S. India.**

NOTICE.

The Share Transfer Books of the Syndicate will remain closed from 10th February, 1939 to 6th March, 1939 both days inclusive.

T. M. A. PAI,
CHAIRMAN.

UDIPI
5-2-'39

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಅಸನ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE:
MANGALORE

BRANCHES.
Udipi, Coondapoor, Kaup & Karkal.

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] **H. O. UDIPI.** [1920

BRANCHES
MANGALORE, KATAPADI, and KANHANGAD.

Deposits are accepted at all the Offices of the Bank on the following terms

One year Fixed Deposits at 3½ p. c. per annum.
Two years' Fixed Deposits at 4 p. c. per annum.
Savings Bank Deposits ... 3 p. c. per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD 1921
FOUNDER
Sri A B SHETTY MLA
Parliamentary Secretary Govt of Madras
ಸಂಸ್ಥಾಪಕರು,
ಶ್ರೀ ಎ. ಬಿ. ಶೆಟ್ಟಿ, ಎಂ ಎಲ್ ಎ
ಸಂಪಾದಕ
ಕೆ. ಕೆ. ಶೆಟ್ಟಿ

ನವಯುಗ

NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೨೬ | ಉಡುಪಿ, ಗುರುವಾರ ೨-೩-೧೯೩೯ | Udipi, Thursday 2—3—1939 | Vol. XVIII No. 26

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ ೧—೧೨—೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ.

ಸಮಾಚಾರ ಸಂಗ್ರಹ

ಗಾಂಧೀಜಿಯವರ ಹಿತೋಪದೇಶ

ಹೈದರಾಬಾದಿನ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕು

ಹೈದರಾಬಾದಿನ ಸ್ಟೇಟ್ ಕಾಂಗ್ರೆಸ್ಸಿನ ಪ್ರತಿನಿಧಿ ಮಂಡಲವು ಗಾಂಧೀಜಿಯವರ ಸಂದರ್ಶನಮಾಡಿ ಮುಂದೇನು ಅಪ್ಪಣೆ ಯೆಂದು ಕೇಳಿದಾಗ ಅವರು—ಬತ್ತಳಿಕೆಯ ಇತರ ಸಾಮಾನ್ಯ ಅಸ್ತ್ರಗಳೆಲ್ಲ ನಿಷ್ಫಲವಾದಾಗ ಮಾತ್ರ ತೆಗೆಯಬೇಕಾಗಿರುವ ಸತ್ಯಾಗ್ರಹ ಮಹಾಸ್ತ್ರವನ್ನು ಪ್ರಕೃತ ತೆಗೆಯಬೇಡಿರಿ ಇತರ ಶಾಂತಿಪರ ನ್ಯಾಯ ಸಮ್ಮತವಾದ ವಿಧಾಯಕ ಕಾರ್ಯಕ್ರಮಗಳನ್ನು ಮೊದಲಾಗಿ ಕೈಗೊಂಡು ಪ್ರಯೋಗಿಸಿ ನೋಡಿರಿ—ಎಂದು ಉಪದೇಶವಿತ್ತರು.

ಬೊಂಬಾಯಿಯಲ್ಲಿ ಮದ್ಯ ಪ್ರತಿಬಂಧ

ಸಭೆ. ಕುರಿತು ನಿಷೇಧ ಚಳವಳಿ

ಬೊಂಬಾಯಿ ನಗರವೂ ಸುತ್ತುಮಳಿಯವೂ ಕ್ಷಿಪ್ರವಲ್ಲೇ ನಿಶಾ ನಿಷೇಧ ಕ್ಷೇತ್ರವಾಗುವುದೆಂಬುದನ್ನು ತಿಳಿದು ಮದ್ಯ ವ್ಯಾಪಾರಿಗಳ ಒಂದು ಸಾವಿರ ಮಂದಿಯ ಪ್ರಚಂಡ ಮೆರವಣಿಗೆಯು ನ್ಯಾಯ ವಿಧಾಯಕ ಸಭಾಸದನದ ಬಾಗಿಲ ತನಕ ಹೋಗಿ ತಮ್ಮ ಅಸಮ್ಮತಿಯನ್ನು ವ್ಯಕ್ತಗೊಳಿಸಿತು. ಅಬ್ಕಾರಿ ಇಲಾಖೆಯ ಮಂತ್ರಿಗಳು ಅವರ ಆಕ್ಷೇಪಗಳನ್ನು ಸಾವಧಾನವಾಗಿ ಪ್ರತ್ಯೇಕ ಕೇಳಿ ತಿಳಕೊಳ್ಳುವನೆಂದು ಆಶ್ವಾಸನೆಯಿತ್ತ ನಂತರ ಹಿಂತೆರಳಿತು. ನಿಷೇಧದ ಶಾಸನವನ್ನು ವಿಳಂಬಿಸಬೇಕೆಂಬುದೇ ಅವರ ಹೇಳಿಕೆ.

ತಿರುವಾಂಕೂರಿನ ಬಾದೋರ್ಲಿ ನೆಯ್ಯಾತಿಂಕರೆ ಸಂಸ್ಥಾನಿಕ ಕಾಂಗ್ರೆಸ್ ಅಧಿವೇಶನ

ತಿರುವಾಂಕೂರಿನ ಬಾದೋರ್ಲಿ ಎಂಬ ಹೆಸರುವೆತ್ತ ನೆಯ್ಯಾತಿಂಕರೆಯಲ್ಲಿ ಕಳೆದ ವಾರ ಸಂಸ್ಥಾನಿಕ ಕಾಂಗ್ರೆಸ್ಸು ಅಧಿವೇಶನವು ಜರಗಿತು. ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎ. ಕೆ. ವೇಲಾಯುಧನವರು ನೆಯ್ಯಾತಿಂಕರೆ ತಾಲೂಕು, ಕಾಂಗ್ರೆಸ್ಸು ಚಳವಳಿಯಲ್ಲಿ ಇತರ ತಾಲೂಕುಗಳಿಗೆ ಆದರ್ಶವಾಗಿದೆ ಎಂದರು ಸರಕಾರವು ಕ್ಷಿಪ್ರದಲ್ಲೇ ಪೂರ್ಣ ಪ್ರಜಾ ಪ್ರತಿನಿಧಿತ್ವವುಳ್ಳ ರಾಜ್ಯಭಾರ ಕ್ರಮವನ್ನು ಪ್ರಯೋಗದಲ್ಲಿ ತರಬೇಕೆಂಬ ನಿರ್ಣಯವೂ ಹಾಗೆ ಮಾಡದಿದ್ದರೆ ಅಹಿಂಸಾತ್ಮಕ ಮಾರ್ಗದಲ್ಲಿ ಪ್ರಬಲವೂ ಸಂಸ್ಥಾನ ವ್ಯಾಪ್ತವೂ ಆದ ವಿಧಾಯಕ ಕಾರ್ಯಕ್ರಮಗಳಿಂದ ಸರಕಾರವನ್ನು ಪ್ರತಿಭಟಿಸಬೇಕೆಂಬ ತೀರ್ಮಾನವೂ ಸ್ವೀಕೃತವಾಯಿತು.

ಮೈಸೂರಿನ 'ಹೆಸಿಲ್ಟನ್' ಸತ್ಯಾಗ್ರಹ

ಮೈಸೂರಿನ ಸೆಂಟ್ರಲ್ ಪೋಲೀಸ್ ಸ್ಟೇಶನಿಗೆ ಕೊಟ್ಟ ಆ ಹೆಸರನ್ನು ಬದಲಿಸಬೇಕೆಂದು ತೊಡಗಿದ ಸತ್ಯಾಗ್ರಹದಲ್ಲಿ ಪ್ರಧಾನ ಸಾಹಿತ್ಯವೆಂದರೆ ಒಂದು ಕುಡಿಕೆ ಸುಣ್ಣ ಮತ್ತು ಕುಂಚಕಟ್ಟಿನ ಉದ್ದದ ಬಿದಿರು ಈ ಬಿದಿರಿಗಾಗಿ ಪೋಲೀಸರಿಗೂ ಸತ್ಯಾಗ್ರಹಿಗಳಿಗೂ ಎಳೆದಾಟವು ನಡೆಯುತ್ತಿದ್ದುದರಿಂದ ಈ ಸಿದ್ಧ ಸಾಧನವನ್ನು ತ್ಯಜಿಸಲಾಗಿದೆ ನವೀನ ಸಾಧನವೇನು ಬರಲಿಕ್ಕಿದೆಯೆಂದು ಪೋಲೀಸರು ಕಾಯುತ್ತಿದ್ದಾರೆ.

ಪಾಲ್ಘಾಟಿನಲ್ಲಿ ಸನಾತನಿಗಳ ಪರಿಷತ್ತು

ಅಖಿಲಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ವತಿಯಿಂದ ಕೇರಳ ಸನಾತನಧರ್ಮ ಪರಿಷತ್ತು ತಾ. ೨೫-೨೬ರಲ್ಲಿ ಪಾಲ್ಘಾಟಿನಲ್ಲಿ ಕೊಟಿಯ ಮಹಾರಾಜ ಜಾಮೋರಿನ್‌ರವರ ಅಧ್ಯಕ್ಷತೆಯಿಂದ ನೆರವೇರುವುದು ಕೊಲ್ಲಂಗೋಡಿನ ರಾಜಾ ಸರ್ ವಾಸುದೇವ ರಾಜರು ಪರಿಷತ್ತಿನ ಉದ್ಘಾಟನೆಯನ್ನು ಮಾಡುವರು ದೇವಸ್ಥಾನ ಸಂರಕ್ಷಣಾ ಸಮಿತಿಯವರು ಮುತವರ್ಜಿಯಿಂದ ಸನ್ನಾಹ ಮಾಡುತ್ತಿದ್ದಾರೆ. ದಕ್ಷಿಣ ಹಿಂದೂಸ್ಥಾನದಿಂದ ಪ್ರತಿನಿಧಿಗಳೂ ಪ್ರಮುಖ ಸನಾತನೀ ಮುಂದಾಳುಗಳೂ ಪರಿಷತ್ತಿನಲ್ಲಿ ಸಹಭಾಗಿಗಳಾಗುವರೆಂದು ನಿರೀಕ್ಷಣೆಯಿದೆ. ಪ್ರತಿನಿಧಿಗಳು ಒಂದು ಪ್ರತಿಜ್ಞಾ ಪತ್ರಕ್ಕೆ ಬದ್ಧರಾಗಿ ಸಹಿಹಾಕಬೇಕು. ವೇದ, ಸ್ಮೃತಿ, ಪುರಾಣ, ಆಗಮ ತದಿತರ ಶಾಸ್ತ್ರೋಕ್ತವಾದ ಸನಾತನ ಧರ್ಮದ ಅನುಯಾಯಿಯಾಗಿರುತ್ತೇನೆಂದೂ ಧಾರ್ಮಿಕ ವಿಷಯದಲ್ಲಿ ಸರಕಾರದ ಯಾವ ಶಾಸನಕ್ಕೂ ವಿರೋಧಿಯಾಗಿದ್ದೇನೆಂದೂ ನನ್ನ ವೃದ್ಧೀಕರಣದ ಪ್ರತಿಜ್ಞಾಪತ್ರ ಎಂದು ಅದರ ಒಕ್ಕಣೆ. ದೇವಸ್ಥಾನದ ಪ್ರವೇಶದ ಕುರಿತಾಗಿ ಮತ ಸಂಗ್ರಹಿಸುವ ಫೋಟರ ಪಟ್ಟಿಯನ್ನು ಮಲಬಾರಿನಲ್ಲಿ ಸರಕಾರವು ಪ್ರಕಟಿಸಿದೊಡನೆ ಎಲ್ಲ ಕೋರ್ಟುಗಳಲ್ಲಿಯೂ ಇಂಜಕ್ಷನ್ ದಾವೆಯನ್ನು ವರ್ಣಾಶ್ರಮವು ಹೂಡಲಿಕ್ಕಿದೆಯೆಂದು ತಿಳಿದುಬಂದಿದೆ

ಜಯಪುರದಲ್ಲಿ ಹೊಸ ಮಂತ್ರಿಗಳ ನೇಮಕ

ಮಾಜಿ ಆಂಗ್ಲೇಯ ಶಿಂಗ್ಲೆಟ್ ಜಯಪುರದ ಮಂತ್ರಿತ್ವದಿಂದ ನಿವೃತ್ತರಾಗುವ ಸರ್ ಬ್ಯೂಚೇಂಪ್ ಸ್ಯಾಂಟ್ ಜಾನರ ಸ್ಥಾನಕ್ಕೆ ಎಚ್. ಜೆ. ಟೋಡ್ ಎಂಬವರು ನೇಮಕ ಹೊಂದಿದ್ದಾರೆ ಇವರು ಭರತಪುರದ ಕೌನ್ಸಿಲ್ ಆಫ್ ಸ್ಟೇಟ್ ಅಧ್ಯಕ್ಷತನವನ್ನು ಎರಡು ವರ್ಷಗಳಿಂದಲೂ ನಿರ್ವಹಿಸಿರುವರು. ವಿವೇಕ ವಿಚಾರ ಸಹಾನುಭೂತಿಪರ ವ್ಯಕ್ತಿಯೆಂದು ತಿಳಿಯಲಾಗಿದೆ ಆದಕಾರಣ ಜಯಪುರದ ಸಮಸ್ಯೆಯನ್ನು ಸಮದೃಷ್ಟಿಕೋನದಿಂದ ನೋಡಿಯಾರೆಂದು ನಿರೀಕ್ಷಣೆಯಿದೆ

ರಾಮನಾಡಿನಲ್ಲಿ ಹೆಂಗಸರ ಸತ್ಯಾಗ್ರಹ

ಗಾಂಧೀಜಿಗಳು ಬಹು ಜಾಗರೂಕತೆಯಿಂದಲೂ ವಿಚಕ್ಷಣತೆಯಿಂದಲೂ ಪ್ರಯೋಗಿಸುತ್ತಿದ್ದ ಸತ್ಯಾಗ್ರಹ ಮಹಾಸ್ತ್ರವನ್ನು ಇಂದು ಹಳ್ಳಿಯ ಹೆಂಗಸರೂ ಕೈಗೊಳ್ಳಲು ಧುಮುಕುತ್ತಿದ್ದಾರೆಂಬುದು ರಾಮನಾಡು ಜಿಲ್ಲೆಯ ಒಂದು ಹಳ್ಳಿಯ ಸುದ್ದಿಯಿಂದ ಸ್ಪಷ್ಟವಾಗುತ್ತಿದೆ ಒಬ್ಬ ಭೂಮಾಲಿಕನಿಗೂ ಹಳ್ಳಿಯವರಿಗೂ ಒಂದು ಜಾಗದ ಮರವನ್ನು ಕಡಿಯುವ ವಿಷಯದಲ್ಲಿ ಜಗಳವುಂಟಾಯಿತು. ಆ ಮರಗಳು ತಮ್ಮ ಹಕ್ಕಿನವೆಂದು ಸುಮಾರು ೪೪ಮಂದಿ ಹಳ್ಳಿಗರು ಸುಮಾರು ೫೦ಮರಗಳನ್ನು ಕಡಿದು ಸಾಗಿಸಲಿಕ್ಕೆ ಸನ್ನದ್ಧರಾಗಲು ಅತ್ತ ತನ್ನ ಹಕ್ಕಿನವುಗಳೆಂದು ಸಾಧಿಸುತ್ತಿದ್ದ ಭೂಮಾಲಿಕನು ದೊಡ್ಡ ಪೋಲೀಸು ಪಡೆ ತಂದು ಅವರನ್ನೆಲ್ಲ ದಸ್ತಗಿರಿಮಾಡಿಸಿ ರಿಮಾಂಡಿನಲ್ಲಿಡಿಸಿದ ಮರುದಿನ ಪೋಲೀಸರು ಆ ಮರಗಳನ್ನು ಸಾಗಿಸಲು ಗಾಡಿಗಳನ್ನು ತಂದಾಗ ೨೦೦ಮಂದಿ ಹೆಂಗಸರು ಗಾಡಿಯ ದಾರಿಯಲ್ಲಿಯೂ ಮರದ ದಿಮ್ಮಿಗಳ ಮೇಲೂ ಬಿದ್ದುಕೊಂಡು ಸತ್ಯಾಗ್ರಹ ನಡೆಸ ತೊಡಗಿಯೇ ಬಿಟ್ಟರು. ಪೋಲೀಸರು ಮುಂದೇನು ಅಪ್ಪಣೆಯೆಂದು ಮೇಲಾಫೀಸರರಿಗೆ ಬರಕೊಂಡು ಕಾಯುತ್ತಿದ್ದಾರೆ

ಸಾಂಗಲಿಯ ನಾಲ್ಕು ಹಳ್ಳಿಗಳ ರೈತರ ಉಪವಾಸ ದೀಕ್ಷೆ—

ಅಲ್ಲಿಯ ಜಮಾನ್ದಾರನು ಕಂದಾಯದ ಶೇಕಡ ೫೦ರಷ್ಟು ರಿಯಾಯತಿ ಮಾಡಲು ಒಪ್ಪಿರುವುದು ಸಾಕಾಗಲಿಲ್ಲವೆಂದೂ ಕಾಲಂಶ ಬಿಡಬೇಕೆಂದೂ ಅಲ್ಲಿಯ ರೈತರು ಉಪವಾಸ ದೀಕ್ಷೆಯನ್ನು ಕೈಕೊಂಡಿರುವರು ಜಮಾನ್ದಾರನಿಗೂ ಹಳ್ಳಿಗರಿಗೂ ಮಧ್ಯಸ್ಥಿಕೆ ಮಾಡುವ ಹಂಚಿಕೆ ನಡೆಯುತ್ತಿದೆ.



ಬಂಗಾಳದ ಗವರ್ನರರ ಮರಣ

ಬಂಗಾಳದ ಗವರ್ನರರಾಗಿದ್ದ ಲೋರ್ಡ್ ಬ್ರೆಬೋರ್ನ್ ಇವರು ತಾ ೨೩ರಲ್ಲಿ ಮೃತರಾದರು ದೊಡ್ಡ ಕರುಳಿನಲ್ಲಿ ಬಾವು ಎದ್ದಿದೆಯೆಂದು ಎಕ್ಸ್‌ರೇಯಿಂದ ತಿಳಿದುಬಂದುದರಿಂದ ಐದು ದಿನಗಳ ಹಿಂದೆ ಶಸ್ತ್ರ ಚಿಕಿತ್ಸೆ ಮಾಡಲಾಗಿತ್ತು. ಆದರೂ ಪ್ರಯೋಜನಕಾರಿಯಾಗದೆ ತೀರಿಕೊಂಡರು, ಪ್ರಾಯ ೪೩. ವರುಷ ವೈಸರಾಯಿ ಲಿನ್‌ಲಿತ್ಗೋರವರು ರಜೆಯಲ್ಲಿ ವಿಲಾಯಿತಿಗೆ ಹೋದಾಗ ಇವರೇ ಆ ಸ್ಥಾನವನ್ನು ವಹಿಸಿ ಅಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಚಕ್ಷಣತೆಯಿಂದ ಕಾರ್ಯ ನಿರ್ವಹಿಸಿದ್ದರು ಜನಪ್ರಿಯ ಗವರ್ನರರಾಗಿದ್ದರು ಸುಭಾಷ್‌ಚಂದ್ರ ಬೋಸರೂ ಬಂಗಾಳ ಮತ್ತು ಬೇರೆ ಬೇರೆ ಮಂತ್ರಿ ಮಂಡಲದವರೂ ತಮ್ಮ ಸಂತಾಪ ಸಂದೇಶಗಳನ್ನು ಕಳುಹಿಸಿರುವರು.

ಸ್ಪೈಯಿನಿನಲ್ಲಿ ಫ್ರಾಂಕೋ ಸರಕಾರದ ಅಂಗೀಕಾರ

ಫ್ರಾನ್ಸ್ ಮತ್ತು ಬ್ರಿಟನ್ ಇವೆರಡೂ ಸ್ಪೈಯಿನಿನಲ್ಲಿ ಫ್ರಾಂಕೋನ ಸರಕಾರವನ್ನು ಈ ವಾರದಿಂದ ಅಂಗೀಕರಿಸಿ ಮಾನಿಸುವ ನಿರ್ಧಾರ ಮಾಡಿವೆ ಹೊಲ್ಲಂಡೂ ಹಾಗೆಯೇ ನಿಶ್ಚೈಸಿದೆ ತನ್ನ ಸರಕಾರದ ಮೇಲೆ ಯಾವದೊಂದು ತರದ ಶರತ್ತುಗಳನ್ನು ಹೊರಿಸದೆಯೇ ಅದನ್ನು ಅಂಗೀಕಾರ ಮಾಡಬೇಕೆಂಬ ಫ್ರಾಂಕೋವಿನ ಕೇಳಿಕೆಯನ್ನು ಈ ಮೂರು ಸರಕಾರಗಳು ಮಾನ್ನಿಸಿವೆ ಇನ್ನು ಸ್ಪೈಯಿನಿನಲ್ಲಿ ಉಳಿದಿದ್ದ ಅಲ್ಪಸ್ವಲ್ಪ ಹಳೆ ಸರಕಾರದ ಪಕ್ಷವು ಯಾವ ಶರ್ತವೂ ಇಲ್ಲದೆ ತನಗೆ ಶರಣಾಗತವಾಗುವ ತನಕ ಅವರನ್ನು ಸದೆಬಡಿಯುವೆನೆಂದು ಫ್ರಾಂಕೋವಿನ ದೃಢ ನಿರ್ಧಾರ

ಹೈದರಾಬಾದಿನಲ್ಲಿ—

ಇಲ್ಲಿಯ ಸತ್ಯಾಗ್ರಹ ಕೈದಿಗಳು ಯಜ್ಞೋಪವೀತವನ್ನೂ ಸಂಧ್ಯಾವಂದನೆಯನ್ನೂ ಬಿಡಬೇಕೆಂದು ಜೈಲು ಅಧಿಕಾರಿಗಳ ಕಟ್ಟಪ್ಪಣೆ.

ಕ್ರೈಸ್ತರ ಹೋಲೀ ಕಮ್ಯೂನಿಯನ್ನಿನ ತಾಂತ್ರಿಕಾಚರಣೆಗೆ ಮದ್ಯವು ಬೇಡ

ಇಗರ್ಜಿಗಳಲ್ಲಿ ಹೋಲೀ ಕಮ್ಯೂನಿಯನ್ (ಲಾರ್ಡ್ಸ್ ಫೀಸ್ಟ್—ಪ್ರಭುವಿನ ಔತಣ) ಎಂಬ ಪೂಜಾತಂತ್ರ ಸಾಹಿತ್ಯವಾಗಿ ಶಾಸ್ತ್ರ ಪ್ರಕಾರ ಮದ್ಯವು ಬೇಕೇ ಬೇಕು. ಆದರೆ ಇಂದಿನ ನಿಶಾನಿಷೇಧ ವಾತಾವರಣಕ್ಕನುಗುಣವಾಗುವಂತೆ ಅದು ಬೇಕಾಗಿಲ್ಲವೆಂದು ಕಲ್ಕತ್ತೆಯ ಬೆಪ್ಟಿಸ್ಟ್ ಚರ್ಚ್ ಮತ್ತು ಮಿಶನಿನವರ ಸಂಯುಕ್ತ ಸಮ್ಮೇಳನದಲ್ಲಿ ತೀರ್ಮಾನವಾಗಿದೆ.

ಭಿಕ್ಷುಕ ಪ್ರತಿಬಂಧಕ ಬಿಲ್ಲು— ಗಡಿನಾಡಿನ ಪ್ರಾಂತದ ವಿಧಾಯಕ ಸಭೆಯ ಮುಂದೆ—

ಸದ್ಯ ಬರಲಿರುವ ಅಧಿವೇಶನದಲ್ಲಿ ಭಿಕ್ಷುಕರ ಪೀಡೆಯನ್ನು ತಡೆಗಟ್ಟುವ ಶಾಸನವನ್ನು ತರಲಿರುವೆನೆಂದು ರಾವ್ ಬಹದೂರ್ ಮೇಹರ್ ಚಾಂದ್ ಖಾನ್ ಇವರು ಸೂಚನೆ ಕೊಟ್ಟಿದ್ದಾರೆ

ಸಾರ್ವಜನಿಕ ಹಾದಿಬೀದಿ ಮೈದಾನುಗಳಲ್ಲೆಲ್ಲ ಭಿಕ್ಷುಕರ ಪಿಡುಗು ಹೆಚ್ಚಿ ಜನತೆಗೆ ರಗಳೆಯುಂಟಾಗಿದೆ ಬೇಡುವವರಲ್ಲಿ ಆಲಸ್ಯ ಸೋಮಾರಿತನ ಬೆಳೆದು ಬಂದಿದೆ ಕಳ್ಳಾಟಿಕೆ ತೊಡಗಿದೆ ಇಂತಹ ಭಿಕ್ಷಾಟಣವನ್ನು ಪ್ರತಿಬಂಧಿಸುವುದೂ ದಾಂಡಿಗರಾಗಿರುವ ಭಿಕ್ಷುಕರಿಗೆ ಕಲಸಕೊಟ್ಟು ದುಡಿಸುವ ಗೈಮೆಯ ಮನೆಗಳನ್ನು ತೆರೆವುದೂ ಬಿಲ್ಲಿನ ಉದ್ದೇಶ.

ಸ್ಪೈನಿನಲ್ಲಿ ಇಟೇಲಿಯ ಸೈನ್ಯ

ಫ್ರಾಂಕೋವಿಗೆ ಸ್ಪೈನಿನಲ್ಲಿ ಸಂಪೂರ್ಣ ವಿಜಯ ಪ್ರಾಪ್ತಿಯಾಗುವ ತನಕ ಇಟಲಿಯ ಸೈನಿಕರನ್ನು ಅಲ್ಲಿ ಬಿಡಲಾಗುವುದೆಂದು ಮುಸಲೋನಿಯು ಫ್ರಾಂಕೋವಿಗೆ ಆಶ್ವಾಸನೆ ಕೊಟ್ಟು ಆತನ ವಿಜಯವನ್ನು ಅಭಿನಂದಿಸಿ ಪರಿಪೂರ್ಣ ವಿಜಯಾಶೀರ್ವಾದವನ್ನು ಕೊಟ್ಟಿರುವನು.

ಜಪಾನಿಯರ ಕ್ಷಮಾಯಾಚನೆ

ಹೋಂಕೊಂಗಿನಲ್ಲಿ ಬ್ರಿಟಿಷರು ಗುತ್ತಿಗೆಗೆ ವಹಿಸಿಕೊಂಡಿರುವ ಸೀಮೆಯೊಳಗೆ ಜಪಾನೀಯರು ಬೋಂಬು ಸುರಿಸಿದುದು ದುರ್ದೈವವಶಾತ್ ಉಂಟಾದ ಪ್ರಮಾದವೆಂದು ಜಪಾನಿಯ ಸೈನ್ಯಾಧಿಕಾರಿಗಳು ಹೋಂಕೊಂಗಿನ ಬ್ರಿಟಿಷ್ ಅಧಿಕಾರಿಗಳಿಗೆ ಹೇಳಿ ಕ್ಷಮಾಯಾಚನೆಯ ಪತ್ರ ಕಳುಹಿಸಿದ್ದಾರೆ.

ರಾಜಕೋಟೆಯಲ್ಲಿ—

ಪಿಕೆಟಿಂಗ್ ಮಾಡಿದವರನ್ನು, ಸಭೆಗೂಡಿಸುವವರನ್ನು ದಸ್ತಗಿರಿಮಾಡುವ ಧೋರಣೆಯು ಉಗ್ರಸ್ವರೂಪತಾಳುತ್ತಿದೆ. ಸೋಶಿಯಲಿಸ್ಟರನ್ನು ಗಡಿಪಾರುಮಾಡುವ ಕಾರ್ಯಕ್ರಮ ತೊಡಗಲಾಗಿದೆ. ಇಷ್ಟರವರೆಗೆ ಗಡಿಪಾರು ಆದವರು ಮುನ್ನೂರಕ್ಕೆ ಮಿಕ್ಕಿರುವರು.

ಪೆಲೆಸ್ತೈನ್ ಪ್ರಶ್ನೆ

ಲಂಡನಿನಲ್ಲಿ ಅರಬ್ಬಿಯರ ಮತ್ತು ಯೆಹೂದ್ಯರ ಪರಿಷತ್ತು ಮೂರು ವಾರಗಳಿಂದ ಬ್ರಿಟಿಷರ ಸಂಧಿ ಪ್ರಯತ್ನ

ಅರಬ್ ಪ್ರತಿನಿಧಿಗಳ ಮುಖವನ್ನು ಯೆಹೂದೀ ಪ್ರತಿನಿಧಿಗಳು ನೋಡುವುದಿಲ್ಲ. ಹೆಸರಿಗೆ ಸಮ್ಮೇಳನ ಆದರೆ ಅವರು ಕೂಡುವುದು ಬೇರೆ ಬೇರೆ ಭವನಗಳಲ್ಲಿ ಪ್ರತ್ಯೇಕ ತಂಡವಾಗಿಯೇ. ಚೇಂಬರ್ಲೇನರು ಆಚೆ ಭವನದಿಂದ ಈಚೆಗೆ, ಈಚಿನವರಿಂದ ಆಚಿನದಕ್ಕೆ ಹೋಗಿ ಬಂದು ವಿಷಯಗಳನ್ನು ದುಬಾರೆ ಹೇಳಿ ನೋಡಿರು. ಎರಡು ಪಕ್ಷವೂ ಮಂಗಮುಷ್ಟಿ. ಮಧ್ಯಸ್ಥಿಕೆ ನಡೆಯುವ ಲಕ್ಷಣ ಕಾಣುವುದಿಲ್ಲ

ಬಂಗಾಳದ ಹೊಸಗವರ್ನರರು

ಅಸ್ಸಾಮಿನ ಗವರ್ನರರಾದ ಸರ್. ರಾಬರ್ಟ ರೀಡ್‌ರಿಗೆ ಬಂಗಾಳದ ಗವರ್ನರ ಪದವಿಗೂ ಬಂಗಾಲ ಗವರ್ನಮೆಂಟಿನ ಚೀಫ್ ಸೆಕ್ರೆಟರಿಗಳಾದ ಎಚ್. ಜೆ. ಟ್ವೀನಾಮ್ ಇವರಿಗೆ ಅಸ್ಸಾಮಿನ ಅಕ್ಟಿಂಗ್ ಗವರ್ನರಾಗಿಯೂ ನೇಮಕವಾಗಿದೆ.

ಮದರಾಸ್ ಸರಕಾರದ ಹೊಸ ತೆರಿಗೆ—

ಮದ್ರಾಸು ಸರಕಾರವು ತನ್ನ ಆಯವ್ಯಯದ ತಕ್ಕಡಿಯಲ್ಲಿ ಸಮತೋಲಕ್ಕೆ ರುವರಿ ಪ್ರಯೋಗಿಸಬೇಕಾದ ಹೊಸ ತೆರಿಗೆಗಳು ೧. ಹೊಗೆಸೊಪ್ಪು ಮಾರುವವರ ಮೇಲೆ (ಬೆಳೆಯಿಸುವವರ ಮೇಲಲ್ಲ) ೨. ಇತರ ತೆರಿಗೆಗಳಿಗೆ ಒಳಪಡದ ಸರಕುಸಾಮಾನುಗಳ ಮಾರಾಟದ ಮೇಲೆ (ತಯಾ

ಮಂತ್ರಿವರ್ಯ ಸಿ. ಆರ್. ಆಚಾರ್ಯ

ರಿಸುವವರ ಮೇಲಲ್ಲ) ೩. ವಿದ್ಯುಚ್ಛಕ್ತಿ ಮಾರಾಟದ ಮೇಲೆ ೪ ಪೆಟ್ರೋಲ್ ವಿಕ್ರಯದ ಮೇಲೆ. ೫. ವಿನೋದ ವಿಲಾಸಗಳ ಮೇಲೆ ಇಲ್ಲವೆವುಗಳ ಗ್ರಾಹಕರು ಶ್ರೀಮಂತರು, ಉಪಭೋಗಾಸಕ್ತರು, ಬಡವರಲ್ಲ ಆದುದರಿಂದ ಬಡವರಿಗೆ ಪೀಡೆಯಾಗಲಾರದು, ಶ್ರೀಮಂತರಿಗೆಂತೂ ಈ ಚಿಕ್ಕಚಿಕ್ಕ ರುಪಿಕಾಸು ತೆರಿಗೆಗಳಿಂದ ನೋವ ಗದು. ಅಲ್ಲದೆ ನಿಶಾನಿಷೇಧದಿಂದ ಸರಕಾರಕ್ಕೆ ನಷ್ಟವಾದರೂ ಬಡಜನಕ್ಕೆ ಉಳಿತಾಯವಾಗುವ ಹಣವು ಅವರ ಜೀವನ ಸೌಕರ್ಯಗಳಿಗಾಗಿ ಉಪಯೋಗಿಸಲ್ಪಟ್ಟು ವ್ಯಾಪಾರಿಗಳ ಕೈಗೆ ಬರುವುದರಿಂದ ವ್ಯಾಪಾರ ವಿಕ್ರಯಗಳ ಮೇಲೆ ಹೊರಿಸಿದ ಕಿರುತೆರಿಗೆಗಳೂ ಹೊರೆಯಾಗಿ ತೋರಲಾರವೆಂದೇ ಮಂತ್ರಿವರ್ಯರ ಅಭಿಮತ. ಇಂಥ ಚಿಕ್ಕಪುಟ್ಟ ತೆರಿಗೆಗಳಿಂದ ಬಜೆಟ್ಟಿನಲ್ಲಿ ಕಡಿಮೆ ಬಿದ್ದಿರುವ ೪೫ ಲಕ್ಷವನ್ನು ೧೭ಕ್ಕೆ ಇಳಿಸಬಹುದೆಂದು ಅವರ ನಿರೀಕ್ಷೆ.

ಜಯಪುರದಲ್ಲಿ ಹದಿನೆಂಟು ಮಂದಿಯ ಉಪವಾಸ ದೀಕ್ಷೆ.

ದಸ್ತಗಿರಿ ಮಾಡಲ್ಪಟ್ಟು ಬಂಧಿಖಾನೆಯಲ್ಲಿಡಲ್ಪಟ್ಟವರಿಗೆ ಕೊಳಕುನೀರು ಕೊಡಲ್ಪಡುತ್ತಿದ್ದುದರ ಖಂಡನಾರ್ಥವಾಗಿ ಹೀರಾಲಾಲ್ ಶಾಸ್ತ್ರಿ ಮುಂತಾಗಿ ಹದಿನೆಂಟು ಮಂದಿ ಉಪವಾಸ ವ್ರತವನ್ನು ಕೈಗೊಂಡಿರುವರು. ಅದರಲ್ಲಿ ಇಬ್ಬರು ಹದಿನಾರು ವರ್ಷದ ಬಾಲಕರು.

ದಿನದಿನವೂ ಎಂಟು ಹತ್ತು ಮಂದಿಯ ದಸ್ತಗಿರಿಯಾಗುತ್ತದೆ

ದಸ್ತಗಿರಿಯಾದವರಲ್ಲಿ ಆರು ಮಂದಿಗೆ ೬ ತಿಂಗಳ ಸಾದಾಶಿಕ್ಷೆ, ಒಬ್ಬನಿಗೆ ಐದು ತಿಂಗಳು, ಇನ್ನೊಬ್ಬನಿಗೆ ನಾಲ್ಕು ತಿಂಗಳು ಮತ್ತಿಬ್ಬರು ಹದಿನಾರು ವರುಷದ ತರುಣರಿಗೆ 2 ತಿಂಗಳು ಹೀಗೆಲ್ಲ ಶಿಕ್ಷೆ ವಿಧಿಸಲು ಆರಂಭವಾಗಿದೆ.

ರೈಲ್ವೇ ಕಂಪೆನಿಯ ಮೇಲೆ ಎರಡು ಲಕ್ಷರೂಪಾಯಿಯ ನಷ್ಟದಾವೆ

ಕಳೆದ ವರ್ಷ ಬಾಮ್ರೌಲಿಯಲ್ಲಾದ ಇ ಐ ಆರ್. ರೈಲುಬಂಡಿಯ ಅಪಘಾತದಿಂದ ದೇಹಾಘಾತ ಹೊಂದಿದ ಜೋಧಪುರದ ರಾಜಮನೆತನದ ಮಹಾರಾಜ ಅಮರ ಸಿಂಗರು ಎರಡು ಲಕ್ಷರೂಪಾಯಿಗೆ ಕಂಪೆನಿಯ ಮೇಲೆ ನಷ್ಟದಾವೆ ಹೂಡಿದ್ದಾರೆ ಎಷ್ಟು ನಷ್ಟದ್ರವ್ಯಕೊಡಬೇಕೆಂಬುದರ ಇತ್ಯರ್ಥಕ್ಕೆ ಕಂಪೆನಿಯವರು ಜೋಧಪುರದ ಚೀಫ್ ಜಸ್ಟೀಸ್, ರೆಸಿಡೆಂಟ್ ಬಿ. ಬಿ. ಎಂಡ್ ಸಿ. ಐ ರೈಲ್ವೇ ಏಜಂಟ್, ಮಾರ್ವಾರ ಮತ್ತು ಮಧ್ಯ ರಾಜಪುತಾನದ ಐ. ಎಮ್ ಎಸ್ ಆಫೀಸರ್ ಜೋಧಪುರದ ಪ್ರಧಾನ ಮೆಡಿಕಲ್ ಆಫೀಸರ್ ಇವರುಗಳದೊಂದು ಸಮಿತಿಯನ್ನು ಏರ್ಪಡಿಸಿದ್ದಾರೆ

ತಂದೆಯು ಮಗನ ಸ್ಥಾನದಲ್ಲಿ ಪರೀಕ್ಷೆಗೆ ಕೂತುದು

ಸಂಸ್ಕೃತ ಪರೀಕ್ಷೆಯ ಚಿಟ್ಟಗೋಂಗ್ ಕೇಂದ್ರದಲ್ಲಿ ಪೆರ್‌ಪುರದ ಯುವಕನೊಬ್ಬನು ಉಮೇದ್ವಾರನಾಗಿದ್ದ. ಪರೀಕ್ಷೆಯ ದಿನ ಆತನ ತಂದೆಯು ಪರೀಕ್ಷಾಭವನಕ್ಕೆ ಹೋಗಿ ಮಗನ ಹೆಸರಿದ್ದ ಜಾಗದಲ್ಲಿ ಕುಳಿತು ಪ್ರಶ್ನಾಪತ್ರಕ್ಕೆ ಉತ್ತರ ಬರೆಯುತ್ತಿದ್ದ. ಆದರೆ ಪೆರ್‌ಪುರದ ಬೇರೆ ಎರಡು ಯುವಕರು ಇವನನ್ನು ಗುರುತಿಸಿ ಗುಟ್ಟು ರಟ್ಟುಮಾಡಿದರು ತಂದೆಯು ಹೊರಗಟ್ಟಲ್ಪಟ್ಟನು.

ಹೊಸ ಪೋಪರ ಚುನಾವಣೆಗೆ ಜರ್ಮನಿಯ ಸೂಚನೆ

ತಾ ೨ರಲ್ಲಿ ನಡೆಯಲಿರುವ ಪೋಪರ ಚುನಾವಣೆಯು ಕಾರ್ಡಿನಲ್ ಪದವಿಯ ಗುರುಸಮೂಹದಿಂದ ನಡೆಯಿಸಲ್ಪಡುವುದು. ದಿವಂಗತ ಪೋಪ್ ಪಯಸ್‌ರಿಗಿಂತ ಮಿಗಿಲಾಗಿ ನ್ಯಾಸಿಜಮ್ ಕಡೆಗೆ ಮನೋವೃತ್ತಿಯುಳ್ಳವನನ್ನು ಚುನಾಯಿಸಬೇಕೆಂದು ಬರ್ಲಿನಿನ ಪ್ರಧಾನ ಪತ್ರಿಕೆಯೊಂದರ ಮೂಲಕ ಕಾರ್ಡಿನಲರಿಗೆ ಜರ್ಮನಿಯ ಎಚ್ಚರಿಕೆಯ ಸೂಚನೆ

THE Bombay Life

ESTD.] ASSURANCE CO., LTD. [1908

New Business completed in 1938 Exceed 1,44,00,000.

Life Insurance creates certainty, security, stability, peace of mind and happiness to YOU and your family; and thus makes life worth living

The entire fabric of this Institution is based on the rock of 'Service first and service last' to the POLICY HOLDERS, to the Community and the society at large our Service and Experience of Twenty eight years are at your disposal to plan your Insurance requirements.

Honest, Energetic and Influential persons will have great opportunity to help the cause of society and also to earn a permanent and decent remuneration

APPLY TO

KOCHIKAR BROTHERS LIMITED.

Madras Branch Secretaries,

The Bombay Life Assurance Co., Ltd,

The Bombay Life Building,

Gandhinagar, UDIPI.

or any of our following offices

Post Box No 327 Mount Road, **MADRAS**	Viswєshwarapuram Circle **BANGALORE CITY**	Charni Road GIRGAUM, **BOMBAY 4**	C., Street, **MANGALORE**	Puthiyara, **CALICUT**	Central Station Road, **TRIVANDRUM**	Ottapalam, **S. MALABAR**

ಹಿಂದುಸ್ಥಾನದಲ್ಲಿ ನರಭಕ್ಷಕ ಮನುಷ್ಯರು!

ಮಲೆನಾಡು, ಘಟ್ಟನಾಡುಗಳಲ್ಲಿ ಕಾಲ ...ಯುವ ನಾನು ನರಭಕ್ಷಕರ ವಿಚಾರ ...ಗಿ ಬರೆಯುವನೆಂದರೆ ನಿಮಗೆ ಆಶ್ಚರ್ಯವಾಗುವುದು 'ಪಾಪ ಈ ಕಾಡು ...ಗಳ ಸಂದಿನಲ್ಲಿ ವಾಸಮಾಡುತ್ತಿರುವ ತರೆ, ಹುಲಿ, ಚಿರತೆಗಳಿಗೆ ಎಷ್ಟು ಹೆದರಬೇಕಪ್ಪಾ' ಎಂದು ನಿಮಗೆ ಅನಿಸುವು... ಸಹಜ. ಒಮ್ಮೆ ಹುಲಿಯಾಗಲಿ, ಚಿರತೆಯಾಗಲಿ ಮನುಷ್ಯರ ರಕ್ತದ ಸವಿಯನ್ನು ...ಂಡವೆಂದರೆ ಆಗ ಉಳಿದ ತಿಂಡಿತಿನಸುಗಳು ಅವಕ್ಕೆ ಸೇರುವುದೇ ಇಲ್ಲವಂತೆ ...ಮು ತೀರ ನಿಜ-ನಮ್ಮ ಊರಿಗೆ ಸಮೀಪ...ಲ್ಲಿ ಗುರುವಯ್ಯನ ಕೆರೆ ಎಂಬ ಒಂದೂರು, ಅಲ್ಲಿ ಕೆಲವು ವರ್ಷಗಳ ಹಿಂದೆ ಒಂದು ...ಚಿರತೆ (ಚಿರ್ಚ)ಯು ಮನುಷ್ಯರಕ್ತದ ...ಸ್ಯಾಂಪಲ್ ನೋಡಿತು. ಆಮೇಲೆ 'ಸ್ಟ್ರಾಂಗ್ ಕಾಫಿ' ಕುಡಿಯತೊಡಗಿದವನಿಗೆ ಲೈಟ್ ಕಾಫಿ' ಹಿಡಿಯುವಷ್ಟು ನಿಶ್ಚಿತತೆಯಿಂದ ಕರು, ಹುಲ್ಲೆ ಎಲ್ಲವನ್ನೂ ತಿನ್ನುವುದು ಬಿಟ್ಟಿತು ಸಿಕ್ಕಿದರ ಮನುಷ್ಯನೇ ಬೇಕು ಎಂಬ ಆತುರ ಅದಕ್ಕೆ. ಒಮ್ಮೆ ತಾಯಿಯೊಬ್ಬಳ ಕೈಯಿಂದ ಮಗುವನ್ನು ಸಹ ಅದು ಕಿತ್ತು ತಿಂದಿತು. ಯಾರೋ ಪುಣ್ಯಾತ್ಮರು ಅದನ್ನು ಕೊಲ್ಲುವ ತನಕ, ಊರವರಿಗೇನು, ನೆರಕರೆಯವರಿಗೂ ಸಹ ಅನುದಿನ ಚಳಿಜ್ವರ ಬಿಡಲೇ ಇಲ್ಲ. ಈಗಲೂ ಅಂಥ ಹಿಂಸ್ರ ಪಶುಗಳು ನಮ್ಮ ಊರಿನಲ್ಲಿ ಆಗಾಗ ಕಾಣಿಸುವುದು ಉಂಟು ಈ ಕಥೆಯನ್ನು ಕೇಳಿ ಘಟ್ಟದ ಮೇಲಿನವರು ನಮ್ಮ ನಾಡಿಗೆ ಬರಲಾರರು ಎಂಬುದು ನಿಜ. ಆದರೆ ಅಲ್ಲಿರುವ ನೀವುಗಳೂ ನರಭಕ್ಷಕರ ಬಾಯಿಂದ ದೂರವಾಗಿದ್ದೀರಿ ಎಂದು ನನಗೆ ಅನಿಸುವುದಿಲ್ಲ.

ಹಾಗಿರಲು ನೀವು ಗಮನಿಸಬೇಕಾದ ಸಂಗತಿಗಳು ಎರಡಿವೆ. ನರಭಕ್ಷಕನನ್ನು ಸುಧಾರಿಸಲು ಬಂದೀತೆ ಎಂಬುದೊಂದು ಸಂಗತಿ. ನಿಮ್ಮಲ್ಲಿಯೂ ಅಂಥ ಪ್ರಾಣಿಗಳಿವೆಯೋ ಎಂದು ನೋಡಿಕೊಳ್ಳುವುದು ಇನ್ನೊಂದು ಸಂಗತಿ.

ಭೂಗೋಲ ಜ್ಞಾನ ಅರ್ಧಮರ್ಧ ಪಡೆದ ಯಾವನಾದರೂ ಒಬ್ಬನು ನಿಮಗೆ ಬೋರ್ನಿಯೋ ದಯಾಕರ ಸುದ್ದಿ ಹೇಳಬಹುದು. ಅವರಲ್ಲಿ ಒಂದು ಕಾಲದಲ್ಲಿ ತಲೆ ಹೊಡೆಕತನವಿತ್ತು ಎಂದಿರಬಹುದು ನಮ್ಮ ಸಮೀಪದ, ಆಸ್ಸಾಮಿನ ನಾಗಜನರಲ್ಲಿ ಇನ್ನೂ ಆ ಪರಂಪರೆಯು ಲೋಪವಾಗಿಲ್ಲ-ಎಂಬುದನ್ನೂ ನೀವು ಕೇಳಿರಬಹುದು. ಕಾಂಗ್ರೆಸ್ಸ್ ಸರಕಾರವು ಆಸ್ಸಾಮಿಗೆ ಬಂದ ಬಳಿಕ ನಾಗರು ಸುಧಾರಿಸಬಹುದು-ಎಂಬ ಆಸೆಯೂ ನಿಮ್ಮಲ್ಲಿ ಉಂಟಾಗಬಹುದು. ನಾನು ಈ ವಿಚಾರಗಳಲ್ಲೆಲ್ಲಾ ನಿರಾಶಾವಾದಿ ಅಲ್ಲದೆ ನನ್ನ ಖಂಡಿತ ಅನುಭವವೆಂದರೆ ನಮ್ಮ ಹಿಂದುಸ್ಥಾನದಲ್ಲಿ, ಏಕೀಕರಣವಾಗದಿದ್ದರೂ ಕರ್ನಾಟಕದಲ್ಲಿ, ನರಭಕ್ಷಕರ ಸಂಖ್ಯೆ ಇನ್ನೂ ತುಂಬಾ ಉಳಿಯುವುದು ಎಂದು. ನನ್ನನ್ನು ಎದುರಿಸುವ ಪ್ರತಿ 10ನೆಯ ಮನುಷ್ಯನ ವಿಷಯದಲ್ಲಿ ನನಗೆ ಈ ಸಂಶಯ ಬರುತ್ತದೆ ಪ್ರಾಯಶಃ ದಕ್ಷಿಣಕನ್ನಡದ ವನ್ಯ ನರಭಕ್ಷಕಗಳ ಕಥೆಯನ್ನು ಕೇಳಿ ನನಗೆ ಈ ಮನೋಭೀತಿ ಉಂಟಾಗಿರಬೇಕು ಎನ್ನಬಹುದು ನೀವು. ಹೇಗೇ ಇರಲಿ, ನನ್ನ ಅನುಭವ ನಿಮ್ಮ ಮುಂದಿರಿಸುತ್ತೇನೆ.



ಲೇಖಕರು—

ಶ್ರೀ ಶಿವರಾಮ ಕಾರಂತರು

ನಾನು ನರಭಕ್ಷಕರಿಂದ ದೂರವಾಗಿರಲು ಮಾಡುತ್ತಿರುವ ಉಪಾಯಗಳನ್ನು ಉಲ್ಲೇಖಿಸಿ ಮುಂದೆ ಕೆಲವು ಪ್ರಮಾಣಗಳನ್ನು ಕೊಡುತ್ತೇನೆ

ಯಾರು ಅರೆಗಣ್ಣಿಂದ ನಿಮ್ಮನ್ನು ಕಂಡೊಡನೆ ತೆರಬಾಯಿ ನಗೆಯಾಡುತ್ತಾರೋ ಅಂಥವರಲ್ಲಿ ನೇಕಡ 50 ಮಂದಿ ನರಭಕ್ಷಕರು. ಈ ತೆರೆಬಾಯಿ ನಗುಗಳಲ್ಲಿ ತೀವ್ರ ತೊಡಗಿ ತೀವ್ರ ಮುಗಿಸುವ ನಗುವಿದ್ದರೆ ಅದು ಖಂಡಿತಕ್ಕೂ 75% ನರಭಕ್ಷಕನ ನಗು. ನಿಮ್ಮ ಕಿಸೆಯಲ್ಲಿ Reserve Bankದ ಕಾಗದಗಳು ಹೆಚ್ಚಾಗಿ ಇರುವಾಗ ಅನುದಿನ ನಿಮ್ಮ ಮನೆಗೆ ಬಂದು ನಿಮಗೆ ಕೇಳಲು ವಿರಾಮವಿಲ್ಲದಿದ್ದರೂ ಉಪದೇಶಮಾಡಲು ಸೇರುವ ಜನರಲ್ಲಿ 75%ರಷ್ಟು ಇಂಥವರು.

ನಿಮ್ಮ ಆದರ ಪರಿಚಯವಾಗಿ ಬರಿಯ ನಾಲ್ಕು ದಿವಿ ಮಾತಾಡಿದರೂ 'ತಾವು ದಿವ್ಯ ಭಾಗ್ಯೋದಯ ನಮ್ಮದು-ಬಡವರ ಮನೆಗೆ ಏನನ್ನೋ ಬಾಪಂತೆ-ತಮ್ಮ ಹೆಸರು" ಹೀಗೆಲ್ಲಾ ಉರುಟು ಬಾಯಿಂದ ಚೌಕವಾಗಿ ಮಾತನಾಡುವ ಜನರಲ್ಲಿ 90%ರವರೆಗೂ ನರಭಕ್ಷಕರು ಇರಲು ಕಾರಣವಿದೆ

ನೀವು ತೊಡಕಿನಲ್ಲಿರುವುದನ್ನು ಕಂಡು, ನಿಮ್ಮ ಬಳಿಗೆ ಉಪಕಾರಕ್ಕಾಗಿ ಬಂದು, ಅವರಾಗಿಯೇ ಹಣ ಸಾಲ ಕೊಡಲು ಒಪ್ಪುವವರಲ್ಲಿ ಇಂದಿನ ಬಹಳ ಅವರು ಬಯಸುವ ಬಡ್ಡಿಯು ಧಾರ್ 12%ಮೇಲೆ ಇದ್ದ ಎಂದಾದರೆ ಅದು ತಪ್ಪದೆ ನರಭಕ್ಷಕನೇ ಎಂದು ತಿಳಿಯಿರಿ.

ಪ್ರಾವಿಡೆಂಟ್, ಇನ್ಶೂರನ್ಸ್, ಬೆನಿಫಿಟ ಪ್ರಕಟನೆಗಳಿಂದ ನಿಮಗೆ ನಾಲ್ಕಾರು ರೂಪಾಯಿಗಳ ಲಾಭವನ್ನು ಬರೆಯ ಐದಾರು ಆಣೆಗೇನೇ ತೋರಿಸಿಕೊಡುವ ನಿಮ್ಮ ಸ್ನೇಹಿತರಲ್ಲಿ ನೇಕಡ 99ರಷ್ಟು ಜನರು, ತಮಗೆ ತಾವೇ ತಿಳಿಯದಂತೆ ನರಭಕ್ಷಕರಾಗಿರುತ್ತಾರೆ

ನೀವು ಅಪ್ಪಿತಪ್ಪಿ ಯಾವುದಾದರೂ ಕ್ಷೇತ್ರಕ್ಕೆ ಹೋದರೆ ಅಲ್ಲಿ ನಿಮ್ಮ ಪೂರ್ವಪರಿಚಿತರಂತೆ, ಅಲ್ಲವಾದರೆ ನಿಮ್ಮ ಹಿರಿಯರ ಆಪ್ತರಂತೆ ವರ್ತಿಸುವವರಲ್ಲಿ ನೇಕಡ 60ಕ್ಕೆ ಮೀರಿ ನರಭಕ್ಷಕರಿದ್ದಾರೆ ತಮ್ಮ ತಂದೆತಾಯಿಂದಿರಿಗೆ ಮಾಸ ಸಹ ಕೊಡದೆ, ನಿಮ್ಮ ಪಿತೃಗಳಿಗೆ ಮೋಕ್ಷದ ದಾರಿಯನ್ನು ತೋರಿಸುವವರು ನಿಮಗೆ ಸಿಕ್ಕಿದರೆ-ಅದು ತಪ್ಪದೆ ನರಭಕ್ಷಕನೆಂದು ತಿಳಿದು ನಿಮ್ಮನ್ನು ತಿನ್ನುವ ಮೊದಲು ದೂರಸರಿಯಬೇಕು

ನೀವು ಅರೆ ದಿವಾಳಿಯಾಗಿದ್ದರೂ, ಬರಿಯ ನಾಲ್ಕಾಣೆಯಿಂದ ನಿಮ್ಮ ಗತವೈಭವವನ್ನು ನಿಮಗೆ ಮರಳಿ ಗಳಿಸುವೆನೆಂದು ಅಭಯಕೊಡುವ ವಿಪ್ರರುಗಳಲ್ಲಿ 50%ಕ್ಕೂ ಹೆಚ್ಚಾಗಿ ನರಭಕ್ಷಕರಿದ್ದಾರೆ ಎಂದು ತಿಳಿಯಿರಿ

ವರ್ಷಕ್ಕೊ, ಮೂರು ವರ್ಷಕ್ಕೊ ನಿಮ್ಮ ಮನೆಯ ಬಾಗಿಲಿಗೆ ಮತಬೇಡಲು ಬರುವ ಜನರಲ್ಲಿ ನರಭಕ್ಷಕರ ಸಂಖ್ಯೆ 60% ಇದೆ. ಇಂಥವರಲ್ಲಿ ಯಾರು ಇನ್ನೂ ಮೂರುವರ್ಷದ ತನಕ ನಿಮ್ಮ ಊರಿಗೆ ಕಾಲಿರಿಸದೆ, ಆ ಬಳಿಕ ಒಂದು ದಿನ ನಿಮ್ಮ ಉದ್ಧಾರಕ್ಕೆ ಬರುವೆನೆಂದರೆ, ಅಂಥವರಲ್ಲಿ 80%ರಷ್ಟು ನರಭಕ್ಷಕರಿದ್ದಾರೆಂದು ತಿಳಿಯುವುದು

ಈ ರೀತಿಯ ಪರೀಕ್ಷೆಗೆ ನಿಮ್ಮೊಬ್ಬರನ್ನು ಬಿಟ್ಟು ಉಳಿದವರನ್ನೆಲ್ಲಾ ಚೆನ್ನಾಗಿ ಗುರಿಪಡಿಸಿ, ಇರಬಹುದಾದ ನರಭಕ್ಷಕರಿಂದ ನೀವು ದೂರವಾಗಿದ್ದಲ್ಲಿ-ಇತರರು ನಿಮ್ಮನ್ನು ಬಂದು ನುಂಗಲಾರರೆಂದೂ, ನಿಮಗೆ ಇತರರನ್ನು ನುಂಗುವ (ಕೇವಲ ಆತ್ಮರಕ್ಷಣೆ) ಸ್ವಾತಂತ್ರ್ಯವಿದೆಯೆಂದೂ ತಿಳಿಯಬೇಕು.

ನರಭಕ್ಷಕಶೋಧಕರಿಗೆ, ಅಥವಾ ಅವರಲ್ಲೇ ಒಂದು ಪ್ರಾಣಿಪ್ರಭೇದವನ್ನು ತೋರಿಸಿ ನಾನು ನಿಮ್ಮಿಂದ ವಿಶ್ರಮಿಸುವೆನು. ನರಭಕ್ಷಕ ಎಂದರೆ, ಬರಿಯ ನರರಕ್ತಪಾನ ಮಾಡುವ ಪ್ರಾಣಿ, ಅದು ಒಂದೇಟಿಗೆ ಮನುಷ್ಯನನ್ನು ಕೊಂದು, ಹರಿದು ತಿನ್ನುವುದು ಎಂದು ಊಹಿಸಬೇಡಿರಿ ಈ ಕಲಸವನ್ನು ಬುದ್ಧಿವಂತ ನರಭಕ್ಷಕವು ಎಂದೂ ಮಾಡಲಾರದು, ನಾಳಿನ ಯೋಜನೆ ಅದಕ್ಕೆ ಇದೆ ಆದುದರಿಂದ ಅದು ಭಕ್ಷಣ ಕಾರ್ಯವನ್ನು ನಿಧಾನವಾಗಿ ಮಾಡಲೂಬಹುದು

ಈ ಜಾತಿಯಲ್ಲೇ ಒಂದು ಉಪವರ್ಗವೆಂದರೆ, ನಿಮಗೆ ತಿಳಿಯದಂತೆ ಅಂಟಿಕೊಂಡು, ಕಂಡರೂ ಕೈಬಿಡದ ನೀರು ಮತ್ತು ನೆಲ ಜಿಗಳೆಗಳು. ಅವುಗಳು ಸಾಕಷ್ಟು ಬಲಯುತವೂ, ಗಾತ್ರವೂ ಆಗಿದ್ದರೆ ನರಭಕ್ಷಕರ ಹುಲಿಯಂತೆ ನಿಮ್ಮನ್ನು ಬೇಗನೆ ಮುಗಿಸಬಹುದಿತ್ತು ಆದರೆ ದೇವರು ಕೊಟ್ಟ ಜೊಟ್ಟೆ ಕಿರಿದಾದುದರಿಂದ ಯಥಾನುಶಕ್ತಿ, ಅಷ್ಟೆ ಅಲ್ಲ ಶಕ್ತಿಮೀರಿ ಊಟಮಾಡಿದ ಮೇಲೂ ನಾವು ಅದಕ್ಕಿಂತ ದೊಡ್ಡದಾದುದರಿಂದ, ಉಳಿದುಕೊಳ್ಳುವುದುಂಟು. ಹಲವು ಜಿಗಳೆಗಳು, ಹಲವು ದಿವಸಗಳ ತನಕ ನಮ್ಮ ರಕ್ತಕ್ಕಾಗಿ ತಗಲಿಕೊಂಡರೆ ಆಗ ನಾವೂ ಆಹುತಿಯಾಗಬೇಕು. ನರಭಕ್ಷಕರ ವಿಚಾರದಲ್ಲಿ ನಿನಗೆ ವಿಶಾಲ ದೃಷ್ಟಿಬೇಕು. ಜಿಗಳೆಯೆಂಬುದು 'ನರಭಕ್ಷಕರ ಪ್ರಭೇದ', ಎಂಬ ಸಿದ್ಧಾಂತಕಾರರ ವಚನದಂತೆ ತಿಳಿಯತಕ್ಕದು

ನಾನು ನಮ್ಮೂರಿನಿಂದ ಬಸ್ ಏರುವಾಗಲೆಲ್ಲ ದಾರಿಯಲ್ಲಿ ಪಣೆಮಂಗಳೂರಲ್ಲಿ ಅದು ನಿಂತಾಗಲೆಲ್ಲ, ಮಂಗಳೂರಲ್ಲಿ ಇಳಿದಾಗಲೆಲ್ಲ ಈ ತೆರನ ಜೀವಿಗಳನ್ನು ಸದಾ ಕಾಣುತ್ತೇನೆ 'ಹೋಗಲಿ' ಎಂದು ಒಂದು ಕಾಸುಕೊಟ್ಟರೆ 'ಪಾವಣೆ' ಅನ್ನುತ್ತಾರೆ

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.

ಶುದ್ಧ ಹಾಗೂ ಕೆನೆ ತುಂಬಿದ ಹಾಲು ಬೇಕಾದರೆ

ನಮ್ಮ ಹಾಲು ಮಾರಾಟದ ದುಕಾನನ್ನು ಸಂದರ್ಶಿಸರಿ.

ಮೊಹರು ಮಾಡಲ್ಪಟ್ಟ ಬಾಟ್ಲಿಗಳಲ್ಲಿ ನಿಮ್ಮ ಮನೆಬಾಗಿಲಿಗೆ ಕಳುಹಿಸಲ್ಪಡುವುದೇ ಹಾಲು.

ಅಂಗಡಿಯು ಇಡೀ ಹಗಲು ಮತ್ತು ರಾತ್ರಿ 11 ಗಂಟೆ ವರೆಗೆ ತೆರೆದಿರುವುದು.

ಶುದ್ಧ ಕೆನೆ ಹಾಲು ಗ್ಲಾಸಿಗೆ **0—1—3** ದರದಲ್ಲಿ ಮಾರಲ್ಪಡುವುದು.

ಹೆಚ್ಚಿನ ಮಾಹಿತಿಗೆ ಬರೆಯಿರಿ —

ಬೊಂಬೆ ಮಿಲ್ಕ್ ಹೌಸ್

ಕೇರಿ ಹೌಸ್, ವಲ್ಲಭಭಾಯಿ ಪಟೇಲ್ ಸ್ಟ್ರೀಟ್,

ಪ್ರೋಪ್ರೈ . . . . ಬೊಂಬಾಯಿ.

THE BOMBAY MILK HOUSE

ಪಾವಾಣೆ ಕೊಟ್ಟರೋ 'ಹರಕುಪಂಚೆ' ಯೆಂದು ಕೇಳುತ್ತಾರೆ.

ಸಂಜೆ ನೀವು ಬಸ್ ಆಫೀಸಿಗೆ ಬಂದರೆ ತಿರುಗಿ ಅವನೇ ನಿಮಗೆ ಗಂಟುಬಿದ್ದರು 'ಬೆಳಗ್ಗೆ ಕೊಡಲಿಲ್ಲವೇ' ಎಂದು ಕೇಳಿದರೆ 'ಅಪ್ಪ್ಯಾರೋ ಸ್ವಾಮಿ, ನಾನು ಈಗ ಪಯ್ಯನ್ನೂರಿಂದ ಬಂದೆ' ಅಂದರೂ ಆಯಿತು ನಿನಗೇನು ಕಾಯಿಲೆ? ಎಂದು ಕೇಳಿದರೆ 'ಸ್ವಾಮಿ, ಮೂರು ದಿವಸವಾಯಿತು ಊಟವಿಲ್ಲದೆ' ಎಂದುತ್ತರ. ಆಗ ನಿಮ್ಮ ಬಾಲ್ಯೆವಿಕ್ ಬುದ್ಧಿಯು ಕರಗಿ ನೀರಾಗಿ ಅವನ ಕೈಮೇಲೆ ಅಂದು ಪಾವಾಣೆಯು ರೂಪದಲ್ಲಿ ಹರಿದೇ ಹರಿಯುವುದು. ಮರುದಿನ ಅದೇ ಸ್ಥಳದಲ್ಲಿ ಅವನದೇ ಭೇಟಿ. ಅವನಾಗಿಯೇ ಹೇಳುತ್ತಾನೆ. "ಸ್ವಾಮಿ ಕಾಯಿಲೆಯಾಗಿ ಆಸ್ಪತ್ರೆಯಲ್ಲಿ ಮಲಗಿದ್ದೆ. ಬೆಳಗ್ಗೆ ಬಿಟ್ಟರು. ಊರಿಗೆ ಹೋಗಲು ಪೈಯಿಲ್ಲ" ಎಂದನು. ಮರುದಿನ ಭೇಟಿಯಾದಾಗ ಅತ್ತು "ಸ್ವಾಮಿ, ಕಾಗದ ಬಂದಿದೆ. ತಾಯಿ ತೀರಿಕೊಂಡಳೆಂದು, ಊರಿಗೆ ಹೋಗಲು ಒಂದು ಬಿಡುಕಾಸಿಲ್ಲ"–ಎನ್ನುವನು. ನಿಮಗೇ ನಿಮ್ಮ ಬುದ್ಧಿಭ್ರಮಣೆಯಾಗಬೇಕು, ಕೊನೆಗೂ ನೀವು ಅವನನ್ನೇ ನಂಬಿ, ನಿಮ್ಮ ಕಣ್‌ಸಾಕ್ಷಿಯೇ ಸುಳ್ಳೆಂದು ತಿಳಿದು ಇನ್ನೊಂದು ಆಣೆಯನ್ನೇ ಎಸೆಯುತ್ತೀರಿ, ಇಂಥ ಜಿಗಳೆಗಳಲ್ಲಾ ಪ್ರಭೇದ ಬಹಳ ಇದೆ.

ನಿಜವಾದ ನರಭಕ್ಷಕನನ್ನು ನಾನು ನೋಡಿದುದು ಸಾಲೆ ಕಲಿಯುವಾಗ ಆಗ ಯಾವುದೋ ಒಂದು ಫಾರ್ಮಿನಲ್ಲಿ (Cattle farm ಅಲ್ಲ) ಓದುತ್ತಿದ್ದೆ. ನಮಗೊಬ್ಬರು ಉಪಾಧ್ಯಾಯರಿದ್ದರು. ಮಾತನಾಡಿದರೆ ಮೈಲಿಗಿಂತ ಮೂರಡಿ ದೂರಕ್ಕೆ ಕೇಳಿಸದು 'ಗಟ್ಟಿ'ಯೆಂದರೆ ಸಿಟ್ಟುಗೊಂಡಾರು. 'ನಿನ್ನ ಕಿವಿಗ ಚಿಮಣಿ ಎಣ್ಣೆ ಹಾಕಿಕೋ'–ಅಂದಾರು ಅವರು ಹತ್ತು ತಿಂಗಳಕಾಲ ನನ್ನ ಪರಮಗುರುಗಳಾಗಿದ್ದರು. ಕಾರ್ಕಳದ ದೊರೆಯು ಕಣ್ಣಾದರೂ ಅಲುಗಲು ಶಕ್ಯವಿದೆ! ಇವರ ಮುಖಸ್ನಾಯುಗಳು ಚಂಚಲವಾಗವು—ಎಂಥ ಯೋಗ! ನನ್ನ ಹಲವು ಮಿತ್ರರು 'ನಿನ್ನ ಭಾಗ್ಯ, ಅಂಥ ಪಾಪದ, ಸಂಭಾವಿತ ಉಪಾಧ್ಯಾಯರು ಪಡೆದುಕೊಂಡು ಬಂದರೂ ಸಿಗಲಾರರು' ಅಂದುದುಂಟು. ಅವರು ನನಗೆ ಗದ್ಯ, ಪದ್ಯ, ಇಂಗ್ಲಿಷ, ಕನ್ನಡ, ಗಣಿತ, ಚರಿತ್ರೆ ವಿಜ್ಞಾನ ಭೂಗೋಲ ಅರ್ಥಾತ್ ಡ್ರಾಯಿಂಗ್ ಡ್ರಿಲ್ ಬಿಟ್ಟು ಎಲ್ಲಕ್ಕೂ ಅಧ್ಯಾಪಕರಾಗಿದ್ದರು. ಜೂನ್ ತಿಂಗಳಲ್ಲಿ ಅವರ ಶಿಷ್ಯನಾಗಿ, ಎಪ್ರಿಲಿನಲ್ಲಿ ಹೊರಬಂದು ಒಬ್ಬ ವೈದ್ಯರಲ್ಲಿ ಹೋಗಿ ನನ್ನ ಮೈ ಪರೀಕ್ಷಿಸಿಕೊಂಡೆ ಅವರು ನನ್ನನ್ನು ಮುಟ್ಟಿದರು! ಸೂಜಿಯಿಂದ ಚುಚ್ಚಿದರು–ನನಗೆ ಅದೇನೂ ಅನಿಸಲೇ ಇಲ್ಲ. ಇದನ್ನೆಲ್ಲ ಕಂಡು ನಿನ್ನ ನರಗಳೆಲ್ಲ ಸತ್ತಿವೆ-ಎಂದರು. ನಮ್ಮ ಮನೆಯವರು ನನ್ನ ಮೈಗೆ 'ಪಿಂಡತೈಲ'ದ ಉಪಚಾರ ನಡಿಸಿದರು.

ನಾನು ಅದರಿಂದ ತೃಪ್ತನಾಗದೆ ಒಂದು ದಿವಸ ನಮ್ಮ ಸಾಯನ್ಸ್‌ಮಾಸ್ತರ ಸ್ನೇಹ ಮಾಡಿ, ಅವರ ಮೈಕ್ರೊಸ್ಕೋಪವನ್ನು ಹೊರಗೆ ತೆಗಿಯಿಸಿದೆ. 'ಏನು ನೋಡಬೇಕು' ಎಂದು ಕೇಳಿದರೆ "ನನಗೆ ಗೊತ್ತಿದೆ" ಎಂದು ಹೇಳಿ ನಾನೇ ತುಸು ಹೊತ್ತಿನ ಮೊದಲು ನನ್ನ ಮೈಯಿಂದ ಕಿತ್ತುಹೋದ ಒಂದು ಚರ್ಮದ ತುಂಡನ್ನು ಮೈಕ್ರೋಸ್ಕೋಪಿನ ಕೆಳಗೆ ಒಂದು ಅರ್ಧತಾಸು ಶೋಧಿಸಿದೆ. "ಸರ್ ಇದರ ವಿಶಾಲೀಕರಣ ಎಷ್ಟು?" ಎಂದು ಕೇಳಿದೆ. 9,000 times' ಎಂದು ಹಿಗ್ಗಿದರು ಅವರು.

ನಾನು ಮೈಕ್ರೊಸ್ಕೋಪನ್ನು ಅಲ್ಲೇ ಇರಿಸಿ 'ಸರ್, ನರಭಕ್ಷಕ ಸರ್' ತಿಳಿಯಿತು. ಒಂದೇ ಒಂದು ನರ ನನಗೆ ಕಾಣಿಸಲಿಲ್ಲ, ಡಾಕ್ಟ್ರು ಸತ್ತಿದೆ ಎಂದರು, ಸತ್ತಿದ್ದಲ್ಲ–ಅದು ತಿಂದೇ ಹೋಗಿದೆ' ಎಂದೆ.

"ಏನೋ! ಏನು ಅನ್ನುತ್ತೀ?....ಯಾರು ನರತಿಂದರು ಯಾರು ನರಭಕ್ಷಕ?" ಎಂದು ಕೇಳಿದರು ಅವರು.

"ಇನ್ಯಾರು ಸರ್, ನಮ್ಮ ಕ್ಲಾಸು ಟೀಚರ್" ಎಂದು ಅಲ್ಲಿಂದ ಧಾವಿಸಿಬಿಟ್ಟೆ.

ರಕ್ತ, ಎಲುಬು ತಿನ್ನುವ ನರಭಕ್ಷಕರಿಗಿಂತ, ನಮ್ಮ ಬರಿಯ ನರಗಳನ್ನೇ ಆರಿಸಿ ತಿನ್ನುವ ಉಪಾಧ್ಯಾಯರನ್ನೂ ಉಪನ್ಯಾಸಕರನ್ನೂ ಕಂಡರೆ ನನಗೆ ಬಲು ಭೀತಿ. ನೀವಾದರೂ ಅವರಿಂದ ದೂರವಾಗಿರತಕ್ಕದ್ದು. ಇದು ನೇಕಡ 100% ನಿಜ.

—ವಸಂತ.

ದಾರಿಕಾರ

ಧೈರ್ಯದಿಂದ್ರವಿಸು ದಾರಿಕಾರ
ಮಾರ್ಗ ಬಿಸರಿಸಿದರು ಕೂಡ
ನಿನ್ನ ಗುರಿ ಕಂಟಕಿಸಿದರು ಕೂಡ
"ನೋವು-ಆ ಮೋಹಕವು ಪರಿಣಮಿಸಿ
ಅಲ್ಲಿಂದ ಫಲ ಫಲಿತಾರ್ಥಿಸಲು". ೧

ಧೈರ್ಯದಿಂದ್ರವಿಸು ದಾರಿಕಾರ
ಕತ್ತಲೆ ಕವಿದಿದ್ದರೂ ಕೂಡ
ತಾರೆಯೊಡನೇ ಒಂಟಿಯಿದ್ದರೂ ಕೂಡ
ಕಾಯ್ದು ನಿನ್ನಾಕಾಂಕ್ಷೆಗಾಗಿ
ಆ ಔನ್ನತ್ಯದಾ ತೇಜಕಾಗಿ ೨

ಧೈರ್ಯದಿಂದ್ರವಿಸು ದಾರಿಕಾರ
ಹಾದಿ ಮೋಡದಿಂ ಮುಚ್ಚಿಸಿದ್ದರು ಕೂಡ
ಅಸ್ಪಷ್ಟ ಕಾಂತಿ ಗೋಚರಿಸಿದ್ದರು ಕೂಡ
ಬೆಳಕಿನಿಂ ಛಾಯವಂ ಬೆಳಗು
ಜ್ಯೋತಿ ತೇಜದಿಂ ಪಲ್ಲವಿಸುವಂತೆ ೩

ಧೈರ್ಯದಿಂದ್ರವಿಸು ದಾರಿಕಾರ
ಮಾಯೆ ಮುಸುಕು ಮೂಡಿದ್ದರು ಕೂಡ
ವೈಭವದ ಬಿಂಬ ತೋರಿದ್ದರು ಕೂಡ
ಆ–ಮುಸುಕು ಮೋದತು ನಿನ್ನಾಶೋಧಕವು
ನಿನ್ನುತ್ತ ಗೀಳನಾಸ್ಪಸ್ಥತೆಯು ೪

H. R. Dass,
Bangalore.

Broadcast
Your Business

By ADVERTISING
in
NAVAYUGA
The Leading Kanarese Weekly.
For rates
PLEASE APPLY TO THE
ADVT. MANAGER.

ಜನಪದ ಸಾಹಿತ್ಯ

ದೇಶಭಕ್ತ

ರಾಜನರಮನೆ ಪಾಪವಾಶಿಸೆ |
ಈ ಜಗದ ವಿಖ್ಯಾತಿಯಾಶಿಸೆ |
ಸೋಜಿಗದ ಯಂತ್ರಗಳ ಯಾನಂಗಳನು ಆಶಿಸೆ |
ಮೂಜಗವ ಮೋಹಿಸುವ ನಲ್ಮೆಯ,
ಸ್ತ್ರೀಜನದ ಪ್ರೇಮವನು ಆಶಿಸೆ |
ಆ ಜನ್ಮದಿಂ ಕತ್ತಲೋದಿಪ ಅಂಗ್ಲ ನುಡಿಬೇಡ ||೧|
ಪರಿಪರಿಯ ಸಿರಿದಾನಂಗಳ |
ಹರುಷವಹ ಸುಖಚಾಪಂಗಳ |
ಮಿರುಮಿರುಗುವಾ ಸಿಂಗಾರಗಳೆಲ್ಲವನು ತೊರೆವೆ
ಮರದ ನೆರಳಿನ ಗಿರಿಯ ಕಲ್ಲಿನ |
ನೆರವಿಯೊಳೊರಗುತಲಿರುವೆ ಸತತ |
ಮೆರೆವ ಆಕಾಶವನು ದಿಟ್ಟಿಸಿ ಶಯನ ಸುಖದಲಿ
ಬಾಳ್ವೆ || ೨
ಬರಲಿನಗೆ ಬಡತನದ ಬೇಗೆಯು |
ಇರಲಿನಗೆ ಇಷ್ಟಾರ್ಥ ಕಷ್ಟವು |
ತೊರೆಯಲಿನ್ನನು ಸರ್ವ ಸಂಪತ್ ಸಿದ್ಧಿಫಲವೆಲ್ಲಾ |
ನಿರತ ನಾನೀ ಭರತಮಂಡದ |
ಪರಮ ಸೇವಕರೊಳಗೆ ಬೆರೆಯುತ |
ಸಿರಿವರನ ಕರುಣೆಯನು ಕಾಂಕ್ಷಿಪೆ ಶುದ್ಧಭಾವದೊಳು || ೩

ಯು. ಕೆ. ರಂಗ.
ಬೊಂಬಾಯಿ.

ಫೇನ್ಸಿ ಲಿವರ್ ರಿಸ್ಟ್‌ವಾಚ್

ರೂ. 2—4—0.

ಸಣ್ಣ ಸುಂದರ, ಆಕಾರ ಗಟ್ಟಿ ಮಟ್ಟಾದ ಮೆಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರಂಟಿ ಉಂಡು ಕೃತಿಯು, ದೀರ್ಘಚತುಷ್ಕೋಣಾಕೃತಿಯು ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಚಿತ್ರದಲ್ಲಿ ತೋರುವ ಲೇಡಿ ರಿಸ್ಟ್‌ವಾಚಿಗೆ ರೂ 6-0-0, ಮೇಲಿರುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ಟಪ್ಪಾಲು ಪ್ರತ್ಯೇಕ.

ಎಚ್. ದಾವಿದ್ ಆಂಡ್ ಕೊ.
ಪೊ. ಬಾಕ್ಸ್ 11424 ಕಲ್ಕತ್ತ.
H. David & Co.
Post Box No. 11424. Calcutta

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದು ಹಕೀಮ್ಸ, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು, ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ಮೋಸಗೊಳಿಸುವ ಔಷಧವೆಂದು ಖಾತ್ರಿಪಡಿಸುವವರಿಗೆ ರೂಪಾಯಿ 100 ಬಹುಮಾನ.

ಸ್ತಂಭಕ ವಟಿ–ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ವರೆಗೆ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram
No 552 **P. O. Katrisarai, (Gaya)**



ಉಪಯೋಗಕ್ಕೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೇಳಲೂ ಬೇಕಷ್ಟು ಸಾಮಾನುಗಳಿವೆ ದಿನ ನಿತ್ಯ ನೆಂಬಂತೆ ಸಾಮಾನುಗಳು ಬೇಲುಗಟ್ಟಲೆ ಬರುತ್ತವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ಜಾಹೀರು ವಿನಂತಿ.

ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಉಡ್ಪಿ ತಾಲೂಕು ಗುಂಡ್ಮಿ ಗ್ರಾಮದ ಮಂಜುನಾಥ ಸಹಸ್ರ ಯಾನೆ ಕೆ. ಜಿ. ಕೆ. ರಾವ್ ಎಂಬವರು ನಮ್ಮ ಫರ್ಮಿನ ಔಷಧ ಮಾರಾಟದ ಟ್ರಾವಲಿಂಗ್ ಏಜಂಟರಾಗಿದ್ದರು. ಈಚೆಗೆ ಅವರ ಏಜನ್ಸಿಯನ್ನು ವಜಾ ಮಾಡಿದೆ. ಅವರಿಗೂ ನಮ್ಮ ಫರ್ಮಿಗೂ ಯಾವ ತರದ ಸಂಬಂಧವೂ ಇರುವುದಿಲ್ಲ. ಅವರು ನಡಿಸುವ ಪತ್ರವ್ಯವಹಾರಗಳು ನಮ್ಮ ಫರ್ಮಿಗೆ ಸಂಬಂಧಪಟ್ಟದ್ದಲ್ಲವೆಂಬದನ್ನು ಸರ್ವರೂ ತಿಳಿದಿರತಕ್ಕದ್ದು.

ಡಾ| ಎ. ಎನ್. ಶ್ರೀನಿವಾಸ ರಾವ್,
ಆಯುರ್ವೇದ ವೈದ್ಯ ವಿದ್ವಾನ್,
ಯು. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಆತಂಕನಿಗ್ರಹ ಮಾತ್ರೆ

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಿಮು ದಬ್ಬಿಗಳಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗು ವ್ಯಭಿಚಾರಿ ಭೋಗಮಾಡುವುದರಿಂದಲೂ ದುಷ್ಟಮೈಥುನದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಪುರುಷತ್ವ, ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ

ಆತಂಕನಿಗ್ರಹ ಫಾರ್ಮಸಿ, ೩೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ಪ್ರಪಂಚದ ಸೈನ್ಯಗಳು

ಕಳೆದ ಮಹಾಯುದ್ಧವಾದ ಮೇಲೆ ಕೆಲವು ಕಾಲದ ವರೆಗೆ ಜಗತ್ತಿನಲ್ಲಿ ಶಾಂತಿಯಿತ್ತು. ಅಲ್ಲದೆ ಆಗ ನಡೆದ ಸಂಧಿಯ ಫಲವಾಗಿ, ಪ್ರತಿಯೊಬ್ಬರೂ ಇನ್ನು ಮುಂದೆ ಜಗತ್ತಿನಲ್ಲಿ ಶಾಂತಿ ಮತ್ತು ನ್ಯಾಯದ ಸಾಮ್ರಾಜ್ಯವು ಸ್ಥಾಪಿಸಲ್ಪಡುವುದೆಂದೇ ಭಾವಿಸಿದ್ದರು. ಅಲ್ಲದೆ ಬಲಯುತ ರಾಷ್ಟ್ರಗಳು, ಶಸ್ತ್ರ ಸಜ್ಜಿತ ರಾಷ್ಟ್ರಗಳು, ದುರ್ಬಲವಾದ, ಶಸ್ತ್ರರಹಿತವಾದ ರಾಷ್ಟ್ರಗಳನ್ನು ಇನ್ನು ಮುಂದೆ ಆಕ್ರಮಿಸಿಕೊಳ್ಳುವುದಿಲ್ಲವೆಂದೂ ತಿಳಿದಿದ್ದರು. ಆದರೆ ಇದು ಕೇವಲ ಕನಸಿನ ಕಲ್ಪನೆಯಾಯಿತು. ಏಕೆಂದರೆ ಎಲ್ಲ ಸ್ವಾಧೀನ ರಾಷ್ಟ್ರಗಳೂ ತಮ್ಮ ಸೈನ್ಯಬಲವನ್ನು ಮಿತಿಮೀರಿ ಹೆಚ್ಚಿಸಲಾರಂಭಿಸಿದುವು. ಅಬಿಸೀನಿಯಾ ಯುದ್ಧದಿಂದ ನಾವು ತಿಳಿದುದೇನೆಂದರೆ ಸುಶಿಕ್ಷಿತರಾದ—ಆಧುನಿಕ ಶಿಕ್ಷಣಪಡೆದ—ಸೈನಿಕರನ್ನು ಎಷ್ಟೇ ಬಲಶಾಲಿಗಳಾದ ಸೈನಿಕರೂ (ಇವರು ಅಶಿಕ್ಷಿತರಾಗಿದ್ದರೆ) ಎದುರಿಸಲಾರರು. ಸ್ಪೇನಿನ ಗೃಹಕಲಹ, ಚೀನ, ಜಪಾನ್ ಯುದ್ಧಗಳ ಪರಿಣಾಮವಾಗಿ ಕೆಲವು ದೇಶಗಳು ತಮ್ಮ ಸೈನ್ಯದ ಬಲಾಬಲಗಳನ್ನರಿತುಕೊಳ್ಳುವ ಅವಕಾಶ ದೊರೆಯಿತು. ಮಹಾಯುದ್ಧದ ನಂತರ ಜರ್ಮನಿಯ ಸೈನ್ಯವನ್ನು ಸಂಪೂರ್ಣವಾಗಿ ಕಡಿಮೆ ಮಾಡಲಾಗಿತ್ತು. ಇದರಿಂದ ಆ ದೇಶಕ್ಕೆ ನೂತನ ರೀತಿಯಲ್ಲಿ ಸೈನ್ಯವನ್ನು ಸಿದ್ಧಗೊಳಿಸಿಕೊಳ್ಳಲು ಅನುಕೂಲವಾಯಿತು. ಆದರೆ ಇತರ ದೇಶಗಳವರು ಮಾತ್ರ ತಮ್ಮ ಹಿಂದಿನ ರೀತಿಯನ್ನು ಬದಲಾಯಿಸಿಕೊಳ್ಳಲಿಲ್ಲ—ಅವರಿಗೆ ಆ ಸ್ವಾತಂತ್ರ್ಯವಿರಲಿಲ್ಲ. ಮಹಾಯುದ್ಧದ ನಂತರ ವಾಯು ಮುತ್ತಿಗೆಯಿಂದ ರಕ್ಷಿಸಿಕೊಳ್ಳುವ ಯಾವ ಉಪಾಯವನ್ನೂ ಕೈಗೊಳ್ಳಲಿಲ್ಲ. ತಮ್ಮ ವಾಯು ಬಲದಿಂದ ಶತ್ರುಗಳನ್ನು ಧ್ವಂಸಮಾಡುವಷ್ಟು ತಮ್ಮಲ್ಲಿ ಶಕ್ತಿ ಇರುವುದೇ? ಈ ಪ್ರಶ್ನೆಯು ಸೈನ್ಯದವರ ಮುಂದೆ ನಿಂತಿತು. ಅಲ್ಲದೆ ಮೋಟರುಗಳಲ್ಲಿ ಯುದ್ಧಮಾಡುತ್ತ ಕಾಲ್ಬಲವನ್ನು ಸೋಲಿಸುವ ಶಕ್ತಿ ತಮ್ಮಲ್ಲಿದೆಯೇ! ಇದು ಎರಡನೇ ಪ್ರಶ್ನೆ. ಯುದ್ಧ ಸಮಯದಲ್ಲಿ ದೂರದಿಂದ ಬರುತ್ತಿರುವ ವಿಮಾನಗಳ ಮಾರ್ಗದಲ್ಲಿ ಹೋಗುವ ಯಾವ ಯಂತ್ರವೂ ಇರಲಿಲ್ಲ ಅಲ್ಲದೆ ಈ ವಿಮಾನಗಳನ್ನು ದೂರದಿಂದಲೇ ನೋಡಿ ಗುರುತಿಸುವ ಯಂತ್ರಗಳೂ ಅಷ್ಟು ಉತ್ತಮ ತರಹದ್ದಿರಲಿಲ್ಲ. ಈಗಂತೂ ಇದರಲ್ಲಿ ಬಹಳ ಅಭಿವೃದ್ಧಿಯಾಗಿದೆ

ಜರ್ಮನಿಯ ಸೈನ್ಯದಲ್ಲಿ ಕಾಲಾಳುಗಳದೊಂದು ವಿಶೇಷ ಭಾಗವೇ ಇದೆ. ಈ ಸೈನ್ಯ ಪ್ರತಿಭಾಗದಲ್ಲಿಯೂ ಗುಂಡು, ಬಂದೂಕುಗಳು ಸಾಕಷ್ಟಿರುತ್ತವೆ. ಯುದ್ಧಾರಂಭವಾದ ಕೂಡಲೆ ಶತ್ರುಗಳ ಮೇಲೆ ಗುಂಡಿನ ಮಳೆಯನ್ನೇ ಸುರಿಸುವ ವಿಶೇಷ ಕಾರ್ಯವು ವಿಮಾನಗಳದ್ದು. ಇದರಿಂದ ಶತ್ರುಗಳು ಹೆಚ್ಚು ಸಂಖ್ಯೆಯಲ್ಲಿ ಸೇರಲವಕಾಶವಿರುವುದಿಲ್ಲ. ಅಲ್ಲದೆ ಅವರು ಸುಲಭವಾಗಿ ಮುಂದುವರಿಯುವುದಕ್ಕೆ ಸಹ ಕಷ್ಟವಾಗುವಂತೆ ಅವರ ಆಹಾರ ಸಾಮುಗ್ರಿಗಳನ್ನು ಲೂಟಿಮಾಡುವರು. ತಮ್ಮ ಪ್ರತಿಭೆಯನ್ನು ತೋರಿಸಲು, ಈ ವಿಮಾನಗಳು ಸಾಮಾನ್ಯ ಜನರ ಮೇಲೂ ಸಹ ಗುಂಡನ್ನು ಹಾರಿಸುವರು. ಕುದುರೆ ಸೈನ್ಯದಿಂದ ಆಗುವ ಕೆಲಸವನ್ನು ಒಂದು ರೀತಿಯ ಮೋಟಾರುಗಳಿಂದಲೇ ನಡೆಸುವರು. ಆದರೆ ಮೋಟಾರುಗಳು ಸಂಚರಿಸಲು ಮಾರ್ಗ ಸರಿಯಾಗಿಲ್ಲದ ಕಡೆ ಮಾತ್ರ ನಿಜವಾದ ಕುದುರೆಗಳನ್ನು ಉಪಯೋಗಿಸುವರು. ವಿಷವಾಯು ಪ್ರಯೋಗದಿಂದ ರಕ್ಷಿಸಿಕೊಳ್ಳಲು ಮುಖವಾಡಗಳ ಉಪಯೋಗವನ್ನು ಯುರೋಪಿನ ಪ್ರತಿ ನಗರದಲ್ಲಿಯೂ ಕಲಿಸಿರುವರು.

ಅಮೇರಿಕದ ಸಂಯುಕ್ತಪ್ರಾಂತ, ಬ್ರಿಟನ್ನು ಮತ್ತು ಚೀನ ಇವುಗಳ ಹೊರತು, ಜಗತ್ತಿನ ಉಳಿದ ಎಲ್ಲ ಸ್ವಾಧೀನ ರಾಷ್ಟ್ರಗಳಲ್ಲಿಯೂ ಪ್ರಾಯಸ್ಥರಿಗೆ ಸೈನ್ಯ ಶಿಕ್ಷಣವು ಒತ್ತಾಯವಾಗಿದೆ. ಈ ಸೈನ್ಯ ಶಿಕ್ಷಣದ ಕಾಲವು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೀತಿಯಿಂದಿದೆ ಸ್ವಿಜರ್ಲೆಂಡಿನಲ್ಲಿ ಕಾಲಾಳುಗಳೂ ಇಂಜನಿಯರು ಮತ್ತು ಬಂದೂಕಿನ ಸಿಪಾಯಿಗಳಿಗೆ 65 ದಿನಗಳೂ, ರಷ್ಯದಲ್ಲಿ ಶೇ 50 ಸಿಪಾಯಿಗಳಿಗೆ ಒಂದು ತಿಂಗಳ ಶಿಕ್ಷಣವೂ ಕೊಡಲ್ಪಡುತ್ತಿದೆ. ಆದರೆ ರಷ್ಯದಲ್ಲಿ ಸರಾಸರಿ 2ವರ್ಷ ಸೈನ್ಯ ಶಿಕ್ಷಣವನ್ನು ಹೊಂದಲೇಬೇಕು. ಅಮೇರಿಕದ ವಿನಃ ಉಳಿದ ಎಲ್ಲ ದೇಶಗಳಲ್ಲಿಯೂ "ರಿಸರ್ವ್" ಸೈನ್ಯವಿರುರುತ್ತದೆ. ಕೇವಲ ಯುದ್ಧದ ಕಾಲದಲ್ಲೇ ಇದರ ಸಹಾಯವನ್ನು ಅಪೇಕ್ಷಿಸಲಾಗುವುದು. ಅಮೇರಿಕದಲ್ಲಿ ಕೇವಲ ಕೆಲವು ಮಂದಿ ಸೈನ್ಯದ ಅಧಿಕಾರಿಗಳು ಈ ರಿಸರ್ವ್ ಸೈನ್ಯದಲ್ಲಿರುವರು.

Bombay readers please note.

Sri U. K. Ranga C/o Japan Cotton Trading Co. P. B No 247 Bombay, is hereby authorised to enlist Subscribers and canvass Advertisements to '**NAVA YUGA**' in Bombay and its suburbs He is also entitled to collect subscriptions and advt charges as well.

Manager.

WANTED

A lady candidate to edit a high class Kannada monthly magazine for ladies to be started shortly. Apply stating minimum salary required with particulars as to qualification, experience etc, to Box No. 11,

C/o **NAVAYUGA**, Udipi.

ನಿಮ್ಮ ಕರ್ತವ್ಯ

ಬಡವನಿರಲಿ, ಶ್ರೀಮಂತನಿರಲಿ, ವಿವಾಹಿತನಾಗಿರಲಿ, ಅವಿವಾಹಿತನಾಗಿರಲಿ,
ಆತನನ್ನು ಆಶ್ರಯಿಸಿಕೊಂಡಿರುವವರ್‍ಯಾರಾದರೂ ಇದ್ದೇ ಇರುವರು.
ತನಗೆಲ್ಲಾದರೂ ಮರಣವುಂಟಾದರೆ ಅವರ [illegible] ನಿರಾತಂಕವಾಗಿ ಸಾಗುವಂತೆ ವ್ಯವಸ್ಥೆ ಮಾಡಿಡುವುದು
ಪ್ರತಿಯೊಬ್ಬ ಯೌವನಸ್ಥನ ಕರ್ತವ್ಯ.
ಈ ಕರ್ತವ್ಯವನ್ನು ನೆರವೇರಿಸುವುದರಲ್ಲಿ 'ಒರಿಯಂಟಲ್' ನಿಮಗೆ ನೆರವಾಗಿ ಬರುವುದು.

ಏಕೆಂದರೆ ಕಳೆದ 64 ವರುಷಗಳಿಂದಲೂ ಸಾವಿರಾರು ಸಂಸಾರಗಳ ಸಂಪಾದನೆಯ ಕೈಗಳನ್ನು ಮೃತ್ಯುವು ಮುಕ್ಕಿತಿಂದಾಗ ಆ ಸಂಸಾರಗಳ ಅಂತಹ ಆಪತ್ಕಾಲದಲ್ಲಿ ಸಹಾಯವನ್ನಿತ್ತುದು
ಓರಿಯಂಟಲ್ ಪೋಲಿಸಿಗಳೇ!

ಶೀಘ್ರದಲ್ಲಾಗಲೀ ವಿಳಂಬವಾಗಿಯಾಗಲೀ ಪ್ರತಿಯೊಬ್ಬನೂ ವಿಮೆ ಮಾಡಲಿಕ್ಕೆ ಅನರ್ಹನಾಗುವ ಅವಸ್ಥೆಗೆ ಬರುತ್ತಾನೆ.
ಆದುದರಿಂದ ನಿಮ್ಮ
ಕರ್ತವ್ಯವನ್ನು ನೆರವೇರಿಸುವುದರಲ್ಲಿ ತಡಮಾಡಬೇಡಿರಿ.

'ಓರಿಯಂಟಲ್'ನಲ್ಲಿ ನಿಮ್ಮ ಜೀವವಿಮೆ ಮಾಡಿ ನಿಮ್ಮ ಆಶ್ರಿತರ ಭವಿಷ್ಯವನ್ನು ನಿಶ್ಚಿತಗೊಳಿಸಿಡಿರಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತ ವರ್ಷ 1874] ಭಾರತದಲ್ಲೆಲ್ಲಾ ನಮ್ಮ ಶಾಖೆಗಳೂ ಮತ್ತು ಪ್ರತಿನಿಧಿಗಳೂ ಇದ್ದಾರೆ. [ಹೆಡ್ ಆಫೀಸು—**ಬೊಂಬಾಯಿ.**
ಹೆಚ್ಚಿನ ಮಾಹಿತಿ ಬಗ್ಗೆ ಇವರಿಗೆ ಬರೆದು ತಿಳಿದುಕೊಳ್ಳಿ.

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.
ಅಥವಾ
ದಿ ಇನ್ಸ್‌ಪೆಕ್ಟರ್, ಓರಿಯಂಟಲ್ ಲೈಫ್ ಆಫೀಸು, ಮೈನ್ ರೋಡ್, ಮಡಿಕೇರಿ, (ಕೊಡಗು)

Oriental Government Security Life Assurance Co., Ltd.

ಜಾಮೀನು (SURETY)

ಲೇಖಕರು:—ಶ್ರೀ ಬಿ. ಶಾಮರಾಯ ಶೆಟ್ರು, ಬಿ.ಎ.,ಎಲ್.ಟಿ. ಉಡುಪಿ.

●

There is no safety in standing surety for another, for uncertainty in the economic world is becoming more certain as days roll on. We talk of influence. In this work-a-day world influence means a very elastic purse with a mind to loosen its strings freely. After all who has got a bottomless purse? There is no Plutus on *terra firma*. Our financial resources are limited. Such being the case one *or two sureties have ruined many people* and *more families*. Indiscreet and inexperienced acceptance has cost many a youth bitter tears. For the blunder of youth manhood has often to struggle hard and old age to regret. So many times we take all people whom we know and who smile at us as real friends and think much when we eat with them, talk with them and walk with them. A crisis shows where we are. It opens our eyes and shows the real value that many or almost all are acquaintances of different degrees. What a disappointment, when *it is too late to mend! Many a time people give a false balance sheet to their so-called friends and dupe them by requesting them to stand surety.* On account of interobligations financial or otherwise it is very difficult to refuse a request; so the signature is put and often one signature has cost all the fortune which the individual inherited or earned and has ruined him and his family. There are yes-men and no-men in this world. Yes-men are easily duped. No men succeed, but it requires courage to say 'no'. One must cultivate the art of giving a sweet 'no'—and should not say a sour 'no' unless compelled by circumstances. Standing surety is no service to another man. It is really a disservice to both. It ruins both. When *a man gets a loan easily, his extravagant habits develop.* It is better to know the history and biography of people who were *ruined* by surety. The sounding titles of this world bewitch us—the venal beauties fascinate us—the wine sparkles in the glass and attracts us and the dice dazzles and charms us. Life is a challenge to us all. The vanities of to-day will be the inanities of tomorrow. Man sometimes is such a perverse animal that he does not want to learn by other's experience. He resents it. But when he himself learns it will be too late and then he cannot recall his error.

●

(ಚಿನ್ನಮ್ಮ ಗೋಪಾಲನ ಹೆಂಡತಿ, ಗೋವಿಂದನ ತಂಗಿ.)

ಗೋವಿಂದ—ಚಿನ್ನಮ್ಮಾ, ನಾನು ನಿಮ್ಮಲ್ಲಿಗೆ ಬಂದು ಮೂರು ದಿನವಾಯ್ತು. ಅಂಜಿಕೆ ಹಿಂಜರಿಕೆಗಳಿಂದ ಬಂದ ವಿಷಯವನ್ನು ನಿನ್ನಲ್ಲಿ ಬಿಚ್ಚಲಿಲ್ಲ. ಅಂತೂ ಬಚ್ಚಿಡಲಾರದೆ ಹೇಳಬೇಕಾಗಿದೆ. ನನ್ನ ಒಡಹುಟ್ಟಿದ ನೀನು ಬಿಟ್ಟುಕೊಡಲಾರೆಯೆಂಬ ದೃಢ ನಂಬಿಗೆಯಿಂದ ಬಾಯಿ ಬಿಡುತ್ತೇನೆ. ನಿನ್ನಿಂದ ಸಾಧ್ಯವಿರುವ ಮಹದುಪಕಾರ ನನಗೆ ಬೇಕಾಗಿದೆ.

ಚಿನ್ನಮ್ಮ—ಅಣ್ಣಾ, ಸಂಕೋಚವೇಕೆ? ಹೇಳಬಾರದೆ? ನನ್ನಿಂದ ನಿನಗೇನಾದರೂ ಉಪಕಾರವಾಗುವುದಿದ್ದರೆ ನನಗೆ ಸಂತೋಷವೇ.

ಗೋವಿಂದ—ಉಪಕಾರವು ಬೃಹತ್ತಾಗಿ ನನಗೆ ದೊಡ್ಡದಾಗಿದ್ದರೂ ಭಾವನೊಡನೆ ಒಂದೆರಡು ಮಾತುಗಳನ್ನು ನೀನು ಒತ್ತಿಯಾಡಿಯೇ ನೆರವೇರಿಸಿಕೊಡಲಿಕ್ಕಾಗುತ್ತೆ! ಭಾವನು ಕಾಗದದಲ್ಲಿ ಒಂದು ಕೈಯಾಡಿಸಿದರೆ ಆಗಿಹೋಗುತ್ತೆ!

ಚಿನ್ನಮ್ಮ—ಅಷ್ಟು ಸುಲಭದ ಕೆಲಸಕ್ಕೆ ಇಷ್ಟೆಲ್ಲ ಪೀಠಿಕೆಯೇಕೆ? ಏನದು ಹೇಳು, ಕೂಡಲೆ ಮಾಡಿಸಿಕೊಡುತ್ತೇನೆ.

ಗೋವಿಂದ—ಮತ್ತೇನಿಲ್ಲ—ನಾನು ಕೇವಲ ಕೆಲವು ದಿನಗಳ ಮಾತಿಗೆ ಸ್ವಲ್ಪ ತಗಾದೆಯಲ್ಲಿದ್ದೇನೆ. ಅದರ ಪರಿಹಾರಕ್ಕಾಗಿ ಬ್ಯಾಂಕಿಗೆ ಭಾವನದೊಂದು ಜಾಮೀನ್ ದಸ್ಕತು ಮಾತ್ರ ಬೇಕಾಗಿದೆ. ಮತ್ತೆಲ್ಲಾ ನಾನು ನೋಡಿಕೊಳ್ಳುತ್ತೇನೆ.

ಚಿನ್ನಮ್ಮ—ಏನು ಹೇಳುತ್ತೀರೋ ಕರ್ಮ! ಜಾಮೀನೆಂದ್ರೆ ಗಾಳಕ್ಕೆ ಸಿಕ್ಕಿದ ಮೀನೆಂತಾರೆ ಅವರು! ಆದರೂ ಕೇಳಿನೋಡುತ್ತೇನೆ. ಎಷ್ಟಕ್ಕೆ?

ಗೋವಿಂದ—ಹೆಚ್ಚಿಲ್ಲ, ಬರೇ ಚಿಲ್ಲರೆ ಹದಿನೈದು ಸಾವಿರಕ್ಕೆ—ಅದರ ಮೂರು ಪಾಲು ಹೊರಗೆ ಬಾಕಿ ನನಗೆ ಬರೋದೇ ಉಂಟು. ಈಗ ತತ್ಕಾಲ ಮಾತ್ರ ಸ್ವಲ್ಪ 'ಟೈಟ್'—ಅದಕ್ಕೊಂದು ದಸ್ಕತು ಮಾತ್ರ ಸಿಕ್ಕಿದರೆ ಆಯ್ತು. ಮತ್ತದರ ಯೋಚನೆ ಬೇಡ. ಎಲ್ಲ ನಾನು ನೋಡಿಕೊಳ್ಳುತ್ತೇನೆ. ಭಾವನಿಗೆ ಅಷ್ಟೊಂದು ಹೇಳಿ ಒಪ್ಪಿಸಬೇಕು. ನೀನು ಇಷ್ಟೊಂದು ಮಾಡದಿದ್ದರೆ ನನ್ನ ಮರ್ಯಾದೆ ಹೋಗುತ್ತೆ. ನನ್ನದೆಂದರೇನು—ನಿನ್ನದೂ! ನಿನ್ನ ಮನೆತನದ್ದು! ಇಂತಹ ಸಂದರ್ಭದಲ್ಲಿ ನೀನು ಇದೊಂದು ಚಿಲ್ಲರೆ ಕೆಲಸ ಮಾಡಿಸಿಕೊಡಲು ಅಳುಕಿದರೆ ಭಾವನ ಮೇಲೆ ನಿನ್ನ ಪ್ರತಾಪ ನಡೆಯೋದಿಲ್ಲಾಂತ ನಮ್ಮ ಮನೆಮಂದಿ ಹೇಳುವ ಮಾತೇ ಸಿದ್ಧಾಂತವಾದಂತಾಗುತ್ತೆ! ನಾನೇ ಕೇಳಬಹುದಿತ್ತು. ಆದರೆ ಸ್ವಲ್ಪ ದಾಕ್ಷಿಣ್ಯ. ನಿನ್ನ ಸಲಿಗೆಯ ನುಡಿಗೆ ಭಾವ ಸುಲಭವಾಗಿ ಸಡಿಲುಬಿಡುವರಲ್ಲಿ ನಮ್ಮ ಭಾವನೆಂಟತನದ ಕಡಪ ತೋರುವುದು ಚೆಂದವಲ್ಲ ನೋಡು.

ಚಿನ್ನಮ್ಮ—ನನಗೆ ನುಂಗಲಿಕ್ಕೂ ಅಲ್ಲ, ಉಗುಳಲಿಕ್ಕೂ ಅಲ್ಲಾಂತ ಮಾಡಿದೆಯಲ್ಲ! ಹದಿನೈದು ಸಾರ! ಏನು ಹೇಳ್ತಾರೋ! ಬೈದು ಭಂಗಿಸುತ್ತಾರೋ!

ಗೋವಿಂದ—ಹದಿನೈದಾದರೇನು, ಇಪ್ಪತ್ತೈದಾದರೇನು! ನೀನೂ ಕೊಡಬೇಕಾಗಿಲ್ಲ—ಭಾವನೂ ಬಿಚ್ಚಬೇಕಾಗಿಲ್ಲ. ನಾಳೆ ತುಂಬಿಸತಕ್ಕವನಾಗಿದ್ದೇನೆ.

ಆದರೆ ಆ ಬ್ಯಾಂಕಿನವರಮೊಂದು ರೋಗವುಂಟಲ್ಲ! ಮೈಸೂರು ಮಹಾರಾಜ ಬಂದರೂ ಜಾಮೀನು ಯಾರೂಂತ ಕೇಳೋದು! ಅದಕ್ಕಾಗಿ ಒಂದು ದಸ್ಕತು ಮಾತ್ರ ಬೇಕಾದ್ದು. ಅಂತೂ ನಿನ್ನ ಮನೆತನದ ಮಾನ ಮರ್ಯಾದೆಯ ಹೆಗ್ಗಳಿಕೆ, ನಿನ್ನ ಅಣ್ಣನ ಮೇಲಿನ ಅಭಿಮಾನ, ನಿನ್ನ ಗಂಡನ ಮೇಲೆ ನಿನಗಿರುವ ಹಿಡಿತ, ಇವೆಲ್ಲವುಗಳ ಪರೀಕ್ಷಾಕಾಲ ಇದು.

ಚಿನ್ನಮ್ಮ—ನೀನು ನನ್ನನ್ನು ಬಿಡೋದಿಲ್ಲ. ಪೇಟೆಯತ್ತ ಕಡೆ ಸುತ್ತಿ ಬಾ. ಅಷ್ಟರಲ್ಲಿ ಮಾತಾಡಿ ಇಡುತ್ತೇನೆ.........(ಗಂಡನೊಂದಿಗೆ)— ಏನೂಂದ್ರೆ ಣ್ಣ—ನಿಮ್ಮ ಭಾವ ಬಂದಿದ್ರಲ್ಲಾ, ಅವರು ಏನಾ ನೀವು ಬೈದು ಬಿಡುತ್ತೀರೀಂತ—ಅಲ್ಲಾ, ನನಗೆ ನಿಮ್ಮ ಹತ್ತಿರ ಹೇಳಲಿಕ್ಕೇ ಹೆದರಿಕೆ ಆಗುತ್ತದೆ—

ಗೋಪಾಲ—ಎಂಥಾದ್ದು, ಎಂಥಾದ್ದು—ಒಂದೇ ಮಾತಿಗೆ ಹೇಳಿ ಬಿಡ ಬಾರದ್ದಾ? ಅದಕ್ಕೂ ಒಂದು ಬಿನ್ನಾಣ, ಥಳಕು! ನಿಮಗೆ ಹೆಂಗಸರಿಗೆ ನೇರಾಗಿ ಮಾತಾಡಲಿಕ್ಕೆ ಬರೋದಿಲ್ಲವಲ್ಲ! ಎಂಥಾದ್ದಪ್ಪಾ ಹೆದರೋದೇನು? ಹೇಳಿಬಿಡು ಒಂದೆ!

ಚಿನ್ನಮ್ಮ—ಮತ್ತೇನಿಲ್ಲ, ನಿಮ್ಮ ಭಾವನಿಗೆ ಒಂದು ಜಾ......

ಗೋಪಾಲ—ಪೂರ್ತಿ ಬಾಯಿಬಿಟ್ಟು ಹೇಳಪ್ಪ ...ಜಾ......ಅಂದರೆ?

ಚಿನ್ನಮ್ಮ—ಒಂದು ಜಾಮೀನು ಹಾಕಬೇಕಂತೆ.

ಗೋಪಾಲ—ಜಾಮೀನ್! ಜಾಮೀನ್! ಆ ಪ್ರಸ್ತಾಪ ಮಾತ್ರ ಎತ್ತ ಬೇಡ.

ಚಿನ್ನಮ್ಮ—ಇಸ್ಸೀಯಪ್ಪಾ! ಅದು ಎಂಥಾದ್ದು ನಿಮ್ಮದು! ನನ್ನದೊಂದು ಮಾತೂ ಕೇಳೋದಿಲ್ಲಾಂದ್ರೆ. ನಮ್ಮ ಮನೆಯಲ್ಲಿಯೂ ಹಾಗೆಯೇ ಹೇಳುತ್ತಾರಂತೆ—ಅವಳದ್ದು ಯಾವ ಮಾತು ಅವನ ಹತ್ತಿರ ನಡಿಯುವುದಿಲ್ಲಾಂತ. ಅದಕ್ಕೆ ತಕ್ಕ ನೀವೂ ಮಾಡ್ತೀರಿ. ನನಗಿನ್ನೇನು ಭಾರ ತೋರ ಉಳೀತು?

ಗೋಪಾಲ—ಏ ಹುಚ್ಚೀ! ನನ್ನ ಕಣ್ಣು ಎಲ್ಲಿ ಉಂಟೂಂತೀನೆ! ನಿನ್ನ ಮಾತನ್ನು ಕೆಲವು ಸಂದರ್ಭಗಳಲ್ಲಿ ಕೇಳದಿದ್ದರೂ ನಿನಗೆ ಹೇರಳ ಚಿನ್ನಾಭರಣಗಳನ್ನೂ ಆಸ್ತಿಪಾಸ್ತಿಗಳನ್ನೂ ಮಾಡಿ ಹಾಕಲಿಲ್ಲವೇ—ಮತ್ತೇನು ಬೇಕು? ಯಾವ ಗಂಡ ಯಾವ ಹೆಂಡ್ತಿಯನ್ನು ಇಷ್ಟು ಆದರದಿಂದ, ಪ್ರೇಮದಿಂದ ನೋಡ್ತಾನೆ? ಹೇಳು.

ಚಿನ್ನಮ್ಮ—ಅದು ಅಲ್ಲ ಅಂದ್ರೆ ನಾನು? ಆದರೆ ನನ್ನ ಅಣ್ಣ, ಅಕ್ಕ, ತಮ್ಮ, ತಂದೆ, ತಾಯಿ, ಬಂಧು ಬಳಗವೆಲ್ಲ ನನ್ನ ಮಾತು ನಿಮ್ಮಲ್ಲಿ ನಡೆಯುತ್ತೇಂತ ಹೇಳಿಕೊಳ್ಳುವಂತಾದ್ರೆ ಅದೊಂದು ದೊಡ್ಡ ಭೂಷಣವಲ್ಲವೆ ನನಗೆ?

ಗೋಪಾಲ—ಅದಕ್ಕೇ ನಿನ್ನನ್ನು ಹುಚ್ಚೀ ಅಂದೆ. ನಿನಗೆ ಆಡಂಬರದ ಹುಚ್ಚು ಹಿಡಿದಿದೆ. ಈ ಒಣ ಹೆಗ್ಗಳಿಕೆಗಾಗಿ ಹಣ ಕಳಕೊಳ್ಳಬೇಕಂತೀಯಾ ನೀನು!

ಚಿನ್ನಮ್ಮ—ಹಣ ಕಳಕೊಳ್ಳಬೇಕೆಂದೋರು ಯಾರು? ನಾನೇ?

ಗೋಪಾಲ—ನೋಡು ನೀನು ಹೆಣ್ಣು, ನಿನಗೆ ಮುಂದಿನ ಆಲೋಚನೆಯಿಲ್ಲ—ಜಾಮೀನೊಂದ್ರೇನೆಂತ ಗೊತ್ತೋ ನಿನಗೆ?

ಚಿನ್ನಮ್ಮ—ಅಂದರೆ ಒಂದು ದಸ್ಕತು ಹಾಕೋದಂತಲ್ಲವಾ?

ಗೋಪಾಲ—ಅಷ್ಟರಲ್ಲೇ ಮುಗಿಯಿತಾ?

ಚಿನ್ನಮ್ಮ—ಮತ್ತೇನುಂಟು?—

ಗೋಪಾಲ—ಏ ಹುಚ್ಚೀ?—ನಿನಗೆ ಲೋಕಾನುಭವವಿಲ್ಲ, ವ್ಯವಹಾರ ಜ್ಞಾನವಿಲ್ಲ. ದಸ್ಕತ್ತಿನ ಬೆಲೆ ಮೊದಲೇ ಗೊತ್ತಿಲ್ಲ. ದಸ್ಕತಿಗೆ ಬೆಲೆ ಇಲ್ಲವೆಂದರೆ ಬ್ಯಾಂಕಿನವರಿಗೆ ಅದು ಯಾಕೆ ಬೇಕು? ವಿಚಾರ ಮಾಡೂಂದೆ. ಈ ದಸ್ಕತ್ತಿನ ಹಿಂದೆ ಎಷ್ಟು ಜವಾಬ್ದಾರಿ ಉಂಟೆಂದು ಗೊತ್ತುಂಟಾ?

ಚಿನ್ನಮ್ಮ—ಏನು ಜವಾಬ್ದಾರಿ? ಹಣ ಹೋಗುತ್ತಾ, ಕಾಲ್ಯಾಣ ಹೋಗುತ್ತಾ?

ಗೋಪಾಲ—ಪೂರ್ವಾಪರ ವಿಚಾರ ಮಾಡದೆ ದಸ್ಕತು ಹಾಕಿದರೆ ಎರಡೂ ಹೋಗುತ್ತೆ! ನೋಡು, ಈ ನಿನ್ನ ಅಣ್ಣ ಇದ್ದಲ್ಲಾ—ಈ ಅಣ್ಣಾ—ಅಣ್ಣ—ಅಣ್ಣ— ಅಣ್ಣ! ಇವನ ಗುಟ್ಟು ನಿನಗೂ ಗೊತ್ತಿಲ್ಲ? ನಿಮ್ಮ ಮನೆ ಇನ್ನು ಉಳಿಯಲಿಕ್ಕುಂಟಾ?

ಚಿನ್ನಮ್ಮ—ಉಳಿಯದೆ! ಆ ದೊಡ್ಡ ಮನೆ ಯೇನು ಜರಿದು ಬೀಳ್ತಾ—ಹಾರಿ ಹೋಗ್ತಾ?

ಗೋಪಾಲ—ಏನಾದರೊಂದು ಆಗ್ತೆ! ಇವ ನಿನ್ನ ಅಣ್ಣ, ಗಣ್ಣ—ಅಲ್ಲಿಯೂ ಇರುವುದಿಲ್ಲ—ಇಲ್ಲಿಯೂ ಉಗಾಡಿ ತೆಗೆಯೋಕೆ ಬಂದಿದ್ದಾನೆ. ಜೋಕೆ! ನೋಡು, ಇವನಿಗೆ ಒಂದೆರಡಲ್ಲ ದುರ್ವ್ಯಸನ—ಇಂಥ ದೊಡ್ಡ ವ್ಯಾಪಾರಿಯೆಂದು ಅನ್ನಿಸಿಕೊಳ್ತಾನಲ್ಲ? ಅದರಲ್ಲಿ ಒಂದು ಕ್ರಮ ಉಂಟೂ? ಇವನಿಗೆ ಅಂಗಡಿಯಲ್ಲಿ ಎಷ್ಟು ಜನ ಕೆಲಸದವರಿದ್ದಾರೆ?—ಪೇಟೆಯಲ್ಲಿ ಇವನ ಹೆಂಡ್ತಿ ಮಕ್ಕಳು ಒಣ್ಣದು ಮಾಗಿ ಇರುವುದು—ಎಷ್ಟು ದೊಡ್ಡ ಬಡಾಯಿ ಯಾಕೆ? ಸಿಬ್ಬಂದಿ ಯಾಕೆ? ಕುಡಿಯೋದು ತೊಡಗಿದೆಯಂತೆ, ಅಶ್ವ—ಗುಡ್ಡ ಗುಡ್ಡ ಸುದ್ದಿ—ನಾನು ಮೊನ್ನೆ ಬಿಡಾರಕ್ಕೆ ಹೋಗಿದ್ದೆ—ಹೆಂಡ್ತಿಯನ್ನೋ ಗುಟ್ಟು ಮಾಡಿದನ್ನು. ನನ್ನ ಒಟ್ಟಿಗೆ ಮೋಟಾರು ಆಫೀಸಿಗೆ ಬಂದ ಕೆಲಸದಾಳಿನ ಬಾಯಿ ಬಿಡಿಸಿ ಆಲ್ಪ ಸ್ವ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF ACRORE

ESTD. 1906
CANARA BANK
LIMITED



"ಶೆಂಕ್ಸ"
SHANKS
(ಇಂಗ್ಲಿಷ್ ಮೇಕ್)
ಕ್ರೂಡ್ ಆಯಿಲ್ ಎಞ್ಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶೆಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬ್ಯಾಂಡ ಪ್ಲೇಂಟ್), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮುಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಯಿರಿ—

ಪೆರಮೌಂಟ್ ಇಂಜಿನೀಯರಿಂಗ್ ಕೊರ್ಪರೇಶನ್
೮೨, ಎಪ್ಪೋಲೋ ಸ್ಟ್ರೀಟ್, ಫೋರ್ಟ್.... ಮುಂಬಯಿ.
Paramount Engineering Corporation,
82 Appolo Street, Fort, **BOMBAY.**

THE

Canara Banking Corporation, Udipi, Ltd.

(Incorporated in British India)

—o—

THE REGISTER OF MEMBERS & TRANSFER BOOKS of the CORPORATION will remain closed from 16—2—1939 to 5—3—1939 both days inclusive.

(By Order)

V. R. KAMATH,
MANAGER.

ಉಡುಪಿ, ಗುರುವಾರ, ತಾ. ೨-೩-೩೯

ಹೀಗೇಕಾಯಿತು? ಮುಂದೇನು ಗತಿ?

ತ್ರಿಪುರಿಯಲ್ಲಿ ರಾಷ್ಟ್ರ ಮಹಾಸಭೆಯ ಅಧಿವೇಶನವು ಜರಗಲಿಕ್ಕೆ ಇನ್ನೊಂದು ವಾರವೂ ಪೂರ ಇಲ್ಲ. ಅದರ ಕಾರ್ಯಕಲಾಪಗಳನ್ನು ನಿರೂಪಿಸಿ ನಡೆಯಿಸಿ ಕಡೆಹಾಯಿಸಿ ಯಶಸ್ವಿಯಾಗಿರಿಸುವುದರಲ್ಲಿ ವಿಶೇಷ ಹೊಣೆಗಾರಿಕೆಯನ್ನು ಹೊರಬೇಕಾಗಿದ್ದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸ್ಥಾನಗಳು ಸಾಧಾರಣ ಸಂಪೂರ್ಣ ಬರಿದಾಗಿಬಿದ್ದಿವೆ. ಗಾಂಧಿಜಿಯವರು ರಾಜಕೋಟೆಯನ್ನು ಪ್ರವೇಶಿಸಿ ಅಲ್ಲಿಯ ಸಮಸ್ಯೆಯನ್ನು ಬಿಡಿಸಲು ಕೈಗೊಂಡಿರುವುದರಿಂದ ತಾನು ತ್ರಿಪುರಿಗೆ ಬಂದೇನೆಂಬ ನಿಶ್ಚಯವಿಲ್ಲ ಎಂದಿದ್ದಾರೆ. ಮೇಲಾಗಿ, ಅಧ್ಯಕ್ಷರಾದ ಶ್ರೀ. ಸುಭಾಸ್‌ಚಂದ್ರ ಭೋಸ್‌ರವರೇ ಅಸ್ವಸ್ಥದಿಂದ ಹಾಸಿಗೆ ಹಿಡಿದಿರುವರು. ಅವರು ಗುಣಹೊಂದಿ ಪ್ರಾಣಗೊಂಡು ಹೊಸ ವರ್ಕಿಂಗ್ ಕಮಿಟಿಯನ್ನು ನಿರ್ಮಿಸಿಕೊಳ್ಳಬೇಕು. ತನ್ನ ನವ ವರ್ಷಾಧಿಪತ್ಯದ ಹೊಸ ಯೋಜನೆಗಳ ರೂಪರೇಷೆಯನ್ನಾದರೂ ಹಾಕಿ ತೋರಿಸಕೊಡಬೇಕು. ಇವೆಲ್ಲ ಸಾಧ್ಯವೇ? ಈ ಸಂದರ್ಭದಲ್ಲಿ ಹೀಗೆಲ್ಲ ಬರಬಾರದಿತ್ತು. ಆದರೆ ಬಂದುಬಿಟ್ಟಿತಲ್ಲಾ! ಮುಂದಿನ ಅವಸ್ಥೆಯೇನು! ಎಂದು ಭಾರತದ ಹೃದಯವಿಂದು ತಲ್ಲಣಗೊಳ್ಳುತ್ತಿದೆ. ಆದರ ಪರಿಸ್ಥಿತಿಯನ್ನೆಲ್ಲ ನಿಷ್ಪಕ್ಷಪಾತ ದೃಷ್ಟಿಯಿಂದ ತರ್ಕ-ಶುದ್ಧ ಮನೋವೃತ್ತಿಯಿಂದ, ಶಾಂತ ಚಿತ್ತದಿಂದ ಪರಿಶೀಲಿಸಿದರೆ ಕಾತರಗೊಳ್ಳಲು ಅವಕಾಶವಿಲ್ಲವೆಂದೂ ಆದುದೆಲ್ಲವೂ ಒಳ್ಳೆಯದಕ್ಕೆಂದೂ ಅದೆಲ್ಲರಿಗೂ ಒಂದು ಪಾಠವನ್ನು ಕಲಿಸಲಿಕ್ಕೆ ಮಾತ್ರ ಬಂದುದಲ್ಲದೆ ಗಂಡಾಂತರವನ್ನೊಡ್ಡಲಿಕ್ಕಲ್ಲವೆಂದೂ ಹೊಳೆಯದಿರದು.

ಮೊದಲಾಗಿ, ಹೀಗೇಕಾಯಿತೆಂಬುದನ್ನು ಸ್ಥೂಲವಾಗಿ ವಿಚಾರಿಸೋಣ. ಇಂದು ಬೇರೆ ದೇಶದಲ್ಲಿ ಬೇರೆ ಸ್ವಭಾವದ ಪ್ರಭುತ್ವವನ್ನು ಇದಿರಿಸಿ ಸ್ವಾತಂತ್ರ್ಯವನ್ನು ಹೊಂದಲಿಕ್ಕೆ ಅಹಿಂಸಾತ್ಮಕ ಶಸ್ತ್ರಾಸ್ತ್ರ ನಿರುಪಯೋಗವಾಗಿದ್ದರೂ, ನಮ್ಮ ದೇಶ ಕಾಲ ಪರಿಸ್ಥಿತಿಯಲ್ಲಿ ಅದೇ ನಮಗೆ ಅನಿವಾರ್ಯವಾದ ಹಾಗೂ ಯಶಸ್ವಿಯಾಗಬಹುದಾದ ಏಕಮಾತ್ರ ಮಹಾಸ್ತ್ರವಾಗಿದೆ. ಇಂದು ನಮ್ಮ ರಾಷ್ಟ್ರದ ಜನಸಮುದಾಯಕ್ಕೆ ಕಾಂಗ್ರೆಸ್ಸು ಶಕ್ತಿ; ಕಾಂಗ್ರೆಸ್ಸಿಗೆ ಜನಸಮುದಾಯವೇ ಶಕ್ತಿ. ಹೀಗಿರುವಲ್ಲಿ ಉಗ್ರತರವಾದ ಕಾರ್ಯಕ್ರಮವನ್ನು ಪ್ರಯೋಗದಲ್ಲಿ ತಂದು ಕಾಂಗ್ರೆಸ್ಸಿಗೆ ಬೆಂಬಲಗೊಡಲು ಪರಿಸ್ಥಿತಿಯ ದೆಸೆಯಿಂದ ರಾಷ್ಟ್ರವು ಸಿದ್ಧವಿಲ್ಲದಿರುವಾಗ ಕಾಂಗ್ರೆಸ್ಸು ಮಾತ್ರ ಅಂತಹ ಹಾದಿ ಹಿಡಿದರೆ ಗೆಲುವೆಲ್ಲಿಂದ ಬಂದೀತು? ಭಾರತದಂತಹ ಮಹಾ ವಿಶಾಲ ರಾಷ್ಟ್ರದಲ್ಲಿ ಇಂತಹ ಶಾಂತಪ್ರಧಾನ ಅಹಿಂಸಾತ್ಮಕ ಸಮರವು ಯಶಸ್ವಿಯಾಗಿ ಸಾಗಬೇಕಾದರೆ ವಿವಿಧ ಪ್ರಾಂತಗಳಲ್ಲಿ ವಿವಿಧ ಕೇಂದ್ರಗಳಲ್ಲಿ ನಡೆಯುವ ಕಾರ್ಯಕ್ರಮಗಳ ಧ್ಯೇಯಸಾಧನೆಗಳಲ್ಲೆಲ್ಲ ಒಂದೇ ರೂಪ, ಒಂದೇ ಗತಿ, ಒಂದೇ ಸೂತ್ರವು ಆಚರಣೆಯಲ್ಲಿದ್ದು ಎದುರಾಳಿಗೆ ಎಲ್ಲೆಲ್ಲಿ ನೋಡಿದರೂ ಅಭೇದ್ಯವಾದ ಮುಂಭಾಗವು ತೋರಿಬರಬೇಕಾಗಿದೆ.

ಈ ಏಕಸೂತ್ರತೆಯ ಸಾಧನೆಗಾಗಿ ಕಾಂಗ್ರೆಸ್ಸಿನ ಕಾರ್ಯಕಾರೀ ಮಂಡಲವು ಸರ್ವಕೇಂದ್ರಗಳ ಮೇಲೆ ಒಂದು ತರದ ಶಿಸ್ತಿನ ಪಾರುಪತ್ಯ ನಡೆಯಿಸುವುದು ಅವಶ್ಯವೆನಿಸಿತು. ಹಾಗಾಗಬೇಕೆಂದು ಗಾಂಧಿಜಿಗಳು ಈ ಸ್ವಾತಂತ್ರ್ಯ ಸಮರದ ಸ್ಥೂಲ ರೇಷೆಯನ್ನು ಹಾಕಿಕೊಟ್ಟಿದ್ದರು. ಆದರೆ ಅವರ ಸಮಸ್ತ ತತ್ವಗಳನ್ನು ಅವರೊಂದಿ[illegible] ಆಧುನಿಕ ಅಂಧ ಶ್ರದ್ಧೆಯನ್ನು ಮತ್ಸರ ಮುಟ್ಟಿಗೂ ಒಪ್ಪಿ ಅಪ್ಪಿಕೊಳ್ಳಲು ಸಿದ್ಧರಾಗಿದ್ದ ಅವರ ಅನುಯಾಯಿಗಳಾದ ವಲ್ಲಭಾಯಿ ಪಟೇಲ ಪ್ರಭೃತಿಗಳು ವರ್ಕಿಂಗ್ ಕಮಿಟಿಯಲ್ಲಿದ್ದು ಅಲ್ಲಿಂದ ಅವರ ಬಹುಮತದಿಂದ ಹೊರಬೀಳುವ ಆಜ್ಞೆ ಕಾರ್ಯಕ್ರಮಗಳಲ್ಲಿ ಅವರು ಸ್ಥಾನಾಧಿಕಾರಗಳ ಲಾಲಸೆಯಿಂದಲ್ಲವಾದರೂ ಕ್ರಮಬದ್ಧತೆಯ ಪ್ರೇಮದಿಂದಾಗಿ ತೋರಿದ ಬಿಗುಪು ಬಿಡುಪುಗಳು ವಿಚಾರವಂತರಿಗೆ ಬಹು ಜನರ ಕಾಂಗ್ರೆಸ್ಸಿನಲ್ಲಿ ಏಕವ್ಯಕ್ತಿ ಪಾರುಪತ್ಯ (dictatorship)ದ ಲಕ್ಷಣವಿದ್ದಂತೆ ಕಂಡಿತು. ಕಾಂಗ್ರೆಸ್ಸು ಇಂತಹ ಮಂದಿಯರ ಮಂದಗತಿಯ ಕಾರ್ಯಕ್ರಮದಿಂದ ಮುಂದುವರಿದರೆ ಸ್ವಾತಂತ್ರ್ಯದೊರೆವುದು ಎಂದೋ ಏನೋ ಎಂದು ಹುರುಪಿನ ಹುರಿಯಾಳುಗಳಿಗೆ ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಶ್ರದ್ಧೆ ಶಿಥಿಲವಾಯಿತು. ಒಂದು ವೇಳೆ ಸ್ವರಾಜ್ಯ ಪ್ರಾಪ್ತಿಯಾದರೂ ಅನಂತರದ ಧೋರಣೆಯೇನೆಂಬುದನ್ನು ಗಾಂಧೀ ಪಕ್ಷವು ಸ್ಪಷ್ಟ-ನಿರ್ದಿಷ್ಟವಾಗಿ ವ್ಯಾಖ್ಯಾನಿಸಲು ಕಲೆ ಮರೆಸಿಕೊಳ್ಳುತ್ತದೆಂದು ಅಸಮಾಧಾನವೂ ಉಂಟಾಯಿತು.

ಉಗ್ರಗಾಮಿಗಳ ಅಸಂತೃಪ್ತಿ

ವಿಶೇಷವಾಗಿ ಈ ತರದ ಭಾವನೆಗಳಿಗೀಡಾದ ಸಮಾಜವಾದಿ (ಸೋಷಿಯಲಿಸ್ಟ್)ಗಳ ಉಗ್ರಪಕ್ಷವೊಂದು, ಈ ಅತಿಗಾಮಿಗಳ ಹಾದಿಯು ಶ್ರೇಯಸ್ಕರವಲ್ಲವೆಂಬ ಉಪೇಕ್ಷೆಯ ಧೋರಣೆಯಿಂದಲೂ ತಮ್ಮ ಹಾದಿಯೇ ಚಂದವೆಂಬ ಅತಿಶ್ರದ್ಧೆಯಿಂದಲೂ ಕಾರ್ಯನಿರ್ವಹಿಸುತ್ತಲಿದ್ದ ಮಂದಪಕ್ಷವೊಂದು, ಹೀಗೆ 'ಎಡ, ಬಲ' ಎಂಬೆರಡು ತಂಡಗಳು ಕಾಂಗ್ರೆಸ್ಸಿನೊಳಗೇ ಉಂಟಾಗಿ ಉಭಯಪಕ್ಷಗಳಿಗೂ ಹೊರಗೆ ರಾಷ್ಟ್ರದಲ್ಲಿ ಬೆಂಬಲಗೊಡುವ ಎರಡು ಪಂಗಡಗಳು ಆದವು. ಈ ಉಗ್ರಪಕ್ಷೀಯರಿಗೆ ಕಾಂಗ್ರೆಸ್ಸು ಮಂತ್ರಿತ್ವವನ್ನು ಸ್ವೀಕರಿಸದೆ ಮೂಲದಲ್ಲೇ ಹೊಸ ಇಂಡಿಯಾ ಆಕ್ಟನ್ನು ಸಾಮೂಹಿಕವಾಗಿ ವಿರೋಧಿಸಬೇಕೆಂಬ ಹುರುಳಿತ್ತು. ಅಂತೂ ಒಳಹೊಕ್ಕು ಅದನ್ನು ಭೇದಿಸಬೇಕೆಂದು ಒಳಹೋದ ಮಂದಪಕ್ಷೀಯರಲ್ಲಿ ಹಲವರು ಸ್ಥಾನಮಾನ ಅಧಿಕಾರ ಲಾಲಸೆಯಿಂದ ಅಲ್ಲೇ ಬೆಚ್ಚನೆ ಕುಳಿತಂತೆ ಇವರಿಗೆ ತೋರಿದುದರಿಂದ ಪ್ರಾಂತ್ಯಾಧಿಕಾರ ಸ್ವೀಕಾರವು ಕಾಂಗ್ರೆಸ್ಸಿನ ಆದ್ಯಧ್ಯೇಯವನ್ನು ಹಲವರ ದೃಷ್ಟಿಯಿಂದ ಮರೆಮಾಡಿದೆಯೆಂಬ ಅಸಮಾಧಾನಕ್ಕೆ ಆಸ್ಪದವಾಯಿತು. ಮೊದಮೊದಲು ಬೇಡವೆಂದಿದ್ದು ಕೊನೆಗೆ ಸರಕಾರವು ಅದೇನೋ ಹೇಗೋ ಕೊಟ್ಟ ಅಲ್ಪ ಆಶ್ವಾಸನೆಯಿಂದ ಸಂತೃಪ್ತರಾಗಿ ಪ್ರಾಂತಿಕ ರಾಜ್ಯಭಾರವನ್ನು ಈ ಮಂದಪಕ್ಷೀಯರು ಸ್ವೀಕರಿಸಿ ನೆಮ್ಮದಿಯಿಂದ ಕುಳಿತಂತೆಯೇ ಮುಂದೆ ಫೆಡರೇಶನನ್ನೂ ಏನಾದರೊಂದು ಬಣ್ಣ ಬಳಿದು ಕೊಟ್ಟರೆ ತೆಗೆದುಕೊಂಡು ಬಿಡುವರೋ ಎಂಬ ಸಂಶಯವು ಒಳಗಿಂದೊಳಗೆ ಈ ಉಗ್ರಪಕ್ಷೀಯರಲ್ಲಿ ಕೊಳೆಯತೊಡಗಿತು. ತನ್ಮಧ್ಯೆ ಪ್ರಾಂತಿಕ ರಾಜ್ಯಭಾರವು ಶಾಂತವಾಗಿ ಸಾಗುವುದನ್ನು ಕಂಡು ಹಲವು ಸ್ವಾರ್ಥಿಗಳು ಕಾಂಗ್ರೆಸ್ ವೇಷಧಾರಿಗಳಾಗಿ ಅದನ್ನು ಹೊಕ್ಕು ಕಾಂಗ್ರೆಸ್ಸಿನ ಪವಿತ್ರ ಧ್ಯೇಯವನ್ನು ಕಲುಷಿತಗೊಳಿಸಿ ಅದರ ಪುರೋಭಿವೃದ್ಧಿಗೆ ವಿಘ್ನಕಾರಿಗಳಾಗುವುದನ್ನು ಕಂಡಂತೂ ಈ ಉಗ್ರಗಾಮಿಗಳಿಗೆ ತೀವ್ರ ಅಸಮಾಧಾನವುಂಟಾದುದರಲ್ಲಿ ಆಶ್ಚರ್ಯವಿಲ್ಲ.

ಭೋಸರ ವಿಜಯ

ಹೀಗೆ ಪಟೇಲ ಪಂಥೀಯರ ಸರ್ವತಂತ್ರ ಸ್ವತಂತ್ರ ಕಾರ್ಬಾರಿನ ಚಿನ್ಹೆ, ಮಂದಗಾಮಿತ್ವ, ಸಮಾಜವಾದ ವಿರೋಧ ಧೋರಣೆ, ಗಾಂಧೀ ತತ್ವ ದಾಸ್ಯ ಮನೋವೃತ್ತಿ, ಸ್ವಾರ್ಥಿಗಳ ಸ್ಥಾನಮಾನ ಅಧಿಕಾರ ದೃಷ್ಟಿಯ ಕಾದಾಟ, ಇವುಗಳ ವಿಷಯವಾಗಿ ಜಾಗ್ರತ ಭಾರತದಲ್ಲೇ ತುಸು ಅಸಂತೃಪ್ತಿಯೂ ಕಾಂಗ್ರೆಸ್ ವಾಳೆಯದೊಳಗೆ ಪರಸ್ಪರ ಸಂಶಯ ಅವಿಶ್ವಾಸ ಅಸಮಾಧಾನಗಳೂ ತಲೆಯೆತ್ತಿರುವ ಪರಿಸ್ಥಿತಿಯಲ್ಲಿ ತ್ರಿಪುರಿ ಕಾಂಗ್ರೆಸ್ಸಿನ ಅಧ್ಯಕ್ಷ ಚುನಾವಣೆಯ ಕಾಲ ಬಂದೊದಗಿತು. ವಲ್ಲಭಾಯಿ ಪಂಥದವರು ಪಟ್ಟಾಭಿಯವರಿಗೆ ಪಟ್ಟಗಟ್ಟುವುದೆಂದು ಅವರನ್ನು ಮುಂದು ಮಾಡಿದರು. ಭೋಸ್‌ರವರು ಇಂದಿನ ಫೆಡರೇಶನ್ ಪ್ರಶ್ನೆಯನ್ನು ವಿರೋಧಿಸುವ ಗುರುತರ ಕಾರ್ಯಭಾರವು ಕಾಂಗ್ರೆಸ್ಸಿನ ಮುಂದಿರುವುದರಿಂದ ತಾನೇ ಮತ್ತೊಂದು ವರುಷ ಅಧ್ಯಕ್ಷನಾಗುವುದು ಲೇಸೆಂದು ಮುಂದಾದರು. ಆದರೆ ಅಧ್ಯಕ್ಷನು ಕೇವಲ ಸಭಾಕಾರ್ಯದ ಸುವ್ಯವಸ್ಥೆಯನ್ನು ನೋಡಿಕೊಳ್ಳುವುದಲ್ಲದೆ ಬೇರೇನನ್ನೂ ಮಾಡುವಂತಹದಲ್ಲವೆಂದು ಪಟೇಲರು ತನ್ನ ಮತ್ತು ತನ್ನ ಅನುಯಾಯಿಗಳ ಪರವಾಗಿ ಪ್ರಕಟಣೆ ಹೊರಡಿಸಿದುದರಿಂದಲೂ ಪಟ್ಟಾಭಿಯವರಿಗೆ ಪಟ್ಟವಾದರೆ ಪಟೇಲ ಪ್ರಭೃತಿಗಳೆಲ್ಲ ಬಹುಪಕ್ಷವಾಗಿ ವರ್ಕಿಂಗ್ ಕಮಿಟಿಯಲ್ಲಿ ಉಳಿಯುವುದರಿಂದಲೂ ರಾಷ್ಟ್ರೀಯ ಕಾಂಗ್ರೆಸ್ಸೆಂಬುದು ಪಟೇಲರ ಕಾಂಗ್ರೆಸ್ಸೆಂದಾಗಿ ಬಿಡುವುದೋ ಎಂದು ಹಲವರಲ್ಲಿ ಸಂಶಯ ಹುಟ್ಟುವಷ್ಟರಲ್ಲಿ ಭೋಸ್‌ರವರು ಪಟೇಲ ಪಂಥೀಯರಿಗೆ ಫೆಡರೇಶನನ್ನು ಸ್ವೀಕರಿಸಿ ನಡೆಯಿಸುವ ಒಲವು ಇದೆಯೆಂದು ಮುಂತಾಗಿ ಪ್ರಕಟಿಸಿದ ಪ್ರಸಿದ್ಧಿ ಪತ್ರದಿಂದ ಆ ಊಹೆಯು ಮತ್ತಷ್ಟು ದೃಢವಾಯಿತು. ಮೇಲಾಗಿ, ಪಟ್ಟಾಭಿಯವರೇನೂ ಅಷ್ಟೊಂದು ಭಾರತಪ್ರಸಿದ್ಧ ವ್ಯಕ್ತಿಯೂ ಆಗಿದ್ದಿಲ್ಲ. ಆದುದರಿಂದ ಚುನಾವಣೆಯಲ್ಲಿ ಭೋಸ್‌ರವರು ವಿಜಯಿಗಳಾದರು.

ಆದರೆ

ಆದರೆ ಗಾಂಧಿಜಿಯವರು ಪಟ್ಟಾಭಿಯವರ ಸೋಲೇ ತನ್ನ ಸೋಲೆಂದೂ ರಾಷ್ಟ್ರಕ್ಕೆ ಇಂದು ತನ್ನ ತತ್ವ ಬೇಕಾಗಿಲ್ಲವೆಂಬುದು ಅದರಿಂದ ಸುವ್ಯಕ್ತವಾಯಿತೆಂದೂ ವೈರಾಗ್ಯದ ಉದ್ಗಾರವೆತ್ತಿದರು. ಆದರೆ ನಿಂತುದು ಗಾಂಧಿಜಿಗಳಲ್ಲವಲ್ಲ? ನಿಂತ ವ್ಯಕ್ತಿಗಳ ಯೋಗ್ಯತೆಗಳನ್ನು ತೂಗಿ ಅಳೆದು ಪರಿಶೀಲಿಸಿ ಮತದಾನಮಾಡುವಷ್ಟು ರಾಷ್ಟ್ರವು ಇಂದು ಜಾಗ್ರತವಾಗಿದೆಯೆಂದು ಸಂತಸಪಡುತ್ತಿದ್ದರೆ ಲೇಸಿತ್ತಲ್ಲವೆ? ಅತ್ತ ತ್ರಿಪುರಿಯ ಅಧಿವೇಶನಕ್ಕೊಂದು ಪಕ್ಷವೂ ಇಲ್ಲದಿರುವಾಗ, ಇತ್ತ ಭೋಸ್‌ರವರು ಶೀಘ್ರವಾಗಿ ಎದ್ದೇಳಲಾಗದ ಅಸ್ವಸ್ಥದಲ್ಲಿ ಹಾಸಿಗೆಹಿಡಿದಿರುವಾಗ ಪಟೇಲ ಪಂಥೀಯರು ತಮ್ಮ ತೀವ್ರ ಅಸಂತೃಪ್ತಿ ಸೂಚಕವಾಗಿ ರಾಜಿನಾಮೆಯನ್ನು ಕೊಡದೆ ಇಷ್ಟು ದಿನ ಇದ್ದವರು ಹೇಗಾದರೂ ಭೋಸರನ್ನು ಮುಖತಃ ನೋಡಿ ವಿಚಾರವಿನಿಮಯವು ಮಾಡಿಕೊಳ್ಳುವಷ್ಟು ದಿನ ಇದ್ದು ಬಿಡೋಣವೆಂಬ ಔದಾರ್ಯ ತೋರಿದ್ದರೂ ಲೇಸಿತ್ತು. ಇಂತಹ ಸಂದರ್ಭದಲ್ಲಿ ತನ್ನ ವರ್ತನೆಯನ್ನು ಉಜ್ವಲವಾಗಿ ಇಟ್ಟುಕೊಂಡವರೆಂದರೆ ಜವಾಹಿರಲಾಲ ನೆಹರುಗಳು. ಅವರು ಬಹಿರಂಗಪಡಿಸಿದ ಆ ಪ್ರಸಿದ್ಧಿ ಪತ್ರದಿಂದ ಅವರೂ ರಾಜಿಕೊಟ್ಟಿದ್ದಾರೆಂದು ಊಹಿಸಬಹುದಾದರೂ ಅದು ಪಕ್ಷ ಪಂಥದ ಕಿಬ್ಬಿಲ್ಲದೆ ಥಳಥಳಿಸುತ್ತಿದೆ. ಮಾತ್ರವಲ್ಲ, ಅದೊಂದು ತರದಲ್ಲಿ ಎಲ್ಲರಿಗೂ ಪಾಠ ಹೇಳುತ್ತಿದೆ.

ಮುಂದೇನು?

ಮುಂದೇನು? ಇಷ್ಟು ದೂರದ ತನಕ ಕಾಂಗ್ರೆಸ್ ಮಹಾರಥವನ್ನು ಮುಂದೂಡಿಕೊಂಡು ಬಂದವರು ಈಗದನ್ನು ಬಿಟ್ಟರೂ ಬಿಟ್ಟು ದೂರಾಗಿಲ್ಲ ಎಂಬುದು ಸಮಾಧಾನದ ಸಂಗತಿ. ಅವರಿಗಿಂತಲೂ ಮಿಗಿಲಾಗಿ ತೀವ್ರ ತರಗತಿಯಿಂದ ಅದನ್ನು ಮುಂದೂಡಿ ಗುರಿಮುಟ್ಟಿಸಲಾಪೆವೆಂದೂ ಈ ಹಿರಿಯರ ದೆಸೆಯಿಂದಾಗಿ ತಮಗಂತಹ ಅವಕಾಶವೇ ದೊರೆಯದಾಗಿದೆಯೆಂದೂ ಅಸಂತೃಪ್ತಿಗೊಂಡವರಿಗೊಂದು ಎಡೆಗೊಟ್ಟಿದ್ದಾರೆ ಅವರು. ಹುರುಪಿನವರೆಲ್ಲ ಆ ಮಹಾರಥದ ಚಕ್ರಕ್ಕೆ ಭುಜಗೊಟ್ಟು ಮುಂದೂಡಿದಾಗಲೇ ತೀವ್ರತರವಾಗಿ ಮುನ್ನಡೆಯಿಸುವುದು ಅಸಾಧ್ಯವೆಂಬ ಪಾಠವನ್ನು ಅವರು ಪ್ರಯೋಗಾತ್ಮಕವಾಗಿ ಕಲಿಯಲೆಂದು ಆ ರಥವನ್ನು ಅವರಿಗೊಪ್ಪಿಸಿ ಬದಿಯಲ್ಲಿ

ನಿಂತಿದ್ದಾರೆ. ಆವರೇನೂ ಪ್ರತಿಬಂಧಕವನ್ನೊಡ್ಡುವುದಿಲ್ಲ. ಬದಲಾಗಿ ಹೊಸ ಹುರುಪಿನವರು ರಥವನ್ನು ನಡೆಯಿಸುವ ರೀತಿನೀತಿಗಳಲ್ಲಿ ತಮಗೂ ಒಪ್ಪಿಗೆಯಾಗುವಂತಹ ವಿಧಾನಗಳಿದ್ದರೆ ಕೈಗೂಡುವುದರಲ್ಲಿದ್ದಾರೆ. ಮಾತ್ರವಲ್ಲ, ಹೊಸಬರ ಅತ್ಯಾತುರೋತ್ಸಾಹಗಳ ದೂಡುವಿಕೆಯಿಂದಾಗಲೀ ಎಳೆಯುವ ರಭಸದಿಂದಾಗಲೀ ರಥವೆಲ್ಲಾದರೂ ಮುಗುಚಿ ಬೀಳುವ ಗಂಡಾಂತರದ ಲಕ್ಷಣ ತೋರಿದರೆ ತಾವೆಲ್ಲ ಕೂಡಲೆ ಹಾರಿ ಕೈಗೊಟ್ಟು ಅದನ್ನು ಸರಿದಾರಿಗೆ ತಿರುಗಿಸಲು ಸಿದ್ಧರಾಗಿಯೇ ಕಣ್ಣಿಟ್ಟು ನಿಂತಿದ್ದಾರೆ.

ಆದುದರಿಂದ ತೋರಿಕೆಯ ಈ ಬಿಕ್ಕಟ್ಟಿನಿಂದ ಎಲ್ಲರೂ ಪಾಠಕಲಿತು ಒಕ್ಕಟ್ಟಾಗಿ ಮುಂದುವರಿವ ಕಾಲ ದೂರವಿರಲಾರದು. ಅತ್ಯುತ್ಸಾಹಿಗಳಿಗೆ ತಾವು ಊಹಿಸಿರುವ ರಾಷ್ಟ್ರವು ಉಗ್ರತರ ಕಾರ್ಯಕ್ರಮಗಳಿಗೆ ಪಕ್ವವಾಗಿಲ್ಲವೆಂಬುದನ್ನೂ ತಾವು ತಮ್ಮ ಗತಿಯನ್ನು ತುಸು ಮಂದಗೊಳಿಸುವುದು ಯುಕ್ತವೆಂದೂ ಪ್ರಯೋಗಾತ್ಮಕವಾಗಿ ತಿಳಿದುಕೊಳ್ಳಲಿಕ್ಕೊಂದು ಅವಕಾಶಗೊಟ್ಟಂತಾಯಿತು. ರಾಷ್ಟ್ರವೆಂದು ಹಿಂದಿನಂತೆ ಕೇವಲ ವ್ಯಕ್ತಿ ಪೂಜಾ ಅಂಧಶ್ರದ್ಧೆಯ ಮಂದೆತನದಿಂದ ಮುಂದಾಳುಗಳ ಸರ್ವಾಧಿಪತ್ಯಕ್ಕೆ ತಲೆವಾಗದೆ ವಿಚಾರಮಾಡಿ ಮುಂದರಿಯುವಷ್ಟು ಜಾಗ್ರತವಾಗಿದೆಯೆಂದೂ ತಮ್ಮ ವೈಯುಕ್ತಿಕ ವಿಚಾರವು ಎಷ್ಟು ನಿರ್ದುಷ್ಟವಾಗಿದ್ದು ದೇಶಾಭ್ಯುದಯಕ್ಕೆ ಶ್ರೇಯಸ್ಕರವಾಗಿದ್ದರೂ ದೇಶವು ಅದಕ್ಕೆ ಅಸ್ತು ಎನ್ನುವ ಮಟ್ಟಕ್ಕೆ ಮುಟ್ಟಿಲ್ಲವಾದರೆ ಅದನ್ನು ರಾಷ್ಟ್ರದ ಮೇಲೆ ಹೂರಿಸದೆ ಕಾಲಕಾಯುತ್ತ ಅದನ್ನು ಬದಿಯಲ್ಲಿ ಒತ್ತಟ್ಟಿಗಿಟ್ಟುಕೊಂಡು ರಾಷ್ಟ್ರದ ಪ್ರಸ್ತುತ ಪರಿಸ್ಥಿತಿಯಲ್ಲಿ ಬಹುಪಕ್ಷಕ್ಕೆ ಸುಲಭವೂ ಸಾಧ್ಯವೂ ಪರಿಣಾಮಕಾರಿಯೂ ಆದ ಇತರ ಕಾರ್ಯಕ್ರಮವೇನಾದರೂ ಇದ್ದರೆ, ಅದರ ಜನಕರ್‍ಯಾರೇ ಇರಲಿ, ಅದರಲ್ಲಿ ಸಹಕರಿಸಿ ನಡೆಯುವುದೇ ನ್ಯಾಯವೆಂಬ ಜವಾಹಿರಲಾಲ ನೆಹರೂಗಳಂತ ಉದಾರ ಹಾಗೂ ಔದಾರ್ಯ ಬುದ್ಧಿಯನ್ನು ಮಂದಪಕ್ಷೀಯರೂ ಕಲಿತು ತುಸು ತೀವ್ರಗಾಮಿಗಳಾಗಲಿಕ್ಕಾಗಲೀ ಆದರ್ಶಕ್ಕೂ ಲೋಕದ ವಾಸ್ತವಿಕತೆಗೂ ಅಂತರವಿದೆಯೆಂಬುದನ್ನು ಕೇವಲ ಆದರ್ಶವಾದಿಗಳು ಮನಗಾಣಲಿಕ್ಕಾಗಲೀ ಈ ಬಿಕ್ಕಟ್ಟು ಸಹಾಯಕವಾಗದಿರದು. ಹೀಗೆ ವ್ಯಕ್ತಿ ಸಂಗಡ ಪಂಥಗಳ ಕಣ್ಣುಗಳನ್ನೆಲ್ಲ ತೆರಿಯಿಸಿ ಅವರಲ್ಲಿ ರಾಷ್ಟ್ರಾಭ್ಯುದಯ ಕಾರ್ಯದಲ್ಲಿ ತಮ್ಮ ತಮ್ಮ ವೈಯುಕ್ತಿಕ ಅಭಿಮತ ವಿಚಾರ ನಂಬುಗೆಗಳಲ್ಲಿ ಅಲ್ಪ ಸ್ವಲ್ಪ ತ್ಯಾಗಪರಿತ್ಯಾಗಗಳನ್ನು ಉದಾರಬುದ್ಧಿಯಿಂದ ತೋರಿ ಪರಸ್ಪರ ಸಂಶಯ ಅವಿಶ್ವಾಸಗಳಿಲ್ಲದೆ ಸೌಹಾರ್ದದ ಒಂದುತನದಿಂದ ಮುಂದಾಗುವ ಪಾಠವನ್ನು ಸಮಸ್ತರೂ ಕಲಿತಂತಾಗಿದೆ ಬಂದೊದಗಿದ ಈ ಬಿಕ್ಕಟ್ಟಿನಿಂದ.

ಪರಿಣಾಮವಾಗಿ ನಾಳಿನ ತ್ರಿಪುರಿ ಅಧಿವೇಶನದಲ್ಲಿ ಹಣಾಹಣಿಯಾಗುವ ಪ್ರಶ್ನೆಗಳೇನೂ ಬರಲಾರವು. ಜಾಲ್ಪೈಗುರಿಯಲ್ಲಾದ ನಿರ್ಣಯದಂತಹ- ಬ್ರಿಟಿಷ್ ಸರಕಾರವು ವರುಷಾರ್ಧದೊಳಗೆ ಪೂರ್ಣ ಸ್ವರಾಜ್ಯವನ್ನೀಯದಿದ್ದರೆ ಅತ್ಯುಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬಂತಹ ಗೊತ್ತುವಳಿಗಳು ತ್ರಿಪುರಿಯಲ್ಲಿ ತಲೆಯೆತ್ತಲಾರವು. ಈಗಾಗಲೇ ಅಧ್ಯಕ್ಷರ ಘೋರಣೆಯು ಅತ್ಯುಗ್ರವಾಗಿರದೆ ಸರ್ವಗ್ರಾಹ್ಯವಾಗುವ ದಾರಿ ಹಿಡಿದಿದೆಯೆಂದು ತಿಳಿಯಲಾಗಿದೆ. ಫೆಡರೇಶನಿನ ವಿರೋಧವನ್ನು ಬಿಗುತರಗೊಳಿಸುವುದು, ಆಶ್ರಿತರಾಜ್ಯಗಳ ಸ್ವಾತಂತ್ರ್ಯಸಂಗ್ರಾಮದ ಚಳವಳಿಯ ಕುರಿತಾದ ಹಿಂದಿನ ನಿರ್ಣಯವನ್ನು ಪುನರಾಲೋಚಿಸಿ ಸುಧಾರಿಸುವುದು, ಫೆಡರೇಶನನ್ನು ಪ್ರಬಲವಾಗಿ ಪ್ರತಿಭಟಿಸುವಲ್ಲಿ ವ್ಯಾಪಕವಾದ ಅಹಿಂಸಾತ್ಮಕ ಸವಿನಯ ಕಾಯಿದೆಭಂಗದ ಕಾರ್ಯಕ್ರಮವನ್ನು ಕೈಗೊಳ್ಳುವ ಸಂದರ್ಭವೊದಗಿದಲ್ಲಿ ಅದಕ್ಕೆ ಸಿದ್ಧರಾಗಿರುವಂತೆ ಕಾಂಗ್ರೆಸ್ ವಾಲಿಂಟೀಯರ್ ದಳವನ್ನು ಅನುಗೊಳಿಸಿ ಇಟ್ಟುಕೊಳ್ಳುವುದು, ಅವಶ್ಯವಿದ್ದರೆ ಆಶ್ರಿತ ಸಂಸ್ಥಾನಗಳಲ್ಲಿ ಅಹಿಂಸಾತ್ಮಕವಾಗಿಯೇ ಸವಿನಯ ಶಾಸನ ಭಂಗದ ಕಾಳಗವನ್ನು ಉಪಕ್ರಮಿಸಿ ನಡೆಯಿಸುವಂತೆ ಗಾಂಧೀಜೀಗಳವರನ್ನು ಕೇಳಿಕೊಳ್ಳುವುದು, ಇವೇ ನಾಳಿನ ತ್ರಿಪುರಿ ಕಾಂಗ್ರೆಸಿನಲ್ಲಿ ಪರ್ಯಾಲೋಚನೆಗೆ ಬರುವ ವಿಷಯಗಳಾಗುವ ಸಂಭವವಿರುವುದರಿಂದ ಕಾಂಗ್ರೆಸು ಪಾಳೆಯದೊಳಗೆ ಯಾಗವೀ ಕಲಹಕ್ಕೆಡೆಯಾಗಲಾರದೆಂದೂ ಗಾಂಧೀಜೀಗಳಾಗಲೀ ಅವರ ಅನುಯಾಯಿಗಳಾದ ಪಟೇಲ ಪ್ರಭೃತಿಗಳಾಗಲೀ ನೆಹರುಗಳಾಗಲೀ ಇಂತಹ ಕಾರ್ಯಕ್ರಮಗಳಲ್ಲಿ ಸಹಕರಿಸಿಯಾರೆಂದೂ ಕಾಂಗ್ರೆಸಿನಲ್ಲಿ ಒಡಕುಂಟಾಯಿತೆಂದು ಎದುರಾಳಿಗಳು ಹರ್ಷೋದ್ಗಾರ ತೆಗೆಯಲು ಆಸ್ಪದಗೊಡಲಾರರೆಂದೂ ವಿಶ್ವಸನೀಯವಾಗಿ ನಂಬಬಹುದು.

ತ್ರಿಪುರಿ ಎಲ್ಲಿ? ಏನು?

ನಾಳಿನ ವಾರದಲ್ಲಿ ಕಾಂಗ್ರೆಸ್ ಅಧಿವೇಶನವು ಜರಗುವ ಆ ತ್ರಿಪುರಿ ಎಲ್ಲಿದೆ? ಮಹಾಕೋಸಲ ದೇಶದಲ್ಲಿ. ರಾಮಾಯಣ ಕಾಲದಿಂದಲೂ ಪ್ರಸಿದ್ಧವಾದ ನಾಡು ಅದು. ಅದರಲ್ಲಿ ನರ್ಮದಾನದಿಯ ತೀರದಿಂದ ಒಂದು ಮೈಲು ದೂರದೊಳಗಿದೆ ತ್ರಿಪುರಿ. ಜಿ. ಐ. ಪಿ. ರೈಲ್ವೆಯ 'ಮದನಮಹಲ್' ಸ್ಟೇಶನಿನಿಂದ ಅಲ್ಲಿಗಿರುವುದು ಏಳು ಮೈಲು. ಅದಕ್ಕೆ ಬಸ್ಸ್ ವ್ಯವಸ್ಥೆ ಇದೆ. ನಾಲ್ಕಾಣೆ ಚಾರ್ಜು. ತ್ರಿಪುರಿಯಿರುವ ನಾಡಿಗೆ ರಾಮಾಯಣ ಪುರಾಣದ ಯಶಸ್ಸು ಮಾತ್ರವಲ್ಲ, ಅದು ಶೌರ್ಯ ಧೈರ್ಯ ಸಂಗ್ರಾಮದ ಬೀಡಾಗಿ ಚರಿತ್ರೆಯಲ್ಲಿ ಖ್ಯಾತಿ ಹೊಂದಿದೆ. ರಾಣಿ ದುರ್ಗಾವತಿಯು ಸ್ವಾತಂತ್ರ್ಯ ಸಮರದ ಶಕ್ತಿಸ್ವರೂಪಿಣಿಯಂತೆ ಒರಗಿಳಿದ ಖಡ್ಗಧಾರಿಣಿಯಾಗಿ ಅಕ್ಬರಬಾದಶಹನ ಸೇನೆಯನ್ನು ಧಿಕ್ಕರಿಸಿದ ರಣಕ್ಷೇತ್ರವದು. ಅಷ್ಟು ಹಿಂದೇಕೆ? ಇತ್ತೀಚೆಗೆ ಎಂಭತ್ತು ವರುಷಗಳ ಪೂರ್ವದಲ್ಲಿ ಸುಶಿಕ್ಷಿತವಾದ ಪ್ರಬಲ ಬ್ರಿಟಿಷ್ ಸೇನೆಯ ಫಿರಂಗಿ ಗುಂಡುಗಳಿಗೂ ಎದೆಗೆಡದೆ ಅದರೊಡನೆ ಹೋಯ್ದಾಡಿದ ರಣಧೀರೆ ರಾಣಿ ಲಕ್ಷ್ಮೀಬಾಯಿ ರಾಷ್ಟ್ರವದು. ಸಮುದ್ರ ಮಟ್ಟದಿಂದ ೪೪೦೦ ಅಡಿ ಎತ್ತರದಲ್ಲಿ ವಿಂಧ್ಯಪರ್ವತ ಶ್ರೇಣಿಗಳ ನಡುವಣ ಬನವನ ನದಿವಾಹಿನಿಗಳ ಶಾಂತ ಸುಮಧುರ ಪ್ರಕೃತಿ ಸೌಂದರ್ಯದ ಕೇಂದ್ರವಾಗಿ ನಿಂತಿದೆ, ನಾಳಿನ ರಾಷ್ಟ್ರ ಮಹಾಸಭಾಧಿವೇಶನ ಜರಗುವ ತ್ರಿಪುರಿ.

ಕಳೆದ ನಾಲ್ಕಾರು ತಿಂಗಳುಗಳಿಂದ ಅಲ್ಲಿ ಸರಳ ಸುಂದರ ಕಲಾಪೂರ್ಣವಾದ ಸಭಾಭವನ ನಿರ್ಮಾಣದ ಹಾಗೂ ಸಹಸ್ರಾರು ಪ್ರತಿನಿಧಿ ಪ್ರೇಕ್ಷಕ ಅತಿಥಿ ಅಭ್ಯಾಗತರ ವಸತಿ ಸೌಕರ್ಯ ಸೌಲಭ್ಯಗಳ ವ್ಯವಸ್ಥೆಯೂ ವಿಚಕ್ಷಣ ಸಮಿತಿಯ ನೇತೃತ್ವದಲ್ಲಿ ನಡೆಯುತ್ತಲಿದ್ದು ಈಗೆಲ್ಲ ಸಿದ್ಧವಾಗಿದೆ. ಹಳ್ಳಿಯಾಗಿ ಬಿದ್ದಿದ್ದ ಆ ತ್ರಿಪುರಿ ಇಂದು ಸುಂದರ ಪುರಿಯಾಗಿ 'ವಿಷ್ಣುದತ್ತ ನಗರ' ಎಂಬ ಹೊಸ ಹೆಸರಿಂದ ಸುಶೋಭಿತವಾಗಿ ಕಂಗೊಳಿಸುತ್ತಿದೆ.

ಅಲ್ಲಿ ಈ ತಿಂಗಳ ತಾ. ೭ರಲ್ಲಿ ಶ್ರೀ. ಸುಭಾಷ್ ಚಂದ್ರ ಭೋಸರವರ ಅಧ್ಯಕ್ಷತೆಯಿಂದ ಕಾಂಗ್ರೆಸ್ ಮಹಾಧಿವೇಶನವು ಪ್ರಾರಂಭವಾಗಲಿಕ್ಕಿದೆ. ತಾ. ೭ರಿಂದ ೯ರ ವರೆಗೆ ವಿಷಯ ನಿಯಾಮಕ ಸಮಿತಿ, ತಾ. ೯ರಿಂದ ೧೧ರ ತನಕ ಮಹಾಧಿವೇಶ (Open Sessions) ನ ಕಾರ್ಯಕಲಾಪಗಳು, ಹೀಗೆಲ್ಲ ನಡೆಯಲಿಕ್ಕಿವೆ. ನಡೆಯಲಿ! ಯಶಸ್ವಿಯಾಗಲಿ! ಕಾಂಗ್ರೆಸಿಗೆ ಜಯವಿರಲಿ! ಭಾರತಕ್ಕೆ ಸರ್ವಸ್ವಾತಂತ್ರ್ಯ ಬರಲಿ!

ಜಿಲ್ಲಾ ಕಾಂಗ್ರೆಸ್‌ಕಮಿಟಿಯ ಅಧ್ಯಕ್ಷರು

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚುನಾವಣೆಯ ವರದಿಯನ್ನು ನಾವು ಇನ್ನೊಂದೆಡೆ ಕೊಟ್ಟಿರುತ್ತೇವೆ. ಈ ಬಾರಿಯೂ ಶ್ರೀ. ಯು. ಶ್ರೀನಿವಾಸ ಮಲ್ಯರು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಚುನಾವಣೆ ಹೊಂದಿದುದಕ್ಕಾಗಿ ನಾವವರನ್ನು ಅಭಿನಂದಿಸುತ್ತೇವೆ. ಕಳೆದ ವರ್ಷ ಜಿಲ್ಲೆಯ ವಾತಾವರಣವು ಪ್ರಕ್ಷುಬ್ಧವಾಗಿದ್ದ ವೇಳೆ ಶ್ರೀ. ಮಲ್ಯರು ಕಾಂಗ್ರೆಸಿನ ಸೂತ್ರ ವಹಿಸಿ, ತನ್ನ ಹಾದಿಯಲ್ಲಿದನ್ನು ಜಯಶೀಲವಾಗಿ ಕೊಂಡುಹೋಗಿದ್ದರು. ವಸ್ತುಸ್ಥಿತಿಯ ನಿಕಟ ಸಂಬಂಧವಿಲ್ಲದ ಹೊರಗಿನವರ ಮಾತಿರಲಿ, ಅವರೊಡನೆ ಭುಜಕ್ಕೆ ಭುಜ ಕೊಟ್ಟು ಕಾಂಗ್ರೆಸ್ ಕಾರ್ಯವನ್ನು ಮುಂದೊತ್ತುವ ಜವಾಬ್ದಾರಿ ಹೊತ್ತ ಅನುಯಾಯಿಗಳು ಕೂಡ ಕಾರಣಾಂತರಗಳಿಂದ ಅವರ ಮೇಲೆ ತಿರುಗಿ ಬಿದ್ದಿದ್ದರು. ಆ ಸಂಬಂಧವೆದ್ದಿದ್ದ ತಾಕಲಾಟದಲ್ಲಿ ವ್ಯಕ್ತಿದ್ವೇಷ, ಅಧಿಕಾರ ಲಾಲಸೆಗಳೇ ಪ್ರಾಮುಖ್ಯತೆಯನ್ನು ಪಡೆದಿದ್ದಾವಲ್ಲದೆ ಕಾರ್ಯದ ರೀತಿನೀತಿಗಳ ಭಿನ್ನಾಭಿರುಚಿಯ ಪರಿಣಾಮವದಾಗಿರಲಿಲ್ಲವೆಂದು ನಮ್ಮ ಅಭಿಪ್ರಾಯ. ಇದನ್ನು ಈ ಸಲದ ಅಧ್ಯಕ್ಷ ಚುನಾವಣೆಯು ಇನ್ನಷ್ಟು ವಿಶದೀಕರಿಸಿರುವುದು. ಹೊರ ಭಾಗವನ್ನು ಸದೆಬಡಿದೊಡನೆ ತಿರುಳಿಲ್ಲದ ದೆಸೆಯಿಂದ ಹೇಳ ಹೆಸರಿಲ್ಲದಂತಾಗಿ ಹೋಗುವ ವಿರೋಧವು ಕಾರ್ಯಕ್ಕನ್ವಯಿಸುವಂತಹ ವಿರೋಧವಲ್ಲ. ಶ್ರೀಯುತ ಮಲ್ಯರು ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಜಿಲ್ಲೆಯು ಅವರಿಗೆ ಒಮ್ಮತದ ಬೆಂಬಲವನ್ನು ಕೊಟ್ಟಂತಾಯಿತು. ಕಳೆದ ವರ್ಷ ಕಾಂಗ್ರೆಸ್ ಶಕ್ತಿಯನ್ನೆಲ್ಲಾ ತನ್ನ ಕಡೆಗೆ ಸೆಳೆದಿದ್ದ ಅನಾವಶ್ಯಕ ಕಿರುಕುಳವಿಲ್ಲದ ಇಂದಿನ ವಾತಾವರಣದಲ್ಲಿ ಶ್ರೀಯುತ ಶ್ರೀನಿವಾಸ ಮಲ್ಯರು ಕಾಂಗ್ರೆಸ್ ನಾಯಕತ್ವವನ್ನು ಸುಗಮವಾಗಿ ಯಶಸ್ವಿಯಾಗಿ ಮುಂದೊತ್ತುವರೆಂದು ಹಾರೈಸುತ್ತೇವೆ. ಹಾಗೆಯೇ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ. ಬಿ. ವೆಂಕಟ್ರಾಯ ಬಾಳಿಗರನ್ನು ನಾವು ಅಭಿವಂದಿಸುತ್ತೇವೆ.

ಕರಾಚಿ-ಲಾಹೋರ್ ಮೈಲ್ ವಿಮಾನಗಳೆರಡೂ ಮುರಿದು ಸುಟ್ಟುಬಿದ್ದುವು

'ದಿ ಇಂಡಿಯನ್ ನ್ಯಾಶನಲ್ ಏರ್‌ವೇಸ್' ಎಂಬ ಕಂಪೆನಿಯ ಕರಾಚಿ-ಲಾಹೋರ್ ಸರ್ವೀಸಿನ ಒಂದು ವಿಮಾನವು ಟಪ್ಪಾಲು ಹೇರಿಕೊಂಡು ೨೩ರ ಬೆಳಗ್ಗೆ ೫-೩೦ ತಾಸಿಗೆ ಕರಾಚಿಯಿಂದ ಹೊರಟಿತ್ತು. ಅದರ ಚಾಲಕ ಪಿ. ಡಿ. ಶರ್ಮಾ ಮಾತ್ರ ಅದರಲ್ಲಿದ್ದರು. ಅನಂತರ ೫-೪೫ ತಾಸಿಗೆ ಮತ್ತೊಂದು ವಿಮಾನವು ಪಿ.ಡಿ. ಶರ್ಮರ ಸೋದರ ಬಿ. ಡಿ. ಶರ್ಮರ ಚಾಲಕತ್ವದಲ್ಲಿ ಬ್ಯಾಪರ್ಡ ಡೇವಿಡ್‌ಸನ್ ಎಂಬ ಅಮೇರಿಕನ್ ಪ್ರಯಾಣಿಕನನ್ನು ಕುಳ್ಳಿರಿಸಿಕೊಂಡು ಹೊರಟಿತು. ಆದರ ಅದು ಕರಾಚಿಯಿಂದ ಸುಮಾರು ೨೦ ಮೈಲು ದೂರ ಹೋಗುವಷ್ಟರಲ್ಲಿ ಸುಮಾರು ಆರು ತಾಸಿನ ಮೊದಲು ಹೊರಟಿದ್ದ ವಿಮಾನದ ಹಾರಾಟದ ಪರಿಸ್ಥಿತಿ ಕೆಟ್ಟಿತೆಂದು ಮಬ್ಬಿನ ವಾತಾವರಣದಲ್ಲಿ ಹಿಂದೆ ಬರುತ್ತಿದ್ದು ಎರಡನೆಯದಕ್ಕೆ ಡಕ್ಕಿ ಹೊಡೆದು ಮುರಿದು ಬೆಂಕಿಹತ್ತಿ ಕೆಳಗೆ ಬಿದ್ದುವು. ಅವುಗಳಲ್ಲಿದ್ದ ಮೂವರೂ ಸತ್ತಿದ್ದರು. ಟಪ್ಪಾಲಿನ ಕೆಲವು ಅಂಶ ಹಾಳಾಗದೆ ದೊರಕಿದೆ.

ಜರ್ಮನಿಯ ಯೆಹೂದಿಗಳ ಮೇಲೆ ಹೊಸ ನಾಜೀಡಿಕ್ರಿ

ಜರ್ಮನಿಯಲ್ಲಿರುವ ಯಾವತ್ತು ಯೆಹೂದಿಗಳು ಇನ್ನೊಂದು ಪಕ್ಷದವಧಿಯೊಳಗೆ ಅವರ ವಶವಿರುವ ಚಿನ್ನ ಬೆಳ್ಳಿ ಪ್ಲೇಟಿನಮ್ ಮತ್ತು ರತ್ನಾದಿ ಅಮೌಲ್ಯ ವಸ್ತುಗಳನ್ನೆಲ್ಲ ಮಾರಾಟಕ್ಕಾಗಿ ಮುನಿಸಿಪಲ್ ಏಲಂ ಶಾಪುಗಳಲ್ಲಿ ಹಾಜರುಪಡಿಸತಕ್ಕದ್ದು, ಎಂದು ಜರ್ಮನಿಯ ಸರಕಾರದ ಲಾ ಗಜೇಟಿನಲ್ಲಿ ಸಾರಲ್ಪಟ್ಟಿದೆ.

ಶಾರದಾ ಕಾನೂನು ಉಲ್ಲಂಘನೆಗೆ ಶಿಕ್ಷೆ

ಬೆಜವಾಡದಲ್ಲಿ ಮಲ್ಲಯ್ಯನು ತನ್ನ ಮಗ ೧೭ವರುಷ ಪ್ರಾಯದ ಕೃಷ್ಣಮೂರ್ತಿಗೆ ಸೋಮಯ್ಯನ ಮಗಳು ೧೧ ವರುಷದ ಕನಕದುರ್ಗೆಯನ್ನು ಮದುವೆ ಮಾಡಿಸಿದ ಪ್ರಯುಕ್ತ ಅಲ್ಲಿಯ ಜೋಯಿಂಟ್ ಮ್ಯಾಜಿಸ್ಟ್ರೇಟ ಶ್ರೀ. ಕೆ. ನಾರಾಯಣ ಅಯ್ಯರ್ ಐ. ಸಿ. ಯಸ್. ಇವರ ಮುಂದೆ ಬಂದ ದಾವೆಯಲ್ಲಿ ಮಲ್ಲಯ್ಯನಿಗೆ ರೂ. ೫೦, ಸೋಮಯ್ಯನಿಗೆ ರೂ. 16 ಪುರೋಹಿತ ಶಿವಯ್ಯನಿಗೆ ರೂ. 15 ಜುಲುಮಾನೆ ವಿಧಿಸಲಾಯಿತು.

ಒರಿಸ್ಸಾದ ಎಂ ಎಲ್. ಎ.ಗಳ ದಸ್ತಗಿರಿ ರಾಣಪುರದಲ್ಲಿ

ಒರಿಸ್ಸಾ ಪ್ರಾಂತದ ಎಮ್. ಎಲ್. ಎ. ಗಳಾದ ಶ್ರೀ ಪ್ರಾಣನಾಥ್ ಪಟ್ನಾಯಕ್ ಇವರು ಇತ್ತೀಚೆಗೆ ಎತ್ತುಗಡೆಮಾಡಿರುವ ರಾಣಪುರ ಕಮಿಟಿಯೊಡನೆ ಅಲ್ಲಿಗೆ ಬಂದಾಗ ಆ ಸಂಸ್ಥಾನಾಧಿಕಾರಿಗಳು ಅವರನ್ನೂ ಅವರ ತಂಡವನ್ನೂ ದಸ್ತಗಿರಿಮಾಡಿ ಕಾರಿನಲ್ಲಿ ಹಾಕಿ ಎಲ್ಲಿಗೋ ಕೊಂಡೊಯ್ದಿರುವರು.

ಗಾಂಧಿಜಿಯವರು ರಾಜಕೋಟೆಗೆ ಹೊರಟಿದ್ದಾರೆ

ರಾಜಕೋಟೆಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಮುಂದೇನು ಮಾಡಬೇಕೆಂಬುದನ್ನು ನಿಶ್ಚಯಿಸುವುದಕ್ಕಾಗಿ ಗಾಂಧೀಜಿಯವರು ಅಲ್ಲಿಗೆ ಹೋಗುವ ನಿಶ್ಚಯ ಮಾಡಿದ್ದಾರೆ. ತಾನಲ್ಲಿಗೆ ಹೋಗಿನೋಡಿ ಮುಂದಿನ ಕಾರ್ಯಕ್ರಮವನ್ನು ಸೂಚಿಸುವ ತನಕ ಅಲ್ಲಿಯ ಸತ್ಯಾಗ್ರಹವನ್ನು ನಿಲ್ಲಿಸಬೇಕಾಗಿ ವಲ್ಲಭಾಯಿ ಪಟೇಲರಿಗೆ ತಿಳಿಸಿದಂತೆ ರಾಜಕೋಟೆಯ ಸತ್ಯಾಗ್ರಹ ಸಮರವು ತಾತ್ಕಾಲಿಕವಾಗಿ ನಿಂತಿದೆ.

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

24-2-39.

ಬಜೆಟಿನ ಮೇಲೆ ಬಾಂಬು ಪ್ರಹಾರ- ಮುಂಬಯಿಯ ಆರ್ಥಿಕ ಮಂತ್ರಿಗಳಾದ ಆನರೆಬಲ್ ಶ್ರೀ. ಲಠ್ಠೆಯವರ 1939-40 ಬಜೆಟಿನ ಮೇಲೆ ಭಯಂಕರ ಬಾಂಬುಗಳ ಪ್ರಹಾರವೇ ಸುರಿಯತೊಡಗಿದೆ. ಒಂದು ಕಡೆಯಿಂದ ಇಂಟೆರಿಂ ಮಂತ್ರಿಮಂಡಲದ ಆರ್ಥಿಕ ಮಂತ್ರಿಗಳಾಗಿ ಇದ್ದ ಶ್ರೀ। ಜಮನಾದಾಸ್ ಮೆಹತಾರವರು, ಮದ್ಯಪಾನ ನಿಷೇಧವೇನೂ ಅಷ್ಟು ಪ್ರಾಮುಖ್ಯವಲ್ಲ, ಬಡವರ ಮನೆಬಾರು ಆರ್ಥಿಕ ಸ್ಥಿತಿಗಳ ಕುರಿತು ಮೊದಲಿಗೆ ಯೋಚಿಸಬೇಕೆಂದು ತಮ್ಮ ಮನ ಬಿಚ್ಚಿ ಹೇಳತೊಡಗಿರುವರು. ಭಂಡವಾಳಶಾಹಿಗಳು, ತಮ್ಮ ಮೇಲೆ ಟೀಕ್ಸ್ ಹಾಕಿದ್ದು ಹದ್ದು ಮೀರಿದೆ. ನಮ್ಮ ಮುಂದಿನಗತಿಯೇನೆಂದು ಹಣೆ ಬಡಿದುಕೊಳ್ಳತೊಡಗಿರುವರು, ಮಗದೊಂದು ಕಡೆಯಿಂದ ವ್ಯಾಪಾರಿಗಳು ನಮ್ಮ ವ್ಯಾಪಾರವು ಇಷ್ಟು ಹೀನಸ್ಥಿತಿಯಲ್ಲಿರುವಾಗ ಇನ್ನೂ ನಮ್ಮ ಹೊರೆಯ ಮೇಲೆ ಹೊರೆಯನ್ನು ಹೊರಿಸಿದಲ್ಲಿ ಅದನ್ನು ಹೊರುವ ಗತಿಯೆಂತು ಎಂದು ಬೊಬ್ಬಿಡತೊಡಗಿರುವರು. ಇನ್ನೊಂದು ಕಡೆ ಪಾರ್ಶಿಯವರು ಕಳ್ಳಿನ ವ್ಯಾಪಾರದಲ್ಲಿರುವ ತಮ್ಮ ಬಂಧುಗಳ ಗತಿಯೇನು ಎಂದು ಚೀರಿಡುತ್ತಿರುವರು. ಹೀಗೆ ಈ ಬಜೆಟು 'ಆಯ್ಕೆ-ಕೊಯ್ಕೆ'ಗಳ ಮಧ್ಯ ನರಳುತ್ತಿರಲು, ಕಾಂಗ್ರೆಸಿನ ಹಿತಚಿಂತಕರು 'ಶಹಭಾಸ್, ಜನತೆಯ ಬಜೆಟೆಂದರೆ ಇದೇ ಸರಿ' ಎಂದು ಎದೆ ಮುಂದೆ ಮಾಡಿ ತಮ್ಮ ಭುಜಗಳಲ್ಲಿ ತಟ್ಟಿಕೊಳ್ಳುತ್ತಿರುವರು. ಈ ವಿರುದ್ಧವನ್ನೆಲ್ಲ ಕೇಳಿ ಚಿಂತಿಸಿದ್ದ ಆನರೆಬಲ್ ಶ್ರೀ. ಬಿ. ಜಿ. ಖೇರರವರು, 'ವಿರುದ್ಧ ಪಕ್ಷದವರ ಈ ಬಾಂಬು ಬಿರುದಾಟಕ್ಕೇನೂ ನಾನು ಹೆದರುವವನಲ್ಲ. ನಮ್ಮ ಧ್ಯೇಯಕ್ಕನುಸಾರವಾಗಿ ಇದು ಮಾಡಲ್ಪಟ್ಟಿದೆ. ಇದು ವಿಜಯಿಯಾಗುವಂತೆ ಮಾಡುವುದು ನಮ್ಮ ಕರ್ತವ್ಯ' ಎಂದು ಬುಧವಾರದಿವಸ ಅಸೆಂಬ್ಲಿ ಸಭೆಯಲ್ಲಿ ಮುಖವು ಕೋಪದಿಂದ ಕೆಂಪಾದರೂ ವ್ಯಸನದಿಂದ ನಡುಗುತ್ತಿದ್ದಂತೆಯೇ ವೀರಾವೇಶದಿಂದ ತಮ್ಮ ದೀರ್ಘ ಭಾಷಣವನ್ನು ಸಭಿಕರಿಗೆ ತೋರ್ಪಡಿಸಿದರು, ವಿರುದ್ಧ ಪಕ್ಷದವರು ಈ ಮಾತಿಗೆ ಮುಖ ಕೆಳಗಿಡಬೇಕಾಯಿತ.

ಎಸ್. ಎಸ್. ಬಾಟ್ಲಿವಾಲರ ಕೈಸೆರೆ- ಬುಧವಾರ ದಿವಸ ಸಂಜೆಗೆ ಶ್ರೀ ಬಾಟ್ಲಿವಾಲರು ಮತ್ತು ಭಸೆಯವರು ಇತರ 350 ಕೆಲಸಗಾರರೊಡನೆ ಸೆಕ್ರೆಟರಿಯೇಟಿಗೆ ದಿಬ್ಬಣಕ್ಕೆ ಮಾಡಿಕೊಂಡು ಹೋಗುತ್ತಿರಲು ಅರ್ಧ ದಾರಿಯಲ್ಲಿ ಪೋಲೀಸರು ಇವರನ್ನು ತಡೆದು, ಕೆಲಸಗಾರರನ್ನು ಓಡಿಸತೊಡಗಿದರು. ಬಾಟ್ಲಿವಾಲ ಮತ್ತು ಭಸೆಯವರು ಪೋಲೀಸರ ಆಜ್ಞೆಗೆ ಮನ್ನಣೆಕೊಡದಿರಲು, ಪೋಲೀಸರು ಇವರಿಗೆ ಉಪದ್ರವಿತ್ತು ಕೈಸೆರೆಮಾಡಿದರು. ಎರಡು ಗಂಟೆಯ ತರುವಾಯ ಇವರನ್ನು ಬಿಟ್ಟುಬಿಟ್ಟರು. ಧನ್‌ರಾಜ ಮಿಲ್ಲಿನ ಸಂಪುಗಾರರನ್ನು ರಾಜಸಂಚಾರಿಗಳಿಗಾಗಿ ಕರೆದುಕೊಂಡು ಹೋಗುತ್ತಿರುವಾಗ ನಡೆದ ಘಟನೆಯಿದು.

ಉಪಾಧ್ಯಾಯರ ಮೇಲೆ ಆರೋಪಣೆ

ಮುಂಬಯಿ ಫೋರ್ಟ್ ಕ್ರೈಸ್ಟ್ ಹೈಸ್ಕೂಲಿನ ಪ್ರಿನ್ಸಿಪಾಲರವರು, ಈ ಶಾಲೆಯ ಉಪಾಧ್ಯಾಯರಲ್ಲೊಬ್ಬರ ಮೇಲೆ ಈ ಕೆಳಗಿನ ಆರೋಪಣೆಗಳನ್ನು ಹೊರಿಸಿದರು. (1) ಸೋಶಿಯಲಿಸಮ್ಮನ್ನು (ಸಮತಾವಾದ) ಹುಡುಗರಿಗೆ ಕ್ಲಾಸಿನಲ್ಲಿ ಕಲಿಸುತ್ತಾರೆ. (2) ವಿದ್ಯಾರ್ಥಿ ಸಂಘ, ಮುಕ್ತಸ್ಪರ್ಧೆ ಮೊದಲಾದವುಗಳನ್ನು ಮಾಡಿ ಹುಡುಗರ ಒಗ್ಗಟ್ಟಿಗಾಗಿ ಪ್ರಯತ್ನಿಸುತ್ತಾರೆ. (3) ಉಪಾಧ್ಯಾಯರ ಕಮಿಟಿಮಾಡಿ ಉಪಾಧ್ಯಾಯರೆಲ್ಲ ತಮ್ಮ ಏಳಿಗೆಗಾಗಿ ಜೊತೆಯಲ್ಲಿ ಕೆಲಸಮಾಡಬೇಕೆಂದು ಹೇಳುತ್ತಾರೆ. (4) ಶ್ರೀ ಮುನ್ಶಿಯವರಿಗೆ ವಿರುದ್ಧ ಮಾತಾಡಿ ಚುನಾವಣೆಗಳಲ್ಲಿ ಶ್ರೀ ನರಿಮನ್‌ರವರ ಪರವಾಗಿ ಕೆಲಸಮಾಡುತ್ತಾರೆ. ಹೀಗೆ ಪ್ರಿನ್ಸಿಪಾಲ ಉಪಾಧ್ಯಾಯರೊಳಗೆ ಮತಭೇದವಿದ್ದುದರಿಂದ ಉಪಾಧ್ಯಾಯರು ರಾಜಿನಾಮೆ ಕೊಟ್ಟಿರುವರು. ಗಾಂಧಿವಾದಕ್ಕೂ ಸಮತಾವಾದಕ್ಕೂ ಸರಿಬೀಳುವುದೇ ಇಲ್ಲ. ವಾದ-ವಾದಗಳು ಜೊತೆಯಾಗಿ ಅಪವಾದ ಆಗದಿದ್ದರೆ ಸಾಕು।

ಜಿಲ್ಲಾ ವೈದ್ಯ ಸಮ್ಮೇಲನ ಮತ್ತು ಭೈಷಜ್ಯ ವಸ್ತು ಪ್ರದರ್ಶನ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲಾ ಸಮಿಷ್ಟ ಭಾರತೀಯ ವೈದ್ಯ ಸಂಘದ ಪ್ರಥಮ ಮಹಾಸಭೆಯು ತೀರ್ಮಾನಿಸಿದ ಮೇರೆಗೆ ತಾ. 12-2-1939ರಲ್ಲಿ ಜರಗಿದ ಮಂಗಳೂರುತಾಲೂಕು ಭಾರತೀಯ ವೈದ್ಯರ ಮಹಾಸಭೆಯವರೂ ನಿರ್ಣಯಿಸಿದಂತೆ ಮಂಗಳೂರಲ್ಲಿ ಇದೇ ಬರುವ ಎಪ್ರಿಲ್ ತಿಂಗಳ ತಾ. 29 ಮತ್ತು 30ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ವೈದ್ಯಸಮ್ಮೇಲನ ಮತ್ತು ಭೈಷಜ್ಯ ವಸ್ತುಪ್ರದರ್ಶನವು ಜರಗುವುದು. ಆ ಪ್ರಯುಕ್ತ ಜಿಲ್ಲೆಯ ವೈದ್ಯ ಮತ್ತು ಹಕೀಮ ಭ್ರಾತೃಗಳೆಲ್ಲರೂ ದೇಶೀಯ ವೈದ್ಯಾಭಿವೃದ್ಧಿಯ ಮೇಲಿನ ಅಭಿಮಾನದಿಂದ ತಮ್ಮ ತನುಮನಧನಗಳಿಂದಲೂ ಸಹಕಾರವನ್ನು ನೀಡುವುದಲ್ಲದೆ ಸಮ್ಮೇಲನಕ್ಕೆ ಬಂದು ಪರಸ್ಪರ ಐಕ್ಯಮತ್ಯ ಮತ್ತು ಬಾಂಧವ್ಯವನ್ನು ಬೆಳಿಸಿ, ನಮ್ಮ (ಕಾಂಗ್ರೆಸ್) ಸರಕಾರಗಳು ದಿನೇ ದಿನೇ ದೇಶೀಯ ವೈದ್ಯವಿದ್ಯೆ ಹಾಗೂ ವೈದ್ಯರ ಮತ್ತು ಹಕೀಮರ ಮೇಲೆ ತರುತ್ತಿರುವ ಹಾನಿ ವ ಕೇಡುಗಳನ್ನು ಖಂಡಿಸಿ, ದೇಶೀಯ ವೈದ್ಯಕ್ಕೆ ಸಿಗಬೇಕಾದ ಪ್ರೋತ್ಸಾಹವು ಸಿಗುವಂತೆ ಮಾಡುವರೆ ತಮ್ಮ ಅಭಿಪ್ರಾಯಗಳನ್ನು ಸಮ್ಮೇಲನದ ಮುಂದಿಟ್ಟು ಸಮ್ಮೇಲನವು ಯಶಸ್ವಿಯಾಗುವಂತೆ ಮಾಡಿ ಕೃತಕೃತ್ಯರಾಗಬೇಕಾಗಿ ಪ್ರಾರ್ಥನೆ.

ಮಂಗಳೂರು ಪೇಟೆ ಮತ್ತು ತಾಲೂಕಿನ ಪ್ರತಿ ವೈದ್ಯರೂ ಸ್ವಾಗತ ಮಂಡಳಿಗೆ ರೂ. 5ಕ್ಕೆ ಕಡಿಮೆಯಿಲ್ಲದಷ್ಟು ವಂತಿಗೆ ಕೊಟ್ಟು ಮಂಡಳಿಯ ಸದಸ್ಯರಾಗಲು ಅರ್ಹರಾಗಿರುತ್ತಾರೆ ಮತ್ತು ಅವರು ಕೂಡಲೇ ಸದಸ್ಯರಾಗಬೇಕಾದ ಅವಶ್ಯವಿರುತ್ತದೆ. ಮಂಗಳೂರು ತಾಲೂಕಿನ ಹೊರಗಣ ವೈದ್ಯರು ಪ್ರತಿನಿಧಿಗಳಾಗಿ ಬರಲು ಅರ್ಹರು. ಪ್ರತಿನಿಧಿ ಶುಲ್ಕ ಬರೇ ಒಂದು ರೂಪಾಯಿ, ಸ್ತ್ರೀ ಪ್ರತಿನಿಧಿಗಳೂ ವೈದ್ಯ ವಿದ್ಯಾರ್ಥಿಗಳೂ ಶುಲ್ಕ ಕೊಡಬೇಕಾಗಿಲ್ಲ. ಮಂಗಳೂರ ಹೊರಗಿನಿಂದ ಬರತಕ್ಕ ಪರಸ್ಥಳದ ವೈದ್ಯರು ತಮ್ಮ ಊಟ ಉಪಚಾರಕ್ಕೆ ಅವರವರೇ ಏರ್ಪಡಿಸಿಕೊಳ್ಳಬೇಕು. ಅದು ಅಸಾಧ್ಯವಾದಲ್ಲಿ ಸಮ್ಮೇಲನಕ್ಕೆ ಎಷ್ಟು ದಿವಸ ಮುಂಚಿತವಾಗಿ ಪ್ರತಿನಿಧಿ ಶುಲ್ಕದೊಡನೆ ಏನು ವ್ಯವಸ್ಥೆ ಮಾಡಬೇಕೆಂಬ ಕಾರ್ಯದರ್ಶಿಗಳಿಗೆ ವಿವರವಾಗಿ ಬರೆದಲ್ಲಿ ತಕ್ಕ ಏರ್ಪಾಡು ಮಾಡಲಾದೀತು. ಸಮ್ಮೇಲನದಲ್ಲಿ ಪ್ರಬಂಧಗಳನ್ನು ಓದಲು ಮತ್ತು ಲೇಖನಗಳನ್ನು ತರಲು ಇಚ್ಛಿಸುವವರು ಆ ವಿಷಯಗಳನ್ನು ಸ್ಪಷ್ಟವಾಗಿ ಬರೆದು ಎಪ್ರಿಲ್ ತಾ. 15 ರೊಳಗೆ ಕಾರ್ಯದರ್ಶಿಗಳಿಗೆ ತಲುಪುವಂತೆ ಕಳುಹಿಸಿಕೊಡಬೇಕು. ಪ್ರಬಂಧಗಳು ಈ ಕೆಳಗಿನ ವಿಷಯಗಳ ಮೇಲಾಗಿರಬಹುದು. 1. ಭಾರತೀಯ ಆರೋಗ್ಯವಿಜ್ಞಾನವನ್ನು ಜನತೆಯಲ್ಲಿ ಪ್ರಚಾರ ಮಾಡುವ ವಿಧಾನ ಸಹಿತ. 2. ಭಾರತೀಯ ಶಸ್ತ್ರ ಚಿಕಿತ್ಸಾ ವಿಜ್ಞಾನ: ಈಗಲೂ ಸ್ವತಂತ್ರವಾಗಿ ಈ ಚಿಕಿತ್ಸೆಯನ್ನು ಎಷ್ಟರ ಮಟ್ಟಿಗೆ ಕಾರ್ಯತಃ ನಡೆಸಬಹುದೆಂಬ ವಿಷಯ ಸಮೇತ. 3. ದಕ್ಷಿಣ ಕನ್ನಡದಲ್ಲಿ ದೊರಕುವ ವಿಶಿಷ್ಟ ವನಸ್ಪತಿಗಳು (ಪ್ರತ್ಯಕ್ಷ ಪ್ರದರ್ಶನ ಸಮೇತ.) 4. ಭಾರತೀಯ ಪ್ರಸೂತಿ ತಂತ್ರ; ಶಸ್ತ್ರ ಚಿಕಿತ್ಸಾ ಸಮೇತ. 5. ಭಾರತೀಯ ವ್ಯವಹಾರ ಆಯುರ್ವೇದ (Indian Medical Jurisprudence) 6. ತ್ರಿದೋಷತತ್ವ ವಿಚಾರ. ವಸ್ತು ಪ್ರದರ್ಶನದಲ್ಲಿ ವಿಶೇಷವಾದ ವನಸ್ಪತಿ, ಜಾಂಗಮ ಯಾ ಪಾರ್ಥಿವ ಔಷಧಗಳನ್ನು ಯಾ ನಿಘಂಟಿನಲ್ಲಿ ಕಾಣದ ಜಿಲ್ಲೆಯಲ್ಲಿ ಪ್ರಧಾನವಾಗಿ ದೊರಕುವ ಅಮೂಲ್ಯ ವನಸ್ಪತಿಗಳನ್ನು ಪ್ರದರ್ಶನ ಶುಲ್ಕವಿಲ್ಲದೆ ಪ್ರದರ್ಶಿಸಬಹುದು. ತಯಾರುಮಾಡಿದ ಶಾಸ್ತ್ರೀಯ ಮತ್ತು ಪೇಟೆಂಟ್ ಔಷಧಗಳನ್ನು ಪ್ರದರ್ಶಿಸಲು ರೂ. ಒಂದನ್ನು ವಸೂಲು ಮಾಡಲಾದೀತು. ಉತ್ತಮ ಪ್ರಬಂಧಗಳಿಗೂ ಪ್ರದರ್ಶನೀಯ ವಸ್ತುಗಳಿಗೂ ಯೋಗ್ಯತಾ ಪತ್ರಗಳನ್ನು ಕೊಡಲಾದೀತು.

ಪ್ರದರ್ಶನದ ಕುರಿತ, ಪತ್ರ ಬರೆಯುವಲ್ಲಿ ಜ. ಕಾರ್ಯದರ್ಶಿ, ಡಾ। ಕೆ. ಗೋಪಾಲಾಚಾರ್, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ, ಮಂಗಳೂರು ಇವರಿಗೆ ಬರೆಯುವುದು. ಇತರ ವಿಷಯಗಳಿಗೆ ಕಾರ್ಯದರ್ಶಿ, ಡಾ. ಎ. ವೆಂಕಪ್ಪಯ್ಯ, ಬಿ. ಎ., ಎಲ್. ಟಿ., ಬೋಳಾರ ಮಂಗಳೂರು ಇವರಿಗೆ ಬರೆಯುವುದು.

A. Venkappayya,
ಗೌ. ಜ. ಕಾರ್ಯದರ್ಶಿ.

ದ. ಕ. ಜಿಲ್ಲಾ ವೈದ್ಯ ಸಮ್ಮೇಲನದ ಸ್ವಾಗತ ಮಂಡಲಿ ಕಾರ್ಯಾಲಯ, ಬೋಳಾರ, ಮಂಗಳೂರು. ತಾ. 25-2-'39

ತ್ರಿಪುರಿ ಕಾಂಗ್ರೆಸ ಅಧಿವೇಶನ

ಈ ಸಲ ನಡೆಯುವ ತ್ರಿಪುರಿ ಕಾಂಗ್ರೆಸ ಅಧಿವೇಶನದ ಬಗ್ಗೆ ಕೆಲವೊಂದು ಮಾಹಿತಿಯು ಅಲ್ಲಿನ ಸ್ವಾಗತ ಸಮಿತಿಯವರಿಂದ ಬಂದಿದೆ. ಅದು ಎಲ್ಲರಿಗೂ ಗೊತ್ತಾಗಲೆಂದು ನಮಗೆ ಬಂದಿರುವ ಮಾಹಿತಿಯ ಸಾರಾಂಶವನ್ನು ಕೆಳಗೆ ಕೊಡಲಾಗಿದೆ.

೧. ವಿಷಯನಿಯಾಮಕ ಸಮಿತಿ— ೭, ೮ ಮತ್ತು ೯ನೇ ಮಾರ್ಚಿ ೧೯೩೯. ಪ್ರೇಕ್ಷಕ ಫೀ—ಕಾಂಗ್ರೆಸ ಪ್ರತಿನಿಧಿಗಳಿಗೆ ರೂ. ೫/- ಇತರರಿಗೆ ರೂ. ೧೦/-

೨. ಕಾಂಗ್ರೆಸ ಅಧಿವೇಶನ (Open Sessions)—೯, ೧೦ ಮತ್ತು ೧೧ನೇ ಮಾರ್ಚಿ ೧೯೩೯. ಪ್ರೇಕ್ಷಕ ಫೀ—ರೂ. ೧/-, ರೂ. ೨/-, ರೂ. ೫/-, ರೂ ೧೦/- ರೂ ೫೦/- — —ರೂ ೫೦೦೦/-

೩. ವಸತಿ—ಪ್ರತಿನಿಧಿಗಳಿಗೆ ಪ್ರತಿಯೊಬ್ಬರಿಗೆ ರೂ. ೫/- ಇತರ ಪ್ರೇಕ್ಷಕರಿಗೆ ಪ್ರತಿಯೊಬ್ಬರಿಗೆ ರೂ. ೬/- ಕುಟುಂಬ (೬ಮಂದಿ) ಕ್ಕೆ ರೂ ೫೦/-ಹಾಗೂ ರೂ. ೧೦೦/-

೪. ಊಟ—ಒಂದು ಹೊತ್ತಿಗೆ ೦-೬-೦ ಎರಡೂ ಹೊತ್ತಿಗೆ ೦-೧೧-೦ ಕೈತರಊಟ ಒಂದು ಹೊತ್ತಿಗೆ ೦-೩-೦ ಎರಡೂ ಹೊತ್ತಿಗೆ ೦-೫-೦. ಆಯಾ ಪ್ರಾಂತದವರ ರುಚಿ ಪದ್ಧತಿಗಳಿಗನುಸಾರವಾಗಿ ಊಟಕ್ಕೆ ವ್ಯವಸ್ಥೆ ಮಾಡಲಾಗಿದೆ.

ತ್ರಿಪುರ (ವಿಷ್ಣುದತ್ತ ನಗರವು) ಜಿ. ಐ. ಪಿ. ರೇಲ್ವೆಯ 'ಮದನ ಮಹಲ್' ಸ್ಟೇಶನ್ನಿನಿಂದ ಸುಮಾರು ೭ ಮೈಲಿ ದೂರದಲ್ಲಿರುವದು. ಸ್ವಾಗತ ಸಮಿತಿಯವರು ಸ್ಟೇಶನ್ನಿನಿಂದ ವಿಷ್ಣುದತ್ತ ನಗರಕ್ಕೆ ಬಸ್ಸುಗಳ ವ್ಯವಸ್ಥೆ ಇಟ್ಟಿದ್ದು ಬಸ್ ಚಾರ್ಜ್ ಪ್ರತಿಯೊಬ್ಬರಿಗೆ ೪ ಆಣೆ ಬೀಳುತ್ತದೆ. ಜಿ. ಐ. ಪಿ. ರೇಲ್ವೆಯವರು, ರಿಯಾಯಿತಿ ತೋರಿಸಿದ್ದು ೧½ ಚಾರ್ಜಿನಲ್ಲಿ ತಮ್ಮ ಯಾವ ಸ್ಟೇಶನ್ನಿನಿಂದಲೂ ಮದನ ಮಹಲಕ್ಕೆ ಹೋಗಿ ವಾಪಸ್ಸು ಬರುವ ಟಿಕೇಟುಗಳನ್ನು ಕೊಡುವರು. ಇಂತಹ ಟಿಕೇಟುಗಳು ೨೮-೨-೩೯ರಿಂದ ೧೨-೩-೧೯೩೯ರ ವರೆಗೆ ಕೊಡಲ್ಪಟ್ಟು, ಮರಳಿ ಪ್ರವಾಸವು ೨೪-೩-೧೯೩೯ರ ಒಳಗಾಗಿ ಮುಗಿಯಬೇಕಾಗುವದು.

ಪಟೇಲಪ್ರಭೃತಿಗಳ ರಾಜಿನಾಮೆಗೆ ಭೋಸರವರ ಅಂಗೀಕಾರ

ವಿಶೇಷ ವಿಚಾರಮಾಡಿ ಕಳುಹಿಸಿರುವ ರಾಜಿನಾಮೆಯಾದುದರಿಂದ ಅದನ್ನು ಪುನರಾಲೋಚನೆಮಾಡಿರೆಂದು ತಾನು ಬಾಯಿ ಉಪಚಾರದ ಹಾಗೂ ಸಾರ್ಥಕವಾಗದ ಬೇಡಿಕೆಯನ್ನು ಮಾಡುವುದಕ್ಕಿಂತ ಸ್ವೀಕರಿಸುವುದೇ ಒಳ್ಳೆಯದೆಂದು ವಿಷಾದಪೂರ್ವಕವಾಗಿ ಅಂಗೀಕಾರ ಮಾಡಿದ್ದೇನೆಂದು ಭೋಸರವರು ಪ್ರತ್ಯುತ್ತರಕೊಟ್ಟಿರುವರು. ನೀವು ವರ್ಕಿಂಗ್ ಕಮಿಟಿಯ ಸದಸ್ಯತನವನ್ನು ಬಿಟ್ಟರೂ ನಿಮ್ಮ ಸಹಕಾರವನ್ನೂ ಆದರದೊಂದಿಗೆ ಹಿಂದೆಗೆಯಲಿಲ್ಲವೆಂದು ನಾನು ನಚ್ಚಿಕೊಂಡಿದ್ದೇನೆ. ನನ್ನ ಮುಂದಿನ ಕರ್ತವ್ಯ ನಿರ್ವಾಹದಲ್ಲಿ ನಿಮ್ಮ ಸಹಕಾರ ಸಹಾಯ್ಯಗಳು ಅಮೌಲ್ಯವಾದುವುಗಳು. ನಮ್ಮೊಳಗೆ ಭಿನ್ನಾಭಿಪ್ರಾಯದ ವಿಷಯಗಳಿಗಿಂತಲೂ ಎಷ್ಟೋ ಪಾಲು ಹೆಚ್ಚು ಏಕಾಭಿಪ್ರಾಯದ ಸಂಗತಿಗಳಿವೆಯೆಂಬುದನ್ನು ನಾವು ತ್ರಿಪುರಿಯಲ್ಲಿ ಸಂಧಿಸಿದಾಗ ನಮಗೆ ತಿಳಿದೀತೆಂದು ನನ್ನ ಆಶಯ ಮತ್ತು ನಂಬಿಗೆ ಎಂದು ಸಹ ಆ ಅಂಗೀಕಾರ ಪತ್ರದಲ್ಲಿ ಭೋಸರವರು ಬರೆದಿರುವರು.

ಬೊಂಬಾಯಿಯಲ್ಲೊಂದು ವಿಮಾನ ಪತನ

ವಿಮಾನಗಳು ಇತ್ತೀಚೆಗೆ ಕೆಳಗೆ ಬಿದ್ದು ಪುಡಿಯಾಗಿ ಅದರಲ್ಲಿದ್ದ ಜನರ ಪ್ರಾಣಹಾನಿಯಾಗುವ ಸುದ್ದಿಯನ್ನು ಪ್ರತಿವಾರವೆಂಬಂತೆ ಕೇಳತೊಡಗಿದ್ದೇವೆ. ಮೊನ್ನೆ ತಾ. ೨೦ರಲ್ಲಿ ಬೊಂಬಾಯಿಯ ವಿಮಾನ ಕ್ಲಬ್ಬಿನವರ ವಾರ್ಷಿಕೋತ್ಸವದಂದು ವಿಮಾನ ಹಾರಾಟದ ಪ್ರದರ್ಶನದ ಸಂತೋಷ ಕೂಟವು ವಿಷಾದಾಂತವಾಗಿ ಪರಿಣಮಿಸಿತು. ಕ್ಲಬ್ಬಿನ ಪ್ರಮುಖ ವಿಮಾನ ಚಾಲಕಶಿಕ್ಷಕರಾದ ಶ್ರೀ. ಬಿ. ಬಿ ನಿಕೋಲ್ಸನ್ ಎಂಬವರು ವಿಮಾನ ಹಾರಾಟದ ವಿವಿಧ ಚಾತುರ್ಯವನ್ನು ಅಂತರಿಕ್ಷದಲ್ಲಿ ಮಾಡಿ ತೋರಿಸುತ್ತಿದ್ದಾಗಲೇ ಅದರ ಯಂತ್ರದ ಮೇಲಿನ ಇವರ ಹಿಡಿತವು ತಪ್ಪಿ ಅದು ಕೆಳಗೆ ಬಿತ್ತು. ಬಿದ್ದ ರಭಸದ ಪೆಟ್ಟಿನಿಂದ ಇವರು ಗತಪ್ರಾಣರಾದರು

ಬಂಡೆಯೊಡೆಯಲಿಟ್ಟ ತೋಟೆ ಪ್ರಾಣ ತೆಗೆಯಿತು

ಮಧುರೆಯಲ್ಲಿ ಮೂವರು ಬಂಡೆಯನ್ನೊಡೆಯುವುದಕ್ಕಾಗಿ ಅದರಲ್ಲಿ ಸಿಡಿಮದ್ದು ತುಂಬಿಸಿ ಸಿದ್ಧಪಡಿಸುವಷ್ಟರಲ್ಲಿ ಅದು ಸಿಡಿದುದರಿಂದ ಒಬ್ಬನು ಅಲ್ಲೇ ಮೃತನಾದ. ಮತ್ತಿಬ್ಬರು ವಿಶೇಷ ಘಾಸಿಗೊಂಡು ಆಸ್ಪತ್ರೆಗೆ ಒಯ್ಯಲ್ಪಟ್ಟು ಗಂಡಾಂತರದ ಪರಿಸ್ಥಿತಿಯಲ್ಲಿರುವರು.

ರಂಗೂನಿನಲ್ಲಿ ಶಾಂತಿ ಭಂಗ

ಒಬ್ಬ ಹಿಂದೀ ಕುಟುಂಬ ಪೂರ್ಣ ನಿರ್ನಾಮ

ರಾಜಕೀಯ ಪಕ್ಷವಿಪಕ್ಷಗಳಿಂದಾಗಿ ಮೊಳೆತ ಶಾಂತಿಭಂಗದ ಚಳವಳಿಯಿಂದ ಪುಂಡಗಾರರ ಸ್ವೇಚ್ಛಾನುವರ್ತನೆಗೆ ಅವಕಾಶಗೊಟ್ಟಿದೆ. ದಿನದಿನವೂ ಗೊಂದಲವು ಹೆಚ್ಚುತ್ತ ಬರುತ್ತದೆ. ಬೀದಿ ಬೀದಿಗಳಲ್ಲಿ ಬರ್ಮಾ ಹೆಂಗಸರು ಗಂಡಸರೆನ್ನದೆ ಅಡ್ಡ ಬಿದ್ದು ಪಿಕೆಟಿಂಗ್ ಮಾಡಿ ಟ್ರಾಮುಗಳನ್ನು ನಿಲ್ಲಿಸುವರು. ಶಾಲೆಗಳ ಬಾಗಿಲಲ್ಲಿ ನಿಂತು ವಿದ್ಯಾರ್ಥಿಗಳು ಪರೀಕ್ಷೆಗೆ ಹೋಗದಂತೆ ಪೋಲೀ ಹುಡುಗರು ಮಾಡುತ್ತಿರುವರು. ನ್ಯಾಯವಿಧಾಯಕ ಸಭೆಯ ಒಂದು ಪಕ್ಷಕ್ಕೆ ಸೇರಿದ ಸದಸ್ಯರೊಬ್ಬರ ಮನೆಯ ಸಮೀಪ ಒಂದು ಕಲ್ಪಿಸಿದ ಪುಂಡಾಟಿಕೆ ಮಾಡಿ ತೃಪ್ತರಾಗದೆ ಕೊನೆಗೆ ಮನೆಗೆ ಬೆಂಕಿ ಕೊಡುವ ಸನ್ನಾಹ ಮಾಡುತ್ತಿರಲು ಆ ಮೆಂಬರರು ಬಂದು ಗುಂಡು ಹಾರಿಸಿ ಮೂವರನ್ನು ಕೊಲ್ಲದಿದ್ದರೂ ಬೀಳಿಸಬೇಕಾಯಿತು.

ಮತ್ತೊಂದು ಕಡೆಯಲ್ಲಿ ಒಂದು ಹಿಂದೀ ಕುಟುಂಬದ ನಾಲ್ವರನ್ನು ಪುಂಡರು ಕೊಂದು ಅಮೌಲ್ಯ ವಸ್ತುಗಳನ್ನೆಲ್ಲ ದೋಚಿಕೊಂಡು ಹೋಗಿರುವರು. ಈಗ ನಗರದ ಪ್ರಾಮುಖ್ಯ ಸ್ಥಳಗಳಲ್ಲಿಯೂ ಸಂದುಗೊಂದುಗಳಲ್ಲಿಯೂ ಮಿಲಿಟರೀ ಪೋಲೀಸರ ಪಹರೆ ನಡೆಯುತ್ತದೆ.

ನವಯುಗಕ್ಕೆ
ಚಂದಾದಾರರಾಗಿರಿ.

ಬೇಕಾಗಿದ್ದಾರೆ.

ಜಗತ್ಪ್ರಸಿದ್ಧವಾದ ಯುರೋಪಿಯನ್ ವಿಮಾ ಕಂಪೆನಿಯಾದ 'ಅಲ್ಲಿಯಾನ್ಸ್ ಅಂಡ್ ಸ್ಟೆಟ ಗಾರ್ಟರ್ ಲೈಫ್ ಇನ್ಶೂರೆನ್ಸ್ ಬ್ಯಾಂಕ್ ಲಿಮಿಟೆಡ್'ಗೆ ದಕ್ಷಿಣ ಕನ್ನಡ ಮತ್ತು ಕೊಡಗುಗಳಿಗೆ ಇಬ್ಬರು ಪ್ರಭಾವಶಾಲಿ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿಶೇಷ ಮಾಹಿತಿ ಬಗ್ಗೆ:— ವಿ. ವಿ. ಕವಾಲ್,
ಸುಪರಿಂಟೆಂಡೆಂಟ್,
C/o ಪೋಸ್ಟ್‌ಮಾಸ್ಟರ್, ಧಾರವಾಡ

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ
30—4—38ರ
ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್‌ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.
ಕಾಮನ್‌ವೆಲ್ತ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.
ಗವಾಂಕರ್ ಅಂಡ್ ಸನ್ಸ್,
ಚೀಫ್ ಏಜಂಟ್ಸ್: ಆನಂದರಾವ್ ಸರ್ಕಲ್, ಬೆಂಗಳೂರು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 26-2-39

ಸಾರ್ವಜನಿಕ ಸಭೆ—ತಾ. 19ರಲ್ಲಿ ಮಂಗಳೂರು ಪುರಭವನದ ಮಹಾಸಭೆಯು ಮೋಟಾರ್ ಕೆಲಸಗಾರರ ಸಂಘದ ಆಶ್ರಯದಲ್ಲಿ ಸೇರಿತು. ಶ್ರೀ ಕೆ. ಕೃಷ್ಣರಾಯರು ಅಧ್ಯಕ್ಷರಾಗಿದ್ದರು. ಮಾನ್ಯ ಗಿರಿಯವರನ್ನು ಭೇಟಿ ಮಾಡಿದಾಗ ಅವರು ಹೇಳಿದ್ದನ್ನು ಮಹಾಜನರ ಮುಂದೆ ನಿವೇದಿಸಿಕೊಳ್ಳಬೇಕೆಂದು ಕಾರ್ಯದರ್ಶಿಗಳನ್ನು ಕೇಳಿಕೊಂಡ ಮೇರೆಗೆ ಶ್ರೀ. ರಮಾನಾಥರಾಯರು ತಾ. 16ನೇ ದಿನ ರಾತ್ರಿ ತಾವು ಸಂಘದ ಸುಮಾರು 50-60 ಸದಸ್ಯರೊಡನೆ ಮಂತ್ರಿವರ್ಯರ ಭೇಟಿ ಮಾಡಲು ಹೋದಾಗ ಕೆಲಸಗಾರರನ್ನು ನೋಡಲು ಮಂತ್ರಿಗಳಿಗೆ ಅವಕಾಶ ದೊರೆಯದೆ ಹೋಯಿತೆಂದೂ ಕೊನೆಗೆ ಒಂದು ವಾರದಲ್ಲಿ ತಮ್ಮ ತೀರ್ಮಾನವನ್ನು ತಿಳಿಸುವುದಾಗಿ ಮಂತ್ರಿವರ್ಯರು ತಿಳಿಸಿರುವರೆಂದರು. ಅನಂತರ ಶ್ರೀ. ಪಿ. ವಿ. ಉಪಾಧ್ಯಾಯರು ಭಾಷಣಮಾಡುತ್ತಾ ಸಾರ್ವಜನಿಕರ ಪ್ರಯೋಜನಕ್ಕಿರುವ ಮೋಟಾರ್ ಕಂಪೆನಿಗಳನ್ನು ಜಿಲ್ಲಾ ಬೋರ್ಡಿನವರು ತಮ್ಮ ಸ್ವಾಧೀನತೆಗೆ ತೆಗೆದುಕೊಂಡು ಸಾರ್ವಜನಿಕರ ಪ್ರಯೋಜನಕ್ಕಾಗಿ ನಡಿಸುವುದು ಅಗತ್ಯವೆಂದೂ, ಆ ಬಗ್ಗೆ ಮಹಾಜನರು ಚಳವಳ ಹೂಡಬೇಕೆಂದೂ ಹೇಳಿದರು. ಅಧ್ಯಕ್ಷರ ಸಮಯೋಚಿತ ಭಾಷಣದೊಂದಿಗೆ ಸಭೆ ಮುಕ್ತಾಯವಾಯಿತು.

ಹೊಸ ಜಿಲ್ಲಾ ಕಾಂಗ್ರೆಸ್ ಸಮಿತಿ— ಈ ಸಮಿತಿಗೆ ಕಳೆದ ಭಾನುವಾರ ಚುನಾವಣೆ ನಡೆಯಿತು. ಆರಂಭದಲ್ಲಿ ಶ್ರೀ| ಶ್ರೀನಿವಾಸ ಮಲ್ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ| ಕೃಷ್ಣರಾಯ ಕೊಡ್ಗಿಯವರು ಶ್ರೀ| ಬಿ. ವಿ. ಬಾಳಿಗ, ಎಂ. ಎಲ್. ಎ. ಯವರ ಹೆಸರನ್ನು ಸೂಚಿಸಿದರು. ಅದು ಅನುಮೋದಿಸಲ್ಪಟ್ಟಿತು. ಮತ್ತೊಬ್ಬರು ಶ್ರೀ| ಶ್ರೀನಿವಾಸ ಮಲ್ಯರ ಹೆಸರನ್ನು ಸೂಚಿಸಿದರು. ಅದೂ ಅನುಮೋದಿಸಲ್ಪಟ್ಟಿತು. ಅಧ್ಯಕ್ಷರು ಶ್ರೀ| ಬಾಳಿಗರು ತಾವು ಅಧ್ಯಕ್ಷರಾಗಿ ನಿಲ್ಲುವುದಿಲ್ಲವೆಂದು ತಮ್ಮೊಡನೆ ಹೇಳಿದ್ದಾರಾದ್ದರಿಂದ ಶ್ರೀ| ಕೊಡ್ಗಿಯವರು ತಮ್ಮ ಸೂಚನೆಯನ್ನು ಹಿಂತೆಗೆಯಬೇಕೆಂದರು. ಆದರೆ ಶ್ರೀ| ಕೊಡ್ಗಿಯವರು ಅದಕ್ಕೊಪ್ಪಲಿಲ್ಲ. ಅಧ್ಯಕ್ಷರು ತಮ್ಮ ರೂಲಿಂಗ್ ಕೊಡುವುದರಲ್ಲಿದ್ದರು. ಆಗ ಶ್ರೀ| ಮಹಾಬಲ ಹೆಗ್ಗಡೆಯವರು ಅಧ್ಯಕ್ಷತೆ ವಹಿಸಿದವರೂ ಒಬ್ಬ ಉಮೇದ್ವಾರರಾದ್ದರಿಂದ ಅವರು ಅಧ್ಯಕ್ಷರ ಸ್ಥಾನವನ್ನು ಬಿಡುವುದು ಯೋಗ್ಯವೆಂದರು. ಹಾಗಾಗಿ ಅಧ್ಯಕ್ಷರೆದ್ದರು. ಕಾರ್ಕಳದ ವಕೀಲರಾದ ಶ್ರೀ| ಕೆ. ಎಲ್. ಕುಡುವರು ಅಧ್ಯಕ್ಷತೆ ವಹಿಸಿ ಇಬ್ಬರು ಸದಸ್ಯರಲ್ಲಿ ಶ್ರೀ. ಬಾಳಿಗರು ತಮಗೆ ಅಧ್ಯಕ್ಷತೆ ಬೇಡವೆಂದು ಹೇಳಿದ್ದರ ಮೇಲೂ ಮತ್ತು ಅವರು ಸಭೆಯಲ್ಲಿ ಹಾಜರಿಲ್ಲದ್ದರಿಂದಲೂ ಶ್ರೀ. ಬಾಳಿಗರ ಹೆಸರನ್ನು ತಾವು ಗಣಿಸುವುದಿಲ್ಲವೆಂದರು. ಕಡೆಗೆ ಶ್ರೀ| ಶ್ರೀನಿವಾಸ ಮಲ್ಯರೇ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಆ ಮೇಲೆ ಹೊಸ ಅಧ್ಯಕ್ಷರು ಇತರ ಅಧಿಕಾರಿಗಳ ಚುನಾವಣೆ ನಡೆಸಿದರು. ಶ್ರೀ ಬಿ. ವಿ. ಬಾಳಿಗರೂ, ಶ್ರೀ. ಎಂ. ವಿಠಪ್ಪ ರೈಗಳೂ ಉಪಾಧ್ಯಕ್ಷರುಗಳು; ಶ್ರೀ. ಎನ್ ಶೀನಪ್ಪ ರಾವ್ ಮತ್ತು ಶ್ರೀ. ಬೆಳ್ತಂಗಡಿ ನಾರಾಯಣ ರಾವ್ (ರಿಟೈರ್ಡ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್) ಇವರುಗಳು ಕ್ರಮವಾಗಿ ಕಾರ್ಯದರ್ಶಿ ಮತ್ತು ಜತೆ ಕಾರ್ಯದರ್ಶಿಗಳು. ಶ್ರೀ. ಮಾಧವ ಕಾಮತರು ಖಜಾಂಚಿಗಳು. ಅಲ್ಲದೆ ಕಾರ್ಯಕಾರೀ ಮಂಡಲಿಗೆ ಶ್ರೀಗಳಾದ ಎಂ. ರಾಮ ಹೆಗ್ಡೆ (ಕಾಸರಗೋಡು) ಮ್ಯ. ಸಂಜೀವ ಶೆಣೈ (ಪುತ್ತೂರ) ಬಿ. ನಾಗೇಂದ್ರನಾಥ ಬಾಳಿಗ, (ಮಂಗಳೂರು) ಎಸ್. ಎನ್. ಹೊಳ್ಳ, ಕೆ. ವಿಠಪ್ಪ ರೈ (ಮಂಗಳೂರು ಶಹರು) ಎನ್. ಪಿ. ಸುಬ್ಬಣ್ಣ ಭಟ್ಟ (ಕಾರ್ಕಳ) ಕುರ್ಕಾಲು ಗಣಪಯ್ಯ ಶೆಟ್ಟಿ, ಬಿ. ಜಗಜ್ಜೀವನದಾಸ ಶೆಟ್ಟಿ (ಉಡುಪಿ) ಎಲ್. ಎಸ್. ನಾಯಕ್ (ಉಡುಪಿ ಶಹರು) ಈ 9 ಮಂದಿ ಸದಸ್ಯರು ಚುನಾಯಿಸಲ್ಪಟ್ಟರು.

ವೆಬ್‌ಸ್ಟರ್ ಮಾರ್ಕೆಟ್ ವಿಚಾರದಲ್ಲಿ ಚಳವಳ— ನಗರ ಸಭೆಯವರು ವೆಬ್‌ಸ್ಟರ್ ಮಾರ್ಕೆಟಿನಲ್ಲಿ ತರಕಾರಿ ಮಾರಕೂಡದೆಂದೂ ತರಕಾರಿ ಮಾರುವವರು ಫೆಲಿಕ್ಸ್ ಪೈ ಬಜಾರಿಗೇ ಹೋಗಬೇಕೆಂದೂ ನಿರ್ಧಾರ ಮಾಡಿದ್ದನ್ನು ನಿಷೇಧಿಸುವರೆ ಮಂಗಳೂರು ಪುರಜನರ ಸಭೆಯು ಶ್ರೀ. ಭೋಜರಾವ ಬೋಳಾರ ಇವರ ಅಧ್ಯಕ್ಷತೆಯಲ್ಲಿ ತಾ. 23ನೇ ಸಾಯಂಕಾಲ ಮೈದಾನದಲ್ಲಿ ಸೇರಿತು. ಶ್ರೀಗಳಾದ ಕೆ. ಕೆ ಶೆಟ್ಟಿ, ಕೆ ಕೃಷ್ಣ ರಾವ್, ಕೆ. ರಂಗರಾವ್ ಇವರ ಭಾಷಣಗಳಾದವು. ಮುನಿಸಿಪಾಲಿಟಿಯ ವರ್ತನೆಯನ್ನು ಖಂಡಿಸುವ ಮಾರ್ಕೆಟ ಮಾರ್ಡನ ಸದಸ್ಯರು ಜನರ ಪಕ್ಷ ವಹಿಸಬೇಕು. ತಮ್ಮ ಡಿಮಾಂಡಿಗೆ ಮಾನ್ಯತೆದೊರೆಯದಿದ್ದರೆ ರಾಜಿನಾಮೆ ಕೊಡಬೇಕೆನ್ನುವ ಮೊದಲಾದ ಠರಾವುಗಳಾದುವು.

ಜಿಲ್ಲಾ ಬೋರ್ಡು ಸಭೆ— ಮಾರ್ಚ ತಾ. 10ಕ್ಕೆ ಜರಗಲಿರುವುದು. 1938-39ರ ಪರಿಷ್ಕೃತ ಆಯವ್ಯಯಪಟ್ಟಿ ಮತ್ತು 1939-40ರ ಬಜೆಟು ಆಯವ್ಯಯ ಪಟ್ಟಿ ಈ ಮೀಟಿಂಗಿನ ಮುಂದಿರಿಸಲ್ಪಡುವುದು.

ದಿವಂಗತ ಬಾಬು ಇಲೊಕೆಶನ್ ಪ್ರೈಸ್ ಈ ವರ್ಷ ನವದ ಗ ಹಾ. ಎ. ಟ್ರೈನಿಂಗ ಶಾಲಾ ವಾರ್ಷಿಕೋತ್ಸವ ಕಾಲದಲ್ಲಿ ಶ್ರೀ. ಕೊರಂಗ್ರಪಾಡಿ ಶಿವಪ್ಪ ಹೆಗ್ಡೆಯರಿಗೆ ದೊರಕಿರುವುದು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನಕ್ಕೆ ದಿವಾನರ ಸಂದರ್ಶನ—ಮೈಸೂರಿನ ದಿವಾನರಾದ ಸರ್. ಮಿರ್ಜಾ ಎಂ. ಇಸ್ಮಾಯಿಲರು ತಾ. 20-2-39ಕ್ಕೆ ರಾಮಕೃಷ್ಣ ವಿದ್ಯಾರ್ಥಿ ಭವನವನ್ನು ಸಂದರ್ಶಿಸಿದರು. ಭವನದ ನಿವಾಸಿಗಳು ದಿವಾನರಿಗೆ ಮಾನಪತ್ರವೊಂದನ್ನು ಸಮರ್ಪಿಸಿದರು. ದಿವಾನರು ಅದಕ್ಕೆ ತಕ್ಕ ಉತ್ತರವಿತ್ತರು.

ಅತ್ತಾವರ ಡಿ. ಸಿ ಯಂ. ಶಾಲೆ— ತಾ. 26-3-39ಕ್ಕೆ ನೆತ್ತರವರ ಸಮ್ಮೇಲನವೂ ಕಾರ್ಯಕ್ರಮವೂ ಜರಗಲಿದೆ, ಅದಕ್ಕೆಲ್ಲರೂ ಸಹಾಯ ಮಾಡಬೇಕೆಂದು ಮುಖ್ಯ ಉಪಾಧ್ಯಾಯರು ವಿನಂತಿಸುತ್ತಾರೆ.

ದೀನಬಂಧು ಅನಾಥಾಶ್ರಮ

ತಾ. 1ರಲ್ಲಿ ಬಜೆಯು ಬೋರ್ಡ್ ಗರ್ಲ್ಸ್ ಸ್ಕೂಲಿನ ಬಳಿ ಡಾ. ಕೆ. ವಿಟ್ಠಲಶೆಟ್ಟಿ ಅಧ್ಯಕ್ಷತೆಯಲ್ಲಿ ಸ್ಥಾಪನೆ ಹೊಂದಿತು.

ದಿ ಟ್ರೋಪಿಕಲ್ ಇನ್ಶೂರೆನ್ಸ್ ಕಂಪೆನಿಯ ಉಡುಪಿ ಆಫೀಸು—ತೆರೆಯುವ ಸಮಾರಂಭವು ಮುನ್ಸಿಪಲ್ ಚೆಯರ್‌ಮೇನರಾದ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ತಾ. 1-3-39ನೇ ಬೆಳಿಗ್ಗೆ ಉಡುಪಿ ಪ್ರೆಸ್ಸಿನ ಮಾಳಿಗೆಯ ಹೊಸ ಆಫೀಸಿನಲ್ಲಿ ಜರಗಿತು. ಶ್ರೀ. ಬಿ. ಆನಂದ ಹೆಗ್ಡೇರು ಕೇಳಿಕೊಂಡ ಮೇರೆಗೆ ಅಧ್ಯಕ್ಷರು ಅಧ್ಯಕ್ಷ ಪೀಠವನ್ನೇರಲು ಶ್ರೀ. ಕೃಷ್ಣಯ್ಯನವರ ಪ್ರಾರ್ಥನೆಯಾದೊಡನೆ ಅಧ್ಯಕ್ಷರು ಆಫೀಸನ್ನು ತೆರೆದರು. ಉಪಹಾರ|ಸತ್ಕಾರವಾದಮೇಲೆ ಶ್ರೀ. ಕೆ. ಹೊನ್ನಯ್ಯ ಶೆಟ್ಟರು ಟ್ರೋಪಿಕಲ್ ಇನ್ಶೂರೆನ್ಸ್ ಕಂಪೆನಿಯ ಪರಿಚಯವನ್ನು ಮಾಡಿಕೊಡುತ್ತ ಇತ್ತೀಚೆಗಿನ ಅದರ ವ್ಯವಹಾರ ಕ್ಷೇತ್ರದ ಹೆಚ್ಚಳ, ಜಿಲ್ಲೆಯಲ್ಲಿ ಅದರ ಪ್ರಚಾರ ಕಾರ್ಯವನ್ನು ಭರದಿಂದ ಸಾಗಿಸುತ್ತಿರುವ ಬ್ರಾಂಚ್ ಮೆನೇಜರ್. ಶ್ರೀ. ಎಂ. ಸುಂದರ ಶೆಟ್ಟರ ಸಾಹಸ, ಉಡುಪಿಯಲ್ಲಿ ಅದರ ವಿಮಾ ಕ್ಷೇತ್ರವನ್ನು ವಿಸ್ತರಿಸಲು ದುಡಿಯುತ್ತಿರುವ ಉತ್ಸಾಹೀತರುಣ ಬಂಧುಗಳಾದ ಶ್ರೀ. ಕೆ. ಜಗನ್ನಾಥ ಶೆಟ್ಟರ ಸತತೋದ್ಯೋಗಾದಿಗಳನ್ನು ವಿವರಿಸಿ ಶುಭವನ್ನು ಕೋರಿದರು. ಡಾ. ಕೆ. ಎಲ್. ವಿಕಾಳರು ಇನ್ಶೂರೆನ್ಸಿನ ಪ್ರಯೋಜನವನ್ನೂ, ಓರ್ಗನೈಜರರಾದ ಶ್ರೀ. ಜಗನ್ನಾಥ ಶೆಟ್ಟರ ಕಷ್ಟಸಹಿಷ್ಣುತೆ, ಉತ್ಸಾಹಾದಿಗಳನ್ನು ವಿವರಿಸಿ ಭಾಷಣಮಾಡಿದರು. ಶ್ರೀ. ಕೆ. ಬಿ. ಶ್ಯಾಮರಾಯ ಶೆಟ್ಟಿ ಬಿ. ಎ., ಎಲ್. ಟಿಯವರು ನಮ್ಮ ತರುಣರೆಲ್ಲರೂ ಉದ್ಯೋಗಶೀಲರಾಗಿ ಭಾರತಮಾತೆಯ ಸತ್ಪುತ್ರರಾಗಬೇಕೆಂದೂ ಶ್ರೀಜಗನ್ನಾಥ ಶೆಟ್ರ ಉದ್ಯೋಗಪ್ರಿಯತೆಗಾಗಿ ಅವರನ್ನು ತಾನು ಕೊಂಡಾಡುವೆನೆಂದು ಹೇಳಿದರು. ಅಧ್ಯಕ್ಷರು 10 ವರ್ಷಗಳ ಪರಿಚಯಸ್ಥರಾದ ಶ್ರೀ. ಕೆ. ಜಗನ್ನಾಥ ಶೆಟ್ಟರ ಚುರುಕುತನ ವ್ಯವಹಾರಚತುರತೆಗಳನ್ನು ವಿವರಿಸಿ ಇವರಿಂದ ಹೆಚ್ಚಿನ ಕಾರ್ಯವಾಗುವುದೆಂದೂ ಈ ಆಫೀಸು ಇತ್ಯೋಪ್ಯತಿಶಯವಾಗಿ ಬೆಳಗಲೆಂದೂ ಕೋರಿ ಭಾಷಣಮಾಡಿದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಬೈರಕೂರು:—ಶ್ರೀ. K. S. N. ರಾವ, (ಸಹಾಯಕ ಭಿಷಗ್ರತ್ನ) ಇವರು ಇಲ್ಲಿಂದ ವರ್ಗವಾಗಿ (ಬಂಟವಾಳಕ್ಕೆ) ಹೋದ ನಿಮಿತ್ತ ಶ್ರೀ. ರಾಯರಿಗೆ ತಾ. 25-2-39ರಲ್ಲಿ ಜಯಕರ್ನಾಟಕ ಕ್ಲಬ್ಬಿನಲ್ಲಿ ಫಲಾಹಾರ ಕೂಟವನ್ನಿತ್ತು ಸತ್ಕರಿಸಲಾಯಿತು. ಶ್ರೀ. ಡಾ. A. S. ಹೆಬ್ಬಾರರು ಅಗ್ರಾಸನ ವಹಿದ್ದರು. ಶ್ರೀ. ರಾಯರ ಗುಣಕಥನಗಳಾದುವು.

ಸ್ಥಳೀಯ ಬೋರ್ಡ್ ಶಾಲಾ ಅಧ್ಯಾಪಕರಾದ ಶ್ರೀ ಜೋಸೆಫ್ ಫ್ರೆಷ್ಟಿಯವರಿಂದರು ತನ್ನ ಸ್ವಂತ ಖರ್ಚಿನಿಂದ 10 ಮಂದಿ ಅನಾಥ ಹರಿಜನ (ಕೊರಗ) ಮಕ್ಕಳನ್ನು ಅನ್ನ ವಸ್ತ್ರ ಕೊಟ್ಟು ತಮ್ಮ ಬಿಡಾರದಲ್ಲಿ ಸಾಕುತ್ತಿರುವದಲ್ಲದೆ ಅವರ ವಿದ್ಯಾಭ್ಯಾಸಕ್ಕೆ ಬೇಕಾಗುವ ಸ್ಲೇಟು ಪುಸ್ತಕಗಳನ್ನೂ ತೆಗಿಸಿಕೊಟ್ಟು ಇಲ್ಲಿಯ ಮೂರು ಶಾಲೆಗಳಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಿರುವುದು ಸ್ತುತ್ಯವಾಗಿದೆ.

ಪಣಂಬೂರು:—ಇಲ್ಲಿಯ ಕಾಂಗ್ರೆಸ್ ಪ್ರಾಥಮಿಕ ಸದಸ್ಯರ ಮಹಾ ಸಭೆಯು ತಾ. 23-2-39ರಲ್ಲಿ ಶ್ರೀ| ದಾ| ಈಶ್ವರ ಶರ್ಮರ ಅಧ್ಯಕ್ಷತೆಯಲ್ಲಿ ಜರಗಿತು. ಗತ ವರ್ಷದ ವರದಿಯನ್ನೂ ಜಮಾ ಖರ್ಚಿನ ಪಟ್ಟಿಯನ್ನೂ ಕಾರ್ಯದರ್ಶಿಗಳು ಓದಿ ಹೇಳಿದರು. ಆ ಮೇಲೆ ಹೊಸ ವರ್ಷಕ್ಕೆ ಶ್ರೀ ಕೆ. ಶಂಕರನಾರಾಯಣ ಶಾಸ್ತ್ರಿ ವಿದ್ವಾನ್, ಇವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ. ಎಂ. ಆರ್. ಪಣಂಬೂರರನ್ನು ಕಾರ್ಯದರ್ಶಿಯವರನ್ನಾಗಿಯೂ ಇತರ 13 ಮಂದಿಯನ್ನು ಕಾರ್ಯ ನಿರ್ವಾಹಕ ಸಮಿತಿಯ ಮೆಂಬರರನ್ನಾಗಿಯೂ ಚುನಾಯಿಸಲಾಯಿತು.

—ಕೂದಲು ರಂಗು ಕೃಷಿಸಿರಿ—

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬೆಳೆದಾಗುವುದು ನಿಲ್ಲುವುದು. ನರೆತಕೂದಲು ... ರ್ಣ ಕಪ್ಪಾಗಿ ಬೆಳೆಯುವವು ... ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿರುವುದೇ ನಮ್ಮ ತೈಲದ ಯೋಗ್ಯತೆಯನ್ನು ಬೀರುವುದು. ಅಪ್ರಯೋಜನಕಾರಿಯೆಂದು ರುಜುಪಡಿಸಬಲ್ಲರೆ ಕೊಟ್ಟ ಹಣ ವಾಪಾಸು ಕೊಡುವ ಕರಾರಿದೆ. ಸ್ವಲ್ಪ ನರೆತಕೂದಲುಗಳಿಗೆ ಬೇಕಾಗುವ ತೈಲ ರೂ. 4, ಕಾಲುಸಾಲಿಗೂ ಮಿಕ್ಕ ... ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

Hazra & Co,
P. O. Behar Nersery(Darbha

ಬಲು ಸುಲಭ ದರದಲ್ಲಿ

● ಉತ್ಕೃಷ್ಟ ಊಟ, ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!

● ನಾವು ನಮ್ಮನ್ನೇ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀನಿವಾಸ ಹಿಂದೂ ಹೋಟೆಲ್

(ಸ್ಥಾಪನೆ 1926)

ವಿಠಲ್ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATEL ROAD,
GIRGAUM - - - BOMBAY

ಪುಟ ೮ರಿಂದ

ಜಾ ಮೀ ನು

ಲ್ಪ ನಂಬಿ ಹಿಡಿದೆ! ಈಯಂ ಕೇಳವಾರೆಂದು ಇತ್ಯಾದಿ—ಇನ್ನು ಅವನಿಗೆ ಗೊತ್ತಿಲ್ಲದವು ಎಷ್ಟು ಉಂಟೋ? ಅಂಗಡಿಯಲ್ಲಿ ಅಂಥವುಗಳ ಮನೆಯು ಎಲ್ಲಾ ಕಸುಬಿಗಳನ್ನೇ ಕೆಲಸಕ್ಕೆ ಇಟ್ಟುಕೊಂಡಿದ್ದಾ—ಗೋಲ್ಡ್ ಫ್ಲೇಕ್ ಸಿಗರೇಟು ಬಾಯಿಂದ ತಪ್ಪೋದುಂಟೋ? ಹಂಚು ಕಾರ್ಖಾನೆಯ ಹೊಗೆ ಎದ್ದಹಾಗೆ ಎಲ್ಲ! ಬಿಡಾರಕ್ಕೆ ಮೋಟಾರುಗಳು ಗುಂಪು ಗುಂಪು ಬರೋದೇನು! ಗೌಜಿಯೇ ಗೌಜಿ—ನಿನ್ನ ತಂದೆ ಹೇಳಿ ನಿನ್ನ ತಾಯಿ ಒಂದು ದಸ್ಕತು ಹಾಕಿದ್ದಾರೆಂಬ ಗಾಳಿ ಸುದ್ದಿ ಉಂಟು! ಹೀಗೆ ಇನ್ನ್ಯಾರ್ಯಾರು ಇವನ ಜಾಮೀನಿನ ಗಾಳದ ಮೀನಾಗಿ ಸಿಕ್ಕಿಬಿದ್ದಿದ್ದಾರೋ.

ಚಿನ್ನಮ್ಮ—ಏನಾಯ್ತು, ಮಾಯದಿಗೆ ಅವನೇ ತುಂಬಿಸದೆ ಬಿಡುತ್ತಾ? ಹೊರಗಿನ ಬಾಕಿ ವಸೂಲಾಗದೆ ಈಗೇನೋ ಸ್ವಲ್ಪ ಬಿಕ್ಕಟ್ಟು ಬಂದಿರಬಹುದು.

ಗೋಪಾಲ—ಬಿಕ್ಕಟ್ಟಲ್ಲ—ಉಸಿರು ಕಟ್ಟುತ್ತಾ ಬಂದಿದೆ. ನಿನಗೇನೂ ಗೊತ್ತಿಲ್ಲ-ತಾಯಿ ಮನೆಯ್ದ್ದು ಪೌರುಷ ಕೊಚ್ಚಲಿಕ್ಕೊಂದು ಗೊತ್ತುಂಟು. ಇಂಥಾ ಅಣ್ಣ ಒಬ್ಬ ಇದ್ದರೆ ಸಾಕು. ಒಂದು ತಲೆಯ ಲಂಚಿ ೦ಥ ಒಂದು ಗಂಡಾಂತ ಕಾಲನ್ನೂ ಹಾಳುಮಾಡಿ ಬಿಡುತ್ತೆ. ನಿನ್ನ ಮನೆ ಪಂಚಾಂಗದ ಕಲ್ಲೂ ಉಳಿಯೋದಿಲ್ಲ. ಅಲ್ಲಿದ್ದು ಹೋದ್ರೆ ಹೋಕ್ಕೊಳ್ಲೀ- ಆ ದರ್ಶನೋದು ನಿನಗೊಂದು ಮಕ್ಕಳಿದ್ದಾವೆ—ಜಾಗ್ರತೆ! ಇದರ ವಿಷಯ ವಕಾಲತ್ತು ಮಾಡಬೇಡ.

ಚಿನ್ನಮ್ಮ—ನೀವು ಹಾಕದಿದ್ದರೆ ನಾನು ಹಾಕುವುದೇ?

ಗೋಪಾಲ—ಎಂಥಾದ್ದು ನೀನು ಹಾಕುವುದು? ಮಕ್ಕಳಿಗೆ ವಿಷವಾ? ನನಗೊಂದಿಷ್ಟು ಲೋಕಾನುಭವ ಇಲ್ಲವಲ್ಲ. ನೋಡು, ಮುದ್ದುಕೃಷ್ಣ ದೂಮರಾಯರ ಅವಸ್ಥೆ ಕೇಳಿದಿಯಾ—ಜಾಮೀನಿನ ಫಲ—ಅವರು ಸ್ನೇಹಿತರಿಗೆ ಜಾಮೀನು ನಿಂತು ಇದ್ದ ಆಸ್ತಿ ಐಶ್ವರ್ಯ ಎಲ್ಲಾ ಕಳಕೊಂಡರು.

ಚಿನ್ನಮ್ಮ—ಏನು ದೂಮರಾಯರೇ? ಅವರಿಗೆ ಅಷ್ಟು ಇತ್ತಲ್ಲಾ!

ಗೋಪಾಲ—ಅಷ್ಟು ಇದ್ದೂ ಎಲ್ಲಾ ಮುಳುಗಿ ಹೋಯ್ತು—ಇನ್ನು ಕೇಳು ಅಚ್ಚುತರಾಯರು—ಕೆನರಾ ಬ್ಯಾಂಕಿನ ಅಚ್ಚುತರಾಯರು ಪಾಪ! ಕಂಬಟ್ಟೆ ಗುಮ್ಮರಾಯರು, ಕೋಡಿಗೆ ಅಪ್ಪುರಾಯರು, ಕೊಟಿಲ್ ಶೇಷಪ್ಪಯ್ಯನವರು, ಹುಸರೊಟ್ಟು ಗಂಪಯ್ಯನವರು, ಸಿರಿಬಟ್ಟು ದೊಡ್ಡಯ್ಯನವರು ಇವರೆಲ್ಲಾ ಹಾಕಿದ್ದು ಒಂದೊಂದೇ ದಸ್ಕತು. ಆ ದಸ್ಕತು ಮನೆಮಾರು ಆಸ್ತಿಪಾಸ್ತಿ ಚಿನ್ನಾಭರಣ ಎಲ್ಲವನ್ನೂ ಮುಳುಗಿಸಿ ಇವರಿಗೆ ನೀರು ಕೊಟ್ಟಿತು.

ಚಿನ್ನಮ್ಮ—ಅವರೆಲ್ಲಾ ಯಾರ್ಯಾರಿಗೋ ಜಾಮೀನು ನಿಂತು ಹಾಳಾದರು—ತಂಗೀಯಂಗೆ ಜಾಮೀನು ನಿಂತವರ ಕಸಕರ ಉಂಟೇ! ಇದಾದರೆ ನಮ್ಮ ಭಾವನಲ್ವೇ! ನಮ್ಮನ್ನ ನನ್ನನ್ನ ಮುಳುಗಿಸಿಯಾನು!

ಗೋಪಾಲ—ಮುಳುಗುವವರಿಗೆ ತಂಗಿಯೆಂತಿಲ್ಲ, ಇಲ್ಲ. ಭಾವಂತ್ಲೂ ಇಲ್ಲ. ಬೇಡ, ಆಗೋದಿಲ್ಲಾನ್ನ. ಓಂದೆ ಹೋಗಲಿಕ್ಕೆ ಹೇಳು. ಬೇಡ-ಬೇಡ-ಖಂಡಿತ ಬೇಡಾಂದೆ-

ಚಿನ್ನಮ್ಮ—ದಮ್ಮಯ್ಯ. ನೀವು ನನಗಾಗಿ ಒಂದೇ ಒಂದು ಸಲ ದಸ್ಕತ್ತು ಹಾಕಬೇಕು. ಇಲ್ಲವಾದರೆ ನನ್ನನ್ನ ಹಾಕಲಿಕ್ಕೆ ಬಿಡಬೇಕು. ಹೀಗಾಗದಿದ್ದರೆ ಹುಟ್ಟಿದ ಮನೆಯ ಆಪತ್ತಿನಲ್ಲಿ ಒಂದು ಕಿರು ಬೆರಳು ತ್ತಲಿಲ್ಲಾಂತ ಊರೂರೇ ಛೀ ಎನ್ನೋದನ್ನು ನಾನು ಕೇಳಿ ಬಾಳೋದು ಹ್ಯಾಗಂತೀರಿ! ಇದರಿಂದ ನಿಮಗೇನೂ ಉಪದ್ರ ಬರಲಿಕ್ಕಿಲ್ಲಾಂದ್ರೆ!

ಗೋಪಾಲ—ಬಂದರೆ ಹೋಗಲಿಕ್ಕಿಲ್ಲಾಂದ್ರೆ!

ಚಿನ್ನಮ್ಮ—ಛೀ! ಮತ್ತೂ ನಿಮ್ಮದು ಬಿಡೋದಿಲ್ಲ.

ಗೋಪಾಲ—ಮುಂದೆ ಇದರಿಂದ ತೊಂದರೆ ಬಂದರೆ ನನ್ನನ್ನು ದೂರಬೇಡಾ—ಸೆರಗಿನಲ್ಲಿ ಗಂಟುಹಾಕಿಕೋ! ನೀನು ಕೆಟ್ಟೆ! ನಿನ್ನ ಮಕ್ಕಳಿಗೆ ವಿಷಹಾಕ್ಕೀ! ಜೋಕೆ! ನಿನ್ನಿಷ್ಟಬಂದಂತೆ ಮಾಡು. ನನ್ನ ಅಡ್ಡಿಯಿಲ್ಲ. ಆದರೆ ಖಂಡಿತ ಕೇಡುಬರುತ್ತೆ!

ಚಿನ್ನಮ್ಮ—ಎಷ್ಟು ಮಾತ್ರಕ್ಕೂ ಬರಲಿಕ್ಕಿಲ್ಲಾ—

ಗೋಪಾಲ—ಎಷ್ಟಕ್ಕೆ ಅಂತ?

ಚಿನ್ನಮ್ಮ—ಹದಿನೈದು ಸಾವಿರಕ್ಕೆ—

ಗೋಪಾಲ—ಹದಿನೈದು ಸಾವಿರ! ಅಬ್ಬಬ್ಬ! ಸಾಮಾನ್ಯ ಹೊಂಡವಲ್ಲ! ಕೇಳುವಾಗಲೇ ನನಗೆ ಮೈ ಜುಮ್ಮೆನ್ನುತ್ತೆ—ಏನು ಬೇಕಾದರೂ ಮಾಡಿಕೊಳ್ಳಿ—ಮತ್ತೇನು ಹೇಳ್ಲೀ ನಾನು!

x x x x

(ಸ್ವಲ್ಪ ಸಮಯದ ಮೇಲೆ ಗೋಪಾಲನು ಚಿನ್ನಮ್ಮನೊಂದಿಗೆ)

ಗೋಪಾಲ—ಕೇಳಿದಿಯಾ ಸುದ್ದಿ? ನಿಮ್ಮನ್ನು ಹೆಂಗಸರನ್ನೆಲ್ಲಾ ಬಾವಿಗಳಿಗೆ ತಿಕ್ಕೊಂಡು ಹೋಗಿ ಸೊಂಟಕ್ಕೆ ಎರಡೆರಡು ಕಲ್ಲು ಕಟ್ಟಿ ಹಾಕಿಬಿಡಬೇಕು—ನಿಮ್ಮನ್ನು ಸುಖದಲ್ಲಿರಲಿಕ್ಕೆ ಬಿಡಬೇಕಿತ್ತೇ? ನೋಡು, ನಿನ್ನ ಅಣ್ಣನ ನಾಟಕ ಮುಗೀತಂತೆ!-87ಸಾವಿರ ರೂಪಾಯಿ ಸಾಲವಂತೆ-ಈಗ ಜಾಮೀನುದಾರರ ಕುತ್ತಿಗೆಗಿಲ್ಲ ಕಲ್ಲು ಬಂತು! ಒಬ್ಬ ಹಾಕಿದ್ದು ಮತ್ತೊಬ್ಬನಿಗೆ ಗೊತ್ತಿಲ್ಲ—ನನ್ನಿಂದ ಇನ್ನೇನಾದರೂ ನಿನಗೆ ಕೊಡಲಿಕ್ಕೆ ಸಾಧ್ಯವುಂಟೋ? ನನ್ನ ಮನೆಯಲ್ಲಿದ್ದದ್ದು ತಾಯಿಯ ದಸ್ಕತ್ತಿನಿಂದ ಹೋಯಿತು—ಇಲ್ಲಿ ನಾನು ಕೊಟ್ಟದ್ದು ನಿನ್ನ ದಸ್ಕತ್ತಿನಿಂದ ಹೋಯಿತು. ಇನ್ನು ಈ ಮಕ್ಕಳನ್ನೆಲ್ಲಾ ಹಿಡಿದುಕೊಂಡು ಎಲ್ಲಿಯಾದರೂ ಹೊರಗೆ ಇಳಿ. ಬೇಡ, ಬೇಡ, ಬೇಡಾಂತ ಕೂಗಿದರೆ ಕೇಳಲಿಲ್ಲ—ನಮಗಿಂತ ನೀವೇ ಬುದ್ಧಿವಂತರು—ತಾವಾಗಿ ಸುಖದಲ್ಲಿರಲಿಕ್ಕಿಲ್ಲ—ಬೇರೆಯವರನ್ನು ಬಿಡಲಿಕ್ಕಿಲ್ಲ—ಕಂಡೂ, ಕಂಡೂ, ಕಣ್ಣಿದ್ದೂ—ತಿರಿಗಿ ತಿರಿಗಿ ಅದೇ ಬಾವಿಗೆ ಬೀಳುವುದೆಂದರೆ?—ಕಷ್ಟ, ನಾನು ಎಲ್ಲಿಯಾದರೂ ನಡ್ಕೊಬಿಡುತ್ತೇನೆ—ಇನ್ನು ಊರಲ್ಲಿ ಇರಲು ಸಾಧ್ಯವಿಲ್ಲ—

x x x

(ರಾತ್ರಿಯಲ್ಲಿ ಗೋಪಾಲನ ಹಿರೀ ಮಗಳು ಚಲುವಮ್ಮ ಅಳುತ್ತಾ ತಂದೆಯನ್ನು ಕರೆಯುವಳು.)

ಚಲುವಮ್ಮ—ಅಪ್ಪಾ! ಅಪ್ಪಾ! ಅಂ, ಅಂ, ಹ್ಹಾಂ, ಹ್ಹಾಂ, ಅಯ್ಯಯ್ಯೋ! ಅಯ್ಯೋ! ಅಪ್ಪಾ!

ಗೋಪಾಲ—ಏನೇ, ಏನೇ, ಏನಾಯ್ತೇ! (ಒಳಗೆ ಓಡುವನು.)

ಚಲುವಮ್ಮ—ನೋಡಪ್ಪಾ! ಅಮ್ಮ ಮಾತಾಡೋದಿಲ್ಲ. ಕೈಕಾಲು ಸಿಮ್, ಸಿಮ್, ಮರಕಟ್ಟಿದ ಹಾಗಿದೆ.

ಗೋಪಾಲ—ಅಯ್ಯೋ, ದೇವರೆ ಏನಾಯಿತೇ. ತಿಮ್ಮಣ್ಣ ಕೂಗು-ಡಾಕ್ಟರಲ್ಲಿಗೆ ಓಡ್ಲೀ ಅಯ್ಯೋ, ಗ್ರಹಚಾರವೇ-ಏನೋ ಮಾಡಿಕೊಂಡ್ಳೂಂತ ಕಾಣುತ್ತೆ. ಹೊಟ್ಟೆಗೆ ಏನೋ ಬಿದ್ದಿರಬೇಕು.

x x x x

ಬರುವ ಲೇಖನ—"ಜುಗಾರಿ"



ಸರಿಯಾದ ಸಮಯವನ್ನು ಸೂಚಿಸತಕ್ಕ ಆಧುನಿಕ ಲಿವರ್ ರಿಸ್ಟ್‌ವಾಚಿಗೆ ಉರುಟು ಯಾ ಚಚ್ಚೌಕ ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ. 2-8-0, ಅತ್ಯುತ್ತಮದಕ್ಕೆ ರೂ. 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ 4-8-0, ರೋಲ್ಡ್‌ಗೋಲ್ಡಿಗೆ ರೂ.6-8-0, ಚಿತ್ರದಲ್ಲಿ ತೋರುವಂತಹದಕ್ಕೆ ರೂ. 8-8-0. ಅಂಚೆಚ್ಚ 0-10-0 ಪ್ರತ್ಯೇಕ.

Empress Trading Co.,
P.O. Box No. 6744, **Calcutta(G)**

ಸುಳ್ಳೆಂದು ರುಜುಪಡಿಸುವವರಿಗೆ

ರೂ. **50** ಇನಾಂ

ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು.

1 ವಶೀಕರಣ ಯಂತ್ರ: ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರಧರಿಸಿದ ಮಾತ್ರದಿಂದಲೇ ಅವಳು ನಿಮ್ಮೊಡನೆ ಮಾತನಾಡಬಯಸುವಳು. ಮಾತ್ರವಲ್ಲದೆ ನಿಮ್ಮ ವಶವಾಗುವಳು. ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ ಗಾಯಿತಕ್ಕೆ ರೂ 7-8-0.

2 ಲಕ್ಷ್ಮೀಯಂತ್ರ: ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ವಹಿವಾಟುಗಳು ಹೆಚ್ಚಿ ಲಾಭದಾಯಕ ಸುಸಂಧಿಬರುವುದು. ಬೆಳ್ಳಿ ಯಂತ್ರಕ್ಕೆ ರೂ 2-8-0 ಚಿನ್ನದ್ದಕ್ಕೆ ರೂ. 7-8-0. ಇಂದೇ ಮೇಲಣ ವಿಳಾಸಕ್ಕೆ ಬರೆಯಿರಿ, ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

SRI SADANAND RAM
No 57, P. O. Warisaligunj,
(Gaya)

ನೋಟೀಸು

ದಕ್ಷಿಣ ಕನ್ನಡಾ ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಕಾರ್ಯನಿರ್ವಾಹಕ ಕಮಿಟಿಯು ತಾ. 19-2-1939ರಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿದ ಮೀಟಿಂಗಿನಲ್ಲಿ ಸದ್ರಿ ಸಂಘದ ಮೂಡಂಬೈಲು ಕೋಟಿ ಶೆಟ್ರಿ ಪಕ್ಷ ರಾಮಯ್ಯರವರು ತಾ. 19.12.27 ಕ್ಕೆ ಬರಕೊಟ್ಟ ಸ್ಥಿರ ಆಸ್ತಿಯ ಪ್ರಥಮ ಅಡವು ಬ್ಯಾಂಕಿಯ ಮೇಲೆ ಸಬ್‌ಕೋರ್ಟ ಕ್ರಮಸಂಖ್ಯೆ 26|1937ನೇ ವ್ಯಾಜ್ಯದ ದಾಕ್ಲಾಗಿ ಸಾಲ ವಿಮೋಚನಾ ಆಕ್ಟಿನಾನುಸರಿಸಿ ಆದ ಪ್ರಿಲಿಮಿನರಿ ಡಿಕ್ರಿಯ ಪ್ರಕಾರ ತಾ. 10-1-1939ರ ವರೆಗೆ ಆಗುವ ರೂಪಾಯಿ 6776-8-11ರ ವಸೂಲು ಹಕ್ಕನ್ನು ಈ ಕೆಳಗಿನ ಶರ್ತಕ್ಕೆ ಒಳಪಟ್ಟು ತಾ. 19-3-1939ರಲ್ಲಿ ಮಂಗ್ಳೂರು ಶ್ರೀರಾಮಕೃಷ್ಣ ಭವನದ ವೆಂಕಪ್ಪ ಪೂಂಜರ ಸಭಾಕಟದಲ್ಲಿ ಅಪರಾಹ್ನ ನಾಲ್ಕಕ್ಕೆ ಬಹಿರಂಗವಾಗಿ ಏಲಂ ಹಾಕುವುದಾಗಿ ನಿಶ್ಚಯಿಸಿರುತ್ತದೆ.

ಏಲಂ ಶರ್ತಗಳು

1 ಪ್ರಥಮ ಹಾರು ಕರೆಯುವ ಅಂದಾಜು ಕ್ರಯ ರೂಪಾಯಿ 6250-0-0. 2. ಪರಮಾಸು ದಾರನು ಏಲಂವಿನ ಕ್ರಯದಾ 25% ಹಣವನ್ನು ಏಲಂವಿನ ದಿವಸವೇ ಕೊಡಬೇಕು. 3. ಟ್ರಾನ್ಸ್‌ಫರ್ ದಸ್ತಾವೇಜಿಗೆ ವಗೈರೆ ತಗಲುವ ಎಲ್ಲಾ ಖರ್ಚನ್ನು ಏಲಂವಿಗೆ ತಕ್ಕೊಳ್ಳುವವರೇ ಕೊಡತಕ್ಕದ್ದು. 4. ಹೆಚ್ಚಿನ ವಿವರಗಳಿಗೆ ನಿಂತ ವರಮಾಸ್ತುದಾರರ ಹೆಸರಲ್ಲಿ ಏಲಂ ಕಾಯಂ ಮಾಡಲಾಗುವದು. 5. ಏಲಂ ಕಾಯಂ ಮಾಡುವ ನಿರಾಕರಿಸುವ ಹಕ್ಕು ಪೂರ್ಣವಾಗಿ ಸಂಘದ ಕಾರ್ಯನಿರ್ವಾಹಕ ಕಮಿಟಿಗಿರುತ್ತದೆ.

ಅಡವಿನ ಆಸ್ತಿಯ ವಿವರ

ಮಂಗಳೂರು ತಾಲೂಕು ಬಡಗಬೆಳ್ಳೂರು ಗ್ರಾಮದ ನಂಬ್ರ 28ನೇ ಪಟ್ಟೆಗೊಳ್ಳಿದೆ.

ಸ. ನಂ.	ಸ. ಡಿ.	ಕಿ. ನಂ.	ವಿಸ್ತೀರ್ಣ	ಕಿಮ್ಮತ್
34	8	ನಂಜ	1—1	7—9—0
	2	ಡಿ.	0—12	1—4—0
	1	ಬಾಗಾಯ್ತು.	0—72	3—10—0
55	1	ನಂಜ	0—40	1—8—0
	2	ಡಿ.	1—8	1—14—0
57	1	ಡಿ.	1—79	5—6—0
	2	ಡಿ	4—95	3—2—0
	3	ಡಿ.	0—44	1—5—0
	4	ಬಾಗಾಯ್ತು	1—16	2—5—0

T. Narayana Bhandary.
Secretary of the Bant alias Nadavara Sangha.
MANGALORE, Dated 24-2-1939.

ADVERTISE IN NAVAYUGA

Established] [1906

THE

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	Rs.	486 Lakhs
Annual income Exceeds	Rs.	28 Lakhs
Total Assets Exceed	Rs.	100 Lakhs
Total claims paid over	Rs.	36 Lakhs.

The oldest and largest Life Assurance Company of South India, having 31 years of record service.

A POLICY IN THE **UNITED INDIA** *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to—

THE BRANCH MANAGER,
The United India,
Life Assurance Company Ltd.
BLOCK No. 2, Felix Pai Bazaar,
BRANCH, MANGALORE S. K.

OR

K. Keshava Shenoy,
M. A.
Organiser, Shantiniketan,
PENTLENDPET,
MANGALORE

ABSOLUTELY FREE!

Bring this coupon and you will get your own Photo absolutely free of charge

☞ The rate for the enlargement of the same Rupee one only (size 6"×8").

ROYAL ART STUDIO 153 Hornby Road, BOMBAY.

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್ ಮಾಡಿಟಗೆ ಬರೇ ರೂ. 1/. ಮಾತ್ರ. (ಸೈಜ್ 6"×8").

ರೋಯಲ್ ಆರ್ಟ್ ಸ್ಟುಡಿಯೊ,

153 ಹೊರ್ನ್ಬಿರೋಡ್, ಬೊಂಬಾಯಿ.

ದೂರೀಕರಿಸಿರಿ—ದೃಷ್ಟಿಚಕ್ರ—ನೆರತಕೂದಲು - ವೃದ್ಧಾಪ್ಯ ತಪಿಪಾರು ಎರಡು ತಿಂಗಳತನಕವೂ, ವೃದ್ಧರು ನಾಲ್ಕು ತಿಂಗಳವರೆಗೂ ಟಾನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಗಾಗಿ ದೇಹದ ನಿಶ್ಶಕ್ತಿಯು ತೊಲಗಿ ತಾರುಣ್ಯದ ಫಲದಾಯಕವಾದ ಯೋಗದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ. ಟಾನಿಕಿನ ಕ್ರಯವು ಈ ಕೆಳಗಿನಂತಿದೆ. ಒಂದು ತಿಂಗಳಿನ ಟಾನಿಕಿಗೆ ರೂ 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10. ಪತ್ರವ್ಯವಹಾರ ಇಂಗ್ಲೀಷಿನಲ್ಲೇ. **Jari Booti Dawakhana,**

ವರದಕ್ಷಿಣೆ ಪದ್ಧತಿಯು ನಿರ್ನಾಮವಾಗುವುದೆಂದು?

ವಿದ್ಯಾವಂತರಲ್ಲಿ ವರದಕ್ಷಿಣೆಯು ಪ್ರಶ್ನೆಗೆ, ಅವರ ವಿದ್ಯಾಭ್ಯಾಸದ ಮಿತಿ ಮೀರಿದ ಖರ್ಚು ಕಾರಣ; ವರದಕ್ಷಿಣೆಗೆ ಇನ್ನೊಂದು ಕಾರಣವೆಂದರೆ, ಗಂಡು ಹೆಣ್ಣುಮಕ್ಕಳೊಳಗೆ ತಂದೆಯ ಆಸ್ತಿಯು ಸಮಾನವಾಗಿ ವಿಭಾಗವಾಗದಿರುವುದು. ಹುಡುಗನಿಗೆ ತಾನು ಪ್ರೀತಿಸುವ ಹುಡುಗಿಯನ್ನು ಆರಿಸುವ ಅವಕಾಶ ದೊರೆಯದಿರುವುದು ಮತ್ತೊಂದು ಕಾರಣ. ಹುದ್ದೇದಾರನ ಮಗನಿಗೆ ಅಥವಾ ದೊಡ್ಡ ಮನೆತನದ ಹುಡುಗನಿಗೆ ಮಗಳನ್ನು ಕೊಟ್ಟುಬಿಡಬೇಕೆಂಬ ಕೆಲವರ ಭ್ರಮೆ! ಮದುವೆಯು ಪ್ರೇಮದಿಂದ ಪ್ರೇರಣೆ ಹೊಂದುವಂತಾಗಬೇಕು; ಆಗ ವರದಕ್ಷಿಣೆ ಪದ್ಧತಿಯು

ನಿರ್ನಾಮವಾಗಬಹುದು

ವರದಕ್ಷಿಣೆಯ ಪೀಡೆಗೆ ಬಲಿಯಾಗದ ಕುಟುಂಬವಿಲ್ಲ. ಸಮಾಜಕ್ಕೆ ಕಂಟಕಪ್ರಾಯವಾದ ಈ ವರದಕ್ಷಿಣೆಯ ಕ್ರಮವನ್ನು ನಿಲ್ಲಿಸಬೇಕೆಂದು ಹಲವು ಸುಧಾರಕರು ಹಾತೊರೆಯುತ್ತಾರೆ, ಭಾಷಣ ಕೂಟಗಳಲ್ಲಿ ವರದಕ್ಷಿಣೆಯ ಪದ್ಧತಿಯನ್ನು ಖಂಡಿಸಿ ಉದ್ಬುದ್ಧ ಭಾಷಣಗಳಾಗುತ್ತವೆ. ನ್ಯಾಯವಿಧಾಯಕ ಸಭೆಗಳಲ್ಲಿಯೂ ಈ ಸಮಸ್ಯೆಯು ಮುಂಬರುತ್ತದೆ. ಆದರೇನು? ಈ ಘಾತಕರ ಪದ್ಧತಿಯು ದಿನದಿನಕ್ಕೆ ಬೆಳೆಯುತ್ತಿದೆ. ಆದುದರಿಂದ ವರದಕ್ಷಿಣೆ ವಿರುದ್ಧ ನಡೆಯುವ ಪ್ರಚಾರ ಕಾರ್ಯವು, ಆಡುವ ಮಾತುಕಥೆಗಳು, ನೀತಿ ಧರ್ಮಗಳೆಲ್ಲಾ ವ್ಯರ್ಥವೆಂದೇ ತೋರುವುದು. ಹೀಗಾಗಿ, ನಾನೀಗ ಈ ಕುರಿತಾದ ಧ್ಯೇಯವಾದ, ಬೋಧೆ, ಮಾತು ಕಥೆಗಳನ್ನು ಕನಸುಗಾರರಿಗೆ ಬಿಟ್ಟು, ಕೈ ಸಾಗಬಹುದಾದ ಧೈರ್ಯದ ಸಾಧನವೇನೆಂಬುದನ್ನು ವಿಚಾರಿಸಬೇಕಾಗಿದೆ.

ಈ ವರದಕ್ಷಿಣೆಯ ಪದ್ಧತಿಯ ಮೂಲ ಕಾರಣಗಳಲ್ಲಿ ಮುಖ್ಯವಾದೊಂದು ವಿಷಯವೆಂದರೆ, ತರುಣನನ್ನು ಸುಸಂಸ್ಕೃತನನ್ನಾಗಿ ಮಾಡಲು ತಗಲುವ ವೆಚ್ಚ. ಇಂದೀಗ ಒಬ್ಬ ಹುಡುಗನನ್ನು ವಿದ್ಯಾವಂತನನ್ನಾಗಿ ಮಾಡುವ ಖರ್ಚು ಮಿತಿಮೀರಿದುದಾಗಿದೆ. ಈ ಕಾಲವು ಹಣವಿದ್ದವರ ಕಾಲ. ಹೀಗಾಗಿ ಸಾವಿರಗಟ್ಟಳೆ ಖರ್ಚು ಮಾಡಿದ ಹುಡುಗನ ತಂದೆಯು ಮದುವೆಕಾಲದ ಸಮಯವನ್ನು ನೋಡಿ, ತನ್ನ ಹಣವನ್ನು ಹಿಂದೆ ಪಡೆಯುವರೆ ಸಾಧಿಸುವನು. ಆದುದರಿಂದ ವಿದ್ಯಾವಂತರ ವರದಕ್ಷಿಣೆಯ ಪ್ರಶ್ನೆಯು "ವಿದ್ಯಾಭ್ಯಾಸಕ್ಕೆ ಖರ್ಚು ಮಾಡಿದ ಸಾವಿರಾರು ರೂಪಾಯಿ ಈಗ ಬರಬೇಕು" ಎಂಬುದಾಗಿದೆ.

ವರದಕ್ಷಿಣೆಯ ದರ ಏರಲು, ಈ ಪದ್ಧತಿಯು ಬಲಗೊಳ್ಳಲು, ಈ ರೀತಿಯ ಆರ್ಥಿಕ ಸಮಸ್ಯೆಯು ಮೇಲೆ ನಿಂತಿದೆ. ಅನ್ಯಾಯ ರೀತಿಯ ಆಸ್ತಿ ವಿಭಾಗವು ಇನ್ನೊಂದು ಕಾರಣವಾಗಿದೆ ಉದಾಹರಣೆಗಾಗಿ ಒಬ್ಬ ಧನಿಕನು ತನ್ನ ಗಂಡು ಮಕ್ಕಳಿಗೆ ಸಾವಿರಾರು ರೂಪಾಯಿಯನ್ನು ನೀಗಿಸಿಡುವಾಗ, ತನ್ನ ಹೆಮ್ಮಕ್ಕಳಿಗೆ ಏನಾದರೂ ಇನ್ನೂರು–ಮುನ್ನೂರು ರೂಪಾಯಿ ಕೊಟ್ಟರೆ ಅದೇ ದೊಡ್ಡ ಉಪಕಾರದ, ಬಹು ಉದಾರತೆಯ ಕಾರ್ಯವೆಂದು ನಂಬುವನು. ಈ ರೀತಿಯ ಲಜ್ಜಾಸ್ಪದವಾದ ತುಚ್ಛ ಮನೋಧರ್ಮವು ಸಮಾಜದಲ್ಲಿ ವ್ಯಾಪಿಸಿಕೊಂಡಿರುವವರೆಗೆ, ಕಾಲಕ್ಕೆ, ಹೆಣ್ಣು ಪಡೆಯುವ ತರುಣನು, ಮದುವೆಯ ಕಾಲದಲ್ಲಿ ತನ್ನ ಮಾವನಿಂದ ಸಾಧ್ಯವಾದಷ್ಟು ಪಡೆಯಲು ಯತ್ನಿಸುವನು. ನಿಜವಾಗಿ ಹೆತ್ತವರ ಆಸ್ತಿಯ ವಿಭಾಗವು ಹೆಣ್ಣುಮಕ್ಕಳಿಗೂ ಗಂಡುಮಕ್ಕಳಂತೆ ದೊರೆಯುವುದಾದರೆ, ಹೆಣ್ಣು ಹುಡುಗಿಯರೂ, ಗಂಡು ಹುಡುಗರಂತೆ ಸಮಾನ ಖರ್ಚು ವೆಚ್ಚಗಳನ್ನು ಪಡೆಯುವುದಾದರೆ, ಇಂಥಾ ಪದ್ಧತಿಯು ಇಷ್ಟೊಂದು ಪ್ರಬಲವಾಗುತ್ತಿರಲಿಲ್ಲ

ಇನ್ನೊಂದು ಈ ವರದಕ್ಷಿಣೆಯ ಪದ್ಧತಿಗೆ ಪ್ರೋತ್ಸಾಹವನ್ನೀಯುವ ವಿಷಯವೆಂದರೆ ರೂಢಿಬದ್ಧವಾದ ಮದುವೆಯ ವಿಚಾರ. ಒಬ್ಬ ಹುಡುಗನಿಗೆ ಎರಡು ಮೂರು ಕಡೆಯವರು ಹೆಣ್ಣು ಕೊಡುವೆವೆಂದು ಬಂದರೆನ್ನೋಣ, ಹುಡುಗನಿಗೆ ಈ ವಿಚಾರದಲ್ಲಿ ಯಾವುದನ್ನು ಆರಿಸುವುದು ಎಂಬ ನಿಶ್ಚಿತ ಅಭಿಪ್ರಾಯ ಕೊಡಲಾಗುವುದಿಲ್ಲ. ಯಾಕೆಂದರೆ, ಹುಡುಗನಿಗೆ ಈ ಹುಡುಗಿಯರಲ್ಲಿ ತನಗೊಪ್ಪುವ ಹುಡುಗಿ ಯಾವುದೆಂದು ನಿರ್ಧರಿಸುವ ಅವಕಾಶವನ್ನು ಹೆತ್ತವರು ಅಥವಾ ಬಳಗದವರು ಕೊಡಲಾರರು. ವರದಕ್ಷಿಣೆಯ ಏರಿಳಿತದಲ್ಲಿ ಅದು ಪರಿಣಾಮ ಹೊಂದುತ್ತದೆ. ನಿಜವಾಗಿ ಒಬ್ಬ ಹುಡುಗನು ತಾನು ಕಂಡುಕೊಂಡ ಹುಡುಗಿಯು ತನ್ನ ಮನಮೆಚ್ಚಿನವಳೆಂದು ಅರಿತುಕೊಂಡರೆ, ಜೊತೆಗೊಬ್ಬ ತಾನರಿಯದವಳನ್ನು ವರದಕ್ಷಿಣೆಯ ಹೆಚ್ಚಳದ ಅದೊಂದೇ ಕಾರಣದಿಂದ ಕೈ ಹಿಡಿಯಲಾರನು. ಆದುದರಿಂದ ಮುಂದಕ್ಕೆ ಕನ್ಯಾನ್ವೇಷಣದಲ್ಲಿ ವರನಿಗೆ ಪ್ರಧಾನ ಸ್ಥಾನವೀಯಬೇಕು. ಈ ಹಿಂದಿನ ಅಂಧಶ್ರದ್ಧೆಯ, ಅನರ್ಥಕಾರಿಯಾದ ರೂಢಿಬದ್ಧ ಮದುವೆಯ ನಿರ್ಣಯ ಪದ್ಧತಿಯನ್ನು ದೂರೀಕರಿಸತಕ್ಕದ್ದು, ಹೌದು, ಹಿಂದಿನ ಕೊಳ್ಳುವ ಮನೋವೃತ್ತಿಯುಳ್ಳ ಕೆಲವರೆನ್ನಬಹುದು! "ಪ್ರಾಯಕ್ಕೆ ಬಂದ ಹುಡುಗ ಹುಡುಗಿಯರ ಪರಿಚಯ ಮಾಡಿಸುವುದರಿಂದ ಪ್ರಮಾದವಾಗಲಾರದೇ?" ಎಂದು. ಇದಕ್ಕೆ ಉತ್ತರವಿಷ್ಟೆ ಈಗ ಸಮಾಜದಲ್ಲಿ ಈ ವರಶುಲ್ಕದ ಕಾರಣದಿಂದ ಎಷ್ಟೊಂದು ಸ್ತ್ರೀ ಪುರುಷರು ಅವಿವಾಹಿತರಾಗಿ ಹೆಚ್ಚಾಗುತ್ತಿಲ್ಲ! ಈ ರೀತಿಯೇನು ಸಂಪ್ರದಾಯವಾದಿಗಳ ಸಂಪ್ರದಾಯಕ್ಕೆ ಒಪ್ಪುವಂತಹದ್ದೇ! ನಿಶ್ಚಯವಾಗಿ ಇಂಥಾ ವಿಷಮ ಪರಿಸ್ಥಿತಿಯಿಂದ ಸಮಾಜದಲ್ಲಿ ಅನರ್ಥ ಪರಂಪರೆಯು ಇನ್ನಷ್ಟು ಹೆಚ್ಚಾಗದಿರದು.

ಇನ್ನೊಂದು ಈ ಸುಟ್ಟ ವರದಕ್ಷಿಣೆಯ ಪದ್ಧತಿಗೆ ಪ್ರೋತ್ಸಾಹಕಾರಕವಾದ ವಿಷಯವೆಂದರೆ, ತನ್ನ ಮಗಳನ್ನು ದೊಡ್ಡ ಕುಲವಂತನಿಗೆ ಕೊಡಬೇಕೆಂಬ ಹೆತ್ತವರ ಭ್ರಾಮಿಕ ವಿಚಾರ. ಒಬ್ಬ ದೊಡ್ಡ ಹುದ್ದೇದಾರನ ಮಗ, ಅಥವಾ ಒಳ್ಳೇ ಮನೆತನಕ್ಕೆ ಸೇರಿದವನೆಂಬ ಅದೊಂದು ಕಾರಣಕ್ಕಾಗಿ ತಮ್ಮ ಕುಲದ ಪಿತೃಗಳ ಮೋಕ್ಷವು ಕೂಡಾ ಈ ಸಂಬಂಧದಿಂದ ಆಗಬಹುದೋ ಎಂಬಂತೆ ಅಜ್ಞಾನಿಗಳಾದ ಹೆತ್ತವರು ತಮ್ಮ ಕುಲದ ಕಳಗಿನ ಗೌರವವನ್ನು ಮೇಲಕ್ಕೆತ್ತರಲಿಕ್ಕಾಗಿ ತಮ್ಮ ಮಗಳನ್ನು ಕೊಡುವಾಗ ತಮ್ಮ ಪೆಟ್ಟಿಗೆ ಬರಿದು ಮಾಡಲು ಹಿಂಜರಿಯುವುದಿಲ್ಲ. ಹೇಗೂ ತನ್ನ ಸಂಬಂಧಿಗಳ ಅಥವಾ ತನ್ನ ಮನೆತನಕ್ಕೆ ಸರಿಯಾದ ರೀತಿಯಲ್ಲಿ ಜೀವನ ನಡೆಸಲು ಒದ್ದಾಟ ನಡೆಸಿ, ವರದಕ್ಷಿಣೆಯ ಸಮಯ ಬಜೆಟ್ ಸರಿಮಾಡಿಕೊಳ್ಳ ಬಯಸುವ ತರುಣನು, ಈ ಸಂದರ್ಭದಲ್ಲಿ ಈ ರೀತಿಯ ನೆಂಟಸ್ತಿಕೆಯ ಸೂಚನೆ ಬಂತೆಂದರೆ, ಕೈನೀಡಿ ಬಿಡುವನು. "ಹುಡುಗಿಯರಿಗೂ ಹುಚ್ಚು ಇದ್ದೇ ಇರುತ್ತದೆ ದೊಡ್ಡವರ ಮನೆ ಸೇರಬೇಕು; ಸುವ್ಯವಸ್ಥೆಯಲ್ಲಿರಬೇಕೆಂದು." ಹೀಗಾಗಿ, ಪ್ರೇಮಬದ್ಧವಾದ ಮದುವೆಯ ಬದಲಾಗಿ, ಧನಬದ್ಧವಾದ ವಿಷಮ ವಿವಾಹವು ಜರಗುತ್ತದೆ. ನಂತರ ಜೀವಂತ ದುಃಖದಾಯಕ ಸಂಸಾರದಲ್ಲಿ ಪರಿಣಾಮ ಹೊಂದುತ್ತದೆ

ಮದುವೆಯ ಕಂಟ್ರಾಕ್ಟಿನಲ್ಲಿ ಆರ್ಥಿಕ ಪ್ರತಿಫಲದ ಪ್ರಶ್ನೆಯು ಇರುವವರೆಗೆ ಕಾಲ ವರದಕ್ಷಿಣೆಯ ಪದ್ಧತಿಯು ಮುಂದುವರಿಯುವುದು. ಮದುವೆಯ ಮೂಲ ವಿಚಾರವನ್ನು ಆರ್ಥಿಕ ವಿಷಯದಿಂದ ಬುದ್ಧಿಗನ್ನು ಮತ್ತು ನೈತಿಕ ವಿಚಾರದಲ್ಲಿ ಮಾರ್ಪಡಿಸುವವರೆಗೆ ಕಾಲ ಈ ವರದಕ್ಷಿಣೆ ಪದ್ಧತಿಯ ಸಮಸ್ಯೆಗೆ ಬೇರೆ ದಾರಿಯಿಲ್ಲ. ಹುಡುಗ ಹುಡುಗಿಯರೊಳಗೆ ಸ್ನೇಹ ಪ್ರೇಮವು ಸರಿಯಿಲ್ಲವೆಂಬ ತಪ್ಪು ಭಾವನೆಯು ನೆಲೆಗೊಂಡಿರುವವರೆಗೆ ಕಾಲ, ಆರ್ಥಿಕ ಕಾರಣದಿಂದ ಅದನ್ನು ರದ್ದುಗೊಳಿಸಲು ಬರುವುದಿಲ್ಲ. ಈ ವಿಷಮ ಪರಿಸ್ಥಿತಿಯು ನಿರ್ನಾಮಕ್ಕಾಗಿ ಧೈರ್ಯದಿಂದ ಮುಂದಾಗಿ ಯುಕ್ತ ರೀತಿಯಲ್ಲಿ ಕಾರ್ಯ ಕೈಕೊಳ್ಳದ ವಿನಃ, ಬೇರಾವ ವಿಚಾರವೂ ಪರಿಣಾಮಹೊಂದಲಾರದು. ಮದುವೆ ಮತ್ತು ವರದಕ್ಷಿಣೆಯೆಂಬ ವಿಷಯವು ಸಾಮಾನ್ಯ ಆಟವಲ್ಲ. ದೇಶದ ಯುವಕ ಯುವತಿಯರ ಜೀವನ ಮತ್ತು ಅದೃಷ್ಟ ನಿರ್ಮಾಣದ ಸಮಸ್ಯೆಯಾಗಿದೆ.

ಮುಖ್ಯ ವರದಕ್ಷಿಣೆಯ ದುಷ್ಪರಿಣಾಮದಿಂದ ಬಿಡುಗಡೆಯಾಗಬೇಕಾದರೆ, ಸ್ತ್ರೀ ಪುರುಷರೊಳಗೆ ಆಸ್ತಿಯ ಸಮಾನ ವಿಭಾಗ, ಸಮಾನ ಭಾವ, ಮತ್ತು ಮದುವೆಯ ಕರ್ತದಲ್ಲಿ ಯುಕ್ತ ಮಾರ್ಪಾಟು-ಇವೆಲ್ಲಾ ಅತ್ಯಾವಶ್ಯಕವಾದ ಸಾಧನಗಳು–ಸಮಾಜವು ನಿಜವಿಚಾರವನ್ನು ಅರಿತುಕೊಂಡು, ಅಂಧಶ್ರದ್ಧೆ, ಅನರ್ಥ ಸಂಪ್ರದಾಯಗಳನ್ನು ದೂರಮಾಡಿ, ಯೋಗ್ಯ ರೀತಿಯಲ್ಲಿ ನಿರ್ಭೀತಿಯಿಂದ ಮುಂದಾಗದ ವಿನಃ ಈ ವರದಕ್ಷಿಣೆಯ ಪದ್ಧತಿಯು ಅಳಿಯಲಾರದೆಂದೇ ತಿಳಿಯಬೇಕಾಗಿದೆ.

(ಪ್ರೊಫೆಸರ್ ಎಸ್. ವಿ. ಕನ್ನಾಲರ ಇಂಗ್ಲೀಷ್ ಲೇಖನದ ಆಧಾರದಿಂದ)

WANTED—Districts Organisers and Taluka Superintendents in Districts of Belgaum, Bijapur, Dharwar, Canara and Coorg on salary and commission basis. Special facilities for the initial business of Rs 10,000/-. Only influential gentlemen who can guarantee Rs. 50,000/- and Rs 25,000/- per year need apply, Messrs.

PADUBIDRI BROS., **BOMBAY 8.**

ಹೊಸ ಪುಸ್ತಕ! ಇದೀಗ ಪ್ರಕಟವಾಗಿದೆ!

ಅಜ್ಞಾನ ತಿಮಿರ ಮಾರ್ತಾಂಡ

ಜನ್ಮತಃ ಅಸ್ಪೃಶ್ಯತೆಯು ಇರಲಿಲ್ಲವೆಂಬುದನ್ನೂ ಅಂಥ ಸಂಪ್ರದಾಯದ ಸನಾತನಿಗಳ ವಾದದಲ್ಲಿ ತಿರುಳಿಲ್ಲವೆಂಬುದನ್ನೂ ವಿವರಿಸಿ ಪುರಾಣ, ಸ್ಮೃತಿಗಳ ಆಧಾರದಿಂದ ಶ್ರೀ. ಬಿ. ಅಂತಯ್ಯ ಶೆಟ್ಟರಿಂದ ನವೀನವಾಗಿ ಬರೆಯಲಾದ ಹೊಸ ಪುಸ್ತಕ.

ಬೆಲೆ: 0—4—0 ಮಾತ್ರ.

ಇದರ ಉತ್ಪತ್ತಿಯು ಹರಿಜನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲ್ಪಡುವುದು. 0-4-6 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪಾಲು ದ್ವಾರಾ ಕಳಿಸಲಾಗುವುದು.

ಉಡುಪಿಯಲ್ಲಿ ಪುಸ್ತಕ ಸಿಗುವ ಸ್ಥಳ: **Navabharat Book Depot,** *Udipi.*

ಬಿ. ಅಂತಯ್ಯ ಶೆಟ್ಟಿ,
ಹರಿಜನ ಶಿಕ್ಷಣ ಸಹಾಯಕ ಸಂಘ,
ಬ್ರಹ್ಮಾವರ

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು



ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೋಜ್ಞ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co, *Nambulier Street*, G. T. MADRAS.

ಆಯುರ್ವೇದ ವೈದ್ಯರ ಸತ್ಯಾಗ್ರಹಸಮರಸನ್ನಾಹ

ಮದ್ರಾಸು ಮಂತ್ರಿಗಳ ಉಪೇಕ್ಷೆಯ ಖಂಡನೆ.
ರಾಯಲಸೀಮೆಯ ಆಯುರ್ವೇದ ವೈದ್ಯಪರಿಷತ್ತು.

ನಂದ್ಯಾಲದ ಮಹಾನಂದಿಯಲ್ಲಿ ರಾಯಲ ಸೀಮೆಯ ಆಯುರ್ವೇದ ವೈದ್ಯರ ಪ್ರಥಮ ಪರಿಷತ್ತು ಜರಗಿತು. ಮದ್ರಾಸು ಸರಕಾರದ ಆರೋಗ್ಯ ಮಂತ್ರಿಗಳು ಆಯುರ್ವೇದದ ವಿಷಯ ತೋರುತ್ತಿರುವ ಶತ್ರುಭಾವವನ್ನು ಪ್ರತಿಭಟಿಸುವುದಕ್ಕಾಗಿಯೇ ಈ ಪರಿಷತ್ತು ಎಂದು ಸ್ವಾಗತಾಧ್ಯಕ್ಷರಾದ ಡಾ| ಕೆ ಸುಬ್ರಹ್ಮಣ್ಯ ಶರ್ಮರು ಸ್ಪಷ್ಟೋಕ್ತಿಗಳಿಂದ ಮಂತ್ರಿಗಳ ಮಲತಾಯಿತನವನ್ನು ಟೀಕಿಸಿದರು. ಪರಿಷತ್ತಿಗೆ ಮದ್ರಾಸಿನ ಡಾ| ಎ. ಲಕ್ಷ್ಮೀಪತಿಗಳು, ಬೊಂಬಾಯಿಯ ಡಾ| ಎನ್. ಎಸ್. ಪರಂಜಪೆ, ಕಲ್ಕತ್ತದ ಡಾ| ಎಮ್. ಕೆ. ಮುಖರ್ಜಿ, ಅಖಿಳಭಾರತ ಆಯುರ್ವೇದ ಸಮ್ಮೇಳನದ ಅಧ್ಯಕ್ಷರಾದ ಪಂಜಾಬಿನ ಪಂಡಿತ್ ಶಿವ ಶರ್ಮ ಮುಂತಾದ ದೂರದೂರದ ಪ್ರಖ್ಯಾತ ಆಯುರ್ವೇದ ಮುಖಂಡರೂ ದಯಮಾಡಿಸಿದ್ದರು.

ಪಂಡಿತ ಶಿವಶರ್ಮರು ಪರಿಷತ್ತಿನ ಉದ್ಘಾಟನೆಮಾಡುತ್ತ—ನನ್ನ ಪ್ರಾಂತವಾದ ಪಂಜಾಬಿನಲ್ಲಿ ರಾಷ್ಟ್ರೀಯ ತತ್ವವಿರೋಧಕವಾದ ಮತ್ತು ದೇಶೀಯತೆಗೆ ಪ್ರತಿಬಂಧಕವಾದ ಮಂತ್ರಿಮಂಡಳವಿರುವ ದುರ್ದೈವದಿಂದ ಆಯುರ್ವೇದಕ್ಕೆ ಪ್ರೋತ್ಸಾಹವಿಲ್ಲವೆನ್ನೋಣ. ಆದರೆ ಮದ್ರಾಸಿನಂತಹ ಖ್ಯಾತಿಹೊಂದಿದ ಕಾಂಗ್ರೆಸ್ಸು ಮಂತ್ರಿತ್ವದಲ್ಲೂ ಆಯುರ್ವೇದಕ್ಕ ಉಪೇಕ್ಷೆಯೆಂಬುದನ್ನು ಕೇಳಿ ಚಕಿತನಾಗಿದ್ದೇನೆಂದರು.

ಪರಿಷತ್ತಿನ ಅಧ್ಯಕ್ಷರಾದ ಡಾ| ಲಕ್ಷ್ಮೀಪತಿಗಳು ತನ್ನ ಭಾಷಣದಲ್ಲಿ—ಮದ್ರಾಸಿನ ಪ್ರಧಾನ ಮಂತ್ರಿಗಳು ತನ್ನ ನಿಶಾನಿಷೇಧದ ಪರಮೋತ್ಸಾಹದ ಭರದಲ್ಲಿ ಆಸವಾರಿಷ್ಟಗಳನ್ನೂ ಅಮಲುಪದಾರ್ಥಗಳ ಪಟ್ಟಿಯಲ್ಲಿ ಸೇರಿಸಿ ನಿಶಾನಿಷೇಧದ ಕಾಯಿದೆಯನ್ನು ಅವುಗಳ ಮೇಲೆ ಹೊರಿಸಿ ಅತ್ಯವಶ್ಯವಾದ ಆಯುರ್ವೇದ ಔಷಧಗಳನ್ನೇ ನಿರ್ನಾಮಗೊಳಿಸುವುದರಲ್ಲಿದ್ದಾರೆ. ಮಂತ್ರಿಗಳು ಅವನ್ನೆಲ್ಲ ಕಾನೂನಿಂದ ವಿರಹಿತಪಡಿಸದಿದ್ದರೆ ನಾನು ಸತ್ಯಾಗ್ರಹ ಕೈಕೊಳ್ಳಲೂ ಸಿದ್ಧನಿದ್ದೇನೆ. ಆಯುರ್ವೇದ ವೈದ್ಯರು ರಿಜಿಸ್ಟ್ರೇಶನ್ ಹೊಂದಬೇಕೆಂದು ಅನಾವಶ್ಯಕವಾಗಿ ಪ್ರತಿಬಂಧಿಸಲ್ಪಟ್ಟಿರುತ್ತಾರೆ. ತಮಗಾಗಿರುವ ಈ ಅನ್ಯಾಯಗಳು ನಿವೃತ್ತಿಯಾಗದಿದ್ದರೆ ಆಯುರ್ವೇದ ವೈದ್ಯರೆಲ್ಲ ಸತ್ಯಾಗ್ರಹ ಸಮರವನ್ನು ಕೈಕೊಳ್ಳಲಿಕ್ಕೆ ತನ್ನೊಡನೆ ಸಿದ್ಧರಾಗಿರಬೇಕೆಂದು ವಿನಂತಿಮಾಡಿಕೊಂಡರು.

ಡಾ. ಮುಖರ್ಜಿಯವರು ತನ್ನ ಭಾಷಣದಲ್ಲಿ, ಸಾವಿರಾರು ವರುಷಗಳಿಂದಲೂ ಹಲವು ತರದ ಸಂಕಷ್ಟಪ್ರತಿಬಂಧನೆಗಳ ಹೊಡಾಹೊಡಿಯಿಂದ ಅಳಿಯದೆ ಉಳಿದು ಬಂದಿರುವ ಆಯುರ್ವೇದವು ಮುಂದಿನ ಎದುರುಹೊಡೆತಗಳಿಂದ ಪಾರಾಗಿ ಬಾಳೀತೆಂದು ನಾನು ನಿಸ್ಸಂದೇಹವಾಗಿ ನಂಬುತ್ತೇನೆ, ಆದರೆ ಮದ್ರಾಸು ಕಾಂಗ್ರೆಸ್ಸು ಮಂತ್ರಿಗಳು ದೇಶೀಯರಾಗಿದ್ದು ದೇಶೀಯ ಚಿಕಿತ್ಸಾಕ್ರಮಕ್ಕೆ ಉಪೇಕ್ಷೆ ವಿರೋಧ, ಕೃತ್ಯಗಳನ್ನು ತೋರುವ ದ್ರೋಹಬುದ್ಧಿಯನ್ನು ತೀವ್ರವಾಗಿ ಖಂಡಿಸುತ್ತೇನೆ—ಎಂದರು.

ಡಾ. ಪರಂಜಪೆಯವರು ಆಂಧ್ರ ಪ್ರಾಂತಿಕ ಆಯುರ್ವೇದ ಮಹಾ ಸಂಘದ ಹದಿನೇಳನೆಯ ಪರಿಷತ್ತಿನಲ್ಲಾದ ನಿರ್ಣಯಗಳನ್ನು ಶ್ಲಾಘಿಸಿ ಅವುಗಳಂತೆ ಕಾಂಗ್ರೆಸ್ಸು ಸರಕಾರಗಳು ಆಯುರ್ವೇದ ಚಿಕಿತ್ಸಾ ಪದ್ಧತಿಗಳನ್ನು ಪ್ರೋತ್ಸಾಹಿಸಿ ಪ್ರಯೋಗದಲ್ಲಿ ತರಬೇಕೆಂದೂ ಆಸವಾರಿಷ್ಟಗಳನ್ನು ಪ್ರತಿಬಂಧಿಸುವ ನಿಯಮಗಳನ್ನು ತೆಗೆದು ಹಾಕಬೇಕೆಂದೂ ಈ ವಿಷಯವಾದ ತಮ್ಮ ಇತರ ಚಳವಳಿಗಳೆಲ್ಲ ನಿಷ್ಫಲವಾದಲ್ಲಿ ಸತ್ಯಾಗ್ರಹ ಶಸ್ತ್ರವನ್ನು ಹೂಡಬೇಕೆಂಬ ಆ ಪರಿಷತ್ತಿನ ನಿರ್ಣಯವನ್ನು ಸಮರ್ಥಿಸಿದರು. ಲಕ್ಷಾಂತರ ಹಳ್ಳಿ ಮೂಲೆಗಳಲ್ಲಿರುವ ಜನಪದದ ಸ್ವಾಸ್ಥ್ಯ ರಕ್ಷಣೆ ರೋಗ ನಿವಾರಣೆಯ, ಜೀವನದ ಮೂಲ ಆವಶ್ಯಕತೆಯನ್ನು ಪೂರೈಸಲು ಆಯುರ್ವೇದ ಮತ್ತು ಯುನಾನೀ ಡಾಕ್ಟರುಗಳಲ್ಲದೆ ನಗರ ಪಟ್ಟಣಗಳ ಆಸ್ಪತ್ರೆಗಳಿಂದಲೂ ಡಾಕ್ಟರರುಗಳಿಂದಲೂ ಎಂದಿಗೂ ಸಾಧ್ಯವಾಗದೆಂಬ ವಿಚಾರ ವಿವೇಕಗಳು ಬೊಂಬಾಯಿ ಮತ್ತು ಮದ್ರಾಸಿನ ಕಾಂಗ್ರೆಸ್ಸು ಸರಕಾರಗಳಿಗೂ ತೋರದಿದ್ದುದು ವಿಷಾದಕರವೆಂದರು.

ಇತ್ತೀಚಿಗ ಗುಡಿವಾಡಾ ಪರಿಷತ್ತಿನಲ್ಲಾದ ನಿರ್ಣಯಗಳನ್ನೆ ಈ ಪರಿಷತ್ತು ಅಂಗೀಕರಿಸಿ ಆಯುರ್ವೇದಕ್ಕೆ ಕಾಂಗ್ರೆಸ್ಸು ಸರಕಾರದಿಂದಲೂ ಬಂದಿರುವ ಪ್ರತಿಬಂಧ ನಿವಾರಣೆಗಾಗಿ ಸರಕಾರದೊಡನೆ ವ್ಯವಹರಿಸುವ ಸರ್ವಾಧಿಕಾರವನ್ನು ಡಾ. ಲಕ್ಷ್ಮೀಪತಿಯವರಿಗೆ ವಹಿಸಿತು. ತಮ್ಮ ಧ್ಯೇಯ ಸಾಧನೆಗಾಗಿ ಅವಶ್ಯವಿದ್ದಲ್ಲಿ ಸತ್ಯಾಗ್ರಹದ ಚಳವಳಿಯನ್ನು ಕೈಕೊಳ್ಳುವ ಅಧಿಕಾರವನ್ನು ಅವರಿಗೆ ಒಪ್ಪಿಸಿ, ಪರಿಷತ್ತು ಮುಕ್ತಾಯವಾಯಿತು.

ಮಾನ್ಯ ಮೈಸೂರು ದಿವಾನರ ಆಶ್ವಾಸನೆ

ದಕ್ಷಿಣ ಕನ್ನಡ—ಮೈಸೂರುಗಳ ವ್ಯಾಪಾರ ಸೌಕರ್ಯಗಳ ಕಾರ್ಯಭಾಗದಲ್ಲಿ ಸಹಾನುಭೂತಿ ಮತ್ತು ಸಹಕಾರ.

ಮೈಸೂರು ದಿವಾನರು ಮಂಗಳೂರಲ್ಲಿ ಇದ್ದಾಗ ದ. ಕ. ಜಿಲ್ಲೆಯ ಭೂಮಾಲಿಕರ ಸಂಘ ಮತ್ತು ಪ್ರಯಾಣಿಕರ ಹಾಗೂ ಸರಕು ಸಂಚಾರ ಸೌಕರ್ಯ ಸಂಘದ ಪರವಾಗಿ ಒಂದು ಪ್ರತಿನಿಧಿ ಮಂಡಳಿಯು ದಿವಾನರನ್ನು ಸಂದರ್ಶಿಸಿ ಮೈಸೂರು ಮತ್ತು ಕನ್ನಡಜಿಲ್ಲೆಗಳಿಗೆ ಸಂಬಂಧಿಸಿದ ಪ್ರಯಾಣ ಹಾಗೂ ಸರಕುಗಳ ಆಗಮನ ನಿರ್ಗಮನ ಸೌಕರ್ಯ ಸಂಸ್ಥೆಗಳ ಕುರಿತು ಹಲವು ಸಮಸ್ಯೆಗಳನ್ನು ಅವರ ಮುಂದರಿಸಿತು. ಪ್ರತಿನಿಧಿ ಮಂಡಳಿಯ ಪ್ರಮುಖರಾಗಿದ್ದ ಶ್ರೀ. ಎಂ. ಎನ್. ಶ್ರೀನಿವಾಸರು (ಸಂಘದ ಅಧ್ಯಕ್ಷ) ಈ ಸಂಬಂಧವಾದ ಮೆಮೋರಾಂಡಮ್ (ಬಿನ್ನವತ್ತಳೆಯನ್ನು) ದಿವಾನರ ಕೈಯಲ್ಲಿತ್ತರು. ಹಲವು ವರ್ಷಗಳ ತನಕ ಈ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದ ದಿವಾನ್ ಬಹದೂರ್ ಬಿ. ಎಮ್. ಮಹಾಬಲ ಹೆಗ್ಗಡೆಯವರು ಆಗುಂಬೆ ಮತ್ತು ನಾಗೋಡಿ ಘಟ್ಟಗಳ ರಸ್ತೆಗಳ ಮಹತ್ವದ ಕುರಿತು ಮಾತಾಡಿದರು. ಮೈಸೂರು ಮತ್ತು ಕನ್ನಡ ಜಿಲ್ಲೆಗಳೊಳಗೆ ಅವ್ಯಾಹತವಾಗಿ ಆಮದು ರಫ್ತುಗಳು ಸಾಗುವುದಕ್ಕೆ ಮೈಸೂರು ಕಡೆಯ ರಸ್ತೆಗಳು ಇನ್ನೂ ಹೆಚ್ಚಿನ ದುರಸ್ತಿ ಹೊಂದುವುದೂ ಹಳ್ಳ ನದಿಗಳಿಗೆ ಸಂಕ ಸೇತುವೆಗಳಾಗುವುದೂ ಅತ್ಯಾವಶ್ಯಕವೆಂಬುದನ್ನು ಮನಗಾಣಿಸಿ ಕೊಟ್ಟರು.

ದಿವಾನರು ನಾಗೋಡಿ ಘಟ್ಟದ ರಸ್ತೆಯ ಉಪಯುಕ್ತತೆಯನ್ನು ಮನಗಂಡು, ಆ ಹಾದಿಯಲ್ಲಿ ಕಲ್ಲೂರುಕಟ್ಟೆ ಹೊಳೆಗೆ ಸೇತುವೆ ಹಾಕಿಸುತ್ತೇನಾಗಿ ವಾಗ್ದಾನವಿತ್ತರು. ಅಲ್ಲದೆ ಉಡುಪಿ—ಮಲ್ಪೆ ಕಡೆಗೆ ಮೈಸೂರಿಂದ ಆಗುಂಬೆ ಮಾರ್ಗವಾಗಿ ಯಾತ್ರಿಕರೂ, ವ್ಯಾಪಾರವೂ ವಿಶೇಷವಾಗಿ ಸಾಗುತ್ತಿರುವುದರಿಂದ ಆ ರಸ್ತೆಯನ್ನು ಬಸ್ಸು ಮತ್ತು ಲೋರಿಗಳ ಸಂಚಾರಕ್ಕೆ ಉಪಯುಕ್ತವಾಗುವಂತೆ ಅಗಲಗೊಳಿಸುವ ಕಾರ್ಯವನ್ನು ಕೂಡಲೇ ಕೈಗೊಳ್ಳುವುದಾಗಿಯೂ ಮಾತು ಕೊಟ್ಟರು. ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಇವನ್ನು ಕೂಡಿಸುವ ಹಾದಿಗಳಲ್ಲಿ ಸಂಭವಿಸುವ ಮೋಟಾರು ವಾಹನಗಳು ತೆರಬೇಕಾಗಿರುವ ಮ. ಬಾರಿ ಟೇಕ್ಸಿನ ಪ್ರಶ್ನೆಯು ಮದ್ರಾಸು ಸರಕಾರಕ್ಕೂ ಸಂಬಂಧಿಸಿರುವುದರಿಂದ ತಕ್ಷಣದಲೇ ನಿರ್ಧಾರ ಹೇಳಬರುವುದಿಲ್ಲವೆಂದರು. ಈ ವಿಷಯದಲ್ಲಿ ಜಿಲ್ಲೆಯು ಮದ್ರಾಸು ಸರಕಾರದೊಡನೆ ಪ್ರಸ್ತಾಪ [illegible] ಅವರಲ್ಲಿ [illegible] [illegible] [illegible] ಸಂಪೂರ್ಣ [illegible] [illegible] ಯನ್ನು [illegible] [illegible] ರಿನ ಅಧಿಕಾರಿ ಮತ್ತು ವ್ಯಾಪಾರಿ ಪ್ರತಿನಿಧಿಗಳ ಒಂದು [illegible] ನ್ನು ನಿಯೋಗಿಸಿ ದಕ್ಷಿಣ ಕನ್ನಡದ ಪ್ರಮುಖ [illegible] ಸಂದರ್ಶಿಸಿ ಮೈಸೂರಿನ [illegible] [illegible] ದಕ್ಷಿಣ ಕನ್ನಡ ಜಿಲ್ಲೆಯ [illegible] ಎಷ್ಟರ ಮಟ್ಟಿಗೆ ಸಾಧಕವಾಗುವುದೆಂಬುದನ್ನು ನಿಶ್ಚಯಿಸಿಕೊಂಡು ಕ್ರಮವಾಗಿ ಮುಂದರಿಸುವ ನಿರ್ಧಾರ ಮಾಡುವೆನೆಂದರು. ಅವರೂ ಪ್ರಕೃತ ಚಿಕ್ಕಮಗಳೂರಿಗೆ ಮುಂದುವರಿಸುವುದಾಗಿಯೂ ಹಾಸನದಿಂದ ಸಕಲೇಶಪುರಕ್ಕೆ ಮುಂದೊಯ್ಯುವ ಯೋಚನೆಯನ್ನು ಮಾಡುವುದಾಗಿಯೂ ಹೇಳಿದರು.

ಕಡಪಾ, ಅನಂತಪುರ, ಪ್ರೊದತ್ತೂರು, ಅಮಲಪುರ ಮುಂತಾದ ಕಡೆಗಳಲ್ಲಿ ಆಯುರ್ವೇದ ಸತ್ಯಾಗ್ರಹ ನಿರ್ಧಾರ

ಡಾ. ಲಕ್ಷ್ಮೀಪತಿ, ಕವಿರಾಜ ಮುಖರ್ಜಿ, ಡಾ. ಪರಂಜಪೆ, ಪಂಡಿತ್ ಶರ್ಮಾ ಇವರು ಆಯುರ್ವೇದ ವೈದ್ಯರಲ್ಲಿಯೂ ಜನತೆಯಲ್ಲಿಯೂ ಆಯುರ್ವೇದ ಚಿಕಿತ್ಸಾಪರವಾಗಿ ಜಾಗ್ರತಿಯನ್ನುಂಟುಮಾಡುವರ ಪ್ರಾಂತವಲ್ಲೆಲ್ಲ ಸಂಚರಿಸುತ್ತಿದ್ದಾರೆ. ಅಲ್ಲಿಯ ಆಯುರ್ವೇದ ವೈದ್ಯ ಮಂಡಳಿಗಳ ಹಾಗೂ ಮಹಾಜನರ ಆಶ್ರಯದಲ್ಲಿ ದೊಡ್ಡದೊಡ್ಡ ಸಭೆಗಳು ಜರಗಿ, ಮದ್ರಾಸು ಸರಕಾರವು ತೋರುತ್ತಿರುವ ಉಪೇಕ್ಷೆ ಮತ್ತು ಆಯುರ್ವೇದ ಘಾತಕ ಧೋರಣೆಗಳ ಖಂಡನೆಗಳಾಗಿವೆ. ಕ್ಷಿಪ್ರದಲ್ಲೇ ಸರಕಾರವು ತನ್ನ ರೀತಿಯನ್ನು ಅನುಗುಣವಾಗಿ ಪರಿವರ್ತಿಸಿಕೊಳ್ಳದಿದ್ದರೆ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸತ್ಯಾಗ್ರಹ ಸಂಗ್ರಾಮವನ್ನು ಕೈಕೊಳ್ಳಬೇಕೆಂದು ಮೇಲಿನ ಸ್ಥಳಗಳಲ್ಲೆಲ್ಲ ಸರ್ವಾನುಮತದಿಂದ ನಿರ್ಣಯವಾಗಿದೆ.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ, ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಅಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. ಕ್ರಯ:-100 ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. 5-0-0, ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ



ಆ ಮ ಲ ಕೀ ತೈ ಲ

(ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0.

2 ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ. ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,
ಬ್ರಹ್ಮಾವರ ಪೋಸ್ಟ್, ದ. ಭಾರತ

ಈ ವಾರದ ಫಲಿತಾಂಶವೇನು?

(ತಾ. 2—3—39ರಿಂದ 9—3—39ರ ವರೆಗಿನ ರಾಶಿಫಲ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ. ನ.]

ವೃಷಭ, ಮಿಥುನ, ತುಲಾ, ಮಕರ ಈ ರಾಶಿಯವರ ಗ್ರಹಸ್ಥಿತಿಯು ಚೆನ್ನಾಗಿರುವುದು—ಕನ್ಯಾ, ಧನುರಾಶಿಗಳವರ ಸ್ಥಿತಿಯು ಮಿಶ್ರರೂಪವಾಗಿರುವುದು. ಮೇಷ, ಸಿಂಹ, ಕುಂಭ, ಈ ರಾಶಿಗಳವರ ಭವಿಷ್ಯವು ಸ್ವಲ್ಪ ಮಟ್ಟಿಗೆ ಕೆಟ್ಟಿರುವುದು—ಕರ್ಕಾಟಕ, ವೃಶ್ಚಿಕ, ಮೀನರಾಶಿಗಳವರ ಗ್ರಹಮಾನ ಹೆಚ್ಚಿನಂಶ ಕೆಟ್ಟಿರುವುದು - - - - - -

ಮೇಷರಾಶಿ—

ಈ ವಾರದಲ್ಲಿ ನಿಮಗೆ ಕಳೆದ ದಿನಗಳು ಎಷ್ಟೋ ಲೇಸು, ಇನ್ನು ಮುಂದಿನ ದಿನಗಳನ್ನು ಹೇಗೆ ಕಳೆಯುವಿರೋ ಎಂದು ತೋರಿಬರಲಿದೆ. ಕಾರಣವೇನೆಂದರೆ, ದಿನೇದಿನೇ ಒಂದೊಂದೇ ಶೋಕಗಳು ವೃದ್ಧಿಯಾಗುತ್ತಾ ಬರಲಿವೆ. ಆರೋಗ್ಯವನ್ನು ಕಾಪಾಡಿಕೊಳ್ಳುವುದು ಪ್ರಕೃತ ನಿಮ್ಮಿಂದ ಬಹಳ ಕಷ್ಟಕ್ಕೆ ಬರುವುದು. ಶತ್ರು ಜನರ ಪೀಡೆಯು ವಿಶೇಷವಾಗುತ್ತಾ ಬಂದು ಕೆಲವು ಕಾರ್ಯಗಳಲ್ಲಿ ನಿಮಗೆ ಪರಾಜಯವುಂಟಾಗಲಿದೆ. ನಾಲಿಗೆಯನ್ನು ಹಿಡಿತದಲ್ಲಿಟ್ಟರೂ ಅದು ಕಲಹ ಮಾಡದೆ ಇರದು. ಆಯಕ್ಕಿಂತ ವ್ಯಯವು ದ್ವಿಗುಣಿತವಾಗಿ ಪರಿಗಣಿಸಿ ಮಾನರಕ್ಷಣೆಯ ವಿಚಾರವು ಬಹಳ ಕಷ್ಟದ ಪರಿಸ್ಥಿತಿಗೆ ಬರುವುದು. ಗುರ್ವನುಗ್ರಹದಿಂದಾಗಿ ನಿಮಗೆ ಸಂಭವಿಸತಕ್ಕ ಹಲವು ವಿಪತ್ತುಗಳು ನಿವಾರಣೆಯಾಗುವುವಲ್ಲದೆ ತಾ. 2, 7, 8, 9ಈ ದಿನಗಳಲ್ಲಿ ಸ್ಥಾನಮಾನಗಳ ಲಾಭ, ಕಾರ್ಯಜಯ, ಧನಲಾಭ, ಇಷ್ಟಸಿದ್ಧಿಗಳು ನೆರವೇರಲಿವೆ.

ವೃಷಭರಾಶಿ—

ಬಹ್ವಂಶಗಳಲ್ಲಿ ನಿಮಗೆ ಈ ವಾರವು ಉತ್ತಮವಿರುವುದು. ಆದರೂ ಒಂದೆರಡು ಗ್ರಹರ ಪೀಡೆಯಿಂದಾಗಿ ಪತ್ನಿಯಳಿಗೂ ನಿಮಗೂ ಅಭಿಪ್ರಾಯ ಭೇದಗಳುಂಟಾಗಿ ಕಲಹವಾಗುವುದು. ಪತ್ನಿಯ ಆರೋಗ್ಯವೂ ಕೆಡಲಿದೆ. ಆರಂಭಿಸಲ್ಪಟ್ಟ ಉದ್ಯೋಗದಲ್ಲಿ ಯಶಸ್ಸೂ ಧನ ಲಾಭವೂ ಸಿಗುವುದು. ಧರ್ಮಕರ್ಮಗಳಲ್ಲಿ ಎಳ್ಳಷ್ಟೂ ಹಾನಿಯಾಗದಂತೆ ವರ್ತಿಸುವಿರಿ. ಪುತ್ರ ಮಿತ್ರರ ಬೆಂಬಲವು ಸದಾ ನಿಮಗಿರುವುದು. ವ್ಯಾಪಾರಾದಿ ಉದ್ಯೋಗಗಳಲ್ಲಿ ಪ್ರವೃತ್ತರಾದವರಿಗೆ ಈ ವಾರವು ಒಳ್ಳೇ ಫಲದಾಯಕವೆಂದೆನಿಸುವುದು. ಶತ್ರು ವಿಷಯಕ ಸರ್ವಕಾರ್ಯಗಳಲ್ಲೂ ಜಯಶ್ರೀಯು ನಿಮ್ಮ ಕಡೆಗಿರುವಳು. ನಿಮ್ಮ ಇಚ್ಛೆಗಿಂತಲೂ ಅಧಿಕವಾಗಿ ಧನಪ್ರಾಪ್ತಿ ಇರುವುದು. ತಾ. 3, 4, 9 ಈ ದಿನಗಳಲ್ಲಿ ಶತ್ರು ನಿಗ್ರಹದಿಂದಾಗಿ ಸಂತೋಷವೂ ಕಾರ್ಯ ನಿವೃತ್ತಿಯಿಂದಾಗಿ ತಲೆಭಾರವೂ ಕಡಿಮೆಯಾಗುವುದು.

ಮಿಥುನರಾಶಿ—

ಮನಶ್ಚಾಂಚಲ್ಯವು ನಿಮ್ಮಲ್ಲಿ ದಿನೇದಿನೇ ಪ್ರಬಲವಾಗುತ್ತಿರುವುದರಿಂದ ಕಾರ್ಯ ಕರ್ತೃತ್ವ ಶಕ್ತಿಯು ಕಡಿಮೆಯಾಗುತ್ತಾ ಬರುತ್ತಿದೆ. ಭೂಸಂಬಂಧವಾದ ಯಾ ಧನ ಸಂಬಂಧರಾದ ಕಲಹಗಳು ಸಂಭವಿಸಿ ವ್ಯರ್ಥವಾಗಿ ಧನ ವ್ಯಯವಾಗುವ ಸಂಭವವಿದೆ. ಆದರೂ ಹೆಚ್ಚಿನ ಗ್ರಹರು ನಿಮಗನುಕೂಲರಿರುವುದರಿಂದ ಸ್ವಯಂ ನೀವು ಅಸಮರ್ಥರಿದ್ದರೂ ಉಪಾಯದಿಂದ ನಿಮ್ಮ ಕಾರ್ಯಗಳನ್ನು ಬೇರೆ ಜನರ ಮುಖದಿಂದ ಪೂರ್ತಿಗೊಳಿಸುವಿರಿ. ತಕ್ಕಕಾಲದಲ್ಲಿ ಶತ್ರುಗಳನ್ನು ಇದಿರಿಸಲು ಸಾಕಷ್ಟು ಧನ ಜನ ಬಲವು ನಿಮಗಿರುವುದು. ಗೃಹ ಸಂಪತ್ತುಗಳೆಲ್ಲವೂ ಪೂರ್ಣವಾಗಿರುವುದರಿಂದ ಸಾಂಸಾರಿಕ ತಾಪತ್ರಯದಿಂದ ಮುಕ್ತರಿರುವಿರಿ. ಸಂಪನ್ನ ಸ್ತ್ರೀಯಳ ಪರಿಚಯವು ನಿಮಗಾಗುವ ಸಂಭವವಿದೆ. ತಾ. 2, 5, 6 ಈ ದಿನಗಳನ್ನು ಹೊರತು ಬೇರೆ ದಿನಗಳಲ್ಲಿ ಜಾಗ್ರತೆ ತಪ್ಪಿ ವರ್ತಿಸಿದರೆ ಮಿತ್ರರಲ್ಲಿ ಮನಸ್ತಾಪಕ್ಕೂ ಮಾನಹಾನಿಗೂ ಒಳಗಾಗುವಿರಿ.

ಕರ್ಕಾಟಕರಾಶಿ—

ಪೌರುಷವು ತಾನೊಂದಾಗಿಯೇ ಇದ್ದು ಯಾವಾಗಲೂ ಫಲಕೊಡಲು ಸಮರ್ಥವಾಗುವುದಿಲ್ಲ. ಅದೃಷ್ಟರೂಪವಾದ ದೈವವೂ ಪುರುಷಯತ್ನವೂ ಸೇರಿದರೇನೇ ಅಲ್ಲಿ ಫಲೋತ್ಪತ್ತಿಯಾಗುವುದು. ಹೀಗಿರುವಲ್ಲಿ ಸದ್ಯದ ಗ್ರಹಸ್ಥಿತಿಯಂತೆ ನಿಮ್ಮ ಅದೃಷ್ಟವು ಅದೃಶ್ಯವಾಗಿಯೇ ಹೋಗಿರುವುದು. ನಿಮ್ಮ ಪ್ರಯತ್ನವೂ ಕೂಡ ಅಂತೆಯೇ ಬಹಳ ಕಡಿಮೆಯಾಗಿರುವುದು. ಆದಕಾರಣ ನಿಮಗೆ ಈ ವಾರವು ಬಹಳ ಕಷ್ಟದಾಯಕವಾಗಿರುವುದು. ಆರೋಗ್ಯದ ಪರಿಸ್ಥಿತಿಯು ಪೂರಾ ಕೆಡುವುದು. ಮನೆಯಲ್ಲಿ ಕಲಹಗಳು ಹೆಚ್ಚುವುವು. ಪುತ್ರರಿಂದಲೂ ಪತ್ನಿಯಿಂದಲೂ ಜಗಳವಾಗಿ ಬಹಳ ಶೋಕಾಕುಲಿತರಾಗುವಿರಿ. ಧರ್ಮಸ್ಥಾನಗತನಾದ ಶನೀಶ್ವರನು ದಿನೇದಿನೇ ಧರ್ಮಹ್ರಾಸವನ್ನುಂಟುಮಾಡುತ್ತಿರುವನು. ಆರ್ಥಿಕ ಅಡಚಣೆಯು ಬೆನ್ನು ಬಿಡದು. ತಾ. 2, 5, 6, 9 ಈ ದಿನಗಳು ಸರ್ವ ಕಾರ್ಯಗಳಿಗೂ ಸರ್ವಥಾ ತ್ಯಾಜ್ಯವಾಗಿರುವವು.

ಸಿಂಹರಾಶಿ—

ಈ ವಾರದಲ್ಲಿ ನಿಮಗೆ ಒಂದು ಭಾಗದಲ್ಲಿ ಉತ್ತಮವಿದ್ದರೆ ಎರಡು ಭಾಗಗಳಲ್ಲಿ ಕೇಡಾಗುವುದು. ಗುರು ಬುಧರು ನಿಮಗನುಕೂಲರಾಗಿರುವುದರಿಂದ ಜನರಿಂದ ಪೂಜಾರ್ಹರಾಗುವಿರಿ. ಪುತ್ರರ ಸಹಕಾರದಿಂದ ಕೆಲವು ಕಾರ್ಯಗಳಲ್ಲಿ ಜಯವನ್ನು ಹೊಂದುವಿರಿ. ತಕ್ಕಷ್ಟು ಧನ ವಸನಗಳೂ ದೊರೆಯುವವು. ಆದರೂ ಶತ್ರು ಪೀಡೆಯು ನಿಮಗೆ ಅನೇಕ ಕಾರ್ಯಗಳಲ್ಲಿ ಪರಾಜಯವನ್ನುಂಟುಮಾಡಲಿದೆ. ವ್ಯರ್ಥ ಪ್ರವಾಸದಿಂದಾಗಿ ಧನವ್ಯಯವಾಗುವುದು. ಆರೋಗ್ಯವು ಕೆಡುವುದರಿಂದಲೂ ಸ್ತ್ರೀಪುತ್ರರ ವಿಯೋಗದಿಂದಲೂ ನಿಮ್ಮ ಶೋಕವು ದಿನೇ ದಿನೇ ವೃದ್ಧಿಯಾಗುವುದು. ಕುಜನರ ಸಂಸರ್ಗವು ನಿಮಗೆ ಅಪಮಾನವನ್ನು ಮಾತ್ರವಲ್ಲ ಅನಿಷ್ಟವನ್ನು ತಂದೊಡ್ಡಲಿರುವುದು. ನೀವು ಒಳ್ಳೇ ಚತುರರಿರುವುದರಿಂದ ಕೆಲವು ಅನಿಷ್ಟಗಳನ್ನು ದೂರದಿಂದಲೇ ಪಾರುಗಾಣಿಸುವಿರಿ. ತಾ. 3, 4, ಮತ್ತು 7,8 ಈ ದಿನಗಳಲ್ಲಿ ಧನ ಮಾನಗಳ ಹಾನಿಯೂ ಕಾರ್ಯಕ್ಕೆ ವಿಘ್ನಗಳೂ ಸಂಭವಿಸಲಿವೆ.

ಕನ್ಯಾರಾಶಿ—

ಭವಿಷ್ಯ ಸೂಚಕರಾದ ಗ್ರಹರು ಇಷ್ಟಾನಿಷ್ಟ ಸ್ಥಾನಗಳಲ್ಲಿ ಸಮನಾಗಿ ಬೆರೆತಿರುವುದರಿಂದ ವಿಶೇಷವಾಗಿ ನಿಮಗೆ ಮಿಶ್ರ ಫಲವೇ ಸಂಭವಿಸಲಿದೆ. ನಿಮ್ಮ ದಾಯಾದಿಗಳು ಯಾ ವಿರೋಧಿಗಳಲ್ಲುಂಟಾದ ಕಲಹ ಶಾಂತಿಹೊಂದಲಿದೆ. ಇವರಿಂದಾಗಿ ನಿಮ್ಮ ಮನೋರೋಗವು ಅರ್ಧಕ್ಕರ್ಧ ಕಡಿಮೆಯಾಗುವುದು. ಬಂಧುಗಳು ಮಿತ್ರರು ಪುತ್ರರು ಇವರುಗಳಿಂದ ಕೂಡಿರುವುದರಿಂದ ಯಾವಾಗಲೂ ಸಂತೋಷಚಿತ್ತರಾಗಿರುವಿರಿ, ಮಾತ್ರವಲ್ಲ ಶತ್ರುಗಳೆಂಬ ವನಕ್ಕೆ ದಾವಾನಲನಂತಿರುವಿರಿ. ಕನಿಷ್ಠವರ್ಗದ ಜನರಿಂದಲೂ ಚೋರರಿಂದಲೂ ಕೂಡ ಧನಪ್ರಾಪ್ತಿಯ ಯೋಗವಿದೆ. ಪ್ರವಾಸದ ಸಂಬಂಧ ಕೆಲವಂಶ ಧನವ್ಯಯವಾಗಲಿದೆ. ಕಲಹವೂ ಆಗಲಿದೆ. ಕೆಲವೊಮ್ಮೆ ಅಸಂಭಾವಿತಗಳಾಗಿ ಅನಿಷ್ಟಗಳು ಬರಲಿವೆ. ಆದರೂ ತಾ. 2, 3, 4 ಮತ್ತು 7, 8 ಈ ದಿನಗಳು ಉತ್ತಮವಿರುವುದರಿಂದ ಈ ವಾರವು ಹೆಚ್ಚಿನಂಶ ಸುಖಕಾರಿಯಾದೀತು.

ತುಲಾರಾಶಿ—

ಕ್ಷತ್ರಿಯ ವರ್ಣೀಯರಾದ ರವಿ ಕುಜರು ಮಾತ್ರ ನಿಮಗೆ ವಿರೋಧವಾಗಿರುವುದರಿಂದ ರಾಜಕೀಯ ಭಾಗದಲ್ಲಿ ವಿಶೇಷ ಹಾನಿಯಾಗಲಿದೆ. ಆದಕಾರಣ ಕೋರ್ಟು ವಗೈರೆ ವ್ಯವಹರಣೆಗಾಗಲೀ ಇತರ ಸಾಮಾಜಿಕ ಕಾರ್ಯಗಳಲ್ಲಾಗಲೀ ಸದ್ಯ ಕೈಯಿಕ್ಕಬೇಡಿರಿ. ಪರಿಣಾಮವು ಒಳಿತಾಗದು. ಮಾನಹಾನಿಯ ಪ್ರಸಂಗವು ನಿಶ್ಚಯ ಸಂಭವಿಸಲಿದೆ. ಮಿತ್ರವಿಕೋಪದಿಂದಾಗಿ ಕಲಿತರೂ ಕು ವಗೈರೆಗಳಿಂದ ದೇಶದಲ್ಲಿ ಅಪಯಶವು ಹರಡೋದೀತು. ಆರ್ಥಿಕ ವಿಷಯದಲ್ಲಿ ಈ ವಾರವು ಅತ್ಯುತ್ತಮವಿರುವುದು. ಸಾಂಸಾರಿಕ ಭಾಗದಲ್ಲೂ ಕೂಡ ಬಹಳ ಚೆನ್ನಾಗಿರುವುದು. ಬಂಧು ಮಿತ್ರರ ಅಭಿವೃದ್ಧಿಯು ನಿಮ್ಮ ಶ್ರೇಯಸ್ಸಿಗೇ ಕಾರಣವಾಗಿರುವುದು. ಗೃಹಸ್ಥರಿಗೆ ವನಿತಾ ವಿಷಯಕವಾದ ಸಕಲ ಸೌಕರ್ಯಗಳೂ ಸಿಗುವವು. ತಾ. 3ರಿಂದ 6ರ ವರೆಗೂ ಮತ್ತು 9 ಈ ದಿನಗಳಲ್ಲಿ ನಾನಾವಿಧ ಲಾಭ, ಇಷ್ಟಸಿದ್ಧಿ, ಸಂತೋಷ, ಭೋಜನ ಇತ್ಯಾದಿಗಳು ಸಿಗಲಿವೆ.

ವೃಶ್ಚಿಕರಾಶಿ—

ದೈತ್ಯಗುರುಗಳಾದ ಶುಕ್ರಾಚಾರ್ಯರನ್ನು ಬಿಟ್ಟು ಮಿಕ್ಕುಳಿದ ಸರ್ವ ಗ್ರಹರೂ ನಿಮ್ಮ ರಾಶಿಗೆ ಪ್ರತಿಕೂಲರಾಗಿರುವರು. ಸಕಲ ಭಾಗಗಳಲ್ಲೂ ಪ್ರತಿಕೂಲಗಳೇ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಶತ್ರುಜನರಿಂದಾಗಲೀ ಇತರ ವಾಹನಾದಿಗಳಿಂದಾಗಲೀ ದೇಹಕ್ಕೆ ಪೀಡೆಯುಂಟಾಗಲಿದೆ. ಗೃಹವಲ್ಲಿನ ಕಲಹಗಳು ದಿನೇದಿನೇ ಹೆಚ್ಚುವವು. ಪುತ್ರ ಭೃತ್ಯ ಕಳತ್ರ ಇವರೆಲ್ಲರಲ್ಲಿಯೂ ಕಲಹವಾಗಿ ವಿಶೇಷ ಹಾನಿಯಾಗಲಿದೆ. ಇದಕ್ಕೆ ಸರಿಯಾಗಿ ಬಂಧುಗಳೂ ನಿಮಗೆ ವಿರೋಧವಾಗಿರುವರು. ಮಾತ್ರವಲ್ಲದೆ ತಮ್ಮ ಅಂತರಂಗವನ್ನು ಕ್ರಿಯಾರೂಪದಿಂದಲೇ ತೋರಿಸುವರು. ಆರ್ಥಿಕ ಮುಗ್ಗಟ್ಟು ನಿಮ್ಮನ್ನು ಕ್ಷಣಕಾಲ ನಿಂತಲ್ಲಿ ನಿಲ್ಲಲೂ ಕೂತಲ್ಲಿ ಕೂಡ್ರಲೂ ಬಿಡದು. ಇವೆಲ್ಲ ದೋಷಗಳಿಂದಾಗಿ ನಿಮ್ಮ ಚಿತ್ತವು ಬಿರುಗಾಳಿಗೆ ಸಿಕ್ಕಿ ದೆಸೆದೆಸೆಗೆ ಹೋಗುತ್ತಿರುವ ನಾಯಕನಿಲ್ಲದ ನೌಕೆಯಂತಾಗುವುದು. ತಾ. 5ರಿಂದ 8ರ ವರೆಗಿನ ದಿನಗಳಲ್ಲಿ ಈ ದೋಷಗಳಲ್ಲಿ ಕೆಲವು ಬಹಳ ಕಡಿಮೆಯಾಗಲಿವೆ.

ಧನುರಾಶಿ—

ನಿಮ್ಮ ಭಾಗಕ್ಕೆ ಕಳೆದ ವಾರಕ್ಕಿಂತಲೂ ಈ ವಾರವು ಕೆಲವು ವಿಷಯಗಳಲ್ಲಿ ಉತ್ತಮವೆಂದೇ ಹೇಳಬೇಕು. ಅಂತೂ ಹಾನಿವೃದ್ಧಿಗಳು ಸಮಾನವಾಗಿರುವವು. ನಿಮ್ಮ ಮನಸ್ಸು ಅದಾವುದೋ ಕಾರಣದಿಂದಾಗಿ ಬಹಳ ಚಂಚಲವಾಗಿರುವುದು. ಮಾತ್ರವಲ್ಲ, ಮಾರ್ಗವನ್ನು ಬಿಟ್ಟು ಅಡ್ಡದಾರಿ ಹಿಡಿಯುತ್ತಿದೆ. ಈ ನಿಮ್ಮ ನಡತೆಯು ನಿಮ್ಮ ಮಿತ್ರ ಕಳತ್ರರಿಗೂ ಸರಿದೋರದೆ ನಿತ್ಯ ಕಲಹ ಯಾ ವಿಯೋಗಗಳುಂಟಾಗುವವು. ಪಿತ್ತ ವಿಕಾರಜನಿತ ದೋಷಗಳು ಹೆಚ್ಚುವವು. ಹಣದ ಖರ್ಚಿಗೆ ಬೇಕಾದಷ್ಟು ಅನರ್ಥಗಳು ಸಂಭವಿಸುವವು. ಆದರೂ ಹಣದ ಅಡಚಣೆ ಸಂಭವಿಸದು. ನಿಮ್ಮ ಉದ್ಯೋಗವು ತಕ್ಕ ಫಲ ಕೊಡುತ್ತಿರುವುದು. ಶತ್ರುಜನರಿಂದಾಗಿ ಹಾನಿಬಾರದುದೇ ನಿಮ್ಮ ಭಾಗಕ್ಕೆ ಸಂತೋಷದ ವಿಷಯ. ತಾ. 2 ಮತ್ತು 7, 8, 9 ಈ ದಿನಗಳು ಉತ್ತಮವಿರುವುದರಿಂದ ಸ್ತ್ರೀ ಸಹಿತ ದ್ರವ್ಯಲಾಭ, ಕಾರ್ಯಸಿದ್ಧಿ, ಇತ್ಯಾದಿಗಳು ಸಂಭವಿಸಲಿವೆ.

ಮಕರರಾಶಿ—

ಈ ವಾರವು ನಿಮಗೆ ಸಕಲ ವಿಷಯಗಳಲ್ಲೂ ಹಿತಕಾರಿಯಾಗಿರುವುದು. ಆದರೆ ನಿಮಗೆ ಇತರ ಜನರಲ್ಲಿ ನಂಬಿಗೆಯಿಲ್ಲವು. ಸ್ವಯಂ ನಿಮ್ಮಲ್ಲಿ ಆತ್ಮವಿಶ್ವಾಸವೇ ಇಲ್ಲವು. ಆದಕಾರಣ ಯಾವ ಕಾರ್ಯ ಮಾಡಲೂ ನೀವು ಹಿಂಜರಿಯುವಿರಿ. ಉದಾಸೀನರಾಗಿರಲು ಕಾಲವಿದಲ್ಲವು. ಯಥಾಶಕ್ತಿ ನಿಮ್ಮ ಪೌರುಷವನ್ನು ಪ್ರಯೋಗಿಸಿ ದೈವದತ್ತವಾದ ಫಲವನ್ನು ಭೋಗಿಸುವುದು ನಿಮ್ಮ ಆದ್ಯ ಕರ್ತವ್ಯ. ಅಥವಾ ಒಂದೆರಡು ಕಾರ್ಯಗಳಲ್ಲಿ ನಿಮ್ಮ ಅಂಜುಬುರುಕತನದಿಂದ ಪರಾಜಯವಾದೀತು. (ಆದರೂ ನಷ್ಟವಿಲ್ಲವು.) ಹಾಗೆಂದು ಅಲ್ಲಿಗೇ ಕೈಬಿಡದೆ ಮುಂದರಿದರೆ ಮುಂದಿನ ಕಲ್ಯಾಣವು ನಿಮ್ಮ ಹಸ್ತಾಮಲಕವಾಗುವುದು. ಕಾಲವೊದಗಿದಾಗ ಉದಾಸೀನರಾಗಿದ್ದರೆ ಅದು ಅಮೃತವಾಗಿದ್ದರೂ ಅಮೇಲೆ ವಿಷವಾಗಿ ಪರಿಣಮಿಸೀತು. 'ಉದ್ಯೋಗಂ ಪುರುಷ ಲಕ್ಷಣಂ' ಎಂಬ ವಚನವನ್ನು ಸಾರ್ಥಕಗೊಳಿಸಿರಿ. ಧರ್ಮಮಾರ್ಗದಲ್ಲಿ ಪ್ರವರ್ತಿಸಿ ಜನರ ಬಾಯಿಗೆ ಬೀಳುವಂತೆ ಮಾಡಿಕೊಳ್ಳದಿರಿ.

ಕುಂಭರಾಶಿ—

ಕಳೆದ ವಾರವೂ ಕಳೆಯಿತು. ಅದರ ಜೊತೆಯಲ್ಲೇ ಕೆಲವು ಅನಿಷ್ಟಗಳೂ ಕಳೆದಿರುವವು. ಈ ವಾರವು ನಿಮಗೆ ಹಿಂದಿಗಿಂತ ಎಷ್ಟೋ ಉತ್ತಮವಾಗಿ ಪರಿಣಮಿಸುವದು. ಕೈಗೊಂಡ ಕಾರ್ಯದಲ್ಲಿ ತೃಪ್ತಿಕರವಾಗುವ ರೀತಿಯಲ್ಲಿ ಸ್ಥಿತಿಫಲವೂ ಸಂಸಾರ ನಿರ್ವಹಿಸಲಿಕ್ಕೆ ಬೇಕಾಗುವ ಸಕಲ ವಸ್ತುಗಳೂ ನಿಮ್ಮ ಮಟ್ಟಿಗೆ ಕಡಿಮೆಯಾಗಲಾರವು. ಜನರಿಗೆ ನಿಮ್ಮಲ್ಲಿ ಆದರಭಾವವು ಹುಟ್ಟುವುದು. ಆದರೂ ನಿಮ್ಮಲ್ಲಿ ವಿವೇಕವು ಸಾಕಷ್ಟಿಲ್ಲದಿರುವುದರಿಂದ ಕೆಲವಂಶ ಧನವನ್ನು ಸ್ವಾರ್ಥವಿಲ್ಲದೆ ವ್ಯಯಿಸುವಿರಿ. ಉದರರೋಗ, ಶಿರೋವೇದನ ಇತ್ಯಾದಿ ರೋಗಗಳು ಶರೀರ ಸುಖವನ್ನಪಹರಿಸುವವು. ಅವಿಚಾರದಿಂದ ಮಾಡಿದ ಅನರ್ಥಕ್ಕಾಗಿ ಆ ಮೇಲೆ ಪಶ್ಚಾತ್ತಾಪ ಪಡುವಿರಿ. ತಾ. 3 ರಿಂದ 6ರ ವರೆಗಿನ ದಿನಗಳು ಉತ್ತಮವಿರುವುದರಿಂದ ಸ್ವಕರ್ಮಗಳನ್ನು ವಿಚಾರ ಪೂರ್ವಕ ತದ್ದಿನಗಳಲ್ಲಿ ಮಾಡಿದರೆ ಯುಕ್ತ ಫಲ ಸಿಗುವುದು.

ಮೀನರಾಶಿ—

"ಮಾಡಿದ್ದುಣ್ಣೋ ಮಹಾರಾಯ" ಎಂದಂತೆ ತಾನು ಮಾಡಿದ ಕರ್ಮಫಲವನ್ನು ತಾನೇ ಅನುಭವಿಸಿ ತೀರಿಸಬೇಕೇ ಹೊರತು ಅನ್ಯಥಾ ಗತಿಯಿಲ್ಲವು. ನಿಮ್ಮ ಪ್ರಾರಬ್ಧ ಕರ್ಮವು ಬಹಳ ಕೆಟ್ಟಿರುವುದರಿಂದ ನಿಮ್ಮ ಕಷ್ಟದ ಕಾಲವು ಇನ್ನೂ ಮುಗಿದಿಲ್ಲವು. ಅಷ್ಟರ ತನಕ ಸ್ಮರಣೆಯಿಂದ ದೈವ ಚಿಂತೆಯಲ್ಲಿ ಕಾಲಕಳೆಯಿರಿ. ಸುಸಮಯವು ಆದಷ್ಟು ಬೇಗ ಬರಲೆಂದು. ದುರ್ಜನರ ಭಾಗಕ್ಕೆ ಈ ವಾರವು ಬಹಳ ಅನಿಷ್ಟಕಾರಿಯಾಗಿರುವುದು. ಸಜ್ಜನರಿಗಾದರೋ ಕಷ್ಟಪಟ್ಟು ದುಡಿದ ಕಾರ್ಯಗಳಲ್ಲಿ ಇಷ್ಟದಂತೆ ಫಲ ಸಿಗುವುದು. ಮಿತ್ರ ಜನರ ಬೆಂಬಲವು ಪೂರ್ತಿಯಾಗಿರುವುದು. ಕೆಲವು ಭಾಗದಲ್ಲಿ ಮಿತ್ರರು ನಿಮಗಾಗಿ ತಾವೇ ಪೂರ್ಣ ಜವಾಬ್ದಾರಿ ವಹಿಸಿ ಕಾರ್ಯ ನಿರ್ವಹಿಸುವರು. ತಾ. 5ರಿಂದ 8ರ ವರೆಗಿನ ದಿನಗಳಲ್ಲಿ ಹೆಚ್ಚಿನ ಹಾನಿ ಸಂಭವಿಸದು.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ಸೊಂಟನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—**ಮಂಗಳೂರು.**

WANTED

Organisers in Taluka centres either on salary or commission basis or both. Influential young men need apply. Selected candidates should be prepared to deposit a sum of Rs. 100/-. For full particulars apply with an anna stamp to *Box No. 5,*

C/o **NAVAYUGA, UDIPI.**

The Tropical Insurance

CO., LTD., DELHI.

Chairman Sjt SUBASH CHANDRA BOSE
(Congress President)

Founder Directors — PANDIT MOTILAL NEHRU, DR. M. A. ANSARI, SJT. S. SRINIVASA IYENGAR, HAKIM AJMAL KHAN

This leading National Company founded and managed by five Congress Presidents invites applications for representation on salary and commission.

APPLY TO

K. S. RAMAMURTHI, M.A., *Branch Secretary,* 160, Mount Road, **Madras**

OR

M. SUNDER RAM SHETTY *Branch Manager,* Hampankatta, **Mangalore**

ಪಂಡಿತ ಜವಾಹರಲಾಲ ನೆಹರು.

ವಾರ್ಧಾದಲ್ಲಿ ವರ್ಕಿಂಗ್ ಕಮಿಟಿಯ ಸಭೆ ಜರಗಲಿಲ್ಲ

ಜವಾಹಿರನೆಹರೂ ಸಹಿತ ಹದಿನೂರು ಮಂದಿ ಸದಸ್ಯರೂ ರಾಜಿನಾಮೆ ಕೊಟ್ಟರು ಸುಭಾಸ್‌ಚಂದ್ರ ಭೋಸರು ತಮ್ಮ ಧೋರಣೆಗೆ ಸರಿಹೋಗುವ ಕಾರ್ಯಕಾರೀ ಮಂಡಲವನ್ನು ನಿರ್ಮಾಣ ಮಾಡಿಕೊಳ್ಳಬೇಕಾಗಿದೆ

ವಲ್ಲಭಾಯಿ ಪಟೇಲ ಪಕ್ಷದವರು ತಮ್ಮ ಸದಸ್ಯತನಕ್ಕೆ ರಾಜಿನಾಮೆಕೊಡುವೆವಾಗಿ ಭೋಸರಿಗೆ ತಿಳಿಸಿದ್ದರಷ್ಟೆ. ಅದಕ್ಕೆ ಅವರು ಪ್ರತ್ಯುತ್ತರಕೊಡದೆ ಅವರನ್ನಲ್ಲ ಮುಖತಃ ಮಾತಾಡಿ ಬಗೆಹರಿಸಿಕೊಳ್ಳಬಹುದೆಂಬ ಭಾವನೆಯಿಂದಲೋ ಏನೋ ವರ್ಕಿಂಗ್ ಕಮಿಟಿಯು ತಾ. ೨೨ರಂದು ವಾರ್ಧಾದಲ್ಲಿ ಸಭೆಗೂಡಬೇಕೆಂದು ಆಹ್ವಾನಿಸಿದ್ದರು. ತ ತ್ಪೂರ್ವ ನೆಹರುಗಳನ್ನೂ ಗಾಂಧಿಜಿಗಳನ್ನೂ ಸಂದರ್ಶಿಸಿ ಮಾತುಕತೆಗಳನ್ನಾಡಿ ಪರಿಸ್ಥಿತಿಯು ಆಶಾಜನಕವಾಗಿದೆಯೆಂದು ಪ್ರಕಟಿಸಿದ್ದರಷ್ಟೆ. ಆದರೆ ಅದು ಅವರು ಎಣಿಸಿದಬಹುದಾದಷ್ಟು ಸುಲಭದಿಂದ ಬಿಡಿಸಲಾಗುವ ಸಮಸ್ಯೆಯಾಗಿದ್ದಿಲ್ಲ. ಮೇಲಾಗಿ, ಭೋಸರು ನಿಮೋನಿಯಾ ಜ್ವರ ಪೀಡಿತರಾದುದರಿಂದ ವಾರ್ಧಾದಲ್ಲಿ ನಿಶ್ಚಿತವಾದ ಕಮಿಟಿ ಮೀಟಿಂಗನ್ನು ಮುಂದುವರಿಸಬೇಕೆಂದು ತಂತಿಕೊಟ್ಟರು. ಅಲ್ಲಿ ಹಾಜರಿದ್ದ ಪಟೇಲರಾದಿಯಾಗಿ ಆ ಪಂಥದ ಹನ್ನೆರಡು ಮಂದಿಯೂ ನೆಹರುಗಳೂ ಗಾಂಧಿಜಿಗಳೊಂದಿಗೆ ಪರಿಸ್ಥಿತಿಯ ಆಮೂಲಾಗ್ರ ವಿಚಾರಮಾಡಿ ತಾವೆಲ್ಲ ವರ್ಕಿಂಗ್ ಕಮಿಟಿಯಿಂದ ಹೊರಗಿದ್ದು ಭೋಸರಿಗೆ ತಮ್ಮ ಕಾರ್ಯಕ್ರಮವನ್ನು ನಿರಾತಂಕವಾಗಿ ಸಾಗಿಸಲಾಪ ಹೊಸ ಕಮಿಟಿಯ ನಿರ್ಮಾಣಕ್ಕೆ ಅವಕಾಶಕೊಡುವುದೇ ಶ್ರೇಯಸ್ಕರವೆಂದು ನಿರ್ಧರಿಸಿ ತಮ್ಮ ರಾಜಿನಾಮೆಗಳನ್ನು ಸ್ತ್ರಮುಖೇನ ಭೋಸರಿಗೆ ಕಳುಹಿಸಿದ್ದಾರೆ. ಪಟೇಲ್ ಮತ್ತು ಇತರ ಹನ್ನೊಂದು ಮಂದಿ ಸಮಷ್ಟಿಯಿಂದ ಒಂದು ರಾಜಿನಾಮೆ ಪತ್ರವನ್ನೂ ನೆಹರುಗಳವರು ಪ್ರತ್ಯೇಕವಾಗಿ ತಮ್ಮದನ್ನೂ ಕಳುಹಿಸಿರುವರು.



ವಲ್ಲಭಾಯಿ ಪಟೇಲ

ರಾಜೇಂದ್ರ ಪ್ರಸಾದರು ... ಗಾಗಿ ತಯಾರಿಸಿದ ಸಮಷ್ಟಿ ರಾಜಿನಾಮೆಯ ಪತ್ರವನ್ನು ಗಾಂಧಿಜಿಯವರು ಒಪ್ಪದೆ ಸಂಕ್ಷೇಪವಾಗಿ ಒಕ್ಕಣಿಸಿ ತೋರಿಸಿದಂತೆಯೇ ಕೊನೆಗೆ ಲಿಖಿತವಾಗಿ ಕಳುಹಿಸಲಾಯಿತು. ಅದರ ಮುಖ್ಯಾಂಶ ಹೀಗಿದೆ "ಇತ್ತೀಚೆಗೆ ಸಂಭವಿಸಿದ ಸಂಘಟನೆಗಳನ್ನೆಲ್ಲ ನಾವು ಚೆನ್ನಾಗಿ ಪರಿಶೀಲಿಸಿದ್ದೇವೆ. ಕಾಂಗ್ರೆಸ್ಸಿನ ಅಧ್ಯಕ್ಷ ಚುನಾವಣೆಯ ಸಂದರ್ಭದಲ್ಲಿ ನೀವು ಪ್ರಸಿದ್ಧಿಸಿದ ಹಲವು ಹೇಳಿಕೆಗಳನ್ನೂ ನಾವು ಓದಿದ್ದೇವೆ. ದುರ್ದೈವವಶಾತ್ ನಿಮಗೆ ಬಂದಿರುವ ಅಸ್ವಸ್ಥದ ದೆಸೆಯಿಂದ ನಾವಿಂದು ಸಭೆಗೂಡುವುದು ತಪ್ಪಿರುವ ಕಾರಣ ನಿಮ್ಮ ಆ ಹೇಳಿಕೆಗಳ ವಿಷಯ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಲು ಪ್ರತಿಬಂಧಕವಾಗಿ ಹೋಯಿತು. ಪ್ರಸ್ತುತ ಪರಿಸ್ಥಿತಿಯಲ್ಲಿ ನಾವು ಇಷ್ಟು ಹೇಳಬಹುದು; ಏನಂದರೆ ಈ ವರೆಗೆ ಸಹಿ ಮಾಡಿರುವ ನಾವು ಕಾರ್ಯಕಾರೀ ಮಂಡಳಿಯ ನಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಡುವುದು ನಮ್ಮ ಕರ್ತವ್ಯವೆಂದು ನಮಗೆ ತೋರಿಬಂದಿರುವುದರಿಂದ ಈ ಮೂಲಕ ನಾವು ಹಾಗೆ ಮಾಡಿದ್ದೇವೆ. ನಿಮ್ಮ ಧೋರಣೆಗೆ ಸರಿಹೋಗುವ ಕಾರ್ಯಕಾರೀ ಮಂಡಳಿಯನ್ನು ನೀವು ಚುನಾಯಿಸಿಕೊಳ್ಳಲು ನಿಮಗೆ ತೊಂದರೆಯಾಗಬಾರದೆಂಬುದು ನಮ್ಮ ಹಂಬಲು. ದೇಶದ ಎದುರಲ್ಲಿ ಸ್ಪಷ್ಟನಿರ್ದಿಷ್ಟವಾದ ಒಂದೇ ಧೋರಣೆಯಿರಬೇಕಾದ ಕಾಲವು ಬಂದಿದೆ. ಅಂತಹ ಧೋರಣೆಯು ಕಾಂಗ್ರೆಸಿನೊಳಗಿನ ಅಸಂಗತವಾದ ವಿವಿಧ ಪಕ್ಷಗಳ ಸಂಧಿಯ ಜೊತೆಗೆಯ ಮೇಲೆ ನಿಂತಿರುವಂತಹದಾಗಬಾರದು. ಆದುದರಿಂದ ಕಾಂಗ್ರೆಸ್ಸಿನ ಬಹುಮತದ ಧೋರಣೆಗೆ ಸಮರಸವಾಗುವಂತಹ ಅಭಿಪ್ರಾಯವುಳ್ಳವರ ಅಖಂಡಮಂಡಲಿಯನ್ನು ನೀವು ಚುನಾಯಿಸಿಕೊಳ್ಳುವುದು ನ್ಯಾಯ. ನೀವು ದೇಶದ ಮುಂದೆ ಇಡಬಹುದಾದ ಕಾರ್ಯಕ್ರಮ, ಧ್ಯೇಯಗಳಲ್ಲಿ ನಮಗೂ ನಿಮಗೂ ಏಕಮತವಾಗುವ ವಿಷಯಗಳಲ್ಲೆಲ್ಲ ನಮಗೆ ಸಾಧ್ಯವಿದ್ದಷ್ಟು ಸಹಕಾರವನ್ನು ಕೊಡುವೆವೆಂದು ನಂಬಿರಿ" ಸಹಿ—ಅಬ್ದುಲ್ ಕಲಾಮ್ ಆಜಾದ್, ಸರೋಜಿನಿ ನಾಯ್ಡು, ವಲ್ಲಭಭಾಯಿ ಪಟೇಲ್, ರಾಜೇಂದ್ರ ಪ್ರಸಾದ್, ಭೂಲಾಭಾಯಿ ದೇಸಾಯಿ, ಪಟ್ಟಾಭಿ ಸೀತಾರಾಮಯ್ಯ, ಶಂಕರರಾವ್ ದೇವ, ಹರಿಕೃಷ್ಣ ಮೆಹತಾಬ್, ಕೃಪಾಲಿನಿ, ಅಬ್ದುಲ್‌ಗಫರ್‌ಖಾನ್, ಜಮ್ನಾಲಾಲ್ ಬಜಾಜ್, ಜಯರಾಮದಾಸ್ ದೌಲತ್ ರಾಮ್.

ನೆಹರುಗಳ ಹೇಳಿಕೆ

ನೆಹರುಗಳು ತಮ್ಮ ರಾಜಿನಾಮೆಗೆ ಕಾರಣವನ್ನೂ ಪ್ರಕೃತದ ಪರಿಸ್ಥಿತಿಯನ್ನೂ ಕುರಿತು ಪತ್ರಿಕೆಗಳಲ್ಲಿ ದೀರ್ಘವಾದ ವಿವರಣೆಯನ್ನು ಕೊಟ್ಟಿದ್ದಾರೆ. ಕಾಂಗ್ರೆಸ್ ಇತಿಹಾಸದಲ್ಲೊಂದು ಮಹತ್ವದ ಲೇಖವಾಗಿ ಪರಿಣಮಿಸಲಿಕ್ಕಿರುವ ಆ ಲೇಖದ ಮುಖ್ಯಾಂಶ ಹೀಗಿದೆ:—

ಒಂದು ದಿನದ ಘಳಿಗೆಯಂತೆ ನಾವು ಮುಂದಾಗುವುದಕ್ಕೆ ತಡೆಯಾಗುವಂತಹ ಘಟನೆಗಳು ಕಾಂಗ್ರೆಸ್ಸಿನಲ್ಲಿ ಬರಬಾರದೆಂದು ನಾನು ಕೂಡಿದಷ್ಟು ಪ್ರಯತ್ನಮಾಡಿದ್ದೆ. ಸುಭಾಸ್ ಬೋಸರು ಪ್ರಾ.. ಅಧ್ಯಕ್ಷರಾಗಿ ಚುನಾಯಿತರಾಗುವುದಕ್ಕೆ ಈ ದೃಷ್ಟಿಯಿಂದಲೇ ನಾನು ವಿರೋಧವಾಗಿದ್ದುದು ಏಕೆಂದರೆ ಅದರ ಪರಿಣಾಮಗಳೇನಾದಾವು ಎಂಬುದು ನನಗೆ ಗೊತ್ತಿತ್ತು. ಇಂದು ನಾನು ವರ್ಕಿಂಗ್ ಕಮಿಟಿಯ ಸದಸ್ಯತನಕ್ಕೆ ರಾಜಿನಾಮೆಕೊಡಬೇಕಾದ ನಿರ್ಧಾರಕ್ಕೆ ಬಂದಿರುವ ಕಾರಣಗಳ ವಿಷಯ ವಿಸ್ತಾರ ಮಾಡುವುದಿಲ್ಲ. ಆದರೆ ಅದು ಕಾಂಗ್ರೆಸ್ಸಿನ 'ಎಡ' ಮತ್ತು 'ಬಲ' ಪಕ್ಷಗಳೆಂಬವುಗಳ ತಿಕ್ಕಾಟಕ್ಕೆ ಸಂಬಂಧಿಸಿಲ್ಲವೆಂಬುದನ್ನು ಸ್ಪಷ್ಟಗೊಳಿಸಬೇಕಾಗಿದೆ.

ಈ 'ಎಡ' ಮತ್ತು 'ಬಲ' ಎಂಬೆರಡು ಶಬ್ದಗಳು ಅನರ್ಥವಾಗಿ ಪ್ರಯೋಗಿಸಲ್ಪಡುವ ಕಾರಣ ಭೋಸರು ಅವುಗಳ ವ್ಯಾಖ್ಯಾನಗಳನ್ನೊದರುವ ಮೂಲಕ ಸುಸ್ಪಷ್ಟಗೊಳಿಸಿ ಅವನ್ನು ನಿರ್ದಿಷ್ಟಾರ್ಥದ ಕಟ್ಟುನಿಟ್ಟಿನಲ್ಲಿಟ್ಟರೆ ಅವರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಷಯಗಳಲ್ಲಿ ಮುಂದು ತರುವ ಧೋರಣೆಗಳ ಮತ್ತು ಕಾರ್ಯಕ್ರಮಗಳ ಪ್ರಮಾಣವನ್ನು ನಾವು ಅರಿತು ವಿಚಾರವಿನಿಮಯ ಇತ್ಯಾದಿಗಳಲ್ಲಿ ಸಹಾಯವಾದೀತೆಂದು ಹೇಳಬೇಕು. ಏನಂದರೆ ಹಲವು ಪ್ರಾಮುಖ್ಯ ವಿಷಯಗಳಲ್ಲಿ ನನ್ನ ಹೆಚ್ಚಿನ ಅಭಿಪ್ರಾಯಗಳು ಕೂಡಿಬರಲಿಲ್ಲ. ಅವು ಸ್ಪಷ್ಟವಾಗುವುದು ಅವಶ್ಯವಾಗಿತ್ತು. ಆದರೆ ಅವುಗಳ ವಿಷಯ ಚರ್ಚಿಸಲು ಅವರ ಅಸ್ವಾಸ್ಥ್ಯದಿಂದ ಸಾಧ್ಯವಾಗಲಿಲ್ಲ. ಆದರಿಂದ ತ್ರಿಪುರಿ ಕಾಂಗ್ರೆಸ್ಸಿನ ಅಧಿವೇಶನವು ಸಮೀಪಿಸುತ್ತಿರುವ ಈ ದಿನದಲ್ಲಿ ಮುಖ್ಯ ಜನರು ಪರಿಸ್ಥಿತಿಯ ವಿಕಲ್ಪಭಾವನೆಯಲ್ಲಿರದೆ ವಿದ್ಯಮಾನಗಳ ನಿಜಸ್ವರೂಪವನ್ನು ತಿಳಿದುಕೊಳ್ಳುವಂತೆ ಈ ಪ್ರಕಟಣೆಯನ್ನು ಕೊಡಬೇಕಾಗಿ ಬಂತು. ವರ್ಕಿಂಗ್ ಕಮಿಟಿಯು ಕೂಡಲಿಲ್ಲ, ಕೂಡುವುದೂ ಇಲ್ಲ. ಅನುಪ್ರಕೃತ ಮತಪ್ರಾಯವಾಗಿದೆ. ಭೋಸರು ಅವರ ಅಪೇಕ್ಷಾನುಸಾರ ಕಾರ್ಯಕ್ರಮ ಸೂಚನೆ ಸಲಹೆಗಳನ್ನು ರಚಿಸಿ ಕಾಂಗ್ರೆಸ್ ಅಧಿವೇಶನದ ಮುಂದಿಡಲು ಅವರಿಗೆ ಯಾವ ತಡೆಯೂ ಉಂಟಾಗದಂತೆ ಮಾಡಿಕೊಟ್ಟಿದೆ.

ಸನ್ನಿವೇಶಗಳು ಹೀಗೆ ಒಂದಿರುವಾಗ ಭೋಸರಿಗೆ ನಾನು ವ್ಯಕ್ತಿಶಃವಾಗಿಯೂ ಪ್ರಯೋಜನಕ್ಕೆ ಬೀಳಲಾರೆನೆಂದು ನನಗನ್ನಿಸುತ್ತದೆ. ಏಕೆಂದರೆ ನಾವು ನಿರ್ಣಯಗಳಾಗಳಿಗೋಪುರ ಕಟ್ಟುವುದೇ? ನಾವು ಹಿನ್ನೆಲೆಯನ್ನೂ ಸುತ್ತಮುತ್ತಲಿನ ಸ್ಥಿತಿಗತಿಗಳನ್ನೂ ಲಕ್ಷ್ಯದಲ್ಲಿಟ್ಟುಕೊಂಡು ವಿಚಾರಿಸಬೇಡವೇ? ಇಂತಹ ಅಸಂಗತ ವಿದ್ಯಮಾನಗಳಲ್ಲಿ ನನಗೆ ಸೈ ಹಾಕಲು ಹಿತವೆನಿಸುವುದಿಲ್ಲ. ... ಕಾಂಗ್ರೆಸ್ಸು ಕಲಹಗಳಲ್ಲಿ ಈ ದಶಕ ನಡೆದುಬಂದಿರುವ ನಾನಾ ನಿಯಮಾನುಸಾರವಾಗಿ ಪ್ರವೇಶಿಸುವುದನ್ನು ಬಿಟ್ಟು ನೇರವಾಗಿ ಮೇಲಿಂದಲೇ ಅಧಿಕಾರವನ್ನು ಕೈ ಹಾಕಬೇಕೆಂಬ ಒಲವು

ತೋರಿಬಂದಿದೆ. ಹಾಗಾದರೆ ಕೆಲವು ವಿಶಿಷ್ಟ ಪಂಥೀಯರಿಗೋ ತಂಡಗಳಿಗೋ ಹೆಚ್ಚಿನ ಪ್ರೋತ್ಸಾಹಾನುಗ್ರಹಗಳು ದೊರಿತು ಗೊಂದಲ ಗಲಿಬಿಲಿಗಳು ಹೆಚ್ಚಾಗುವ ಸಂಭವವಿದೆ. ಅದ್ದರಿಂದ ಕಾಂಗ್ರೆಸ್ ಕೆಲಸಕ್ಕೆ ಹಾನಿ ತಟ್ಟಲಿಕ್ಕಿದೆ. ನಾನು ಹಲವು ವರ್ಷಗಳಿಂದ ಕಾಂಗ್ರೆಸ್ಸಿ ಅತ್ಯುಚ್ಚ ಅಧಿಕಾರ ಕ್ಷೇತ್ರದಲ್ಲಿ ಕಾರ್ಯಕಾರೀ ಸಕ್ರಿಟರಿ ಸ್ಥಾನದಲ್ಲಿಯೂ ಅಧ್ಯಕ್ಷತನದಲ್ಲಿಯೂ ಇದ್ದು ಅದರ ಕಾರ್ಯಕಲಾಪಗಳ ನಿಕಟ ಪರಿಚಯವುಳ್ಳವನಾಗಿದ್ದೇನೆ. ಈಗ ನಮ್ಮ ಸಂಸ್ಥೆಯ ಹೃದಯದಲ್ಲೇ ನವ ಕಾರ್ಯಕ್ರಮಗಳು ಪ್ರವೇಶಿಸುವುದನ್ನೂ ಅವುಗಳಿಂದ ಸ್ಥಳೀಯ ಕಲಹಗಳು ಪ್ರಾಪ್ತವಾಗಿ ಮೇಲಿನ ಅಂತಸ್ತುಗಳಿಗೂ ಹರಡುವುದೇ ಪರಿಣಾಮವಾಗುವುದನ್ನೂ ಕಂಡು ನನಗೆ ಖೇದವಾಗಿದೆ. ನಾನು ಅಧಿಕಾರ ಕ್ಷೇತ್ರದಲ್ಲಿದ್ದಾಗಲೇ ಅದನ್ನು ಬಿಟ್ಟುಕೊಟ್ಟು ಆ ಹೊಣೆತನದಿಂದ ವಿರಹಿತನಾಗಿದ್ದರೆ ಕಾಂಗ್ರೆಸ್ಸಿನ ಸೇವೆಯನ್ನು ಮತ್ತೂ ಚೆನ್ನಾಗಿ ಮಾಡಬಹುದೆಂದು ನನಗೆ ತೋರಿ ಎಷ್ಟೋ ಸಲ ರಾಜಿನಾಮೆ ಕೊಡುವುದರಲ್ಲಿದ್ದೆ. ಆದರೆ ನಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಮೂಲೆಗೊತ್ತಿಟ್ಟು ಒಂದುತನದ ಪ್ರಬಲ ಮುಂಭಾಗವನ್ನು ತೋರುವುದು ಇಂದಿನ ಸಂದಿಗ್ಧ ಕಾಲದಲ್ಲಿ ಅವಶ್ಯವೆಂದು ನಾನು ಮನಗಂಡು ಹಾಗೆ ಮಾಡಲಿಲ್ಲ

ನಾನು ಸಮಾಜವಾದದಲ್ಲಿ ಪರಿಪೂರ್ಣ ನಂಬುಗೆಯಿದ್ದು ಅದನ್ನು ಮನಗಂಡ ಸಮತಾವಾದಿ, (ಸೋಶಿಯಲಿಸ್ಟ್) ಪ್ರಜಾಪ್ರಭುತ್ವ ತತ್ವಾನುಯಾಯಿ. ಆದರೂ ಗಾಂಧಿಜಿಗಳು ಇಪ್ಪತ್ತು ವರುಷಗಳಿಂದ ಯಶಸ್ವಿಯಾಗಿ ಪ್ರಯೋಗಿಸಿದ ಅಹಿಂಸಾತತ್ವದ ಶಾಂತಿಪರ ಸೂತ್ರಗಳನ್ನು ಹೃತ್ಪೂರ್ವಕವಾಗಿ ಅಂಗೀಕರಿಸಿದವನು. ನಮ್ಮ ಬಲವು ಜನಕೋಟಿಯಿಂದಲೇ ಬರಬೇಕಾಗಿದೆ. ನವಭಾರತ ರಚನೆಯ ವಿಧಾಯಕ ಕಾರ್ಯಕಲಾಪಗಳಲ್ಲಾಗಲೀ ಹೋರಾಟದಲ್ಲಾಗಲೀ, ಆ ಬಲವು ಶಿಸ್ತಿನಿಂದಲೂ ಕ್ರಮ ಪ್ರಾಪ್ತವಾಗಿಯೇ ನೆಲೆನಿಲ್ಲಬೇಕಾಗಿದೆ,

ನಮ್ಮ ಕಲ್ಪನೆಯಲ್ಲಿರುವ ಭಾವೀ ಭಾರತ ನಿರ್ಮಾಣಕ್ಕೆ ಬೇಕಾದ ರೂಪಾಕಾರಗಳು ಪ್ರಳಯ ಪರಿಸ್ಥಿತಿಯಿಂದ ಉದ್ಭವಿಸಲಾರವು; ಅಂತಹ ವಿಪ್ಲವಕಾರಕ ಶಕ್ತಿಗಳ ಪ್ರೋತ್ಸಾಹನೆಯಿಂದಲೂ ಬಾರವು. ವಿಧಿಯಿದ್ದಂತಾಗಲೆಂದು ಪ್ರಳಯಕಾರಕ ಕಾರ್ಯಕ್ರಮಕ್ಕೆ ಧುಮುಕಿ ಪಡೆಯುವ ಫಲದ ಹಿಂದೆಯೇ ಸಂಕಷ್ಟ, ಅವನತಿ, ಅಂತಃಕಲಹ, ಪರಿಸ್ಥಿತಿಯ ಪ್ರತಿಕ್ರಿಯೆ ಮುಂತಾದ ಅನರ್ಥ ಪರಂಪರೆಗಳು ಬರುವವು ಬಲವನ್ನು ಸದುಪಯೋಗಗೊಳಿಸುವ ರೀತಿನೀತಿಗಳು ನಮಗೆ ಗೊತ್ತಿರುವುದಾದರೆ ಸ್ವಾತಂತ್ರ್ಯದ ಗುರಿಗೆ ಶಿಸ್ತಿನಿಂದಲೂ ಕ್ರಮಪ್ರಾಪ್ತವಾದ ಸಸೂತ್ರತೆಯಿಂದಲೂ ನಾವು ಮುನ್ನಡೆಯಲು ತಿಳಿದಿರುವುದಾದರೆ ನಮಗಿಂದು ತುಂಬ ಬಲವಿದೆ. ವಿಧಿಪ್ರವಾಹದಲ್ಲಿ ಬಳಿದು ಹೋಗುವ ನಿರ್ಬಲರಾಗಿಲ್ಲ ನಾವು ಆದುದರಿಂದ ಆ ರೀತಿಯಲ್ಲಿ ನಾವೇಕೆ ವರ್ತಿಸಬೇಕು?

ನಾನು ಸುಭಾಸಚಂದ್ರ ಭೋಸರೊಡನೆ ಆ 'ಎಡ, ಬಲ'ಗಳ ಅರ್ಥ ಸ್ಪಷ್ಟಮಾಡಬೇಕೆಂದು ಸೂಚಿಸಿದಾಗಲೇ ಅವರ ಚುನಾವಣೆಯ. ಪೂರ್ವದಲ್ಲಿ ವರ್ಕಿಂಗ್ ಕಮಿಟಿಯವರ ಮೇಲೆ ಅವರು ಮಾಡಿದ ಆರೋಪಣೆಗಳು ನನಗೆ ಪರಮಾಶ್ಚರ್ಯವನ್ನೂ ಖೇದವನ್ನೂ ಉಂಟುಮಾಡಿವೆ ಎಂದಿದ್ದೆ. ಅಂತಹ ಆರೋಪಣೆಗಳು ನಿರಾಧಾರವಾದುವೆಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ಆ ಆರೋಪಣೆಗಳಲ್ಲೇನಾದರೂ ಸತ್ಯವಿದ್ದರೆ ಅಂತಹ ಕೆಲಸಗಳನ್ನು ಮಾಡಿದ ಆ ಅಪರಾಧಿಗಳಾಗಲೀ ಅವನ್ನು ಪ್ರತಿಭಟಿಸದೆ ತಾಟಸ್ಥ್ಯದಿಂದ ಅಪ್ರತ್ಯಕ್ಷವಾಗಿ ಸಹಾಯಸ್ಥದವರಾಗಲೀ ಕಾಂಗ್ರೆಸನ್ನು ಮುನ್ನಡೆಯಿಸಲು ಅಯೋಗ್ಯರೆಂದಾಯಿತು, ಆ ಆರೋಪಣೆ ಹೇಳಿಕೆಗಳಲ್ಲಿ ಸತ್ಯವಿಲ್ಲವೆಂದಾದರೆ ಅವನ್ನು ಯಾವುದೊಂದೂ 'ರ'ಗಳಿಲ್ಲದೆ ಭೋಸರು ಹಿಂತೆಗೆಯುವುದು ನ್ಯಾಯ. ಇವೆರಡರಲ್ಲೊಂದಾಗದೆ ನಡು ಪಂಚಾಯಿತಿಕೆಯಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದ್ದೆ. ಕಾಂಗ್ರೆಸಿನ ಕೇಂದ್ರ ವಲಯದಲ್ಲೇ ಪರಸ್ಪರ ಸಂಶಯ ಅವಿಶ್ವಾಸಗಳಿಂದೊಡಗೂಡಿದ ಮಂಡಳಿಯು ಕಾರ್ಯನಿರ್ವಹಿಸುವುದು ಕೇವಲ ಅಯೋಗ್ಯವೆಂದೂ ಆದುದರಿಂದ ಈ ವಿಷಯವನ್ನು ಭೋಸರು ವಿಚಾರಿಸುವುದು ಆದ್ಯಕರ್ತವ್ಯವಿದೆಯೆಂದೂ ಸೂಚಿಸಿದ್ದೆ. ಆದರೆ ಈ ವಿಷಯದಲ್ಲಿ ಯಾವ ಉಜ್ಜುಗವೂ ಈ ವರೆಗೆ ಇಟ್ಟುದು ಕಾಣಬರಲಿಲ್ಲ

ನಾನು ವರ್ಕಿಂಗ್ ಕಮಿಟಿಯಲ್ಲಿರಬಾರದೆಂದು ಹಿಂದೆ ಎಷ್ಟೋ ಸಲ ನನಗೆ ತೋರಿತ್ತು. ಈಗಿನ ವಿದ್ಯಮಾನಗಳಲ್ಲಂತೂ ಹಾಗಾಗುವುದು ಲೇಸೆಂದು ನಾನು ಬಗೆಗಂಡಿದ್ದೇನೆ. ಏಕೆಂದರೆ ಕಾಂಗ್ರೆಸ್ಸಿನ ಬೆಂಬಲವಾಗಿ ಹಿನ್ನೆಲೆಯಲ್ಲಿರುವ ಈ ಉಚ್ಚಸ್ಥಾನದ ಹೊಣೆಗಾರಿಕೆಯನ್ನು ಇಂದಿನ ವಾತಾವರಣದಲ್ಲಿ ನಾನು ಅಂಗೀಕರಿಸಲಾರೆನೆಂದು ನನಗನ್ನಿಸುತ್ತದೆ. ಕಾಂಗ್ರೆಸ್ಸಿನ ಅಧ್ಯಕ್ಷರು ತನ್ನ ಘೋಷಣೆಯನ್ನು ಅನುಸರಿಸುವಲ್ಲಿ ತಡೆಮಾಡಬಾರದೆಂದೂ ಅವರ ಧೋರಣೆಯನ್ನು ವಿಶ್ವಾಸವುಳ್ಳವರೊಳಗಿಂದಲೇ ತನ್ನ ಕಾರ್ಯಕಾರೀ ಮಂಡಲಕ್ಕೆ ಚುನಾಯಿಸಿಕೊಳ್ಳಲು ಅವರಿಗೆ ನಿರಾತಂಕವಾದ ಹಾದಿಯಿರಬೇಕೆಂದೂ ಇತರರು ಅಭಿಪ್ರಾಯ ಪಟ್ಟುದಕ್ಕೆ ನನ್ನದೂ ಸಮ್ಮತಿಯಿದೆ.

ಅರ್ಥ ಸ್ಪಷ್ಟವಿಲ್ಲದ ಕುಂಡು ಮಾತುಗಳನ್ನೂ ಚರ್ವಿತಚರ್ವಣವಾದ ಶಬ್ದಗಳನ್ನೂ ಸಾಕಷ್ಟು ಕೇಳಿದ್ದೇವೆ. ಇಂದಿನ ಪರಿಸ್ಥಿತಿಯಿಂದ ನಾವು ಪಾಠಕಲಿಯುವ ವಿವೇಕವು ನಮಗಿದ್ದರೆ ಭವಿಷ್ಯದ ವಿಷಯವಾಗಿ ನಾವೇನೂ ಕಾತರಗೊಳ್ಳಬೇಕಾಗಿಲ್ಲ ಮುಂಗಾಣದ ಬಿಕ್ಕಟ್ಟಿನ ಅವಾಂತರವೇನಾದರೂ ಬಂದೊದಗಿದರೆ ಅದನ್ನು ಬಿಡಿಸಿ ಮುಂದಾಗಲು ಹಿಂದಿನಂತೆ ಮುಂದೆಯೂ ಒಂದುತನದಿಂದ ತಲೆಗೊಡಲು ನಾವೆಲ್ಲ ಸಿದ್ಧರಾಗಿರತಕ್ಕದು.

12 = 24

ಒಂದಕ್ಕೆರಡು ಸ್ವಾಮಿ!

(೧) ಸ್ವತಂತ್ರ ಜೀವನೋಪಾಯ ೦-೨-೬ (೨) ಬಾಲವಾಙ್ಮಯ ೦-೩-೦ (೩) ನಾಡಕತೆ ೦-೨-೦ (೪) ಮುಂದಿನ ದೇವರು ೦-೨-೦ (೫) ಮುಗುಳು ೦-೨-೬ (೬) ಈ 0-12-0ಯ ೫ ಪುಸ್ತಕಗಳನ್ನು ತರಿಸುವವರಿಗೆ 'ಕಾವ್ಯಸಾಮ್ರಾಜ್ಯ' ಎಂಬ ಅತ್ಯುತ್ತಮವಾದ 0-12-0 ಬೆಲೆಯ ಪುಸ್ತಕವನ್ನು ಉಚಿತವಾಗಿ ಕೊಡಲಾಗುವುದು. ಅಂಚೆವೆಚ್ಚ 0-4-0 ಪ್ರತ್ಯೇಕ. ಕೂಡಲೇ ರೂ. 1 ರೂಪಾಯಿ ಸ್ಟಾಂಪು ಕಳಿಸಿರಿ. ಒಂದಕ್ಕೆರಡು ಲಾಭ ಪಡೆಯಿರಿ.

ನವಭಾರತ ಪುಸ್ತಕ ಭಂಡಾರ

ಉಡುಪಿ

ಕೇವಲ ಪ್ರಕಟಿ

ತ್ವರೆ ಮಾಡಿರಿ! ತ್ವರೆ ಮಾಡಿರಿ !!

'ಸನ್ಯಾಸಿಯ ಸೋಗಿನಲ್ಲಿ' ಎಂಬ ೦-೮-೦ ಕ್ರಯದ ಅತ್ಯುತ್ತಮ ಕಾದಂಬರಿ ಪುಸ್ತಕವನ್ನು ತರಿಸುವವರಿಗೆ 'ಪುರುಷವಧು' ಮತ್ತು 'ಹೆಂಡ್ತಿಗಂಡನಾದರೆ' ಎಂಬ ನಾಲ್ಕುನಾಲ್ಕು ಆಣೆಗಳ ಎರಡು ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡಲಾಗುವುದು. ಅಂಚೆವೆಚ್ಚ ಎರಡಾಣೆ ಪ್ರತ್ಯೇಕ. ಕೂಡಲೇ ೦-೧೦-೦ ಸ್ಟಾಂಪು ಕಳಿಸಿ ಈ ೩ ಪುಸ್ತಕಗಳನ್ನು ಪಡೆಯಿರಿ.

ವಿ. ಸೂ —ಇದೇ ಕೂಪನಿನಲ್ಲಿ ಹೆಸರು ಬರೆದು ಕಳುಹಿಸುವವರಿಗೆ ಅಂಚೆವೆಚ್ಚ ಮಾಫತ್ತು.

ಹೆಸರು ....

ವಿಳಾಸ..

....

ಪೋಸ್ಟ್. ....

ನವಭಾರತ ಪುಸ್ತಕ ಭಂಡಾರ,

ಉಡುಪಿ.

ರಾಮರಾಜ ಕ್ಷತ್ರಿಯರಲ್ಲಿ ವಿನಂತಿ— ಜಾತಿ ಭಾಂದವರೇ ನಮ್ಮ ದಕ್ಷಿಣ, ಕನ್ನಡ ಜಿಲ್ಲೆಯಲ್ಲಿ ಶ್ರೀ ಲಕ್ಷ್ಮಣಾನಂದ ಸ್ವಾಮಿಜಿಯವರ ಆಶ್ರಯದಲ್ಲಿ ಇತ್ತೀಚೆಗೆ ರಾಮರಾಜ ಸೇವಾಸಂಘವೆಂಬ ಒಂದು ಸಂಸ್ಥೆಯು ಸ್ಥಾಪಿತವಾದ ಸಂಗತಿಯು ನಿಮಗೆಲ್ಲರಿಗೂ ತಿಳಿಯದ ವಿಷಯವಲ್ಲ, ಆದರೆ ಸದ್ರಿ ಸಂಸ್ಥೆಗೆ ಜಾತಿ ಭಾಂಧವರಿಂದ ಈ ವರೆಗೆ ಹೆಚ್ಚಿನ ಪ್ರೋತ್ಸಾಹವು ದೊರಕದಿರುವುದು ಶೋಚನೀಯ ಸಂಗತಿಯಾಗಿದೆ.

ವೀರ ಯುವಕರೇ, ಇನ್ನಾದರೂ ಒಮ್ಮೆನಿಸ್ಸಿನಿಂದ ಎಚ್ಚೆತ್ತಿರಿ, ನಿಮ್ಮ ಕಣ್ಣೆದುರಿಗೆ ಬೇರೆ ಬೇರೆ ಸಂಘಗಳು ವ ಸಂಸ್ಥೆಗಳು ಪೂರ್ಣ ವ್ಯವಸ್ಥೆಯಿಂದ ಮುನ್ನಡೆದು ಮೇಲ್ಪಂಕ್ತಿಯನ್ನು ಹಾಕಿಕೊಡುತ್ತಿರಲು ನೀವು ಅದನ್ನಾದರೂ ಅನುಸರಿಸಿ ಸುಸಂಘಟಿತರಾಗಬೇಡವೇ! ಇನ್ನಾದರೂ ನಮ್ಮೊಳಗಿನ ಅಂತಃಕಲಹಗಳನ್ನು ನೀಗಿ ಜಾತಿಯ ಪರವಾಗಿ ಒಂದಾಗಿ ತನುಮನಗಳಿಂದ ನೆರವಾಗಿ ನಮ್ಮ ಜಾತಿಯ ಒಂದೇ ಒಂದಾದ ಈ ಸಂಘವನ್ನು ಮೇಲ್ ಮೆಟ್ಟಿಲಿಗೇರುವಂತೆ ಮಾಡುವ. ನಿಮ್ಮ ಒಗ್ಗಟ್ಟೆಂಬ ಬುನಾದಿ ಕಲ್ಲಿನಿಂದ ನಮ್ಮ ಸಂಘವೆಂಬ ಕೋಟೆಯು ಭದ್ರವಾಗಿ ನಿಲ್ಲುವಂತೆ ಮಾಡಿ ಪ್ರತಿಯೊಬ್ಬ ಜಾತಿ ಗೃಹಸ್ಥನೂ ಸಂಘದ ಮೆಂಬರನಾಗಿ ಸೇರಿ ಸಂಘದ ಅಭಿವೃದ್ಧಿ ವ ಏಳಿಗೆಯನ್ನು ಬಯಸಿರಿ. ಸದ್ಯದಲ್ಲೇ ಈ ಸಂಘವು ಪರಿಷತ್ತೊಂದನ್ನು ಕರೆಯಲಿರುವುದು. ಆ ಸಮಯ ನೀವೆಲ್ಲರೂ ಸರ್ವ ವಿಧದಿಂದಲೂ ಪ್ರೋತ್ಸಾಹವನ್ನು ಕೊಟ್ಟು ಸಮಾರಂಭವು ಯಶಸ್ವಿಯಾಗಿ ಜರಗುವಂತೆ ಸಹಕಾರವನ್ನಿತ್ತು ಜಾತಿಯ ಏಳಿಗೆಯನ್ನು ಬಯಸಬೇಕಾಗಿ ಕೇಳಿಕೊಳ್ಳುವ

ತಮ್ಮೆಲ್ಲರ ವಿಧೇಯ ಸೇವಕ,

ರಾಮರಾಜ ಕ್ಷತ್ರಿಯ ಉದಸೇವಾಸಂಘದ ಮೆಂಬರರಲ್ಲೊಬ್ಬ

ಬಿ. ಶಿವರಾಮಯ್ಯ

ಕಾಸ್ರಗೋಡು

ಕೆಂಜೂರು:—ಇಲ್ಲಿಯ ವೀರೇಶ್ವರ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಉಪಾಧ್ಯಾಯರಾಗಿದ್ದು ಶಾಲಾ ವಿದ್ಯಾರ್ಥಿಗಳ ಹಾಗೂ ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗಿದ್ದು ದೇಶಸೇವಕರಂತೆ ಕೆಲಸಮಾಡುತ್ತಿದ್ದ ರಾ| ಹೊಸೂರು ಶಿವರಾಮ ಭಟ್ಟರು 5 ದಿವ್ಸಗಳಿಂದೀಚೆ ಕಾಹಿಲೆಯಲ್ಲಿದ್ದು ತಾ. 22-2-'39ರಲ್ಲಿ ದೈವಾಧೀನರಾದರೆನ್ನಲು ವಿಷಾದವಾಗುತ್ತದೆ. ಮೃತರು ಶಾಲೆಯ ಅಭಿವೃದ್ಧಿಗೆ ಸಹಾಯಕರಾಗಿದ್ದು ಜನಪ್ರೀತರಾಗಿದ್ದರು.

NOTICE

Sri V. R. Udiavar Central Studio, Coimbatore is hereby authorised to enlist subscribers & canvas Advt. to Navayuga in Coimbatore & Madras.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

'ಗೊನೊಕಿಲರ್' (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಶನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ, ಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ್' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

'Sole Manufacturer **DR. D. N. JASANI**, Vitalbhai Patel Road, BOMBAY 4

ಗೌಡಸಾರಸ್ವತ ಬ್ರಾಹ್ಮಣ ಮಠಾಧಿಪತಿಗಳಿಗೆ ಉಡುಪಿಯಲ್ಲಿ ಸಂಭ್ರಮದ ಸ್ವಾಗತ

ಶ್ರೀ ಕಾಶೀ, ಗೋಕರ್ಣ ಮತ್ತು ಉಡುಪಿ ಸ್ವಾಮಿಗಳವರ ಐಕ್ಯಪೂರ್ವ ಸಮ್ಮಿಲನ.

ಕಳೆದ ತಾ. 18ನೇ ಶನಿವಾರ ರಾತ್ರಿ ಗೌಡ ಸಾರಸ್ವತ ಬ್ರಾಹ್ಮಣ ಮಠಾಧಿಪತಿ ಶ್ರೀ ಕಾಶೀಮಠದ ಶ್ರೀ ಸುಕೃತೀಂದ್ರ ತೀರ್ಥರೂ, ಶ್ರೀ ಗೋಕರ್ಣಮಠದ ಶ್ರೀ ಇಂದಿರಾಕಾಂತ ತೀರ್ಥರು ಮತ್ತು ಕಮಲಾನಾಥ ತೀರ್ಥರೂ ಪರಿವಾರ ಸಮೇತ ಉಡುಪಿಗೆ ಚಿತ್ತೈಸಿದರು. ಪರ್ಯಾಯ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರ ಕಡೆಯಿಂದ ಕಳುಹಲಾಗಿದ್ದ ಮಠದ ಬಿರುದಾವಳಿಗಳಿಂದ ಶೃಂಗರಿಸಲ್ಪಟ್ಟು ಕಡಿಯಾಳಿಯಿಂದ ಕಲ್ಸಂಕ ಬಡಗಪೇಟೆ ಮಾರ್ಗವಾಗಿ ರಥಬೀದಿಗೆ ಮೆರವಣಿಗೆಯಿಂದ ಬಂದರು. ದಾರಿಯುದ್ದಕ್ಕೂ ಶಿಷ್ಯವೃಂದದವರು ಗುರುಗಳವರಿಗೆ ಮಂಗಳಾರತಿಯನ್ನು ಬೆಳಗಿಸಿ ಆಶೀರ್ವಚನರೂಪ ಮಂತ್ರಾಕ್ಷತೆಯನ್ನು ಪಡೆಯುತ್ತಿದ್ದರು. ಸಂಸ್ಥಾನಾಧಿಪತಿಗಳ ಆಗಮನದ ಮಾಹಿತಿಯಿಂದ ಪರ್ಯಾಯ ಶ್ರೀ ಫಲಿಮಾರು, ಶ್ರೀ ಸೋದೆ, ಶ್ರೀ ಅದಮಾರು ಸ್ವಾಮಿಗಳವರು ಬಾಹ್ಯ ಅತಿಥಿಗಳನ್ನು ಆದರ ಆತಿಥ್ಯದಿಂದ ಶ್ರೀಕೃಷ್ಣ ಸನ್ನಿಧಾನಕ್ಕೆ ಬರಮಾಡಿಕೊಂಡರು. ಶ್ರೀ ಕೃಷ್ಣನ ದರ್ಶನವಾದ ಬಳಿಕ ಚಂದ್ರಶಾಲೆಯಲ್ಲಿ ಮೂವರು ಸ್ವಾಮಿಗಳವರಿಗೂ ಪರ್ಯಾಯ ಮಠದ ಕಡೆಯಿಂದ ಪುಷ್ಪಮಾಲಿಕೆ ಮಂಗಳಾರತಿಗಳಾದುವು. ಪರ್ಯಾಯ ಶ್ರೀಗಳವರು ವಾದ್ಯಘೋಷಗಳಿಂದ ವಸಂತಮಹಲಿನ ಸಭಾಮಂಟಪಕ್ಕೆ ಬಂದರು. ಸ್ತ್ರೀ ಪುರುಷರು ಬಹುಸಂಖ್ಯೆಯಲ್ಲಿ ಸೇರಿದ್ದು ಈ ಸುಸಂಘಟನೆಯನ್ನು ಕಣ್ಣಾರೆ ಕಂಡು ಆನಂದಪಡುವರೆ ಒಟ್ಟುಗೂಡಿದ್ದರು. ಗೋಕರ್ಣ ಮತ್ತು ಕಾಶೀ ಮಠಾಧಿಪತಿಗಳ ಪೂರ್ವ ಪರಿಚಯವನ್ನು ಶ್ರೀಯುತ ಅಮ್ಮೆಂಬಳ ಶ್ರೀನಿವಾಸಪೈಗಳವರು ಮಹಾಜನರಿಗೆ ತಿಳಿಯಪಡಿಸಿ ಮಧ್ವ ಮತಾನುಯಾಯಿಗಳ ಐಕ್ಯ ಸಾಧನೆಗೆ ಇಂತಹ ಸಮಾಗಮ ಸಮ್ಮಿಲನಗಳು ಆವಶ್ಯಕವೆಂದರು. ಪರ್ಯಾಯ ಮಠದ ಕಡೆಯಿಂದ ಪಂಡಿತ ವೆಂಕಟ್ರಮಣಾಚಾರ್ಯರು ಕಾಲೋಚಿತ ಮಾತುಗಳನ್ನಾಡಿದರು. ತದನಂತರ ಜಯಘೋಷಗಳಿಂದ ಮಠಾಧಿಪತಿಗಳು ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಮೆರವಣಿಗೆಯಿಂದ ಚಿತ್ತೈಸಿದರು. ಮಂಗಳೂರು ಸಾಹುಕಾರ ಶ್ರೀ ವಿಟ್ಠಲ ಶೆಣೈ ರಾಯರ ಸೇವೆಯಾಗಿ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಕೊಟ್ಟ ವಿದ್ಯುದ್ದೀಪಗಳು ಶ್ರೀಪಾದಂಗಳವರಿಂದ ಬೆಳಗಿಸಲಾದುವು. ಶ್ರೀಕೃಷ್ಣನಿಗೆ ಬ್ರಹ್ಮರಥೋತ್ಸವ ಸೇವೆಯನ್ನಿತ್ತು ಶಿಷ್ಯವೃಂದಕ್ಕೆ ಮುದ್ರಾಧಾರಣವನ್ನು ಮಾಡಿ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಿ ಉದ್ಯಾವರ, ಕಟ್ಪಾಡಿ ಮಾರ್ಗವಾಗಿ ಮುಲ್ಕಿಗೆ ದಯಮಾಡಿಸಿದರು. ಉದ್ಯಾವರದಲ್ಲಿ ಹಾದು ಹೋಗುವಾಗ ಶ್ರೀ ಯು. ಸದಿಯ ನವರ ಮನೆಗೆ ಕಾಶೀ ಗೋಕರ್ಣ ಮಠಾಧೀಶರು ಚಿತ್ತೈಸಿ ಭಕ್ತರಿಂದ ಪಾದಪೂಜೆಯನ್ನು ಪಡೆದು ಆಶೀರ್ವದಿಸಿದರೆಂದು ತಿಳಿದುಬರುತ್ತದೆ.

ಅರ್ಧ ಶತಮಾನಕ್ಕಿಂತಲೂ ಹೆಚ್ಚು ವರ್ಷಗಳಿಂದ ಶ್ರೀ ಗೋಕರ್ಣ ಮತ್ತು ಕಾಶೀ ಸ್ವಾಮಿಗಳವರೊಳಗೆ ಪರಸ್ಪರ ವೈಷಮ್ಯವಿತ್ತೆಂಬುದೂ ಸ್ವಜಾತಿ ಮುಖಂಡರ ಸಾಹಸ ಚಾತುರ್ಯಗಳಿಂದ ಅದು ಅಳಿದು ಹೋಗಿ ಈಗ ಎರಡೂ ಮಠಗಳ ಶ್ರೀಗಳವರು ಭಿನ್ನಭಾವವನ್ನು ತೊರೆದು ಒಕ್ಕಟ್ಟಾಗಿ ಪರಸ್ಪರ ಸೌಹಾರ್ದ, ಸ್ನೇಹಭಾವವುಳ್ಳವರಾಗಿರುವರೆಂದೂ ತಿಳಿಯಲು ಸಂತೋಷವಾಗುತ್ತದೆ. ಹಾಗೆಯೇ ಉಡುಪಿಯ ಮತ್ತು ಕಾಶೀ ಗೋಕರ್ಣ ಸ್ವಾಮಿಗಳ ಪರಸ್ಪರ ಸಂಪರ್ಕವು, ವಿಚಾರ ವಿನಿಮಯಗಳಿಗೆ ಆಸ್ಪದದೊರೆಯುವಂತಾದುದೂ ಶುಭ ಚಿಹ್ನೆಯಾಗಿದೆ. ನಾಡಿನ ಹಿತದೃಷ್ಟಿಯಿಂದ ಇಂತಹ ಪರಸ್ಪರ ಸಮ್ಮಿಲನವು ಸಹಜವಾಗಿಯೂ ಶ್ರೇಯಸ್ಕರವಾಗಿದೆ.

ಚಿತ್ತೈಸಿದರು ಕಳೆದ 11 ರವಿವಾರ ಶ್ರೀ ಕೃಷ್ಣ ಸನ್ನಿಧಾನದಲ್ಲಿ ಬ್ರಹ್ಮರಥೋತ್ಸವ ಸೇವೆಯನ್ನು ಅರ್ಪಿಸಿದರು. ಶ್ರೀ ಕಾಶೀ ಮಠದ ಮತ್ತು ಶ್ರೀ ಗೋಕರ್ಣ ಮಠದ ಸ್ವಾಮಿಗಳವರು ಸಹ ಉಡುಪಿಗೆ ಬಂದಲ್ಲಿ ಬ್ರಹ್ಮರಥೋತ್ಸವ ಸೇವೆಯನ್ನು ನೀಡಿದರು.

ರಾವ್ ಬಹದೂರ್ ಗಿರಿಯಪ್ಪನವರಿಗೆ ಸತ್ಕಾರ— ಕೋಆಪರೇಟಿವ ಸೊಸೈಟಿಗಳ ರಿಜಿಸ್ಟ್ರಾರರಾದ ರಾವ್ ಬಹದೂರ್ ಗಿರಿಯಪ್ಪನವರಿಗೆ ಕಳೆದ ತಾ 19 ರಲ್ಲಿ ಉಡುಪಿ ಕೋಆಪರೇಟಿವ್ ಯೂನಿಯನ್ನಿನ ಕಡೆಯಿಂದ ಟೀಪಾರ್ಟಿ ಸತ್ಕಾರ ನಡೆಯಿತು.

ಭವನದಲ್ಲಿ ಉಪಹಾರ ನಡೆಯಿತು. ಬಳಿಕ ಶ್ರೀ. ನರಸಿಂಹ ಪೈಗಳು ಮಾನಪತ್ರವನ್ನು ಒಪ್ಪಿಸಿದರು. ದಿವಾನರು ಅದಕ್ಕುತ್ತರ ಕೊಡುತ್ತ ಕೊಟ್ಟೀಕಾರ ಬಂಧುಗಳ ಕರ್ತೃತ್ವ ಶಕ್ತಿ, ವ್ಯವಹಾರ ಜಾಣ್ಮೆ ವಾಣಿಜ್ಯ ನೈಪುಣ್ಯಾದಿಗಳನ್ನು ಶ್ಲಾಘಿಸಿ ಮಾತಾಡಿದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಶ್ರೀಕೃಷ್ಣ ಮಠದಲ್ಲಿ ದಿವಾನರಿಗೆ ಪೂರ್ಣ ಸ್ವಾಗತ— ಕೊಟ್ಟೀಕಾರ್ ಬ್ರದರ್ಸರಲ್ಲಿಂದ ದಿವಾನರು ವರದ ಆನೆ ಮೊದಲಾದ ಸಕಲ ಬಿರುದಾವಳಿಗಳಿಂದ ಮೆರವಣಿಗೆಯಾಗಿ ರಥಬೀದಿಗೆ ಬಂದರು. ಸುಂದರವಾಗಿ ಶೃಂಗರಿಸಲ್ಪಟ್ಟ ವಸಂತ ಮಹಲಿನಲ್ಲಿ ಸಮ್ಮಾನ್ಯ ವ್ಯವಸ್ಥೆಯಾಗಿತ್ತು. ಪರ್ಯಾಯದಂತೆಯೇ ಜನರು ಕಿಕ್ಕಿರಿದು ನೆರೆದಿದ್ದರು. ಪರ್ಯಾಯ ಫಲಿಮಾರು ಸ್ವಾಮಿಗಳು, ಸೋದೆ, ಮತ್ತು ಅದಮಾರು ಸ್ವಾಮಿಗಳು, ಅತಿಥಿಗಳಾಗಿ ಬಂದಿದ್ದ ಕಾಶೀ ಮತ್ತು ಗೋಕರ್ಣ ಶ್ರೀಗಳವರೊಂದಿಗೆ ವಸಂತ ಮಹಲಿಗೆ ಚಿತ್ತೈಸಿ ವೇದಿಕೆಯನ್ನೇರಿದರು. ಆಗ ದಿವಾನರು ಪರಿವಾರದೊಂದಿಗೆ ಬಂದು ಶ್ರೀಗಳವರೆಲ್ಲರಿಗೆ ವಂದನೆಯನ್ನರ್ಪಿಸಿದರು. ಶ್ರೀಗಳವರು ದಿವಾನರಿಗೆ ಹೂಮಾಲೆ ಹಾಕಿ ಗೌರವಿಸಿದರು. ಸ್ವಾಮಿಗಳವರ ಪರಿಚಯವನ್ನು ಮಾಡಿಕೊಂಡು ಪರ್ಯಾಯ ... ಒಳಿತ ಸಭಾಕಾರ್ಯವು ನೆರವೇರಿತು. ಮಠದ ಕಡೆಯಿಂದ ಮಾನಪತ್ರವನ್ನರ್ಪಿಸಲಾಗಿ ಶ್ರೀ ಅಮ್ಮೆಂಬಳ ಶ್ರೀನಿವಾಸಪೈಗಳು ಉಡುಪಿ, ಕಾಶೀ, ಗೋಕರ್ಣ ಸ್ವಾಮಿಗಳವರ ಪರಸ್ಪರ ಸಮ್ಮಿಲನ ಮತ್ತು ಮೈಸೂರು ದಿವಾನರ ಆಗಮನ ಇವೆಲ್ಲವುಗಳಿಗಾಗಿ ಸಂತೋಷಸೂಚಿಸಿ ಇದು ಅಭೂತಪೂರ್ವ ಸಂಧಿಯೆಂದು ಭಾಷಣವಿತ್ತರು. ಪಂಡಿತ ಕೆ. ವೆಂಕಟ್ರಮಣಾಚಾರ್ಯರೂ ಉಡುಪಿ ಮತ್ತು ಮೈಸೂರು ಸಂಬಂಧ, ಉಡುಪಿಯ ಮುಖ್ಯವಾಗಿ ಮಠಗಳ, ದೇವಸ್ಥಾನದ ವೈಶಿಷ್ಟ್ಯಾದಿಗಳನ್ನು ವಿವರಿಸಿ ಮನೋಜ್ಞ ಉಪನ್ಯಾಸವಿತ್ತರು. ಶ್ರೀ. ಸಂಜೀವರಾಯರೂ ಸಂದರ್ಭೋಚಿತವಾಗಿ ಮಾತನಾಡಿದರು. ಬಳಿಕ ದಿವಾನರ ಭಾಷಣವನ್ನು ಡಾ|| ವಿಟ್ಠಲ ಶೆಟ್ಟರು ಎಲ್ಲರಿಗೂ ತಿಳಿವಂತೆ ಓದಿದರು. ದಿವಾನರು ಉಡುಪಿಯನ್ನೂ, ಉಡುಪಿ ಮಠಾಧಿಪತಿಗಳನ್ನೂ, ಉಡುಪಿ ಸ್ವಾಮಿಗಳನ್ನೂ ನೋಡುವ ಈ ಸಂಯೋಗದಲ್ಲೇ ಕಾಶೀ ಮತ್ತು ಗೋಕರ್ಣ ಸ್ವಾಮಿಗಳನ್ನು ನೋಡುವ ಸುವರ್ಣ ಸಂದರ್ಭ ದೊರಕಿದುದಕ್ಕಾಗಿ ಸಂತೋಷ ಸೂಚಿಸಿ ಮಾತನಾಡಿದರು. ಕಡೆಗೆ ಸಭಾಂತ್ಯವಾಯಿತು. ಆ ರಾತ್ರಿ ದಿವಾನರನ್ನು ಗೌರವಿಸುವ ಸಲುವಾಗಿ ಶ್ರೀಕೃಷ್ಣ ಮಠದಲ್ಲಿ ರಥೋತ್ಸವವು ವಿಜೃಂಭಣೆಯಿಂದ ಜರಗಿತು.

ಶ್ರೀ ಮೈಸೂರು ದಿವಾನರಿಗೆ ಮೆಸರ್ಸ್ ಕೊಟ್ಟೀಕಾರ್ ಬ್ರದರ್ಸರ ಸ್ವಾಗತ ಸತ್ಕಾರ.

ಮುನಿಸಿಪಲ್ ಸಭೆ— ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ಕಳೆದ ತಾ 21ರಲ್ಲಿ ಚೆಯರ್ಮನ್ ಶ್ರೀ ಚೇರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. 1938-39 ಮತ್ತು 1940ನೆ ವರುಷಗಳ ಬಜೆಟುಗಳನ್ನು ಪಾಸುಮಾಡುವುದೇ ಈ ಸಭೆಯ ಉದ್ದೇಶವಾಗಿತ್ತು. ಮುಂದಿನ ವರ್ಷಕ್ಕೆ ಪ್ರಾಥಮಿಕ ಶಾಲೆಗಳ ವಿಸ್ತೀರ್ಣ, ವೈಶಾಲ್ಯಕ್ಕೂ ಹೆಚ್ಚಿನ ಪಾಯಿಖಾನೆ, ಕಸಾಯಿಖಾನೆ, ಹೆಚ್ಚು ರಸ್ತೆಗಳಿಗೆ ಜಲ್ಲಿಹಾಕಿಸೋದು, ಹೊಸರಸ್ತೆ ಚಿಕ್ಕಟ್ಟಿನ ರಸ್ತೆಗಳನ್ನು ಅಗಲ ಮಾಡಿಸೋದು ಮೊದಲಾದ ಹಲವು ಕೆಲಸಗಳಿಗಾಗಿ ಹಣವನ್ನು ವಿನಿಯೋಗಿಸಲಾಗಿದೆ. ಕಳೆದ ವರ್ಷ ಮಾಡದ ಕೆಲವು ವಿಷಯಗಳೇ ಬಜೆಟ್ಟಿನ ವರ್ಷದಲ್ಲಿ ಪಾಸಾಯವಾಗಿವೆ.

ವಿಶಿಷ್ಟ ಉತ್ಸವಗಳು— ಮೈಸೂರು ವಾಣಿಜ್ಯ ಕಛೇರಿ ಮಾಲಕರಾದ ಶ್ರೀ. ಸೀತಾ

ಮೈಸೂರು ದಿವಾನರಿಗೆ ಕೊಟ್ಟೀಕಾರ ಬ್ರದರ್ಸರ ಸತ್ಕಾರ ಕೂಟ— 5 ಗಂಟೆಗೆ ಸಾರ್ವಜನಿಕ ಸಭೆಯಲ್ಲಿ ಮುನಿಸಿಪಲ್ ಮಾನಪತ್ರ ಸಮರ್ಪಣೆಯಾಗಿ, ದಿವಾನರ ಭಾಷಣವಾದ ಮೇಲೆ ದಿವಾನರು ಕೊಟ್ಟೀಕಾರ ಬ್ರದರ್ಸರಿಂದ ವಿಶಾಲವಾಗಿ ವ್ಯವಸ್ಥೆಗಳಿಂದ ಶೃಂಗಾರವಾದ ಬೀಚ್ ಬಿಲ್ಡಿಂಗಿಗೆ ಆಮಂತ್ರಿಸಲ್ಪಟ್ಟರು. ಅಲ್ಲಿ

ವರ್ಗಾವರ್ಗಿ— ಬಂಟವಾಳದ ಡೆಪ್ಯುಟಿ ತಹಸೀಲ್ದಾರರಾದ ಶ್ರೀ. ಎಚ್ ಸುಂದರ ರಾಯರಿಗೆ ಉಡುಪಿ ಸಬ್ ಮ್ಯಾಜಿಸ್ಟ್ರೇಟರಾಗಿಯೂ ಉಡುಪಿ ಸಬ್ ಮ್ಯಾಜಿಸ್ಟ್ರೇಟರಾದ ಶ್ರೀ. ಸಿ. ಎಸ್. ತಿಮ್ಮಪ್ಪ ನಾಯಕ ಬಿ. ಎ. ಯವರಿಗೆ ಕಾಸರಗೋಡು ಸಬ್ ಮ್ಯಾಜಿಸ್ಟ್ರೇಟರಾಗಿಯೂ ವರ್ಗವಾಗಿರುವುದು.

ಸ್ಥಾಪನೆ ಕ್ರೌನ ರಬ್ಬರ ಸ್ಟಾಂಪ ಕಂಪನಿ, 1926

18 ಬಲ್ಮಠ ರಸ್ತೆ, ಮಂಗಳೂರು.

ಸರಕಾರಿ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡುಗಳು, ಸೀಲುಗಳು ಮೊದಲಾದವುಗಳು ಸುಲಭ ದರಗಳಲ್ಲಿ ಮಾಡಿ ಕೊಡಲಾಗುವುದು.

CROWN RUBBER STAMP CO.,
Balmat Road, MANGALORE.
Included by the Mysore Govt Stores Purchase Committee in the list of approved Firms

ದಿ

ಟ್ರೋಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ನವಡೆಲ್ಲಿ.

ಪ್ರಗತಿಪರವಾದ
ರಾಷ್ಟ್ರೀಯ
ವಿಮಾ ಸಂಸ್ಥೆ

ಸುಭದ್ರವಾದ
ಉತ್ಕೃಷ್ಟ
ವಿಮಾ ವ್ಯವಹಾರ

ಚೆಯರ್ ಮೇನರು:—
ಶ್ರೀಮಾನ್ ಸುಭಾಸ ಚಂದ್ರ ಭೋಸರು
(ಅಖಿಲ ಭಾರತ ರಾಷ್ಟ್ರಸಭೆಯ ಅಧ್ಯಕ್ಷರು.)

ಸಂಸ್ಥಾಪಕ ಡೈರೆಕ್ಟರರು

ಪಂಡಿತ ಮೋತಿಲಾಲ ನೆಹರು — ಡಾಕ್ಟರ್ ಎಂ. ಎ. ಅನ್ಸಾರಿ
ಶ್ರೀಯುತ ಎಸ್. ಶ್ರೀನಿವಾಸ ಐಯಂಗಾರ್ — ಹಕೀಮ್ ಅಜ್ಮಲ್‌ಖಾನ್

ಕೆಲವು ವಿಶಿಷ್ಟ ಆಕರ್ಷಣೆಗಳು:

೧. ಪ್ರೀಮಿಯಮ್ ಕಂತುಪಾವತಿಗೆ ಸಂಪೂರ್ಣ ಅಶಕ್ತನೆಂದಾದಲ್ಲಿ ಆತನಿಗೆ ಕೊಡಲಾಗುವ ಸಹಾಯ ವಿಶೇಷ.
೨. ವಾರ್ಷಿಕ ಕಂತು ಪಾವತಿ ಮಾಡುವವರಿಗೆ ವಿಶೇಷ ರಿಯಾಯಿತಿ.
೩. ಅತಿ ಕಡಿಮೆ ವೆಚ್ಚದ ಆಡಳಿತ.
೪. ಏಜಂಟರಾಗಿ ಕೆಲಸ ಮಾಡುವವರಿಗೆ ಸಹಾನುಭೂತಿಪರ ಸೌಕರ್ಯಗಳು.

ವಿಮಾಕ್ಷೇತ್ರವು ದಿನೇದಿನೇ ವಿಸ್ತಾರವಾಗುತ್ತ ಬಂದುದರಿಂದ
ಮಾರ್ಚಿ ತಾ. ೧ರಿಂದ ಉಡುಪಿಯಲ್ಲಿ ಇದರ ಏಜನ್ಸಿ ಆಫೀಸೊಂದನ್ನು ತೆರೆಯಲಾಗಿದೆ.

ಏಜಂಟರಿಗೆ ಉದಾರ ಶರ್ತಗಳು! . . . . ಏಜಂಟರಿಲ್ಲದ್ದಲ್ಲಿ ಏಜಂಟರು ಬೇಕು!

ಏಜಂಟರಾಗಲಿಚ್ಛಿಸುವವರು ಈ ಕೆಳಗಿನವರಿಗೆ ಬರೆಯಬಹುದು. ಅಥವಾ ಮುಖತಃ ಬಂದು ಮಾತನಾಡಬಹುದು.

ಎಂ. ಸುಂದರರಾಮ ಶೆಟ್ಟಿ,
ಬ್ರಾಂಚ್ ಮೆನೇಜರ್,
ಹಂಪನಕಟ್ಟೆ—ಮಂಗಳೂರು.

ಅಥವಾ

ಕೆ. ಎಸ್. ರಾಮಮೂರ್ತಿ B.A.
ಬ್ರಾಂಚ್ ಸೆಕ್ರೆಟರಿ,
160 ಮೌಂಟ್‌ರೋಡ್ ಮದ್ರಾಸು.

ಅಥವಾ

ಕೆ. ಜಗನ್ನಾಥ ಶೆಟ್ಟಿ,
ಒರ್ಗನೈಜರ್ಸ್ ಆಫೀಸು,
ಚರ್ಚ್‌ರೋಡ್, ಉಡುಪಿ.

The Tropical Insurance Co., Ltd.,
NEW DELHI.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಮಾಲಿನ್ಯವನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು— ಶ್ರೀ. ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸ್ಥಿರಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja,	ಯಂ. ಆರ್. ಪೂಂಜ,
President & Manager,	ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟೆಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕಾಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯುತ್ಕೃಷ್ಟವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ 2-8-0.

ಕಸ್ತೂರಿಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. [illegible] 1—8—0.

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE**

ನವೀನ ಪುಸ್ತಕಗಳು

೧ **ಕೆರಿನೀರು**—ರಮ್ಯ ಜೀವನ ಕಾದಂಬರಿ ೪೦೦ ಪುಟ ಮುಂಪುಕಾಗದ ಬೆಲೆ ೨ ರೂಪಾಯಿ.
೨. **ಪನ್ನೆ**—ಐತಿಹಾಸಿಕ ನಾಟಕ ಪುಟ ೮೦ ಮುಂಪುಕಾಗದ ಬೆಲೆ ೬ ಆಣೆ.
೩. **ಬಲಿದಾನ**—ಬುದ್ಧಕಾಲೀನ ಐತಿಹಾಸಿಕ ಕಾದಂಬರಿ ೨೭೬ ಪುಟ ಬೆಲೆ ರೂ. ೧-೪-೦
೪. **ಎಚ್ಚಮ್ಮನಾಯಕ**—ವಿಜಯನಗರಕ್ಕೆ ಸಂಬಧಿಸಿದ ಕಥಾನಕವು ೧೦೪ ಪುಟ ಬೆಲೆ ೮ ಆಣೆ
೫. **ಅಮಾತ್ಯನಂದಿನಿ**—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ ೩೦೦ ಪುಟ ಬೆಲೆ ರೂ ೧-೮-೦.

ವಿಳಾಸ:—ಶ್ರೀ ಶೇಷಾಚಲ ಪ್ರೆಸ್, ಪ್ರೊ ಆನಂದವನ (ಹಾವೇರಿ) ಧಾರವಾಡ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	**ಭೈರವ ಮಾತ್ರೆಗಳು**
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್‌ಸೀನರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು [illegible] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ. [ಗ್ಯಾರಂಟಿ ಕೆಲಸ! ಮಿತ ದರ!]

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವುದು.
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿ.

ಪೈಂಟರ್ ಗಣಪತಿರಾವ್,

ಸೋದೆ ಮಠದ ಲೇನು — — — ಉಡುಪಿ, ದ. ಕ.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು

॥ ಶ್ರೀ ॥

ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ

ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ ! ಅಪೂರ್ವ ರಿಯಾಯತಿ !!

ತಾ.3-2-1939ರಿಂದ 5-3-'39ರ ವರೆಗೆ ಮಾತ್ರ.

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ **ರಿಟರ್ನ್ ಟಿಕೇಟು**ಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇದೇ ಬರುವ ತಾರೀಕು 17–2–39ರಲ್ಲು ಶ್ರೀಧರ್ಮಸ್ಥಳದಲ್ಲಿ ಶ್ರೀಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದು ಹೋಗತಕ್ಕ ಯಾವತ್ತು ಯಾತ್ರಾರ್ಥಿಗಳಿಗೆ ನಮ್ಮ ಲ್ಯಾನುಗಳ ಯಾವತ್ತು ಸ್ಟೇಶನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓% ರಿಯಾಯಿತಿಯಿಂದ ರಿಟರ್ನ ಟಿಕೇಟುಗಳನ್ನು ಕೊಡುವಂತೆ ಏರ್ಪಾಟು ಮಾಡಿರುವೆವು.

N. B. ಪ್ರಯಾಣವು ಮೇಲೆ ಸೂಚಿಸಿದ ವಾಯಿದೆಯೊಳಗೆ ಮುಗಿಯತಕ್ಕದಾಗಿದೆ

ಇಂತಹ ಅಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ.

JOINT MANAGERS.

The Joint Booking Office
KODIALBAIL, Mangalore

The Combined Booking Agency,
MANGALORE

Supply Agency Limited.

(BANKERS)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months	4%	p. a.
7 to 11 „	5%	„
12 to 18 „	6%	„

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

General Supplies Limited.

UDIPI

PROPRIETORS

Sri Bharata Vastu Mandira,
Thulunad Stationery Mart.
Manipal Power Press.
Thulunad Press,
Antaranga

APPRENTICES WILL BE ENTERTAINED TO WORK AT OUR

'Manipal Cottage Papers'

(The Process of hand made paper Manufacturing is taught here)

WILLING CANDIDATES MAY APPLY TO: MANAGING DIRECTOR.

ತುಳುನಾಡ್ ತಿಲಕ ಪಂಚಾಂಗ

ಬೆಲೆ ೦—೧—೦

ಮಾರಾಟಕ್ಕೆ ತಯಾರಾಗಿದೆ.
ವ್ಯಾಪಾರಿಗಳಿಗೆ ಧಾರಾಳ ಕಮಿಶನ್
ಬೇಕಾದವರು ತರಿಸಿಕೊಳ್ಳಬಹುದು.

PRINTED BY S. S. KARANTH AT THE THULUNAD PRESS, UDIPI
and Published by K. H SHETTY at "NAVAYUGA" OFFICE, UDIPI, South India.

Registered No. M. [illegible]

NAVAYUGA

ನವಯುಗ

ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ.ಟಿ.ಕೆ.ಸಿ.ಐ.ಇ.,ಒ.ಬಿ.ಇ
ಇವರು ಉಡುಪಿಗೆ ಬಂದಾಗ ತಾ ೨೦—೨—೩೮ನೇ
ಸೋಮವಾರ ಮುಂಜಾನೆ ಅದಮಾರು ಮಠದಲ್ಲಿ
ಶ್ರೀ ವಿಬುಧಪ್ರಿಯತೀರ್ಥ ಸ್ವಾಮಿಯವರ
ಫೋಟೋ ಅನಾವರಣ ಮಾಡಿದಾಗ ತೆಗೆದ ಭಾ...

ಬಲಭಾಗದಲ್ಲಿ ನಿಂತಿರುವವರು ಸರ್ ಮಿರ್ಜಾ ಎಂ ಇಸ...
ಎಡಭಾಗದಲ್ಲಿ ನಿಂತಿರುವವರು ಈಗಿನ ಅದಮಾರು ಸ್ವಾ... ರ
ಶ್ರೀ ವಿಬುಧಮಾನ್ಯತೀರ್ಥ ಶ್ರೀಪಾದಂಗಳವ...
ಬರುವ ವರ್ಷ ಪರ್ಯಾಯ ಏರಲಿರುವವರು...



9-3-1938

The Canara Industrial & Banking Syndicate, Limited.

(INCORPORATED IN BRITISH INDIA. LIABILITY OF SHAREHOLDERS LIMITED.)

ESTD. 1925

Head Office:- **"Mukund Nivas", UDIPI, S. India.**

MEMBER:
RESERVE BANK OF INDIA, BANKERS' CLEARING HOUSE, BOMBAY.

SEASON DEPOSITS MATURING BETWEEN 30th JUNE AND 15th JULY 1939 ARE ACCEPTED at 3½ per cent per annum

Banking business of every description transacted on sound lines.

Particulars on application to any of our **35** Branches.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಕಾಂತಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಖ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: MANGALORE

BRANCHES: Udipi, Coondapoor, Kaup & Karkal.

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.

6 Months / 9 months Fixed Deposits at 3½ p. c. per annum.

One year Fixed Deposits at 4 p. c. per annum.

Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] H. O. UDIPI. [1920

BRANCHES:
MANGALORE, KATAPADI, and KANHANGAD.

Deposits are accepted at all the Offices of the Bank on the following terms.

One year Fixed Deposits at 3½ p. c. per annum.

Two years' Fixed Deposits at 4 p. c. per annum.

Savings Bank Deposits ··· 3 p. c. per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD 1921
FOUNDER
Sri A. B. SHETTY, M.L.A.
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ.
ಕೆ. ಕೆ. ಶೆಟ್ಟಿ.

ನವಯುಗ

NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೯-೩-೧೯೩೯ | Vol. XVIII
ಸಂಚಿಕೆ ೨೭ | Udipi, Thursday 9—3—1939 | No. 27

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಜೆ. ಎಚ್. ಶೆಟ್ಟಿ.

ಸಮಾಚಾರ ಸಂಗ್ರಹ

ಇಟಲಿಯ ಪಡೆ ಹಿಂತೆರಳಲಿ ಫ್ರಾಂಕೋವಿನ ಹೇಳಿಕೆ

ಮುಸಲೋನಿಯವರು ತಮ್ಮ ಇಟಲಿಯ ಸೈನ್ಯ ಪಡೆಯನ್ನು ಸ್ಪೈನಿನಿಂದ ಹಿಂದೆಕರೆಕೊಳ್ಳಬೇಕಾಗಿ ಜನರಲ್ ಫ್ರಾಂಕೋನು ಇಟಲಿಯಾನ ದಳವಾಯಿಯ ಮೂ

ಲಕ ಹೇಳಿಕಳುಹಿಸಿದ್ದಾನೆ. ಆದರೆ ಶಾವು ಕಾದ್ದಗೆದ ಮರುದಿನ ಅಂತಃಕಲಹಗಳು ಕಿಡಿಗಿ ತಲೆಯೆತ್ತಿಯಾವೆಂದು ಹಲವು ಇಟಲಿ ಪ್ರಮುಖರ ಅಭಿಮತ. ಅಂತೂ ಉಡುಗರೆಯಿಲ್ಲದೆ ಅಷ್ಟು ಸುಲಭದಲ್ಲಿ ಮುಸೋಲಿನಿಯು ಫ್ರಾಂಕೋವಿನ ಬೇಡಿಕೆಯನ್ನು ಮನ್ನಿಸಲಾರನೆಂಬುದು ನಿಶ್ಚಯ.

ರಂಗೂನಿನಲ್ಲಿ ಲೂಟಿ ತಗ್ಗಲಿಲ್ಲ

ಹಿಂದೂ ಮುಸ್ಲಿಮರೊಳಗೆ ಚಿಕ್ಕ ವಿಷಯದಲ್ಲಿ ಹಾರಿದ ಕಲಹಾಗ್ನಿಯ ಕಿಡಿಯು ನಗರದಲ್ಲೆಲ್ಲಾ ವ್ಯಾಪಿಸಿರುವದಲ್ಲದೆ ಈಗ ಸುತ್ತು ಮುತ್ತಲಿನ ಪ್ರದೇಶಕ್ಕೂ ಹರಡಿದೆ ಕೆಲವು ಕಡೆಗಳಲ್ಲಿ ಮುಸ್ಲೀಮರೂ ವಾಸ್ತವ್ಯಬಿಟ್ಟು ಸುರಕ್ಷಿತ ಸ್ಥಾನಕ್ಕೆ ಹೋಗುತ್ತಿದ್ದಾರೆ ಸೈನಿಕರೂ ಪೋಲೀಸರೂ ಪಟ್ಟಣಿಗರಲ್ಲುಂಟಾಗಿರುವ ಭಯವನ್ನು ಉಪಶಮನಗೊಳಿಸಲು ಬೀದಿ ಬೀದಿಗಳಲ್ಲಿಯೂ ಸಂದುಮೂಲೆಗಳಲ್ಲಿಯೂ ಪಹರೆ ನಿಲ್ಲುತ್ತಿದ್ದಾರೆ. ಹಿಂದೂ ಮತ್ತು ಮುಸ್ಲೀಂ ಪ್ರಮುಖ ಮುಂದಾಳುಗಳು ಒಟ್ಟಾಗಿ ಕೂಡಿ ವಿನಂತಿ ಪತ್ರವನ್ನು ಪ್ರಕಟಿಸಿ ಉಭಯ ಜಾತಿಯವರೂ ಶಾಂತಿಸ್ಥಾಪನೆಗೆ ಸಹಾಯಕರಾಗಬೇಕಾಗಿ ಬೇಡಿಕೊಂಡಿದ್ದಾರೆ. ಸರಕಾರವು ಅಂತೆಯೇ ಪ್ರತ್ಯೇಕ ಕೇಳಿಕೊಂಡಿದೆ, ಬರ್ಮಿಯರು ಈ ಕಲಹದಲ್ಲಿ ಯಾವ ಪಕ್ಷಕ್ಕೂ ಸೇರದೆ ಶಾಂತಿಸ್ಥಾಪನೆಗಾಗಿ ಸಹಕರಿಸಬೇಕಾಗಿ ಅಪೇಕ್ಷಿಸಿದೆ.

ಜಪಾನಿನ ಸಿಡಿಮದ್ದಿನ ಕೋಠಿಯಲ್ಲಿ ಬೆಂಕಿ

ಸಿಡಿಮದ್ದಿನ ಕೋಠಿಯಲ್ಲುಂಟಾದ ಸ್ಫೋಟನದಿಂದ ಎದ್ದ ಬೆಂಕಿಯು ಸುತ್ತು ಮುತ್ತ ಹಲವು ಮೈಲುಗಳ ವಿಸ್ತಾರದವರೆಗೂ ಹರಡಿತು, ಸೈನಿಕರು, ಪೋಲಿಸರು ಅಗ್ನಿಸ್ತಂಭಕರು ಎಂದು ಎರಡು ಸಾವಿರ ಮಂದಿಯ ವಿಶೇಷ ಪ್ರಯತ್ನ ಪಟ್ಟುದರಿಂದ ಅದು ಮತ್ತೂ ಮುಂದೂವರಿದಿಲ್ಲ ಸುಮಾರು ೬೦೦ ಮನೆಗಳು ಸುಟ್ಟುಹೋಗಿವೆ ಅಗ್ನಿಪಾಲಾದವರ ಸಂಖ್ಯೆ ತಿಳಿದಿಲ್ಲ ಘಾಯಗೊಂಡಿದವರು ಸುಮಾರು ಐನೂರು.

ಸ್ಪೈನ್ ಸರಕಾರಕ್ಕೆ

ಅಮೇರಿಕದಲ್ಲಿ ಒಂದು ರಾಷ್ಟ್ರವು ಫ್ರಾಂಕೋವಿನ ಸ್ಪೈನ್ ಸರಕಾರವನ್ನು ಅಂಗೀಕರಿಸಿತು. ಅದು ಯಾವುದು? ದಕ್ಷಿಣ ಅಮೇರಿಕದ ಬ್ರೆಜಿಲ್.

ಐರ್ಲೆಂಡಿನ ಭಯೋತ್ಪಾದಕರ ಚರಳು ಇಂಗ್ಲಾಂಡದಲ್ಲಿ

ಮೊನ್ನೆ ದೊಡ್ಡ ಬೋಂಬಿನ ಸಿಡಿತ. ಹನ್ನೆರಡು ಮೈಲುದೂರದ ತನಕವೂ ಕೇಳಿಸುವಷ್ಟು ಭಯಂಕರ ಶಬ್ದದಿಂದ ಒಂದು ಬಾಂಬು ಲಂಡನಿನ ಪ್ರಧಾನ ಸ್ಥಳದಲ್ಲಿಯ ಒಂದು ಅಣೆಕಟ್ಟೆಯ ಅಂಚಿನಲ್ಲೇ ಸಿಡಿಯಿತು. ಬಲವಾಗಿ ಉಕ್ಕಿನಿಂದ ಕಟ್ಟಲ್ಪಟ್ಟಿದ್ದರಿಂದ ಅ ಎರಿಯೊಡೆದು ಊರೆಲ್ಲ ನೀರುಪಾಲಾಗಲಿಲ್ಲ. ಒಂದೆರಡು ಬೀದಿಗಳು ಕಾಲುವೆಗಳಾಗುವಷ್ಟು ನೀರು ಒಡೆಕಿಂದ ಹೊರಹರಿದಿತ್ತಷ್ಟೆ

ಡಚ್ಚ್ ಪಾರ್ಲಿಮೆಂಟಿನಲ್ಲಿ ಗುದ್ದಾಟ—

ನ್ಯಾಶನಲ್ ಸೋಸಿಯಲಿಸ್ಟ್ ಪಕ್ಷದವರಾದ ವಾಂಟ್ಸೆನ್ ನಿಂಜೆನ್ ಎಂಬವರು ಅಸಭ್ಯ ಮಾರ್ಗ [illegible] ತವರು ಹೊರಗೆ ಹೋಗಬೇಕಾಗಿ ಅಧ್ಯಕ್ಷರ ಅಪ್ಪಣೆ ಕೊಟ್ಟರು ಆದರೆ ನಿಂಜೆನ್‌ರವರು ಅದಕ್ಕೆ ವಿಧೇಯರಾಗಿ ನಡೆಯಲಿಲ್ಲ. ಆಗ ಕಥೋಲಿಕ ಸದಸ್ಯರೊಬ್ಬರು ನಿಂಜೆನರನ್ನು ರಾಷ್ಟ್ರದ್ರೋಹಿಯೆಂದರು. ಇಬ್ಬರೊಳಗೆ ಮುಷ್ಟಿಕಾಳಗ ತೊಡಗಿತು. ಪಾರ್ಲಿಮೆಂಟಿನ ಕಾರ್ಯಕ್ರಮವು ನಿಂತಿತು. ಹಲವು ಸದಸ್ಯರು ನಡುವೆ ನುಗ್ಗಿ ಕಾಳಗವನ್ನು ನಿಲ್ಲಿಸಿದರು. ಬಹುಪ್ರಯತ್ನದಿಂದ ನಿಂಜನರನ್ನು ಹೊರಹಾಕಿದರು.

ವಕೀಲರಿಗೆ ಮದ್ದು ಹಾಕಿ ತಲೆಗೆಡಿಸಿದ್ದಕ್ಕಾಗಿ ವಕೀಲರ ಹೆಂಡತಿಗೆ ಶಿಕ್ಷೆ

ಹನುಮಂತರಾಯರು ಗುಂಟೂರು ಜಿಲ್ಲೆಯ ನರಸರಾಯ ಪೇಟೆ ಮುನ್ಸಿಪಕೋರ್ಟಿನ ವಕೀಲರು ಲಕ್ಷ್ಮೀಪ್ರಸನ್ನಮ್ಮ ಅವರ ದ್ವಿತೀಯ ಪತ್ನಿ, ಪ್ರಥಮ ಪತ್ನಿಯಾದ ವಕೀಲರಿಗೆ ಆರು ಮಕ್ಕಳಿದ್ದಾರೆ. ಪತ್ನಿಯೂ ಜೀವಿಸಿಕೊಂಡಿದ್ದಾಳೆ. ಆದರೆ ಹಿಸ್ಟೀರಿಯಾ ವ್ಯಾಧಿಗ್ರಸ್ಥಳು ಆದುದರಿಂದ ದೊಡ್ಡ ಬೆಳೆದ ಹುಡುಗಿ ಬೇಕೆಂದು ಹದಿನೆಂಟು ವರುಷದ ವಿಧವೆ ಪ್ರಸನ್ನಮ್ಮನ ಕೈಹಿಡಿದರು, ಒಂದು ಮಗುವಾಗಿಸ್ಟ್ರು ಅವಳಿಗೆ ಆದರೂ ಚಿಂತೆಯಿಲ್ಲ, ಸುಖ ಸಿಕ್ಕೀತೆಂದು ಮದುವೆಯಾದರು. ಪ್ರತ್ಯೇಕ ಮನೆಮಾಡಿಕೊಟ್ಟರು ಅವಳ ಸೌಂದರ್ಯಗ [illegible] ಲ್ಲೇ ಉಂಡ ಬೆಳೆದು ಉಪಕೃತನಾದ [illegible] ಸೋದರಮಾವನ [illegible] ಹುರುಪಿನ ಸೂರ್ಯನಾರಾಯಣನನ್ನು ನೇಮಿಸಿದರು. ಆದರೆ ಅವನು ಉಂಡವ ಗೆರಡು ಬಗೆದ ಹರೆಯಕ್ಕೆ ಹರೆಯಕ್ಕೆ ಆಕರ್ಷಣವಾಗಿ ಹೋಯಿತು. ಈ ಮುದಿಯನ್ನು ಬೆಪ್ಪುಗೊಳಿಸಿ ಮೂಲೆಯಲ್ಲಿ ಕೂಳ್ಳಿರಿಸಿಬಿಟ್ಟರೆ ಅವನ ಆಸ್ತಿಪಾಸ್ತಿಗಳ ಪೂರ್ಣ ಸ್ವಾಮ್ಯ ತಮ್ಮ ಕೈಯೊಳಗೆ ಸೇರಿ ತಾವು ನಿರಾತಂಕವಾಗಿ ಸುಖಸಾಗರದಲ್ಲಿ ತೋಲಾಡಬಹುದೆಂದು ವಕೀಲರಿಗೆ ಮದ್ದು ಹಾಕಿ ತಲೆಗೆಡಿಸುವ ಹಂಚಿಕೆ ನಡೆಯಿತು ಮದ್ದು ಬಿತ್ತು. ಆದರೆ ವಕೀಲರಿಗೆ ಪುಣ್ಯ. ತಲೆಗೆಡದ ಮೊದಲೇ ಪ್ರಸನ್ನಮ್ಮನ ಟ್ರಂಕಿನಲ್ಲಿ ಇವರೀರ್ವರ ಪ್ರಣಯದ ಹಾಗೂ ಮದ್ದಿನ ಪ್ರಯೋಗದ ವಿಷಯಕವಾದ ಪತ್ರವ್ಯವಹಾರಗಳು ವಕೀಲರ ಕೈಗೆ ಸಿಕ್ಕಿದವು ಕೇಸು ನಡೆಯಿತು. ಜಡ್ಜರು ಪ್ರಸನ್ನಮ್ಮನ ವಿಷಯ ಕನಿಕರ ಸೂಚಿಸಿದರು. ಹನುಮಂತರಾಯರಂತಹರು ಎರಡನೆಯ ಮದುವೆಗೆ ಕೈಗೊಟ್ಟುದು ಮೊದಲನೆಯ ಅಚಾತುರ್ಯ. ಸೂರ್ಯನಾರಾಯಣನಂತಹ ಆಕರ್ಷಕ ವ್ಯಕ್ತಿಯನ್ನು ಅವಳ ಎದುರಿಟ್ಟುದು ಎರಡನೆಯ ಅವಿವೇಕ ಇಂತಹ ಸನ್ನಿವೇಶದಲ್ಲಿ ಹರೆಯದ ಹುಡುಗಿಯು ತಲೆಗೆಟ್ಟು ಗಂಡನ ತಲೆಗೆಡಿಸಲು ಹಂಚಿಕೆ ನಡೆಯಿಸಿದುದು ಮಹಾಪರಾಧವೆನ್ನಲು ಬರುವುದಿಲ್ಲ ಕೈಲಾಗದವರು ಹರೆಯದ ಹುಡುಗಿಯರನ್ನು ಮದುವೆ ಮಾಡಿಕೊಂಡರೆ ಆಗುವ ಗತಿ ಇದು ಆದುದರಿಂದ ಪ್ರಸನ್ನಮ್ಮನಿಗೆ ಲಘುಶಿಕ್ಷೆ ಕೊಡಲಾಗಿದೆ ಮೂರು ತಿಂಗಳ ಸಜೆ ಮತ್ತು ಹತ್ತು ರೂಪಾಯಿ ಜುಲ್ಮಾನೆ ಎಂದು ತೀರ್ಪು ಕೊಟ್ಟುಬಿಟ್ಟರು.

ಮತ್ತೊಂದು ರೀತಿಯ ವರ್ಣ ಪಂಗ್ತಿ ಭೇದ

ಆಫ್ರಿಕದ ಕೆನಿಯಾಪ್ರಾಂತದಲ್ಲಿ ಕೆನಿಯಾ ಪ್ರಾಂತ್ಯದಲ್ಲಿ ಕೆನಿಯಾದ ಉತ್ತಮ ಭಾಗವಾದ ಎತ್ತರ ಪ್ರದೇಶಗಳನ್ನು ಬಿಳಿಯರಿಗಾಗಿ ಮೀಸಲಿರಿಸುವ ಒಂದು ಆಜ್ಞೆಯನ್ನು ಅಲ್ಲಿಯ ಬ್ರಿಟಿಷ್ ಸರಕಾರವು ಹೊರಡಿಸಿದೆ. ದುಡ್ಡು ಕೊಟ್ಟರೂ ಆ ಭಾಗದಲ್ಲಿ ಹಿಂದೀಯರಿಗೆ ಜಾಗಸಿಕ್ಕದು. ಕೆನಿಯಾದಲ್ಲಿರುವ ಹಿಂದೀಯರೆಲ್ಲ ತಮ್ಮ ಅಸಂತೃಪ್ತಿಯನ್ನು ವ್ಯಕ್ತಗೊಳಿಸಲು ಕಳವಳ ತಾರಿಲಲ್ಲ ಹರತಾಳವನ್ನಾಚರಿಸಿದರು. ಈ ವಿಷಯವಾಗಿ ಹಿಂದೂಸ್ಥಾನದ ಕೋಧ ಮತ್ತು ಅಸಂತುಷ್ಟಿಯನ್ನು ಬ್ರಿಟಿಷ್ ಸಾಮ್ರಾಟರ ಸರಕಾರದಲಕ್ಷ್ಯಕ್ಕೆ ವೈಸರಾಯರು ತರತಕ್ಕದೆಂದು ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಪಂಡಿತ್ ಹೃದಯನಾಥ ಕುಂಜ್ರು ಎಂಬ ಸದಸ್ಯರು ಒಂದು ನಿರ್ಣಯವನ್ನು ಸರುವಸೂಚನೆ ಕೊಟ್ಟಿದ್ದಾರೆ

ಗೋರಿಂಗರು.

ಜರ್ಮನ್ ಸರ್ವ ಸೇನಾಪತಿ ಏನೆನ್ನುತ್ತಾನೆ?

ಜರ್ಮನಿಯ ವಿಮಾನಬಲದ ವಾರ್ಷಿಕೋತ್ಸವದಂದು ಸರ್ವ ಸೇನಾಪತಿ (ಫೀಲ್ಡ್ ಮಾರ್ಷಲ್) ಗೋರಿಂಗ್‌ನು ಜರ್ಮನರನ್ನು ಕುರಿತು 'ನಿಮ್ಮ ಮಗಂದಿರನ್ನು ಕೂಡಿ! ಈ ಮೊದಲ್ ನಿನ್ನ ಮಗಂದಿರಲ್ಲೊಬ್ಬನು ಯುದ್ಧದಲ್ಲಿ ಮಡಿದಿದ್ದರೆ ಅದು ಜರ್ಮನಿಯ ಮಹಿಮೋನ್ನತಿಗಾಗಿ ಎಂದು ಹಿಗ್ಗಿರಿ! ಗುಣ ಪರಿಮಾಣಗಳಲ್ಲಿ ನಿಸ್ಸೀಮವಾಗುವಷ್ಟು ವಿಮಾನಗಳನ್ನು ನಾವು ಸಿದ್ಧಗೊಳಿಸಬೇಕು ಜರ್ಮನರ ಭದ್ರತೆಯನ್ನು ಸುರಕ್ಷಿಸುವ ಖಡ್ಗಗಳನ್ನು ಮಸೆದಿಡಬೇಕು ಭಯ ಎಂಬ ಶಬ್ದವನ್ನು ಜರ್ಮನ್ ಶಬ್ದಕೋಶದಿಂದ ಹೊಡೆದು ಕೊಡೆದುಹಾಕಲಾಗಿದೆ. ಮುನ್ನಡೆಯಿಸಲು ಬಲ್ಲವರ ಕೈಕೆಳಗೆ ಜರ್ಮನಿಯ ಶಕ್ತಿ ಚೈತನ್ಯಗಳು ಕೇಂದ್ರೀಕೃತವಾದರೆ ಜರ್ಮನರು ಅಜೇಯರು ಎಂದೆ ನನ್ನ ದೃಢವಾದ ನಂಬಿಗೆ—ಎಂದು ಸಾರಿಹೇಳಿದ.

ದಕ್ಷಿಣ ಆಫ್ರಿಕೆದಲ್ಲಿ ಹಿಂದೀಯರು ಸ್ವಾಭಿಮಾನಯುಕ್ತರಾಯಿದೆ ಭಂಗವಾಗುವ ಸಂಭವ

ನಗರ ಪಟ್ಟಣ ಹಳ್ಳಿಗಳಲ್ಲೆಲ್ಲ ಬಿಳಿಯರಿಗೂ ಬಿಳಿಯಲ್ಲದವರಿಗೂ ವಾಸಿಸಲು ಪ್ರತ್ಯೇಕ ಪ್ರತ್ಯೇಕ ಜಾಗವ್ಯವಸ್ಥೆ ಮಾಡುವ ಶಾಸನವನ್ನು ಸರಕಾರವು ಅಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ತರಲಿದೆ ಅದಕ್ಕೆ ಸೆಗ್ರೆಗೇಶನ್ ಬಿಲ್ ಎಂದು ಹೆಸರು ಸಾಮಾಜಿಕ ಮತ್ತು ವಸತಿಯ ವಿಷಯದ

ಲ್ಲಿ ಸಮಾನ ಹಕ್ಕಿರಬೇಕಲ್ಲದೆ ಈ ತರದಲ್ಲಿ ಕೀಳ್ತನದ ದೃಷ್ಟಿಯಿಂದ ತಮ್ಮನ್ನು ಪ್ರತ್ಯೇಕಿಸಿಡುವ ಧ್ಯೇಯದ ಈ ಮಸೂದೆಯನ್ನು ಅಲ್ಲಿಯ ಹಿಂದೀಯರು ಪ್ರಬಲವಾಗಿ ವಿರೋಧಿಸುವರು ಆದರೆ ಪಾರ್ಲಿಮೆಂಟಿನಲ್ಲಿ ಸರಕಾರದ ಪಕ್ಷದವರು ಬಹುಪಕ್ಷವಿರುವುದರಿಂದ ಸವಿನಯಕಾಯಿದೆ ಭಂಗದಿಂದಲಾದರೂ ಅದನ್ನು ಪ್ರತಿಭಟಿಸಬೇಕೆಂದು ಟ್ರಾನ್ಸ್‌ವಾಲ್ ಪ್ರದೇಶದ ಮೂರುಸಾವಿರ ಹಿಂದುಗಳು ನಿಶ್ಚೈಸಿರುವರು.

ಹೊಸ ಪೋಪ್ ಗುರುಗಳು

ಕಾರ್ಡಿನಲ್ ಪೆಸಿಲ್ಲೀ

ಕಾರ್ಡಿನಲ್ ಪೆಸಿಲ್ಲೀ ಇವರು ದಿವಂಗತ ಪೋಪ್ ಪಯಸ್‌ರವರ ಸ್ಟೇಟ್ ಸೆಕ್ರಿಟರಿಗಳಾಗಿದ್ದರು. ಅವರೇ ಈಗ ಕಥೋಲಿಕ ಲೋಕದ ಜಗದ್ಗುರು ಪೀಠವಾದ ಪೋಪ್ ಸಿಂಹಾಸನಕ್ಕೆ ಅರ್ಹರೆಂದು ಚುನಾಯಿತರಾಗಿರುವರು. ಕಾರ್ಡಿನಲ್ ಪೆಸಿಲ್ಲೀಯವರು ಹನ್ನೆರಡನೆಯ ಪೋಪ್ ಪಯಸ್‌ರೆಂಬ ನವಾತ್ರಮ ನಾಮಧೇಯದಿಂದ ಪೋಪ್ ಗದ್ದುಗೆಯನ್ನು ಹತ್ತಿದರು.

ಪೋಪರ ಚುನಾವಣೆಯ ವಿಧಾನವು ಇತರ ಚುನಾವಣೆಗಳಂತಲ್ಲ. ಅದೊಂದು ವಿಚಿತ್ರ ತರದ ಕಠಿಣ ಕ್ರಮ. ಪ್ರಪಂಚದ ಬೇರೆಬೇರೆ ಕಡೆಗಳಲ್ಲಿರುವ ಕಾರ್ಡಿನಲ್ಸ್ ಎಂಬ ಗುರು ಪದವಿಯುಳ್ಳವರು ರೋಮ್ ನಗರದ ವಟಿಕಾನ್‌ದಲ್ಲಿ ಬಂದು ಕೂಡಬೇಕು. ಚುನಾವಣೆಯ ದಿನ ಅವರೆಲ್ಲ ಸೇಂಟ್ ಪೀಟರ್‌ಸ್ಕ್ವಾರಿನ ಒಂದುದೊಡ್ಡ ಸಭಾಭವನವನ್ನು ಪ್ರವೇಶಿಸಿದೊಡನೆ ಹೊರಗಿನ ಎಲ್ಲ ದ್ವಾರಗಳೂ ಮುಚ್ಚಲ್ಪಟ್ಟು ಮೊಹರು ಮಾಡಲಾಗುವವು. ಚುನಾವಣೆಯ ಫಲಿತಾಂಶ ನಿಶ್ಚಿತವಾಗುವ ತನಕ ಅವರ್ಯಾರೂ ಹೊರಗೆ ಬರಕೂಡದು. ಹೊರಗಿನವರೊಡನೆ ಅವರಿಗೆ ಮಾತುಕತೆಗಳಿಲ್ಲ. ಅವರ ಆಹಾರ ಸರಬರಾಯಿಗಳೂ ಕೂಡ ಕೆಂಡಿಯ ತಿರುಗಣೆ ಮದ್ದಳೆಯಲ್ಲಿಟ್ಟು ಒಳಗೆ ಮುಟ್ಟಿಸಲಾಗುವವು. ಕಾರ್ಡಿನಲ್ಸ್‌ಗಳಲ್ಲಿ ಯಾರಾದರೊಬ್ಬನಿಗೆ ಒಟ್ಟು ವೋಟಿನ ಮೂರನೆ ಎರಡರಷ್ಟು ಮತದೊರಕುವವರೆಗೆ ತಿರುತಿರುಗಿ ಬ್ಯಾಲಟ್ ತೆಗೆಯಲಾಗುವುದು. ಅಂತಹ ಬಹುಮತದ ವೋಟು ದೊರಕಲು ಕೆಲವು ಸಂದರ್ಭಗಳಲ್ಲಿ ಹಲವು ದಿವಸಗಳೂ ತಾಗುವುದುಂಟು.

ಬೀಗಮುದ್ರೆಯಾಗಿರುವ ಆ ಭವನದ ವಿಶಾಲವಾದ ಹೊರ ಪಳಸುದ ಪಠಾರದಲ್ಲಿ ಸಾವಿರಾರು ಮಂದಿ ಫಲಿತಾಂಶ ನಿರೀಕ್ಷಣೆಯಿಂದ ಕಾದು ನಿಲ್ಲುವರು. ಪ್ರತಿಯೊಂದು ಬ್ಯಾಲಟ್ ನಡೆದ ಕೂಡಲೆ ಅದರಲ್ಲಿ ಯಾರಿಗೂ ಆ ನಿಶ್ಚಿತವಾದ ಬಹುಪಕ್ಷದ ವೋಟಿನ ಸಂಖ್ಯೆ ದೊರೆಯದಿದ್ದಲ್ಲಿ ಆ ಬ್ಯಾಲಟಿನ ನಿಷ್ಫಲತೆಯನ್ನು ಬಾಹ್ಯ ಲೋಕಕ್ಕೆ ಸಾರುವುದಕ್ಕಾಗಿ ಆ ಭವನದ ಒಂಬಡಿ ಎತ್ತರದ ಹೊಗೆ ಕಂಬದಿಂದ ಕಪ್ಪು ಹೊಗೆ ಎಬ್ಬಿಸುತ್ತಾರೆ. ಬ್ಯಾಲಟ್ ಸಾರ್ಥಕವಾಯಿತೆಂದರೆ ಬಿಳಿಹೊಗೆ ಬಿಡುತ್ತಾರೆ. ಆದುದರಿಂದ ಪತ್ರಿಕಾ ಸುದ್ದಿಗಾರರ ಮತ್ತು ಜನ ಸಾಮಾನ್ಯರ ದೃಷ್ಟಿಯು ಹೊಗೆ ಕಂಬದ ಗಡಿಗೆ ಇದ್ದು ಒಳಗೆ ಎಷ್ಟು ಸಲ ವೋಟು ತೆಗೆದರು ಮತ್ತು ಅದರ ಪರಿಣಾಮವೇನಾಯಿತೆಂಬುದನ್ನು ತಿಳಿದುಕೊಳ್ಳಬೇಕು.

ಈ ಸಲದ ಚುನಾವಣೆಯಲ್ಲಿ ಪುಣ್ಯವಶಾತ್ ದಿನಗಟ್ಟಳೆ ಕಾದುಬಳಬೇಕಾಗಿದ್ದಿಲ್ಲ. ಬೆಳಗ್ಗೆ ಎಂಟೂವರೆ ತಾಸಿನಲ್ಲಿ ಬ್ಯಾಲೆಟ್ ತಗಯುವುದು ಪ್ರಾರಂಭವಾಯಿತು. ಮೂವತ್ತೈದು ಸಾವಿರಕ್ಕೂ ಮಿಕ್ಕಿದ ಜನಸಂದಣಿಯು ನಿಗ್ಗು ನಿಗ್ಗಾಗಿ ಸೆಂಟ್‌ಪೀಟರ್ ಸ್ಕ್ವೇರ್‌ನಲ್ಲಿ ಕೂಡಿತ್ತು. ಆಗಾಗ ಮೂರು ಸಲ ಹೊಗೆಕಂಬದಿಂದ ಕಪ್ಪು ಹೊಗೆಯೇ ಬಂತು. ಕೊನೆಗೆ ಸಾಯಂಕಾಲ ಐದೂವರೆ ತಾಸಿನಲ್ಲಿ ಹೊಗೆ ಕಂಬವು ಬಿಳಿಹೊಗೆಯನ್ನು ಹೊರಹರಡಿ ಹೊಸಪೋಪರ ಚುನಾವಣೆಯಾಯಿತೆಂಬುದನ್ನು ಲೋಕಕ್ಕೆ ಸೂಚಿಸಿತು. ಆಮೇಲೆ ತುಸು ಸಮಯದ ಮೇಲೆ ಚುನಾಯಿತರಾದ ಹೊಸ ಪೋಪರು ಜಗದ್ಗುರುವಿನ ಅಧಿಕಾರದುಡಿಗೆಯನ್ನು ಧರಿಸಿಕೊಂಡು ಆ ಭವನದ ಉಪ್ಪರಿಗೆಯ ಕಡೆಗಟ್ಟೆಯಲ್ಲಿ ನಿಂತು ಕೆಳಗೆ ನಿಗ್ಗಿನೆರೆದಿರುವ ಜನಸ್ತೋಮಕ್ಕೆ ಆಶೀರ್ವಚನವಿತ್ತರು.

ಆಶ್ರಿತ ಸಂಸ್ಥಾನಗಳಲ್ಲಿಯ ಚಳವಳದ ಕುರಿತು ಇಂಡಿಯಾ ಉಪ ಸೆಕ್ರೆಟರಿ ಮ್ಯೂರ್‌ಹೆಡ್‌ರವರ ಹೇಳಿಕೆ ಪಾರ್ಲಿಮೆಂಟಿನಲ್ಲಿ

ಇಂಡಿಯಾದ ಆಶ್ರಿತ ಸಂಸ್ಥಾನಗಳಲ್ಲಿ ಅಲ್ಲಿಯ ಪ್ರಜೆಗಳಿಂದಲೂ ಹೊರಗಿನ ಪ್ರವೇಶದಿಂದಲೂ ಉಂಟಾಗಬಹುದಾದ ಆಪಾಯಗಳಿಂದ ನರೇಂದ್ರರುಗಳನ್ನು ಉದ್ಧಾರಮಾಡುವ ವಿಷಯದಲ್ಲಿ ಬ್ರಿಟಿಷ್ ಪ್ರಭುತ್ವದ ಧೋರಣೆ ಹೇಗಿದೆ ಎಂದು ಪ್ರಶ್ನೆ ಬಂದಾಗ ಅಂಡರ್ ಸೆಕ್ರೆಟರಿ ಮ್ಯೂರ್ ಹೆಡ್‌ರು ಕೊಟ್ಟ ಉತ್ತರ ಹೀಗಿದೆ. ನರೇಂದ್ರರೊಡನೆ ಮಾಡಿಕೊಂಡಿರುವ ಕೌಲು ಒಪ್ಪಂದಗಳಿಗೆ ಕುಂದುಬಾರದಂತೆ ಅವರ ಆಪತ್ತಿನಲ್ಲಿ ಬೆಂಬಲವಾಗಿ ನಿಲ್ಲುವುದೂ ಪರಕೀಯರು ಅಲ್ಲಿ ವಿಘ್ನಕಾರಿಗಳಾಗದಂತೆ ತಡೆಗಟ್ಟುವುದೂ ನಮ್ಮ ಕರ್ತವ್ಯವೆಂಬುದು ಸುಸ್ಪಷ್ಟವಿದೆ—ಎಂದರು. ಲಾರ್ಡ್ ಜೆಟ್ಲೆಂಡರೂ ಇನ್ನೊಂದು ಸಂದರ್ಭದಲ್ಲಿ ಇದೇ ಅಭಿಪ್ರಾಯಕೊಟ್ಟರು.

ಆದರೆ ವೈಸರಾಯರು ಅಂತಹ ಪ್ರಸಂಗ ಬಾರದಂತೆ ನೋಡಿಕೊಳ್ಳಿರೆಂದು ಸಂಸ್ಥಾನಾಧಿಪತಿಗಳಿಗೆ ಸೂಚನೆಕೊಡುತ್ತಿದ್ದಾರೆ. ಮೊನ್ನೆ ಜಯಪುರವನ್ನು ವೈಸರಾಯರು ಸಂದರ್ಶಿಸಿದ ಸಂದರ್ಭದಲ್ಲಿ ಅವರು ಹೀಗೆಂದರು—ಇಂದಿನ ಜಾಗ್ರತ ಲೋಕವನ್ನು ನೋಡಿಕೊಂಡು ರಾಜ್ಯಾಡಳಿತೆಯಲ್ಲಿ ಅವಕ್ಕನುಕೂಲವಾಗಿ ಹೆಜ್ಜೆಯಿಡಿರಿ. ಪ್ರಜೆಗಳ ಮತವನ್ನು ಉಪೇಕ್ಷಿಸಬೇಡಿರಿ. ಹೇಗಾದರೂ ಪ್ರಜಾವರ್ಗವನ್ನು ಒಲಿಸಿಕೊಂಡು ಬಾಳಿ ಬದುಕುವ ಹಂಚಿಕೆ ಹೂಡಿರಿ. ಫೆಡರೇಶನನ್ನು ನೀವು ಅಂಗೀಕರಿಸಬೇಕೆಂಬ ಒತ್ತಾಯ ನಮ್ಮದೇನೂ ಇಲ್ಲ. ಒಟ್ಟಾರೆ ಮೇಲೆ ಪ್ರಜಾವರ್ಗಕ್ಕೇನಾದರೂ ಚಾರು ಚೂರು ಸ್ವಾತಂತ್ರ್ಯದ ನೆಳಲನ್ನಾದರೂ ನಿಮ್ಮ ರಾಜ್ಯಭಾರ ಕ್ರಮದಲ್ಲಿ ತೋರಿಸಿ ಶಾಂತಗೊಳಿಸಿರಿ. ನಾವೂ ಒಂದಿಷ್ಟು ನೆಮ್ಮದಿಯಿಂದಿರುವಂತೆ ಮಾಡಿರಿ—ಎಂಬುದೇ ವೈಸರಾಯರ ಮಾತಿನ ಮರ್ಮ.

ಅನ್ನಾಮಲೆ ಯುನಿವರ್ಸಿಟಿಯ ಮುಷ್ಕರದ ವಿದ್ಯಾರ್ಥಿಗಳಿಗೆ ವಿದ್ಯಾಂಗ ಮಂತ್ರಿ ನಾರ್ಕಿಗಳವರ ಎಚ್ಚರಿಕೆ ಸರ್ವರೀತ್ಯಾ ಶಿಸ್ತು ಪರಿಪಾಲಿಸಲ್ಪಡಬೇಕು.

ಅನ್ನಾಮಲೆ ಯುನಿವರ್ಸಿಟಿಯನ್ನು ವಿದ್ಯಾಂಗದ ಮಂತ್ರಿಗಳು ಸಂದರ್ಶಿಸಿ ಅಲ್ಲಿಯ ಪರಿಸ್ಥಿತಿಯನ್ನು ಹಲವು ಮುಖಗಳಿಂದ ಕೇಳಿ, ನೋಡಿ, ತಿಳಿದು ಮದ್ರಾಸಿಗೆ ಹೋದನಂತರ ಅವರು ಕೊಟ್ಟಿರುವ ಪ್ರಸಿದ್ಧಿ ಪತ್ರದ ಮುಖ್ಯಾಂಶ ಹೀಗಿದೆ. ಮುಷ್ಕರದ ಸಂಬಂಧಪಟ್ಟವರನ್ನೆಲ್ಲ ಕಂಡು ವಿಚಾರಿಸಿ ಸ್ಥಳೀಯ ವಿದ್ಯಮಾನಗಳನ್ನು ಕಣ್ಣಾರೆ ಕಂಡು ಪರಾಮರ್ಶಿಸಿ ನಾನು ಈ ರೀತಿ ನಿರ್ಧಾರಮಾಡಿರುವೆನು. ಯುನಿವರ್ಸಿಟಿಯ ಶಿಸ್ತನ್ನು ವಿದ್ಯಾರ್ಥಿಗಳು ಸರ್ವರೀತ್ಯಾ ಪರಿಪಾಲಿಸಬೇಕು. ವಿದ್ಯಾರ್ಥಿಗಳ ದುಷ್ಕಾರ್ಯ ಪ್ರವೃತ್ತಿಯನ್ನು ಪೇಕ್ಷಿಸಲಾಗುವುದಿಲ್ಲ. ಸಂಬಂಧಪಟ್ಟ ವಿದ್ಯಾರ್ಥಿಗಳು ಪಶ್ಚಾತ್ತಾಪಪಡುತ್ತಿದ್ದಾರೆಂಬುದು ನನಗೆ ಮನವರಿಕೆಯಾಗಿದೆ. ಹಾಗೆಯೇ ತಮ್ಮ ವರ್ತನಕ್ಕಾಗಿ ತಾವು ವಿಷಾದಿಸುತ್ತೇವೆಂದೂ ಮುಂದೆ ಅಂತಹ ನಿಯಮವಿರುದ್ಧ ಕಾರ್ಯಕಲಾಪಗಳಾಗಿ ಕೈಹಾಕುವುದಿಲ್ಲವೆಂದೂ ಸಂಬಂಧಪಟ್ಟ ವಿದ್ಯಾರ್ಥಿಗಳು ಬರಹ ಮೂಲಕ ಯುನಿವರ್ಸಿಟಿಯ ಅಧಿಕಾರಿಗಳಿಗೆ ಬಿನ್ನವಿಸಿಕೊಳ್ಳಬೇಕು. ಹಾಗಾದಮೇಲೆಯೇ ಈಗ ಬಹಿಷ್ಕೃತರಾದ ವಿದ್ಯಾರ್ಥಿಗಳಿಗೆ ಪುನಃ ಪ್ರವೇಶಕೊಡುವ ವಿಚಾರಮಾಡಬೇಕೆಂದು ಸಂಬಂಧಪಟ್ಟ ಯುನಿವರ್ಸಿಟಿಯ ಅಧಿಕಾರಿಗಳನ್ನು ಕೇಳಿಕ್ಕೊಂಡಿದ್ದೇನೆ.

ಪಂಡಿತ ಕುಂಜ್ರುಗಳಿಗೊಂದು ಸ್ಥಾನ ಸುಲಭದಲ್ಲಿ ದೊರಯಿತು.

ಸ್ಯಾಂಡರ್‌ಸ್ಟ್ ಕಮಿಟಿಯ ಸದಸ್ಯತನದಿಂದ ಪ್ರಯೋಜನವಿಲ್ಲವೆಂದು ಕಾಂಗ್ರೆಸ್ಸು ಪಕ್ಷವು ಅದಕ್ಕೆ ಮನಸ್ಸುಮಾಡಲಿಲ್ಲ. ಸರಕಾರವು ಈ ಸ್ಥಾನವನ್ನು ಪಂಡಿತ ಕುಂಜ್ರುಗಳಿಗೆ ಕೊಟ್ಟಿತು.

ತಂತೀ ಆರ್ಡರು

'ನವಯುಗ'ವು ದಿನೇ ದಿನೇ ಹೆಚ್ಚು ಹೆಚ್ಚು ಮೆಚ್ಚಿಗೆ ಪಡೆದು ಜನಾದರಣೀಯವಾಗಿ, ವಿಶಾಲವಾಗಿ ಪ್ರಚಾರವಾಗುತ್ತಿರುವುದೆಂಬುದಕ್ಕೆ ಏಜಂಟರಿಂದ ವಾರವಾರವೂ ಬರುತ್ತಿರುವ ಅಧಿಕಾಧಿಕ ಬೇಡಿಕೆಗಳೇ ಸಾಕ್ಷಿಯಾಗಿವೆ. ಈ ವಾರ(6-3-39ರಲ್ಲಿ) ಬೊಂಬ್ಬಾಯಿಂದ ತಂತಿಮೂಲಕ ಬಂದ ಆರ್ಡರೊಂದನ್ನು ಈ ಕೆಳಗೆ ಕೊಡಲಾಗಿದೆ.

Manager, **Navayuga, Udipi.**
Send 1.0 Navayuga this week.
Ranga.

ಮೆನೇಜರ್, ನವಯುಗ, ಉಡುಪಿ,
ಈ ವಾರ 160 ನವಯುಗ ಕಳಿಸಿರಿ.
—ರಂಗ

ಬೊಂಬಾಯಿಯಲ್ಲಿ ಪ್ರತಿಗಳು ಸಿಗುವ ಸ್ಥಳ

(1) ಶ್ರೀ. ಯು. ಕೆ. ರಂಗ, ಜಪಾನ್ ಕೊಟನ್ ಟ್ರೇಡಿಂಗ್ ಕೊ. ಲಿಮಿಟೆಡ್

(2) ಶ್ರೀ ವಿ. ಆರ್. ಪ್ರಭು, ದಿ ಕೆನರಾ ಬುಕ್ಸ್ ಎಂಡ್ ನ್ಯೂಸ ಏಜನ್ಸಿ, ಲಾಲ್‌ಬಾಗ್.

ಸ್ವಸ್ತಿಕ 'ಕಾಂತಿ'
ಟ್ಯೊಲೆಟ್ ಸೋಪ್
ಪ್ರತಿಯೊಬ್ಬರ ಅಚ್ಚುಮೆಚ್ಚಿನದಾಗಿದೆ.

ಹೀಗಿರುವಾಗ ನೀವೂ ಇದನ್ನೇ ಏಕೆ ಉಪಯೋಗಿಸಬಾರದು

ಅತಿ ಕಡಿಮೆ ಕ್ರಯಕ್ಕೆ ಅತ್ಯುತ್ತಮ ಟ್ಯೊಲೆಟ್ ಸೋಪೆಂದರೆ ಇದೊಂದೇ.

ರಾಜಕೋಟೆಯಲ್ಲಿ ಗಾಂಧಿಜಿಗಳ ಉಪವಾಸದೀಕ್ಷೆ

ಇದರ ಪೂರ್ವ ವೃತ್ತಾಂತ

"ಈ ಉಪವಾಸದೀಕ್ಷೆಯನ್ನು ಕೈಗೊಳ್ಳಲು ಪ್ರೇರಣೆಯನ್ನಿತ್ತ ದೇವರೇ ಪ್ರತಿಪಾಲನೆಗೆ ನನಗೆ ಶಕ್ತಿಯನ್ನು ದಯಪಾಲಿಸಿಯಾನು. ನಾನಾಗಿ ಹೊತ್ತಿರುವ ಮಾನವಸೇವೆಯನ್ನು ನಿರ್ವಹಿಸುತ್ತ ಇನ್ನೂ ಕೆಲಕಾಲ ಈ ಭೂಮಿಯ ಮೇಲೆ ನಾನು ಬದುಕಿರಬೇಕೆಂಬುದು ಆತನ ಸಂಕಲ್ಪವಾಗಿದ್ದರೆ ಉಪವಾಸದ ಅವಧಿಯು ಎಷ್ಟು ದೀರ್ಘವಾಗಿದ್ದರೂ ಈ ದೇಹವನ್ನು ನಲಿಸಲಾರದು" ಎಂಬ ದೃಢ ಭಕ್ತಿ-ವಿಶ್ವಾಸಗಳಿಂದ ಗಾಂಧೀಜಿಯವರು ಕಳೆದ ತಾ. ೩ರಂದು ಮಧ್ಯಾಹ್ನ ೧೨ ತಾಸು ಹೊಡೆದಾಗ ಉಪವಾಸವ್ರತವನ್ನಾರಂಭಿಸಿದರು.

ಉಪವಾಸದೀಕ್ಷೆಯ ಪೂರ್ವ ವೃತ್ತಾಂತ

ಕಳೆದ ತಾ. ೨೭ರಲ್ಲಿ ಗಾಂಧಿಜಿಯವರು ರಾಜಕೋಟೆಯನ್ನು ಪ್ರವೇಶಿಸಿದ ರಷ್ಟೆ. ಅಂದೇ ಸರಕಾರದ ಕಡೆಯಿಂದ ಖಾನ್ ಸಾಹೇಬ್ ಫಾತೇ ಮಹಮ್ಮದ್ ಮತ್ತು ದರ್ಬಾರ್ ವೀರವಲ್ಲ ಇವರು ಗಾಂಧೀಜಿಗಳನ್ನು ಸಂದರ್ಶಿಸಿ ಅಲ್ಲಿಯ ಪರಿಸ್ಥಿತಿಯ ಕುರಿತು ಸರಕಾರದಮೇಲೆ ಅನ್ಯಾಯವಾದ ಆರೋಪಣೆಗಳಾಗಿವೆಯೆಂದೂ ಗಾಂಧೀಜಿಗಳು ಅವುಗಳ ಸತ್ಯಪರಿಶೋಧನೆ ನಡೆಯಿಸಲಿಕ್ಕೆ ಅವರಿಗೆ ಸರ್ವ ಸೌಕರ್ಯಗಳನ್ನು ಒದಗಿಸಿಕೊಡಲಾಗುವುದೆಂದೂ ಉತ್ಸಾಹಪೂರ್ಣವಾದ ಅಭಿವಚನವನ್ನಿತ್ತರು. ಆ ಮೇಲೆ ಮುಸ್ಲೀಮ್ ಪ್ರತಿನಿಧಿಗಳು ಬಂದು ಮಾತಾಡಿದರು. ಗಿರಾಸ್ಯ ಸಂಘದವರೊಡನೆಯೂ ಮಾತುಕತೆಯಾಯಿತು. ರೆಸಿಡೆಂಟರ ಬಂಗಲೆಗೆ ಗಾಂಧಿಜೀಗಳು ಹೋಗಿ ಪರಿಸ್ಥಿತಿಯ ಕುರಿತು ಚರ್ಚಿಸಿದರು. ಪ್ರಜಾಪರಿಷತ್ತಿನ ಮುಖಂಡರೂ ಸಕಲ ಸಂಗತಿಗಳನ್ನು ಆದ್ಯಂತವಾಗಿ ಗಾಂಧೀಜಿಗಳ ಮುಂದಿಟ್ಟರು. ಮರುದಿನ ರಾಜಕೋಟೆ ಜೈಲು, ಸರ್ದಾರ್ ಜೈಲು ಇವುಗಳಲ್ಲಿರುವ ಸತ್ಯಾಗ್ರಹಿ ಬಂದಿಗಳನ್ನು ಕಂಡು ಅವರ ಹೇಳಿಕೆಗಳನ್ನು ಕೇಳಿಕೊಂಡರು. ತರುವಾಯ ತ್ರ್ಯಂಬಾಕ್ಕೆ ಹೋಗಿ ಅಲ್ಲಿಡಲ್ಪಟ್ಟಿದ್ದ ತನ್ನ ಪತ್ನಿ ಕಸ್ತೂರಿಬಾಯಿಯವರನ್ನೂ, ಕುಮಾರಿ ಮಣಿಬೆನ್ ಮತ್ತು ಕುಮಾರಿ ಮೃದುಲಾ ಸಾರಾಭಾಯಿಯವರನ್ನೂ ಕಂಡು, ಸಂಭಾಷಣೆಗಳಾದುವು. ಈ ಎಲ್ಲ ಸಂದರ್ಶನೆಗಳ ಕಾಲದಲ್ಲಿ ಗಾಂಧೀಜಿಯವರೊಡನೆ ಸಂಸ್ಥಾನದ ಅಧಿಕಾರಿಗಳೂ ಇದ್ದು ಮಾತುಕತೆಗಳಲ್ಲಿ ಸರಕಾರದ ಮೇಲೆ ಆರೋಪ ಬಂದಾಗಲೆಲ್ಲ ಅಡ್ಡಸವಾಲುಗಳನ್ನೂ ಹಾಕಿದರು. ಇಷ್ಟು ಸಾಲದೆ ಸತ್ಯಪರಿಶೋಧನೆಗಾಗಿ ಗಾಂಧಿಜಿಯವರು ದೂರದ ಹಳ್ಳಿಗೆ ಹೋಗಿ ಅಲ್ಲಿಯ ರೈತರಿಗುಂಟಾಗಿರುವ ಸಂಕಷ್ಟಗಳನ್ನು ಕೇಳಿ

ನೋಡಿ ತಿಳಕೊಂಡರು. ಈರೀತಿ ಪೂರ್ವ ಸಂಗ್ರಹಗಳನ್ನು ಮಾಡಿಕೊಂಡು ಗಾಂಧೀಜಿಯವರು ಠಾಕೂರ್ ಸಾಹೇಬ(ರಾಜಕೋಟೆಯ ರಾಜ)ರ ಅರಮನೆಗೆ ಹೋಗಿ ಒಂದೂವರೆ ತಾಸು ಅವರೊಡನೆ ಸಂಭಾಷಿಸಿದರು. ಒಟ್ಟಾರೆಮೇಲೆ ಸತ್ಯಾಗ್ರಹಿಬಂದಿಗಳ ಜೈಲಿನ ಪರಿಸ್ಥಿತಿಯು ತಾನು ಬರುವ ಸುದ್ದಿ ಕೇಳಿದ ನಂತರ ಪರಿಷ್ಕಾರವಾಗುತ್ತ ಬಂದಿತ್ತೆಂಬುದು ಗಾಂಧೀಜಿಯವರಿಗೆ ಹೊಳೆದಿತ್ತು. ಆದರೆ ಪ್ರಾಮುಖ್ಯ ವಿಷಯವು ಅದಲ್ಲವಾದುದರಿಂದ ಗಾಂಧೀಜಿಯವರು ಮೊದಲಾಗಿ ಜೀವಾಳದ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ತೊಡಗಿದರು.

ಆ ಮುಖ್ಯ ಪ್ರಶ್ನೆ ಯಾವುದು?

ರಾಜಕೋಟೆಯ ಠಾಕೂರ್ ಸಾಹೇಬರು ಕಳೆದ ದಶಂಬರ ತಾ. ೨೬ರಲ್ಲಿ ಒಂದು ರಾಜಾಜ್ಞೆಯನ್ನು ಪ್ರಕಟಿಸಿದ್ದರು. ಅದರ ಸಾರಾಂಶ ಹೀಗಿತ್ತು:—'ಇತ್ತೀಚೆಗೆ ಕೆಲವು ತಿಂಗಳುಗಳಿಂದ ನಮ್ಮ ಸಂಸ್ಥಾನದಲ್ಲಿ ಜನಮತವು ಪ್ರಬಲಗೊಳ್ಳುತ್ತಿರುವುದನ್ನೂ ಆ ದೃಷ್ಟಿಯಲ್ಲಿ ನ್ಯಾಯ ಹೊಂದುವುದಕ್ಕಾಗಿ ನಮ್ಮ ಪ್ರಜಾಜನರು ಹೊಂದಿರುವ ಸಂಕಷ್ಟಗಳ ವಿಷಾದಕರ ಪರಿಣಾಮವನ್ನೂ ನಾವು ಮನಸ್ಸಿಗೆ ತಂದುಕೊಂಡು ಈ ವಿಷಯದ ಹೋರಾಟವೂ ಅನರ್ಥ ಪರಿಣಾಮಗಳೂ ಕೂಡಲೆ ಕೊನೆಗಾಣಬೇಕೆಂಬ ಉದ್ದೇಶದಿಂದ ನಾವು ನಮ್ಮ ಕೌನ್ಸಿಲಿನವರೊಡನೆಯೂ ಶ್ರೀ ವಲ್ಲಭಾಯಿ ಪಟೇಲರೊಂದಿಗೂ ಸಕಲ ವಿದ್ಯಮಾನಗಳ ಕುರಿತು ವಿಚಾರಮಾಡಿ ಈ ರೀತಿ ನಿರ್ಧರಿಸಿದ್ದೇವೆ. ಸಂಸ್ಥಾನದ ಪ್ರಜಾಜನರ ಹಾಗೂ ನೌಕರರಿಂದೊಡಗೂಡಿದ ಹತ್ತು ಮಂದಿಯ ಒಂದು ಸಮಿತಿಯು ನಿರ್ಮಾಣವಾಗುತ್ತದೆ. ಸದಸ್ಯರ ಹೆಸರುಗಳು ಹಿಂದಿನಿಂದ ಪ್ರಕಟವಾಗುವವು. ಅದರ ಅಧ್ಯಕ್ಷರನ್ನು ನಾವು ನಿಯೋಜಿಸುತ್ತೇವೆ. ಈ ಸಮಿತಿಯು ಜನವರಿ ಅಂತ್ಯದೊಳಗೆ ಒಂದು ಯೋಜನೆಯನ್ನು ಸಿದ್ಧಗೊಳಿಸಿ ನಮಗೆ ಒಪ್ಪಿಸತಕ್ಕದು. ಬ್ರಿಟಿಷ್ ಪ್ರಭುತ್ವಕ್ಕೂ ನಮಗೂ ಇರುವ ಸಂಬಂಧ ಮತ್ತು ನಮ್ಮ ದೈವದತ್ತವಾದ ರಾಜಸ್ವದ ಹಕ್ಕು ಇವೆರಡಕ್ಕೆ ಅಸಂಗತವಾಗದಂತೆ ರಾಜ್ಯಾಡಳಿತೆಯಲ್ಲಿ ಪ್ರಜೆಗಳಿಗೆ ಸಾಧ್ಯವಿದ್ದಷ್ಟು ವ್ಯಾಪಕವುಳ್ಳ ಪ್ರಜಾಸತ್ತೆಯುಂಟಾಗುವಂತೆ ಆ ಯೋಜನೆಯು ನಿರ್ಮಾಣವಾಗಬೇಕು. ನಮ್ಮ ಸ್ವಂತ ಭಂಡಾರ ಮತ್ತು ಖರ್ಚುವೆಚ್ಚಗಳ ಕುರಿತು ನರೇಂದ್ರ ಮಂಡಲದಿಂದ ನಿರ್ದೇಶಿತವಾಗಿರುವ ಶಿಕ್ಷ್ಯಾಗಳಾದಿಗನು ಸಾರವಾಗಿ ಇನ್ನು ಮುಂದೆ ಸುವ್ಯವಸ್ಥೆ ಮಾಡಲಾಗುವುದು. ಈ ಕಮಿಟಿಯು ನಮಗೊಪ್ಪಿಸುವ ಯೋಜನೆಯನ್ನು ಪರ್ಯಾಲೋಚಿಸಿ ಪ್ರಯೋಗದಲ್ಲಿ ತರುತ್ತೇವೆಂದು ನಮ್ಮ ಪ್ರಜಾಜನರಿಗೆ ಈ ಮೂಲಕ ಆಶ್ವಾಸನೆ ಕೊಡೋಣಾಗಿದೆ. ಪ್ರಯುಕ್ತ ಅದಾಜಕ ಚಳವಳಗಳೆಲ್ಲ ಕೊನೆಗಂಡು ಶಾಂತಿ ವಿಶ್ವಾಸಗಳು ನೆಲೆಗೊಳ್ಳಬೇಕು. ಹಾಗಾಗಲು ಅವಕಾಶ ಕಲ್ಪಿಸಿಕೊಡುವುದಕ್ಕಾಗಿ ನಾವು ರಾಜಕೀಯ ಕೈದಿಗಳನ್ನೆಲ್ಲ ಬಿಡುಗಡೆ ಮಾಡಿದ್ದೇವೆ ದಂಡದ್ರವ್ಯವನ್ನು ವ[...] ರುಪಾವತಿ ಮಾಡುತ್ತೇವಲ್ಲದೆ ಉಗ್ರ ಶಾ[...] ನಗಳನ್ನೂ ಹಿಂತೆಗೆದಿರುತ್ತೇವೆ.'

ಆದರೆ ಜನವರಿ ತಾ. ೨೧ರಲ್ಲಿ ಮತ್ತೊಂ[...] ದು ಪ್ರಕಟಣೆ ಹೊರಟಿತ್ತು. ಅದರಲ್ಲಿ ಸಾ[...] ಧ್ಯವಿದ್ದಷ್ಟು ವ್ಯಾಪಕವುಳ್ಳ ಪ್ರಜಾಸತ್ತೆಯ[...] ನ್ನು ಕೊಡುವ ಅಭಿವಚನವಿದ್ದಿಲ್ಲ. 'ಯೋ[...] ಜನೆಯನ್ನು ಒಪ್ಪಿಸಲಿಕ್ಕೆ ಅವಧಿ ನಿಶ್ಚಿತ[...] ದ್ದಿಲ್ಲ. ಎಂದಾದರೂ ಒಪ್ಪಿಸಬಹುದಾ[...] ಅದನ್ನು ಪ್ರಯೋಗದಲ್ಲಿ ತರಲಾದೀತೆಂ[...] ಆಶ್ವಾಸನೆಯೂ ಇದ್ದಿಲ್ಲ ಅದರಲ್ಲಿ ಹೆಸ[...] ಕಾಣಿಸಲ್ಪಟ್ಟ ಸಮಿತಿಯ ೧೦ ಸದಸ್ಯರ[...] ಪ್ರಜಾ ಮಂಡಲಕ್ಕೆ ಬಹುಪಕ್ಷವಿರಲಿ[...]

ಮೊದಲನೆಯ ಪ್ರಕಟಣೆಯಲ್ಲಿ ತೋ[...] ಮಂತೆ ಶ್ರೀ. ವಲ್ಲಭಾಯಿ ಪಟೇಲರೂ ಠ[...] ಕೋರ್ ಸಾಹೇಬರೂ ಕೂಡಿ ಮಾಡಿ[...] ನಿರ್ಧಾರದ ತತ್ವಗಳಿಗೆಲ್ಲ ಎರಡನೆಯ [...] ಕಟಣೆಯು ಮದ್ದು ಅರೆಯುತಿದ್ದುದರಿಂ[...] ಪಟೇಲರು ರಾಜಕೋಟೆಯಲ್ಲಿ ಸತ್ಯಾಗ್ರ[...] ಸಮರವನ್ನು ತೊಡಗಬೇಕಾಯಿತು. ಗಾಂ[...] ಧೀಜಿಯವರು ಹೋಗಿ ಸಂಬಂಧಪಟ್ಟ[...] ಲ್ಲವರೊಡನೆಯೂ ವಿಚಾರಮಾಡು[...] ಮೂರು ದಿನ ಕಳೆದು ಕೊನೆಗೆ ತಾ ೨[...] ಠಾಕೂರ್ ಸಾಹೇಬರಿಗೆ ಒಂದು ಪತ್ರ[...] ನ್ನು ಕಳುಹಿದರು. ಅದರಲ್ಲಿ ೧ ದಶಂ[...] ೨೬ರ ಪ್ರಕಟಣೆಯನ್ನೇ ಸ್ಥಿರಗೊಳಿಸ[...] ಕು. ೨ ಜನವರಿ ೨೧ರದನ್ನು ರದ್ದುಗೊ[...] ಸತಕ್ಕದ್ದು. ೩ ಸತ್ಯಾಗ್ರಹ ಚಳುವಳಿ[...] ಸಂಸ್ಥಾನಿಕ ಮುಂದಾಳಾದ ಶ್ರೀ. ದೇ[...] ರ್ ಸಹಿತ ಪ್ರಜಾಮಂಡಳಿಯು ನಿಯೋ[...] ಸುವ ಏಳು ಮಂದಿಯನ್ನು ಆ ಸುಧಾ[...] ಸಮಿತಿಯಲ್ಲಿ ಸೇರಿಸಿಕೊಳ್ಳಬೇಕು. ೪ [...] ಭಾರದು ಅದರ ಅಧ್ಯಕ್ಷರಾಗಿರತಕ್ಕದು[...] ಸಮಿತಿಯಲ್ಲಿರುವ ಮೂವರು ಅಧಿಕಾರಿ[...] ದಸ್ಯರಿಗೆ ವೋಟು ಕೊಡುವ ಹಕ್ಕು [...] ಬಾರದು. ೬ ದಶಂಬರದ ಪ್ರಕಟಣೆ[...]

SAVING MONEY AND TIME

Thousands of prudent and thriving businessmen prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK LIMITED



"ಶೆಂಕ್ಸ"
SHANKS
(ಇಂಗ್ಲಿಷ್ ಮೇಕ್)
ಕ್ರೂಡ್ ಆಯಿಲ್ ಎಂಜಿನುಗ[...]

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ[...]

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗ[...]
"ಶೆಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ(ಹಲ್ಲರ್ ಮತ್ತು ಕಂಬ್ಯಾ[...] ಪ್ಲಾಂಟ), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಯಿರಿ—

ಪೆರಮೌಂಟ್ ಇಂಜಿನೀಯರಿಂಗ್ ಕೋರ್ಪೊರೇಶನ್
೮೨, ಎಪ್ಪೋಲೋ ಸ್ಟ್ರೀಟ್, ಫೋರ್ಟ . . . . ಮುಂಬಯಿ.

Paramount Engineering Corporation,
82 Appolo Street, Fort, BOMBAY.

ತತ್ಕ್ಷಣ ರಾಜಕೋಟೆಯ ಪ್ರಸ್ತುತ ಎಡ್ಮಿನಿಸ್ಟ್ರೇಟರ್ ಕೌನ್ಸಿಲಿನಲ್ಲಿ ತೋರಿಬರಬೇಕು. ಪ್ರಕಟಣೆಯ ಪ್ರಕಾರ ನಿಯೋಜಿಸಲ್ಪಡುವ ಸಮಿತಿಯ ಸದಸ್ಯರ ಚುನಾವಣೆಯನ್ನೂ ತನ್ನ ಅಭಿಪ್ರಾಯವನ್ನೂ ಕೇಳಿ ಮಾಡತಕ್ಕದು. ೨ ಇಂದೇ ಎಲ್ಲ ಸತ್ಯಾಗ್ರಹಿ ಕೈದಿಗಳು ಬಿಡುಗಡೆಯಾಗಬೇಕು ರೆಸಿಡೆಂಟ್ ಗಿಬ್ಸನ್‌ರವರು ಮೊದಲನೆಯ ಪ್ರಕಟಣೆಯನ್ನೇ ಊರ್ಜಿತಪಡಿಸುವ ವಿಷಯದಲ್ಲಿ ವಿರೋಧವಾಗಿಲ್ಲ. ಶ್ರೀ. ವೀರವಲ್ಲರ ಶಕುನಿ ನೀತಿಗೆ ಥಾಕೂರ್ ಸಾಹೇಬರು ಕಿವಿಗೊಡಬಾರದು

ಈ ಸೂಚನೆಗಳನ್ನು ಥಾಕೂರ್ ಸಾಹೇಬರು ತಾ. ೩ನೆಯ ಮಧ್ಯಾಹ್ನದೊಳಗೆ ಅಂಗೀಕರಿಸಲಾಗದೆ ಹೋದರೆ ನಾನು ಉಪವಾಸ ವ್ರತವನ್ನು ಕೈಗೊಂಡು ಇದರ ಅಂಗೀಕಾರವಾಗುವ ತನಕ ಮುನ್ನಡೆಯುವೆನು. ನಿರೀಕ್ಷಿಸಿದ ಸಮಯಕ್ಕೆ ಥಾಕೂರರ ಪ್ರತ್ಯುತ್ತರ ಬರಲಿಲ್ಲ ಗಾಂಧೀಜಿಗಳು ಉಪವಾಸ ದೀಕ್ಷೆಯನ್ನು ಕೈಗೊಂಡ ಅನಂತರ ಪ್ರತ್ಯುತ್ತರ ಬಂತು. ಆದರೆ, ಅದರಲ್ಲಿ ಗಾಂಧಿಜಿಗಳ ಸೂಚನೆಗಳನ್ನು ಮನ್ನಿಸಲಾಗುವುದಿಲ್ಲವೆಂದಿತ್ತು.

ಉಪವಾಸ ದೀಕ್ಷೆಯನ್ನು ಯಾರು ಎಲ್ಲಿ ಯಾವಾಗ ಕೈಕೊಳ್ಳಬಹುದು? ಗಾಂಧೀಜಿಯವರ ಸ್ಪಷ್ಟೀಕರಣ

ತಾನು ಉಪವಾಸ ಸತ್ಯಾಗ್ರಹ ಶಸ್ತ್ರವನ್ನುಪಯೋಗಿಸಿದೆನೆಂದು ಇತರರೂ ತನ್ನನ್ನು ಅನುಸರಿಸಬಾರದೆಂದು ಜನತೆಗೆ ಎಚ್ಚರಿಕೊಡುತ್ತ ಉಪವಾಸ ಕೈಕೊಳ್ಳಬೇಕಾದ ಸನ್ನಿವೇಶಗಳ್ಯಾವುವೆಂಬುದನ್ನು ಹೀಗೆ ವಿಶದೀಕರಿಸಿರುತ್ತಾರೆ ನಾನು ರಾಜಕೋಟೆಯ ಹಾಗೂ ಅದರ ಆಳರಸರ ನಿಕಟ ಸಂಬಂಧವುಳ್ಳವನು. ಈಗಿನ ರಾಜರ ಮುತ್ತಾತರ ಕಾಲದಲ್ಲಿ ನನ್ನ ತಂದೆಯು ರಾಜಕೋಟೆಯ ದಿವಾನರಾಗಿದ್ದರು. ರಾಜಕೋಟೆಯು ನನ್ನ ಹುಟ್ಟೂರು. ನನ್ನ ಜೀವನದ ಮೊದಲ ಅಂಶಕ್ಕೆ ರಾಜಕೋಟೆಯೇ ರಂಗಭೂಮಿ. ಇಂದಿನ ರಾಜರ ತಂದೆಯು ನನ್ನ ಹಾರ್ದಿಕ ಮಿತ್ರರಲ್ಲೊಬ್ಬರು, ಅದು ಕಾರಣ ನಾನು ಥಾಕೂರ್ ಸಾಹೇಬರನ್ನು ಪುತ್ರ ಸಮವಾತ್ಸಲ್ಯದಿಂದ ನೋಡುತ್ತೇನೆ. ಆದುದರಿಂದ ನಾನೇ ನನ್ನನ್ನು ಆತ್ಮಹಿಂಸೆಗೆ ಗುರಿಪಡಿಸಿಯಾದರೂ ಥಾಕೂರ್ ಸಾಹೇಬರ ಹೃದಯದಲ್ಲಿ ಉದಾತ್ತಗುಣ ಪ್ರೇರಣೆಮಾಡಲು ನನಗೆ ಹಕ್ಕಿದೆ. ಈ ತರದ ನೈತಿಕ ಒತ್ತಾಯವು ಬಲವತ್ಪ್ರಯೋಗವೆಂದು ಪರಿಗಣಿಸಲ್ಪಡುವುದಾದರೆ ಅಂತಹದೂ ಆವಶ್ಯಕವೇ. ಹೀಗೆ ಆತ್ಮೀಯತೆಯ ನಿಕಟಸಂಬಂಧವಿರದ ಸನ್ನಿವೇಶಗಳಲ್ಲಿ ಉಪವಾಸ ಸತ್ಯಾಗ್ರಹವು ಯೋಗ್ಯವಲ್ಲ. ಹಿಟ್ಲರನ ಕೃತ್ಯಗಳನ್ನು ವಿರೋಧಿಸುವುದಕ್ಕಾಗಲೀ ಜಪಾನಿಯರ ಚೀನಾ ದಂಡಯಾತ್ರೆಯ ಪ್ರತಿರೋಧ ಸೂಚಕವಾಗಿಯಾಗಲೀ, ಎಕ್ಕೆ, ಹೈದರಾಬಾದ್, ಕಾಶ್ಮೀರ ಸಂಸ್ಥಾನಗಳ ಶಾಸನಗಳಲ್ಲಿ ಅಸಂತೃಪ್ತಿ ವ್ಯಕ್ತಪಡಿಸುವುದಕ್ಕಾಗಲೀ ನಾನು ಉಪವಾಸ ವ್ರತವನ್ನು ಕೈಕೊಳ್ಳುತ್ತಿದ್ದಿಲ್ಲ. ಏಕೆಂದರೆ ಸಂಬಂಧಪಟ್ಟ ಆಯಾ ಅಧಿಕಾರಿಗಳಲ್ಲಿ ವೈಯಕ್ತಿಕವಾದ ವಿಶೇಷ ಸಂಸರ್ಗವಾಗಲೀ ಸ್ವಕೀಯತೆಯಾಗಲೀ ನನಗಿಲ್ಲ. ಆದಿಲ್ಲದೆ ಉಪವಾಸ ವ್ರತವು ನಿಷ್ಪ್ರಯೋಗ, ಈ ದೃಷ್ಟಿಯಿಂದ ನೋಡಿದರೆ ರಾಜಕೋಟೆಯ ಪ್ರಶ್ನೆಯಲ್ಲಿ ಉಪವಾಸ ಸತ್ಯಾಗ್ರಹಾಸ್ತ್ರವನ್ನು ಹೂಡುವ ಹಕ್ಕು ಮತ್ತು ಕೌಶಲ್ಯ ನನ್ನಲ್ಲಿ ಮಾತ್ರ ಇವೆ. ಆದುದರಿಂದ ಇತರರು ನನ್ನನ್ನು ಅನುಕರಿಸದಿರಲಿ! ಎಂದಿದ್ದಾರೆ ಗಾಂಧೀಜಿಯವರು.

ಗಾಂಧೀಜಿಗಳ ಉಪವಾಸದ ೩ನೇ ದಿನ.

ತಾರೀಕು ೫

ಎರಡು ದಿನಗಳಲ್ಲಿ ೨ ರಾತಲು ಭಾರ ಕಡಿಮೆ—ಶ್ರೀ. ಕಸ್ತೂರೀ ಬಾಯಿಯವರ ಆಗಮನ—ತ್ರಿಪುರಿ ಕಾಂಗ್ರೆಸ್ ಪ್ರತಿನಿಧಿಗಳಿಗೂ ಬೋಸರವರಿಗೂ ಗಾಂಧೀಜಿಗಳ ಆಗ್ರಹದ ವಿನಂತಿ—ಕಾಂಗ್ರೆಸು ಮಂತ್ರಿಮಂಡಲಗಳಿಂದ ವೈಸರಾಯರಿಗೆ ತಂತಿಗಳು—ರಾಜಕೋಟೆಯ ಪ್ರಶ್ನೆಯಲ್ಲಿ ಕೂಡಲೆ ಪ್ರವೇಶಿಸದಿದ್ದರೆ ಬೊಂಬಾಯಿ ಮಂತ್ರಿ ಮಂಡಲದ ರಾಜಿನಾಮೆಯ ನಿರ್ಧಾರ.

○

ಗಾಂಧೀಜಿಗಳು ಸರ್ಪಚಿತ್ತರಾಗಿರುವರು ತಾನಿರುವ ರಾಷ್ಟ್ರೀಯ ಶಾಲೆಯ ಆಶ್ರಮ ನಿವಾಸಿಗಳೊಡನೆ ಮಾತುಕತೆಗಳಲ್ಲಿ ವಿನೋದದ ಮಿಂಚು ಬೀಸುವರು. ಆದರೆ ಕಳೆದ ಎರಡು ದಿನಗಳ ಉಪವಾಸದಿಂದ ಎರಡು ರಾತಲು ಭಾರ ಕಡಿಮೆಯಾಗಿದೆ. ಅನುದಿನದ ತನ್ನ ಬೆಳಗ್ಗಿನ ಮತ್ತು ಸಾಯಂಕಾಲದ ಪ್ರಾರ್ಥನೆಗಳಿಗಾಗಿ ಒಂದೂವರೆ ತಾಸು ಕಳೆಯುವುದಲ್ಲದೆ ಬೆಳಗ್ಗಿನ ಹೊತ್ತಿನಲ್ಲಿ ಭಗವದ್ಗೀತೆಯನ್ನೂ ತುಲಸೀದಾಸ ರಾಮಾಯಣವನ್ನೂ ಓದಿಸಿ ಮೌನ ಧ್ಯಾನದಿಂದ ಕೇಳುತ್ತಿರುವರು. ಉಳಿದ ಹೊತ್ತು ಪತ್ರಿಕೆಗಳನ್ನು ಓದುವರು. ಪತ್ರ ವ್ಯವಹಾರಗಳನ್ನು ಕನಿಷ್ಠಾವಧಿಗೆ ಇಳಿಸಿದ್ದಾರೆ ಹಗಲಿನ ಸಕೆಯನ್ನು ತಗ್ಗಿಸಿಕೊಳ್ಳಲಿಕ್ಕೆ ತಲೆಗೆ ಮೃತ್ತಿಕಾ ಲೇಪನವನ್ನು ಹಾಕಿಕೊಳ್ಳುವುದರಿಂದ ವಿಶ್ರಾಂತಿಗೆ ಅನುಕೂಲವಾಗಿದೆ. ರಾತ್ರೆಯ ಹವಾಸ್ಥಿತಿಯು ತಂಪಾಗಿಯೂ ಹಿತವಾಗಿಯೂ ಇರುವುದರಿಂದ ವಿಶ್ರಾಂತಿಗೆ ಭಂಗವಾಗುವುದಿಲ್ಲ—ಎದೆಗುಂಡಿಗೆಯ ಸ್ಥಿತಿಯು ಹಿಂದಿನೆರಡು ದಿವಸಗಳಲ್ಲಿದ್ದಂತೆಯೇ ಇದೆ ರಕ್ತದ ಒತ್ತಾಟ ೧೮೦-೧೧೦. ರಾತ್ರೆ ಸಾಧಾರಣ ನಿದ್ದೆ ಬೀಳುತ್ತದೆ. ಆದರೆ ಉಪವಾಸ ತೊಡಗಿದಂದಿನಿಂದ ನಿತ್ರಾಣವು ಹೆಚ್ಚುತ್ತಿದೆ. ಭಾರದಲ್ಲಿ ಎರಡು ರಾತಲು ಕಡಿಮೆಯಾಗಿದ್ದಾರೆ,

ಶ್ರೀಮತಿ ಕಸ್ತೂರಿ ಬಾಯಿಯವರ ಆಗಮನ

ಮೊದಲ ದಿನ ಗಾಂಧಿಜಿಯವರು ಉಪವಾಸ ತೊಡಗಿದ ಸುದ್ದಿಯನ್ನು ಬಾಯಿಯವರಿಗೆ ಮುಟ್ಟಿಸಲು ತ್ರಾಂಬಾಕ್ಕೆ ಹೋದ ಡಾ| ಸುಶೀಲಾ ನಾಯರ್ ಮುಂತಾದವರಿಗೆ ಅಲ್ಲಿಗೆ ಪ್ರವೇಶದ ಅಪ್ಪಣೆ ಸಿಗಲಿಲ್ಲ. ಆದರೆ ಮರುದಿನ ಅಧಿಕಾರಿಗಳು ಅಪ್ಪಣೆಕೊಟ್ಟರು. ಮೂರನೆಯ ದಿನ ಮಧ್ಯಾಹ್ನ ಅಧಿಕಾರಿಗಳೇ ಬಾಯಿಯವರನ್ನು ಕಾರಿನಲ್ಲಿ ಕುಳ್ಳಿರಿಸಿಕೊಂಡು ಗಾಂಧಿಜಿಯವರ ಬಳಿಯಲ್ಲಿ ಬಿಟ್ಟು ತೆರಳಿದರು. ಗಾಂಧೀಜಿಯವರು ರಾಜಕೋಟೆಯಲ್ಲಿ ಇರುವ ತನಕ ಬಾಯಿಯವರು ಅವರ ಬಳಿಯಲ್ಲೇ ಇರಬೇಕೆಂದು ಥಾಕೋರ್ ಸಾಹೇಬರ ಅಪ್ಪಣೆಯಾಗಿತ್ತಂತೆ. ಬಾಯಿಯವರನ್ನು ಕರತಂದು ಬಿಟ್ಟ ಅಧಿಕಾರಿಗಳು ತ್ರಾಂಬಾದಲ್ಲಿ ಅವರನ್ನು ಸಂಸ್ಥಾನದ ಅತಿಥಿಗಳಾಗಿಯೇ ಇರಿಸಲ್ಪಟ್ಟಿತೆಂದರು. ಅದಕ್ಕೆ ಗಾಂಧೀಜಿಯವರು ಆ 'ಅತಿಥಿ' ಶಬ್ದದ ಅರ್ಥ 'ಕೈದಿ' ಯೆಂದೋ ಎಂದು ವಿನೋದದ ನಗು ಬೀರಿದರಂತೆ. ಅಂತೂ ಇಷ್ಟಾದುದು ಗಾಂಧಿಜೀಗಳು ಅಧಿಕಾರಿಗಳಿಗೆ ಎರಡು ಪತ್ರ ಬರೆದ ಮೇಲೆಯೇ.

ತ್ರಿಪುರಿ ಕಾಂಗ್ರೆಸ್ ಪ್ರತಿನಿಧಿಗಳಿಗೆ ಎಚ್ಚರ

ಕಾಂಗ್ರೆಸ್ ಪ್ರತಿನಿಧಿಗಳು ತ್ರಿಪುರಿ ಅಧಿವೇಶನವನ್ನು ಉಪೇಕ್ಷಿಸದೆ ಹೋಗಿ ಸಹಭಾಗಿಗಳಾಗುವುದು ಕರ್ತವ್ಯವಿದೆ. ತೊಂದರೆ ತೊಡಕುಗಳ ನಡುವೆ ಸುಗಮವಾದ ಹಾದಿ ಮಾಡಿಕೊಳ್ಳುವುದು ಅನಿವಾರ್ಯವೆಂಬುದನ್ನು ಪ್ರತಿನಿಧಿಗಳು ಲಕ್ಷ್ಯದಲ್ಲಿಟ್ಟುಕೊಳ್ಳತಕ್ಕದ್ದು. ಭೋಸರು ಪ್ರಸ್ತುತ ದೇಹಾಲಸ್ಯವನ್ನು ಉಪೇಕ್ಷಿಸಿ ಡಾಕ್ಟರರ ಅಭಿಮತವನ್ನು ಮೀರಿ ತ್ರಿಪುರಿಗೆ ಹೋಗುವುದು ಒಳ್ಳಿತಲ್ಲ. ಬದಲಾಗಿ ಕಲ್ಕತ್ತದಲ್ಲಿದ್ದುಕೊಂಡೇ ತ್ರಿಪುರಿಯ ಕಾರ್ಯಕಲಾಪಗಳ ವ್ಯವಸ್ಥೆಯ ಮಾರ್ಗದರ್ಶಿತ್ವವನ್ನು ನಿರ್ವಹಿಸುವುದು ಕ್ಷೇಮ—ಎಂದು ಗಾಂಧೀಜಿಗಳು ಪ್ರಕಟಣೆ ಕೊಟ್ಟಿದ್ದಾರೆ.

ಸರಕಾರದ ಆರೋಪಣೆ ಸುಳ್ಳು

ರಾಜಕೋಟೆಯ ಕೌನ್ಸಿಲು ಪ್ರಕಟಿಸಿದ ಹೇಳಿಕೆಯನ್ನು ಪ್ರತಿಭಟಿಸಿ ಗಾಂಧೀಜಿಯವರು ಪ್ರತ್ಯುತ್ತರವನ್ನು ಪ್ರಸಿದ್ಧಿಗೊಳಿಸಿರುವರು. ಸತ್ಯಾಗ್ರಹಿಗಳ ಮೇಲೆ ಆರೋಪಿಸಲ್ಪಟ್ಟ ಅಸತ್ಯದ ಪ್ರಚಾರಗಳನ್ನು ನಾನು ಅಲ್ಲಗಳೆಯುತ್ತೇನೆ. ಆ ಆರೋಪಣೆಗಳು ನಿಜವೆಂದು ರಾಜಕೋಟೆಯ ಸರಕಾರವು ರುಜು ಪಡಿಸಲಿ. ಹಾಗೆ ಸಿದ್ಧಾಂತಗೊಳಿಸಿದ್ದಲ್ಲಿ ಈ ಸಮರವನ್ನು ನಾನು ಹಿಂತೆಗೆಯುವೆನಲ್ಲದೆ ಅಂತಹ ಅಯೋಗ್ಯ ಪ್ರಜಾವರ್ಗವು ಪ್ರಾತಿನಿಧ್ಯವುಳ್ಳ ಸರಕಾರವನ್ನು ಹೊಂದಲು ಅನರ್ಹವಾಗಿದೆಯೆಂದೂ ನಾನು ಭಾವಿಸುತ್ತೇನೆ—ಎಂದು ಮುಂತಾಗಿ ಸರಕಾರದ ಪ್ರಕಟಣೆಯ ಟೀಕಿಸಿ ಖಂಡಿಸಿ ಬಹಿರಂಗ ಪತ್ರ ಬರೆದಿರುವರು.

ಬಿಹಾರದ ಪ್ರಧಾನ ಮಂತ್ರಿಗಳಿಂದ ಮಂತ್ರಿ ಮಂಡಲದ ಪರವಾಗಿ ವೈಸರಾಯರಿಗೆ ತಂತಿ

ರಾಜಕೋಟೆಯ ಪ್ರಶ್ನೆಯಲ್ಲಿ ಕೈಹಾಕಿ ಪುಟ ೧೩ಕ್ಕೆ

ತಿಂಗಳಿಗೆ ನೀವೆಷ್ಟು ಸಂಪಾದಿಸುತ್ತೀರೆಂಬುದು ದೊಡ್ಡ ವಿಷಯವಲ್ಲ. ಎಷ್ಟು ಉಳಿಸುತ್ತೀರೆಂಬುದೇ ಪ್ರಾಮುಖ್ಯ ಪ್ರಶ್ನೆ. ಏಕೆಂದರೆ ನಿಮ್ಮ ಸಂಪಾದನೆಯು ಕಡಿಮೆಯಾದಾಗ ಅಥವಾ ನಿಂತುಹೋದಾಗ ನಿಮ್ಮ ಮತ್ತು ನಿಮ್ಮ ಸಂಸಾರದ ಕನಿಷ್ಠ ಸುಖ ಸೌಕರ್ಯಗಳು ಯಥಾ ಪ್ರಕಾರ ಒದಗಿಸಿಕೊಡಬಲ್ಲುದು ಆ ಉಳಿತಾಯವೇ.

ಅಂತಹ ನಿಮ್ಮ ಉಳಿತಾಯವು ಬೆಳೆದು ಬಲವಾದ ಭಂಡವಾಳವಾಗಿ ಬರುವಂತೆ ನಿಕ್ಷೇಪಿಸಲಿಕ್ಕೆ ಅತ್ಯುತ್ತಮ ಸ್ಥಾನವೆಂದರೆ

ದಿ ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿ.

ಏಕೆಂದರೆ ಅದು ಉತ್ಕೃಷ್ಟ ಭದ್ರತೆಯುಳ್ಳ ಉಪಯುಕ್ತ ಸಂಸ್ಥೆ.

ಪ್ರಾಮಾಣಿಕತೆ, ಉತ್ಸಾಹ, ಪ್ರತಿಷ್ಠೆಗಳುಳ್ಳವರಿಗೆ ಸಮಾಜ ಸೇವೆ ಮಾಡಲಿಕ್ಕೂ ಯೋಗ್ಯವಾದ ನಿಶ್ಚಿತ ಪ್ರತಿಫಲವನ್ನು ಹೊಂದಲಿಕ್ಕೂ ಒಳ್ಳೆಯ ಅವಕಾಶವಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ಮದ್ರಾಸ್, ಬ್ರಾಂಚ್ ಸೆಕ್ರೆಟರಿಗಳು.

ದಿ ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ದಿ ಬೊಂಬಾಯಿ ಲ್ಯಾಫ್ ಬಿಲ್ಡಿಂಗ್ಸ್, ಗಾಂಧೀನಗರ, **ಉಡುಪಿ.**

ಎಂಬ ಮೇಲಿನ ವಿಳಾಸಕ್ಕಾಗಲೀ ಕೆಳಗೆ ಕಾಣಿಸಿದ ನಮ್ಮ ಇತರ ಯಾವ ಕಾರ್ಯಾಲಯಕ್ಕಾಗಲೀ ಅರ್ಜಿ ಬರೆದುಕೊಳ್ಳಿ.

ಪೋಸ್ಟ್ ಬಾಕ್ಸ್ ನಂ. 337 ಮೌಂಟ್ ರೋಡ್, **ಮದರಾಸು.**	ವಿಶ್ವೇಶ್ವರಪುರ ಸರ್ಕಲ್ **ಬೆಂಗಳೂರು ಸಿಟಿ.**	ಕಾರ್ ಸ್ಟ್ರೀಟ್ **ಮಂಗಳೂರು.**	ಪುತಿಯಾರ **ಕಲ್ಲಿಕೋಟೆ.**

ಸೆಂಟ್ರಲ್ ಸ್ಟೇಶನ್ ರೋಡ್, **ಟ್ರಿವೇಂಡ್ರಮ್.**	ಟ್ಯಾರ್ನಿರೋಡ್ ಗಿರ್ಗಾಮ್, **ಬೊಂಬಾಯಿ ನಂ. 4.**	ಒಟ್ಟಪಾಲಮ್ **ದ. ಮಲಬಾರ್.**

The Tropical Insurance
CO., LTD., DELHI.

ದಿ ಟ್ರೊಪಿಕಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಡೆಲ್ಲಿ.
ಅಧ್ಯಕ್ಷರು:—ಶ್ರೀ. ಸುಭಾಸಚಂದ್ರ ಬೋಸರು.
(ರಾಷ್ಟ್ರಪತಿಗಳು)
ಸಂಸ್ಥಾಪಕ ಡೈರೆಕ್ಟರರು:
ಪಂಡಿತ ಮೋತಿಲಾಲ ನೆಹರು. ಡಾಕ್ಟರ್ ಎಂ. ಎ. ಅನ್ಸಾರಿ.
ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್. ಹಕೀಮ್ ಅಜ್ಮಲ್ ಖಾನ್.
ಪ್ರಗತಿಗಾಮಿಯಾದ ಈ ದೇಶೀ ವಿಮಾಕಂಪೆನಿಯು ಐವರು ರಾಷ್ಟ್ರಪತಿಗಳಿಂದ ಸ್ಥಾಪನೆ ಹೊಂದಿ ನಡೆಸಲ್ಪಟ್ಟದ್ದು.
ಪ್ರಾತಿನಿಧ್ಯಕ್ಕಾಗಿ ಸಂಬಳ ಯಾ ಕಮಿಶನಿನ ಮೇಲೆ ಅರ್ಜಿಗಳು ಸ್ವೀಕರಿಸಲ್ಪಡುತ್ತವೆ.

ಕೆ. ಎಸ್. ರಾಮಮೂರ್ತಿ, ಎಂ. ಎ.
ಬ್ರ್ಯಾಂಚ್ ಸೆಕ್ರಿಟರಿ,
160, ಮೌಂಟ್ ರೋಡು, ಮದ್ರಾಸ್.

ಅಥವಾ

ಎಂ. ಸುಂದರ ರಾಮ ಶೆಟ್ಟಿ,
ಬ್ರ್ಯಾಂಚ್ ಮೆನೇಜರ್,
ಹಂಪನಕಟ್ಟೆ, ಮಂಗಳೂರು.

ಗೊಡ್ಡು ಬೆದರಿಕೆಯಿಂದ ಶಾಂತಿಸ್ಥಾಪನೆಯಾಗುವುದೇ?

ಬ್ರಿಟನ್ನಿನ ದುರ್ಬಲತೆಯಿಂದಾಗಿರುವ ಪರಿಣಾಮ!!
ಜರ್ಮನಿ ಮತ್ತು ಇಟೆಲಿಯ ಕೈಗೊಂಬೆಯಾಗಿ ಸರ್ವನಾಶವಾಗುತ್ತಿದೆ!!!

ಸುಪ್ರಸಿದ್ಧ ರಾಜಕೀಯ ಲೇಖಕರಾದ
ಮೇಜರ್ ದಿ ಗ್ರ್ಯಾಹಾಂ ಪೋಲ್

ಮಾನವನ ಕಲ್ಪನಾಶಕ್ತಿಯು ಶೂನ್ಯವಾಗಿ ವಿರಮಿಸುವ ಸ್ಥಿತಿಗೆ ನಾವು ಬಂದಿರುವೆವೋ? ಕೇವಲ ಬೆದರಿಕೆಯಿಂದ ವಿಶ್ವದಲ್ಲಿ ಶಾಂತಿಸ್ಥಾಪನೆಯಾಗುವುದೇ? ಕಲವು ದಿನಗಳ ಹಿಂದೆ ಬ್ರಿಟನ್ನಿನ ಪ್ರಧಾನರು ಬ್ರಾಡ್‌ಕಾಸ್ಟ್ ಭಾಷಣಮಾಡುತ್ತಾ ಈ ರೀತಿ ಹೇಳಿದ್ದರು. "ಯಾವುದೇ ದೇಶವಾಗಲಿ, ಮತ್ತೊಂದು ದೇಶವನ್ನು ಹಿಂಸೆ ಮತ್ತು ಬಲವಂತದಿಂದ ತನ್ನ ಅಧೀನಮಾಡಿಕೊಳ್ಳಬಯಸಿದರೆ, ನಾನು ಅಂತಹ ಪ್ರಯತ್ನವನ್ನು ವಿರೋಧಿಸಲು ಸರ್ವಶಕ್ತಿಯನ್ನು ವ್ಯಯಮಾಡುವೆನು" ಲಾರ್ಡ್ ಹ್ಯಾಲಿಫಾಕ್ಸರು ಇದೇ ಸಮಯದಲ್ಲೇ "ಜರ್ಮನಿಯು ಜೆಕೋಸ್ಲೋವೇಕಿಯದ ವಿಚಾರದಲ್ಲಿ ಯಾವ ರೀತಿಯನ್ನೇ ಅನುಸರಿಸಿರಲಿ, ಒಟ್ಟಿನಲ್ಲಿ ಹಿಂಸೆ ಮತ್ತು ಬಲವಂತದಿಂದಲೇ ಕೆಲಸ ಸಾಧಿಸಿಕೊಂಡಂತಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಮತ್ತು ರಾಷ್ಟ್ರಸಂಘವು ಈ ವಿಚಾರದಲ್ಲಿ ಏನೂ ಮಾಡಲಾರದೆ ಹೋಯಿತು" ಎಂದರು. ಹಿಟ್ಲರನೂ ಸಹ ಈ ರೀತಿ ಡಂಗುರಸಾರಿದ್ದನು. ನಮ್ಮ ಜಯಕ್ಕೆ ಕಾರಣ ನಮ್ಮ ಶಸ್ತ್ರಸಿದ್ಧತೆಯೇ. ಸಮಯಬಿದ್ದರೆ ನಾವು ಬಲಪ್ರಯೋಗಮಾಡಲು ಎಂದೂ ಹಿಂಜರಿಯುವುದಿಲ್ಲ"

ಬ್ರಿಟಿಷ್ ಪಾರ್ಲಿಮೆಂಟಿನ ಅಧಿವೇಶನದ ಸಿದ್ಧತೆಗಳು ಆಗುತ್ತಿವೆ. ಇದರಲ್ಲಿ ಯುದ್ಧಸಂಭವಿಸಿದರೆ ಯಾವ ಮಾರ್ಗವನ್ನನುಸರಿಸಬೇಕೆಂಬ ತೀರ್ಮಾನವಾಗಬೇಕಾಗಿದೆ. ಕಳೆದ ತಿಂಗಳಲ್ಲಿ ಯುದ್ಧವೇನಾದರೂ ಆರಂಭವಾಗಿದ್ದರೆ ನಾವು ಖಂಡಿತ ಯುದ್ಧಕ್ಕೆ ಸಿದ್ಧರಿರಲಿಲ್ಲ. ಸಾರ್ವಜನಿಕ ಮಾರ್ಗಗಳಲ್ಲಿ ಕಂದಕಗಳನ್ನು ತೋಡುತ್ತಿದ್ದಾನೆ. ಇಷ್ಟೆಲ್ಲ ರಕ್ಷಣಾಕಾರ್ಯವನ್ನು ಮಾಡದ ಹೇಗ ತಾನೇ ಸುಮ್ಮನಿರಲಾದೀತು? ಯುದ್ಧದ ಚರ್ಚೆ ಆರಂಭವಾದ ಕೂಡಲೇ ಪದಾರ್ಥಗಳ ಬೆಲೆಯು ಏರಲಾರಂಭಿಸಿತು. ಮರಳುಚೀಲದ ಬೆಲೆಯು 2ಆಣೆಯಿಂದ 10 ಆಣೆಗೆ ಏರಿದೆ.

ಕಳೆದ ವಾರ ವಾಯುಮಂತ್ರಿಗಿಯಿಂದ ರಕ್ಷಣಾ, ಸೈನ್ಯದ ಅಧಿಕಾರಿಗಳು, ಭೂ ಜಲ ಮತ್ತು ವಾಯುಸೈನ್ಯಗಳ ಆಫೀಸರುಗಳ ಸಭೆಯೊಂದು ಸೇರಿತ್ತು. ಇದರಲ್ಲಿ ಸ್ಪಷ್ಟರೀತಿಯಿಂದ ಬ್ರಿಟನ್ನಿನ ಅಸಹಾಯ ಸ್ಥಿತಿ ಅದು ಯುದ್ಧಕ್ಕೆ ಸಿದ್ಧವಾಗಿಲ್ಲದಿರುವಿಕೆ ಮೊದಲಾದ ವಿಚಾರಗಳು ಚರ್ಚೆಯಾದುವು. ಒಂದು ವೇಳೆ ತಕ್ಷಣದಲ್ಲೇ ಯುದ್ಧವೇನಾದರೂ ಆರಂಭವಾಗುವುದಾದರೆ, ಬ್ರಿಟನ್ನಿಗೆ ಉಳಿಗಾಲವಿಲ್ಲ. ಅಲ್ಲಿನ ಅಧಿಕಾರಿಗಳು "ಇತರ ದೇಶಗಳ ಯುದ್ಧ ಸಿದ್ಧತೆಯೊಡನೆ ನಮ್ಮ ಸ್ಥಿತಿಯನ್ನು ಹೋಲಿಸಿಕೊಂಡರೆ ನಾವು ಬಹಳ ಹಿಂದೆ ಬಿದ್ದಿರುವೆವು" ಎಂದು ಹೇಳಿದರು. ಇದೇನೂ ವಿರೋಧಪಕ್ಷದವರ ಹೇಳಿಕೆಯಲ್ಲ. ಸ್ವಯಂ ಸರ್ಕಾರೀ ಅಧಿಕಾರಿಗಳೇ ಇದನ್ನು ಒಪ್ಪಿಕೊಂಡಿರುವ ವಿಷಯ, ಇದರಿಂದ ಸ್ಥಿತಿಯು ಎಷ್ಟು ಸೂಕ್ಷ್ಮವಾಗಿದೆಯೆಂದು ತಿಳಿಯುವುದು.

ಇಟೆಲಿಯೊಡನೆ ಹೇಗಾದರೂ ಮಾಡಿ ಬೇಗ ಸಂಧಿಯನ್ನು ಮಾಡಿಕೊಳ್ಳಬೇಕೆಂದಿದ್ದರು ಪ್ರಧಾನರು. ಜರ್ಮನಿಯೊಡನೆ ಸಹ ಸ್ನೇಹಗಳಿಸಲು ಬಹಳ ಕಾತರರಾಗಿದ್ದಾರೆ. ಇಟೆಲಿಯು 10ಸಾವಿರ ಸ್ವಯಂಸೇವಕರನ್ನು ಹಿಂದಕ್ಕೆ ಕರೆಸಿಕೊಂಡಿದೆ. ಆದರೆ ಫ್ರಾನ್ಸಿಗೆ ಸಾವಿರಾರು ಬಂದೂಕನ್ನು ಒದಗಿಸಿದೆ. ಈ ಆಯುಧಗಳಿಂದುಂಟಾಗಿರುವ ಹಾನಿಗಿಂತಲೂ ಸ್ಪೇನಿನಲ್ಲಿ ಸ್ವಯಂಸೇವಕರಿಂದ ಉಂಟಾಗಿರುವ ಹಾನಿಯೇನೂ ಅಧಿಕವಲ್ಲವಷ್ಟೆ? ರಷ್ಯವನ್ನು ಕಡೆಗಣ್ಣಿನಿಂದ ನೋಡಲಾಗುತ್ತಿದೆ.

"ನಾವು ಮತ್ತು ಜರ್ಮನಿ" ಎಂಬ ಒಂದು ಪುಸ್ತಕ ಇದರ 99 ಮತ್ತು 100ನೇ ಪುಟದಲ್ಲಿ ಹಿಟ್ಲರನು ಹೇಳಿದ ಮಾತು ಈ ರೀತಿ ಇದೆ. "ರಷ್ಯದ ಬಲವು ಬಹಳ ಹೆಚ್ಚಿದೆ ಜಗತ್ತಿನಲ್ಲೆಲ್ಲಾ ಬಲಯುತವಾದ ವಾಯುಬಲವು ರಷ್ಯದಲ್ಲಿದೆ."

ಇಂತಹ ವಿಷಮ ಪರಿಸ್ಥಿತಿಯಲ್ಲಿ ಲಾಯಿಡ್ ಜಾರ್ಜರು ಒಂದೇ ಒಂದು ಸಲ ಬಾಯ್ಬಿಟ್ಟರು ಅವರು ಹೇಳುವುದೇನಂದರೆ "ರಷ್ಯದ ವಾಯುಸೈನ್ಯವು ಬಹಳ ದೊಡ್ಡದು, ಪ್ರಬಲ, ಇತ್ತ ಕಡೆ ಫ್ರಾನ್ಸಿನ ಸೈನ್ಯವೂ ಬಹಳ ಉತ್ತಮವಾದುದು. ಮಂಚೂರಿಯಾ, ಅಬಿಸೀನಿಯಾ, ಸ್ಪೇನ್, ಚೀನ, ಮತ್ತು ಆಸ್ಟ್ರಿಯ ಇವುಗಳನಂತರ ಜೆಕೋಸ್ಲೋವೇಕಿಯದ ವಿಚಾರದಲ್ಲಿ ನಮ್ಮ ದೌರ್ಬಲ್ಯವು ಜಗತ್ತಿಗೆಲ್ಲ ಗೊತ್ತಾಯಿತು. ಮೊದಲು ಅನೇಕ ಜನಾಂಗಗಳು ನಮ್ಮ ಪರವಾಗಿದ್ದುವು ಆದರೆ ಈಗ ಜಗತ್ತು ಬ್ರಿಟನ್ ಮತ್ತು ಫ್ರಾನ್ಸಿನ ಮುಂದಾಳುತನಕ್ಕೆಂದು ಕಾಯುತ್ತಿಲ್ಲ. ಜರ್ಮನಿಯ ಡಿಕ್ಟೇಟರರ ಕಡೆಗೆ ಹೆದರಿಕೆಯ ದೃಷ್ಟಿಯಿಂದ ನೋಡುತ್ತಿದೆ."

ಆದರೆ ಈಗ ನಾವು ಶಾಂತಿಯಲ್ಲಿರುವೆವೆಂದು ಹೇಳಿದರೆ ಆ ಶಾಂತಿಯ ಅರ್ಥವೇ ಬೇರೆಯಾದಂತಾಗುತ್ತದೆ. ಬ್ರಿಟಿಷ್ ಪ್ರಧಾನರು ಯುದ್ಧವನ್ನು ಸ್ವಲ್ಪಕಾಲದವರೆಗೆ ನಿಲ್ಲಿಸಲು ಸಮರ್ಥರಾದರಷ್ಟೆ. 1921 ರಲ್ಲಿ ನೇಷನಲ್ ಸರ್ಕಾರ ಪದವಿಗೆ ಬಂದಾಗ, ರಷ್ಯನ್ನರಿಗೆ ವಿರೋಧವಾಗಿ ಆರ್ಥರ್ ಹ್ಯಾಂಡರ್‌ಸನ್ ಮಾಡಿದ ಪ್ರಯತ್ನವು ವಿಫಲವಾಯಿತು. ಬಾಲ್ಡ್‌ವಿನ್ನರು ಸಹ ಚುನಾವಣೆಯ ಸಮಯದಲ್ಲಿ ಪ್ರಮಾಣಮಾಡಿ ಈ ರೀತಿ ಹೇಳಿದ್ದರು' ಜಗತ್ತಿನಲ್ಲಿ ಎಲ್ಲಿಯೇ ಆಗಲಿ ಹಿಂಸೆ ಅತ್ಯಾಚಾರಗಳು ಆಗದಂತೆ ನೋಡಿಕೊಳ್ಳುವೆವು, ಶಾಂತಿ ಸ್ಥಾಪಿಸುವೆವು. ಇದು ಬರೇ ಕನಸಾಯಿತು. ಒಂದು ಬೇಳನ್ನು ಸಹ ಅಲ್ಲಾಡಿಸದೆ ಮುಸೋಲಿನಿಯು ಅಬಿಸೀನಿಯವನ್ನು ನುಂಗಿದನು. ಇನ್ನು ಪ್ರಧಾನ ಮಂತ್ರಿಗಳು ಆಂಗ್ಲೋ-ಇಟೆಲಿಯ ಸಂಧಿ ಸಂಧಾನದ ಸುಖಸ್ವಪ್ನವನ್ನೂ ಕಾಣುತ್ತಿರುವರು. ಏಕೆಂದರೆ ಇದರಿಂದ ಇಟೆಲಿಯ ಚಕ್ರವರ್ತಿಯನ್ನೂ ಅಬಿಸೀನಿಯದ ಧೊರೆಯೆಂದು ಸಾರಬಹುದು. ಟೋರಿ ಪಂಗಡವು ಇಂಗ್ಲಿಷರನ್ನು ಅವಮಾನಗೊಳಿಸಿದಷ್ಟು ಇನ್ನಾರೂ ಮಾಡಿರುವುದಿಲ್ಲ.

ನಾವು ಶಾಂತಿಸ್ಥಾಪಿಸುವೆವು. ಜನರನ್ನು ವ್ಯತ್ಯಾಸದ ದವಡೆಗಳಿಂದ ರಕ್ಷಿಸುವೆವು ಎಂದು ಚೇಂಬರ್ಲೇನರು ಭುಜಚಪ್ಪರಿಸುತ್ತಿರುವರು ನಿಜವಾಗಿಯೂ ಈ ರೀತಿ ಆಗಿದೆಯೇ? ಯುದ್ಧವನ್ನೂ ಇಷ್ಟು ಸುಲಭವಾಗಿ ತಡೆಯುವುದು ಸಾಧ್ಯವೆ? ಹಿಂಸೆ ಅತ್ಯಾಚಾರ ಇವುಗಳನ್ನು ಕ್ರಮಬದ್ಧವಾದ ರೀತಿಯಿಂದ ತಡೆಯದಿದ್ದರೆ ಇದೂ ಸಾಧ್ಯವಿಲ್ಲ ಒಂದು ಮಹಾ ಸಭೆಯನ್ನೇರ್ಪಡಿಸಿ ಅದರಲ್ಲಿ ರಾಜಕೀಯ ಸ್ವಾತಂತ್ರ್ಯ ವಸ್ತು ಹಕ್ಕುಗಳು ಇವನ್ನು ತೀರ್ಮಾನಿಸಬೇಕು ಎಲ್ಲರಿಗೂ ಶಾಂತಿಯೇನೋ ಬೇಕು. ಆದರೆ ಎಲ್ಲಿವರೆಗೆ ಎಲ್ಲರೂ ಐಕ್ಯಮತ್ಯದಿಂದ ಇದಕ್ಕಾಗಿ ಪ್ರಯತ್ನಿಸುವುದಿಲ್ಲವೋ ಅಲ್ಲಿವರಗೆ ಅವಮಾನದ ಮೇಲೆ ಅವಮಾನವನ್ನು ಹೊಂದುವುದು ಅನಿವಾರ್ಯ.

ನಮ್ಮ ಸರ್ಕಾರವು ಯಾವಾಗಲೂ ಸಮಯ ನಿರೀಕ್ಷಣೆಯಲ್ಲಿಯೇ ಸಮಯತಳ್ಳುತ್ತಿದೆ 1931ರಿಂದಲೂ ಇದೇ ಸ್ಥಿತಿಯಾಗಿದೆ. ಈ ಕೊಳಕು ಗುಂಡಿಯಲ್ಲಿ ಇನ್ನೆಷ್ಟು ಕಾಲವಿರಬೇಕೆಂಬುದೇ ಮುಂದಿನ ಪ್ರಶ್ನೆ.

ಭಯದಿಂದ ಸ್ಥಾಪಿಸಲ್ಪಟ್ಟ ಶಾಂತಿಯು ಶಕ್ತಿಯ ಮೂಲಕ ಸಂಪಾದಿಸಿದ ಶಾಂತಿಯಷ್ಟು ಮಹತ್ವದ್ದಲ್ಲ.

ಕಾನೂನು ನ್ಯಾಯ ಇವುಗಳ ರಕ್ಷಣೆಯಾಗದಿದ್ದಲ್ಲಿ ಹಿಂಸೆ ಬಲ ಪ್ರಯೋಗಗಳ ರಾಜ್ಯಭಾರವೇರ್ಪಡುವುದು

ದೇವರ ಪ್ರಾರ್ಥನೆಮಾಡುವುದಕ್ಕೆ ಸಹ ಅವಕಾಶವಿಲ್ಲದ ಶಾಂತಿಯು ಶಾಂತಿಯೆ?

ದೇಶದ ಹಣವನ್ನೆಲ್ಲ ಯುದ್ಧ ಸಾಮಗ್ರಿಗಾಗಿ ಖರ್ಚುಮಾಡುವುದರಿಂದುಂಟಾಗುವ ಶಾಂತಿಯು ಶಾಂತಿಯಲ್ಲ

ನಮ್ಮ ಸರಕಾರವು ಇದರ ಅಭಿಪ್ರಾಯವನ್ನು ತಿಳಿದು ನಿಜವಾದ ಶಾಂತಿ ಸ್ಥಾಪನೆಗೆ ಯತ್ನಿಸುವುದೆ?

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ. **2—4—0.**

ಸಣ್ಣ, ಸುಂದರ, ಆಕಾರ ಗಟ್ಟಿ ಮತ್ತು ಮಧ್ಯದ ಮೆಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರೆಂಟಿ ಮುಂತಾದ್ದು, ದೀರ್ಘ ಚಿತ್ರ ಷ್ಟೋನಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4 0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮದ್ದಕ್ಕೆ 3-4-0, ಸುವರ್ಣದಕ್ಕೆ ರೂ 3 8-0 ಅತ್ಯುತ್ತಮವಾದುದಕ್ಕೆ ರೂ. 4 8 0, ಚಿತ್ರದಲ್ಲಿ ತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0-0, ಬೆಲೆಬಾಳುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ 10-0-0 ಟ ಪಿ. ಪ್ರತ್ಯೇಕ

ಎಚ್. ಡಾವಿದ್ ಅಂಡ್ ಕೊ.
ಪೊ. ಬಾಕ್ಸ್ 11424 ಕಲ್ಕತ್ತ.
H. David & Co.
Post Box No. 11424, Calcutta

ಕೆ. ಟಿ. ಭಾಷ್ಯಂರವರಿಗೆ ರಾಜ್ಯಪ್ರವೇಶ ಬಹಿಷ್ಕಾರ!

ಸಿಪಾಯಿ ದಂಗೆಯ ಕಾಲದಲ್ಲಿ ಹೋರಾಡಿದವರೊಬ್ಬರು ತನ್ನ ನೂರ ಎರಡನೆಯ ವಯಸ್ಸಿನಲ್ಲಿ ಮೊನ್ನೆ ತೀರಿಕೊಂಡರು.

ಅವರ ಹೆಸರು ಖಾನ್ ಸಾಹೇಬ್ ಖಾಜಿ ಖಾಜಾ ಮೊಯಿನುದ್ದೀನ್ ಸಾಹೇಬ್, ನಂದ್ಯಾಲದ ಖಾಜಿ ಅವರು. ೧೮೫೭ನೆಯ ಇಸವಿಯ ಸಿಪಾಯಿ ದಂಗೆಯ ಸಮಯ ಅವರಿಗೆ ಇಪ್ಪತ್ತು ವರ್ಷ ಪ್ರಾಯವಾಗಿತ್ತಂತೆ. ಆಗ ಕರ್ನೂಲನ್ನು ಮಂಗರರು ಹೇಗೆ ದಾಳಿಯಿಟ್ಟರೆಂದೂ ಆಗ ಅದರ ರಕ್ಷಣೆಯಲ್ಲಿ ತಾನು ಯಾವ ರೀತಿ ಕಾದಾಡಿದನೆಂದೂ ಕಣ್ಣುಮುಂದೆ ನಡೆದಂತೆ ವರ್ಣಿಸುತ್ತಿದ್ದರಂತೆ.

ಸಿಂಧ್ ನ್ಯಾಯ ವಿಧಾಯಕ ಸಭೆಯ ಉಪಾಧ್ಯಕ್ಷಸ್ಥಾನವು ಸ್ತ್ರೀಗೆದೊರಕಿತು.

ಸಿಂಧ್ ನ್ಯಾಯ ವಿಧಾಯಕ ಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಉಮೇದ್ವಾರರಾಗಿ ಕುಮಾರಿ ಸಿಪ್ಪೈ ಮಿಲಾನಿಯವರೂ ಶ್ರೀ. ಗೋವಿಂದ ರಾಮರವರೂ ನಿಂತರು ಸರಿಸಮ ಮತಗಳು ಇವರಿಗೆ ದೊರಕಲಾಗಿ ಸ್ಪೀಕರರು ತಮ್ಮ ಮತವನ್ನು ಕುಮಾರಿಯ ಪರವಾಗಿ ಉಪಯೋಗಿಸಿದುದರಿಂದ ಸ್ತ್ರೀಯು ಕೈಯೇ ಮೇಲಾಯಿತು. ಇದೂ ಕೂಡಿ ಮೂರು ಪ್ರಾಂತಿಕ ನ್ಯಾಯ ವಿಧಾಯಕ ಸಭೆಗಳಲ್ಲಿ ಸ್ತ್ರೀಯರು ಉಪಾಧ್ಯಕ್ಷೆಯರಾದಂತಾಯಿತು.

ಕೆ. ಟಿ. ಭಾಷ್ಯಂ ಇವರಿಗೆ ರಾಜ್ಯಪ್ರವೇಶ ಬಹಿಷ್ಕಾರ—ತಿರುವಾಂಕೂರಿನಲ್ಲಿ

ಅಖಿಳ ತಿರುವಾಂಕೂರು ವಿದ್ಯಾರ್ಥಿಗಳ ಸಂಯುಕ್ತ ಮಂಡಳಿ (ಫೆಡರೇಶನ್) ದ ಅಧಿವೇಶನವು ಮೈಸೂರಿನ ಶ್ರೀ ಕೆ. ಟಿ. ಭಾಷ್ಯಂ ಇವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ತಾ. ಇರಂದು ಟ್ರಿವೇಂಡ್ರಮಿನಲ್ಲಿ ನಲ್ಲಿ ಜರಗುವುದಾಗಿ ಜನಜನಿತವಾದುದದನ್ನು ತಿರುವಾಂಕೂರು ಸರಕಾರವು ಕಂಡು ವಿದ್ಯಾರ್ಥಿಗಳ ಆ ಫೆಡರೇಶನ್ ಎಂಬುದು ಸರಕಾರ ವಿದ್ಯಾಖಾತೆ ಮತ್ತು ಯೂನಿವರ್ಸಿಟಿ ಅಧಿಕಾರಿಗಳ ದೃಷ್ಟಿಯಲ್ಲಿ ವಿದ್ಯಾರ್ಥಿಗಳಿಗೆ ಹಾನಿಕಾರಕವಾದ ಸಂಸ್ಥೆಯೆಂದು ಪರಿಗಣಿಸಲ್ಪಟ್ಟು ಅಂಗೀಕೃತವಾಗದಿರುವ ಸಂಸ್ಥೆಯಾಗಿರುವ ಪ್ರಯುಕ್ತ ಮತ್ತು ಭಾಷ್ಯಂರವರು ವಿದ್ಯಾರ್ಥಿಗಳನ್ನು ವಿವಾದಾಸ್ಪದವಾದ ರಾಜಕೀಯಗಳಿಗೆ ಇಳಿಸುವ ಧೋರಣೆಯಿರುವ ವ್ಯಕ್ತಿಯಾಗಿರುವುದರಿಂದ ಅವರು ಆ ಅಧ್ಯಕ್ಷತನವನ್ನು ನಿರ್ವಹಿಸುವರೆ ತಿರುವಾಂಕೂರು ಸಂಸ್ಥಾನದೊಳಗೆ ಕಾಲಿಡಕೂಡದೆಂದು ಟ್ರಿವೇಂಡ್ರಮಿನ ಡಿ. ಮೆಜಿಸ್ಟ್ರೇಟರ ಹುಕುಂ.

ರಥಕ್ಕೆ ಬೆಂಕಿಹಿಡಿಯಿತು ಕುಂಭಕೋಣದಲ್ಲಿ

ಮಾಖಾ ಮಹೋತ್ಸವದ ಸಂದರ್ಭದಲ್ಲಿ ಕುಂಭೇಶ್ವರ ಸ್ವಾಮಿ ದೇವಸ್ಥಾನದ ಮಹಾರಥವು ಇತರ ನಾಲ್ಕು ರಥಗಳೊಡನೆ ದೇವಸ್ಥಾನದ ಸುತ್ತು ಎಳೆಯುತ್ತಿದ್ದಾಗ ಉತ್ತರ ಬೀದಿಯಲ್ಲಿ ಅದರ ತುದಿಯು ವಿದ್ಯುತ್ ಸರಿಗೆಗಳಿಗೆ ತಾಗಲಾಗಿ ತೇರಿನ ಮೇಲ್ಪುರೆಯ ಬಟ್ಟೆಯ ಅಲಂಕಾರಗಳಿಗೆಲ್ಲ ಒಮ್ಮಿಂದೊಮ್ಮೆಗೆ ಬೆಂಕಿಹಿಡಿದುಕೊಂಡುಬಿಟ್ಟಿತು. ಉತ್ಸವ ಮೂರ್ತಿಯ ಬಳಿಯಲ್ಲಿದ್ದ ಅರ್ಚಕನು ಕೆಳಗೆ ಹಾರಿದ. ಉರಿಯುತ್ತಿರುವ ತೇರಿಗೆ ಹತ್ತಿ ಮೂರ್ತಿಯನ್ನು ಕೆಳಗೆ ತರಲು ಮೊಕ್ತೇಸರರೂ ಇತರ ಅರ್ಚಕರೂ ಮಾಡಿದ ಪ್ರಯತ್ನಗಳು ನಿರರ್ಥಕವಾಗಲು ಎಡೆಗಾರಿಕೆಯುದ್ದವರ್ಯಾರೋ ತೇರನ್ನು ಹತ್ತಿ ಮೂರ್ತಿಯನ್ನು ಕೆಳಗೆ ಬಿಸುಟರು. ಇನ್ನು ಕೆಲವರು ರಥವನ್ನೇರಿ ಬೆಂಕಿಯನ್ನು ನಂದಿಸುವುದರಲ್ಲಿ ಪ್ರಾಣದ ಹಂಗುತೊರೆದು ಪ್ರಯತ್ನಪಟ್ಟದರಿಂದ ತೇರಿನ ಅಲಂಕಾರ ಭಾಗಕ್ಕಲ್ಲದೆ ಬೇರೆಲ್ಲಿಗೂ ಹಾನಿತಟ್ಟಲಿಲ್ಲ ಈ ಸಾಹಸ ಕಾರ್ಯಕ್ಕೆ ಧುಮುಕಿದವರಲ್ಲಿ ಐವರಿಗೆ ಸಾಧಾರಣ ಜಖಮು ಆಗಿದೆ.

ಗವರ್ನರರ ಪೆನ್ಶನಿನ ಹಣ ಯಾರು ಕೊಡಬೇಕು? ಪ್ರಾಂತಿಕ ಸರಕಾರವೇ? ಬಂಗಾಳ ಸರಕಾರದ ನಿರ್ಧಾರ

ಐದೂವರೆ ವರುಷ ಬಂಗಾಳದ ಗವರ್ನರರಾಗಿದ್ದ ಸರ್. ಜೋನ್ ಎಂಡ್‌ರ್ಸನ್ ಎಂಬರ ಪೆನ್ಶನ್ ಹಣಕ್ಕೆ ಬಂಗಾಳದ ಪ್ರಾಂತಿಕ ಸರಕಾರವು ಪಾಲುಕೊಡಬೇಕೆಂದು ಬ್ರಿಟಿಷ್ ಸರಕಾರದ ಕೇಳಿಕೆ ಆದರೆ ಅಂತಹ ನೇಮಕವು ತಮ್ಮ ಸರಕಾರದ ಹಂಗಿಲ್ಲದೆ ಮಾಡೋಣಾಗುವುದರಿಂದ ಹಣಕೊಡುವ ಹೊಣೆಗಾರಿಕೆ ಮಾತ್ರ ತಮ್ಮ ಮೇಲೆ ಬರಬಾರದೆಂದು ಪ್ರಾಂತಿಕ ಸರಕಾರದ ಪ್ರತ್ಯುತ್ತರ.

ಗಡಿನಾಡಿನ ಹಂಗಡಿಗರ ಪುಂಡಾಟಿಕೆ

ಹಿಂದೂದೇಶದ ಗಡಿನಾಡಾದ ವಾಯವ್ಯ ಪ್ರಾಂತದ ಗುಡ್ಡದ ಗಡಿಯಲ್ಲಿರುವ ಡಟ್ಟಾಖೇಲ್ ಎಂಬಲ್ಲಿ ಸರಕಾರದವರು ಶಾಂತಿರಕ್ಷಣೆಗೂ ಗಡಿ ಕಾಪಾಡುವುದಕ್ಕೂ ಸೈನ್ಯವಿಟ್ಟಿದ್ದಾರೆ. ಅಲ್ಲಿಯ ಕಾಡು ಗುಡ್ಡದ ಹಂಗಡಿಗರು ಯಾವ ಆಡಳಿತೆಗೂ ಒಳಪಡದೆ ಆಗಾಗ ಲೂಟಿಮಾಡುವುದುಂಟು. ಕಳೆದ ವಾರ ಅಂತಹದೊಂದು ಪುಂಡರ ಪಂಗಡವು ಸೈನಿಕರ ಮೇಲೆ ಬಿತ್ತು. ಸಮಿಾಪದ ವಿಮಾನ ರಾಣ್ಯಕ್ಕೆ ಆ ಸುದ್ದಿ ತಲಪಲು ವಿಮಾನಗಳು ಕೂಡಲೆ ಅಲ್ಲಿಗೆ ಹಾರಿಹೋಗಿ ಪುಂಡುಗಾರರನ್ನು ಬೆದರಿಸಿ ಅಟ್ಟಿದುವು.

THE

Udipi Electric Supply Corporation Ltd, Udipi

NOTICE

Public notice is hereby given that from 15-3-39 onwards the town supply of current will be throughout 24 hours. The public will avail of the opportunity and make best use of the same at any time during the day.

MANAGER.

WANTED—Districts Organisers and Taluka Superintendents in Districts of Belgaum Bijapur, Dharwar, Canara and Coorg on salary and commission basis Special facilities for the initial business of Rs. 10,000/-. Only influential gentlemen who can guarantee Rs. 50,000/ and Rs 25,000/- per year need apply,

Messrs.

PADUBIDRI BROS., **BOMBAY 8**

ಬೇಕಾಗಿದ್ದಾರೆ.

ಜಗತ್ಪ್ರಸಿದ್ಧವಾದ ಯುರೋಪಿಯನ್ ವಿಮಾ ಕಂಪೆನಿಯಾದ 'ಅಲ್ಲಿಯಾನ್ಸ್ ಅಂಡ್ ಸ್ಟಟ ಗಾರ್ಟರ್ ಲೈಫ್ ಇನ್ಶೂರೆನ್ಸ್ ಬ್ಯಾಂಕ್ ಲಿಮಿಟಿಡಿ'ಗೆ ದಕ್ಷಿಣ ಕನ್ನಡ ಮತ್ತು ಕೊಡಗುಗಳಿಗೆ ಇಬ್ಬರು ಪ್ರಭಾವಶಾಲಿ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿಶೇಷ ಮಾಹಿತಿ ಬಗ್ಗೆ:— ವಿ. ವಿ. ಕವಾಲ್,
ಸುಪರಿಂಟೆಂಡೆಂಟ್,
C/o ಪೋಸ್ಟ್‌ಮಾಸ್ಟರ್, **ಧಾರವಾಡ**

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್ ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: **ಆನಂದರಾವ್ ಸರ್ಕಲ್, ಬೆಂಗಳೂರು.**

ಹೊಸ ಪುಸ್ತಕ! **ಇದೀಗ ಪ್ರಕಟವಾಗಿದೆ!**

ಅಜ್ಞಾನ ತಿಮಿರ ಮಾರ್ತಾಂಡ

ಜನ್ಮತಃ ಅಸ್ಪೃಶ್ಯತೆಯು ಇರಲಿಲ್ಲವೆಂಬುದನ್ನೂ ಅಂಥ ಸಂಪ್ರದಾಯದ ಸನಾತನಿಗಳ ವಾದದಲ್ಲಿ ತಿರುಳಿಲ್ಲವೆಂಬುದನ್ನೂ ವಿವರಿಸಿ ಪುರಾಣ, ಸ್ಮೃತಿಗಳ ಆಧಾರದಿಂದ ಶ್ರೀ. ಬಿ. ಅಂತಯ್ಯ ಶೆಟ್ಟರಿಂದ ನವೀನವಾಗಿ ಬರೆಯಲಾದ ಹೊಸ ಪುಸ್ತಕ.

ಬೆಲೆ: 0—4—0 ಮಾತ್ರ.

ಇದರ ಉತ್ಪತ್ತಿಯು ಹರಿಜನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲ್ಪಡುವುದು. 0—4—6 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳಿಸಲಾಗುವುದು.

ಉಡುಪಿಯಲ್ಲಿ ಪುಸ್ತಕ ಸಿಗುವ ಸ್ಥಳ:
Navabharat Book Depot,
Udipi.

ಬಿ. ಅಂತಯ್ಯ ಶೆಟ್ಟಿ,
ಹರಿಜನ ಶಿಕ್ಷಣ ಸಹಾಯಕ ಸಂಘ,
ಬ್ರಹ್ಮಾವರ.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮತ್ತು ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., ***Nambulier Street,*** **G. T. MADRAS.**

THE
Canara Banking Corporation, Udipi, Ltd.
(Incorporated in British India.)
ESTD. 1906

THREE YEARS' CASH CERTIFICATES
bearing interest at 4% p. a. in denominations of Rs. 50/-, 100/-, 500/-, 1,000/- & 5000/- are now issued at all our Branches.

For particulars call at or write to any of our nearest Branches.

ಉಡುಪಿ, ಗುರುವಾರ, ತಾ. ೯-೩-೩೯

ಗಾಂಧೀಜಿಗಳ ಉಪವಾಸದೀಕ್ಷೆ

ತಾನು ಕೊಟ್ಟ ಕೆಲವು ಸೂಚನೆಗಳನ್ನು ರಾಜಕೋಟೆಯ ಥಾಕೋರ್ ಸಾಹೇಬರು ತಿರಸ್ಕರಿಸಿದರೆಂದು ಗಾಂಧೀಜಿಗಳು ಉಪವಾಸದೀಕ್ಷೆಯನ್ನು ಕಳೆದ ತಾ. 2ರಲ್ಲಿ ಕೈಗೊಂಡಿರುತ್ತಾರೆ. ಈ ಮಹಾ ಅನರ್ಥದ ಕಾರಣವೇನು, ನಿವಾರಣೆಗೆ ಹಾದಿಯಾವುದು ಎಂಬುದನ್ನು ಶೋಧಿಸುವ ದೃಷ್ಟಿಯಿಂದ ಥಾಕೋರ್, ಸಾಹೇಬ ಪಟೇಲ್, ಗಾಂಧೀಜಿ ಇವರೊಳಗೆ ಕಳೆದ ನಾಲ್ಕಾರು ತಿಂಗಳುಗಳಿಂದ ನಡೆದ ಮಾತುಕತೆ ಪತ್ರವ್ಯವಹಾರಗಳನ್ನು ಪರಿಶೀಲಿಸಿದರೆ ಥಾಕೋರ ಸಾಹೇಬರು ಸಾಮಾನ್ಯ ವಿಷಯದಲ್ಲಿ ಕೊಟ್ಟ ಮಾತು ಮೀರಿ ನಡೆದಿರುವರೆಂಬುದು ಸುಸ್ಪಷ್ಟವಾಗುತ್ತದೆ. ಈಗಲಾದರೂ ಆ ಮಾತನ್ನು ನಡೆಯಿಸಿಕೊಟ್ಟು ಈ ಲೋಕಾಪವಾದದಿಂದ ತಪ್ಪಿಸಿಕೊಳ್ಳಲು ಕಾಲ ಮೀರಿಹೋಗಿಲ್ಲ. ಚುಟುಕಾಗಿ ಹೇಳುವುದಾದರೆ ಕಾರಣ ಪರಿಣಾಮ ನಿವಾರಣೋಪಾಯಗಳು ಹೀಗಿವೆ. ರಾಜಕೋಟೆಯಲ್ಲಿ ಸಂಸ್ಥಾನಿಕ ಕಾಂಗ್ರೆಸಿನ ರೂಪದಂತಿರುವ ಪ್ರಜಾಮಂಡಲದ ಪ್ರಚಾರ ಕಾರ್ಯಭಾರದಿಂದಾಗಿ ಪ್ರಜೆಗಳಲ್ಲಿ ಜಾಗ್ರತಿಯುಂಟಾಗಿ ರಾಜ್ಯಭಾರ ಪದ್ಧತಿಯಲ್ಲಿ ಸುಧಾರಣೆಯಾಗಬೇಕೆಂಬ ಚಳವಳಿಯು ತೊಡಗಿತು. ಸುಧಾರಣೆಗೊಳಿಸುವುದಕ್ಕೆ ಥಾಕೂರ ಸಾಹೇಬರು ಸಮ್ಮತಿಸಿದರು. ಈ ಸಮ್ಮತಿಯು ಸಿಗಬೇಕಾದರೆ ಗಾಂಧೀಜಿಗಳು ಪರೋಕ್ಷವಾಗಿಯೂ ವಲ್ಲಭಾಯಿ ಪಟೇಲರು ಪ್ರತ್ಯಕ್ಷವಾಗಿಯೂ ರಾಜಕೋಟೆಯ ಪ್ರಜಾಮಂಡಳದ ಸ್ಥಳೀಯ ಮುಖಂಡರಾದ ದೇಬಾಯಿಯವರು ಪಟೇಲ ಗಾಂಧೀಜೀ ಅಭಿಮತಾನುಯಾಯಿಯಾಗಿಯೂ ಥಾಕೋರ ಸಾಹೇಬರೊಡನೆ ಹಲವು ಸಲ ಪತ್ರವ್ಯವಹಾರ ಮಾತುಕತೆ ಚರ್ಚೆಗಳು ಕೆಲವು ಆರೇಳು ತಾಸುಗಳ ತನಕವೂ ನಡೆದುದುಂಟು. ಅಂತೂ ಪರಿಣಾಮವಾಗಿ ಸಮ್ಮತಿಯು ದೊರಕಿತು. ರಾಜ್ಯಭಾರ ಪದ್ಧತಿಯಲ್ಲಿ ಪ್ರಜೆಗಳಿಗೆ ಹೆಚ್ಚಿನ ಜವಾಬ್ದಾರಿ ದೊರಕುವಂತೆ ಯಾವ ತರದ ಸುಧಾರಣೆಯನ್ನು ಮಾಡಬೇಕೆಂದು ನಿರ್ಧರಿಸುವರೆ ಒಂದು ಸಮಿತಿಯನ್ನು ನಿರ್ಮಾಣಮಾಡೋಣವೆಂದು ನಿಶ್ಚಯವಾಯಿತು. ಆ ಸಮಿತಿಯಲ್ಲಿ ಹತ್ತು ಸದಸ್ಯರಿರಬೇಕೆಂದೂ ಅವರಲ್ಲಿ ಮೂವರು ಸಂಸ್ಥಾನದ ಅಧಿಕಾರಿಗಳೂ ಉಳಿದ ಏಳುಮಂದಿ ಪ್ರಜಾಮಂಡಲದ ಪ್ರತಿನಿಧಿಗಳಾಗಿದ್ದು ವಲ್ಲಭಾಯಿ ಪಟೇಲರು ಶಿಫಾರಸು ಮಾಡುವ ವ್ಯಕ್ತಿಗಳೂ ಇರಬೇಕೆಂದು ನಿಶ್ಚಿತವಾಗಿ ಥಾಕೋರರು ಪ್ರಕಟಣೆಯನ್ನು ಹೊರಡಿಸಿದರು. ಆದರಲ್ಲಿ ಸದಸ್ಯರುಗಳ ಹೆಸರುಗಳನ್ನು ಹಿಂದಿನಿಂದ ಕೂಡಲಾಗುವುದೆಂದಿತ್ತು. ಆದರೆ ಆ ಪ್ರಕಟಣೆಯು ಹೊರಗೆಡಹುವ ಮುಂಚೆಯೇ ಪ್ರಜಾಮಂಡಳಿಗೆ ಆ ಸಮಿತಿಯಲ್ಲಿ ಬಹುಪಕ್ಷವಿರುವಂತೆ ಆ ಏಳುಮಂದಿ ಸದಸ್ಯರನ್ನು ಚುನಾಯಿಸಿಕೊಡುವ ಕಾರ್ಯಭಾಗವು ವಲ್ಲಭಾಯಿ ಪಟೇಲರದೆಂದು ಥಾಕೋರ ಸಾಹೇಬರು ಬರಹಮೂಲಕ ಪಟೇಲರಿಗೆ ಆಶ್ವಾಸನೆಕೊಟ್ಟದ್ದರಿಂದು ಆ ಪತ್ರವನ್ನು ಪಟೇಲರೀಗ ಪ್ರಕಟಿಸಿದ್ದಾರೆ. ಅದರಲ್ಲಿ ಹೀಗಿದೆ: "ಇಂದಿನ ನಮ್ಮ ಪ್ರಕಟಣಾ ಪತ್ರದ ೨ನೆಯ ಕಲಮಿನಲ್ಲಿ ಸೂಚಿತವಾದ ಸಮಿತಿಯ ಸದಸ್ಯರಲ್ಲಿ ೭ ಮಂದಿಯನ್ನು ಸರದಾರ್ ವಲ್ಲಭಾಯಿ ಪಟೇಲರು ಶಿಫಾರಸು ಮಾಡತಕ್ಕದು. ಅವರನ್ನು ನಾವು ನೇಮಿಸತಕ್ಕದು-ಧರ್ಮೇಂದ್ರಸಿಂಹ" ಈ ತರದಲ್ಲಿ ಲಿಖಿತ [illegible] ವಚನವನ್ನು ಕೊಟ್ಟುದರಿಂದ ವಲ್ಲಭಾಯಿ ಪಟೇಲರು ಸಂಧಿ ಸ್ಥಾಪನೆಯಾಯಿತೆಂದು ಸಮಸ್ತ ಚಳವಳಿಗಾರರನ್ನೂ ಸಮಾಧಾನಗೊಳಿಸಿ ಗಾಂಧೀಜಿಯವರಿಗೂ ನಮ್ಮ ಸೂಚನೆಯು ಮಾನ್ಯವಾಯಿತೆಂದು ತಂತೀ ಕೊಟ್ಟಿದ್ದರು.

ಆದರೆ ಅನಂತರ ಆ ಸುಧಾರಣಾ ಸಮಿತಿಯಲ್ಲಿ ಬಹು ಪಕ್ಷ ಪ್ರಜಾಪ್ರತಿನಿಧಿತ್ವ ಇಲ್ಲದಂತೆ ಮಾಡುವ ಉದ್ದೇಶದಿಂದ ಥಾಕೋರ ಸಾಹೇಬರು ವಲ್ಲಭಾಯಿ ಪಟೇಲರಿಂದ ಸೂಚಿತವಾದ ವ್ಯಕ್ತಿಗಳಲ್ಲಿ ಬರೇ ಮೂವರನ್ನು ಚುನಾಯಿಸಿದರು. ಮಾತ್ರವಲ್ಲ ಸದಸ್ಯರನ್ನು ಚುನಾಯಿಸುವ ಹಕ್ಕನ್ನು ತಾನು ಯಾರಿಗೂ ಬಿಟ್ಟುಕೊಡಲಿಲ್ಲವೆಂದು ತನ್ನ ಸಮಸ್ತ ಪ್ರಜಾಹಿತರಕ್ಷಣೆಯ ದೃಷ್ಟಿಯಲ್ಲಿ ತಾನೇ ಆ ಸುಧಾರಣಾ ಸಮಿತಿಯ ನಿರ್ಮಾಣ ಮಾಡತಕ್ಕವನಲ್ಲದೆ ಪರಕೀಯರ ಪಾರುಪತ್ಯಕ್ಕೆ ಅದರಲ್ಲಿ ಎಡೆಗೊಡಬಾರದೆಂದರು.

ಹೀಗಾಗಿ ವಲ್ಲಭಾಯಿ ಪಟೇಲರೂ ಗಾಂಧೀಜಿಗಳೂ ಥಾಕೋರರ ಮೇಲೆ ವಚನಭ್ರಷ್ಟತೆಯ ಆರೋಪ ಹೊರಿಸಿದರು. ಇಂದಿಗೂ ಇತರ ಪ್ರಶ್ನೆಗಳೇನೇ ಇರಲಿ, ನಿರ್ಮಾಣವಾಗಲಿಕ್ಕಿರುವ ಆ ಸುಧಾರಣೆಯ ಸಮಿತಿಯಲ್ಲಿ ಪ್ರಜಾಪ್ರತಿನಿಧಿತ್ವವು ಬಹುಪಕ್ಷವಿರುವಂತೆ ಸದಸ್ಯರನ್ನು ಚುನಾಯಿಸಲು ಪಟೇಲರಿಗಾಗಲೀ ಗಾಂಧೀಜಿಗಳಿಗಾಗಲೀ ಥಾಕೋರರು ಬಿಟ್ಟರೆ ಗಾಂಧೀಜಿಗಳು ತನ್ನ ಉಗ್ರವ್ರತವನ್ನು ಬಿಟ್ಟುಬಿಡಬಹುದು. ಅಷ್ಟು ಮಾಡುವುದು ಥಾಕೋರರಿಗೆ ಅಸಾಧ್ಯವಾದುದೂ ಅಲ್ಲ, ಅನರ್ಥಕಾರಿಯೂ ಅಲ್ಲ. ಸುಧಾರಣೆಯು ಯಾವ ರೀತಿಯಲ್ಲಾಗಬೇಕೆಂದು ವಿಚಾರಿಸಿ ಒಂದು ವರದಿಯನ್ನು ಸಿದ್ಧಗೊಳಿಸುವುದರಲ್ಲಿಯೂ ಪ್ರಜಾಜನರ ಬಹುಪಕ್ಷವಿರಬಾರದೆಂಬ ಹಠವನ್ನು ಆಳರಸರು ತೋರಿಸುವುದು ಇಂದಿನ ಕಾಲಧರ್ಮಕ್ಕೆ ವಿರುದ್ಧವಾದುದು. ಅತ್ತ ವಿಲಾಯತಿಯಲ್ಲಿ ಭಾರತದ ಅದೃಷ್ಟದ ತಕ್ಕಡಿಯನ್ನು ತೂಗುತ್ತ ಕೂತಿರುವ ಸ್ಟೇಟ್ ಸೆಕ್ರೆಟರಿ ಲಾರ್ಡ್ ಜೆಟ್ಲಾಂಡರು ಎಷ್ಟೋ ಆಶ್ರಿತ ಸಂಸ್ಥಾನಗಳ ಆಡಳಿತೆಯು ಚೆನ್ನಾಗಿಲ್ಲವೆಂದೂ ಪ್ರಜಾಭಿಮತವನ್ನು ಕಂಡುಹಿಡಿದು ತಕ್ಕಂತೆ ಸುಧಾರಿಸಿಕೊಳ್ಳುವುದು ಅವಶ್ಯವಿದೆಯೆಂದೂ ಮೊನ್ನೆ ಎಂಬಂತೆ ಲಿವರ್ ಪೂಲಿನಲ್ಲೊಂದು ಭಾಷಣದಲ್ಲಿ ಬ್ರಿಟಿಷ್ ಪ್ರಭುತ್ವದ ಒಲವು ಹೇಗಿದೆ ಎಂಬುದನ್ನು ಸುಸ್ಪಷ್ಟಗೊಳಿಸಿರುವಾಗ, ಇತ್ತ ಅದೇ ರಾಗವನ್ನು ವೈಸರಾಯರು ಮೊನ್ನೆ ತನ್ನ ಜಯಪುರ ಸಂದರ್ಶನ ಕಾಲದಲ್ಲಿಯೂ ಸಾರಿ ಸಾರಿ ಹಾಡಿರುವಾಗ ಆ ಹಾದಿಯಲ್ಲಿ ಮೊಟ್ಟಮೊದಲ ಹೆಜ್ಜೆಯಾದ ಈ ಸಮಿತಿ ನಿರ್ಮಾಣದ ಪ್ರಶ್ನೆಯಲ್ಲಿ ಥಾಕೋರ್ ಸಾಹೇಬರು ಒಮ್ಮೆ ಮುಂದುವರಿದು ತಿರುಗಿ ಹಿಂದೆ ಸರಿದು ವಚನಭ್ರಷ್ಟರಾದುದು ಶೋಚನೀಯವೇ.

ಆದರೆ ದೇಶದ ಸಕಲ ಭಾಗಗಳಿಂದಲೂ ವೈಸರಾಯರಿಗೆ ನೂರಾರು ತಂತಿಗಳು ಹೋಗಿವೆ. ವಿಲಾಯತಿಗೂ ಮುಟ್ಟಿವೆ. ಮೇಲಾಗಿ ರಾಜಕೋಟೆಯ ಪ್ರಶ್ನೆಯ ಕೂಲಂಕಷ ವಿಚಾರವನ್ನು ತಾವಾಗಿ ತಿಳಿದುಕೊಳ್ಳುವ ಏರ್ಪಾಡು ರಾಜಕೋಟೆಯಿಂದ ಡಿಲ್ಲಿಗೆ, ಡಿಲ್ಲಿಯಿಂದ ವಿಲಾಯತಿಯ ವೈಟ್ ಹೋಲಿಗೆ ಇದ್ದೇ ಇದೆ. ಆ ಮುದರಿಂದ ಥಾಕೋರ ಸಾಹೇಬರಿಗೆ ಇಷ್ಟರೊಳಗೇ ಬ್ರಿಟಿಷ್ ಪ್ರಭುತ್ವದ ಕಟ್ಟಾಜ್ಞೆ ಬಂದಾಗಲೀ ಕೇವಲ ಅಲ್ಪ ವಿಷಯದಲ್ಲಿ ಅಚಾತುರ್ಯ ತೋರಿ ತಾನಿಂದು ಅಖಿಲ ಭಾರತವೇ ತನ್ನ ಮೇಲೆ ಉರಿದು ಬೀಳುವಂತೆ ಮಾಡಿಕೊಂಡಿರುವುದು ಹಿತವಲ್ಲವೆಂಬ ವಿವೇಕ ಬುದ್ಧಿಯು ತನ್ನಲ್ಲೇ ಉದ್ಭವಿಸಿಯಾಗಲೀ ತನ್ನ ವಚನ ಭ್ರಷ್ಟತೆಯ ಕಾರ್ಯವನ್ನು ಹಿಂದೆಗೆದು ಗಾಂಧಿಜಿಗಳು ಉಪವಾಸ ವ್ರತವನ್ನು ಬಿಡುವಂತೆಯೂ ಭಾರತ ಹೃದಯದ ಉದ್ವಿಗ್ನತೆಯು ಶಾಂತವಾಗುವಂತೆಯೂ ಈಗಾಗಲೇ ಮಾಡಿರಬೇಕೆಂದು ನಮಗನ್ನಿಸುತ್ತದೆ. ಬಹುಶಃ ಇಷ್ಟರೊಳಗೇ ಗಾಂಧೀಜಿಗಳು ಉಪವಾಸವನ್ನು ಬಿಟ್ಟಿರಬೇಕು. ಹಾಗೆಂದು ಲಿಖಿತ ಮೂಲಕ ಸುದ್ದಿ ಬಂದಿಲ್ಲವಾದರೂ ಗಾಳಿಯಲ್ಲಿದೆ. ಅದು ನಿಜವಾಗಿ ಪರಿಣಮಿಸಲೆಂದು ಹಾರೈಸೋಣ.

ಬೈಲೂರು—ಸಂಯುಕ್ತ ಕಾಂಗ್ರೆಸ್ ಕಮಿಟಿಯ ಮೀಟಿಂಗು ಇದೇ ತಾ. 26-2-39ರಲ್ಲಿ ಸಂಘದ ಅಧ್ಯಕ್ಷರಾದ ಎನ್. ಪಿ ಸುಬ್ಬಣ್ಣ ಭಟ್ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಉಪಯುಕ್ತ ಕಾರ್ಯಕ್ರಮಗಳೊಡನೆ ಜರಗಿತು. ಕಾರ್ಯದರ್ಶಿ ಬಿ. ಕೇಶವ ಕಿಣಿಯವರು ವಾರ್ಷಿಕ ವರದಿಯನ್ನು ಓದಿದ ಮೇಲೆ ಇತರ ಕಾರ್ಯಕ್ರಮಗಳಾದುವು.

ಅಂತೆ ಸುದ್ದಿಗಳು

ದಕ್ಷಿಣಕನ್ನಡದಲ್ಲಿ ತನಗೆ ತನ್ನ ಬ್ರಾಂತಿಕ್ಯಂತಲೂ ಸಂಭ್ರಮದ ಸ್ವಾಗತ ದೊರಕಿರುವುದೆಂದು ಮೈಸೂರು ದಿವಾನರು ನಮ್ಮ ಜಿಲ್ಲೆಗೆ 'ಕೋಂಪ್ಲಿಮೆಂಟ್ಸ್' ಕೊಟ್ಟಿರುವರಂತೆ.

o o o

ಉಡುಪಿ ಶ್ರೀಕೃಷ್ಣಮಠದ ಈಗಿನ ವ್ಯವಸ್ಥೆಯ ಕುರಿತು ಸಂಪೂರ್ಣ ತೃಪ್ತಿಗೊಂಡಿರುವರಂತೆ

o o o

ಮೈಸೂರು ರಾಜರಿಗೊಮ್ಮೆ ಆದಷ್ಟು ಬೇಗನೆ ಉಡುಪಿಗೆ ಬಿಜ್ಜಯಿಸುವ ಇಚ್ಛೆಯಾಗಿರುವುದಂತೆ.

o o o

ಕೆಲವು ಸರಕಾರಿ ಆಫೀಸುಗಳ ಪೇದೆಗಳು ಅಧಿಕಾರಿಗಳ ಮನೆಯ ಕೆಲಸವನ್ನು ಮಾಡಬೇಕಾಗಿರುವುದಂತೆ.

o o o

'ಸರಕಾರಿ ಸಂಬಳ ಪಡಕೊಂಡು ರಾತ್ರಿ ಹಗಲು ಆಫೀಸರರ ಮನೆಗೆಲಸ ಮಾಡಬೇಕಾಗಿದೆಯಲ್ಲಾ, ಈ ಕಾಂಗ್ರೆಸ್‌ನ ಸರಕಾರದ ಕಾಲದಲ್ಲೂ', ಎಂದು ಕೆಲ ಪೇದೆಗಳು ಗೋಳಿಡುತ್ತಿರುವರಂತೆ.

o o o

ಮುಖ್ಯೋಪಾಧ್ಯಾಯರಿಗೆ ಆಹ್ವಾನವಿಲ್ಲದಿದ್ದರೂ ಅವರ ಗಮನಕ್ಕೆ ಯಾವ ವಿಷಯವೂ ಬಾರದಿದ್ದರೂ ಕೆಲವರಿಗೆ ತಮ್ಮ 'ಫಂಕ್ಷನ್'ಗಳ ರಿಪೋರ್ಟ್‌ ಪತ್ರಿಕೆಗಳಲ್ಲಿ ಬರಬೇಕೆಂಬ ಮಹತ್ವಾಕಾಂಕ್ಷೆಯಿದೆಯಂತೆ.

o o o

ಜಿಲ್ಲಾ ಪತ್ರಿಕಾ ವ್ಯವಸಾಯಿಗಳ ಪರಿಷತ್ತೊಂದು ಬೇಗನೆ ಜರಗಲಿರುವುದಂತೆ.

o o o

ಮೀಟಿಂಗು ಮೊದಲಾದ ಸುದ್ದಿಗಳನ್ನಷ್ಟೇ ಅಲ್ಲದೆ ಕೆಲ ಸ್ಥಳೀಯ ಸಂಸ್ಥೆಗಳ 'ಟೆಂಡರ್ ನೋಟೀಸು'ಗಳನ್ನು ಕೂಡ ಪತ್ರಿಕೆಗಳು ಸುದ್ದಿಯಾಗಿ ಪ್ರಕಟಿಸಬೇಕಾಗಿರುವುದಂತೆ.

o o o

ನಮ್ಮ ಜಿಲ್ಲೆಯಲ್ಲಿ ಹೊಸತೊಂದು ಪತ್ರಿಕೆಯ ಜನ್ಮತಾಳಲಿರುವುದಂತೆ.

—ಅಂತೆ ಸುದ್ದಿಗಾರ

ನಮ್ಮ ಚಂದಾದಾರರಲ್ಲಿ

ಚಂದಾಹಣ ಬಾಕಿಮಾಡಿಕೊಂಡಿರುವ ಚಂದಾದಾರರು ಬಾಕಿಯಿರುವ ಮತ್ತು ಚಾಲ್ತಿ ವರ್ಷದ ಚಂದಾ ಹಣವನ್ನು ಕೂಡಲೇ ಕಳಿಸಿಕೊಡಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗುತ್ತದೆ.

ಚಂದಾದಾರರೆಲ್ಲರೂ ತಮ್ಮ ತಮ್ಮ ಚಂದಾ ಹಣವನ್ನು ಮುಂದಾಗಿ ಕಳಿಸಿಕೊಡಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಪತ್ರಿಕೆ ಬೇಡವಾದವರು ಅವರ ಚಂದಾ ಅವಧಿ ಮುಗಿಯುವದರೊಳಗೆ ಸಕಾಲದಲ್ಲಿ ನಮಗೆ ತಿಳಿಸಬೇಕಾಗಿ ಸೂಚಿಸೋಣಾಗುತ್ತದೆ.

ಹೊಸ ಚಂದಾದಾರರಾಗಬೇಕೆಂದಿರುವವರು ರೂ. ೩-೪-೦ನ್ನು ಮುಂಗಡವಾಗಿ ಕಳಿಸಿಕೊಡಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಚಂದಾ ಹಣಬಾರದ ಪತ್ರಿಕೆಯನ್ನು(ಮಾದರಿಯ ಹೊರತು) ಕಳಿಸಲಾಗುವುದಿಲ್ಲ.

ಮಂಗಳೂರು ಚಂದಾದಾರರಲ್ಲಿ

ಚಂದಾಹಣ ಬಾಕಿಯಿರುವ ಚಂದಾದಾರರು ತಮ್ಮ ಚಂದಾ ಹಣವನ್ನು ಆದಷ್ಟು ಬೇಗನೆ ಕನರಾ ಛಾಪಖಾನೆಯ ಮೆನೇಜರರೊಡನೆ ಕೊಡಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ಬೊಂಬಾಯಿ ಚಂದಾದಾರರಲ್ಲಿ

ಬಾಕಿ ಮತ್ತು ಚಾಲ್ತಿ ಚಂದಾಹಣವನ್ನು ಈಗ ಅಲ್ಲಿರುವ ನವಯುಗದ ಉಪಸಂಪಾದಕರಾದ ಶ್ರೀ.ಎನ್ ಎಸ್. ಶೆಟ್ಟರೊಡನೆ ಪಾವತಿಮಾಡಬೇಕಾಗಿ ವಿನಂತಿಸಲಾಗುತ್ತದೆ. ಮೆನೇಜರ್.

ತ್ರಿಪುರಿ ಕಾಂಗ್ರೆಸ್ ಪ್ರತಿನಿಧಿಗಳಿಗೆ ಗಾಂಧೀಜಿಗಳ ಆಗ್ರಹದ ವಿನಂತಿ

ಕಾಂಗ್ರೆಸ್ಸು ಶುದ್ಧೀಕರಣವಾಗಬೇಕು—ಇಂದು ಕಾಂಗ್ರೆಸ್ಸಿನ ಮುಂದಿರುವ ಒಂದೇ ಒಂದು ಕಾರ್ಯವೆಂದರೆ ಅದನ್ನು ನಿಷ್ಕಳಂಕವಾಗಿರಿಸುವುದೇ.

ನನ್ನಲ್ಲಿ ಪ್ರಾಣವುಳಿದಿರುವ ಈ ಸಂದರ್ಭದಲ್ಲೇ ನಾನು ನನ್ನ ವಿಷಯವಾಗಿ ಶುಭ ಸಂದೇಶಗಳನ್ನು ಕಳುಹಿದವರಿಗೆಲ್ಲ ಧನ್ಯವಾದಗಳನ್ನು ಅರ್ಪಿಸಬೇಕು ಅನೇಕಾನೇಕ ಹೃದಯಗಳಿಂದ ಕರ್ತವ್ಯದ ಸತ್ಪ್ರೇರಣೆಗಾಗಿ ಪ್ರಾರ್ಥಿಸುತ್ತಲಿವೆಯೆಂದು ನನಗೆ ಗೊತ್ತಿದೆ. ಯಾವಾತನ ಹೆಸರಲ್ಲಿ ನಾನು ಉಪವಾಸ ವ್ರತವನ್ನು ಕೈಗೊಂಡಿರುವೆನೋ ಆ ಭಗವಂತನು ಇಂಡಿಯವನ್ನೂ ಆದರ ಬ್ರಿಟಿಷ್ ಪ್ರಭುತ್ವವನ್ನೂ ನ್ಯಾಯವಾದ ರೀತಿಯಲ್ಲಿ ನಡಿಯಿಸಿಯಾನು. ಇದರಲ್ಲಿ ಗಾಬರಿಗೊಳ್ಳಬೇಕಾಗಿಲ್ಲ ನಾನಿದನ್ನು ಯಾಕೆ ಹೇಳುತ್ತಿದ್ದೇನೆಂದರೆ, ಕಾಂಗ್ರೆಸ್ ಭಕ್ತರು ತ್ರಿಪುರಿ ಅಧಿವೇಶನವನ್ನು ಉಪೇಕ್ಷಿಸಬಾರದೆಂದೇ. ನಾನು ತ್ರಿಪುರಿಗೆ ಹೋಗಬೇಕೆಂದು ಮಾನವ ಸಾಧ್ಯವಾದ ಪ್ರಯತ್ನವನ್ನೆಲ್ಲ ಮಾಡಿದೆ ಆದರೆ ದೈವ ಸಂಕಲ್ಪ ಬೇರೆಯೇ ಇತ್ತು ತ್ರಿಪುರಿ ಅಧಿವೇಶನಕ್ಕೆ ಹೋಗುವಂತಿಹನು ಕರ್ತವ್ಯವಿರುವಂತಹರೆಲ್ಲ ಹಿಂಜರಿಯಬಾರದು. ಅವಶ್ಯವಾಗಿ ಹೋಗಬೇಕು ಹೋಗಿ ಸಹಭಾಗಿಯಾಗಬೇಕು. ತನ್ನೆದುರು ಬರಬಹುದಾದ ತೊಂದರೆ ತೊಡರುಗಳನ್ನೆಲ್ಲ ಐಕ್ಯದ ಪ್ರಯತ್ನದಿಂದ ಬಿಡಿಸಿ ನೇರಾದ ಸುಗಮವಾದ ಹಾದಿಯನ್ನು ಕಲ್ಪಿಸಿಕೊಳ್ಳಬೇಕು.

ವ್ಯಕ್ತಿಕೇಯ ಹಿತೋಕ್ತಿಯನ್ನು ವಿಚಾರ ಬಾರದಂದೂ ಆದಕ್ಕೆ ಸವಿನಯ ಪಥೇಯನಾಗಿದ್ದು ಕಲ್ಕತ್ತಾದಂತಲೇ ಅಧಿವೇಶನದ ಕಾರ್ಯಕ್ರಮಗಳನ್ನು ನಿರ್ವಹಿಸುವ ವ್ಯವಸ್ಥೆ ಮಾಡಬೇಕೆಂದೂ ಸುಭಾಷ್ ಬಾಬುಗಳನ್ನು ಆಗ್ರಹಪೂರ್ವಕ ಬೇಡಿಕೊಂಡಿದ್ದೇನೆ

ನನ್ನ ಅಭಿಪ್ರಾಯ ಪ್ರಕಾರ ಇಂದು ಕಾಂಗ್ರೆಸ್ಸಿನ ಮುಂದಿರುವ ಒಂದೇ ಒಂದಾದ ಮಹತ್ಕಾರ್ಯವೆಂದರೆ ಕಾಂಗ್ರೆಸ್ಸನ್ನು ಶುದ್ಧೀಕರಿಸುವುದಕ್ಕಾಗಿ ಕೈಗೊಳ್ಳಬೇಕಾಗಿರುವ ಭಗೀರಥ ಪ್ರಯತ್ನವೇ ಕಾಂಗ್ರೆಸ್ಸಿನ ಉಚ್ಚ ಧ್ಯೇಯವೆಂದು ನೀತಿಗಡುಕತನದಿಂದ ಕಲುಷಿತವಾಗಿರುವುದೆಂಬುದು ಸಿದ್ಧಾಂತವಾದ ಮಾತು, ಆದುದರಿಂದ ಕಾಂಗ್ರೆಸ್ಸನ್ನು ನಿರ್ಮಲಗೊಳಿಸಬೇಕು. ಕಾಂಗ್ರೆಸ್ಸು ಇಂದು ಎಂತಹ ಅತ್ಯುತ್ತಮ ಪರಿಣಾಮಕಾರಿಯಾದ ನಿರ್ಣಯಗಳನ್ನು ಮಾಡಿಕೊಂಡರೂ ಅವುಗಳನ್ನು ಪ್ರಯೋಗಕ್ಕೆ ತರುವ ಸಂಘ ಸಂಸ್ಥೆಗಳು ನಿರ್ದುಷ್ಟವಾಗಿಂದಿದ್ದರೆ ಯಾವ ಪ್ರಯೋಜನವೂ ಆಗಲಾರದು. ಕಳೆದ ಇಪತ್ತೆರಡು ವರುಷಗಳಿಂದಲೂ ಯಾತನಾಮಯ ಪ್ರಯತ್ನಗಳಿಂದ ಕಾಂಗ್ರೆಸ್ಸು ಸಂಪಾದಿಸಿರುವ ನಿಷ್ಕಳಂಕ ಖ್ಯಾತಿ ವರ್ಚಸ್ಸುಗಳನ್ನು ಆದು ಅತ್ಯಾತುರದಿಂದ ಸಂರಕ್ಷಿಸಿ ವೃದ್ಧಿಸಿಕೊಂಡು ಬರುವಂತಾಗಲೆಂದು ನಾನು ಇಲ್ಲಿ ಮಲಗಿದ್ದಲ್ಲಿಂದಲೇ ದೇವರಿಗೆ ಮೊರೆಯಿಡುತ್ತೇನೆ

ನನ್ನ ಉಪವಾಸವು ತ್ರಿಪುರಿಯ ಕಾಂಗ್ರೆಸ್ ಭಕ್ತರನ್ನು ಅಧೀರರನ್ನಾಗಿ ಮಾಡಬಾರದು ಸತ್ಯ ಅಹಿಂಸಾತ್ಮಕ ಸಾಧನಗಳಿಂದ ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕಾಗಿರುವಲ್ಲಿ ಪ್ರತಿಯೊಂದು ಚಿಕ್ಕ ವಿಷಯದಲ್ಲಿಯೂ ನಮ್ಮ ಲಕ್ಷ್ಯವನ್ನಿಡುವುದು ಆವಶ್ಯಕವಿದೆ ಜನತೆಗೆ ನನ್ನ ಮೇಲಿರುವ ನಿಸ್ಸೀಮ ಪ್ರೇಮದ ಬೆಲೆ ನನಗೆ ಗೊತ್ತಿದೆ ಆದರೂ ನನ್ನ ಪ್ರಾಣವನ್ನುಳಿಸುವ ತಳತಳಿಯು ಜನಾಂಗದ ದೃಷ್ಟಿಯನ್ನು ಪ್ರಾಮುಖ್ಯ ಧ್ಯೇಯದಿಂದ ಬೇರೆ ಕಡೆಗೆ ತಿರುಗಿಸುವಂತಾದರೆ ನನ್ನ ಪ್ರಾಣವು ಉಳಿದು ಸಾರ್ಥಕವಿಲ್ಲವೆಂಬುದನ್ನು ನನ್ನ ಮೇಲೆ ನಿಸ್ಸೀಮ ಪ್ರೇಮ ವಿಶ್ವಾಸಗಳನ್ನಿಟ್ಟವರೆಲ್ಲ ಮನಗಾಣಿಸಬೇಕೆಂದು ಒತ್ತಿ ಹೇಳುತ್ತೇನೆ

ಮಹಾತ್ಮಾ ಗಾಂಧೀಜೀಯವರು ಉಪವಾಸ ವ್ರತವನ್ನು ಪರಿತ್ಯಜಿಸಿದರೆಂದು ವಿಶ್ವಸನೀಯವಾದ ವಾರ್ತೆ

ವೈಸರಾಯರು ತನ್ನ ಸಂಚಾರ ಕಾರ್ಯವನ್ನು ತಟ್ಟನೆ ನಿಲ್ಲಿಸಿ ಡಿಲ್ಲಿಗೆ ಬಂದು ಕೂಡಲೆ ತನ್ನ ಎಕ್ಸಿಕ್ಯೂಟಿವ್ (ಕಾರ್ಯಕಾರೀ) ಕೌನ್ಸಲಿನ ಸಭೆಕರೆದು ಸದ್ಯದ ಬಿಕ್ಕಟ್ಟಿನ ವಿಷಯ ಪರ್ಯಾಲೋಚಿಸಿದರು ಆನೋಲೆ ಭುಲಾಭಾಯಿದೇಸಾಯಿಗಳೊಡನೆ ವಿಚಾರವಿನಿಮಯಮಾಡಿದರು ತರುವಾಯ ರಾಜಕೋಟೆಯ ಬ್ರಿಟಿಷ್ ರೆಸಿಡೆಂಟರಿಗೆ ಗಾಂಧಿಜಿಗಳೊಡನೆ ಸಂಧಾನ ನಡೆಯುವಂತೆ ತಂತಿಕಳುಹಿಸಿದರು ಗಾಂಧೀಜಿಗಳು ಠಾಕೋರರ ಪ್ರಥಮ ಪ್ರಕಟಣೆಯೇ ಸ್ಥಿರವಾಗಿ ನಿಲ್ಲುವುದಾದರೆ ಸಂಧಿಗೆಡೆಗೊಡುವ ಒಲವಿನಲ್ಲಿದ್ದರು ಗಾಂಧಿಜಿಗಳಿಗೂ ವೈಸರಾಯರಿಗೂ ತಂತಿಮೂಲಕ ವಿಚಾರ ವಿನಿಮಯ ನಡೆಯಿತು

ಗಾಂಧೀಜಿಯವರ ಉಪವಾಸ ಪರಿತ್ಯಾಗದ ಶರತ್ತುಗಳೇನೆಂಬುದರವಿಷಯ ವಿಸ್ತಾರಗಳು ತಿಳಿದ ಬಂದಿಲ್ಲವಾದರೂ ಅವರು ತಾ ೭ನೇ ಮಧ್ಯಾಹ್ನ ೩| ಗಂಟೆಗೆ ಉಪವಾಸವನ್ನು ಕೊನೆಗಾಣಿಸಿದರೆಂದು ವಿಶ್ವಸನೀಯವಾದ ಸುದ್ದಿ ಈಗ ಬಂದಿದೆಯಷ್ಟೆ.

ತ್ರಿಪುರಿಯಲ್ಲಿ

ತನ್ನ ಕಠಿಣ ಶಾರೀರಕ ಅಸ್ವಾಸ್ಥ್ಯವನ್ನು ನುಂಗಿಕೊಂಡ ಧೀರ ಸುಭಾಷ್ ಘೋಸರವರು ಛಲದಂಕ ಮಲ್ಲನಂತೆ ನಿರ್ದಿಷ್ಟವಾದ ದಿನಕ್ಕೆ ತ್ರಿಪುರಿಯಲ್ಲಿ ಬಂದಿಳಿದೇಬಿಟ್ಟರು! ತಾ. ೬ನೇ ಅಪರಾಹ್ನ ತ್ರಿಪುರಿಯನ್ನು ಸೇರಿದ ತ್ತಾರೆ. ಮಹಾ ಮೆರವಣಿಗೆಯನ್ನು ಮಾಡಬೇಕೆಂದು ನೆರೆಹೊರೆಯ ಸಂಸ್ಥಾನಗಳಿಂದ ೭೫ ಆನೆಗಳನ್ನು ತರಿಸಿ ಸರ್ವ ಸನ್ನಾಹಗೊಳಿಸಿದ್ದರೂ ಅಧ್ಯಕ್ಷರ ದೇಹಾಲಸ್ಯದ ಬೆಸಯಿಂದ ಆ ಯೋಚನೆಯೆಲ್ಲವನ್ನೂ ಬಿಟ್ಟು ಎಂಬ್ಯುಲೆನ್ಸ್ ಕಾರಿನಲ್ಲಿ ತ್ರಿಪುರಿಯ ಅಧಿವೇಶನ ಮಂಟಪಕ್ಕೆ ಅಧ್ಯಕ್ಷರು ಚಿತ್ತೈಸಬೇಕಾಯಿತು

ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನದ ಉದ್ಘಾಟನೆ ನಹರೂಗಳವರಿಂದ

ತ್ರಿಪುರಿಯಲ್ಲಿ ಏರ್ಪಡಿಸಿರುವ ಖಾದೀ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನವನ್ನು ಗಾಂಧೀಜಿಗಳು ತೆರೆಯುವ ವ್ಯವಸ್ಥೆಯಾಗಿತ್ತು ಆದರೆ ಅವರು ರಾಜಕೋಟೆಯಲ್ಲಿರುವುದರಿಂದ ಅವರ ಅಪೇಕ್ಷೆಯ ಮೇರೆಗೆ ಅವರ ಪ್ರತಿನಿಧಿಯಾಗಿ ಜವಾಹರಲಾಲ್ ನೆಹರುಗಳವರು ಆ ಕಾರ್ಯವನ್ನು ನೆರವೇರಿಸಿದರು. ತಾ ೬ರಂದು ಆ ಪ್ರದರ್ಶನ ಉದ್ಘಾಟನೆಯನ್ನು ಮಾಡುತ್ತ ನೆಹರೂಗಳು "ದೂರದಲ್ಲಿ ಗಾಂಧೀಜಿಗಳ ಪ್ರಾಣ ಭಿಕ್ಷೆಯನ್ನು ಬೇಡುತ್ತಲಿರುವ ನಮ್ಮ ಹೃದಯ ಪರಿಸ್ಥಿತಿಯಲ್ಲಿ ರಾಜಕೋಟೆಯ ಕಡೆಗೇ ನಮ್ಮ ಮನಸ್ಸು ಓಡುತ್ತಲಿದ್ದರೂ ನಮ್ಮ ಕರ್ತವ್ಯವೇನೋ ಅದನ್ನು ನಾವು ಮಾಡದೆ ಮುಂದೂಡಲು ಸಾಧ್ಯವಿಲ್ಲ. ಇಂತಹ ವಿಷಮ ಸನ್ನಿವೇಶದಲ್ಲಿ ನಾವೇಕೆ ಈ ಅಧಿವೇಶನವನ್ನು ಜರಗಿಸಬೇಕೆಂದು ನನ್ನ ಮಿತ್ರರ ಪ್ರಶ್ನೆ. ಆದರೆ ಇದನ್ನು ಮುಂದುವರಿಸುವುದು ನ್ಯಾಯವಲ್ಲವೆಂದೇ ನನ್ನ ಪ್ರತ್ಯುತ್ತರ"-ಎಂದರು

ಮತ್ತೊಂದು ಸಂದರ್ಭದಲ್ಲಿ ನೆಹರೂಗಳವರು ಹೇಳಿದ ಮಾತು ತ್ರಿಪುರಿ ಅಧಿವೇಶನದ ರೂಪರೇಖೆ ಪರಿಣಾಮಗಳನ್ನು ಸೂಚಿಸುತ್ತವೆ. ಆ ಮಾತುಗಳು ಹೀಗಿವೆ 'ಅತ್ತ ಗಾಂಧೀಜೀಗಳು ಉಪವಾಸಬಿದ್ದು ಸಾಯುತ್ತಿರುವಾಗ ನಾವಿಲ್ಲಿ ಜಗಳಾಡಿಕೊಳ್ಳಬಹುದೇ? ನಾವು ನಮ್ಮೊಳಗಿನ ಮತ ವೈಷಮ್ಯಗಳ ಕಲಹಗಳನ್ನೆಲ್ಲ ಬದಿಗೊತ್ತಿಟ್ಟು ಒಂದುತನದ ಪ್ರಬಲ ಮುಂಭಾಗವನ್ನು ಈ ಸಂದರ್ಭದಲ್ಲಿ ತೋರಬಾರದಾದರೆ ನಮಗೆಂತಹ ನಾಚಿಗೇಡು! ಎಂತಹ ಅವಮಾನ!'

ಈ ಮಾತಿನ ಸ್ಫೂರ್ತಿಯು ಅಧಿವೇಶನದ ಪ್ರತಿನಿಧಿಗಳ ಹೃದಯವನ್ನು ಹೊಕ್ಕು ಮೃದುಗೊಳಿಸದಿರದು. ಶಾಂತ ವಾತಾವರಣವನ್ನುಂಟುಮಾಡದಿರದು ಆದ್ದರಿಂದ ಉಗ್ರಭೇದಗಳಿಗೆ ಎಡೆಗೊಡದೆ ಕಲಹ ಕಚ್ಚಾಟಗಳಿಲ್ಲದೆ ಕಾಂಗ್ರೆಸ್ಸು ಪಾಳೆಯದೊಳಗ ಒಕ್ಕಟ್ಟು ಹೋಗಿ ಇಕ್ಕಟ್ಟಾಯಿತೆಂಬ ನಗೆಗೀಡಾಗದೆ ಕಾರ್ಯಕಲಾಪಗಳು ಹಿತಮಿತದಿಂದ ಸಾಗಿ ಯಶಸ್ವಿಯಾಗುವಂತೆ ನೆಹರೂಗಳ ವರ್ಚಸ್ಸು ಪ್ರತಿಭೆ ವಿಚಕ್ಷಣ ಬುದ್ಧಿಗಳು ಮಾರ್ಗದರ್ಶಕಗಳಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ ಅಂತೂ ತ್ರಿಪುರಿಯ ಮತ್ತು ರಾಜಕೋಟೆಯ ರಾಜಕೀಯ ನಭೋಮಂಡಲಗಳಲ್ಲಿ ಎದ್ದಿದ್ದ ಪ್ರಳಯಕಾರಕವಾದ ಕಾರ್ಮೋಡವು ಚದರಿಹೋಗಿ ಶುಭಾಂತವಾಗಿ ಪರಿಣಮಿಸುವ ಲಕ್ಷಣಗಳು ಎರಡು ಕಡೆಗಳಲ್ಲಿಯೂ ಸ್ಪಷ್ಟವಾಗಿ ತೋರಿಬರುತ್ತಿರುವುದು ಭಾರತಾಂಬೆಯ ಕುವರ ಸಕಲರ ಹೃದಯಾನಂದದ ಸುವಾರ್ತೆ.

ಉಡುಪಿ

ಕಮಿಶನರ ನೇಮಕ—ಉಡುಪಿ ಮುನಿಸಿಪಾಲಿಟಿಗೆ ಶ್ರೀ ಬಿ ಸೂರ್ಯನಾರಾಯಣರಾಯರು ಹೊಸ ಕಮಿಶನರಾಗಿ ನೇಮಕ ಹೊಂದಿದವರು

ವಸಂತ ಮಂಟಪದಲ್ಲಿ ಹರಿಕಥಾ ಕಾಲಕ್ಷೇಪ—ಪರ್ಯಾಯ ಪೀಠಸ್ಥರಾದ ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರ ಉದಾರ ಪ್ರೇರಣೆಯಲ್ಲಿ ಕೀರ್ತನ ಭೂಷಣ ಹಂಡೆ ಶ್ರೀಪಾದದಾಸರು ವಿದ್ಯುದ್ದೀಪಗಳಿಂದ ಕಂಗೊಳಿಸುವ ಸನ್ನಿಧಾನದ ವಸಂತ ಮಂಟಪದಲ್ಲಿ ಸಂಪೂರ್ಣ ರಾಮಾಯಣ ಹರಿಕಥಾ ಕಾಲಕ್ಷೇಪವನ್ನಾರಂಭಿಸಿರುವರು ಶ್ರೀರಾಮನವಮಿಯಂದು ಮಹೋತ್ಸವ, ಸಂತರ್ಪಣಾದಿಗಳಿಂದ ಮಂಗಲವಾಗಲಿರುವುದು.

ರಾತ್ರಿಹಗಲು ಕರೆಂಟ್—ಉಡುಪಿ ಇಲೆಕ್ಟ್ರಿಕ್ ಸಪ್ಲೈ ಕೋಪರೇಶನವರು ಇದೇ ತಾ. 15ರಿಂದ ನಗರಕ್ಕೆಲ್ಲಾ ರಾತ್ರಿಹಗಲು 24ಗಂಟೆ ಕಾಲವೂ ಕರೆಂಟ್ ಕೊಡಲಿರುವರೆಂದು ತಿಳಿಯುತ್ತೇವೆ. ಇದರ ಪ್ರಯೋಜನವನ್ನು ಉಡುಪಿ ನಾಗರಿಕರು ಹೊಂದುವರೆಂದು ನಿರೀಕ್ಷಿಸಲಾಗಿದೆ

ಭಾವಚಿತ್ರ ಅನಾವರಣ—ತಾ 8 3 39 ನೇ ಬುಧವಾರ ಅಪರಾಹ್ನ ಘಂಟೆ 5ಕ್ಕೆ ಪೇಜಾವರ ಮಠದ ವಿಶಾಲ ಭವನದಲ್ಲಿ ಸೋದೆ ಮಠ ಶ್ರೀ ವಾದಿರಾಜ ಸ್ವಾಮಿಗಳ ಭಾವಚಿತ್ರ ಅನಾವರಣ ಸಮಾರಂಭವು ವಿಜೃಂಭಣೆಯಿಂದ ನಡೆಯಿತು ಮಠದ ಪಂಡಿತರಾದ ಶ್ರೀ ಮಯ್ಯಾಳ ನರಸಿಂಹಾಚಾರ್ಯರು ಭಾಷಣ ಮಾಡುತ್ತಾ ನೆರೆದಿದ್ದ ಶ್ರೀಶ್ರೀಗಳವರನ್ನೂ, ಪ್ರಾಸ್ತಾವಿಕ ಸಭಿಕರನ್ನೂ ಸ್ವಾಗತಿಸಿ ಶ್ರೀವಾದಿರಾಜ ಸ್ವಾಮಿ ಮಹತ್ವ ಮತ್ತು ಅವರ ಭಾವಚಿತ್ರ ಅನಾವರಣದ ಆವಶ್ಯಕತೆ ಕುರಿತು ವಿವರಿಸಿದರು. ಈ ಸಮಾರಂಭಕ್ಕೆ ಬಂದಿದ್ದ ಅನೇಕ ಮಹನೀಯರ ಶುಭಸಂದೇಶಗಳನ್ನು ಓದಿದ ಬಳಿಕ ಶ್ರೀ ಶಿರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರನ್ನು ಭಾವಚಿತ್ರ ಅನಾವರಣ ಮಾಡುವಂತೆ ಕೇಳಿಕೊಂಡರು. ಶ್ರೀ ಶ್ರೀಗಳವರು ಭಾವಚಿತ್ರ ಅನಾವರಣ ಮಾಡುತ್ತಾ ಶ್ರೀ ವಾದಿರಾಜ ಸ್ವಾಮಿಗಳ ಉದಾತ್ತ ಚರಿತ್ರೆಯನ್ನು ತಿಳಿಸಿ ಅವರ ಭಾವಚಿತ್ರ ಅನಾವರಣ ಮಾಡುವದಕ್ಕೆ ದೊರೆತ ಆನಂದವನ್ನು ವ್ಯಕ್ತಪಡಿಸಿದರು. ಆ ಮೇಲೆ ಪಂಡಿತ ಪಂಕಟರಾಮಾಚಾರ್, ಕೊರಡ್ಕಲ್ ಶ್ರೀನಿವಾಸರಾಯರೇ ಮೊದಲಾದವರ ಸಂದರ್ಭೋಚಿತ ಭಾಷಣವಾದ ನಂತರ ವಂದನೆ ಕಡೆಯಿಂದ ಆಲೆವೂರು ಸೀತಾರಾಮಾಚಾರ್ಯರು ಶ್ರೀಗಳವರಿಗೂ ಸಭಿಕರಿಗೂ ವಂದನಾರ್ಪಣೆ ಮಾಡಿದ ಬಳಿಕ ಸಭಾಂತ್ಯವಾಯಿತು

ಶ್ರೀ ವಾದಿರಾಜ ಸ್ವಾಮಿಯವರು

ಕಟೀಲು—ಇಲ್ಲಿ ಕಳೆದ ತಾರೀಖು 27ರಲ್ಲು ಬ್ರಾಂಚು ಪೋಸ್ಟಾಫೀಸು ತೆರೆಯುವ ಸಮಾರಂಭವು ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪೋಸ್ಟಾಫೀಸಿನಿಂದ ಇಲ್ಲಿಗೆ ಬಳ್ಳಿ ಇರುವ, ನಡಿಗೋಡು, ಕೊಂಡೆಮೂಲ, ಕಿಲೆಂಜೂರು, ಮತ್ತು ಪಟ್ಟೂರು, ಈ ಗ್ರಾಮಸ್ಥರಿಗೆ ಆಗುವ ಪ್ರಯೋಜನವನ್ನು ಅಧ್ಯಕ್ಷರು ವಿವರಿಸಿದರು

Degrees Books Medicines

Free H L M S H M B H M D etc Free Homeo Ayur Unani Naturo degrees by post also—Practitioners also get soon Homeo Materiamedica Rs 5 Homeo Practice book Rs 4 Insanity Cure Pills Rs 10 Enclose 2 annas stamps —

Principal, Indian Homeopathic Institute and Society (Govt. Regd)

P O MAHUVA (Kathiawar Dt India)

ದ ಕ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿ—ಇದರ ತ್ರೈಮಾಸಿಕ ಸ್ಟೇಟ್‌ಮೆಂಟ್ ಯೋಜನೆಯು ಕುರಿತು ಟೀಕೆ ನಮಗೆ ಬಂದಿದೆ ಯಥಾವಕಾಶವಾಗಿ ಮುದ್ರಿಸಲ್ಪಡುವುದು.

ರಾಜಕೋಟೆ ಸಂಸ್ಥಾನದ ಎಡ್ವೈಸರಿ ಕೌನ್ಸಿಲಿನವರ ಪ್ರಕಟಣೆ!

ಗಾಂಧೀಜಿಗಳು ಥಾಕೂರ್ ಸಾಹೇಬರಿಗೆ ಬರೆದ ಪತ್ರವು ಅದೊಂದು ಅಲ್ಟಿಮೇಟಮ್ (ಭಯೋತ್ಪಾದಕ ಪರಮಾಜ್ಞೆ) ಎಂದರೂ ತಪ್ಪಾಗದು. ಅವರ ಕೇಳಿಕೆಗಳು ನ್ಯಾಯನೀತಿಗಳಿಗೆ ವಿರೋಧ. ಅವನ್ನು ಅಂಗೀಕರಿಸುವುದೆಂದರೆ ಥಾಕೂರ್ ಸಾಹೇಬರು ಪರಕೀಯನೊಬ್ಬನ ಆಜ್ಞಾನುಸಾರವಾಗಿ ತನ್ನ ರಾಜ ದಂಡವನ್ನು ಕೆಳಗಿಟ್ಟು ಬಿಟ್ಟಂತೆಯೇ. ಆದುದರಿಂದ ಅಂತಹ ಕೇಳಿಕೆಗಳನ್ನು ಎಂತಹ ಪರಿಸ್ಥಿತಿಯಲ್ಲೇ ಆಗಲಿ, ಥಾಕೂರ್ ಸಾಹೇಬರು ಅಂಗೀಕರಿಸುವುದು ನ್ಯಾಯವೆಂದು ಪರಿಗಣಿಸಲ್ಪಡಲಾರದು. ಸುಧಾರಣಾ ಸಮಿತಿಯ ಸದಸ್ಯರನ್ನು ನೇಮಿಸುವ ಹಕ್ಕನ್ನು ಥಾಕೋರರು ಬಿಟ್ಟುಕೊಡುವ ವಿಚಾರವು ಎಂದೂ ಯಾವ ಸಂದರ್ಭದಲ್ಲಿಯೂ ಬಂದಿಲ್ಲ. ಅಂತಹ ಹೊಣೆಗಾರಿಕೆಯುಳ್ಳ ಕಾರ್ಯಭಾರವನ್ನು ಯಾವ ರಾಜನೂ ಇತರರ ಪಾಲಿಗೆ ಬಿಟ್ಟು ಬಿಡಲಾರನು.

ಇಂತಹ ದುರ್ದೈವೀ ಪರಿಣಾಮದ ಪರಿಸ್ಥಿತಿಯು ರಾಜಕೋಟೆಯಲ್ಲುಂಟಾಗಲು ಹೊರಗಿನವರ ಕಿರುಕುಳಿಯೇ ಕಾರಣ. ಇಂತಹರು ರಾಜಪ್ರಜೆಗಳ ಪ್ರಶ್ನೆಯಲ್ಲಿ ಪ್ರವೇಶಿಸುವ ನಿಷ್ಫಲ ಹಠವೇ ರಾಜ್ಯಭಾರದ ವಿಷಯ ಸರ್ವ ಪ್ರಜಾಪಕ್ಷ ಸಮ್ಮತವಾದ ಸುಧಾರಣೆಗಳನ್ನು ಈ ಮೊದಲೇ ಪ್ರಯೋಗದಲ್ಲಿ ತರುವುದಕ್ಕೆ ಪ್ರತಿಬಂಧಕವಾಗಿದೆ.

ಕೆಲವೊಂದು ಅನ್ಯಾಯಗಳ ನಿವೃತ್ತಿಗಾಗಿ ಚಳವಳವು ಪ್ರಾರಂಭವಾಯಿತು. ಅದನ್ನು ಥಾಕೂರರು ಕೂಡಲೇ ನಿವಾರಿಸಿಕೊಟ್ಟರು. ಅಕ್ಟೋಬರದಲ್ಲಿ ಭೂಕಂದಾಯವನ್ನು ಹಗುರಗೊಳಿಸಬೇಕೆಂದಾಗ ಅದನ್ನು ನೆರವೇರಿಸಿಕೊಡಲಾಯಿತು ಅಂತೂ ನಿಜವಾಗಿ ಪ್ರಜಾಭಿಮತವೇನೆಂಬುವನ್ನು ನಿಶ್ಚಿತವಾಗಿ ತಿಳಿದುಕೊಳ್ಳಲಿಕ್ಕೆ ನವಂಬರದಲ್ಲಿ ರಾಜಕೋಟೆಯ ಪ್ರಮುಖ ಗೃಹಸ್ಥರುಗಳನ್ನೂ ಕೌನ್ಸಿಲಿನ ಸದಸ್ಯರನ್ನೂ ಸೇರಿಸಿ ಮಹಾಸಭೆ ನಡೆದು ಏಕಮತದಿಂದ ಸಭೆಯು ಬೇಡಿದ ಬಯಕೆಗಳನ್ನೆಲ್ಲ ನೆರವೇರಿಸಿಕೊಡುವದಾಗಿ ಥಾಕೂರರು ಒಪ್ಪಿದರು. ಸಭಿಕರೂ ಸಂತೃಪ್ತರಾಗಿ ಒಂದು ಇತ್ಯರ್ಥಕ್ಕೆ ಬಂದಿದ್ದರು ಆದರೆ ಶ್ರೀ. ದೇಭಾರರು ಮಾತ್ರ ವಲ್ಲಭಾಯಿ ಪಟೇಲರ ಮಧ್ಯಸ್ಥಿಕೆಯಿಲ್ಲದೆ ಯಾವ ಇತ್ಯರ್ಥವೂ ಸಾಧ್ಯವಿಲ್ಲವೆಂದು ಹಠಹಿಡಿದುದರಿಂದ ಯಾವ ನಿರ್ಧಾರವೂ ಆಗದೆ ಉಳಿಯಿತು. ಡಿಶಂಬರ ತಾರೀಕು ೨೬ರಲ್ಲಿ ಪಟೇಲರೂ ಬಂದರು. ಅವರೂ ಥಾಕೋರ್ ಸಾಹೇಬರೂ ಕೌನ್ಸಿಲಿನವರೂ ದೀರ್ಘ ಚರ್ಚೆ ನಡೆಯಿಸಿ ಒಂದು ಗೊತ್ತುವಳಿಗೆ ಮುಟ್ಟಲಾಗಿ ಅದೇ ವಿಷಯವು ತಾ. ೨೬ರ ಪ್ರಕಟಣೆಯಾಗಿ ಪರಿಣಮಿಸಿತು ಅದರ ಪ್ರಕಾರ ನೇಮಕವಾಗುವ ಸುಧಾರಣೆಯ ಸಮಿತಿಯ ಮೂರು ಅಧಿಕಾರಿಗಳು ಸದಸ್ಯರ ಹೊರತು ಉಳಿದ ಏಳುಮಂದಿ ಅನಧಿಕಾರಿ ಸದಸ್ಯರ ನೇಮಕದಲ್ಲಿ ವಲ್ಲಭಾಯಿ ಪಟೇಲರ ಸೂಚನೆಯನ್ನು ಪರ್ಯಾಲೋಚಿಸುವೆನಾಗಿ ಮಾತ್ರ ಥಾಕೂರ್ ಸಾಹೇಬರೆಂದಿದ್ದರು. ಪಟೇಲರು ಕೊಟ್ಟ ಶಿಫಾರಸಿನ ಹೆಸರುಗಳಲ್ಲಿ ಮುಸ್ಲಿಮ ಮತ್ತು ಭಾಯ್ಯಾತರುಗಳ ಪ್ರತಿನಿಧಿಗಳಿಗೆ ಅವಕಾಶವಿಲ್ಲದ್ದರಿಂದ ಆ ಅವಶ್ಯಕತೆಯನ್ನು ಪಟೇಲರಿಗೆ ಸೂಚಿಸಿ ಥಾಕೂರ್ ಸಾಹೇಬರು ಬರೆಯಲು ಪಟೇಲರು ತನ್ನ ಏಳುಮಂದಿಯನ್ನು ತೆಗೆದುಕೊಳ್ಳದಿದ್ದರೆ ಪುನಃ ಚಳವಳ ಪ್ರಾರಂಭಕ್ಕೆ ಆಜ್ಞೆ ಕೊಡುವೆನೆಂದು ಭಯೋತ್ಪಾದಕ ಪರಮಾಜ್ಞೆಯ (ಅಲ್ಟಿಮೇಟಮ್) ರೂಪದ ತಂತಿ ಕೊಟ್ಟರು ತನ್ಮಧ್ಯೆ ತಮ್ಮ ತಮ್ಮ ಹಿತರಕ್ಷಣೆಗಾಗಿ ಪ್ರಾತಿನಿಧ್ಯವಿರಬೇಕೆಂದು ಇತರ ಅಲ್ಪಸಂಖ್ಯಾಕ ಪ್ರಜಾವರ್ಗದ ಮನವಿಗಳೂ ಬಂದಿದ್ದುದರಿಂದ ಥಾಕೂರ್ ಸಾಹೇಬರು ತಮ್ಮ ಸಕಲ ಪ್ರಜಾಸಮ್ಮತವಾಗುವಂತೆ ಮೂರು ಬೇರೆ ಪ್ರತಿನಿಧಿಗಳನ್ನು ಪಟೇಲರ ಶಿಫಾರಸಿನ ಮೂರುಮಂದಿಯನ್ನೂ ಪ್ರಜಾಮಂಡಲದ ಸದಸ್ಯರಾಗಿ ರಾಜಕೋಟೆಯ ಕೊರ್ಪರೇಶನಿನ ಚುನಾಯಿತ ಅಧ್ಯಕ್ಷರನ್ನು ಆರಿಸಿ ಎರಡನೆಯ ಪ್ರಕಟಣೆಯನ್ನು ಮೊದಲನೆಯದರ ಉಪಾಂಗವಾಗಿಯೇ ಹೊರಡಿಸಿದರು. ಆಗ ಪಟೇಲರ ಸೂತ್ರದ ಗೊಂಬೆಗಳು ಚಳವಳಿಯನ್ನು ತೊಡಗಿದರು. ಸಂಸ್ಥಾನಿಕ ಪ್ರಜೆಗಳಿಗೆ ಅದರಲ್ಲಿ ಸಹಾನುಭೂತಿಯಿರಲಿಲ್ಲ ಅದುಕಾರಣ ಚಳವಳಿಯನ್ನು ಬಲಗೊಳಿಸಲು ಹೊರಗಿಂದ ಸತ್ಯಾಗ್ರಹಿಗಳನ್ನು ಕಳುಹಿಸಿದರು. ಥಾಕೂರರು ವಚನಭ್ರಷ್ಟರಾದರೆಂದು ಅಪಪ್ರಚಾರಗೈದರು. ಸತ್ಯಾಗ್ರಹಿ ಕೈದಿಗಳ ಮೇಲೆ ಅತ್ಯಾಚಾರನಡೆಯುತ್ತೆಂದು ಪ್ರಕಟಣೆಗೊಳಿಸಿದರು.

ಗಾಂಧೀಜಿಗಳಿಗೆ ಇವೆಲ್ಲದರ ಸತ್ಯಾಂಶವು ತಿಳಿಯಲಾಗುವಂತೆ ಶ್ರೀಗಳಾದ ನಾನಾಲಾಲ್ ಜಸನೀ ಮತ್ತು ಮೋಹನಲಾಲ್ ಮೋತೀಚಂದ್ ಇವರುಗಳು ಬಂದು ಪರಿಸ್ಥಿತಿಯನ್ನು ಕಣ್ಣಾರೆ ಕಾಣಲಿಕ್ಕೆ ಅನುಮತಿಕೊಡಲಾಯಿತು. ಅವರು ಬಂದು ಸ್ಥಳೀಯ ಜೈಲು, ಸರ್ದಾರ್ ಜೈಲು, ತ್ರಾಂಬಾ ಭವನಗಳನ್ನು ನೋಡಿ ಅನನುಕೂಲತೆಗಳೆಲ್ಲ ನಿವಾರಣೆಯಾಗಿವೆಯೆಂದು ಸತ್ಯಾಗ್ರಹಿಗಳು ಕೈಕೊಂಡ ಉಪವಾಸವನ್ನು ಬಿಟ್ಟಿದ್ದಾರೆಂದೂ ಕಸ್ತೂರಿಬಾಯಿಯವರ ದೇಹಾರೋಗ್ಯವು ಉತ್ತಮತರದಲ್ಲಿದೆಯೆಂದೂ ಗಾಂಧೀಜಿಯವರಿಗೆ ತಂತಿಕೊಟ್ಟರು.

ಆದರೂ ತಾನೇ ಬಂದು ಕಣ್ಣಾರೆ ಕಾಣಲಿಕ್ಕೆ ಅವಕಾಶಕೊಡಬೇಕೆಂದೂ ಕೇಳಿದಾಗ ಅದಕ್ಕೂ ಥಾಕೋರ್ ಸಾಹೇಬರು ಒಪ್ಪಿ ಸರ್ವ ಸೌಕರ್ಯಗಳನ್ನು ಒದಗಿಸಿಕೊಟ್ಟರು, ಅಲ್ಲದೆ ತನ್ನ ಡಿಶಂಬರದ ಪ್ರಕಟಣೆಯನ್ನು ಯಾವ ರೀತಿಯಿಂದಲೂ ಅಲ್ಲಗಳೆಯುವ ಉದ್ದೇಶವೇ ತನಗಿಲ್ಲವೆಂದೂ ಅದು ಇನ್ನೂ ಜ್ಯಾರಿಯಲ್ಲಿರುವುದೆಂದೂ ಎರಡನೆಯ ಪ್ರಕಟಣೆಯು ಮೊದಲನೆಯದರಲ್ಲಿ ಅಡಕವಾದ ಸಮಿತಿಯ ಸದಸ್ಯರ ಹೆಸರು ಪ್ರಕಟಣೆಯ ಉದ್ದೇಶ ಮಾತ್ರವಾಗಿದೆಯೆಂದೂ ಸ್ಪಷ್ಟವಾಗಿ ಗಾಂಧೀಜಿಗಳಿಗೆ ಹೇಳಿದರು. ಗಾಂಧೀಜಿಗಳು ಎಲ್ಲ ವಿಚಾರಗಳನ್ನು ಮಾಡಿ ಅವುಗಳ ಸತ್ಯಾಸತ್ಯತೆಯ ಇತ್ಯರ್ಥವು ಸುಲಭವಾಗಿಲ್ಲವೆಂದೂ ಅದಕ್ಕೊಂದು ವಿಚಾರಣೆಯ ಕಮಿಟಿಯನ್ನು ನೇಮಕಮಾಡಬೇಕೆಂದು ಕೊಟ್ಟ ಸೂಚನೆಯು ಮಾನ್ಯವಾಗಿದೆ. ಹೀಗಿದ್ದೂ ತನ್ಮಧ್ಯೆ ಥಾಕೋರರು ಒಪ್ಪಲಾಗದ ಅಸಾಧ್ಯ ಶರತ್ತುಗಳನ್ನು ಗಾಂಧೀಜಿಗಳು ಅವರ ಮೇಲೆ ಹೊರಿಸಿ ಅವು ಅಂಗೀಕೃತವಾಗಲಿಲ್ಲವೆಂದು ಉಪವಾಸ ದೀಕ್ಷೆಯನ್ನು ಕೈಕೊಂಡು ಸಂಸ್ಥಾನದಲ್ಲಿಯೂ ಹೊರಗೂ ದೊಡ್ಡ ಗೊಂದಲವನ್ನು ಎಬ್ಬಿಸಿರುವರು. ಆದುದರಿಂದ ವಚನಭ್ರಷ್ಟತೆಯ ದೋಷವಾಗಲೀ ಕ್ಷೋಭೆಯ ಕಾರಣ ಕರ್ತೃತ್ವವಾಗಲೀ ಥಾಕೋರರಲ್ಲಿಲ್ಲ. ಬದಲಾಗಿ ಸಂಧಾನ ಹಾಗೂ ಸತ್ಯಾನ್ವೇಷಣೆಯ ದೃಷ್ಟಿಯಿಂದ ಬರುವೆನೆಂದು ವಚನವಿತ್ತು ಈಗ ತನ್ನ ಉಪವಾಸ ವ್ರತದಿಂದ ಪ್ರಬಲ ಚಳವಳ ಎಬ್ಬಿಸುವ ಗಾಂಧೀಜಿಗಳು ಮತ್ತು ತನ್ನ ಸರ್ವಾಧಿಕಾರಿತ್ವವು ನಡೆಯಬೇಕೆಂಬ ಛಲದಂತೆ ಪಟೇಲರು ಇವರೇ ಇಂದಿನ ಪರಿಸ್ಥಿತಿಗೆ ಹೊಣೆಗಾರರು. ತಾನು ಹೊರಗಿನವರ ಸರ್ವಾಧಿಕಾರ ವಾಣಿಗೆ ಮಣಿವುದಿಲ್ಲವಾದರೂ ತನ್ನ ಪ್ರಜೆಗಳಿಗೆ ಯುಕ್ತವಾದ ಸುಧಾರಣೆಗಳನ್ನು ರಾಜ್ಯಭಾರ ಪದ್ಧತಿಯಲ್ಲಿ ಅನವಶ್ಯಕವಾದ ವಿಳಂಬವಿಲ್ಲದೆ ಸಮಾವೇಶಮಾಡಿಕೊಳ್ಳಲು ಈಗಲೂ ಸಿದ್ಧನಾಗಿಯೇ ಇದ್ದೇನೆಂದು ಥಾಕೋರ್ ಸಾಹೇಬರು ತಿರುಗಿ ದೃಢೀಕರಿಸುತ್ತಾರೆ—ಹೀಗಿದೆ ರಾಜಕೋಟೆ ಚಿತ್ರದ ಒಂದು ಬದಿ. ಮತ್ತೊಂದು ಬದಿಯ ನೋಟವೂ ವಾಚಕರ ದೃಷ್ಟಿಯ ಮುಂದೆ ಬಂದೇ ಇದೆ.

ಮಂಗಳೂರು

(ನಮ್ಮ ಸ್ವಂತ ವಾತ್ತಾ೯ಹರರಿಂದ)

ತಾ. 5-3-39

ಹೊಸ ಗ್ರಾಮ ಪೋಸ್ಟಾಫೀಸು— ಇದೇ ಮಾರ್ಚ್ ತಾ. ೧ರಿಂದ ಮಂಗಳೂರು-ಕದ್ರಿಯಲ್ಲಿ ಒಂದು ನೂತನ ಪೋಸ್ಟಾಫೀಸು ತೆರೆಯಲ್ಪಟ್ಟಿದೆ. ರಿಜಿಸ್ಟ್ರೇಶನ್, ಮನಿಯಾರ್ಡರ್, ಪಾರ್ಸೆಲ್ ಇತ್ಯಾದಿಗಳನ್ನು ಕಳುಹಿಸಲು ಜನರಿಗೆ ತುಂಬಾ ಅನುಕೂಲವಾಗಿದೆ.

ಕೈದಿಯು ಸಾಕ್ಷಿಗಾರನ ಕಿವಿ ಕಚ್ಚಿ ತಿಂದನು— ಕಳೆದ ತಾ. 28ರಲ್ಲಿ ಮಂಗಳೂರು ಸೆಷನ್ಸ್ ಕೋರ್ಟಿನ ಹೊರಗೆ ಒಂದು ವಿಚಿತ್ರವೂ ಘೋರವೂ ಆದ ಒಂದು ಘಟನೆ ಸಂಭವಿಸಿತು. ಸುಬ್ಬ ಪೂಜಾರಿ ಎಂಬ ಆಪಾದಿತನೊಬ್ಬನು ಜಡ್ಜರ ಮುಂದೆ ವಿಚಾರಣೆಗೆ ನಿಲ್ಲಿಸಲ್ಪಟ್ಟಿದ್ದನು. ಒಬ್ಬ ಸಾಕ್ಷಿಗಾರನು ಸುಬ್ಬ ಪೂಜಾರಿಗೆ ಅವಗುಣವಾಗಿ ಸಾಕ್ಷಿ ಹೇಳಿದನು. ಜಡ್ಜರು ಫಲಾಹಾರಕ್ಕೆದ್ದ ವೇಳೆ ಸುಬ್ಬ ಪೂಜಾರಿಯು ತನಗೆ ಬಹಿರ್ದೇಶಕ್ಕೆ ಹೋಗಬೇಕೆನ್ನಲು ಪೋಲೀಸರು ಪಹರೆಯಿಂದ ಅವನನ್ನು ಕರೆದು ಹೋಗುವಾಗ ಕೋರ್ಟಿನ ಪಕ್ಕದಲ್ಲಿದ್ದ ಬೀಡದ ಅಂಗಡಿಯ ಹತ್ತಿರ ಕುಳಿತಿದ್ದ ಮೇಲಿನ ಸಾಕ್ಷಿಗಾರನ ಹತ್ತಿರದಲ್ಲಿ ಹೋಗಬೇಕಾಯಿತು. ಆಪಾದಿತನು ಥಕ್ಕನೆ ಸಾಕ್ಷಿ ಹೇಳಿದವನ ಒಂದು ಕಿವಿಯನ್ನು ಕಚ್ಚಿ ಅದರಲ್ಲಿದ್ದ ಒಂಟೆ ಸಮೇತ ತಿಂದು ಬಿಟ್ಟನು. ಕೂಡಲೇ ಪೋಲೀಸರು ಅವನನ್ನು ಬಂದೋಬಸ್ತಿನಿಂದ ಕೊಂಡುಹೋದರು. ಸಾಕ್ಷಿಗಾರನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಒಯ್ಯಲ್ಪಟ್ಟಿರುವನು. ಇಂತಹ ವಿಚಿತ್ರ ಘಟನೆ ಸಂಭವಿಸಿತು.

ಮಂಗಳೂರು ಟೌನ್ ಕಾಂಗ್ರೆಸ್ ಸಮಿತಿ— ಮಂಗಳೂರು ಟೌನ್ ಕಮಿಟಿಗೆ ಚುನಾವಣೆ ನಡೆದು ಶ್ರೀ|ಬಿ. ವಿ. ಬಾಳಿಗ ಯಂ. ಎಲ್. ಎ. ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಇತರ ಅಧಿಕಾರಿಗಳ ಮತ್ತು ಕಾರ್ಯಕಾರಿ ಸಭೆಯ ಸದಸ್ಯರ ಚುನಾವಣೆಯೂ ಇದೇ ಮುಹೂರ್ತದಲ್ಲಿ ನಡೆಯಿತು.

ಆನಂದ ಪವರ್ ಪ್ರೆಸ್— ಈ ಹೆಸರಿನಿಂದ ಶ್ರೀ| ಪೇಜಾವರ ಮುರಹರಿರಾಯರು ಒಂದು ನೂತನ ಮುದ್ರಣಾಲಯವನ್ನು ಸ್ಥಾಪಿಸಿದರು. ಇದರ ಉದ್ಘಾಟನಾ ಸಮಾರಂಭವು ಕಳೆದ ತಾ. ೧ರಲ್ಲಿ ಶ್ರೀ. ಯು. ಸಿ. ಯಸ್. ಭಟ್ಟರವರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಂತ್ಯದಲ್ಲಿ ಒಂದು ಟೀಪಾರ್ಟಿ ಸತ್ಕಾರವೂ ನಡೆಯಿತು.

ಮೋಟರ್ ಕೆಲಸಗಾರರ ಸಭೆ— ಮೋಟರ್ ಕೆಲಸಗಾರರ ಸಭೆಯು ಕಳೆದ ತಾ. 26ರಲ್ಲಿ ಶ್ರೀ. ಯಂ. ಕೃಷ್ಣ ಶೈಗಳವರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀಗಳಾದ ಕೆ. ಕೆ. ಶೆಟ್ಟಿಯವರೂ, ಅಮಾನುಲ್ಲಾಯರೂ ಸಿ. ಪಿ. ಸಿ ಯ ಕಂಪೆನಿಯ ಜನರಲ್ ಮೆನೇಜರರಿಗೂ ಕೆಲಸಗಾರರಿಗೂ ನಡೆಯುತ್ತಿರುವ ವಿವಾದದ ಪರಿಸ್ಥಿತಿಯನ್ನು ವಿವರಿಸಿ ಭಾಷಣ ಮಾಡಿದರು.

ಹರಿ ಕಥೆ— ಮೈಸೂರಿನಿಂದ ಶ್ರೀ. ರಾಮದಾಸರೂ ಅವರ ಸುಪುತ್ರಿ, ಶ್ರೀಮತಿ ಶಾರದಾ ಬಾಯಿಯವರೂ ಮಂಗಳೂರಿಗೆ ಬಂದು ತಮ್ಮ ಹರಿಕಥೆ, ಶಾಸ್ತ್ರೀಯ ಸಂಗೀತದಿಂದ ಜನರ ಮನೋರಂಜನೆಯನ್ನು ಮಾಡುತ್ತಿದ್ದಾರೆ. ತಾ. 2ರಲ್ಲಿ ಡಾ| ಯು ಸುಂದರರಾಯರಲ್ಲಿಯೂ, ತಾ. 4ರಲ್ಲಿ ಶ್ರೀ ಗಣಪತಿ ದೇವಸ್ಥಾನದಲ್ಲಿಯೂ, ಇಂದು ಕರ್ನಾಟಕ ಬೇಂಕಿನಲ್ಲಿಯೂ ಅವರ ಕಥೆಗಳು ಯಶಸ್ವಿಯಾಗಿ ಜರಗಿದುವು.

ನಗರ ಸಭೆ— ಮಂಗಳೂರು ನಗರ ಸಭೆಯ ಮೀಟಿಂಗು ಕಳೆದ ತಾ. 27ರಲ್ಲಿ ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ದಿವಂಗತರಾದ ಪೋಪ್, ಲಾರ್ಡ್ ಬ್ರೆಬೋರ್ನ್, ಮಹಾರಾಜ ಗಾಯಕವಾಡರು—ಇವರುಗಳ ನಿಧನಕ್ಕಾಗಿ ಸಂತಾಪ ಸೂಚಕ ಠರಾವುಗಳಾದುವು.

ಸ್ತುತ್ಯ ದಾನ— ನಮ್ಮ ಜಿಲ್ಲೆಯವರಾದ ರಾವ್ ಬಹದ್ದೂರು ಭಾಗಮಂಡಲ ಶ್ರೀಪತಿರಾಯರು ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಸನ್ನಿಧಿಯಲ್ಲಿ ಯಾತ್ರಿಕರಿಗೆ ಉಳಕೊಳ್ಳುವ ಬಗ್ಗೆ ಒಂದು ಛತ್ರ ಕಟ್ಟಿಸುವ ಉದ್ದೇಶದಿಂದ ರೂ. 1500/- (ಸಾವಿರದ ಐನೂರು)ನ್ನು ದಾನ ಮಾಡಿದ್ದಾರೆ. ಶ್ರೀ. ಯವರ ದಾನವು ಇತರ ಶ್ರೀಮಂತ ಮಹನೀಯರಿಂದ ಅನುಸರಿಸಲ ಡುವಂತಹ. ಯೋಗ್ಯ ದುದು.

ಲೇಬರ್ ಕಮಿಶನರ ಆಗಮನ— ಮದ್ರಾಸ್ ಸರಕಾರದ ಲೇಬರ್ ಕಮಿಶನರವರು ಮೋಟರ್ ಕೆಲಸಗಾರರ ಸಂಕಷ್ಟ ವಿಚಾರಣೆಗಾಗಿ ಇದೇ ತಾ. 9ಕ್ಕೆ ಇಲ್ಲಿಗೆ ಬರುವರು. ತಾ. 10ರಂದು ಸಿ. ಪಿ. ಸಿ. ಜನರಲ್ ಮೆನೇಜರರ ಮತ್ತು ಕೆಲಸಗಾರರ ಪ್ರತಿನಿಧಿಗಳ ಹೇಳಿಕೆಗಳನ್ನು ತೆಗೆದುಕೊಳ್ಳುವರೆಂದು ಗೊತ್ತಾಗಿದೆ.

ಶ್ರೀ| ಸುಭಾಷರಲ್ಲಿ ನಂಬಿಕೆ ಪ್ರದರ್ಶನ ಕಳೆದ ತಾ. 3ನೇ ಶುಕ್ರವಾರ ಸಾಯಂ. ಘಂಟೆ 6·30ಕ್ಕೆ ಸರಿಯಾಗಿ, ಮೈದಾನದಲ್ಲಿ, "ಭಾರತ ರಾಷ್ಟ್ರ ಸೇವಾಸಂಘ"ದ ಆಶ್ರಯದಲ್ಲಿ ಸಾರ್ವಜನಿಕ ಸಭೆ ಸೇರಿತು. ಶ್ರೀಮಾನ್ ಕೆ. ಕೆ. ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರು ಪ್ರಕೃತ ಅಧ್ಯಕ್ಷರ ಚುನಾವಣೆಯ ಅನಂತರ ದೇಶದಲ್ಲುಂಟಾಗಿರುವ ಭಿನ್ನಭಾವಗಳನ್ನು ಸವಿಸ್ತಾರವಾಗಿ ತಿಳಿಸಿದರು ಆ ಮೇಲೆ ಶ್ರೀ ಕೆ. ಆರ್. ಕಾರಂತರು ಭಾಷಣ ಮಾಡುತ್ತಾ ಶ್ರೀ| ಸುಭಾಸರು ತನ್ನ ಸಹೋದ್ಯೋಗಿಗಳ ಮೇಲೆ ಆರೋಪಣೆ ಹೊರಿಸಿದುದು ಸರಿಯಲ್ಲವೆಂದೂ, ಅಂತೆಯೇ ಕಾರ್ಯಕಾರಿಗಳೂ ತಮ್ಮ ಸಹೋದ್ಯೋಗಿಯಾದ ಅಧ್ಯಕ್ಷರ ವಿರುದ್ಧ ಕೆಲಸ ಮಾಡಿದ್ದಾಗಲಿಲ್ಲವೆಂದೂ ಹೇಳಿ ಪ್ರಕೃತ ಸುಭಾಸರು ನ್ಯಾಯವಾಗಿ ಬಹುಮತದಿಂದ ಆರಿಸಲ್ಪಟ್ಟ ಅಧ್ಯಕ್ಷರಾದ್ದರಿಂದ ನಾವೆಲ್ಲರೂ ಅವರನ್ನು ಅನುಸರಿಸಬೇಕೆಂದರು.

ವೈದ್ಯರ ಸಭೆ - ಬರುವ ತಾ. 12ನೇ ಭಾನುವಾರ ಸಾಯಂ. 2ಘಂಟೆಗೆ ಜಿಲ್ಲಾ ಎಲ್. ಐ. ಎಂ. ರ ಕ್ಷೇತ್ರದ ಸಭೆಯು ಡಾ| ಯು. ಸುಂದರ ರಾಯರ (ಹಂಪನ ಕಟ್ಟೆಯ) ಆಫೀಸಿನಲ್ಲಿ ಜರಗುವುದು.

"ರಾಜಕೋಟೆ ದಿ ನಾ ಚ ರ ಣೆ"— ನಿನ್ನೆಯ ದಿನ ರಾತ್ರಿ 9ಘಂಟೆಗೆ ಸರಿಯಾಗಿ ದ. ಕ. ಜಿಲ್ಲಾ ದ್ರಾವಿಡ ಬ್ರಾಹ್ಮಣರ ವಿದ್ಯಾರ್ಥಿ ಭವನದಲ್ಲಿ ರಾಷ್ಟ್ರಪತಿ ಸುಭಾಷಚಂದ್ರ ಬೋಸರ ಆಜ್ಞಾನುಸಾರವಾಗಿ "ರಾಜಕೋಟೆ ದಿನಾಚರಣೆ"ಯು ಶ್ರೀ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು. ಉತ್ಸಾಹೀ ತರುಣರಾದ ಶ್ರೀ. ಬಿ. ಅನಂತನಾರಾಯರು ಈ ಸಭೆಯನ್ನು ಏರ್ಪಡಿಸಿದ್ದರು.

ಬಲು ಸುಲಭ ದರದಲ್ಲಿ

- ಉತ್ಕೃಷ್ಟ ಊಟ. ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!
- ನಾವು ನಮ್ಮನ್ನೇ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀನಿವಾಸ ಹಿಂದೂ ಹೋಟೆಲ್

(ಸ್ಥಾಪನೆ 1926)

ವಿಠಲ್‌ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATEL ROAD,

GIRGAUM - - - BOMBAY

ಶುದ್ಧ ಹಾಗೂ ಕೆನೆ ತುಂಬಿದ ಹಾಲು ಬೇಕಾದರೆ ನಮ್ಮ ಹಾಲು ಮಾರಾಟದ ದುಖಾನನ್ನು ಸಂದರ್ಶಿಸಿರಿ.

ಮೊಹರು ಮಾಡಲ್ಪಟ್ಟ ಬಾಟ್ಲಿಗಳಲ್ಲಿ ನಿಮ್ಮ ಮನೆಬಾಗಿಲಿಗೆ ಕಳುಹಿಸಲ್ಪಡುವುದೀ ಹಾಲು.

ಅಂಗಡಿಯು ಇಡೀ ಹಗಲು ಮತ್ತು ರಾತ್ರಿ 11 ಗಂಟೆ ವರೆಗೆ ತೆರೆದಿರುವುದು.

ಶುದ್ಧ ಕೆನೆ ಹಾಲು ಗ್ಲಾಸಿಗೆ 0—1—3 ದರದಲ್ಲಿ ಮಾರಲ್ಪಡುವುದು.

ಹೆಚ್ಚಿನ ಮಾಹಿತಿಗೆ ಬರೆಯಿರಿ—

ಬೊಂಬೆ ಮಿಲ್ಕ್ ಹೌಸ್

ಕೇರಿ ಹೌಸ್, ಕವಾಸ್ಜಿ ಪಟೇಲ್ ಸ್ಟ್ರೀಟ್,

ಫೋರ್ಟ್ . . . . ಬೊಂಬಾಯಿ.

THE BOMBAY MILK HOUSE

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.

ಸ್ಥಾಪನೆ: ಕ್ರೌನ ರಬ್ಬರ ಸ್ಟ್ಯಾಂಪ ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಡಿಗಳ ಚೀಟು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBBER STAMP CO,

Balmat Road, MANGALORE.

Included by the Mysore Govt. Stores Purchase Committee in the list of approved Firms.

ಕೇವಲ ಪುಕ್ಕಟೆ

ತ್ವರೆ ಮಾಡಿರಿ! ತ್ವರೆ ಮಾಡಿರಿ!!

'ಸನ್ಯಾಸಿಯ ಸೋಗಿನಲ್ಲಿ' ಎಂಬ ೧-೮-೦ ಕ್ರಯದ ಅತ್ಯುತ್ತಮ ಕಾದಂಬರಿ ಪುಸ್ತಕವನ್ನು ತರಿಸುವವರಿಗೆ 'ಪುರುಷವಧು' ಮತ್ತು 'ಹೆಂಡ್ತಿಗಂಡನಾದರೆ' ಎಂಬ ನಾಲ್ಕುನಾಲ್ಕು ಆಣೆಗಳ ಎರಡು ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡಲಾಗುವುದು. ಅಂಚೆವೆಚ್ಚ ಎರಡಾಣೆ ಪ್ರತ್ಯೇಕ. ಕೂಡಲೇ ೦-೧೦-೦ ಸ್ಟ್ಯಾಂಪು ಕಳಿಸಿ ಈ ೩ ಪುಸ್ತಕಗಳನ್ನು ಪಡೆಯಿರಿ.

ವಿ. ಸೂ.—ಇದೇ ಕೂಪನಿನಲ್ಲಿ ಹೆಸರು ಬರೆದು ಕಳುಹಿಸುವವರಿಗೆ ಅಂಚೆವೆಚ್ಚ ಮಾಫಿತ್ತು.

ಹೆಸರು ....

ವಿಳಾಸ..

....

ಪೋಸ್ಟ್..

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಶರಣ ಸಾಹಿತ್ಯ ವಿಶೇಷ ಸಂಚಿಕೆ

ಶ್ರೀ ಬಸವೇಶ್ವರನ ಜಯಂತಿಯ ನಿಮಿತ್ತ ತಾ. ೨೩-೪-೩೯ಕ್ಕೆ ಹೊರಡುವುದು.

ಲೇಖಕರು ಲೇಖನಗಳನ್ನೂ ಜಾಹೀರಾತುದಾರರು ಜಾಹೀರಾತುಗಳನ್ನೂ ಆದಷ್ಟು ಬೇಗನೆ ಕಳಿಸಬೇಕು.

ಬಿ. ಶಿವಮೂರ್ತಿಶಾಸ್ತ್ರಿ,

ಸಂಪಾದಕ, 'ಶರಣ ಸಾಹಿತ್ಯ'

ಬೆಂಗಳೂರು.

ಪತ್ರವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ. ನ]

ಟೌನ್ ಕಾಂಗ್ರೆಸ್ ಕಮಿಟಿ, ಉಡುಪಿ.

ಇದರ ಕಮಿಟಿ ಮಹಾಸಭೆಯೊಂದು ತಾರೀಕು 5-3-39ಕ್ಕೆ ಅಪರಾಹ್ನ ಘಂಟೆ 5ಕ್ಕೆ ಸಂತೆಕಟ್ಟೆ ಬಳಿ ಖಾದಿನಿಲಯದಲ್ಲಿ (ಶ್ರೀ. ಕಾಡಬೆಟ್ಟು ಶ್ರೀನಿವಾಸ ಪೈಗಳವರ ವಸತಿಗೃಹ) ಉಡುಪಿ ಇಲ್ಲಿ ಜರಗುವುದಾಗಿ ನೋಟೀಸು ಕೊಡಲಾಗಿತ್ತು. ಆ ಸಭೆಯಲ್ಲಿ ಚಾಲ್ತಿ ವರ್ಷದ ಅಂದಾಜುಪಟ್ಟಿ ಮೊದಲಾದ ವಿಷಯಗಳು ಚರ್ಚಿಸಲ್ಪಡಲಿತ್ತು. ಕಮಿಟಿಯ ಮೆಂಬರನಾದ ನಾನು ನೋಟೀಸಿನಂತೆ 5ಗಂಟೆಗೆ ಸದರಿ ಸ್ಥಳಕ್ಕೆ ಹೋದೆ. ಅಲ್ಲಿ ಯಾರೂ ಇರಲಿಲ್ಲ. ನಾನು ಕಾದೆ, ಸುಮಾರು 5½ಗೆ ಶ್ರೀ. ರಾಮಚಂದ್ರನವರು ಬಂದರು. ಅನಂತರ ನಾವು 5¾ಗಂಟೆ ವರೆಗೆ ಕಾದೆವು. ಇತರ ಯಾರೂ ಬಂದಾತೆ ಕಾಣಲಿಲ್ಲ. ಅನಂತರ ನಾವಿಬ್ಬರೂ ಅಲ್ಲಿಂದ ಎದ್ದು ನಮ್ಮ ಕೆಲಸಾರ್ಥವಾಗಿ ಹೋಗಿಬಿಟ್ಟೆವು.

ಈ ರೀತಿಯಾಗಿ ಸಭೆಕರೆದು, ಯಾರೂ ಬಾರದಿರುವುದೂ, ಸಭೆಕರೆದವರೇ ಅಲ್ಲಿರದಿರುವುದೂ ಬಹು ಶೋಚನೀಯವಾಗಿದೆ. ಇನ್ನು ಮುಂದಾದರೂ ಹೀಗಾಗದಂತೆ ಸಂಬಂಧಪಟ್ಟವರು ನೋಡುವರಾಗಿ ನಂಬುತ್ತೇನೆ.

ಟೌನ್ ಕಾಂಗ್ರೆಸ್ ಕಮಿಟಿಮೆಂಬರರಲ್ಲೊಬ್ಬ.

K. Vittal Shenoy.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪುತ್ತೂರು ತಾಲೂಕು ಸಿಟ್ಟಿ ಸರ್ಕಲಿನ ಪ್ರತಿನಿಧಿ ಚುನಾವಣೆಯ ಫಾರ್ಸ್

ಎಂಬ ಶಿರೋನಾಮೆಯಿಂದ ಶ್ರೀ. ಎಚ್. ಶ್ರೀನಿವಾಸಯ್ಯ ಎಂಬವರಿಂದ ದೀರ್ಘ ಬಾತ್ಮಿಯೊಂದು ಪ್ರಕಟಣೆಗೆಂದು ನಮ್ಮ ಬಳಿಗೆ ಬಂದಿದೆ. ಸ್ಥಳಾಭಾವದಿಂದ ಅದನ್ನು ಪ್ರಕಟಿಸಲಿಲ್ಲ. ಚುನಾವಣೆಯ ಕುರಿತು ಸಾಕಷ್ಟು ಪ್ರಚಾರಕಾರ್ಯ ನಡೆಸಲಿಲ್ಲ. ಒಳಸಂಚು ನಡೆದಿದೆ, ಎಂಬಿತ್ಯಾದಿ ಆರೋಪಗಳಿಂದೊಡಗೂಡಿದೆ ಈ ಬಾತ್ಮಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

'ಗೊನೊಕಿಲರ್' (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಕೊಳ್ಳುವ ವೇಳೆ ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ್' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer Dr. D. N. JASANI, Vitalbhai Patel Road, BOMBAY 4.

ರೂ. **25** ಬಹುಮಾನ ಪಡೆಯುವುದು ಹೇಗೆ? ಮುಂದಿನ ಸಂಚಿಕೆ ಕಾದಿರಿ!

ಬರುವ ವಾರ ಬರಲಿವೆ—೧೯೪೧ರ ಜನಗಣತಿ, ಜರ್ಮನ್ ರಾಜ್ಯದ ಭಾಗ್ಯವಿಧಾತ! ಇತ್ಯಾದಿ.

ಪುಟ ೮ರಿಂದ

ತೀರ್ಮಾನಿಸಿರಿ. ಮಾಡದಿದ್ದರೆ ಪರಿಣಾಮವು ಭಾರತದಲ್ಲೆಲ್ಲ ವಿಷಮವಾಗಿ ಪರಿಣಮಿಸೀತು. ಮಹಾ ಅನರ್ಥದ ಬಿಕ್ಕಟ್ಟು ಮುಂದೆ ಬರಲಿಕ್ಕಿರುವುದನ್ನು ಈಗಲೇ ಸಕಾಲದಲ್ಲಿ ಪ್ರವೇಶಿಸಿ ತಡೆಗಟ್ಟಿ ಬಿಡಿರಿ.

ಒರಿಸ್ಸಾ ಮಂತ್ರಿಮಂಡಲದಿಂದ ವೈಸರಾಯರಿಗೆ ತಂತಿ

ರಾಜಕೋಟೆಯ ಪ್ರಶ್ನೆಯಲ್ಲಿ ಗಾಂಧಿಜೀಗಳು ಉಪವಾಸವ್ರತಕೈಗೊಂಡುದರಿಂದ ದೇಶವು ಕಳವಳಗೊಂಡಿದೆ. ನೀವು ಕೂಡಲೇ ಪ್ರವೇಶಿಸಿ ಯೋಗ್ಯ ಸಂಧಾನವನ್ನು ಮಾಡಿ ಗಂಡಾಂತರವನ್ನು ತಪ್ಪಿಸಿರಿ.

ಸಂಯುಕ್ತ ಪ್ರಾಂತ್ಯದ ಮಂತ್ರಿಮಂಡಲದಿಂದ ಗವರ್ನರರಿಗೆ ತಂತಿ. ಗವರ್ನರರಿಂದ ವೈಸರಾಯರಿಗೆ ತಂತಿ.

ಸಂಯುಕ್ತ ಪ್ರಾಂತದ ಮಂತ್ರಿಮಂಡಲದ ಪರವಾಗಿ ಅಲ್ಲಿಯ ಗವರ್ನರರಿಗೆ ತಂತಿಹೋಗಿದೆ. ಗವರ್ನರರು ಕೂಡಲೇ ವೈಸರಾಯರಿಗೆ ತಂತಿ ಕೊಟ್ಟು ರಾಜಕೋಟೆಯ ಹೋರಾಟದಲ್ಲಿ ಸಂಧಿ ಪ್ರಯತ್ನವನ್ನು ಕೈಗೊಳ್ಳಬೇಕಾಗಿ ಕೇಳಿಕೊಂಡಿದ್ದಾರೆ. ಗವರ್ನರರು ತನ್ನ ಮಂತ್ರಿಮಂಡಲದ ಆಗ್ರಹಪೂರ್ವಕವಾದ ಬೇಡಿಕೆಯನ್ನು ತಂತಿಮೂಲಕ ತಿಳಿಸಿದ್ದಾರಂತೆ. ಪ್ರಧಾನ ಮಂತ್ರಿಗಳಾದ ಪಂಥರು ಸರ್ದಾರ್ ಪಟೇಲರೊಡನೆಯೂ ಈ ವಿಷಯದಲ್ಲಿ ಟೆಲಿಫೋನ್ ಮೂಲಕ ವಿಚಾರ ವಿನಿಮಯ ಮಾಡಿರುವರು.

ಬೊಂಬಾಯಿ ಮಂತ್ರಿಗಳ ನಿರ್ಧಾರ

ಗಾಂಧೀಜಿಯವರು ಉಪವಾಸ ವ್ರತವನ್ನು ನಿಲ್ಲಿಸಲಾಗುವಂತೆ ವೈಸರಾಯರು ರಾಜಕೋಟೆಯ ಪ್ರಶ್ನೆಯಲ್ಲಿ ಕೂಡಲೇ ಕೈಯಿಕ್ಕುವಂತೆ ಮಂತ್ರಿಮಂಡಲವು ಒತ್ತಾಯಪಡಿಸಬೇಕೆಂದೂ ಅದು ಸಫಲವಾಗದಿದ್ದರೆ ಮಂತ್ರಿಮಂಡಲವು ರಾಜಿನಾಮೆಯನ್ನೊಪ್ಪಿಸಬೇಕೆಂದೂ ಮಂತ್ರಿಮಂಡಲಕ್ಕೆ ಹಲವು ಕಡೆಗಳಿಂದ ಬಂದಿರುವ ತಂತಿಗಳನ್ನು ಕುರಿತು ವಿಚಾರಮಾಡಿ ಅದು ಹಾಗೆಯೇ ಮಾಡುವ ನಿರ್ಧಾರಕ್ಕೆ ಬಂದುಮುಟ್ಟಿಯದೆ ಈ ವಿಷಯದಲ್ಲಿ ಇತರ ಪ್ರಾಂತ್ಯಗಳ ಮಂತ್ರಿಮಂಡಲಗಳೊಡನೆ ವಿಚಾರ ವಿನಿಮಯಮಾಡುತ್ತಿದೆ.

ಸೆಕ್ರೆಟರಿ ಆಫ್ ಸ್ಟೇಟ್‌ರವರುಗಳಿಗೆ ಕೇಬಲ್

ವಿಲಾಯತಿಯ ಶ್ವೇತಭವನದಲ್ಲಿರುವ ಭಾರತೀಯ ಸರಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಡಿಲ್ಲಿಯ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದವರು ಕೇಬಲ್ ತಂತಿ ಕೊಟ್ಟಿರುತ್ತಾರೆ. ಕಾಂಗ್ರೆಸ್ ಎಸೆಂಬ್ಲಿ ಪಕ್ಷವು ರಾಜಕೋಟೆಯಲ್ಲಿ ಗಾಂಧೀಜಿಯವರು ಕೈಕೊಂಡಿರುವ ಮರಣಾಂತ ಉಪವಾಸ ದೀಕ್ಷೆಯನ್ನು ಕಂಡು ದಿಗಿಲುಗೊಂಡಿದ್ದಾರೆ. ಬ್ರಿಟಿಷ್ ಸರಕಾರವು ರಾಜಕೋಟೆಯ ಪ್ರಶ್ನೆಯಲ್ಲಿ ಕೂಡಲೇ ಪ್ರವೇಶಿಸಿ ರಾಜಕೋಟೆಯ ಥಾಕೂರ್ ಸಾಹೇಬರು ಗಾಂಧೀಜಿಗಳ ಸೂಚನೆಗಳನ್ನು ಅಂಗೀಕರಿಸುವಂತೆ ಮಾಡಿ ಉಪವಾಸ ವ್ರತ ಭಂಗಗೊಳಿಸದಿದ್ದರೆ–ಅಥವಾ ಈ ಕಾರ್ಯದಲ್ಲಿ ವಿಳಂಬ ಮಾಡಿ ಅನರ್ಥ ಸಂಭವಿಸಿದರೆ–ಬ್ರಿಟಿಷ್ ಸರಕಾರಕ್ಕೆ ಇಂಡಿಯಾದಲ್ಲಿ ಮಹತ್ತಾದ ವಿಪತ್ತು ಸಂಭವಿಸೀತೆಂದು ಮುಂದಾಗಿ ಎಚ್ಚರಿಸಿರುತ್ತೇವೆ–ಎಂದು ಕೇಬಲ್‌ಗ್ರಾಮಿನ ಸಾರಾಂಶ.

ಡಿಲ್ಲಿಯ ಕೌನ್ಸಿಲ್ ಆಫ್ ಸ್ಟೇಟಿನ ಕಾಂಗ್ರೆಸ್ ಪಕ್ಷದವರ ನಿರ್ಣಯ

ಬ್ರಿಟಿಷ್ ಸರಕಾರವು ರಾಜಕೋಟೆಯ ಬಿಕ್ಕಟ್ಟಿನಲ್ಲಿ ಕೂಡಲೇ ಪ್ರವೇಶಿಸಿ, ಥಾಕೂರರು ಕೊಟ್ಟ ವಾಗ್ದಾನದಂತೆ ನಡೆಯುವಂತೆ ಮಾಡಿ, ಬಂದೊದಗಿರುವ ಮಹಾ ವಿಪತ್ತನ್ನು ನಿವಾರಿಸಬೇಕಾಗಿ ತಮ್ಮ ಮಥಿತ ಅಭಿಪ್ರಾಯವೆಂದು ಏಕಾಭಿಮತದ ನಿರ್ಣಯವನ್ನು ಕಾಂಗ್ರೆಸ್ ಪಕ್ಷದ ಸದಸ್ಯರು ಮಾಡಿ ವೈಸರಾಯರಿಗೆ ತಿಳಿಸಿರುವರಲ್ಲದೆ ಈ ವಿಷಯದಲ್ಲಿ ಔದಾಸೀನ್ಯ ತಾಳಿದರೆ ದೇಶದಲ್ಲಿ ಮಹದನರ್ಥ ಸಂಭವಿಸೀತೆಂದು ಎಚ್ಚರಿಕೆ ಕೊಟ್ಟಿದ್ದಾರೆ

ಮುಂಬಯಿ ದಿ ದೇವಾಡಿಗ ಸುಧಾರಕ ಸಂಘ—ಒ ಕೆಲವು ಮೆಂಬರರೂ ಇತರ ಕೆಲವು ಪ್ರಸಿದ್ಧ ಕರ್ನಾಟಕ ನಟರೂ ಸೇರಿ ತಾ. 2-3-39ಕ್ಕೆ ಚಾಂಗವಾಡಿ ಥಿಯೇಟರಿನಲ್ಲಿ ಶ್ರೀ. ಟಿ ಎ ಕೋಲ ಶಾಂತಪ್ಪನವರಿಂದ ಬರೆಯಲ್ಪಟ್ಟ "ಬಿ. ಎ" ಎಂಬ ಸಾಮಾಜಿಕ ನಾಟಕವನ್ನು ಆಡಿತೋರಿಸಿದರು.

ಮಂಗಳೂರಿಂದ ಮುಂಬಾಯಿಗೆ ಚಿತ್ತೈಸಿದ ಶ್ರೀಯುತರುಗಳಾದ ಎಮ್. ಎ ದೇವಡಿಗರ್, ಪ್ರೊಫೆಸರ್ ಆನಂದ ರಾವ್ ಇವರನ್ನು ದೇವಾಡಿಗ ಸುಧಾರಕ ಸಂಸ್ಥೆಯವರು ಆಮಂತ್ರಿಸಿ, ಒಂದು ಗಾಯನ ಮಜಲೀಸನ್ನು ಏರ್ಪಡಿಸಲು ಸದ್ರಿಯವರು ತಮ್ಮ ಗಾಯನ ಕಲೆಯ ಪ್ರವೀಣತೆಯನ್ನು ತೋರಿಸಿ ಸಭಿಕರನ್ನು ಆನಂದಗೊಳಿಸಿದರು. ಅಂದು ಶ್ರೀಯುತ ದತ್ತಾತ್ರೇಯ ಇವರು ತಬಲಾ ವಾದನದಲ್ಲಿ ಭಾಗವನ್ನು ವಹಿಸಿದ್ದರು.

ದಿ ಕರ್ನಾಟಕ ಯಂಗ್ ಸ್ಟೂಡೆಂಟ್ಸ್ ಫ್ರೂಟ್ ಜಾಲರ್ಸ್— ಈ ಸಂಸ್ಥೆಯ ವಾರ್ಷಿಕ ಮಹಾಸಭೆಯು ತಾ. 26-2-1939ರಲ್ಲಿ ಇಲ್ಲಿಗೆ ಬಂದಿರುವ ನವಯುಗ ಉಪಸಂಪಾದಕರಾದ, ಶ್ರೀ. ಯನ್. ಶಿವಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಕಾಗದಪತ್ರವ್ಯವಹಾರ ಯ ಖಾತೆಯಾನ ನಿಬಂಧನೆಗಳು ವಗೈರೆ ವಿಷಯಗಳಲ್ಲಿ ಸಭಿಕರ ಮಂಜೂರಾತಿ ಪಡೆದ ನಂತರ, ಹೊಸ ವರ್ಷದ ಆಡಳಿತ ಮಂಡಲದ ಚುನಾವಣೆ ನಡೆಯಿತು. ಶ್ರೀಗಳಾದ ಆರ್. ಜಿ. ಶೆಟ್ಟಿ ಸಂಘದ ಅಧ್ಯಕ್ಷರಾಗಿಯೂ, ಯನ್. ಜಿ. ತಿಂಗಳಾಯರು ಉಪಾಧ್ಯಕ್ಷರಾಗಿಯೂ ಯು. ಕೆ. ರಂಗನವರು ಮಾನಾರ್ಥ ಕಾರ್ಯದರ್ಶಿಯರಾಗಿಯೂ, ಎ. ಯಸ್. ಸಾಲಿಯಾನ್ ಮತ್ತು ವಿ. ಯಸ್. ಕರ್ಕೇರ ಇವರು ಜೊತೆ ಕೋಶಾಧಿಕಾರಿಗಳಾಗಿಯೂ, ಆರಿಸಲ್ಪಟ್ಟರು. ಎ. ಬಿ. ಮತ್ತು ಸಿ. ಟೀಮುಗಳಿಗೆ ಶ್ರೀ. ಯಲ್. ಕೆ. ಸುವರ್ಣ ಮತ್ತು ರಾಮಣ್ಣ ಟಿ ಶೆಟ್ಟಿ, ವೆಂಕಪ್ಪ ಪಿ. ಅಮೀನ್ ಮತ್ತು ಯಂ. ಯನ್. ಶೆಟ್ಟಿ, ಟಿ. ಯಮ್. ಸುವರ್ಣ, ಮತ್ತು ಯಂ. ಕೆ. ಶೆಟ್ಟಿ, ಇವರು ಕ್ರಮವಾಗಿ ಮೂರು ಟೀಮುಗಳ ದಳಪತಿಗಳಾಗಿ ಆರಿಸಲ್ಪಟ್ಟರು. ಅಲ್ಲದೆ ಶ್ರೀಗಳಾದ ಆರ್. ಜಿ. ಶೆಟ್ಟಿ, ಕೆ. ಅಣ್ಣಯ್ಯ, ಯಂ. ಡಿ. ಕುಂದರ್ ಮತ್ತು ಕೆ. ಸಿ. ಶೆಟ್ಟಿ ಇವರು ಕಮಿಟಿಯ ಸದಸ್ಯರಾಗಿ ಸರ್ವಸಮ್ಮತಿಯಿಂದ ಚುನಾವಣೆ ಹೊಂದಿದರು. ನಂತರ ಸಭಿಕರಲ್ಲಿ ಹಲವರು ಸಂಘದ ಮೇಲ್ಮೆಯನ್ನು ಹಾರೈಸಿ ಹಲವು ಸೂಚನೆಗಳನ್ನಿತ್ತು ಭಾಷಣವಿತ್ತರು. ಅಧ್ಯಕ್ಷರು ತಮ್ಮ ಸಂದರ್ಭೋಚಿತ ಭಾಷಣವನ್ನು ರಾಷ್ಟ್ರದ ಏಳಿಗೆಯಲ್ಲಿ ಯುವಕರ ಸ್ಥಾನ ಮುಂಬಾಯಿಗೂ ಕನ್ನಡನಾಡಿಗೂ ಇರುವ ನಿಕಟ ಸಂಬಂಧದ ಮಹತ್ವಿಕೆ, ಭಾವೀಕಾರ್ಯದಲ್ಲಿ ದಕ್ಷಿಣಕನ್ನಡಿಗರು ಮುಂಬಾಯಿಯಲ್ಲಿ ದೊರಕಿಸಿಕೊಳ್ಳತಕ್ಕ ಸ್ಥಾನ, ಇವೇ ಮೊದಲಾದ ವಿಷಯಗಳನ್ನು ವಿವರಿಸುತ್ತ ಯುವಕರು ಸಂಘಟಿತರಾಗಿ ಅಭ್ಯುದಯವನ್ನು ಹೊಂದುವಂತೆ ಅನುಸರಿಸಬೇಕಾದ ಹಲವು ವಿಚಾರಗಳನ್ನು ವಿವರಿಸಿ, ಭಾಷಣವಿತ್ತರು. ಕೊನೆಗೆ ಲಘುಫಲಾಹಾರದೊಂದಿಗೆ ಸಭೆಯು ಕೊನೆಗೊಂಡಿತು.

ಜಿಲ್ಲೆಯ ಎಲ್ಲಾ ಬೋರ್ಡು ಎಲಿಮೆಂಟರೀ ಶಾಲಾ ಅಧ್ಯಾಪಕರ ತಿಳುವಳಿಕೆಯ ಬಗ್ಗೆ—ನಮ್ಮ ಮಾನ್ಯ ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಜಿಲ್ಲೆಯ ಎಲ್ಲಾ ಉಪಾಧ್ಯಾಯ ಉಪಾಧ್ಯಾಯಿನಿಯರನ್ನು ಕಂಡು ಈಗಿನ ಪರಿಸ್ಥಿತಿಯ ಕುರಿತು, ಅವರೊಡನೆ ಸಂಭಾಷಿಸಬೇಕೆಂದೂ, ಅವರ ಸಂಕಷ್ಟನಿವಾರಣೆ ಮತ್ತು ಅಭಿವೃದ್ಧಿಯ ಬಗ್ಗೆ ತನ್ನಿಂದಾಗುವಷ್ಟು ಯತ್ನಿಸಲು ಸಿದ್ಧನಿರುವೆನೆಂದೂ, ಆ ಸಂಬಂಧ ಉಪಾಧ್ಯಾಯರಿಂದ ಬರುವ ಯಾವತ್ತೂ ಯೋಗ್ಯ ಸೂಚನೆಗಳನ್ನು ಅಂಗೀಕರಿಸಲು ಸಿದ್ಧನೆಂದೂ, ಆದರೆ ಜಿಲ್ಲೆಯ ಎಲ್ಲಾ ಉಪಾಧ್ಯಾಯರು ಒಂದೇ ಕಡೆ ಸೇರುವುದು ಪ್ರಯಾಸವಾದುದರಿಂದ ಪ್ರತಿಯೊಂದು ತಾಲೂಕು ಸಂಘದವರು ತಮ್ಮ ತಾಲೂಕಿನ ಕೇಂದ್ರದಲ್ಲಿ ಒಂದು ವಿಶೇಷ ಮಹಾಸಭೆಯನ್ನು ಜರೂರಿನಿಂದ ಜರಗಿಸಬೇಕೆಂದೂ ಅಭಿಪ್ರಾಯಪಟ್ಟು ಪುತ್ತೂರು ತಾಲೂಕಿನವರು ಇದೇ ತಿಂಗಳ ತಾ 19ನೇ ಆದಿತ್ಯವಾರ ಸಭೆ ಜರಗಿಸಬೇಕೆಂದು ಸೂಚಿಸಿರುವರು. ಆದುದರಿಂದ ಪುತ್ತೂರು ತಾಲೂಕಿನ ಎಲ್ಲಾ ಬೋರ್ಡು ಎಲಿಮೆಂಟರೀ ಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯರು ಈ ಸಂದರ್ಭವನ್ನು ಕಳಕೊಳ್ಳದೆ ಸದ್ರಿ ದಿನ ಅಪರಾಹ್ನ ಘಂಟೆ 1ಕ್ಕೆ ಪುತ್ತೂರು ಬೋರ್ಡು ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಜರಗುವ ಸಭೆಗೆ ದಯಮಾಡಿ ಬರಬೇಕೆಂದೂ, ಇತರ ತಾಲೂಕಿನವರು ಪ್ರೆಸಿಡೆಂಟರ ಅನುಕೂಲ ಸಮಯವನ್ನು ತಿಳಿದುಕೊಂಡು ತಮ್ಮ ತಮ್ಮ ತಾಲೂಕಿನ ಸಭೆಗಳನ್ನು ಜರಗಿಸಿಕೊಳ್ಳಬೇಕೆಂದೂ ಈ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ.

ಕೆ. ಸುಬ್ಬಗಟ್ಟಿ,
ಪುತ್ತೂರು ತಾಲೂಕು ಸಂಘದ ಕಾರ್ಯದರ್ಶಿ.

ಮಟ್ಟಿ—ಇಲ್ಲಿಯ ಬೋರ್ಡು ಶಾಲೆಯ ಫೆಬ್ರವರಿ ತಿಂಗಳ ಹಬ್ಬವು ಶ್ರೀ. ದಡ್ಡಿ ವಿಷ್ಣುಮೂರ್ತಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಇನಾಮುಗಳನ್ನು ಹಂಚುವ ಖರ್ಚನ್ನು ಈ ಬಾರಿ ಶ್ರೀ. ಕಂಡಿಗ ಶ್ರೀನಿವಾಸಯ್ಯನವರು ವಹಿಸಿಕೊಂಡಿರುವುದು ಸ್ತುತ್ಯ.

ಪೆರ್ಡೂರು—ಸ್ಥಳೀಯ ಅನಂತ ಪದ್ಮನಾಭ ದೇವಸ್ಥಾನದಲ್ಲಿ ವಾಡಿಕೆಯಂತೆ ಶ್ರೀ ಬಹುಧಾನ್ಯ ಸಂವತ್ಸರದ ಕುಂಭಮಾಸ ಬಹುಲ ಫಾಲ್ಗುಣ ಬ ೭ಯು ಆದಿತ್ಯವಾರ (ತಾ. 12-3-39) ಮೊದಲ್ಗೊಂಡು ಫಾಲ್ಗುಣ ಬ. ೧೪ಯು ಆದಿತ್ಯವಾರ (ತಾ.19-3-39)ದ ವರೆಗೆ ಶ್ರೀಮನ್ಮಹೋತ್ಸವದ ಕಾರ್ಯಗಳು ಜರಗಲಿರುವವು. ಸಕಲರೂ ಬರಬೇಕಾಗಿ ಎಕ್ಸಿಕ್ಯೂಟಿವ್ ಆಫೀಸರರಾದ ಶ್ರೀ. ಪಿ. ಎಸ್. ಮಾಧವರಾವ್, ಎಂ. ಎ ಬಿ. ಎಲ್, ರವರು ವಿನಂತಿಸುತ್ತಾರೆ

ನಮ್ಮ ಕಿನ್ನಿಗೋಳಿ ಏಜಂಟರು—
ಶ್ರೀ. ಎಂ. ದೊಡ್ಡಣ್ಣಶೆಟ್ರು
ಪ್ರೊ. ಭಕ್ತೋದ್ಧಾರ ಸ್ವದೇಶಿಸ್ಟೋರ್ಸ್

ADVERTISE IN NAVAYUGA

Established] [1906

THE
UNITED INDIA
LIFE ASSURANCE COMPANY, LTD.,
HEAD OFFICE—MADRAS.
Trustee:—THE OFFICIAL TRUSTEE OF MADRAS.

Policies in force	**Rs. 486 Lakhs**
Annual income Exceeds	**Rs. 28 Lakhs**
Total Assets Exceed	**Rs. 100 Lakhs**
Total claims paid over	**Rs. 36 Lakhs.**

The oldest and largest Life Assurance Company of South India, having 31 years of record service.

A POLICY IN THE **UNITED INDIA** *COMBINES PERFECT SAFETY WITH PRUDENCE.*
BRANCHES ALL OVER INDIA.
WANTED AGENTS
For particulars, please apply to—

THE BRANCH MANAGER,
The United India,
Life Assurance Company Ltd.
BLOCK No. 2, Felix Pai Bazaar,
BRANCH, MANGALORE S. K.

OR

K. Keshava Shenoy, M. A.
Organiser, Shantiniketan,
PENTLENDPET,
MANGALORE

ABSOLUTELY FREE!

Bring this coupon and you will get your own Photo absolutely free of charge
☞ The rate for the enlargement of the same Rupee one only (size 6"×8")
K. J. PATHAK
276 Surya Mahal Girgoan Road, BOMBAY, 4 | Royal Art Studio 183 Hornby Road, BOMBAY, 1.

ಕೇವಲ ಧರ್ಮಾರ್ಥ!
ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.
ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!
● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೀ ರೂ. 1/. ಮಾತ್ರ. (ಸೈಜ್ 6"×8"). ಕೆ. ಜೆ. ಪಠಕ್
276, ಸೂರ್ಯ ಮಹಾಲ್ ಗಿರ್ಗಾಮ್‌ರೋಡು ಬೊಂಬಾಯಿ 4 | ರೋಯಲ್ ಆರ್ಟ್‌ಸ್ಟುಡಿಯೋ, 183 ಹೋರ್ನ್ಬಿರೋಡು, ಬೊಂಬಾಯಿ 1

ದೂರೀಕರಿಸಿರಿ—ದೃಷ್ಟಿಚಕ್ರ—ನೆರತಕೂದಲು —ವೃದ್ಧಾಪ್ಯ ತರುಣರು
ಎರಡು ತಿಂಗಳತನಕವೂ, ವೃದ್ಧರು ನಾಲ್ಕು ತಿಂಗಳವರೆಗೂ ಬಾಟ್ಲೊನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿ ಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಾಗಿ ದೇಹದ ನಿತ್ರಾಣವು ತೊಲಗಿ ಕಾವತ್ಯದ ಫಳಕೂಬಾರದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಕರಾರಿದೆ. ಟಾನಿಕಿನ ಕ್ರಯವು ಈ ತೆರನಾಗಿದೆ. ಒಂದು ತಿಂಗಳಿನ ಟಾನಿಕಿಗೆ ರೂ 3 8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10. ಪತ್ರವ್ಯವಹಾರ ಇಂಗ್ಲಿಷಿನಲ್ಲೇ
Jari Booti Dawakhana,
P. O. Behar Nursery (Darbhanga)

ಯುರೋಪಿನ ಗುಪ್ತ ಪೋಲೀಸರು

ಎಲ್ಲೆಲ್ಲಿಯೂ ಇರುವರಿವರು. ಹೋಟೆಲಿನ ಕೆಲಸಗಾರನೂ ಅವರಲ್ಲೊಬ್ಬನಾಗಿರಬಹುದು! ಅಂಗಡಿಯವನೇ ಇವರ ಏಜಂಟನಾಗಿರಬಹುದು!

(ಅನುವಾದಕ—ಎಸ್. ಎಲ್. ಸುಬ್ರಹ್ಮಣ್ಯಂ, ಸ್ಕೂಲ್‌ಮಾಸ್ಟರು ಹರಿಹರ)

1934ನೇ ಇಸವಿ ಅಕ್ಟೋಬರ 9ನೇ ತಾರೀಕು ಮಂಗಳವಾರ ದಿನ ಸುಮಾರು ಎರಡುಲಕ್ಷ ಗುಪ್ತ ಪೋಲೀಸರು 6 ಮಂದಿ ಡಿಕ್ಟೇಟರುಗಳ ಪ್ರಾಣರಕ್ಷಣೆಗೆ ನಿಯಮಿಸಲ್ಪಟ್ಟಿದ್ದರು. ಆದಿನ ಮಧ್ಯಾಹ್ನದವರೆಗೆ ಈ ಸಂಖ್ಯೆಯು ಕೇವಲ 5 ಜನರ ಸಲುವಾಗಿ ಉತ್ಸುಕತೆಯಿಂದಿತ್ತು. ಆರನೆಯದಳವು ಮಾರ್ಸೆಲ್ಸ್‌ನಲ್ಲಿತ್ತು. ಎರಡೂ ಕೈಗಳೂ ಎದೆಮೇಲೆ.ಶರೀರಗಳಲ್ಲಿ ಗುಂಡುಗಳ ಆಕ್ರಮಣವಾಗಿತ್ತು. ಜರ್ಮನಿ, ಇಟಲಿ ಲಿಥುಆನಿಯಾಂ, ಪೋಲೆಂಡ್,ರಷ್ಯ,ಯುಗೋಸ್ಲೋವೇಕಿಯಾ. ಟರ್ಕಿ, ಮತ್ತು ಬಲ್ಗೇರಿಯಾದಲ್ಲಿ ಗುಪ್ತಪೋಲೀಸಿನವರ ಸಾಮ್ರಾಜ್ಯವಿದೆ. ಈ ಎಲ್ಲದೇಶಗಳಲ್ಲಿಯೂ ಇವರ ಛಾಯೆಯು, ನಾಗರಿಕರಿಗೆ ಗುಡುಗಿನ ಶಬ್ದದ ಸಮಾನವಿರುತ್ತದೆ. ಇದ್ದಕ್ಕಿದ್ದಂತೆ ಮನೆಯಮುಂದೆ ಶಬ್ದಗಳು. ಹೊರಗೆ ನೋಡಿದರೆ ಶಸ್ತ್ರಸಜ್ಜಿತರಾದ ಪೋಲೀಸುದಳ! ಮನೆಯವರು ಠಾಣೆಗೆ ಹೋಗಿ ವರದಿ ಒಪ್ಪಿಸಬೇಕು. ನಂತರ ಒಂದುತಿಂಗಳ ಕಠಿಣಶಿಕ್ಷೆ, ಕಾರಣ ನಿಮ್ಮ ಆಚರಣೆಯು ರಾಜ್ಯದ ಹಿತದೃಷ್ಟಿಯಿಂದ ವಿರುದ್ಧವಾಗಿದೆ, ಇಷ್ಟೇ. ಈ ಪೋಲೀಸರು ಎಲ್ಲೆಲ್ಲಿಯೂ ಇರುವರು. ಹೋಟೆಲಿನ ಕೆಲಸಗಾರನೂ ಸಹ ಅವರಲ್ಲಿ ಒಬ್ಬನಾಗಿರಬಹುದು.ಅಥವಾ ನಿಮ್ಮ ನೆರೆಯವನಾಗಿರಬಹುದು. ಅಂಗಡಿಯವನು ಇವರ ಏಜಂಟ್ ಆಗಿರಬಹುದು. ಗುಟ್ಟನ್ನು ತಿಳಿದುಕೊಳ್ಳಲು ದಂಡಿಸಲ್ಪಟ್ಟವನಿಂದಲೂ ಸಹಾಯವನ್ನು ಪಡೆಯಲಾಗುವುದು. ನಿಮ್ಮಲ್ಲಿ ದೋಷವಿರಲಿ, ಇಲ್ಲದಿರಲಿ ಆದರ ಪರಿವೆ ಅವರ ದೃಷ್ಟಿಗೆ ಬಿತ್ತೆಂದರೆ ತೀರಿತು.ನಿಮಗೆ ಕಷ್ಟಕೊಡದೆ ಬಿಡುವಂತಿಲ್ಲ. ಶ್ರೀ. ಸೀಟರ್ ಫಾರೆಸ್ಟ್ ಎಂಬ ಮಹನೀಯರೊಬ್ಬರು ಮ್ಯೂನಿಚ್ಚಿನಲ್ಲಿನಡೆದ ಇಂತಹ ಘಟನೆಯೊಂದನ್ನು ಈ ರೀತಿ ವಿವರಿಸುವರು: ಹಿಟ್ಲರ ಮತ್ತು ಗೋರಿಂಗ ಇವರ ಮೂಲಕ ಅವರ ಇನ್ನೂರು ರಾಜನೀತಿಯ ಮಿತ್ರರ ಕೊಲೆಯಿಂದ ಮೂರನೇ ದಿನದ ಸುದ್ದಿಯಿದು-ನಾಜೀ ಹೆಡ್‌ಕ್ವಾರ್ಟರಿನಲ್ಲಿ ಪ್ರಚಾರ ಶಾಖೆಯಲ್ಲಿರುವ ತನ್ನ ಒಬ್ಬ ಮಿತ್ರರ ಕೂಡ ಭೋಜನ ಮಾಡುತ್ತಿದ್ದೆನು. ಆ ಹೋಟೇಲಿನ ಇನ್ನೊಂದು ಮೂಲೆಯಲ್ಲಿ ಒಬ್ಬ ಸಾಮಾನ್ಯ ಮನುಷ್ಯನು ಕುಳಿತಿದ್ದನು. ಇಬ್ಬರು ಆತನ ಹಿಂಭಾಗದಲ್ಲಿ ಬಂದು ಕುಳಿತರು. ಅವರ ದೃಷ್ಟಿಯು ಆತನ ಮೇಲಿತ್ತು. ಇಂತಹ ಅನೇಕ ದೃಶ್ಯಗಳನ್ನು ನಾವು ನೋಡಿದ್ದರೂ ಕುತೂಹಲಾವಿಷ್ಟನಾಗಿ ನನ್ನ ಮಿತ್ರನೊಡನೆ ಆ ವ್ಯಕ್ತಿಯ ಪರಿಚಯವನ್ನು ಕೇಳಿದೆನು. ಆದಕ್ಕೆ ನನ್ನ ಮಿತ್ರರು ಆ ಕಡೆ ನೋಡಿ ಈ ರೀತಿ ಹೇಳಿದರು. ಕ್ರಾಂತಿಯನ್ನೆಬ್ಬಿಸಲು ಈತನು ರಷ್ಯಕ್ಕೆ ಹೋಗಿದ್ದನು. ಅಲ್ಲಿ ಬಾಲ್ಶೆವಿಜಮ ಗಾಳಿ ಬೀಸಿತು. ಈಗ ಆವನು ತನ್ನ ವಿಚಾರಗಳ ಪ್ರಚಾರ ಮಾಡಬೇಕೆನ್ನುತ್ತಾನೆ. ಒಂದಲ್ಲ ಒಂದು ದಿನ ಅವನು ಆಪತ್ತಿನಲ್ಲಿ ಸಿಕ್ಕಿಬೀಳುವನು. ಪ್ರಾಯಶಃ ಇಂದೇ ಆ ವಿಪತ್ತಿನ ದಿನವಿರಬಹುದೆಂದು ತೋರುತ್ತದೆ. ಹಾಗಾದರೆ ಆತನ ಹಿಂದೆ ಬಂದವರು ಗುಪ್ತಪೋಲೀಸರೇ ಎನಲು, ಅದನ್ನು ನಾನು ಹೇಳಲಾರೆ. ಅವರ ಸಂಖ್ಯೆಯು ೧-೨ ಅಲ್ಲ. ಸಾವಿರಗಟ್ಟಲೆ ಇವೆ! ಎಂದು ಉತ್ತರ ಕೊಟ್ಟರು. ಹಾಗಾದರೆ ನಿಮಗೆ ಹೇಗೆ ತಿಳಿಯಿತು ಎಂದು ಕೇಳಲು ಆತನು ನಗುತ್ತ, ಇದೇನು ಬಹಳ ಸುಲಭ. ಅವರ ಶಂಕೆಯ ದೃಷ್ಟಿ, ಅವರ ಚಲನೆ, ಉತ್ಸುಕತೆ ಇವೇ ಅವರ ಪರಿಚಯವನ್ನು ಮಾಡಿಕೊಡುತ್ತವೆ. ಈ ರೀತಿ ಮಾಸ್ಕೋರೋಂಗಳಲ್ಲಿ ಅನೇಕರನ್ನು ನೋಡಿರುವೆನು" ಎಂದನು.

ಇಷ್ಟರಲ್ಲಿ ಅವರಿಬ್ಬರೂ ಆತನ ಸಂಗಡ ಬೋಲ್ಶೆವಿಜಂ ಸುದ್ದಿಯನ್ನಾಡಹತ್ತಿದರು. ಸ್ವಲ್ಪ ಹೊತ್ತಾದ ಮೇಲೆ ನಾನು ಹೋಟೇಲಿಗೆ ಹಿಂದಿರುಗಿ ಬಂದು ಆ ಮನುಷ್ಯನ ವಿಚಾರವಾಗಿ ಪ್ರಶ್ನಿಸಲು ಅವನು ಆತ್ಮಹತ್ಯೆ ಮಾಡಿಕೊಂಡನೆಂದು ತಿಳಿಯಿತು. ಈ ವರ್ತಮಾನವು ನನಗೆ ಒಬ್ಬ ಮಿತ್ರನಿಂದ ಟೆಲಿಫೋನ್ ಮೂಲಕ ತಿಳಿಯಿತು. ನಿನ್ನೊಡನೆ ಭಂದು ಭೇಟಿಯಾಗದೆ ಈ ರೀತಿ ಮಾತನಾಡಿದ್ದಕ್ಕೆ ಕ್ಷಮಿಸಿ. ಕಾರಣ ನಾನು ಈಗಲೇ ಆತ್ಮಹತ್ಯೆ ಮಾಡಿಕೊಳ್ಳಲು ಬಯಸುವುದಿಲ್ಲ. ನೋಡಿದಿರಾ ಗುಪ್ತದಳದ ಚತುರತೆಯನ್ನು! ಮಾರನೆ ದಿನ ತನ್ನ ನಾಜೀ ಮಿತ್ರನನ್ನು ಇದರ ಈ ಆತ್ಮಹತ್ಯೆಗಳ ಲಾಭವಾದರೂ ಏನು ಎನ್ನಲು ಅಲ್ಲಿ ಪರಲೋಕದಲ್ಲಿ ಅವರು ತುಂಟತನ ಮಾಡಲಾರರು ಎಂದನು. ಆಗ ನಾನು ಆ ಮನುಷ್ಯನು ಒಬ್ಬ ಸೈನಿಕನೇ? ಭಯಂಕರ ವ್ಯಕ್ತಿಯವನೇ? ಮೇಲೆ ಹಾರಿ ಬಾಂಬು ಹಾಕುತ್ತಿದ್ದನೇ? ಆವನು ಕೇವಲ ಸಂಭಾಷಣೆಯಿಂದ ಕ್ರಾಂತಿ ಎಬ್ಬಿಸುತ್ತಿದ್ದನೇ? ಎಂದು ಕೇಳಿದೆನು. ಮಿತ್ರರೇ ನೀವು ಹೇಳುವುದೇನೋ ನಿಜ ಆದರೆ ತಮ್ಮ ಅಧಿಕಾರಿಯು ಹಿಟ್ಲರ್ ಎಂಬುದನ್ನು ಮರೆಯದಿರಿ. ಅಲ್ಲದೆ ಅವನು ಆಗಾಗ್ಗೆ ಮ್ಯೂನಿಚ್ ನಗರಕ್ಕೆ ಬರುತ್ತಿರುತ್ತಾನೆ ಎಂದನು. ಜರ್ಮನಿಯ ಗುಪ್ತದಳದ ಸಂಖ್ಯೆ ೩೫,೦೦೦ ಎಂದು ಗೊತ್ತಾಗಿದೆ. ರಷ್ಯದಲ್ಲಿ ೨ಲಕ್ಷವಿದೆ. ಮುಸೋಲಿನಿಯು ಇಂತಹ ೬ ಸಂಸ್ಥೆಗಳನ್ನಿಟ್ಟಿರುವನಂತೆ. ಅಲ್ಲದೆ ತಾನೇ ಖುದ್ದಾಗಿ ಈ ಸಂಸ್ಥೆಗಳ ಮೇಲ್ವಿಚಾರಣೆ ಮಾಡುವನಂತೆ ಆತನ ಈ ಗುಪ್ತದಳದ ಮನುಷ್ಯರು ಬಹು ದಕ್ಷರು ಕಾರ್ಯಕುಶಲರೂ

ಪುಟ ೧೭ಕ್ಕೆ

"THE PRIDE AND ENVY OF INDIAN INSURANCE"

Facts that call for your immediate attention:-

- *The Company has just undergone its First Valuation as at 31st December, 1938
- *The Valuation has been performed assuming an interest rate of 3½%, a low rate which is adopted by very few Indian Companies of good standing and nevertheless the surplus disclosed is substantial.
- *A substantial Life Fund supported by clean assets and complete absence of preliminary expenses and organisation outlay in the assets of every one of the Balance Sheets.
- *A very low expense ratio.

The above in the opinion of the Consulting Actuary, Prof. K. B Madhava M A, F. R. A. S., A I A. (London), **"are undoubtedly such as to be the pride and envy of Indian Insurance"**. The Actuary recommends the declaration of a simple Reversionary Bonus at Rs 15/- per Rs 1000/- Sum Assured on Special Whole Life Assurances and at Rs. 10/- per Rs. 1,000/- Sum Assured on Endowment Assurances

Just the Company for you to insure with or represent.

THE

CANARA MUTUAL

ASSURANCE CO., LTD.

The Company is Mutual] UDIPI, S. INDIA. [There are no Shareholders.

ಜುಗಾರಿ (GAMBLING)

ಲೇಖಕರು:—ಶ್ರೀ ಬಿ. ರಾಮರಾಯ ಶೆಟ್ರು, ಬಿ.ಎ., ಎಲ್.ಟಿ. ಉಡುಪಿ.

Among the trinity of vices gambling is the most heinous. The votaries of gambling take shelter under the plea that life itself is a big gamble. This is the weakest of weapons in their armoury. If life is a gamble, we can't help it; for we all have to pass through it willy-nilly. Some adherents say that they sin in *good company*. *No company however great is capable of transforming a vice into a virtue*. A sin is a sin whether committed by an angel or a mortal. It does not get diluted when committed by a greater man nor does it become worse when committed by a lesser man. It levels all people and degenerates them. It has become the fashion in these days to quote the names of people in great position or the names of great intellectual lights and wits in defence when the moral side of a man is attacked. The fallacy in this argument can be exposed easily, for the man is not great and he is not admired and appreciated for his moral weakness but only for his position and intellectual eminence. If he had the moral strength to boot, it would have added much to his worth. He would have been a cent per cent man or very near it. In our limitations we always point towards the so-called great man. It is only that, we have in common with the great. If we stretch that argument in regard to that particular point many lower animals may also come up to our level. That does not mean we are lower animals. So we meet that great man and the animals in that point. This apart, these adherents of gambling when driven to a corner say that to be moral is nothing. This is sourgrapism. To be moral is every thing. This is the highest stage in the evolution of man. If to be moral is nothing, why should every man pretend that he is moral or wish his mother, sister and wife to be moral? **Man becomes inconsistent in argument, when it touches the ego.** Surely, it requires great strength to be moral. Gambling is the high road to immorality. No argument can buttress it; no logic can support it; no philosophy has any sanction for it. Which man does not rue after the fit is over? Economically too it is to be strongly condemned. When ten people play, there is only an adjustment of wealth; there is no creation; and the so-called pleasure that is derived is morbid. In the long run no gambler ever grows rich. He only impoverishes his soul and his home.

[ದಿವಾಕರನು ಬೆಂಗಳೂರಿನ ಪ್ರಸಿದ್ಧ ಕ್ರಿಮಿನಲ್ ವಕೀಲ-ಪಾರ್ವತೀಬಾಯಿಯು ಆತನ ಹೆಂಡತಿ-ಇವರಿಗೆ ಸುರೇಂದ್ರನೆಂಬ ಮಗ-ನರೇಂದ್ರನು ಇವನ ಗೆಳೆಯ.]

ಸುರೇಂದ್ರ—ನರೇಂದ್ರಾ, ನೋಡು ನಮ್ಮಿಬ್ಬರನ್ನೂ ಈ ಸಲ ಪರೀಕ್ಷೆಗೆ ಕಳುಹಿಸಲಿಲ್ಲ. ನೀನು ಇದಕ್ಕಾಗಿ ಬೇಸರ ಪಡಬೇಡ. ನನ್ನ ತಂದೆಯವರು ಹೇರಳ ಸಂಪಾದನೆ ಮಾಡಿದ್ದಾರೆ, ಮಾಡುತ್ತಿದ್ದಾರೆ. ನಾನು ಅವರ ಒಬ್ಬನೇ ಒಬ್ಬ ಮಗ. I don't care for this examination. ನಾನು ಈ ಪರೀಕ್ಷೆಗೆ ಗಣ್ಯಮಾಡತಕ್ಕವನಲ್ಲ. ನೀನೂ ಹೆದರಬೇಡ. ನಾನು ನಿನ್ನನ್ನು ಎಂದೂ ಬಿಟ್ಟು ಹಾಕಲಿಕ್ಕಿಲ್ಲ.

ನರೇಂದ್ರ—ನೀನಿದ್ದ ಮೇಲೆ ನನಗೇನು ಚಿಂತೆ? ನಿನ್ನ ತಂದೆಯು ಈಗಾಗಲೇ ಮೂರು ಲಕ್ಷದ ಮೇಲೆ ಸಂಪಾದನೆ ಮಾಡಿರುವರೆಂದು ನೀನೇ ಹೇಳಿರುವೆ. ಅದೆಲ್ಲ ನಾಳೆ ನಿನಗೇ ಅಲ್ಲವೇ? ನಿನಗೆ ಈ ವಿದ್ಯೆಯಿಂದ ಏನು ಆಗಬೇಕು? ಬಾ! ನಾವಿಂದು 'ಫನ್ ಫೇರ್'ಗೆ ಹೋಗುವ. 'ಫನ್ ಫೇರ್' ಎಂದರೆ ಅದೊಂದು ವಿನೋದ ಸಾಗರ, ಆನಂದದಾಗರ!

ಫನ್‌ಫೇರಿನಲ್ಲಿ

ಸುರೇಂದ್ರ—ಹಾ, ಇಲ್ಲಿಯ ಆಟಗಳೆಲ್ಲ ಎಷ್ಟು ಆಕರ್ಷಣೀಯ! ಎಷ್ಟು ಚಿತ್ತರಂಜಕ! ಏನೋ ಒಂದು ನೂರು ರೂಪಾಯಿ ಹೋಯಿತು, ಚಿಂತೆಯಿಲ್ಲ. This is nothing for me, ಆದರೆ ಇವುಗಳನ್ನಾಡುವ ಅನುಭವ ದೊರೆಯಿತಲ್ಲ! ನಾಳೆ ಬರೋಣ. ಹೋದ ಹಣದ ಮುಮ್ಮಡಿ ಹಿಂದೆ ಹೊಡೆಯೋಣ!

ನರೇಂದ್ರ—ಸುರೇಂದ್ರಾ, ಇದಕ್ಕಿಂತಲೂ ಸ್ವಾರಸ್ಯವಾದ ಆಟದ ಸ್ಥಳ ಇನ್ನೊಂದು ಉಂಟು. ಅಲ್ಲಿ ದೊಡ್ಡ ದೊಡ್ಡ ಶ್ರೀಮಂತರು, ಜಮೀನ್ದಾರರು, ರಾಜ ಮಹಾರಾಜರುಗಳು ಕೂಡಾ ಬರುತ್ತಾರೆ. ಆ ಆಟದಲ್ಲಾಗುವ ಚಿತ್ತೋದ್ವೇಗದ ಸುಖವನ್ನು ಅನುಭವಿಸಿಯೇ ಮನಗಾಣಬೇಕಲ್ಲದೆ ಹೇಳಿ ತಿಳಿಸಲು ಸಾಧ್ಯವೇ ಇಲ್ಲ.

ಸುರೇಂದ್ರ—ಹಾಗೋ, ಅದ್ಯಾವುದು?

ನರೇಂದ್ರ—ಅದು ಗಿಂಡೀ ರೇಸ್-ಕುದುರೆ ಜೂಜು. ಅದರೆದುರಿಗೆ ಇಂತಹ ನೂರು 'ಫನ್‌ಫೇರು'ಗಳು ಸರಿನಿಲ್ಲಲಾರವು.

ಸುರೇಂದ್ರ—ಹಾಗಾದರೆ ನಾಳೆ ಅಲ್ಲಿಗೇ ಹೋಗೋಣ.

ಮರುದಿನ ಗಿಂಡೀ ರೇಸ್‌ನಲ್ಲಿ

ನರೇಂದ್ರ—ನೋಡಿದೆಯಾ? ಇಲ್ಲಿ ನೆರೆದಿರುವ ಶ್ರೀಮಂತ ಸ್ತ್ರೀಪುರುಷರ ಬೆಡಗಿನ ಉಡುಗೆತೊಡಿಗೆಗಳ ಅಚ್ಚುಕಟ್ಟಿನ ಥಳಕು! ಶ್ರೀಮಂತಿಕೆಯ ಪಂಥಪರಾಕ್ರಮ ತೋರುವ ರಂಗಸ್ಥಳ ಇದು.

ಸುರೇಂದ್ರ—ಸರಿ. ನಮ್ಮದೂ ಒಂದು ಕೈ ತೋರಿಸಿಬಿಡುವ.

ಹಿಂತಿರುಗಿ ಬರುವಾಗ

ನರೇಂದ್ರ—ಜೂಜಿನ ಗುಣವೇ ಹಾಗೆ. ಮೊದಲು ಅನುಭವ ಹೊಂದುವುದಕ್ಕಾಗಿ ಹಣ ಕಳಕೊಳ್ಳಬೇಕಾಗುತ್ತದೆ. ಕೊನೆಕೊನೆಗೆ ಹಾಗಲ್ಲ.

ಸುರೇಂದ್ರ—ಮೊದಮೊದಲು ಹಣ ಹೋದರೂ ಅದು ಕೊಡುವ ದ್ಯೂತೋದ್ವೇಗ ಚಿತ್ತದಿಂದ ನಮಗೆಷ್ಟು ಸುಖವಾಯಿತು! ಚಿಂತೆಯಿಲ್ಲ ಎಷ್ಟಾದರು ಕಳಕೊಂಡುದಕ್ಕಾಗಿ ನನಗೆ ವ್ಯಸನವಿಲ್ಲ. ಮೇಲಾಗಿ ಇದರ ಗುಟ್ಟು ತಿಳಿಯಿತು—ಅದರಿಂದಲೇ ನಾಳೆ ಏಳುಸಾವಿರ ಹೊಡೆಯಬಹುದು.

ರಾತ್ರಿಯಲ್ಲಿ ಸುರೇಂದ್ರನ ತಂದೆ

ದಿವಾಕರರಾಯ—ಸುರೇಂದ್ರ, ನೋಡು-ನೀನು ಆ ನರೇಂದ್ರನ ಒಟ್ಟಿಗೆ ಕೂಡಿ ದುರಭ್ಯಾಸಗಳಿಗೆ ಬಲಿಬೀಳುತ್ತಿದ್ದೆಯೆಂದು ವರ್ತಮಾನ-ನಾನು ನಿನ್ನನ್ನು ಉಚ್ಚಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸುವ ಆಲೋಚನ ಮಾಡಿದ್ದೇನೆ-ನಿನಗೊಬ್ಬರು ತನ್ನ ಮಗಳನ್ನು ಕೊಡುವುದಾಗಿ ಬಂದಿದ್ದಾರೆ-ಹುಡುಗಿ ಮೆಟ್ರಿಕ್ಯುಲೇಶನ್ ಪಾಸಾಗಿದ್ದಾಳಂತೆ-ಸಂಗೀತ ವಿಶಾರದೆಯಂತೆ. ಐವತ್ತುಸಾವಿರ ರೂಪಾಯಿ ವರದಕ್ಷಿಣೆಯನ್ನು ಕೊಡುತ್ತಾರೆ. ನೋಡು, ಇದೇ ಆ ಹುಡುಗಿ, ಉಮೆಯ, ಭಾವಚಿತ್ರ. ಚೆನ್ನಾಗಿಲ್ಲವೇ? ಅಪ್ಪ[illegible] ಒಬ್ಬಳೇ ಮಗಳು. ವರದಕ್ಷಿಣೆಯಲ್ಲದೆ ಈಗಲೇ ಒಂದು ಲಕ್ಷರೂಪಾಯಿಯ ಆಸ್ತಿಯನ್ನು ಹುಡುಗಿಯ ಹೆಸರಿನಲ್ಲಿ ಕೊಡುವರಂತೆ-ಆದುದರಿಂದ ನೀನು ನಿನ್ನ ವರ್ತನೆಯಲ್ಲಿ ಜಾಗರೂಕನಿರಬೇಕು. ತಿಳಿಯಿತೇ?

ಸುರೇಂದ್ರ—ಅಪ್ಪಾ, ಹಾಗೆಲ್ಲ ಇದ್ದರೆ ನಾನು ಮದುವೆಯಾಗುವುದಕ್ಕೆ 'ಕಬೂಲ್'. ಆದರೆ ಇಂಗ್ಲೆಂಡಿಗೆ ಹೋಗುವ ವಿಷಯ ನನಗೆ ಇಷ್ಟವಿಲ್ಲ.

o o o o o

ಎಂಟು ವರುಷಗಳ ನಂತರ ಪಾರ್ವತೀಬಾಯಿಯು ತನ್ನ ಸೊಸೆ ಉಮಾಬಾಯಿಯೊಡನೆ

ಪಾರ್ವತಿ—ನಿನ್ನ ಮಾವನವರು ತೀರಿಹೋಗಿ ವರ್ಷಗಳು ಮೂರು ಸಂದವು—ನೋಡು, ನನ್ನ ಗ್ರಹಚಾರ! ಈ ಮಗನ ಬುದ್ಧಿಯು ದಾರಿಗೆಟ್ಟಿದೆ-ಅವನು ರಾತ್ರಿಯಲ್ಲಾದರೂ ಮನೆಯಲ್ಲಿ ಇರಬೇಡವೇ-ಮನೆಯ ಗಂಡಸು ಹಗಲುರಾತ್ರಿಯೆನ್ನದೆ ಮನೆಬಿಟ್ಟು ಎಲ್ಲೆಲ್ಲೋ ಪೋಲಿಗಳೊಡನೆ ಇರುವುದೆಂದರೆ, ಮನೆ ಉಳಿದೀತೇ? ನಾನೇನೋ ಹೊಳೆಗೆ ಬಾಗಿದ ಮರ. ಆದರೆ ನಿನ್ನ ಗತಿ?

ಉಮಾ—ಅತ್ತೆಯವರೇ, ಇದು ನಿಮ್ಮ ಗ್ರಹಚಾರವಲ್ಲ ನನ್ನದು! ನಾನು ಇಂತಹ ಕಷ್ಟಕ್ಕೆಲ್ಲಾ ಗುರಿಯಾದೇನೆಂದು ಎಂದೂ ಯೋಚಿಸಲಿಲ್ಲ. ಅವರು ಆ ನರೇಂದ್ರನ ಬಲೆಯಲ್ಲಿರುವ ತನಕ ಒಳ್ಳೆಯದಾಗುವಂತಿಲ್ಲ. ನಮ್ಮ ಆಳು ಬಾಬ ಹೇಳುತ್ತಾನೆ-ನರೇಂದ್ರನು ಒಂದು ಜುಗಾರಿಕೂಟವನ್ನು ನಿರ್ಮಿಸಿ ಇವರನ್ನೂ ಇನ್ನೂ ಅನೇಕ ಒಳ್ಳೆಯ ಶ್ರೀಮಂತರನ್ನೂ ಅದರ ಜಾಲದಲ್ಲಿ ಸಿಕ್ಕಿಸಿ ಗತಿಗೆಡಿಸುತ್ತಾನಂತೆ. ಈ ನರೇಂದ್ರನೊಟ್ಟಿಗೆ ಇರುವ ಭಾಸ್ಕರನೆಂಬವನೊಬ್ಬ ಸಕಲ ದುರಾಚಾರಗಳ ಸಾಗರ, ಅವನ ಮೇಲೆ ಎಷ್ಟೋ ಕ್ರಿಮಿನಲ್ ಮೊಕದ್ದಮೆಗಳು ನಡೆದಿವೆ-ಮೊನ್ನೆ ಇತ್ತಲಾಗೆ, ಒಂದು ಮಗುವನ್ನು ಮಂಕುಮಾಡಿ ಅದರ ಆಭರಣಗಳನ್ನೆಲ್ಲಾ ತೆಗೆದು ಪೋಲೀಸರ ಕೈಗೆ ಸಿಕ್ಕಿ ಜೈಲಿನಲ್ಲಿ ಬಿದ್ದು ಬಂದಿರುವನಂತೆ.

ನರೇಂದ್ರನ ಜುಗಾರಿ ಕೂಟ

ಸುರೇಂದ್ರ—ಭಾಸ್ಕರ, ಮೂರು ಬಾಟ್ಲಿ ಸರಾಯಿಗೆ 'ಓರ್ಡರ್' ಮಾಡು—

ಭಾಸ್ಕರ—(ಒತ್ತಟ್ಟಿಗೆ) ನರೇಂದ್ರಾ, ನೋಡು-ಸುರೇಂದ್ರನ ಜೇಬಿನಲ್ಲಿ ತುಂಬ ಪಚ್ಚೆ ನೋಟುಗಳಿವೆ-ಇವನನ್ನು ಅಮಲೇರಿಸಿ, ಆಟವಾಡಿಸಿ ಅವನ್ನೆಲ್ಲಾ ನಾವು ಹಾರಿಸಬೇಕು.

ನರೇಂದ್ರ—ಭಾಸ್ಕರ, ನೋಡು, ಈ ಸರಾಯಿಗೆ ಸ್ವಲ್ಪ ಭಂಗಿಹಾಕಿಸುವ ವಿ[illegible]ವಾರಿ ಮಾಡು. ಇಂಥಾ ಒಬ್ಬ ಹುಚ್ಚನು ನಮಗೆ ಸಿಕ್ಕಿದ್ದು ನಮ್ಮ ಪೂರ್ವಪುಣ್ಯವೇ. ಇವನ ತಂದೆ ಕೊಟ್ಟಿದ್ದು ಸಂಪತ್ತಿ ತಂದದ್ದು ಎಲ್ಲಾ ಮುಗಿಯುತ್ತ ಬಂತು. ಹೆಂಡತಿಯ ಹೆಸರಲ್ಲಿದ್ದ ಆಸ್ತಿಯನ್ನು ಅವಳ ದಸ್ಕತು ತೆಗೆದುಕೊಂಡು ಅದನ್ನೂ ಹಾರಿಸಿದ್ದಾನೆ. ಇವನ ಅಸಾಮಿ ಆ ವಿಲಾಸಿನಿಯ ಮೈಯೆಲ್ಲ ವಜ್ರದಿಂದ ಝಗಝಗಿಸುತ್ತಿದೆ. ನಾಳೆ ರಾತ್ರಿಯು ಇಸ್ಪೀಟಿನ ಆಟ ಅವಳಲ್ಲಿ ಏರ್ಪಾಡುಮಾಡಿದ್ದಾನೆ-ನಮಗೆಲ್ಲ ಅಲ್ಲಿಗೆ ಆಮಂತ್ರಣ.

ಮರುದಿವಸ ಸುರೇಂದ್ರನ ಮನೆಯ ಆಳು ಬಾಬ ನಿಂತಿರುವುದನ್ನು ಕಂಡು

ಭಾಸ್ಕರ—ಯಾಕೆ ಬಂದೆ ಬಾಬ?

ಬಾಬ—ಬುದ್ಧೀ ನಮ್ಮ ರಾಯರು ಇಲ್ಲಿ ಇದ್ದಾರೇನು?

ಭಾಸ್ಕರ—ಯಾಕೆ? ಏನು ವಿಶೇಷ ಮನೇಲಿ?

ಬಾಬ—ಅವರ ತಾಯಿಗೆ ಕಠಿಣ ಅಸ್ವಸ್ಥ. ಇನ್ನೋ, ಇನ್ನೊಂದರೆ ಗಳಿಗೆಯಲ್ಲೋ ಎಂಬ ಹಾಗಿದೆ. ಅಮ್ಮನವರು ಅಯ್ಯನೋರನ್ನ ಕೂಡಲೇ ಕರಕೊಂಡು ಬಾಂದ್ರು.

ಭಾಸ್ಕರ—(ವಿಲಾಸಿನಿಯ ಮನೆಕಡೆ ತೋರಿಸಿ)—ಒಳಗಿದ್ದಾರೆ-ಗುಲ್ಲುಮಾಡದೆ ಹೋಗಿ ನೀನು ಯಾರೆಂದು ಬಾಗಿಲವರಿಗೆ ಹೇಳು.

ಸುರೇಂದ್ರ—ಏನಾ-ಏನು ಬಂದಿ?

ಬಾಬ—ದೊಡ್ಡ ಅಮ್ಮಾವ್ರಿಗೆ ಬಾಳಾ ಕಾಹಿಲೆ ಬುದ್ಧೀ. ನೀವೊಳ್ಳೇ ಹಾಗಿಲ್ಲ!

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ, ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. ಕ್ರಯ:-100 ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. 5-0-0, ಐದಾಣೆ ಸ್ಟಾಂಪು ಕಳಿಸಿದರೆ 13 ಮಾತ್ರೆ ಕಳಿಸಲ್ಪಡುತ್ತದೆ.

ಆಮಲಕೀ ತೈಲ

(ಸುಗಂಧಯುಕ್ತ, ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0.

2 ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ.

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ್, ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ. ಭಾರತ

ಮೋಲುಬ್ಬಸ - - - - ಅಯ್ಯೋನ್ನ ಬೇಗ ಕರಕೊಂಡು ಬಾ ಅಂದ್ರು ಸಣ್ಣಮ್ಮಾವ್ರು.

ಸುರೇಂದ್ರ—ಮೋಲುಬ್ಬಸ! ಹಾಗಾದ್ರೆ ಹೊರಟುಹೋಗ್ಲೇ! ಅಲ್ಲವಾ? ಹೊರಟು ಹೋಗ್ಲೀ, ನಾನು ಬಂದೇನುಮಾಡೋಕಿದೆ? ಮುದಿಯಾದ ಮೇಲೆ ಸಾಯೋದೇ ಚಂದ!

ಬಾಬ—ಹಾಗನ್ನ ಬಾರ್ದು ಬುದ್ಧೀ. ಸಣ್ಣಮ್ಮಾವ್ರು ಅಳ್ತಿದ್ದಾರೆ.

ಸುರೇಂದ್ರ—ಅವಳು ಹುಚ್ಚಿ, ಅಳ್ತಾಳೆ! ನಾನು ಜಾಣ ನಗ್ತೇನೆ! ಈ ಸ್ವಾರಸ್ಯದ ಆಟ ಬಿಟ್ಟು ಅಲ್ಲಿ ಬಂದು ನಾನೂ ಗೋಳಾಟಮಾಡ್ಬೇಕಂತೆಯಾ? ಮುದುಕಿಗೆ ಹೇಳು-ನನಗೀಗ ಪುರುಸೋತ್ತು ಇಲ್ಲ; ನನಗಾಗಿ ಕಾಯೋದು ಬೇಡ, ಹೊರಟು ಹೋಗೋದಾದ್ರೆ ಹೊರಟುಹೋಗ್ಲೀಂತ ಹೇಳಿದ್ರೂನ್ನು!

ಬಾಬ—ಹಾಗೆ ಹೇಳ್ಬಾರ್ದು ಬುದ್ಧೀ; ಹೆತ್ತುತಿಂಗಳು ಹೊತ್ತು, ಹೆತ್ತು, ಸಾಕಿ ಸಲಹಿದ ತಾಯಿ—

ಸುರೇಂದ್ರ—Get away, you idiot-ನನಗೆ ತೊಂದ್ರೆ ಕೊಡ್ಬೇಡ ಕಾಸೋ-ಮರ್ಬೂ ಆಟ ಬಂದಿದೆ! ನಿನ್ನ ಪುರಾಣ ಬೇಡ ಇಲ್ಲಿ! ತೊಲಗೊಂದೆ! ವಿಲಾಸಿನೀ, ಈಗ ನೋಡು ನನ್ನ ಕೈಚಳಕ! ಐನೂರು ರೂಪಾಯಿ ಪೆಟ್ಟು-ಯಾರ ಅಲ್ಲಿ?-ಒಂದು ಗ್ಲಾಸ್ ಬಿಯರ್ ತಾರೋ! ಇದನ್ನೆಲ್ಲಾ ಬಿಟ್ಕೊಂಡು ಮುದುಕಿ ಸಾವಿಗೆ ಗೋಳೋ ಅನ್ನಲಿಕ್ಕೆ ಬಾಂತದೆ ಆ ಪೆಟ್ಟು!

ಂ ಂ ಂ

ಆರುವರ್ಷಗಳ ನಂತರ

ಉಮಾ—ದಮ್ಮಯ್ಯಾ ನಿಮಗೆ! ಒಮ್ಮೆಗೇ ಮುಗಿಸಿಬಿಡಿ! ಆದರೆ ದಿನಾಲೂ ಈ ಹೊಡೆತ ಬೇಡ.

ರಮಾ—ಅಮ್ಮಾ, ಕೊಟ್ಟು ಬಿಡು! ಅಪ್ಪ ಏನು ಕೇಳಿದರೂ ಕೊಟ್ಟುಬಿಡು! ಅವರು ನಿನಗೆ ಪೆಟ್ಟು ಕೊಡೋದೊಂದು ಬ್ಯಾಡಾ!

ಉಮಾ—ಇನ್ನೇನು ಕೊಡಲಿಕ್ಕುಂಟು ಮಗಾ! ಇರೋದು ಪ್ರಾಣವೊಂದೇ. ಅದನ್ನೂ ಒಂದೇ ಸಲ ತಕ್ಕೊಂಡುಬಿಡ್ಲೀ! ಮುತ್ತೈದೆಯಾಗಿ ಬಾಳಿಕೊಂಡು ಮಗನ ನತ್ತು ಯಾವ ಕೈಯಿಂದ ತೆಗೆದು ಕೊಡ್ಲೀ!

ಸುರೇಂದ್ರ—ನಾನೇ ತೆಗೀತೇನೆ! ಕೇಳದಿದ್ದರೆ ನಿನ್ನ ಜೀವ ಹಿಂಡ್ತೇನೆ! ಅದು ಸಿಕ್ಕದಿದ್ದರೆ ನನ್ನ ಪ್ರಾಣ ಹೋಗುತ್ತೆ! ನಾನು ಸತ್ತರೆ ನಾಳೆ ಅದನ್ನು ಇಡುತ್ತೀಯಾ? ಈಗ ನನಗೆ ಬೇಕಾದ್ದನ್ನು ಕೊಡುವ ಕೆಲಸ ನಿನ್ನದು-ಅದೇ ಪತಿವ್ರತಾ ಧರ್ಮ.

ರಮಾ—ಅಮ್ಮಾ ಹೋಗ್ಲೀ, ಕೊಟ್ಟು ಬಿಡು. ಅವರು ನಿನ್ನನ್ನು ಹೊಡಿಯೋದು ಬ್ಯಾಡಾ! ದಮ್ಮಯ್ಯಾ ಕೊಟ್ಟುಬಿಡು.

ಂ ಂ ಂ ಂ ಂ

ಕೆಲವು ದಿವಸಗಳ ನಂತರ

ರಮಾ—ಅಯ್ಯೋ ದೇವ್ರೇ! ಅಮ್ಮಾ, ಇದೇನು ಸುದ್ದಿ ನೋಡು! ಪೇಪರಿನಲ್ಲಿ! "ದೊಡ್ಡ ಕೊಲೆ-ಬೆಂಗಳೂರು ಸಮೀಪದ ಅಡ್ಡಾರು ಹಳ್ಳಿಯಲ್ಲಿ ಶ್ರೀಮಂತ ವೃದ್ಧೆಯ ಕೊಲೆ-ಪೋಲಿಸ್‌ನವರು ಜುಗಾರಿಕೋರರಾದ ಭಾಸ್ಕರ, ನರೇಂದ್ರ, ಸುರೇಂದ್ರರನ್ನು ಕೈದು ಮಾಡಿರುವರು. ಮೊಕದ್ದಮೆ ನಡಿಯುತ್ತದೆ" ಅಯ್ಯೋ, ಇನ್ನೇನು ಗತಿ.

ಂ ಂ ಂ ಂ ಂ

ಮೂರು ತಿಂಗಳ ನಂತರ

ಉಮಾ—ಮಗಾ, ನಿನ್ನ ತಂದೆಯವರಿಗೆ ಫಾಶೀ ಶಿಕ್ಷೆ ಆಯಿತಂತೆ. ಇನ್ನು ನಾನೇನು ಮಾಡಲಿ? ಯಾರ ಸೇರಲಿ? ಮಗೂ, ನೀನು ನಿನ್ನ ಮಿತ್ರಳಾದ ಶಚೀಬಾಯಿಯ ಮನೆಯಲ್ಲಿರು. ನಾನು ನನ್ನ ಚಿಕ್ಕಪ್ಪನ ಮನೆಗೆ ಹೋಗಿ ಎರಡು ಮೂರು ದಿವಸದಲ್ಲಿ ಹಿಂದೆ ಬರುತ್ತೇನೆ.

ಂ ಂ ಂ

ನಾಲ್ಕು ದಿವಸಗಳ ಮೇಲೆ

ಶಚೀ—(ತನ್ನ ತಾಯಿಯನ್ನು ಕರೆದು) ಅಮ್ಮಾ ನಮ್ಮ ಕೆಲಸದ ಕಾವ್ರ ಹೇಳುತ್ತಾಳೆ. ಆಚೆ ಹಿತ್ತಲಲ್ಲಿ ಬಾವಿಯಲ್ಲಿ ಒಂದು ಹೆಣ ತೇಲಾಡುತ್ತದಂತೆ.

(ರಮೆಯೂ ಕೂಡ ಎಲ್ಲರೂ ಅಲ್ಲಿಗೆ ಓಡಿಹೋಗಿ ನೋಡಿದಾಗ)

ರಮಾ—ಅಯ್ಯೋ, ಓ ಅಮ್ಮಾ ನೀನು ಹೀಗೆ ಮಾಡಿಕೊಂಡೆಯಾ! ನೀನು ಚಿಕ್ಕಪ್ಪನ ಮನೆಗೆ ಹೋಗಿಬರುತ್ತೇನೆಂತ ಹೇಳಿ ನನ್ನ ಕೈಬಿಟ್ಟು ಹೋದೆಯಾ? ಇನ್ನು ನನಗ್ಯಾರು ಗತಿ!

ಂ ಂ ಂ

ಐದು ದಿವಸಗಳ ನಂತರ

ಶಚೀ—ರಮಾ ನೀನು ಖಿನ್ನಳಾಗಬೇಡ. ನೀನು ನನ್ನ ಸಂಗಡ ಇದ್ದುಬಿಡು, ನಿನ್ನನ್ನು ನಾನು ನನ್ನ ತಂಗಿಯಂತೆಯೇ ನೋಡಿಕೊಳ್ಳುತ್ತೇನೆ.

ರಮಾ—ನಿನ್ನಂಥಾ ಗೆಳತಿಯನ್ನು ನಾನು ಮರೆಯಲಾರೆ. ಆದರೆ, ಸುಮ್ಮಗೆ ನನ್ನಿಂದಾಗಿ ನಿಮಗೇಕೆ ತೊಂದರೆ? ಹಳೆ ನಾಡಿನಲ್ಲಿ ನನ್ನ ಅಜ್ಜಿಯಿದ್ದಾಳೆ. ನಾನಲ್ಲಿಗೆ ಹೋಗುತ್ತೇನೆ. ನನ್ನಜ್ಜಿ ನನ್ನನ್ನು ನೋಡಿಕೊಳ್ಳಲಾರಳೇ?

ಂ ಂ ಂ

ನಾಲ್ಕು ವರ್ಷಗಳು ಕಳೆದ ಮೇಲೆ

ರಮಾ—ಅಯ್ಯೋ, ನನ್ನ ಗತಿಯೇ! ನನ್ನ ತಂದೆಯು ಜುಗಾರಿಯಾಟದ ದೆಸೆಯಿಂದ ಎಲ್ಲವನ್ನೂ ಕಳಕೊಂಡು ಗಲ್ಲಿಗೆ ಕುತ್ತಿಗೆ ಕೊಟ್ಟ. ತಾಯಿ ಬಾವಿಗೆ ಹಾರಿದಳು. ನನ್ನ ಗೆಳತಿ ಶಚಿಯು ಮದುವೆಯಾಗಿ ಗಂಡನ ಮನೆ ಸೇರಿದಳು. ಇಲ್ಲಿ ಅಜ್ಜಿಯೂ ತೀರಿಕೊಂಡಳು. ಮಾವನಿಗೆ, ಮಾವನ ಹೆಂಡತಿಮಕ್ಕಳಿಗೆ ನಾನು ಬೇಡವಾದ ಕಸ! ತನ್ನ ಮಗಳಂದಿರಿಗೆ ಸಾವಿರಾರು ರೂಪಾಯಿ ಪುಡಿಮಾಡಿ ಮದುವೆ ಮಾಡಿದರಲ್ಲವಾ! ಆದರೆ,ನನ್ನನ್ನೊಂದು ಮನೆ ಹತ್ತಿಸಿಕೊಡಬೇಕೆಂದು ತೋರಲಿಲ್ಲ ಅವರಿಗೆ! ಯಾರಿಗೂ ಬೇಡಾದ ಜುಗಾರಿಕೋರನ ಮಗಳು! ನಾನು ಕಸ! ಕಸ! ಕಸ!

ಂ ಂ ಂ

ಐದು ದಿವಸದ ಮೇಲೆ

ತಂಗಾಳಿಯು ಬೀಸುತ್ತಿತ್ತು. ಅರುಣನು ತನ್ನ ಕಿರಣಗಳನ್ನು ಬೀರುತ್ತಿದ್ದನು ಶಚಿಯೂ ಅವಳ ಗಂಡ ಮೋಹನನೂ ಸರಸಲ್ಲಾಪದಲ್ಲಿ ತಲ್ಲೀನರಾಗಿದ್ದರು.

ಶಚಿ—ನೋಡಿ, ಇಳಿ ಹೊತ್ತಿನ ಬಗೆ ವಣ್ಣದ ಬಾನಿನ ಕರೆ! ಎಷ್ಟು ಚಂದ!

ಮೋಹನ—ಅದಕ್ಕಿಂತಲೂ ನಿನ್ನ ನಗು ಚಂದ.-ನೋಡು ಅಲ್ಲಿ ಪೇಪರ್ ಬಂದಿದೆ.-ಇಲ್ಲಿ ತಾ, ಏನು ಸುದ್ದಿ ನೋಡು.-

ಶಚಿ – ಇದೇನು! ದೊಡ್ಡ ದಪ್ಪ ಅಕ್ಷರಗಳಲ್ಲಿ!—"ಭೀಕರ ದುರಂತ ಕರುಣಾಜನಕ ದೃಶ್ಯ! ಹಳೆನಾಡುತರುಣ ಬಾಲೆಯೊಬ್ಬಳು ನಿನ್ನೆ ದಿನ ರಾತ್ರಿ ರೈಲ್ ಬಂಡಿ ಅಡಿಯಲ್ಲಿ ಬಿದ್ದು ಸತ್ತಳು."

ಂ ಂ ಂ ಂ ಂ

ಬರುವ ಲೇಖನ—"ಕುಶಿತ"



ಸರಿಯಾದ ಸಮಯವನ್ನು ಸೂಚಿಸತಕ್ಕ ಅತ್ಯಾಧುನಿಕ ಲಿವರ್ ರಿಸ್ಟ್‌ವಾಚಿಗೆ ಉರುಟು ಯಾ ಚೌಕ ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ. 2-8-0, ಅತ್ಯುತ್ತಮದಕ್ಕೆ ರೂ. 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ 4-8-0, ರೋಲ್ಡ್‌ಗೋಲ್ಡಿಗೆ ರೂ.6-8-0, ಚಿತ್ರ ಚೆದರ್ಲಿ ತೋರುವಂತಹದಕ್ಕೆ ರೂ. 8-8-0. ಅಂಚೆವೆಚ್ಚ 0-10-0 ಪ್ರತ್ಯೇಕ.

Empress Trading Co.,
P.O. Box No. 6744, **Calcutta(G)**

ಸುಳ್ಳೆಂದು ರುಜುಪಡಿಸುವವರಿಗೆ

ರೂ. **50** ಇನಾಂ

ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು.

1 ವಶೀಕರಣ ಯಂತ್ರ: ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರಧರಿಸಿದ ಮಾತ್ರದಿಂದಲೇ ಆವಳು ನಿಮ್ಮೊಡನೆ ಮಾತನಾಡಬಯಸುವಳು. ಮಾತ್ರವಲ್ಲದೆ ನಿಮ್ಮ ವಶವಾಗುವಳು. ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ ತಾಯಿತಕ್ಕೆ ರೂ 7-8-0.

2 ಲಕ್ಷ್ಮೀಯಂತ್ರ: ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ವಹಿವಾಟುಗಳು ಹೆಚ್ಚಿ ಲಾಭದಾಯಕ ಸುಸಂಧಿಬರುವುದು. ಬೆಳ್ಳಿ ಯಂತ್ರಕ್ಕೆ ರೂ 2-8-0 ಚಿನ್ನದ್ದಕ್ಕೆ ರೂ. 7-8-0. ಇಂದೇ ಮೇಲಣ ವಿಳಾಸಕ್ಕೆ ಬರೆಯಿರಿ. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

SRI SADANAND RAM
No 57, P. O. Warisaligunj,
(Gaya)

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು.

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ಮೋಸಗೊಳಿಸುವ ಔಷಧವೆಂದು ಖಾತ್ರಿಪಡಿಸುವವರಿಗೆ ರೂಪಾಯಿ 100 ಬಹುಮಾನ.

ಸ್ತಂಭಕ ವಟಿ—ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram
No. 552 **P. O. Katrisarai, (Gaya)**



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಲೆ ಬರುತ್ತವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ಜಾಹೀರು ವಿನಂತಿ.

ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ-

ಉಡ್ಪಿ ತಾಲೂಕು ಗುಂಡ್ಮಿ ಗ್ರಾಮದ ಮಂಜುನಾಥ ಸಹಸ್ರಯಾನೆ ಕೆ. ಜಿ. ಕೆ. ರಾವ್ ಎಂಬವರು ನಮ್ಮ ಫರ್ಮಿನ ಔಷಧ ಮಾರಾಟದ ಟ್ರಾವಲಿಂಗ್ ಏಜಂಟರಾಗಿದ್ದರು. ಈಚೆಗೆ ಅವರ ಏಜನ್ಸಿಯನ್ನು ವಜಾ ಮಾಡಿದೆ. ಅವರಿಗೂ ನಮ್ಮ ಫರ್ಮಿಗೂ ಯಾವ ತರದ ಸಂಬಂಧವೂ ಇರುವುದಿಲ್ಲ. ಅವರು ನಡಿಸುವ ಪತ್ರವ್ಯವಹಾರಗಳು ನಮ್ಮ ಫರ್ಮಿಗೆ ಸಂಬಂಧಪಟ್ಟದ್ದಲ್ಲವೆಂಬದನ್ನು ಸರ್ವರೂ ತಿಳಿದಿರತಕ್ಕದ್ದು.

ಡಾ| ಎ. ಎಸ್. ಶ್ರೀನಿವಾಸ ರಾವ್,
ಆಯುರ್ವೇದ ವೈದ್ಯ ವಿದ್ವಾನ್,
ಯಂ. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ವಿಶಿಷ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ಡಿ.ಳ.
ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಪುಟ ೧೨ರಿಂದ

ಯುರೋಪಿನ ಗುಪ್ತ ಪೋಲೀಸರು

ಆಗಿರುವರು ಬಾಳ್ಕಾನ್ನಿನ ಪೋಲೀಸರು ಬಹಳ ಕ್ರೂರಿಗಳೂ ಧೂರ್ತರೂ ಆಗಿರುವರು. ಬಲ್ಗೇರಿಯಾದ ರಾಜನ ವಧೆಯಿಂದ ಮೇಲಿನ ಘಟನೆಯಾದುದು. ಒಂದು ಶಾಲೆಯ ಅಧ್ಯಾಪಕಿಯನ್ನು ಬಲವಂತದಿಂದ ಎಳೆದುಕೊಂಡು ಹೋಗಿ ಪೋಲೀಸರ ಠಾಣೆಯಲ್ಲಿ ಬಂಧಿಸಿದರು. ಮೂವರು ಒಳಗೆ ನುಗ್ಗಿದರು. ಚೆನ್ನಾಗಿ ಪ್ರಹರಿಸಿದರು. ಆಕೆಯು ಭಯಗ್ರಸ್ತಳಾಗಿ ರೋದಿಸುತ್ತಿರಲು ಎಳೆದು ತಂದು ಹೊರಗಡೆ ಕೂರಿಸಿದರು. ಹೇಳು ಆ ವ್ಯಕ್ತಿಯ ವಿಚಾರದಲ್ಲಿ ಏನು ಬಲ್ಲೆ? ಹೇಳದಿದ್ದರೆ ಮುಂದೆ ಅನುಭವಿಸುವ ತೊಂದರೆಗಳ ಕೇವಲ ಒಂದು ನಮೂನೆಯನ್ನು ಮಾತ್ರ ಈಗ ನೀನೇ ನೋಡಬೇಕಾದೀತು ಎಂದು ಬೆತ್ತದಿಂದ ಹೊಡೆಯಲಾರಂಭಿಸಿದರು. ಪಾಪ ಆಕೆಗೆ ಆ ವ್ಯಕ್ತಿಯ ಹೆಸರು ಸಹ ತಿಳಿದಿರಲಿಲ್ಲ ಕ್ರಮೇಣ ಆಕೆಯು ಅವರಿಗೆ ತನ್ನ ನಿಜಸ್ಥಿತಿಯನ್ನು ತಿಳಿಸಿ ಅವರು ಬೇರೊಬ್ಬಳ ಬದಲಾಗಿ ತನ್ನನ್ನು ಹಿಡಿದು ತಂದಿರುವರೆಂದು ಮನಗಾಣಿಸಿದಳು. ಆಗ ಪುನಃ ಮತ್ತೊಬ್ಬ ಸ್ತ್ರೀಯಳನ್ನು ಎದುರಿಗೆ ನಿಲ್ಲಿಸಲಾಯಿತು. ಅವಳು ಅಗಸಗಿತ್ತಿ. ಹಿಂದೊಮ್ಮೆ ಕಳ್ಳತನದ ಅಪರಾಧಕ್ಕಾಗಿ ಬಂಧಿಸಲ್ಪಟ್ಟಿದ್ದಳು. ಪೋಲೀಸರ ಮೇಲಿನ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ, ಆಕೆಯು ಉಪಾಧ್ಯಾಯಿನಿಯ ಮೇಲೆ ಆರೋಪಣೆ ಮಾಡಿ ಈ ರೀತಿ ಸುಳ್ಳು ಸುದ್ದಿಯನ್ನು ಹರಡಿಸಿದ್ದಳು. ಇದು ಸ್ವಲ್ಪ ಅದ್ಭುತವಾಗಿ ತೋರುವುದು. ಬಲ್ಗೇರಿಯಾದ ರಾಜನ ಕೊಲೆಗೆ 7 ಸಾರಿ ಪ್ರಯತ್ನಗಳು ನಡೆದವು. ರೈತರು ಮಂತ್ರಿಯನ್ನು ಜೀವ ಸಹಿತ ಸಮಾಧಿ ಮಾಡಿದ್ದರು. ಪಾರ್ಲಿಮೆಂಟ್ ಭವನವನ್ನು ನೆಲಸಮ ಮಾಡಿದ್ದರು. ಎಲ್ಲೆಲ್ಲಿಯೂ ಕೊಲೆ ಲೂಟಿಯೇ ಆಗಿತ್ತು. ರಷ್ಯದ ಗುಪ್ತ ಪೋಲೀಸು ದಳದ ಕಥೆಯು ಇನ್ನೂ ವಿಚಿತ್ರವೂ ಭಯಾನಕವೂ ಆಗಿದೆ. ಸೈಬೀರಿಯದ ಉಪ್ಪಿನ ಗನಿಗಳಲ್ಲಿ ಖೈದಿಗಳು ಕೆಲಸ ಮಾಡುತ್ತ ಮರಣ ಸುಖವನ್ನನುಭವಿಸುವರು. ವಾಚಕರಿಗೆ ಗುಪ್ತ ಪೋಲೀಸಿನ ಮನೋರಂಜಕ ಘಟನೆಯನ್ನು ವಿವರಿಸಲಾಗುತ್ತದೆ. ಜೆಕೋಸ್ಲೋವೇಕಿಯಾದ ಗುಪ್ತ ಪೋಲೀಸಿನ ಒಬ್ಬ ಏಜಂಟನು ಒಬ್ಬ ಕ್ರಾಂತಿಕಾರಿಯ ಬೆನ್ನನ್ನು ಪ್ಯಾರಿಸ್ಸಿನಿಂದ ಇಟಲಿ ಮಾರ್ಗವಾಗಿ ಮಿಲಾನ್ ವರೆಗೂ ಹತ್ತಿದನು. ಯುಗೋಸ್ಲೋವೇಕಿಯದ ಗುಪ್ತ ಪೋಲೀಸಿನವರು ತಮ್ಮ ಏಜಂಟರಿಗೆ ಸುಳ್ಳು ಪಾಸ್ ಪೋರ್ಟ್ ಕೊಟ್ಟು ಕಳುಹಿಸಿದ್ದರು ಏಜಂಟರು ತಾವು ಬಹಳ ಸುರಕ್ಷಿತರೆಂದೇ ಭಾವಿಸಿಕೊಂಡಿದ್ದರು. ಅವರೆ ಹೋಟೇಲಿನಲ್ಲಿ ಊಟಮಾಡುತ್ತ ನಿಶ್ಚಿಂತೆಯಿಂದ ಕುಳಿತಿರಲು ಒಬ್ಬ ಮನುಷ್ಯನು ಬಂದು ಶಾಂತಸ್ವಭಾವದಿಂದ ಮಹಾಶಯರೇ! ತಮ್ಮ ಪಾಸ್ ಪೋರ್ಟ ಎಲ್ಲಿ ಎಂದು ಕೇಳಿದನು ಏಜಂಟರಿಗೆ ಮುಖ ಕೆಂಪಾಯಿತು. ಪಾಸ್ ಪೋರ್ಟ್ ತೋರಿಸುವಿರಾ ಇಲ್ಲವೇ ಠಾಣೆಗೆ ಹೊರಡುವಿರಾ ಎಂದು ಕೇಳಲು ಅವರ ಅವಸ್ಥೆ ಬಹಳ ಕಷ್ಟಕ್ಕೀಡಾಯಿತು. ತಮ್ಮಲ್ಲಿದ್ದ ಪಾಸ್ ಪೋರ್ಟ್ ತೋರಿಸಲು ಇದು ಮೋಸದ್ದು. ಕೂಡಲೇ ಈ ದೇಶವನ್ನು ಬಿಟ್ಟು ಹೊರಡಿರಿ ೧-೨ ಘಂಟೆಗಳಲ್ಲಿ ರೈಲು ಹೊರಡುವುದಿದೆ. ಗಡಿಯಲ್ಲಿ ಈ ಪಾಸ್‌ಪೋರ್ಟ್ ತೋರಿಸಿರಿ. ಇಷ್ಟವಾದರೆ ಟೆಲಿಫೋನ್ ಮೂಲಕ ನಾವು ಮಾತನಾಡಿಕೊಳ್ಳುವೆವು. ಎಂದು ಹೊರಡಿಸಿದನು.

ಅಲ್ಲಿನ ಗುಪ್ತ ಪೋಲೀಸಿನವರ ಭಾವನೆಯು ಈ ರೀತಿ ಇದೆ—ಸತ್ತ ಮನುಷ್ಯನು ಭಯಂಕರನಾಗಿರುವುದಿಲ್ಲ. ಅಲ್ಲದೆ ಶವಗಳ ಮೇಲೆ ನಿಗಾ ಇಡುವುದು ಬಹಳ ಸುಲಭವಾದ ಕೆಲಸ, ಇದೊಂದು ಗಾದೆಯಂತಿದೆ ಅಲ್ಲಿ.

THE PREMIER BANK OF INDIA, LTD.

Head office:
Thambu Chetty St. Madras.
Branches:
Madura & Nellore.

Fixed Deposits accepted, Current, Savings Bank and Provident Deposit Accounts opened, and all other kinds of Banking business undertaken

For detailed particulars apply to:

HEAD OFFICE OR BRANCHES.

S V. Rao, D Com.,
Managing Director.

—ಕೂದಲು ರಂಗು ತೈಜಿಸಿರಿ—

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬೆಳ್ಳಗಾಗುವುದು ನಿಲ್ಲುವುದು, ನರೆತಕೂದಲು ಪೂರ್ಣ ಕರ್ರಗಾಗಿ ಬಿಳಿರಂಗು ನಾಶಹೊಂದುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿರುವುದೇ ನಮ್ಮ ತೈಲದ ಯೋಗ್ಯತೆಯನ್ನು ಬೀರುವುದು ಅಪ್ರಯೋಜನಕಾರಿಯೆಂದು ರುಜುಪಡಿಸಬಲ್ಲವರಿಗೆ ಕೊಟ್ಟ ಹಣ ವಾಪಾಸು ಕೊಡುವ ಕರಾರಿದೆ. ಅಲ್ಪಸ್ವಲ್ಪ ನರೆತಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಕಾಲುಪಾಲಿಗೂ ವಿ.ಕ್ರೈಯುಪ್ಪದಾದರೆ ರೂ.7, ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

Hazra & Co,
P.O. Behar Nersery(Darbhanga)

ಬೇಕಾಗಿದ್ದಾರೆ

ಸೆಕೆಂಡರಿ ಗ್ರೇಡ್ ಟ್ರೈನ್ ಆದ ಉಪಾಧ್ಯಾಯರೊಬ್ಬರೂ, ಹಯರ್ ಗ್ರೇಡ್ ಟ್ರೈನ್ ಆಗಿದ್ದು ಹೊಲಿಗೆ ಕೆಲಸದಲ್ಲಿ ನಿಪುಣೆಯಾದ ಉಪಾಧ್ಯಾಯಿನಿಯೊಬ್ಬಳೂ ಬೇಕಾಗಿದ್ದಾರೆ. ಅರ್ಜಿಗಳನ್ನು ಕೆಳಗಿನ ವಿಳಾಸಕ್ಕೆ ಕೂಡಲೇ ಕಳಿಸತಕ್ಕದ್ದು.

MANAGER,
St. Joseph's Higher Ele. School.
MERMAJAL POST.
(Mangalore.)

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ—

Os ·No ೧೬೩೮
ಮಧ್ವರಾಯ ಭಟ್—**ವಾದಿ**
ಮತ್ತು

ನರಹರಿಭಟ್ಟ ಮಂಗೆಬೆಟ್ಟು ಮೇಲ್ಮನೆ ವೆಂಕಪ್ಪ ಭಟ್ಟರ ಮಗ, ಹಾಲಿ ಕಾರ್ಕಳ ತಾಲ್ಲೂಕು ಬಡಗ ಮಿಯಾರು ಗ್ರಾಮದ ಪಂಡ್ರಮಜಲು ಎಂಬಲ್ಲಿರುವವ.

ಪ್ರತಿವಾದಿ

ಕೋರ್ಟು ಹುಕುಂ ಪ್ರಕಾರ ಸದ್ರಿ ದಾವೆಯ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ಪ್ರತಿವಾದಿಯು ವಾದಿಗೆ 10-3-1937ರಲ್ಲಿ ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಪ್ರಕಾರ ಬಹಾ ಅಸ್ಲು ಬಡ್ಡಿ ರೂ. 552-15-10ಕ್ಕೆ ಮಾಡಿದ ಸದ್ರಿ ದಾವೆಯು ತಾರೀಕು 27-3-39ಕ್ಕೆ ಪ್ರತಿವಾದಿಯ ಉದಾಹರಣೆ ಬಗ್ಗೆ ಇಡೋಣಾಗಿಯದೆ, ಆದ್ದರಿಂದ ಪ್ರತಿವಾದಿಯು ತಾ. 27-3-39ಕ್ಕೆ ಸದ್ರಿ ಕೋರ್ಟ್ ಮುಂದೆ ಬೆಳಿಗ್ಗೆ 10ಘಂಟೆಗೆ ಹಾಜರಾಗಿ ಉದಾಹರಣೆಯ ದ್ವಾರ ಹೇಳತಕ್ಕದ್ದು. ತಪ್ಪಿದ್ರೆ ಪ್ರತಿವಾದಿಯನ್ನು ಬಿಟ್ಟುಮಾಡಿ ವಾದಿಯ ಗರಜಿಕ್ಕೆ ತೀರ್ಮಾನಿಸಲಾಗುತ್ತದೆ ಎಂಬ ಸಂಗ್ತಿ ಈ ಮೂಲಕ ತಿಳ್ಸಯದೆ.

ಕಾರ್ಕಳ 1-3-39 } **H. K. Gopalkrishna Rau.** B. A. B. L.
ವಾದಿ ಕಡೆ ವಕೀಲ್

WANTED

Organisers in Taluka centres either on salary or commission basis or both. Influential young men need apply. Selected candidates should be prepared to deposit a sum of Rs 100/-. For full particulars apply with an anna stamp to *Box No. 5,*
C/o **NAVAYUGA, UDIPI.**

ಭಾವೀ ಕರ್ಣಾಟಕದ ಜನಸಂಖ್ಯೆ

ಭಾವೀ ಕರ್ಣಾಟಕ ಪ್ರಾಂತದಲ್ಲಿಯ ಪ್ರತಿಯೊಂದು ಜಿಲ್ಲೆಯಲ್ಲಿಯ ಕನ್ನಡ ಮಾತಾಡುವವರ ಮತ್ತು ಬೇರೆ ಭಾಷೆಗಳನ್ನಾಡುವವರ ಜನಸಂಖ್ಯೆ ಮತ್ತು ಕನ್ನಡಿಗರ ಪ್ರಮಾಣವನ್ನು ಈ ಕೆಳಗೆ ಕೊಡಲಾಗಿದೆ.

(ಅಖಿಲ ಕರ್ಣಾಟಕ ಏಕೀಕರಣ ಸಂಘ, ಬೆಳಗಾಂವಿ—ಇವರಿಂದ)

ಹೆಸರು	ಒಟ್ಟು ಜನಸಂ.	ಕನ್ನಡವೂ ಅದರ ಉಪಭಾಷೆಗಳೂ: ಕನ್ನಡ ಮಾತಾಡುವವರ ಸಂಖ್ಯೆ	ತುಳುವರು	ಕೊಡಗರು	ಬಡಗರು	ಕೋಟರು	ಕುರುಬರು	ತೋಡರು	ಒಟ್ಟು ಕನ್ನಡಿಗರು	ಇತರ ಭಾಷೆಗಳು: ಕೊಂಕಣಿ	ತೆಲುಗು	ತಮಿಳು	ಮಲೆಯಾಳ	ಮರಾಠಿ	ನೂರಕ್ಕೆ ಕನ್ನಡಿಗರ ಪ್ರಮಾಣ
ಮುಂಬಯಿ ಕರ್ಣಾಟಕ															
ಬೆಳಗಾವಿ ಜಿಲ್ಲೆ	೧೦೭೬೭೦೧	[illegible]	[illegible]	...	...	...	...	...	[illegible]	[illegible]	[illegible]	[illegible]	[illegible]	[illegible]	[illegible]
ವಿಜಾಪುರ ಜಿಲ್ಲೆ	[illegible]	[illegible]	[illegible]	...	...	...	...	...	[illegible]	[illegible]	[illegible]	[illegible]	[illegible]	[illegible]	[illegible]
ಧಾರವಾಡ ಜಿಲ್ಲೆ	[illegible]	[illegible]	[illegible]	...	...	...	...	...	[illegible]	[illegible]	[illegible]	[illegible]	[illegible]	[illegible]	[illegible]
ಉತ್ತರ ಕನ್ನಡ ಜಿಲ್ಲೆ	[illegible]	[illegible]	[illegible]	...	...	...	...	...	[illegible]	[illegible]	[illegible]	[illegible]	[illegible]	[illegible]	[illegible]
ಸೊಲ್ಲಾಪುರ ತಾಲೂಕು	[illegible]	...	...	...	...	...	...	...	...	...	...	...	...	...	...
ಕೊಡಗು ಪ್ರಾಂತ	[illegible]	[illegible]	[illegible]	[illegible]	...	..	[illegible]	...	[illegible]	[illegible]	[illegible]	[illegible]	[illegible]	[illegible]	[illegible]
ಮದ್ರಾಸು ಕರ್ಣಾಟಕ															
ಬಳ್ಳಾರಿ ಜಿಲ್ಲೆ	[illegible]	[illegible]	...	...	...	...	...	...	[illegible]	[illegible]	[illegible]	[illegible]	[illegible]	[illegible]	[illegible]
ದಕ್ಷಿಣ ಕನ್ನಡ ಜಿಲ್ಲೆ	[illegible]	[illegible]	[illegible]	[illegible]	...	...	...	...	[illegible]	[illegible]	[illegible]	[illegible]	[illegible]	[illegible]	[illegible]
ನೀಲಗಿರಿ ಜಿಲ್ಲೆ	[illegible]	[illegible]	...	[illegible]	[illegible]	[illegible]	...	[illegible]	[illegible]	...	[illegible]	[illegible]	[illegible]	[illegible]	[illegible]
ಕೊಳ್ಳೇಗಾಲ ತಾಲೂಕು ಕೊಯಮುತ್ತೂರು ಜಿಲ್ಲೆ	[illegible]	...	...	...	...	...	...	...	...	...	...	...	...	...	...
ಕೃಷ್ಣಗಿರಿ ತಾಲೂಕು (ಸೇಲಮ್ ಜಿಲ್ಲೆ)	[illegible]	...	...	...	...	...	...	...	...	...	...	...	...	...	...
ಹೊಸೂರ ತಾಲೂಕು ಸೇಲಮ್ ಜಿಲ್ಲೆ	[illegible]	...	...	...	..	...	.	.	..	...	...	...	...	...	...
ಮಡಗಶಿರಾ ತಾಲೂಕು ಅನಂತಪುರ ಜಿಲ್ಲೆ	[illegible]	...	...	...	...	...	..	..	...	...	...	...	...	...	...
ಒಟ್ಟು	[illegible]	...	...	...	...	...	...	...	[illegible]	[illegible]	[illegible]	[illegible]	[illegible]	[illegible]	[illegible]

ಅರವಿಂದ ಜೋಶಿ, ಕಾರ್ಯದರ್ಶಿ.

ಈ ವಾರದ ಫಲಿತಾಂಶವೇನು?

(ತಾ —9—3—39ರಿಂದ 16—3—39ರ ವರೆಗಿನ ರಾಶಿಫಲ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ನ.]

ಈ ವಾರವು ತುಲಾ ರಾಶಿಯವರಿಗೆ ಹೆಚ್ಚಿನ ಉತ್ತಮವಿರುವುದು,

ವೃಷಭ ರಾಶಿಯವರಿಗೂ ಸಾಮಾನ್ಯ ಉತ್ತಮವಾಗಿರುವುದು.

ಮಿಥುನ, ಧನು, ಮಕರ, ಕುಂಭ, ಈ ನಾಲ್ಕು ರಾಶಿಗಳವರಿಗೆ ಮಿಶ್ರಫಲ ಪ್ರದವಿರುವುದು.

ಮೇಷ, ಸಿಂಹ, ಕನ್ಯಾ, ಈ ರಾಶಿಗಳವರಿಗೆ ಸ್ವಲ್ಪ ಕಷ್ಟದಾಯಕವಾಗಿರುವುದು.

ಕರ್ಕಾಟಕ, ವೃಶ್ಚಿಕ, ಮೀನ ಈ ರಾಶಿಗಳವರಿಗೆ ಹೆಚ್ಚಿನ ಹಾನಿಕಾರಕವಾಗಿರುವುದು.

ಮೇಷರಾಶಿ—

ನೀವು ಯಾವ ವಿಷಯದಲ್ಲಿಯೂ ಸ್ವಯಂ ಸಮರ್ಥರಿರುವಿರಿ. ಆದರೂ ನಿಮಗೆ ಈ ವಾರವು ಹಿತಕರವಾಗಲಾರದು. ಕಾರಣವೇನೆಂಬಿರಾ? ಇತ್ತೀಚೆಗೆ ನಿಮ್ಮ ಶರೀರದಲ್ಲಿ ಆಲಸ್ಯವು ವೃದ್ಧಿಯಾಗುತ್ತಾ ಬರುತ್ತಿದ್ದು ಖರ್ಚಿನವಿಷಯದಲ್ಲಿ ನಿಮ್ಮ ಕೈ ಮುಂದಾಗಿರುವುದು. ನಿಮ್ಮ ಉತ್ಪತ್ತಿಯು ಕಡಿಮೆಯಾಗಿರುವುದರಿಂದ ಸಾಲವಾದಿಯಾವರೂ ಖರ್ಚುಮಾಡಲು ನೀವು ಹಿಂಜರಿಯಲಾರಿರಿ. ಸದ್ಯದ ಗ್ರಹಮಾನದಲ್ಲಿ ನೀವು ಎಷ್ಟೆಂದರೂ ವಿವೇಕ ಪೂರ್ಣವಾಗಿವರ್ತಿಸುವಿರಿ. ವೃಥಾ ಕಲಹವಾಗಲಿರುವುದು. ಆದರೆ ನಿಮ್ಮ ಉದ್ಯೋಗದಲ್ಲಿ ನೀವು ಶ್ರಮವಹಿಸ ದುಡಿಯುವಿರಿ. ತಕ್ಕಮಟ್ಟಿನ ಪ್ರತಿಫಲ ದೊರೆಯುವುದು. ವಿಶಕ್ಷೀಯರು ವಿಶೇಷವಾಗಿ ಪೀಡಿಸಿದರೂ ಹಿಡಿದಕಾರ್ಯವನ್ನು ಪೂರೈಸದೆ ಬಿಡಲೊಲ್ಲರಿ. ತಾ. 9, 10 ಮತ್ತು 16 ಈ ದಿನಗಳಲ್ಲಿ ಇಷ್ಟಾರ್ಥವು ಕೈಗೂಡುವುದು.

ವೃಷಭರಾಶಿ—

ನಿಮ್ಮ ಶತ್ರುಪಕ್ಷದವರು ಅನೇಕರೀತಿಯಿಂದ ನಿಮ್ಮನ್ನಿದಿರಿಸಲು ಮುಂದೆಬರಬಹುದು. ಆದರದು ಆನೆಯನ್ನು ನೋಡಿ ನಾಯಿ ಬೊಗಳಿದಂತೆ ವ್ಯರ್ಥ ತಮ್ಮ ದುಷ್ಟಗುಣವನ್ನು ಪ್ರದರ್ಶಿಸಿದಂತಾಗುವದಲ್ಲದೆ ನಿಮಗೇನೂ ಹಾನಿಯಾಗದು. ನಿಮ್ಮ ಅದೃಷ್ಟವು ಬಲವಾಗಿರುವಾಗ ಪರರಿಂದ ಏನು ತಾನೇ ಮಾಡಲು ಸಾಧ್ಯ. ನೀವು ಹಿಡಿದ ಕಾರ್ಯವನ್ನು ನಿರಾಯಾಸವಾಗಿ ನಿಮ್ಮ ಇಷ್ಟದಂತೆಯೇ ಪೂರ್ತಿಗೊಳಿಸುವಿರಿ ಧರ್ಮದಲ್ಲಿ ಹೆಚ್ಚಿನ ಆಸಕ್ತರಾದ ನಿಮಗೆ ಧನ ವಸನಾದಿಗಳೂ ಗೃಹಸುಖವೂ ತೃಪ್ತಿಕರವಾಗಿ ದೊರೆಯುವದು. ಅನೇಕ ಮಿತ್ರರ ಭೇಟಿಯಾಗುವದು. ಶ್ವಕ್ಷೇತದಲ್ಲಿ ತುಸುಕೋಪವು ನಿಮಗೆ ಮುಂದಾಗಿದ್ದರೂ ಅದರಿಂದ ಇಷ್ಟವೇ ಹೊರತು ಅನಿಷ್ಟ ಸಂಭವಿಸದು. ಮನಸ್ಸು ಸದಾ ಶಾಂತವಾಗಿರುವುದು. ತಾ. ೯ರಿಂದ 12ರ ವರೆಗಿನ ದಿನಗಳಲ್ಲಿ ನಿಮ್ಮ ಕಾರ್ಯಗಳು ಅಪ್ರತಿಹತವಾಗಿ ಮುಂದಾಗುವವು.

ಮಿಥುನರಾಶಿ—

ಶುಭಗ್ರಹರೆಲ್ಲರೂ ಶುಭಸ್ಥಾನಗತರಾಗಿದ್ದು ಪಾಪಿಗಳೆಲ್ಲರೂ ಅನಿಷ್ಟಸ್ಥಾನವನ್ನು ಹೊಂದಿರುವುದರಿಂದ ನಿಮಗೆ ಈ ವಾರದಲ್ಲಿ ಇಷ್ಟಾನಿಷ್ಟಕಾರ್ಯಗಳಲ್ಲಿ ವಿಕ್ಷೇಪತರವಾದ ಫಲಾನುಭವವು ಸಿಗಲಿದೆ. ಮನೆಯಲ್ಲಿನ ಜನರಲ್ಲಿ ಪರಸ್ಪರ ಕಲಹದ ಪರಿಣಾಮವಾಗಿ ನಿಮಗೆ ಚಿಂತೆಯು ಅಧಿಕವಾಗುವುದು. ಧನವಿಷಯದಲ್ಲಿ ನಷ್ಟಗಳಾಗುವವು. ಶರೀರದಲ್ಲಿ ಮನಶ್ಶಾಂತಿಗೆ ಭಂಗತರುವ ಒಂದಲ್ಲೊಂದು ರೋಗಗಳು ಇದ್ದೇ ಇರುವವು. ಅಸೂಯೆಯು ಹೆಚ್ಚಿರುವುದರಿಂದ ಜನತೆಯಲ್ಲಿ ಕಲಹವಾಗಲಿರುವುದು. ಆದರೂ ನೀವು ಒಳ್ಳೆ ಜಾಣರಾದುದರಿಂದ ಯಾರ ಬಲೆಗೂ ಬೀಳದೆ ನಿಮ್ಮ ಕಾರ್ಯಗಳನ್ನು ಕ್ರಮವಾಗಿ ನಿರ್ವಹಿಸುವಿರಿ. ವಿದ್ಯಾಭಿಲಾಷಿಗಳಿಗೆ ಈ ವಾರವು ಉತ್ತಮವಾಗಿದೆ. ವ್ಯಯಕ್ಕಿಂತ ಆಯವು ಅಧಿಕವಾಗಿರುವುದರಿಂದ ನಿಮ್ಮ ಸಂಪದ್ಭಾಗಗಳು ಅನ್ಯಥಾ ಆಗಲಾರವು.

ಕರ್ಕಾಟಕರಾಶಿ—

ಗ್ರಹಚಾರ ಕೆಟ್ಟವನು ಎಲ್ಲಿ ಹೋದರೂ ಅವನಿಗೆ ಆಪತ್ತುಗಳು ಬಂದೇ ತೀರುವವು. ಹಿಂದೆ ಪರೀಕ್ಷಿದ್ರಾಜನು ಸರ್ಪ ಭಯದ ಸಲುವಾಗಿ ಸಮುದ್ರಮಧ್ಯದಲ್ಲಿ ವಾಸಿಸಿಕೊಂಡಿದ್ದರೂ ಅವನಿಗೆ ರೂಪಾಂತರ ಹೊಂದಿದ ಸರ್ಪದಿಂದ ಮರಣ ಸಂಭವಿಸಿದಂತೆ ಭವಿತವ್ಯವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲವು. ಅಂತೆಯೇ ನಿಮಗೂ ಕೊಡಗ್ರಹಚಾರದ ಬಹಳ ಕಠಿಣ ಸ್ಥಿತಿಗೆ ಬಂದಿರುವುದು. ಶರೀರ ಸುಖವು ಅನಾರೋಗ್ಯದಿಂದಾಗಿ ನಾಶಹೊಂದುವುದು. ಸ್ತ್ರೀಜನವಿಷಯಕವಾಗಿ ನಿಮ್ಮ ಮನಸ್ಸಿಗೆ ಶಾಂತಿದೊರೆಯದು. ಸ್ತ್ರೀಯು ವಿರೋಧವಾಗಿಯೇ ವರ್ತಿಸುವಳು. ಅರ್ಥಿಕ ಮುಗ್ಗಟ್ಟಿನಿಂದಾಗಿ ನಿಮ್ಮ ಕಾರ್ಯಗಳು ಅರ್ಧವರ್ಧವಾಗಿ ಉಳಿಯುವವು. ವಿದ್ಯಾಭಿಲಾಷಿಜನರಿಗೆ ಈ ವಾರವು ಬಹಳಹಾನಿಕರವಾಗಿರುವುದು. ತಾ. 13 ರಿಂದ 16ರ ವರೆಗಿನ ದಿವಸಗಳಲ್ಲಿ ವಾತಾವರಣವು ಸ್ವಲ್ಪ ಅನುಕೂಲವಾಗುವುದರಿಂದ ಶತ್ರುಕಲಹ ನಿವೃತ್ತಿ, ಧನಲಾಭ, ಸುಖಗಳು ಸಿಗಲಿವೆ.

ಸಿಂಹರಾಶಿ—

ಈ ವಾರವು ನಿಮಗೆ ಹೆಚ್ಚಿನ ಭಾಗಗಳಲ್ಲಿ ಹಾನಿಕರವಾಗಿರುವುದು. ಇಷ್ಟಕ್ಕಿಂತಲೂ ದ್ವಿಗುಣಿತವಾಗಿ ಅನಿಷ್ಟಗಳೇ ಸಂಭವಿಸಲಿವೆ. ಎಲ್ಲೆಡೆಗಳಲ್ಲೂ ನಿಮಗೆ ವಿರೋಧಿಗಳೇ ಹೆಚ್ಚುವರು. ಅನೇಕ ಕಾರ್ಯಗಳಲ್ಲಿ ಇವರ ಪೀಡೆಯಿಂದ ಪರಾಜಯವುಂಟಾಗಲಿದೆ ಗೃಹದಲ್ಲಿನ ಜನರಿಂದಲೇ ವಿಶೇಷವಾಗಿ ಶೋಕಕ್ಕೆ ಕಾರಣಗಳು ಹುಟ್ಟುವವು. ಪುತ್ರಮಿತ್ರಕಳತ್ರರಿಂದ ವಿಯೋಗವುಂಟಾಗುವುದು. ಪರ್ಯಟನದ ಸಲುವಾಗಿ ವ್ಯರ್ಥ ಧನವ್ಯಯಿಸುವಿರಿ. ಆದರೂ ನೀವು ಸೂಕ್ಷ್ಮ ವಿಚಾರಿಗಳಾಗಿರುವುದರಿಂದಲೂ ಒಳ್ಳೇ ಚಾಲುರಿರುವುದರಿಂದಲೂ ನಿಮ್ಮ ಇಷ್ಟಾರ್ಥವನ್ನು ಕೈಗೂಡಿಸಲು ಬೇಕಾದ ಧನಜನಬೆಂಬಲವನ್ನು ಸಂಗ್ರಹಿಸುವಿರಿ. ಜ್ಞಾನಾರ್ಜನೆಯವರಿಗೆ ಈ ವಾರವು ಹೆಚ್ಚಿನಂಶ ಉತ್ತಮವಾಗಿರುವುದು. ತಾ. 9-10-ಮತ್ತು 16 ಈ ದಿನಗಳು ಶತ್ರುನಿಗ್ರಹಕ್ಕೂ ಕಾರ್ಯಸಿದ್ಧಿಗೂ ಮತ್ತು ಧನಾರ್ಜನೆಗೂ ಉತ್ತಮಗಳಾಗಿವೆ.

ಕನ್ಯಾರಾಶಿ—

ಹಲವಾರು ಚಿಂತೆಗಳು ಪರಿಹಾರವಾಗಿ ಮನಸ್ಸಿಗೆ ಸ್ವಲ್ಪಮಟ್ಟಿನ ಸಮಾಧಾನವುಂಟಾಗುವುದು. ಶತ್ರುಗಳು ತಾವಾಗಿಯೇ ಮಿತ್ರರಾಗಬಯಸುವರು. ಸಾಂಸಾರಿಕ ಭಾಗಗಳು ಉತ್ತಮರೀತಿಯಲ್ಲಿರುವವು. ಬಂಧುಮಿತ್ರರಲ್ಲಿನ ಮನೋರೋಗಗಳು ನಿವೃತ್ತಿಯಾಗಿ ಪರಸ್ಪರ ಐಕ್ಯದಿಂದಿರುವಿರಿ ಆದರೂ ನಿಮ್ಮ ಆರೋಗ್ಯವು ಪೂರ್ಣ ನೆಟ್ಟಗಾಗಲಾರದು. ಕೆಲವೊಮ್ಮೆ ವ್ಯವಹಾರ ವಿಷಯದಲ್ಲಿ ಜನರಲ್ಲಿ ಕಲಹವಾಗುವುದು. "ದುಷ್ಟಂ ದೂರೇಣ ವರ್ಜಯೇತ್" ಎಂಬಂತೆ ದುರ್ಜನರನ್ನು ಬಹಿರದಲ್ಲಿಯೇ ತ್ಯಜಿಸಿರಿ. ಇದರಿಂದ ನಿಮಗೆ ಮುಂದೆ ಕಲ್ಯಾಣವಹುದು. ಕಳತ್ರಳ ಆರೋಗ್ಯವು ಸ್ವಲ್ಪ ಕೆಡುವುದು. ಪ್ರಯಾಣನಿಮಿತ್ತವಾಗಿ ಧನವೂ ವ್ಯಯವಾಗುವುದು. ತಾ. 11-12-ಹೊರತು ಮಿಕ್ಕುಳಿದ ದಿನಗಳು ವಿಶೇಷ ಹಾನಿಕಾರಕಗಳೇ ಆಗಿರುವುದರಿಂದ ಧನಮಾನಗಳಿಗೆ ಹಾನಿಯೂ, ಕಾರ್ಯಗಳಿಗೆ ವಿಘ್ನಗಳೂ ಉದರರೋಗವೇ ಮೊದಲಾದವುಗಳಿಂದ ಅನಾರೋಗ್ಯವೂ ಹೆಚ್ಚುವುದು.

ತುಲಾರಾಶಿ—

ಈ ವಾರವು ನಿಮಗೆ ಸರ್ವಾತ್ಮನಾ ಉತ್ತಮ ಫಲದಾಯಕವಾಗಿರುವುದು. "ಆಲಸ್ಯಮಮೃತಂ ವಿಷಂ" ಉದಾಸೀನ (ಮೈಗಳ್ಳ) ಸ್ವಭಾವದವರಿಗೆ ಅಮೃತವೂ ಕೂಡ ವಿಷವಾಗಿ ಪರಿಣಮಿಸುವುದು. ಹಲವು ಗ್ರಹರು ನಿಮ್ಮ ಉನ್ನತಿಯಲ್ಲಿಯೂ ಇಷ್ಟವನ್ನು ಪೂರ್ತಿಗೊಳಿಸುವುದರಲ್ಲಿಯೂ ತಮ್ಮಿಂದ ಸಾಧ್ಯವಾದಷ್ಟು ಸಹಾಯ ಮಾಡಲು ಮುಂದಾಗಿ ಬಂದಿರುವರು. ಈ ಕಾಲದಲ್ಲಿ ಯಾವ ಕಾರ್ಯವನ್ನೇ ಆಗಲೀ ನಾಳೆ ಮಾಡೋಣ ಎಂದು ಮುಂದರಿಸದೆ "ಶುಭಸ್ಯ ಶೀಘ್ರಂ" ಎಂದಂತೆ ಶುಭಕಾರ್ಯವನ್ನು ಶೀಘ್ರದಲ್ಲೇ ಮಾಡಿರಿ. ನಿಮ್ಮ ಪ್ರಯತ್ನವು ಯಶಕ್ಕೆ ತಕ್ಕುದು ಮಾತ್ರ. ಉದ್ಯೋಗಾಪೇಕ್ಷಿಗಳೂ ವಿದ್ಯಾಭಿಲಾಷಿಗಳೂ ತಮ್ಮ ತಮ್ಮ ಕಾರ್ಯವನ್ನು ಬೇಗನೆ ನಿರ್ವಹಿಸುವುದೊಳ್ಳಿತು. ಯಾವ ವಿಷಯದಲ್ಲೂ ಚಿಂತೆಯಿಂಬುದು ನಿಮ್ಮ ಸಮೀಪ ಬಾರದು. ನಿಮ್ಮ ನಿಮ್ಮ ಯೋಗ್ಯತೆಯನ್ನನುಸರಿಸಿಯೇ ಕಾರ್ಯಪ್ರವೃತ್ತರಾಗಿರಿ. ತಾ. 11-12-ಮತ್ತು 16 ಈ ದಿನಗಳ ಮಟ್ಟಿಗೆ ಆಪ್ತಜನವಿರೋಧ ಧನವ್ಯಯಗಳು ಕಂಡುಬರುವವು.

ವೃಶ್ಚಿಕರಾಶಿ—

ಸದ್ಯದ ಗ್ರಹಸ್ಥಿತಿಯಲ್ಲಿ ನಿಮಗೆ ಬಹಳ ಹಾನಿಗಳು ಕಂಡುಬರುತ್ತಿವೆ. ಈ ವಾರದಲ್ಲಿ ನಿಮ್ಮ ಹಿತಚಿಂತಕರೆಂದರೆ ನೀವೇ ಹೊರತು ಅನ್ಯರಾರೂ ಸಿಗಲಾರರು. ನಿಮ್ಮ ಹೆಂಡತಿಮಕ್ಕಳೂ ನಿಮಗೆ ಸಂಪೂರ್ಣ ವಿರೋಧವಾಗಿ ವರ್ತಿಸುವರು. ಬಂಧುಜನರೋ ಇದಿರಿನಿಂದ ಮುಖಕ್ಕೆ ತಕ್ಕಂತೆ ಮಾತನಾಡಿ ಹಿಂಗಡೆಯಿಂದ ಸರ್ವನಾಶಮಾಡಲೂ ಸಿದ್ಧರಾಗಿ ಉದ್ಯುಕ್ತರಾಗಿಯೇ ಇದ್ದಾರೆ. ಸೇವಕಜನರೋ ಆದಾಗಲೇ ನಿಮ್ಮಲ್ಲಿರುವ ಸ್ವಾಮಿಭಾವವನ್ನು ತ್ಯಜಿಸಿ ತಮ್ಮ ಮಾರ್ಗನಿರೀಕ್ಷಣೆಯಲ್ಲಿ ತತ್ಪರರಾಗಿರುವರು. ಶರೀರದಲ್ಲಿ ಉಷ್ಣಪಿತ್ಥ ಸಂಬಂಧಗಳಾದ ರೋಗವಿಶೇಷಗಳು ಅಧಿಕವಾಗುವವು. ರಾಜಕೀಯ ಅಧಿಕಾರಿಗಳಿಂದ ವಿಶೇಷ ಹಾನಿಗಳು ಸಂಭವಿಸಲಿವೆ. ಖರ್ಚಿಗೆ ಕಾಸಿಲ್ಲದೆ ಮಾನವನ್ನು ಕಳಕೊಳ್ಳುವ ಪ್ರಸಂಗ ಬರುತ್ತದೆ. ಯಾವ ಭಾಗದಲ್ಲೂ ನಿಮಗೆ ಹಿತವಿಲ್ಲವೆಂದರೆ ತಪ್ಪಾಗದು. ತಾ. 9-10 ಮತ್ತು 13-14-15 ಈ ದಿನಗಳಲ್ಲಿ ವಿಶೇಷ ಹಾನಿಗಳು ಸಂಭವಿಸುವ ಚಿಹ್ನೆಗಳು ತೋರುತ್ತವೆ.

ಧನುರಾಶಿ—

ಶುಭಾಶುಭ ಗ್ರಹರು ಸಮಬಲರಾಗಿರುವುದರಿಂದ ನಿಮ್ಮ ಭಾಗಕ್ಕೆ ಈ ವಾರದಲ್ಲಿ ಯಾವ ತರದ ಹಾನಿವೃದ್ಧಿಗಳೂ ಆಗಲಾರವು. ಮನಸ್ಸನ್ನು ಬಿಗಿಹಿಡಿಯಿರಿ. ಚಿತ್ತಚಾಂಚಲ್ಯವು ಮನುಷ್ಯನ ಪ್ರಗತಿಗೆ ದೊಡ್ಡ ಕಂಟಕವಾಗಿರುವುದು. ಶತ್ರುಗಳ ಉಪಟಳದಿಂದ ನಿಮ್ಮ ಮನಸ್ಸಿಗೆ ಸುಖದೊರೆಯದು ಬಹಳ ಕಷ್ಟ. ಮೈಕೈಗಳಲ್ಲಿ ನೋವು ಗಾಯ ವಗೈರೆಗಳೂ ಆಗಲಿರುವವು. ನೀವು ನಿಮ್ಮ ಉದ್ಯೋಗದಲ್ಲಿ ಶ್ರಮವಹಿಸಿರುವುದರಿಂದ ನ್ಯಾಯವಾದ ಲಾಭ ಪಡೆಯುವಿರಿ. ಅದರಲ್ಲೂ ನೀಚವೃತ್ತಿಯವರಿಗೆ ಹೆಚ್ಚಿನ ಧನಲಾಭವಾಗುವುದು ಸಂಸಾರಕ್ಕೆ ಬೇಕಾದ ದವಸಧಾನ್ಯ ಪಶುಭೃತ್ಯರು ಇವುಗಳಲ್ಲೇನೂ ಕೊರತೆಯಿಲ್ಲ. ಕೆಲವೊಮ್ಮೆ ನಿಮ್ಮ ಅವಿವೇಕದಿಂದಾಗಿ ನಷ್ಟಕ್ಕೆ ಗುರಿಯಾಗುವಿರಿ. ತಾ 11-17 ಮತ್ತು 16 ಈ ದಿನಗಳಲ್ಲಿ, ಧನ, ಮಾನಗಳಿಗೆ ಹಾನಿಯೂ ಕಾರ್ಯಕ್ಕೆ ವಿಘ್ನಗಳೂ ಸಂಭವಿಸಲಿವೆ ಜಾಗ್ರತೆ.

ಮಕರರಾಶಿ—

ಹೋದದಿನಗಳು ಎಷ್ಟೋ ಒಳ್ಳೇದು ಇನ್ನು ಮುಂದೆ ಎಂತಹ ಸಮಯವು ಬರುವುದೋ ಎಂದು ಹೇಳಲಾಗದು. ಸದ್ಯದಲ್ಲಿ ನಿಮಗೆ ಹೆಚ್ಚಿನ ಹಾನಿಗಳು ಕಂಡುಬರುವುದಿಲ್ಲವು. 'ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ' ಎಂಬಂತೆ ಮನೋವಾಕ್ಕಾಯಗಳು ಮಹಾತ್ಮರಿಗೆ ಅಂದರೆ ಯೋಗ್ಯಜನರಿಗೆ ಒಂದೇ ಪ್ರಕಾರವಾಗಿರುವವು ದುರ್ಜನರಿಗಾದರೋ ಮನಸ್ಸಿನಲ್ಲೊಂದು ಬಾಯಲ್ಲೊಂದು ಕಾರ್ಯದಲ್ಲೊಂದು ಆಗಿರುತ್ತದೆ. ಆದಕಾರಣ ನೀವೂ ತ್ರಿಕರಣಗಳಲ್ಲಿ ಒಂದೇ ತೆರನಾಗಿ ವರ್ತಿಸುವಂತೆ ಪ್ರಯತ್ನಿಸಿರಿ. ಒಳ್ಳೆಯದಾಗಲಿದೆ. ಶತ್ರುಗಳ ಹೆದರಿಕೆಯು ನಿಮಗೆ ಉಂಟಾಗದು. ಕಾರ್ಯದಲ್ಲಿ ಯೋಗ್ಯಪ್ರತಿಫಲಪಡೆಯುವಿರಿ. ಅಸ್ಥಿರವಾದ ಮನಸ್ಸನ್ನು ಸ್ಥಿರಮಾಡಿರಿ. ದೇಹಗ್ರಹವ್ಯಾಧಿಯ ಸಲುವಾಗಿಯೂ ಕೆಲವೊಂದು ಅನರ್ಥಗಳ ಪರಿಹಾರಕ್ಕಾಗಿಯೂ ಧನವ್ಯಯವಾಗಲಿದೆ ತಾ. 13,14 15 ಈ ದಿನಗಳಲ್ಲಿ ಆರೋಗ್ಯವಿಚಾರದಲ್ಲಿ ಮತ್ತು ಧನವಿಷಯದಲ್ಲಿ ಚೆನ್ನಾಗಿ ದೃಷ್ಟಿಯಿಡಿರಿ.

ಕುಂಭರಾಶಿ—

ಕಷ್ಟದ ದಿನಗಳು ಕಳೆಯುತ್ತಾ ಬಂದವು. ಈಗೀಗ ನಿಮಗೆ ಜೀವನದಲ್ಲಿ ಒಂದು ತರದ ಆದರ ಭಾವವು ತೋರುತ್ತಿದೆ. ನಿಮ್ಮ ಪರಿಶ್ರಮವು ಫಲಕಾರಿಯಾಗಿ ತನ್ಮೂಲಕ ನಿಮ್ಮ ಆರ್ಥಿಕಪರಿಸ್ಥಿತಿಯು ಸುಧಾರಣೆಯಾಗುವುದು. ಆರಂಭಿಸಿದ ಕಾರ್ಯಗಳಲ್ಲಿ ಯಶಃಪ್ರಾಪ್ತಿಯಾಗುವುದು ಸಮಾಜದಲ್ಲಿ ಮಾನ್ಯರಾಗುವಿರಿ ನಿಮ್ಮ ಅನುದಿನದ ಖರ್ಚುಗಳ ವಿಷಯವಾಗಿ ನೀವು ಯೋಚಿಸಬೇಕಾಗಿಲ್ಲ. ಆದರೂ ನಿಮ್ಮಲ್ಲಿ ವಿಚಾರಶಕ್ತಿಯು ಸಾಕಷ್ಟು ಇಲ್ಲದಿರೋಣದರಿಂದ ಕೆಲವು ಕಾರ್ಯಗಳಲ್ಲಿ ಸಿಗುವ ಫಲಕ್ಕಿಂತಲೂ ಹೆಚ್ಚಾಗಿ ಖರ್ಚು ಆಗುವುದು ಶರೀರದ ಆರೋಗ್ಯವು ಸಂಪೂರ್ಣ ಚೆನ್ನಾಗಿರದು. ತಾ. 11ರಿಂದ 15ರ ವರೆಗಿನ ದಿನಗಳು ಉತ್ತಮವಿರುವುದರಿಂದ ಆದಿನಗಳಲ್ಲಿ ನಿಮ್ಮ ಮನೋರಥವು ಕೈಸೇರುವುದು. ಅನೇಕಮಿತ್ರರ ಸಮಾಗಮವಾಗುವುದು. ಧನಲಾಭವೂ ಸುಖವೂ ಸಿಗಲಿರುವುದು.

ಮೀನರಾಶಿ—

ಈ ಜೀವನದಲ್ಲೇ ನಿಮಗೆ ಬೇಸರ ಬಂದೀತು ಆದರೆ ಮಾಡುವುದೇನು, ಮಾಡಿದುಣ್ಣೋ ಮಾರಾಯಾ ಎಂಬಂತೆ ಮಾಡಿದ ಕರ್ಮದ ಫಲವನ್ನು ಅನುಭವಿಸಿಯೇ ತೀರಬೇಕು. ಇನ್ನೂ ಕೆಲವು ದಿನ ನಿಮ್ಮ ಅವಸ್ಥೆಯು ಇದೇ ರೀತಿಯಲ್ಲಿರುವುದು. ಎಷ್ಟೇ ಕಷ್ಟಪಟ್ಟು ದುಡಿದರೂ ಅದು ನಿಮ್ಮ ಖರ್ಚಿಗೆ ಸಮುದ್ರಕ್ಕೆ ಹಿಂಗು ಕದಡಿದಂತೆ ಯಾವಭಾಗಕ್ಕೂ ಸಾಲದು. ಹಣದ ಬಿಕ್ಕಟ್ಟು ನಿಮ್ಮಲ್ಲಿ ಹುಟ್ಟಿಹೋದುದೆಂಬಂತೆ ಕಂಡುಬರುವುದು. ಜನರಲ್ಲಿ ತಿರಸ್ಕಾರ ಬುದ್ಧಿಯು ಹೆಚ್ಚುವುದು. ಮನೋರೋಗಗಳು ಎಳ್ಳಷ್ಟು ಕಡಿಮೆಯಾಗವು. ಸಿಂತಲ್ಲಿ ನಿಲ್ಲಲು ನಿಮ್ಮ ಮನಸ್ಸು ಕೇಳದು. ಅಂತೂ ಯಾವಭಾಗದಲ್ಲಿ ವಿಚಾರಮಾಡಿದರೂ ನಿಮಗೆ ಅನಿಷ್ಟಗಳೇ ಕಂಡುಬರುತ್ತವೆ. ಇಂಥಾ ಆಪತ್ತಿನಿಂದ ಪಾರಾಗಬೇಕಾದರೆ ದೈವದೊಲುಮೆಯೇ ಮುಖ್ಯವಾಗಿರುವುದರಿಂದ ದೇವತಾಧ್ಯಾನಾಸಕ್ತರಿಗೆ ಈ ವಾರದ ಅಂತ್ಯಾರ್ಧವು ಸ್ವಲ್ಪ ಸುಖಕಾರಿಯಾದೀತು.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

ಪ್ರಾಮುಖ್ಯ ಪ್ರಕಟಣೆ
ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಅಪ್ಪರ ಜರಿಗಳ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ
ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:— ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:— ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:— ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುವು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE
MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager. ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!
K. R. K. SHET
Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ## ವಜ್ರಗಳು **BEST BRILLIANCY !!**

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನ್ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲುಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಳಲುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು, ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2—8—0.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

[ಸ್ಥಾಪನೆ] # ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, MANGALORE

ನವೀನ ಪುಸ್ತಕಗಳು

೧ **ಕೆರಿನೀರು**—ರಮ್ಯ ಭೀಷಣ ಕಾದಂಬರಿ ೪೦೦ ಪುಟ ನುಣುಪುಕಾಗದ ಬೆಲೆ ೩ ರೂಪಾಯಿ.
೨. **ಪನ್ನೆ**—ಐತಿಹಾಸಿಕ ನಾಟಕ ಪುಟ ೮೦ ನುಣುಪುಕಾಗದ ಬೆಲೆ ೬ ಆಣೆ.
೩. **ಬಲಿದಾನ**—ಬುದ್ಧ ಕಾಲೀನ ಐತಿಹಾಸಿಕ ಕಾದಂಬರಿ ೨೨೬ ಪುಟ ಬೆಲೆ ರೂ. ೧-೪-೦.
೪. **ಎಚ್ಚಮ್ಮನಾಯಕ**—ವಿಜಯನಗರಕ್ಕೆ ಸಂಬಧಿಸಿದ ಕಥಾನಕವು ೧೦೮ ಪುಟ ಬೆಲೆ ೮ ಆಣೆ
೫. **ಅನಾಥನಂದಿನಿ**—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ ೩೨೦ ಪುಟ ಬೆಲೆ ರೂ. ೧-೮-೦

ವಿಳಾಸ:—ಶ್ರೀ. **ಶೇಷಾಚಲ ಪ್ರೆಸ್,** ಪ್ರೊ ಆನಂದವನ (ಹಾವೇರಿ) ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್	**ಭೈರವ ಮಾತ್ರೆಗಳು**
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಶೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ. **[ಗ್ಯಾರಂಟಿ ಕೆಲಸ!**

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವುದು.
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,
ಸೋಡೆ ಮಠದ ಲೇನು - - - ಉಡುಪಿ, ದ. ಕ.

ಅತ್ಯಲ್ಪ ಖರ್ಚು | ಪುಣ್ಯಾರ್ಜನೆಗೆ | ಅತ್ಯುತ್ತಮ ಸಮಯ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. — 2ನೇ ಮುಖಿ

ಕೊಡಿಯಾಲಬೈಲು — 3ನೇ ಮುಖಿ

ತಾರೀಕು 5-3-1939 ಮತ್ತು 6-3-39 **ಮುಖಿಜಾತ್ರೆ** ತಾರೀಕು 13-3-1939 ಮತ್ತು 14-3-39

ಪುಣ್ಯಪ್ರದಾಯಿನಿ ನೇತ್ರಾವತಿ ಮತ್ತು ಕುಮಾರಧಾರಿ ನದಿಗಳ ಸಂಗಮಸ್ಥಾನವಾದ ಉಪ್ಪಿನಂಗಡಿಯಲ್ಲಿ ನಡಿಯುವ ಮುಖಿಜಾತ್ರೆ ಸಮಯದಲ್ಲಿ ಉಪ್ಪಿನಂಗಡಿಗೆ ಅತ್ಯಲ್ಪ ಖರ್ಚಿನಲ್ಲಿ ಹೋಗಿ ಸಂಗಮಸ್ನಾನಮಾಡಿ ಪುಣ್ಯಾರ್ಜನೆಮಾಡಲಿಕ್ಕನುಕೂಲ ಸಮಯ.

ಇಂತಹ ಸುಸಂಧಿಯನ್ನು ಕಳಕೊಳ್ಳದಿರಿ.

ಪ್ರಯಾಣಿಕರ ಪ್ರಯಾಣ ಸೌಕರ್ಯಗಳ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

Supply Agency Limited.

(BANKERS)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months	4%	p. a.
7 to 11 „	5%	„
12 to 18 „	6%	„

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

General Supplies Limited.

UDIPI

PROPRIETORS,

Sri Bharata Vastu Mandira,
Thulunad Stationery Mart.
Manipal Power Press,
Thulunad Press,
Antaranga

APPRENTICES WILL BE ENTERTAINED TO WORK AT OUR
'Manipal Cottage Papers'
(The Process of hand made paper Manufacturing is taught here)
WILLING CANDIDATES MAY APPLY TO: MANAGING DIRECTOR.

ತುಳುನಾಡ್ ತಿಲಕ ಪಂಚಾಂಗ

ಬೆಲೆ 0—1—0

ಮಾರಾಟಕ್ಕೆ ತಯಾರಾಗಿದೆ.

ವ್ಯಾಪಾರಿಗಳಿಗೆ ಧಾರಾಳ ಕಮಿಶನ್

ಬೇಕಾದವರು ತರಿಸಿಕೊಳ್ಳಬಹುದು.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.



ರಾಷ್ಟ್ರಪತಿಗಳು

ಬಲು ಸುಲಭ ದರದಲ್ಲಿ

- ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!
- ನಾವು ನಮ್ಮನ್ನೇ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀನಿವಾಸ ಹಿಂದೂ ಹೋಟೆಲ್

(ಸ್ಥಾಪನೆ 1926)

ವಿಠಲ್‌ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATEL ROAD,
GIRGAUM - - - BOMBAY

ಶುದ್ಧ ಹಾಗೂ ಕೆನೆ ತುಂಬಿದ ಹಾಲು ಬೇಕಾದರೆ ನಮ್ಮ ಹಾಲು ಮಾರಾಟದ ದುಖಾನನ್ನು ಸಂದರ್ಶಿಸಿರಿ.

ಮೊಹರು ಮಾಡಲ್ಪಟ್ಟ ಬಾಟ್ಲಿಗಳಲ್ಲಿ ನಿಮ್ಮ ಮನೆಬಾಗಿಲಿಗೆ ಕಳುಹಿಸಲ್ಪಡುವುದೀ ಹಾಲು.

ಅಂಗಡಿಯು ಇಡೀ ಹಗಲು ಮತ್ತು ರಾತ್ರಿ 11 ಗಂಟೆ ವರೆಗೆ ತೆರೆದಿರುವುದು.

ಶುದ್ಧ ಕೆನೆ ಹಾಲು ಗ್ಲಾಸಿಗೆ 0—1—3 ದರದಲ್ಲಿ ಮಾರಲ್ಪಡುವುದು.

ಹೆಚ್ಚಿನ ಮಾಹಿತಿಗೆ ಬರೆಯಿರಿ—

ಬೊಂಬೆ ಮಿಲ್ಕ್ ಹೌಸ್

ಕೇರಿ ಹೌಸ್, ಕವಾಸ್ಜಿ ಪಟೇಲ್ ಸ್ಟ್ರೀಟ್,
ಫೋರ್ಟ್ . . . . ಬೊಂಬಾಯಿ.

THE BOMBAY MILK HOUSE

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಕಾಲಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಶೈಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE **Vijaya Bank,** LTD

HEAD OFFICE: **MANGALORE**

BRANCHES: **Udipi, Coondapoor, Kaup & Karkal.**

Fixed deposits are now received at all the offices of the Bank at the following terms:—

3 Months Fixed Deposits at 3 p. c. per annum.
6 Months / 9 months } Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE

PANGAL NAYAK BANK

LIMITED.

Estd.] H. O. UDIPI. [1920

BRANCHES

MANGALORE, KATAPADI, and KANHANGAD.

Deposits are accepted at all the Offices of the Bank on the following terms

One year Fixed Deposits at 3½ p. c. per annum.
Two years' Fixed Deposits at 4 p. c per annum.
Savings Bank Deposits . . 3 p. c. per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.

ಬೇಕಾಗಿದ್ದಾರೆ

ಸೆಕೆಂಡರಿ ಗ್ರೇಡ್ ಟ್ರೈನ್ ಆದ ಉಪಾಧ್ಯಾಯರೊಬ್ಬರೂ, ಹಯರ್ ಗ್ರೇಡ್ ಟ್ರೈನ್ ಆಗಿದ್ದು ಹೊಲಿಗೆ ಕೆಲಸದಲ್ಲಿ ನಿಪುಣೆಯಾದ ಉಪಾಧ್ಯಾಯಿನಿಯೊಬ್ಬಳೂ ಬೇಕಾಗಿದ್ದಾರೆ. ಅರ್ಜಿಗಳನ್ನು ಕೆಳಗಿನ ವಿಳಾಸಕ್ಕೆ ಕೂಡಲೇ ಕಳಿಸತಕ್ಕದ್ದು.

MANAGER,
St. Joseph's Higher Ele. School.
MERMAJAL POST.
(Mangalore.)

—ಕೂದಲು ರಂಗು ತ್ಯಜಿಸಿರಿ—

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬೆಳೆದು ಕಪ್ಪಾಗುವುದು, ನರೆತ ಕೂದಲು ಪೂರ್ಣ ಕಪ್ಪಾಗಿ ಬಿಳಿರಂಗು ನಾಶಹೊಂದುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿರುವುದೇ ನಮ್ಮ ತೈಲದ ಯೋಗ್ಯತೆಯನ್ನು ತೋರುವುದು. ಅಪ್ರಯೋಜನಕಾರಿಯೆಂದು ರುಜುಪಡಿಸಬಲ್ಲವರಿಗೆ ಕೊಟ್ಟ ಹಣ ವಾಪಾಸು ಕೊಡುವ ಶರ್ತವಿದೆ. ಅಲ್ಪಸ್ವಲ್ಪ ನರೆತ ಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಶಾಲುವಾಲಿಗೂ ವಿಕ್ರಯಿಸುವುದಾದರೆ ರೂ. 7 ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Hazra & Co,
P. O. Behar Nersery (Darbhanga

ESTD 1921
FOUNDER
Sri A B SHETTY, M L A
Parliamentary Secretary Govt of Madras
ಸಂಸ್ಥಾಪಕರ,
ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ

ಸಂಪಾದಕ
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೧೬-೩-೧೯೩೯ | Vol. XVIII
ಸಂಚಿಕೆ ೨೮ | Udipi, Thursday 16—3—1939 | No. 28

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ ೧—೧೨—೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ವಿದೇಶವಿಚಾರ

ಹಿಟ್ಲರನ ಮಿಶನ್ ಕೂಟ— ಆಫ್ರಿಕಕ್ಕೆ

ಆಫ್ರಿಕದಲ್ಲಿ ಹಿಂದೆ ಜರ್ಮನಿಯದಾಗಿದ್ದ ವಸಾಹತುಗಳ ಇಂದಿನ ಸ್ಥಿತಿಗತಿಗಳನ್ನು ನೇರಾಗಿ ತಿಳಿದುಕೊಂಡು ಪರ್ಯಾಲೋಚಿಸುವುದಕ್ಕಾಗಿ ಒಂದು ಮಿಶನ್ ಕೂಟವನ್ನು ಆಫ್ರಿಕಕ್ಕೆ ಕಳುಹಿಸಲಿಕ್ಕಿರುವನಂತೆ ವಸಾಹತುಗಳ ಖಾತೆಯ ನಾಜಿ ಅಧಿಕಾರಿಯೊಬ್ಬನು ಈ ವಿಚಾರಣೆ ಮಂಡಳಿಯ ಮುಖಂಡನಾಗಿದ್ದು ಲಿಬಿಯಾ ಅಥವಾ ಎಬಿಸಿನಿಯಾವನ್ನು ತಮ್ಮ ಕೇಂ-

ಹಿಟ್ಲರ್

-ದ್ರ ವಸತಿಯಾಗಿ ಮಾಡಿಕೊಂಡು ಅಲ್ಲಿಯ ಇಟೆಲಿಯಾನ ಅಧಿಕಾರಿಗಳ ಸಹಕಾರದಿಂದ ಕಾರ್ಯನಿರ್ವಹಿಸುವ ಏರ್ಪಾಡೂ ಆಗಿದೆಯಂತೆ. ಜರ್ಮನಿಯ ಸರ್ವಸೇನಾಪತಿ ಜನರಲ್ ಗೋರಿಂಗ್‌ರು ಸದ್ಯದಲ್ಲೇ ಇಟಲಿಯನ್ನು ಸಂದರ್ಶಿಸಿದಾಗ ಈ ವಿಷಯದ ಪೂರ್ವಸಿದ್ಧತೆಗಳು ವ್ಯವಸ್ಥಿತವಾಗುವವು.

ಪೆಲೆಸ್ತಾಯಿನ್ ಸಮಸ್ಯೆ— ಲಂಡನಿನಲ್ಲಿ

ಕಳೆದ ಸುಮಾರು ಒಂದು ತಿಂಗಳಿಂದ ಬ್ರಿಟಿಷ್ ಮುತ್ಸದ್ದಿಗಳು ಅರಬ್ ಮತ್ತು ಯೆಹೂದಿ ಪ್ರತಿನಿಧಿಗಳೊಡನೆ ಸಂಧಿ ಪ್ರಸ್ತಾಪದ ಮಾತುಕತೆ ನಡಯಿಸಿ ಉಭಯ ಪಕ್ಷಗಳೂ ಒಪ್ಪಲಾಗುವಂತಹ ನೆಲೆಗೆ ಬಂದು ಮುಟ್ಟಿದ್ದಾರಂತೆ. ಅದು ಅಂಗೀಕೃತವಾದೀತೆಂದು ನಿರೀಕ್ಷೆಯಿದೆ.

ಜರುಸಲೇಮಿನಲ್ಲಿ ಅರಬ್—ಯೆಹೂದಿ ಪಂಗಡಗಳೊಳಗೆ ಹೊಡೆದಾಟ

ಜಾಫಾ, ಹೆಯಿಫಾ ಮುಂತಾದ ಕಡೆಗಳಲ್ಲಿ ಬೀದಿಜಗಳಗಳು ಹೆಚ್ಚಾಗುತ್ತಿವೆ ಬ್ರಿಟಿಷ್ ಸೈನಿಕರು ಪಹರೆನಡೆಯಿಸುತ್ತ ಪುಂಡುಗಾರರನ್ನು ದಸ್ತಗಿರಿಮಾಡುತ್ತಿದ್ದಾರೆ. ಆದರೂ ಅಲ್ಲಲ್ಲಿ ಕೊಲೆ, ದರೋಡೆ, ಹೊಡೆದಾಟಗಳು ತಿರುತಿರುಗಿ ತಲೆದೋರುತ್ತಿವೆ.

ಫ್ರಾನ್ಸಿನಲ್ಲಿ ಆಶ್ರಯಕ್ಕೆಡೆಯಿಲ್ಲದಷ್ಟು ಸ್ಪೈನಿನ ನಿರಾಶ್ರಿತರು

ಸ್ಪೈನಿಂದ ಓಡಿಬಂದು ಫ್ರಾನ್ಸಿನಲ್ಲಿ ಸೇರಿಕೊಂಡಿರುವ ನಿರಾಶ್ರಿತ ಸ್ಪೈನಿನವರನ್ನು ಏನುಮಾಡುವುದೆಂಬುದು ಫ್ರೆಂಚ್ ಸರಕಾರಕ್ಕೊಂದು ಬಗೆಹರಿಯಲಾಗದ ಸಮಸ್ಯೆಯಾಗಿದೆ ಗಂಡಸರು ಹೆಂಗಸರು ಮಕ್ಕಳೆಂದು ೪೪೧೦೦೦ ಇದ್ದಾರೆ. ಇವರ ಸಂರಕ್ಷಣೆಗಾಗಿ ಸರಕಾರದ ಆರ್ಥಿಕ ಸಮಿತಿಯು ೧೮೩ ಮಿಲಿಯ ಫ್ರಾಂಕುಗಳನ್ನು ಮುಂಗಡಕೊಡುವ ನಿರ್ಧಾರ ಮಾಡಿದ ಸಂದರ್ಭದಲ್ಲಿ ಹೀಗ ಮಾತು ಬಂತು:—ಈ ಭಾರದ ಹೊರೆಗೆ ನೀವೂ ಕೈಕೊಡಿರೆಂದು ಬೇರೆ ರಾಷ್ಟ್ರಗಳನ್ನು ಕೇಳಿಕೊಂಡುದಾಯಿತು. ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ವರ್ಷಕ್ಕೆ ಅಮಿತಮಂದಿಯಂತೆ ತೆಗೆದುಕೊಳ್ಳುವುದಾಗಿ ಹಿತಿಹಾಕಿದೆ ದಕ್ಷಿಣ ಅಮೇರಿಕದ ಕಲವು ಪ್ರಾಂತಗಳು ಕಥೋಲಿಕರನ್ನು ಅಥವಾ ಭಾಸ್ಕ್ಯು ಪಂಥದವರನ್ನು ಮಾತ್ರ ಬೇಸಾಯಗಾರರನ್ನಾಗಿ ತೆಗೆದುಕೊಳ್ಳಲು ಒಪ್ಪಿವೆ, ಮೆಕ್ಸಿಕೋ ತನಗೆ ಅನನುಕೂಲವೆನ್ನುತ್ತದ. ರಷ್ಯಾವು ಧನಸಹಾಯವನ್ನಾದರೂ ಮಾಡಿಯೇನಲ್ಲದೆ ಮಂದಿಯನ್ನು ತೆಗೆದುಕೊಳ್ಳಲಾಗುವುದಿಲ್ಲವೆಂದಿದೆ. ಬ್ರಿಟನ್ನು ಇದಕ್ಕಾಗಿ ಕೆಲವು ಧರ್ಮಸಂಘಗಳ ಏರ್ಪಾಡಾದ ಕೂಡಲೇ ಆಯಾ ವ್ಯಕ್ತಿಯ ವಿಚಾರ ಪರಿಶೀಲಿಸಿ ಸ್ವಲ್ಪ ತೆಗದುಕೊಳ್ಳಬಹುದೆನ್ನುತ್ತದೆ ಪ್ರಕೃತ ನಾವೇ ತಲೆಗೊಡಬೇಕಾಗಿದಯಲ್ಲ!

ಲಿಬಿಯಾಕ್ಕೆ ಮತ್ತಿನ್ನು ಮೂವತ್ತು ಸಾವಿರ ಸೈನಿಕರು

ಇಟೇಲೀ ಸರಕಾರವು ತನ್ನ ಲಿಬಿಯಾದಲ್ಲಿರುವ ಸೈನ್ಯವನ್ನು ಬಲಗೊಳಿಸುವುದಕ್ಕಾಗಿ ಇನ್ನು ಮೂವತ್ತು ಸಾವಿರ ಮಂದಿಯ ಪಡೆಯನ್ನು ಅಲ್ಲಿಗೆ ಕಳುಹುವ ನಿರ್ಧಾರವನ್ನು ಮಾಡಿದೆ.

ಜರ್ಮನ್ ಜನಸಾಮಾನ್ಯರಿಗೆ ಯುದ್ಧಾತುರವಿಲ್ಲ.

ಹೇಗಾದರೂ ಶಾಂತಿಯಿಂದಿದ್ದು ಈ ವರೆಗೆ ಅಭಿವೃದ್ಧಿಗೊಳಿಸಿದ ಸಾಮಾಜಿಕ ಆರ್ಥಿಕೋನ್ನತಿಯನ್ನು ಇನ್ನೂ ಸುವ್ಯವಸ್ಥೆಯಿಂದ ಮುಂದುವರಿಸುತ್ತ ನೆಮ್ಮದಿಯಿಂದ ಬಾಳಿದರೆ ಸಾಕೆಂಬುದು ಜರ್ಮನ್ ಪ್ರಜೆಗಳ ಅಭಿಮತ. ಆದರೆ ಜರ್ಮನ್ ಸರಕಾರವು ಯೆಹೂದಿಗಳಿಗೆ ತೋರಿದ ಕ್ರೂರ ಅತ್ಯಾಚಾರದಿಂದ ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಮುಂತಾದ ಪ ಬಲ ರಾಷ್ಟ್ರಗಳ ಮನನೊಂದಿದೆ. ತಮ್ಮ ಅಭೀಷ್ಟದಂತಲ್ಲವಾದರೂ ತಮ್ಮ ಹೆಸರಲ್ಲಾದ ದುಷ್ಕೃತ್ಯ ಅದು. ಇತ್ತ ತಮ್ಮ ಮಿತ್ರ ರಾಷ್ಟ್ರವಾದ ಇಟಲಿಯು ಫ್ರಾನ್ಸನ್ನು ನೋಡಿ ಕಾಲುಕೆರೆಯುತ್ತದೆ. ಅದನ್ನು ಕಂಡು ಬ್ರಿಟನ್ ಫ್ರಾನ್ಸಗಳು ಯುದ್ಧೋಪಕರಣಗಳನ್ನು ಹೆಚ್ಚಿಸುತ್ತಿವೆ. ಬ್ರಿಟನ್ನು ಗುಂಡು ಮದ್ದುಗಳಿಗಾಗಿಯೇ ೫೮೦ ಮಿಲಿಯ ಪವನು ಹಚ್ಚು ವೆಚ್ಚ ಮಾಡುವ ನಿರ್ಧಾರ ಮಾಡಿದ. ಆಫ್ರಿಕದ ವಸಾಹತುಗಳ ಪ್ರಶ್ನೆಯೊಂದು ಪ್ರಬಲವಾಗುತ್ತ ಬರುತ್ತಿದೆ. ಆರ್ಥಿಕ ದೃಷ್ಟಿಯಿಂದ ತಮಗೆ ನಿಷ್ಪ್ರಯೋಜನ ಹಾಗೂ ನಷ್ಟದಾಯಿಕವಾದ ಆಸ್ಟ್ರಿಯಾ ಮತ್ತು ಸುಡೇಟನ್ ಪ್ರಾಂತಗಳೇ ಹೊರೆಯಾಗಿ ಪರಿಣಮಿಸಿವೆ ಹಿಟ್ಲರನೇನೋ ಶಾಂತಿ ಪ್ರಿಯನು. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಯುದ್ಧದ ಭೀತಿಯನ್ನು ಹುಟ್ಟಿಸಿಯೇ ತನ್ನ ಬೇಳೆಬೇಯಿಸಿಕೊಂಡಿದ್ದಾನೆ. ಆದರೆ ಈ ತರದ ಭಯೋತ್ಪಾದನೆಯೇ ಎಂದೆಂದೂ ಸಾರ್ಥಕವಾಗಿ ಪರಿಣಮಿಸದು. ಎಂದಾದರೊಂದು ದಿನ ಅನಿವಾರ್ಯವಾಗಿ ಸಮರಾಂಗಣಕ್ಕಿಳಿಯಲೇ ಬೇಕೆಂದಾದರ ಅಂತಹ ನಿರ್ಧಾರವನ್ನು ಮುರಿಯಲು ಜರ್ಮನ್ ಪ್ರಜೆಗಳಿಗೆ ಹಾದಿಯಿಲ್ಲ, ಹೋರಾಡಲು ಮನಸ್ಸಿಲ್ಲ. ಜರ್ಮನ್ [illegible] ಈ ತರದ ಯುದ್ಧಭಯವು ಇದ. ಬ್ರಿಟಿಷ್ ಮತ್ತು ಜರ್ಮನ್ ಪತ್ರಿಕೆಗಳ ವೈರಧೋರಣೆಯಿಂದ ಈ ಭಯವು ಹೆಚ್ಚುತ್ತಿದೆ ಎಂದು ಪ್ರಸಿದ್ಧ ಪತ್ರಿಕೋದ್ಯಮಿಯೂ ಕಾದಂಬರಿಕಾರನೂ ಆದ ಸರ್ ಫಿಲಿಪ್‌ಗಿಬ್ಸ್ ಎಂಬವರು ಜರ್ಮನಿಯಲ್ಲಿ ಸಂಚಾರಮಾಡುತ್ತ ಅಲ್ಲಿಯ ಜನಸಾಮಾನ್ಯರ ಹೃದಯ ಪರಿಸ್ಥಿತಿಯನ್ನು ಬಣ್ಣಿಸಿದ್ದಾರೆ.

ಯುದ್ಧಕ್ಕಿಳಿದು ಜಾಪಾನು ಕೆಂಗೆಟ್ಟಿದೆ

ಜಾಪಾನೀಯರ ಯುದ್ಧದ ಅನುದಿನದ ವೆಚ್ಚ ಸರಾಸರಿ ಒಂದು ಮಿಲಿಯ ಎನ್‌ಗಳು. ದಿನವೂ ಸರಾಸರಿ ಒಂದು ಸಾವಿರ ಮಂದಿ ಅಂಗನ್ಯೂನತೆ ಹೊಂದಿದವರು ಚೀನದಿಂದಜಾಪಾನಿಗೆ ಸಾಗುತ್ತಿದ್ದಾರಂತೆ. ಚೀನವು ಅದರ ಹಣವನ್ನೂ ಪ್ರಾಣವನ್ನೂ ಹೀಗೆ ನುಂಗುತ್ತ ಹೋದರ ತನ್ನ ಅವಸ್ಥೆಯೇನೆಂದೂ ಯುದ್ಧವು ಎಂದು ಕೊನೆಗಾಣುವುದೆಂದೂ ತಿಳಿಯದಾಗಿದೆ ಜಾಪಾನಿಗೆ ಕಳೆದ ತಿಂಗಳಲ್ಲಿ ಅದು ಗೆದ್ದ ೩೬೦೦೦೦ ಚದರ ಮೈಲಿಯ ಸ್ಥಳದಲ್ಲಿ ಚೀನೀಯರ ಗೋರಿಲ್ಲಾ ಯುದ್ಧ ಯುಕ್ತಿಯಿಂದ ಈಗ ಜಾಪಾನಿನ ವಶ ಉಳಿದುದು ಒರೇ ೧೦೦೦೦೦ ಚದರ ಮೈಲು ಎಂದು ಹೊಂಕೊಂಗ್ ಪತ್ರಿಕಾ ಪ್ರತಿನಿಧಿಯು ಡೈಲೀ ಎಕ್ಸ್‌ಪ್ರೆಸ್‌ನಲ್ಲಿ ಬರೆದಿರುತ್ತಾನೆ.

ಫ್ರಾಂಕೋವಿನ ರಾಯಭಾರಿ ಇಂಗ್ಲೆಂಡಿನಲ್ಲಿ

ಬ್ರಿಟನ್ ಫ್ರಾಂಕೋವಿನ ಸರಕಾರವನ್ನು ಮಾನ್ಯಮಾಡಿತಷ್ಟೆ. ಈಗ ತದನುಸಾರವಾಗಿ ಫ್ರಾಂಕೋವನು ಆಲ್ಬಾದ ಡ್ಯೂಕನನ್ನು ಇಂಗ್ಲಾಂಡಿನಲ್ಲಿ ತನ್ನ ರಾಯಭಾರಿಯಾಗಿರುವಂತೆ ನೇಮಿಸಿರುವನು. ಅದಕ್ಕೆ ಬ್ರಿಟಿಷ್ ಸರಕಾರವು ತಥಾಸ್ತು ಎಂದಿದೆ.

ಜನರಲ್ ಫ್ರಾಂಕೋ

ಭಯಂಕರ ವಿನಾಶಕಾರಿಯಾದ ಬಾಂಬು ಜರ್ಮನಿಯಲ್ಲಿ ತಯಾರಿ—

ಈ ಹೊಸ ಬಾಂಬು ಸಿಡಿದರೆ ಸುತ್ತುಮುತ್ತು ಕಾಲುಮೈಲು ದೂರದೊಳಗಿನ ಮಂದಿಯನ್ನೆಲ್ಲ ಸಂಹಾರ ಮಾಡುವುದಂತೆ ಅನಂತರದ ಕಾಲುಮೈಲಿನ ಸುತ್ತಳತೆಯುಳ್ಳವರು ಸ್ಮೃತಿ ತಪ್ಪಿ ಬೀಳುವರಂತೆ—ಇಂತಹ ಬಾಂಬಿನ ನಿರ್ಮಾಣದ ರಹಸ್ಯವನ್ನು ಯುನೈಟೆಡ್ ಸ್ಟೇಟ್ಸ್ ವಿಮಾನ ಪಡೆಯ ಮೇಜರ್ ಜನರಲ್ ಆರ್ನೋಲ್ಡ್ ಎಂಬವರು ತಿಳಿದುಕೊಂಡು ಬಹಿರಂಗಪಡಿಸಿರುವರು.

ಮಿಸ್ ನೋಯೋ ನಾಡಿನ ನೈತಿಕ ಪತನದ ಒಂದು ದೃಷ್ಟಾಂತ

ಕಳೆದ ಒಂದು ವರ್ಷದಲ್ಲಿ ನ್ಯೂಯೋರ್ಕ ನಗರದಲ್ಲೇ ತಂದೆಯ ಗೊತ್ತು ಗುರಿಯಿಲ್ಲದೆ ಮಕ್ಕಳನ್ನು ಹೆತ್ತ ತಾಯಂದಿರ ಸಂಖ್ಯೆ ೧೫೪೭. ಇವರಲ್ಲಿ ೯೬ ಮಂದಿ ಹದಿನೇಳು ವರುಷದೊಳಗಿನವರು.

ಈಜಾಡ ಟಪ್ಪಾಲುಹಡಗು

ಈಜಾಡಿ ಟಪ್ಪಾಲು ತರುವ ಪೋಸ್ಟ್ಮೇನ್ ಪ್ರಪಂಚದಲ್ಲಿ ಒಬ್ಬನೇ ಒಬ್ಬ. ಆವನು ಶಾಂತಸಾಗರದ ಒಂದು ದ್ವೀಪದ ಪೋಸ್ಟ್ಮೇನ್ ಆ ನಡು ಗುಡ್ಡೆಯ ಕರೆಯು ಬಂಡೆಗಲ್ಲುಗಳಿಂದೆಷ್ಟು ಕೊರಕಲಾಗಿ ಅಪಾಯಕರವಾಗಿದೆಯೆಂದರೆ ಆ ಮಾರ್ಗವಾಗಿ ಹಾದುಹೋಗುವ ಸ್ಟೀಮರುಗಳಿಂದ

ರೂ. ೫೦೦ ಮೌಲ್ಯದ ಮಿಂಟೋ ಮೆಡಲ್

ಇಂಡಿಯದ ವೈಸರಾಯರಾಗಿದ್ದ ಲಾರ್ಡ್ ಮಿಂಟೋರವರ ಸ್ಮಾರಕವಾಗಿ ಅವರ ಪತ್ನಿಯು ಪ್ರತಿವರ್ಷವೂ ಆಯಾ ವರ್ಷದಲ್ಲಿ ಉಷ್ಣದೇಶಗಳ ಔಷಧಿಗಳ ಕುರಿತು ವಿಶೇಷ ಸಂಶೋಧನೆ ನಡೆಯಿಸಿದವರಿಗೆ ಸಂಭಾವನೆಯಾಗಿ ರೂ. ೫೦೦ ಮೌಲ್ಯದ ಮೆಡಲ್ ಕೊಡುವ ದತ್ತಿವ್ಯವಸ್ಥೆಮಾಡಿದುದರ ಪ್ರಕಾರ ಕಳೆದ ಗಳಿಗೆಯ ಇಸ

(೩ನೇ ಪುಟದಿಂದ)

ಟಪ್ಪಾಲು ತರಲಿಕ್ಕೆ ಆ ದ್ವೀಪದ ಪೋಸ್ಟ್‌ಮೆನ್ ಸಿ ಎನ್. ರಾಮ್ಸೇ ಎಂಬವನು ಈಜುತ್ತಲೇ ಹೋಗಿ ಸ್ಟೀಮರು ಹತ್ತಿದ ಬ್ಬಿಯಲ್ಲಿ ಟಪ್ಪಾಲು ತುಂಬಿ ಭದ್ರಪಡಿಸಿ ತೇಲಿಸಿಕೊಂಡು ಈಜುತ್ತಲೇ ದ್ವೀಪವನ್ನು ಸೇರಬೇಕು. ಅಲ್ಲಿಗೆ ಟಪ್ಪಾಲು ಕೊಡುವ ವ್ಯವಸ್ಥೆಯಾದ ಕಳೆದ ಹನ್ನೊಂದು ವರುಷಗಳಿಂದಲೂ ರಾಮ್ಸೇಯು ಅಲ್ಲಿಯ ಈಜಾಡುವ ಪೋಸ್ಟ್‌ಮ್ಯಾನನಾಗಿ ಇದ್ದಾನೆ.

ಬೀದಿಯಲ್ಲಿ ಹೆಂಗಸು ಗಂಡಸು ಡಿಕ್ಕಿ ಹೊಡಕೊಂಡರೆ?

ಲಂಡನ್ ಕೋರ್ಟಿನ ತೀರ್ಮಾನ

ಎಹೆರೆನ್ ಹಾರ್ಡರ ಸೇವಕನು ಯಜಮಾನನ ಅತ್ಯವಸರದ ಕಾರ್ಯಾಸಕ್ತನಾಗಿ ಭರದಿಂದ ಬೀದಿಗೆ ಅಡ್ಡಲಾಗಿ ಹೋಗುತ್ತ ಹಾದಿಹಿಡಿದು ನಡೆಯುತ್ತಿದ್ದ ಮಿಸೆಸ್ ರಾಸೇಲಳಿಗೆ ಡಿಕ್ಕಿಕೊಟ್ಟ. ಅವಳು ಬಿದ್ದು ಭುಜದ ಎಲುಬು ಮುರಿಯಿತು, ಅವಳು ಎಹೆರೆನ್ ಹಾರ್ಡರನ ಮೇಲೆ ನಷ್ಟದಾವೆ ಹೂಡಿದಳು. ಸೇವಕನು ಹಾದಿಯಲ್ಲಿ ಇತರರಿಗೆ ಅನನುಕೂಲಅಪಾಯಗಳಾಗವಂತೆ ನಡೆಯ ಬೇಕೆಂಬ ನಿಯಮವನ್ನು ಉಲ್ಲಂಘಿಸಿದುದರಿಂದಲೂ ಈ ಅಪರಾಧವನ್ನು ಆತನು ತನ್ನ ಯಜಮಾನನ ವ್ಯವಹಾರ ನಿರ್ವಹದ ಆತುರತೆಯಿಂದ ಕೂಡಿದ್ದುದರಿಂದಲೂ ಆ ಯಜಮಾನನಾದ ಎಹೆರೆನ್ ಹಾರ್ಡರು ೧೫೦ಪವನು ನಷ್ಟದ್ರವ್ಯವನ್ನು ರಾಸೇಲಳಿಗೆ ತೆರತಕ್ಕದೆಂದು ಜಡ್ಜರು ತೀರ್ಪು ಕೊಟ್ಟರು.

ಕುಣಿಕುಣಿದು ಜೈಲಿಗೆ ಹೋಗುವುದುಂಟೆ?

ರಷ್ಯಾದ ಬಾಕೂ ಎಂಬಲ್ಲಿಯ ರೈಲ್ವೇ ಸ್ಟೇಶನ್ ಮಾಸ್ತರರೊಬ್ಬರು ಹಾಗೆ ಮಾಡಿದರು. ಅವರ ಹೆಸರು ಕರ್ನಲ್ ಬೆಕೋಲ್. ಅವರಿಗೆ ನರ್ತನವೆಂದರೆ ಪ್ರಾಣ. ಆದರೆ ಆ ಕೆಸ್ಪಿಯನ್ ಸಮುದ್ರಕಿನಾರೆಯ ಚಿಮಣಿಎಣ್ಣೆ ಬಂದರದ ಬಳಿಯ ಆ ಸ್ಟೇಶನಿನ ಊರಲ್ಲಿ ನರ್ತನದ ಕ್ಲಬ್‌ಗಳಿದ್ದಿಲ್ಲ. ಒಂದು ದಿನ ಮನಮೋಹಿನಿಯೊಬ್ಬಳು ಆ ಸ್ಟೇಶನಿಗೆ ಬಂದಳು. ನರ್ತನಮಾಡೋಣವೇ ಎಂದ ಆತ; ಆಗಲಿ ಎಂದಳು. ಆಕೆ ಕೂಡಲೇ ಸ್ಟೇಶನಿನ ಇಕ್ಕಡೆಯಲ್ಲಿಯೂ ಡೇಂಜರ್ (ಗಂಡಾಂತರದ) ಸಿಗ್ನಲ್ ಸಂಕೇತಕೊಟ್ಟು ಅವಳೊಡನೆ ನರ್ತನ ತೊಡಗಿಯೇ ಬಿಟ್ಟ ಸ್ಟೇಶನ್ ಮಾಸ್ಟರ್. ರೈಲು ಬಂಡಿಗಳು ಆಚೆಯೀಚೆ ಕಡೆಗಳಿಂದ ಬಂದು ಸಿಗ್ನಲ್ ಕಂಬಗಳಿಂದ ಹೊರಗೆ ನಿಂತು ಬಿಗಿಲ್ ಕೊಟ್ಟು ಕೊಟ್ಟು ಸೋತು ಹೋಗಲು ಅವುಗಳ ಗಾರ್ಡ್ಸ್‌ಗಳಲ್ಲೊಬ್ಬನು ಕೆಳಗಿಳಿದು ಸ್ಟೇಶನಿಗೆಬಂದು ನೋಡಲು ಸ್ಟೇಶನ್ ಮಾಸ್ಟರ್ ನರ್ತನಮಾಡುತ್ತಿದ್ದಾರೆ. ಅದಕ್ಕೆ ದೊರೆತ ಉಡುಗೊರೆಯೆಂದರೆ ಐದುವರ್ಷದ ಸಜೆ!

ಸ್ವದೇಶ ವಿಚಾರ

ಯ ಬಹುಮಾನವು ಡಾ| ಸಿ. ಜಿ. ಪಂಡಿತ್ ಗಿಂಡಿಯ ಕಿಂಗ್ ಇನ್ಸ್ಟಿಟ್ಯೂಟ್ ಡೈರೆಕ್ಟರ್ ಇವರಿಗೆ ದೊರೆತಿದೆ.

ರಾವ್ ಬಹದೂರ್ ಸಾಧುವಿನ ಸಮಾಧಿ ಸ್ಥಿತಿ.

ಸಾರಣಜಿಲ್ಲೆಯ ಗಂಡಕೀ ನದಿತೀರದ ಲ್ಲೊಬ್ಬ ಸಾಧುವು ಅಲ್ಲಿಯ ಕಲೆಕ್ಟರರ ಅನುಮತಿ ಹೊಂದಿ ನೆಲದೊಳಗೆ ಇಟ್ಟಿಗೆ ಸಿಮೆಂಟುಗಳಿಂದೊಂದು ನೆಲಮಾಳಿಗೆಯನ್ನು ಕಟ್ಟಿಸಿ ಅದರೊಳಗೆ ಹೊಕ್ಕು ದ್ವಾರವನ್ನು ಮುಚ್ಚಿಸಿಕೊಂಡನು. ದಿನದಿನವೂ ಸಾವಿರಾರು ಮಂದಿ ಈ ಸಮಾಧಿಯನ್ನು ನೋಡಲು ಬರುತ್ತಿದ್ದರು. ಸಾಧುವು ಹೇಳಿದಂತೆ ೧೫ನೆಯ ದಿನ ದ್ವಾರವನ್ನು ಒಡೆದಾಗ ಬತ್ತಿಕಳೆಗುಂದಿದ್ದರೂ ಸಾಧುವು ನಗುಮುಖನಾಗಿ ಹೊರಗೆ ಬಂದನಂತೆ. ಎಸೋಶಿಯೇಟೆಡ್ ಪತ್ರಿಕಾ ಪ್ರತಿನಿಧಿಯು ಅವನನ್ನು ಕಂಡು ವಿಚಾರಿಸಿದಾಗ ತಾನು ಪಾಟಿಯಾಲದ ರಾವ್ ಬಹದೂರ್ ಗೋರಕ್‌ನಾಥ್ ಎಂದನಂತೆ.

ಡಾ| ಲಕ್ಷ್ಮೀಪತಿಯವರ ದಂಡು ಹೊರಡುವುದು.

ಮುಂದಿನ ಸಂವತ್ಸರದಾರಭ್ಯದಿಂದ (ಯುಗಾದಿ ತಾ. ೨೨) ಡಾ| ಲಕ್ಷ್ಮೀಪತಿಯವರ ನೇತೃತ್ವದಲ್ಲಿ ಆಯುರ್ವೇದ ಪರವಾದ ಚಳವಳಿಯ ದಂಡು ಬೆಜವಾಡದಿಂದ ಹೊರಟು ಆಂಧ್ರದೇಶದ ಹಳ್ಳಿಹಳ್ಳಿಗಳಲ್ಲೆಲ್ಲ ಸಂಚರಿಸುವುದಂತೆ.

ಈ ದೇಶದ ಪರಿಸ್ಥಿತಿ ವಿಶೇಷಕ್ಕೆ ಅನುಕೂಲವಾದ ಚಿಕಿತ್ಸಾಪದ್ಧತಿಗಳೆಂದರೆ ಆಯುರ್ವೇದ ಮತ್ತು ಯುನಾನಿ ಎಂಬದನ್ನು ಮಂತ್ರಿಗಳಾದ ಡಾ| ರಾಜನ್‌ರವರು ಮನಗಾಣಲಿಲ್ಲನೆಂದೂ ಬ್ರಿಟಿಷ್ ಮದ್ದಿನಕಾರ್ಖಾನೆಗಳಿಗೆ ದುಡ್ಡುಮಾಡಿ ಕೊಡುವ ಮದ್ರಾಸ್ ಕಾಂಗ್ರೆಸ್ ಸರಕಾರದ ವಿದೇಶೀ ಧೋರಣೆಯುವಿಷಾದಕರವಾಗಿದೆ ಎಂದೂ ಡಾ| ಲಕ್ಷ್ಮೀಪತಿಯವರು ತನ್ನ ಸಂಚಾರದ ಭಾಷಣಗಳಲ್ಲಿ ಹೇಳುತ್ತಿದ್ದಾರೆ. ಡಾ| ಮುಖರ್ಜೀ, ಡಾ| ಪರಂಜಪೆ, ಪಂಡಿತ್ ಶಿವಶರ್ಮ ಮುಂತಾದ ಅಖಿಳ ಭಾರತದ ಪ್ರಸಿದ್ಧ ಆಯುರ್ವೇದ ಮುಖಂಡರೂ ಡಾ| ಲಕ್ಷ್ಮೀಪತಿಯವರೊಡನೆ ಕಳೆದ ಒಂದು ತಿಂಗಳಿಂದ ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ನಗರ ಪಟ್ಟಣಗಳನ್ನು ಸಂದರ್ಶಿಸಿ ಆದರದ ಸನ್ಮಾನ ಸ್ವಾಗತ ಮಾನಪತ್ರಾದಿಗಳನ್ನು ಹೊಂದುತ್ತಿದ್ದಾರೆ. ಅಂತಹ ಸಂದರ್ಭದ ಮಹಾಸಭೆಗಳಲ್ಲೆಲ್ಲ ದೇಶೀಯ ಚಿಕಿತ್ಸಾಪದ್ಧತಿಯ ಕಡೆಗೆ 'ಮದ್ರಾಸ್ ಕಾಂಗ್ರೆಸ್ಸು ಸರಕಾರವು ತೋರುವ ಮಲತಾಯಿತನವನ್ನು ಎಲ್ಲೋ ಪಕ್ಷಿಕ್ರಮದ ಪ್ರೋತ್ಸಾಹದಿಂದ ಬಡನಾಡನ್ನು ಮತ್ತೂ ಬಡವಾಗುವಂತೆ ಮಾಡುವ ಒಲವನ್ನು ತೀವ್ರವಾಗಿ ಖಂಡಿಸಿ ಭಾಷಣಗೊಡುತ್ತಲಿರುವರು.

ನಿರಕ್ಷರತಾ ನಿವಾರಣೆ— ಪಂಜಾಬ್ ಸರಕಾರದ ಯೋಜನೆ

ಐದು ವರುಷದ ಅವಧಿಯೊಳಗೆ ಪ್ರಾಂತದ ನಿರಕ್ಷರತಾ ನಿವಾರಣೆ ಗೈಯುವ ಯೋಜನೆಯೊಂದನ್ನು ಪಂಜಾಬ್ ಸರಕಾರವು ಕ್ಷಿಪ್ರದಲ್ಲೇ ಕೈಗೊಳ್ಳುವುದು. ಇದರ ವೆಚ್ಚವು ಸುಮಾರು ಒಂದು ಲಕ್ಷದ ನಾಲ್ವತ್ತು ಸಾವಿರ ರೂಪಾಯಿಯೆಂದು ಅಂದಾಜುಮಾಡಲಾಗಿದೆ. ಮಿಡ್ಲ್ ಸ್ಕೂಲ್ ಪರೀಕ್ಷೆಯಿಂದ ಯುನಿವರ್ಸಿಟಿ ಡಿಗ್ರಿ ಪರೀಕ್ಷೆಯ ವರೆಗೆ ಎಲ್ಲ ಸರ್ಟಿಫಿಕೇಟು ಪರೀಕ್ಷೆಗೆ ನಿಲ್ಲುವ ಪ್ರತಿಯೊಬ್ಬನೂ ಒಬ್ಬ ವಯಸ್ಕ ನಿರಕ್ಷರಿಯನ್ನು ಅಕ್ಷರಜ್ಞನನ್ನಾಗಿ ಮಾಡಿದ್ದಾನೆಂಬ ರುಜುವಾತು ಕೊಡತಕ್ಕದು. ಏಳನೇ ಕ್ಲಾಸಿನಿಂದ ತೊಡಗಿ ಸಂಬಳದಲ್ಲಿ ರಿಯಾಯಿತಿಯನ್ನಾಗಲೀ ವಿದ್ಯಾರ್ಥಿವೇತನವನ್ನಾಗಲೀ ಹೊಂದುವ ಶಾಲಾ ಕಾಲೇಜು ವಿದ್ಯಾರ್ಥಿಗಳೆಲ್ಲ ವರುಷಕ್ಕೆ ಇಬ್ಬರು ಬರಹಬಾರದ ವಯಸ್ಕರನ್ನು ಓದುಬರಹ ಬಲ್ಲವರನ್ನಾಗಿ ಮಾಡಬೇಕು. ಎಲ್ಲ ಸ್ಥಳೀಯ ವಿದ್ಯಾ ಸಂಸ್ಥೆಗಳು ಒಂದೆರಡು ಯಾ ಹೆಚ್ಚು ಉಪಾಧ್ಯಾಯರನ್ನು ಈ ವಿಷಯದ ವಿಶೇಷ ತರಬೇತಿಗೆ ಅಲ್ಪ ಅವಧಿ ಕಳುಹಿಸಿಕೊಟ್ಟು ಆ ಮೇಲೆ ಆಯಾ ಕ್ಷೇತ್ರದ ಸಂಚಾರ ಶಿಕ್ಷಕರಾಗಿ ಅಲ್ಲಲ್ಲಿ ಓದುಬರಹ ಪ್ರಚಾರದ ಕೇಂದ್ರಗಳನ್ನೂ ಶಾಖೆಗಳನ್ನೂ ತೆರೆಯುವಂತೆ ನೋಡಿಕೊಳ್ಳತಕ್ಕದ್ದು. ಅಂಜುಮಾನಿಯಾ ಹಿಯಾತ್ ಇಸ್ಲಾಮ್, ಸನಾತನ ಧರ್ಮ ಸಭಾ ಮುಂತಾದ ವಿವಿಧ ಪ್ರಚಾರಾತ್ಮಕ ಸಂಘ ಸಂಸ್ಥೆಗಳ ಸಹಕಾರವನ್ನೂ ಪಡೆಯುವ ವ್ಯವಸ್ಥೆಯು ಯೋಜನೆಯಲ್ಲಿದೆ.

ಕುಲೀನೆಯರೂ ಚಲಚಿತ್ರ ನಿರ್ಮಾಣ ಸಂಸ್ಥೆಗಳೂ

ವಿದ್ಯಾವತಿಯರಾದ ಕುಲೀನ ಸ್ತ್ರೀಯರು ಚಲಚಿತ್ರ ನಿರ್ಮಾಣದ ಪ್ರತಿಯೊಂದು ಖಾತೆಯನ್ನೂ ಪ್ರವೇಶಿಸಬೇಕು. ಮಾನವತಿಯರೂ ವಿದ್ಯಾವತಿಯರೂ ಇನ್ನೂ ಇನ್ನೂ ಚಲಚಿತ್ರ ಸಂಸ್ಥೆಗಳನ್ನು ಸೇರಬೇಕು—ಎಂದು ಪ್ರಭಾತ ಫಿಲ್ಮ್ ಕಂಪೆನಿಯ ತಾರೆಯಾದ ಶ್ರೀಮತಿ ಶಾಕುಂತಲಾ ಪರಂಜಪೆ ಇವರು ಹೇಳುತ್ತಿದ್ದಾರೆ. ಆದರೆ ಮೂವೀಟೋನ್ ಫಿಲ್ಮ್ ಕಂಪೆನಿಯ ಮಾಲಕಳಾದ ಜದನಬಾಯಿಯವರು ಕುಲೀನೆಯರು ಮಾನಗೆಡದೆ ಫಿಲ್ಮ್ ಕಂಪೆನಿಯಲ್ಲಿ ಸ್ಥಾನ ಸಿಕ್ಕುವುದಿಲ್ಲ ಎಂಬುದನ್ನು ಯಾರೂ ಮರೆಯಬಾರದು. ಮಾನ ಮರ್ಯಾದೆ ಲಜ್ಜೆ ಕುಲಶೀಲ—ಒಪ್ಪಾರೆ ಮೇಲೆ ಭಾರತೀಯ ಸ್ತ್ರೀತ್ವ ಎಂಬುದೇನಿದೆಯೋ ಅದನ್ನು ಬಲಿಗೊಡಲು ಸಿದ್ಧರಾಗಿದ್ದರೆ ಮಾತ್ರ ಫಿಲ್ಮ್ ಕಂಪೆನಿಗೆ ಸೇರಿ— ಎನ್ನುತ್ತಿದ್ದಾರೆ. ಯಾವ ಮಾತಿನಲ್ಲಿ ಸತ್ಯವಿರಬೇಕು? ಮೊದಲನೆಯವರದು ಇತ್ತೀಚೆಗೆ ಫಿಲ್ಮ್ ಕಂಪೆನಿಗೆ ಸೇರಿದ ಉತ್ಸಾಹೀ

ಪುಟ ೬ರ್ಲ ನೋಡಿ.

ತಿಂಗಳಿಗೆ ನೀವೆಷ್ಟು ಸಂಪಾದಿಸುತ್ತೀರೆಂಬುದು ದೊಡ್ಡ ವಿಷಯವಲ್ಲ. ಎಷ್ಟು ಉಳಿಸುತ್ತೀರೆಂಬುದೇ ಪ್ರಾಮುಖ್ಯ ಪ್ರಶ್ನೆ. ಏಕೆಂದರೆ ನಿಮ್ಮ ಸಂಪಾದನೆಯು ಕಡಿಮೆಯಾದಾಗ ಅಥವಾ ನಿಂತುಹೋದಾಗ ನಿಮ್ಮ ಮತ್ತು ನಿಮ್ಮ ಸಂಸಾರದ ಕನಿಷ್ಟ ಸುಖ ಸೌಕರ್ಯಗಳು ಯಥಾಪ್ರಕಾರ ಒದಗಿಸಿಕೊಡಬಲ್ಲುದು ಆ ಉಳಿತಾಯವೇ.

ಅಂತಹ ನಿಮ್ಮ ಉಳಿತಾಯವು ಬೆಳೆದು ಬಲವಾದ ಭಂಡವಾಳವಾಗಿ ಬರುವಂತೆ ನಿಕ್ಷೇಪಿಸಲಿಕ್ಕೆ ಅತ್ಯುತ್ತಮ ಸ್ಥಾನವೆಂದರೆ

ದಿ ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

THE BOMBAY LIFE ASSURANCE COMPANY, LTD.

ಏಕೆಂದರೆ ಅದು ಉತ್ಕೃಷ್ಟ ಭದ್ರತೆಯುಳ್ಳ ಉಪಯುಕ್ತ ಸಂಸ್ಥೆ.

ಪ್ರಾಮಾಣಿಕತೆ, ಉತ್ಸಾಹ ಪ್ರತಿಷ್ಠೆಗಳುಳ್ಳವರಿಗೆ ಸಮಾಜ ಸೇವೆ ಮಾಡಲಿಕ್ಕೂ ಯೋಗ್ಯವಾದ ನಿಶ್ಚಿತ ಪ್ರತಿಫಲವನ್ನು ಹೊಂದಲಿಕ್ಕೂ ಒಳ್ಳೆಯ ಅವಕಾಶವಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,
ಮದ್ರಾಸ್, ಬ್ರಾಂಚ್ ಸೆಕ್ರೆಟರಿಗಳು.
ದಿ ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ದಿ ಬೊಂಬಾಯಿ ಲ್ಯಾಫ್ ಬಿಲ್ಡಿಂಗ್ಸ್, ಗಾಂಧೀನಗರ, ಉಡುಪಿ.

ಎಂಬ ಮೇಲಿನ ವಿಳಾಸಕ್ಕಾಗಲೀ ಕೆಳಗೆ ಕಾಣಿಸಿದ ನಮ್ಮ ಇತರ ಯಾವ ಕಾರ್ಯಾಲಯಕ್ಕಾಗಲೀ ಅರ್ಜಿ ಬರೆದುಕೊಳ್ಳಿ.

ಪೋಸ್ಟ್ ಬಾಕ್ಸ್ ನಂ. 337 ಮೌಂಟ್ ರೋಡ್, ಮದರಾಸು.	ವಿಶ್ವೇಶ್ವರಪುರ ಸರ್ಕಲ್ ಬೆಂಗಳೂರು ಸಿಟಿ.	ಕಾರ್ ಸ್ಟ್ರೀಟ್ ಮಂಗಳೂರು	ಪುತಿಯಾರ ಕಲ್ಲಿಕೋಟೆ.
ಸೆಂಟ್ರಲ್ ಸ್ಟೇಶನ್ ರೋಡ್, ತ್ರಿವೇಂದ್ರಮ್.	ಚಾರ್ನಿರೋಡ್ ಗಿರ್ಗಾಮ್, ಬೊಂಬಾಯಿ ನಂ. 4.	ಒಟ್ಟಪಾಲಮ್ ದ. ಮಲಬಾರ್.	

ಇಂದು ನಾಜಿಯವರು ಕೇವಲ ಜರ್ಮನಿಯ ಮಾತ್ರವಲ್ಲದೆ ಸಮಸ್ತ ಯುರೋಪಿನ ಭಾಗ್ಯವಿಧಾತರಾಗಿದ್ದಾರೆ. ಅವರ ಪ್ರಬಲ ಪ್ರತಾಪವು ಶತ್ರುಗಳ ಹೃದಯದ ಮೇಲೆ ಅಳಿಸಲಾರದ ಅಕ್ಷರಗಳಿಂದ ಬರೆಯಲ್ಪಟ್ಟಿದೆ. ಅವರ ರಣಘರ್ಜನೆಯಲ್ಲಿ ವಿನಾಶದ ಭಯಂಕರ ಸೂಚನೆ ಇದೆ. ಅವರ ಆರಾಧ್ಯ ದೈವವಾದ ಹಿಟ್ಲರನ ರಾಜನೀತಿಯು ಯುರೋಪಿಗೆಲ್ಲಾ ನುಂಗಲಾರದ ಗುಳಿಗೆಯಾಗಿದೆ.

ಹಿಟ್ಲರನಾರೆಂಬುದು ಜಗತ್ತಿಗೇ ಗೊತ್ತಿದೆ. ಆದರೆ ಅಶಾಂತಿಯ ಈ ಅವತಾರವು ಯಾವುದೇ ದೊಡ್ಡ ವಂಶದಲ್ಲಿ ಜನಿಸಿದ್ದಲ್ಲ. ಅವನು ಹುಟ್ಟಿದ್ದು ಆಸ್ಟ್ರಿಯಾದಲ್ಲಿ. ಅವನಿಗೆ ಒಬ್ಬ ಸಹೋದರನೂ ಇಬ್ಬರು ಸಹೋದರಿಯರೂ ಇದ್ದರು. ಅವನ ತಂದೆಯು ಜೋಡುಹೊಲಿಯುತ್ತಿದ್ದನಂತೆ. ಹಿಟ್ಲರನು ಬಾಲ್ಯದಲ್ಲಿ ಹಟವಾದಿಯಾಗಿದ್ದನು. ಅವನ ಸಹೋದರಿಯರಿಗೆ ಈಗಲೂ ಅವನನ್ನು ಕಂಡರೆ ಆಗದು, ಸಹೋದರನು ಸತ್ತುಹೋಗಿದ್ದನು. ಅವನ ಸಹೋದರಿಯರು ವಿಯನ್ನಾದಲ್ಲಿರುತ್ತಿದ್ದರು. ಅಲ್ಲೇ ಯುವಕ ಹಿಟ್ಲರನು ಮನೆಗಳಿಗೆ ಬಣ್ಣ ಹಾಕುವ ಕೆಲಸವನ್ನು ಮಾಡುತ್ತಿದ್ದನು. ಅಲ್ಲೇ ಕ್ರಾಂತಿಕಾರಿಗಳೊಡನೆ ಸೇರಿಕೊಂಡನು. ಅವನ ಸಹೋದರಿಯರು ಇವನು ಸತ್ತುಹೋದನೆಂದು ತಿಳಿದಿದ್ದರು. ಕ್ರಮೇಣ ಅವನ ಹೆಸರು ಪ್ರಸಿದ್ಧಿಗೆ ಬರಲಾರಂಭಿಸಿತು. ಪತ್ರಿಕೆಗಳೆಲ್ಲಾ ಅವನ ರಕ್ತರಂಜಿತ ಕಾರ್ಯಗಳ ವರ್ಣನೆಯಿಂದ ತುಂಬಿರುತ್ತಿದ್ದವು.

ಜರ್ಮನ್ ರಾಜ್ಯದ
* ಭಾಗ್ಯವಿಧಾತ *

ಹಿಟ್ಲರನ ಅಂಧಭಕ್ತರು ಯಾರು?

ನಮಗೆ ಶನಿವಾರ ಕೆಟ್ಟದಾದರೆ,
ಅಲ್ಲಿ ಅದು ಬಹಳ ಪವಿತ್ರದಿನ.

ಜರ್ಮನಿಯ ಸರ್ವಸ್ವ

ಕೆಲವು ದಿನಗಳ ನಂತರ ಕ್ರಾಂತಿಯು ಸಫಲವಾಯಿತು. ಜರ್ಮನಿಯ ಅಧಿಕಾರವು ಹಿಟ್ಲರನ ಕೈಗೆ ಬಂತು. ಅವನ ಸಹೋದರಿಯರಾದ ಇದಾ ಮತ್ತು ಪೌಲಾ ಇವರಿಗೆ ಮತ್ತಷ್ಟು ಚಿಂತೆಯಾಯಿತು. ಈ ಹಿಟ್ಲರನು ಯಾರು? ಎಂದು ಯೋಚಿಸತೊಡಗಿದರು. ಒಂದು ದಿನ ಅವರಿಗೆ ಜರ್ಮನ್ ಛಾನ್ಸಲರ್‌ನಿಂದ ಪತ್ರಬಂತು. ಅದರಲ್ಲಿ ಈ ರೀತಿ ಇತ್ತು "ನಿಮ್ಮ ಅಣ್ಣನೀಗ ಜರ್ಮನಿಯ ಛಾನ್ಸಲರ್ ನಿಮಗೆ ಇಷ್ಟವಿದ್ದರೆ ಅವರೊಡನೆ ವಾಸಿಸಬಹುದು." ಪೌಲಾ ಜರ್ಮನಿಗೆ ಹೊರಟಳು. ದಾರಿಯಲ್ಲಿ ಪತ್ರಿಕೆಯವರು ಅವಳಿಗೆ ಬಹಳ ಕಿರುಕುಳ ಕೊಟ್ಟು ಹಿಟ್ಲರನ ಗುಟ್ಟನ್ನು ರಟ್ಟುಮಾಡಿದರು. ಹಿಟ್ಲರನಿಗೆ ಇದು ತಿಳಿದು ಅವಳಿಗೆ ಎಂದೂ ಮರೆಯಲಾರದಂತಹ ಬಿಸಿಯನ್ನು ತೋರಿಸಿದನು. ಈಗ ಇಬ್ಬರೂ ಅಣ್ಣನ ಬಳಿಯಲ್ಲಿದ್ದಾರಂತೆ. ದೊಡ್ಡವಳನ್ನು ಕಂಡರೆ ಹಿಟ್ಲರನಿಗೆ ಭಯವಂತೆ!

ನಾಜಿ ಶಾಸನವು ಒಂದು ರಹಸ್ಯ. ಭಾರತದಲ್ಲಿ ಶನಿಯು ಕೆಟ್ಟಗ್ರಹವೆಂದು ಭಾವನೆ ತಾನೆ. ಶನಿಯ ವಕ್ರದೃಷ್ಟಿಯು ಬಿದ್ದೇ ಲಂಕೆಯು ಭಸ್ಮವಾಯಿತು. ನಳಚಕ್ರವರ್ತಿಯು ಭಿಕಾರಿಯಾದನು. ಈ ಕಥೆಗಳನ್ನು ನಾವು ದಿನವೂ ಕೇಳುತ್ತೇವೆ. ಅದರಿಂದಲೇ ಯಾವ ಶುಭಕೆಲಸಗಳನ್ನೂ ಶನಿವಾರ ಪ್ರಾರಂಭಿಸುವುದಿಲ್ಲ. ಶನಿಯು ನಾಶದ ದೇವತೆಯಾದರೆ ಹಿಟ್ಲರನು ಅವನ ದೂತ. ಏಕೆಂದರೆ ಶನಿಯೇ ಹಿಟ್ಲರನ ಜೀವನದ ನಿರ್ಮಾಣಕಾರಕ. 1934ನೇ ಜೂನ್ 30ನೇ ತಾರೀಕು ಶನಿವಾರವೇ ಅವನಿಗೆ ಜರ್ಮನಿಯ ಏಕಾಧಿಪತ್ಯ ಸಿಕ್ಕಿದ್ದು. ಇದೇ ಅವನ ಜೀವನಚರಿತ್ರೆಯಲ್ಲಿನ ಅಲೌಕಿಕ ಪುಟ. ಅಲ್ಲಿಂದಲೇ ಅವನ ಅಭೂತಪೂರ್ವ ಉತ್ಥಾನವು ಪ್ರಾರಂಭ. 1935ನೇ ಮಾರ್ಚ 16ನೇ ಶನಿವಾರ ಜರ್ಮನಿಯ ಚರಿತ್ರೆಯು ಬದಲಾಯಿಸಿತು. ಆ ದಿನ ದಿವಸವೇ ಅಲ್ಲಿ ಅನಿವಾರ್ಯ ಸೈನ್ಯಶಿಕ್ಷಣದ ಪ್ರಕಟಣೆ ಹೊರಟಿದ್ದು. ಇದರ ಸಫಲತೆಯು 1937ನೇ ಇಸ್ವಿ ಮಾರ್ಚ 17ನೇ ತಾರೀಕು ಶನಿವಾರ ಆಯಿತು. ನಾಜೀ ಸೈನ್ಯವು ರೈನ್‌ಲೆಂಡ್‌ನ್ನು ಆಕ್ರಮಿಸಹೊರಟಿದ್ದು ಅಂದೇ. 1938ನೇ ಮಾರ್ಚ 12ನೇ ತಾರೀಕು ಶನಿವಾರ ಮತ್ತೊಂದು ಶುಭ ದಿವಸ, ಆಸ್ಟ್ರಿಯವು ನಾಜಿಗಳ ಕೈವಶವಾಯಿತು. ಇದಾಗಿ ಇನ್ನೂ ಒಂದು ವರ್ಷ ಸಹ ಪೂರ್ತಿಯಾಗಿರಲಿಲ್ಲ ಪುನಃ ಶನಿಯು ಕೃಪೆಯುಂಟಾಯಿತು.

ಇದೇ 1938ನೇ ಅಕ್ಟೋಬರ್ 1ನೇ ತಾರೀಕು ಶನಿವಾರ ಆ ದಿನವೇ ಜೆಕೋಸ್ಲೋವೇಕಿಯಾವನ್ನು ನುಂಗಿ ನೀರನ್ನು ಕುಡಿದಿದ್ದು.

ನಾಜಿಗಳ ಅಂತರ್‍ರಾಷ್ಟ್ರೀಯ ನೀತಿ

ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷರೂಪದಿಂದ ಆಧುನಿಕ ಅಂತರ್‍ರಾಷ್ಟ್ರೀಯತೆಯರಿಗೆ ಈ ನಾಜಿಗಳೇ ಕಾರಣ. ಲಾಯಿಡ್ ಜಾರ್ಜರಂತಹ ವಯೋವೃದ್ಧ ರಾಜನೀತಿಜ್ಞರು ಸಹ ಈ ವಿಚಾರದಲ್ಲಿ ಹೆದರುವರು. ಮ್ಯೂನಿಕ್ಕಿನ ಒಪ್ಪಂದವು ನಾಜಿಗಳ ದಿಗ್ವಿಜಯ. ಹಿಟ್ಲರ್ ಮುಸೋಲಿನಿಗಳಿಬ್ಬರೂ, ಜಗತ್ತಿನ ರಂಗಮಂಚದ ಮುಖ್ಯ ನಟರಾಗುತ್ತಿದ್ದಾರೆ. ಮುಸೋಲಿನಿಯಂತೂ ಫ್ರಾನ್ಸಿನ ಮುಂದೆ ತನ್ನ ಹೊಸ ಬೇಡಿಕೆಗಳನ್ನಿಟ್ಟಿರುವನು. ಚೇಂಬರ್ಲೇನರ ರೋಮ್ ಯಾತ್ರೆಯು ಅಸಫಲವಾಗಿ ಹೋಯಿತು.

ನಿಮ್ಮ ಕರ್ತವ್ಯ

ಬಡವನಿರಲಿ, ಶ್ರೀಮಂತನಿರಲಿ, ವಿವಾಹಿತನಾಗಿರಲಿ, ಅವಿವಾಹಿತನಾಗಿರಲಿ,
ಆತನನ್ನು ಆಶ್ರಯಿಸಿಕೊಂಡಿರುವವರ್‍ಯಾರಾದರೂ ಇದ್ದೇ ಇರುವರು.
ತನಗೆಲ್ಲಾದರೂ ಮರಣವುಂಟಾದರೆ ಅವರ ಬಾಳು ನಿರಾತಂಕವಾಗಿ ಸಾಗುವಂತೆ ವ್ಯವಸ್ಥೆ ಮಾಡಿಡುವುದು

ಪ್ರತಿಯೊಬ್ಬ ಯೌವನಸ್ಥನ ಕರ್ತವ್ಯ.

ಈ ಕರ್ತವ್ಯವನ್ನು ನೆರವೇರಿಸುವುದರಲ್ಲಿ 'ಒರಿಯಂಟಲ್' ನಿಮಗೆ ನೆರವಾಗಿ ಬರುವುದು.

ಏಕೆಂದರೆ ಕಳೆದ 64 ವರುಷಗಳಿಂದಲೂ ಸಾವಿರಾರು ಸಂಸಾರಗಳ ಸಂಪಾದನೆಯ ಕೈಗಳನ್ನು ಮೃತ್ಯುವು ಮುಕ್ಕಿತಿಂದಾಗ ಆ ಸಂಸಾರಗಳ ಅಂತಹ ಆಪತ್ಕಾಲದಲ್ಲಿ ಸಹಾಯವನ್ನಿತ್ತುದು
ಒರಿಯಂಟಲ್ ಪೊಲಿಸಿಗಳೇ!

ಶೀಘ್ರದಲ್ಲಾಗಲೀ ವಿಳಂಬವಾಗಿಯಾಗಲೀ ಪ್ರತಿಯೊಬ್ಬನೂ ವಿಮೆ ಮಾಡಲಿಕ್ಕೆ ಅನರ್ಹನಾಗುವ ಅವಸ್ಥೆಗೆ ಬರುತ್ತಾನೆ.
ಆದುದರಿಂದ ನಿಮ್ಮ
ಕರ್ತವ್ಯವನ್ನು ನೆರವೇರಿಸುವುದರಲ್ಲಿ ತಡಮಾಡಬೇಡಿರಿ.

'ಒರಿಯಂಟಲ್'ನಲ್ಲಿ ನಿಮ್ಮ ಜೀವವಿಮೆ ಮಾಡಿ ನಿಮ್ಮ ಆಶ್ರಿತರ ಭವಿಷ್ಯವನ್ನು ನಿಶ್ಚಿತಗೊಳಿಸಿಡಿರಿ.

ಒರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತ ವರ್ಷ 1874] ಭಾರತದಲ್ಲೆಲ್ಲಾ ನಮ್ಮ ಶಾಖೆಗಳೂ ಮತ್ತು ಪ್ರತಿನಿಧಿಗಳೂ ಇದ್ದಾರೆ. [ಹೆಡ್ ಆಫೀಸು—ಬೊಂಬಾಯಿ.
ಹೆಚ್ಚಿನ ಮಾಹಿತಿ ಬಗ್ಗೆ ಇವರಿಗೆ ಬರೆದು ತಿಳಿದುಕೊಳ್ಳಿ.

ಬ್ರಾಂಚ್ ಸೆಕ್ರೆಟರಿ, ಒರಿಯಂಟಲ್ ಲೈಫ್ ಆಫೀಸು, ಒರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.
ಅಥವಾ
ದಿ ಇನ್ಸ್‌ಪೆಕ್ಟರ್, ಒರಿಯಂಟಲ್ ಲೈಫ್ ಆಫೀಸು, ಮೈನ್‌ರೋಡ್, ಮಡಿಕೇರಿ, (ಕೊಡಗು)

Oriental Government Security Life Assurance Co., Ltd.

ಫ್ರಾನ್ಸ್ ಸಹ ಯುದ್ಧಕ್ಕೆ ಸಿದ್ಧವಾಗಿಯೇ ಇದೆ. ಈ ನಾಥಿರ್ ಷಾಹರೊಡನೆ ಯುದ್ಧ ಮಾಡದೆ ಬೇರೆ ಮಾರ್ಗವೇ ಇಲ್ಲ. ಯುದ್ಧವಂತೂ ಅನಿವಾರ್ಯ. ಇಟಲಿಯೊಂದೇ ಫ್ರಾನ್ಸನ್ನು ಸೋಲಿಸಲಾರದು. ಆದರೆ ಅದಕ್ಕೆ ನಾಜಿಗಳ ಬೆಂಬಲವಿದೆಯಲ್ಲ! ಈ ಬೆಂಬಲವು ಯಾವ ರೀತಿ ದೊರೆಯುವುದೆಂಬುದೇ ಮುಂದಿನ ಪ್ರಶ್ನೆ. ಕೇವಲ ಬಾಯಿಮಾತಿನ ಸಹಾನುಭೂತಿಯೋ ಈ ರೀತಿ ಆದರಂತೂ ಏನೂ ಮಾತನಾಡುವಂತೆಯೇ ಇಲ್ಲ. ಸೈನ್ಯದ ಸಹಾಯವನ್ನೇನಾದರೂ ಮಾಡುವುದಾದಲ್ಲಿ ರಣದೇವತೆಯ ಭಯಂಕರ ತಾಂಡವ ನೃತ್ಯವು ಅವಶ್ಯವಾಗಿ ನಡೆದೇ ನಡೆಯುವದು

ಪುಟ ೩ರಿಂದ

ಕುಮಾರಿಯ ಮಾತು. ಎರಡನೆಯವರದು ಫಿಲ್ಮ್ ಕಂಪೆನಿಯ ಅಂತರಂಗ ಬಹಿರಂಗಗಳ ವಿಷಯ ತನ್ನ ಹಲವು ವರುಷಗಳ ಅನುಭವದಿಂದಲೂ ನೂರಾರು ಸ್ತ್ರೀಯರ ಚರಿತ್ರೆಯ ರಹಸ್ಯಗಳನ್ನೆಲ್ಲ ಕಣ್ಣಾರೆ ಕಂಡು ಪರಾಂಬರಿಸಿಯೂ ಹೃದಯ ನೊಂದು ಬಂದ ಮಾತು.

ಮೈಸೂರು ಸ್ಟೇಟ್ ಕಾಂಗ್ರೆಸ್ಸಿನ ಅಧಿವೇಶನ ವಿದುರಾಶ್ವತ್ಥದಲ್ಲಿ.

ಬರುವ ಎಪ್ರಿಲ್ ತಾ. ೧೫ ರಿಂದ ೧೭ರ ವರೆಗೆ ವಿದುರಾಶ್ವತ್ಥದಲ್ಲಿ ಮೈಸೂರು ಸ್ಟೇಟ್ ಕಾಂಗ್ರೆಸ್ ಅಧಿವೇಶನವನ್ನು ಜರಗಿಸುವುದಾಗಿ ನಿಶ್ಚಯವಾಗಿದೆ. ಈ ಸಂದರ್ಭದಲ್ಲಿ ಖಾದಿ, ಸ್ವದೇಶೀ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನವನ್ನೂ ತೆರೆಯುವ ಏರ್ಪಾಡು ಆಗಿದೆ. ಅಧಿವೇಶನ ಹಾಗೂ ಪ್ರದರ್ಶನಗಳ ಪೂರ್ವಸನ್ನಾಹಗಳ ಸಿದ್ಧತೆಗಳ ವ್ಯವಸ್ಥೆಗಳೆಲ್ಲ ತೀವ್ರಗತಿಯಿಂದ ಸಾಗುತ್ತಿವೆ. ಸ್ವಾಗತ ಸಮಿತಿಯ ಸದಸ್ಯತನದ ಫೀಸು ರೂ. ೫.

ಹರತಾಳ.

ಚಿದಂಬರ, ರಾಜಮಹೇಂದ್ರಿ, ಮಚಲೀಪಟ್ಟಣ, ಕೊಯಮತ್ತೂರು, ಕುಂಭಕೋಣ, ಮನ್ನಾರಗುಡಿ, ಈರೋಡು ಮುಂತಾದ ಕಡೆಗಳಲ್ಲಿ ಮದ್ರಾಸು ಸರಕಾರವು ಸಾಮಾನ್ಯ ವಿಕ್ರಯದ ಮೌಲ್ಯದ ಮೇಲೆ ತೆರಿಗೆ (ಜನರಲ್ ಸೇಲ್ಸ್ ಟೇಕ್ಸ್) ಹೊರಿಸುವುದಾಗಿ ನ್ಯಾಯವಿಧಾಯಕ ಸಭೆಯ ಕಳೆದ ಬಜೆಟ್ ಅಧಿವೇಶನದಲ್ಲಿ ನಿರ್ಣಯಿಸಿದುದಕ್ಕೆ ಅಸಂತೃಪ್ತಿ ಸೂಚಕವಾಗಿ ಹರತಾಳ ಯಾ ವಿರೋಧ ಸಭೆಗಳನ್ನು ಜರಗಿಸಿ ಆ ತೆರಿಗೆಯನ್ನು ಅಮಲಿನಲ್ಲಿ ತರಬಾರದೆಂದು ನಿರ್ಣಯಗಳನ್ನು ಕಳುಹಲಾಗಿದೆ.

ರಾಜಕೋಟೆಯ ಪ್ರಶ್ನೆ

ವೈಸರಾಯರು ಪ್ರವೇಶಿಸಿದುದರಿಂದ ಗಾಂಧೀಜಿಗಳ ಮನಸ್ಸಿಗೆ ನ್ಯಾಯವೆಂದು ಸೂಚನೆಯನ್ನೂ ಆಶ್ವಾಸನೆಯನ್ನೂ ಕೊಟ್ಟುದ್ದರಿಂದ ಇವರು ಉಪವಾಸವ್ರತವನ್ನು ಬಿಟ್ಟರು. ರಾಜಕೋಟೆಯ ಅರಸರಾದ ಥಾಕೂರ್ ಧರ್ಮಸಿಂಹರು ಕೊಟ್ಟ ಮಾತು ತಪ್ಪಿದರೆಂದು ಗಾಂಧೀಜಿಗಳ ಸತ್ಯಾಗ್ರಹ, ಅದಕ್ಕೆ ಆಧಾರ ಥಾಕೂರರು ಕೊಟ್ಟದ್ದ ಎರಡು ಪ್ರಕಟನೆಗಳು ಮತ್ತು ವಲ್ಲಭಾಯಿ ಪಟೇಲರಿಗೆ ಬರೆದಿದ್ದ ಪತ್ರ ಇವು ಮೂರು ದಾಖಲೆಗಳನ್ನು ಹಿಂದೂಸ್ಥಾನದ ಅತ್ಯುಚ್ಛ ನ್ಯಾಯಸ್ಥಾನವಾದ ಫೆಡರಲ್ ಕೋರ್ಟಿಗೆ ಕಳುಹಿಸಿಕೊಟ್ಟು ವಚನ ಭಂಗವಾಗಿದೆಯೋ ಇಲ್ಲವೇ ಎಂಬ ತೀರ್ಮಾನ ಪಡೆಯೋಣ ಎಂಬುದು ವೈಸರಾಯರ ಸೂಚನೆ. ಮತ್ತುಳಿದ ಇತರ ದ್ವಿತೀಯ ಪ್ರಾಮುಖ್ಯತೆಯುಳ್ಳ ವಿಷಯಗಳನ್ನೆಲ್ಲ ನಾನೂ ನೀವೂ ಮುಖತಃ ಚರ್ಚಿಸಿ ಇತ್ಯರ್ಥಿಸಿಕೊಳ್ಳೋಣ. ಥಾಕೂರರಿಂದ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವುದು ನನ್ನ ಹೊಣೆಗಾರಿಕೆ ಎಂದು ವೈಸರಾಯರ ಅಭಿಪ್ರಾಯ. ಅದಕ್ಕೆ ಗಾಂಧಿಜಿಗಳು ಒಪ್ಪಿ ಉಪವಾಸವ್ರತವನ್ನು ತ್ಯಜಿಸಿರುವರು. ಈ ದೃಷ್ಟಿಯಿಂದ ತಾನೂ ಪ್ರಜಾಮಂಡಲವೂ ಇನ್ನು ಮಾಡಬೇಕಾಗಿರುವ ಕಾರ್ಯಗಳು ತುಂಬಾ ಇವೆ. ನಿಜವಾಗಿ ನಾನೀಗ ಕಾರ್ಯಾರಂಭಕ್ಕೆಳೆಯುತ್ತಿದ್ದೇನಷ್ಟೇ ಎಂದು ಗಾಂಧೀಜಿಗಳ ಹೇಳಿಕೆ.

ತಿರುವಾಂಕೂರಿನ ವಿಷಯ ಗಾಂಧೀಜಿಗಳು

ತಿರುವಾಂಕೂರಿನ ಸ್ಟೇಟ್ ಕಾಂಗ್ರೆಸ್ಸು ತಾ. ೨೫ಕ್ಕೆ ಸವಿನಯ ಕಾಯಿದೆಭಂಗ ಸತ್ಯಾಗ್ರಹವನ್ನು ತೊಡಗುವುದೆಂದು ಕೇಳಿದಾಗ ಗಾಂಧೀಜಿಯವರು ಹೀಗೆಂದರು: ಈ ಕಾರ್ಯಕ್ರಮದಲ್ಲಿ ನಾಲ್ಕು ಮುಖ್ಯ ಸೂತ್ರಗಳು ಇರಬೇಕು. ೧. ಜನಪದದಲ್ಲಾಗಲೀ ಸವಿನಯ ಶಾಸನ ಭಂಗವ್ರತ ಕೈಗೊಳ್ಳುವವರಲ್ಲಾಗಲೀ ಈ ವ್ರತವು ಹಿಂಸಾತ್ಮಕವಾಗಿ ಪರಿಣಮಿಸಲಾರದೆಂಬ ದೃಢ ನಿಶ್ಚಯ ಅತ್ಯಾವಶ್ಯಕ. ಅಂತಹ ಅನಾಹುತಗಳು ನಡೆದ ಮೇಲೆ ಅವಕ್ಕೆ ಪ್ರತಿಕೂಲಪಕ್ಷವಾಗಲೀ ಸರಕಾರವಾಗಲೀ ಕಾರಣವೆನ್ನುವುದು ನ್ಯಾಯವಾಗಲಾರದು. ೨. ಕಾಯಿದೆಭಂಗವು ಧ್ವಂಸಾತ್ಮಕವಾಗಿರಬಾರದು. ಯಾವ ಕಾನೂನು ಜನರಿಗೆ ಹಾನಿಕಾರಿಯಾಗಿದೆಯೋ ಯಾವ ಶಾಸನ ನಿರಾಕರಣೆಯಿಂದ ಜನತೆಗೆ ತೊಂದರೆಯಾಗದೆ ಅಧಿಕಾರಿಗಳಿಗೆ ಮಾತ್ರ ಹೆಚ್ಚು ಶ್ರಮಕೊಡುವುದೋ ಅಂತಹ ಕಾನೂನುಗಳನ್ನೇ ಆರಿಸಿ ಮುರಿಯಬೇಕು. ೩. ಸಾಧ್ಯವಿದ್ದಷ್ಟು ಹೆಚ್ಚುಮಂದಿ ಸಹಭಾಗಿಗಳಾಗುವ ಸಂಭವವಿರುವ ಶಾಸನಗಳನ್ನು ಮುರಿಯಬೇಕು. ೪. ವಿದ್ಯಾರ್ಥಿಗಳನ್ನು ಈ ಶಾಸನ ಭಂಗ ಚಳವಳಿಕ್ಕೆ ಕರೆಯಲೂ ಬಾರದು, ಸಹಭಾಗಿಗಳಾಗಲು ಬಿಡಲೂಬಾರದು.

ಜನರು
ಯಥಾರ್ಥವಾಗಿಯೂ
ಒಪ್ಪಿಕೊಳ್ಳುತ್ತಾರೆ:—
ಸ್ವಸ್ತಿಕ
ಸುಗಂಧಯುಕ್ತ ಕೆಸ್ಟೊರ್ ಆಯಿಲ್
ಗುಣದಲ್ಲೂ ಪರಿಮಳದಲ್ಲೂ ಸ್ವದೇಶ ಅಥವಾ ವಿದೇಶದ ಯಾವ ಕೂದಲೆಣ್ಣೆಯನ್ನಾದರೂ ಸೋಲಿಸುವ ಅತ್ಯುತ್ತಮವಾದ ಹೇರ್ ಆಯಿಲ್ ಎಂದು-
ಎಲ್ಲೆಲ್ಲೂ ವಿಕ್ರಯಿಸಲ್ಪಡುತ್ತದೆ.
83

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 12-3-39

ರಾಜಕೋಟೆ ದಿನಾಚರಣೆ—ಕಳೆದ ತಾ. 7ನೇ ಸಾಯಂಕಾಲ ಸ್ಥಳೀಯ ಕಾಂಗ್ರೆಸ್ ಕಮಿಟಿಗಳ ಆಶ್ರಯದಲ್ಲಿ ರಾಜಕೋಟೆ ದಿನಾಚರಣೆಯು ನಡೆಯಿತು. ಶ್ರೀ| ಯಂ. ಮಾಧವರಾಯರು ಅಧ್ಯಕ್ಷತೆವಹಿಸಿದ್ದರು. ಶ್ರೀ| ರಾಮರಾಯ ಮಲ್ಯರು ರಾಜಕೋಟೆಯ ಆಡಳಿತೆ, ಅಲ್ಲಿ ಪ್ರಜೆಗಳಿಗೆ ಇರತಕ್ಕ ಕಷ್ಟ ಮೊದಲಾದುವನ್ನು ತಿಳಿಸಿ ಜವಾಬ್ದಾರಿ ಸರಕಾರವನ್ನು ಅಲ್ಲಿಯ ಪ್ರಜೆಗಳಿಗೆ ಕೊಡಿಸುವುದಕ್ಕಾಗಿ ಮಹಾತ್ಮರು ನಿರಶನವ್ರತ ಮಾಡಿದ್ದಾಗಿಯೂ ಆದರೆ ಆಗ ತಾನೇ ಬಂದ ವಾರ್ತೆಗನುಸಾರವಾಗಿ ಮಹಾತ್ಮರು ವ್ರತವನ್ನು ನಿಲ್ಲಿಸಿದ್ದಾರೆಂದೂ ಇದರಿಂದ ಅಲ್ಲಿ ಒಂದು ತರದ ಒಪ್ಪಂದವಾಗುವ ಸಂಭವವಿದೆಯೆಂದೂ ಹೇಳಿದರು. ವ್ರತವನ್ನು ನಿಲ್ಲಿಸಿದ ವಾರ್ತೆ ಕೇಳಿದೊಡನೆ ಜಯಜಯಾಕಾರಗಳಿದ್ದುವು. ಅನಂತರ ಶ್ರೀಗಳಾದ ಎಸ್. ಎನ್. ಹೊಳ್ಳ; ಬಾಳಿಗರು ಇವರೇ ಮೊದಲಾದವರು ಮಾತಾಡಿದರು. ಅಧ್ಯಕ್ಷರ ಭಾಷಣದೊಂದಿಗೆ ಸಭಾಂತ್ಯವಾಯಿತು. ಈ ದಿನ ನಗರದ ಅನೇಕ ಕಡೆಗಳಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತ್ತು.

ಸುಭಾಸರ ಭಾವಚಿತ್ರದ ಅನಾವರಣ—ಕಳೆದ ತಾ. 7ನೇ ಮಂಗಳೂರ ಬಿ. ಇ. ಎಂ. ಹೈಸ್ಕೂಲ್ ಹಾಲಿನಲ್ಲಿ ರಾಷ್ಟ್ರಪತಿ ಸುಭಾಸರ ಭಾವಚಿತ್ರವನ್ನು ಅನಾವರಣಮಾಡಲಾಯಿತು. ಶ್ರೀ| ಕೆ. ಆರ್. ಕಾರಂತರು ರಾಷ್ಟ್ರಪತಿಗಳ ಗುಣಕಥನಮಾಡಿದರು. ಶಾಲಾ ಹೆಡ್ಮಾಸ್ಟರರು ಅಗ್ರಾಸನ ವಹಿಸಿದ್ದರು. ಈ ಪಟವನ್ನು 6ನೇ ಫಾರ್ಮಿನ ವಿದ್ಯಾರ್ಥಿಗಳು ಶಾಲೆಗೆ ಕೊಟ್ಟಿದ್ದರು. ಸಮಾರಂಭದ ಅಂತ್ಯದಲ್ಲಿ ಶ್ರೀ. ಟಿ. ಈಶ್ವರ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ವಿದ್ಯಾರ್ಥಿಗಳ ಪರಿಷತ್ತು— ಬರುವ ಎಪ್ರಿಲ್ ೩ರ ವಾರದ ಮೊದಲ ವಾರದಲ್ಲಿ ಜಿಲ್ಲಾ ವಿದ್ಯಾರ್ಥಿ ಪರಿಷತ್ತನ್ನು ಜರಗಿಸುವರೆ ಪ್ರಯತ್ನಗಳು ನಡೆಯುತ್ತಿವೆ.

ಮಂಗಳೂರು ನಗರ ಸಭೆ—ಮಂಗಳೂರು ನಗರ ಸಭೆಯು ಕಳೆದ ತಾ. 6ನೇ ಸೋಮವಾರ ನಗರ ಸಭಾಧ್ಯಕ್ಷರಾದ ಶ್ರೀ| ಬಿ. ವಿ. ಬಾಳಿಗ ಯಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿತು. 1938-39ರ ರಿವೈಸ್ಡ್ ಬಜೆಟನ್ನೂ 1939-40ರ ಬಜೆಟ್ ಅಂದಾಜನ್ನೂ ಸಭೆಯ ಮುಂದಿರಿಸಿದರು. ಈ ವರ್ಷದ ಬಜೆಟಿನಲ್ಲಿ ಒಂದು ಮುಖ್ಯವಾದ ಅಂಶವೇನೆಂದರೆ ವಿದ್ಯಾತೆರಿಗೆಯನ್ನು ಹಾಕಬೇಕೆಂದು ಕೌನ್ಸಿಲಿನಲ್ಲಿ ನಿರ್ಧಾರವಾಯಿತು. ಸ್ಥಿರಾಸ್ತಿ ಮತ್ತು ಮನೆಗಳ ಬಾಡಿಗೆಗಳ ಮೇಲೆ ಸೆಕಡ 1ರಂತೆ ಈ ತೆರಿಗೆಯನ್ನು ಹೊರಿಸಬೇಕೆಂದು ತೀರ್ಮಾನವಾಯಿತು. ಹೊಸ ತೆರಿಗೆಯನ್ನು ಮಿ| ಜಾನ್ ಗೋನ್ಸಾಲ್ವಿಸರು ವಿರೋಧಿಸಿದರು. ಶ್ರೀ| ರಂಗರಾವ್ ಕಲಬೇರಿಕರರು ಈ ಸೂಚನೆಯನ್ನು ಸಮರ್ಥಿಸುತ್ತಾ ಕಾಂಗ್ರೆಸಿನವರು ಅಧಿಕ ಸಂಖ್ಯೆಯಲ್ಲಿ ನಗರಸಭೆಯನ್ನು ಪ್ರವೇಶಿಸಿದ ಮೊದಲನೆಯ ವರ್ಷದಲ್ಲಿಯೇ ಹೊಸ ತೆರಿಗೆಯನ್ನು ಹೊರಿಸಿದುದು ಆಶ್ಚರ್ಯದ ಸಂಗತಿಯೆಂದೂ ಇದು ಕಾಂಗ್ರೆಸಿನವರು ಪ್ರಕಟಿಸಿದ ಚುನಾವಣಾ ಪ್ರಮಾಣಪತ್ರದ ಉದ್ದೇಶಗಳಿಗೆ ವಿರುದ್ಧವಾದುದೆಂದೂ ಬಲವಾಗಿ ಟೀಕಿಸಿದರು. ಚೇರ್ಮೇನರು ರಾ| ಶೆಟ್ಟಿಯವರೂ ಮಾತಾಡುತ್ತಾ ತೆರಿಗೆಯಿಂದ ಪ್ರಯೋಜನ ಹೊಂದುವವರು ಬಡ ಜನರೇ ಆಗಿರುವರೆಂದು ಹೇಳಿದರು. ಮಿ| ಗೋನ್ಸಾಲ್ವಿಸರ ರೆಜೊ ಬಿದ್ದು ಹೋಯಿತು.

ಜಿಲ್ಲಾ ಬೋರ್ಡು ಸಭೆ—ದ. ಕನ್ನಡ ಜಿಲ್ಲಾ ಬೋರ್ಡಿನ ಬಜೆಟ್ ಮಿಟಿಂಗು ಕಳೆದ ತಾ. 10ರಲ್ಲಿ ಸೇರಿತು. ಆರಂಭದಲ್ಲಿ ಎಂದರೆ 9.50ಕ್ಕೆ ಸರಿಯಾಗಿ ಬೋರ್ಡಿನ ವಿಶೇಷ ಸಭೆಯು ಸೇರಿ ಬೋರ್ಡು ಹಿಂದೆ ಮೈಸೂರು ದಿವಾನರಾದ ಸರ್. ಮಿರ್ಜರವರಿಗೆ ಮಾನಪತ್ರ ಸಮರ್ಪಿಸಬೇಕೆಂದು ಮಾಡಿದ್ದ ಠರಾವನ್ನು ರದ್ದುಪಡಿಸಿ ಠರಾವು ಮಾಡಿತು. ಅನಂತರ ಸಾಮಾನ್ಯ ವಿಷಯಗಳನ್ನು ಪರಿಶೀಲಿಸಿ ತೀರ್ಮಾನಿಸಿದ ಮೇಲೆ 1938-39ರ ರಿವೈಸ್ಡ್ ಬಜೆಟನ್ನು 1939-40 ಬಜೆಟ್ ಎಸ್ಟಿಮೇಟನ್ನು ಸಭೆಯ ಮುಂದಿರಿಸಲಾಯಿತು. ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಬಳದಲ್ಲಿ ರೂಪಾಯಿಗೆ 2ಆ. ಕಡಿಸುವ ಹಾಗೆ ಅನಿವಾರ್ಯವೆಂಬುದನ್ನು ಸೂಚಿಸಲಾಯಿತು. ಇತರ ವಿಷಯಗಳನ್ನು ಪರಿಶೀಲಿಸಿ ಸಭೆಯು ಮುಕ್ತಾಯವಾಯಿತು.

ಪಡುತೋನ್ಸೆ ಪಂಚಾಯತ್ ಬೋರ್ಡು—ಇತ್ತೀಚೆಗೆ ಸ್ಥಾಪಿತವಾದ ಈ ಪಂಚಾಯತ ಬೋರ್ಡಿನ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯು ಕಳೆದವಾರ ನಡೆಯಿತು. ಶ್ರೀಗಳಾದ ವಡಭಾಂಡೇಶ್ವರ ವೆಂಕಟಕೃಷ್ಣರಾವ್ ಅಧ್ಯಕ್ಷರಾಗಿಯೂ ಹೂಡೆ ಶೇಕ್ ಮಹಮ್ಮದ್ ಇಬ್ರಾಹಿಮ್ ಸಾಹೇಬರು ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಚುನಾಯಿತರಾಗಿರುವರು. ಮೊದಲನೆಯವರು ಈ ಮೊದಲೇ ಹಲವು ವರುಷಗಳಿಂದ ಗ್ರಾಮೋದ್ಧಾರ ಕಾರ್ಯಕಲಾಪಗಳಲ್ಲಿ ಆಸಕ್ತರಾಗಿದ್ದು ಪರಸ್ಪರ ಸಹಾಯಕ ಸಂಘದ ದಕ್ಷ ಕಾರ್ಯದರ್ಶಿಯರಾಗಿಯೂ ಇಂಡಸ್ಟ್ರಿಯಲ್ ಎಂಡ್ ಎಗ್ರಿಕಲ್ಚರಲ್ ಕೋಓಪರೇಟಿವ್ ಸೊಸೈಟಿ ಮತ್ತು ಕಲ್ಯಾಣಪುರ ಕಬ್ಬು ಕೃಷಿಗಾರರ ಯೂನಿಯನ್ ಇವುಗಳ ಡೈರೆಕ್ಟರುಗಳಲ್ಲೊಬ್ಬರಾಗಿಯೂ ಗ್ರಾಮದ ಪಂಚಾಯತಕೋರ್ಟಿನ ಸ್ಥಾಯೀ ಸದಸ್ಯರಾಗಿಯೂ ತುಂಬ ಅನುಭವಿಗಳಾದವರಿಂದಲೂ ಎರಡನೆಯವರು ಉತ್ಸಾಹೀ ತರುಣ ಶ್ರೀಮಂತ ವ್ಯಾಪಾರಿಗಳಾಗಿ ಗ್ರಾಮಸೇವಾ ಬುದ್ಧಿಯುಳ್ಳವರಾಗಿರುವುದರಿಂದಲೂ ಇವರನ್ನು ಸರ್ವಾನುಮತದಿಂದ ಚುನಾಯಿಸಿದ ಬೋರ್ಡಿನ ವಿವೇಕವು ಶ್ಲಾಘನೀಯವಿದೆ.

ಅಲ್ಲಿ ಇಲ್ಲಿ ತ್ರಿಪುರಿಯಲ್ಲಿ

೫೨ನೇ ಭಾರತ ರಾಷ್ಟ್ರಸಭಾಧಿವೇಶನ

ಅಂದಿನ ನಿರ್ಜನ ಪ್ರದೇಶವು ಇಂದಿನ ಸೊಬಗಿನ ಬೀಡು ವಿಷ್ಣುದತ್ತನಗರವಾಗಿದೆ

ವಸ್ತುಪದರ್ಶನದ ಉದ್ಘಾಟನೆ!

ಪಂಡಿತ ಜವಾಹಿರಲಾಲರ ಭಾಷಣ.



ಮಾರ್ಚಿ ತಾ. ೬ ಖಾದೀ ಮತ್ತು ಖಿಲ ಭಾರತ ಗ್ರಾಮಕೈಗಾರಿಕೆಗಳ ದರ್ಶನವನ್ನು ಜವಾಹಿರಲಾಲನೆಹರು ವರು ತೆರೆದರು. ಗಾಂಧೀಜಿಗಳ ಕೈ ಂದ ಈ ಸಮಾರಂಭವನ್ನು ಜರಗಿಸ ಕೆಂದು ಮೊದಲು ನಿಶ್ಚಿತವಾಗಿತ್ತು ರೆ ಅವರು ರಾಜಕೋಟೆಯಲ್ಲಿದ್ದ ಪ್ರ ಕ್ತ ಅವರ ಅಪೇಕ್ಷಾನುಸಾರ ನೆಹರೂ ಸು ಆ ಉದ್ಘಾಟಣಾ ಕಾರ್ಯವನ್ನು ವೇರಿಸಿದರು.

'ನಾನು ಸಮತಾವಾದದಲ್ಲಿ ಶ್ರದ್ಧೆಯು ವ. ನಮ್ಮ ದೇಶದ ಅಸಿದ್ಧ ವಸ್ತುಗಳ ಲ್ಲಿ ಉಪಯೋಗಿಸಿಕೊಳ್ಳಲಾಗುವಂತೆ ಡ್ಡ ದೊಡ್ಡ ಕಾರ್ಖಾನೆಗಳು ನಮಗೆ ಕೆಂಬ ಅಭಿಮತವುಳ್ಳವ ಆದರೆ ದೊಡ್ಡ ರ್ಖಾನೆಗಳನ್ನು ತಲೆದೋರಿದ ಮಾತ್ರ ಂದ ಹೊಟ್ಟೆಪಾಡಿನ ಸಮಸ್ಯೆಯನ್ನು ಡಿಸಿದಂತಾಗುವುದಿಲ್ಲ. ದೊಡ್ಡ ಕಾರ್ಖಾ ಗಳಿಗೂ ಸಣ್ಣ ಕೈಗಾರಿಕೆಗಳಿಗೂ ಹೋ ಟಬಾರದಂತೆ ನೋಡಿಕೊಳ್ಳತಕ್ಕದು ದ್ದ ಕಾರ್ಖಾನೆಗಳು ಭಂಡವಳಶಾಹೀ ಷ್ಟಿಯಿಂದ ನಡೆಯಿಸಲ್ಪಡಕೂಡದು. ಗೆ ಮಾಡಿದರೆ ನೂರಾರು ಜನರ ಬೆವ ನ ಮಹಿತದ ಫಲದ ಬಹ್ವಂಶ ಅವರಿಗೆ ರಕದೆ ಭಂಡವಳ ಹಾಕಿದ ಬರೀ ಕೆಲ ರ ಪಾಲಾಗಿ ಹೋಗುವ ಅಪಾಯವಿದೆ. ಪ್ರದರ್ಶನಗಳು ವಿನೋದ ವಿಚಿತ್ರ ದೃ ಶ್ಯಾವಳಿಗಳೆಂದು ಬಗೆಯಬಾರದು. ಹಳ್ಳಿ ಯಲ್ಲಾದ ವಸ್ತುಗಳನ್ನು ನಮ್ಮ ಜೀವನ ಲ್ಲಿ ಹೇಗೆ ಬಳಸಿಕೊಳ್ಳಲಾಗುತ್ತದೆಂದೂ ಹಳ್ಳಿಯ ಉದ್ಯಮಗಳನ್ನೂ ಆರ್ಥಿಕ ಪರಿಸ್ಥಿತಿಯನ್ನೂ ತನ್ಮೂಲಕ ಹೇಗೆ ಉತ್ಕರ್ಷಗೆ ತರಬಹುದೆಂಬುದನ್ನೂ ಮನವರಿಕೆ ಮಾಡಿಕೊಡುವುದೇ ಇಂತಹ ಪ್ರದರ್ಶನಗಳ ಧ್ಯೇಯ—' ಎಂಬುದು ನೆಹರೂಗಳ ಭಾಷಣದ ಕೆಲವು ಮಾತುಗಳು.

ತಾ. ೬—ಕಿಸಾನರ ಮತ್ತು ಕಾಂಗ್ರೆಸ್ ಸಮತಾವಾದಿಗಳ ಸಭೆ

ಮಿ. ಯೂಸೂಫ್ ಮೇಹರಾಲಿ ಇವರು ಅಧ್ಯಕ್ಷರಾಗಿದ್ದರು.

'ಫಡರೇಶನಿನ ಪ್ರತಿಭಟಣೆಯ ಕುರಿತು ಕಾಂಗ್ರೆಸಿನ ಧೋರಣೆಯು ಕಟುತರವಾಗಬೇಕು. ಸಂಸ್ಥಾನಿಕರ ಹೋರಾಟದಲ್ಲಿ ಕಾಂಗ್ರೆಸ್ಸು ಫಲದಾಯಕವಾದ ಸಹಕಾರವನ್ನು ಕೊಡಬೇಕು. ಕಾಂಗ್ರೆಸ್ಸು ಪಾಳೆಯದೊಳಗಿನ ಮತ್ತು ಇತರ ವಿವಿಧ ಪಂಗಡಗಳೆಲ್ಲ ಒಂದಾಗುವಂತೆ ಕಾರ್ಯಸಾಧನೆ ಮಾಡಬೇಕು. ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸು ಗಾಂಧೀವಾದಿಗಳನ್ನಾಗಲೀ ಸಮತಾವಾದಿಗಳನ್ನಾಗಲೀ ಕಳೆದುಕೊಳ್ಳಲು ಸಾಧ್ಯವಿಲ್ಲ. ಬರೇ ಒಂದು ಪಕ್ಷವು ಮತ್ತೊಂದು ಪಕ್ಷವನ್ನು ಉಪೇಕ್ಷಿಸಿ ಕಾರ್ಯಕ್ರಮವನ್ನು ನಿರ್ವಹಿಸುವಂತಿಲ್ಲ. ಆದುದರಿಂದ ಇತ್ತೀಚೆಗುಂಟಾದ ಭಿನ್ನಾಭಿಪ್ರಾಯಗಳನ್ನೆಲ್ಲ ಬದಿಗೆಹಾಕಿ ಕಾಂಗ್ರೆಸಿನ ಬಹುಮತ ಪ್ರಿಯವಾದ ಕಾರ್ಯಕ್ರಮವನ್ನು ನಿಶ್ಚೈಸಿಕೊಳ್ಳುವುದರಲ್ಲಿ ನಾವೆಂದು ದೃಷ್ಟಿಯಿಡಬೇಕಾಗಿದೆ.' ಎಂದು ಅಧ್ಯಕ್ಷರ ಆಗ್ರಹಪೂರ್ವಕ ಹೇಳಿಕೆ.

ತಾ. ೬—ಕಾಂಗ್ರೆಸ್ಸು ಅಧ್ಯಕ್ಷರ ಆಗಮನ

ಕಾಂಗ್ರೆಸ್ಸು ಅಧ್ಯಕ್ಷರಾದ ಸುಭಾಷ್‌ಚಂದ್ರ ಭೋಸ್‌ರವರನ್ನು ಜಬಲಪುರ ಸ್ಟೇಶನಿನಲ್ಲೇ ಎದುರುಗೊಳ್ಳಲು ಅಧಿವೇಶನದ ಸ್ವಾಗತಾಧ್ಯಕ್ಷರಾದ ಸೇಟ್ ಗೋವಿಂದದಾಸ್ ಮುಂತಾಗಿ ಹಲವರು ಹೋಗಿದ್ದರು. ಅಧ್ಯಕ್ಷರ ಅಪೇಕ್ಷೆಯಂತೆ ಸಂಭ್ರಮದ ಮೆರವಣಿಗೆಯ ಸನ್ನಾಹಗಳನ್ನೇನೂ ಮಾಡದೆ 'ಎಂಬ್ಯುಲೆನ್ಸ್ ಕಾರ್'ನ್ನು ಮಾತ್ರ ಕೊಂಡುಹೋಗಿದ್ದರು. ಯಾವುದೊಂದು ಗದ್ದಲ ಗೌಜಿಯಿಲ್ಲದೆ ಆ ಕಾರಿನಲ್ಲಿ ಬಂದು ಕಾಂಗ್ರೆಸ್ಸು ನಗರದಲ್ಲಿ ಅವರಿಗಾಗಿ ಏರ್ಪಡಿಸಿದ್ದ ಬಿಡಾರದಲ್ಲಿಳಿದರು. ವಲ್ಲಭಾಯಿ ಪಟೇಲ್, ನೆಹರೂ, ಸರೋಜಿನಿ ನಾಯ್ಡು, ಶ್ರೀನಿವಾಸ ಅಯ್ಯಂಗಾರ್ ಮುಂತಾಗಿ ಕೆಲವೇ ಕೆಲವರು ಮಾತ್ರ ಭೋಸರನ್ನು ಕಂಡು ಯೋಗಕ್ಷೇಮ ವಿಚಾರಿಸಿಕೊಂಡು ಬಂದರು.

ತಾ. ೭—ಗಾಂಧೀವಾದಿಗಳ ಪಾಳೆಯದಲ್ಲಿ

ಹಿಂದಿನ ರಾತ್ರೆಯೂ ಇಂದೂ ಪಟೇಲ್ ಪಂಥೀಯರು ೧೫ಮಂದಿಯೂ ನೆಹರುಗಳೂ ದೀರ್ಘ ಚರ್ಚೆಗಳನ್ನು ತಾಸು ತಾಸುಗಳ ತನಕ ಪಟೇಲರ ಶಿಬಿರದಲ್ಲಿ ನಡೆಯುತ್ತಿದ್ದರು. ಅವೆಲ್ಲ ತೀರ ರಹಸ್ಯವಾಗಿತ್ತು. ಆದರೂ ಗಾಂಧಿಜಿಗಳೇ ಮುಂದಿನ ವರುಷದ ಕಾರ್ಯಕ್ರಮಗಳನ್ನೆಲ್ಲ ರೂಪಗೊಳಿಸಬೇಕೆಂಬ ಒಂದೇ ನಿರ್ಣಯದಿಂದ ಕೆಲಸ ಮುಗಿಸುವ ವಿಚಾರ ಮುಖ್ಯವಾಗಿತ್ತಂತೆ

ಭೋಸ್ ಪಂಥೀಯರ ಪಾಳೆಯದಲ್ಲಿ

ಅಲ್ಲಿಯೂ ಹಿಂದಿನ ರಾತ್ರೆ ಮತ್ತು ಇಂದು ಚರ್ಚೆಗಳು ನಡೆಯುತ್ತಿದ್ದುವು. ಫೆಡರಲ್ ಪ್ರಶ್ನೆಯ ಕುರಿತು ಸರಕಾರಕ್ಕೆ ಆರು ತಿಂಗಳ ಅವಧಿಕೊಡುವ ಅಂಶವನ್ನಾದರೂ ಬಿಟ್ಟು ನೆಹರೂಗಳನ್ನು ಒಲಿಸಿಕೊಂಡು ತನ್ಮೂಲಕ ಗಾಂಧೀವಾದಿಗಳನ್ನೂ ಸಂತೃಪ್ತಿಗೊಳಿಸುವಂತಹ ಒಕ್ಕಣೆಯಿಂದೊಂದು ನಿರ್ಣಯವನ್ನು ತರಬೇಕೆಂಬ ಪ್ರಯತ್ನ ನಡೆಯಿತು. ಆತುರದಲ್ಲಿ ಒಕ್ಕಣಿಸಿ ಒಂದು ನಿರ್ಣಯವನ್ನು ತರಬೇಕೆಂದು ನೆಹರುಗಳನ್ನು ಕೇಳಿಕೊಂಡರೂ ಅವರು ಪ್ರಸ್ತುತ ಪರಿಸ್ಥಿತಿಯಲ್ಲಿ ತಾನು ಯಾವ ನಿರ್ಣಯವನ್ನು ತರುವುದಿಲ್ಲವೆಂದು ಪ್ರತ್ಯುತ್ತರ ಕೊಟ್ಟರಂತೆ.

ತಾ. ೭ ಐದೇಮಿನಿಟಿನ ಕಾಂಗ್ರೆಸ್ ಕಮಿಟಿ ಸಭೆ.

ಅಧ್ಯಕ್ಷರು ದೇಹಾಲಸ್ಯದ ದೆಸೆಯಿಂದ ಬರಲಿಕ್ಕಾಗದಿದ್ದರೂ ನಿಶ್ಚಿತ ಮುಹೂರ್ತದಲ್ಲಿ ಕಾಂಗ್ರೆಸ್ ಕಮಿಟಿ (ಎ.ಐ.ಸಿ.ಸಿ.)ಯ ಸಭೆ ಜರಗಬೇಕೆಂದು ಶಾಸ್ತ್ರಪ್ರಕಾರ ಜರಗಿತು, ಮೌಲಾನಾ ಅಬುಲ್ ಕಲಮ ಅಜಾದರವರು ಅಧ್ಯಕ್ಷರ ಪ್ರತಿನಿಧಿಯಾಗಿ ಗದ್ದುಗೆಯೇರಿದರು. ಕಾಂಗ್ರೆಸ್ ಅಧಿವೇಶನದಲ್ಲಿ ಹೀಗಾದುದು 'ಇದೇ ಮೊದಲನೆಯ ಸಲ. ಕಾಂಗ್ರೆಸ್ಸು ಕಮಿಟಿಯ ವಾರ್ಷಿಕ ವರದಿಯನ್ನು ರಾಜಿನಾಮೆ ಕೊಟ್ಟಿದ್ದ ಕೃಪಾಲಾನಿಯವರೇ ಓದಲು ಮುಂದಿನ ಅಪರಾಹ್ನ ೪ ಗಂಟೆಗೆ ಸಭೆಯನ್ನು ಮುಂದರಿಸಲಾಯಿತು.

ತಾ. ೮ ಪರಸ್ಪರ ಭೇಟಿ

ಹಿಂದಿನ ರಾತ್ರೆ ಮತ್ತು ಇಂದಿನ ಪೂರ್ವಾಹ್ನ ಕಾಂಗ್ರೆಸ್ಸಿನ ಮಂದ ಉಗ್ರ ಪಕ್ಷಗಳ ಮುಂದಾಳುಗಳ ಪಾಳೆಯಗಳಲ್ಲಿ ಕಾಂಗ್ರೆಸ್ ಕಮಿಟಿಯ ಸದಸ್ಯರ ಕೊಠಡಿಗಳಲ್ಲಿ ಪರಸ್ಪರಭೇಟಿ ವಿಚಾರ ವಿನಿಮಯ ಮತ್ತು ಯಾಚನೆ ಮುಂತಾದ ಚಟುವಟಿಕೆಗಳು ವಿಶೇಷ ಕಾಣುತ್ತಿದ್ದವು. 'ನಾವು ಬೇರಾಗುವ ಮುಹೂರ್ತ ಸನ್ನಿಹಿತವಾಗುತ್ತಿದೆ'ಎಂದುವಲ್ಲಭಾಯಿಪಟೇಲರು ಭೋಸರ ಪಕ್ಷವಾಗಿ ಅಧ್ಯಕ್ಷ ಚುನಾವಣೆಯಲ್ಲಿ ಮತಕೊಟ್ಟ ದಕ್ಷಿಣ ಭಾರತದ ಪ್ರಮುಖ ಮುಂದಾಳುಗಳೊಬ್ಬರಿಗೆ ಹೇಳುವಷ್ಟು ಉದ್ವಿಗ್ನತೆಯ ಸ್ಥಿತಿಬಂದಿತ್ತು. ಅಂತೂ ಗಾಂಧೀ ನೇತೃತ್ವವೇ ಭಾರತಬಂಧವಿಮೋಚನೆಯ ಏಕಮಾತ್ರ ಮಾರ್ಗವೆಂಬ ಗಾಂಧಿ ಪಂಥೀಯರ ಆದೊಂದು ನಿರ್ಣಯಕ್ಕೆ ಕಾಂಗ್ರೆಸ್ ಕಮಿಟಿಯ ೩೨೦ ಸದಸ್ಯರಲ್ಲಿ ೧೮೫ ಮಂದಿಯ ಸಹಿ ಕೂಡ ಪಡೆದುದಾಗಿತ್ತು. ಆ ವೇಳೆ ಮಧ್ಯಾಹ್ನ ವಲ್ಲಭಾಯಿ ಪಟೇಲ ಪ್ರಭೃತಿಗಳು ಅಧ್ಯಕ್ಷರ ಕರೆಯ ಮೇರೆಗೆ ಅವರನ್ನು ಕಂಡು ಒಂದು ತಾಸು ಮಾತನಾಡಿ ಹೊರಬಂದಾಗ ಅವರ ಮುಖಗಳ ಘನಗಂಭೀರಮುದ್ರೆಯನ್ನು ಕಂಡವರಿಗೆ ತ್ರಿಪುರಿಕಾಂಗ್ರೆಸ್ಸು ಬಿಗುವಾಯಿತೆಂದು ತೋರಿತು.

ಸಾಯಂಕಾಲ ನಾಲ್ಕುವರೆ ಘಂಟೆಗೆ ಕಾಂಗ್ರೆಸ್ ಕಮಿಟಿ ಮೀಟಿಂಗ್ ಪ್ರಾರಂಭ. ಭೋಸರವರನ್ನು 'ಎಂಬುಲೇನ್ಸ್' ಕಾರಿನಲ್ಲಿ ಸಭಾಭವನದ ತನಕ ತಂದು ಅನಂತರ ತೂಗುಮಂಚದಲ್ಲಿ ಮಲಗಿಸಿ ಚಪ್ಪರದೊಳಗೆ ತಂದು ಆರಾಮಾಸನದಲ್ಲಿ ಒರಗಿಸಿದರು.



ಶ್ರೀ ಗೋವಿಂದವಲ್ಲಭಪಂಥರ ಸೂಚನೆಯು ಸಭೆಯ ಮುಂದಿಡಲಾಯಿತು. ಅದರ ಒಕ್ಕಣೆ ಹೀಗಿತ್ತು. 'ಅಧ್ಯಕ್ಷರ ಚುನಾವಣೆ ಹಾಗೂ ತದನಂತರದ ಘಟನಾವಳಿಗಳ ಸಂಬಂಧವಾಗಿ ವಾದ ವಿವಾದಗಳೆದ್ದಾಗಿ ಕಾಂಗ್ರೆಸ್ಸಿನಲ್ಲಿಯೂ ರಾಷ್ಟ್ರೀಯರಲ್ಲಿಯೂ ಹಲವು ಬಗೆಯ ಅಭಿಪ್ರಾಯ ಪ್ರಭೇದಗಳು ತಲೆದೋರಿರುವುದರಿಂದ ಈ ಅಖಿಲಭಾರತ ಕಾಂಗ್ರೆಸ್ಸು ಕಮಿಟಿಯು ಕಾಂಗ್ರೆಸ್ಸಿನ ಸಾಮಾನ್ಯ ಧೋರಣೆಯನ್ನು ವ್ಯಕ್ತಗೊಳಿಸಿ ಪರಿಸ್ಥಿತಿಯನ್ನು ಸುಸ್ಪಷ್ಟಗೊಳಿಸಬೇಕು. ಮಹಾತ್ಮಾ ಗಾಂಧಿಯವರ ಮಾರ್ಗದರ್ಶಿತ್ವದಲ್ಲಿ ಯಾವ ಮೂಲಭೂತ ತತ್ವಧೋರಣೆಗಳು ಹಿಂದೆ ಹಲವು ವರ್ಷಗಳಿಂದಲೂ ಕಾಂಗ್ರೆಸ್ಸನ್ನು ಅಂಕೆಯಲ್ಲಿಟ್ಟುಕೊಂಡಿವೆಯೋ ಅವುಗಳಲ್ಲೇ ಈ ಕಮಿಟಿಗೆ ಸ್ಥಿರ ವಿಶ್ವಾಸವಿದೆ. ಅವುಗಳಿಗೆ ಭಂಗಬರಬಾರದೆಂದೂ ಅವುಗಳಿಗೆ ಅಧೀನವಾಗಿಯೇ ಮುಂದೆಯೂ ಕಾಂಗ್ರೆಸ್ಸಿನ ಕಾರ್ಯಕ್ರಮಗಳು ವಿರಚಿತವಾಗಬೇಕೆಂದೂ ಈ ಕಮಿಟಿಯ ನಿಶ್ಚಿತ ಅಭಿಪ್ರಾಯವಾಗಿದೆ.

ಕಳೆದ ವರ್ಷ ಕಾರ್ಯ ನಿರ್ವಹಿಸಿದ ವರ್ಕಿಂಗ ಕಮಿಟಿಯ ಕಾರ್ಯಭಾರದಲ್ಲಿ ಈ ಕಮಿಟಿಗೆ ವಿಶ್ವಾಸವಿದೆ. ಮತ್ತು ಅದರ

ಯಾವ ಸದಸ್ಯನ ಮೇಲಾಗಲೀ ದೋಷಾರೋಪಣೆ ಬಂದುದಕ್ಕಾಗಿ ಈ ಕಮಿಟಿಯು ವಿಷಾದಿಸುತ್ತದೆ. ಮುಂದಿನ ವರುಷದಲ್ಲಿ ಬಿಕ್ಕಟ್ಟಿನ ಸಂಘಟನೆಗಳು ತಲೆದೋರಲಿಕ್ಕಿರುವುದರಿಂದಲೂ ಅಂತಹ ಸಂದಿಗ್ಧ ಕಾಲದಲ್ಲಿ ಕಾಂಗ್ರೆಸ್ಸನ್ನೂ ರಾಷ್ಟ್ರವನ್ನೂ ಜಯದ ಗುರಿ ಮುಟ್ಟುವಂತೆ ಮಾಡಲಾಪ ವ್ಯಕ್ತಿಯು ಮಹಾತ್ಮಾಗಾಂಧಿಯೊಬ್ಬರೇ ಆಗಿರುವುದರಿಂದಲೂ ಕಾಂಗ್ರೆಸ್ಸಿನ ಕಾರ್ಯಕಾರೀ ಮಂಡಳಿಯು (ವರ್ಕಿಂಗ್ ಕಮಿಟಿಯು) ಅವರ ಪರಿಪೂರ್ಣ ವಿಶ್ವಾಸದ ಅಧೀನತೆಗೆ ಒಳಗಾಗಿ ಬೇಕಾದುದರಿಂದ ಮುಂದಿನ ವರುಷದ ವರ್ಕಿಂಗ್ ಕಮಿಟಿಯ ಸದಸ್ಯರ ನೇಮಕವನ್ನು ಗಾಂಧೀಜಿಯವರ ಅಪೇಕ್ಷಾನುಸಾರ ಕಾಂಗ್ರೆಸ್ಸಿನ ಅಧ್ಯಕ್ಷರು ಮಾಡತಕ್ಕದ್ದು

ಮೇಲಿನ ಸೂಚನೆಯ ಕುರಿತು ತೀಕ್ಷ್ಣ ಚರ್ಚೆಗಳಾದ ಬಳಿಕ ಅಧ್ಯಕ್ಷರು ಅದು ಈ ಸಭೆಯಲ್ಲಿ ಬರತಕ್ಕದ್ದಲ್ಲವೆಂದೂ ಬೇಕೆಂದಿದ್ದರೆ ವಿಷಯ ನಿಯಾಮಕ (ಸಬ್‌ಜೆಕ್ಟ್) ಕಮಿಟಿಯ ಮುಂದೆ ತರಬಹುದೆಂದೂ ಹೇಳಿ ಅದನ್ನು ಅಕ್ರಮದ ಸೂಚನೆಯೆಂದು ತಳ್ಳಿಹಾಕಿದರು.

ತಾ. ೯-ಪಂಥರ ಠರಾವೇ ದೊಡ್ಡ ಪಂಥವಾಗಿ ನಿಂತಿತು

ಪಂಥರ ಠರಾವಿನ ಪರವಾಗಿಯೂ ವಿರೋಧವಾಗಿಯೂ ಮತ ಯಾಚನೆಗೆ ಪ್ರಾರಂಭ. ಮಾತುಕತೆ ಒತ್ತಾಯ ಚರ್ಚೆ ಭಾಷಣ ಮುಂತಾಗಿ ಉಭಯ ಪಾಳಿಯದ ಬತ್ತಳಿಕೆಯೊಳಗಿನ ವಿವಿಧ ಅಸ್ತ್ರ ಶಸ್ತ್ರಗಳೆಲ್ಲವೂ ಹೊರತೆಗೆಯಲಾದುವು—ಕಾತರ, ಕುತೂಹಲ, ಉದ್ವಿಗ್ನತೆಯ ದಿನವಾಗಿತ್ತು.

ಉಪಮಾಪ್ರಿಯ ರಾಜಾಜಿಗಳು

ಈಗ ನಮ್ಮ ಮುಂದೆ ಎರಡು ದೋಣಿಗಳಿವೆ. ಒಂದು ಹಳೆಯದು, ಆದರೆ ದೊಡ್ಡದು; ಅದರ ಅಂಬಿಗ ಮಹಾತ್ಮಾ ಗಾಂಧೀ! ಇನ್ನೊಂದು ದೋಣಿಯುಂಟು; ಅದು ಹೊಸದು, ಆಕರ್ಷಣೀಯವಾಗಿ ಬಣ್ಣಗೊಟ್ಟು ಅಲಂಕರಿಸಲ್ಪಟ್ಟಿದೆ. ಆ ದೋಣಿಗೆ ಬನ್ನಿರೆಂದು ಅದರ ಅಂಬಿಗನು ಕರೆಯುತ್ತಿದ್ದಾನೆ. ಈವರೆ ಮಹಾತ್ಮಾ ಗಾಂಧಿಯು ಅನುಭವಿಕನಾದ ಅಂಬಿಗ, ನಿಮ್ಮನ್ನು ಸುರಕ್ಷಿತವಾಗಿ ಕಡೆ ಹಾಯಿಸಿಯಾನು.



ಆದರೆ ನಾವು ಆ ಮತ್ತೊಂದು ದೋಣಿಗೇರಿ ಕುಳಿತರೆ ಅದು ತೂತುಬಿದ್ದಿದೆ ಎಂದು ನನಗೆ ಗೊತ್ತು!-ನಾವೆಲ್ಲಾ ನೀರುಪಾಲಾಗುವೆವು! ನರ್ಮದಾ ನದಿಯು ನಿಜವಾಗಿಯೂ ಬಹಳ ಅಗಾಧವಾಗಿದೆ ತನ್ನ ದೋಣಿಯನ್ನು ಹತ್ತಲಾರಿರಾದರೆ ಅದನ್ನು ನಿಮ್ಮದಕ್ಕೆ ಕಟ್ಟಿಕೊಳ್ಳಿ ಎನ್ನುತ್ತಾನೆ ಆ ಹೊಸ ಅಂಬಿಗ. ಆದರೆ ಅದು ಸಾಧ್ಯವಿಲ್ಲ ತೂತು ಬಿದ್ದ ದೋಣಿಯನ್ನು ನಮ್ಮ ಒಳ್ಳೆಯ ದೋಣಿಗೆ ಕಟ್ಟಿಕೊಂಡು ಕೊನೆಗೆ ನಾವೂ ಮುಳುಗುವ ಗಂಡಾಂತರಕ್ಕೆ ಅವಕಾಶ ಕೊಡಲಾರೆವು. ಮೂವತ್ತು ವರುಷಗಳಿಂದ ಸುರಕ್ಷಿತ ನಾಯಕನೆಂದು ನಮ್ಮ ಅನುಭವಕ್ಕೆ ಬಂದ ಅಂಬಿಗನೆಂದರೆ ಮಹಾತ್ಮಾ ಗಾಂಧೀ. ಆ ದೋಣಿಯನ್ನೇ ಹತ್ತೋಣ ಬಣ್ಣದ ಮಾತಿಗೆ ಮರುಳಾಗಿ ತೂತು ಬಿದ್ದ ದೋಣಿ ಹತ್ತಬೇಡಿರಿ. ಅದರಲ್ಲಿ ಸ್ವಲ್ಪಕಾಲವಿದ್ದು ಅದು ವಿಪತ್ಕಾರಿಯೆಂದು ತಿಳಿದರೆ ಅದರಿಂದ ಹಾರಿ ಇದಕ್ಕೆ ಈಜಾಡಿಕೊಂಡು ಬಂದು ಬಿಡೋಣ ಎನ್ನುವಿರಾ? ನೀವು ಬದುಕಲಾರಿರಿ! ಇದು ಮದ್ರಾಸಿನ ಪ್ರಧಾನ ಮಂತ್ರಿಗಳಾದ ಶ್ರೀ. ರಾಜಗೋಪಾಲಾಚಾರ್ಯರು ತಾ ೯ರಂದು ಮಹಾಸಭೆಯೊಂದರಲ್ಲಿ ಭಾಷಣ ಕೊಡುತ್ತ ಉಪಯೋಗಿಸಿದ ಉಪಮೆ

ತಾ. ೧೦ ಹಿಂದಿನ ದಿನವೆಲ್ಲ ಪಂಥರ ಠರಾವಿನ ಅನುಕೂಲ ಪ್ರತಿಕೂಲ ವಿಚಾರಗಳ ಮಾತುಕತೆಗಳೇ ಕಾಂಗ್ರೆಸ್ ನಗರದಲ್ಲೆಲ್ಲ. ಅದೊಂದೇ ತ್ರಿಪುರಿ ಕಾಂಗ್ರೆಸಿನ ಏಕಮಾತ್ರ ಪ್ರಶ್ನೆ ಎಂಬ ಅಭಿಪ್ರಾಯವು ತಾ. ೧೦ರಲ್ಲಿ ಎಲ್ಲರ ಹೃದಯದಲ್ಲಿ ರೂಢಮೂಲವಾಗಿತ್ತು ರಾಜಾಜಿಯವರು ರಾಜಕೋಟೆಯಲ್ಲಿರುವ ಗಾಂಧೀಜಿಗಳೊಡನೆ ಟೆಲಿಫೋನ್ ಮೂಲಕ ಮಾತಾಡಿದರೆಂದೂ ಪಂಥರ ಠರಾವಿನ ಒಕ್ಕಣೆಗೆ ಗಾಂಧೀಜಿಗಳ ಅನುಮೋದನೆ ದೊರಕಿದೆಯೆಂದೂ ಎಲ್ಲೆಲ್ಲಿಯೂ ಸುದ್ದಿ ಬಿದ್ದಿತ್ತು. ಆದುದರಿಂದ ಪ್ರತಿಕೂಲ ಪಕ್ಷದವರು ಯಾರೇ ಆಗಲಿ, ಏನೇ ತಿದ್ದುಪಡಿ ತರಲಿ, ಅದನ್ನು ಸ್ವೀಕರಿಸಲು ಗಾಂಧೀ ಪಂಥೀಯರು ಸಿದ್ಧರಿಲ್ಲ. ಮೆಂದೂ ಅವರಿಗೆ ಸಬ್‌ಜೆಕ್ಟ್ ಕಮಿಟಿಯಲ್ಲಿಯೂ ಅನಂತರದ ಕಾಂಗ್ರೆಸ್ಸಿನ ಮಹಾಸಭೆಯಲ್ಲಿಯೂ ಪ್ರಬಲ ಬಹುಮತ ದೊರಕುವದು ನಿಶ್ಚಯವೆಂಬಷ್ಟು ಬೆಂಬಲವು ಸಿದ್ಧವಾಗಿಯೇ ನಿಂತಿದೆ ಎಂದೂ ಎಲ್ಲೆಲ್ಲಿಯೂ ಗುಜುಗುಜು.

ಅಧ್ಯಕ್ಷ ಬೋಸರು ಹಿಂದಿನೆರಡು ದಿನದ ಕಾರ್ಯಕಲಾಪ ಸಂದರ್ಶನೆ ವಿಚಾರ ವಿನಿಮಯ ಮಾತುಕತೆಗಳಿಂದಾಗಿ ದೇಹಸ್ಥಿತಿಯನ್ನು ಮತ್ತಷ್ಟು ಬಲಗುಂದಿಸಿಕೊಂಡು ಜ್ವರವೇರುವಂತೆ ಮಾಡಿಕೊಂಡುದರಿಂದ ಸಬ್‌ಜೆಕ್ಟ್ ಕಮಿಟಿಯ ಮೀಟಿಂಗಿಗೆ ಬರಲಾಗಲಿಲ್ಲ. ಮೌಲಾನಾ ಅಬ್ದುಲ್ ಅಜಾದರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಪಂಥರ ಗಾಂಧೀ ಪಂಥದ ಠರಾವಿಗೆ ಅನುಕೂಲವಾಗಿ ೨೧೮ ಮತಗಳೂ ಪ್ರತಿಕೂಲವಾಗಿ ೧೩೫ ಮತಗಳೂ ಬರಲಾಗಿ ಪಂಥರ ಠರಾವಾದ ವಲ್ಲಭಾಯಿ ಪಂಥೀಯರ ಪಂಥವೇ ಗೆದ್ದುಬಿಟ್ಟಿತು.

ತಾ ೧೧-ಇಂದಿನ ಕಾಂಗ್ರೆಸ್ ಮಹಾ ಅಧಿವೇಶನದಲ್ಲಿಯೂ ಅನನ್ಯ ಗಾಂಧೀ ಚರಣ್ಯದ ಆ ಠರಾವು ಬಹುಮತದಿಂದ ಅಂಗೀಕೃತವಾಯಿತು. ದೇಶದ ಒಲವು ಎತ್ತ ಕಡೆಯುಂಟೆಂಬುದು ನಿರ್ಧಾರವಾಯಿತು.

ಈಜಿಪ್ತದಿಂದ ತ್ರಿಪುರಿಗೆ ನಿಯೋಗಿಗಳು

ಈಜಿಪ್ತ್ ದೇಶದ ಪ್ರಜಾಪಕ್ಷ (ವಾಫ್ದ್)ದಿಂದ ತ್ರಿಪುರಿ ಕಾಂಗ್ರೆಸು ಅಧಿವೇಶನಕ್ಕೆ ತಮ್ಮ ಶುಭಾಕಾಂಕ್ಷೆ, ಸಹಾನುಭೂತಿ, ಸಹಕಾರ ಸೂಚಕವಾಗಿ ನಿಯೋಗಮಂಡಳಿಯು ಬಂದಿತ್ತು. ಬೊಂಬಾಯಿಯಲ್ಲಿ ಅವರು ಬಂದಿಳಿದಾಗಲೇ ಗಾಂಧೀಜಿಯವರು ಅವರಿಗೆ ರಾಜಕೋಟೆಯಿಂದ ಸುಸ್ವಾಗತ ಬಯಸಿ ತಂತಿಕಳುಹಿಸಿದ್ದರು. ಬೊಂಬಾಯಿ ಸರಕಾರವೂ ಅವರನ್ನು ಆದರದಿಂದ ಬರಮಾಡಿಕೊಂಡು ತ್ರಿಪುರಿಗೆ ಕಳುಹಿಸಿಕೊಟ್ಟಿತು. ತ್ರಿಪುರಿಯಲ್ಲಿ ಸ್ವಾಗತ ಅಧ್ಯಕ್ಷರೂ, ಬೋಸರೂ ಪ್ರತ್ಯೇಕ ಪ್ರತ್ಯೇಕ ಸೌಹಾರ್ದತೆಯ ಸುಸ್ವಾಗತವನ್ನು ಕೊಟ್ಟುದಲ್ಲದೆ ಅಧಿವೇಶನದ ಮಹಾಸಭೆಯಲ್ಲಿ ಅವರಿಗೆ ಆದರದ ಸ್ವಾಗತವನ್ನೆಸಗುವ ನಿರ್ಣಯವೂ ಆಗಿತ್ತು. ಅವರ ಪ್ರಮುಖರು ಈ ಸಂದರ್ಭದಲ್ಲಿ ಮಾತಾಡುತ್ತ 'ನೀವು ಇಂದು ಹಿಡಿದಿರುವ ಹಾದಿ ಹಿಡಿದೇ ನಾವೂ ಹಿಂದೆ ಈಜಿಪ್ತದಲ್ಲಿ ಬ್ರಿಟಿಷ್ ಸರಕಾರವನ್ನು ಪ್ರತಿಭಟಿಸಿ ವಿಜಯಿಗಳಾಗಿ ಸ್ವಾತಂತ್ರ್ಯ ಸ್ವರಾಜ್ಯವನ್ನು ಸ್ಥಾಪಿಸಿಕೊಂಡಿದ್ದೇವೆ. ಆದುದರಿಂದ ಇಂದು ನಿಮ್ಮ ಹೋರಾಟದಲ್ಲಿ ನಮಗೆ ಆನಂದವಿದೆ, ಸಹಾನುಭೂತಿಯಿದೆ, ಪ್ರೋತ್ಸಾಹದ ಧೋರಣೆ ಇದೆ. ನಮ್ಮಲ್ಲಿ ಮಹಮ್ಮದೀಯ ಕ್ರೈಸ್ತರೆಂಬ ಪ್ರಬಲ ಪಂಗಡಗಳಿದ್ದುವು. ಆದರೆ ಪ್ರಭುತ್ವವನ್ನು ಇದಿರಿಸುವಲ್ಲಿ ನಾವೆಲ್ಲ ಒಂದೇ—ಬರೇ ಈಜಿಪ್ಶಿಗಳು—ಎಂಬ ಏಕಭಾವನೆಯಿಂದ ಮುಂದುವರಿದು ಜಯಲಾಭವನ್ನು ಹೊಂದಿದೆವು. ನೀವೂ ಅಂತೆಯೇ ಮತ ಪಂಗಡಗಳ ಕ್ಷುಲ್ಲಕ ಭೇದಭಾವವನ್ನೆಲ್ಲ ಈ ಮಹಾಪ್ರಶ್ನೆಯ ಎದುರಲ್ಲಿ ಮರೆತು ಒಂದುತನದಿಂದ ಹೋರಾಡಿರಿ. ನಮ್ಮಂತೆ ನಿಮಗೂ ಜಯಶ್ರೀಯು ಒಲಿಯುವಳು. ಈಜಿಪ್ಟ್ ಮತ್ತು ಇಂಡಿಯಾ ಇವು ಅತಿ ಪುರಾತನ ಕಾಲದಿಂದಲೂ ಪ್ರಕೃತಿಯಿಂದ ತಮ್ಮ ಸಂಸ್ಕೃತಿ ನಾಗರಿಕತೆಗಳ ವಿನಿಮಯಮಾಡಿಕೊಂಡು ಖ್ಯಾತಿಗೊಂಡ ಅತಿ ಪ್ರಾಚೀನ ದೇಶಗಳು. ಮುಂದೆಯೂ ನಾವು ಸಹಾನುಭೂತಿ ಸಹಕಾರ ಸೌಹಾರ್ದತೆಯಿಂದ ನಡೆಯಬೇಕು. ಈ ಸಂದೇಶವನ್ನು ನಮ್ಮ ಈಜಿಪ್ತದ ಪರವಾಗಿ ನಾವಿಂದು ಇಲ್ಲಿ ತಂದು ಸಾರುತ್ತೇವೆ. ಇನ್ನು ಕೆಲವು ತಿಂಗಳೊಳಗೆ ನಮ್ಮಲ್ಲಿ ರಾಷ್ಟ್ರೀಯ ಪರಿಷತ್ತು ಜರಗುವುದು. ಅದಕ್ಕೆ ನಿಮಗೆ ಆಮಂತ್ರಣವನ್ನಿಂದೇ ಆಪಿಸಿರುವೆವು. ಹೀಗೆ ನಮ್ಮ ರಾಷ್ಟ್ರೈಭ್ಯದಯ ಕಾರ್ಯಕಲಾಪಗಳಲ್ಲಿ ಪರಸ್ಪರ ಸಂಪರ್ಕ ಬೆಳೆಸಿ ಮಿತ್ರ ರಾಷ್ಟ್ರವಾಗಿರೋಣ-ಎಂದರು. ಈ ನಿಯೋಗ ಮಂಡಲಿಯನ್ನು ಮದ್ರಾಸಿನ ಕಾಂಗ್ರೆಸ್ಸು ಮುಂದಾಳುಗಳು ತಮ್ಮಲ್ಲಿಗೆ ಬರಬೇಕೆಂದು ಆಮಂತ್ರಣಕೊಟ್ಟಿದ್ದಾರೆ

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಉಚ್ಚ್ವಾಸ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ, ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಆಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. ಕ್ರಯ:-100 ಮಾತ್ರೆಗಳಿಗೆ ರೂ 1-5-0, 500ಕ್ಕೆ ರೂ 6-0-0. ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ

ಆಮಲಕೀ ತೈಲ

(ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅನ್ಯುತ್ತಮ ತೈಲ.

4 ಔನ್ಸಿನ ಸೀಸೆ ಒಂದರ 0—11—0.

2 ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ. ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ. ಭಾರತ

ABSOLUTELY FREE!



Bring this coupon and you will get your own Photo absolutely free of charge

☞ The rate for the enlargement of the same Rupee one only (size 6"×8").

Send your old photo and you will get enlargement 6'×8' for Rs 2—8—0. ony and big size 16'×20'for Rs. 5 only.
Our time every day 9 a. m. to 7 p. m. Sunday 9 a. m. to 4p. m.

K. J. PATHAK

276 Surya Mahal Girgoan Road, BOMBAY, 4.	Royal Art Studio 183 Hornby Road, BOMBAY, 1.

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ ಮಾಡಲಿಕ್ಕೆ ಬರೇ ರೂ. 1/- ಮಾತ್ರ. (ಸೈಜ್ 6"×8")

ಹೊರಗಿನವರು ಈ ಕೂಪನೊಂದಿಗೆ ತಮ್ಮ ಫೋಟೋಕಳುಹಿದರೆ ಅದನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜಮಾಡಿಕೊಡಲಾಗುವುದು. 16×'20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಗ್ಗೆ 9ರಿಂದ ಸಂಜೆ 4 ಗಂಟೆ ತನಕ

ಕೆ. ಜೆ. ಪಠಕ್

276, ಸೂರ್ಯಮಹಾಲ್ ಗಿರ್‍ಗಾಮ್‌ರೋಡು ಬೊಂಬಾಯಿ 4	ರೋಯಲ್ ಆರ್ಟ್‌ಸ್ಟುಡಿಯೋ, 183 ಹೋರ್ನ್ಬಿರೋಡು, ಬೊಂಬಾಯಿ 1

THE
Canara Banking Corporation, Udipi, Ltd.
(Incorporated in British India)
ESTD. 1906

THREE YEARS' CASH CERTIFICATES
bearing interest at 4% p. a. in denominations of
Rs 50/-, 100/-, 500/-, 1,000/- & 5000/-
are now issued at
all our Branches.

For particulars call at or write to any of our nearest Branches.

ನವಯುಗ

ಉಡುಪಿ, ಗುರುವಾರ, ತಾ. ೧೬-೩-೩೯

ಆದುದೆಲ್ಲ ಒಳ್ಳೆಯದಕ್ಕೇ.

ತ್ರಿಪುರಿ ಕಾಂಗ್ರೆಸ್ ಅಧಿವೇಶನವು ಗಾಂಧಿಜಿಯ ನಾಯಕತ್ವವನ್ನು ನಿರ್ವಿವಾದವಾಗಿ ಸ್ಥಿರಗೊಳಿಸಿ ಮುಕ್ತಾಯವಾಯಿತು. ಆದಿಯಿಂದಲೂ ಅಧಿವೇಶನದ ವಾತಾವರಣವು ಪ್ರಕ್ಷುಬ್ಧವಾಗಿದ್ದು ಕೊನೆಯ ದಿನದ ಪೂರ್ವಾಹ್ನ ಸಭೆಯನ್ನು ತುಸು ಹೊತ್ತು ಅಲ್ಲಕಲ್ಲೋಲಗೊಳಿಸದೆ ಬಿಡಲಿಲ್ಲ. ಪಂಡಿತಪಂಥರು ತಂದಿದ್ದ ಗಾಂಧಿಜಿಗಳ ತತ್ವನೇತೃತ್ವಗಳ ಕುರಿತು 'ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ" ಎಂಬ ಅಭಿಪ್ರಾಯದ ಠರಾವಿನ ಸಂಬಂಧವಾಗಿ ಉಗ್ರಪಕ್ಷದ ಒಂದು ತಂಡವು ತೋರಿದ ಅಸಭ್ಯ ಪುಂಡುತನದ ವರ್ತನೆಯೇ ಇಂದಿನ ಪರಿಸ್ಥಿತಿಯಲ್ಲಿ ಅಂತಹ ಠರಾವಿನ ಆವಶ್ಯಕತೆಯನ್ನು ನೆರೆದಿದ್ದ ಸುಮಾರು ಎರಡು ಲಕ್ಷಮಂದಿಗೆ ಬಗೆ ಮುಟ್ಟುವಂತೆ ಮಾಡಿತು. ಅಲ್ಲದೆ, ಇಂತಹ ಬಿರುಸಿನ ಕೂಟದ ಕೈಯಲ್ಲಿ ಕಾಂಗ್ರೆಸ್ ಸಾರಥಿತ್ವವನ್ನು ಒಪ್ಪಿಸಿಕೊಟ್ಟರೆ ರಥದ ಪಾಡೇನಾದೀತೆಂಬುದಕ್ಕೆ ಅವರ ಆ ವರ್ತನೆಯೇ ಪ್ರಯೋಗಾತ್ಮಕ ನಿದರ್ಶನವೆಂದು ಉಗ್ರ ಪಕ್ಷದ ಮನದೊಲವಿದ್ದವರಿಗೂ ನಡುಕವನ್ನುಂಟುಮಾಡಿ ಅವರನ್ನು ಸರಿದಾರಿಗೆ ಸರಿ ದೃಷ್ಟಿಗೆ ತಂದು ಬಿಡುವಷ್ಟು ಪರಿಣಾಮಕಾರಿಯಾಯಿತು. ಅಂತೂ ಹಿಂದಿನಂತೆ ಮುಂದೆಯೂ ಗಾಂಧೀಜಿಗಳ ಸತ್ಯ ಅಹಿಂಸಾತ್ಮಕ ಧೋರಣೆಯ ಕಾರ್ಯಕ್ರಮಗಳೂ ಅವರ ನಾಯಕತ್ವವೂ ಬೋಧನೆಯೂ ಪ್ರಚೋದನೆಯೂ ಕಾಂಗ್ರೆಸ್ಸಿಗೆ ಬೇಕೇಬೇಕೆಂಬ ಉದ್ದೇಶದ ಪಂಡಿತ ಪಂಥರ ಠರಾವು ಪ್ರಬಲ ಬಹುಮತದಿಂದ ಅಂಗೀಕೃತವಾಗಿ, ರಾಜಕೋಟೆಯಲ್ಲಿ ಗಾಂಧೀಜಿಗಳು ಪಡೆದ ವಿಜಯವನ್ನು ಮತ್ತಷ್ಟು ಉಜ್ವಲಗೊಳಿಸಿ, ಭಾರತ ರಾಷ್ಟ್ರೋದ್ಧಾರದ ಏಕೈಕ ವೀರನಾಯಕನೆಂಬುದನ್ನು ಸ್ಥಿರೀಕರಿಸಿದುದು ಭಾರತದ ಭಾವೀ ಇತಿಹಾಸದಲ್ಲಿ ತ್ರಿಪುರಿಯ ಹೆಸರಿಗೆ ಮಹಾ ಖ್ಯಾತಿಯನ್ನು ತರುವ ಸಂಘಟನೆಯಾಗಿ ಪರಿಣಮಿಸದಿರದು.

ಇತರ ನಿರ್ಣಯಗಳಲ್ಲಿ ಕಾಂಗ್ರೆಸ್ಸಿನ ವಿಶ್ವವ್ಯಾಪಕ ದೃಷ್ಟಿ, ವಿಚಾರವಿವೇಕ ಪೂರಿತ ಧೋರಣೆ, ಆತ್ಮಾಭಿಮಾನ, ಆತ್ಮಜ್ಞಾನ, ಆತ್ಮಾವಲಂಬನಗಳ ಮೂಲಕ ಶಕ್ತಿಗೊಳ್ಳುವ ಧ್ಯೇಯ, ಇವೆಲ್ಲ ಸುವ್ಯಕ್ತವಾಗುತ್ತಿವೆ. ಅವುಗಳಲ್ಲಿ ಪ್ರಕೃತ ಪರಿಸ್ಥಿತಿಗೆ ಸಲ್ಲದ ವ್ಯವಹಾರ್ಯವಲ್ಲದ ಶುಷ್ಕ ಭಯ ಪ್ರದರ್ಶನದ ಬಿರುಸಿನ ಮಾತುಗಳಿಲ್ಲ. ಪ್ರಭುತ್ವದೊಡನೆ ರಾಷ್ಟ್ರೀಯ ಹಕ್ಕು ಕೇಳಿಕೆ (ನ್ಯಾಶನಲ್ ಡಿಮಾಂಡ್) ಪ್ಯಾಲಸ್ಟಾಯಿನ್ ಅರಬರೊಡನೆ ಸಹಾನುಭೂತಿ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿದೇಶ ಧೋರಣೆಯ ಖಂಡನೆ, ವಿದೇಶಗಳಲ್ಲಿ ನೆಲಸಿರುವ ಹಿಂದೂಗಳಿಗೆ ಅಲ್ಲಿಯ ಸರಕಾರಗಳ ಉಪೇಕ್ಷೆಯ ಕುರಿತು ಅಸಂತೃಪ್ತಿ, ಆಶ್ರಿತ ಸಂಸ್ಥಾನದ ಪ್ರಜೆಗಳ ಹಕ್ಕು ಸ್ವಾತಂತ್ರ್ಯ ರಕ್ಷಣೆಯ ಪ್ರಶ್ನೆಯಲ್ಲಿ ಹೆಚ್ಚಿನ ಶ್ರದ್ಧಾತ್ಮಕ ಪ್ರವೇಶದ ನಿರ್ಧಾರ, ಇವುಗಳ ಕುರಿತಾದ ನಿರ್ಣಯಗಳ ಮಾತುಗಳೆಲ್ಲವೂ ದೀರ್ಘ ವಿಚಾರಮಾಡಿ ಮಾತಿಗಿಂತ ಕೃತಿಯೇ ಪರ್ಯವಸಾನದಲ್ಲಿ ಮಿಗಿಲಾಗಿ ಬರುವಂತೆ ತೂಗಿ ತೂಗಿ ಇಟ್ಟಂತಿವೆ. ಪರಿಸ್ಥಿತಿಗೆ ಮೀರಿಯೂ ಇಲ್ಲ, ತಗ್ಗಿಯೂ ಇಲ್ಲ, ಯೋಗ್ಯವಾದ ಹಿತಮಿತದ ಬಳಕೆಂದ ಸತ್ವಥವನ್ನು ತೋರುವ ತಾರೆಗಳಂತಿವೆ.

ತ್ರಿಪುರಿ ಕಾಂಗ್ರೆಸ್ ನಿರ್ಣಯಗಳ ಸಾರಸಂಗ್ರಹ

೧. ಹಿಂದಿನಂತೆ ಮುಂದೆಯೂ ಗಾಂಧೀಜಿಗಳ ಸತ್ಯ ಅಹಿಂಸಾತ್ಮಕ ತತ್ವಗಳ ಆಧಾರದ ಮೇಲೆ ನಿಲ್ಲುವ ಕಾರ್ಯಕ್ರಮಗಳೇ ಕಾಂಗ್ರೆಸಿನ ಧೋರಣೆ. ಗಾಂಧೀಜಿಯವರೇ ಕಾಂಗ್ರೆಸಿನ ಏಕೈಕ ನಾಯಕರು. ಅವರ ಅಪೇಕ್ಷಾನುಸಾರ ಕಾರ್ಯಕಾರಿ ಮಂಡಲದ ನೇಮಕವಾಗತಕ್ಕದು. ಹಿಂದಿನ ಕಾರ್ಯಕಾರಿ ಮಂಡಲದ ವಿಶ್ವಸನೀಯ ಸದಸ್ಯರ ಮೇಲೆ ಅವಿಶ್ವಾಸ ದೋಷಾರೋಪಣೆಗಳು ಮಾಡಲ್ಪಟ್ಟುದಕ್ಕಾಗಿ ವಿಷಾದ. (ಪಂಡಿತ ಪಂಥರ ಈ ಠರಾವಿನ ಕುರಿತು ಹಲವು ತಿದ್ದುಪಡಿಗಳು ಬಂದು ತಾಸುಗಟ್ಟಳೆ ಚರ್ಚೆ ನಡೆದು ಗಲಭೆ ಘಂಡಾಟಿಕೆಗಳೂ ಉಂಟಾಗಿ ಕೊನೆಗೆ ಆ ತಿದ್ದುಪಡಿಗಳೆಲ್ಲ ಪ್ರಬಲ ಬಹುಮತದಿಂದ ತಿರಸ್ಕರಿಸಲ್ಪಟ್ಟು ಮೂಲಠರಾವೇ ಮಂಜೂರಾಯಿತು)

೨. ಪೆಲೆಸ್ತಾಯಿನಿನ ಅರಬ್ಬರಲ್ಲಿ ಸಹಾನುಭೂತಿ, ಯೆಹೂದಿಗಳು ಬ್ರಿಟಿಷ್ ಸಾಮ್ರಾಜ್ಯಶಾಹಿತ್ವದ ಪಕ್ಷವರ್ತಿಗಳಾದುದಕ್ಕೆ ವಿಷಾದ. (ಅಧ್ಯಕ್ಷಸ್ಥಾನದಲ್ಲಿದ್ದ ಅಬ್ದುಲ್ ಅಜಾದರಿಂದ)

೩. ಬಲೂಚಿಸ್ಥಾನದಲ್ಲಿ ಪ್ರಜಾಪ್ರಭುತ್ವವುಳ್ಳ ರಾಜ್ಯಭಾರ ಪದ್ಧತಿಯನ್ನು ಪ್ರಯೋಗದಲ್ಲಿ ತರತಕ್ಕದು. (ಅಧ್ಯಕ್ಷಸ್ಥಾನದಿಂದ)

೪. ಇಂಡಿಯವು ತನ್ನ ನೆರೆಹೊರೆಯ ಹಾಗೂ ದೂರದ ರಾಷ್ಟ್ರಗಳೊಡನೆ ಸೌಹಾರ್ದತೆಯಲ್ಲಿರುವಂತೆ ಸ್ವಂತವಾದ ತನ್ನ ವಿದೇಶ ಧೋರಣೆಯನ್ನು ನಿರೂಪಿಸಿಕೊಳ್ಳಲಿಕ್ಕನುವಾಗುವಂತೆ ಬ್ರಿಟನರ ವಿದೇಶ ಧೋರಣೆಯಿಂದ ತನ್ನನ್ನು ಪ್ರತ್ಯೇಕಿಸಿಕೊಂಡಿದೆ. (ಶ್ರೀ ಬುಲಾಭಾಯಿ ದೇಸಾಯಿಗಳ ಠರಾವು.)

೫. ಸಂಸ್ಥಾನಿಕ ಪ್ರಜೆಗಳ ಸ್ವಾತಂತ್ರ್ಯ ಸಂಗ್ರಾಮದ ಕುರಿತು ಹರಿಪುರದ ನಿರ್ಣಯವನ್ನೇ ಅನುಸರಿಸುವ ಧೋರಣೆಗೆ ವಿರೋಧವಾಗದಂತೆ ಅಲ್ಲಿಯ ಚಳುವಳಿಯಲ್ಲಿ ಇನ್ನೂ ಹೆಚ್ಚಿನ ಆಸಕ್ತಿಯಿಂದ ಸೂಕ್ಷ್ಮತರ ಪರಿಶೀಲನೆಗಳಿಂದ್ದು ಸಮಯಸಂದರ್ಭೋಚಿತವಾದ ರೀತಿನೀತಿಗಳನ್ನು ಹಾಕಿಕೊಡುವ ಅಧಿಕಾರವು ಕಾರ್ಯಕಾರೀ ಮಂಡಲಿಗೆ ಇರತಕ್ಕದು. (ಬಾಬು ರಾಜೇಂದ್ರ ಪ್ರಸಾದರ ಠರಾವು. ಶ್ರೀ. ಕಮಲಾದೇವಿಯವರು ಆಯಾ ಸಂಸ್ಥಾನಿಕ ಕಾಂಗ್ರೆಸಿನ ಅಭಿಪ್ರಾಯ ತಿಳಕೊಂಡು ತದನುಸಾರ ಆಯಾ ಸಂಸ್ಥಾನದ ಚಳುವಳಿಯ ಕಾರ್ಯಕ್ರಮವನ್ನು ಕಾಂಗ್ರೆಸ್ಸ್ ಕಾರ್ಯಕಾರೀ ಮಂಡಳಿಯು ನಿರ್ಧರಿಸತಕ್ಕದು, ಮತ್ತು ಹರಿಪುರದ ನಿರ್ಣಯದ ಪುನರುಚ್ಚಾರಣೆಯ ಮಾತುಗಳು ಠರಾವಿನಿಂದ ತೆಗೆಯಬೇಕು—ಎಂದು ತಿದ್ದುಪಡಿ ತಂದರು. ಈ ಸಂದರ್ಭದಲ್ಲಿ ಚರ್ಚೆ ನಡೆದು ಬಾಬು ರಾಜೇಂದ್ರ ಪ್ರಸಾದರು ಪ್ರತ್ಯುತ್ತರವೀಯುತ್ತ ನಮಗಿಂದು ಪ್ರಧಾನವಾಗಿ ಬೇಕೆಂಬುದು ಮಾತುಗಾರಿಕೆಯಲ್ಲ; ಕೃತಿಯೇ ಮುಖ್ಯವೆನ್ನಲು ತಿದ್ದುಪಡಿಯು ಬಹುಪಕ್ಷದಿಂದ ತಿರಸ್ಕೃತವಾಗಿ ಬಿದ್ದುಹೋಗಿ ಮೂಲಠರಾವೇ ಮಂಜೂರಾಯಿತು)

೬. ಬರ್ಮಾ, ಸೀಲೋನ್, ದಕ್ಷಿಣ ಆಫ್ರಿಕಾ ಮುಂತಾದ ವಿದೇಶಗಳಲ್ಲಿ ನೆಲೆಸಿದ ಹಿಂದೀಯರ ಹಕ್ಕು ಸ್ಥಾಪನೆಯ ಅವರ ಹೋರಾಟದಲ್ಲಿ ಸಹಾನುಭೂತಿ ಅದನ್ನು ಅಪಹರಿಸುವ ಶಕ್ತಿಗಳ ಕಡೆಗೆ ಆಗ್ರಹದ ಕುರಿತು ಸತ್ಯಮೂರ್ತಿಗಳ ಠರಾವು.

ತ್ರಿಪುರಿ ಕಾಂಗ್ರೆಸ್ಸಿನ ಉಪಸಂಹಾರ

ಶ್ರೀ. ಸರೋಜಿನೀ ದೇವಿಯವರು ಧನ್ಯವಾದಾರ್ಪಣೆ ಮಾಡುತ್ತ—ಕಾಂಗ್ರೆಸ್ಸು ಇಂದು ಅಭೇದ್ಯವಾದ ಅಖಂಡ ಸಂಸ್ಥೆ. ಏನೋ ಕೆಲವು ಅಪ್ರಾಮುಖ್ಯ ಭಿನ್ನಮತದಿಂದಾಗಿ ಎದ್ದ ವಾದವಿವಾದಗಳೆಲ್ಲ ಗಂಭೀರ ಸಾಗರದ ಮೇಲಿನ ತರಂಗ ತಾಡನದಿಂದಾದ ನೊರೆಯಂತೆ ಸ್ಥಿರಸ್ಥಾಯಿಯಲ್ಲ. ಕಾಂಗ್ರೆಸ್ಸಿನ ಮುಂದಿರುವುದು ಒಂದೇ ಪ್ರಶ್ನೆ, ಒಂದೇ ಆಜ್ಞೆ, ಒಂದೇ ಆದರ್ಶ, ಒಂದೇ ಧ್ಯೇಯ, ಒಂದೇ ಗುರಿ. ವಿದೇಶೀಯ ಆಳಿಕೆಯ ಹಿಡಿತದಿಂದ ದೇಶವು ಬಿಡುಗಡೆ ಹೊಂದಿ ಸ್ವತಂತ್ರವಾಗಬೇಕೆಂಬುದೇ ಆ ಪ್ರಶ್ನೆ, ಆ ಆಜ್ಞೆ, ಆ ಆದರ್ಶ, ಆ ಧ್ಯೇಯ, ಆ ಗುರಿ—ಎಂದು ಸಕಲ ಪಂಗಡ ಪಂಥ ಮತಗಳವರಲ್ಲಿಯೂ ಏಕ್ಯತಾಭಾವ ಪ್ರೇರಕವಾಗುವ ಸ್ಫೂರ್ತಿಯ ಭಾಷಣವಿತ್ತರು.

ವರ್ಕಿಂಗ್ ಕಮಿಟಿಯ ನಿರ್ಮಾಣವಾಗದಿದ್ದುದರಿಂದ ವಾಡಿಕೆಯಂತೆ ಕಾಂಗ್ರೆಸ್ ಕಮಿಟಿಯ (ಎ.ಐ.ಸಿ.ಸಿ) ತರುಗಿ ಸಭೆಗೂಡಲಿಲ್ಲ

ಪಂಡಿತ ಪಂಥರ ಠರಾವು ಯಾವ ರೀತಿಯಲ್ಲಿಯೂ ಅಧ್ಯಕ್ಷ ಭೋಸರಲ್ಲಿ ಅವಿಶ್ವಾಸಸೂಚಕ ಸ್ಫೂರ್ತಿಯಿಂದ ತರಲ್ಪಟ್ಟುದಲ್ಲವೆಂದು ಸಬ್ಜೆಕ್ಟ್ ಕಮಿಟಿಯಲ್ಲಿಯೂ ಮಹಾ ಅಧಿವೇಶನದಲ್ಲಿಯೂ ತಿರುತಿರುಗಿ ವಿಶ್ವಾಸನೀಯವಾಗಿ ಸಾರಿದುದರಿಂದ ಅಧ್ಯಕ್ಷರು ಅನ್ಯಥಾ ಭಾವಿಸಲಾರರೆಂದೂ ಅವರು ಕಲ್ಕತ್ತಕ್ಕೆ ಮುಟ್ಟಿದ ನಂತರ ಗಾಂಧೀಜಿಯವರೊಡನೆ ಪತ್ರವ್ಯವಹಾರದ ಸಂಬಂಧ ತೊಡಗಿ ಅವರ ಅಪೇಕ್ಷಾನುಸಾರ ಕಾರ್ಯಕಾರೀ ಮಂಡಳಿಯನ್ನು ನಿರ್ಮಾಣ ಮಾಡುವರೆಂದು ಸರ್ವನಿರೀಕ್ಷಣೆ ಇದೆ

ಕೊನೆಯ ಅಧಿವೇಶನಕ್ಕೆ ಪ್ರವೇಶಧನವಿಲ್ಲದೆ ಸುಮಾರು ಒಂದು ಲಕ್ಷ ಹಳ್ಳಿಗರನ್ನು ಬಿಡಲಾಗಿತ್ತು. ಆದರೆ ಗಾಂಧೀಜಿಗಳ ದರ್ಶನಾಭಿಲಾಷಿಗಳಾಗಿ ಬಂದಿದ್ದ ಅವರಿಗೆ ತುಸು ನಿರಾಶೆಯಾಗಿದ್ದುದರಿಂದ ಅವರಲ್ಲಿ ಉತ್ಸಾಹದ ಉದ್ಘೋಷಣೆಯಿರಲಿಲ್ಲ.

ಅಧ್ಯಕ್ಷ ಸುಭಾಸ್ ಭೋಸರ ಕಲ್ಕತ್ತಾ ಪ್ರಯಾಣ

ತಾ. ೧೩ನೆಯ ಅಪರಾಹ್ನ ಕಾಂಗ್ರೆಸ್ಸ್ ಅಧ್ಯಕ್ಷರಾದ ಸುಭಾಸ್‌ಚಂದ್ರ ಭೋಸರವರು ತ್ರಿಪುರಿಯಿಂದ ತಮ್ಮ ಸಂಸಾರದ ಸಂಗಡಿಗರೊಡನೆ ಕಲ್ಕತ್ತಾಕ್ಕೆ ಹೊರಟರು. ಅವರಿಗೆ ವಿದಾಯವನ್ನೀಯಲು ಬಾಬು ರಾಜೇಂದ್ರ ಪ್ರಸಾದ, ಪಂಡಿತನೆಹರೂ, ಸೇಟ್ ಗೋವಿಂದದಾಸ್, ಡಾ| ಪಟ್ಟಾಭಿ, ಜಿ. ಎಸ್. ಗುಪ್ತಾ, ಠಾಕೂರ್, ಚೇಡಿಲಾಲ ಮುಂತಾದ ಪ್ರಮುಖರೂ ಸ್ವಾಗತ ಸಮಿತಿಯ ಇತರ ಸದಸ್ಯರೂ ಕೂಡಿಬಂದು ವಿಷ್ಣುದತ್ತ ನಗರದಿಂದ ಅವರನ್ನು ಸಾದರ ಸನ್ಮಾನಪೂರ್ವಕವಾಗಿ ಬೀಳ್ಕೊಟ್ಟರು.

ಪ್ರಮುಖ ಮಂದಾಳುಗಳೆಲ್ಲ ಇಂದು (ತಾ ೧೬) ಹೊರಡುತ್ತಿದ್ದಾರೆ. ಮದ್ರಾಸ್ ಮಂತ್ರಿಮಂಡಲವು ಸ್ವಸ್ಥಾನಕ್ಕೆ ಇಂದು ಬೆಳಿಗ್ಗೆ ಪ್ರಯಾಣಬೆಳೆಸಿತು.

ನರೇಂದ್ರಮಂಡಲದ ಅಧಿವೇಶನ ಪ್ರಾರಂಭ—ವೈಸರಾಯರ ಉದ್ಘಾಟನಾ ಭಾಷಣ.

ತಾ. ೧೩ರಲ್ಲಿ ಹೊಸ ದಿಲ್ಲಿಯಲ್ಲಿ ನರೇಂದ್ರಮಂಡಲ(ಚೇಂಬರ್ ಆಫ್ ಪ್ರಿನ್ಸೆಸ್)ದ ಅಧಿವೇಶನವು ಪ್ರಾರಂಭವಾಯಿತು. ವೈಸರಾಯರು ಅದರ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ ಭಾಷಣಮಾಡುತ್ತಾ ಇಂದಿನ ಪ್ರಜಾಜಾಗ್ರತಿಯ ಪರಿಸ್ಥಿತಿಯನ್ನೂ ಸಂಸ್ಥಾನಗಳಲ್ಲಿ ಕ್ಷೋಭೆಯುಂಟಾಗದಂತೆ ನರೇಂದ್ರರು ತೋರಬೇಕಾದ ಉದಾರ—ಉದಾತ್ತ ಧೋರಣೆಗಳನ್ನೂ ಸೂಚಿಸಿದರು. ಒಂದೇ ಕಡೆಯಲ್ಲಿರುವ ಚಿಕ್ಕ ಪುಟ್ಟ ಸಂಸ್ಥಾನಗಳು ರಾಜ್ಯಭಾರ ಪದ್ಧತಿಯಲ್ಲಿ ಒಂದುಗೂಡಿ ಏಕ ರಾಜ್ಯಭಾರ ನಿರ್ವಹಿಸುವುದೊಳ್ಳೆಯದೆಂದೂ ಅಭಿಪ್ರಾಯವಿತ್ತರು.

ಪೋಪ್ ಜಗದ್ಗುರುಗಳ ಕಿರೀಟಧಾರಣ ಮಹೋತ್ಸವ

ತಾ. ೧೨ರಲ್ಲಿ ಜಗತ್ತಿನ ವಿವಿಧಭಾಗದ ಮತೀಯ ಹಾಗೂ ರಾಜಕೀಯ ಪ್ರತಿನಿಧಿ ಮುಖಂಡರುಗಳ ಮತ್ತು ಮಹಾಜನಸ್ತೋಮದ ಮುಂದೆ ಮಹಾ ವೈಭವದಿಂದ ಪೋಪರ ಕಿರೀಟಧಾರಣೋತ್ಸವವು ನಡೆಯಿತು.

ಅಖಿಲಭಾರತ ರಾಷ್ಟ್ರಾಧಿವೇಶನ - ಅಧ್ಯಕ್ಷರ ಮಹಾ ಮೆರವಣಿಗೆ!
ನೆಹರುಗಳಿಂದ ಧ್ವಜಾರೋಹಣ! ಸ್ವಾಗತಾಧ್ಯಕ್ಷರ ಉಜ್ವಲ ಭಾಷಣ

ತ್ರಿಪುರಿ ಕಾಂಗ್ರೆಸ್ ಮಹಾ ಮೆರವಣಿಗೆ

ತಾ. ೧೧ರ ಮುಂಜಾನೆ ಸಂಭ್ರಮದ ಮೆರವಣಿಗೆಯ ಮುಹೂರ್ತ. ನಾಲ್ಕು ಮೈಲುಗಳ ದೂರದಿಂದ ಹೊರಟು ಸಭಾ ಮಂದಿರಕ್ಕೆ ಬರುವ ವೈಭವದ ಮೆರವಣಿಗೆಯನ್ನು ನೋಡಲಿಕ್ಕೆ ಹಾದಿಯುದ್ದಕ್ಕೂ ಪಕ್ಕದ ಬೆಟ್ಟಗಳ ಬಂಡೆಗಳ ಮೇಲೆಯೂ ಮರಗಳ ಕೊಂಬೆಗಳಲ್ಲಿಯೂ ಅನುಕೂಲವಾದ ನೋಟಸಿಕ್ಕುವಲ್ಲೆಲ್ಲ ಸಾವಿರಗಟ್ಟಲೆಯಲ್ಲಿ ಜನರು ಹೆಂಗಸರು ಮಕ್ಕಳೆನ್ನದೆ ನಿಶ್ಚಿತ ಮುಹೂರ್ತವಾದ ೮ ತಾಸಿಗೆ ಎಷ್ಟೋ ಮುಂಚಿತವಾಗಿಯೇ ಕಿಕ್ಕಿರಿದು ನೆರೆದಿದ್ದರು. ೫೨ ಆನೆಗಳು ಮುಂದುಗೊಂಡು ಬರುವ ಘನಗಂಭೀರ ಸೌಂದರ್ಯದ ದೃಶ್ಯವದು. ಸಾಲಂಕೃತವಾಗಿ ಆನೆಗಳು ಹೊರಡಬೇಕಾಗಿದ್ದುದರಿಂದ ತುಸು ತಡವಾಗಿಯೇ ಮೆರವಣಿಗೆ ಹೊರಟಿತು. ೫೨ ವರುಷಗಳ ಕಾಂಗ್ರೆಸ್ ಅಧ್ಯಕ್ಷರ ಭಾವಚಿತ್ರಗಳು ಶೃಂಗರಿಸಲ್ಪಟ್ಟ ಆ ೫೨ ಆನೆಗಳ ಮೇಲೆ ವಿರಾಜಿಸುತ್ತಿದ್ದುವು. ಭೋಸರವರು ಮೆರವಣಿಗೆಯಲ್ಲಿ ಬರುವಷ್ಟು ಆರೋಗ್ಯಹೊಂದಿಲ್ಲದಿದ್ದುದರಿಂದ ಅಧ್ಯಕ್ಷರ ಸನ್ಮಾನಕ್ಕಾಗಿ ಸುಂದರವಾಗಿ ವಿರಚಿಸಲ್ಪಟ್ಟಿದ್ದ ರಥದಲ್ಲಿ ಅವರ ಭಾವಚಿತ್ರವನ್ನಿಟ್ಟು ಅದರ ಉಭಯ ಪಕ್ಷಗಳಲ್ಲಿ ಸ್ವಾಗತಾಧ್ಯಕ್ಷರೂ ಸ್ವಾಗತಸಮಿತಿಯ ಪ್ರಧಾನಾಧಿಕಾರಿಗಳೂ ಕುಳಿತಿದ್ದರು. ಮುಂದೆ ಸಾಲಾಗಿ ಆನೆಗಳು. ಆಮೇಲೆ ಅಚ್ಚುಕಟ್ಟಿನ ಸೈನಿಕ ಶಿಸ್ತಿನ ಉಡುಗೆಯಿಂದೊಪ್ಪುವ ಸ್ವಯಂಸೇವಕರು: ಅವರ ಹಿಂದೆ ವಿವಿಧ ವಾಲಗವಿಶೇಷಗಳ ತಂಡ. ಅನಂತರ ಕೇಸರೀಬಣ್ಣದ ಸೀರೆಯ ಸರಳ ಉಡುಪಿನ ಬೆಡಗಿನಿಂದೊಪ್ಪುವ ಸ್ವಯಂಸೇವಿಕೆಯರ ಸಾಲು. ಹಿಂದಿನಿಂದ ಕಾಂಗ್ರೆಸ್ ಪ್ರಮುಖರು ಪ್ರತಿನಿಧಿಗಳು ಪ್ರಮುಖ ಅತಿಥಿಗಳು ಆಮೇಲೆ ಅಧ್ಯಕ್ಷರ ರಥ. ಅದನ್ನು ಹಿಂಬಾಲಿಸಿ ಜನಸ್ತೋಮ- ಹೀಗೆ ವೈಭವದ ಮಹಾ ಮೆರವಣಿಗೆಯು ಹೊರಟು ರಮಣೀಯವಾದ ಪ್ರಕೃತಿ ಸೌಂದರ್ಯದ ಹಿನ್ನೆಲೆಯಿಂದ ಕಳೆಗೊಂಡು ಶಿಸ್ತಿನ ಘನಗಂಭೀರ ಲಘುಗತಿಯಿಂದ ಮುಂದುವರಿಯುವ ದೃಶ್ಯವು ಸರ್ವರ ಹೃದಯದಲ್ಲಿ ದೇಶಭಕ್ತಿ ಸ್ಫೂರ್ತಿಗಳನ್ನು ಉದ್ರೇಕಿಸುವ ಸತ್ಪರಿಣಾಮಕಾರಿಯಾಗಿತ್ತು.

ನೆಹರೂಗಳವರಿಂದ ಧ್ವಜಾರೋಹಣ

ಮಹಾ ಮೆರವಣಿಗೆಯು ಕಾಂಗ್ರೆಸ್ಸು ನಗರದ ಅಧಿವೇಶನ ಮಂದಿರದ ಮುಂದಿನ ಜಂಡಾ ಚೌಕಕ್ಕೆ ಬಂದು ಮುಟ್ಟಲು ಅಲ್ಲಿಯ ಧ್ವಜಸ್ತಂಭದ ಸುತ್ತಲೂ ಸ್ವಯಂಸೇವಕರು, ದೇಶಸೇವಿಕೆಯರು, ರಾಷ್ಟ್ರೀಯ ಸ್ಕೌಟ್ ದಳದವರು ತಂಡತಂಡವಾಗಿ ಸುವ್ಯವಸ್ಥೆಯಲ್ಲಿ ನಿಂತಿರಲು ವಾದ್ಯಘೋಷವು ಬೆಟ್ಟಗುಡ್ಡಗಳಲ್ಲಿ ಪ್ರತಿಧ್ವನಿಗೊಡುತ್ತಿರಲು ಧ್ವಜವಂದನೆಯ ಕಾರ್ಯವು ನೆರವೇರಿತು. ಜವಾಹಿರಲಾಲನೆಹರುಗಳು

ಮಾಹಾತ್ಮ್ಯೆಯನ್ನು ಬಗೆವರಿಯ ವಿವರಿಸಿ ಭಾಷಣವಿತ್ತರು.

ಸ್ವಾಗತಾಧ್ಯಕ್ಷರ ಭಾಷಣ

'ಈ ಕೋಸಲದ ಕಾಡುಗುಡ್ಡೆಯ ಪ್ರದೇಶದಲ್ಲಿ ನಾವು ಅರ್ಪಿಸಿರುವ ಸ್ವಾಗತ ವ್ಯವಸ್ಥೆಯ ಮಾನದಿಂದ ನಮ್ಮ ಹೃದಯವನ್ನು ಅಳೆಯಲಾರಿರೆಂದು ನನಗೆ ನಂಬುಗೆ. ಶ್ರೀರಾಮನಿಗೆ ಅರಣ್ಯಕನ್ನಿಕೆಯೊಬ್ಬಳು ಫಲಗಳನ್ನಿತ್ತು ಆತಿಥ್ಯವನ್ನು ನಿರ್ವಹಿಸಿದಂತಾಗಿದೆ ನಮ್ಮ ವ್ಯವಸ್ಥೆಗಳೆಲ್ಲ. ಅದು ಕಾರಣ ಕುಂದುಕೊರತೆಗಳನ್ನು ಕ್ಷಮಿಸಿ ನಮ್ಮ ಹಾರ್ದಿಕ ಪ್ರೀತಿವಿಶ್ವಾಸ ರಾಷ್ಟ್ರಸೇವಾಸಕ್ತಿಗಳನ್ನು ಮಾತ್ರ ಅವುಗಳಲ್ಲಿ ಕಾಣಬೇಕಾಗಿ ಸಂಪ್ರಾರ್ಥನೆ.

ನಮ್ಮ ಮಹಾ ಕೋಸಲದ ಪ್ರಥಮ ಮಹಾಧುರೀಣರಾಗಿದ್ದ ದಿವಂಗತ ಪಂಡಿತ ವಿಷ್ಣುದತ್ತ ಶುಕ್ಲರಲ್ಲಿ ನಮಗಿರುವ ಗೌರವಾದರಗಳ ಸೂಚಕವಾಗಿ ಈ ಅಧಿವೇಶನದ ಪ್ರದೇಶಕ್ಕೆ ವಿಷ್ಣುದತ್ತ ನಗರವೆಂದು ನಾಮಕರಣಮಾಡಿದ್ದೇವೆ. ನಮ್ಮ ಕೋಸಲವೂ ಸ್ವಾತಂತ್ರ್ಯ ಸಮರದಲ್ಲಿ ಉತ್ಸಾಹದ ಭಾಗವಹಿಸಿದೆ. ಕಾಂಗ್ರೆಸ್ಸಿನ ಸತ್ಯಾಗ್ರಹ, ಸವಿನಯ ಶಾಸನಭಂಗ, ಧ್ವಜ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ ಮುಂತಾದುವುಗಳಲ್ಲಿ ಹಿಂದಾಗದೆ ಯಶಸ್ವಿಯಾಗಿ ದುಡಿದಿದೆ. ಕಳೆದ ಶಾಸನ ಸಭೆಯ ಚುನಾವಣೆಯಲ್ಲಿ ಈ ನಾಡು ಕಾಂಗ್ರೆಸ್ಸಿಗೆ ವಿಜಯವನ್ನು ತಂದಿದೆ. ಇಲ್ಲಿಯ ಭೂಮಾಲಿಕರು ಒಮ್ಮತದಿಂದ ಸೈಮನ್ ಕಮಿಶನನ್ನು ಬಹಿಷ್ಕರಿಸಿದ್ದರು. ಹೀಗೆ ಕೋಸಲವು ಕೈಲಾದ ರಾಷ್ಟ್ರಸೇವೆಯನ್ನು ಅರ್ಪಿಸುವುದರಲ್ಲಿ ಉತ್ಸಾಹದಿಂದ ಸಾನಂದದಿಂದ ಮುಂದಾಗಿದೆ.

ಇಂದಿನ ನಮ್ಮ ಪರಿಸ್ಥಿತಿಯನ್ನು ಪರಿಶೀಲಿಸಿ ಮುಂದಿನ ಹಾದಿಯನ್ನು ನಿರ್ಧಾರಮಾಡುವುದರಲ್ಲಿ ನಮ್ಮ ದೃಷ್ಟಿಯು ವಿಶ್ವವ್ಯಾಪಕವಾಗಿರಬೇಕು. ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಜರ್ಮನಿ, ಅಮೇರಿಕಾ, ಜಪಾನ್ ಇವೆಲ್ಲ ಎತ್ತ ಕಾಲಿಡುತ್ತವೆಂಬುದನ್ನೂ ಎಲ್ಲಿಗೆ ದೃಷ್ಟಿಯಿಟ್ಟಿವೆಯೆಂಬುದನ್ನೂ ನಾವು ಉಪೇಕ್ಷಿಸಲು ಸಾಧ್ಯವಿಲ್ಲ. ಆದುದರಿಂದ ಜಾಗತಿಕ ರಾಜಕಾರಣಗಳ ಮರ್ಮ ಮರ್ಮಗಳನ್ನು ಆಳವಾಗಿ ಹೊಕ್ಕು ಪರಿಶೀಲಿಸಬೇಕಾದ ದಿನವಿದು. ಆದುದರಿಂದ ಇಂತಹ ಅಂತರರಾಷ್ಟ್ರೀಯ ಪ್ರಶ್ನೆಗಳಿಂದ ಅಲಿಪ್ತನಾಗಿ ನಮ್ಮ ಸ್ವಾತಂತ್ರ್ಯದ ಹಾದಿಯನ್ನು ಹಾಕಿಕೊಳ್ಳಲು ಆಗುವುದಿಲ್ಲ. ಅಲ್ಲದೆ, ನಮ್ಮ ಜನರು ವಿದೇಶಗಳಿಗೆ ತೆರಳಿ ನೆಲೆನಿಂತು ತಮ್ಮ ಬೆವರು ನೆತ್ತರುಗಳನ್ನು ಸುರಿಸಿ ಆ ಪ್ರಾಂತಗಳ ಉತ್ಕರ್ಷೆಗೆ ಸಾಧಕರಾಗಿದ್ದರೂ ಇಂದು ಅವರ ಸಾಮಾನ್ಯ ಸಾಮಾಜಿಕ ಹಕ್ಕುಬಾಧ್ಯತೆಗಳಿಗೆ ಗಂಡಾಂತರ ಬಂದಿದೆ. ದಕ್ಷಿಣ ಆಫ್ರಿಕದ ಯೂರೋಪಿಯನ್‌ಗಳು, ಸಿಲೋನ್, ಫಿಜೀ, ಮಲಯಾ, ಬ್ರಿಟಿಷ ಗಿಯಾನಾಗಳೂ ಅಲ್ಲಿಯ ಹಿಂದೀಯರನ್ನು ಹಿಂದಿಕ್ಕುವ ಪ್ರಬಲ ಪ್ರಯತ್ನ ನಡೆಸುತ್ತಿವೆ. ಅಂತಹ ಅಂತರರಾಷ್ಟ್ರ ಹಿಂದೀಯರ ಸ್ವಾತಂತ್ರ್ಯ ಪ್ರಾಬಲ್ಯವನ್ನು ಅವಲಂಬಿಸಿ ನಿಂತಿದೆ.

ಇಂದಿನ ನಮ್ಮ ಪರಿಸ್ಥಿತಿಯಲ್ಲಿ ಮಹಾತ್ಮಾ ಗಾಂಧೀಜಿಯವರ ಮುಂದಾಳುತನವು ಏಕಮಾತ್ರ ಸೂತ್ರವಾಗಿರಬೇಕಾಗಿದೆ. ನಮ್ಮದು ರಾಷ್ಟ್ರೀಯ ಸಂಸ್ಥೆಯಾಗಿದ್ದರೂ ಕೆಲವೊಂದು ಸನ್ನಿವೇಶ ವಿಶೇಷದಲ್ಲಿ ಅದು ಸರ್ವಾಧಿಕಾರತ್ವದ ಧೋರಣೆಯಿಂದಲೂ ನಡೆಯಿಸಲ್ಪಡಬೇಕಾಗುತ್ತದೆ. ಇಂದು ಹಿಟ್ಲರ್ ಮುಸೋಲಿನಿಗಳು ಅವರವರ ದೇಶಗಳಲ್ಲಿ ಹೊಂದಿರುವ ಪದವಿಯನ್ನು ಮಹಾತ್ಮಾ ಗಾಂಧಿಯವರು ಇಲ್ಲಿ ಹೊಂದಿರುತ್ತಾರೆನ್ನಬಹುದು. ನಮ್ಮ ಕಾಂಗ್ರೆಸ್ ಅವರ ಸೃಷ್ಟಿ. ಅದರ ಕಾರ್ಯಕಲಾಪಗಳಲ್ಲಿ ಅನುಸರಿಸಬೇಕಾಗಿರುವ ಸತ್ಯ ಅಹಿಂಸಾ ಅಸ್ತ್ರಗಳ ಪ್ರಯೋಗದಲ್ಲಿ ಅವರು ಏಕಮಾತ್ರ ವಿಚಕ್ಷಣರು. ಕಳೆದ ಇಪ್ಪತ್ತು ವರುಷಗಳಿಂದ ಕಾಂಗ್ರೆಸ್ ಪ್ರಬಲವಾಗುತ್ತ ಬಂದು ಈಗ ಜಗತ್ತಿಗೇ ವಿಸ್ಮಯವನ್ನುಂಟುಮಾಡುವಂತಹ ಶಕ್ತಿಯುತ ಸಂಸ್ಥೆಯಾಗಿದ್ದರೆ ಅದನ್ನು ಆ ಮಟ್ಟಕ್ಕೆ ತಂದು ಮುಟ್ಟಿಸಿದವರು ಮಹಾತ್ಮರೇ. ಮುಂದೆಂತೂ ಫೆಡರೇಶನಿನ ಬಿಕ್ಕಟ್ಟಿನ ಸಮಸ್ಯೆಯು ಭೂತತೊಟ್ಟು ನಮ್ಮ ಹೆಗಲೇರಲು ನಿಂತಿದೆ. ಅದನ್ನು ಪ್ರತಿಭಟಿಸಲು ಎಂದು ಹೇಗೆ ಮುಂದಾಗಬೇಕೆಂಬುದನ್ನು ಹೇಳಿ ಮುನ್ನಡೆಯಿಸಲು ನಾವು ಗಾಂಧೀಜಿಯವರಿಗೆ ಶರಣುಹೋಗಬೇಕಾಗಿದೆ. ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಏಕಮಾತ್ರ ಸೇನಾನಿಗಳೆಂದರೆ ಮಹಾತ್ಮರೇ. ಈ ದೃಷ್ಟಿಯಿಂದ ಈ ಅಧಿವೇಶನದ ಕಾರ್ಯಕಲಾಪಗಳನ್ನು ನಿರ್ವಹಿಸೋಣ.

ಸುಭಾಸಚಂದ್ರಭೋಸರ ವೀರವಾಣಿ

ತ್ರಿಪುರಿ ಅಧಿವೇಶನದ ಸಭಾಧ್ಯಕ್ಷ ಭಾಷಣದಷ್ಟು ಸಂಕ್ಷಿಪ್ತವಾದುದು ಹಿಂದಿನ ಯಾವ ಅಧಿವೇಶನದಲ್ಲೂ ಬಂದಿಲ್ಲ. ಚುಟುಕಾಗಿದ್ದರೂ ಅದು ವೀರ್ಯವತ್ತಾಗಿತ್ತು. ಭೋಸರವರ ಅನಾರೋಗ್ಯದ ದೆಸೆಯಿಂದಾಗಿ ಅವರದನ್ನು ಓದಲಾರರಾಗಿದ್ದರು. ಅವರ ಅಗ್ರಜರಾದ ಶರತ್‌ಚಂದ್ರ ಭೋಸರು ಆ ಕಾರ್ಯವನ್ನು ನೆರವೇರಿಸಿದರು.

ಮೊದಲಾಗಿ, ಮಹಾತ್ಮರು ರಾಜಕೋಟೆಯಲ್ಲಿ ಕೈಗೊಂಡ ಉಪವಾಸ ದೀಕ್ಷೆಯು ಯಶಸ್ವಿಯಾಗಿ ಪರ್ಯವಸಾನ ಹೊಂದಿದುದಕ್ಕಾಗಿ ನಮಗಾಗಿರುವ ಆನಂದಪರವಶತೆಯನ್ನು ವ್ಯಕ್ತಗೊಳಿಸುವುದು ನಮ್ಮ ಕರ್ತವ್ಯ. ಈ ತ್ರಿಪುರಿ ಕಾಂಗ್ರೆಸ್ಸಿಗೆ ಮುಂಚಿತವಾಗಿ ಕೆಲವು ವಿಲಕ್ಷಣ ಘಟನೆಗಳು ನಡೆದುವು. ಅಧ್ಯಕ್ಷರ ಚುನಾವಣೆ, ಕಾರ್ಯಕಾರೀ ಮಂಡಳಿಯ ಸದಸ್ಯರ ರಾಜೀನಾಮೆ, ರಾಜಕೋಟೆಯ ಬಿಕ್ಕಟ್ಟಿನ ಘಟನಾವಳಿ, ಅಧ್ಯಕ್ಷರ ಅಸ್ವಾಸ್ಥ್ಯ, ಇವುಗಳೆಂದೆಲ್ಲ ಒಂದು ತರದ ಉದ್ವಿಗ್ನತೆಯುಂಟಾಗಿದೆ. ಅಂತರರಾಷ್ಟ್ರೀಯ ಸಮಸ್ಯೆಗಳೂ ಸಂದಿಗ್ಧ ಪರಿಸ್ಥಿತಿಗೆ ಬಂದಿವೆ. ಅವನ್ನೆಲ್ಲ ಇಂದಿನ ನನ್ನ ಪ್ರಕೃತಿ ಪರಿಸ್ಥಿತಿಯಲ್ಲಿ ತಮ್ಮ ಮುಂದೆ ವಿಶದೀಕರಿಸದೆ ಬಿಡಬೇಕಾಗಿದೆ.

ವ ಕಾರ್ಯದ ಕುರಿತು ಮಾತ್ರ ಹೇಳುವ
ನು. ನಮ್ಮ ಸ್ವರಾಜ್ಯ ಪ್ರಶ್ನೆಯಿಂದು ಪರಾ
ಕಾಷ್ಠೆಗೆ ಮುಟ್ಟಿದೆ. ನಾವಿನ್ನೂ ವಿಳಂಬ
ಮಾಡುವುದು ಯುಕ್ತವಲ್ಲ. ನಮ್ಮ ರಾಷ್ಟ್ರೀ
ಯ ಕೇಳಿಕೆ (ನ್ಯಾಶನಲ್ ಡಿಮಾಂಡ್)ಯ
ನ್ನು ಬ್ರಿಟಿಷ್ ಪ್ರಭುತ್ವಕ್ಕೆ ಕೊನೆಯ ನಿ
ರೂಪ (ಅಲ್ಟಿಮೇಟಮ್)ದ ರೀತಿಯಲ್ಲಿ
ಮಾಡುವ ಸುಸಂದರ್ಭ ಇದು. ಏಕೆಂದರೆ
ಇಂದು ಬ್ರಿಟಿಷ್ ಸರಕಾರದ ಶಕ್ತಿ ಪ್ರತಿಷ್ಠೆ
ಗೌರವಗಳು ಕುಂದಿವೆ. ತನ್ನ ದುರ್ಬಲತೆ
ಯನ್ನು ತಿಳಿದು ಅನಿಷ್ಟಗಳನ್ನೆಲ್ಲ ದೂ
ಹಾಕುವ ಧೋರಣೆಯಲ್ಲಿದೆ ಅದು. ಆದುದ
ರಿಂದ ಸಂಯುಕ್ತರಾಜ್ಯ ಪದ್ಧತಿ (ಫೆಡರೇ
ನ್) ಯನ್ನು ಅದು ನಮ್ಮ ಮೇಲೆ ಹೇ
ಸ ಬಂದಾಗ ನೋಡೋಣವೆಂದು ನಿಷ್ಕ್ರಿ
ಯಾ ಭಾವದಿಂದ ನಾವಿರುವುದು ಉಚಿ
ವಲ್ಲ. ಯುರೋಪಿನಲ್ಲಿ ತನ್ನ ಪ್ರತಿಷ್ಠೆಯು
ಶಾಂತಿಯೂ ಬಲಗೊಳ್ಳುವ ವರೆಗೂ ಅದ
ಈ ಪ್ರಯೋಗವನ್ನು ಮುಂದುವರಿಸಬಹು
ದು ನಾವು ಅನುಕೂಲ ಪರಿಸ್ಥಿತಿಯನ್ನು
ಕಾಲಿಂದ ದೂಡಿ ವಿರೋಧಿಯು ಬಲಿಷ್ಠ
ನಾಗುವ ತನಕ ಸುಮ್ಮನಿದ್ದು ಬಿಡುವುದ
ನ್ಯಾಯವೇ?

ಆದುದರಿಂದ ನಾವು ನಮ್ಮ ಕೇಳಿಕೆಯ
ಸಾಫಲ್ಯಕ್ಕೆ ಅವಧಿ ನಿಶ್ಚಿತ ಮಾಡಿ ಆ
ರೂಪವನ್ನು ಬ್ರಿಟಿಷ್ ಸರಕಾರಕ್ಕೆ ಕಳ
ಹಿಸಬೇಕು. ಅದು ಮಾನ್ಯವಾಗದಿದ್ದ
ನಮ್ಮ ಧ್ಯೇಯಸಾಧನೆಗಾಗಿ ಸಾರ್ವತ್ರಿ
ಸಾಮುದಾಯಿಕ ಸತ್ಯಾಗ್ರಹ ಮತ್ತು
ಶಾಸನಭಂಗದ ಚಳವಳಿಯನ್ನು ಹೂ
ದರೆ ಬ್ರಿಟಿಷ್ ಪ್ರಭುತ್ವಕ್ಕಿಂದು ಅದನ್ನು
ಎದುರಿಸುವ ಶಕ್ತಿಯಿಲ್ಲದ ಅದು ಮಣಿ
ಯುತ್ತದೆ ಎಂಟು ಪ್ರಾಂತ್ಯಗಳ ಸರಕಾ
ರವು ಅಸಹಕಾರ ತೋರಿದರೆ ಆಶ್ರಿತರಾಜ್ಯ
ಗಳಲ್ಲಿಂದು ತಲೆದೋರಿರುವ ಪ್ರಚಂಡ ಚ
ಳವಳಿವು ಮುಂದೊತ್ತಿದ್ದರೆ ಅಂತರ
ಷ್ಟ್ರೀಯ ವಿದ್ಯಮಾನಗಳೂ ನಮಗೆ ಅನು
ಕೂಲವಾಗಿರುವಾಗ ನಾವು ಗುರಿಮುಟ್ಟು
ವುದರಲ್ಲಿ ಸಂದೇಹವಿಲ್ಲ. ಆದರೂ ಅಂತ
ಕಾರ್ಯನಿರ್ವಾಹಕ್ಕೆ ನಾವಿನ್ನೂ ಸಿದ್ಧರಾ
ಲ್ಲವೆಂದೂ ಇದು ಸುಸಂದರ್ಭವಲ್ಲವೆಂದೂ
ಹೇಳುವ ನಿರಾಶಾವಾದಿಗಳ ಮನೋವೃ
ತ್ತಿಯು ಖೇದಾಶ್ಚರ್ಯಜನಕವಾಗಿದೆ.

ನಮ್ಮ ಭೇದಬುದ್ಧಿಗಳನ್ನು ಬದಿಗೊತ್ತಿ
ನಮ್ಮ ಪೂರ್ಣಶಕ್ತಿಯನ್ನು ಪಯೋಗಿ
ಈ ಸುಸಂದರ್ಭದ ಪೂರ್ಣ ಪ್ರಯೋಜ
ವನ್ನು ನಾವು ಹೊಂದಬೇಕಾಗಿದೆ. ಈ
ಆಶ್ರಿತರಾಜ್ಯಗಳ ಚಳುವಳಿಯು ಎ
ಮಟ್ಟಕ್ಕೆ ಮುಟ್ಟಿರುವುದರಿಂದ ಹರಿಪು
ಕಾಂಗ್ರೆಸ್ ಅಧಿವೇಶನದಲ್ಲಿ ನಾವು ಮಾ
ದ ತಾಟಸ್ಥ್ಯದ ನಿರ್ಣಯವನ್ನು ತೆಗೆದ
ಹಾಕಿ ಕಾಂಗ್ರೆಸ್ಸು ಅಲ್ಲಿಯೂ ಹೋ
ಡಲು ಮುಂದಾಗಬೇಕು.

ಹೀಗೆ ಬ್ರಿಟಿಷ್ ಇಂಡಿಯಾದಲ್ಲಿಯು
ನರೇಂದ್ರರ ಸಂಸ್ಥಾನಗಳಲ್ಲೂ ಏಕಪ್ರಕಾ
ರವಾಗಿ ಪ್ರಬಲ ಹೋರಾಟವನ್ನು ತೊ
ಗುವ ಹೊಣೆಗಾರಿಕೆಯನ್ನು ಕಾರ್ಯಕಾರಿ
ಮಂಡಳಿಯು ಕೈಗೊಳ್ಳಬೇಕು. ಅವಶ
ವಿದ್ದರೆ ಇದಕ್ಕಾಗಿ ಬೇರೊಂದು ಉಪಸಮಿ

ಸುಭಾಸ ಭೋಸರ ವೀರವಾಣಿ

ಅಧ್ಯಕ್ಷರ ಅಸ್ವಸ್ಥ! ಅಧಿವೇಶನದಲ್ಲಿ ಗೊಂದಲ!

ವಲ್ಲ ಅಖಿಲಭಾರತ ಆಶ್ರಿತ ಸಂಸ್ಥಾನಗಳ ಪ್ರಜಾಪರಿಷತ್ತಿನ ಸಹಕಾರವನ್ನೂ ಪ್ರಜಾಮಂಡಳಿಗಳ ಬೆಂಬಲವನ್ನೂ ಹೊಂದಿ ಮುಂದರಿಯೋಣ. ಮಹಾತ್ಮಾಗಾಂಧೀಯವರ ನೇತೃತ್ವವನ್ನೂ ಸಹಕಾರ ಸಲಹೆಗಳನ್ನೂ ಅಂಗೀಕರಿಸಿಕೊಳ್ಳೋಣ. ಕಿಸಾನ ಸಂಘಗಳು ಮಜೂರರ ಸಂಗಡಗಳೂ ಮುಂತಾಗಿ ಪ್ರಭುತ್ವವಿರೋಧಿ ಧೋರಣೆಯ ಕೂಟಗಳನ್ನು ತೆಗೆದುಕೊಳ್ಳೋಣ, ಮೇಲಾಗಿ ಕಾಂಗ್ರೆಸ್ಸಿನಲ್ಲಿ ಅಧಿಕಾರಲಾಲಸೆಯಿಂದಲೂ ಮತಭೇದ ಛಲಗಳಿಂದಲೂ ಸ್ವಾರ್ಥದಿಂದಲೂ ನೀತಿಗೆಡುಕತನವು ತಲೆದೋರದಂತೆ ಕಠಿಣ ಕಟ್ಟುನಿಟ್ಟುಗಳನ್ನು ಮಾಡಿಕೊಂಡು ಭೇದಭಾವವನ್ನು ತೊರೆದು ಒಂದುತನದಿಂದ ಮುಂದಾಗೋಣ. ರಾಷ್ಟ್ರೋದ್ಧಾರದ ಕಾರ್ಯಸಾಧನೆಯಲ್ಲಿ ವೈಯಕ್ತಿಕ ಮತಭಿನ್ನತೆಯನ್ನು ಬಿಟ್ಟು ಒಂದಾಗಬೇಕೆಂಬ ಸ್ಫೂರ್ತಿಯ ಸತ್ಪ್ರೇರಣೆಯನ್ನು ಮಹಾತ್ಮಾಗಾಂಧಿಯವರ ಬೋಧನೆಯಿಂದಲೂ ಯಶೋಜೀವಿಗಳಾದ ದಿವಂಗತ ಮೋತೀಲಾಲನೆಹರೂ, ದೇಶಬಂಧು ದಾಸ ಮುಂತಾದ ಉಜ್ವಲ ರಾಷ್ಟ್ರಭಕ್ತರು ದುಡಿದ ರೀತಿನೀತಿಗಳಿಂದಲೂ ನಾವು ಹೊಂದಿ ಉದಾರ ವಿಚಾರಗಳಿಂದ ಇಂದಿನ ವಿಷಮ ವಾತಾವರಣದಿಂದ ಪಾರಾಗಿ ರಾಷ್ಟ್ರೋದ್ಧಾರಕ್ಕೆ ನಾವು ಅನುವಾಗೋಣ.

ಅಧ್ಯಕ್ಷರ ಅಸ್ವಾಸ್ಥ್ಯ.

ತ್ರಿಪುರಿ ಅಧಿವೇಶನವು ತೊಡಗುವ ಒಂದೆರಡು ವಾರಗಳಿಗೆ ಮುಂಚಿತವಾಗಿಯೇ ಸುಭಾಷಚಂದ್ರ ಭೋಸರ ಆರೋಗ್ಯವು ಚೆನ್ನಾಗಿದ್ದಿಲ್ಲ. ಅದು ಕೊನೆಗೆ ಅವರು ಕಲ್ಕತ್ತಾದಿಂದ ಹೊರಡುವ ಮುಂಚಿತವಾಗಿಯೇ 'ಬ್ರೋಂಕೋ ನಿಮೋನಿಯಾ' ಜ್ವರವಾಗಿ ಪರಿಣಮಿಸಿತ್ತು. ವೈದ್ಯಕೀಯ ಅಭಿಪ್ರಾಯವು ಅವರ ಹೊರಡೋಣಕ್ಕೆ ವಿರೋಧವಾಗಿತ್ತು. ಗಾಂಧೀಜಿಯವರೂ ದೇಹಸ್ವಾಸ್ಥ್ಯಹೊಂದುವುದಕ್ಕೆ ಮೊದಲು ಪ್ರಾಧಾನ್ಯಕೊಡಿರಿ, ವೈದ್ಯ ಮಂಡಲದ ಅಭಿಮತ ಮೀರಿ ಹೊರಡಬೇಡಿರಿ ಎಂದು ತಂತಿಕೊಟ್ಟಿದ್ದರೂ ಆದರೆ ಹಿಡಿದ ಛಲ ಬಿಡಲೊಲ್ಲದ ಭೋಸರು ೧೦೨-೧೦೩ ಡಿಗ್ರಿ ಜ್ವರವಿದ್ದರೂ ಹೊರಟು ತ್ರಿಪುರಿಗೆ ಬಂದು ಮುಟ್ಟಿದರು. ಪ್ರಯಾಣದ ಆಯಾಸ ಕಾಂಗ್ರೆಸ್ಸಿನ ಅಗ್ರ ಮುಂದಾಳುಗಳೊಳಗಿನ ತೀಕ್ಷ್ಣ ಭಿನ್ನಾಭಿಪ್ರಾಯಗಳ ಸುದ್ದಿ ವರದಿ ವಿಚಾರ ವಿಮರ್ಶೆ ಸಂದರ್ಶನಗಳ ಕೋಲಾಹಲ ಹಾಗೂ ಉದ್ವಿಗ್ನತೆಯ ವಿಷಮ ವಾತಾವರಣವು ಜ್ವರೋಪಶಮನಕ್ಕೆ ಪ್ರತಿಕೂಲವಾಗಿಯೇ ಇದ್ದು ಅದು ೧೦೦-೧೦೪ರ ವರೆಗೂ ಏರುತ್ತ ತಗ್ಗುತ್ತ ಇತ್ತು. ನಡುವೆ ಒಂದು ಸಲ ಕಾಂಗ್ರೆಸ್ಸು ಕಮಿಟಿ ಮೀಟಿಂಗಿಗೂ, ಸಬ್‌ಜೆಕ್ಟ್ ಕಮಿಟಿ ಮೀಟಿಂಗಿಗೂ ಹೋಗಿ ತೀಕ್ಷ್ಣ ಮಾನಸಿಕ ಶ್ರಮೆಯುಳ್ಳ ತಾಸುಗಟ್ಟಳೆ ತಾಳಿಬಿಟ್ಟರು. ಅನಂತರ ಮೊದಲನೆಯ ದಿನದ ಕಾಂಗ್ರೆಸ್ ಮಹಾಧಿವೇಶನ ಸಭೆಯ ಕಾರ್ಯನಿರ್ವಹಣವನ್ನೂ ಮಾಡಿದರು. ಈ ಪ್ರಯುಕ್ತ ಜ್ವರವು ೧೦೫ ಡಿಗ್ರಿ ವರೆಗೂ ಹೋಯಿತು. ಜಬ್ಬಲಪುರದ ಆಸ್ಪತ್ರೆಗೆ ಅವರನ್ನು ಒಯ್ದು ತಕ್ಕ ಚಿಕಿತ್ಸೆ, ವಿರಾಮ, ಶಾಂತ ವಾತಾವರಣ ಕಲ್ಪಿಸಿಕೊಡುವುದು ಹಿತವೆಂದು ವೈದ್ಯಕೀಯ ಮಂಡಳವು ಅಭಿಪ್ರಾಯಪಟ್ಟಿತು. ನೆಹರೂಗಳವರು ಹೋಗಿ ಬಹಳ ಒತ್ತಾಯಮಾಡಿ ಹೇಳಿದರು. ನಾನು ತ್ರಿಪುರಿಗೆ ಬಂದುದು ಜಬ್ಬಲಪುರ ಆಸ್ಪತ್ರೆಯಲ್ಲಿರಲಿಕ್ಕಲ್ಲ. ಕಾಂಗ್ರೆಸ್ಸು ಅಧಿವೇಶನವು ಮುಕ್ತಾಯವಾಗುವ ತನಕ ನಾನಿಲ್ಲಿಂದ ಕದಲಲಾರೆನು. ಮೃತ್ಯುವಶನಾಗುವದಿದ್ದರೂ ಚಿಂತೆಯಿಲ್ಲ. ಎಂದು ತನ್ನ ದೃಢ ನಿರ್ಧಾರವನ್ನು ತಿಳಿಸಿದುದರಿಂದ ತ್ರಿಪುರಿಯಲ್ಲೇ ಅಧಿವೇಶನವು ಮುಗಿವ ತನಕ ಅವರ ಶುಶ್ರೂಷೆಯು ವಿಶೇಷ ಜಾಗರೂಕತೆಯಿಂದ ನಡೆಯುವಂತೆ ಸರ್ವ ವ್ಯವಸ್ಥೆ ಮಾಡಲಾಗಿದೆ.

ಅಧಿವೇಶನದಲ್ಲಿ ಗೊಂದಲ

ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನದ ಎರಡನೆಯ ದಿನದಲ್ಲಿ ಕಾಂಗ್ರೆಸ್ಸು ಶಿಸ್ತಿನ ಖ್ಯಾತಿಗೆ ಕಳಂಕವನ್ನುಂಟುಮಾಡುವಂತಹ ಪುಂಡಾಟಿಕೆಯ ಗೊಂದಲವು ಎದ್ದುಬಿಟ್ಟಿತು. ಅದನ್ನು ಹತೋಟಿಗೆ ತಂದು ಸಭಾಕಾರ್ಯವನ್ನು ಮುನ್ನಡೆಯಿಸಬೇಕಾದರೆ ಒಂದೂವರೆ ತಾಸುಗಳು ಹಿಡಿಯಿತು. ನೆಹರೂಗಳೂ ಶರತ್‌ಚಂದ್ರಭೋಸರೂ ಬಹುಕಷ್ಟಪಟ್ಟು ಶಾಂತ ವಾತಾವರಣವನ್ನುಂಟುಮಾಡಿದರು. ಗೊಂದಲಕ್ಕೆ ಕಾರಣವಿಷ್ಟೆ:—ಹಿಂದಿನ ರಾತ್ರಿಯೂ ಅಂದು ಮುಂಜಾನೆಯೂ ಭೋಸರ ಅಸ್ವಾಸ್ಥ್ಯವು ವಿಷಮಸ್ಥಿತಿಯಲ್ಲಿತ್ತು. ಜ್ವರವು ೧೦೫ ಡಿಗ್ರಿಗೆ ಮುಟ್ಟಿತ್ತು. ಎಲ್ಲರ ಹೃದಯವೂ ಕಾತರಿಸುತ್ತಿತ್ತು. ಅಂತಹ ಸನ್ನಿವೇಶದಲ್ಲಿ ಪಂಡಿತ ಪಂಥರ ಗಾಂಧೀಶರಣ್ಯ ಹಾಗೂ ವರ್ಕಿಂಗ್ ಕಮಿಟಿ ಮೇಲಿನ ದೂಷಣಾರೋಪಣೆ ಖಂಡನೆ ಮತ್ತು ಅಧ್ಯಕ್ಷರ ಕಾರ್ಯಕಾರೀ ಮಂಡಲ ನಿರ್ಮಾಣದ ಸ್ವೇಚ್ಛಾಧಿಕಾರ ಅಪಹರಣದ ಸೂಚನೆಯು ಅಧಿವೇಶನದ ಮುಂದೆ ನಿರ್ಣಯಕ್ಕೆ ಇಡಲ್ಪಡಲಿಕ್ಕಿತ್ತು. ಭೋಸರ ಅಂದಿನ ಪರಿಸ್ಥಿತಿಯಲ್ಲಿ ಅವರ ವರ್ತನೆಯ ಟೀಕಾತ್ಮಕವಾದ ಹಾಗೂ ಅವರ ಚಿತ್ತಶಾಂತಿಗೆ ಪ್ರತಿಕೂಲವಾದ ಆ ಸೂಚನೆಯನ್ನು ಅಂದು ಆ ಬಹಿರಂಗ ಅಧಿವೇಶನದಲ್ಲಿಡುವ ಬದಲಾಗಿ ಮುಂದೆ ಅನುಕೂಲ ವಾತಾವರಣವುಂಟಾದಾಗ ಕಾಂಗ್ರೆಸ್ ಕಮಿಟಿಯೇ (ಎ. ಐ. ಸಿ. ಸಿ.) ಇತ್ಯರ್ಥ ಮಾಡಿಕೊಳ್ಳುವುದು ಲೇಸೆಂದು ಶ್ರೀ. ಎಮ್. ಎಸ್. ಎನ್ನಿಯವರು ಬರೆದು ಆ ಸೂಚನೆ ಬಂದಾಗ ತಮ್ಮ ಈ ಉಪಸೂಚನೆಯನ್ನು ಮುಂದಿಟ್ಟರು. ಆಗ ಅಧ್ಯಕ್ಷಸ್ಥಾನದಲ್ಲಿದ್ದ ಮೌಲಾನಾ ಅಬುಲ್ ಆಜಾದರೂ ಮೂಲಸೂಚನೆಯ ಮೇಲೆ ನಡೆಯಬಹುದಾದ ವಾದವಿವಾದಗಳ ವಿಷಮಪರಿಸ್ಥಿತಿಯನ್ನು ನಿವಾರಿಸಲು ಆ ಉಪಸೂಚನೆಯೇ ಯುಕ್ತವಾದುದೆಂದು ಅಭಿಪ್ರಾಯಪಟ್ಟರು. ಆದರೆ ಬಂಗಾಳೀ ಸಂಗಡದವರು ಆ ಉಪಸೂಚನೆಯು ಉಪಾಯದಿಂದ ಮೂಲಸೂಚನೆಯನ್ನು ಗೆಲ್ಲಲು ವಿರೋಧ ಪಕ್ಷದವರು ಹೂಡಿದ ಹಂಚಿಕೆ ಎಂದು ಬಗೆದು ಕ್ರೋಧಾವಿಷ್ಟರಾಗಿ—"ಉಪಸೂಚನೆಯನ್ನು ಹಿಂದೆ ತೆಗೆಯಿರಿ" ಎಂದು ಕೂಗುತ್ತ ಸುಮಾರು ೫೦ಮಂದಿ ತಮ್ಮ ಜಾಗ ಬಿಟ್ಟು ವೇದಿಕೆಯ ಬಳಿ ಬಂದು ಸಿಟ್ಟಿನ ಮಾತುಗಳನ್ನಾಡುತ್ತ ಮುಷ್ಟಿಪ್ರದರ್ಶನ ಮಾಡುತ್ತ ಎದುರಾಡಿದವರ ಮೈಮೇಲೆ ಬೀಳುವ ಧೋರಣೆಯಿಂದ ಕೋಲಾಹಲವನ್ನೆಬ್ಬಿಸಿಬಿಟ್ಟರು. ಆಜಾದರ ಅಪೇಕ್ಷೆಯಂತೆ ನೆಹರೂಗಳವರು ಪರಿಸ್ಥಿತಿಯನ್ನು ವಿವರಿಸಿ ಹೇಳಿ ಅದಕ್ಕೆ ಒಪ್ಪದಿದ್ದರೆ ಉಪಸೂಚನೆಯನ್ನು ಹಿಂದೆಗೆಯಲು ಸಿದ್ಧವೆಂಬುವನ್ನು ಹೇಳಲಿಕ್ಕಾಗಿ ಮೂರಾವರ್ತಿ ಧ್ವನಿವಾಹಕ ಯಂತ್ರದ ಮುಂದೆ ನಿಂತರೂ ಕ್ರೋಧಾವೇಶರಾದ ಮಂದಿಯು ಮಾತೆತ್ತಲು ಬಿಡಲಿಲ್ಲ. ಇಂದು ಇಲ್ಲೇ ಈಗಲೇ ನಿರ್ಧಾರವಾಗಿ ಹೋಗಲಿ ಎಂಬೊಂದೇ ಕೂಗಿನಿಂದ ಯಾರನ್ನು ಬಾಯೆತ್ತಲೂ ಆ ಸಿಟ್ಟಿದ್ದ ತಂಡವು ಬಿಡಲಿಲ್ಲ. ಅಂತೂ ಕೆಲಕೆಲರೊಡನೆ ಅವರವರ ಮಾತು ನಡೆಯಬಲ್ಲವರು ಹೋಗಿ ಕೂಗಿ ಸಾಧಾರಣ ಶಾಂತ ವಾತಾವರಣವನ್ನುಂಟುಮಾಡಲು ಒಂದೂವರೆ ತಾಸು ಹಿಡಿಯಿತು. ನೆಹರೂಗಳು ಈ ಅವ್ಯವಸ್ಥೆಯನ್ನು ಕಂಡು ಸಹಿಸಲಾರದೆ ಶರತ್‌ಚಂದ್ರರೊಡನೆ ಅಯ್ಯೋ, ಎಂತಹ ಪೋಲಿಗಳ ತಂಡವನ್ನು ಬಂಗಾಳ[illegible] ಕಟ್ಟಿಕೊಂಡು ಬಂದಿಯಪ್ಪಾ! ಎಂದು ಉದ್ಗಾರವೆತ್ತಿದರು. ಶರತ್ ಚಂದ್ರ ಭೋಸರು (ಅಧ್ಯಕ್ಷಭೋಸರ ಅಣ್ಣ) ಒಂದು ತಾಸು ಕೂಗಿ ಕೂಗಿ ಬಂಗಾಳದ ಮರ್ಯಾದೆ ತೆಗೆದಿರೆಂದು ಗೋಳಿಟ್ಟು ಕೂಗಿ ಮಾತಾಡಿದರೆ ಕೇಳುವಷ್ಟಾದರೂ ಶಾಂತ ಪರಿಸ್ಥಿತಿ ಬಂದ ಮೇಲೆ ನೆಹರೂಗಳವರು ದುಃಖಾವೇಶ ಪೂರಿತವಾದ ವಾಣಿಯಿಂದ ನಾಲ್ವತ್ತೈದು ಮಿನಿಟುಗಳ ತನಕ ತನಗುಂಟಾದ ಹೃದಯವೇದನೆಯ ಕುರಿತು ಸಭೆ ಮರುಗಿ ಪಶ್ಚಾತ್ತಾಪ ಪಡುವಂತೆ ಭಾಷಣವಿತ್ತರು ಕೊನೆಕೊನೆಗೆ ಗದ್ಗದ ಸ್ವರದಿಂದ ಹೀಗೆಂದರು. 'ನನಗಿಂತಲೂ ಹೆಚ್ಚು ಕಾಲ ಈ ಕಾಂಗ್ರೆಸಿನಲ್ಲಿ ದುಡಿದವರು ಇಲ್ಲದ್ದಾರೆ. ಎಷ್ಟೋ ಅಧಿವೇಶನಗಳನ್ನು ನಾನೂ ಅವರೂ ನೋಡಿದ್ದೇವೆ. ಆದರೆ ಇಂತಹ ಅಸಭ್ಯ ವರ್ತನೆಯು ಇಂದಿನ ತನಕ ಕಾಂಗ್ರೆಸ್ಸು ಅಧಿವೇಶನದ ಇತಿಹಾಸದಲ್ಲಿ ಬಂದಿಲ್ಲ ನಮ್ಮ ಮುಂದಿರುವ ಮಹಾಸಮರವನ್ನು ಕುರಿತು ಮಾತಾಡುತ್ತೇವೆ ಕೆಲವರಂತೂ ಅಂತಹ ಸಮರಕ್ಕೆ ನಾವೀಗಲೇ ಸಿದ್ಧರೆನ್ನುತ್ತಿದ್ದಾರೆ. ಆದರೆ ಈಗ ನಡೆದ ವಿದ್ಯಮಾನಗಳನ್ನೂ ಮುಂದೆ ನಾವು ಕೈಗೊಳ್ಳಗೊಳ್ಳಬೇಕಾಗಿರುವ ಅಖಿಲ ಭಾರತ ವ್ಯಾಪಕವಾದ ಶಾಂತಮಯ ಅಹಿಂಸಾತ್ಮಕ ಸಮರವನ್ನೂ ಯೋಚಿಸಿದರೆ ನನ್ನ ಮೈ ನಡುಗುತ್ತದೆ. ಶಿಸ್ತಿನಪಾಠವನ್ನು ಹೇಳಿಹೇಳಿ, ಕೇಳಿ ಕೇಳಿ, ಇಂತಹ ಸಾಮಾನ್ಯ ಸಭಾಕಾರ್ಯವನ್ನು ಆತ್ಮಸಂಯಮನದಿಂದ ನಿರ್ವಹಿಸಲಾರದೆ ಹೋದೆವಲ್ಲ! ರಾಷ್ಟ್ರಕ್ಕೆ ಆದರ್ಶತೋರುವ ರಾಷ್ಟ್ರಸಭೆಯ ಶಿಸ್ತು ವ್ಯವಸ್ಥೆಗಳು ಬೀದಿಕಲಹದ ಮಟ್ಟಕ್ಕೆ ಇಳಿಯಿತೆಂದರೆ ಇನ್ನೇನು ಹೇಳಲಿಕ್ಕಿದೆ! ಇದರಿಂದಲಾದರೂ ನಾವೊಂದು ಮಹತ್ವದ ಪಾಠ ಕಲಿಯೋಣ! ಎನ್ನಲು ಸಭೆಯು ಪಶ್ಚಾತ್ತಾಪದ ಮೌನವೃತದಿಂದಿತ್ತು.

ಆಮೇಲೆ ಶ್ರೀ. ಎನ್ನಿಯವರು ತಮ್ಮ ಉಪಸೂಚನೆಯನ್ನು ಹಿಂದೆತೆಗೆದರು. ಮೂಲಸೂಚನೆಯು ಪ್ರಬಲ ಬಹುಮತದಿಂದ ಮಂಜೂರಾಯಿತು.

ಅನಂತರ ಕಾಂಗ್ರೆಸ್ ಸದಸ್ಯರನ್ನು ಸೇರಿಸಿಕೊಳ್ಳುವುದರಲ್ಲಿ ತೋರುವ ನೀತಿಗೆಡುಕತನ ನಿವಾರಣೆ ಮುಂತಾದ ಕಾಂಗ್ರೆಸ್‌ಕಾರ್ಯ ಶುದ್ಧೀಕರಣಕ್ಕೆ ಬೇಕಾದ ನಿಯಮಪರಿವರ್ತನೆ ನವನಿಯಮ ನಿರ್ಮಾಣಗಳ ಅಧಿಕಾರವನ್ನು ಕಾಂಗ್ರೆಸ್ಸ್ ಕಮಿಟಿಗೆ (ಎ. ಐ. ಸಿ., ಸಿ.) ಕೊಡಬೇಕೆಂದೂ ಅದು ಕೂಡಲೆ ಈ ಕಾರ್ಯವನ್ನು ಕೈಗೊಳ್ಳಬೇಕೆಂದೂ ಶ್ರೀ. ಪ್ರಕಾಶರು ತಂದ ಠರಾವು ಮಂಜೂರಾಯಿತು. ಆಶ್ರಿತ ಸಂಸ್ಥಾನಗಳ ಕುರಿತಾದ ಠರಾವನ್ನು ಅಪರಾಹ್ಣದ ಅಧಿವೇಶನಕ್ಕೆ ಬಾಕಿಯಿಟ್ಟು ಪೂರ್ವಾಹ್ಣದ ಅಧಿವೇಶನವು ಮುಕ್ತಾಯವಾಯಿತು.

AUGUSTINE & CO.,
Stockits:—
Well Known ceylon, Nilgri, Darjeeling & Assam Tea & Coffee.
All sorts of Hotel & family Tea Mixures as well as Coffee can be had at moderate rates.
ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಟಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ,
ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್, ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಟಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರದಲ್ಲಿ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ. ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ.
ವಿಳಾಸ: ಆಗಸ್ಟಿನ್ ಎಂಡ್ ಕೋ, ಮೌಂಟುರೋಡು, ಮಜಗಾಂ, ಮುಂಬಯಿ.
Mount Road, Mazagaon, BOMBAY.

ಫೇನ್ಸಿ ಲಿವರ್ ರಿಸ್ಟ್‌ವಾಚ್
ರೂ. 2—4—0.

ಸಣ್ಣ ಸುಂದರ, ಆಕಾರ ಗಟ್ಟಿಮುಟ್ಟಾದ ಮೆಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರಂಟಿ ದುಂದಾಕೃತಿಯ, ದೀರ್ಘಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4 0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮದ್ದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಚಿಕ್ಕದರಲ್ಲಿ ತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0-0, ಜುವೆಲಿಯುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ಟ ಖ. ಪ್ರತ್ಯೇಕ.
ಎಚ್. ಡಾವಿಡ್ ಅಂಡ್ ಕೊ.
ಪೋ. ಬಾಕ್ಸ್ 11424 ಕಲ್ಕತ್ತ.
H. David & Co.
Post Box No. 11424. Calcutta

ಉಡುಪಿ

ತೀರ್ಥಹಳ್ಳಿ ತಾಲೂಕು ಕಾಂಗ್ರೆಸ್ ಕಮಿಟಿ—ಇದರ 1938ನೇ ಜನವರಿ 1ರಿಂದ 31ನೇ ಡಿಸೆಂಬರ್ ವರೆಗಿನ ಆಯವ್ಯಯ ಪಟ್ಟಿಯು ನಮ್ಮ ಬಳಿಗೆ ಪ್ರಕಟಣೆಗೆಂದು ಬಂದಿದೆ. ಸ್ಥಳಾಭಾವದಿಂದ ಮುದ್ರಿಸಲಾಗಲಿಲ್ಲ.

ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರ ಬಜೆಟ್ ಭಾಷಣ—ತಾ. 11ರಲ್ಲಿ ಜರಗಿದ ಜಿಲ್ಲಾ ಬೋರ್ಡು ಸಭೆಯಲ್ಲಿ ಅಧ್ಯಕ್ಷರಾದ ಡಾ. ಕೆ. ವಿಟ್ಠಲ ಶೆಟ್ಟರು 1938–39ರ ರಿವೈಸ್ಡ್ ಎಸ್ಟಿಮೇಟ್ ಮತ್ತು 1939–40ರ ಬಜೆಟನ್ನು ಇಡುವಾಗ ಬಜೆಟಿನ ಕುರಿತು ಮಾಡಿರುವ ಕೆಲವು ಪ್ರಾಮುಖ್ಯ ವಿಷಯಗಳನ್ನೊಳಗೊಂಡಿರುವ ಭಾಷಣವನ್ನು ಕಾಂಗ್ರೆಸಿನ ಸುದ್ದಿಗಳ ಹೆಚ್ಚಳದಿಂದಾಗಿ ಮುದ್ರಿಸಲಾಗಲಿಲ್ಲ. ಹಾಗೆಯೇ ಇತರ ಕೆಲವು ಜಿಲ್ಲಾ ವರ್ತಮಾನಗಳನ್ನು ಬಿಡಲಾಗಿದೆ. ವಾಚಕರು ಗಮನಿಸಬೇಕು.

ಸಂ. ನ.

ಶ್ರೀ ಶೀರಾಲಿ ಸುಬ್ಬರಾಯರು ದಿವಂಗತರಾದರು—ಉಡುಪಿ ಬೋರ್ಡು ಹೈಸ್ಕೂಲಿನ ಮಾಜಿ ಹೆಡ್ ಮಾಸ್ತರರಾಗಿದ್ದ ಶೀರಾಲಿ ಸುಬ್ಬರಾಯರು ಕಳೆದ ತಾ. ೧೦ನೆಯ ಸಾಯಂಕಾಲ ತೀರಿಕೊಂಡರು. ೧೯೧೮ರಲ್ಲಿ ಬೋರ್ಡು ಹೈಸ್ಕೂಲು ಸ್ಥಾಪನೆಯಾದಂದಿನಿಂದ ೧೯೩೩ರ ವರೆಗೆ (ನಡುವೆ ಎರಡು ವರುಷ ಹೊರತು) ಸುಮಾರು ೧೩ ವರುಷಗಳ ತಮ್ಮ ಆಯುಷ್ಯವನ್ನು ಈ ಶಾಲೆಯ ಅಭ್ಯುದಯಕ್ಕಾಗಿ ಸವೆದ ಕೀರ್ತಿಪುಣ್ಯಗಳಿಗೆ ಇವರು ಪಾತ್ರರು. ಹೊಸದಾಗಿ ತೆರೆಯಲ್ಪಟ್ಟ ಹೈಸ್ಕೂಲನ್ನು ಯಶಸ್ವಿಯಾಗಿ ಪ್ರವರ್ತನದಲ್ಲಿ ತರುವ ಗುರುತರವಾದ ಭಾರವನ್ನು ಹೊತ್ತು ನಿರ್ವಹಿಸಿರುವರು.

ಸಂತಾಪ ಸೂಚಕ ಸಭೆ—ತಾ ೧೧ನೆಯ ಮಂಗಳವಾರ ಬೋರ್ಡು ಹೈಸ್ಕೂಲಿನ ಹಾಲಿನಲ್ಲಿ ಶಾಲೆಯ ಸಮಸ್ತ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಸಭೆಗೂಡಿ ಶೀ. ಶೀರಾಲಿಯವರ ನಿಧನಕ್ಕಾಗಿ ಸಂತಾಪ ಸೂಚಿಸಿದರು. ದಿವಂಗತರ ಶಾಲಾಪ್ರೇಮ, ಕರ್ತವ್ಯದಕ್ಷತೆ, ಕಾರ್ಯನಿರ್ವಾಹಕ ಶಕ್ತಿ, ಕೌಶಲ್ಯ, ನಿಷ್ಕಳಂಕ ಜೀವನ, ಮತನಿಷ್ಠೆ, ಉದಾರ ಉದಾತ್ತಶೀಲ, ಅವರ ಕಡೆಗಿರುವ ಶಾಲೆಯ ಋಣಭಾರ, ಅವರ ನಿಧನದಿಂದುಂಟಾಗಿರುವ ಖೇದ, ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿ ಮುಖ್ಯೋಪಾಧ್ಯಾಯರಾದ ಶ್ರೀ. ರೋಬ್ ಫೆರ್ನಾಂಡಿಸರೂ ಸಹಾಯಕ ವರ್ಗದಿಂದ ಶ್ರೀಗಳಾದ ಎಚ್. ಎಮ್. ದೇಸಾ, ಬಿ. ಶ್ಯಾಮರಾಯಶೆಟ್ಟಿ, ಕೊರಡ್ಕಲ್ ಶ್ರೀನಿವಾಸರಾವ್, ಇವರ ಸಂತಾಪಸೂಚಕ ಭಾಷಣಗಳಾಗಲು, ಸಭೆಯು ಎದ್ದು ನಿಂತು ದಿವಂಗತರ ಆತ್ಮಕ್ಕೆ ಮೋಕ್ಷಪ್ರಾಪ್ತಿಯಾಗಲೆಂದು ಪ್ರಾರ್ಥಿಸಿ ಅವರ ಕುಟುಂಬಿಕರ ದುಃಖದಲ್ಲಿ ತಮ್ಮೆಲ್ಲರ ಸಹಸಂತಾಪವನ್ನು ವ್ಯಕ್ತಗೊಳಿಸುವ ನಿರ್ಣಯವನ್ನು ಮಾಡಿತು. ದಿವಂಗತರ ಕಡೆಗಿರುವ ಶಾಲೆಯ ಋಣ ವಿಶೇಷದ ಗುರುತ್ವ ಸೂಚಕವಾಗಿಯೂ ಅವರ ನೆನಪಿನ ಗೌರವಾರ್ಥವಾಗಿಯೂ ಆ ಪೂರ್ವಾರ್ಧ ಶಾಲೆಯನ್ನು ಮುಚ್ಚಲಾಯಿತು.

ಇಲ್ಲಿಯ ಬೋರ್ಡು ಹೈಸ್ಕೂಲಿನಲ್ಲಿ ತಾ ೨೩ನೇ ಸಾಯಂಕಾಲ ಎಂ. ಜಿ. ಎಂ. ವಿದ್ಯಾರ್ಥಿಗಳ ಶಾರೀರಿಕ ವ್ಯಾಯಾಮದ ವಿಶೇಷ ಪ್ರದರ್ಶನ(Physical Demontration) ಇದೆ. ಇಂತಹ ಕಾರ್ಯಕಲಾಪಗಳಲ್ಲಿ ಅಭಿಮಾನ ಅಭಿರುಚಿಯುಳ್ಳವರೆಲ್ಲ ಬಂದು ಪ್ರೋತ್ಸಾಹಿಸಬೇಕಾಗಿ ಶಾಲಾಧಿಕಾರಿಗಳು ಕೋರುತ್ತಾರೆ.

ವರ್ಗಾವರ್ಗಿ—ಉಡುಪಿ ರೇಂಜಿನ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರಾಗಿದ್ದ ಶ್ರೀ. ಕೆ. ರಾಮಯ್ಯನಾಯ್ಕರು ಮಂಗಳೂರು ಗ. ಟ್ರೇ. ಎ. "ಟ್ರೈನಿಂಗ್ ಸ್ಕೂಲಿಗೆ ವರ್ಗಾಯಿಸಲ್ಪಟ್ಟಿರುವರು. ಇವರ ಸ್ಥಾನದಲ್ಲಿ ಶ್ರೀ. ನರಸಿಂಗರಾಯರು ಹಾಜರಾಗಿರುವರು. ಶ್ರೀಯುತರ ಟ್ರೈನಿಂಗ್ ಜಿಲ್ಲೆ ಮತ್ತು ಇತರ ಶಾಲಾ ಮಾ

THE

CANARA INDUSTRIAL & BANKING SYNDICATE LTD.,

(INCORPORATED IN BRITISH INDIA

LIABILITY OF SHAREHOLDERS LIMITED.)

ESTD. 1925

Head Office:- **UDIPI, (S. India.)**

SEASON DEPOSITS ARE ACCEPTED at 3½ per cent per annum

Further particulars on application to any of our thirty-five Offices.

ಸ್ವರದ ಟೀಪಾರ್ಟಿ ಸತ್ಕಾರವನ್ನಿತ್ತು ಗೌರವಿಸಿದರು.

ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿದಾಯ ಸತ್ಕಾರ ಕೂಟ—ಸ್ಟೇಷನರಿ ಸಬ್ ಮೆಜಿಸ್ಟ್ರೇಟರಾಗಿದ್ದ ಶ್ರೀ. ಓ. ಎಸ್. ತಿಮ್ಮಪ್ಪ ಶೆಟ್ಟರಿಗೆ ಕಾಸರಗೋಡಿಗೆ ವರ್ಗವಾಗಿರುವುದರಿಂದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದವರು ಒಂದು ವಿದಾಯ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಟೀಪಾರ್ಟಿಯಾದ ತರುವಾಯ ಸಭೆಯೊಂದು ಶ್ರೀ ಕೆ. ಜಿ. ಬಲ್ಲಾಳ್ ಬಿ. ಎ ಎಲ್. ಎಲ್. ಬಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಗಳಲ್ಲಿ ಗೋವಿಂದ ಶೆಟ್ಟಿ ಮೊದಲಾದವರೂ, ಸಭಿಕರ ಪರವಾಗಿ ಬಿ. ಶ್ಯಾಮರಾಯಶೆಟ್ಟಿ ಬಿ. ಎ. ಎಲ್. ಟಿ., ಶ್ರೀ. ಬಿ. ಶೀನಪ್ಪ ಹೆಗ್ಡೆ ಬಿ. ಎ. ಬಿ. ಎಲ್. ರಾಮಣ್ಣ ಶೆಟ್ಟಿ ಬಿ.ಎ.ಎಲ್.ಟಿ. ಮೊದಲಾದವರೂ ಭಾಷಣವಿತ್ತರು. ವಿದ್ಯಾರ್ಥಿಗಳ ಮತ್ತು ಹಿತ್ತವರ ಕರ್ತವ್ಯದ ಕುರಿತು ಶ್ರೀ ತಿಮ್ಮಪ್ಪ ಶೆಟ್ಟರು ಸುದೀರ್ಘ ಉಪನ್ಯಾಸವಿತ್ತರು. ಅಧ್ಯಕ್ಷರ ಭಾಷಣದೊಂದಿಗೆ ಸಭಾಂತ್ಯವಾಯಿತು.

ಮುನ್ಸಿಪಲ್ ಸಭೆ—ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ತಾ. 13ನೇ ಸೋಮವಾರ ಸಂಜೆ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ಕಮಿಶನರಾದ ಶ್ರೀ. ಸೂರ್ಯನಾರಾಯಣರಾಯರೂ ಹಾಜರಿದ್ದರು.

ಬ್ಯಾಡ್‌ಮಿಂಟನ್ ಟೂರ್ನಮೆಂಟ್

ಮುನ್ಸಿಪಲ್ ಜಿಮ್ಖಾನ ಕಮಿಟಿಯು ಕಡೆಯಿಂದ ಎಪ್ರಿಲ್ ೩ನೇ ವಾರದಲ್ಲಿ ಬ್ಯಾಡ್‌ಮಿಂಟನ್ ಟೂರ್ನಮೆಂಟೊಂದು ನಡೆಯಲಿರುವುದು. ಇದರಲ್ಲಿ ಭಾಗಿಯಾಗಲಿಚ್ಛಿಸುವವರು ಇದೇ ತಾ. 27ರೊಳಗೆ ಪ್ರವೇಶ ಹಣ ತೆತ್ತು ಹೆಸರು ದಾಖಲ್ಮಾಡಿ ಕೊಳ್ಳತಕ್ಕದ್ದು. ಹೆಚ್ಚಿನ ವಿವರವನ್ನು ಕಾರ್ಯದರ್ಶಿ ಮುನ್ಸಿಪಲ್ ಜಿಮ್ಖಾನ ಕಮಿಟಿ ಇವರಿಂದ ತಿಳಿಯಬಹುದು.

೨೫ ರೂ.
ಬಹುಮಾನ
ಪಡೆಯುವುದು ಹೇಗೆ?
ಬರುವ ಸಂಚಿಕೆ ನಿರೀಕ್ಷಿಸಿರಿ!

THE

PREMIER BANK OF INDIA, LIMITED.

Head Office: MADRAS.

Branches:

MADURA & NELLORE.

CHAIRMAN

Dr. U.L Narayana Rao.

'Bhujanga Nivas' Madras.

FIXED DEPOSITS

are now received at the following Rates:

For 6 Months at 3¾% P. A.

12 Months at 4¾% P. A.

24 Months at 5% P. A.

(Interest Paid Half-yearly.)

12 = 24

ಒಂದಕ್ಕೆರಡು ಸ್ವಾಮಿ!

(೧) ಸ್ವತಂತ್ರ ಜೀವನೋಪಾಯ ೦–೨–೬ (೨) ಬಾಲವಾಙ್ಮಯ ೦–೩–೦ (೩) ನಾಡಕತೆ ೦–೨–೦ (೪) ಮುಂದಿನ ದೇವರು ೦–೨–೦ (೫) ಮುಗುಳು ೦–೨–೬ ಈ 0–12–0ಯ ೫ ಪುಸ್ತಕಗಳನ್ನು ಕರಿಸುವವರಿಗೆ 'ಕಾವ್ಯಸಾಮ್ರಾಜ್ಯ' ಎಂಬ ಅತ್ಯುತ್ತಮವಾದ 0–12–0 ಬೆಲೆಯ ಪುಸ್ತಕವನ್ನು ಉಚಿತವಾಗಿ ಕೊಡಲಾಗುವುದು. ಅಂಚೆವೆಚ್ಚ 0–4–0 ಪ್ರತ್ಯೇಕ. ಕೂಡಲೇ ರೂ. 1 ರೂಪಾಯಿ ಸ್ಟಾಂಪು ಕಳಿಸಿರಿ. ಒಂದಕ್ಕೆರಡು ಲಾಭ ಪಡೆಯಿರಿ.

ನವಭಾರತ ಪುಸ್ತಕ ಭಂಡಾರ

ಉಡುಪಿ

ತಿಂಗಳುಗಳಲ್ಲಿ ಮಾತ್ರ. ಅದೂ ಮಾರಾಟಕ್ಕಾಗಿ ಮಾಡಕೂಡದು. ಸ್ವಂತ ಉಪಯೋಗಕ್ಕಾಗಿ ತಯಾರಿಸುವವರು ಪರ್ಮಿಟು ಪಡೆಕೊಂಡು ನಿಶ್ಚಿತ ಅವಧಿಯೊಳಗೆ ನಿಶ್ಚಿತ ನಿಯಮಗಳಿಗನುಸಾರವಾಗಿ ತಮ್ಮ ಮನೆ ಖರ್ಚಿನ ಬಗ್ಗೆ ಮಾತ್ರ ಉಪ್ಪುನೀರಿನಿಂದ ಉಪ್ಪು ಮಾಡಲು ಬಿಡಲಾಗುವುದು.

ಎಲ್ಲೆಲ್ಲಿ ಏನೇನು?

ತಿರುವಾಂಕೂರು ದಿವಾನರ ಗರ್ಜನೆ

'ಅಖಿಲ ಭಾರತ ಕಾಂಗ್ರೆಸ್ಸು ಇಂದು ಅರ್ಧ ಮರ್ಧರಾಜ್ಯಾಧಿಕಾರ ಮತ್ತು ಭಂಡಾರಾಧಿಕಾರಕ್ಕಾಗಿ ಕಾದಾಟವಮಾಡುವ ರಂಗಭೂಮಿಯಾಗಿದ್ದು ಅದೀಗ ತಿರುವಾಂಕೂರನ್ನು ಪ್ರವೇಶಿಸಿ ಸಂಸ್ಥಾನದ ರಾಜಕಾರಣದಲ್ಲಿ ಪ್ರವೇಶಿಸುವ ಸ್ವಾತಂತ್ರ್ಯ ಘೋಷಣೆಯನ್ನು ಬೋಧಿಸುತ್ತದೆ, ಪ್ರಚೋದಿಸುತ್ತದೆ. ಆ ಕಾಂಗ್ರೆಸ್ಸಿಗೆ ನಾನು ಹೇಳುವುದೇನಂದರೆ, 'ವೈದ್ಯರೇ, ಮೊದಲಾಗಿ ನಿಮ್ಮ ರೋಗವಾಸಿಮಾಡಿಕೊಳ್ಳಿ!' – ಎಂದು. ಯಾವ ತರದಲ್ಲಾದರೂ ಸಂಸ್ಥಾನದ ಹೊರಗಿನವರು ನಮ್ಮ ಸಂಸ್ಥಾನದ ರಾಜಕಾರಣದಲ್ಲಿ ಪ್ರವೇಶಿಸಲು ನಾವು ಸರ್ವಥಾ ಬಿಡಲಾರೆವು. ಸಹಿಸಲಾರೆವು. ಇದನ್ನು ಎಲ್ಲರೂ ಸ್ಪಷ್ಟವಾಗಿ ತಿಳಿದಿರಲಿ!' ಎಂದು ತಿರುವಾಂಕೂರು ಪೋಲೀಸು ಪಡೆಯ ಪ್ರದರ್ಶನ ನಡೆಯಿಸಿ ಬಹುಮಾನ ವಿತರಣೆ ಮಾಡುವ ಸಂದರ್ಭದಲ್ಲಿ ಗರ್ಜಿಸಿದರು. ಗರ್ಜನೆ ತರ್ಜನೆಗೆ ಯೋಗ್ಯ ಸಂದರ್ಭ. ಕೇಳಿ ಹುರಿಹುರಿಯಾಗಿ ಉರಿಯುವಂತಹ ಶ್ರೋತೃವೃಂದ!

ಎಲಿಮೆಂಟರಿ ಶಾಲೆಗಳಿಗೆ ಹೊಸ ಸಿಲೆಬಸ್

ಅಚ್ಚ ವಾರ್ಧಾ ಯೋಜನೆಗನುಸಾರವಾಗಿಯಿಲ್ಲವಾದರೂ ಅದರ ಸ್ಫೂರ್ತಿ ಧೋರಣೆ ಪ್ರೇರಣೆಗಳಿಗನುಸಾರವಾಗಿ ವಿರಚಿತವಾದ ಪ್ರಾಥಮಿಕ ಶಾಲೆಗಳ ಶಿಕ್ಷಣ ವಿಷಯ ನಿರೂಪಣೆಯ ಪತ್ರವು ಕ್ಷಿಪ್ರದಲ್ಲೇ ಪ್ರಕಟವಾಗುವುದೆಂದೂ ಬರುವ ಜೂನ್ ತಿಂಗಳಿಂದ ಅದು ಶಾಲೆಗಳಲ್ಲಿ ಪ್ರಯೋಗದಲ್ಲಿ ಬರತಕ್ಕದ್ದೆಂದೂ ವಿದ್ಯಾಂಗದ ಮಂತ್ರಿಗಳಾದ ವಾರ್ಕಿಗಳವರು ಇತ್ತೀಚೆಗೆ ಒಂದು ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿರುವರು.

ತ್ರಿಪುರಿಯಲ್ಲಿ ಪ್ರೇಕ್ಷಕರ ಟಿಕೇಟುಗಳು

ತ್ರಿಪುರಿಯ ಕಾಂಗ್ರೆಸ್ಸು ಸಬ್ ಜೆಕ್ಟ್ ಕಮಿಟಿಯ ಮತ್ತು ಮಹಾ ಅಧಿವೇಶನಕ್ಕೆ ಪ್ರೇಕ್ಷಕರು ಕೊಂಡುಕೊಂಡ ಟಿಕೇಟುಗಳಿಂದ ರೂ. ೭೫೦೦೦ಉತ್ಪತ್ತಿಯಾಗಿದೆಯೆಂದೂ ಸ್ವಾಗತ ಸಮಿತಿಯ ಸದಸ್ಯತನದ ಚಂದಾದಿಂದ ಮತ್ತು ಇತರ ವಂತಿಗೆಯಿಂದ ಒಂದು ಲಕ್ಷ ರೂಪಾಯಿ ಒಟ್ಟುಗೂಡಿದೆಯೆಂದೂ ತಿಳಿಯಲಾಗಿದೆ.

ಗಾಂಧೀಜಿಯವರು ರಾಜಕೋಟೆಯಿಂದ ದಿಲ್ಲಿಗೆ

ಗಾಂಧೀಜಿಯವರ ಆರೋಗ್ಯವು ಪ್ರಯಾಣವನ್ನು ಕೈಗೊಳ್ಳುವಷ್ಟು ಸುಧಾರಿಸಿದೆ. ದಿಲ್ಲಿಯಲ್ಲಿ ವೈಸರಾಯರೊಡನೆ ಮಾತಾಡುವ ಪೂರ್ವ ಸನ್ನಾಹವಾಗಿ ರಾಜಕೋಟೆಯ ಉಭಯ ಪಕ್ಷದ ಸಮಸ್ತ ವಿಚಾರಗಳನ್ನು ತಿಳಿದುಕೊಂಡಿರುವರು. ಪ್ರಜಾಮಂಡಲದ ಪ್ರಮುಖರೊಡನೆಯೂ ರಾಜಕೋಟೆಯ ಸರಕಾರ ಪಕ್ಷದ ಖಾನ್ ಸಾಹೇಬ್ ಫಾತೆ ಮಹಮ್ಮದ್ ಖಾನ್ ಇವರೊಡನೆಯೂ ಹಲವು ವಿಷಯಗಳನ್ನು ಚರ್ಚಿಸಿರುವರು. ತಾ. ೧೩ನೆಯ ಸಾಯಂಕಾಲ ಅಹಮ್ಮದಾಬಾದ್ ಮಾರ್ಗವಾಗಿ ದಿಲ್ಲಿಗೆ ಹೊರಟುಹೋದರು.

ಉಪ್ಪು ತಯಾರಿಯ ರಿಯಾಯಿತಿಯಲ್ಲಿ ತುಸು ಕಟ್ಟುನಿಟ್ಟಾಗಿದೆ.

ವರ್ಷದ ಎಲ್ಲಾ ಸಮಯದಲ್ಲಿಯೂ ಈ ರಿಯಾಯಿತಿಯು ಇರುವುದಿಲ್ಲ. ಕೆಲವು

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು ಬೆಲೆ ಸೀಸೆ 1ಕ್ಕೆ 12 ಆಣೆ, ಟ ಖ. ೯ ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.

ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ,

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪೆನಿ** 1926

18 ಬಲ್ಮರ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ ಜೋಡುಗಳು, ಪೇದೆಗಳ ಬಿಲ್ಲೆ, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು. **CROWN RUBBER STAMP CO,**

Balmat Road, MANGALORE.

Included by the Mysore Govt Stores Purchase Committee in the list of approved Firms

---

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬೂಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್ ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: ಆನಂದರಾವ್ ಸರ್ಕಲ್, ಬೆಂಗಳೂರು.

ದೂರೀಕರಿಸಿರಿ—ದೃಷ್ಟಿ ಚಕ್ರ—ನರೆತಕೂದಲು – ವೃದ್ಧಾಪ್ಯ ತರುಣರು ಎರಡು ತಿಂಗಳತನಕವೂ, ವೃದ್ಧರು ನಾಲ್ಕು ತಿಂಗಳವರೆಗೂ ಬೂಟಿಯೊನಕನ್ನು ಉಪಯೋಗಿಸದಲ್ಲಿ ದೃಷ್ಟಿ ವಹಿಂದ್ಯವ ಕೊಲಗಿ ನರೆತ ಕೂದಲು ಕಪ್ಪಗಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಧಳಕುಬಾರದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ. ಟಾನಿಕಿನ ಕ್ರಯವು ಈ ಕೆಳನಾಗಿದೆ. ಒಂದು ತಿಂಗಳಿನ ಟಾನಿಕಿಗೆ ರೂ 3-8 0, 2 ತಿಂಗಳಿನದಕ್ಕೆ ರೂ. 6 0 0, ನಾಲ್ಕು ತಿಂಗಳಿನದಕ್ಕೆ ರೂ. 10. ಪತ್ರವ್ಯವಹಾರ ಇಂಗ್ಲೀಷಿನಲ್ಲೇ. **Jari Booti Dawakhana,**

P O Benar Nursery (Darbhanga)

ಮೈಸೂರು ಪತ್ರ

(ನವಯುಗದ ಬಾತ್ಮಿದಾರರಿಂದ)

ಮೈಸೂರು ಮ ೧೨

(ನಮ್ಮ ಬಾತ್ಮೀದಾರರಾದ ಶ್ರೀ ಯನ್. ಗಂಡ.ರಾಯರು ಉತ್ತರ ಇಂಡಿಯಾದಲ್ಲಿ ಪ್ರವಾಸಮಾಡಲು ಪ್ರಯಾಣಬೆಳೆಸಿದ್ದರು ಆ ಸಂಬಂಧ ಕೆಲವುಮಾರ ಮೈಸೂರು ಸುದ್ದಿಗಳನ್ನು ಪ್ರಕಟಿಸಲಾಗದುದಕ್ಕಾಗಿ ವಿಷಾದವಾಗುತ್ತದೆ. ಕಳೆದ ವಾರಾಂತ್ಯದಲ್ಲಿ ಇವರು ರಾಜಧಾನಿಗೆ ಸುಖವಾಗಿ ಹಿಂತಿರುಗಿದ್ದಾರೆ. ಇನ್ನು ಕ್ರಮವಾಗಿ ಸುದ್ದಿಗಳನ್ನು ಬರೆಯಲಿದ್ದಾರೆ. ವಾಚಕರು ಗಮನಿಸಬೇಕು. ಸಂ ನ)

ಮೆಡಿಕೆಲ್ ಮತ್ತು ಸ್ಯಾನಿಟರಿ ಸಮ್ಮೇಳನೆ—ಮೇಲ್ಕಂಡ ೧೧ನೇ (ಮೈಸೂರು) ಸಮ್ಮೇಳನವು ಬೆಂಗಳೂರು ವಾಣಿವಿಲಾಸ ಆಸ್ಪತ್ರೆಯಲ್ಲಿ ನೆರವೇರಿತು. ದಿವಾನರಾದ ಸರ್. ಮಿರ್ಜಾರವರು ಸಮ್ಮೇಳನದ ಪ್ರಾರಂಭೋತ್ಸವ ನಡೆಸಿ, ವಿಚಾರಪೂರ್ಣ ಭಾಷಣವಾಡಿದರು. ಇಂದಿನ ಸೀನಿಯರ್ ಸರ್ಜನ್ ರಾಜಸೇವಾಸಕ್ತ ಶ್ರೀ ಎ. ಕೆ. ನಾರಾಯಣರಾಯರು ಸ್ವಾಗತ ಭಾಷಣವಾಡಿ, ಅದೇ ಸಂಘದಲ್ಲಿ ಕಳೆದ ಒಂಭತ್ತು ವರ್ಷದಿಂದಲೂ ಸರ್ವತೋಮುಖವಾಗಿ ಸೇವೆ ಸಲ್ಲಿಸಿ ಇಂದು ನಿವೃತ್ತರಾಗಿರುವ ಶಸ್ತ್ರವೈದ್ಯ ಪ್ರವೀಣ ಶ್ರೀ ಡಾ। ಯಸ್. ಸುಬ್ಬರಾಯರವರ, ಛಾಯಾಚಿತ್ರ ಅನಾವರಣವಾದ ವೇಳೆ, ಆವರ. ಅದೇ ಸಂಘಕ್ಕೆ ಉದಾರವಾಗಿ ದಾನಮಾಡಿರುವುದನ್ನು (ಒಂದು ಸಾವಿರ ರೂಪಾಯಿ) ಸಭಿಕರಿಗೆ ತಿಳಿಸಲಾಯಿತು. ಡಾ ಪಿ ಕೃಷ್ಣರಾಯರು ವಂದನೆಗಳನ್ನು ಅರ್ಪಿಸಲು ಸಮ್ಮೇಳನವು ಭರಖಾಸ್ತಾಯಿತು.

ಪ್ರತಿಬಂಧಕಾಜ್ಞೆ ಹಿಂತೆಗೆಯಲ್ಪಟ್ಟಿತು:—ಮೈಸೂರು ಸರಕಾರವು 'ಪ್ರಜಾಮತ'ದಮೇಲೆ ಹೇಳಿ ಹಾಕಿದ್ದ ಮುಟ್ಟುಗೋಲನ್ನು ಹಿಂತೆಗೆದಿರುವುದ.

ಸತ್ಯಾಗ್ರಹ—ನವಯುಗದಲ್ಲಿ ಹಿಂದೆಯೇ ತಿಳಿಸಲಾಗಿದ್ದಂತೆ ರಾಜಧಾನಿಯ ದೊಡ್ಡ ಪೇಟೆಯಲ್ಲಿ ಕಟ್ಟಿರುವ ಪೋಲೀಸ್ ಠಾಣೆಗೆ ಹೆವಿ ಲ್ಯನ್ ಬಿಲ್ಡಿಂಗ್ಸ್ ಎಂದು ಹೆಸರಿಟ್ಟಿದ್ದರಿಂದ ಇದನ್ನು ಆಕ್ಷೇಪಿಸಲು ಕಾಂಗ್ರೆಸ್ ಪಕ್ಷದವರು ಸತ್ಯಾಗ್ರಹವನ್ನು ಪ್ರಾರಂಭಮಾಡಿ ಈ ತಿಂಗಳು ೧೬ನೇ ತಾ. ಬುಧವಾರಕ್ಕೆ ಒಂದು ತಿಂಗಳಾಗುತ್ತದೆ. ಆ ದಿನ ಸತ್ಯಾಗ್ರಹ ದಿನವನ್ನಾಚರಿಸಬೇಕಾಗಿ ವ್ಯವಸ್ಥೆಯಾಗಿದೆ.

ಈ ವಾರದಲ್ಲಿ ಸತ್ಯಾಗ್ರಹವು ಯಶಸ್ವಿಯಾಗಿಯೇ ನಡೆಯಿತೆಂದು ಹೇಳಬಹುದು. ಆದರೆ ೮ನೇ ಬುಧವಾರದ ದಿನ ಮಧ್ಯಾಹ್ನ ಸತ್ಯಾಗ್ರಹವನ್ನಾಚರಿಸ ಸಿದ್ಧ ಶ್ರೀ. ಗೋವಿಂದಪ್ಪನೆಂಬವರು ಫಲಾಹಾರ ಮಾಡಿ ಬರುತ್ತೇನೆಂದು ಹೇಳಿ ಹೊರಟುಹೋದವರು ಪುನಃ ಬರಲೇ ಇಲ್ಲ.

೯ನೇ ಗುರುವಾರ ಸತ್ಯಾಗ್ರಹಿಗಳು ಆ ಕಟ್ಟಡದ ಮುಂದೆ ಭಜನೆ ನಡೆಸಿ, ತಾಳವನ್ನು ಹಾಕುತ್ತಿದ್ದರು. ಪೋಲಿಸಿನವರು ಗಲಾಟೆ ಆಗುತ್ತದೆಂದು ಆ ತಾಳವನ್ನು ಕಿತ್ತುಕೊಂಡದ್ದರಿಂದ, ಕೈಚಪ್ಪಾಳೆ ತಟ್ಟುತ್ತ ರಘುಪತಿ ರಾಘವ ಸ್ತೋತ್ರ ಹಾಡುತ್ತ ಸತ್ಯಾಗ್ರಹ ಆಚರಿಸಿದರು

೧೧ನೇ ಶುಕ್ರವಾರ ದಿನ ಸತ್ಯಾಗ್ರಹವು ಬಹಳ ಸ್ವಾರಸ್ಯವಾಗಿತ್ತು. ಆ ದಿನ ಸತ್ಯಾಗ್ರಹ ಆಚರಿಸಿದವರು ಶ್ರೀವತಿಗಳಾದ ಯಸ್ ನಾರ್ಣತಮ್ಮನವರೂ ವಿಶಾಲಾಕ್ಷಮ್ಮನವರೂ (ಸ್ತ್ರೀಯರು.)

ಸತ್ಯಾಗ್ರಹ ಮಾಡತಕ್ಕವರು ಪ್ರತಿನಿತ್ಯವೂ ಬೆಳಿಗ್ಗೆ ಸಬ್ಬರಾಯನ ಕೆರೆಯಿಂದ ಹೊರಟು ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ಹೋಗಿ ಕಟ್ಟಡದ ಮುಂಭಾಗಕ್ಕೆ ಬಂದು ಸತ್ಯಾಗ್ರಹ ಆಚರಿಸುತ್ತಾರೆ ಒಬ್ಬನು ಒಂದು ಕೈಯಲ್ಲಿ ಹಲಗೆಯನ್ನೂ (ಹೆವಿ ಲ್ಯನ್ ಬಿಲ್ಡಿಂಗ್ ಎನ್ನುವ ಹೆಸರನ್ನ ಅಳಿಸುವ ಸಲುವಾಗಿ) ಮತ್ತೊಬ್ಬರು ಕಾಂಗ್ರೆಸ್ ತ್ರಿವರ್ಣ ಬಾವುಟವನ್ನೂ ಹಿಡಿಯುತ್ತಾರೆ.

ಸಂಜೆ ವೇಳೆಯಲ್ಲಿ ಬಹಿರಂಗ ಸಭೆ ನಡೆಸುತ್ತಾರೆ.

ನಿನ್ನೆಯ ಸತ್ಯಾಗ್ರಹವು ಚೆನ್ನಾಗಿಯೇ ನಡೆಯಿತು.

ಹಿಂದೆ ಸತ್ಯಾಗ್ರಹ ಆಚರಿಸಿದ ಶ್ರೀ ಜವರೇ ಗೌಡರ ಮೇಲೆ ಕ್ರಿ ಪ್ರೊ. ಸೆ ೧೦೮ರ ಪ್ರಕಾರ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ನಡೆದ ತನಿಖೆ ಬಾಪಾಸನು ಮೊಕದ್ದಮೆ ನಡೆಯುತ್ತಿದೆ. ಶ್ರೀ ಎಂ. ಶಾಮರಾ… ಕೊಕದ ಮೆ ನಡೆದ ತಿಕೆ ಆಯಿತ

ಪತ್ರವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಅವಶ್ಯ ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆದಲ್ಪಟ್ಟ ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ ನ]

ಟೌನ್ ಕಾಂಗ್ರೆಸ್ ಕಮಿಟಿ ಉಡುಪಿ—ಈ ಶಿರೋನಾಮೆಯಿಂದ ತಾರೀಕು ೪—೩—'೧೯೩೮ರ ನವಯುಗ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ. ಕೆ. ವಿಠಲ ಶೆಣೈಯವರ ಪತ್ರವ್ಯವಹಾರವನ್ನು ನೋಡಿ ಸಖೇದಾಶ್ಚರ್ಯವಾಗುವುದು.

ಸಭೆ ಜರಗಲಿದ್ದ ಸ್ಥಳಕ್ಕೆ ನಿಶ್ಚಿತ ಸಮಯಕ್ಕೆ ಮುಂಚಿತವಾಗಿ ನಾನು ಹೋಗಿರುತ್ತೇನೆ "ಸುಮಾರು ಘಂಟೆ ೫ ೩೦ಕ್ಕೆ ಶ್ರೀ ರಾಮಚಂದ್ರನವರು ಬಂದರು" ಎಂಬ ಆಪಾದನೆಯಲ್ಲಿ ಸತ್ಯಾಂಶವಿರುವುದಿಲ್ಲ ನಾನು ಕೂಡಾ ಹಾಜರಿದ್ದು ಸಭೆಯು ೫—೩೦ಘಂಟೆಗೆ ಕೂಡದೇ ಪ್ರಾರಂಭವಾಗಿ ಸುಮಾರು ಘಂಟೆ ೬ರ ಒಳಗಾಗಿಯೇ ಮುಕ್ತಾಯವಾಗಿರುತ್ತದೆ. ಹೀಗಿರುವಾಗ 'ನಾವು ೫½ ಘಂಟೆವರೆಗೆ ಕಾದೆವು. ಇತರರು ಯಾರೂ ಬಂದಂತೆ ಕಾಣಲಿಲ್ಲ ಅನಂತರ ನಾವಿಬ್ಬರೂ ಹೋಗಿ ಬಿಟ್ಟೆವು" ಎಂಬುದು ಅಸಂಬದ್ಧವಾಗಿದೆ.

ಶ್ರೀ. ಶೇಟ್ಟಿಗಾರರವರು ಆ ಸ್ಥಳಕ್ಕೆ ಆ ದಿನ ಬಂದುದು ನಿಜ, ಅವರು ಬರುವಾಗ ನಾನಿದ್ದೆ. ಆಗ ಘಂಟೆ ೫½ ಸಹ ಆಗಿರಲಿಲ್ಲ. ಅವರು ಬಹಳ ಹೊತ್ತು ಕಾದದ್ದು ಇಲ್ಲ ಬದಲಿಗೆ ಹೆಚ್ಚಿನ ಸದಸ್ಯರು ಬರಲಿಕ್ಕಿಲ್ಲವಾದುದರಿಂದ ಸಭೆ ಜರಗುವ ಸಂಭವ ಕಾಣುವುದಿಲ್ಲವೆಂದು ಹೇಳಿಹೋಗಿರುತ್ತಾರೆ. ಶ್ರೀಯುತರು ಅವರ ಕೆಲಸಾರ್ಥವಾಗಿ ಹೋಗಿರಬಹುದು ಆದರೆ ಬದಲಾಗಿ "೫—೪೫ ಘಂಟೆ ವರೆಗೆ ಕಾದೆವು. ಯಾರೂ ಬಂದಂತೆ ಕಾಣಲಿಲ್ಲ" ಎಂದು ಬರೆಯುವ ಉದ್ದೇಶವೇನೋ ತಿಳಿಯುವುದಿಲ್ಲ. ಅದರೊಂದಿಗೆ ನನ್ನನ್ನು ಎಳೆದು ಬೆಚ್ಚಿಸಿದುದು ಶೋಚನೀಯ, ಕಮಿಟಿಯ ಸದಸ್ಯರ ಮೇಲೆ ಈ ತರದ ಅಲ್ಲಸಲ್ಲದ ಅಪವಾದಗಳನ್ನು ಹೊರಿಸುವುದು ಅತ್ಯಂತ ವಿಷಾದಕರ.

U. Ramachandra.
Dr. Board Member &
Udipi Municipal Councillor.

(ಸ್ಥಲ ಸಂಕೋಚದಿಂದ ಈ ವಾರದಲ್ಲಿ ಆಚರಿಸಿದ ಸತ್ಯಾಗ್ರಹಿಗಳ ಹೆಸರನ್ನು ಇಲ್ಲಿ ಕೊಡಲು ಸಾಧ್ಯವಾಗಲಿಲ್ಲ)

ಪತ್ರಿಕೋದ್ಯೋಗಿ ಶಿಕ್ಷಣ ಕೊಡಿ—ಮೈಸೂರು ವಿಶ್ವವಿದ್ಯಾನಿಲಯದ ಸೆನೆಟಿನ ಸದಸ್ಯರಾದ, ಶ್ರೀ ಬ್ರಹ್ಮಚಾರಿ ರಾಮಚಂದ್ರರು ಇದೇ ಮಾ. ಚೆ ೩೧ ತಾ. ಶುಕ್ರವಾರ, ರಾಜಧಾನಿಯ ವಿಶ್ವವಿದ್ಯಾನಿಲಯದ ಸಂಘದಲ್ಲಿ ನಡೆಯಲಿರುವ ಸೆನೆಟಿನ ಸಭೆಗೆ ಕಳುಹಿಸಿರುವ ನಿರ್ಣಯಗಳ ಪೈಕಿ ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿರುವ ವಿದ್ಯಾರ್ಥಿಗಳಲ್ಲಿ ಪತ್ರಿಕೋದ್ಯೋಗಿ ಶಿಕ್ಷಣಕೊಡಿ ಎನ್ನುವುದು ಒಂದು. ಇದರ ವಿಚಾರವಾಗಿ ಮೇಲ್ಕಂಡ ಸೆನೇಟಿನ ಸಭೆಯು ಚರ್ಚಿಸಲಾಗುತ್ತೆ ಇದರಲ್ಲಿ ಮುಂದಿನ ಸಾಲಿನ ಆಯವ್ಯಯಗಳನ್ನ ಪರಿಶೀಲಿಸತಕ್ಕದಲ್ಲದೆ ಅನೇಕರಿಂದಲೂ ಅನೇಕ ಬಗೆಗಿನ ಸದಸ್ಯರುಗಳಿಂದ ಬಂದಿರುವ ಇತರ ನಿರ್ಣಯಗಳನ್ನು ಚರ್ಚಿಸಲಾಗುತ್ತೆ.

ಶ್ರೀ. ಯಸ್ ಪಿ ರಾಜಗೋಪಾಲಾಚಾರಿಯವರು ಮೈಸೂರಿನಲ್ಲಿ ಪ್ರಥಮ ಸಚಿವರಾಗಿ ನಿವೃತ್ತರಾಗಿರುವ ಇವರನ್ನು ಭೂಪಾಲ ಸರಕಾರದವರು ರೆವಿನ್ಯೂ ಮಂತ್ರಿಗಳನ್ನಾಗಿ ನೇಮಿಸಿರುತ್ತಾರೆ ಎಂದು ವರ್ತಮಾನಬಂದಿದೆ

(ಸ್ಥಳಾಭಾವದಿಂದ ಮಿಕ್ಕ ಸುದ್ದಿಗಳನ್ನು ಕೊಡಲಾಗಿಲ್ಲ ಸಂ. ನ

ಕುಡಿತ — DRINKING

ಲೇಖಕರು:—ಶ್ರೀ ಬಿ. ವಾಸುದೇವ ಶೆಟ್ಟಿ, ಬಿ.ಎ., ಎಲ್.ಟಿ. ಉಡುಪಿ.

Drinking cannot be too strongly condemned. But among a certain section of people drinking is considered to be a fashion; non-drinkers have no status there. The question is-is it worth while to have such status? Is not that status misleading If it is in the power of Bacchus to give status and title, I don't think it will redound to the credit of wise people to accept it. *Bacchus has got his own logic which is subtle, mean and treacherous. I am not a drunkard but only a drinker'* is the proud boast of some. It does not take much time for a drinker to become a drunkard., and when he becomes one woe to him and his. He is morally debased, financially broken, physically wrecked and intellectually degenerated. What a paradox it is to see some of the ablest of men selling themselves to this devil of a drink! Man is the highest animal a rational animal. He requires sobriety for all his actions. There is a mistaken notion that drink is an appetizer a stimulant; it may be in some strange circumstances. *But to be a slave of it day in and day-out under this plea lowers humanity and degrades the finer side of man* He is a strong man who by word and example discourages drinking in any society. In the absence of drink, the tone of society will be much more elevated-its morals will be much stronger. A home loses its soul when the bottle invades it. For, pleasure, fun or frolic, no one should introduce liquor into the domestic atmosphere where the future race is growing. It will blast the morals and drive divinity away from it. No respectable woman will introduce Bacchus to a company. Gentle reader, there is no lacuna in argument Sophistry will make a good case for drinking. *Logic will blush at it. Truth will abhor it.* Argument is two sided. *Truth is only one sided.* Drunkards can be confuted but not convinced, because they don't want to be convinced. When a man or woman takes to drink he or she consciously or unconsciously drinks the blood of his or her children When you drink, you impoverish the heritage of posterity-The children born of you will be weaklings in all aspect. From every married man and woman a race springs which will suffer much for the sin of its parents So what a disservice it is to self and man-kind when one drinks! Does he or she realize it when Bacchus tempts?

೧

ತೆಂಕು ಗ್ರಾಮದಲ್ಲಿ ಒಮ್ಮಿಂದೊಮ್ಮೆ ದೊಡ್ಡ ಬೊಬ್ಬೆ ಎದ್ದಿತು. 'ಕಾಡ್ಯ ಬಿದ್ದ ಮರದಿಂದ ಬಿದ್ದ!' ಎಂದು, ಊಳುತ್ತಿದ್ದ ನಕ್ರ ಕೋಣಗಳನ್ನು ನಿಲ್ಲಿಸದೆ ಓಡಿದ; ನೀರು ಹೊಗೆಯುತ್ತಿದ್ದ ತ್ಯಾಂಪ ಮುಳುಗಿಸಿದ ಮರಿಗೆಯನ್ನು ಅಲ್ಲೇ ಬಿಟ್ಟೋಡಿದ. ಗದ್ದೆಯ ಅಂಚಿನಲ್ಲಿ ಹುಲ್ಲು ಕೆರೆಯುತ್ತಿದ್ದ ಸುಬ್ಬಿ ಕೈಯಲ್ಲಿದ್ದ ಮುಷ್ಟಿ ಹುಲ್ಲನ್ನು ಹಿಡಿದುಕೊಂಡೇ ಹಾರಿದಳು. ಗ್ರಾಮದ ನಾಲ್ಕು ಕಡೆಯಿಂದಲೂ ಜನರು ಓಡಿದರು. ಧಾನ್ಯದ ಗದ್ದೆಗೆ ಇಳಿದು, ಬಿತ್ತಿದ ಗದ್ದೆಯನ್ನು ತುಳಿದು, ಕಬ್ಬಿನ ಏರಿಯನ್ನು ಹಾರಿದು ನೇರಾಗಿ ಕಾಡ್ಯನ ಮನೆ ತೋಟದ ಕಡೆಗೆ ಧಾವಿಸುತ್ತಿದ್ದರು ಗ್ರಾಮದ ಜನರೆಲ್ಲ. ಮುದಿ ಅಚ್ಚಕ್ಕ ಶೆಡ್ತಿಯೂ ಊರುಗೋಲು ಊರಿಗೊಂಡು ತನ್ನ ಅಂಗಳದ ತುದಿಗೆ ಬಂದು ಓಡುವವರನ್ನು ಕರೆದು 'ಯಾರಪ್ಪ ಬಿದ್ದದ್ದು? ಕಾಡ್ಯನೆ? ಹೋಗಯಪ್ಪ ಬೇಗ, ಗಡಿ ಮದ್ದು ಹಾಕಿ' ಎಂದು ಕೂಡಿದಷ್ಟು ಕೂಗಿ ಹೇಳಿದಳು. 'ಅಯ್ಯೋ! ಕಾಡ್ಯಾ, ಅಮಲು ತಕ್ಕೊಂಡು ಮರಕ್ಕೇರಬೇಡಾ ಎಂದು ಹೇಳಲಿಲ್ಲವೇ ನಾನು ಎಷ್ಟೋ ಸಲ? ಒಂದೊಮ್ಮೆ ಬಿದ್ದಾ ಬುದ್ಧಿ ಬಾರದೆ ಹೋಯಿತೆ ನಿನಗೆ! ಎಂದು ನಿಟ್ಟುಸಿರು ಬಿಡುತ್ತಾ ಏನು ಸುದ್ದಿ ಬರುವುದೆಂದು ಅಲ್ಲೇ ಅಂಗಳದ ತುದಿಯಲ್ಲಿ ಕಾದು ಕುಳಿತಳು; ಕುಳಿತು ಕಾದಳು. ಸ್ವಲ್ಪ ಸಮಯದ ನಂತರ ಜನರೆಲ್ಲ ಏನೇನೋ ಮಾತಾಡುತ್ತ ಅವರವರ ಕೆಲಸದ ಕಡೆಗೆ ಹಿಂದೆ ಹೋಗುತ್ತಿದ್ದರು. ಅಚ್ಚಕ್ಕ ಶೆಡ್ತಿಯು ಕಾಡ್ಯ ಹೇಗಿದ್ದಾನೆಂದು ತಿಳಿಯಲು ವ್ಯಯೆಲ್ಲ ಕಾತರಗೊಂಡಿದ್ದಳು. ಅಷ್ಟರಲ್ಲಿ ಗದ್ದೆಯ ಅಂಚಿಗೆ ತಿರುಗಿ ಬಂದಿದ್ದ ಸುಬ್ಬಿಯ ಸ್ವರ ಕೇಳಿತು. 'ಅದ್ಯಾರು? ಸುಬ್ಬಿಯಾ? ಸ್ವಲ್ಪ ಇತ್ತ ಬರಲಾರೆಯಾ? ಕಾಡ್ಯನಿಗೆ ಪೆಟ್ಟು ಬಲವಾಗಿದೆಯಾ?' ಎಂದಳು ಮುದುಕಿ. ಸುಬ್ಬಿಗೂ ಅದೇ ಬೇಕಾಗಿತ್ತು. ಸುದ್ದಿಯನ್ನು ಹೊರಹಾಕದೆ ಸುಬ್ಬಿಯ ಹೊಟ್ಟೆ ಉಬ್ಬರಿಸಿತ್ತು. ಅವಳು ಗದ್ದೆಯಂಚಿನಿಂದಲೇ ಕೂಗುತ್ತ ಬಂದಳು. 'ಪಟ್ಟೊಂದ್ರೆ, ಅಯ್ಯೋ! ಏನು ಹೇಳಲಿ! ಬಿದ್ದ ರಭಸಕ್ಕೆ ಬೊಂಡಾ ಸಿಡಿದಂತೆ ತಲೆ ಬುರುಡೆ ಒಡೆದೂ ಅಯ್ಯೋ! ರಾಮಾರಕ್ತ ರಾಮಾರಕ್ತ! ಯಾರು ನೋಡಿಯಾರು ಅದನ್ನ! ಭೀಮ ದುಶ್ಶಾಸನ ಕರುಳು ಎಳೆದು ಹಾಕಿದ ಹಾಗೆ ಎಲ್ಲ ಹೊರಗೆ ಬಂದದೆ! ಬಿದ್ದಾಗಲೇ ಪ್ರಾಣ ಹಾರಿಹೋಗಿತ್ತಂತೆ! ...

ಮುದುಕಿ—ಅಯ್ಯೋ, ಸುಬ್ಬೀ, ಜನಗಳಿಗ್ಯಾಕೆ ಬುದ್ಧೀ ಬರೋದಿಲ್ಲ! ಹೆಂಡಾ ಕುಡ್ದು ಕಡ ಬ್ಯಾಡೀಂದ್ರೆ ಕೇಳೋದಿಲ್ಲವಲ್ಲಾ!

೩

[ಚೇಂಕ್ರನ ಮನೆಯಲ್ಲಿ ಮಧ್ಯಾಂಜಿಯ ಕಾಲ-ಅವನ ಹೆಂಡ್ತಿ ಮತ್ತು ಮಗು]

ಮಗು—ಅಮ್ಮಾ, ಹಸಿವಾಗುತ್ತೆ, ಬೆಳಿಗ್ಗೆ ಒಂದಿಷ್ಟು ತಿಳಿ ಮಾತ್ರ ಕುಡಿದದ್ದಲ್ಲವೇ? ಹಸಿವಾಗುತ್ತೆ, ಬೇಗ ಅನ್ನ ಮಾಡಮ್ಮಾ.

ತಾಯಿ ದುಗ್ಗಿ—ತಡಿಯಪ್ಪಾ, ಅಪ್ಪ ಈಗ ಬಂದಾರು, ಅಕ್ಕಿ ತರುತ್ತಾರೆ. ಅನ್ನ ಮಾಡಿ ಹಾಕುತ್ತೇನೆ. ಅಳಬೇಡ ಮಾನು ತರುತ್ತಾರೆ. ಪದಾರ್ಥ ಮಾಡಿಹಾಕುತ್ತೇನೆ. ಅಳಬೇಡ.

ಮಗು—ಅಪ್ಪನ ಹತ್ತರ ನಾನು ಒಂದು ಅಂಗಿ ಮಾಡಿ ತರಲಿಕ್ಕೆ ಹೇಳಿದ್ದೇನೆ.

ದುಗ್ಗಿ—ತಂದಾರು ಮಗಾ—

[ಚೇಂಕ್ರನು ಅಂದು ದುಡಿದ ನಾಲ್ಕಾಣೆಯಿಂದ ಒಂದೂವರೆ ಆಣೆ ಮಾತ್ರ ಶಳ್ಳಂಗಡಿಗೆ ಹಾಕಿ ಉಳಿದುದರಿಂದ ಅಕ್ಕಿ ತೆಗೆದುಕೊಂಡು ಹೋಗುವೆನೆಂದು ಗಡಂಗು ಹೊಕ್ಕವನು ಸ್ವಲ್ಪದರಲ್ಲಿ ತೃಪ್ತನಾಗದೆ ನಾಲ್ಕಾಣೆಯನ್ನು ಕಳ್ಳಿಗೆ ಕಾಣಿಕೆಯಿಕ್ಕಿ ಹೊರಟು ಮಾಲುತ್ತಾ ಮಾಲುತ್ತಾ ಮನೆಗೆ ಬಂದು ಸೇರಲು]

ದುಗ್ಗಿ—ಅಕ್ಕಿ-ತಂದಿರಾ?

ಚೇಂಕ್ರ—ಅಂ, ನಿನ್ನ ತಲೆ-ಅಕ್ಕಿ ಏಕೆ?

ದುಗ್ಗಿ—ಅಯ್ಯೋ, ಮಗುವು ಬೆಳಗ್ಗಿನಿಂದಲೂ ಅನ್ನದ ಕಾಳು ಕಾಣಲಿಲ್ಲ—ಕೆಲಸಕ್ಕೆ ಹೋಗುವ ನಿಮ್ಮ ಹೊಟ್ಟೆ ಗಟ್ಟಿಯಾಗಲೆಂದು ಇದ್ದುದೆಲ್ಲ ನಿಮಗೆ ಹಾಕಿ ಅದೂ, ನಾನೂ, ಒಂದಿಷ್ಟು ತಿಳಿನೀರು ಕುಡಿದು ಕಾದು ಕಾದು ಬಿದ್ದು ಈಗ...... ಅಯ್ಯೋ .....ಈಗ.........

ಚೇಂಕ್ರ—ಈಗ...ಈಗ...ಬಿದ್ದುಕೋ-ಸುಮ್ಮನೆ ರಾಗಗೀಗ ತೆಗದೀಯಂದ್ರೆ ನಿನ್ನ ಪ್ರಾಣಾ ತೆಗೆದೇನು. ನನಗೆ ನಿದ್ದೆ ಬರುತ್ತೆ. ಸದ್ದು ಮಾಡದೆ ಸುಮ್ಮಗೆ ಬಿದ್ದುಕೋ!

೪

[ಹೆಗ್ಗಡೇರ ಒಕ್ಕಲು ಪಿಜಿನ ಗೇಣಿ ಕೊಡಲಿಕ್ಕೆ ಹೋಗುತ್ತಾ ದಾರಿಯಲ್ಲಿ]

ಪಿಜಿನ—ಇದೇನು ಕಳ್ಳು ಅಂಗಡಿಯ ಹತ್ತರ ಬಹಳ ನಗಾಟ, ಕುಶಾಲು, ಗೌಜಿ! ಯಾರಿದ್ದಾರೆ ನೋಡೋಣ—(ಎಂದು ಅದರ ಬಾಗಿಲ ಬಳಿಗೆ ಹೋಗಿ) ಬಾಬ, ತುಕ್ರ, ಬೊಗ್ರ, ದೋಗ್ರ! ದೊಡ್ಡ ಕೂಟ ಕೂಡಿ ಬಿಟ್ಟಿದ್ದೀರಲ್ಲಾ ಇಲ್ಲಿ!

ಬೊಗ್ರ—ಪಿಜಿನಾ, ಬಾ—ಸ್ವಲ್ಪ ತೆಗೆದುಕೋ

ದೋಗ್ರ—ಬೊಗ್ರಾ, ಇದೆಲ್ಲಿ ಸಾಕು? ಇನ್ನೊಂದು ನಾಲ್ಕು ಬಾಟ್ಲಿ ತರಿಸು—

[ಎಲ್ಲರೂ ಕೂಡಿ ಕುಡಿದು ಅಮಲೇರಿದಂತೆಲ್ಲ ರೌಸ್ಸಿನ ಮಾತಾಡುವರು]

ತುಕ್ರ—ಹೌದಾ, ಪಿಜಿನ, ಮೊನ್ನೆ ನಮ್ಮ ಮನೆಯಿಂದ ಕೊಂಡುಹೋದ ಮೋರಿಯ ಬಾಕಿ ರೂಪಾಯಿ ಯಾಕೆ ಕೊಡಲಿಲ್ಲ?

ಪಿಜಿನ—ಹೋಗೋ! ರೂಪಾಯಿ ಮೊನ್ನೆಯೇ ಕೊಟ್ಟಿಲ್ಲವಾ? ಕಳ್ಳು ಕುಡ್ದು ಸುಳ್ಳಾಡ್ತಿಯಾ?

ತುಕ್ರ—ಸುಳ್ಳು ನಿನ್ನದು! ಒಳ್ಳೆ ಮಾತಿನಲ್ಲಿ ಇಟ್ಟುಹೋಗು. ಇಲ್ಲವಾದ್ರೆ ಹೆಣ ಉರುಳಿಸಿಯೇನು! ಹ್ಞಾಂ!

ಪಿಜಿನ—ಕೊಡುವುದಿಲ್ಲ ನಡಿ—ಎಲ್ಲಾ ಕೊಟ್ಟಾಗಿದೆ! ಏನು, ನನ್ನ ಮೇಲೆ ಕೈಮಾಡಲಿಕ್ಕೆ ಎದ್ದಿಯಾ? ಮೂರು ಗೇಣಿ ಪೂರಾ ಇಲ್ಲದಂಥ ನೀನು! ಎನು ಧಿಮಾಕು!

[ಪಿಜಿನ ಮತ್ತು ತುಕ್ರ ಉರುಳಾಡುವರು. ದೋಗ್ರನೂ ಬೊಗ್ರನೂ ಬಿಡಿಸಲಿಕ್ಕೆ ಹೋಗಿ ಒಂದೊಂದು ಪೆಟ್ಟು ತಿನ್ನುವರು. ಪಿಜಿನನ ತಲೆಗೆ ಸುತ್ತಿದ ಎಲವಸ್ತ್ರ ಕೆಳಗೆ ಬೀಳುವುದು. ಅದರಲ್ಲಿದ್ದ ಗೇಣಿ ರೂಪಾಯಿ ಚೆಲ್ಲಿಹೋಗಿ ಸಕ್ಕವರ ಪಾಲಾಗುವುದು—ಹೆಗ್ಗಡ್ತಿಗೆ ಆ ವರ್ಷದ ಗೇಣಿ ನಾಮ.]

೫

[ಪದ್ದು—ಪಟ್ಟುದಾರ್ತಿ—ಗಂಡನ ಮನೆಯಿಂದ ಹಿಂದಾ ಬಂದವಳು. ಕೆಲಸದ ಕೂಸನ್ನು ಕರೆದು]

ಪದ್ದು—ಕೂಸೋ, ಓ ಕೂಸೂ, ಎಲ್ಲಿ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED

"ಶೆಂಕ್ಸ"



SHANKS
(ಇಂಗ್ಲಿಷ್ ಮೇಕ್)
ಕ್ರೂಡ್ ಆಯಿಲ್ ಎಂಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶೆಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬೈಂಡ ಪ್ಲೆಂಟು), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಯಿರಿ—

ಪೆರಮೌಂಟ್ ಇಂಜಿನೀಯರಿಂಗ್ ಕೋರ್ಪರೇಶನ್
೨೨, ಎಪೋಲೋ ಸ್ಟ್ರೀಟ್, ಫೋರ್ಟ್.... ಮುಂಬಯಿ.

Paramount Engineering Corporation,
22 Appolo Street, Fort, **BOMBAY.**

The Tropical Insurance

CO., LTD., DELHI.

Chairman: **Sjt. SUBASH CHANDRA BOSE.**
(Congress President)

Founder Directors:
PANDIT MOTILAL NEHRU
DR. M. A ANSARI
SJT. S. SRINIVASA IYENGAR
HAKIM AJMAL KHAN

This leading National Company founded and managed by five Congress Presidents invites applications for representation on salary and commission.

APPLY TO:

K. S. RAMAMURTHI, M.A.,
Branch Secretary,
160, Mount Road,
Madras.

OR

M. SUNDER RAM SHETTY
Branch Manager,
Hampankatta,
Mangalore.

ಸತ್ತಿತು ಆ ಹುಡುಗಿ! ಇಕ್ಕೊ–ನೆಂಟರು ಬಂದಾರೆ–ಒಂದು ಏಳು ಬಾಟ್ಲಿ ಕಳ್ಳು–ಎರಡು ಬಾಟ್ಲಿ ಶರಾಬು ತಾರೀ–ಆ ತೌಡ ಎಲ್ಲಿ ಹೋದ–ದೊಡ್ಡ ದಗೆಕೋರ–ಮೊನ್ನೆ ಬಂದು ನಮ್ಮ ಶೀಷನ ಒಳ್ಳೇ ಅಂಗಿ ತಕ್ಕೊಂಡು ಹೋಗಿದ್ದ–ಒಂದು ರೂಪಾಯ್ ಸಹಾ ಕೊಟ್ಟಿದ್ದೆ. ಗೇರು ಹಣ್ಣಿನ ಶರಾಬು, ತಾಳೆಯ ಶರಾಬು ತರುತ್ತೇನೆಂತ ಹೇಳಿ 'ಟೋಕರ್'ಕೊಟ್ಟನಲ್ಲ! ದೊಡ್ಡ ಕಳ್ಳ, ಇನ್ನು ಮಾತ್ರ ಅಂವ ಇಲ್ಲಿಗೆ ಕಾಲಿಡಲಿ! ಅವನಿಗೆ ಕೊಡುವ ಉಡುಗರೆ ಬೇರೆ ಉಂಟು! ಹೌದೇ ನೊಕ್ಕೊ, ನೊಕ್ಕೊ, ಕೂಸು ಹೋದಳಾ?

ನೊಕ್ಕು—ಹೊರಟ್ಲು ಮಾತ್ರ–

ಪದ್ದು—ನೋಡು, ಅಲ್ಲಿ ಮೇಲೆ ಆ ಬಾಟ್ಲಿ ಇತ್ತ್–ಮತ್ತು ಆ ಗೆರಟೆ ಇಲ್ಲಿ ತಾ–ಮತ್ತು ಅವಳಿಗೆ–ಕೂಸುಗೆ ಬೇಗ ಬರಲಿಕ್ಕೆ ಹೇಳು–

ನೊಕ್ಕು—ಕೂಸು, ನೀನು ಇನ್ನೂ ಹೋಗಲಿಲ್ಲವಾ! ಅವರು ಹೋದ್ಲಾ, ಹೋದ್ಲಾ ಎಂದು ಕೇಳುತ್ರ್–ನೀನು ಏನು ಮಾಡುವುದೇ?

ಕೂಸು—ರಾತ್ರಿಯಂತಿಲ್ಲ–ಹಗಲಂತ್ಲೂ ಇಲ್ಲ–ನನಗೆ ಇದೇ ಕೆಲಸ–ಆ ಹೆಂಗಸು ಎಂಥಾದ್ದೆ–ಇಡೀ ದಿವಸ ಕುಡಿಯುತ್ತಾ ಇರುವುದೆಯಾ? ಏನಾ, ಎಂಥಾ!–ಒಂದು ದಿವಸ ಸಮಾ ನೀರು ಹಾಕಿ ತರ್ತ್ತೇನೆ. ಕುಡಿಯುವುದು ಎಲ್ಲಿಯಾದರೂ ಬೀಳುವುದು–ಮೊನ್ನೆ ಬೆಂಕಿಯಲ್ಲಿ ಸುಟ್ಟುಹೋಗುತ್ತಿತ್ತು.

ನೊಕ್ಕು—ಹೌದೇ, ಕುಡಿಯಲಿ–ದೊಡ್ಡವರ ಹೆಂಗಸರಿಗೆ ಒಬ್ಬೊಬ್ಬರಿಗೆ ಈ ಬುದ್ಧಿಯಿಲ್ಲದಿದ್ದರೆ ನಾವು ದಿವಸತೆಗೆಯುದು ಹೇಗೆ?

ಕೂಸು—ಆಗಲಿ, ನಂಗೇನು?–7ಬಾಟ್ಲಿ ಕಳ್ಳು–2ಬಾಟ್ಲಿ ಶರಾಬು–ಇನ್ನು ಹೆಚ್ಚು ಸಮಯ ಹೀಗೆ ಹೋಗಲಿಕ್ಕಿಲ್ಲ–ಒಂದಾ ಮನೆ ಹೋತ್ತ್–ಇಲ್ಲವಾದರೆ ಹೆಂಗಸ್ ಹೋತ್.

೫

[ರಂಗರಾಯರು ಮತ್ತು ನಾರಾಯಣರಾಯರು ಮಿತ್ರರು–ಬಾಟ್ಲಿ ಮೇಲೆ ಬಹು ಪ್ರೀತಿ–ಪೆಗ್ಗ್ ತಕ್ಕೊಂಡ ಮೇಲೆ ಇಸ್ಪೀಟ್ ಕ್ಲಬ್ಬಿನಲ್ಲಿ ದೊಡ್ಡ ದೊಡ್ಡ ಪೆಟ್ಟ್ ಕಡಿಯುವರು.]

ನಾರಾಯಣರಾವ್—Come on, mister Ranga Rao. ಒಂದು ಪೆಗ್ಗ್ ತೆಕ್ಕೊಳ್ಳುವ, ಪೆಗ್ಗ್ ತೆಕ್ಕೊಳ್ಳದವ ಒಬ್ಬ ಮನುಷ್ಯನೇ? ಸ್ವಾಮಿ, ಸಾಹುಕಾರರೇ–ಬ್ರಾಂಡಿ ಸೋಡ ಎರಡು ಬಾಟ್ಲಿ ಕೊಡಿ.

ರಂಗರಾವ್—ನಾರಾಯಣ ರಾಯರೇ, ನಾನು ಒಂದು ಹೊಸ ಉಪಾಯ ಕಂಡು ಹಿಡಿದಿದ್ದೇನೆ. ನಮಗೆ ಇಸ್ಪೀಟ್ ಆಡುವ ಸಮಯ ನಡುನಡುವಿನಲ್ಲಿ ಒಂದೊಂದು ಪೆಗ್ಗ್ ಇದ್ದರೆ ಒಳ್ಳೆದಾಗುತ್ತದೆ. ಆದಕ್ಕಾಗಿ ಸೋಡದ ಬಾಟ್ಲಿಯಲ್ಲಿ ಸರಾಯಿ ಹಾಕಿ ತೆಗೆದುಕೊಂಡು ಹೋದರೆ, ಅಲ್ಲಿಯೇ ಕೂತುಕೊಂಡಲ್ಲಿ ಸ್ವಲ್ಪ ಸ್ವಲ್ಪ ಕುಡಿಯಬಹುದು.

ನಾರಾಯಣರಾವ್—Nice idea ಇದು, ಅಲ್ಲದೆ ಸುರಾಪಾನ ಪ್ರಚಾರವಾದ 3 ಜಾತೀಯತೆಯೆಂಬದು ನಿರ್ನಾಮವಾಗಿ ಹೋಗುತ್ತೆ. ನೋಡಿ ನಾವು ಬ್ರಾಂಡಿ ಗ್ಲಾಸ್ ಕುಡಿಯುವ ಬಾರ್‌ಗೆ ಹೋದರೆ ನಾವೆಲ್ಲ ಅಲ್ಲಿ ಒಂದೇ ಜಾತಿ ಒಂದೇ ಪಾತ್ರೆಯಲ್ಲಿ ಕುಡಿಯುತ್ತೇವೆ! ಸಹೋದರತ್ವ–Brotherhood ನೋಡಬೇಕು ಅಲ್ಲಿ. ಈ ಲೋಕವು ಸ್ವರ್ಗಲೋಕ ಆಗಬೇಕಾದರೆ ಎಲ್ಲರೂ ಈ ಸುರಾದೇವಿಯ ಭಕ್ತರಾಗಬೇಕು. you see, Mr. Ranga Rao my brother is a fool, f-o-o-l ಅವನು ಅಷ್ಟು ದೊಡ್ಡ ಆಫೀಸರ, ಸ್ವಲ್ಪ ಕುಡಿತದ ಅಮಲಿನಿಂದ ಪೇದೆಗೆ ಪಾದರಕ್ಷೆಯಿಂದ ಹೊಡ್ದ. ಪೇದೆ stab ಮಾಡಿ ಬಿಟ್ಟ–ಸತ್ತ–you see, if you drink you must drink deep, then you will be sober, ತುಂಬಾ ಕುಡಿದರೆ ಶಾಂತವಾಗುತ್ತೀರಿ.

೬

[ರಮೇಶನ ಮೇಜಿನ ಮೇಲೆ ವಿಸ್ಕಿ ಬಾಟ್ಲಿ, ಬಿಯರ್ ಬಾಟ್ಲಿ, ಗ್ಲಾಸುಗಳನ್ನು ಇಟ್ಟು.]

ರಮೇಶನು—ಹಾ, ಸುರೆ! 'ಓ ಸುಶೀಲೆ! ಇನ್ನು ಮುಂದೆ ನಾನು ಸುರಪಾನ ಮಾಡಿದರೆ ನಿನ್ನ ರಕ್ತಪಾನಕ್ಕೆ ಸಮ'–ಎಂದು ನಾನೆಷ್ಟು ಸಲ ಭೀಷ್ಮ ಪ್ರತಿಜ್ಞೆಯನ್ನು ತೊಟ್ಟಿಲ್ಲ? ಆದರೆ ಸಾಯಂಕಾಲವಾಗಲು ಅಯ್ಯೋ! ಆ ಪ್ರತಿಜ್ಞೆಗಳೆಲ್ಲಿ? ನಾನೆಲ್ಲಿ? ಹೇ ಸುರೆ ಇದು ನಿನ್ನ ಕೊನೆಯ ಸೇವೆ. ಇನ್ನು ಈ ಜನ್ಮದಲ್ಲಿ ನಿನ್ನ ಸಮಾಗಮ ನನಗಿಲ್ಲ. ನಾಳೆಯಿಂದ ಖಂಡಿತವಾಗಿಯೂ ನಿನ್ನ ಬಳಿ ಸಾರೆನು, ನಿನ್ನ ಮುಖ ನೋಡೆನು. ಇದೇ ನಿನ್ನ ಕೊನೆಯ ಸೇವೆ, ಬಾ, ಸುರೆ, ಇದೇ ನನ್ನ ಕೊನೆಯ ಪಾನ.

[ಅವನ ಹೆಂಡತಿ ಸುಶೀಲೆಯು ಬಂದು.]

ಸುಶೀಲೆ—ದಿನದಿನವೂ ಇದೇ ಹಾಡು. ನಾಳೆ ನಾಳೆಯೆಂದು ಈ ಅವಸ್ಥೆಗೆ ಬಂದಿರಿ. ಬಂದ ವ್ಯಾಪಾರಿಗಳನ್ನು ಮತ್ತರಾಗಿ ಓಡಿಸತೊಡಗಿದಿರಿ. ಇನ್ನೂ ಇನ್ನೂ ನಾಳೆ ಎನ್ನುವಿರಾ? ಬೇಡ ಸುಳ್ಳು ಹೇಳಬೇಡಿರಿ. ನನ್ನನ್ನು ಕೊಂದು ಬಿಡಿರಿ. ಅನಂತರ ಎಷ್ಟು ಬೇಕಾದರೂ ಕುಡಿಯಿರಿ ನಿಮ್ಮನ್ನು ತಡೆಯುವವರಾರೂ ಇಲ್ಲ.

[ಮರುದಿನ ಬೀದಿಯಲ್ಲಿ]

ರಮೇಶ—(ಹೆಂಡದ ಬಾಟ್ಲಿ ಹಿಡಕೊಂಡು) ಇಂದು ಅಲ್ಲೊಬ್ಬ 'ಹೆಂಡ ಕೆಟ್ಟದು' ಎಂದು ಲೆಕ್ಚರ್ ಮಾಡುತಿದ್ದ. ಅವನ ಆ ಗೊಡ್ಡು ತಲೆಬುರುಡೆಯ ಮೇಲೆ ಈ ಬಾಟ್ಲಿಯನ್ನೇ ಒಡೆದು ಅವನಿಗೆ ಸುರಾಭಿಷೇಕ ಮಾಡಬೇಕು. ಹೆಂಡ ಒಳ್ಳೆಯದೋ ಕೆಟ್ಟದೋ ಎಂದು ಹೇಳಬೇಕಾದರೆ ಅದನ್ನು ಕುಡಿದುನೋಡಬೇಕು, ಸ್ವಂತ ಅನುಭವವಿಲ್ಲದರು ಲೆಕ್ಚರ್ ಕೊಟ್ಟರೆ ಏನು ಪ್ರಯೋಜನ? ಇದು ಬಲು ಪುಣ್ಯದ ದಿನ, ಇ....ಈ...ದು! ಇ.......ಇಷ್ಟು ಕುಡಿದ ದಿನವೇ ಇಲ್ಲ. ಆ...ದ....ರೂ ಕಿಂಚಿತ್ತು ಕಿಂಚಿತ್ತು ಮಾತ್ರ ಇನ್ನೂ ಬೇಕೆಂದೇ ತೋರುತ್ತದೆ! ದೇವರಿಗೆ ಬುದ್ಧಿಯಿಲ್ಲ.... ಈ...ಈ....ಸ್ಸಮುದ್ರ, ಈ ಹೊಳೆ, ಈ ಕೆರೆ—ಎಲ್ಲ ಈ....ಈ ಸುರಾಮಯ ಮ್ಯಾಡಬಾರದಿತ್ತೆ?

[ಸುಶೀಲೆ ಮನೆಯಲ್ಲಿ]

ಸುಶೀಲೆ—ಶ್ರೀಮಂತನ ಮಗಳಾಗಿ, ಶ್ರೀಮಂತ ವಿದ್ಯಾವಂತನ ಕೈ ಹಿಡಿದೂ ಏನು ತಾನೇ ಸಾರ್ಥಕ! ಪತಿಯನ್ನು ಸನ್ಮಾರ್ಗಕ್ಕೆ ತರುವುದಕ್ಕಾಗಿ ಸತಿಯಾದವಳು ಏನೆಲ್ಲ ಯತ್ನಗಳನ್ನು ಮಾಡಬಹುದೋ ಅವೆಲ್ಲವನ್ನೂ ಮಾಡಿರುವೆನೆಂಬುದು, ದೇವಾ–ನೀನೇ ಬಲ್ಲೆ! ಆದರೂ ಔಷಧಿಗಾಗಿ ಕಿಂಚಿತ್ ಮಾತ್ರ ಸೇವಿಸಿದ ಮದ್ಯವು ಇಂದು ನನ್ನ ಪ್ರಿಯ ಪತಿಯನ್ನು ಸುರಾಪಾನದ ಅಂತ್ಯಾವಸ್ಥೆಯಲ್ಲಿ ಇಂದು ಇರುವುದು–ಧನವು ಹೋಯಿತು, ಉದ್ಯೋಗವು ನಿಂತಿತು, ಮಾನವು ಅಳಿಯಿತು,–ಆಸ್ತಿ ಪಾಸ್ತಿ ಮೈಮೇಲಿದ್ದ ಚಿನ್ನದ ಒಡವೆಗಳು–ಎಲ್ಲವೂ ಮಾಯವಾದವು! ಇರಲಿಕ್ಕೆ ಇದೊಂದು ಮನೆಯಾದರೂ ಇದ್ದಿತು; ಅದೂ ನಿನ್ನೆ ಸಾಲಗಾರರ ವಶವಾಯಿತು! ನನ್ನ ಜೀವನ ಸರ್ವಸ್ವನನ್ನು ಇನ್ನು ಆ ಸುರಾ ರಾಕ್ಷಸಿಯಿಂದ ಬಿಡಿಸಲು ಸಾಧ್ಯವಿಲ್ಲ! ಅಯ್ಯೋ! ಹೇಗಿರಲಿ? ಮರ್ಯಾದೆ ತೊರೆದು ಬೀದಿಗಿಳಿದು ಕೂಲಿಗೆಲಸ ಮಾಡಲೆ? ಅದಕ್ಕೂ ಶಕ್ತಿಯೆಲ್ಲಿದೆ? ಪೆಟ್ಟು ತಿಂದು ತಿಂದು ಎಲುಬುಗಳು ಪುಡಿಯಾದವು! ನನಗೆ ಇನ್ನು ಒಂದು ಗಳಿಗೆಯಾದರೂ ಬದುಕಬೇಕೆಂದಿಲ್ಲ

ರಮೇಶ—(ಪ್ರವೇಶಿಸಿ) ಇನ್ನು ಕಿಂಚಿತ್ತು ಮಾತ್ರ ಕುಡಿಯುವುದಿದೆ; ಸ್ವಲ್ಪ ದುಡ್ಡನ್ನು ಕೊಡು.–

ಸುಶೀಲೆ—ಎಲ್ಲಿಂದ ಕೊಡಲಿ? ಏನೂ ಇಲ್ಲ–

ರಮೇಶ—ಆ ಮಂಗಲಸೂತ್ರದಲ್ಲಿರುವ ತಾಲಿಯನ್ನು ಕೊಡು–ಕೊಡೂ–

ಸುಶೀಲೆ—ಅಯ್ಯೋ! ದಮ್ಮಯ್ಯಾ! ಆ ಕುಡಿಯುವುದನ್ನು ಬಿಟ್ಟುಬಿಡಿ–

ರಮೇಶ—ಸುಶೀಲೆ,– ಹಿಂದೆ ನಾನು ಸುರಾಪಾನದ ಪ್ರಥಮಾವಸ್ಥೆಯಲ್ಲಿದ್ದಾಗ ಎಷ್ಟೋ ಸಲ ಪ್ರತಿಜ್ಞೆ ಮಾಡಿದ್ದೆನು; ಆಗ ಅದನ್ನು ಪಾಲಿಸಲೂ ಸಾಧ್ಯವಿದ್ದಿತು. ಆದರೆ ಈ ಅಧಮನಿಂದ ಆಗಲೂ ಆಗದೆ ಹೋಯಿತು! ಈಗ ಸುರಾಪಾನದ ಪರಮಾವಸ್ಥೆಯಲ್ಲಿರುವೆನು; ಇಂತಹ ಉನ್ಮಾದಾವಸ್ಥೆಯಲ್ಲಿ ಸುರೆಯೂ ನಾನೂ ಅನ್ಯೋನ್ಯ ಬೆರೆತು ಹೋಗಿರುವೆವು; ಒಂದು ಕ್ಷಣವಾದರೂ ಅದನ್ನು ಬಿಟ್ಟಿರಲು, ಸಾಧ್ಯವಿಲ್ಲ. ಇಲ್ಲ. ಇಲ್ಲ—ಅದನ್ನು ಮಾತ್ರ ಬಿಟ್ಟು ಬದುಕಲು ಸಾಧ್ಯವಿಲ್ಲ, ತಡಮಾಡಬೇಡ—ಆ ತಾಲಿ–ತಾ–ಲಿ–ಯನ್ನು ತೆಗೆದುಕೊಡು–

ಸುಶೀಲೆ—ಅಯ್ಯೋ, ಹೇಗೆ ತೆಗೆದು ಕೊಡಲಿ!

ರಮೇಶ—ನೀನು ತೆಗೆದುಕೊಡುವುದು ಬೇಡ ನಾನೇ, ನಾನೇ ನಾನೇ ನಾ–ನೇ ಇದನ್ನು ಕಡಿದು ತೆಗೆದುಕೊಂಡು ಹೋಗುವೆನು (ಎನ್ನುತ್ತ ಸುಶೀಲೆಯ ಕುತ್ತಿಗೆಗೆ ಕೈಯಿಕ್ಕುವನು.

ಬರುವ ಲೇಖನ—

"ವ್ಯಭಿಚಾರ"

THE

Udipi Electric Supply Corporation Ltd. Udipi

NOTICE

Public notice is hereby given that from 15-3-39 onwards the town supply of current will be throughout 24 hours. The public will avail of the opportunity and make best use of the same at any time during the day.

MANAGER.

ದಕ್ಷಿಣ ಕನ್ನಡ

ಶ್ರೀ ಪೇಜಾವರ ಮಠದ ಚಿಕ್ಕ ಪಟ್ಟದ ನೇಮಕ ವಿಷಯದಲ್ಲಿ ಮಠದ ಜನರಲ್ ಏಜಂಟ್ ಮಿಯ್ಯಾಳ ನರಸಿಂಹಾಚಾರ್ಯರ ಹೇಳಿಕೆ.

ಸಾರ್ವಜನಿಕರು ಅನ್ಯಥಾ ಭಾವಿಸಲವ ಕಾಶವಿಲ್ಲ.

ಶ್ರೀ ಪೇಜಾವರ ಮಠದ ಶ್ರೀ. ವಿಶ್ವಮಾನ್ಯ ತೀರ್ಥ ಶ್ರೀ ಶ್ರೀಪಾದಂಗಳವರು ನನ್ನ ಅಣ್ಣನ ಮಗನಾದ ವೆಂಕಟರಮಣನೆಂಬ ವಟುವಿಗೆ ತಾ. 2 12-38ರಲ್ಲು ಹಂಪೆಯಲ್ಲಿ ಆಶ್ರಮವಿತ್ತು ಶ್ರೀ ವಿಶ್ವೇಶತೀರ್ಥರೆಂಬ ಅಭಿಧಾನದಿಂದ ತನ್ನ ಚಿಕ್ಕಪಟ್ಟವನ್ನಾಗಿ ನೇಮಿಸಿರುವುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿರುತ್ತದೆ. ಆದರೆ ಈ ವಿಷ



ಮಿಯ್ಯಾಳ ನರಸಿಂಹಾಚಾರ್ಯರು.

ಯದಲ್ಲಿ ಸಾರ್ವಜನಿಕರಿಗೆ ಇನ್ನೂ ಸರಿಯಾದ ವಿಚಾರವು ತಿಳಿದಿಲ್ಲವೆಂದು ನನಗೆ ತಿಳಿದು ಬಂದಿದೆ. ಜನರು ಒಬ್ಬೊಬ್ಬರು ಒಂದೊಂದು ವಿಧವಾಗಿ ಮಾತಾಡುತ್ತಿದ್ದಾರೆಂಬುದು ನನಗೆ ಗೊತ್ತಾಗಿದೆ. ಸಾರ್ವಜನಿಕರ ಅವಗಾಹನೆ ಬಗ್ಗೆ ನಾನು ಈ ಪ್ರಕಟಣೆಯನ್ನು ಕೊಡಬೇಕಾಗಿದೆ. ಶ್ರೀ ವಿಶ್ವಮಾನ್ಯತೀರ್ಥರಿಗೆ ದೇಶಾಟನದಲ್ಲಿಯ ವಿಶ್ವಾಸವಿಟ್ಟು ಈ ಶಿಷ್ಯಸಂಗ್ರಹಣೇಚ್ಛೆಯು ಅವರಿಗೆ ಬಹು ಸಮಯದ ಲಾಗಾಯ್ತು ಇತ್ತೆಂಬದನ್ನು ಅವರ ಆಪ್ತೇಷ್ಟರೆಲ್ಲರೂ ಬಲ್ಲರು. ಪರ್ಯಾಯ ಮುಗಿದೊಡನೆ ಅವರಿಗೆ ಉತ್ತರದೇಶ ಯಾತ್ರೆ ಮಾಡಬೇಕೆಂಬ ಇಚ್ಛೆಯು ಬಲವಾಯಿತು. ಹರಿದ್ವಾರ, ಬದರಿಕಾಶ್ರಮ, ಮಾನಸ ಸರೋವರ, ಹಿಮಾಲಯ, ನಗ್ನರೆ ಸ್ಥಳಗಳನ್ನು ಸಂದರ್ಶಿಸಬೇಕೆಂದೂ ಅಲ್ಲಲ್ಲಿ ಹೆಚ್ಚು ಕಾಲಗಳನ್ನು ಕಳೆಯಬೇಕೆಂದೂ ಉತ್ಕಟೇಚ್ಛೆಯು ಉಂಟಾಯಿತು. ಸಂಪ್ರದಾಯ ಪ್ರಕಾರ ದೇವತಾ ಪೂಜಾ ವಿನಿಯೋಗಾದಿಗಳನ್ನು ಮಾಡುವರೆ ಅಂತಹ ದುಸ್ಸಾಧ್ಯ ಜಾಗಗಳಲ್ಲಿ ಕಷ್ಟವಾಗುವದರಿಂದಲೂ ಹೆಚ್ಚಿನ ಜನರನ್ನು ಮಠದ ಸಾಮಾನುಗಳನ್ನೂ ಇಟ್ಟುಕೊಂಡು ಅಂತಹ ಜಾಗಗಳಲ್ಲಿ ಸಂಚಾರ ಮಾಡುವುದು ಕಷ್ಟವಿರುವದರಿಂದಲೂ ಮತ್ತು ಈ ಸಮಯದಲ್ಲಿ ಏನಾದರೊಂದು ವಿಪತ್ತು ಒದಗಿದರೆ ಆ ಸಂಬಂಧ ಸಂಸ್ಥಾನಕ್ಕಾಗಲಿ ಸಂಬಂಧಪಟ್ಟವರಿಗಾಗಲಿ ಈ ಹಿಂದೆ ನಡೆದಂತೆ ಚರಿತ್ರಾರ್ಹಗಳಾದ ಏನೊಂದು ತರದ ಹಾನಿಯೊದಗಬಾರದೆಂಬದರಿಂದಲೂ ಅವರು ನನ್ನ ಅಣ್ಣನ ಮಗನಾದ ವೆಂಕಟರಮಣನೆಂಬ 8 ವರ್ಷದ ವಟುವಿಗೆ ತಾ 2-12-38ರಲ್ಲು ಹಂಪೆಯಲ್ಲಿ ಆಶ್ರಮ ಕೊಟ್ಟು ಶ್ರೀ ವಿಶ್ವೇಶತೀರ್ಥರೆಂಬ ಅಭಿಧಾನದಿಂದ ಅವರನ್ನು ಶಿಷ್ಯರನ್ನಾಗಿ ಪರಿಗ್ರಹಿಸಿರುತ್ತಾರೆ ಶಿಷ್ಯರು ತನ್ನ ಸ್ಥಾನಕ್ಕೆ ಸಂಬಂಧಪಟ್ಟ ಸಕಲ ಕರ್ತವ್ಯಗಳನ್ನು ಯೋಗ್ಯವಾಗಿ ಮಾಡುವರೆ ತಕ್ಕವರನ್ನಾಗಿ ಮಾಡುವಂತಹ ಯೋಗ್ಯ ಶಿಕ್ಷಣವನ್ನು ಕೊಡಿಯುತ್ತಿದ್ದಾರೆ ಶ್ರೀ ವಿಶ್ವಮಾನ್ಯ ತೀರ್ಥ ಸ್ವಾಮಿಗಳೂ ತನ್ನ ಏಜಂಟನಾದ ನನ್ನ ಮೂಲಕ ಮಠದಾಡಳಿತದ ಸೂತ್ರಚಾಲಕರಾಗಿರುತ್ತಾರೆ. ಮತ್ತು ಮಠದ ಯಾವತ್ತೂ ಆಡಳಿತೆಯು ಈಗ ಶ್ರೀ ವಿಶ್ವಮಾನ್ಯತೀರ್ಥಸ್ವಾಮಿಯ ಹೆಸರಲ್ಲಿಯೇ ನಡೆಯುತ್ತಿರುತ್ತದೆಂಬ ಸಂಗ್ತಿಯನ್ನು ನಾನು ಈ ಮೂಲಕ ಸಾರ್ವಜನಿಕರ ಅವಗಾಹನೆಗೆ ತರಬಿಚ್ಛಿಸುತ್ತೇನೆ. ಈ ಸಂಬಂಧದಲ್ಲಿ ನಾನು ಈ ಮುಂಚೆಯೇ ದಾಸ್ಸ ಬಂಧುವಿನ ಪ್ರತಿನಿಧಿಯು ನನ್ನನ್ನು ಪ್ರಶ್ನಿಸಿದಾಗ ಒಂದು ಸೂಕ್ಷ್ಮ ಹೇಳಿಕೆಯನ್ನು ಕೊಟ್ಟಿದ್ದರೂ ಜನರಲ್ಲಿ ಇನ್ನೂ ನಾನಾ ತರದ ಗುಮಾನಿ ಸೋಹಗಳು ಇರುವದರಿಂದ ಅದನ್ನು ನಿವಾರಿಸುವಗೋಸ್ಕರ ಈ ವಿಸ್ತಾರವಾದ ಹೇಳಿಕೆಯನ್ನು ಕೊಟ್ಟಿರುತ್ತೇನೆ.

Miyala Narasimhachar,

ಸಿಟ್ಟಿ

ಸಿಟ್ಟಿ ಭಂಡಸಾಲೆ ಎದುರು ನೂತನವಾಗಿ ನಿರ್ಮಿಸಲ್ಪಡುವ ಭವ್ಯ ರಂಗಸ್ಥಳದಲ್ಲಿ ಇದೇ ಮಾರ್ಚಿ ತಾ. 15ನೇ ಬುಧವಾರ ದಿನ ಆರಂಭಿಸಿ ತಾ. 29-3-39 ನೇ ಬುಧವಾರದ ವರೆಗೆ 15 ದಿನಗಳಲ್ಲಿ ಪ್ರತಿದಿನ ರಾತ್ರಿ ಸೌಕೂರು ಶ್ರೀ ದುರ್ಗಾಪ್ರಸಾದಿತ ದಶಾವತಾರ ಮಂಡಲದವರೊಡನೆ ಶ್ರೀ ಮಲ್ಪೆ ಶಂಕರನಾರಾಯಣ ಸಾಮಗರು, ಮತ್ತು ಶ್ರೀ. ಬ್ರಹ್ಮಾವರ ವೀರಭದ್ರ ನಾಯಕರು ಇವರನ್ನು ಸವಿಶೇಷ ಸಂಪೂರ್ಣ ಶ್ರೀ ಮಹಾಭಾರತ ಕಥಾ ಭಾಗವನ್ನು ಬಯಲಾಟವಾಗಿ ಪ್ರದರ್ಶಿಸಲು ನಿಶ್ಚಿತವಾಗಿದೆ. ಮಹಾಜನರ ಪ್ರೋತ್ಸಾಹಕ್ಕೆ ಸುಸ್ವಾಗತವಿದೆಯಾಗಿ 'ರಸಿಕರಂಜನ ಸಭಾ ಸಿಟ್ಟಿ' ಇವರ ಆಮಂತ್ರಣವಿದೆ.

ಕುಕ್ಕಿತ್ತೂರು ಗೋವಿಂದ ಭವನದಲ್ಲಿ ಗೋವಿಂದದಾಸರ ನಿಧನ.

ಇವರು ಕಳೆದ ತಾರೀಕು 23-2-39ನೇ ದಿನ ಉಡುಪಿ ಕ್ಷೇತ್ರಕ್ಕೆ ಚಿತ್ತೈಸಿ, ಆ ಸುದಿನದಲ್ಲಿ ಶ್ರೀಕೃಷ್ಣನ ಪ್ರೀತ್ಯರ್ಥವಾಗಿ ಬ್ರಹ್ಮೋತ್ಸವ ಸೇವೆಯನ್ನೂ ಅನೇಕ ಬ್ರಾಹ್ಮಣ ಮುತ್ತೈದೆಯರಿಗೆ ದಾನದಕ್ಷಿಣಾದಿಗಳನ್ನೂ ಕೊಟ್ಟು ಆ ಜಗದೀಶ್ವರನ ಪೂರ್ಣ ಅನುಗ್ರಹ ಪಡದು ಮರುದಿನ ಉಡುಪಿಯಿಂದ ಹೊರಟು ತಮ್ಮ ಜನ್ಮಭೂಮಿಯಾದ ಕುಕ್ಕಿತ್ತೂರು ಗೋವಿಂದ ಭವನಕ್ಕೆ ಬಂದು 10 ದಿನ ತನ್ನ ಮನೆಯಲ್ಲಿ ಭಗವತ್ಸೇವೆಯನ್ನು ಮಾಡಿ ಕಳೆದ ತಾ. 5 3-39ನೇ ದಿನ ಪರಂಧಾಮವನ್ನು ಸೇರಿದರು. ಅವರ ಅವಸಾನ ಕಾಲದಲ್ಲಿ ಮಕ್ಕಳಿಲ್ಲದರೂ ಅಂಪರೆ ಮದ್ರಾಸ್ ವಾಡಿನ್ ಕೆಫೆ, ಮೈಸೂರು ಕೇಫ ಮದ್ರಾಸ್, ಮೈಸೂರು ವಾಡನ್ ಕೇಫೆ ಕಾಯಿಂಬತ್ತೂರು, ಇದರ ಮಾಲಿಕರೂ ಹಾಜರಿದ್ದರು. ಮೃತರ ಜೀವನಿಗೆ ಭಗವಂತನು ಅನುಗ್ರಹಿಸಲಿ.

ನೋಟಿಸು.

ಬಂಟರ ಯಾನೆ ನಾಡವರ ಸಂಘ ಮುಂಬಯಿ.

ಈ ಸಂಘದ ಸಾರ್ವಜನಿಕ ಸಭೆಯು ಇದೇ ಮಾರ್ಚಿ ತಾ. 19ನೇ ಆದಿತ್ಯವಾರ ಅಪರಾಹ್ನ ಘಂಟೆ 3ಕ್ಕೆ ಶ್ರೀ ಡಾಕ್ಟರ್ ಎಮ್ ವೆಂಕಟರಾಯ ಸೆಟ್ಟಿ ಜೆ. ಪಿ ಅವರ್ಗಳವರ ಅಧ್ಯಕ್ಷತೆಯಲ್ಲಿ ನೇಶನಲ್ ಮೆಡಿಕಲ್ ಕೋಲೇಜಿನ ಮಂದಿರದಲ್ಲಿ ಜರಗಲಿಕ್ಕಿರುವದು ಸದ್ರಿ ಸಭೆಯಲ್ಲಿ ಸಂಘದ ಮುಖ್ಯವಾದ ಕೆಲವು ವಿಷಯಗಳು ಚರ್ಚಿಸಲ್ಪಡುವದರಿಂದ ಸದಸ್ಯರೆಲ್ಲರೂ ಸಭೆಗೆ ಚಿತ್ತೈಸಬೇಕಾಗಿ ವಿನಂತಿ.

ಕಾಂತಪ್ಪ ರೈ, ಯಸ್. ಸಂಜೀವಶೆಟ್ಟಿ,
ಗೌರವ ಜೊತೆ ಕಾರ್ಯದರ್ಶಿಗಳು,

ಪ್ರಕಟಣೆ.

ಪುತ್ತೂರು ತಾಲೂಕು ಗ್ರಾಮ ಉದ್ಯೋಗಸ್ಥರ ಸಂಘ.

ಈ ಸಂಘದ ಮಹಾಸಭೆಯನ್ನು ಇದೇ ಮಾರ್ಚ ತಿಂಗಳ ತಾರೀಕು 26ನೇ ರವಿವಾರ ಶ್ಯಾಮ ಘಂಟೆ 2ಕ್ಕೆ ಸರಿಯಾಗಿ ಪುತ್ತೂರು R. C. S. (ಸೊಸ್ಯಾಟಿ) ಕಟ್ಟಡದಲ್ಲಿ ಜರಗಿಸುವುದೆಂತ ಮಾಡಿಯದೆ ಆದ್ದರಿಂದ ಮೆಂಬರರೆಲ್ಲರೂ ಅತೀ ಅಗತ್ಯವಾಗಿ ಬರಬೇಕಲ್ಲದೆ ಪ್ರತಿಯೊಬ್ಬ ಗ್ರಾಮ ಉದ್ಯೋಗಸ್ಥನೂ ಕೂಡ ತನ್ನ ಹಾಗೂ ನೆರೆಹೊರೆಯ ಗ್ರಾಮಗಳ ಪರೇಲ ಶ್ಯಾನುಭಾಗ ಉಗ್ರಾಣಿ ಕೆಳೆಯಾರಿ ಇವರನ್ನು ಹೇಳಿ ಕರಕೊಂಡು ಬರಬೇಕಾಗಿಯೂ ವಿನಂತಿ ಈ ಸಭೆಯಲ್ಲಿ ಉಪನಿಬಂಧನೆಗಳ ಮಂಜೂರಾತಿ, ಕಾರ್ಯಕಾರಿಮಂಡಳಿಯ ಚುನಾವಣೆ ಮೊದಲಾದ ಕಾರ್ಯಕ್ರಮಗಳಿವೆ.

ಕಾರ್ಯದರ್ಶಿ

ನೋಟೀಸು

ಉಡುಪಿ ಡಿ ಮುನ್ಸಿಫ್ ಕೋರ್ಟಿನಲ್ಲಿ—

O P No $\frac{10}{1939}$

1. ವೇದವತಿ ಅಮ್ಮ ಕೆ ಗಣಪತಿ ಪೈಗಳ ವಿಧವೆ, 2. ಡಾಕ್ಟರ್ ಕೆ. ರಾಘವೇಂದ್ರಪೈ, ಕೆ. ಗಣಪತಿಪೈಗಳ ಮಗ, ಉಡುಪಿ ತಾಲ್ಲೂಕು ಶಿರ್ವ ಗ್ರಾಮದಲ್ಲಿರುವವರು } ಅರ್ಜಿದಾರರು

ಮತ್ತು

ಕೆ. ಗೋವಿಂದರಾಯ ಪೈ. ಕೆ. ಗಣಪತಿ ಪೈಗಳ ಮಗ ಉಡುಪಿ ತಾಲ್ಲೂಕು ಕಟಪಾಡಿ ಗ್ರಾಮದ ಬಾರಕೂರು— } ರೆಸ್ಪೋಂಡೆಂಟ್

ಇವರೊಳಗೆ

1ನೇ ಅರ್ಜಿದಾರಳ ಮಗನೂ 2ನೇ ಅರ್ಜಿದಾರನ ರೆಸ್ಪೋಂಡೆಂಟನ ಸಹೋದರರ ಹಾಲಿ ಮೃತಪಟ್ಟ ಕೆ ಅನಂತಕೃಷ್ಣ ಪೈಗಳು The Champion General Insurance Compapy Limited Bombay ಯಾ ಕಂಪನಿಯಲ್ಲಿ ಪಡೆದ ನಂಬ್ರ147೧ನೇ ರುಪಾಯಿ 1000/- ರದ ಪೋಲಿಸಿಯ ಬಾಬ್ತು ಸದ್ರಿ ಕಂಪನಿಯಿಂದ ಬರತಕ್ಕ ಐವೇಜುಗಳನ್ನು ವಸೂಲು ಮಾಡುವರೆ 1ನೇ ಅರ್ಜಿದಾರಳ ಹೆಸರಿಗೆ Sucession Certificate ಕೊಡಬೇಕಾಗಿ ಸದ್ರಿ ಅರ್ಜಿದಾರರು ಕೋರ್ಟಿನಲ್ಲಿಂದ ಅರ್ಜಿಯು ತಾ. 3-4-39ಕ್ಕೆ ತನಿಖೆಗೆ ಇಡೋಣಾಗಿಯದೆ. ಈ ಕುರಿತು ಆಕ್ಷೇಪ ಹೇಳುವವರು ಇದೇ ಸದ್ರಿ ತಾರೀಕಿನಲ್ಲಿ ಸದ್ರಿ ಕೋರ್ಟಿನಮುಂದೆ ಸ್ವಂತವಾಗಿ ಹಾಜರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ.

Udipi 10-3 39 } **B. Hirianna Hegde**
Advocate for petitioners.

ಸುಳ್ಳೆಂದು ರುಜುಪಡಿಸುವವರಿಗೆ

ರೂ. 50 ಇನಾಂ

ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು.

1 **ವಶೀಕರಣ ಯಂತ್ರ:** ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರಧರಿಸಿದ ಮಾತ್ರದಿಂದಲೇ ಅವಳು ನಿಮ್ಮೊಡನೆ ಮಾತನಾಡಬಯಸುವಳು. ಮಾತ್ರವಲ್ಲದೆ ನಿಮ್ಮ ವಶವಾಗುವಳು, ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು. ಬೆಳ್ಳಿ ಯಂತ್ರಕ್ಕೆ ರೂ. 2-8-0, ಚಿನ್ನದ ತಾಯಿತಕ್ಕೆ ರೂ 7-8-0.

2 **ಲಕ್ಷ್ಮೀಯಂತ್ರ:** ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ವಿಹಿವಾಟುಗಳು ಹೆಚ್ಚು ಲಾಭದಾಯಕ ಸುಸ್ಥಿತಿಯಿರುವುದು. ಬೆಳ್ಳಿ ಯಂತ್ರಕ್ಕೆ ರೂ. 2-8-0 ಚಿನ್ನದ್ದಕ್ಕೆ ರೂ. 7 8-0. ಇಂದೇ ಮೇಲಿನ ವಿಳಾಸಕ್ಕೆ ಬರೆಯಿರಿ. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

SRI SADANAND RAM
No 37, P O. Warisaligunj,
(Gaya)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಶನ್ ಮೊಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ ಪಿ ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4.

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

10-3-1939

ರಾಜಕೋಟೆ ದಿನಾಚರಣೆ—ರಾಷ್ಟ್ರಪತಿ ಸುಭಾಸರ ಹೇಳಿಕೆಯ ಮೇರೆಗೆ, ರಾಜಕೋಟದಲ್ಲಿ 'ಉಪವಾಸ' ವ್ರತದಲ್ಲಿರುವ ಮಹಾತ್ಮಾಜೀಯವರಿಗೆ ತಮ್ಮ ಅನುಕಂಪವನ್ನು ಸೂಚಿಸಲೋಸುಗ, ಮುಂಬಯಿ ನಗರದವರೆಲ್ಲಾ ರಾಜಕೋಟ ದಿನಾಚರಣೆಯನ್ನು ಆಚರಿಸಿದರು. ಖಾದಿ ಮತ್ತು ಸ್ವದೇಶಿ ವಸ್ತು ಭಂಡಾರಗಳು ಮಾತ್ರವಲ್ಲದೆ ದಿನವಹಿ ಸಾವಿರಾರು ರೂಪಾಯಿ ಲಾಭಪಡೆಯುತ್ತಿರುವ ಶೇರ್ ಬಜಾರಿನವರೂ ಕೂಡಾ ತಮ್ಮ ಆಫೀಸುಗಳನ್ನು ಮುಚ್ಚಿಟ್ಟು, ಹಲವಾರು ಸಂಘಗಳವರು, ಗಾಂಧೀಜಿಯವರಿಗೂ, ವೈಸರಾಯರಿಗೂ, ತೀವ್ರ ತೀರ್ಮಾನಿಗಾಗಿ ತಾರುಗಳನ್ನು ಕಳುಹಿಸಿ, ತಮ್ಮ ದುಃಖಗಳನ್ನು ಸೂಚಿಸಿದರು.

ಶನಿವಾರ ದಿವಸ ಆಜಾದ ಮೈದಾನದಲ್ಲಿ ಜರಗಿದ ಪ್ರಚಂಡ ಸಭೆಯಲ್ಲಿ ಭಾಷಣಮಾಡುತ್ತಾ ಶ್ರೀ. ವಲ್ಲಭಾಯಿ ಪಟೇಲರವರು ತಮ್ಮಲ್ಲಿ ಉಕ್ಕಿಬರುತ್ತಿರುವ ದುಃಖವನ್ನು ಸಹಿಸಿಕೊಳ್ಳಲಾರದೆ, ಮುಸ್ಲಿಮ್ ಬಂಧುಗಳೂ ಸಭೆಯಲ್ಲಿ ಭಾಗವಹಿಸಿರುವರೆಂಬುದನ್ನು ಲಕ್ಷ್ಯಮಾಡದೆ, "ರಘುಪತಿ ರಾಘವ ರಾಜಾ ರಾಂ" ಎಂಬ ಮಹಾತ್ಮಾಜಿಯವರ ಪ್ರೀತಿಯ ಗಾನವನ್ನು ಹಾಡತೊಡಗಲು, ಮುಸ್ಲಿಮ ಬಂಧುಗಳು, ಜಾತಿಭೇದವು 'ತಲೆ ಎತ್ತಿದು'ದನ್ನು ಕಂಡು, ಸಭೆಯಿಂದ ಹೊರ ಹೊರಡಬೇಕಾಯಿತು. ಸರ್ವ ಭಾರತವೇ ಹಿಂದೂ-ಮುಸ್ಲಿಮ್ ಒಟ್ಟಿಗಾಗಿ ಪ್ರಯತ್ನಿಸುತ್ತಿರಲು, ಸಾರ್ವಜನಿಕ ಸಭೆಯಲ್ಲಿ, ಮುಸ್ಲಿಮರ ಮುಂದುರು "ರಘುಪತಿ ರಾಘವ"ನನ್ನು ಸ್ಮರಿಸಬಾರದೆಂದು ಶ್ರೀ. ಪಟೇಲರವರು ತಿಳಿಯದಿದ್ದುದು ಬಹಳ ಆಶ್ಚರ್ಯದ ಸಂಗತಿ!

ಈಜಿಪ್ಟಿನ ಅತಿಥಿಗಳು—ಭಾರತದ ರಾಷ್ಟ್ರೀಯ ಕಾಂಗ್ರೆಸಿನ 52ನೆಯ ಅಧಿವೇಶನವನ್ನು ಸಂದರ್ಶಿಸಬೇಕೆಂದು ರಾಷ್ಟ್ರಪತಿ ಸುಭಾಸ್ ಬೋಸರವರು ಕಳುಹಿಸಿದ ಆಮಂತ್ರಣವನ್ನು ಸಾದರದಿಂದ ಸ್ವೀಕರಿಸಿ, ಈಜಿಪ್ಟಿನ ವಫ್ ಡಿಸ್ಟ್ ಪ್ರತಿನಿಧಿಗಳು ನಿನ್ನೆ ಮುಂಬಯಿಯಲ್ಲಿ ಬಂದಿಳಿದರು. ಈಜಿಪ್ಟಿಯ ಸೆನೇಟಿನ ಎದುರುಪಕ್ಷದ ಮುಖ್ಯಸ್ಥರಾದ ಮಹಮ್ಮದ್ ಬಸಿಯೋನಿಯವರು ಇನ್ನಿಬ್ಬರೊಡನೆ ಬಂದಿರುವರು. ಶ್ರೀಮತಿ ಮುನ್ಶಿಯವರು ಬಿ. ಪಿ. ಸಿ. ಸಿಯ ಪರವಾಗಿ ಇವರನ್ನು ಸಾದರದಿಂದ ಸ್ವೀಕರಿಸಿದರು. ಶ್ರೀ. ಬಸಿಯೋನಿಯವರು ತಾವು ಹಡಗದಿಂದ ಇಳಿದೊಡನೆ, "ಮಹಾತ್ಮಾಜಿಯವರ ಆರೋಗ್ಯದ ಮತ್ತು ಉಪವಾಸ ವ್ರತದ ಕುರಿತು ವಿಚಾರಿಸಿ"

AWAIT PUBLICATION

ನಿರೀಕ್ಷಿಸಿರಿ! ನಿರೀಕ್ಷಿಸಿರಿ!!

OF

WHITHER KARNATAKA

A Book that every Kannadiga must read OR **ಪ್ರತಿಯೊಬ್ಬ ಕನ್ನಡಿಗನೂ ಓದಬೇಕಾದ ಪುಸ್ತಕ**

ಕರ್ನಾಟಕ ದಿಗ್ದರ್ಶನ

BY

P. CHANDRASHEKAR HEGDE, B. A., B. L.

Copies can be had from all imortant Book sellers

ಮುಂದಿನ ವರ್ಷ ನಾನು ಬರುವಾಗ "ಸ್ವತಂತ್ರ ಭಾರತವನ್ನು ನೋಡಲಪೇಕ್ಷಿಸುತ್ತೇನೆ. ಸ್ವತಂತ್ರತೆಯೇ ಮಾನವನ ದಿವ್ಯ ಧ್ಯೇಯವು. ಈ ಧ್ಯೇಯವನ್ನು ಪೂರ್ತಿಸುವುದಕ್ಕಾಗಿ ಭಾರತೀಯರು ತೀವ್ರಗತಿಯಿಂದ ಹೆಣಗುವರೆಂದು ನಾನು ಭಾವಿಸುತ್ತೇನೆ" ಎಂದರು. ಅದೇ ದಿವಸ ರಾತ್ರಿ ಇವರು ತ್ರಿಪುರಿಗೆ ಪ್ರಯಾಣ ಬೆಳೆಸಿದರು.

ವಿದ್ಯಾ ಪ್ರಚಾರ—ಮುಂಬಯಿ ನಗರದಲ್ಲಿರುವ ನಿರಕ್ಷರತೆಯನ್ನು ದೂರಪಡಿಸಲೋಸುಗ ಮುಂಬಯಿ ಎಡಲ್ಟ್ ಎಜುಕೇಶನ್ ಕಮಿಟಿಯವರು ಮುಂಬಯಿ ಲಿಟರೆಸಿ ಕೇಂಪೈನ್ ಕಮಿಟಿ ಎಂಬೊಂದು ಕಮಿಟಿಯನ್ನು ಸ್ಥಾಪಿಸಿ ಬರುವ ಮೇ. ತಿಂಗಳಲ್ಲಿ ಸರ್ವ ಕಡೆಯಲ್ಲೂ ವಿದ್ಯಾಭ್ಯಾಸದ ರುಚಿಯನ್ನು ಜನರಲ್ಲುಂಟುಮಾಡಬೇಕೆಂದು 500ಕ್ಕೂ ಮಿಕ್ಕಿ ಕೇಂದ್ರಗಳನ್ನು ಸ್ಥಾಪಿಸಿ ಪ್ರಾರಂಭಿಕ ಕ್ಲಾಸುಗಳನ್ನು ನಡೆಸಲಿರುವರು. ಶಾಲೆಯ ವಿದ್ಯಾರ್ಥಿಗಳು ಇದರಲ್ಲಿ ಮುಖ್ಯ ಭಾಗವಹಿಸಿ, ಇದು ವಿಜಯಿಯಾಗುವಂತೆ ಭರದಿಂದ ಕೆಲಸಮಾಡುತ್ತಿರುವರು.

ದಿ ಕರ್ನಾಟಕ ಧರ್ಮಾರ್ಥ ರಾತ್ರಿಶಾಲೆ

ಇದರ ಸಹಾಯಾರ್ಥವಾಗಿ ತಾ. 4-3-39ರಲ್ಲಿ ಭಾರತ ನಾಟಕದ ಏರ್ಪಾಟು ಮಾಡಲ್ಪಟ್ಟಿತು. ಶ್ರೀ ಸುರತ್ಕಲ್ ಬಾಬು ವಿ. ಮೆಂಡನರವರ ಸುರಸ ನಾಟಕ, ಕನ್ನಡ ನಾಡಿನಲ್ಲಿ ಸುಪ್ರಸಿದ್ಧರಾದ ದೇಶಭಕ್ತ ಶ್ರೀ. ನಾರಾಯಣ ಎಸ್. ಕಿಲ್ಲೆಯವರ ಅರ್ಥ ವಿವರಣೆ. ಒಸ್. ಬಿ. ಲಿನಂಬೋತಾ ಹದಿಂದ ಭಾಗವಹಿಸಿದ್ದರು. ಶಾಲೆಯ ಅಧ್ಯಕ್ಷರಾದ ಶ್ರೀ. ಯಸ್. ಯಸ್. ಶೆಟ್ಟಿ ಸಭಿಕರಿಗೆ ನಾರಾಯಣ ಕಿಲ್ಲೆಯವರ ಪರಿಚಯವನ್ನು ಮಾಡಿಕೊಟ್ಟು, ಕಿಲ್ಲೆಯವರು ಜಿಲ್ಲೆಯ ಹಾಗೂ ನಾಡಿನ ಪ್ರಸಿದ್ಧ ವ್ಯಕ್ತಿಗಳೆಂದರು. ಅನಂತರ ಕಿಲ್ಲೆಯವರು ಆರಂಭದಲ್ಲಿ ಭಾರತದ ಮಹತ್ವಿಕೆಯನ್ನು ಮನಗಾಣಿಸಿ, ಸುರಸ ಭಾಷಣವಿತ್ತರು. ಕಿಲ್ಲೆಯವರ ಹೃದಯಂಗಮ ಮಗ್ನ್ಯ ಮಿರುಯ ವರ್ಣನೆಯು ಸಭಿಕರನ್ನು ಅತೀವ ಸಂತುಷ್ಟರನ್ನಾಗಿ ಮಾಡುವಂತಹದ್ದಾಗಿದ್ದಿತು. ಕೊನೆಗೆ ಶಾಲಾ ಕಾರ್ಯದರ್ಶಿ ಶ್ರೀ. ಯನ್. ಶ್ರೀಧರ ಶೆಟ್ಟಿ ಪುಷ್ಪಹಾರ ಧನ್ಯವಾದ ಸಮರ್ಪಣೆಯೊಂದಿಗೆ ಸಭಾಂತ್ಯವಾಯಿತು.



ಸರಿಯಾದ ಸಮಯವನ್ನು ಸೂಚಿಸತಕ್ಕ ಅತ್ಯಾಧುನಿಕ ಲಿವರ್ ರಿಸ್ಟ್‌ವಾಚಿಗೆ ಉರುಟು ಯಾ ಚಚೌಕ ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ. 2-8-0, ಅತ್ಯುತ್ತಮದಕ್ಕೆ ರೂ. 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ 4-8-0, ರೋಲ್ಡ್‌ಗೋಲ್ಡಿಗೆ ರೂ.6-8-0, ಚಿತ್ರ ಚೆದರ್ಲಿ ತೋರುವಂತಹದಕ್ಕೆ ರೂ. 8-8-0. ಅಂಚೆವೆಚ್ಚ 0-10-0 ಪ್ರತ್ಯೇಕ.

Empress Trading Co.,
P.O. Box No. 6744, **Calcutta**

WANTED

Applications are invited from Graduates or Intermediates for an accountant's post as a Head clerk. The application which should reach Box No 12 C/O Navayuga Office, Udipi, on or before 15 th April 1939 should contain the Name, Age, Qualifications, permanent residence; and previous experience. The Vacancy is permanent one.

WANTED—Districts Organisers and Taluka Superintendents in Districts of Belgaum, Bijapur, Dharwar, Canara and Coorg on salary and commission basis. Special facilities for the initial busines, of Rs. 10,000/-. Only influential gentlemen who can guarantee Rs. 50,000/- and Rs 25,000/- per year need apply.
Messrs.

PADUBIDRI BROS., **BOMBAY 8**

Organisers in Taluka centres either on salary or commission basis or both. Influential young men need apply. Selected candidates should be prepared to deposit a sum of Rs. 100/-. For full particulars apply with an anna stamp to *Box No. 5*,
C/o **NAVAYUGA, UDIPI.**

A lady candidate to edit a high class Kannada monthly magazine for ladies to be started shortly. Apply stating minimum salary required with particulars as to qualification, experience etc, to Box No. 11,
C/o **NAVAYUGA**, Udipi.

ನವಯುಗಕ್ಕೆ
ಚಂದಾದಾರರಾಗಿರಿ.

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ್, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು.

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ಮೋಸಗೊಳಿಸುವ ಔಷಧವೆಂದು ಖಾತ್ರಿಪಡಿಸುವವರಿಗೆ ರೂಪಾಯಿ 100 ಬಹುಮಾನ.

ಸ್ತಂಭಕ ವಟಿ—ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram
No. 552 **P. O. Katrisarai,** (GAYA)

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar *&* **Co.,** *Nambulier Street*, G. T. MADRAS.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ಶುದ್ಧರಕ್ತವನ್ನು ವೃದ್ಧಿಪಡಿಸಿ ಜೀರ್ಣಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಿಮಿ ಡಬ್ಬಿಗೆ ರೂ. ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳೂ ವಿ... ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದವರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಫಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪.
ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ.

ಈ ವಾರದ ಫಲಿತಾಂಶವೇನು?

(ತಾ 16—3—39ರಿಂದ 23—3—39ರ ವರೆಗಿನ ರಾಶಿಫಲ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ.

ಸಂ. ನ.]

ಮೇಷರಾಶಿ—

ಯಾವಾಗಲೂ ನಾವು ಸುಖದಿಂದಲೇ ಇರಬೇಕು. ದುಃಖವೆಂಬುದು ನಮ್ಮ ಸಮೀಪಕ್ಕೆ ಬರಲಾಗದು ಎಂದೇ ನಿಮ್ಮ ಬಯಕೆ ಇರಬಹುದು. ಆದರೆ ಕಾಲವು ಗತಿಸುತ್ತಿರುವುದು. ಗ್ರಹರು ಮುಂಬರಿಯುತ್ತಿರುವರು, ವಯೋಮಾನವು ದಿನದಿನಕ್ಕೆ ವೃದ್ಧಿಯನ್ನೈದುವುದು. ಇವೆಲ್ಲವೂ ಪರಿವರ್ತನೆಹೊಂದುತ್ತಿರುವ ವೇಳೆ ನಿಮ್ಮ ಅದೃಷ್ಟವೂ ಕೂಡ ಪರಿವರ್ತಿಸಬೇಡವೇ. ಅಂತೆಯೇ ಈ ವಾರದಲ್ಲಿ ನಿಮ್ಮ ವಿಧಿ ಬರಹವು ಬಹಳ ಶೋಚನೀಯಾವಸ್ಥೆಯಲ್ಲಿರುವುದು. ಹಣದ ತಾಪತ್ರಯವು ಬಹಳ ಹೆಚ್ಚಾಗಿ ಇತಿಕರ್ತವ್ಯತಾ ಮೂಢರಾಗಿ ಕುಳಿತುಕೊಳ್ಳುವಿರಿ. ಹೆಚ್ಚಿನ ಕಾರ್ಯಗಳಲ್ಲಿ ಶತ್ರುಗಳಿಂದ ಪರಾಜಯಹೊಂದುವಿರಿ. ಮೇಲಿಂದ ಮೇಲೆ ಬರತಕ್ಕ ಅನರ್ಥಗಳು ನಿಮ್ಮನ್ನು ಹೆಚ್ಚಿನ ವ್ಯಸನಕ್ಕೀಡುಮಾಡುವುದಲ್ಲದೆ ನಿಮ್ಮ ಆರೋಗ್ಯವನ್ನು ಕೂಡ ಅಪಹರಿಸುವವು. ಗುರ್ವನುಗ್ರಹವಿರುವ ಪ್ರಯುಕ್ತ ದೈವಭಕ್ತರಾಗಿದ್ದವರಿಗೆ ತಾ. 18ರಿಂದ 22ರ ವರೆಗಿನ ದಿನಗಳಲ್ಲಿ ಅನಿಷ್ಟಗಳು ಹೆಚ್ಚಿಗೆ ಸಂಭವಿಸಲಾರವು.

ವೃಷಭರಾಶಿ—

ಗ್ರಹಸ್ಥಿತಿಯು ಹೆಚ್ಚಿನಂಶ ಉತ್ತಮ ರೀತಿಯಲ್ಲಿರುವುದು. ನಿಮ್ಮ ಪ್ರಯತ್ನವು ಎಂದೂ ವಿಫಲವಾಗದು. ವಿಜಯಶ್ರೀಯು ತಮ್ಮ ಹಸ್ತಗತಳಾಗಿರುವಳು. ಸರ್ವತ್ರ ಸ್ಥಾನಮಾನಗಳನ್ನು ಗಳಿಸಿದ ನಿಮಗೆ ಪತ್ನೀ ಪುತ್ರರೂ ಮಿತ್ರ ಬಾಂಧವರೂ ಬಹಳ ಹಿತಚಿಂತಕರಾಗಿಯೇ ಇರುವರು. ಆಸ್ತಿಕ್ಯ ಬುದ್ಧಿಯ ಅಭಿವೃದ್ಧಿಯುಂಟಾಗಿ ದೇವತಾರಾಧನೆಯೇ ಮುಂತಾದ ಸತ್ಕಾರ್ಯಗಳಲ್ಲಿ ನಿಮ್ಮ ಪ್ರವೃತ್ತಿಯು ಹೆಚ್ಚುವುದು. ಆರ್ಥಿಕ ಭಾಗವು ಅತ್ಯುತ್ತಮ ರೀತಿಯಲ್ಲಿರುವುದು. ತನ್ನಿಮಿತ್ತವಾದ ದೋಷಗಳನ್ನು ದೂರೀಕರಿಸಿ ಆತ್ಮಸಂಯಮನಮಾಡಿರಿ. ನಿಮ್ಮ ವಿರೋಧಿಗಳು ಬಹಳ ಸೂಕ್ಷ್ಮದೃಷ್ಟಿಯಿಂದ ನಿಮ್ಮನ್ನು ಗಂಡಾಂತರಕ್ಕೊಳಪಡಿಸಲು ಸದಾ ಹಾತೊರೆಯುತ್ತಲೇ ಇರುವರು. ಅವರ ಬಲೆಗೆ ಸಿಲುಕಿದಿರೆಂದರೆ ಸರ್ವಸ್ವ ಹಾನಿಯಾಗುವ ಸಂಭವವಿದೆ. ಆದಕಾರಣ ತಾ. 16ರಿಂದ 20ರ ತನಕವೂ ನೀವು ವಿಶೇಷ ಜಾಗರೂಕರಾಗಿರಿ. ರಾಜಭಯ, ಕಾರ್ಯಹಾನಿ, ಅಪಮೃತ್ಯುವೇ ಮೊದಲಾದ ಅನಿಷ್ಟಗಳಿಗೆ ಎಡೆಯಿದೆ.

ಮಿಥುನರಾಶಿ—

ಅಂಗಾರಕ ಮತ್ತು ಶನಿ ಇವರೀರ್ವರು ನಿಮಗೆ ಬಹಳ ತಂಟೆಮಾಡಲಿರುವರು. ಮನಸ್ಸನ್ನು ಸ್ಥಿರವಾಗಿಡಲು ಬಹಳ ಕಷ್ಟ ಕಾಣುವುದು. ಆದುದರಿಂದಲೇ ವಿದ್ಯಾಭಿಲಾಷಿಗಳಾದವರಿಗೆ ವಿಪರೀತ ಅನಿಷ್ಟವು ತದ್ಭಾಗದಲ್ಲಿ ಸಂಭವಿಸಲಿದೆ, ಪತ್ನಿಯಿಂದ ಶೋಕ ಸಂಭವಿಸಲಿದೆ. ಆದರೂ ಇತರ ಗ್ರಹರ ಬಲದಿಂದಲಾಗಿ ಈ ಹಾನಿಗಳಿಂದ ಪಾರಾಗಲು ನೀವು ಸಮರ್ಥರಾಗುವಿರಿ. ಇಷ್ಟಾರ್ಥಗಳು ಅತ್ಯಲ್ಪ ಅವಧಿಯಲ್ಲಿಯೇ ಕೊನೆಗೊಂಡು ನಿಮ್ಮ ಸಂಪದ್ಭಾಗವನ್ನೂ ಹೆಚ್ಚಿಸಲಿರುವವು. ಬುದ್ಧಿ ಬಲದಿಂದ ಧನ ಜನವನ್ನು ಸಂಗ್ರಹಿಸಿ ಶತ್ರುಜನರನ್ನು ಉಪೇಕ್ಷೆಮಾಡುವಿರಿ. ಸಂತಾನಪ್ರಾಪ್ತಿಯ ಯೋಗವು ಕಂಡುಬರುವುದು. ಸ್ತ್ರೀ ಸುಖವೂ ಆಕೆಯ ಮೂಲಕ ಧನಪ್ರಾಪ್ತಿಯೂ ಆಗುವ ಸಂಭವವಿದೆ. ವಾರಾಂತ್ಯದ ಮೂರು ದಿನಗಳು ಉತ್ತಮವಿರುವುದರಿಂದ ನಾನಾ ಪ್ರಕಾರದಿಂದ ಲಾಭವೂ ಮಿತ್ರ ಜನರ ಸಮಾಗಮವೂ ಇಷ್ಟಸಿದ್ಧಿಯಿಂದ ಮಾನಸಾನಂದವೂ ಈ ದಿನಗಳಲ್ಲಿ ಉಂಟಾಗಲಿವೆ.

ಕರ್ಕಾಟಕರಾಶಿ—

'ಭವಿತವ್ಯಂ ಭವತ್ಯೇವ ನಾರಿಕೇಳಫಲಾಂಬುವತ್" ಕಲ್ಪವೃಕ್ಷದ ಕೊನೆಯಲ್ಲಿರತಕ್ಕ ಎಳನೀರಿನಲ್ಲಿ ನೀರು ಹೇಗೆ ತುಂಬುವುದೋ ಅಂತೆಯೇ ಮುಂದೆ ಸಂಭವಿಸತಕ್ಕ ಇಷ್ಟಗಳಾಗಲಿ ಅನಿಷ್ಟಗಳಾಗಲಿ ಬಂದೇ ತೀರುವವು. ಅದರ ಫಲ ಭೋಗಿಸುವುದು ನಮ್ಮ ಕರ್ತವ್ಯ. ಈ ವಾರದಲ್ಲಿ ಕೂಡ ನಿಮ್ಮ ವಿಚಾರವು ಬಹಳ ಕಷ್ಟಕ್ಕಿಟ್ಟದೆ. ಮನೋರೋಗವು ಅಪ್ರತ್ಯಕ್ಷವಾಗಿ ಒಳಗಿಂದೊಳಗೇನೇ ಕೊರೆಯುತ್ತಿರುವುದು. ಇಂತಹ ಕಷ್ಟ ಕಾಲದಲ್ಲಿ ನಿಮಗೆ ನಿಮ್ಮವರೂ ಕೂಡ ವಿರೋಧಿಗಳಂತೆ ವರ್ತಿಸುವದಲ್ಲದೆ ನಿಮ್ಮನ್ನು ಆ ಪತ್ಸಮುದ್ರದಿಂದ ಪಾರುಮಾಡಲು ಯೋಚಿಸರು. ಲೋಕ ರೂಢಿಯೇ ಹಾಗಿರುವುದು ಇದು ಗುಣವಂತರ ಕಾಲವಲ್ಲ, ಹಣವಂತರದು. ಆರೋಗ್ಯವು ಪೂರ್ತಿ ಕೆಡುವುದು. ಖರ್ಚುಗಳು ವಿಪರೀತ ವೃದ್ಧಿಯಾಗಿ ನಿತ್ಯ ಜೀವನವು ಬಹಳ ಕಷ್ಟಕ್ಕೆ ಬರುವುದು. ತಾ. 16-17-23 ಈ ದಿನಗಳು ಇದ್ದುದರಲ್ಲಿ ಉತ್ತಮಗಳಾಗಿವೆ.

ಸಿಂಹರಾಶಿ—

ಗೃಹದಲ್ಲಿನ ತಾಪತ್ರಯಗಳು ಹೆಚ್ಚಾಗುತ್ತಾ ಬರುವವು ಈ ವಾರದಲ್ಲಿ. ನಿಮ್ಮ ಪತ್ನಿಗೂ ನಿಮಗೂ ಕಲಹವಾಗುವ ಸಂಭವವಿದೆ. ಎಲ್ಲಾ ವಿಷಯಗಳಲ್ಲೂ ನಿಮಗೆ ವಿರೋಧವಾಗಿ ವರ್ತಿಸುವಳಾಕೆ. ಪುತ್ರರೂ ಕೂಡ ನಿಮ್ಮ ಚಿಂತೆಗೆ ಕಾರಣರಾಗುವರು. ಹೆಚ್ಚೇಕೆ ಇವರಿಂದ ನೀವು ವಿಯೋಗಹೊಂದುವಿರಿ. ನಿಮ್ಮ ದೇಹವೂ ಆರೋಗ್ಯವಾಗಿರದು. ಅಭಿವೃದ್ಧರಾದ ಶತ್ರುಗಳು ವಿಘ್ನಸಮೂಹಗಳನ್ನು ನಿಮ್ಮ ಮುಂದೆ ತಂದೊಡ್ಡಿ ನಿಮ್ಮನ್ನು ಕರ್ತವ್ಯ ಭ್ರಷ್ಟರನ್ನಾಗಿ ಮಾಡಲು ಸತತ ಪ್ರಯತ್ನಿಸುತ್ತಿದ್ದಾರೆ. ಆದರೂ ನೀವು ಒಳ್ಳೇ ವಿಚಾರಶೀಲರೂ ಮಾಗ್ನಿಗಳೂ ಆಗಿರುವುದರಿಂದ ಸಾಮಾನ್ಯ ಆಪತ್ತುಗಳನ್ನು ದೂರದಿಂದಲೇ ನಿವೃತ್ತಿಗೊಳಿಸುವಿರಿ. ನಿಮ್ಮ ಬುದ್ಧಿವಂತಿಕೆಗೆ ತಕ್ಕದಾಗಿ ಮಾನಮರ್ಯಾದೆಗಳೂ ಖರ್ಚಿಗೆ ಬೇಕಷ್ಟು ಉತ್ಪತ್ತಿಯೂ ಲಭಿಸುವದು. ವಾರಾವಧಿಯ ಐದು ದಿನಗಳು ನಿಮ್ಮ ಭಾಗಕ್ಕೆ ಆರೋಗ್ಯ, ಧನಲಾಭ, ರಿಪುನಾಶ ಸುಖದಾಯಕಗಳಾಗಿರುತ್ತವೆ.

ಕನ್ಯಾರಾಶಿ—

ಈ ವಾರದಲ್ಲಿ ನಿಮ್ಮ ಭವಿಷ್ಯವು ಬಹಳ ಕೆಟ್ಟು ಹೋಗಿರುವುದು: ಹೊಟ್ಟೆನೋವು, ಜ್ವರ ಇತ್ಯಾದಿ ಒಂದಲ್ಲೊಂದು ಕಾಹಿಲೆಯು ನಿಮ್ಮ ಶರೀರವನ್ನು ಬಿಟ್ಟಿರದು. ಜನತೆಯಲ್ಲಿ ಹೆಚ್ಚಿನವರೊಡನೆ ಕಲಹವಾಗುವುದರಿಂದ ಎಲ್ಲರೂ ನಿಮ್ಮ ಭಾಗಕ್ಕೆ ಶತ್ರುಗಳಂತೆ ವರ್ತಿಸುವರು. ಕೆಲವು ಮಿತ್ರರು ಇದಿರಿಂದೊಂದು ರೀತಿ ಬೆಂಗಡೆಯಿಂದೊಂದು ರೀತಿ ವರ್ತಿಸಿ ನಿಮ್ಮನ್ನು ಮೋಸಕ್ಕೆ ಸಿಕ್ಕಿಸುವರು. ಇವರೇ ಈ ರೀತಿ ವರ್ತಿಸಿದ ಮೇಲೆ ಶತ್ರುಜನರ ವಿಚಾರ ಕೇಳಬೇಕೇ? ಸಮುದ್ರಕ್ಕೇನೇ ಹೋಗಿ ಇತರ ನದಿಗಳು ಸೇರುವಂತೆ ಮುಂಚೆಯೇ ಅತಿದುಃಖಿತರಾಗಿದ್ದ ನಿಮಗೇನೇ ಅನೇಕ ದೋಷಾನಿಷ್ಟಗಳು ಬಂದು ಸೇರುವವು. ಈದಾವ ಚಿಂತೆಯಿಂದ ಈ ಊರೇ ಬೇಡವೆಂದು ನಿಮಗನ್ನಿಸೀತು. ಸಂತೋಷ ಕಾಲದಲ್ಲಿ ಹಿಗ್ಗದೆಯೂ ಕಷ್ಟಕಾಲದಲ್ಲಿ ಕುಗ್ಗದೆಯೂ ಇರುವದು ಧೀರರ ಲಕ್ಷಣವು. ಆದಕಾರಣ ಧೀರರಾದ ನೀವು ಕಷ್ಟಸಹಿಷ್ಣುಗಳಾಗಿದ್ದಲ್ಲಿ ಮುಂದಾದರೂ ಒಳ್ಳೆಯ ಕಾಲ ಬಂದೀತು. ತಾ. 16, 17 ಮತ್ತು 23ನೇ ದಿನಗಳು ವಿಶೇಷ ಹಾನಿಕಾರಕಗಳಾಗಿರುವವು.

ತುಲಾರಾಶಿ—

ಸುಖಲಾಭ ಸಾಮ್ರಾಜ್ಯದಲ್ಲಿ ಓಲಾಡುತ್ತಿರುವ ನಿಮಗೆ ಸಧ್ಯ ಏನೊಂದೂ ಹಾನಿಯಿಲ್ಲವು. ತಮ್ಮ ಭಾಗಕ್ಕೆ ಸಕಲ ಗ್ರಹರೂ ಉದಾರಬುದ್ಧಿಯಿಂದಲೋ ಎಂಬಂತೆ ನಿಮ್ಮ ಅದೃಷ್ಟವಶದಿಂದ ಒಳ್ಳೆಯ ಸ್ಥಾನವನ್ನಾಕ್ರಮಿಸಿರುವರು. ಇದು ನಿಮ್ಮ ಭಾಗ್ಯಕಾಲವೆನಬೇಕು. ಇಂತಹ ಸಮಯವು ಸಿಗುವದು ಬಹಳ ದುರ್ಲಭ. ಈ ಕಾಲದಲ್ಲಿ ನೀವು ಉದ್ಯೋಗಹೀನರಾಗಿ ಆಲಸ್ಯದಿಂದ ಕಾಲಕಳೆದರೆ ನೀವು ಮನುಷ್ಯ ಕೋಟಿಯಲ್ಲೇ ಗಣನಾರ್ಹರಲ್ಲೆಂದು ಕಂಠೋಕ್ತವಾಗಿ ಹೇಳುವೆನು. ಮನೆ ಬಾಗಿಲಿಗೆ ಭಾಗೀರಥಿ ಬಂದಂತಿದೆ ಈ ಕಾಲ. ಇಷ್ಟಾರ್ಥಗಳನ್ನು ತಪ್ಪದೆ ಪೂರೈಸಿರಿ. ಒಳ್ಳೇ ಕೀರ್ತಿವಂತರಾಗುವ ಕಾಲವಿದು. ಆದಕಾರಣ ಸ್ವಲ್ಪ ಕಣ್ಣು ತೆರೆದು ನಿಮ್ಮ ನಿಮ್ಮ ಕಾರ್ಯದಲ್ಲಿ ತತ್ಪರರಾಗಿ ಅದೃಷ್ಟಫಲಭೋಕ್ತೃಗಳಾಗಿರಿ. ತಾ. 21, 22, 23 ಈ ದಿನಗಳು ಸರ್ವಶ್ರೇಷ್ಠಗಳಾಗಿವೆ.

ವೃಶ್ಚಿಕರಾಶಿ—

"ಹರಿ ಕೊಟ್ಟ ಕಾಲಕೆ ಉಣಲಿಲ್ಲ, ಸಿರಿ ಕೊಡದ ಕಾಲಕೆ ಬಾಯಿ ಬಿಡುವರ್ಲೋ ಪ್ರಾಣಿ" ಎಂಬ ದಾಸರ ನುಡಿಯಂತೆ ದೈವಾನುಗ್ರಹವಿಲ್ಲದ ಈ ಕಾಲದಲ್ಲಿ ಯಾವ ಕೆಲಸ ಮಾಡಿದರೇನು. ಎಷ್ಟು ಕಷ್ಟಪಟ್ಟರೇನು ಅದೃಷ್ಟವಿದ್ದಷ್ಟೇ ಸಿಗುವುದಲ್ಲದೆ ಹೆಚ್ಚಿಗೆ ಸಿಗಲಾರದು. ಈ ವಾರವು ನಿಮಗೆ ಬಹಳ ಕಷ್ಟದಾಯಕವಾಗಿರುವುದೆಂದರೆ ನಿಮಗೆ ಬಹಳ ಮನಸ್ಸಂಕೋಚವಾಗಬಹುದು. ಆದರೆ ಇದ್ದುದನ್ನು ಮರೆಮಾಚಿ ಕಿವಿಗಿಂಪಾಗುವಂತೆ ಹೇಳುವುದು ಧರ್ಮವಲ್ಲವು. ಆದ್ದರಿಂದಲೇ, ಕವಿಗಳು 'ಹಿತಂ ಮನೋಹಾರಿ ಚ ದುರ್ಲಭಂ ವಚಃ' ಹಿತಕರವಾಗಿಯೂ ಮನಸ್ಸಿಗೆ ಆನಂದಕರವಾಗಿಯೂ ಇರತಕ್ಕ ಮಾತು ಸಿಗುವದು ಬಹಳ ದುರ್ಲಭವೆಂದಿರುವರು. ಯಾವ ಸಮಯಕ್ಕೆ ಯಾವ ರೀತಿಯ ಪರಿವರ್ತನೆಯಾಗುವುದೆಂದೂ ಹೇಳಲು ಸಾಧ್ಯವಿಲ್ಲ. ಆದರಲ್ಲೂ ತಾ. 18ರಿಂದ 22ರವರೆಗೆ ವಿಶೇಷ ಹಾನಿ ಕಾಣುವುದು.

ಧನುರಾಶಿ—

ಮನಸ್ಸಿಗೆ ಸುಖವಿಲ್ಲದಿದ್ದವನಿಗೆ ಏನಿದ್ದರೇನ ! ಆದರೊಂದಿಗೆ ದೈಹಿಕ ಸುಖವೂ ಕೆಟ್ಟದೆ ಎಂದ ಮೇಲೆ ಉರಿಯುತ್ತಿರುವ ಅಗ್ನಿಯಲ್ಲಿ ತುಪ್ಪಸುರಿದಂತೆ ಮತ್ತಷ್ಟು ದಹಿಸುತ್ತದೆ. ಇದರಿಂದಾಗಿಯೇ ಮನಸ್ಸು ಭಯದಿಂದ ಕಾತರವಾದ ಹರಿಣಿಯಂತೆ ಒಂದರೆಕ್ಷಣವೂ ಸ್ಥಿರವಾಗಿರದು. ಶತ್ರು ಜನರು ಬಹುವಿಧವಾಗಿ ಅಪಕೃತಿ ಮಾಡಲೆಳಸಿ ನಿಮ್ಮ ಮಾನಹಾನಿಗೈಯಲಿರುವರು. ಅನೇಕ ಇಷ್ಟವಾದ ವಸ್ತುಗಳು ನಿಮ್ಮ ಕೈತಪ್ಪಿ ಹೋಗುವವು. ಅಕಸ್ಮಾತ್ ದೇಹದಲ್ಲಿ ಗಾಯಾದಿಗಳೂ ಆಗಲಿವೆ. ಸರ್ವಾವಯವಗಳಲ್ಲೂ ಸೆಳೆನೋವು ಕಂಡುಬರುತ್ತದೆ. ಆದರೂ ನಿಮ್ಮ ಗವದ್ಭಾಗವು ಕೆಡದಿರುವುದರಿಂದ ಈ ಭಾಗದಲ್ಲಿ ಹಾನಿಯಿಲ್ಲವು. ಆಪ್ತಜನರೂ ಕುಟುಂಬಿಕರೂ ಹೆಚ್ಚುವರು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಿರುವಿರಿ. ತಾ. 18, 19, 20 ಈ ದಿನಗಳ ಹೊರತು ಬಾಕಿ ದಿನಗಳು ಹಿತಕರವಲ್ಲವು.

ಮಕರರಾಶಿ—

ಈ ವಾರವು ನಿಮಗೆ ಹೆಚ್ಚಿನ ವಿಷಯಗಳಲ್ಲಿ ಶುಭಫಲಪ್ರದವಿರುವುದು. ಅದು ಸಂಪೂರ್ಣ ನಿಮ್ಮ ಅನುಭವಕ್ಕೆ ಬರಬೇಕೆಂದಿದ್ದರೆ ನೀವು ನಿರ್ವಂಚನೆಯಿಂದ ಕಾರ್ಯವನ್ನು ಮಾಡಬೇಕು. ವಂಚನೆಯು ಮನುಷ್ಯನ ಪ್ರಗತಿಗೆ ವಿಘ್ನಕಾರಿಯು. ಆದಕಾರಣ ನಿಮ್ಮ ನಡತೆಯನ್ನು ಚೆನ್ನಾಗಿ ತಿದ್ದಿಕೊಳ್ಳಿರಿ. ನಿಮಗೆ ಯಾವ ಭಾಗದಲ್ಲೂ ಹಾನಿಬಾರದು. ಆರಂಭಿಸಿದ ಕಾರ್ಯಗಳಲ್ಲಿ ಜಯಲಾಭಗಳು ಅನಾಯಾಸವಾಗಿ ದೊರೆಯುವವು. ಶತ್ರುಸಮೂಹಗಳು ಕೇಸರಿಯನ್ನು ಕಂಡ ಮೃಗಗಳಂತೆ ಅಲ್ಲೇ ಮಾಯವಾಗುವರು. ಸಕಲೋಪಕರಣದಿಂದ ಕೂಡಿ ಸ್ತ್ರೀಸುಖವನ್ನನುಭವಿಸಿರಿ. ಸಾಂಸಾರಿಕ ವ ದೈಹಿಕ ವ ಮಾನಸಿಕ ಚಿಂತೆಗಳೊಂದೂ ನಿಮ್ಮನ್ನು ಪೀಡಿಸಲಾರವು. ತಾ. 18-19-20 ಮತ್ತು 23 ಈ ದಿನಗಳಲ್ಲಿ ಧನ ಮತ್ತು ಆರೋಗ್ಯದಲ್ಲಿ ದೃಷ್ಟಿಯಿಡಿರಿ. ಹಾನಿ ಸಂಭವಿಸಲಿವೆ. ಸ್ತ್ರೀ ಜನತೆಯೊಡನೆ ವ್ಯವಹಾರ ಮಾಡುವಾಗ ಮಿತಭಾಷಿಗಳಾಗಿರಿ. ಕಲಹವಾದೀತು.

ಕುಂಭರಾಶಿ—

ನಿಮ್ಮ ವಿಷಯದಲ್ಲಿ ಈ ವಾರ ಯಾವ ಪರಿವರ್ತನೆಯೂ ಉಂಟಾಗದು. ಆಲಸ್ಯವು ನಿಮ್ಮಲ್ಲಿಲ್ಲದ ಕಾರಣ ಯಾವಾಗಲೂ ಒಂದಲ್ಲೊಂದು ಕಾರ್ಯದಲ್ಲೇ ಕಾಲವನ್ನು ವ್ಯಯಿಸುವಿರಲ್ಲದೆ ವ್ಯಥಾ ಕಾಲಹರಣಮಾಡುವ ಬುದ್ಧಿ ನಿಮಗಿಲ್ಲ. ಆದ್ದರಿಂದಲೇ ನಿಮ್ಮ ದಿನಗಳು ಸುಖದಿಂದಲೇ ಕಳೆಯುತ್ತಿವೆ. ನಾನಾ ವಿಷಯದಲ್ಲಿ ನೀವು ಯೋಚಿಸದಿದ್ದರೂ ಆಯಾ ದಿನಗಳು ಸುಖವಾಗಿಯೇ ಕಳೆಯುವವು. ಸತತ ಉದ್ಯೋಗಶೀಲರಿಗೆ ಒಂದಲ್ಲೊಂದು ಕಾಲದಲ್ಲಾದರೂ ಅದರ ಪ್ರತಿಫಲವು ಪೂರ್ತಿ ದೊರೆಯುವುದು. ಆದರೆ ನಿಮಗೆ ಕಣ್ಣುಗಳಲ್ಲಿ ನೋವೂ ದೇಹದಲ್ಲಿ ಆಲಸ್ಯವೂ ತೋರಿಬರಬಹುದು. ಕಂಡದ್ದನ್ನು ಕಂಡ ಹಾಗೆ ಹೇಳುವುದರಿಂದ ಕೆಲವರೊಡನೆ ಕಲಹವೂ ನಿಷ್ಠುರವೂ ತಿರಸ್ಕಾರವೂ ಉಂಟಾಗಲಿದೆ. ತಾ. 16-17 ಮತ್ತು 21-22 ಈ ದಿನಗಳಲ್ಲಿ ಧನ ಮಾನಗಳಿಗೆ ಹಾನಿಯೂ, ಕಾರ್ಯಕ್ಕೆ ವಿಘ್ನಗಳೂ ಸಂಭವಿಸಲಿವೆ.

ಮೀನರಾಶಿ—

ತತ್ಕಾಲದಲ್ಲಿನ ಗ್ರಹಸ್ಥಿತಿಯಿಂದ ನಿಮ್ಮ ಭವಿಷ್ಯವು ಬಹಳ ಹೀನಾಯಮಾನವಾಗಿರುವುದು. ವಿಷವಹ್ನಿ ಸಂಬಂಧಗಳಿಂದ ಕೆಡುಕು ಸಂಭವಿಸಲಿರುವುದು. ಆತ್ಮೀಯ ಜನರ ವಿಯೋಗವು ಉಂಟಾಗುವುದು. ಕೆಲವು ವೇಳೆ ಶತ್ರುಗಳನ್ನೇ ಶರಣೆನ್ನುವ ಪ್ರಸಂಗ ಬರಬಹುದು. ಶತ್ರುಗಳಿಂದ ಕಾರ್ಯದಲ್ಲಿ ಅಪಜಯವಾಗುವುದು. ಮಾರ್ಗಾತಿಕ್ರಮಣಕ್ಕೆ ಈ ವಾರವು ಎಷ್ಟಕ್ಕೂ ಹಿತಾವಹವಲ್ಲವು. ಖರ್ಚಿನ ಮಾರ್ಗಗಳು ವಿಶೇಷವಾಗಿ ಸಾಕಷ್ಟು ಉತ್ಪತ್ತಿಯಿಲ್ಲದೆ ಪೇಚಾಡುವ ಪ್ರಸಂಗ ಬರುವುದು. ದೇಹದಲ್ಲಿ ಆಯಾಸ ಮತ್ತು ಉದರರೋಗ ಇತ್ಯಾದಿಗಳಿಂದ ಪೀಡಿತರಾದ ನಿಮಗೆ ಮನೋರೋಗವು ದಿನೇದಿನೇ ವೃದ್ಧಿಯಾಗುವುದು. ಮೋಕ್ಷಸಂಬಂಧವಾಗಿ ಕೆಲವರಲ್ಲಿ ಕಲಹವಾಗಲಿದೆ. ಸಾಂಸಾರಿಕ ಪರಿಸ್ಥಿತಿಯೂ ತೃಪ್ತಿಕರವಾಗಿಲ್ಲದಿರುವುದರಿಂದ ಮನೋನೆಮ್ಮದಿಯುಂಟಾಗದು. ತಾ. 16, 17, 21, 22 ಈ ದಿನಗಳಲ್ಲಿ ಮಿತ್ರರ ಬಲದಿಂದ ಸಂತೋಷವನ್ನು ಪಡೆಯಲಿರುವಿರಿ.

Established] [1906

THE

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	**Rs. 486 Lakhs**
Annual income Exceeds	**Rs. 28 Lakhs**
Total Assets Exceed	**Rs. 100 Lakhs**
Total claims paid over	**Rs. 36 Lakhs.**

The oldest and largest Life Assurance Company of South India, having 33 years of record service.

A POLICY IN THE UNITED INDIA COMBINES PERFECT SAFETY WITH PRUDENCE.

BRANCHES ALL OVER INDIA.

WANTED AGENTS

For particulars, please apply to—

THE BRANCH MANAGER,
The United India,
Life Assurance Company Ltd.
BLOCK No. 2, Felix Fai Bazaar,
BRANCH, MANGALORE S. K.

OR

K. Keshava Shenoy, M. A.
Organiser, Shantiniketan,
PENTLENDPET,
MANGALORE

Degrees: Books: Medicines.

Free H L. M. S., H. M. B., H. M. D. etc Free Homeo-Ayur-Unani-Naturo degrees by post also—Practitioners also get soon. Homeo Materiamedica, Rs. 5. Homeo Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India)

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಮಾರ್ಕ ಮುಲಾಮು —

ಇಷ್ಟರ ವರೆಗಿನ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ಮಾರ್ಕ ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಮಾಲಿನ್ಯವನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬ ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1 ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸ್ಥಿರಮು ಠೇವಣಾತಿ ನೇಕಡ 6ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager,* — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಳಕೆಯಾರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಸುಪ್ತತ್ವದಿಂದ ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚು, ಶೈತ್ಯ, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2—8—0.

ಕಸ್ತೂರಿಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ

ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅತಿಕಸ್ರಾವ, ಸೊಂಟನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ

ಚಿಕ್ಕಮಕ್ಕಳಿಗೆ ಹುಟ್ಟಿದಂದಿನಿಂದ ಉಪಯೋಗಿಸತಕ್ಕ ಬಂದಿಲ್ಲ ಪತ್ರ ಸಂಬಂಧವಾದ ಎಲ್ಲಾ ರೋಗಗಳನ್ನೂ ಪರಿಹರಿಸಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಧ್ವೀಕರ ಕಸ್ತೂರೀ ಮಾತ್ರೆ" ಮತ್ತು "ಧ್ವೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

NAVABHARAT BOOK DEPOT

BOOK-SELLERS & PUBLISHERS

Church Road-Udipi.

ನಮ್ಮಲ್ಲಿ

ಎಲ್ಲಾ ತರದ ಶಾಲಾಪುಸ್ತಕಗಳೂ

ಲೈಬ್ರೆರಿಗೆ ಬೇಕಾದ ಪುಸ್ತಕಗಳೂ

ದೊರೆಯುತ್ತವೆ.

ಕೆಟಲಾಗಿಗೂ

ಇತರ ಮಾಹಿತಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು

ಚರ್ಚ್‌ರೋಡ್ : : ಉಡುಪಿ

ಅತ್ಯಲ್ಪ ಖರ್ಚು | **ಪುಣ್ಯಾರ್ಜನೆಗೆ** | ಅತ್ಯುತ್ತಮ ಸಮಯ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. — ಕೊಡಿಯಾಲಬೈಲು

2ನೇ ಮಖೆ — 3ನೇ ಮಖೆ

ತಾರೀಕು 5-3-1939 ಮತ್ತು 6-3-39

ಮಖೆಜಾತ್ರೆ

ತಾರೀಕು 13-3-1939 ಮತ್ತು 14-3-39

ಪುಣ್ಯಪ್ರದಾಯಿನಿ ನೇತ್ರಾವತಿ ಮತ್ತು ಕುಮಾರಧಾರಿ ನದಿಗಳ ಸಂಗಮಸ್ಥಾನವಾದ ಉಪ್ಪಿನಂಗಡಿಯಲ್ಲಿ ನಡಿಯುವ
ಮಖೆಜಾತ್ರೆ ಸಮಯದಲ್ಲಿ ಉಪ್ಪಿನಂಗಡಿಗೆ ಅತ್ಯಲ್ಪ ಖರ್ಚಿನಲ್ಲಿ ಹೋಗಿ ಸಂಗಮಸ್ನಾನಮಾಡಿ
ಪುಣ್ಯಾರ್ಜನೆಮಾಡಲಿಕ್ಕನುಕೂಲ ಸಮಯ.

ಇಂತಹ ಸುಸಂಧಿಯನ್ನು ಕಳಕೊಳ್ಳದಿರಿ.

ಪ್ರಯಾಣಿಕರ ಪ್ರಯಾಣ ಸೌಕರ್ಯಗಳ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು

JOINT MANAGERS,

The Joint Booking Office
KODIALBAIL, Mangalore

The Combined Booking Agency,
MANGALORE

Supply Agency Limited.
(BANKERS)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6	Months	4% p. a.
7 to 11	„	5% „
12 to 18	„	6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

General Supplies Limited.
UDIPI

PROPRIETORS

Sri Bharata Vastu Mandira,
Thulunad Stationery Mart.
Manipal Power Press,
Thulunad Press,
Antaranga

THE BEST MEDIUM FOR ADVERTISEMENT

Yugadi Special of Antaranga

to be published on **16—4—1939**

pages exceed	....	100
copies exceed	....	10,000
single copy		0 2 0

ತುಳುನಾಡ್ ತಿಲಕ ಪಂಚಾಂಗ

ಬೆಲೆ ೦—೧—೦

ಮಾರಾಟಕ್ಕೆ ತಯಾರಾಗಿದೆ.
ವ್ಯಾಪಾರಿಗಳಿಗೆ ಧಾರಾಳ ಕಮಿಶನ್
ಬೇಕಾದವರು ತರಿಸಿಕೊಳ್ಳಬಹುದು.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 351

NAVAYUGA

ನವಯುಗ

23-3-1939



ತ್ರಿಪುರಿ ಕಾಂಗ್ರೆಸ್ ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲು ತಯಾರಿಸಿದ ಚಿತ್ತಾಕರ್ಷಕ ರಥ

ತ್ರಿಪುರಿಯಲ್ಲಿ ವಿಷ್ಣುದತ್ತ ನಗರದ ಪ್ರವೇಶದ್ವಾರವೊಂ

ಬಲು ಸುಲಭ ದರದಲ್ಲಿ

- ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!
- ನಾವು ನಮ್ಮನ್ನೇ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀನಿವಾಸ ಹಿಂದೂ ಹೋಟೆಲ್

(ಸ್ಥಾಪನೆ 1926)

ವಿಠಲ್‌ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotal

VITTALBHAI PATEL ROAD,
GIRGAUM - - - BOMBAY.

ಎರಡನೇ ಮೈಸೂರು ಕಾಂಗ್ರೆಸ್ ಅಧಿವೇಶನ ಸ್ವಾಗತ ಕಮಿಟಿಯವರ ಆಶ್ರಯದಲ್ಲಿ

ವಿದುರಾಶ್ವತ್ಥ

ಖಾದಿ, ಸ್ವದೇಶಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನ

ಎಪ್ರಿಲ್ 12ನೇ ತಾರೀಖಿನಿಂದ 19ನೇ ತಾರೀಖಿನ ವರೆಗೆ

ವಿದುರಾಶ್ವತ್ಥ ಮಹಾಕ್ಷೇತ್ರದಲ್ಲಿ

ನಡೆಸಲಾಗುತ್ತದೆ

ಪ್ರದರ್ಶನದ ಕೈಪಿಡಿಯೊಂದನ್ನು ಇದರೊಡನೆ ಪ್ರಕಟಿಸಲಾಗುವುದು.

ಸ್ಥಳ (ಸ್ಟಾಲು) ಮತ್ತು ಜಾಹೀರಾತುಗಳಿಗೆ ಬರೆಯಿರಿ.

ಬಿ. ಎನ್. ಎಸ್. ರಾಜನ್ ಅಂಡ್ ಬ್ರದರ್, ಟ್ರೇಡ್‌ಮಾರ್ಕ್ ಮತ್ತು ಪಬ್ಲಿಶರ್ ಮಲ್ಲೇಶ್ವರ ಪ್ರೋಸ್ಟ್, (ಬೆಂಗಳೂರು ಸಿಟಿ.)	ಅ ಥ ವಾ	ಕಾರ್ಯದರ್ಶಿ ಎಕ್ಸಿಬೀಷನ್ ಕಮಿಟಿ ಇಂಡಿಯನ್ ಪ್ರೆಸ್, ಬಳೆಪೇಟೆ ಬೆಂಗಳೂರುಸಿಟಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಪೃದ್ಧಿತಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD

HEAD OFFICE: MANGALORE
BRANCHES: Udipi, Coondapoor, Kaup & Karkal.

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.
Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED

Estd. 1920

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02 800/-.
PRINCIPAL OFFICE: COURT ROAD, UDIPI.
OTHER OFFICES:
UDIPI MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

Transport & Car Owners

ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES - - - - - MANGALORE.

WANTED

Organisers in Taluka centres either on salary or commission basis or both Influential young men need apply. Selected candidates should be prepared to deposit a sum of Rs. 100/-. For full particulars apply with an anna stamp to Box No. 5, C/o **NAVAYUGA. UDIPI**

—ಕೂದಲು ರಂಗು ಕೈಬಿಸಿರಿ—

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬೀಳುವುದು ನಿಲ್ಲುವುದು. ನರೆತಕೂದಲು ಪೂರ್ವ ಕಪ್ಪಾಗಿ ಬೆಳೆಯುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿವೆ. ನಮ್ಮ ತೈಲದ ಯೋಗ್ಯತೆಯನ್ನು ತೋರುವುದಕ್ಕೆ ಅಪ್ರಯೋಜನಕಾರಿಯೆಂದು ರುಜುಪಡಿಸಬಲ್ಲವರಿಗೆ ಕೊಟ್ಟಹಣ ವಾಪಾಸು ಕೊಡುವ ಶರ್ತವಿದೆ. ಅಲ್ಪ ಸ್ವಲ್ಪ ನರೆಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಕಾಲುಪಾಲಿಗೂ ಮಿಕ್ಕಿರುವುದಾದರೆ ರೂ.7 ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

Hazra & Co.,
P. O. Behar Nersery (Darbhanga.

ESTD. 1921
FOUNDER
Sri. A. B. SHETTY, M.L.A.
Parliamentary Secretary, Govt of Madras.
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೨೯
ಉಡುಪಿ, ಗುರುವಾರ ೨೩-೩-೧೯೩೯
Udipi, Thursday 23—3—1939
Vol. XVIII No. 29

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

* ವಿದೇಶ ವಿಚಾರ *

ಹಿಟ್ಲರನು ಜೆಕೊಸ್ಲೋವೇಕಿಯವನ್ನು ಪೂರಾ ನುಂಗಿದ—

"ಮುಸ್ಸೋಲಿನಿಯ ಹಾಗೆ ತಿಂಗಳುಗಟ್ಲೆ ಸನ್ನಾಹಮಾಡುತ್ತ ತನ್ನ ಗುರಿಯಿಲ್ಲಿ ಎಂದು ಜಗತ್ತಿಗೆ ಸಾರುತ್ತ ಹೋಗುವುದು ನನಗೆ ಸೇರುವುದಿಲ್ಲ. ಕೊಳ್ಳಿಗೆ ಮುಂಜಾಗ್ರತೆ ಕೊಡದೆ ನನ್ನ ಬಲವನ್ನೆಲ್ಲ ಪ್ರಯೋಗಿಸಿ ಥಕ್ಕನೆ ಹಾರಿ ಹಿಡಿದು ಮತ್ತೇನಾಗುತ್ತೆಂದು ಸುತ್ತ ನೋಡುವುದು ನನ್ನ ಮೆಚ್ಚಿನ ಉಪಾಯ" ಹೀಗೆಂದು ಮೂರು ವರುಷಗಳ ಹಿಂದೆ ಹಿಟ್ಲರನು ಹೇಳಿದ್ದ. ಹೇಳಿದ್ದನ್ನು ಮಾಡಿಯೇ ತೋರಿಸಿದ. ಮುಸ್ಸೋಲಿನಿಯು ಈ ಮೂರು ವರುಷಗಳಿಂದ ಸ್ಪೈಯಿನಿನ ಹಿಂದೆ ನಿಂತು ಹೇಚಾಡಿಯೂ ಕೊನೆಗೆ ತನಗೇನು ಲಾಭ ಸಿಕ್ಕೀತೆಂದು ಪಿಳಿ ಪಿಳಿ ನೋಡುತ್ತಿದ್ದಂತೆಯೇ ಹಿಟ್ಲರನು ಯುದ್ಧರಂಗಕ್ಕಿಳಿಯದೆಯೇ ಮಧ್ಯಯುರೋಪದ ಒಡೆಯನಾಗಿ ಬಿಟ್ಟ! ಕಳೆದ ಮಾರ್ಚಿಯಲ್ಲಿ ಸದ್ದಿಲ್ಲದೆ ಆಸ್ಟ್ರಿಯವನ್ನು ಬಗಲಲ್ಲಿ ಹಾಕಿಕೊಂಡ. ಸೆಪ್ಟಂಬರದಲ್ಲಿ ಜೆಕೋಸ್ಲೋವೇಕಿಯದ ಒಂದು ತುಂಡಾದ ಸುಡೇಟನನ್ನು ಒಳಗೆ ಹಾಕಿದ. ಈಗ ಉಳಿದುದನ್ನು ನುಂಗಿಬಿಟ್ಟ. ಪ್ರತಿಸರ್ತಿಯೂ ಇಲ್ಲಿಗಾಯಿತು, ಇನ್ನು ಮುಂದುವರಿಸುವುದಿಲ್ಲ. ನನಗಿನ್ನು ರಾಜ್ಯವೇ ಬೇಡ ಎಂಬ ರಾಗ ಹಾಕುತ್ತಲೇ ಬ್ರಿಟಿಷರನ್ನೂ ಫ್ರೆಂಚರನ್ನೂ ಮಂಕುಗೊಳಿಸಿಬಿಟ್ಟ. ಅದನ್ನು ನಂಬಿ ಎಲ್ಲರ ದೃಷ್ಟಿಯೂ ತಲೆಯೂ ಸ್ಪಯಿನ್ ಮತ್ತು ಭೂಮಧ್ಯ ಸಾಗರದ ಕಡೆಗೋ ಫ್ರೆಂಚ ಇಟಾಲಿಯನ ಪ್ರಶ್ನೆಯಲ್ಲೋ ಇರುವಾಗ ಅತ್ತ ಹಿಟ್ಲರನು ತನ್ನ ಚದುರಂಗದ ಕಾಯಿಯನ್ನು ಜೆಕೊಸ್ಲೋವೇಕಿಯದ ಕಳದಲ್ಲಿ ಬಲವಾಗಿ ಒತ್ತಿಟ್ಟ, ಮೇಲೆಯೇ ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟು ಎಲಾ ಹೀಗಾಟವಾಡಿದನೇ! ಆಗಲಿ, ಇನ್ನೇನು ಮಾಡಲಿಕ್ಕಾಗುತ್ತದೆ ಎಂದು ಬೆರಗಾಗಿ ಸುಮ್ಮಗಿದ್ದಾರೆ. ಹಿಟ್ಲರನ ಕಾಯಿ ಹೀಗೆಯೇ ಇನ್ನೆರಡು ಕಳ ಹಾರಿ ರಶ್ಯದ ಗಡಿ ಮುಟ್ಟಲಿಕ್ಕಿದೆ ಎಂದು ಯಾವಾಗ ಎಂಬುದು ಆಟಗಾರನಿಗೇ ಗೊತ್ತಿಲ್ಲದೆ ನೋಟಗಾರರಿಗೆ ಸೋವೂ ತಿಳಿಯದು. ಹಿಟ್ಲರನು ತಾನು ಶಾಂತಿಪ್ರಿಯನೆಂಬುದರ ರಹಸ್ಯ ಇದು. ಯಾವುದರ ಮೇಲೆ ತಾನು ಹಾರಲಿಕ್ಕಿರುವನೋ ಆ ಗಡಿಯಲ್ಲಿ ತನ್ನ ಮಹಾಸೇನಾ ಸಮೂಹವನ್ನು ಒಂದೆರಡು ದಿನಗಳಲ್ಲಿ ಕೂಡಿ ಬರುವಂತೆ ಒಂದು ಆಜ್ಞೆ ಕೊಡುವನು. ಯಾಕೆಂದು ಕೇಳಲು ಯಾರಿಗೂ ಅಧಿಕಾರವಿಲ್ಲ. ಆದಾದ ಕೂಡಲೇ ಆ ನಿರ್ಬಲರಾಜ್ಯಕ್ಕೆ ನೀವು ಸುಮ್ಮನಿರಿ, ನೀವು ಜರ್ಮನರು. ಈಗ ಪ್ರತ್ಯೇಕವಾಗಿದ್ದು ಕೆಡಬೇಡಿರಿ. ನಮ್ಮ ಜರ್ಮನ್ ಮಹಾ ಸಾಮ್ರಾಜ್ಯದ ಪ್ರಜೆಗಳಾಗಿ ಸುಖದಿಂದ ಬಾಳಿ. ನಮ್ಮ ಸೈನ್ಯ ನಿಮ್ಮ ನಾಡೊಳಗೆ ಪ್ರವೇಶಿಸುತ್ತದೆ. ಗಲಾಟೆ ಮಾಡಬೇಡಿ! ಮಾಡಿದರೆ, ನೋಡಿ! ನಿಮ್ಮನ್ನು ಧೂಳು ಹಾರಿಸುವ ಮಹಾಸೈನ್ಯ! ವಿಮಾನ, ಬಾಂಬು, ಫಿರಂಗಿ! ಜೋಕೆ! ಸುಮ್ಮಗಿದ್ದು ಬಿಡಿ ನಿಮಗೆಲ್ಲ ನಾನಿದ್ದೇನೆ. ಎಂದು ಮತ್ತೊಂದು ಆಜ್ಞೆ ಕೊಡುತ್ತಾನೆ. ರಾಜ್ಯವು ಒಳಗೆ ಬೀಳುತ್ತದೆ. ಇದೀಗ ಮೊನ್ನೆ ಜೆಕೋಸ್ಲೋವೇಕಿಯವನ್ನು ಪೂರಾ ನುಂಗಿದ ಹಿಟ್ಲರನ ನೀತಿ.

ಲಂಡನಿನಲ್ಲಿ—ಪೆಲೆಸ್ತಾಯಿನ್ ಪ್ರಶ್ನೆಗೆ ಬ್ರಿಟಿಷರ ಮಧ್ಯಸ್ಥಿಕೆಯ ನಿರ್ಧಾರ

ಪೆಲೆಸ್ತಾಯಿನಿನ ಅರಬ್ ಮತ್ತು ಯೆಹೂದಿಗಳೊಳಗೆ ಸಂಧಾನಮಾಡಲಿಕ್ಕಾಗಿ ಬ್ರಿಟಿಷ್ ಸರಕಾರವು ಅವರ ಪರಿಷತ್ತೊಂದನ್ನು ಲಂಡನಿನಲ್ಲಿ ಜರಗಿಸಿ ಉಭಯ ಪಕ್ಷದ ಹೇಳಿಕೆಗಳನ್ನೂ ಕೇಳಿ ಈಗ ತನ್ನ ಮಧ್ಯಸ್ಥಿಕೆಯ ತೀರ್ಮಾನವನ್ನು ಅವರ ಮುಂದಿಟ್ಟಿದೆ.—ಪೆಲೆಸ್ತಾಯಿನಿನಲ್ಲಿ ಅರಬ್ಬರೂ ಯೆಹೂದಿಗಳೂ ಅನ್ಯೋನ್ಯ ಮಿತ್ರರಾಗಿ ಸೌಹಾರ್ದದಿಂದ ಕೂಡಿ ತಮ್ಮದೇ ಆದ ಒಂದು ರಾಜ್ಯಭಾರ ಪದ್ಧತಿಯನ್ನು ಮಾಡಿಕೊಳ್ಳುವ ತನಕ—ಅವಧಿಯಿಲ್ಲದ ಈ ತತ್ಕಾಲದಲ್ಲಿ—ಬ್ರಿಟಿಷ್ ಹೈ ಕಮಿಶನರ ಅಂಕೆಗೊಳಗಾಗಿರುವ ಒಂದು ಎಡ್ವೈಜರಿ ಬೋರ್ಡು ಮತ್ತು ಎಕ್ಸಿಕ್ಯೂಟಿವ್ ಕೌನ್ಸಿಲ್ ಮೂಲಕ ಪೆಲಸ್ತಾಯಿನಿನ ಆಳ್ವಿಕೆ ನಡೆಯಬೇಕು. ಈ ಎಕ್ಸಿಕ್ಯೂಟಿವ್ (ಕಾರ್ಯನಿರ್ವಾಹಕ) ಮತ್ತು ಎಡ್ವೈಜರಿ (ಹಿತಬೋಧಕ) ಸಭೆಗಳಿಗೆ ಸದಸ್ಯರನ್ನು ಅರಬ್ ಮತ್ತು ಯೆಹೂದಿಗಳು ಚುನಾಯಿಸಿ ಕಳುಹಿಸುವುದಲ್ಲ. ಒಂದನೆಯದರಲ್ಲಿ ಬ್ರಿಟಿಷ್ ಅಧಿಕಾರಿಗಳೂ ಹೈ ಕಮಿಶನರಿಂದ ನಾಮಧಾರಿಗಳಾಗುವ ಅರಬ್ ಮತ್ತು ಯೆಹೂದಿ ಮಂತ್ರಿಗಳೂ ಇರುವರು. ಈ ಮಂತ್ರಿಗಳಿಗೆ ಯಾವ ಖಾತೆಯ ಅಧಿಕಾರವೂ ಕೊಡಲ್ಪಡುವುದಿಲ್ಲ. ಎರಡನೆಯದರಲ್ಲಿ ಅರಬ್ ಮತ್ತು ಯೆಹೂದಿಗಳ ಪ್ರಜಾ ಸಂಖ್ಯಾ ಪರಿಮಾಣಾನುಸಾರ ಪ್ರತಿನಿಧಿಗಳು ನಾಮಧಾರಿಗಳಾಗಿ (ಚುನಾಯಿತರಾಗಿಯಲ್ಲ) ಇದ್ದು ಹೈ ಕಮಿಶನರ ಅಂಕೆಗೊಳಗಾಗಿ ಸರಕಾರವನ್ನು ನಡೆಯಿಸಬೇಕು. ಪ್ರಕೃತ ಐದು ವರುಷಗಳ ತನಕ ವಾರ್ಷಿಕ ಹದಿನೈದು ಸಾವಿರದಂತೆ ಯೆಹೂದಿಗಳು ಹೊಸದಾಗಿ ಬಂದು ಅಲ್ಲಿ ನೆಲೆಸಲು ಬಿಡಲಾಗುವುದು. ಆಮೇಲೆ ಈ ವಿಷಯ ಪುನರಾಲೋಚನೆಮಾಡತಕ್ಕದ್ದು. ಪೆಲೆಸ್ತಾಯಿನು ಮೂರು ವಿಭಾಗಗಳಾಗಿ ಮಾಡಲ್ಪಡುವುದು. ಮೊದಲನೆಯದರಲ್ಲಿ ಯೆಹೂದಿಗಳು ಇಚ್ಛಾನುಸಾರ ಭೂಮಿಯನ್ನು ಕೊಂಡುಕೊಳ್ಳಬಹುದು. ಎರಡನೆಯದರಲ್ಲಿ ಅದಕ್ಕೊಂದು ಮಿತಿ ಇಡಲಾಗುವುದು. ಮೂರನೆಯದರಲ್ಲಿ ಭೂವಿಕ್ರಯ ನಿಷೇಧಿಸಲಾಗುವುದು. ಅಂತೂ ಬ್ರಿಟಿಷ್ ಸರಕಾರದ ಸೆರಗು ಹಿಡಿದ ಮಗುವಿಗೆ ಏನಾದರೂ ಚೂರು ತಿಂಡಿಕೊಟ್ಟು ಹಿಡಿಯದುದನ್ನು ಗಮನಿಸಿ ಬಗ್ಗಿಸಿ ಪೆಲೆಸ್ತಾಯಿನಿನಲ್ಲಿ ತನ್ನ ಅಧಿಕಾರವನ್ನು ಬಲಗೊಳಿಸುವ ಹಂಚಿಕೆಯು ಈ ಮಧ್ಯಸ್ಥಿಕೆಯಲ್ಲಿ ಒಡೆದು ಕಾಣುತ್ತದೆ

ಬ್ರಿಟಿಷ್ ಪಾರ್ಲಿಮೆಂಟ್ ಈಗ ಚೆನ್ನಾಗಿ ಕಣ್ತೆರದಿದೆ

ವಿದೇಶ ರಾಜತಂತ್ರಿಗಳಾದ ಚೇಂಬರ್ಲೇನರು ಮತ್ತು ಹಾಲಿಫೇಕ್ಸರು ಯುರೋಪಿನ ಶಕ್ತಿಗಳಿಗೆ ಬಗ್ಗಿಬಗ್ಗಿ ದಪ್ಪ ಗದ್ದು ಹೆಚ್ಚು ಬೀಳುತ ದೆಂಬುದು ಈಗ ಬ್ರಿಟಿಷ್

ವಿ. ಚೇಂಬರ್ಲೇನರು

ಸಿಂಹಕ್ಕೆ ಗೊತ್ತಾಗಿದೆ. ಹಿಟ್ಲರ್, ಮುಸೊಲೋನಿ, ಫ್ರಾಂಕೋ ಇವರಿಗೆಲ್ಲ ಡೊಗ್ಗು ಸಲಾಮು ಹಾಕಿ ಮಾಡಿಕೊಳ್ಳುವ ಇತ್ಯರ್ಥಗಳನ್ನು ಅವರು ಅವರಿಗನುಕೂಲ ಕಾಲ ಒದಗಿದಾಗ ಇವರೊಡನೆ ಹೇಳದೆ ಕೇಳದೆ ಮುರಿದುಬಿಡುತ್ತಾರೆಂಬುದು ಈಗ ಬ್ರಿಟಿಷ್ ಪ್ರಭುತ್ವಕ್ಕೆ ಚೆನ್ನಾಗಿ ಬಗೆಹರಿದಿದೆ. ಮ್ಯುನಿಚ್ ಒಪ್ಪಂದವು ಚಿರಸ್ಥಾಯಿಯೆಂದೂ ಹಿಟ್ಲರನು ಉಳಿದ ಜೆಕೋಸ್ಲೋವೇಕಿಯವನ್ನು ನುಂಗಲಾರನೆಂದೂ ಜೆಕ್ ಸರಕಾರಕ್ಕೆ ಚೇಂಬರ್ಲೇನರು ಆರು ಮಿಲಿಯ ಪವನು ಸಾಲಕೊಟ್ಟಿದ್ದಾರೆ. ಈಗ ಜೆಕೋಸ್ಲೋವೇಕಿಯ ರಾಷ್ಟ್ರವು ನಿರ್ನಾಮವಾಯಿತು. ಆ ಹಣಕ್ಕೆ ಹೊಣೆಯಾರೆಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬರಲು, ಹೀಗಾದೀತೆಂದು ಯಾರು ನೆನೆಸಿದ್ದರು ಎಂದು ಚೇಂಬರ್ಲೇನರ ಉತ್ತರ. ಆದುದರಿಂದ ಜಗತ್ತಿನ ದೃಷ್ಟಿಯಲ್ಲಿ ತಮ್ಮ ಮೇಡಿತನವನ್ನು ಪ್ರದರ್ಶಿಸಿಯೂ ತಮ್ಮ ಸ್ಥಾನವು ಭದ್ರವಾಗದೆ ಅಪಾಯಕರವಾಗಿ ಪರಿಣಮಿಸುವಂತಹ ಧೋರಣೆಯನ್ನು ಕೈಗೊಂಡ ಚೇಂಬರ್ಲೇನರ ವಿದೇಶ ಮಂತ್ರಿತ್ವದ ಪಾರ್ಲಿಮೆಂಟಿನ ಭರವಸೆ ತಪ್ಪಿದೆ. ಹಿಟ್ಲರನ ಮೇಲಿನ ವಿಶ್ವಾಸವು ಕೆಟ್ಟು ಅಲ್ಲಿರುವ ಬ್ರಿಟಿಷ್ ರಾಯಭಾರಿಯನ್ನು ಹಿಂದೆ ಕರೆಯುವ ನಿಶ್ಚಯವಾಗಿದೆ. ಹಿಟ್ಲರ್ ಮುಸೋಲಿನಿ ಫ್ರಾಂಕೋರಿಗೆ ಬೆದರದೆ ವರ್ತಿಸುವ ಧೈರ್ಯವಿರುವ ಚರ್ಚಿಹಿಲ್ ಮತ್ತು ಎಂತೋನಿ ಈಡನ್ನರನ್ನು ವಿದೇಶ ಮಂತ್ರಿಗಳಾಗಿ ನೇಮಿಸುವ ಯೋಚನೆ ನಡೆಯುತ್ತಿದೆ.

ಸ್ಪೈನಿನಲ್ಲಿ ಫ್ರಾಂಕೋ ಸರಕಾರದ ನೀ...

ಬ್ರಿಟಿಷರು ಮತ್ತು ಫ್ರೆಂಚರು ದಂ...ಗಾರ ಫ್ರಾಂಕೋವನು ಸ್ಪೈನಿನಲ್ಲಿ ಬಂಡೆ ನೆಬ್ಬಿಸಿ ಸ್ಥಾಪಿಸಿ ಸರಕಾರವನ್ನು ಅಂಗೀಕರಿಸುವಷ್ಟರ ತನಕ ಅವರು ಮನಸ್ಸಿನ... ಮುಂದಿಗೆ ಮೆಲ್ಲುವ ಒಲವನ್ನು ಫ್ರಾಂಕೊ ತೋರಿಸಿದ. ಇವನು ಹಿಟ್ಲರ್ ಮುಸೊಲಿನಿಗಳನ್ನು ಬಿಟ್ಟು ತಮ್ಮ ಪಕ್ಷ ಸೇರಿಯಾನೆಂಬ ಭ್ರಮೆಯಿಂದ ಬ್ರಿಟಿಷ್ ಫ್ರೆಂಚ್ ಸರಕಾರಗಳೆರಡೂ ಯಾವ ಶರ್ತನ್ನೂ ಹಾಕದೆ ಫ್ರಾಂಕೋ ಸರಕಾರವನ್ನು ಸ್ಪೈನಿನ ರಾಷ್ಟ್ರ ಸರಕಾರವೆಂದು ಅಂಗೀಕರಿಸಿದವು. ಅಷ್ಟಾದ ಮೇಲೆ ಈಗ ಫ್ರಾಂಕೋ ಬಣ್ಣ ಬದಲಾಯಿಸಿ ನಿಜರೂಪ ತೋರಿಸಿದ್ದಾನೆ. ಸ್ಪೈನಿನ ಸುತ್ತ ಕಡಲಿಗೆ ನಾನೇ ಅಧಿಪತಿ. ಬ್ರಿಟಿಷ ಹಡಗುಗಳು ಅಲ್ಲಿ ನನ್ನ ಅಂಕೆಗೊಳಗಾಗಿ ಚಲಿಸಬೇಕು ಎನ್ನುತ್ತಾನೆ. ಮಾತ್ರವಲ್ಲ ಹಿಟ್ಲರ್ ಮುಸಲೋನೀ ಇವರಿಗಳೊಂದಿಗೆ ಫ್ರಾಂಕೋನೂ ಒಂದಾಗಿ ಕೂಡಿ ಯುರೋಪಿನ ಪ್ರಬಲ ಶಕ್ತಿಯಾಗುವ ಹಂಚಿಕೆ ನಡೆಯುತ್ತಿದೆ. ಸದ್ಯದಲ್ಲಿಯೇ ಈ ತ್ರಿಮೂರ್ತಿಗಳು ಕೂಡಿ ಮಾತಾಡಿ ಒಂದು ಒಪ್ಪಂದವಾಗುತ್ತದೆಂದು ತಿಳಿಯಲಾಗಿದೆ.

ರಷ್ಯಾದಲ್ಲಿ ಸರ್ವಾಧಿಕಾರಿ ಸ್ಟೇಲಿನನ ಘರ್ಜನೆಯ ಉದ್ಘೋಷಣೆ—

ಹಿಟ್ಲರನ ಕಣ್ಣು ಎತ್ತ ಕಡೆ ಇದೆ ಎಂಬುದು ಸ್ಟೇಲಿನನಿಗೆ ಗೊತ್ತು. ಬ್ರಿಟಿಷ್ ಫ್ರೆಂಚ್ ಸರಕಾರಗಳಂತೆ ರಶ್ಯಕ್ಕೆ ದೃಷ್ಟಿಮಾಂದ್ಯ ಬಂದಿಲ್ಲ. ಹಿಟ್ಲರನು ಇನ್ನೊಂದು ಹೆಜ್ಜೆ ಮುಂದಿಟ್ಟು ರುಥೇನಿಯವನ್ನು ಮುಕ್ಕಿ ರಶ್ಯದ ಫಲವತ್ತಾದ ಯುಕ್ರೇಯಿನ್ ಪ್ರಾಂತವರಲ್ಲಿ ಸ್ವತಂತ್ರ ರಾಷ್ಟ್ರದ ಚಳವಳಿ ಹುಟ್ಟಿಸಿ ಪ್ರೋತ್ಸಾಹಿಸಿ ಅವರ ಆಹ್ವಾನೆಯ ನೆವದಿಂದ ಅಲ್ಲಿಗೆ ಹಾರಿ ಅದನ್ನೂ ನುಂಗಬೇಕೆಂಬ ಹಂಚಿಕೆಯಲ್ಲಿದ್ದಾನೆಂದು ಸ್ಟೇಲಿನನಿಗೆ ಗೊತ್ತಿದೆ. ಆದುದರಿಂದ ಈಗಾಗಲೇ ಕಟುವಾಗಿ ಎಚ್ಚರಿಕೆ ಕೊಟ್ಟಿದ್ದಾನೆ. ನಮ್ಮ ಗಡಿಯೊಳಗೆ ಕಾಲಿಟ್ಟು ತಂಟೆ ಮಾಡಬೇಕೆಂದು ಬರುವ ತುಂಟರನ್ನು ಕುಟ್ಟಿ ಕಾಲು ಮುರಿದೋಡಿಸಲು ನಾವು ಸದಾ ಸಿದ್ಧರಾಗಿಯೇ ಇದ್ದೇವೆ. ಯುಕ್ರೇಯಿನಿನ ಮೇಲೆ ಬರುವವರನ್ನು ಧ್ವಂಸಗೊಳಿಸಲು

ಸ್ವದೇಶ ವಿಚಾರ

ಗಾಂಧೀ ವೈಸರಾಯರ ಭೇಟಿ ಯಾಯಿತೇ?

ಹೌದು. ವೈಸರಾಯರಿಗೂ ಗಾಂಧೀಜಿಗಳಿಗೂ ಎರಡು ದಿನ ತಾಸುಗಟ್ಟಳೆ ಮಾತುಕತೆ ನಡೆದು ಕಾಗದ ಪತ್ರದಾಖಲೆಗಳ ವಿಚಾರ ವಿಮರ್ಶೆಗಳಾಗಿ ನ್ಯಾಯಾಧೀಶರ ಮುಂದೆ ರಾಜಕೋಟೆಯ ವಿಷಯವಾಗಿ ತೀರ್ಮಾನಕ್ಕಿಡುವ ಪ್ರಶ್ನೆಗಳ ತೀರ್ಮಾನವಾಗಿದೆ. ಯಾವಕಡೆಯಿಂದಲೂ ವಕಾಲತು ಬೇಡ. ಫೆಡರಲ್ ಕೋರ್ಟಿನ ಚೀಫ್ ಜಸ್ಟೀಸ್ ಸರ್ ಮೋರೀಸ್‌ರ ಮುಂದೆ ಎರಡು ಪ್ರಶ್ನೆಗಳನ್ನಿಟ್ಟರೆ ಸಾಕು. ಆ ವಿಷಯ ಅವರು ಕೊಡುವ ಎವಾರ್ಡ್ (ಮಧ್ಯಸ್ಥಿಕೆಯ ತೀರ್ಪು) ಮಾನ್ಯವಾಗಬೇಕು. ಪ್ರಶ್ನೆಗಳೇನೆಂದರೆ, ೧ ಸುಧಾರಣಾ ಸಮಿತಿಯಲ್ಲಿ ಸದಸ್ಯರನ್ನು ನೇಮಿಸುವ ವಿಷಯ ಥಾಕೋರಸಾಹೇಬರು ಸರದಾರ ಪಟೇಲರಿಗೆ ಬರೆದ ಪತ್ರದ ಮತ್ತು ದಶಂಬರ ೨೬ರಲ್ಲಿ ಕೊಟ್ಟ ಸಂಸ್ಥಾನದ ಪ್ರಕಟಣೆಯ ದೃಷ್ಟಿಯಲ್ಲಿ ನೋಡಿ, ಸರದಾರ ಪಟೇಲರು ಹೆಸರು ಹೇಳುವ ಏಳು ಅನಧಿಕಾರಿ ಸದಸ್ಯರಲ್ಲದೆ ಜಾತೀಯತೆಯ ಪ್ರಾತಿನಿಧ್ಯದ ಕಾರಣದಿಂದ ಹೆಚ್ಚಿನ ಸದಸ್ಯರನ್ನು ಸಮಿತಿಗೆ ನೇಮಿಸುವ ಅಧಿಕಾರವನ್ನು ಥಾಕೋರರು ಕಳೆದುಕೊಂಡಿದ್ದಾರೋ? ಸರದಾರ ಪಟೇಲರು ಹೆಸರು ಹೇಳುವ ಏಳು ಜನರನ್ನು ಥಾಕೋರರು ನೇಮಿಸತಕ್ಕುದೋ ಅಥವಾ ಆ ವಿಷಯದಲ್ಲಿ ಯುಕ್ತಾಯುಕ್ತತೆಯನ್ನು ನೋಡಿ ಕೆಲವು ಹೆಸರುಗಳನ್ನು ಆರಿಸಿ ಕೆಲವನ್ನು ಬಿಡುವ ಅಧಿಕಾರವು ಥಾಕೋರಸಾಹೇಬರಿಗೆ ಇದೆಯೇ? ೨. ಸಂಸ್ಥಾನದ ಪ್ರಕಟಣೆಯಲ್ಲಿ ಒಕ್ಕಣಿಸಿರುವ "ಅತ್ಯಂತ ವ್ಯಾಪ್ತಿಯುಳ್ಳ ಅಧಿಕಾರ" ಪ್ರಜೆಗಳಿಗುಂಟಾಗುವಂತೆ ಸುಧಾರಣಾಸಮಿತಿಯು ಸೂಚನೆಗಳನ್ನು ಕೊಡಬೇಕೆಂದಿರುವ ಮಾತಿನ ವ್ಯಾಪ್ತಿಕ್ಷೇತ್ರದ ಅರ್ಥವೇನಿದೆ? ಸಮಿತಿಯು ಸಂಪೂರ್ಣ ಜವಾಬ್ದಾರಿಯ ರಾಜ್ಯಭಾರ ಪದ್ಧತಿಯನ್ನು ಶಿಫಾರಸುಮಾಡಬಹುದೋ? ಸಮಿತಿಯ ಶಿಫಾರಸನ್ನು ಆಮೂಲಾಗ್ರವಾಗಿ ಥಾಕೋರರು ಪ್ರಯೋಗದಲ್ಲಿಳಿಸಲು ಬದ್ಧರಾಗಿದ್ದಾರೋ? 'ಪರ್ಯಾಲೋಚಿಸಿ ಆಚರಣೆಗೆ ತರುವ ಸಂಕಲ್ಪವಿದೆ' ಎಂಬ ಮಾತಿನ ವ್ಯಾಪ್ತಿ ಎಷ್ಟು?

ಈ ಎರಡು ಪ್ರಶ್ನೆಗಳು ಅತ್ಯವಸರದವುಗಳಾಗಿರುವುದರಿಂದ ನ್ಯಾಯಾಧೀಶರು ಒಂದು ವಾರದೊಳಗೆ ತೀರ್ಮಾನಕೊಡುವರಾಗಿ ತಿಳಿದು ಬಂದಿದೆ. ಆ ತನಕ ಗಾಂಧೀಜಿಗಳೂ ಡಿಲ್ಲಿಯಲ್ಲಿಯೇ ಇರುವರಾಗಿ ತಿಳಿದು ಬಂದಿದೆ.

ರಾಷ್ಟ್ರಪತಿ ಸುಭಾಷ್ ಭೋಸರು ಆರೋಗ್ಯವೇ?

ಅವರು ತ್ರಿಪುರಿಯಿಂದ ಹೊರಟವರು ಕಲ್ಕತ್ತಕ್ಕೆ ಹೋಗಲಿಲ್ಲ. ಅದಕ್ಕೆ ಸಮೀಪದ ದಾನಬಾದ್ ಎಂಬಲ್ಲಿ ಇಳಿದು ಅಲ್ಲೇ ಆರೋಗ್ಯ ಹೊಂದುವ ತನಕ ಉಳಿಯುವ ವ್ಯವಸ್ಥೆ ಮಾಡಲಾಗಿದೆ. ಸಾವಧಾನವಾಗಿ ಗುಣಹೊಂದುತ್ತಿದ್ದಾರೆ.

ಈಜಿಪ್ಟದ ನಿಯೋಗ ಮಂಡಳಿಯ ಸಂಚಾರ—ತ್ರಿಪುರಿ ಕಾಂಗ್ರೆಸ್ಸ ಅಧಿವೇಶನಕ್ಕೆ

ತ್ರಿಪುರಿ ಕಾಂಗ್ರೆಸ್ ಅಧಿವೇಶನಕ್ಕೆ ಸಹಾನುಭೂತಿ ಪ್ರದರ್ಶನಾರ್ಥವಾಗಿ ಈಜಿಪ್ತದಿಂದ ಬಂದ ವಾಫ್ಡಿಸ್ಟ (ಪ್ರಜಾಪಕ್ಷ) ನಿಯೋಗಮಂಡಳಿಯವರು ಅಧಿವೇಶನ ಮುಗಿದಮೇಲೆ ಅಲ್ಲಾಬಾದ್, ಡೆಲ್ಲಿ ಕಲ್ಕತ್ತಾ ಮುಂತಾದ ಪ್ರಾಮುಖ್ಯ ನಗರಗಳನ್ನು ಸಂದರ್ಶಿಸುತ್ತಿರುವರು. ಹೋದಲ್ಲೆಲ್ಲ ಅವರಿಗೆ ಆದರಪೂರ್ವಕ ಸ್ವಾಗತ ಕೊಡಲಾಗಿದೆ. ಈಜಿಪ್ಟ ಸರಕಾರದ ಪ್ರಜಾಪಕ್ಷ ಮುಂದಾಳಾದ ಮುಸ್ತಫಾ ನಾಹಾಶ್ ಪಾಶಾರವರು ತಾವು ಕಳುಹಿಸಿದ ಈ ನಿಯೋಗ ಮಂಡಳಿಗೆ ಕಾಂಗ್ರೆಸ್ಸಿನಲ್ಲಿಯೂ ಇತರ ಎಲ್ಲ ಕಡೆಗಳಲ್ಲಿಯೂ ತೋರಿರುವ ಪ್ರೇಮಾದರಗಳಿಗಾಗಿ ಗಾಂಧೀಜಿಯವರಿಗೆ ಧನ್ಯವಾದಾರ್ಪಣೆಯ ತಂತಿ ಕಳುಹಿಸಿರುತ್ತಾರೆ. ಅಲ್ಲಾಬಾದಿನಲ್ಲಿ ಈ ನಿಯೋಗಮಂಡಳಿಗೆ ಸಾರ್ವಜನಿಕ ಸುಸ್ವಾಗತವನ್ನು ನೆಹರೂಗಳ ಮುಂದಾಳುತನದಲ್ಲಿ ಇತ್ತಾಗ ಮಂಡಳಿಯ ನಾಯಕರಾದ ಮಹಮ್ಮದ್ ಸೈಯದ್ ಬೇ ಇವರು ಭಾಷಣಗೊಡುತ್ತ ಈಜಿಪ್ತದಲ್ಲಿ ನಾವು ಬ್ರಿಟಿಷ್ ಪ್ರಭುತ್ವವನ್ನು ಗೆದ್ದು ಪ್ರಜಾಪ್ರಭುತ್ವದ ಸರಕಾರವನ್ನು ಸಂಸ್ಥಾಪಿಸಿದುದು ನಮ್ಮ ಒಂದುತನದಿಂದ. ಪ್ರಜೆಗಳ ಬೇರೆ ಬೇರೆ ತಂಡ ಪಂಗಡಗಳೆಲ್ಲ ಒಂದುಗೂಡಿತು. ಬ್ರಿಟಿಷರು ನಮ್ಮೊಳಗೆ ಪಕ್ಷವಿಪಕ್ಷವಾಗುವಂತೆ ಎಷ್ಟು ಭೇದೋಪಾಯವನ್ನು ಹೂಡಿದರೂ ಅದರ ಆಕರ್ಷಣೆಗೆ ಮರುಳುಗೊಂಡು ನಾವು ಖಂಡಖಂಡವಾಗಿ ಹೊಡೆದಾಡಿಕೊಳ್ಳದೆ ಅಖಂಡವಾಗಿದ್ದು ಅವರನ್ನೇ ಎದುರಿಸಿದೆವು. ಇಂಡಿಯವೂ ಅಂತೆಯೇ ಒಂದುತನದಿಂದ ಮುಂದುವರಿದರೆ ಗೆಲವು ನಿಶ್ಚಯ. ಮಹಾತ್ಮಾಗಾಂಧೀ, ಜವಹಾರಲಾಲ್ ನೆಹರೂ, ಮೌಲಾನ ಅಬುಲ್ ಕಲಮ್ ಆಜಾದ್, ಅಬ್ದುಲ್ ಗಾಫರ್ ಖಾನ್, ಇವರ ಮುಂದಾಳುತನದಲ್ಲಿ ಒಂದಾಗಿ ಹೋರಾಡಿರಿ. ಐಕ್ಯತೆಯೇ ಇಂತಹದರಲ್ಲಿ ಪ್ರಾಮುಖ್ಯ. ನಾವದನ್ನು ಪ್ರಯೋಗದಲ್ಲಿ ಹಾಕಿನೋಡಿ ಜಯಶಾಲಿಗಳಾಗಿದ್ದೇವೆ. ನೀವೂ ಐಕ್ಯತೆಯನ್ನು ಮರೆಯದೆ ಮುಂದಾಗಿರಿ. ಜಯಶ್ರೀಯು ನಿಮ್ಮ ಬೆಂಬಲವಾಗಿದೆ, ಎಂದರು.

ಜಯಪುರದಲ್ಲಿ ಭಾಜಾಜಿಯವರು ಬಿಡುಗಡೆ ಹೊಂದುವರೇ?

ರಾಜಕೀಯ ಚಳವಳಿಯು ಒಂದು ತರದಲ್ಲಿ ಒಪ್ಪಂದಕ್ಕೆ ಬರುವ ಲಕ್ಷಣವಿದೆ. ಇದರ ಪೂರ್ವಸಿದ್ಧತೆಯಾಗಿ ಸೇಟ್ ಜಮ್ನಾಲಾಲ್ ಬಾಜಾಜಿಯವರನ್ನು ಬಂಧನದಿಂದ ಸದ್ಯ ಬಿಡುಗಡೆ ಮಾಡಲಾಗುವುದೆಂದು ಸುದ್ದಿ.

ಡಿಲ್ಲಿಯಲ್ಲಿ ರಾಜಕೀಯ ಕೈದಿಗಳು ಕೈಗೊಂಡ ಉಪವಾಸತ್ಯಾಗ

ಗಾಂಧೀಜಿಗಳು ಡಿಲ್ಲಿಗೆ ಬಂದಿಳಿದದ್ದೇ ಅಲ್ಲಿಯ ಜೈಲಿನಲ್ಲಿ ಉಪವಾಸವನ್ನು ಕೈಕೊಂಡಿದ್ದ ರಾಜಕೀಯ ಕೈದಿಗಳನ್ನು ಕಂಡು ಶಾಂತಿ ಸಮಾಧಾನಗಳ ಬೋಧೆಮಾಡಿ ಅವರು ಉಪವಾಸವನ್ನು ಬಿಡುವಂತೆ ಮಾಡಿದರು. ಅವರೊಡನೆ ತಾನೂ ಕಿತ್ತಳೆ ರಸವನ್ನು ಸೇವಿಸಿ ವ್ರತ ಭಂಗಮಾಡಿಸಿದರು.

ಬಂಗಾಳದಲ್ಲಿ—ಸರಕಾರಕ್ಕೆ ಪ್ರಥಮ ಅಪಜಯ

ಬಂಗಾಳದ ಪ್ರಾಂತಿಕ ಸರಕಾರಕ್ಕೆ ನ್ಯಾಯವಿಧಾಯಕ ಸಭೆಯಲ್ಲಿ ನೊನ್ನೆ ತಾನೇ ಮೊದಲ ಸಲವೆಂಬಂತೆ ಅಪಜಯ ಪ್ರಾಪ್ತವಾಯಿತು. ಪೋಲೀಸು ಸಂಬಂಧವಾಗಿ ಒಂದು ಉಪ ಮಸೂದೆಯು ಚರ್ಚೆಗೆ ಬಂತು. ಕಾಂಗ್ರೆಸ್ಸು ಮತ್ತು ಸರಕಾರ ಪಕ್ಷಕ್ಕೆ ಸಮಸಮ ಮತಗಳು ಸಿಕ್ಕಿದುವು. ಆಗ ಅಧ್ಯಕ್ಷ ಎಸ್. ಸಿ. ಮಿತ್ರರು ತಮ್ಮ ಮತವನ್ನು ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟರು. ಸರಕಾರ ಪಕ್ಷಕ್ಕೆ ಅಪಜಯ ಪ್ರಾಪ್ತಿ.

WANTED.

Applications are invited from Graduates or Intermediates for an accountant's post as a Head clerk. The application which should reach Box No. 12 C/O Navayuga Office, Udipi, on or before 15th April 1939 should contain the Name, Age, Qualifications, permanent residence; and previous experience. The Vacancy is permanent one

[೩ನೇ ಪುಟದಿಂದ ಮುಂದುವರಿದುದು]

ನಮಗೆ ತುಂಬ ಶಕ್ತಿ ಇದೆ, ಸನ್ನಾಹ ಇದೆ, ಪೂರ್ವಸಿದ್ಧತೆ ಇದೆ. ಆದರೆ ನಾವಾಗಿ ಯಾರ ತಂಟೆಗೂ ಹೋಗುವುದಿಲ್ಲ. ಶಾಂತತೆಯಿಂದ ಪ್ರಪಂಚದ ಎಲ್ಲ ರಾಷ್ಟ್ರಗಳೊಡನೆಯೂ ವ್ಯಾಪಾರ ವ್ಯವಹಾರಗಳನ್ನು ನಡೆಯಿಸುತ್ತ ಅವರವರ ಸ್ವಾತಂತ್ರ್ಯವನ್ನು ಮನ್ನಿಸುತ್ತ ಪ್ರಬಲರ ಆಘಾತಕ್ಕೆ ಬಲಿಬೀಳುವ ನಿರ್ಬಲರಾಷ್ಟ್ರಗಳಿಗೆ ಸಹಾಯಗೊಡುತ್ತ ನಮ್ಮ ರಾಷ್ಟ್ರಾಭ್ಯುದಯದಲ್ಲೇ ವಿಶೇಷ ಗಮನವಿಡುತ್ತಿರುವುದು ನಮ್ಮ ಧೋರಣೆ. ಇದಕ್ಕೆ ಭಂಗವನ್ನುಂಟುಮಾಡಲು ನಮ್ಮ ರಾಷ್ಟ್ರಕ್ಕೆ ಕಾಲಿಟ್ಟವರು ಅವರೆಷ್ಟು ಶಕ್ತರಾಗಲಿ ಬೊಂಕ ಮುರಿದೇ ಬಿಟ್ಟೇವು ಎಂದು ಸ್ಟೇಲೀನರು ಸಮತಾಪಂಥೀಯರ (ಕೊಮ್ಯೂನಿಸ್ಟರ) ೧೭ನೆಯ ಸಂಸತ್ತಿನಲ್ಲಿ ಹೇಳಿ ಜರ್ಮನಿಗೆ ಎಚ್ಚರಗೊಟ್ಟಿರುವರು.

ಸ್ವಿಜರ್ಲಾಂಡಿನ ಗರ್ಜನೆ

ಇಂದು ಯುರೋಪಿನ ಸಣ್ಣ ಸಣ್ಣ ರಾಷ್ಟ್ರಗಳು ರಾತ್ರೆ ಬೆಳಗಾಗುವುದರೊಳಗೆ ಒಂತೆ ಪ್ರಬಲ ರಾಜ್ಯಗಳ ಕಂಕುಳೊಳಗೆ ಸೇರಿ ಹೋಗುತ್ತಿರುವುದನ್ನು ಕಂಡು ಅಗಮ್ಯವಾದ ಪರ್ವತಾವಳಿಗಳ ನಡುವೆಯಿರುವ ಸ್ವಿಜರ್ಲಾಂಡಿಗೂ ಎದೆ ನಡುಗಿದಂತಾಗಲಿಬಹುದು. ಮೇಲಿಂದ ಹಿಟ್ಲರ್ ಕೆಳಗಿಂದ ಮುಸೋಲಿನಿ ಹೀಗಿದೆ ಅದರ ಸ್ಥಾನ. ಆದುದರಿಂದ ಅದು ತನ್ನ ಫೆಡರಲ್ ಕೌನ್ಸಿಲಿನ ಮೂಲಕ 'ಯಾರೇ ಆಗಲಿ ನಮ್ಮ ಮೇಲೆ ಬೀಳಬಂದರೆ, ನಮ್ಮ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಮಿತಗೊಳಿಸಲು ಹವಣಿಸಿದರೆ, ನಮ್ಮ ರಾಷ್ಟ್ರದ ಒಂದು ಕಣಕ್ಕೆ ಭಂಗತರುವ ಪ್ರಯತ್ನಮಾಡಿದರೆ ನಾವು ಬಗ್ಗಲಾರೆವು. ಯುದ್ಧವೇ ನಿಶ್ಚಯ. ಎಂದು ಸಾರಿದೆ.

THE BOMBAY LIFE ASSURANCE CO., LTD,

ತಿಂಗಳಿಗೆ ನೀವೆಷ್ಟು ಸಂಪಾದಿಸುತ್ತೀರೆಂಬುದು ದೊಡ್ಡ ವಿಷಯವಲ್ಲ. ಎಷ್ಟು ಉಳಿಸುತ್ತೀರೆಂಬುದೇ ಪ್ರಾಮುಖ್ಯ ಪ್ರಶ್ನೆ. ಏಕೆಂದರೆ ನಿಮ್ಮ ಸಂಪಾದನೆಯು ಕಡಿಮೆಯಾದಾಗ ಅಥವಾ ನಿಂತುಹೋದಾಗ ನಿಮ್ಮ ಮತ್ತು ನಿಮ್ಮ ಸಂಸಾರದ ಕನಿಷ್ಠ ಸುಖ ಸೌಕರ್ಯಗಳು ಯಥಾಪ್ರಕಾರ ಒದಗಿಸಿಕೊಡಬಲ್ಲುದು ಆ ಉಳಿತಾಯವೇ.

ಅಂತಹ ನಿಮ್ಮ ಉಳಿತಾಯವು ಬೆಳೆದು ಬಲವಾದ ಭಂಡವಾಳವಾಗಿ ಬರುವಂತೆ ನಿಕ್ಷೇಪಿಸಲಿಕ್ಕೆ ಅತ್ಯುತ್ತಮ ಸ್ಥಾನವೆಂದರೆ

ದಿ ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಏಕೆಂದರೆ ಅದು ಉತ್ಕೃಷ್ಟ ಭದ್ರತೆಯುಳ್ಳ ಉಪಯುಕ್ತ ಸಂಸ್ಥೆ.

ಪ್ರಾಮಾಣಿಕತೆ, ಉತ್ಸಾಹ ಪ್ರತಿಷ್ಠೆಗಳುಳ್ಳವರಿಗೆ ಸಮಾಜ ಸೇವೆ ಮಾಡಲಿಕ್ಕೂ ಯೋಗ್ಯವಾದ ನಿಶ್ಚಿತ ಪ್ರತಿಫಲವನ್ನು ಹೊಂದಲಿಕ್ಕೂ ಒಳ್ಳೆಯ ಅವಕಾಶವಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ಮದ್ರಾಸ್ ಬ್ರಾಂಚ್ ಸೆಕ್ರೆಟರಿಗಳು.

ದಿ ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ದಿ ಬೊಂಬಾಯಿ ಲ್ಯಾಫ್ ಬಿಲ್ಡಿಂಗ್ಸ್, ಗಾಂಧೀನಗರ, **ಉಡುಪಿ**.

ಎಂಬ ಮೇಲಿನ ವಿಳಾಸಕ್ಕಾಗಲೀ ಕೆಳಗೆ ಕಾಣಿಸಿದ ನಮ್ಮ ಇತರ ಯಾವ ಕಾರ್ಯಾಲಯಕ್ಕಾಗಲೀ ಅರ್ಜಿ ಬರೆದುಕೊಳ್ಳಿ.

ಪೋಸ್ಟ್ ಬಾಕ್ಸ್ ನಂ. 337 ಮೌಂಟ್ ರೋಡ್, ಮದರಾಸು.	ವಿಶ್ವೇಶ್ವರಪುರ ಸರ್ಕಲ್ **ಬೆಂಗಳೂರು ಸಿಟಿ.**	ಕಾರ್ ಸ್ಟ್ರೀಟ್ **ಮಂಗಳೂರು**	ಪುತಿಯಾರ **ಕಲ್ಲಿಕೋಟೆ.**
ಸೆಂಟ್ರಲ್ ಸ್ಟೇಶನ್ ರೋಡ್, **ಟ್ರಿವೇಂಡ್ರಮ್.**	ಚಾರ್ನಿರೋಡ್ ಗಿರ್ಗಾಮ್, **ಬೊಂಬಾಯಿ ನಂ. 4.**	ಒಟ್ಟಪಾಲಮ್ **ದ. ಮಲಬಾರ್.**	

The Tropical Insurance CO., LTD., DELHI.

ದಿ ಟ್ರೋಪಿಕಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಡೆಲ್ಲಿ.

ಅಧ್ಯಕ್ಷರು:—ಶ್ರೀ. ಸುಭಾಸಚಂದ್ರ ಬೋಸರು.

(ರಾಷ್ಟ್ರಪತಿಗಳು)

ಸಂಸ್ಥಾಪಕ ಡೈರೆಕ್ಟರರು:

ಪಂಡಿತ ಮೋತಿಲಾಲ ನೆಹರು. ಡಾಕ್ಟರ್ ಎಂ. ಎ. ಅನ್ಸಾರಿ.

ಶ್ರೀ। ಎಸ್. ಶ್ರೀನಿವಾಸ ಐಯ್ಯಂಗಾರ್. ಹಕೀಮ್ ಅಜ್ಮಲ್ ಖಾನ್.

ಪ್ರಗತಿಗಾಮಿಯಾದ ಈ ದೇಶೀ ವಿಮಾಕಂಪೆನಿಯು ಐವರು ರಾಷ್ಟ್ರಪತಿಗಳಿಂದ ಸ್ಥಾಪನೆ ಹೊಂದಿ ನಡೆಸಲ್ಪಟ್ಟದ್ದು.

ಪ್ರಾತಿನಿಧ್ಯಕ್ಕಾಗಿ ಸಂಬಳ ಯಾ ಕಮೀಶನಿನ ಮೇಲೆ ಅರ್ಜಿಗಳು ಸ್ವೀಕರಿಸಲ್ಪಡುತ್ತವೆ.

ಕೆ. ಎಸ್. ರಾಮಮೂರ್ತಿ, ಎಂ. ಎ.
ಬ್ರಾಂಚ್ ಸೆಕ್ರೆಟರಿ,
160, ಮೌಂಟ್ ರೋಡು, ಮದ್ರಾಸ್.

ಅಥವಾ

ಎಂ. ಸುಂದರ ರಾಮ ಶೆಟ್ಟಿ,
ಬ್ರಾಂಚ್ ಮೆನೇಜರ್,
ಹಂಪನಕಟ್ಟೆ, ಮಂಗಳೂರು.

— ಭಾರತದ ಪೀಡಿತ ಕೃಷಿಕರು —

ಜೀವನ್ಮೃತ ಕೃಷಿಕರ ಉದ್ಧಾರವೇ ದೇಶೋದ್ಧಾರ!

ನಮ್ಮ ಭರತಖಂಡದಲ್ಲಿ ಸರ್ವಸಾಧಾರಣವಾಗಿ ಅಧಿಕಾಂಶ ಜನರು ಕೃಷಿಯಿಂದ ಜೀವನವನ್ನು ನಡೆಸುತ್ತಿರುವರು. ಕೃಷಿಯೇ ದೇಶದ ಜೀವಾಳವಾಗಿದೆ. ನಾವು ಇಂದು ದೊಡ್ಡ ದೊಡ್ಡ ನಗರಗಳಲ್ಲಿಯು ಯಾವ ಅನಂತವೈಭವದ ಚಾಕ ಚೌಕಗಳನ್ನು ನೋಡುತ್ತಾ ಗಗನಚುಂಬಿತವಾದ ಅರಮನೆಗಳಂತಹ ಮಂದಿರಗಳ ದರ್ಶನ ಮಾಡುತ್ತೇವೋ ಅಂಥಾ ಮನೋಹರ ಪ್ರದರ್ಶನದ ಜೀವನ ಆದರ್ಶಗಳು ಸಮಸ್ತ ಭಾರತದ ಪೀಡಿತ ರೈತರ ಜಮೆಗೊಳಿಸಲ್ಪಟ್ಟ ಮಧುರ ಫಲವು. ಹಿಂದುಸ್ಥಾನದ ಅರ್ಧನನ್ನ, ಹಸಿವೆ ತೃಷೆಗಳ ದೀನರೈತರ ಜೀವನದಲ್ಲಿ ನಾವು ಕೂಡಾ ಸಹಾನುಭೂತಿಯನ್ನು ತೋರಿಸಲೇಬೇಕು ಅದುವೇ ಜನಾಂಗದೇಳಿಗೆಯ ಮೊದಲ ಕರ್ತವ್ಯವು. ಆದರೆ ಇದರ ಬದಲಾಗಿ ಅವರಿಗೆ ದೊರೆಯುವ ಫಲವೇನು? ಕೂಳಿಗೆ ಗತಿಯಿಲ್ಲದೆ, ತೃಷೆಯಿಂದ ಕಂಗಾಲಾಗಿ, ಪ್ರತಿನಿತ್ಯ ವ್ಯಸನದಲ್ಲಿ ಹೊರಳಾಡಿ, ಮಹಾಮಾರಿರೋಗ ಪೀಡಿತರಾಗಿ, ಅವಿದ್ಯಾವಂತರಾಗಿ ದುರ್ದಶೆಗಿಳಿಯುವುದೇ ಪ್ರತಿಫಲವಾಯಿತು. ಅವರು ಜೀವನಪರ್ಯಂತವೂ ಕಾಯಕಷ್ಟದ ಶ್ರಮ ವಹಿಸಿಯೇ ತಂತಮ್ಮ ಅಂತ್ಯಗೊಳ್ಳುವರು. ಅವರ ಮಕ್ಕಳು ಮರಿಗಳ ಚೀತ್ಕಾರ! ಹರುಕುಮುರುಕಿನ ಮನೆ! ಇವುಗಳಿಂದ ಅವರು ಪಾರಾಗುವ ಗತಿಯು ಕಾಣುವುದಿಲ್ಲ. ದೊಡ್ಡವರ, ಕೂಕುಂಬ, ಧರ್ಮಪರಿಪಾಲಕರ ಅನ್ನದಾತರಾದ ದೇಶದ ಜೀವಾಳರಾದ ಕೃಷಿಕ ಜೀವರು ಇಂಥಾ ಕಷ್ಟಗಳನ್ನು ಅನುಭವಿಸುವರಾದರೆ ನಮಗೆಲ್ಲಿಯ ಸ್ವಾತಂತ್ರ್ಯ? ಹಲವು ವರ್ಷಗಳಿಂದ ಇದರ ಪ್ರಶ್ನೆಯು ಪಾರಂಪರ್ಯವಾಗಿ ಉತ್ಪನ್ನವಾಗುತ್ತದೆ. ಅಧಿಕವಾಗಿ ವೈಸರಾಯರು ಗವರ್ನರರು ಮತ್ತು ಮಂತ್ರಿಗಳು ಬಂದರು. ಹೋದರು. ಅಸೆಂಬ್ಲಿ ಚುನಾವಣೆಯು ಆಯಿತು. ಉಮೇದುವಾರರು ಕೃಷಿಕರ ಕರುಣಾಜನಕ ಪರಿಸ್ಥಿತಿಯನ್ನು ನಿವೃತ್ತಿಪಡಿಸುವುದಾಗಿ ಮಾತು ಕೊಟ್ಟರು. ಆದರೆ ಅದು ಕೊನೆಮುಟ್ಟಲಿಲ್ಲ. ಮತ್ತು ಅವರ ಸುಧಾರಣೆಯನ್ನು ಮಾಡಲಾಗಲಿಲ್ಲ. ಕೆಲವರು ಸ್ವೇಚ್ಛೆಯಾಗಿ ವರ್ತಿಸಿದರು, ಕೆಲವರು ನಾವು ಮಾಡುತ್ತೇವೆ ಕಾಲವುಂಟು. ಆದರ ಪ್ರಯತ್ನವು ಮಾಡಲಾಗುವುದು ಎಂಬಿತ್ಯಾದಿ ಕಾರಣಗಳನ್ನು ಸೂಚಿಸಿದರು. ಆದರೆ ಅತಿವೃಷ್ಟಿ, ಅನಾವೃಷ್ಟಿ, ಮತ್ತು ಹುಳುಹುಪ್ಪಟೆಗಳಿಂದ ಬೆಳೆಯು ಕೆಟ್ಟುಹೋದರೂ ಮಕ್ಕಳಿಗೂ ಅವರ ಸಂಸಾರಕ್ಕೂ ತಿನ್ನುವಷ್ಟು ಕೂಡಾ ಬೆಳೆಯುದಿದ್ದರೂ ಅವರನ್ನು ಪಶುಗಳಿಗಿಂತಲೂ ಕಡೆಯಾಗಿ ಗೇಣಿಯನ್ನು ವಸೂಲು ಮಾಡುವರು. ಹಾಗೆಯೇ ಅವರು ಕೊಡುವ ಕಂದಾಯಗಳೂ ಮಾಮೂಲಿನಂತೆ ವಸೂಲಾಗುವವು. ಇದರಿಂದಾಗಿ ಅವರು ದುಃಖಿತರು. ವ್ಯಸನಿಗಳು! ರೋಗಪೀಡಿತರು! ಬೇರೆಯವರ ದಾಸರು! ಬಂದೀಖಾನೆಯೇ ಅವರ ಮನೆಯು. ಬೆಳಿಗ್ಗೆ ಇದ್ದರೆ ಮಧ್ಯಾಹ್ನ ಇಲ್ಲ. ಒಪ್ಪೊತ್ತಿಗೂ ಗತಿ ಇಲ್ಲದವರಂತಾಗಿದೆ. ಅವರ ಮಕ್ಕಳು ಮರುಗಿ ಕೊರಗಿ ಸೊರಗಿ ಪ್ರಾಣ ಬಿಡುವವರಾದರು. ಆದರೆ ಧನವಂತರಲ್ಲಿ ಜಮೀನ್ದಾರರಲ್ಲಿ ತಿಲಾಂಶವಾದರೂ ದಯೆ ಹುಟ್ಟುವುದಿಲ್ಲ, ಇದರ ಅಂತ್ಯಕ್ಕಾಗಿ ಯಾರೊಬ್ಬರ ಹೃದಯವು ಕೂಡಾ ದ್ರವೀಭೂತವಾಗುವುದಿಲ್ಲ

ಆದರೆ ಆ ದಿನವು ಕೂಡಾ ಬಂತು. ಬೇಸಾಯಗಾರರ ಮುಖವದನವನ್ನು ಕೂಡ ಅವಲೋಕಿಸುವ ಸುದಿನವನ್ನು ದೇಶವು ಕಂಡಿತು. ಮಹಾತ್ಮಾ ಗಾಂಧಿಯವರೊಡನೆ ಕೋಂಗ್ರೆಸ್ ನೇತೃತ್ವವು ಲಭಿಸಿದೊಡನೆಯೇ ದೇಶವಾಸಿಗಳ ಧ್ಯಾಸವು ಈ ದೀನ ರೈತರ ಕಡೆಗೆ ಆಕರ್ಷಿತವಾಯಿತು. ಅದರ ಅವಸ್ಥೆಯ ಸುಧಾರಣೆಯ ಪ್ರಯತ್ನವು ಉತ್ಪನ್ನವಾಯಿತು. ಕೋಂಗ್ರೆಸಿನ ಅನೇಕಾನೇಕ ಅಧಿಕಾರಿಗಳು ದೀರ್ಘಾಂತವಾದ ಶಿಕ್ಷೆಯನ್ನು ಅನುಭವಿಸಿದರು. ಮತ್ತು ರೈತರ ಉನ್ನತಿಗಾಗಿ ಆಂದೋಲನವನ್ನು ಹೂಡಿದರು. ರೈತರಿಗೂ ಅವರ ಕರ್ತವ್ಯನಿಷ್ಠೆಯ ಜಾಗ್ರತಿಯು ಉತ್ಪನ್ನವಾಯಿತು. ಕೋಂಗ್ರೆಸಿನ ಆಂದೋಲನದ ಫಲಸ್ವರೂಪವಾಗಿ ಆತ್ಮವಿಶ್ವಾಸವೂ ಉಂಟಾಯಿತು. ಕೋಂಗ್ರೆಸ್ ಸಂಸ್ಥೆಯು ಈ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹದ ಬಿಗುಲನ್ನು ಬಾರಿಸಿತು. ದೇಶವಾಸಿಗಳ ಪವಿತ್ರ ಆತ್ಮಗಳು ಮಾತೃಭೂಮಿಯಲ್ಲಿ ಬಲಿದಾನ ರೂಪವಾಗಿ ಆಹ್ವಾನವಾಯಿತು. ಸಂಸ್ಥೆಯು ಈ ಆಹ್ವಾನದಲ್ಲಿ ರೈತರು ಮುಂದಾಗಿ ಬಂದು ಜೈಲುಖಾನೆಗಳಿಗೆ ಕಳುಹಿಸಲ್ಪಟ್ಟರು. ಅದರಲ್ಲಿ ಲಾಠಿ ಚಾರ್ಜುಗಳನ್ನು ಕೂಡಾ ಸಹಿಸಿಕೊಂಡು ತಂತಮ್ಮ ತನುಮನ ಧನಗಳನ್ನು ಅರ್ಪಣ ಮಾಡಿ ಜೀವರಕ್ಷಾಕಾಂಕ್ಷೆಯನ್ನು ಬಿಟ್ಟವರಾಗಿದ್ದರು. ಆದರೂ ಅವರು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಿಲ್ಲ. ರಾಷ್ಟ್ರಮುಕ್ತಿಯ ಯಜ್ಞದಲ್ಲಿ ತಂತಮ್ಮ ಆಹುತಿಗಳನ್ನು ಅರ್ಪಣಮಾಡಿದರು. ಬ್ರಿಟಿಷ್ ಸಾಮ್ರಾಜ್ಯದ ಎಲ್ಲಾ ಶಕ್ತಿಗಳೂ ಬರಿದಾದುವು ಭಾರತದ ಮೂಲೆ ಮೂಲೆಗಳಲ್ಲಿಯೂ ನವಚೈತನ್ಯವು ಉಂಟಾಯಿತು.

ಇಂದು ಹಿಂದುಸ್ಥಾನದ ಎಂಟು ಪ್ರಾಂತಗಳಲ್ಲಿ ಕೋಂಗ್ರೆಸ್ ರಾಜ್ಯಭಾರವು ಸ್ಥಾಪಿತವಾಗಿದೆ. ಕೋಂಗ್ರೆಸ್ ಕಾರ್ಯಸಮಿತಿಯ ದ್ವಾರಾ ಈ ಎಂಟು ಪ್ರಾಂತಗಳಲ್ಲಿಯೂ ಶಾಸನಸೂತ್ರದ ಚಾಲನೆಯು ನಡೆಯುತ್ತದೆ ಎಂದಿನ ವರೆಗೆ ಭಾರತವಾಸದ ಕೃಷಿಕ ಜೀವಿಗಳಿಗೆ ಸಂತೋಷವಾಗುವುದಿಲ್ಲವೋ ಅಂದಿನ ವರೆಗೆ ಸ್ವಾತಂತ್ರ್ಯದ ಎಚ್ಚರಿಕೆಯಾದರೂ ಎಲ್ಲಿರುವುದು? 'ಯು. ಪಿ. ಸರಕಾರ'ವು ರೈತರಲ್ಲಿ ಬಂಧಿತವಾಗಿರುವ ದುಷ್ಟ ಪದ್ಧತಿಗಳನ್ನು ತೆಗೆದು ನವಶಾಸನವನ್ನು ಕೊಟ್ಟಿತು. ಅವರ ದೀರ್ಘಾಂತವಾದ ದುರ್ದಶೆಯನ್ನು ಸುಧಾರಿಸುವುದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿರುವುದು. ಅಲ್ಲಿಯ ಪ್ರಧಾನ ಮಂತ್ರಿ ವರ್ಯರಾದ ಮಾನ್ಯ ಪಂತಜಿಯವರು ಪ್ರಾಂತ್ಯದ ಗ್ರಾಮಗಳ ಶಿಕ್ಷರಕ್ಷಾವಿಷಯದಲ್ಲಿ ಹೆಚ್ಚಿನ ಪರಿಶ್ರಮ ತೆಗೆದುಕೊಂಡು ಅದರ ಸಂಪನ್ನತೆಯ ಏಳಿಗೆಯನ್ನು ಬಯಸುವವರಾದರು. ಅವರ ಋಣಭಾರದ ನಿವಾರಣೆಗಾಗಿ 'ಡೆಟ್ ರಿಲೀಫ್" ಬಿಲ್ ಪಾಸು ಮಾಡಿದರು. ಸಂಯುಕ್ತಪ್ರಾಂತದಂತೆಯೇ ಇತರ ಪ್ರಾಂತ್ಯಗಳಲ್ಲಿಯೂ ಕೋಂಗ್ರೆಸ್ ಸರಕಾರವು ಪ್ರಯತ್ನವಾದಲ್ಪಟ್ಟಿತು. ಮುಂಬಾಯಿ ಬಿಹಾರ್ ಮದ್ರಾಸ್ ಮುಂತಾದ ಪ್ರಾಂತಗಳಲ್ಲಿಯೂ ಕಾರ್ಯಗಳು ತೊಡಗಿವೆ

"ಯು. ಪಿ. ಸರಕಾರದ" ಈ ಉದಾರತೆಯು ಭಾರತದ ಸ್ವಾತಂತ್ರ್ಯತೆಯ ಇತಿಹಾಸದಲ್ಲಿ ಸದಾ ಸ್ವರ್ಣಾಕ್ಷರಗಳಲ್ಲಿ ಬರೆಯಲ್ಪಡುವುದು. ಕೋಂಗ್ರೆಸ್ ಸರಕಾರವು ರೈತರ ಹಿತವೇ ದೇಶದ ಒಳ್ಳಿತನ್ನು ಬಯಸುವುದು ಎಂಬುದಾಗಿ ಘೋಷಣೆಮಾಡಿರುವುದು. ಹಾಗೆಯೇ ಅವರ ಉನ್ನತಿಗಾಗಿ ಪ್ರಯತ್ನಿಸುವುದು. ಕೋಂಗ್ರೆಸ್ ಸರಕಾರವು ಎಂದಿನ ವರೆಗೆ ಅಭಿಮಾನಪೂರ್ವಕವಾಗಿ ತಲೆಯೆತ್ತಲು ಯೋಗ್ಯವಲ್ಲವೋ ಅಂದಿನ ವರೆಗೆ ಕೃಷಿಕವರ್ಗವು ದುರ್ದಶಾ ಮತ್ತು ಹೀನ ಅವಸ್ಥೆಯಲ್ಲಿ ಇರಬೇಕಾಗುವುದು ಭಾರತದ ಕೃಷಿಕರ ಉನ್ನತಿಯಲ್ಲಿಯೇ ನಮ್ಮ ರಾಷ್ಟ್ರದ ಕಲ್ಯಾಣವಿದೆ. ರೈತರು ಭಾರತದ ಕಾಮಧೇನು! ಮತ್ತು ಪ್ರತಿ ಒಬ್ಬರೂ ಅವರ ಏಳಿಗೆಗಾಗಿ ದುಡಿಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆದುದರಿಂದ ಮಂತ್ರಿವರ್ಯರು ಎಂದಿನ ವರೆಗೆ ಜನತೆಯ ವಿಶ್ವಾಸಾರ್ಹರಾಗುತ್ತಾರೋ ಅಂದಿಗೆ ಮಂತ್ರಿತ್ವದ ಪುಷ್ಪಹಾರವು ಅವರ ಕೊರಳಲ್ಲಿ ಶೋಭಾಯಮಾನವಾಗಬಹುದು. ಈ ಎಲ್ಲಾ ಅಧಿಕಾರಗಳನ್ನು ಜನತಾಸೇವೆಗಾಗಿಯೇ ಕೋಂಗ್ರೆಸ್ ಸ್ವೀಕಾರಮಾಡಿರುವುದು. ಕೋಂಗ್ರೆಸ್ ಮಂತ್ರಿಗಳ ವಿಧೇಯತ್ವದ ಈ ಭಾವನೆಯ ನೆಲೆಯಿಂದ ನಾವು ಕೂಡ ಅದರ ಉಪಯೋಗವನ್ನು ಮಾಡುವ! ಮತ್ತು ಭಾರತದ ದಲಿತ ಜನತೆಯ ಉತ್ಥಾನಕ್ಕಾಗಿ ತಂತಮ್ಮ ಸಂಪೂರ್ಣ ಶಕ್ತಿಯನ್ನು ಕೂಡಿಸುವ!! ಆಗ ಮಾತ್ರವೇ ಸ್ವಾತಂತ್ರ್ಯ!!!

(ನವಭಾರತದ ಆಧಾರದಿಂದ) ಸಂಗ್ರಹಕರ್ತ.
ಯಮ್. ಬಾಬೂ ದಾಸ್, ಮುಂಬಯಿ.

ಜಿಲ್ಲಾ ಮೆಜಿಸ್ಟ್ರೇಟರ ಪ್ರಕಟಣೆ

ಎಲ್ಲಾ ಕೋವಿ ಲೈಸನ್ಸುದಾರರು ತಮ್ಮ ಲೈಸನ್ಸುಗಳ ಮ್ಯಾದೆ ಮುಂದರಿಸುವ ಬಗ್ಗೆ ಮಾಡುವ ರಿನ್ಯುವಲ್ ಅರ್ಜಿಗಳನ್ನು ಇನ್ನು ಮುಂದೆ ಆಕ್ಟೋಬರ ತಿಂಗಳ ಕಡೆಯಲ್ಲಿಯೇ ಜಿಲ್ಲಾ ಮೆಜಿಸ್ಟ್ರೇಟರವರ ಆಫೀಸಿಗೆ ತಲ್ಪುವಂತೆ ಕಳುಹಿಸತಕ್ಕದ್ದು. ಹಾಗೆ ಆಕ್ಟೋಬರ ತಿಂಗಳಲ್ಲಿ ಸದರಿ ಅರ್ಜಿಗಳು ಇಲ್ಲಿಗೆ ತಲ್ಪದಿದ್ದರೆ ಲೈಸನ್ಸುಗಳು ಮ್ಯಾದೆ ಮುಂದರಿಸಲಾಗಿ ದಶಂಬರ ತಿಂಗಳ ಒಳಗೆ ಅರ್ಜಿದಾರರಿಗೆ ವಾಪಾಸ. ಸರ್ಕಲು ಪ್ರಯಾಸವಾದೀತು.

ಮಂಗಳೂರು, ತಾ. 14-3-39 } ಎಂ ಪಿ ವೆಲ್ಲೋಡಿ. ಜಿಲ್ಲಾ ಮೆಜಿಸ್ಟ್ರೇಟ

WANTED

A lady candidate to edit a high class Kannada monthly magazine for ladies to be started shortly. Apply stating minimum salary required with particulars as to qualification, experience etc., to Box No. 11,

C/o **NAVAYUGA**, Udipi.

ಬಜೆಟಿನ ಕುರಿತು ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರ ಭಾಷಣ

(ಇದೇ ಕಳೆದ ತಾ. 11ರಲ್ಲಿ ನಡೆದ ದ. ಕ. ಜಿಲ್ಲಾ ಬೋರ್ಡಿನ ಮುಂದೆ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಡಾಕ್ಟರ್ ಕೆ. ವಿಠಲಶೆಟ್ಟಿ ಬೋರ್ಡಿನ 1938–39ರ ರಿವೈಸ್ಡ್ ಎಸ್ಟಿಮೇಟ್ ಮತ್ತು 1939–40ರ ಬಜೆಟನ್ನು ಇಡುವಾಗ ನವಕ್ರಮವೊಂದನ್ನಾರಂಭಿಸಿ ಬಜೆಟಿನ ಪ್ರಾಮುಖ್ಯ ವಿಷಯಗಳ ಕುರಿತು ಪ್ರಸ್ತಾವನಾ ಭಾಷಣ ವಿತ್ತರು. ಅದನ್ನು ಈ ಕೆಳಗೆ ಕೊಡಲಾಗಿದೆ)

ಹಳ್ಳಿಗಳನ್ನು ಸುಖ ಮತ್ತು ಸುಂದರಗೊಳಿಸಬೇಕು.

ಹಳ್ಳಿ ಜೀವನವನ್ನು ಸುಖ ಮತ್ತು ಸುಂದರಗೊಳಿಸುವುದು (Livable and lovable) ಗ್ರಾಮ ಪಂಚಾಯತು ಸಹಿತವಾದ ಜಿಲ್ಲಾ ಬೋರ್ಡಿನ ಮಹತ್ತಾದ ಉದ್ದೇಶವಾಗಿರತಕ್ಕದ್ದು. ಈ ಸಂಬಂಧವಾಗಿ ಸ್ಥಳೀಯ ಸಂಸ್ಥೆಗಳ ಸೇವೆಗೊಂದು ಮಿತಿಯೆಂಬುದೇ ಇಲ್ಲವೆಂಬುದಕ್ಕೆ ಲೋಕದ ಈ ಸಂಸ್ಥೆಗಳ ಇತಿಹಾಸವು ಉಜ್ವಲ ನಿದರ್ಶನವಾಗಿದೆ. ಸ್ಥಳೀಯ ಸಂಸ್ಥೆಗಳು ಮಾಡಬೇಕಾದ ಕೆಲಸಗಳು ದಿನೇದಿನೇ ಅಧಿಕವಾಗುತ್ತಿವೆ. ಆದರೆ ಅವುಗಳು ಪಡೆಯುವ ಹಣವು ಕಡಿಮೆಯಾಗುತ್ತಿದೆ. 1930ರ ಮತ್ತು ಅನಂತರದ ತಿದ್ದುಪಡಿ ಕಾನೂನುಗಳು ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಗೊಡವೆಗೇನೇ ಹೋಗಿರುವುದಿಲ್ಲ. ರಸ್ತೆಗಳ ಬಗ್ಗೆ ಮಾತ್ರ ಸರಕಾರದಿಂದ ಬೋರ್ಡಿಗೆ ಕ್ರಮವಾಗಿ ವಾರ್ಷಿಕ ಗ್ರಾಂಟು ಸಿಗುತ್ತದೆ. ರೋಡ್ ಡೆವೆಲಪ್‌ಮೆಂಟ್ ಫಂಡಿನಿಂದ ದೊರೆಯುವಂತಹ ಹಣವು ಪ್ರಾಮುಖ್ಯ ರಸ್ತೆ ಕೆಲಸಗಳಿಗಾಗಿಯೇ ಪ್ರತ್ಯೇಕಿಸಲ್ಪಡುತ್ತದೆ. ಆದುದರಿಂದ, ಪೂರ್ವನಿಶ್ಚಿತ ಕಲವೊಂದು ಕಾರ್ಯಗಳಿಗೆ ಸರಕಾರದ ಸಹಾಯ ಸಿಗುವುದೇ ಹೊರತು ಹಳ್ಳಿಗಳ ಸೌಕರ್ಯವನ್ನು ಹೆಚ್ಚಿಸುವುದಕ್ಕಾಗಿ ಹಣವೇನೂ ಸಿಗುವುದಿಲ್ಲ. ಬೋರ್ಡಿನ ಇತರ ಆದಾಯದ ಆಶಯಗಳು ಕುಂದುತ್ತಾ ಬರುತ್ತಿವೆ. ಪಂಚಾಯತುಗಳಿಂದಾಗಿ ವೃತ್ತಿತೆರಿಗೆ, ಅಪಾಯಕರ ವೃತ್ತಿಗಳ ಮೇಲಿನ ಲೈಸೆನ್ಸ್ ಫೀಸು, ಮಾರ್ಕೆಟು ಮತ್ತು ಗಾಡಿ ಸ್ಟೇಂಡುಗಳ ಮೇಲಿನ ಕರವೇ ಮೊದಲಾದವುಗಳಿಂದ ಬೋರ್ಡಿಗೆ ಬರುವ ಆದಾಯವು ಬಹಳವಾಗಿ ಇಳಿದುಹೋಗಿದೆ.

ಆಯ ಕುಂದುತ್ತಿದೆ, ವ್ಯಯ ಬೆಳೆಯುತ್ತಿದೆ!

ಆಯದಷ್ಟೇ ವ್ಯಯಮಾಡುವ ಮಿತಿಯನ್ನಿಟ್ಟುಕೊಳ್ಳಬೇಕೆಂದು ಸರಕಾರವು ನಮಗೆ ಯಾವಾಗಲೂ ಬೋಧಿಸುತ್ತಾ ಬಂದಿದೆ. ಸರ್ವ ಸಾಮಾನ್ಯ ವ್ಯಯವು ಆಯದ ಪರಿಮಿತಿಯೊಳಗಿರಬೇಕೆಂಬುದೇನೋ ನಿಜ. ಆದರೆ ಸ್ಥಿರವಾಗಿಯಾಗಲಿ ಒಂದೇ ಪ್ರಕಾರವಾಗಿಯಾಗಲಿ ಇರದೆ ದಿನೇ ದಿನೇ ಕಡಿಮೆಯಾಗುತ್ತಿರುವ ಆಯವನ್ನೂ ಸಾಮಾನ್ಯ ವೆಚ್ಚವನ್ನೂ ಬಾಯಿಗೂಡಿಸುವುದು ಹೇಗೆಂಬುದು ಮಾತ್ರ ಸೂಚಿಸುವುದಿಲ್ಲ. ಪ್ರಾಥಮಿಕ ಶಿಕ್ಷಣಕ್ಕೆ ನಿಯಮ ಪ್ರಕಾರ ಕೊಡುವ ಅಂಶದ ಹೊರತು 1931ರಿಂದ ರೂ. 1,19,217ರಷ್ಟು ಹೆಚ್ಚಿಗೆಯಾಗಿ ಕೊಡಲ್ಪಟ್ಟಿದೆ. ಆದರೂ ಪ್ರಾಥಮಿಕ ಶಿಕ್ಷಣ ಫಂಡಿನ ಪರಿಸ್ಥಿತಿಯು ಇನ್ನೂ ಕೆಟ್ಟದೇ ಆಗಿದೆ. ಇದರಿಂದಾಗಿ ಬೋರ್ಡಿನ ಆರ್ಥಿಕ ಸ್ಥಿತಿಯು ವರ್ಷ ವರ್ಷ ಕೆಡುತ್ತಾ ಬಂದಿದೆ. ಆದಾಯವು ಕಡಿಮೆಯಾದುದಕ್ಕಾಗಿ ಪ್ರಾಂತಿಕ ಸರಕಾರವು ಎಂದೂ ಸಹಾಯಮಾಡಿದುದಿಲ್ಲ. ಹಾಗೆ ನಮ್ಮ ಆರ್ಥಿಕ ಸ್ಥಿತಿಯು ಅಸಮಾಧಾನಕರವಾಗಿ, ರಸ್ತೆ, ಸೇತುವೆ, ಬಾವಿ, ಆಸ್ಪತ್ರೆ, ಸೂಲಗಿತ್ತಿ ಮತ್ತು ಶಾಲೆಗಳಿಗಾಗಿ ಹೆಚ್ಚೆಚ್ಚಾಗಿ ಬೇಡಿಕೆಗಳು ಎಡೆಬಿಡದೆ ಬರುತ್ತಿವೆ. ನ್ಯಾಯವಾದ ಈ ಬೇಡಿಕೆಗಳನ್ನು ಪೂರೈಸಲು ಬೋರ್ಡಿಗೆ ಸಾಧ್ಯವಿಲ್ಲ. ಬೋರ್ಡಿನ ಆದಾಯದ ಆಶಯಗಳಿಂದ ಮುಂದೆ ಎಂದೆಂದಿಗೂ ಹೆಚ್ಚುತ್ತಿರುವ ಗ್ರಾಮಜೀವನದ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವೇ ಇಲ್ಲ. ನಮ್ಮ ಅಧೀನದಲ್ಲಿರುವ ಹಳ್ಳಿಗರಿಗೆ ಮತ್ತು ಹಳ್ಳಿ ಪ್ರದೇಶಗಳಿಗೆ ಸರ್ವ ಸಾಧಾರಣ ಸೌಕರ್ಯಗಳನ್ನೀಯುವ ಪರಿ ಚೆನ್ನಾಗಿ ವಿಚಾರಿಸಲ್ಪಟ್ಟು ಕೈಕೊಳ್ಳಲ್ಪಡುವ ಕಾರ್ಯಕ್ರಮವನ್ನು ಜ್ಯಾರಿಗೆ ತರುವ ವೆಚ್ಚಕ್ಕಾಗಿ ಒಂದೇ ಸರಕಾರವು ಹಣ ಸಹಾಯಮಾಡಬೇಕು, ಇಲ್ಲವೆ ಆದಾಯದ ಹೊಸ ಆಶಯಗಳನ್ನು ಕಂಡುಕೊಳ್ಳಲು ಬೋರ್ಡಿಗೆ ಅಧಿಕಾರವೀಯಬೇಕು.



ಡಾಕ್ಟರ್ ಕೆ. ವಿಠ್ಠಲ ಶೆಟ್ಟರು.

1938—39ರ ರಿವೈಸ್ಡ್ ಎಸ್ಟಿಮೇಟು

ತಿದ್ದುಪಡಿಮಾಡಲ್ಪಟ್ಟ ಚಾಲ್ತಿ ವರ್ಷದ ಆಯವ್ಯಯ ಅಂದಾಜಿನಲ್ಲಿ ಆಯವು ರೂ. 25,720 ಹೆಚ್ಚಿರುತ್ತದೆ. ಟೋಲ್‌ಗೇಟ್ ಮತ್ತು ಮೋಟರ್ ವಾಹನಗಳ ಲೈಸೆನ್ಸ್ ಫೀಸಿನ ಬಾಬ್ತು ಸರಕಾರವು ಬೋರ್ಡಿಗೆ ಕೊಡುವ ಪಾಲನ್ನು ಹೆಚ್ಚಿಸಿದ್ದೇ ಈ ಹೆಚ್ಚಳಕ್ಕೆ ಕಾರಣವಾಗಿರುತ್ತದೆ. ಇದು ಪ್ರಾಂತಿಕ ಸರಕಾರದವರು ನಮಗೆ ಉದಾರಬುದ್ಧಿಯಿಂದ ದಾನಕೊಟ್ಟುದೇನೂ ಅಲ್ಲ. ಮೋಟರ್ ವಾಹನಗಳ ಲೈಸೆನ್ಸ್ ಸಂಬಂಧವಾಗಿ ಇತ್ತಲಾಗಿ ಜ್ಯಾರಿಗೆ ಬಂದ ಕಾನೂನು ಪ್ರಕಾರ ಮೋಟರ್ ವಾಹನಗಳ ಮೇಲಿನ ಲೈಸೆನ್ಸ್ ಫೀಸ್ ಮತ್ತು ಪೆಟ್ರೋಲ್ ತೆರಿಗೆಯನ್ನು ಅದೊಂದು ತತ್ವದ ಮೇರೆಗೆ ಹಂಚಬೇಕಾಗಿರುವುದರಿಂದ ಸರಕಾರವು ನಮಗೆ ಸಲತಕ್ಕ ಹಣವನ್ನೇ ಕೊಟ್ಟಿದ್ದಾಗಿದೆ. ಇದರಿಂದಾಗಿ ಮೊದಲು ನಿರೀಕ್ಷಿಸಿದುದಕ್ಕಿಂತಲೂ ತೃಪ್ತಿಕರವಾದ ವರ್ಷಾಂತ್ಯದ ಶಿಲ್ಕು ದೊರೆಯುವಂತಾಗಿದೆ. ಶಾಲಾ ಸಂಬಳದ ಕುರಿತು 9ನೇ ಕಂತೊಂದನ್ನು ಹೆಚ್ಚಿಸಿದುದರಿಂದ ಆ ಬಾಬ್ತಿನ ಆದಾಯವು ರೂ 3600ರಷ್ಟು ಹೆಚ್ಚಿದೆ. ಈ 9ನೇ ಕಂತನ್ನು ತೆಗೆದುಹಾಕಬೇಕೆಂಬ ಬೋರ್ಡಿನ ನಿರ್ಣಯಕ್ಕೆ ಸರಕಾರವು ಸಮ್ಮತಿ ಕೊಟ್ಟಿರುವುದಿಲ್ಲ. ವೃತ್ತಿತೆರಿಗೆ ಮಾರ್ಕೆಟು ಮತ್ತು ಕಾರ್ಟ್‌ಸ್ಟೇಂಡಿನಿಂದ ದೊರೆಯುವ ಆದಾಯವು ಬಹಳವಾಗಿ ಕಡಿಮೆಯಾದರೂ, ಜನರಲ್ ಫಂಡ್ಸಿನಿಂದ ರೂ 12,600ನ್ನು ರಸ್ತೆಗಳ ಬಾಬಿಗೆ ಮತ್ತು ರೂ 17,000ವನ್ನು ಎಲಿಮೆಂಟರಿ ಎಡ್ಯುಕೇಶನ್ ಫಂಡಿಗೆ ಬಜೆಟಿಗಿಂತಲೂ ಹೆಚ್ಚಿಗೆಯಾಗಿ ವರ್ಗಾಯಿಸಿಯೂ, ಸಾಮಾನ್ಯ ಬಿನ್ ಆಯವು ರೂ 6,08,340 ಎಂದು ಅಂದಾಜು ಮಾಡಲ್ಪಟ್ಟಿದೆ. 1938-39ರ ಈ ಆಯವು ರೂ. 6,11,220 ಆಗಿದೆ. ತಿದ್ದುಪಡಿಮಾಡಲ್ಪಟ್ಟ ವ್ಯಯವು ರೂ 4951ರಷ್ಟು ಕಡಿಮೆಯಾಗಿದೆ. ಆಡಳಿತ ವೆಚ್ಚವು ರೂ. 1980ರಷ್ಟು ಹೆಚ್ಚಿದೆ. ರಸ್ತೆಗಳ ವೆಚ್ಚವು ರೂ. 5520 ಹೆಚ್ಚಿರುತ್ತದೆ. ಸೆಕೆಂಡರಿ ಶಿಕ್ಷಣ ವೆಚ್ಚದಲ್ಲಿ ರೂ. 4940 ಮತ್ತು ಸಾರ್ವಜನಿಕ ಆರೋಗ್ಯದ ವ್ಯಯ

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ್ರು ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದುದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು, ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ದೋಷಗೊಳಿಸುವ ಔಷಧವೆಂದು ಖಾತ್ರಿಪಡಿಸುವವರಿಗೆ ರೂಪಾ 100 ಬಹುಮಾನ.

ಸ್ತಂಭಕ ವಟಿ—ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ಪರ್ಯಂತ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram

No 552 **P. O. Katrisarai,** (GAYA)



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಟಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ

ಮದನರತಿಕಾಮಶಾಸ್ತ್ರವೆಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿರಿ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸು ಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ 0-14-0

ಸಿಗುವ ವಿಳಾಸ.—**T. V. ದೇವಕರ್ ಎಂಡ್ ಕಂಪೆನಿ,**

ನಂಬುಲಿಯರ್ ಬೀದಿ, ಜಿ ಟಿ ಮದರಾಸು.

T. V. Devkar & Co, *Nambulier Street*, G. T. MADRAS.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗೆ ೧—೦—೦

ನಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ವಿಪರೀತ ಭೋಗಮಾಡುವುದರಿಂದಲೂ ದುಷ್ಟ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ದ...ನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ 5—0—0.

'**ಕಾಮಶಾಸ್ತ್ರ**' ಧರ್ಮಾರ್ಥ. ಪೋಸ್ಟೇಜು ಮಫೆಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ...

ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ದಲ್ಲಿ ರೂ. 9250 ಕಡಿಮೆಯಾಗಿದೆ. ನಾವು ವೆಚ್ಚದ ಬಾಬುಗಳನ್ನು ಕಠಿಣವಾಗಿ ಹತೋಟಿಯಲ್ಲಿಟ್ಟುಕೊಂಡಿರುತ್ತೇವೆಂಬುದಕ್ಕೆ ವ್ಯಯವು ಕಡಿಮೆಯಾಗಿರುವುದೇ ಸಾಕ್ಷಿ. ಆಡಳಿತದ ಉತ್ಕೃಷ್ಟತೆಯು ಒಂದಿಷ್ಟು ಕಡಿಮೆಯಾಗದಂತೆ ನೋಡಿ ವ್ಯಯವನ್ನು ಸಾಧ್ಯವಾದಷ್ಟು ಕಡಿಮೆಮಾಡಲಾಗಿದೆ. ಒಟ್ಟಾರೆ ನಮ್ಮ ತಿದ್ದುಪಡಿಮಾಡಲ್ಪಟ್ಟ ಆಯುವ್ಯಯ ಅಂದಾಜು ತೃಪ್ತಿಕರವಿರುತ್ತದೆಂದು ಭಾವಿಸಬಹುದು. ಈ ಪ್ರಕಾರ ರೂ. 15390ರಷ್ಟರ ಅಭಾವದಲ್ಲಿ ಕೊನೆಗೊಳ್ಳಬೇಕಾದ ಬಜೆಟು ವರ್ಷಾಂತ್ಯದಲ್ಲಿ ರೂ 44,730ರಷ್ಟರ ಉಳಿತಾಯವನ್ನು ಪಡೆಯುವಂತಾಗಿದೆ

1939-40ರ ಆಯುವ್ಯಯ ಪಟ್ಟಿ

1939 ಮತ್ತು 40ರ ಆಯುವ್ಯಯ ಅಂದಾಜುಪಟ್ಟಿಯ ಪ್ರಕಾರ ಸರ್ವಸಾಮಾನ್ಯ ಆಯುವು ರೂ. 6,08,410 ಆಗಿದೆ ತಿದ್ದುಪಡಿಮಾಡಲ್ಪಟ್ಟ ಚಾಲ್ತಿವರ್ಷದ ಈ ಆಯುವು ರೂ. 6,71,500 ಲೇಂಡ್ ಸೆಸ್, ಪ್ರೊಫೆಶನ್ ಟ್ಯಾಕ್ಸ್ ಮತ್ತು ಇತರ ಆದಾಯಗಳಿಂದ ಬರುವ ವರ್ಷ ಒಟ್ಟು ರೂ. 2,48,850 ದೊರೆಯಬಹುದೆಂದು ಅಂದಾಜುಮಾಡಲಾಗಿದೆ. ಚಾಲ್ತಿವರ್ಷದ ತಿದ್ದುಪಡಿಮಾಡಲ್ಪಟ್ಟ ಅಂದಾಜುಪಟ್ಟಿ ಮೇರೆಗೆ ಈ ಆಯುವು ರೂ. 2,42,740 ಬರುವ ವರ್ಷ ವೃತ್ತಿತೆರಿಗೆಯು ಇನ್ನೂ ಕಡಿಮೆಯಾಗಬಹುದು. ಇನ್ನೂ ಕೆಲವು ವರ್ಷಗಳಲ್ಲಿ ಪಂಚಾಯತುಗಳು ಹೆಚ್ಚಿಗೆ ಸ್ಥಾಪಿಸಲ್ಪಟ್ಟಾಗ ಈ ಬಾಬಿನ ಆಯುವು 3 ಅಂಕೆಗಳಿಗಿಳಿಯದಿರಲಾರದು. ರಸ್ತೆಗಳಿಗಾಗಿ ದೊರೆಯುವ ಹಣವು ಚಾಲ್ತಿವರ್ಷದ ತಿದ್ದುಪಡಿಮಾಡಲ್ಪಟ್ಟ ಅಂದಾಜಿನ ಮೇರೆಗೆ ರೂ. 3,34,480 ಬರುವ ವರ್ಷ ರಸ್ತೆಗಳಿಗಾಗಿ ರೂ. 3,25,780 ದೊರೆಯಬಹುದೆಂದು ಅಂದಾಜುಮಾಡಲಾಗಿದೆ ಇದರಲ್ಲಿ ಸರಕಾರದ ಗ್ರಾಂಟು ರೂ. 147,930 ಮತ್ತು ಕಡವಿನ ಬಾಡಿಗೆ ರೂ. 45,000 ಸೇರಿರುತ್ತದೆ ಟೋಲ್ ಗೇಟ್‌ಗಳ ಪ್ರತಿಫಲವಾಗಿ ರೂ. 45,000 ಕ್ಕಿಂತ ಹೆಚ್ಚು ಸಿಗುವುದೆಂದು ನಿರೀಕ್ಷಿಸಲಾಗುವುದಿಲ್ಲ. ಮೋಟರ್ ವಾಹನಗಳ ಮೇಲಿನ ಲೈಸೆನ್ಸ್ ಫೀಸಿನಿಂದ ರೂಪಾಯಿ 84,100 ಮಾತ್ರ ದೊರೆಯಬಹುದು. ಮೂಡಬಿದ್ರೆಯ ಮಿಡ್ಲ್ ಸ್ಕೂಲನ್ನು ಮುಚ್ಚಿದುದರಿಂದ ಸರಕಾರವು ಬೋರ್ಡಿಗೆ ಕೊಡುವ ನಿಶ್ಚಿತ ಸಹಾಯವನ್ನು ರೂ. 2409ರಷ್ಟು ಕಡಿಮೆಮಾಡಿದೆ. ಈ ಸಹಾಯವು 1926ರಲ್ಲಿ ನಿಶ್ಚೈಸಲ್ಪಟ್ಟಿದೆ. ದಕ್ಷಿಣಕನ್ನಡದಷ್ಟೇ ಇಲ್ಲವೆ ಅದಕ್ಕಿಂತ ಕಡಿಮೆ ಶಾಲೆಗಳನ್ನು ನಡೆಸುವ ಪ್ರಾಂತದ ಇತರ ಬೋರ್ಡುಗಳಿಗೆ ಸಿಗುವ ಸಹಾಯಕ್ಕಿಂತ ಇದು ಬಹಳ ಕಡಿಮೆಯಾಗಿ ಏನೇನೂ ಸಾಲದಾಗಿದೆ. ಈ ಸಹಾಯವನ್ನು ಹೆಚ್ಚಿಸಬೇಕೆಂದು ಬೋರ್ಡಿನವರು ಮಾಡಿರುವ ನಿರ್ಣಯಗಳಿಗೆ ಸರಕಾರವು ಕಿವಿಕೊಟ್ಟಿರುವುದಿಲ್ಲ. ಸೆಕೆಂಡರಿ ಶಾಲೆಗಳಿಂದ ಬೋರ್ಡಿಗೆ ಬರುವ ವರ್ಷ ದೊರೆಯುವ ಆದಾಯವು ರೂ. 76,030 ಎಂದು ಅಂದಾಜುಮಾಡಲಾಗಿದೆ. ಚಾಲ್ತಿವರ್ಷದ ಅಂದಾಜು ರೂ. 74,840 ಶಾಲಾ ಸಂಬಳವು ಹೆಚ್ಚಿಸಲ್ಪಟ್ಟು ಈ ಆಯುವು ಸ್ವಲ್ಪ ಹೆಚ್ಚಲು ಕಾರಣ. ಸಾರ್ವಜನಿಕ ಆರೋಗ್ಯಖಾತೆಯ ಆಯುವು ರೂ 4790 ಎಂದು ಅಂದಾಜುಮಾಡಲಾಗಿದೆ. ಚಾಲ್ತಿವರ್ಷದ ಈ ಆಯುವು ರೂ 4740. ಆಪಾಯಕರ ಹಾಗೂ ಹಾನಿಕರ ವ್ಯಾಪಾರಗಳ ಮೇಲಿನ ಲೈಸೆನ್ಸ್ ಫೀಸು ಮತ್ತು ಸಾಲುಮರಗಳ ಉತ್ಪತ್ತಿಯ ಮಾರಾಟದ ಹೊರತು ಇನ್ನಾವ ರೀತಿಯಲ್ಲಿಯೂ ಬೋರ್ಡ್ ತನ್ನ ಆಯುವನ್ನು ಹೆಚ್ಚಿಸುವ ಸಾಹಸಪರ ಉದ್ಯಮಗಳನ್ನು ಕೈಕೊಳ್ಳದುದು ನಮ್ಮ ದುರಾದೃಷ್ಟವೆನ್ನಬೇಕು. ಮೇಲಿನ ಬಾಬುಗಳಿಂದ ಬೋರ್ಡಿಗೆ ಬರುವ ವರ್ಷ ದೊರೆಯಬಹುದಾದ ಆ ಆದಾಯವು ರೂ. 10,370. ಬರುವ ವರ್ಷದ ಬಜೆಟಿನಲ್ಲಿ ರೂ. 17,730ನ್ನು ರಸ್ತೆ ಮೊದಲಾದುವುಗಳ ವೆಚ್ಚಕ್ಕಾಗಿಯೂ, ರೂಪಾಯಿ 37,780 ಎಲಿಮೆಂಟರಿ ಎಡ್ಯುಕೇಶನ್ ಫಂಡಿಗೂ ವರ್ಗಾಯಿಸುವ ಸೂಚನೆಮಾಡಲ್ಪಟ್ಟಿದೆ. ಎಲಿಮೆಂಟರಿ ಎಡ್ಯುಕೇಶನ್ ಫಂಡಿಗೆ ವರ್ಗಾಯಿಸಲ್ಪಡುವ ಹಣದಲ್ಲಿ ರೂ. 33,580 ಕ್ರಮಪ್ರಕಾರ ಸದ್ರಿ ಫಂಡಿಗೆ ಕೊಡುವ ಪಾಲು ಮತ್ತು ರೂ. 4200 ಶಾಲಾ ಸಂಬಳ ಮಾಫಿ ಭರ್ತಿ ಮಾಡಲಿಕ್ಕಾಗಿದೆ.

1939-40ರ ವ್ಯಯ ಅಂದಾಜು

ಬರುವ ವರ್ಷದ ವ್ಯಯವು ರೂಪಾಯಿ 6,58,740 ಎಂದು ಅಂದಾಜುಮಾಡಲಾಗಿದೆ, ಇದು ಚಾಲ್ತಿವರ್ಷದ ತಿದ್ದುಪಡಿ ಮಾಡಲ್ಪಟ್ಟ ಅಂದಾಜು ವೆಚ್ಚದಿಂದ ರೂ. 20,970 ರಷ್ಟು ಅಧಿಕವಾಗಿದೆ. ಆಡಳಿತ ವೆಚ್ಚಕ್ಕಾಗಿ ರೂ. 910 ಸಂಚಾರಾನುಕೂಲತೆಗಾಗಿ ರೂ. 11,290 ಸೆಕೆಂಡರಿ ಶಿಕ್ಷಣಕ್ಕಾಗಿ ರೂ. 2190, ಸಾರ್ವಜನಿಕ ಆರೋಗ್ಯಕ್ಕಾಗಿ ರೂ 6,580 ಹೆಚ್ಚಿಗೆ ವ್ಯಯಮಾಡಲ್ಪಡುವುದೇ ವೆಚ್ಚವು ಹೆಚ್ಚಲು ಕಾರಣ ವೆಚ್ಚದ ಬಾಬುಗಳನ್ನೆಲ್ಲಾ ಬಜೆಟ್ ಕಮಿಟಿಯವರು ಚೆನ್ನಾಗಿ ಪರಿಶೀಲಿಸಿ, ತಮಗೆ ದೊರೆಯಬಹುದಾದ ಹಣವನ್ನು ನ್ಯಾಯವಾಗಿ ಎಲ್ಲಾ ಖಾತೆಗಳೊಳಗೂ ಹಂಚಿರುತ್ತಾರೆ. ಹೆಚ್ಚಿನ ಸೌಕರ್ಯಗಳಿಗಾಗಿ ಅವರು ಹಣದ ಏರ್ಪಾಡು ಮಾಡದಿದ್ದರೆ ಅದಕ್ಕೆ ಹಣದ ಅಭಾವವೇ ಕಾರಣವಲ್ಲದೆ, ಅವರಲ್ಲಿ ಆ ಉತ್ಸಾಹವಿಲ್ಲದೇನೂ ಅಲ್ಲ ಕ್ರಮಪ್ರಕಾರ ಬೋರ್ಡಿನ ಸರ್ವಸಾಮಾನ್ಯ ವೆಚ್ಚವು ಆಯುಕ್ಕಿಂತ ಅಧಿಕವಾಗಬಾರದು. ಆದರೆ ನಾನು ಆರಂಭದಲ್ಲೇ ಸೂಚಿಸಿದಂತೆ ನಮ್ಮ ಸಾಮಾನ್ಯ ಆಯುವು ಎಂದೂ ಏಕಪ್ರಕಾರವಾಗಿರದೆ ಅನಿಶ್ಚಿತವಾಗಿದೆ.

ವೆಚ್ಚದ ಬಾಬುಗಳನ್ನು ಆದಷ್ಟು ಕಡಿಮೆ ಮಾಡಿ ಬಜೆಟ್ ಕಮಿಟಿಯವರು ಹಣ ಉಳಿಸಿದರೂ 1939-40ರ ಬಜೆಟಿನಲ್ಲಿ ಆಯುವ್ಯಯ ಬಾಯಿ ಗೂಡುವುದಿಲ್ಲ. ಜನರಲ್ ಎಕೌಂಟಿನಲ್ಲಿ ರೂ. 1110 ಕಡಿಮೆ ಬಿದ್ದಿದೆ ಕಾನೂನು ಪ್ರಕಾರ ರೂ. 16,710ರಷ್ಟರ ಶಿಲ್ಕು ಇರತಕ್ಕದ್ದು. ಬೋರ್ಡಿನ ಬಜೆಟಿನ ವರ್ಷದ ಆರ್ಥಿಕ ಸ್ಥಿತಿಯು ಈ ಕೆಳಗಣಂತಿದೆ.

ಆಯು (ವರ್ಷಾರಂಭದ ಶಿಲ್ಕು ಸೇರಿ) ರೂ. 6,57,630. ವ್ಯಯ 6,58,740 ರೂಪಾಯಿ. ಅಭಾವ ರೂ. 1110 ಕಾನೂನು ಪ್ರಕಾರ ವರ್ಷಾಂತ್ಯದಲ್ಲಿರಬೇಕಾದ ಶಿಲ್ಕು ರೂ. 16710. ಒಟ್ಟು ಅಭಾವ ರೂ. 17,820.

ಯೋಗ್ಯಕಂಡರೆ
ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

"THE PRIDE AND ENVY OF INDIAN INSURANCE"

Facts that call for your immediate attention:-

***The Company has just undergone its First Valuation as at 31st December, 1938**

***The Valuation has been performed assuming an interest rate of 3½%, a low rate which is adopted by very few Indin Companies of good standing and nevertheless the surplus disclosed is substantial.**

***A substantial Life Fund supported by clean assets and complete absence of preliminary expenses and organisation outlay in the assets of every one of the Balance Sheets**

***A very low expense ratio.**

The above in the opinion of the Consulting Actuary, Prof. K B Madhava M.A., F.S.S., A.I.A. (London), **"are undoubtedly such as to be the pride and envy of Indian Insurance"**. The Actuary recommends the declaration of a simple Reversionary Bonus at Rs 15/- per Rs 1000/- Sum Assured on Sial Whole Life Assurances and at Rs. 10/- per Rs. 1,000/- Sum Assured on Endowment Assurances.

Just the Company for you to insure with or represent.

THE

CANARA MUTUAL
ASSURANCE CO., LTD.

The Company is Mutual] UDIPI, S. INDIA. [There are no Shareholders.

ಎಲ್ಲೆಲ್ಲಿ ಏನೇನು?

● ವೈಸರಾಯರ ಭಾಷಣಕ್ಕೆ ಗಾಂಧಿಗಳ ಸರ್ಟಿಫಿಕೇಟು.
● ವಿಠಲಭಾಯಿ ಪಟೇಲರ ವಿಲ್ ಜಜ್ಮೆಂಟ್ ಮಾರಾಟದ ಸಾಬಲಗಿನ ಮೇಲೆ ಟೀಕ್ಸ್.

ಚೀನೀಯರಿಗೆ ಬ್ರಿಟಿಷ್ ಕಾರ್ಖಾನೆಯಿಂದ ೩೦೦ಲೋರಿಗಳು. ಬೆಲ ೨೨೧೦೦೦ ಪವನು!

ಥೋರ್ನೀ ಕ್ರ್ಯೋಫ್ಟ್ ಎಂಬ ಲಂಡನಿನ ಮೋಟರ್ ಕಾರ್ಖಾನೆಗೆ ಚೈನವು ತನ್ನ ಬರ್ಮಾ-ಯೂನಾನ್ ರಸ್ತೆಯಲ್ಲಿ ಸಂಚಾರಕ್ಕಾಗಿ ಸಂಪೂರ್ಣ ಸಾಹಿತ್ಯ ಸಿದ್ಧವಾದ ೩೦೦ ಮೋಟಾರ್ ಲೋರಿಗಳನ್ನು ರಂಗೂನ್ ಬಂದರದಲ್ಲಿ ಇಳಿಸಿಕೊಡಬೇಕೆಂದೂ ಅವುಗಳ ಬೆಲೆ ೨೨೧೦೦೦ ಪವನನ್ನು ಕೊಡುತ್ತೇವೆಂದೂ ಕೂಡಲೇ ಮೊದಲ ಹಡಗದಲ್ಲಿ ಕಲವು ಬಂದು ಮುಟ್ಟಬೇಕೆಂದೂ ಆ ಕಂಪನಿಗೂ ಚೀನಾ ಸರಕಾರಕ್ಕೂ ತಹನಾಮೆ ಆಗಿದೆ

ವೈಸರಾಯರ ಭಾಷಣಕ್ಕೆ ಗಾಂಧೀಜಿಗಳ ಸರ್ಟಿಫಿಕೇಟು

ಡಿಲ್ಲಿಯ ನರೇಂದ್ರರ ಪರಿಷತ್ತಿನ ಉದ್ಘಾಟನಾ ಸಮಾರಂಭ ನೆರವೇರಿಸುತ್ತ ವೈಸರಾಯರಿತ್ತ ಭಾಷಣವನ್ನು ಗಾಂಧೀಜಿಗಳು ಡಿಲ್ಲಿಗೆ ಹೋಗುತ್ತ ರೈಲುಬಂಡಿಯಲ್ಲಿ ಪಂಪ್ತಿ ಸಂಪ್ತಿಯನ್ನು ಓದಿ ಪರ್ಯಾಲೋಚಿಸಿ '[illegible]' ಎಂಬರಂತೆ ವೈಸರಾಯರು ಸಂಸ್ಥಾನಗಳ ರಾಜ್ಯಭಾರ ಸ ... [illegible] ... ರ್ತಿಯಲ್ಲಿ ... [illegible]

ಕರಾಚಿಯಲ್ಲಿ ... [illegible] ... ವಿಚಾರಣಾ ಸಮಿತಿ

[illegible]

ಸರಕಾರವು ನಿಷೇಧಾಜ್ಞೆಯನ್ನು ಹೊರಡಿಸದಿದ್ದರೆ ತಾವು ತಮ್ಮ ಮಂತ್ರಿಪದಕ್ಕೆ ರಾಜಿನಾಮೆ ಕೊಡುತ್ತೇವಾಗಿ ಸಿಂಧ ಪ್ರಾಂತದ ಇಬ್ಬರು ಮಂತ್ರಿಗಳ ಪ್ರಧಾನ ಮಂತ್ರಿಗಳಿಗೆ ಹೇಳಿದರು. ಪರಿಣಾಮವಾಗಿ ಆ ಆತ್ರಮದ ಮೇಲಿರುವ ಆರೋಪಣೆಗಳ ವಿಚಾರಣೆಗಾಗಿ ಒಂದು ನ್ಯಾಯಾಧೀಶರ ಮಂಡಲವು ನೇಮಕವಾಗಿದೆ. ಎಡಿಶನಲ್ ಜುಡಿಸಿಯಲ್ ಕಮೀಷನರುಗಳಾದ ಸಿ. ಎಮ್. ಲೋಬೋ, ಇ ವೆಸ್ಟನ್ ಇವರೂ ನಿವೃತ್ತ ನ್ಯಾಯಾಧೀಶರಾದ ರೂಪಚಂದ ಬಲರಾಮ್ ಇವರೂ ಆ ನ್ಯಾಯಾಧೀಶ ಮಂಡಲದ ಸದಸ್ಯರಾಗಿದ್ದಾರೆ. ಅವರು ಈ ವಾರದಲ್ಲಿ ವಿಚಾರಣೆಯನ್ನು ಪ್ರಾರಂಭಿಸುವರು.

ವಿಠಲಭಾಯಿ ಪಟೇಲರ ವಿಲ್ ಜಜ್ಮೆಂಟ್

ವಲ್ಲಭಭಾಯಿ ಪಟೇಲರ ಪ್ರಕಟಣೆ

[illegible]

... ಹಣ ನೆಚ್ಚರಕ್ಕಾಗಿ ಕೊಡಲ್ಪಡಬೇಕೆಂದು ಇತ್ತು. ಆದರೆ ಆ ಶಬ್ದಗಳು ಅಸ್ಪಷ್ಟವಾಗಿದ್ದುದರಿಂದ ಆ ನಿಧಿಯು ಭಾರತಕ್ಕೇ ಕೊಡಲ್ಪಟ್ಟಿದೋ ಅಥವಾ ನಿಶ್ಚಿತವಾದ ಯಾವದಾದರೂ ಸಂಸ್ಥೆಗೆ ದತ್ತವಾದುದೋ ಎಂಬುದರ ವಿಷಯ ಕಾನೂನಿನ ತೊಡಕುಬಂದು ಹ್ಯಾಕೋರ್ಟಿನಲ್ಲಿ ಮೇಲೆ ಹೇಳಿದಂತೆ ತೀರ್ಮಾನವಾಯಿತು.

ಮಾರಾಟದ ಸಾಬಲಗಿನ ಮೇಲೆ ಟೀಕ್ಸ್

ರಾಜಾಜಿಗಳ ನಿರ್ಧಾರ

ಮದ್ರಾಸು ಪ್ರಾಂತಿಕ ಸರಕಾರವು ಈಗಿನ ಬಜೆಟ್ ಅಧಿವೇಶನದಲ್ಲಿ (... ಟೀಕ್ಸ್) ವಿಕ್ರಯದ ಸಾಬಲಗಿನ ಮೇಲೆ ... ಗೆ ... [illegible]

ಮಂತ್ರಿಮಂಡಲ ನಿರ್ಮಾಣ ಮಾಡಿಕೊಳ್ಳಲಿ. ನಾವು ಮಾತ್ರ ಈ ತೆರಿಗೆಯನ್ನು ಹೊರಿಸದೆ ಇರಲಿಕ್ಕೆ ಸಾಧ್ಯವಿಲ್ಲ—ಎಂದು ಕಂಠೋಕ್ತವಾಗಿ ಸಾರಿದ್ದಾರೆ.

ಸಂಸ್ಥಾನಿಕ ರಾಜರ ಪರಿಷತ್ತಿನಲ್ಲಿ ವೈಸರಾಯರ ಸ್ಪಷ್ಟೋಕ್ತಿ

ಫೆಡರೇಶನಿಗೆ ಸಂಸ್ಥಾನ ಸೇರಬೇಕೋ ಬೇಡವೋ ಎಂಬುದನ್ನು ಸಂಸ್ಥಾನಗಳೇ ದೀರ್ಘ ವಿಚಾರಮಾಡಿ ನಿರ್ಧರಿಸಬೇಕಾಗಿದೆ ... [illegible]

SAVING MONEY AND TIME

Thousands of prudent and thriving ... men prefer this Bank because attention ... and personal. To most of these bu... their time is very valuable and they can ... to lose a few minutes every now and th... in idle waiting. They have chosen the CANARA BANK because here they never need w... We make a point of giving every customer immediate and personal attention.

RESOURCES OF A CRORE

ESTD 19..

CANARA BANK LIMITED



[illegible]

... Engineer... BOMBAY.

THE
Canara Banking Corporation, Udipi, Ltd.
(Incorporated in British India.)
ESTD. 1906

THREE YEARS' CASH CERTIFICATES
bearing interest at 4% p. a. in denominations of
Rs. 50/-, 100/-, 500/-, 1,000/- & 5000/-
are now issued at
all our Branches.

For particulars call at or write to any of our nearest Branches.

ನವಯುಗ

[illegible]

ವುದು ಎಂಬ ಅಸಮಾಧಾನ ತಲೆದೋರಿದೆ. ನಾರ್ವೇ ಬೆಲ್ಜಿಯಂ, ಹೋಲ್ಲಾಂಡ್ ಸ್ವಿಜರ ಲ್ಯಾಂಡ್, ಮುಂತಾದ ಯುರೋಪಿನ ಚಿಕ್ಕ ಸ್ವತಂತ್ರರಾಷ್ಟ್ರಗಳು ಜರ್ಮನಿಯ ವರ್ತನೆಯನ್ನು ಖಂಡಿಸಿರುವುದಲ್ಲದೆ ತಮ್ಮನ್ನು ಕೆಣಕಿದವರನ್ನು ಸೆಣಸಾಡದೆ ಬಿಡುವವರಲ್ಲವೆಂದು ಗರ್ಜಿಸತೊಡಗಿವೆ. ಅಂತಹ ಸಂದರ್ಭಬಂದರೆ ಕಂಗೆಡದಂತೆ ಈ ಗಾಗಲೇ ಶತ್ರುಪ್ರತಿಭಟನೆಯ ಆತ್ಮಸಂರಕ್ಷಣೆಯ ಸಕಲ ಪೂರ್ವಸಿದ್ಧತೆಗಳ ವಿಚಾರವು ಪ್ರತಿಯೊಂದು ರಾಷ್ಟ್ರದ ಪ್ರಾಮುಖ್ಯ ಪ್ರಶ್ನೆಯಾಗಿ ಇಂದು ನಿಂತಿದೆ. ಹಿಂದಿನ ಮಹಾಯುದ್ಧದಲ್ಲಾದಂತೆ ಈ ಎಲ್ಲ ಚಿಕ್ಕ ರಾಷ್ಟ್ರಗಳು ಬ್ರಿಟನ್, ಫ್ರಾನ್ಸ್, ರಷ್ಯಾ, ... [illegible]

...ನು? ಮಹಾಯುದ್ಧದಲ್ಲಿ ಗೆದ್ದರೆ ತಮಗೆ ವಸಾಹತುಗಳಲ್ಲಿ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆಂದು ಭಾಷೆ ಕೊಟ್ಟುದನ್ನು ಸಾರ್ಥಕಗೊಳಿಸಿದಿರೇ? ಫ್ರಾನ್ಸ್ ೧೯೩೫ರಲ್ಲಿ ಇಟಲಿಯು ಎಬಿಸೀನಿಯಾದ ಕುರಿತು ಇಷ್ಟಾನುಸಾರ ವರ್ತಿಸಬಹುದೆಂದು ಒಪ್ಪಿಗೆಯಿತ್ತುದನ್ನು ರದ್ದುಪಡಿಸಿ ಬ್ರಿಟನ್ನಿನೊಂದಿಗೆ (ಸೆಂಕ್ಷನ್) ಬಹಿಷ್ಕಾರ ಘೋಷಣೆಯನ್ನು ವಹಿಸಿಲ್ಲವೇ? ಇಂದಿನವರೆಗೆ ಯುರೋಪು ನಮಗೇನು ಔದಾರ್ಯ ತೋರಿಸಿದೆ? ಅನುಕೂಲ ಮಾಡಿಕೊಟ್ಟಿದೆ? ಎಲ್ಲಾ ಪ್ರತಿಕೂಲಗಳನ್ನೇ ... [illegible]

ಜೆಕ್ಕರ ಅಸಂತೃಪ್ತಿ ಪ್ರದರ್ಶನ

[illegible]

ಕಾಂಗ್ರೆಸ್ ಮುಂದಾಳುಗಳೊಬ್ಬರ ಭೀಕರ ಕೊಲೆ

ತಿರುವಾಂಕೂರು ಸಂಸ್ಥಾನದಲ್ಲಿ ಚಳವಳಿ

ತಿರುವಾಂಕೂರಿನ ಸ್ಟೇಟ್ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ. ಪಟ್ಟಾಂ ಎ ತಾನು ಪಿಳ್ಳೆ, ಶ್ರೀ. ಜಿ. ರಾಮಚಂದ್ರನ್, ಸ್ಟೇಟ್ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರ್ ಮತ್ತು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಮೆಂಬರ್, ಇವರೀರ್ವರನ್ನೂ ದಸ್ತಗಿರಿ ಮಾಡಲಾಗಿದೆ.

ತಿರುವಾಂಕೂರು ಸ್ಟೇಟ್ ಕಾಂಗ್ರೆಸ್ಸಿನ ಕೌನ್ಸಿಲ್ ಆಫ್ ಏಕ್ಷನ್ (ಕಾರ್ಯ ನಿರ್ಣಾಯಕ ಸಮಿತಿ) ಇದರ ಏಳು ಸದಸ್ಯರಲ್ಲಿ ಆರು ಮಂದಿಯನ್ನು ದಸ್ತಗಿರಿ ಮಾಡಿಯದೆ.

[illegible]

ಸುಧಾರಣೆಗಳ ಕುರಿತು ಇನ್ನೊಂದು ತಿಂಗಳೊಳಗೆ ಪ್ರಕಟಣೆ ಕೊಡುವುದಾಗಿ ಪ್ರಜೆಗಳಿಗೆ ತಿಳಿಸಿ ಪ್ರಬಲ ಚಳುವಳಿಯೊಳದಂತೆ ಉಪಶಮನದ ಮಾತ್ರೆ ಕೊಟ್ಟಿದೆ.

ಜಯಪುರದಲ್ಲಿ ಸತ್ಯಾಗ್ರಹ ನಿಲ್ಲಿಸಲಾಗಿದೆ.

ಗಾಂಧೀಜಿಯವರು [illegible]

ಬಿಹಾರದಲ್ಲಿ ಕಾಂಗ್ರೆಸ್ಸು ಮುಂದಾಳುಗಳೊಬ್ಬರ ಭೀಕರ ಕೊಲೆ.

[illegible]



[illegible]

ದ್ದನು. ಆವರನ್ನೀಗ ತಿರುಗಿ ಹಿಂದೂ ಮತಕ್ಕೆ ಶುದ್ಧೀಕರಣ ಸಂಸ್ಕಾರದಿಂದ ಸೇರಿಸಿಕೊಂಡರು.

ಯುರೋಪಿನಲ್ಲಿ ರಾಷ್ಟ್ರಗಳೊಳಗೆ ಮಹಾ ಕ್ಷೋಭೆ.

[illegible]

ಟ್ರ್ಯಾಲ್ ಎಸೋಶಿಯೇಶನಿನ ಸೆಕ್ರೆಟರಿ, ತಾ. ೧೫ನೇ ರಾತ್ರೆ ೯ ಘಂಟೆಗೆ ಮದ್ರಾಸ್ ಬಂದರದ ಒಂದು [illegible]

ರಸ್ಯಾ ಗಡಿಯಲ್ಲಿ ಜಪಾನರ ಆಕ್ರಮಣ ಪ್ರಾರಂಭ

ಕೃಷ್ಣ ದೇವಸ್ಥಾನದಲ್ಲಿಯೂ ನಿಜವಾದ ಹಿಂದೂ ಮತ ತತ್ವ ಪ್ರಕಾರ ಆ ಮಧ್ಯೆ ಪನೆಯಿರಕೂಡದು. ಎಂದು ಅಸ್ಪೃಶ್ಯತೆ ಮತ್ತು ಉಚ್ಚ ನೀಚ ವರ್ಗಗಳೆಂಬ ಭಾವನೆಯು ಹಿಂದೂ ಮತದೊಳಗೆ [illegible] [illegible]

ನೌಕೆಗಳನ್ನು ಸಿದ್ಧಗೊಳಿಸಿ ಮುಂದೆ ೧೯೪೦ ರೊಳಗೆ ಮತ್ತು ೧೨೦ ಹಡಗುಗಳನ್ನೂ ಅನಂತರ ಮೂರು ವರುಷಗಳಲ್ಲಿ ೩೦೦ ಯುದ್ಧದ ಹಡಗುಗಳನ್ನೂ ಅನೇಕ ಸಮುದ್ರಾಂತರ್ಗಾಮಿ ನೌಕೆಗಳನ್ನೂ ಸಿದ್ಧಗೊಳಿಸಿಕೊಳ್ಳುವೆವೆಂದು ಬ್ರಿಟಿಶ ಸರಕಾರವು ನಿರ್ಧರಿಸಿದೆ.

ಪೂರ್ವದ ರಸ್ಯಾ ಗಡಿಯಲ್ಲಿ ಜಪಾನಿಯರ ಆಕ್ರಮಣ

ಪ್ರಾರಂಭ. ರಸ್ಯಾದ ಆಕ್ಷೇಪ [illegible]



ಅಮೇರಿಕದಲ್ಲಿ ಮುಂಜಾಗ್ರತೆಯ ವ್ಯವಸ್ಥೆ

ಜರ್ಮನಿಯೊಡನೆ ಜೆಕೋಸ್ಲೊವೇಕಿಯವು ಸೇರಿಹೋದುದನ್ನು ಕಂಡ ಅಮೇರಿಕದ ಕಣ್ಣು ತೆರೆದಾಗಿದೆ. ಹೀಗೆ ಸ್ವತಂತ್ರ ರಾಷ್ಟ್ರಗಳನ್ನು ನುಂಗುವ ಹಿಟ್ಲರನ ಧೋರಣೆಯನ್ನು [illegible] [illegible]

ಯೋಗಕಲಾಪಗಳ ಸಾರಾಂಶ ವರದಿಯನ್ನು ಅಧ್ಯಕ್ಷರ ಮೂಲಕ ಡಿ. ಇ. ಓ. ಗೆ ಕಳುಹಿಸಲ್ಪಟ್ಟ ಅಂಥವುಗಳ ಸಾರ ಸಂಗ್ರಹವಾಗಿ ಜಿಲ್ಲಾ ವರದಿಯನ್ನು ಡಿ. ಇ. ಓ. ರವರು ಡಿರೆಕ್ಟರರಿಗೆ ಒಪ್ಪಿಸಬೇಕು.

ಎರಡನೆಯ ಹುಕುಂ ಮೇರೆಗೆ ಆಯಾ ಸ್ಥಳಗಳ ಅನುಸಾರವಾಗಿ ಈ ಕೆಳಗಿನ ಸಂಘಗಳನ್ನು ಉಪಾಧ್ಯಾಯರು ಸ್ಥಾಪಿಸಿಕೊಳ್ಳಬಹುದು. [illegible]

NOTICE

[illegible]

To Insure is
The Husband's duty. The wife's right and the child's claim Hence seek for a policy of
THE ASIAN ASSURANCE CO, LTD,
The safest and one of the largest Indian Concerns

Head Office --
Asian Buildings
Ballard Estate
Bombay

Branch Office —
Hampankatta
Mangalore



ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

[illegible]

J A PUTRAN
Branch Manager,
Mangalore

ಉಡುಪಿ

ತಾ. 19 3-39ರಲ್ಲಿ [illegible]

ನೋಟೀಸು

[illegible]

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಪಬ್ಲಿಕ್ ಬಿಲ್ಡಿಂಗ್ ಸತ್ಯಾಗ್ರಹ

[illegible]

ಸಲ್ಲಿರುವ ಸತ್ಯಾಗ್ರಹಿಗಳು ಪುನಃ ಹಿಂದಕ್ಕೆ ಬಂದ ಮೇಲೆ, ಇದನ್ನು ಪುನಃ ನಡೆಸುವರೆಂದೂ ಹೇಳಲಾಗಿದೆ. ಇದು 'ಮದ್ರಾಸಿನಲ್ಲಿ ನಡೆದ [illegible] ಸತ್ಯಾಗ್ರಹದ ಮಾದರಿಯಲ್ಲಿ ನಡೆಸಬಹುದೆಂದು [illegible] ನಮ್ಮ ಪ್ರತಿನಿಧಿಗಳಿಗೆ ಅವರು ಮಾತನಾಡುವ [illegible] ತಿಳಿಸಿದರು.

ಆದರೆ ಈ ಸತ್ಯಾಗ್ರಹವು [illegible] ಈ [illegible] ದಿನಗಳಾಯಿತು [illegible] ಉಗ್ರರೂಪವನ್ನೇ [illegible] ದಿನ ನಡೆಯುತ್ತಿ [illegible]

ಕುಷ್ಠರೋಗ ನಿವಾರಣೆಯ ಆಸ್ಪತ್ರೆ

[illegible]

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

ತಾ 17–3–39.

ಸಾಧಾರಣ ಎರಡು ವಾರಗಳ ಮೊದಲೆನ್ನಿಂದು ನಡೆಯುತ್ತಿದ್ದ [illegible] ಕೆಲಸಗಾರರೊಡನೆ 'ಎಂಕರ್ ಲೈನ್'ನವರು ಸಂಧಿ ಮಾಡಿಕೊಂಡರು. ಈ ಕೆಲಸಗಾರರನ್ನು ಕ್ರಮದಲ್ಲಿ ಸೇರಿಸುವವೆಂದು ಆಭಿಪ್ರಾಯ ಕೊಟ್ಟಿರುವರು. [illegible] ಕಂಪನಿಯ [illegible] ರಾಜಿಮಾತುಕತೆಗೆ ಬರಬಹುದೆಂಬ ಹಾರೈಕೆ.

[illegible]

ನವಯುಗ ಸ್ಪರ್ಧೆ ೧.

ರೂಪಾಯಿ ೨೫ ಬಹುಮಾನ.

1	2	3	4 ತ
		ರ	
	ದೇ		
ಗ		ಕ್ಷಿ	೦

I ಇನಾಂ ರೂ. 10/- II ರೂ. 6ರ ಇನಾಂ ೨. III ರೂ. 1ರ ಇನಾಂ ೫. ಒಟ್ಟು ರೂ. ೨೫/- ರ 8 ಇನಾಮುಗಳು.

ಸೂಚನೆಗಳು:—

ಎಡದಿಂದ ಬಲಕ್ಕೆ —(1) [illegible]

ಮೇಲಿಂದ ಕೆಳಕ್ಕೆ —(1) [illegible]

[illegible] — (೧) [illegible]

ನವಯುಗ ಸ್ಪರ್ಧೆ,

[illegible]

THE
PREMIER BANK
OF INDIA, LIMITED
Head Office MADRAS
Branches
[illegible] NELLORE.
CHAIRMAN
Dr U. L. Narayana Rao.
[illegible] Madras
[illegible] DEPOSITS
[illegible]

ಈ ವಾರದ ಫಲಿತಾಂಶವೇನು?

(ತಾ. 23 3 39ರಿಂದ 30—3—39ರ ವರೆಗಿನ ಭವಿಷ್ಯ)

ಮೇಷರಾಶಿ—

ಪತ್ರವ್ಯವಹಾರ

(ಪತ್ರಕಾರರು ತಮ್ಮ ಸಂಪೂರ್ಣ ವಿಳಾಸವನ್ನು [illegible] ಕೊಡಬೇಕಾಗಿದೆ. ಪತ್ರಗಳು ಆದಷ್ಟು [illegible] ಕಾಗದದ ಒಂದೇ ಮಗ್ಗುಲಲ್ಲಿ [illegible] ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗ[illegible] ಪತ್ರಕಾರರ ಅಭಿಪ್ರಾಯಗಳಿಗೆ [illegible]) [ಸಂ. ನ]

ಉಡುಪಿ ಟೌನ್ ಕಾಂಗ್ರೆಸ್ ಕಮಿಟಿ

ಶ್ರೀ [illegible]ರವರಿಗೆ ಉತ್ತರ

[illegible]

ಆದರೆ ಇದು ಯಾವಾಗಲೂ ಒಂದೇ ರೀತಿಯಾಗಿ ನಡೆದೀತು ಎಂದು ತಿಳಿದಿರುವಿರಾ? ಮಾಡ್ಬಿದವ ರು ಮಾಡಿದವರು ಫಲವನ್ನು ಬೇಗನೆ ಅನುಭವಿ ಸಬೇಕಾಗುವದೆಂಬುದನ್ನು ಸಾವುದಿನನಿತ್ಯವೆಂಬಂ ತೆನೋಡುತ್ತಿದ್ದೇವೆ. ಇಂಥಾ ಸುಳ್ಳುಗಳಿಂದ[illegible] ಗಳ್ಳರ[illegible] ಬಾಧವಿರಬಹುದೇನೂ ಇರಲಿ. ನೀ ವು ಟೌನ್[illegible] ಆಫೀಸರಾ ಗಿದ್ದೀರೆಂದು ವಾಂಗಳೂರು ವಾರಪತ್ರಿಕೆ ಒಂದ ರಲ್ಲಿ ಓದಿದ ನೆನಪು ಆದರೆ ಉಡುಪಿಯಲ್ಲಿ ಪ್ರಕ ಟವಾಗುವ ಪತ್ರಿಕೆಯಲ್ಲಿ ಆ[illegible] ಇಲ್ಲ ಇದರ ಒಳಗುಟ್ಟೇನು? ಇದು [illegible] ಶು[illegible]ವನೇ? ಕಮಿಟಿಯು ಆ ನಡಸ್ಕರದ್ದೇ? ಇಷ್ಟು [illegible] ಬುದ್ಧಿಯು ಅವರಿಗಿದ್ದೀತೆ? [illegible] ಆಗಲಿ 6—30 [illegible] ಸುಳ್ಳು ಮಾ ತೇ?

[illegible] ವೊದಲಿನ ಮೀಟಿಂಗು, [illegible] ಮೀಟಿಂಗಿಗೇ ಇಷ್ಟು [illegible]?

[illegible]

ದಕ್ಷಿಣಕನ್ನಡ ಜಿಲ್ಲಾ ಬೋರ್ಡು ಹಂಗಾಮಿ ಉಪಾಧ್ಯಾಯರಲ್ಲಿ ವಿನಂತಿ.

ಪ್ರಸ್ತುತ ಉಪಾಧ್ಯಾಯರ ಪರಿಸ್ಥಿತಿಯು ಶೋ ಚನೀಯವಾಗಿದೆಯೆಂಬುದನ್ನು ನೀವೆಲ್ಲರೂ ತಿಳಿದಿರು ವಿರಿ ನಮ್ಮ ಜಿಲ್ಲಾ ಬೋರ್ಡ ಅಧಿಕಾರದವರಿಗೆ ಇಂದಿನ್ನು ಹಂಗಾಮಿ ಉಪಾಧ್ಯಾಯರ ಸಂಬಳ ದಲ್ಲಿ ಕಡಿತ[illegible] ಅದು ವರ್ಷವರ್ಷವರೆಗೂ ಬಂದು ಈಗ [illegible] ಬಂದು[illegible] ಬಹಿಷ್ಕ[illegible] ನಿಮಗೆ ಗೊತ್ತಿದೆ. ಇದರಿಂದ ಜಿಲ್ಲಾ ಬೋರ್ಡ ಸಮಾಧಾನ [illegible] ಈ ವರ್ಷ 'ಪ್ರೊ ಬೇಶನರಿ' ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ಹೊಸತೊಂದು ಸಂಬಳದ ಸ್ಕೇಲನ್ನು ಜ್ಯಾರಿಗೆ ತಂದಿ ರುತ್ತಿದೆ. ಇದೇ ಕಳೆದ ಫೆಬ್ರವರಿ ಅಂತ್ಯದೊಳಗೆ ಟ್ರೈನಿಂಗ್ ಪರೀಕ್ಷೆ ಪಾಸಾದ ಮೇಲೆ ಎರಡುವರ್ಷ ಸರ್ವೀಸು ಯಾರಿಗೆ ಅಲ್ಲವೋ ಮತ್ತು ಆ ಸಮಯ ದೊಳಗೆಯಾರು ಸರ್ಟಿಫಿಕೇಟು ಸಂಪೂರ್ಣ ಹೊಂದು ವುದಿಲ್ಲವೋ ಅಂಥವರಿಗೆಲ್ಲಾ ಈ ಹೊಸ ಸ್ಕೇಲು-ಅಂದರೆ

ಹಯರ್ ಗ್ರೇಡ್ 18/-ರಿಂದ 25/-

ಸೆಕೆಂಡರಿಗ್ರೇಡು ರೂ. 20/-ರಿಂದ 35.

ಅನ್ವಯಿಸುತ್ತದೆ. ಈ ರೀತಿಯ ಸ್ಕೇಲನ್ನು ಜಿಲ್ಲಾ ಬೋರ್ಡ ಸರ್ಕಾರಕ್ಕೆ ಕಳುಹಿಸಿರುತ್ತದೆ. ಸರಕಾರವು ಇದನ್ನು ಮಂಜೂರುಮಾಡಿದರೆ ನಮ್ಮೆಲ್ಲ ರ ಸ್ಥಿತಿಯು ಏನಾಗುವದೆಂಬುದನ್ನು ನೀವೇ ಊಹಿ ಸಿರಿ.

ಇದನ್ನು ತಿಳಿದೊಡನೆ ನಾನು ಕೆಲವು ಉಪಾಧ್ಯಾ ಯರೊಡನೆ ವಿಚಾರಿಸಿ, ನಾವು [illegible] ಸೇರಿ [illegible] ಸರಕಾರಕ್ಕೆ ಎಲ್ಲವರ [illegible] ಕಳುಹಿಸುತ್ತೇವೆ. ಎಲ್ಲಾ ಉಪಾಧ್ಯಾ ಯರೊಡನೆ ವಿಚಾರಿಸಿಕೊಳ್ಳಲು ಸಮಯ ಸಂಕೋ [illegible] ನಾನಾ [illegible] ಕಳುಹಿಸಲ್ಪಟ್ಟಿರು ತ್ತದೆ.

[illegible] ಈ ವಿಷಯದಲ್ಲಿ [illegible] ಸಹಾಯವ [illegible] ನಮ್ಮ [illegible] ಕಳುಹಿಸಿ[illegible]

ಇತಿ,

K. Dasappa, Teacher
Kotechery,
P. O. Kanhangad. S.K.

[illegible]

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

I. P. No. $\frac{2}{39}$

ಸೋಮಯ ಶೆಟ್ಟಿ, ಹೆಗ್ಗ ವೋನಪ್ಪ ಶೆಟ್ರ ಅಳಿಯ, ಉಡುಪಿ ತಾಲೂಕು ಹೆರ್ಗಗ್ರಾಮ. } ಅರ್ಜಿದಾರ

ಮತ್ತು

ಕೃಷ್ಣಪ್ಪ ಸಾವಂತ ಕೂಡಾ—ಎದ್ರಿರು.

6ನೇ ಎದ್ರಿ ಉಡುಪಿ ತಾಲೂಕು [illegible] ಗ್ರಾಮ ದಲ್ಲಿರುವ [illegible] ಶೆಟ್ರ ಅಳಿಯ [illegible] ರಾಮಣ್ಣ ಶೆಟ್ಟಿಗೆ ಈ ಮೂಲಕ ತಿಳಿಯಪಡಿಸುವ ದೇನೆಂದರೆ:—

ಅರ್ಜಿದಾರನು ತನ್ನನ್ನು ದಿವಾಳಿಯಾಗಿ ಸ್ಥಾಪಿಸ ಬೇಕೆಂತ ವಗೈರೆ ಕೊಟ್ಟ ಮೇಲ್ಕಂಡ ಅರ್ಜಿಯು ತಾ. 10-4-39ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ಅರ್ಜಿಯ ಕುರಿತು ನಿಮಗೇನಾದರೂ ಆಕ್ಷೇಪವಿದ್ದ ರೆ ಅಂಥಾ ಆಕ್ಷೇಪಗಳನ್ನು ಸದ್ರಿ ದಿನ್ನ ಹಗ್ಲು ಘಂಟೆ 11ಕ್ಕೆ ಸದ್ರಿ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದ ಸದ್ರಿ ಅರ್ಜಿಯು ಅರ್ಜಿದಾರನ ಗುಣಕ್ಕೆ ತೀರ್ಮಾನಿಸಲ್ಪ ಡುವದು.

K. Jagannath Ballal, } Udipi.
Vakil for Petitiner. } Dated 17-3-'39

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 32/39

ಶ್ರೀಮದ್ವಿಶ್ವೇಂದ್ರತೀರ್ಥ ಸ್ವಾಮಿಯರು—ವಾದಿ.

ಅಪ್ಪು ಯಾನೆ ನರಸಿಂಹ ಶ್ಯಾನುಭಾಗ ಕೂಡ—ಪ್ರತಿವಾದಿ

ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿ ಅಪ್ಪು ಯಾನೆ ನರಸಿಂಹ ಶ್ಯಾನುಭಾಗರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲ್ಕಂಡ ವ್ಯಾಜ್ಯವು ತನ್ನಿ ಬಗ್ಗೆ ತಾ. 3-4-39ಕ್ಕೆ ಇಟ್ಟಿದೆ. ಅದರಲ್ಲಿ ಏನಾದ್ರು ಉಜರು[illegible] ಆ ದಿನ್ನ 10 ಗಂಟೆ ಗೆ [illegible] ಸದ್ರಿ ಕೋರ್ಟಿನ ಮುಂದೆ ಸ್ವತಃ ಆಗಲಿ ವಕೀಲರ ಮುಖಾಂತರವಾ ಗಲಿ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ದ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು.

ಪುತ್ತೂರು
ತಾ. 13-3-'39 | C. S. Shastry, Vakil for Petitioner.

ಫೇನ್ಸಿ ಲಿವರ್ ರಿಸ್ಟ್ ವಾಚ್

ರೂ. 2—4—0.

[illegible]

[illegible]

೧

ನಂದರಾಯರು ತಮ್ಮ ಕಣ್ಣಿಲ್ಲದ ಮಗುವನ್ನೂ ಕಿವಿ ಕೇಳದ ಮ ವನ್ನೂ ಡಾಕ್ಟರರಲ್ಲಿ ತಂದು ತೋರಿ ಸಿ.)

ನಂದರಾಯರು—ಸ್ವಾಮಿಗಾ, ಡಾಕ್ಟ ನನ್ನ ದೌರ್ಭಾಗ್ಯವನ್ನು ಏನೆಂದು ನನ್ನ ಪೂರ್ವಜನ್ಮದ ಕರ್ಮ, ...ಎರಡು ಮಕ್ಕಳಿಗೂ ಈ ...ಒಂದಕ್ಕೆ ಕಣ್ಣಿಲ್ಲ ಮ ...ಕಿವಿ ಇಲ್ಲ ...

ವ್ಯಭಿಚಾರ—(DEBAUCHERY)

ಲೇಖಕರು ಶ್ರೀ ಬಿ. ಶಾಮರಾಯ ಶೆಟ್ಟಿ ಬಿ. ಎ., ಎಲ್. ಟಿ., ಉಡುಪಿ

Venus and Bacchus, or woman and wine, often go together. They dance on the giddy height of wealth. So wealth, woman and wine challenge the manliness of the world. Shallow people take as their ideal a life surrounded by these three w s and think that it is heaven. They are grievously mistaken. History shows that such a life leaves much to be desired, and so fails miserably. India has been warning against it down through the ages. That is her message to the world. The twentieth century man has a lot of achievements to his credit. It has been and is his destiny to control the elements, to ride the thunderbolt, to bring the raging fire and rushing and tumbling waters to his use, but most difficult of all for him has been to restrain and hold in check the passions that con... him. So long as he will not master them, he cannot enter fully into his human heritage, and he cannot be congratulated and called a man. He is yet far away from this ideal of a true man and as long as this state of things persists the world will travail, misery will continue, moral grandeur will be lacking, there ... no rest, no peace, there will be only chaos. It is only a big dose of ... can save the world from what it is. The rich often look askance at ... often sell their virtue for bread and there are various other ... which make man and woman stray away from this high ... falls a prey to this sexual lust it is very difficult to reclaim ... their talk stinks worse than their body and ... condemned from three fundamental aspects ... no use arguing with people who become cristic ... may think their purse is long. May be ... at their physical resources? Here at least there is not much ... The human body is a temple. It should be ... has a right to saddle posterity with the ... is every one. Every debauchee ... a few years. It really the less said of them ... of the last will go down, peace will ... nothing good remains to be said—the ... God save us all from a woe ... Then we need fear none.

...ನರಕ ಯಾತನೆ ... ನಾನಲ್ಲ! ...

ಬುದ್ಧಿ ಬಂತ! ಬಂದ ಬುದ್ಧಿ ಜನ್ಮಕ್ಕೆ ಸಾಕು! ಇಷ್ಟವಿದ್ದರೆ ನೋಡಿ ಬಚಾವು ಮಾಡು! ಇಲ್ಲವಾದರೆ ಎಲ್ಲಿಂದಾದರೂ ಒಂದಿಷ್ಟು ವಿಷ ತಂದು ಕೊಟ್ಟುಬಿಡು. ಅಂತೂ ಈ ಜನ್ಮ ಬೇಡಾ, ಬೇಡಾ! ಸಾಕೋ ಸಾಕು! ಅಯ್ಯಯ್ಯೊ! ನೋವೂ ನೋವೂ, ನೋವೂ!

ಹೆಂಡತಿ—ಬಿಟ್ಟ್ಯೊ, ಓಡು, ಡಾಕ್ಟರರನ್ನು ಕರಕೊಂಡು ಬಾ ಮಗಾ!

ಡಾಕ್ಟರ್ (ಬಂದು ಪರೀಕ್ಷಿಸಿ)—ಮಂಜಣ್ಣನವರೇ ನಿಮ್ಮ ರೋಗವು ಘೋರವಾದ್ದು. ಅದನ್ನಿಲ್ಲಿ ಗುಣಪಡಿಸಲು ಸಾಧ್ಯವಿಲ್ಲ. ನೀವು ಮದ್ರಾಸ್ ಜನರಲ್ ಆಸ್ಪತ್ರಿಗೇ ಹೋಗತಕ್ಕದ್ದು. ಅಲ್ಲಿಗ ಹೋಗಲಾಗುವಷ್ಟು ತತ್ಕಾಲದ ಉಪಶಮನ ಮಾಡಿ ಕೊಡುತ್ತೇನೆ.

೪

[ರಂಗರಾಯನು ಸಣ್ಣ ಪ್ರಾಯದಲ್ಲಿಯೇ ತಂದೆ ಸತ್ತು ಹೇರಳ ಸಂಪತ್ತಿಗೆ ದೊರೆಯಾಗಿರುವನು. ಆತನ ತಲೆಯಲ್ಲಿ ಸಂಪತ್ತಿನ ಅಮಲು ಏರಿಹೋಗಿರುವುದು. ಇದರ ಪ್ರದರ್ಶನವನ್ನ ವೇಶ್ಯೆಯ ಮನೆಯಲ್ಲಿ ಮಾಡುತ್ತಿರುವನು.]

ದಲ್ಲಾಲಿ—ನೋಡು, ನೀನು ಅವರನ್ನು ಮಂಕುಮಾಡಿ ಆ ಆಸ್ತಿಯನ್ನು ನಿನ್ನ ಹೆಸರಲ್ಲಿ ಹೊಡೆದುಬಿಡು. ಅವರು ಈಗ ನೀನು ಹೇಳಿದ ಹಾಗೆ ಕುಣಿಯುತ್ತಾರೆ. ಇದೇ ಈ ಕೆಲಸಕ್ಕೆ ಸುಸಂದರ್ಭ. ಇವರೂ ಎಲ್ಲದೆ ಟವಂಗಿ ಕುಡಿಯುವ ಸ್ವಭಾವವೂ ಉಂಟು. ಇದನ್ನೂ ನಾವು ಪ್ರಯೋಗಿಸಿಕೊಳ್ಳಬಹುದು.

ವೇಶ್ಯೆ—ಸರಿ, ಒಳ್ಳೇ ಆಲೋಚನೆ, ನನ್ನ ಅಜ್ಜಿ ಹೇಳುತ್ತಿದ್ದಳು, 'ಮಗಾ ಯಾವಾಗಲೂ ಯೌವನವೂ, ಸೌಂದರ್ಯವೂ ಸ್ಥಿರವಾಗಿ ನಿಲ್ಲಲಾರದು. ಹಚ್ಚೆಂದರೆ ಹತ್ತು ವರುಷ ಅಷ್ಟರಲ್ಲಿ ಏನಾದರೂ ಸುಲಿದಷ್ಟು ಬಂತು. ಮತ್ತೆ ನಮ್ಮನ್ನು ಮೂಸುವವರು ಯಾರೂ ಇಲ್ಲ' ... ನಮ್ಮ ಜಾತಿಯಲ್ಲಿ ಅನೇಕರಿಗೆ ಮುದಿಪ್ರಾಯದಲ್ಲಿ ... ಎಂತಾಗಿದೆ. ನನ್ನ ಗತಿ ... ಮಾಡುವ ಉಪಾಯ ...

ದಲ್ಲಾಲಿ—... ಜಾಗ್ರತೆಯಾಗಿ ... ಅವರನ್ನು ಬಗ್ಗಿಸಲಿ ... ರೂಪು, ..., ಬೆಡಗು, ... ಸೌಂದರ್ಯ, ... ಹೊಗಳಬಿಟ್ಟರೆ ... ಸಾಧಾರಣಗೆ

Commonwealth Assurance Co., Ltd., Poona.
... ೨೦ ...
... ೪ - ೩೮ ...
... ೪—೦—೦
...

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ಪರಿಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪ್ಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ... ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

... ಗಮನಿಸಿಕೊಳ್ಳತಕ್ಕದ್ದು.

... ನಮ್ಮ ... ತಯಾರಿಯಲ್ಲಿ ...

... ಈ ಮೂಲಕ ಪ್ರಕಟನೆ ಕೊಡುತ್ತೇವೆ.

ಅಮೃತಾಂಜನ ಡಿಪ್ಪೋ, ... ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲನೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ

ಮೈಸೂರು ಸ್ಟೇಟಿನ ಏಜಂಟರು—ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ಮೂಲ್ಕಿ ಬ್ಯಾಂಕ್, ಲಿಮಿಟೆಡ್,

... ಮೂಲ್ಕಿ.

DAIMONDS! DAIMONDS!!

K R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಪಿನವನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕಾಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಕೆನರಾ ಛಾಪಖಾನೆ [1920

(... ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

... ಎಲ್ಲಾ ತರದ ನಾಜೂಕಾದ

... ಕೈಕೊಳ್ಳಲಾಗುತ್ತದೆ

... ಒಂದು ವಿಚಾರಿಸಿರಿ

Kanara Printing Works,

... MANGALORE

NAVABHARAT BOOK DEPOT

Registered No. M. 3618

NAVAYUGA

ನವಯುಗ

30—3—1939

ತಿಂಗಳ ಕಾಣಿಕೆ-೭

ಬಲು ಸುಲಭ ದರದಲ್ಲಿ

ಎರಡನೇ ಮೈಸೂರು ಕಾಂಗ್ರೆಸ್ ಅಧಿವೇಶನ ಸ್ವಾಗತ ಕಮಿಟಿಯವರ ಆಶ್ರಯದಲ್ಲಿ

ಮೂವಿ, ಸ್ಟಿಲ್ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನ

ವಿದುರಾಶ್ವತ್ಥ ಮಹಾಕ್ಷೇತ್ರದಲ್ಲಿ

Vijaya

ESTD 1921
FOUNDER
Sri A B SHETTY, M.L.A
[illegible] Secretary [illegible] of Madras
ಸಂಸ್ಥಾಪಕರು:
ಶ್ರೀ ಎ. ಬಿ ಶೆಟ್ಟಿ, ಎಂ. ಎಲ್. ಎ
ಸಂಪಾದಕ
[illegible] ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮
ಸಂಚಿಕೆ ೩೦

ಉಡುಪಿ, ಗುರುವಾರ ೩೦-೩-೧೯೩೯
Udipi, Thursday 30—3—1939

Vol XVIII
No. 30

ಸ್ಥಾಪನೆ: ೧೯[illegible]
ಚಂದಾ ವಿವರ:
೧ ವರ್ಷಕ್ಕೆ ರೂ ೩-೪-೦
೬ ತಿಂಗಳಿಗೆ ರೂ. ೧-೧೨-೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

[illegible]

ಸ್ವದೇಶ ವಿಚಾರ

[illegible]



[illegible]

ಯುತ್ತೇನೆ. ಎಲ್ಲ ರಾಷ್ಟ್ರಗಳೂ ಏಕಮುಹೂರ್ತದಲ್ಲಿ ಸರ್ವ ಸಮರಸನ್ನಾಹಗಳನ್ನು ಪರಿತ್ಯಜಿಸಿ ಶಸ್ತ್ರಸನ್ಯಾಸ ಸ್ವೀಕರಿಸೋಣವೆಂದು ಪ್ರಧಾನರು ಸೂಚಿಸಿದರೆ ಅದೇ ಹೃದಯದ ಬಯಕೆ. ಅಂತಹ ಧೀರಕೃತ್ಯದಿಂದ ಹಿಟ್ಲರನ ಕಣ್ಣು ತೆರೆಯಲ್ಪಟ್ಟು ಅವನೂ ಶಸ್ತ್ರಪರಿತ್ಯಾಗ ಮಾಡುವುದು ನಾನಿಲ್ಲಿ ಕುಳಿತಿರುವುದು ನನಗೆಷ್ಟು ನಿಶ್ಚಯವೋ ಅಷ್ಟು ನಿಶ್ಚಯವೆಂದು ನನಗನ್ನಿಸುತ್ತದೆ.'

೧೯೪೧ನೆ ಇಸವಿಯ ಜನಗಣನೆ
(ಸೆನ್ಸಸ್ ಲೆಖ್ಖ)

1931ನೆಯ ಇಸವಿಯಲ್ಲಿ ಡಾಕ್ಟರ್ ಹಟ್ಟನ್‌ರವರು ಇಂಡಿಯಾ ಸೆನ್ಸಸ್ ಕಮಿಷನರ್‌ರಾಗಿ ಕೆಲಸ ಮಾಡಿದರು.

1941ನೆಯ ಇಸ್ವಿಯ ಜನಗಣನೆಯು ಜಾತಿ (Caste) ಭಾಷೆ ತರಗತಿ ಮೊದಲಾದುವುಗಳ ವಿಷಯವಾಗಿ ಕೇಳರು. ಬ್ರಿಟಿಷ್ ಇಂಡಿಯಾದಲ್ಲಿ ಮಾತ್ರ ಸನ್‌ಸಸ್ ಲೆಖ್ಖಗಳನ್ನು ತಯಾರಿಸಲು 50ಲಕ್ಷ ರೂಪಾಯಿಗಳು ಬೇಕಾಗಿವೆ 37ಕೋಟಿ ಮಂದಿ ಪ್ರಜೆಗಳಿರುವರು. 20ಲಕ್ಷ ಮಂದಿ ಎನ್ಯೂಮರೇಟರುಗಳನ್ನೂ (ಲೆಖ್ಖ ಬರೆವವರನ್ನು) ನೇಮಿಸಿಕೊಳ್ಳಬೇಕಾಗಿದೆ ಒಬ್ಬೊಬ್ಬನಿಗೆ ಕನಿಷ್ಠಪಕ್ಷ ಒಂದು ರೂಪಾಯಿ ಕೊಟ್ಟರೂ 20ಲಕ್ಷ ರೂ. ಗಳು ಬೇಕು. ಇದುವರೆಗೆ ಬಹು ಮಂದಿ ಉಚಿತವಾಗಿಯೇ ಕೆಲಸಮಾಡಿರುವರು ಆ [illegible] ಲೆಖ್ಖ [illegible] ಅಧಿಕಾರಿಗಳು [illegible] ಎನ್ಯೂಮರೇಟ [illegible] ಉಚಿತವಾಗಿಯೇ [illegible] ಗ್ರಾಮದ ಪಟೇಲ [illegible] ಮೊದಲಾ [illegible] 1671 [illegible]

The Tropical Insurance

CO., LTD., DELHI.

Chairman Sjt SUBASH CHANDRA BOSE
(Congress President)

Founder Directors
PANDIT MOTILAL NEHRU
DR M A ANSARI
SJT S SRINIVASA IYENGAR
HAKIM AJMAL KHAN

This leading National Company founded and managed by five Congress Presidents invites applications for representation on salary and commission.

K S RAMAMURTHI, ... OR **M SUNDER RAM SHETTY**
Branch Manager,
Hampankatta,
Mangalore

ಎಲ್ಲೆಲ್ಲಿ — ಏನೇನು?



ನಿಯೋಗ ಮಂಡಳಿ ಬಂದಿತ್ತಷ್ಟೆ. ಅವ
ಬೊಂಬಾಯಿಯಿಂದ ತೊಡಗಿ ಉತ್ತ
ಹಿಂದೂಸ್ಥಾನದ ಸಕಲ ಪ್ರಾಮುಖ್ಯ ನ
ಗರಗಳನ್ನು ಸಂದರ್ಶಿಸಿ ಅಲ್ಲೆಲ್ಲ ಆದರಪೂರ್ವ
ಕ ಸತ್ಕಾರವನ್ನು ಹೊಂದುತ್ತಿದ್ದಾರೆ ಅ
ರ ಸದಸ್ಯರೆಲ್ಲ ಮುಸ್ಲೀಮರೇ, ಹಿಂದ
ಸ್ಥಾನದ ಅತಿಥಿಗಳಾಗಿ ಬಂದಿದ್ದಾರೆ
ತಂತ್ರ ರಾಷ್ಟ್ರದ ಪ್ರತಿನಿಧಿಗಳಾಗಿ ಬಂದ
ಇಲ್ಲಿಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ
ಹಾನುಭೂತಿ ತೋರಿದ್ದಾರೆ, ಸಲಹೆ ಸ
ಚನೆಗಳನ್ನು ಸಾರುತ್ತಿದ್ದಾರೆ ತಾವೆಲ್ಲ
ನ್ನೊಳಗಿನ ಜಾತಿ ಪಂಗಡಗಳನ್ನು ಮರೆ
ಈಜಿಪ್ತರೆಂದೇ ಒಂದುತನದಿಂದ ಕಾದಿ
ದ್ದಂತೆ ನೀವೂ ಮತ ಜಾತಿ ಸಮಸ್ಯೆಗ
ನ್ನು ರಾಜಕೀಯದಲ್ಲಿ ತಾರದೆ ಎಲ್ಲರ
ಭಾರತೀಯರೆಂಬ ಐಕ್ಯಭಾವದಿಂದ ಹೋ
ರಾಡಿರೆಂದು ಅವರು ಹೋದಲ್ಲೆಲ್ಲ ಸಾ
ತ್ತಿದ್ದುದು ಲೀಗಿನವರಿಗೆ ಮೆಚ್ಚಿಕೆಯಾ
ಲಿಲ್ಲವೆಂದು ತೋರುತ್ತದೆ ಆ ಅಸಂತೃಪ್ತಿ
ಯನ್ನು ಮೊನ್ನೆಯೊಂದು ಸಂದರ್ಭದ
ಪ್ರದರ್ಶಿಸಿ ದೂರ ದೇಶದವರಿಗೂ ತಮ
ಸಂಕೋಚ ದೃಷ್ಟಿಯ ಗುಟ್ಟು ಕೊಟ್ಟರ
ಡೆಲ್ಲಿಯ ಎಸೆಂಬ್ಲಿಯ ರಾಷ್ಟ್ರಪಕ್ಷದ ಮ
ದಾಳುಗಳಾದ ಭುಲಾಭಾಯಿ ದೇಸಾಯಿ
ಳು ಈ ಈಜಿಪ್ಟದ ನಿಯೋಗ ಮಂಡಲಿಯ
ವರ ಸನ್ಮಾನಾರ್ಥವಾಗಿ ಒಂದು ಸತ್ಕಾ
ಕೂಟವನ್ನೇರ್ಪಡಿಸಿದ್ದರು ಅದಕ್ಕೆ
ಮಂತ್ರಿತರಾದವರಲ್ಲಿ ಮುಸ್ಲೀಮ್ ಲೀ
ನ ಸದಸ್ಯರಾರೂ ಬಂದಿಲ್ಲ

ಡಾಕ್ಟರ್ ಲಕ್ಷ್ಮೀಪತಿಗಳ 'ಆರೋಗ್ಯ ಯಾತ್ರಾ' ದಂಡು

ತಾ ೨೨ನೆಯ ಯುಗಾದಿಯ ದಿನದ
ದು ಆಂಧ್ರ ಆಯುರ್ವೇದ ವೈದ್ಯ ಮಂಡ
ಯ ಅಧ್ಯಕ್ಷರಾದ ಡಾ। ಲಕ್ಷ್ಮೀಪತಿಗ
ಆಂಧ್ರ ಜಿಲ್ಲೆಗಳಲ್ಲಿ ಆಯುರ್ವೇದ ಹಾಗೂ
ಆರೋಗ್ಯ ಪ್ರಚಾರ ಧ್ಯೇಯದ ಯಾತ್ರಾ
...

ಭರತಖಂಡದ ರಾಜಧಾನಿ

ದೆಹಲಿಯ ರೂಪರೇಖೆ

[illegible]

ಲಿಗೆ ಹೋಗಬೇಕು. ಅದರಲ್ಲೂ ಪಂಜಾಬಿ ಹೆಂಗಸರು ಒಂದು ಪೈಜಾಮ ಧರಿಸಿ, ಒಂದು ಉದ್ದವಾಗಿರುವ ಕಪ್ಪನ್ನು ಹಾಕಿಕೊಂಡು, ಬಿಳಿಯ ಒಂದು ವಸ್ತ್ರವನ್ನು [illegible]

ಭಾರತಕ್ಕೊಬ್ಬ ಡಿಕ್ಟೇಟರರು ಬೇಕೇ?

(ಅನುವಾದಕರು—ಶ್ರೀ S. L. ಸುಬ್ರಹ್ಮಣ್ಯಂ, ಅಪರ್‌ಸ್ಕೂಲ್ ಮಾಸ್ತರು, ಹಂಪ್ಸರ.)

ಈ ಪ್ರಶ್ನೆಯು ಬಹಳ ಹೊಡಕಾದುದು ಆದರೂ ಇದು ಈಗ ವಿಶ್ವವ್ಯಾಪೀ ಸಮಸ್ಯೆಯಾಗಿದೆ. ಪ್ರತಿದಿನವೂ ನಡೆಯುತ್ತಿರುವ ಘಟನೆಗಳನ್ನು ನೋಡಿ, ಪ್ರತಿಯೊಬ್ಬ ದೇಶವಾಸಿಯ ತಲೆಯಲ್ಲಿಯೂ ಈ ವಿಚಾರವು ಮನೆಮಾಡಿದೆ ಇಂದು ದೇಶದ ಎಲ್ಲರ ಆಶೆಯೂ ದೇಶದ ಪ್ರಾಣದ ಸಂಚಾರವೂ ಕೇವಲ ಒಂದು ವ್ಯಕ್ತಿಯ ಮೇಲೆ ಕೇಂದ್ರಿತವಾಗಿದೆ. ಆ ವ್ಯಕ್ತಿಯೇ ಮಹಾತ್ಮ ಗಾಂಧಿಜಿ. ನಾವು ಮೊದಲು ಇಟಲಿ, ಜರ್ಮನಿ, ಟರ್ಕಿ, ಚೀಣ, ಸ್ಪೇನ್ ಮತ್ತು ಫ್ರಾನ್ಸುಗಳ ಅವಸ್ಥೆಯನ್ನು ನೋಡೋಣ. ಇವುಗಳ ಪೈಕಿ ಮೊದಲನೇ ಮೂರು ದೇಶಗಳಲ್ಲಂತೂ "ಡಿಕ್ಟೇಟರು"ಗಳ ಏಕಛತ್ರಾಧಿಪತ್ಯವಿದ್ದೇ ಇದೆ. ಉಳಿದ ಮೂರು ದೇಶಗಳಲ್ಲಿ ಪ್ರಜಾತಂತ್ರ ರಾಜ್ಯಭಾರವಿದೆ.

ಡಿಕ್ಟೇಟರರು ಯಾರಾಗಬೇಕು?

ಇಟಲಿ

ಮಹಾಯುದ್ಧಕ್ಕೆ ಮೊದಲು ಇಲ್ಲಿ ವಿಕ್ಟೋರಿಯೋ ಎಮ್ಯಾನುಯಲ್ ಎಂಬ ಮಹಾರಾಜನಿದ್ದನು ಆಗ ಇಟಲಿಯ [illegible]

ಜರ್ಮನಿ

[illegible] ಜರ್ಮನಿಯು [illegible]

ಟರ್ಕಿ

[illegible]

... ಯ ದೃಷ್ಟಿಯಿಂದಂತೂ ದಿನ ದಿನಕ್ಕೆ ಕ್ಷೀಣತೆಯನ್ನು ಹೊಂದುತ್ತ ಒಂದು ಯುದ್ಧವಾದ ಮೇಲೆ ಅಂತರಿಕ ಸ್ವಾತಂತ್ರ್ಯದ ಹೊರತು ಅದಕ್ಕೆ ಮತ್ತೇನೂ ಲಾಭವಾಗಲಿಲ್ಲ.

ಸ್ಪೈನ್

ಇಲ್ಲಿ ರಾಜಕೀಯ ಕ್ರಾಂತಿಯಾದುದು 1932ರಲ್ಲಿ ಚಕ್ರವರ್ತಿಯನ್ನು ಓಡಿಸಿ ಪ್ರಜಾತಂತ್ರವನ್ನು ಸ್ಥಾಪಿಸಿದರು ಇದರಿಂದ ಈ ದೇಶದ ಬಲಯುತವಾದ ದೇಶವಾಗಬಹುದೆಂದು [illegible] ಆ [illegible] ಪರ್ಯಾವ [illegible] ಫ್ರಾಂಕೋವಿನ ಪ್ರ [illegible] ಎರಡು ವರ್ಷಗಳಿಂದ [illegible] ಈ ದೇಶವು ಬಹಳ [illegible] ಫ್ರಾಂಕೋ [illegible]

ಫ್ರಾನ್ಸ್

[illegible] ಕೇಳುತ್ತಿತ್ತು. ಜರ್ಮನಿಯು ಇವರೆಡರ ಚಿಕ್ಕನಂತಾಗಿತ್ತು ಈಗಂತೂ ವಿಶ್ವದಲ್ಲಿ ಇದು ಒಂದು ದೊಡ್ಡ ಸಾಮ್ರಾಜ್ಯವಾಗಿದ್ದು ಇದರ ಶಕ್ತಿಯು ಬಹಳವಾಗಿದೆ

ಈ ಆರು ದೇಶಗಳಲ್ಲಿ ಪ್ರಜಾತಂತ್ರ ರಾಜ್ಯಗಳು ದಿನದಿನಕ್ಕೆ ಹಳ್ಳದಲ್ಲಿ ಬೀಳುತ್ತಿವೆ ಚೀಣವು ಜಪಾನವನ್ನು ನುಂಗುತ್ತಿದೆ ಸ್ಪೈನಿನ ಬಹುಭಾಗವು ಫ್ರಾಂಕೋವಿಗೆ ಸೇರಿಹೋಗಿದೆ ಫ್ರಾನ್ಸಿಗೆ ಇಂದು ಯುರೋಪಿನಲ್ಲಿ ಯಾರೂ ಮಿತ್ರರೇ ಇಲ್ಲದಂತಾಗಿದೆ. ಹಿಟ್ಲರ್ ಮತ್ತು ಮುಸೋಲಿನಿಗಳು ಮ್ಯೂನಿಚ್‌ನಲ್ಲಿ ಆಡಿದ ಮಂಗನಾಟದಲ್ಲಿ ಫ್ರಾನ್ಸು ಮತ್ತು ಇಂಗ್ಲೆಂಡ್ ಎರಡೂ ಒಪ್ಪಾಗಿ ಹೋದವು ಫ್ರಾನ್ಸಿನ ಈ ದುರವಸ್ಥೆಯು ಅದರ ಇತಿಹಾಸದಲ್ಲೇ ಇರಲಿಲ್ಲ ಹಿಟ್ಲರನು ತನಗೆ ಬೇಕಾದುದನ್ನು ಹೊಂದಲು ಕಂಕಣ ಬದ್ಧನಾಗಿದ್ದಾನೆ ಆಗಲೇ ಅರ್ಧ ಯೂರೋಪಿನಷ್ಟು ಅವನ ವಶವಾಗಿದೆ ಹೋಗಿದೆ. ಇಟಲಿಯು ಅಬಿಸೀನಿಯವನ್ನು ಧ್ವಂಸಮಾಡಿ, ಟ್ಯೂನಿಸ್ ಸಮಸ್ಯೆಯಿಂದ ಫ್ರಾನ್ಸಿನ ಬೆನ್ನು ಹತ್ತಿದೆ. ಈ ಡಿಕ್ಟೇಟರುಗಳು ತಮ್ಮ ತಮ್ಮ ದೇಶಗಳಲ್ಲಿ ಸರ್ವತೋಮುಖವಾದ ಅಭಿವೃದ್ಧಿಯನ್ನುಂಟುಮಾಡಿ ಜಗತ್ತನ್ನು ಬೆರಗುಗೊಳಿಸಿರುವರು ಇಂಗ್ಲೆಂಡ್ ಮತ್ತು ರಷ್ಯದವರು ಇವರನ್ನು ಎದುರಿಸುವ ಸಾಹಸ ಮಾಡಲಾರರು.

ಡಿಕ್ಟೇಟರುಗಳ ಯುಗ

ಮೇಲ್ಕಂಡ ಘಟನೆಗಳಿಂದ ಗೊತ್ತಾಗುವುದೇನೆಂದರೆ ಈ ಯುಗವೇ ಡಿಕ್ಟೇಟರುಗಳ ಯುಗವಾಗಿದೆ. ಭಾರತವನ್ನೇ ತೆಗೆದುಕೊಳ್ಳಿ. ಇಲ್ಲಿಯ ಶಾಸನಕ್ಕೆ ಇಂಗ್ಲಂಡಿನ ಪ್ರಜಾತಂತ್ರದ ಮಾತನ್ನೂ ಕೂಡ [illegible] ತ್ತಿದೆ ಮಹಾತ್ಮಾಜಿಯವರ ಸತ್ಯಾಗ್ರಹ ಮಗಿ 20 ವರ್ಷಗಳಿಂದಲೂ [illegible] ಬ್ರಿಟಿಷ್ ಪ್ರಜಾತಂತ್ರದ ಮೇಲೆ ವಿಜಯವನ್ನು ಹೊಂದಿರುವರು. [illegible] ಕಾಂಗ್ರೆಸ್‌ನವರು 7 [illegible] ಅಧಿಕಾರ [illegible] ಮಹಾತ್ಮಾ [illegible]

AWAIT PUBLICATION

ನಿರೀಕ್ಷಿಸಿರಿ!!

[illegible] HITHER KARNATAKA

[illegible]

ನಿಮ್ಮ ಕರ್ತವ್ಯ

[illegible]

ರಾಷ್ಟ್ರಪತಿ ಸುಭಾಸಚಂದ್ರ ಭೋಸರ ಹೇಳಿಕೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಕುರಿತು ಗಾಂಧೀಜಿಗಳ ಇಂದಿನ ಅಭಿಪ್ರಾಯವೇನೆಂಬುದನ್ನು ನಾನು ನಿಶ್ಚಯ ಮಾಡಿಕೊಳ್ಳಬೇಕಾಗಿದೆ. ಅದು [illegible] ಪಕ್ಷದವರೊಳಗಿಂದಲೇ ಆರಿಸ [illegible] ಧನಮತವಿಲ್ಲದವರ ತಂಡ [illegible] ಅಭಿಪ್ರಾಯವನ್ನೇ [illegible] ಗಾಂಧೀಜಿಗಳು [illegible] ಸುವರೋ ಅ[illegible] ಕಾಂಗ್ರೆಸ್ಸಿನ ವಿವಿಧ ಪಕ್ಷಗಳ [illegible] ಅವರಲ್ಲಿ [illegible] ಅಭಿ[illegible] [illegible]

ಯೂ ನಡೆದ ವಿದ್ಯಮಾನಗಳೆಲ್ಲದರ ಮೇಲೂ ಕಾಂಗ್ರೆಸ್ಸಿನ ಎರಡು ಪ್ರಾಮುಖ್ಯ ಪಕ್ಷಗಳೊಳಗೆ ಪರಸ್ಪರ ಸಹಕರಿಸಿಕೊಂಡು ಮುನ್ನಡೆಯಲು ಅವಕಾಶವಿದೆಯೇ ಎಂದು ನೋಡಬೇಕಾಗಿದೆ

೨ ವರ್ಕಿಂಗ್ ಕಮಿಟಿಯು ಅಖಂಡ ಏಕಪಕ್ಷ ಲಕ್ಷಣವುಳ್ಳದ್ದೋ ಅಥವಾ ಸಂಸ್ಥವಿದ್ದಷ್ಟು ವ್ಯಾಪಕ ದೃಷ್ಟಿಯಿಂದ ವಿವಿಧ ಪಕ್ಷ ಪ್ರಾತಿನಿಧ್ಯವುಳ್ಳದ್ದೋ?

೪ ಪಂಡಿತ ಪಂತರ ಠರಾವಿನ ಅರ್ಥವನ್ನು ಗಾಂಧೀಜಿಗಳು ಹೇಗೆ ಮಾಡಿಕೊಂಡಿದ್ದಾರೆ? ಅದು ನನ್ನ ಮೇಲೆ ಅವಿಶ್ವಾಸದ ಠರಾವೇ? ನಾನು ರಾಜಿನಾಮೆ ಕೊಡಬೇಕೆಂದು ಗಾಂಧೀಜಿಗಳ ಅಭಿಪ್ರಾಯವಿದೆಯೋ? ಅಥವಾ ಕೆಲವು ಮುಂದಾಳುಗಳು ಹೇಳುವಂತೆ ಅದು ಗಾಂಧೀ-ಬೋಸ್ ರ [illegible]?

[illegible] ಪಕ್ಷದಲ್ಲಿ ತ್ರಿಪುರಿ [illegible] ಕಾಂಗ್ರೆಸ್ಸಿ[illegible] [illegible]

ದೃಷ್ಟಿಯಿಂದ ನೋಡಲಿಕ್ಕಾಗದವರಿದ್ದಲ್ಲಿ ಈ ವಿಷಯವನ್ನು ಈ ದೃಷ್ಟಿಯಿಂದ ನೋಡಿ, ಗಾಂಧೀಜಿಗಳನ್ನು ಸಂದರ್ಶಿಸಲು ಹೊ

[illegible] ಉಸಿರಾಡುವ ಬಿಡುವನ್ನಾದರೂ ಕೊಡುವ ಕರುಣಾಂತಃಕರಣರೆನಿದ್ದೀ[illegible] ನಿರೀಕ್ಷಿಸಿದ್ದೆ ಗಾಂಧೀಜಿಗ[illegible] ಅದನ್ನು ಸ್ಪಷ್ಟ[illegible] ಅವರ ಪಕ್ಷದ ಇತರ [illegible]

ಗಿದ್ದೇನೆ. ಯಾವ ವಿಷಯಗಳನ್ನು ಮುಖ್ಯತಃ ಮಾತಾಡಿ ನಿಶ್ಚಯಿಸಿಕೊಳ್ಳಬೇಕೆಂದಿದ್ದೆನೋ ಅವುಗಳ ಕುರಿತು ಗಾಂಧೀಜಿಗಳೊಡನೆ ಪತ್ರವ್ಯವಹಾರತೊಡಗಿರುವೆನು.

ಗಾಂಧೀಜಿಗಳ ಎಲ್ಲ ಅಭಿಪ್ರಾಯ ಕಾರ್ಯಕ್ರಮಗಳನ್ನು ಇತರರು ಬಹುಶಃ ನಿರ್ವಿವಾದವಾಗಿ ಅಂಗೀಕರಿಸುವಂತೆ ನಾನು ಒಪ್ಪಿಕೊಳ್ಳಲು ಸಿದ್ಧನಿಲ್ಲವಾದರೂ ಅವರ ವಿಶ್ವಾಸಾರ್ಹನಾಗಿರುವಂತೆ ಪ್ರಯತ್ನವನ್ನು ಮುಂದುವರಿಸುವೆನು. ಇಂದು ಕಾಂಗ್ರೆಸ್ ಕೆಸರಲ್ಲಿ ಸಿಕ್ಕಿಬಿದ್ದಿದೆ ಅದನ್ನು ಮೇಲೆತ್ತಲಿಕ್ಕೆ ಗಾಂಧೀಜಿಗಳೊಬ್ಬರೇ ಸಮರ್ಥರು. ನಮ್ಮೊಳಗಿನ ಪಕ್ಷವಿಪಕ್ಷಗಳ ಇಕ್ಕಟ್ಟು ಬಿಕ್ಕಟ್ಟುಗಳನ್ನು ತಿದ್ದಿ ಒಕ್ಕಟ್ಟು ಉಂಟುಮಾಡಲೂ ಅವರೇ ಏಕಮಾತ್ರ ಸಮರ್ಥ ಪುರುಷರು. ಅವರು ತ್ರಿಪುರಿ ಕಾಂಗ್ರೆಸ್ಸಿಗೆ ಬಂದಿದ್ದರೆ ಪರಿಸ್ಥಿತಿ ಇಷ್ಟೊಂದು ಕೆಡುತ್ತಿದ್ದಿಲ್ಲ. ಬಾರದಿದ್ದುದು ನಮ್ಮ ದೌರ್ಭಾಗ್ಯ. ಈಗ ಅವರ ಮುಂದಿರುವುದು ಭಗೀರಥ ಕಾರ್ಯ. ಅವರಲ್ಲಾದರೂ ಸೋತರೆ-ಹಾಗಾಗದಿರಲಿ!—ಕಾಂಗ್ರೆಸ್ಸಿನ ನಾಳಿನ ಅವಸ್ಥೆ ಎಲ್ಲಿಗೆ ಮುಟ್ಟೀತೆಂಬುದನ್ನು ಯೋಚಿಸಿದರೆ ಮೈನಡುಕವುಂಟಾಗುತ್ತದೆ.

ಗಾಂಧಿಜಿಗಳು ಹೆಸರು ಸೂಚಿಸಬಹುದೇ?

ತ್ರಿಪುರಿ ಕಾಂಗ್ರೆಸ್ಸಿನಲ್ಲಿ ಮಂಜೂರಾದ ಪಂತರ ಠರಾವಿಗನುಸಾರವಾಗಿ ಕಾಂಗ್ರೆಸ್ಸ ವರ್ಕಿಂಗ್ ಕಮಿಟಿಯ ನಿರ್ಮಾಣವು ಗಾಂಧೀಜಿಗಳ ಅಪೇಕ್ಷೆ ಪ್ರಕಾರ ಅಧ್ಯಕ್ಷರು ಮಾಡತಕ್ಕದ್ದೆಂದಿದೆಯಲ್ಲ? ಅದರ ಅರ್ಥಪ್ರಕಾರ ಯಾರ್ಯಾರು ಸದಸ್ಯರಾಗಬೇಕೆಂದು ಗಾಂಧೀಜಿಗಳಿಗೆ ಹೇಳುವ ಅಧಿಕಾರವಿದೆಯೋ ಎಂಬ ವಿಷಯ ಅಲ್ಲಾಬಾದಿನ [illegible] ಆನಂದದಲ್ಲಿ ಗಾಂಧೀಜಿ-ಪರೇ[illegible] [illegible] ಆಜಾದರು ಕೂಡಿ [illegible] ಚರ್ಚೆನಡೆಯಿತು ಪರಿಣಾಮ[illegible] ಗಾಂಧೀಜಿಗಳಿಗೆ ಹೆಸರು ಸೂಚಿಸುವ [illegible] ಅಧ್ಯಕ್ಷರು ಕೇಳ[illegible] ಹೆಸರು [illegible]

[illegible]

THE

Canara Banking Corporation, Udipi, Ltd.

(Incorporated in British India)

ESTD 1906

THREE YEARS' CASH CERTIFICATES

bearing interest at 4% p. a. in denominations of Rs 50/-, 100/-, 500/-, 1,000/- & 5000/-

are now issued at all our Branches

For particulars call at or write to any of our nearest Branches

ನವಯುಗ

[illegible] ಪಡೆದು ಕೃತಿಯಿಂದ [illegible] ಎಡದೆಸೆಯದಾಗಿ, [illegible]

ಅಂತೂ ಯಾವುದಾದರೊಂದು ಪಕ್ಷದ ಹಾದಿಜೀರಾಗುವ ಪ್ರಶ್ನೆ ಅಲ್ಲೇ ಇದೆ ಮಾತ್ರವಲ್ಲ ಠರಾವಿನ ಒಕ್ಕಣೆಯು ಸ್ಪಷ್ಟವಾಗದೆ ಹೋಯಿತಲ್ಲಾ ಎಂಬ ವಿಷಾದವೂ ಈಗಾಗಲೇ ಕೆಲವು ಎಡೆಗಳಲ್ಲಿ ತೋರಿಬರಬಹುದು. ಏಕೆಂದರೆ ಪಂತರ ಠರಾವಿನ ಒಕ್ಕಣೆಯ ಅರ್ಥದ ಮೇರೆಗೆ ಗಾಂಧೀಜಿಗಳಿಗೆ ವರ್ಕಿಂಗ್ ಕಮಿಟಿಯಲ್ಲಿ ಇಂತಿಂತಹ ಸದಸ್ಯರೇ ಇರಬೇಕೆಂದು ಹೆಸರುಕೊಟ್ಟು ಸೂಚಿಸುವ ಅಧಿಕಾರಬರಲಿಲ್ಲವೆಂದು ಗಾಂಧೀಜಿಯವರೇ ಮೊನ್ನೆ ಹೇಳಿದ್ದಾರಂತೆ ಎಂದಮೇಲೆ ಕಮಿಟಿಯಲ್ಲಿಯ ವ್ಯಕ್ತಿಗಳ ಪ್ರಶ್ನೆಹೋಯಿತು ಪಕ್ಷದ ಮಾತು ಉಳಿಯಿತು. ಅಖಂಡ ಏಕಪಕ್ಷವೇ ಆಗಬೇಕೆಂದು ಗಾಂಧೀಜಿಯವರು ಹೇಳಿದರೆ=ಹೇಳುವ ಸಂಭವವೇ ಹೆಚ್ಚು— ನಮ್ಮ ದಾರಿಬೇರಾಗುವ ಕಾಲ ಬಂತೆಂದು ಸುಭಾಸರು ಹೇಳಿದ್ದಾರೆ ಅಖಂಡ ಏಕಪಕ್ಷದ ಸದಸ್ಯರಿಂದಲೇ ಕಮಿಟಿಯು ತುಂಬಬೇಕೆಂದಾದರೆ ಆ ಪಕ್ಷವು ಗಾಂಧೀ ಅನುಯಾಯಿಗಳದ್ದೆಂಬುದು ಸುಸ್ಪಷ್ಟ. ಉಳಿದ ಸದಸ್ಯರು ಕಮಿಟಿಯಲ್ಲಿ ಕೂತು ಕೊಂಡು ಮಾಡತಕ್ಕದ್ದೇನೂ ಇಲ್ಲ. ಒಂ[illegible]ನ ಹರಟೆಯನ್ನು ಆಡಿಯಂತ್ತಿ ಈ [illegible] ಆದರೆ ಅವರಿಗೆ ಗಾಂಧೀಜಿಗಳ [illegible], ಅವರ ಜಪ್ಪನೆ [illegible] ಇಂತಹ ನಾಟಕದ ಮಂ[illegible] ಗಾಂ[illegible] ತಂತ್ರ ಸ್ವತಂತ್ರನಾದ [illegible] (ಡಿಕ್ಟೇಟರ್)ನೆಂದೂ [illegible] ಆದಂತೆ ಕೂ[illegible] ಅಧಿಕಾರದ [illegible]

ಒಬ್ಬನು ಅಲಂಕಾರದ ರಾಷ್ಟ್ರಪತಿಯಾ[illegible]
ಯೂ ಮತ್ತೊಬ್ಬನು ಅಪರೋಕ್ಷ ಸರ್ವ
ತಂತ್ರ ಸ್ವತಂತ್ರ ರಾಷ್ಟ್ರಪತಿಯೂ ಆಗು[illegible]
ಹವ್ಯಾಸವು ತಪ್ಪಲಿಕ್ಕಿಲ್ಲ. ಆದುದರಿಂ[illegible]
ಕಾಂಗ್ರೆಸ್ಸು ತನ್ನ ಸಂಘಟಣೆಯ ನಿಯ
ಮಾನುಸಾರ ನಾಯಕನನ್ನು ಚುನಾಯಿ
ಸುವ ನಾಟಕವಾಡದೆ ಹೃದಯದ ಪ್ರೇರ[illegible]
ಯಂತೆ ಏಕೈಕ ನೇತಾರನನ್ನು ಮುಂದ[illegible]
ಮಾಡಿಕೊಂಡು ಹಿಂಬಾಲಿಸುವುದು ದೇ[illegible]
ದ ಹಿತದೃಷ್ಟಿಯಲ್ಲಿ ಕ್ಷೇಮಕರ. ಅದು[illegible]
ರಿಂದ ಇಂದಿನ ಪರಿಸ್ಥಿತಿಯಲ್ಲಿ ಇಂಡಿಯ[illegible]
ಕ್ಕೆ ಬೇಕಾದುದು ಒಬ್ಬ ಡಿಕ್ಟೇಟರನೆ[illegible]
ಅಖಿಲಭಾರತವು ಹೃದಯದ ಪ್ರಬಲ [illegible]
ಹುಮತದಿಂದ ಚುನಾಯಿಸುವ ಡಿಕ್ಟೇ[illegible]
ರರು ಬೇಕು ಮೆಚ್ಚಿನ ಡಿಕ್ಟೇಟರರು ಬೇ
ಕು ವಿಶ್ವಾಸದ ಡಿಕ್ಟೇಟರರು ಬೇಕು [illegible]
ಹುಪಕ್ಷದ ಪೂಜೆಯನ್ನು ಕೈಗೊಂಬ [illegible]
ಕ್ಟೇಟರರು ಬೇಕು ಅಂಥವರು ಇಂದ
ಭಾರತದಲ್ಲಿರುವುದು ಒಬ್ಬರೇ ಒಬ್ಬರು
ಅವರೇ ಮಹಾತ್ಮಾಗಾಂಧೀ 'ಕಾಂಗ್ರೆಸ
ಇಂದು ಕಸರುಮಣ್ಣಿನಲ್ಲಿ ಹೂತುಹೋಗಿ[illegible]
ಅಲ್ಲಿಂದ ಅದನ್ನು ಎತ್ತಿ ಉದ್ಧರಿಸಲಾ[illegible]
ಏಕಮಾತ್ರ ವ್ಯಕ್ತಿಯೆಂದರೆ ಮಹಾತ್ಮಾ
ಗಾಂಧೀಜೀ' ಎಂದು ಸುಭಾಸಬಾ[illegible]
ಭೋಸರೇ ಪಂತರ ಠರಾವಿನ ಟೀಕೆಯ ವಿ
ಷಯವಾಗಿ ಕೊಟ್ಟ ಹೇಳಿಕೆಯಲ್ಲಿ ಸ್ಪಷ್ಟಗೆ[illegible]
ಳಿಸಿರುವರು. ಮುಂದೆಯೂ ಪಂತರ ಠರಾ
ವಿನಂತಹ ಸಿಕ್ಕು ಬಾರದಂತೆ ನೋಡಿಕೆ
ಳ್ಳಲು ಡಿಕ್ಟೇಟರ್ ತತ್ವವೇ ಕಾಂಗ್ರೆಸ್ಸಿ[illegible]
ಅಧಿಕತರ ಭೂಷಣ.

NOTIFICATION

A competitive examination for award of the Victoria Jubilee scholarship of the value of Rs 15/- per mensem tenable for a period of five years to students studying [illegible] one of the following subjects [illegible] a Government institution in India one [illegible] to a candidate of the Muslim [illegible] and the other to a candidate [illegible] Brahmin Hindu community [illegible] the Government college [illegible] on Monday the 26th June [illegible] Civil Municipal Elect[illegible] [illegible] or Sans[illegible]

[illegible]